ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೮

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೧೩೭
ವಿಚಾರ ಸಾಹಿತ್ಯಮಾಲೆ - ೫೧

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
ಮತ್ತು
# ಭಾಷಣಗಳು
ಸಂಪುಟ ೮

# ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

## ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೮)

## ಗವರ್ನರ್ - ಜನರಲ್ ಅವರ ಕಾರ್ಯಕಾರಿ ಪರಿಷತ್ ಸದಸ್ಯರಾಗಿ

## (೧೯೪೨ - ೪೬)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ

ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ

ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 8** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Third Edition : 2015; Pp. xxviii + 480; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ: ೨೦೧೫
ಪುಟಗಳು : xxviii + ೪೮೦
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೯೯೬೭೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೫.೦೬.೨೦೧೫

ಸಿಎಂ/ಪಿಎಸ್/೧೫೦/೨೦೧೫

# ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೪೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ
ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು
ದಿನಾಂಕ: ೦೪.೬.೨೦೧೫

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

# ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುವಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು–ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ!!! (Educate! Organize!! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು

(ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪-೩-೨೦೦೮)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹಾದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ೬.೧೨.೨೦೧೦ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ರಿಂದ ೧೪ ರ ವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧-೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧-೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧–೨)

೪. ಶ್ರೀ ಕೃಷ್ಣಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧–೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳಿಗೂ ಅಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಶ್ರೀ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

## ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ

ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ. ಅಂಬೇಡ್ಕರರು ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದರು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೆ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ, ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ, ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ 'ಜಾತಿ ನಿರ್ಮೂಲನೆ'; 'ಶೂದ್ರರು ಯಾರು', 'ಅಸ್ಪೃಶ್ಯರು ಯಾರು, ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು'?; 'ರೂಪಾಯಿಯ ಸಮಸ್ಯೆ', 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಇದು ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ

ಕೆಲ ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ 'ಸಮತಾ', 'ಜನತಾ' ಮತ್ತು 'ಬಹಿಷ್ಕೃತ ಭಾರತ' ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಲ್ಲಿಯೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೫ರ ವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ. ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ, ನಂತರ ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದುಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರವು ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪು–ರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟಣಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ 'ಡಾ. ಬಾಬಾಸಾಹೇಬ್ ಅಂಬೇಡ್ಕರ್ – ಬರಹಗಳು ಮತ್ತು ಭಾಷಣಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು, ಇದುವರೆಗೆ ಒಟ್ಟು ಹದಿನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟವಾದ ಹದಿನಾಲ್ಕು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ 'ಜಾತಿ ನಿರ್ಮೂಲನೆ', 'ಭಾಷಾವಾರು ಪ್ರಾಂತ್ಯಗಳು', 'ರಾನಡೆ, ಗಾಂಧಿ, ಜಿನ್ನಾ', 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು', 'ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ' ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು

ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಹಿಂದೂ ಧರ್ಮ ದರ್ಶನ'; 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ'; 'ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು'; 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು ಅವರ ಮಹಾಪ್ರಬಂಧ 'ರೂಪಾಯಿಯ ಸಮಸ್ಯೆ' ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ 'ಶೂದ್ರರು ಯಾರು? ಅವರು ಹಿಂದೂ ಆರ್ಯ ಸಮಾಜದ ನಾಲ್ಕನೆಯ ವರ್ಣ ಹೇಗಾದರು?' ಮತ್ತು 'ಅಸ್ಪೃಶ್ಯರು ಯಾರು? – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?' ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್‌ಮುದ್ರಿಸಲಾಗಿದೆ. ೧೯೯೦ರಲ್ಲಿ ಪ್ರಕಟಿಸಲಾದ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್‌ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂದಿನ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೪೬), 'ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು?' ಹಾಗೂ 'ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ'; (೯ನೆಯ ಸಂಪುಟ, ೧೯೯೧), ಮುಂಬಯಿಯ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು; ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟ (೧೯೯೧)ದಲ್ಲಿ ಅವರು ಗವರ್ನರ್–ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟವು 'ಬುದ್ಧ ಮತ್ತು ಅವನ ಧಮ್ಮ' ಗ್ರಂಥದ ಪುನರ್ ಮುದ್ರಣ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ' 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ', 'ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು', 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು', ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಪಾತ್ರದ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ನೀಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳನ್ನು ಮತ್ತು ನಿಯಮಗಳನ್ನು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ. ಅಂಬೇಡ್ಕರ್‌ರು ನೀಡಿದ ವಿವರಣೆಗಳೂ

ಸೇರಿವೆ. ೧೯೯೫ರಲ್ಲಿ ಪ್ರಕಟವಾಗಿರುವ ೧೪ನೆಯ ಸಂಪುಟವು ಎರಡು ಭಾಗಗಳಲ್ಲಿ ಇವೆರಡೂ ಭಾಗಗಳಲ್ಲಿ ಡಾ. ಅಂಬೇಡ್ಕರ್‌ರು ಸ್ವತಂತ್ರ ಭಾರತದ ಸಂಸತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ. ಅಂಬೇಡ್ಕರ್‌ರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದ ಎರಡೂ ಭಾಗಗಳಲ್ಲಿ ಲಭ್ಯವಿವೆ.

ಡಾ॥ ಅಂಬೇಡ್ಕರ್ ಅವರ ಅಮೂಲ್ಯ ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಮೊಟ್ಟಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

೧) ಡಾ॥ ಎ.ಎಂ. ರಾಜಶೇಖರಯ್ಯ – ಸಂಪಾದಕರು

೨) ಡಾ॥ ಸಿದ್ಧಲಿಂಗಯ್ಯ – ಸದಸ್ಯರು

೩) ಶ್ರೀ ದೇವನೂರು ಮಹಾದೇವ – ಸದಸ್ಯರು

೪) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಬೆಂಗಳೂರು – ಸದಸ್ಯ ಕಾರ್ಯದರ್ಶಿ

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನೂ ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೧೯೮೯ರ ತಮ್ಮ ಪತ್ರದಲ್ಲಿ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ

ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪರಿಭಾಷಾ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

(೧) ಡಾ॥ ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೨) ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು (೩) ದಿ. ಶ್ರೀ ವೈ.ಎಂ.ಸಿ. ಶರ್ಮ, ಅಂದಿನ ಅಧ್ಯಕ್ಷರು, ಕರ್ನಾಟಕ ರಾಜ್ಯಭಾಷಾ ಆಯೋಗ, ಬೆಂಗಳೂರು. ನಂತರ ದಿ. ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಈ ಸಂಪುಟದಲ್ಲಿ ಡಾ. ಅಂಬೇಡ್ಕರ್‌ರವರ ಎರಡು ಪ್ರಮುಖ ಮತ್ತು ಅಂದಿನ ರಾಜಕೀಯದ ಮೇಲೆ ಬೆಳಕು ಚೆಲ್ಲುವಂತಹ ವಿಚಾರಾತ್ಮಕ ಹಾಗೂ ವಿಶ್ಲೇಷಣಾತ್ಮಕ ಗ್ರಂಥಗಳಾದ 'ಕಾಂಗ್ರೆಸ್ ಮತ್ತು ಗಾಂಧೀ ಅಸ್ಪೃಶ್ಯರಿಗಾಗಿ ಮಾಡಿರುವುದೇನು?' (೧೯೪೫) ಮತ್ತು 'ಶ್ರೀಯುತ ಗಾಂಧೀ ಮತ್ತು ಅಸ್ಪೃಶ್ಯರ ವಿಮೋಚನೆ' (೧೯೪೩) ಇವುಗಳ ಪುನರ್‌ಮುದ್ರಣವಾಗಿದೆ. ಈ ಎರಡೂ ಕೃತಿಗಳಲ್ಲಿ ಡಾ. ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವಣ ಭಿನ್ನಾಭಿಪ್ರಾಯಗಳನ್ನು ಸ್ಫುಟವಾಗಿ ಬಿಂಬಿಸಲಾಗಿದೆ.

ಈ ಭಿನ್ನಾಭಿಪ್ರಾಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಬ್ಬರು ಮುಖಂಡರೂ ಅಸ್ಪೃಶ್ಯರ ಸಮಸ್ಯೆಯನ್ನು ಚೆನ್ನಾಗಿ ಅರಿತವರಾಗಿದ್ದು, ಸಮಸ್ಯೆಯ ನಿವಾರಣೋಪಾಯಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಒಂದು ನೈತಿಕ ಕಳಂಕವೆಂದು ಪರಿಗಣಿಸಿ ಅದನ್ನು ಸರ್ವತ್ರ ಹಿಂದೂಗಳು ಪಶ್ಚಾತ್ತಾಪ, ಮನಃಪರಿವರ್ತನೆ ಮತ್ತು ಪ್ರಾಯಶ್ಚಿತ್ತದ ಮೂಲಕ ನಿವಾರಿಸಬೇಕೆಂದು ಪ್ರತಿಪಾದಿಸಿದರೆ, ಡಾ. ಅಂಬೇಡ್ಕರ್‌ರವರು ಅಸ್ಪೃಶ್ಯರ ಸಮಸ್ಯೆಗಳನ್ನು ಕಾನೂನು ಮತ್ತು ಸಂವಿಧಾನಾತ್ಮಕ ಸಂರಕ್ಷಣೆಗಳ ಮೂಲಕ ನಿವಾರಿಸಬೇಕೆಂದು ವಾದಿಸಿದರು. ಎಂದರೆ ಈ ಸಮಸ್ಯೆಯನ್ನು ಕೇವಲ ಧಾರ್ಮಿಕ ಸಮಸ್ಯೆ ಎಂದು ಪರಿಗಣಿಸದೆ, ಇದು ಒಂದು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಯಾಗಿದ್ದು ಇದನ್ನು ರಾಜಕೀಯ ಸಾಧನಗಳ ಮೂಲಕವೇ ನಿವಾರಿಸಬೇಕು ಎಂಬುದು ಅವರ ತರ್ಕ ಹಾಗೂ ನಿಲವಾಗಿತ್ತು. ಆದ್ದರಿಂದಲೇ ಅವರು ಈ ಸಮಸ್ಯೆಯನ್ನು ರಾಜಕೀಯ ಚೌಕಟ್ಟಿನಲ್ಲಿ ಚರ್ಚಿಸುವ ಉದ್ದೇಶದಿಂದ ಈ ಎರಡು ಗ್ರಂಥಗಳನ್ನು ಪ್ರಕಟಿಸಿದರು.

ಸೆಪ್ಟಂಬರ್ ೨೪, ೧೯೩೨ರಂದು ಗಾಂಧೀಜಿ ಮತ್ತು ಅಂಬೇಡ್ಕರವರ ನಡುವೆ ಒಪ್ಪಂದವಾಗಿ 'ಪೂನಾ ಒಪ್ಪಂದ'ಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದದ ಮೂಲ ಅಂಶವೆಂದರೆ ಕೇವಲ ಹುಟ್ಟಿನಿಂದ ಯಾವ ಹಿಂದೂವನ್ನೂ ಅಸ್ಪೃಶ್ಯವೆಂದು ಪರಿಗಣಿಸಲಾಗದು ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ಕಾನೂನಾತ್ಮಕ ಸಂರಕ್ಷಣೆಗಳನ್ನೊದಗಿಸುವ ಅವಶ್ಯಕತೆಯನ್ನು ಮಾನ್ಯ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸಂಸತ್ತು ಅಂಗೀಕರಿಸಿ ಜಾರಿಗೊಳಿಸಿದ 'ಭಾರತ ಸರ್ಕಾರ ಕಾಯ್ದೆ, ೧೯೩೫'ರ ಪ್ರಕಾರ ಕೊಡಮಾಡಿದ ಪ್ರಾಂತೀಯ ಸ್ವಾಯತ್ತತೆಯಂತೆ ಪ್ರಾಂತೀಯ ಶಾಸನ ಸಭೆಗಳಿಗೆ ೧೯೩೭, ಫೆಬ್ರವರಿಯಲ್ಲಿ ಚುನಾವಣೆಗಳು ನಡೆದವು. ಈ ಚುನಾವಣೆಗಳಲ್ಲಿ ಮೊಟ್ಟಮೊದಲ ಸಲ ಪರಿಶಿಷ್ಟ ಜಾತಿಗಳವರಿಗೆ ಶಾಸನಸಭೆಗಳಲ್ಲಿ ಸ್ಥಳಗಳನ್ನು ಕಾಯ್ದಿರಿಸಲಾಯಿತು. ಈ ಚುನಾವಣೆಗಳ ಫಲಿತಾಂಶ ಹೊರಬಿದ್ದ ನಂತರ ಕಾಂಗ್ರೆಸ್ ಪಕ್ಷ ಚುನಾವಣೆಗಳಲ್ಲಿ ತಾನು ಗೆದ್ದ ಸ್ಥಾನಗಳಲ್ಲಿ ಪರಿಶಿಷ್ಟರಿಗಾಗಿ ಕಾಯ್ದಿಟ್ಟ ಸ್ಥಳಗಳೂ ಸೇರಿದಂತೆ ಎಲ್ಲಾ ಕಡೆಗೂ ತಮ್ಮ ಪಕ್ಷವೇ ಜಯಶಾಲಿಯಾಗಿದ್ದು ಕಾಂಗ್ರೆಸ್ಸೇತರ ಅಸ್ಪೃಶ್ಯರ ಅಭ್ಯರ್ಥಿಗಳು ಪರಾಜಯಗೊಂಡಿರುವುದರಿಂದ ಕಾಂಗ್ರೆಸ್ ಪಕ್ಷವೇ ಅಸ್ಪೃಶ್ಯರ ನಿಜವಾದ ಪ್ರತಿನಿಧಿ ಮತ್ತು ರಕ್ಷಕ ಎಂದು ಹೇಳಿಕೊಂಡಿತು. ಡಾ. ಅಂಬೇಡ್ಕರ್‌ರವರು ಈ ಚುನಾವಣೆಗಳನ್ನು ಎದುರಿಸುವುದಕ್ಕಾಗಿಯೇ ಅದೇ ತಾನೇ ಸ್ಥಾಪಿಸಿದ್ದ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' ಎಂಬ ಅವರ ನಾಯಕತ್ವದ ಪಕ್ಷ ದಯನೀಯ ಸೋಲು ಅನುಭವಿಸಿದೆ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡತೊಡಗಿತು. ಇದು ಒಂದು ಅಪ್ಪಟ ಸುಳ್ಳು ಮತ್ತು ಕಠೋರ ಅಸತ್ಯ ಎಂದು ಅಂಬೇಡ್ಕರ್ ಕಾಂಗ್ರೆಸ್ ಅಪಪ್ರಚಾರವನ್ನು ಖಂಡಿಸಿದರು. ಕೇವಲ ಖಂಡನೆಯ ಹೇಳಿಕೆಯನ್ನು ನೀಡಿ ತೃಪ್ತರಾಗದೆ, ಚುನಾವಣಾ ಫಲಿತಾಂಶದ ವಾಸ್ತವಿಕ ಅಂಕಿಅಂಶಗಳು, ದಾಖಲೆಗಳು ಮತ್ತು ಇತರ ಸಾಮಗ್ರಿಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ಒಂದು ವೈಜ್ಞಾನಿಕ ಅಧ್ಯಯನವನ್ನು ಕೈಗೊಂಡರು. 'ಕಾಂಗ್ರೆಸ್ ಮತ್ತು ಗಾಂಧೀ ಅಸ್ಪೃಶ್ಯರಿಗಾಗಿ ಮಾಡಿರುವುದೇನು?' ಕೃತಿಯೇ ಈ ಅಧ್ಯಯನದ ಫಲಶ್ರುತಿ. ಈ ಚುನಾವಣಾ ಅಧ್ಯಯನ ಇತರರಿಗೆ ಮಾರ್ಗದರ್ಶಿಯಾಗಿರುವುದಲ್ಲದೆ ಇದು ಅತ್ಯಂತ ಬೋಧಪ್ರದವೂ ಸತ್ಯದರ್ಶಿ ಕೃತಿಯೂ ಆಗಿದೆ.

ಈ ಅಧ್ಯಯನದಲ್ಲಿ ಡಾ. ಅಂಬೇಡ್ಕರ್‌ರವರು ೧೯೩೭ರ ಚುನಾವಣೆಯ ಫಲಿತಾಂಶದಂತೆ ಕಾಂಗ್ರೆಸ್ ಅಸ್ಪೃಶ್ಯರನ್ನು ಪ್ರತಿನಿಧಿಸುತ್ತದೆ ಎಂಬ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ. ಕಾಂಗ್ರೆಸ್ಸಿನ ಈ ಹೇಳಿಕೆಯನ್ನು ಅನುಮೋದಿಸುವುದಂತಿರಲಿ, ಫಲಿತಾಂಶಗಳು ಈ ಕೆಳಗಿನ ಸಂಗತಿಗಳನ್ನು ಎತ್ತಿಹಿಡಿಯುತ್ತವೆ. ಅವೇನೆಂದರೆ, ೧) ೧೫೧ ಕಾಯ್ದಿಟ್ಟ ಸ್ಥಾನಗಳಲ್ಲಿ ಕಾಂಗ್ರೆಸ್ ೭೩ ಸ್ಥಾನಗಳನ್ನು ಮಾತ್ರ ಪಡೆದುಕೊಂಡಿದೆ, ೨) ಬಹುತೇಕ ಎಲ್ಲಾ ಮತಕ್ಷೇತ್ರಗಳಲ್ಲೂ ಅಸ್ಪೃಶ್ಯರು ತಮ್ಮವರೇ ಅಭ್ಯರ್ಥಿಗಳಿಂದ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಿದ್ದಾರೆ. ೩) ಕಾಂಗ್ರೆಸ್ ಜಯಗಳಿಸಿದ ೭೩ ಸ್ಥಾನಗಳನ್ನು ಹಿಂದೂ ಮತದಾರರ ಸಹಾಯದಿಂದ ಪಡೆದುಕೊಂಡಿರುವುದರಿಂದ ಅವರು ಪರಿಶಿಷ್ಟ ಜಾತಿಯನ್ನು ಪ್ರತಿನಿಧಿಸುವುದಿಲ್ಲ, ೪) ೧೫೧ ಸ್ಥಾನಗಳಲ್ಲಿ ಕಾಂಗ್ರೆಸ್ ನಿಜವಾದ ಅರ್ಥದಲ್ಲಿ ಪರಿಶಿಷ್ಟ ಜಾತಿಯವರ ಬಹುಮತ ಬೆಂಬಲದಿಂದ ಆಯ್ಕೆ ಹೊಂದಿದ ಸ್ಥಾನಗಳೆಂದರೆ ೩೮ ಮಾತ್ರ.

ಇನ್ನೊಂದು ಸೋಜಿಗದ ಸಂಗತಿ ಎಂದರೆ, ಅಂಬೇಡ್ಕರರು ಸ್ಥಾಪಿಸಿದ್ದ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯ ಕಾರ್ಯವ್ಯಾಪ್ತಿ ಕೇವಲ ಮುಂಬಯಿ ಪ್ರಾಂತ್ಯಕ್ಕೆ ಸೀಮಿತವಾಗಿದ್ದು ಅಲ್ಲಿ ಮಾತ್ರ ಅದು ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಆ ಪ್ರಾಂತ್ಯದಲ್ಲಿ ೧೫ ಕಾಯ್ದಿಟ್ಟ ಸ್ಥಾನಗಳಲ್ಲಿ ೧೩ ಸ್ಥಾನಗಳಲ್ಲಿ ಜಯಗಳಿಸಿದ್ದಲ್ಲದೆ, ೨ ಸಾಮಾನ್ಯ ಸ್ಥಾನಗಳನ್ನೂ ಪಡೆದುಕೊಂಡಿತು. ಆ ಅಂಕಿಸಂಖ್ಯೆಗಳ ಆಧಾರದ ಮೇಲೆ ಕಾಂಗ್ರೆಸ್ ಪರಿಶಿಷ್ಟರಿಗಾಗಿ ಮೀಸಲಾಗಿಟ್ಟ ಎಲ್ಲಾ ಸ್ಥಾನಗಳನ್ನು ತಾನೇ ಪಡೆದುಕೊಂಡಿದೆ, ತಮ್ಮ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸಂಪೂರ್ಣ ವಿಫಲಗೊಂಡಿದೆ ಮತ್ತು ತಾನೇ ಅಸ್ಪೃಶ್ಯರ ನಿಜವಾದ ಪ್ರತಿನಿಧಿ ಎಂದು ಹೇಳಿಕೊಳ್ಳುವ ಕಾಂಗ್ರೆಸ್

ಪಕ್ಷದ ನಿಲವನ್ನು ಅಂಬೇಡ್ಕರರು ಸುಳ್ಳಿನ ಕಂತೆ ಎಂಬ ಸತ್ಯಾಂಶವನ್ನು ಈ ಪುಸ್ತಕದಲ್ಲಿ ಬಲವಾಗಿ ಪ್ರತಿಪಾದಿಸಿದ್ದಾರೆ. ಅವರೇ ಹೇಳಿರುವಂತೆ ಈ ಪುಸ್ತಕ ಈ ವಿಷಯದಲ್ಲಿ ಆಸಕ್ತಿ ಹೊಂದಿದ ಮತ್ತು ಸತ್ಯಾಂಶವನ್ನು ತಿಳಿಯಬಯಸಿದ ಎಲ್ಲರಿಗೂ ಬೋಧಪ್ರದವೂ ಮತ್ತು ಕುತೂಹಲಕಾರಿಯೂ ಆಗಿದೆ.

ಇನ್ನು ಈ ಸಂಪುಟದಲ್ಲಿ ಪ್ರಕಟವಾಗಿರುವ 'ಶ್ರೀಯುತ ಗಾಂಧಿ ಮತ್ತು ಅಸ್ಪೃಶ್ಯರ ವಿಮೋಚನೆ' ಎಂಬ ಇನ್ನೊಂದು ಪುಸ್ತಕದ ಬಗ್ಗೆ ಎರಡು ಮಾತು. ಇದು ಡಿಸೆಂಬರ್ ೧೯೪೨ರಲ್ಲಿ ಕೆನಡಾದ ಕ್ವಿಬೆಕ್ ಪ್ರಾಂತ್ಯದ ಮೌಂಟ್ ಟ್ರ್ಯಾಂಟ್‌ಲಾಂಟ್ ಎಂಬಲ್ಲಿ ಪೆಸಿಫಿಕ್ ಸಂಬಂಧಗಳ ಸಂಸ್ಥೆಯ ಭಾರತೀಯ ಶಾಖೆಯ ಆಶ್ರಯದಲ್ಲಿ ಜರುಗಿದ ಸಮ್ಮೇಳನದಲ್ಲಿ ಅಂಬೇಡ್ಕರರು ಪ್ರಸ್ತುತಪಡಿಸಿದ 'ಭಾರತದ ಅಸ್ಪೃಶ್ಯರ ಸಮಸ್ಯೆಗಳು' ಎಂಬ ಪ್ರಬಂಧದ ವಿಸ್ತೃತ ರೂಪವಾಗಿದೆ. ಮೂಲ ಪ್ರಬಂಧದ ವಿಷಯಗಳನ್ನೇ ಇದರಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಅಸ್ಪೃಶ್ಯರ ರಾಜಕೀಯ ಬೇಡಿಕೆಗಳನ್ನು ವಿವರವಾಗಿ ನೀಡಿದೆಯಲ್ಲದೆ, ಈ ನ್ಯಾಯಯುತ ಬೇಡಿಕೆಗಳಿಗೆ ಹಿಂದೂಗಳ ವಿರೋಧವೂ ಅಲ್ಲದೆ ಈ ಬಗ್ಗೆ ವಿದೇಶಿಯರಲ್ಲಿ ಉಂಟಾಗಿರುವ ತಪ್ಪು ಕಲ್ಪನೆಗಳನ್ನೂ ಸವಿಸ್ತಾರವಾಗಿ ಚರ್ಚಿಸಲಾಗಿದೆ. ತಪ್ಪು ಕಲ್ಪನೆಗಳನ್ನು ನಿವಾರಿಸುವುದು ಈ ಪುಸ್ತಕದ ಮೂಲ ಉದ್ದೇಶವಾಗಿದೆಯಾದರೂ ಇದರಲ್ಲಿ ಅಸ್ಪೃಶ್ಯರ ರಾಜಕೀಯ ಒತ್ತಾಸೆಗಳು ಮತ್ತು ಅವರ ಬೇಡಿಕೆಗಳಲ್ಲಡಗಿರುವ ಸತ್ವವನ್ನು ಯಥೋಚಿತವಾಗಿ ಪ್ರಸ್ತುತಪಡಿಸಿದ್ದು ಇದು ದೇಶದ ಅಸ್ಪೃಶ್ಯರ ಸಮಸ್ಯೆಗಳ ನಿವಾರಣೆಗೆ ಡಾ. ಅಂಬೇಡ್ಕರ್‌ರವರು ಸೂಚಿಸಿದ ರಾಜಕೀಯ ಮತ್ತು ಸಂವಿಧಾನಾತ್ಮಕ ಮಾರ್ಗಗಳ ಪ್ರತಿಪಾದನೆಯಾಗಿದೆ. ಹೀಗಾಗಿ ಈ ೯ನೇಯ ಸಂಪುಟದಲ್ಲಿ ಪ್ರಕಟಿಸಲಾಗಿರುವ ಎರಡೂ ಕೃತಿಗಳು ಡಾ. ಅಂಬೇಡ್ಕರ್‌ರವರ ಮೂಲಭೂತ ವಿಚಾರಗಳು ಮತ್ತು ಸಿದ್ಧಾಂತಗಳ ಪರಿಚಯ ಮಾಡುವ ದಿಶೆಯಲ್ಲಿ ಅತ್ಯಂತ ಉಪಯುಕ್ತವಾದವುಗಳಾಗಿವೆ.

ಈ ಸಂಪುಟದ ಭಾಷಾಂತರವನ್ನು ಆಸಕ್ತಿಯಿಂದ ಮಾಡಿಕೊಟ್ಟಿರುವ ಎಲ್ಲಾ ವಿದ್ವಾಂಸರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಭಾಷಾಂತರದ ಪರಿಷ್ಕರಣ ಕಾರ್ಯವನ್ನು ಹಿರಿಯ ವಿದ್ವಾಂಸರೂ, ತಜ್ಞರೂ ಆದ ಡಾ. ದೇ. ಜವರೇಗೌಡ ಅವರು ಬಹಳ ಆಸಕ್ತಿಯಿಂದ ಮಾಡಿಕೊಟ್ಟದ್ದಕ್ಕಾಗಿ ಸಂಪಾದಕ ಸಮಿತಿ ಅವರಿಗೆ ಚಿರಋಣಿಯಾಗಿದೆ. ಈ ಸಂಪುಟದ ಭಾಷಾಂತರ ಮತ್ತು ಪ್ರಕಟಣ ಕಾರ್ಯದಲ್ಲಿ ಆಸಕ್ತಿ ವಹಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದವರಿಗೆ ನಮ್ಮ ಧನ್ಯವಾದಗಳು.

**ಡಾ|| ಎ.ಎಂ. ರಾಜಶೇಖರಯ್ಯ**

ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ

ಸಂದೇಶಗಳು v
ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x
ಎರಡನೇ ಮುದ್ರಣಕ್ಕೆ ಮುನ್ನುಡಿ xiv
ಮೂರನೇ ಮುದ್ರಣಕ್ಕೆ ಮುನ್ನುಡಿ xiv
ಸಂಪಾದಕೀಯ xvi

## ಭಾಗ – ೧

೧. ಡಾ॥ ಬಿ.ಆರ್. ಅಂಬೇಡ್ಕರ್ ಒಂದು ಜೀವನ ಚಿತ್ರ ೧
೨. ವೈಸ್‌ರಾಯ್ ಅವರ ಮಂಡಲಿಯಲ್ಲಿ ಕಾರ್ಮಿಕ ಸದಸ್ಯರಾಗಿ ನೇಮಕ ೯
೩. ಕಾರ್ಮಿಕ ಕಾನೂನು ರಚನೆಯಲ್ಲಿ ಏಕರೂಪತೆಯ ಅಗತ್ಯ ೧೦
೪. ಭಾರತ ಭೂಗರ್ಭಶಾಸ್ತ್ರ ಸಮೀಕ್ಷಾ ಸಲಹಾ ಸಮಿತಿಗೆ ಒಬ್ಬ ಸದಸ್ಯರ ಚುನಾವಣೆ ೧೭
೫. ಭಾರತದಲ್ಲಿನ ಪರಿಸ್ಥಿತಿ ೧೮
೬. ಭಾರತೀಯ ಭೂವಿಜ್ಞಾನ ಸರ್ವೇಕ್ಷಣಾ ಶಾಖೆಯ ಸಲಹಾ ಸಮಿತಿಯ ಓರ್ವ ಸದಸ್ಯರ ಚುನಾವಣೆ ೨೫
೭. ಭಾರತೀಯ ಕಾರ್ಮಿಕ ವರ್ಗವು ಯುದ್ಧವನ್ನು ಗೆಲ್ಲಲೇಬೇಕೆಂದು ಏಕೆ ನಿರ್ಧರಿಸಿದೆ? ೨೯
೮. ಕಾಗದ ನಿಯಂತ್ರಣ ಆಜ್ಞೆ ೩೭
೯. ನೌಕರರಿಗೆ ಅಸಮರ್ಪಕ ತುಟ್ಟಿಭತ್ಯೆ ನೀಡಿದ ಪ್ರಕಟಣೆ ೪೧
೧೦. ಭಾರತೀಯ ಹಣಕಾಸು ಮಸೂದೆ ೪೪
೧೧. ಕಾರ್ಮಿಕ ಇಲಾಖೆಯ ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆ ೪೯
೧೨. ಭಾರತ ಚಹಾ ನಿಯಂತ್ರಣ (ತಿದ್ದುಪಡಿ) ಮಸೂದೆ ೫೧
೧೩. ಯುದ್ಧದಲ್ಲಿ ಆಗುವ ಗಾಯಗಳ (ಪರಿಹಾರ ವಿಮಾ) ಮಸೂದೆ ೫೬
೧೪. ಕುಶಲ ಮತ್ತು ಅರೆಕುಶಲ ನೌಕರರಿಗಾಗಿ ಉದ್ಯೋಗ ವಿನಿಮಯ ಕೇಂದ್ರಗಳು ೬೩
೧೫. ಭಾರತದ ಬಾಯ್ಲರುಗಳ (ತಿದ್ದುಪಡಿ) ಮಸೂದೆ ೬೫
೧೬. ಮೋಟಾರು ವಾಹನಗಳ (ಚಾಲಕರ) ತಿದ್ದುಪಡಿ ಮಸೂದೆ ೬೭
೧೭. ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯದ (ತಿದ್ದುಪಡಿ) ಮಸೂದೆ ೬೯
೧೮. ಯುದ್ಧದಲ್ಲುಂಟಾದ ಗಾಯಗಳ (ಪರಿಹಾರ ವಿಮಾ) ಮಸೂದೆ ೭೧
೧೯. ಸರ್ವ ಕಾರ್ಮಿಕರ ಬಹಿರಂಗ ಸಮ್ಮೇಳನದ ಮೊದಲನೆಯ ಅಧಿವೇಶನ ೮೦
೨೦. ಕಾರ್ಮಿಕರು ಮತ್ತು ಸಂಸದೀಯ ಪ್ರಜಾಪ್ರಭುತ್ವ ೮೫

೨೧. ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ ೯೧
೨೨. ಯುದ್ಧಾನಂತರ ಭಾರತದಲ್ಲಿ ವಿದ್ಯುಚ್ಛಕ್ತಿಯ ಅಭಿವೃದ್ಧಿ ೯೭
೨೩. ಝರಿಯಾ ಕಲ್ಲಿದ್ದಲು ಗಣಿಗೆ ಕಾರ್ಮಿಕ ಸದಸ್ಯರ ಭೇಟಿ ೧೦೬
೨೪. ಕಾರ್ಮಿಕ ಸದಸ್ಯರು ಕಲ್ಲಿದ್ದಲು ಗಣಿಗಳಿಗೆ ಭೇಟಿ ಕೊಟ್ಟದ್ದು ೧೦೭
೨೫. ಭಾರತದಲ್ಲಿ ಕಾರ್ಮಿಕ ಕಲ್ಯಾಣದ ಅಭಿವೃದ್ಧಿ ೧೧೧
೨೬. ಕಲ್ಲಿದ್ದಲ ಗಣಿಗಳ ಭೂಮಿಯೊಳಗೆ ಕೆಲಸ ಮಾಡಲು ಮಹಿಳೆಯರ ನೇಮಕಾತಿ ಮಾಡುವ ಮೇಲೆ ಇರುವ ನಿಷೇಧವನ್ನು ರದ್ದುಪಡಿಸುವುದು ೧೧೪
೨೭. ಕಲ್ಲಿದ್ದಲ ಗಣಿ ಸುರಕ್ಷತೆ (ಸುರಂಗ ಮುಚ್ಚುವ) ತಿದ್ದುಪಡಿ ಮಸೂದೆ ೧೧೯
೨೮. ಕಾರ್ಮಿಕರನ್ನು ಕುರಿತಂತೆ ಸರ್ಕಾರದ ನಿಲವು ೧೨೨
೨೯. ಇತರೆ ಇಲಾಖೆಗಳು ೧೩೧
೩೦. ನವದೆಹಲಿಯಲ್ಲಿನ ಮಸೀದಿಗಳ ರಕ್ಷಣೆ ೧೩೨
೩೧. ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ೧೩೫
೩೨. ಕಲ್ಲಿದ್ದಲ ಗಣಿಗಳ ಕಲ್ಯಾಣ ನಿಧಿಗೆ ಸಲಹಾ ಸಮಿತಿ ೧೩೮
೩೩. ಅಭ್ರಕ ಉದ್ದಿಮೆಗೆ ಸುಭದ್ರ ಮತ್ತು ಸ್ಥಿರ ತಳಹದಿಯನ್ನೊದಗಿಸುವುದು ೧೪೧
೩೪. ಸ್ಥಾಯಿ ಕಾರ್ಮಿಕ ಸಮಿತಿಯಲ್ಲಿ ಕಾರ್ಮಿಕ ಸಂಘಗಳಿಗೆ ಮಾನ್ಯತೆ ಕೊಡುವ ಬಗ್ಗೆ ಚರ್ಚೆ ೧೪೬
೩೫. ಯುದ್ಧಾನಂತರ ಪರಿಣತ ಕಾರ್ಮಿಕರ ನೇಮಕಾತಿ ೧೪೯
೩೬. ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಸರ್ವಸದಸ್ಯರ ಸಭೆ ೧೫೫
೩೭. ಕಾರ್ಖಾನೆಗಳ (ಎರಡನೆ ತಿದ್ದುಪಡಿ) ಮಸೂದೆ ೧೬೬
೩೮. ವೇತನ ಬಟವಾಡೆ (ತಿದ್ದುಪಡಿ) ಮಸೂದೆ ೧೭೪
೩೯. ದಾಮೋದರ ಕಣಿವೆ ಯೋಜನೆ ೧೮೨
೪೦. ಯುದ್ಧೋತ್ತರದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ ೧೮೬
೪೧. ಭಾರತ ಸರ್ಕಾರದ ಖನಿಜ ಸಂಪನ್ಮೂಲ ಕುರಿತ ನೀತಿ ೧೯೫
೪೨. ಭಾರತ ಸರ್ಕಾರದ ಕಾರ್ಮಿಕ ನೀತಿ ೨೦೦
೪೩. ಗಣಿಗಳ ಒಳಗೆ ಸ್ತ್ರೀಯರ ನೇಮಕಾತಿಯನ್ನು ನಿಷೇಧಿಸುವ ಕಾನೂನನ್ನು ಕೂಡಲೇ ಜಾರಿಗೊಳಿಸುವ ಆವಶ್ಯಕತೆ ೨೦೮
೪೪. ಕಾರ್ಮಿಕ ಇಲಾಖೆ ಪೂರಕ ಬೇಡಿಕೆಗಳ ಮಂಜೂರಾತಿ ೨೧೪
೪೫. ಗಣಿಗಳು – ಹೆರಿಗೆ ಸೌಕರ್ಯ (ತಿದ್ದುಪಡಿ) ಮಸೂದೆ ೨೧೭
೪೬. ಕಾರ್ಖಾನೆಗಳ (ಎರಡನೆ ತಿದ್ದುಪಡಿ) ಮಸೂದೆ ೨೧೯
೪೭. ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಮಸೂದೆ (ತಿದ್ದುಪಡಿ) ೨೨೪
೪೮. ಉದ್ದಿಮೆ ಕಾರ್ಮಿಕರ ಆರೋಗ್ಯವಿಮೆ ೨೨೬
೪೯. ಯುದ್ಧಕಾರ್ಯಗಳ ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಾಧಿಕರಣಗಳು ೨೨೭
೫೦. ದಾಮೋದರ ಕಣಿವೆ ವಿವಿಧೋದ್ದೇಶಗಳ ಯೋಜನೆ ಅಭಿವೃದ್ಧಿ ೨೩೧
೫೧. ಭಾರತದ ಕೈಗಾರಿಕಾ ಕಾರ್ಮಿಕರ ಗೃಹ ನಿರ್ಮಾಣ ೨೩೬

೫೨. ಕಾರ್ಮಿಕರ ಬಗೆಗೆ ರಾಜ್ಯದ ಬಾಧ್ಯತೆಗಳು ೨೩೭
೫೩. ಒರಿಸ್ಸಾದ ನದಿಗಳ ವಿವಿಧೋದ್ದೇಶ ಅಭಿವೃದ್ಧಿ ಯೋಜನೆ ೨೪೫
೫೪. ವಜಾ ಆದ ರೈಲ್ವೆ ನೌಕರರ ಫೆಡರೇಷನ್ ಬೇಡಿಕೆಗಳ ತಿರಸ್ಕಾರ ೨೫೩
೫೫. ದಾಮೋದರ್ ಯೋಜನೆಯ ಅನುಷ್ಠಾನದಲ್ಲಿ ಮುಳುಗಡೆಯಾಗಲಿರುವ ಗ್ರಾಮಗಳನ್ನು ಖಾಲಿಮಾಡಿಸಬೇಕೆಂದ ಪ್ರಸ್ತಾವ ೨೫೭
೫೬. ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆ ೨೫೯
೫೭. ಭಾರತೀಯ ಗಣಿಗಳ (ತಿದ್ದುಪಡಿ) ಮಸೂದೆ ೨೬೧
೫೮. ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ೨೬೪
೫೯. ಪುನರ್ವಸತಿ ಯೋಜನೆಗಳು ೨೭೦
೬೦. ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ ೨೭೪
೬೧. ಕಾರ್ಮಿಕ ಇಲಾಖೆಯಲ್ಲಿ ಮುಸಲ್ಮಾನರ ಸ್ಥಿತಿಗತಿ ಉತ್ತಮವಾಗಿದೆ ೨೭೮
೬೨. ಭಾರತೀಯ ಹಣಕಾಸು ಮಸೂದೆ ೨೮೬
೬೩. ಕಲ್ಕತ್ತೆಯ ಭಾರತ ಸರ್ಕಾರದ ಮುದ್ರಣಾಲಯದ ನೌಕರರಿಂದ ಮುಷ್ಕರ ೨೯೫
೬೪. ಕಾರ್ಖಾನೆಗಳ (ತಿದ್ದುಪಡಿ) ಮಸೂದೆ ೨೯೭
೬೫. ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ ೩೦೨
೬೬. ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಮಸೂದೆ ೩೧೩
೬೭. ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ ೩೧೭
೬೮. ಇತರೆ ವಿಷಯಗಳು ೩೧೯

## ಭಾಗ – ೨

**ವಿಭಾಗ – ೧**

ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು ೩೩೩

**ಉಪವಿಭಾಗ – ೧**

ರಾಜಕೀಯ ಕುಂದುಕೊರತೆಗಳು ೩೩೫

**ಉಪವಿಭಾಗ – ೨**

ಶೈಕ್ಷಣಿಕ ಕುಂದುಕೊರತೆಗಳು ೩೫೭

**ಉಪವಿಭಾಗ – ೩**

ಇತರ ಕುಂದುಕೊರತೆಗಳು ೩೬೪

**ಉಪವಿಭಾಗ – ೪**

ಯಾತನೆಗೊಳಗಾದ ಜನರ ಬಗ್ಗೆ ಸರ್ಕಾರದ ಕರ್ತವ್ಯ ೩೬೮

**ವಿಭಾಗ – ೨**


೧. ಸರ್ ಎಸ್. ಕ್ರಿಪ್ಸ್ ಅವರ ಟಿಪ್ಪಣಿ ೩೭೭

೨. ಡಾ॥ ಅಂಬೇಡ್ಕರರು ಮತ್ತು ಶ್ರೀ ರಾಜಾ ಅವರು ಸರ್.ಎಸ್. ಕ್ರಿಪ್ಸ್ ಅವರಿಗೆ ೩೭೮

೩. ಸರ್ ಆರ್. ಲೂಮ್ಲೀ (ಬೊಂಬಾಯಿ) ಅವರಿಂದ
ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಗೆ (ಉದ್ಧೃತ ಭಾಗ) ೩೭೯

೪. ಕ್ರಿಪ್ಸ್ ಪ್ರಸ್ತಾವಗಳು ಸಂವಿಧಾನಾತ್ಮಕ ಸಲಹೆಗಳ ಪಠ್ಯ –
ರೈಟ್ ಆನರೆಬಲ್ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರು ಸಿದ್ಧಪಡಿಸಿದ್ದು ೩೮೨

೫. ಕ್ರಿಪ್ಸ್ ಅವರ ಪ್ರಸ್ತಾವಗಳನ್ನು ಕುರಿತು ಡಾ॥ ಅಂಬೇಡ್ಕರ್ ಅವರ ಹೇಳಿಕೆ ೩೮೪

೬. ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ ಟೆಲಿಗ್ರಾಂ ೩೯೧

೭. ಯುದ್ಧ ಮಂತ್ರಿಮಂಡಲ ಕಾಗದ ಪತ್ರಗಳು ೩೯೩

೮. ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ ೩೯೫

೯. ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ ೩೯೬

೧೦. ಡಾ॥ ಅಂಬೇಡ್ಕರ್‌ರವರಿಂದ ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಗೆ ೩೯೭

೧೧. ವೈಸ್‌ರಾಯ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ನಡೆದ ಚರ್ಚೆಗಳ ಸಾರಾಂಶ ೪೦೦

೧೨. ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರು ಶ್ರೀ ಅಮೆರಿ ಅವರಿಗೆ ೪೦೧

೧೩. ಡಾ॥ ಅಂಬೇಡ್ಕರ್ ಅವರಿಂದ ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಗೆ ೪೦೨

೧೪. ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಂದ ಲಾರ್ಡ್ ಪೆಥಿಕ್ ಲಾರೆನ್ಸ್‌ರಿಗೆ ೪೦೬

೧೫. ಸಚಿವ ಸಂಪುಟದ ನಿಯೋಗ, ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಮತ್ತು
ಡಾ॥ ಬಿ.ಆರ್. ಅಂಬೇಡ್ಕರರು ಪಾಲ್ಗೊಂಡ ಗೋಷ್ಠಿಯ ಬಗ್ಗೆ ಟಿಪ್ಪಣಿ ೪೦೭

೧೬. ಡಾ॥ ಅಂಬೇಡ್ಕರ್‌ರವರಿಂದ ಲಾರ್ಡ್ ವೇವೆಲ್ ಅವರಿಗೆ ೪೧೧

೧೭. ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಗೆ ಕಾರ್ಯಾಂಗ
ಮಂಡಲಿಯ ಸದಸ್ಯರುಗಳು ಬರೆದದ್ದು ೪೧೫

೧೮. ಡಾ॥ ಅಂಬೇಡ್ಕರರು ಮಂತ್ರಿಮಂಡಲ ನಿಯೋಗದ ಸದಸ್ಯರಾದ ರೈಟ್
ಆನರಬಲ್ ಶ್ರೀ ಎ.ವಿ. ಅಲೆಕ್ಸಾಂಡರ್ ಅವರಿಗೆ ಬರೆದದ್ದು ೪೧೬

೧೯. ಡಾ॥ ಅಂಬೇಡ್ಕರರಿಂದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ೪೨೨

೨೦. ಲಾರ್ಡ್ ಪೆಥಿಕ್ ಲಾರೆನ್ಸ್‌ರವರಿಂದ ಡಾ॥ ಅಂಬೇಡ್ಕರ್‌ರವರಿಗೆ ೪೨೪

೨೧. ರಾವ್ ಬಹದ್ದೂರ್ ಶಿವರಾಜರಿಂದ ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ಲರಿಗೆ ೪೨೫

೨೨. ಶ್ರೀ ಆಟ್ಲೆಯವರಿಂದ ಡಾ॥ ಅಂಬೇಡ್ಕರರಿಗೆ ೪೩೦

೨೩. ಡಾ॥ ಅಂಬೇಡ್ಕರರು – ಶ್ರೀ ಆಟ್ಲೆ ಅವರಿಗೆ ೪೩೩

೨೪. ಲಾರ್ಡ್ ಪೆಥಿಕ್ ಲಾರೆನ್ಸ್ – ಶ್ರೀ ಆಟ್ಲೆ ಅವರಿಗೆ ೪೩೫

೨೫. ಲಾರ್ಡ್ ಫೆಥಿಕ್ ಲಾರೆನ್ಸ್ ಅವರು ಶ್ರೀ ಆಟ್ಲೆಯವರಿಗೆ ೪೩೭

**ವಿಭಾಗ – ೩**

೧. ಪರಿಶಿಷ್ಟ ಜಾತಿಗೆ (ಅಸ್ಪೃಶ್ಯರಿಗೆ) ಸಂಬಂಧಿಸಿದಂತೆ ಸಂಪುಟ ನಿಯೋಗವು ಸೂಚಿಸಿದ ಭಾರತ ಸಂವಿಧಾನದಲ್ಲಿನ ಶಿಫಾರಸುಗಳ ಬಗೆಗೆ ಟೀಕೆಗಳು ೪೪೧

ಡಿಸೆಂಬರ್ ೧೯೪೫ರಲ್ಲಿ ಜರುಗಿದ ಪ್ರಾಥಮಿಕ ಚುನಾವಣೆಗಳ ವಿಶ್ಲೇಷಣೆ. ೪೪೯

೨. ಸಂಪುಟ ನಿಯೋಗ ಮತ್ತು ಅಸ್ಪೃಶ್ಯರು ೪೬೦

**ವಿಷಯಸೂಚಿ** ೪೭೧

# ೧

# ಡಾ॥ ಬಿ.ಆರ್. ಅಂಬೇಡ್ಕರ್

# ಒಂದು ಜೀವನ ಚಿತ್ರ

## ವೈಸರಾಯ್ ಮಂಡಲಿಯ ಸದಸ್ಯರು*

ಮೂವತ್ತು ವರ್ಷಗಳ ಹಿಂದೆ ಒಬ್ಬ ಮಹರ್ ತರುಣನು ತನ್ನೆದುರಿಗೆ ಶಿಕ್ಷಣವು ತೆರೆದ ಅವಕಾಶಗಳ ಸ್ವರ್ಣಚಿತ್ರವನ್ನು ನೋಡಿದನು; ತನ್ನ ಜೀವಿತ ಕಾರ್ಯವು, ತನ್ನನ್ನೂ ತನ್ನ ಬಾಂಧವರನ್ನೂ ಅಸ್ಪೃಶ್ಯರೆಂದೂ, ತಮ್ಮ ನೆರಳು ಆಸುಪಾಸಿನಲ್ಲಿ ಸುಳಿದರೂ ಮೈಲಿಗೆಯಾಗಿ ಬಿಡುತ್ತದೆಂದೂ ಸವರ್ಣೀಯ ಹಿಂದೂಗಳು ಘೋಷಿಸಿದ್ದ ಒಂದು ಸಾಮಾಜಿಕ ವ್ಯವಸ್ಥೆಯ ವಿರುದ್ಧ ನಡೆಯುವ ಧರ್ಮಯುದ್ಧವಾಗಿರತಕ್ಕದ್ದು ಎಂದು ನಿರ್ಧರಿಸಿದನು. ಇಂದು ಡಾ॥ ಭೀಮ್‌ರಾವ್ ರಾಮ್‌ಜಿ ಅಂಬೇಡ್ಕರ್ ಅವರು ವೈಸರಾಯರ ಆಡಳಿತ ಮಂಡಲಿಯಲ್ಲಿ ಕಾರ್ಮಿಕ ಖಾತೆಯನ್ನು ವಹಿಸಿಕೊಂಡಿದ್ದಾರೆ. ಆದರೆ ಇಂದಿಗೂ ಅವರು ತಮ್ಮ ಮೊದಲ ಕರ್ತವ್ಯ ದಲಿತ ವರ್ಗಗಳು ಎನಿಸಿಕೊಳ್ಳುವ ಜನವರ್ಗಗಳಿಗಾಗಿ ಎಂದು ಭಾವಿಸಿದ್ದಾರೆ. ಅವರನ್ನು ವಿಮೋಚನೆಗೊಯ್ಯುವ ಹಾದಿಯಲ್ಲಿ ವೈಯಕ್ತಿಕ ಸಂಪನ್ನತೆಯಾಗಲೀ ಆಕಾಂಕ್ಷೆಯಾಗಲೀ ಅಡ್ಡಬರಕೂಡದು ಎಂದು ಅವರು ಭಾವಿಸಿದ್ದಾರೆ.

ಹಿಂದೂ ಸಾಮಾಜಿಕ ವ್ಯವಸ್ಥೆಯ ಮೇಲೆ ಅವರು ನಡೆಸಿದ ಆಕ್ರಮಣಗಳನ್ನೂ ಸವರ್ಣೀಯ ಹಿಂದೂ ನಾಯಕರೊಂದಿಗೆ ತಳೆದಿದ್ದ ಭಿನ್ನಾಭಿಪ್ರಾಯಗಳನ್ನೂ ಬಲ್ಲವರಿಗೆ ಅವರು ಬಹಳವಾಗಿ ಕಹಿ ಉಂಡಿರುವ ವ್ಯಕ್ತಿ ಎನ್ನಿಸಬಹುದು. ಆದರೆ ಅವರು ತಮ್ಮ ವೃತ್ತಿ ಜೀವನವನ್ನೂ, ಸಾಕ್ಷಾತ್ಕಾರಗಳನ್ನೂ ಕುರಿತು ಹೇಳುವುದನ್ನು ಕೇಳಿದವರಿಗೆ ನಿಜವಾಗಿ ಈ ಮನುಷ್ಯ ಇನ್ನೂ ಕಹಿಯಾಗಿರಬೇಕಾಗಿತ್ತಲ್ಲ, ಹಾಗೆ ಏಕೆ ಆಗಿಲ್ಲ ಅನ್ನಿಸುತ್ತದೆ. ಅಸ್ಪೃಶ್ಯತೆಯ ವಿರುದ್ಧ ಧರ್ಮಯುದ್ಧ ನಡೆಯುವುದಕ್ಕೆ ತೆತ್ತುಕೊಂಡ ಬದುಕಿನಲ್ಲಿ ಅವರು ಎಷ್ಟೊಂದು ವಿಷಯಗಳನ್ನು ಕಲಿತರು, ಎಷ್ಟು ಪರಿಣತಿ ಸಾಧಿಸಿದರು ಎನ್ನುವುದು ಆಶ್ಚರ್ಯವಾಗಿ ತೋರುತ್ತದೆ.

ಈ ಅಸ್ಪೃಶ್ಯನಿಗೆ ವಿದ್ಯಾಭ್ಯಾಸವೆನ್ನುವುದು ತಾನೆ ಹೇಗೆ ದೊರಕಿತು ಎಂದು ಸಹಜವಾಗೇ ಕೇಳಬಹುದು. ಉತ್ತರ ಸರಳವಾಗಿದೆ. ಅವರ ಜನಾಂಗ, ಮಹರ್. ಮೂಲತಃ ಬೇಸಾಯಗಾರರು, ಗ್ರಾಮಸೇವಕರು ಮತ್ತು ಯೋಧರು. ಇದು ಹಿಂದೊಮ್ಮೆ ಈಸ್ಟ್ ಇಂಡಿಯಾ ಕಂಪನಿಯ ಮುಂಬಯಿ ಸೇನೆಗೆ ಯೋಧರನ್ನು ಒದಗಿಸಿದ್ದ ಜನಾಂಗ. ಬಿಹಾರದ ದುಸದ್‌ರ ಹಾಗೆ ಅಥವಾ ಮದರಾಸಿನ ಪರೆಯರ ಹಾಗೆ ಅಲ್ಲಲ್ಲಿಯ

---

* ಇಂಡಿಯನ್ ಇನ್‌ಫರ್ಮೇಷನ್, ಮಾರ್ಚ್ ೧, ೧೯೪೩, ಈ ಲೇಖನವು 'ವ್ಯಕ್ತಿಚಿತ್ರಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿತ್ತು. ಲೇಖಕರ ಹೆಸರು ಲೇಖನದಲ್ಲಿ ನಮೂದಾಗಿಲ್ಲ. – ಸಂ.

ಕಂಪನಿ ಸೇನೆಗೆ ಸೇರಿಕೊಂಡಿದ್ದರು. ಸಿಪಾಯಿಗಳಿಗೆ ಸೈನ್ಯದಲ್ಲಿ ಶಿಕ್ಷಣ ದೊರಕಿತ್ತು. ಡಾ॥ ಅಂಬೇಡ್ಕರರ ತಂದೆ ಸುಬೇದಾರ್ ರಾಮ್‌ಜಿ ಮಾಲೋಜಿ ಅಂಬೇಡ್ಕರ್ ಒಂದು ಸೈನಿಕ ಶಾಲೆಯಲ್ಲಿ ಉಪಾಧ್ಯಾಯರೂ ಆಗಿದ್ದರು.

**ಪ್ರಾರಂಭಿಕ ಶಿಕ್ಷಣ**

೧೮೯೨ರಲ್ಲಿ ಸೇನೆಗೆ ಮಹರ್‌ರನ್ನು ಭರ್ತಿ ಮಾಡಿಕೊಳ್ಳುವುದು ನಿಂತಿತು. ಇಲ್ಲವಾದರೆ ಸುಬೇದಾರನ ಮಗ ಯೋಧವೃತ್ತಿಯನ್ನೇ ಹಿಡಿಯುತ್ತಿದ್ದುದು ಸಹಜ ಸಾಧ್ಯ. ಆದರೆ ಪರಿಸ್ಥಿತಿ ಬೇರೆಯಾಗಲಿತ್ತು. ಶಿಕ್ಷಣದ ಮೌಲ್ಯವೇನೆಂದು ಅರಿತ ಸುಬೇದಾರನು ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಶಕ್ತಿಮೀರಿ ಪ್ರಯತ್ನಪಟ್ಟನು. ಇದು ಬಹಳ ಕಷ್ಟದ ಕೆಲಸವಾಗಿತ್ತು. ಮಹರ್‌ನೊಬ್ಬನ ಮಕ್ಕಳನ್ನು ಸೇರಿಸಿಕೊಳ್ಳಲು ಶಾಲೆಗಳು ನಿರಾಕರಿಸಿದುವು. ಅವನು ತನ್ನ ಹುಟ್ಟು ಜಿಲ್ಲೆ ರತ್ನಗಿರಿಯಿಂದ ಸತಾರಾಗೆ, ಅಲ್ಲಿಂದ ಮುಂಬಯಿಗೆ ಹೋಗಿ ಕೊನೆಗೆ ಅಲ್ಲಿ ನೆಲೆಸಿದನು. ಒಂದು ಹಂತದಲ್ಲಿ ತನ್ನ ಇಬ್ಬರು ಗಂಡುಮಕ್ಕಳಲ್ಲಿ ಯಾರನ್ನು ಶಾಲೆಯಲ್ಲಿ ಮುಂದುವರಿಸುವುದು ಎಂದು ಅವನು ವಿಚಾರ ಮಾಡಬೇಕಾಯಿತು, ಕಿರಿಯ ಹುಡುಗನನ್ನು ಆರಿಸಿದನು. ಇಂದು ಆತ ದಲಿತ ಜನವರ್ಗಗಳ ಮಹಾನಾಯಕನಾಗಿದ್ದಾನೆ.

ಅಸ್ಪೃಶ್ಯನಾಗಿರುವುದೆಂದರೆ ಏನು ಎಂಬುದನ್ನು ಈ ತರುಣನು ಬಹಳ ಮೊದಲೇ ತಿಳಿದುಕೊಂಡನು. ಆತ ಹುಟ್ಟಿದ್ದು ೧೮೯೩ರಲ್ಲಿ,* ಮ್ಹೊ(Mhow) ಎಂಬಲ್ಲಿನ, ಸಾಕಷ್ಟು ಪ್ರಜಾಸತ್ತಾತ್ಮಕ ವಾತಾವರಣವಿದ್ದ ಸೇನಾ ನೆಲೆಯಲ್ಲಿ. ಆದರೆ ಮಗುವಾಗಿದ್ದಾಗಲೇ ಅವರೆಲ್ಲ ಮುಂಬಯಿ ಪ್ರೆಸಿಡೆನ್ಸಿಗೆ ಹೊರಟುಹೋದರು. ಸತಾರೆಯ ಒಂದು ಶಾಲೆಗೆ, ತರಗತಿಯ ಒಂದು ಮೂಲೆಯಲ್ಲಿ ನೆಲದ ಮೇಲೆ ಹಾಸಿ ಕುಳಿತುಕೊಳ್ಳಲೆಂದು ಒಂದು ಗೋಣಿಚೀಲ ಹಿಡಿದುಕೊಂಡು ಹೋಗುತ್ತಿದ್ದುದನ್ನು ಅವರು ನೆನೆಯುತ್ತಾರೆ. ಶಾಲೆಯ ಸೇವಕನು ಆ ಗೋಣಿತುಂಡನ್ನು ಮುಟ್ಟುತ್ತಿರಲಿಲ್ಲ, ಇವರು ಅದನ್ನು ತಮ್ಮೊಡನೆಯೇ ಒಯ್ಯಬೇಕಾಗಿತ್ತು. ಶಾಲೆಯ ನಲ್ಲಿಯನ್ನು ಮುಟ್ಟುವಂತಿರಲಿಲ್ಲ. ಬಾಯಾರಿಕೆಯಾದರೆ ಶಾಲೆಯ ಸೇವಕನು ನಲ್ಲಿಯನ್ನು ತಿರುಗಿಸಬೇಕು, ಹುಡುಗನು ಕುಡಿಯಬೇಕು. ಧೋಬಿಯು ಅವರ ಬಟ್ಟೆಗಳನ್ನು ಮಡಿಮಾಡುತ್ತಿರಲಿಲ್ಲವಾಗಿ ಅವರ ಸೋದರಿಯರೇ ಮನೆಯ ಎಲ್ಲ ಬಟ್ಟೆಬರೆಗಳನ್ನು ಒಗೆಯಬೇಕಾಗಿತ್ತು.

ಒಂದು ಘಟನೆ ಅವರ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ಒಂದು ಸಲ ಅವರು ತಮ್ಮ ಅಣ್ಣ ಹಾಗೂ ಪುಟ್ಟ ಸೋದರಳಿಯನೊಂದಿಗೆ ರೈಲ್ವೆ ಕಂಬಿಯ ಆಚೆ ಸ್ವಲ್ಪ ದೂರದ ಪಟ್ಟಣದಲ್ಲಿದ್ದ ತಮ್ಮ ತಂದೆಯನ್ನು ಸಂಧಿಸಲು ಹೊರಟರು. ಈ ಪ್ರವಾಸದ ಕೊನೆಯ ಹಂತದಲ್ಲಿ ಯಾವ ಗಾಡಿಯವನೂ ಇವರನ್ನು ಕುಳ್ಳಿರಿಸಿಕೊಂಡು ಹೋಗಲು ಒಪ್ಪಲಿಲ್ಲ. ಕೊನೆಗೆ ತಾವೇ ಹೊಡೆದುಕೊಂಡು ಹೋಗಲು ಗಾಡಿಗೆ ಎರಡು ಪಟ್ಟು ಬಾಡಿಗೆ ಕೊಡಬೇಕಾಯಿತು. ದಾರಿಗೆ ಎಂದು ಮಾಡಿ ತಂದಿದ್ದ ರುಚಿಯಾದ ಆಹಾರ, ಕುಡಿಯಲು ಒಂದು ಹನಿ ನೀರೂ ಸಿಕ್ಕದೆ ಪೂರ್ತಿ ಹಾಳಾಗಿಹೋಯಿತು. ಯಾರೂ ಅವರಿಗೆ ನೀರು ಕೊಡಲಿಲ್ಲ.

---

* ಡಾ॥ ಅಂಬೇಡ್ಕರರ ಜೀವನ ಚರಿತ್ರಕಾರರ ಪ್ರಕಾರ ಅವರ ಹುಟ್ಟಿದ ದಿನವು ೧೪ ಏಪ್ರಿಲ್ ೧೮೯೧. ಇದು ಅವರು ಪ್ರಾಥಮಿಕ ಶಿಕ್ಷಣ ಪಡೆದ ಸತಾರೆಯ ಶಾಲಾ ರಿಜಿಸ್ಟರಿನಲ್ಲಿ ದಾಖಲಾಗಿರುವ ದಿನಾಂಕ – ಸಂ.

**ಬರೋಡಾ ಅರಸರಿಂದ ನೆರವು**

ಮುಂದೆ ಬಿ.ಆರ್. ಅಂಬೇಡ್ಕರ್ ಶಾಲಾವ್ಯಾಸಂಗವನ್ನು ಮುಗಿಸಿದರು, ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿಗೆ ಸೇರಿಕೊಂಡರು. ವಿಶ್ವವಿದ್ಯಾನಿಲಯದ ಈ ಶಿಕ್ಷಣ ಅರ್ಧವಾಗಿರುವಾಗಲೇ ತಂದೆ ಬರಿಗೈ ಆದರು. ಈ ತರುಣನನ್ನು ಒಬ್ಬ ಗೆಳೆಯನು ಬರೋಡಾದ ಗಾಯಕವಾಡ ಅವರ ಬಳಿಗೆ ಕರೆದೊಯ್ದನು. ಅವರಿಂದ ಒಂದು ವಿದ್ಯಾರ್ಥಿವೇತನ ದೊರಕಿತು, ಇದರಿಂದ ಅವರಿಗೆ ಪದವಿ ಗಳಿಸಲು ಸಾಧ್ಯವಾಯಿತು. ಪದವಿ ಪಡೆದ ಮೇಲೆ ಬಿ.ಆರ್. ಅಂಬೇಡ್ಕರ್ ಅವರು ಗಾಯಕವಾಡರಿಗೆ ವಂದನೆ ಹೇಳಲು ಹೋದರು. ಅಲ್ಲಿ ಅವರಿಗೊಂದು ಆಶ್ಚರ್ಯ ಕಾದಿತ್ತು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಲು ಆಸಕ್ತಿ ಇದೆಯೆ ಎಂದು ಅವರು ಕೇಳಿದರು. ಇವರಿಗೆ ತುಂಬ ಸಂತೋಷವಾಯಿತು. ಅಂಬೇಡ್ಕರ್ ಅವರು ನ್ಯೂಯಾರ್ಕಿನ ಕೊಲಂಬಿಯ ವಿಶ್ವವಿದ್ಯಾನಿಲಯಕ್ಕೆ ಹೋಗುವ ವ್ಯವಸ್ಥೆ ಮಾಡಲಾಯಿತು. ಅಮೆರಿಕೆಗೆ ಹಡಗು ಹತ್ತುವುದಕ್ಕೆ ಮೊದಲು ಕೆಲವು ತಿಂಗಳು ಅಂಬೇಡ್ಕರ್ ಅವರು ತಮ್ಮ ಹಿರೀಕರು ನಡೆಸಿದ ವೃತ್ತಿಯನ್ನು ಹಿಡಿಯುವುದು ಮೇಲು ಎಂದು ಗಾಯಕವಾಡರು ಸೂಚಿಸಿ ಬರೋಡಾ ಸಂಸ್ಥಾನ ಸೈನ್ಯದಲ್ಲಿ ಲೆಫ್ಟಿನೆಂಟ್ ಆಗಿ ಅವರನ್ನು ನೇಮಿಸಿದರು.

ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಅವರು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ನೈತಿಕ ತತ್ವಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ೧೯೧೭ರಲ್ಲಿ ಅವರು ಲಂಡನ್ನಿಗೆ ಹೋಗಿ ಅಲ್ಲಿ ಗ್ರೇಸ್ ಇನ್‌ಗೆ ಸೇರಿಕೊಂಡದ್ದರ ಜೊತೆಗೆ ಇಂಡಿಯಾ ಆಫೀಸ್ ಲೈಬ್ರರಿಯಲ್ಲೂ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ಸಂಶೋಧನೆ ನಡೆಸಿದರು.

ಭಾರತಕ್ಕೆ ಹಿಂದಿರುಗಿ, ತಮಗೆ ನೆರವು ನೀಡಿದ ಮಹಾರಾಜರ ಸೇವೆಗೆ ಸೇರಿದರು. ಬರೋಡಾದ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಪ್ರೊಬೇಷನರಿ ಆಗಿ ತಮ್ಮ ಸೇವೆಯನ್ನು ಪ್ರಾರಂಭ ಮಾಡಿದರು.

**ಬರೋಡಾದ ಅನುಭವಗಳು**

ಡಾ॥ ಅಂಬೇಡ್ಕರ್ ಹಲವು ವರ್ಷಗಳ ಕಾಲ ವಿದೇಶದಲ್ಲಿದ್ದರು. ಅವರಿಗೆ ಅನೇಕ ಜನ ಭಾರತೀಯ, ಯೂರೋಪಿಯನ್, ಅಮೆರಿಕನ್‌ರು ಮಿತ್ರರಾಗಿದ್ದರು. ಅವರು ಯಾರೂ ಅವರನ್ನು ಅಸ್ಪೃಶ್ಯನಂತೆ ಪರಿಗಣಿಸಿರಲಿಲ್ಲ. ತಾವು ಎಂದಿನಿಂದಲೂ ತುಳಿಯಲ್ಪಟ್ಟ ಜನವರ್ಗಕ್ಕೆ ಸೇರಿದವರು ಎಂಬ ಭಾವನೆ ಅವರ ಮನಸ್ಸಿನಿಂದ ಅಳಿಸಿತ್ತು. ಆದರೆ ವೃತ್ತಿ ಪ್ರಾರಂಭಿಸಲು ಬರೋಡಕ್ಕೆ ಹೋದೊಡನೆ ಅದೆಲ್ಲ ಅತ್ಯಂತ ಯಾತನಾಮಯವಾಗಿ ಮರುಕಳಿಸಿ ಅಪ್ಪಳಿಸಿತು. ಒಬ್ಬ ಮಹರ್ ಆಗಿ ಅವರು ವಾಸಮಾಡುವುದು ಎಲ್ಲಿ? ಒಬ್ಬ ಪಾರ್ಸಿ ವಸತಿಗೃಹದ ಮಾಲೀಕನನ್ನು ಹೇಗೋ ಮನವೊಲಿಸಿ ತಮಗೆ ಊಟ ಹಾಕಲು, ವಸತಿ ಕೊಡಲು ಒಪ್ಪಿಸಿದರು. ಅದೃಷ್ಟವಶಾತ್ ಆಗ ಇತರ ವಸತಿಗರು ಯಾರೂ ಇರಲಿಲ್ಲ. ಆದರೆ ಹತ್ತೇ ದಿನಗಳ ನಂತರ ಲಾಠಿಗಳನ್ನು ಹಿಡಿದ ಕೆಲವು ಪಾರ್ಸಿಗಳು ಅವರ ಬಳಿಗೆ ಬಂದರು. ತಮ್ಮ ಜನಾಂಗಕ್ಕೆಂದೇ ಮೀಸಲಾದ ವಸತಿಗೃಹದಲ್ಲಿ ತಂಗಿ ಮೈಲಿಗೆ ಮಾಡುವುದೆಂದರೇನರ್ಥ, ಅಂದೇ ಸಂಜೆಯೊಳಗೆ ಅಲ್ಲಿಂದ ತೊಲಗಿ ಹೋಗತಕ್ಕದ್ದು ಎಂದು ಅಪ್ಪಣೆ ಮಾಡಿದರು.

ಆಗ ಅವರು ಆಶ್ರಯಕ್ಕಾಗಿ ತಮ್ಮ ಇಬ್ಬರು ಗೆಳೆಯರ ಸಹಾಯ ಬೇಡಿದರು. ಅವರಲ್ಲಿ ಒಬ್ಬ ಹಿಂದೂ, ಇನ್ನೊಬ್ಬ ಕ್ರಿಶ್ಚಿಯನ್. "ನೀನು ನನ್ನ ಮನೆಗೆ ಬಂದರೆ ಮನೆಯಲ್ಲಿರುವ ಸೇವಕರು ಹೊರಟುಹೋಗಿಬಿಡುತ್ತಾರೆ" ಎಂದು ಕ್ರಿಶ್ಚಿಯನ್ ನುಡಿದನು. ಎರಡನೆಯವನು ತನ್ನ ಪತ್ನಿಯನ್ನು ಕೇಳಿ

ತಿಳಿಸುವುದಾಗಿ ಉತ್ತರ ಕೊಟ್ಟನು. ಅವರ ಪತ್ನಿ ಆಚಾರವಂತ ಬ್ರಾಹ್ಮಣ ಕುಟುಂಬದಿಂದ ಬಂದವಳೆಂದೂ, ಜಾತಿಯನ್ನು ಕುರಿತು ಅವರಿಗೆ ಎಂತಹ ಪೂರ್ವಗ್ರಹಗಳಿರುತ್ತವೆಯೆಂದೂ ತಿಳಿದಿದ್ದರಿಂದ ನಿರಾಶೆಗೊಂಡು ಅಂಬೇಡ್ಕರ್ ಮುಂಬಯಿಗೆ ಹಿಂದಿರುಗಲು ನಿರ್ಧರಿಸಿದರು.

ಅಲ್ಲಿ ಅವರು ಸಿಡೆನ್‌ಹ್ಯಾಮ್ ಕಾಮರ್ಸ್ ಕಾಲೇಜಿನಲ್ಲಿ ರಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದರು. ಆದರೆ ಇಂಗ್ಲೆಂಡಿನಲ್ಲಿ ತಮ್ಮ ವ್ಯಾಸಂಗವನ್ನು ಪೂರ್ತಿಮಾಡಬೇಕೆಂಬುದು ಅವರ ಹಂಬಲವಾಗಿತ್ತು. ತಮ್ಮ ವೇತನದ ಜೊತೆಗೆ, ಖಾಸಗಿಯಾಗಿ ಪಾಠ ಹೇಳಿಕೊಟ್ಟು ಸ್ವಲ್ಪ ಸಂಪಾದಿಸಿ, ಸಾಧ್ಯವಿರುವ ಒಂದೊಂದು ಬಿಡಿಗಾಸನ್ನೂ ಉಳಿಸಿ, ಒಂದೆರಡು ವರ್ಷಗಳ ನಂತರ ಮತ್ತೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸೇರಿದರು. ಅಲ್ಲಿ 'ರೂಪಾಯಿಯ ಸಮಸ್ಯೆ' ಎಂಬ ವಿಷಯವನ್ನು ಕುರಿತು ಪ್ರೌಢ ಪ್ರಬಂಧ ರಚಿಸಿ ಡಿ.ಎಸ್‌ಸಿ. ಪದವಿ ಪಡೆದರು. ನ್ಯಾಯವಾದಿಯಾಗಿ ನೋಂದಾಯಿತರಾದರು. ಯಾವುದಾದರೂ ಒಂದು ಜರ್ಮನ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಬೇಕೆಂಬ ಅಪೇಕ್ಷೆಯಿಂದ ಅವರು ಅಲ್ಲಿಂದ ಬಾನ್‌ಗೆ ಹೋದರು. ಆದರೆ ವಿನಿಮಯ ದರವು ಇಳಿದುಹೋದುದರಿಂದಾಗಿ ಅವರು ಅಲ್ಲಿ ಯಾವುದೇ ಪದವಿಯನ್ನು ಪಡೆಯದೆಯೇ ಭಾರತಕ್ಕೆ ಹಿಂದಿರುಗಬೇಕಾಯಿತು.

ಸರಕಾರಿ ನೌಕರಿಯಲ್ಲೋ, ವಿಶ್ವವಿದ್ಯಾನಿಲಯದಲ್ಲೋ ಸೇರಿ ಕೆಲಸ ಮಾಡುವುದಕ್ಕಿಂತ ವಕೀಲಿ ವೃತ್ತಿ ನಡೆಸುವುದೇ ಮೇಲು, ಅದರಿಂದ ಅಸ್ಪೃಶ್ಯರಿಗಾಗಿ ದುಡಿಯಲು ಪೂರ್ಣ ಸ್ವಾತಂತ್ರ್ಯ ದೊರಕುತ್ತದೆ ಎಂದು ಅವರು ನಿರ್ಧರಿಸಿದರು.

**ದಲಿತ ವರ್ಗಗಳೊಂದಿಗೆ ನಿಕಟ ಸಂಪರ್ಕ**

ಸವರ್ಣೀಯ ಹಿಂದೂ ವಕೀಲರು ಮತ್ತು ಪ್ಲೀಡರುಗಳನ್ನೇ ಅವರು ವಕಾಲತ್ತುಗಳಿಗಾಗಿ ಅವಲಂಬಿಸಬೇಕಾಗಿದ್ದಿತು. ಅವರ ಪೂರ್ವಗ್ರಹಗಳು ಎಲ್ಲಿ ತಮ್ಮ ಪ್ರಗತಿಗೆ ಮಾರಕವಾಗುತ್ತವೋ ಎಂದು ಅಂಬೇಡ್ಕರ್ ಮೊದಲು ಹೆದರಿದರು. ಆದರೆ ಹಾಗೇನೂ ಆಗಲಿಲ್ಲ. ಮುಂಬಯಿಯಲ್ಲಿ ಅವರು ಉತ್ತಮ ಸಿವಿಲ್ ವಕೀಲರಾಗಿ ಪ್ರಸಿದ್ಧಿ ಪಡೆದರು. ಮುಂಬಯಿ ಮತ್ತು ನಾಗಪುರ ವಿಶ್ವವಿದ್ಯಾನಿಲಯಗಳೂ ಹಾಗೂ ಮುಂಬಯಿ ಉಚ್ಚ ನ್ಯಾಯಾಲಯ ಅವರನ್ನು ನ್ಯಾಯಶಾಸ್ತ್ರದ ಪರೀಕ್ಷಕರನ್ನಾಗಿ ನೇಮಿಸಿಕೊಳ್ಳುತ್ತಿದ್ದುವು. ಸ್ವಲ್ಪಕಾಲ ಮುಂಬಯಿಯ ಸರಕಾರೀ ಲಾ ಕಾಲೇಜಿನಲ್ಲಿ ಪ್ರಾಧ್ಯಾಪಕರೂ, ಪ್ರಿನ್ಸಿಪಾಲರೂ ಆಗಿ ಕೂಡ ಸೇವೆ ಸಲ್ಲಿಸಿದರು. ರಾಜಕೀಯದ ಗದ್ದಲದಿಂದ ದೂರವಾದ ಶ್ರೀಮಂತ ಜೀವನದ ಭರವಸೆ ಕೊಡುವ ನ್ಯಾಯಾಂಗದ ಹುದ್ದೆಗಳು ಎಷ್ಟೇ ಆಕರ್ಷಕವಾಗಿದ್ದರೂ ಅವುಗಳನ್ನು ಅಂಬೇಡ್ಕರ್ ನಿರಾಕರಿಸಿದರು.

ಹತ್ತು ವರ್ಷಕಾಲ ಈ ದಲಿತ ಬ್ಯಾರಿಸ್ಟರ್‌ರು ಮುಂಬಯಿಯ ನಗರಾಭಿವೃದ್ಧಿ ಇಲಾಖೆಯವರು ಪರೇಲ್‌ನಲ್ಲಿ ಕಟ್ಟಿಸಿದ್ದ ಒಂದು ಚಾಳ್‌ನಲ್ಲಿ ವಾಸಮಾಡಿದರು. ಈ ಚಾಳ್‌ಗಳೆಂದರೆ ಐದು ಮಹಡಿಯ ಕಟ್ಟಡಗಳು. ಪ್ರತಿಯೊಂದು ಮಹಡಿಯಲ್ಲೂ ಒಂದೊಂದು ಕೊಠಡಿಯ ಸುಮಾರು ೧೦೦ ಮನೆಗಳು. ಅವುಗಳಲ್ಲಿ ಯಾವುದೇ ಆಧುನಿಕ ಸೌಲಭ್ಯ ಇರಲಿಲ್ಲ. ಒಂದೊಂದು ಅಂತಸ್ತಿನಲ್ಲೂ ಒಂದು ಕಕ್ಕಸ್ಸು, ಸ್ನಾನ, ಒಗೆತ ಮತ್ತು ಪಾತ್ರೆ ತೊಳೆಯುವಿಕೆ ಎಲ್ಲಕ್ಕೂ ಸೇರಿ ಒಂದೇ ಒಂದು ನಲ್ಲಿ. ಅಲ್ಲಿ ವಾಸವಾಗಿದ್ದವರಲ್ಲಿ ಬಹುತೇಕ ಜನರು ಸರಾಸರಿ ೨೫ ರೂಪಾಯಿ ವೇತನ ಪಡೆಯುತ್ತಿದ್ದ ಮಿಲ್ ಕೆಲಸಗಾರರು.

ಈ ಪರಿಸ್ಥಿತಿಯಲ್ಲಿ ವಾಸಿಸುತ್ತಾ, ಡಾ॥ ಅಂಬೇಡ್ಕರ್ ಮುಂಬಯಿ ಮಹಾನಗರದ ಕಾರ್ಮಿಕ ವರ್ಗದ ಜೀವನ ಹೇಗಿದೆಯೆಂಬುದರ ನೇರ ಪರಿಚಯ ಮಾಡಿಕೊಂಡರು. ನೂರಾರು ಜನ ಮಿಲ್

ಕೆಲಸಗಾರರು ತಮಗೆ ಪರಿಚಯವಾಗಿದ್ದಾರೆ, ತಮ್ಮ ನೆರವು ಮತ್ತು ಸಲಹೆ ಕೋರಿದ್ದಾರೆ ಎಂದು ಹೆಮ್ಮೆಯಿಂದ ಅವರು ಹೇಳಿಕೊಳ್ಳುತ್ತಿದ್ದರು. ಹೀಗೆ ಅವರು ಅಸ್ಪೃಶ್ಯತೆಯ ವಿರುದ್ಧ ಚಳುವಳಿಯಲ್ಲಿ ದಲಿತವರ್ಗದ ನಾಯಕನಾಗಿ ರೂಪುಗೊಂಡರು, ಸಾವಿರಾರು ಕಾರ್ಮಿಕರ ವಿಶ್ವಾಸ ಗಳಿಸಿದರು.

**ಅಸ್ಪೃಶ್ಯತೆಯ ವಿರುದ್ಧ ಚಳವಳಿ**

ಈ ಚಳವಳಿಯು ಎರಡು ಮಹತ್ವಪೂರ್ಣ ಘಟನೆಗಳಿಂದ ವಿಶಿಷ್ಟವಾಗಿದೆ. ಮೊದಲನೆಯದು (ಕೊಲಾಬಾ ಜಿಲ್ಲೆಯ) ಮಹಾಡ್‌ನಲ್ಲಿ ನಡೆದ ಚೌದಾರ್ ಕೆರೆಯ ಸತ್ಯಾಗ್ರಹ. ದಲಿತ ಜನರು ಆ ಕೆರೆಯ ನೀರನ್ನು ಉಪಯೋಗಿಸುವ ತಮ್ಮ ಹಕ್ಕನ್ನು ಸ್ಥಿರಗೊಳಿಸಿಕೊಳ್ಳಲು ಅಂಬೇಡ್ಕರ್ ಸಾಮೂಹಿಕ ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಿದ ಸಂದರ್ಭ. ಅಸ್ಪೃಶ್ಯರು ಅಲ್ಲಿ ನೀರು ತೆಗೆದುಕೊಳ್ಳಲು ಹೊರಟಾಗ ಕೆಲವರ ತಲೆಗಳೂ ಉರುಳಿದವು. ಡಾ॥ ಅಂಬೇಡ್ಕರ್ ಅವರು ಪೊಲೀಸರ ರಕ್ಷಣೆ ಕೋರಬೇಕಾಯಿತು. ಆದರೆ ಅಸ್ಪೃಶ್ಯರು ಗೆದ್ದರು. ಅದಕ್ಕಿಂತ ಮುಖ್ಯವಾಗಿದ್ದ ವಿಚಾರವೆಂದರೆ ಅವರಲ್ಲಿ ಸಂಘಪ್ರಜ್ಞೆಯು ಜಾಗ್ರತವಾಗುತ್ತಿದ್ದದ್ದು, ತಾವೂ ಮನುಷ್ಯರು ಎಂಬ ಆತ್ಮಗೌರವ ಅವರಲ್ಲಿ ಬಲಿತದ್ದು. ಈ ಭಾವನೆಗಳೇ ವಿಮೋಚನಾ ಪಥದಲ್ಲಿ ಅವರನ್ನು ಮುಂದೆ ಮುಂದೆ ಒಯ್ಯಲಿದ್ದವು.

ಈ ಗೆಲುವಿನಿಂದ ಉತ್ತೇಜಿತರಾಗಿ, ಅಸ್ಪೃಶ್ಯರು ಪವಿತ್ರ ನಗರ ನಾಸಿಕದ ಅತ್ಯಂತ ಪವಿತ್ರ ದೇವಾಲಯಗಳನ್ನು ಪ್ರವೇಶಿಸುವ ಹಕ್ಕಿಗೋಸ್ಕರವಾಗಿ ಹೋರಾಡಲು ನಿರ್ಧರಿಸಿದರು. ಕಾಲಾರಾಮ್ ದೇವಾಲಯದೆದುರು ಐದು ವರ್ಷಗಳಿಗೂ ಹೆಚ್ಚುಕಾಲ ಅವರು ಸತ್ಯಾಗ್ರಹ ನಡೆಸಿದರು. ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಯಾತ್ರಿಕರಿಗೆ ತಡೆಯೊಡ್ಡಿದರು. ಅದು ಎಷ್ಟರಮಟ್ಟಿಗಿತ್ತೆಂದರೆ, ಒಂದು ವರ್ಷ ಜಾತ್ರೆ ನಡೆಸುವುದೇ ಸಾಧ್ಯವಾಗಲಿಲ್ಲ. ಅದುವರೆಗೆ ಅವರಿಗೆ ಮುಚ್ಚಿದ್ದ ಸ್ನಾನಘಟ್ಟದಲ್ಲಿ ಮಿಂದರು, ಆ ಮೂಲಕ ಪವಿತ್ರ ಗೋದಾವರಿಯನ್ನು 'ಮೈಲಿಗೆಗೊಳಿಸಿ'ದರು. ಹೆಂಗಸರೂ ಕೂಡಿದಂತೆ ಅನೇಕಾನೇಕ ಜನರು ಜೈಲಿಗೆ ಹೋದರು. ಅಸ್ಪೃಶ್ಯರಿಗೆ ದೇವಾಲಯವನ್ನು ಪ್ರವೇಶಿಸುವ ಹಕ್ಕು ದೊರಕಲಿಲ್ಲ ನಿಜ, ಆದರೆ ಸತ್ಯಾಗ್ರಹ ನಿಲ್ಲುವ ವೇಳೆಗೆ ಅವರು ತಾವು ಹೇಗೆ ಸಂಘಟಿತರಾಗಬಲ್ಲೆವೆಂಬುದನ್ನು ತೋರಿಸಿ, ಸವರ್ಣೀಯ ಹಿಂದೂಗಳಿಗೆ ಸಾಕಷ್ಟು ಆಘಾತವುಂಟುಮಾಡಿದ್ದರು. ಹಿಂದೂ ಧರ್ಮದೊಂದಿಗೆ ಎಂದೆಂದಿಗೂ ಸಂಬಂಧ ಕಡಿದುಕೊಳ್ಳುವುದಾಗಿ ಬೆದರಿಕೆಯೊಡ್ಡಿದ್ದುದಕ್ಕಿಂತ ಇದು ಕಡಿಮೆಯದಾಗಿರಲಿಲ್ಲ.

**ರಾಜಕೀಯ ಚಟುವಟಿಕೆಗಳು**

ಅಸ್ಪೃಶ್ಯರ ನಾಯಕನಾಗಿ ಡಾ॥ ಅಂಬೇಡ್ಕರ್ ರಾಜಕೀಯದಲ್ಲಿ ಮಹತ್ವಗಳಿಸಿದ್ದಾರೆ. ೧೯೨೬ರಲ್ಲಿ ಅವರು ಮುಂಬಯಿಯ ಲೆಜಿಸ್ಲೇಟಿವ್ ಕೌನ್ಸಿಲಿಗೆ ನಾಮನಿರ್ದೇಶನ ಮಾಡಲ್ಪಟ್ಟರು.

ಅಲ್ಲಿಂದ ಹನ್ನೊಂದು ವರ್ಷಗಳ ಅನಂತರ ಮುಂಬಯಿಯ ವಿಧಾನಸಭೆಗೆ ದಲಿತ ವರ್ಗಗಳ ಮುಂಬಯಿಯ ನಗರದ ಪ್ರತಿನಿಧಿಯಾಗಿ ಚುನಾಯಿತರಾದರು. ಲಂಡನ್ನಿನಲ್ಲಿ ನಡೆದ ಮೂರು ದುಂಡುಮೇಜಿನ ಪರಿಷತ್ತುಗಳಲ್ಲೂ ಅವರು ತಮ್ಮ ಜನರಿಗಾಗಿ ಹೋರಾಡಿದರು. ೧೯೩೫ರ ಭಾರತ ಸರಕಾರದ ಶಾಸನಕ್ಕೆ ಆಧಾರವಾದ ಮಸೂದೆಯ ಕರಡು ತಯಾರಿಸಿದ ಜಂಟಿ ಪಾರ್ಲಿಮೆಂಟರಿ ಸಮಿತಿಯಲ್ಲಿ ಕೂಡ ಕೆಲಸ ಮಾಡಿದರು.

ಅವರ ರಾಜಕೀಯ ಜೀವನದಲ್ಲಿ ನಡೆದ ಅತ್ಯಂತ ಗಮನಾರ್ಹವಾದ ಘಟನೆಯೆಂದರೆ, ನೂತನ

ಸಂವಿಧಾನದ ಪ್ರಕಾರ ತಮ್ಮ ಜನರ ಹಿತರಕ್ಷಣೆಯ ಸಂಬಂಧವಾಗಿ ಗಾಂಧಿಯವರೊಡನೆ ನಡೆಸಿದ ಘರ್ಷಣೆ. ಅನುಸೂಚಿತ ವರ್ಗಗಳ ಹಿತ ಕಾಪಾಡುವ ಕೆಲವು ರಕ್ಷಕ ಷರತ್ತುಗಳನ್ನು ಅಳವಡಿಸಬೇಕೆಂದು ಡಾ॥ ಅಂಬೇಡ್ಕರ್ ವಾದಿಸಿದರು. ಈ ಷರತ್ತುಗಳಿಗೆ ಬ್ರಿಟಿಷ್ ಸರ್ಕಾರವು ಅವಕಾಶಕೊಡಲು ಹವಣಿಸುತ್ತಿರುವಾಗ ಗಾಂಧಿಯವರು ಆಮರಣಾಂತ ಉಪವಾಸ ಪ್ರಾರಂಭಿಸಿದರು. ಈ ಹೋರಾಟದ ಫಲವಾಗಿ ಡಾ॥ ಅಂಬೇಡ್ಕರ್ ಮತ್ತು ಶ್ರೀ ಗಾಂಧಿ 'ಪೂನಾ ಕೌಲು' ಎಂದು ಕರೆಯುವ ಒಂದು ಒಪ್ಪಂದವನ್ನು ಮಾಡಿಕೊಂಡರು. ನೂತನ ಸಂವಿಧಾನದ ಪ್ರಕಾರ ಪ್ರಾಂತೀಯ ಶಾಸನ ಸಭೆಗಳಲ್ಲಿ ಕೆಳಮನೆಗೆ ನಡೆಯುವ ಚುನಾವಣೆಗಳಲ್ಲಿ ಅಸ್ಪೃಶ್ಯರಿಗೆ ಸ್ಥಾನಗಳನ್ನು ಮೀಸಲಿಟ್ಟು ಜಂಟಿ ಮತದಾರ ಕ್ಷೇತ್ರಗಳನ್ನು ರಚಿಸಲು ಅವರು ಒಪ್ಪಿಕೊಂಡರು.

ನೂತನ ಶಾಸನದ ಪ್ರಕಾರ ನಡೆದ ಮೊದಲ ಮಹಾ ಚುನಾವಣೆಗಳಲ್ಲಿ ಡಾ॥ ಅಂಬೇಡ್ಕರ್ ತಮ್ಮ ಪ್ರಾಂತದಲ್ಲಿ ವಿಶೇಷವಾಗಿ ಮತ್ತು ಮಧ್ಯಪ್ರಾಂತಗಳಲ್ಲಿ ಸ್ವಲ್ಪಮಟ್ಟಿಗೆ ತಮ್ಮ ಅನುಯಾಯಿಗಳನ್ನು ಸಂಘಟಿಸಿದರು. ಮುಂಬಯಿಯಲ್ಲಿ 'ಅನುಸೂಚಿತ ಜಾತಿ' ಗಳಿಗೆಂದು ಮೀಸಲಿಟ್ಟಿದ್ದ ೧೫ ಸ್ಥಾನಗಳಲ್ಲಿ ಅವರ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯು ೧೧ ಸ್ಥಾನಗಳನ್ನು ಗೆದ್ದಿತು. ರತ್ನಗಿರಿ ಜಿಲ್ಲೆಯಲ್ಲಿ ಅವರ ಪಕ್ಷವು ನಿಲ್ಲಿಸಿದ್ದ ಸವರ್ಣೀಯ ಹಿಂದೂ ಉಮೇದುವಾರರು ದಲಿತವರ್ಗಗಳಿಗೆ ಮೀಸಲಾಗಿರದಿದ್ದ ಎರಡು ಸ್ಥಾನಗಳನ್ನು ಮಾತ್ರ ಪಡೆಯಲು ಸಾಧ್ಯವಾಯಿತು. ಮಧ್ಯಪ್ರಾಂತಗಳಲ್ಲಿನ ಬಹುತೇಕ ದಲಿತ ವರ್ಗದ ಅಭ್ಯರ್ಥಿಗಳು ಕಾಂಗ್ರೆಸಿಗರಲ್ಲದವರು ಮತ್ತು ಡಾ॥ ಅಂಬೇಡ್ಕರ್ ಅವರ ಅನುಯಾಯಿಗಳು.

**ಅಸ್ಪೃಶ್ಯತೆಯ ಕಳಂಕ**

ರಾಷ್ಟ್ರೀಯ ಪ್ರಾಮುಖ್ಯವುಳ್ಳ ಇದ್ದ ವ್ಯಕ್ತಿಯಾಗಿದ್ದರೂ ಡಾ॥ ಅಂಬೇಡ್ಕರ್ ಅಸ್ಪೃಶ್ಯತೆಯ ಕಳಂಕದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ೧೯೨೯ರಲ್ಲಿ ಅಸ್ಪೃಶ್ಯರ ಕೆಲವು ಬೇಡಿಕೆಗಳನ್ನು ಪರಿಶೀಲಿಸುವ ಒಂದು ಸಮಿತಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ಆಗ ಅವರು ಖಾಂದೇಶ್ ಜಿಲ್ಲೆಯ ಚಾಲೀಸ್‌ಗಾಂವ್ ಎಂಬ ಸ್ಥಳಕ್ಕೆ ಹೋದರು. ಅಲ್ಲಿ ಅವರನ್ನು ಸ್ಥಳೀಯ ಮಹರ್‌ರು ಸ್ವಾಗತಿಸಿದರು. ದೀರ್ಘಕಾಲ ರೈಲ್ವೆ ನಿಲ್ದಾಣದಲ್ಲಿ ಕಾದಮೇಲೆ ಒಂದು ಟಾಂಗಾ ಗಾಡಿಗೆ ಹತ್ತಿಸಿ ಅವರನ್ನು ಮಹರ್ ಜನರು ವಾಸವಾಗಿದ್ದ ಮಹರ್‌ವಾಡಾ ದಿಕ್ಕಿಗೆ ಕಳಿಸಲಾಯಿತು. ಆ ಟಾಂಗಾದ ಚಾಲಕನೋ ತೀರಾ ಅನನುಭವಿ. ಒಂದು ಕಿರುಸೇತುವೆಯ ಬಳಿ ಕುದುರೆ ಮುಗ್ಗರಿಸಿತು. ಡಾ॥ ಅಂಬೇಡ್ಕರ್ ಗಾಡಿಯಿಂದ ಉರುಳಿಬಿದ್ದರು. ಕಲ್ಲು ತಾಗಿ ಅವರಿಗೆ ತುಂಬಾ ಗಾಯವಾಯಿತು. ಅಸ್ಪೃಶ್ಯರಿಗೆ ಟಾಂಗಾ ದೊರಕುವುದು ತಂಬಾ ಕಷ್ಟವಾಗಿತ್ತೆಂದೂ, ಯಾವ ಟಾಂಗಾ ಚಾಲಕನೂ ಅವರನ್ನು ಒಯ್ಯಲು ಸಿದ್ಧನಿರಲಿಲ್ಲವೆಂದೂ, ಒಬ್ಬ ಮಹರ್‌ನೇ ತನ್ನ ನಾಯಕನಿಗೆ ಏನಾಗಬಹುದೆಂಬದನ್ನೂ ಆಲೋಚಿಸದೆ ಈ ಸಾಹಸಕ್ಕೆ ಕೈ ಹಾಕಿದ್ದನೆಂದೂ ಆಮೇಲೆ ಅವರಿಗೆ ತಿಳಿಯಿತು.

೧೯೩೪ರಷ್ಟು ಈಚೆಗೆ ಅಂಬೇಡ್ಕರರೂ ಅವರ ಕೆಲವರು ಸಹವರ್ತಿಗಳೂ ನೈಜಾಂ ಆಧಿಪತ್ಯದಲ್ಲಿದ್ದ ದೌಲತಾಬಾದ್ ಕೋಟೆಯನ್ನು ನೋಡಲು ಹೋಗಿದ್ದರು. ಅದೊಂದು ಸಂದರ್ಶನ ಪ್ರವಾಸ. ಧೂಳು ತುಂಬಿದ್ದ ಕೋಟೆಯ ಒಳಗೆ ಹೋದರು. ಏನೂ ಯೋಚಿಸದೆ ಕೈಕಾಲು ತೊಳೆದುಕೊಳ್ಳಲು ಒಂದು ಕೊಳದಿಂದ ನೀರು ತೆಗೆದುಕೊಂಡರು. ಸುತ್ತಾಡಿ ನೋಡಲು ಅನುಮತಿ ಪಡೆದು, ಹೊರಡುವ ವೇಳೆಗೆ ಒಬ್ಬ ಮುದುಕ ಮಹಮ್ಮದೀಯನು ಓಡಿಬಂದು "ಧೇಡರು (ಅಸ್ಪೃಶ್ಯರು) ಕೊಳವನ್ನು ಮೈಲಿಗೆ ಮಾಡಿಬಿಟ್ಟಿದ್ದಾರೆ." ಎಂದು ಕಿರಚಿಕೊಳ್ಳತೊಡಗಿದನು. ಪರಿಸ್ಥಿತಿ ಗಂಭೀರವಾಯಿತು. ಮಹಮದೀಯರ ಈ ಮನೋಭಾವದಿಂದ ಕೆರಳಿದ ಅಂಬೇಡ್ಕರ್ ಕೇಳಿದರು: "ನಿಮ್ಮ ಧರ್ಮ ಹೇಳುವುದು ಇದನ್ನೇ ಏನು? ಒಬ್ಬ ಅಸ್ಪೃಶ್ಯನು

ಮಹಮ್ಮದೀಯನಾಗಿ ಮತಾಂತರಗೊಂಡರೆ ಈ ಕೊಳದಿಂದ ನೀರು ತೆಗೆದುಕೊಳ್ಳಲು ಅಡ್ಡಿಪಡಿಸುವಿರಾ?" ಈ ಪ್ರಶ್ನೆ ಆ ಜನರನ್ನು ಸ್ತಬ್ಧಗೊಳಿಸಿತು. ಆದರೆ ಅಸ್ಪೃಶ್ಯರು ಸಶಸ್ತ್ರ ಸೈನಿಕನೊಬ್ಬನ ಜೊತೆಯಲ್ಲಿ ಮಾತ್ರ ಕೋಟೆಯಲ್ಲಿ ಸುತ್ತಾಡಲು ಅನುಮತಿ ನೀಡಲಾಯಿತು. ಅವರು ಬೇರೆ ಯಾವುದಾದರೂ ಬಾವಿಯನ್ನು ಮೈಲಿಗೆಗೊಳಿಸಿಬಿಡದಂತೆ ಆ ಸೈನಿಕನು ನೋಡಿಕೊಳ್ಳುವವನಿದ್ದನು.

ಜಾತಿ ಮತ್ತು ಅಸ್ಪೃಶ್ಯತೆ ಇವು ಹಿಂದೂಗಳ ಸೃಷ್ಟಿಯಾಗಿದ್ದರೂ, ಭಾರತದ ಮಹಮ್ಮದೀಯರು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು ಕೂಡ ಈ ವಿಷಯದಲ್ಲಿ ಹಿಂದೂ ಪ್ರವೃತ್ತಿಗಳಿಂದ ಸಂಪೂರ್ಣವಾಗಿ ಹೊರಬಂದಿಲ್ಲ ಎಂಬುದನ್ನು ಅಂಬೇಡ್ಕರರಿಗೆ ಅವರ ಜೀವನದ ಅನುಭವಗಳು ತೋರಿಸಿಕೊಟ್ಟಿವೆ. ದೀರ್ಘಕಾಲದ ಹೋರಾಟದಲ್ಲಿ ಅವರು ಬೆಲೆಯುಳ್ಳ ಸಾಹಚರ್ಯವನ್ನು ಪಡೆದಿರುವುದು, ಅಸ್ಪೃಶ್ಯತೆಯ ಕಾರಣದಿಂದ ತಮ್ಮ ಸಂಪತ್ತನ್ನು ನಿರಾಕರಿಸದ ಅಕ್ಷರ ಜಗತ್ತಿನಲ್ಲಿ, ಸಾಹಿತ್ಯ ಪ್ರಪಂಚದಲ್ಲಿ.

### ಸಾಹಿತ್ಯಕ ಚಟುವಟಿಕೆಗಳು

ಡಾ॥ ಅಂಬೇಡ್ಕರ್ ಅವರನ್ನು ಅವರ ಮನೆಯಲ್ಲಿ ಸಂಧಿಸಿದ ಯಾರೇ ಆಗಲಿ ಅವರ ಕಪಾಟುಗಳನ್ನು ತುಂಬಿಕೊಂಡು, ಮೇಜಿನ ಮೇಲೆ ರಾಶಿ ನಿಂತ ಪುಸ್ತಕಗಳ ವೈವಿಧ್ಯ ಮತ್ತು ಸಂಖ್ಯೆಯನ್ನು ನೋಡಿ ಚಕಿತನಾಗದಿರಲಾರರು. ಎಲ್ಲಾ ಬಗೆಯ ಗ್ರಂಥಗಳು, ಆದರೆ ಹೆಚ್ಚುಮಟ್ಟಿಗೆ ಸಾಂವಿಧಾನಿಕ ನ್ಯಾಯ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ಗ್ರಂಥಗಳು ಅವರಿಗೆ ಬಹು ಪ್ರಿಯವಾದವು.

'ರೂಪಾಯಿಯ ಸಮಸ್ಯೆ' (The Problem of the Rupee), 'ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸು' (Provincial Finance in British India), 'ಜಾತಿ ನಿರ್ಮೂಲನ' (Annihilation of Caste), 'ಒಕ್ಕೂಟ ಮತ್ತು ಸ್ವಾತಂತ್ರ್ಯ' (Federation Versus Freedom) ಮತ್ತು 'ಪಾಕಿಸ್ತಾನವನ್ನು ಕುರಿತ ಚಿಂತನೆಗಳು' (Thoughts on Pakistan) ಇವು ಅವರ ಪ್ರಮುಖ ಬರವಣಿಗೆಗಳು.

ಅಸ್ಪೃಶ್ಯರನ್ನು ರಾಜಕೀಯವಾಗಿ ಜಾಗ್ರತಗೊಳಿಸುವ ಸಲುವಾಗಿ ಅವರು ಮರಾಠೀ ವೃತ್ತಪತ್ರಿಕೆಗಳನ್ನು ನಡೆಸಿದರು. ೧೯೧೯ರಲ್ಲಿ* 'ಮೂಕನಾಯಕ' (Muka Nayak) ಎಂಬ ಪತ್ರಿಕೆ ಪ್ರಾರಂಭಿಸಿದರು. ಆದರೆ ವ್ಯಾಸಂಗವನ್ನು ಮುಂದುವರಿಸಲು ಅವರು ಯೂರೋಪಿಗೆ ಹೊರಟೊಡನೆಯೇ ಅದು ಸಹಜವಾಗಿಯೇ ನಿಂತುಹೋಯಿತು. ೧೯೨೩ರಲ್ಲಿ** 'ಬಹಿಷ್ಕೃತ ಭಾರತ' ಎಂಬ ಇನ್ನೊಂದು ಪತ್ರಿಕೆ ಪ್ರಾರಂಭಿಸಿದರು. ಈಗ ಕೆಲವು ವರ್ಷಗಳ ಹಿಂದೆ ಈ ಪತ್ರಿಕೆಯು 'ಬಹಿಷ್ಕೃತ ಭಾರತ' ವಾಗಿರುವ ಸಮುದಾಯಗಳಿಗಷ್ಟೇ ಸೀಮಿತವಾಗಿರಬಾರದೆಂದು ಭಾವಿಸಿ ಶೀರ್ಷಿಕೆಯನ್ನು 'ಜನತಾ' ಎಂದು ಬದಲಾಯಿಸಿದರು.

### ಧರ್ಮವನ್ನು ಕುರಿತ ಭಾವನೆ

ಡಾ॥ ಅಂಬೇಡ್ಕರ್ ಅವರಿಗೆ ಧರ್ಮವನ್ನು ಕುರಿತು ಯಾವ ಭಾವನೆಯಿದ್ದಿತು ಎಂಬುದನ್ನು ಕುರಿತು ಒಂದು ಮಾತನ್ನು ಹೇಳಬೇಕು. ನಾಲ್ಕು ವರ್ಣಗಳು ಮತ್ತು ಜಾತಿ ಬಹಿಷ್ಕೃತರ ಭಾರೀ ಸಮೂಹದಿಂದಾಗಿ ಹಿಂದೂ ಸಾಮಾಜಿಕ ವ್ಯವಸ್ಥೆಯು ಭಾರತಕ್ಕೆ ಬಲಹೀನತೆಯ ಮೂಲವಾಗಿ ಪರಿಣಮಿಸಿದೆ ಎಂದು

---

* ೧೯೨೦ ಆಗಿರಬೇಕು – ಸಂ.

** ೧೯೨೭ ಆಗಿರಬೇಕು – ಸಂ.

ಅವರು ಭಾವಿಸುತ್ತಾರೆ. ಅದರ ತೆಕ್ಕೆಯೊಳಗೆ ಇರಲು ಅವರು ಬಯಸುವುದಿಲ್ಲ.

ಕೆಲವು ವರ್ಷಗಳ ಹಿಂದೆ ಸುಧಾರಕ ಹಿಂದೂ ಸಂಸ್ಥೆಯಾಗಿದ್ದ ಜಾತ್‌ಪಾತ್ ತೋಡಕ್ ಮಂಡಲ್ (Jat Pat Todak Mandal) ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಬೇಕೆಂದು ಅವರನ್ನು ಆಹ್ವಾನಿಸಿತು. ಆದರೆ ಅಂಬೇಡ್ಕರ್ ಬರೆದು ಕಳಿಸಿದ ಅಧ್ಯಕ್ಷೀಯ ಭಾಷಣದ ಕರಡು ಅದರ ಸಂಘಟಕರಿಗೆ ಸಮ್ಮತವಾಗಲಿಲ್ಲ. ಅದರಲ್ಲಿ ಅಂಬೇಡ್ಕರ್ ಅವರು ಅದೇ ಹಿಂದೂ ಆಗಿ ತಮ್ಮ ಕೊಟ್ಟ ಕೊನೆಯ ಭಾಷಣವೆಂದು ಹೇಳಿದ್ದರು. ಇದು ಒಪ್ಪಿಗೆಯಾಗಲಿಲ್ಲವಾದ್ದರಿಂದ ಮಂಡಲವು ಅಧಿವೇಶನವನ್ನೇ ರದ್ದುಪಡಿಸಿತು. ಆಮೇಲೆ ಆ ಭಾಷಣವನ್ನು 'ಜಾತಿಯ ನಿರ್ಮೂಲನ' (Annihilation of Caste) ಎಂಬ ಹೆಸರಿನಲ್ಲಿ ಒಂದು ಕಿರು ಪುಸ್ತಿಕೆಯಾಗಿ ಪ್ರಕಟಿಸಿದರು. ಈ ಶೀರ್ಷಿಕೆಯೇ ಜಾತಿಯನ್ನು ಕುರಿತು ಅವರಿಗೆ ಯಾವ ಭಾವನೆಯಿತ್ತೆಂಬುದನ್ನು ತೋರಿಸುತ್ತದೆ.

ಆದರೆ ಒಂದು ವಿಷಯ. ಹಿಂದೂ ಆಗಿ ಉಳಿದಿರಕೂಡದೆಂದು ಅವರು ನಿರ್ಧರಿಸಿದ್ದಾರೆ. ಬೌದ್ಧ ಧರ್ಮ, ಸಿಖ್ ಧರ್ಮ, ಕ್ರೈಸ್ತ ಧರ್ಮಗಳೂ ಸೇರಿದಂತೆ ಹಲವಾರು ಧರ್ಮಗಳ ಉಪದೇಶಗಳನ್ನು ಅಧ್ಯಯನ ಮಾಡಿದ್ದಾರೆ. ಆದರೂ ಇನ್ನೊಂದು ಧರ್ಮಕ್ಕೆ ಪ್ರವೇಶ ಮಾಡುವ, ಮತಾಂತರಗೊಳ್ಳುವ ಬಗೆಗೆ ಅವರು ಈಗಲೆ ಪ್ರಕಟಿಸುವುದಿಲ್ಲ. ಅಸ್ಪೃಶ್ಯರಿಗೆ ಇನ್ನೂ ತಮ್ಮ ಅಗತ್ಯ ಇದೆ ಎಂದವರು ಭಾವಿಸುತ್ತಾರೆ. ಈಗ ಅವರು ಮತಾಂತರಗೊಂಡರೆ ಅದು ಬಹು ದೂರವ್ಯಾಪೀ ಪರಿಣಾಮಗಳನ್ನು ಹೊಂದಿರುತ್ತದೆ. ಅವರ ನಂಬಿಕೆ ಮತ್ತು ಅವರ ಪ್ರತಿಯೊಬ್ಬ ಅನುಯಾಯಿಯ ನಂಬಿಕೆ ಅದು ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನೇ ತೀರ್ಮಾನಿಸಿಕೊಳ್ಳಬೇಕಾದ ವಿಷಯ ಎಂಬುದು. ಈ ವಿಷಯದಲ್ಲಿ ತಮ್ಮ ಅನುಯಾಯಿಗಳ ಮೇಲೆ ಪ್ರಭಾವ ಬೀರಲು ಅವರು ಇಚ್ಛಿಸುವುದಿಲ್ಲ. ಅಸ್ಪೃಶ್ಯರ ನಾಯಕತ್ವವನ್ನು ಬೇರೆಯವರಿಗೆ ವಹಿಸಿ ತಾವು ಸಾರ್ವಜನಿಕ ಜೀವನದಿಂದ ನಿವೃತ್ತರಾದಾಗ ಅವರು ಜಗತ್ತಿಗೆ ತಮ್ಮ ನಿರ್ಣಯವನ್ನು ತಿಳಿಸುತ್ತಾರೆ. ಈಗ ಸದ್ಯಕ್ಕೆ ಅವರ ಧರ್ಮಯುದ್ಧ ಮುಂದುವರಿಯಲೇಬೇಕಾಗಿದೆ.

# ೨

# ವೈಸ್‌ರಾಯ್ ಅವರ ಮಂಡಲಿಯಲ್ಲಿ ಕಾರ್ಮಿಕ ಸದಸ್ಯರಾಗಿ ನೇಮಕ*

[ಡಾ॥ ಬಿ.ಆರ್. ಅಂಬೇಡ್ಕರರು ೧೯೪೨ರ ಜುಲೈ ೨೦ರಂದು ವೈಸ್‌ರಾಯರ ಆಡಳಿತ ಮಂಡಲಿಯ ಒಬ್ಬ ಸದಸ್ಯರಾಗಿ ಸೇರಿದರು. ಕಾರ್ಮಿಕ ಖಾತೆಯನ್ನು ನೋಡಿಕೊಳ್ಳುವಂತೆ ಅವರಿಗೆ ಸೂಚಿಸಲಾಯಿತು. ಸಾರ್ವಭೌಮರ ಕಚೇರಿಯಿಂದ ಹೊರಟ ನೇಮಕಾತಿ ಆಜ್ಞೆಯ ಪತ್ರ ಹೀಗಿದೆ : ಸಂ.]

**ಜಾರ್ಜ್ .ಆರ್.ಐ**

ಭಗವಂತನ ಕೃಪೆಯಿಂದ ಗ್ರೇಟ್ ಬ್ರಿಟನ್, ಐರ್ಲೆಂಡ್ ಮತ್ತು ಸಾಗರದಾಚೆಯ ಬ್ರಿಟಿಷ್ ಡೊಮಿನಿಯನ್ನುಗಳ ಧರ್ಮದ ಮಹಾ ಸಂರಕ್ಷಕರೂ ಭಾರತದ ಚಕ್ರವರ್ತಿಗಳೂ ಆಗಿರುವ ಆರನೆಯ ಜಾರ್ಜ್

ನಮ್ಮ ವಿಶ್ವಾಸಪಾತ್ರರೂ, ಪ್ರೀತಿಪಾತ್ರರೂ ಆದ ಭೀಮರಾವ್ ರಾಮ್‌ಜಿ ಅಂಬೇಡ್ಕರ್, ಎಸ್ಕ್ವೈಯರ್, ಡಾಕ್ಟರ್ ಆಫ್ ಸೈನ್ಸ್, ಬ್ಯಾರಿಸ್ಟರ್–ಅಟ್–ಲಾ, ಇವರಿಗೆ.

**ಅಭಿನಂದನೆ!**

ಈ ಮೂಲಕ, ನಮ್ಮ ಮೊಹರಿನೊಂದಿಗೆ ಈ ಆದೇಶವನ್ನು ನೀಡುತ್ತಿದ್ದೇವೆ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ನಮ್ಮ ಇಚ್ಛಾ ಅವಧಿಯಲ್ಲಿ ಭಾರತದ ನಮ್ಮ ಗವರ್ನರ್ ಜನರಲ್ಲರ ಆಡಳಿತ ಮಂಡಲಿಯ ಓರ್ವ ಸದಸ್ಯರಾಗಿರುತ್ತಾರೆ.

(೨) ಮತ್ತು ಅವರು ಹುದ್ದೆಯ ಮೇಲೆ ಹಾಜರಾದ ದಿನದಿಂದ ನಮ್ಮ ಈ ಆದೇಶವು ಜಾರಿಗೆ ಬರುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಸೇಂಟ್ ಜೇಮ್ಸ್‌ನಲ್ಲಿರುವ ನಮ್ಮ ಆಸ್ಥಾನದಲ್ಲಿ ದೇವನ ಒಂದು ಸಾವಿರದ ಒಂಬೈನೂರ ನಲವತ್ತೆರಡನೆಯ ವರ್ಷದ ಜುಲೈ ಒಂಬತ್ತನೆಯ ದಿನವಾದ ಇಂದು, ನಮ್ಮ ಆಳ್ವಿಕೆಯ ಆರನೆಯ ವರ್ಷದಲ್ಲಿ ನೀಡಿದ ನಿರೂಪ.

**ಚಕ್ರವರ್ತಿಗಳ ಆಜ್ಞೆಯ ಮೇರೆಗೆ**
ಸಹಿ : ಎಲ್.ಎಸ್. ಅಮೆರಿ

---

* ಸಿ.ಬಿ. ಖೈರ್ಮೋರ್ಡೆ (ಮರಾಠಿ ಜೀವನ ಚರಿತ್ರೆ), ಸಂಪುಟ ೯, ೧೯೮೭, ಪು. ೧೧೩ (ಮುಂಬಯಿಯ ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಸಂಸ್ಕೃತಿ ಮಂಡಲದ ಪ್ರಕಟಣೆ).

ಡಾ॥ ಅಂಬೇಡ್ಕರ್ ಅವರನ್ನು ಅದಕ್ಕೂ ಮೊದಲೇ ರಾಷ್ಟ್ರೀಯ ರಕ್ಷಣಾ ಮಂಡಲಿಯ ಸದಸ್ಯರಾಗಿ ನೇಮಿಸಲಾಗಿತ್ತು. ಈ ಸಂಬಂಧದ ಸರಕಾರಿ ಪ್ರಕಟಣೆ ೧೯೪೧ರ ಜುಲೈ ೨೧ ರಂದು ಹೊರಟಿತ್ತು–ಸಂ.

## ೩
## ಕಾರ್ಮಿಕ ಕಾನೂನು ರಚನೆಯಲ್ಲಿ ಏಕರೂಪತೆಯ ಅಗತ್ಯ*

(೧೯೪೨, ಆಗಸ್ಟ್ ೭ನೆಯ ತಾರೀಕು ಶುಕ್ರವಾರ ನವದೆಹಲಿಯಲ್ಲಿ ನಡೆದ ಜಂಟಿ ಕಾರ್ಮಿಕ ಸಮ್ಮೇಳನದಲ್ಲಿ ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಖಾತೆಯ ಸದಸ್ಯರು, ಭಾರತ ಸರಕಾರ, ಇವರು ನೀಡಿದ ಭಾಷಣದ ಪೂರ್ಣಪಾಠ ಇಲ್ಲಿದೆ)

"ಈ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನಕ್ಕೆ ತಮ್ಮೆಲ್ಲರನ್ನೂ ಸ್ವಾಗತಿಸಲು ನನಗೆ ತುಂಬ ಹರ್ಷವಾಗುತ್ತದೆ. ನಮ್ಮ ಆಹ್ವಾನಕ್ಕೆ ನೀವು ತಕ್ಷಣವೆ ಪ್ರತಿಕ್ರಿಯೆ ತೋರಿಸಿರುವುದಕ್ಕಾಗಿ, ಈ ಮುಂಜಾನೆ ಇಲ್ಲಿರಲು ಶ್ರಮ ತೆಗೆದುಕೊಂಡುದುದಕ್ಕಾಗಿ ನಾನೂ, ಭಾರತ ಸರ್ಕಾರವೂ ತಮಗೆಲ್ಲಾ ಎಷ್ಟರ ಮಟ್ಟಿಗೆ ಕೃತಜ್ಞರಾಗಿದ್ದೇವೆಂಬುದನ್ನು ವ್ಯಕ್ತಪಡಿಸಲು ಮಾತುಗಳಿಗೆ ಶಕ್ತಿ ಸಾಲದು. ಇದೇ ಉತ್ಸಾಹವು ಈ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಹಕರಿಸುವುದರಲ್ಲೂ, ಈ ಕಾರ್ಯಕಲಾಪಗಳು ಸತ್ಫಲ ನೀಡುವಂತೆ ಮಾಡುವುದರಲ್ಲೂ ಮುಂದುವರಿಯುತ್ತದೆ ಎಂದು ಆಶಿಸುತ್ತೇನೆ, ಮತ್ತು ಹಾಗೆಂದು ನಂಬುತ್ತೇನೆ.

"ಹೆಚ್ಚು ಕಾಲ ನಿಮ್ಮನ್ನು ನಾವು ಇಲ್ಲಿ ಹಿಡಿದಿಟ್ಟುಕೊಳ್ಳುವುದಿಲ್ಲ; ಇದು ತುಂಬಾ ತುರ್ತಿನ ಯುಗ. ನಿಮ್ಮಲ್ಲಿ ಪ್ರತಿಯೊಬ್ಬರೂ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಮ್ಮ ಸ್ಥಳಕ್ಕೆ ಹಿಂದಿರುಗಬೇಕಾಗಿದೆ ಎನ್ನುವುದು ನನಗೆ ಗೊತ್ತು. ಆದ್ದರಿಂದ ಈ ಸಂದರ್ಭದಲ್ಲಿ ನಾನು ದೀರ್ಘವಾದ ಭಾಷಣ ಮಾಡುವುದಿಲ್ಲ. ಈ ಸಮ್ಮೇಳನದ ಮಹತ್ವವನ್ನು ತೋರಿಸಲು, ಅದರ ಉದ್ದೇಶವನ್ನು ನಿರೂಪಿಸಲು ಅಗತ್ಯವಾದ ಕೆಲವು ಅಂಶಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ.

### ಎರಡು ವಿಶೇಷ ಲಕ್ಷಣಗಳು

"ನಿಮಗೆಲ್ಲ ತಿಳಿದಿರುವಂತೆ ಭಾರತ ಸರಕಾರದ ಕಾರ್ಮಿಕ ಇಲಾಖೆಯ ಆಶ್ರಯದಲ್ಲಿ ಇದುವರೆಗೆ ನವದೆಹಲಿಯಲ್ಲಿ ಮೂರು ಕಾರ್ಮಿಕ ಸಮ್ಮೇಳನಗಳು ನಡೆದಿವೆ. ಮೊದಲನೆಯದು ೧೯೪೦ರ ಜನವರಿ ೨೨ ಮತ್ತು ೨೩ರಂದು ನಡೆಯಿತು. ಎರಡನೆಯದು ೧೯೪೧ ಜನವರಿ ೨೭ ಮತ್ತು ೨೮ರಂದು ನಡೆದರೆ, ಮೂರನೆಯದು ೧೯೪೨ ಜನವರಿ ೩೦ ಮತ್ತು ೩೧ರಂದು ನಡೆಯಿತು. ಈಗ ನಡೆಯುತ್ತಿರುವುದು ಈ ಸರಣಿಯಲ್ಲಿ ನಾಲ್ಕನೆಯದು. ಕಳೆದ ಸಮ್ಮೇಳನಗಳಿಗೂ ಇದಕ್ಕೂ ವಿಶೇಷವಾದ ವ್ಯತ್ಯಾಸ ಏನಿದೆ ಎಂಬುದನ್ನು ನಾನು ಹೇಳಿದರೆ ಆಗ ನಿಮಗೆ ಪ್ರಸ್ತುತ ಸಮ್ಮೇಳನದ ಮಹತ್ವ ಅರಿವಾದೀತು. ಮೊದಲನೆಯದಾಗಿ, ಹಿಂದಿನ ಸಮ್ಮೇಳನಗಳು ನಿಗದಿಯಾದ ಕಾಲಾವಧಿಯ ಅಂತರದಲ್ಲಿ ನಡೆದವು. ಆದರೂ ಅವುಗಳ ಯೋಜನೆಯಲ್ಲಿ ಈ ರೀತಿಯ ಕಾಲ ನಿಯಮವೇನೂ ಇರಲಿಲ್ಲ. ಅವುಗಳಲ್ಲಿ ನಿಯತತೆ ಇರದೆಯೇ ಹೋಗಬಹುದಿತ್ತು. ಯಾವುದೇ ನಿಯಮಕ್ಕೆ ಅಥವಾ ರೂಢಿಗೆ ಅಥವಾ ಸಂಪ್ರದಾಯಕ್ಕೆ ಧಕ್ಕೆ ತಾರದಂತೆಯೇ ಅವುಗಳನ್ನು ರದ್ದು ಮಾಡಬಹುದಾಗಿತ್ತು. ಪ್ರಸ್ತುತ ಸಮ್ಮೇಳನದಲ್ಲಿ ಒಂದು ನಿರಂತರತೆಯಿದೆ. ಅದು ಸಮ್ಮೇಳನದ ಯೋಜನೆಯಲ್ಲೇ ಸೇರಿದೆ. ನಾವು ರಚಿಸಬೇಕೆಂದಿರುವ ಸಂಸ್ಥೆಯು ಖಾಯಂ ಆಗಿರುತ್ತದೆ.

---

* ಇಂಡಿಯನ್ ಇನ್‌ಫರ್ಮೇಷನ್, ಸೆಪ್ಟೆಂಬರ್ ೧೫, ೧೯೪೨.

ಒಂದು ಸ್ಥಿರ ಸಮಿತಿಯ ಕ್ರಮಬದ್ಧತೆಯನ್ನು ಹೊಂದಿರುತ್ತದೆ. ಕರೆ ಕೊಟ್ಟಾಗಲೆಲ್ಲ ಕೆಲಸ ಮಾಡಲು ಅದು ಸಿದ್ಧವಾಗಿರುತ್ತದೆ.

"ಈ ಲಕ್ಷಣಕ್ಕಿಂತ ಹೆಚ್ಚು ಮಹತ್ವದ್ದು ಎರಡನೆಯ ಲಕ್ಷಣ. ಈಗ ಅದರ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಅದು ಸಮ್ಮೇಳನದ ರಚನೆಗೇ ಸಂಬಂಧಪಟ್ಟಿದೆ. ಹಿಂದಿನ ಸಮ್ಮೇಳನಗಳು ಕೇವಲ ಸರಕಾರಗಳನ್ನು ಪ್ರತಿನಿಧಿಸುತ್ತಿದ್ದವು. ಕೇಂದ್ರ ಸರಕಾರ, ಪ್ರಾಂತೀಯ ಸರಕಾರಗಳು, ಕೆಲವು ಭಾರತೀಯ ಸಂಸ್ಥಾನಗಳ ಸರಕಾರಗಳು ಕಳುಹಿಸಿದ ಪ್ರತಿನಿಧಿಗಳು ಮಾತ್ರ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಅತ್ಯಂತ ಅಗತ್ಯವೂ, ಅತ್ಯಂತ ಮಹತ್ವಯುತವೂ ಆದ ಪಾಲುದಾರರು, ಅಂದರೆ, ಮಾಲೀಕರು ಮತ್ತು ನೌಕರರು ಆ ಸಮ್ಮೇಳನಗಳಲ್ಲಿ ಪಾಲುಗೊಂಡಿರಲಿಲ್ಲ. ಮಾಲೀಕರನ್ನೂ ನೌಕರರನ್ನೂ ಪ್ರತಿನಿಧಿಸುವ ಸಂಸ್ಥೆಗಳನ್ನು ಸಂಪರ್ಕಿಸಲು ಮತ್ತು ಅವರ ಸಲಹೆ ಕೇಳಲು ಪ್ರಯತ್ನಗಳನ್ನೇನೋ ಮಾಡಲಾಗಿತ್ತು. ಉದಾಹರಣೆಗೆ, ನನ್ನ ಮಾನ್ಯ ಸಹೋದ್ಯೋಗಿ ಸರ್.ಎ. ರಾಮಸ್ವಾಮಿ ಮೊದಲಿಯಾರ್ ಕಾರ್ಮಿಕ ಖಾತೆಯನ್ನು ನೋಡಿಕೊಳ್ಳುತ್ತಿದ್ದಾಗ ಕಲ್ಕತ್ತೆಗೆ ಹೋದಾಗಲೆಲ್ಲಾ ಕಾರ್ಮಿಕ ಪ್ರತಿನಿಧಿಗಳನ್ನೂ, ಮಾಲೀಕರ ಪ್ರತಿನಿಧಿಗಳನ್ನೂ ಸಂಧಿಸಿ ಬರುತ್ತಿದ್ದರು.

"ಅದೇ ರೀತಿ ನನ್ನ ಸನ್ಮಾನ್ಯ ಸಹೋದ್ಯೋಗಿ ಸರ್ ಫಿರೋಜ್ ಖಾನ್ ನವಾಬ್ ಕಾರ್ಮಿಕ ಖಾತೆಯ ಸದಸ್ಯರಾಗಿದ್ದಾಗಿನ ತಮ್ಮ ಅಧಿಕಾರಾವಧಿಯಲ್ಲಿ ಮಾಲೀಕರ ಮತ್ತು ನೌಕರರ ಸಂಘಗಳೊಂದಿಗೆ ಸಂಪರ್ಕ ಇಟ್ಟುಕೊಂಡು, ಅವರ ಸಲಹೆ ಪಡೆಯುತ್ತಿದ್ದರು. ಪ್ರಸ್ತುತ ಸಮ್ಮೇಳನದ ಯೋಜನೆಯ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಈ ಬಗೆಯ ಕಾರ್ಮಿಕ ಸಮ್ಮೇಳನಗಳ ಇತಿಹಾಸದಲ್ಲಿ ಈಗತಾನೆ ಮೊತ್ತ ಮೊದಲ ಬಾರಿಗೆ ಮಾಲೀಕರು ಮತ್ತು ನೌಕರರ ಪ್ರತಿನಿಧಿಗಳನ್ನು ಒಟ್ಟಿಗೆ ಕರೆದು ಒಂದು ಜಂಟಿ ಸಮ್ಮೇಳನವಾಗಿ ಅಧಿವೇಶನ ಸೇರಲು ಅವಕಾಶ ಮಾಡಲಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ವಿಶೇಷಾಂಶವನ್ನು ಸಂಬಂಧಿಸಿದ ಎಲ್ಲರೂ, ಅದರಲ್ಲೂ ಕಾರ್ಮಿಕರ ಪ್ರತಿನಿಧಿಗಳು ಹೃತ್ಪೂರ್ವಕವಾಗಿ ಸ್ವಾಗತಿಸಬೇಕು. ವಿಟ್ಲೇ ಆಯೋಗವು ಭಾರತದಲ್ಲಿ ಕಾರ್ಮಿಕರ ಸ್ಥಿತಿಗತಿಯನ್ನು ಕುರಿತ ತನ್ನ ವರದಿಯನ್ನು ನೀಡಿತಷ್ಟೆ. ಭಾರತದಲ್ಲಿ ಖಾಯಂ ಆಗಿ ಒಂದು ಕೈಗಾರಿಕಾ ಮಂಡಳಿಯನ್ನು ರಚಿಸತಕ್ಕದ್ದು ಎಂಬುದಾಗಿ ಆ ವರದಿಯಲ್ಲಿ ಸಲಹೆ ಮಾಡಲಾಗಿತ್ತು. ಆಗಿನಿಂದಲೂ ಕಾರ್ಮಿಕ ಪ್ರತಿನಿಧಿಗಳು ಆ ಶಿಫಾರಸನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದಾರೆ. ಅನೇಕಾನೇಕ ಕಾರಣಗಳಿಂದ ಇದುವರೆಗೆ ಒಂದು ಕೈಗಾರಿಕಾ ಮಂಡಳಿಯ ಕಲ್ಪನೆಯನ್ನು ಪೂರ್ತಗೊಳಿಸಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ ಸಮ್ಮೇಳನವು ಜಾರಿಗೆ ಕೊಡಬೇಕೆಂದು ನಿರ್ಣಯಿಸುವ ಸಲಹೆಯು ಆ ದೀರ್ಘಕಾಲದ ಆದರ್ಶವನ್ನು ಪೂರ್ಣವಾಗಿ ಸಾಕಾರಗೊಳಿಸುತ್ತದೆಂದು ನಾನು ಹೇಳಲಾರೆ. ಆದರೆ ಆ ಆದರ್ಶವನ್ನು ಈಡೇರಿಸುವುದಕ್ಕೆ ತಕ್ಕ ದಾರಿಯನ್ನು ಈ ಸಮ್ಮೇಳನವು ತೋರುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆ ಗುರಿಯ ಕಡೆಗೆ ಹೋಗುವ ಪಥದಲ್ಲಿ ಇದು ಬಹು ದೊಡ್ಡ ಹೆಜ್ಜೆಯಾಗುತ್ತದೆಂದು ನಾನು ಹೇಳಿದರೆ ತಾವು ಅದು ಕೇವಲ ಉತ್ಪ್ರೇಕ್ಷೆ ಎಂದು ಭಾವಿಸಲಾರಿರಿ ಎಂದು ಎಣಿಸುತ್ತೇನೆ.

**ಕಾರ್ಮಿಕ ಶಾಸನ ರಚನೆ**

"ಈಗ ಈ ಸಮ್ಮೇಳನದ ಗುರಿಗಳು ಮತ್ತು ಉದ್ದೇಶಗಳನ್ನು ಕುರಿತು ಒಂದೆರಡು ಮಾತು ಹೇಳಬಯಸುತ್ತೇನೆ. ನಿಮ್ಮಲ್ಲಿ ಈ ಹಿಂದಿನ ಸಮ್ಮೇಳನಗಳ ಕಾರ್ಯಕಲಾಪಗಳ ವರದಿಯನ್ನು ನೋಡಿರುವ

ಕೆಲವರಿಗೆ ಒಂದು ವಿಷಯ ಮನವರಿಕೆಯಾಗಿರುತ್ತದೆ. ಕಾರ್ಮಿಕ ಶಾಸನ ರಚನೆಯಲ್ಲಿ ಪ್ರಾಂತೀಯ ಸ್ವಾತಂತ್ರ್ಯ ನೀಡಿದುದರ ಪರಿಣಾಮವಾಗಿ ಕಾರ್ಮಿಕ ಶಾಸನ ರಚನೆಯಲ್ಲಿ ಉಂಟಾಗಿರುವ ವೈವಿಧ್ಯದ ಅಪಾಯವನ್ನು ನೋಡಿ ಅದನ್ನು ನಿವಾರಿಸಬೇಕೆಂಬ ಮಹದಾಸೆಯೇ ಆ ಸಮ್ಮೇಳನಗಳ ನಿಯೋಜನೆಯಲ್ಲಿದ್ದ ಮುಖ್ಯ ಉದ್ದೇಶ.

"ಎಲ್ಲಿಯವರೆಗೆ ಭಾರತ ಸರಕಾರವು ಒಂದು ಏಕಾತ್ಮಕ ಸರಕಾರವಾಗಿತ್ತೋ ಅಲ್ಲಿಯವರೆಗೆ ಕಾರ್ಮಿಕ ಶಾಸನ ರಚನೆಯಲ್ಲಿ ಏಕರೂಪತೆಯನ್ನು ಸಾಧಿಸುವುದು ಕಷ್ಟವಾಗಿರಲಿಲ್ಲ. ಆದರೆ ೧೯೩೫ರ ಭಾರತ ಸರ್ಕಾರ ಕಾಯಿದೆ ರೂಪಿಸಿಕೊಟ್ಟ ಒಕ್ಕೂಟದ ರಚನೆ ಹಾಗೂ ಕಾರ್ಮಿಕ ಶಾಸನ ರಚನೆಯನ್ನು ಸಮವರ್ತಿ ಶಾಸನ ಪಟ್ಟಿಯಲ್ಲಿ ಸೇರಿಸಿದ್ದು ಬಹಳ ಗಂಭೀರವಾದ ಪರಿಸ್ಥಿತಿಯನ್ನು ಉಂಟುಮಾಡಿದೆ. ಕೇಂದ್ರ ಶಾಸನವೊಂದು ಇಲ್ಲದೆ ಹೋದ ಪಕ್ಷದಲ್ಲಿ, ಪ್ರತಿಯೊಂದು ಪ್ರಾಂತವೂ ವಿಶೇಷವಾಗಿ ತನಗೆ ಹೊಂದುವಂತೆ ಶಾಸನವನ್ನು ಮಾಡಬಹುದು, ಅದು ನೆರೆಯ ಪ್ರಾಂತದ ಶಾಸನಕ್ಕಿಂತ ತೀರ ಭಿನ್ನವಾಗಿರಬಹುದು, ಹಾಗೂ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಕಡೆಗಣಿಸಿ ಪ್ರಾಂತೀಯ ಪರಿಗಣನೆಗಳಿಗೇ ಮಹತ್ವ ನೀಡುವ ಭೀತಿ ಉಂಟಾಗಬಹುದು.

**ಮೂರು ಮುಖ್ಯ ಉದ್ದೇಶಗಳು**

"ಈ ಪ್ರವೃತ್ತಿಯನ್ನು ಸರಿಪಡಿಸಲು ಅತ್ಯಂತ ಅಗತ್ಯವಾದ ಪರಿಹಾರವನ್ನು ಒದಗಿಸುವಂತೆ ಸಮ್ಮೇಳನಗಳನ್ನು ಕೋರಲಾಗಿತ್ತು. ಪ್ರಾಂತೀಯ ಸರಕಾರಗಳ ಕಾರ್ಮಿಕ ಶಾಸನಗಳಲ್ಲಿ ಒಟ್ಟಾರೆಯಾಗಿ ಒಂದು ಏಕರೂಪತೆಯ ತತ್ವ ಇರುವಂತೆ ನೋಡಿಕೊಂಡು ಅದನ್ನು ಗೌರವಿಸಬೇಕೆಂಬ ಭಾವನೆಯನ್ನು ಪ್ರಾಂತೀಯ ಸರಕಾರಗಳಲ್ಲಿ ಮೂಡಿಸಬೇಕಾಗಿದ್ದಿತು. ಪ್ರಸ್ತುತ ಸಮ್ಮೇಳನವನ್ನು ರೂಪಿಸುವಲ್ಲಿಯೂ ಕಳೆದ ಮೂರು ಸಮ್ಮೇಳನಗಳು ಮುಖ್ಯವಾಗಿ ಏನು ಮಾಡಿದುವೋ, ಅದೇ ಗುರಿಯನ್ನು ಕಾರ್ಮಿಕ ಶಾಸನ ರಚನೆಯ ಏಕರೂಪತೆ ಎನ್ನುವುದನ್ನು ನಾವು ಅಲ್ಲಗಳೆಯುವುದಿಲ್ಲ. ಸಮ್ಮೇಳನವು ಚರ್ಚಿಸುವ ಒಂದು ವಿಷಯವಾಗಿ ಅದು ಉಳಿದಿರುತ್ತದೆ. ಆದರೆ ಅದರ ಜೊತೆಗೆ ಇನ್ನೆರಡು ಉದ್ದೇಶಗಳನ್ನು ಸೇರಿಸಬಯಸುತ್ತೇನೆ. ಅವೆಂದರೆ, ಕೈಗಾರಿಕಾ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಒಂದು ನಿಶ್ಚಿತ ವಿಧಾನವನ್ನು ರೂಪಿಸುವುದು, ಮತ್ತು ಕಾರ್ಮಿಕರು ಮತ್ತು ಮಾಲೀಕರ ನಡುವೆ ಮೂಡುವಂತಹ ಅಖಿಲಭಾರತ ಪ್ರಾಮುಖ್ಯವಿರುವ ಎಲ್ಲ ವಿಚಾರಗಳನ್ನೂ ಕುರಿತ ಚರ್ಚೆ. ಆದ್ದರಿಂದ ನಮ್ಮ ಸಮ್ಮೇಳನವು ಮೂರು ಮುಖ್ಯ ಉದ್ದೇಶಗಳನ್ನು ಹೊಂದಿದೆ:

೧. ಕಾರ್ಮಿಕ ಶಾಸನ ರಚನೆಯಲ್ಲಿ ಏಕರೂಪತೆಯನ್ನು ತರುವುದು.
೨. ಕೈಗಾರಿಕಾ ವ್ಯಾಜ್ಯಗಳ ಪರಿಹಾರಕ್ಕೆ ಒಂದು ಕಾರ್ಯವಿಧಾನವನ್ನು ರೂಪಿಸುವುದು.
೩. ಮಾಲೀಕರು–ನೌಕರರ ನಡುವೆ ಇರುವಂತಹ ಅಖಿಲ ಭಾರತ ಪ್ರಾಮುಖ್ಯವಿರುವ ಎಲ್ಲ ವಿಚಾರಗಳ ಚರ್ಚೆ.

ಮೊದಲನೆಯದರ ವಿಷಯವನ್ನು ನಮ್ಮ ಧ್ಯೇಯೋದ್ದೇಶಗಳಲ್ಲಿ ಏಕೆ ಸೇರಿಸಿದ್ದೇವೆ ಎಂದು ಹೇಳುವುದು ಅನಗತ್ಯ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ, ಅನೇಕಾನೇಕ ಆಡಳಿತಾತ್ಮಕ ಪ್ರಾಂತೀಯ ಅಧಿಕಾರ ವಲಯಗಳಿದ್ದು ಇಲ್ಲಿ ಕಾರ್ಮಿಕ ಶಾಸನ ರಚನೆಯಲ್ಲಿ ಏಕರೂಪತೆ ಎನ್ನುವುದು ಎಂದಿಗೂ ಗೌಣವಾಗುವುದೇ ಇಲ್ಲ. ಹಿಂದಿನಂತೆಯೇ ಇಂದಿಗೂ ಅದು ನಮ್ಮ ಪೂರ್ಣ ಗಮನವನ್ನು ಸೆಳೆಯುತ್ತದೆ.

### ಕೈಗಾರಿಕಾ ವ್ಯಾಜ್ಯಗಳು

"ಕೈಗಾರಿಕಾ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಕಾರ್ಮಿಕರು ಮತ್ತು ಬಂಡವಾಳ ವರ್ಗ, ಎರಡೂ ಸದಾ ವಿರೋಧಿಯಾಗಿದ್ದರೂ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ ವರ್ತಿಸಿವೆ. ನಡೆಸಿರುವ ಮುಷ್ಕರಗಳ ಸಂಖ್ಯೆ ಬಹಳ ಹೆಚ್ಚಿನದೇನೂ ಅಲ್ಲ ಅಥವಾ ಗಾಬರಿಗೊಳಿಸುವ ಪ್ರಮಾಣದ್ದೂ ಆಗಿಲ್ಲ. ಈ ವರ್ಷದ ಪ್ರಾರಂಭದಲ್ಲಿ ಕೈಗಾರಿಕಾ ವಲಯದಲ್ಲಿ ಅಶಾಂತಿ ಹೆಚ್ಚುವ ಪ್ರವೃತ್ತಿ ಕಂಡುಬಂದಿತ್ತು. ಆದರೆ ಭಾರತ ರಕ್ಷಣಾ ಕಾಯಿದೆ ೮೧–ಎ ಪ್ರಕಾರ ವ್ಯಾಜ್ಯಗಳ ನಿರ್ಣಯ ವಿಧಾನದಿಂದಾಗಿ ಈಚಿನ ತಿಂಗಳುಗಳಲ್ಲಿ ಅಶಾಂತಿ ತಗ್ಗುವ ಲಕ್ಷಣ ಕಂಡುಬಂದಿದೆ. ಆ ವಿಧಾನವು ಸಮರ್ಥವೂ, ವಿಶ್ವಾಸಾರ್ಹವೂ ಆದ ಕಾರ್ಯವಿಧಾನವಾಗಿ ನಿಲ್ಲುತ್ತದೆ ಎಂದು ಆಶಿಸೋಣ. ಇಲ್ಲಿ ನಾವು ಈ ಸಮ್ಮೇಳನಕ್ಕೆ ಹಾಕಿಕೊಂಡಿರುವ ಧ್ಯೇಯೋದ್ದೇಶಗಳಲ್ಲಿ ಒಂದು ಕೈಗಾರಿಕಾ ವ್ಯಾಜ್ಯ ಪರಿಹಾರಕ್ಕೆ ಕಾರ್ಯವಿಧಾನವನ್ನು ರೂಪಿಸುವುದು.

"ಇನ್ನು ಮೂರನೆಯ ಅಂಶವನ್ನು ಹೇಳುವಾಗ, ವ್ಯಾಪಕವಾದ ಭಾಷೆಯನ್ನು ಬೇಕೆಂದೇ ಬಳಸಲಾಗಿದೆ. ಶ್ರಮ ಮತ್ತು ಬಂಡವಾಳಗಳಿಗೆ, ಕಾರ್ಮಿಕ ಮತ್ತು ಬಂಡವಾಳಗಾರರಿಗೆ ಮಹತ್ವದ್ದೆನಿಸುವ ಯಾವುದನ್ನೂ ಈ ಸಮ್ಮೇಳನವು ಚರ್ಚಿಸದೆ ಬಿಟ್ಟುಬಿಡದಿರಲಿ ಎಂಬುದು ನಮ್ಮ ಉದ್ದೇಶ. 'ಅಖಿಲ ಭಾರತ ವ್ಯಾಪ್ತಿಯಲ್ಲಿ ಮಹತ್ವದ ವಿಷಯಗಳು' ಎಂಬ ವ್ಯಾಪಕ ಉಕ್ತಿಯನ್ನು ಬಳಸುವಾಗ ನಮ್ಮ ಮನಸ್ಸಿನಲ್ಲಿ ಏನಿತ್ತು ಎನ್ನುವುದನ್ನು ಹೇಳಬೇಕು. ಅದರಲ್ಲಿ ಕಾರ್ಮಿಕ ಕಲ್ಯಾಣ ಮತ್ತು ಕಾರ್ಮಿಕ ನೈತಿಕತೆಯನ್ನು ಉಳಿಸಿಕೊಂಡು ಬರುವುದು, ಇದಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳನ್ನೂ ಸೇರಿಸಬಯಸುತ್ತೇವೆ. ಹೀಗೆ ಅರ್ಥಮಾಡಿಕೊಂಡಾಗ, ಈ ಉದ್ದೇಶವು ಕ್ರಮದಲ್ಲಿ ಮೂರನೆಯದಾಗಿ ನಿರೂಪಿತವಾಗಿದ್ದರೂ ಪ್ರಾಮುಖ್ಯದಲ್ಲಿ ಅತ್ಯಂತ ಪ್ರಧಾನವಾದದ್ದು ಎಂಬುದು ಗೊತ್ತಾಗುತ್ತದೆ. ಇದು ಅತ್ಯಂತ ಜರೂರಾದದ್ದು ಎಂದು ನಾವು ಖಂಡಿತವಾಗಿಯೂ ಪರಿಗಣಿಸುತ್ತೇವೆ. ಈ ತುರ್ತು ಬಂದಿರುವುದು ಯುದ್ಧದ ಅಗತ್ಯಗಳಿಂದಾಗಿ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

### ಸರಬರಾಜಿನ ಯುದ್ಧ

"ಈಗ ನಡೆದಿರುವ ಯುದ್ಧ ಸರಬರಾಜಿನ ಯುದ್ಧ. ಪೂರೈಕೆಯು ಕೈಗಾರಿಕೆಯಲ್ಲಿನ ಶಾಂತಿಯನ್ನು ಅವಲಂಬಿಸುತ್ತದೆ. ಕೈಗಾರಿಕೆಯಲ್ಲಿ ಶಾಂತಿಯನ್ನು ಸಾಧಿಸುವುದು ಹೇಗೆ ಎನ್ನುವುದು ಇಂದು ನಮ್ಮನ್ನು ಕಾಡುತ್ತಿರುವ ದೊಡ್ಡ ಸಮಸ್ಯೆ. ಕೈಗಾರಿಕಾ ಶಾಂತಿ ಈ ಎರಡು ಅಂಶಗಳನ್ನು ಅವಲಂಬಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಮೊದಲನೆಯದಾಗಿ, ಕೈಗಾರಿಕಾ ವ್ಯಾಜ್ಯಗಳನ್ನು ಕ್ಷಿಪ್ರವಾಗಿ ಪರಿಹರಿಸಲು ತಕ್ಕ ಕಾರ್ಯವಿಧಾನವನ್ನು ಸಿದ್ಧವಾಗಿಟ್ಟುಕೊಂಡಿರುವುದನ್ನು ಅದು ಅವಲಂಬಿಸುತ್ತದೆ. ಎರಡನೆಯದಾಗಿ, ಭಾವೋದ್ರೇಕಗೊಳಿಸುವ, ಕೆರಳಿಸುವ, ಸಂಬಂಧಿತ ಜನರ ನೈತಿಕತೆಯನ್ನು ಕೆಳಗೆಳೆಯುವ ಪರಿಸ್ಥಿತಿಗಳು ಮೂಡಿದರೆ ತಕ್ಷಣವೆ ಅವುಗಳನ್ನು ನಿರ್ಬಂಧಿಸುವುದನ್ನು ಅದು ಅವಲಂಬಿಸುತ್ತದೆ. ಕೈಗಾರಿಕಾ ವಿವಾದವಾಗಿ ಬೆಳೆಯುವಷ್ಟು ದೊಡ್ಡವಲ್ಲದ ಬೇಕಾದಷ್ಟು ಪ್ರಶ್ನೆಗಳೂ ಕೆಲವು ಸಂದರ್ಭಗಳಲ್ಲಿ ಮೇಲೇಳುತ್ತವೆ. ಆದರೆ ಅವು ಉದ್ರೇಕವನ್ನು ಕೆರಳಿಸುವುದಕ್ಕೆ ಸಾಲುವಷ್ಟು ದೊಡ್ಡದಾಗಿರುತ್ತವೆ. ಹೀಗೆ ಉದ್ರೇಕಕಾರಿಯಾದಂತಹ ಬಹುತೇಕ ವಿಷಯಗಳು ಸಾಮಾನ್ಯ ಪರಿಭಾಷೆಯಲ್ಲಿ ಸಮಾಜ ಕಲ್ಯಾಣದ ಮೇಲೆ ದುಷ್ಪರಿಣಾಮ ಬೀರುತ್ತವೆ ಎಂದು ಹೇಳುವಂಥವು. ಅಂತಹ ಸಮಸ್ಯೆಗಳನ್ನು ಕುರಿತು ವ್ಯವಹರಿಸಲು ತಕ್ಕ ವ್ಯವಸ್ಥೆಯಿಲ್ಲ. ಈ ರೀತಿಯ ವಿಷಯಗಳನ್ನು ಶಾಂತಿಯುತವಾಗಿ ಮತ್ತು ತೃಪ್ತಿಕರವಾಗಿ ನಿರ್ವಹಿಸುವುದು ಹೇಗೆಂದು ಸರಕಾರಕ್ಕೆ ಸಲಹೆ ಕೊಡಲು ಒಂದು ವ್ಯವಸ್ಥೆಯಾಗಬೇಕು. ಈ ಉದ್ದೇಶದಿಂದ ಸರಕಾರವು ಈ ಸಮ್ಮೇಳನವನ್ನು ಏರ್ಪಡಿಸಿದೆ.

**ಮುಂದಿರುವ ಕಾರ್ಯ**

"ಈ ಸಮ್ಮೇಳನದ ಮಹತ್ವ ಹೀಗಿದೆ, ಇದರ ಧ್ಯೇಯೋದ್ದೇಶಗಳು ಹೀಗಿವೆ. ಇನ್ನು ಈ ಸಮ್ಮೇಳನದ ಮುಂದಿರುವ ಕಾರ್ಯದ ಬಗೆಗೆ ನಮ್ಮ ಅಜೆಂಡಾ – ಕಾರ್ಯಕ್ರಮಪಟ್ಟಿಯು ತುಂಬ ಕಡಿಮೆಯಾಗಿ ಕಾಣುತ್ತದೆ. ಇದು ಅನಿವಾರ್ಯವಾಗಿದೆ. ಇಂಥದೊಂದು ಸಮ್ಮೇಳನವನ್ನು ನಡೆಸಬೇಕೆ, ಅದರ ರಚನೆ ಹೇಗಿರಬೇಕು ಎಂಬುದರ ರೂಪುರೇಷೆಗಳ ಬಗೆಗೆ ನಾವು ಒಪ್ಪಿಕೊಳ್ಳುವವರೆಗೂ ಈಗ ಇಟ್ಟಿರುವುದಕ್ಕಿಂತ ಉತ್ತಮವಾದ ಕಾರ್ಯಸೂಚಿಯನ್ನು ಕೊಡುವುದು ಸಾಧ್ಯವಿಲ್ಲ. ಇಂದು ನಾನು ಮಾಡಬಹುದಾದದ್ದು, ಈ ಕೆಳಗಿನ ವಿಷಯಗಳಲ್ಲಿ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳುವುದಷ್ಟೆ.

೧. ಖಾಯಂ ಆದ ಒಂದು ಕಾರ್ಮಿಕ ಸಮ್ಮೇಳನವನ್ನು ರಚಿಸಿ ಪ್ರತಿವರ್ಷವೂ ಅಧಿವೇಶನ ನಡೆಸುವುದರ ಅಪೇಕ್ಷಣೀಯತೆ,

೨. ಒಂದು ಸ್ಥಾಯಿ ಸಲಹಾ ಸಮಿತಿಯನ್ನು ರಚಿಸಿ, ಸರಕಾರವು ಆಹ್ವಾನಿಸಿದಾಗಲೆಲ್ಲ ಅವರು ಸಭೆ ಸೇರಿ ಸರಕಾರಕ್ಕೆ ಸಲಹೆ ನೀಡುವಂತಹ ವ್ಯವಸ್ಥೆಯ ಅಪೇಕ್ಷಣೀಯತೆ.

೩. ಈ ಸಂಸ್ಥೆಗಳ ರಚನೆಗೆ ಅಗತ್ಯವಾದ ಸಾಮಾನ್ಯ ವಿಧಿವಿಧಾನಗಳನ್ನು ನಿರೂಪಿಸುವಿಕೆ.

ಇದಕ್ಕೆ ಸಂಬಂಧಿಸಿದಂತೆ ಈಗ ನಡೆಯುತ್ತಿರುವ ತ್ರಿಪಕ್ಷೀಯ ಸಮ್ಮೇಳನದ ಉದ್ದೇಶಕ್ಕೆ ಅತ್ಯುತ್ತಮವಾಗಿ ಹೊಂದುವಂತಹ ಯೋಜನೆಯನ್ನು ತಮ್ಮ ಎದುರು ಇಡುವುದು ಸೂಕ್ತವೆಂದು ಭಾವಿಸುತ್ತೇನೆ.

**ಸರ್ವಸದಸ್ಯ ಸಭೆ**

"ಈ ಉದ್ದೇಶಕ್ಕಾಗಿ ಎರಡು ಅಂಗಸಂಸ್ಥೆಗಳನ್ನು ರಚಿಸಲು ನಾವು ಇಚ್ಛಿಸುತ್ತೇವೆ.

೧. ಒಂದು ಸರ್ವಸದಸ್ಯ ಸಮಿತಿ, ಮತ್ತು

೨. ಒಂದು ಸ್ಥಾಯಿ ಸಲಹಾ ಸಮಿತಿ.

ಸರ್ವಸದಸ್ಯ ಸಭೆಯಲ್ಲಿ ಕೇಂದ್ರ ಸರಕಾರ, ಪ್ರಾಂತಗಳು, ರಾಜ್ಯಗಳು, ಮಾಲೀಕರು ಮತ್ತು ಕಾರ್ಮಿಕರು ಎಲ್ಲರ ಪ್ರತಿನಿಧಿಗಳೂ ಇರುತ್ತಾರೆ. ಸಾಮಾನ್ಯವಾಗಿ ಪ್ರತಿಯೊಂದು ಪ್ರಾಂತ ಅಥವಾ ದೊಡ್ಡ ರಾಜ್ಯವೂ ಪ್ರತಿನಿಧಿಯನ್ನು ಕಳುಹಿಸಬಹುದು. ಪ್ರತ್ಯೇಕ ಪ್ರಾತಿನಿಧ್ಯ ಹೊಂದಿರದ ರಾಜ್ಯಗಳೂ ರಾಜರುಗಳ ಒಕ್ಕೂಟದ ಒಬ್ಬ ಪ್ರತಿನಿಧಿಯನ್ನಾಗಿ ಒಬ್ಬರನ್ನು ನಾಮಕರಣಮಾಡಿ ಕಳಿಸಬಹುದು. ಕಾರ್ಖಾನೆಗಳ ಮಾಲೀಕರ ಸಂಘಗಳಿಗೂ, ಕಾರ್ಮಿಕರ ಸಂಘಟನೆಗಳಿಗೂ ಕೂಡ ಪ್ರಾತಿನಿಧ್ಯ ಕೊಡಲಾಗುತ್ತದೆ. ಈ ವರ್ಗಗಳಲ್ಲಿ ಸರಿಯಾದ ಪ್ರಾತಿನಿಧ್ಯ ಬಂದಿಲ್ಲ ಎನಿಸಿದರೆ ಸರಕಾರವು ಸೂಕ್ತ ಪ್ರತಿನಿಧಿಗಳ ನಾಮಕರಣ ಮಾಡಲು ಅವಕಾಶವಿದೆ. ಸರಕಾರದ ಪ್ರತಿನಿಧಿಗಳ ಸಂಖ್ಯೆಯೂ ಮಾಲೀಕ–ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಂಖ್ಯೆಯೂ ಸಮಾನವಾಗಿರುವಂತೆ ನೋಡಿಕೊಳ್ಳುವುದು ಸರ್ವಸದಸ್ಯ ಸಭೆಯ ವಿಷಯದಲ್ಲಿ ಸಾಧ್ಯವಿಲ್ಲ.

**ಸ್ಥಾಯಿ ಸಲಹಾ ಸಮಿತಿ**

"ಸ್ಥಾಯಿ ಸಲಹಾ ಸಮಿತಿಯ ರಚನೆ ಹೆಚ್ಚು ಕಮ್ಮಿ ಕಟ್ಟುನಿಟ್ಟಿನದಾಗಿರುತ್ತದೆ. ತಮ್ಮೆದುರಿಗಿಡುವ ನಿರ್ಣಯದ ಪಾಠದಿಂದ ಇದನ್ನು ನೋಡಬಹುದು. ಈ ಸಮಿತಿಯ ಪ್ರಾತಿನಿಧ್ಯದ ಹಂಚಿಕೆ ಹೀಗಿರುತ್ತದೆ: (೧) ಭಾರತ ಸರಕಾರದ ಪ್ರತಿನಿಧಿಗಳು, (೨) ಪ್ರಾಂತಗಳ ಪ್ರತಿನಿಧಿಗಳು, (೩) ಸಂಸ್ಥಾನಗಳ ಪ್ರತಿನಿಧಿಗಳು, (೪) ಕಾರ್ಖಾನೆಗಳ ಮಾಲೀಕರ ಪ್ರತಿನಿಧಿಗಳು ಮತ್ತು (೫) ಕಾರ್ಮಿಕರ ಪ್ರತಿನಿಧಿಗಳು. ಸಮಿತಿಗೆ ಕೇಂದ್ರ

ಸರಕಾರದ ಕಾರ್ಮಿಕ ಖಾತೆಯ ಸದಸ್ಯರು ಅಧ್ಯಕ್ಷರಾಗಿರುತ್ತಾರೆ.

"ಸ್ಥಾಯಿ ಸಲಹಾ ಸಮಿತಿಗೆ ಈ ರಚನೆಯನ್ನು ಸೂಚಿಸುವಲ್ಲಿ ನಾವು ಲೀಗ್ ಆಫ್ ನೇಷನ್ಸ್ ಆಶ್ರಯದಲ್ಲಿ ಸ್ಥಾಪಿತವಾದ ಇಂಟರ್‌ನ್ಯಾಷನಲ್ ಲೇಬರ್ ಆಫೀಸ್‌ನ ಆಡಳಿತ ಮಂಡಳಿಯ ರಚನೆಯ ಆಧಾರದ ತತ್ವಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ಅನುಸರಿಸಿದ್ದೇವೆ. ಆ ರಚನೆಗೆ ಆಧಾರವಾಗಿ ಮೂರು ತತ್ವಗಳಿವೆ ಎಂದು ನನಗನ್ನಿಸುತ್ತದೆ. ಮೊದಲನೆಯದು, ಸರಕಾರಿ ಹಾಗೂ ಸರಕಾರೇತರ ಪ್ರತಿನಿಧಿಗಳಲ್ಲಿನ ಸಮಾನತೆ. ಇದನ್ನು ೭ನೇ ವಿಧಿಯ ೧ನೇ ಉಪವಿಭಾಗದಲ್ಲಿ ನಿರೂಪಿಸಿದೆ. ಇದರ ಪ್ರಕಾರ ೩೨ ಜನ ಪ್ರತಿನಿಧಿಗಳಲ್ಲಿ ೧೬ ಜನರು ಸರಕಾರಗಳನ್ನೂ ೧೬ ಜನರು ಮಾಲೀಕ–ಕಾರ್ಮಿಕ ಸಂಘಗಳನ್ನೂ ಪ್ರತಿನಿಧಿಸುತ್ತಾರೆ. ಹಾಗೆಯೇ ನಾವೂ ಕೂಡ ೧೦ ಸ್ಥಾನಗಳನ್ನು ಸರಕಾರಕ್ಕೂ ೧೦ ಸ್ಥಾನಗಳನ್ನು ಉದ್ಯಮಕ್ಕೂ ಕೊಡುವ ಮೂಲಕ ಈ ತತ್ವವನ್ನು ಅಳವಡಿಸಿಕೊಂಡಿದ್ದೇವೆ.

ಎರಡನೆಯ ತತ್ವ, ಉದ್ಯಮಪತಿಗಳ ಹಾಗೂ ಕಾರ್ಮಿಕರ ಪ್ರತಿನಿಧಿಗಳ ಸಂಖ್ಯೆಯಲ್ಲಿ ಸಮಾನತೆ. ಇದನ್ನೂ ಅದೇ ಪ್ರಕರಣದಂತೆ ಒಳಗೊಂಡಿಸಿ, ಸರಕಾರೇತರದ ೧೬ ಸ್ಥಾನಗಳನ್ನು ಇಬ್ಬರಿಗೂ ಸಮಾನವಾಗಿ ಹಂಚಲಾಗಿದೆ. ನಾವೂ ಕೂಡ ಉದ್ಯಮಕ್ಕೆ ಮೀಸಲಿಟ್ಟ ೧೦ ಸ್ಥಾನಗಳಲ್ಲಿ ಮಾಲೀಕರ ಪ್ರತಿನಿಧಿಗಳಿಗೆ ಹಾಗೂ ಕಾರ್ಮಿಕರಿಗೆ ತಲಾ ೫ ಎಂದೂ ನಿಗದಿಪಡಿಸಿದ್ದೇವೆ.

## ಮೂರನೆಯ ತತ್ವ

"ಮೂರನೆಯ ತತ್ವವು ಕೆಲವು ವರ್ಗಗಳ ಹಿತಕ್ಕಾಗಿ ಕೆಲವು ಪ್ರತಿನಿಧಿಗಳ ಸ್ಥಾನಗಳನ್ನು ಮೀಸಲಿಡುವ ಬಗ್ಗೆ ಹೇಳುತ್ತದೆ. ೭ನೆಯ ವಿಧಿಯ ೨ನೆಯ ಉಪವಿಭಾಗವು ಇದನ್ನು ನಿರೂಪಿಸಿದೆ. ೧೬ ಸರಕಾರೀ ಸ್ಥಾನಗಳಲ್ಲಿ ೬ ಸ್ಥಾನಗಳನ್ನು ಯೂರೋಪಿಯನ್ ಅಲ್ಲದ ದೇಶಗಳಿಗಾಗಿ ಮೀಸಲಿಡುತ್ತದೆ. ೪ನೆಯ ಉಪವಿಭಾಗದ ಪ್ರಕಾರ ಮಾಲೀಕರ ಪಾಲಿನ ೨ ಸ್ಥಾನಗಳನ್ನು ಯೂರೋಪಿಯನ್ ಅಲ್ಲದ ದೇಶಗಳಿಗೆ ಮೀಸಲಿಟ್ಟಿದೆ. ಈ ತತ್ವವನ್ನು ಅನುಸರಿಸಿ ಉದ್ಯಮಪತಿಗಳು ಮತ್ತು ಕಾರ್ಮಿಕರು ಇಬ್ಬರ ಪಾಲಿನಿಂದಲೂ ಒಂದೊಂದು ಸ್ಥಾನಕ್ಕೆ ಕೇಂದ್ರ ಸರಕಾರದ ಕಾರ್ಮಿಕ ಖಾತೆಯ ಸದಸ್ಯರು ನಾಮಕರಣ ಮಾಡಬೇಕೆಂದು ಸೂಚಿಸಿದ್ದೇವೆ. ಇದು ಮುಖ್ಯವಾಗಿ ಪ್ರಾತಿನಿಧ್ಯ ಹೊಂದಿಲ್ಲದ ವರ್ಗಗಳನ್ನು ಈ ಕಕ್ಷೆಯೊಳಗೆ ತರಲು ಸಹಾಯಕವಾಗುತ್ತದೆ. ಈ ಸೂಚನೆಗಳು ತಮಗೆ ಒಪ್ಪಿಗೆಯಾಗುತ್ತವೆ ಎಂದೂ, ನಿಮ್ಮ ಸಮ್ಮತಿಯನ್ನು ನೀಡುವುದರಲ್ಲಿ ಯಾವುದೇ ಅಡಚಣೆ ಇರಲಾರದೆಂದೂ ನನಗೆ ಭರವಸೆಯಿದೆ.

"ಈ ಅಂಗಗಳನ್ನು ನಾವು ಕೇಂದ್ರದಲ್ಲಿ ಸ್ಥಾಪಿಸುತ್ತಿದ್ದೇವೆ. ಆದರೆ ನಿಮಗೆಲ್ಲ ತಿಳಿದಿರುವಂತೆ ಕಾರ್ಮಿಕ ವಿಚಾರವು ಹೆಚ್ಚಾಗಿ ಪ್ರಾಂತೀಯ ಸರಕಾರಗಳಿಗೆ ಸಂಬಂಧಿಸಿದ್ದು. ಉಚ್ಚ ಮಟ್ಟದಲ್ಲಿ ಸ್ಥಾಪಿತವಾದ ಒಂದು ಸಂಸ್ಥೆಗೆ ತಳದಿಂದ ಆಧಾರ ಬೇಕೇಬೇಕು ಎಂದು ನನಗೆ ತೋರುತ್ತದೆ. ಆದ್ದರಿಂದ ಇಂಥವೇ ರಚನೆಗಳನ್ನು ಪ್ರಾಂತೀಯ ಸರಕಾರಗಳೂ ರಚಿಸುವುದಾದ ಪಕ್ಷದಲ್ಲಿ ಕೇಂದ್ರ ಸರಕಾರದಿಂದ ಅಂತಹ ಪ್ರಯತ್ನಕ್ಕೆ ನಿಸ್ಸಂದೇಹವಾಗಿ ಪ್ರೋತ್ಸಾಹ ದೊರಕುತ್ತದೆ ಎಂದು ಭರವಸೆ ಕೊಡಬಯಸುತ್ತೇನೆ".

## ಬಹಿರಂಗ ಕಾರ್ಮಿಕ ಸಮ್ಮೇಳನ ಮತ್ತು ಸ್ಥಾಯಿ ಸಮಿತಿಗಳ ರಚನೆ

ಸರ್ವಸದಸ್ಯರ ಬಹಿರಂಗ ಕಾರ್ಮಿಕ ಸಮ್ಮೇಳನ ಮತ್ತು ಸ್ಥಾಯಿ ಸಮಿತಿಯನ್ನು ರಚಿಸುವ ನಿರ್ಣಯವೊಂದನ್ನು ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮಿತಿಗೆ ಸುಮಾರು ೫೦ ಪ್ರತಿನಿಧಿಗಳು ಬಂದಿದ್ದರು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳಿಂದ, ಕೆಲವು ಸಂಸ್ಥಾನಗಳಿಂದ, ಎಲ್ಲ ಪ್ರಮುಖ ಕಾರ್ಮಿಕ ಸಂಘಟನೆಗಳಿಂದ ಪ್ರತಿನಿಧಿಗಳಿದ್ದರು. ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅದನ್ನು ಉದ್ಘಾಟಿಸಿದರು.

ಉದ್ಯಮಪತಿಗಳ ಹಾಗೂ ಕಾರ್ಮಿಕರ ಪ್ರತಿನಿಧಿಗಳು ಸಮಿತಿಯ ಧ್ಯೇಯೋದ್ದೇಶಗಳನ್ನು ಸಂಪೂರ್ಣವಾಗಿ ಅಂಗೀಕರಿಸಿದ್ದರು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಮಾನ್ಯ ವಿ.ವಿ. ಗಿರಿ ಅವರು ಈ ಸಮಿತಿಯ ಸ್ಥಾಪನೆಯನ್ನು ಸ್ವಾಗತಿಸಿ, ಅದು ಕೇವಲ ಚರ್ಚೆ ಮಾಡುವುದರಲ್ಲಿ ನಿರತವಾಗದೆ ಕಾರ್ಮಿಕರ ಪರಿಸ್ಥಿತಿಗಳನ್ನು ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಶಾಂತಿಯನ್ನು ಬಲಪಡಿಸಲು ಶ್ರಮಿಸಲಿ ಎಂದು ಆಶಿಸಿದರು.

ಭಾರತೀಯ ಕಾರ್ಮಿಕ ಒಕ್ಕೂಟದ (Indian Federation of Labour) ಅಧ್ಯಕ್ಷ ಮಾನ್ಯ ಜಮ್ನಾದಾಸ್ ಮೆಹತಾ ಅವರು ಸಮಿತಿಯ ಕಾರ್ಯವಿಧಾನವು, ವಿಶೇಷತಃ ಈ ಸಂಧಿಸಮಯದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಮತ್ತು ತೃಪ್ತಿಯನ್ನು ಮೂಡಿಸಬೇಕು ಎಂದರು.

ಎರಡು ಅಖಿಲ ಭಾರತ ಉದ್ಯಮಪತಿಗಳ ಸಂಘಗಳ ಅಧ್ಯಕ್ಷರಾದ ಸರ್ ಎ.ಆರ್. ದಲಾಲ್ ಹಾಗೂ ಮಾನ್ಯ ಶ್ರೀ ಶ್ರೀರಾಮ್ ಅವರು ತಮ್ಮ ತಮ್ಮ ನಿಯೋಗಗಳ ನಾಯಕತ್ವ ವಹಿಸಿದ್ದರು. ಚೇಂಬರ್ ಆಫ್ ಪ್ರಿನ್ಸಸ್ ಪ್ರತಿನಿಧಿಗಳು, ಹೈದರಾಬಾದು, ಬರೋಡಾ ಮತ್ತು ಗ್ವಾಲಿಯರ್ ಸಂಸ್ಥಾನಗಳೂ ಭಾಗವಹಿಸುತ್ತಿರುವುದನ್ನು ಎಲ್ಲ ಪ್ರತಿನಿಧಿಗಳೂ ಮನಃಪೂರ್ವಕವಾಗಿ ಸ್ವಾಗತಿಸಿದರು.

ಸರ್ವಸದಸ್ಯ ಸಮ್ಮೇಳನವು ೪೪ ಜನ ಸದಸ್ಯರನ್ನು ಹೊಂದಿದ್ದು ಭಾರತ ಸರಕಾರದ ಕಾರ್ಮಿಕ ಇಲಾಖಾ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಇಪ್ಪತ್ತೆರಡು ಜನರು ವಿವಿಧ ಸರಕಾರಗಳನ್ನು ಪ್ರತಿನಿಧಿಸಿದರೆ, ೧೧ ಜನ ಕಾರ್ಮಿಕರನ್ನು, ೧೧ ಜನರು ಉದ್ಯಮಪತಿಗಳನ್ನು ಪ್ರತಿನಿಧಿಸುತ್ತಾರೆ.

ಅದೇ ರೀತಿಯಲ್ಲಿ ಸ್ಥಾಯಿ ಸಮಿತಿಯು ೨೦ ಸದಸ್ಯರನ್ನು ಹೊಂದಿರುತ್ತದೆ. ಇದಕ್ಕೂ ಕಾರ್ಮಿಕ ಇಲಾಖಾ ಸದಸ್ಯರೇ ಅಧ್ಯಕ್ಷರು. ಸರಕಾರದ ಪ್ರತಿನಿಧಿಗಳು ಒಂದು ಕಡೆ, ಉದ್ಯಮಪತಿಗಳು ಹಾಗೂ ಕಾರ್ಮಿಕರು ಇನ್ನೊಂದು ಕಡೆ ಸಮಾನ ಸಂಖ್ಯೆಯ ಸ್ಥಾನಗಳನ್ನು ಪಡೆದಿರುತ್ತಾರೆ.

ಗೌರವಾನ್ವಿತ ಕಾರ್ಮಿಕ ಇಲಾಖಾ ಸದಸ್ಯರು, ಸಮಿತಿಯ ಅಧ್ಯಕ್ಷತೆಯನ್ನು ವಹಿಸಿ, ಭಾರತದ ಎಲ್ಲ ಉದ್ಯಮಪತಿಗಳ ಮತ್ತು ಕಾರ್ಮಿಕರ ಸಂಘಗಳ ಪ್ರತಿನಿಧಿಗಳನ್ನು ಆಯಾ ಸಂಸ್ಥೆಗಳ ಒಪ್ಪಿಗೆ ಪಡೆದೇ ನೇಮಿಸತಕ್ಕದ್ದು ಎಂಬ ತತ್ವವನ್ನು ಭಾರತ ಸರಕಾರದ ಪರವಾಗಿ ಒಪ್ಪಿಕೊಂಡರು.

# ೪
# ಭಾರತ ಭೂಗರ್ಭಶಾಸ್ತ್ರ ಸಮೀಕ್ಷಾ ಸಲಹಾ ಸಮಿತಿಗೆ ಒಬ್ಬ ಸದಸ್ಯರ ಚುನಾವಣೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಲೇಬರ್ ಸದಸ್ಯರು)** ಅವರು : ಮಾನ್ಯರೆ, ನಾನು ಈ ಗೊತ್ತುವಳಿ ಮಂಡಿಸುತ್ತಿದ್ದೇನೆ :

"ಗೌರವಾನ್ವಿತ ಸಭಾಧ್ಯಕ್ಷರು ನಿರ್ದೇಶಿಸುವ ಪ್ರಕಾರ ಈ ಅಸೆಂಬ್ಲಿಯು ಭಾರತ ಸರಕಾರವು ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ ಇಲಾಖೆಯ ಬಳಕೆ ಶಾಖೆಗೆ ಸಂಬಂಧಿತ ಸಮಸ್ಯೆಗಳ ಬಗೆಗೆ ಸಲಹೆ ನೀಡಲು ರಚಿತವಾಗುವ ಸಲಹಾ ಸಮಿತಿಯಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ಅಸೆಂಬ್ಲಿಯ ಒಬ್ಬ ಪ್ರತಿನಿಧಿಯನ್ನು ಚುನಾಯಿಸಬೇಕು."

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಗೊತ್ತುವಳಿ ಮುಂಡಿಸಲಾಗಿದೆ.

"ಗೌರವಾನ್ವಿತ ಸಭಾಧ್ಯಕ್ಷರು ನಿರ್ದೇಶಿಸುವ ಪ್ರಕಾರ, ಈ ಅಸೆಂಬ್ಲಿಯು, ಭಾರತ ಸರಕಾರವು ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದ ಬಳಕೆ ಶಾಖೆಗೆ ಅದು ಎದುರಿಸಬೇಕಾದ ಸಮಸ್ಯೆಗಳ ವಿಷಯದಲ್ಲಿ ಸಲಹೆ ನೀಡಲು ರಚಿತವಾಗುವ ಸಲಹಾ ಸಮಿತಿಯಲ್ಲಿ ಸೇವೆ ಸಲ್ಲಿಸಲು ತನ್ನ ಒಬ್ಬ ಪ್ರತಿನಿಧಿಯನ್ನು ಚುನಾಯಿಸಲಿ".

****ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್:** ನನ್ನ ಮಾನ್ಯ ಮಿತ್ರರು ನಾನು ಮಾಡಿದ ಪ್ರಥಮ ಭಾಷಣವನ್ನು ಕೇಳಲಿಲ್ಲ ಎಂದು ಹೇಳಿದ್ದು ಸರಿ. ನಾನು ಜೀವನದಲ್ಲಿ ಬೇಕಾದಷ್ಟು ಭಾಷಣಗಳನ್ನು ಮಾಡಿದ್ದೇನೆ. ಶಾಸನ ಸಭೆಯಲ್ಲಿ ಪ್ರಥಮ ಭಾಷಣ ಮಾಡಲು ನನಗೆ ಹೆದರಿಕೆ ಎನಿಸುವುದಿಲ್ಲ.

ನಿರ್ಣಯದ ಪರವಾಗಿ ನಾನು ಏತಕ್ಕೆ ಭಾಷಣ ಮಾಡಲಿಲ್ಲ ಎಂದು ಕಾರಣ ಕೊಡುತ್ತಾ ನನ್ನ ಮಾನ್ಯ ಮಿತ್ರರು ಈ ವಿಷಯದಲ್ಲಿ ಸದನಕ್ಕೆ ಪ್ರಕಟಪಡಿಸಲು ಇಲಾಖೆಯು ಸಿದ್ಧವಿಲ್ಲದಿರುವುದಕ್ಕೆ ಏನೋ ದೋಷವಿರುವುದೇ ಕಾರಣ ಎಂದಿದ್ದಾರೆ. ಮಾನ್ಯ ಮಿತ್ರರಿಗೆ ನಾನು ಒಂದು ಭರವಸೆ ನೀಡಬಲ್ಲೆ. ಈ ಯೋಜನೆಯ ಹಿನ್ನೆಲೆಯಲ್ಲಿ ನಾನಾಗಲೀ, ಭಾರತ ಸರಕಾರವಾಗಲೀ ಲಜ್ಜೆಪಡಬೇಕಾದ ಏನೊಂದು ಅಂಶವೂ ಇದೆಯೆಂದು ನನಗನ್ನಿಸುವುದಿಲ್ಲ. ಗೊತ್ತುವಳಿ ಮಂಡಿಸಿದಾಗ, ಸಾಮಾನ್ಯವಾದ ಕ್ರಮದಲ್ಲಿ, ಇಂತಹ ನಿರ್ಣಯಗಳು ಹೇಗೆ ವ್ಯವಹರಿಸಲಾಗುತ್ತದೋ ಅದೇ ವಿಧಾನದಲ್ಲಿ ಮುಂದೆ ಹೋಗುತ್ತದೆ ಎಂದು ನಾನು ಭಾವಿಸಿದೆ. ನನ್ನ ಮಾನ್ಯ ಮಿತ್ರರು ಈ ಅಂಶಗಳನ್ನು ಎತ್ತುವರೆಂಬ ಸೂಚನೆ ಲೇಶವಾದರೂ ನನಗೆ ಬಂದಿದ್ದರೆ, ಸಂಬಂಧಿತವಾದ ಎಲ್ಲ ವಿವರಗಳನ್ನೂ ಸಿದ್ಧವಾಗಿ ಇಟ್ಟುಕೊಂಡಿರುತ್ತಿದ್ದೆ (ಒಬ್ಬ ಗೌರವಾನ್ವಿತ ಸದಸ್ಯರು : "ಸದನದ ಕಾರ್ಯವಿಧಾನ ನಿಮಗೆ ಗೊತ್ತಿರಬೇಕು"). ಇರಲಿ, ನಾನು ಹೊಸಬ, ಈ ಸದನವು ನನ್ನ ಬಗ್ಗೆ ಸ್ವಲ್ಪ ಔದಾರ್ಯ ತೋರಿಸಬೇಕೆಂದು ಬಯಸುತ್ತೇನೆ. ಈ ಗೊತ್ತುವಳಿಯು ಅಂಗೀಕೃತವಾಗುವುದಕ್ಕೆ ಮೊದಲು ನನ್ನ ಮಾನ್ಯ ಮಿತ್ರರು ತಾವು ಬಯಸಿದ ಮಾಹಿತಿಯನ್ನು ಪಡೆದಿರಲೇ ಬೇಕು ಎನ್ನುವುದಾದ ಪಕ್ಷದಲ್ಲಿ, ಈ ಚರ್ಚೆಯನ್ನು ಇನ್ನೊಂದು ದಿನಕ್ಕೆ ಮುಂದೂಡಬೇಕೆಂದು ಸೂಚಿಸುತ್ತೇನೆ. ಹಾಗೆ ಮಾಡಿದರೆ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ३, ೧೪ ಸೆಪ್ಟೆಂಬರ್ ೧೯೪೨, ಪುಟ. ೭೬.

** ಅದೇ. ಪು. ೭೮–೭೯.

ಅವರು ಕೇಳಿರುವ ವಿವರಗಳನ್ನು ಒದಗಿಸಲು ನನಗೆ ಸಾಧ್ಯವಾಗುತ್ತದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಮಾನ್ಯ ಸದಸ್ಯರು (ಶ್ರೀ ನಿಯೋಗಿ) ಒಂದು ಪ್ರಶ್ನೆ ಕೇಳುವುದರ ಮೂಲಕ ಎಲ್ಲ ಮಾಹಿತಿಯನ್ನೂ ಪಡೆಯಬಹುದು. ಆದರೂ ಈ ಗೊತ್ತುವಳಿಯನ್ನು ಮುಂದಕ್ಕೆ ಹಾಕಬೇಕೆನ್ನುವುದು ಸದನದ ಅಪೇಕ್ಷೆ ಎಂದು ಭಾವಿಸುತ್ತೇನೆ.

(ಧ್ವನಿಗಳು : "ಹೌದು")

ಗೊತ್ತುವಳಿಯನ್ನು ಮುಂದೂಡಲಾಗಿದೆ.

## ೫
## ಭಾರತದಲ್ಲಿನ ಪರಿಸ್ಥಿತಿ

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸದನವು ಈಗ ಈ ಗೊತ್ತುವಳಿಯ ಮೇಲೆ ಚರ್ಚೆಯನ್ನು ಎತ್ತಿಕೊಳ್ಳುತ್ತದೆ :

**"ಭಾರತದಲ್ಲಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು".**

***ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಲೇಬರ್ ಸದಸ್ಯರು)** : ಮಾನ್ಯರೆ, ಗೊತ್ತುವಳಿಯ ಮೇಲೆ ಕಳೆದ ಎರಡು ಮೂರು ದಿನಗಳಿಂದ ನಡೆದಿರುವ ಚರ್ಚೆಯಿಂದ ಈ ಸದನದ ಸದಸ್ಯರಲ್ಲಿ ಎರಡು ಖಚಿತವಾದ ದೃಷ್ಟಿಕೋನಗಳು ವ್ಯಕ್ತವಾಗಿರುವುದು ಕಂಡುಬಂದಿದೆ. ಸರಕಾರವು ಕಾಂಗ್ರೆಸ್ ಸದಸ್ಯರನ್ನು ಬಂಧಿಸುವುದರಲ್ಲಿ, ಭುಗಿಲೆದ್ದ ಹಿಂಸಾಚಾರವನ್ನು ಅಡಗಿಸುವುದರಲ್ಲಿ ಕೈಗೊಂಡ ಕ್ರಮಗಳು ಸಮರ್ಥನೀಯವಾಗಿಲ್ಲ ಎನ್ನುವುದು ಒಂದು ದೃಷ್ಟಿಯಾಗಿದೆ. ಇಲ್ಲ, ಸರಕಾರ ಕೈಗೊಂಡ ಕ್ರಮಗಳು ಅತ್ಯಂತ ಸಮರ್ಪಕವಾಗಿವೆ, ಸಮರ್ಥನೀಯವಾಗಿವೆ ಎನ್ನುವುದು ಸದನದ ಇನ್ನೊಂದು ವರ್ಗದ ಅಭಿಮತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತಾವು ಈ ಚರ್ಚೆಯಲ್ಲಿ ಮಧ್ಯಪ್ರವೇಶ ಮಾಡುವುದು ಅನಗತ್ಯವೆಂದೂ, ಒಂದು ಅಭಿಪ್ರಾಯವು ಮತ್ತೊಂದನ್ನು ವಜಾ ಮಾಡುವುದರಿಂದ ಅದರ ಅವಶ್ಯಕತೆಯಿಲ್ಲವೆಂದೂ ಸರಕಾರವು ಭಾವಿಸಬಹುದು. ಆದರೆ ನನ್ನ ಮಾನ್ಯ ನ್ಯಾಯಾಂಗ ಸದಸ್ಯ ಮಿತ್ರರು ಹೇಳಿದ ಮಾತಿನಿಂದ ನನಗೆ ತೋರುವುದೇನೆಂದರೆ, ಸರಕಾರೀ ಸದಸ್ಯರು, ಅದರಲ್ಲೂ ಆಡಳಿತ ಮಂಡಳಿಯ ಭಾರತೀಯ ಸದಸ್ಯರು ಈ ವಿಚಾರವನ್ನು ಅಷ್ಟಕ್ಕೇ ಕೈಬಿಡಬಾರದು ಎಂಬುದಾಗಿ. ವಿಷಯದ ಭಾರವನ್ನು ಸದನದ ಒಂದು ವರ್ಗದ ಸದಸ್ಯರ ಹೆಗಲ ಮೇಲೆಯೇ ಬಿಡಬಾರದು. ಸದಸ್ಯರು ಅದನ್ನು ತಾವೇ ಕೈಗೆತ್ತಿಕೊಳ್ಳಬೇಕು. ಆದ್ದರಿಂದ ಕೈಗೊಂಡ ಕ್ರಮವು ಸಮರ್ಥನೀಯವಲ್ಲ ಎಂದು ಭಾವಿಸಿರುವವರು ಎತ್ತಿರುವ ಕೆಲವು ವಿಷಯಗಳನ್ನು ಕುರಿತು ನಾಲ್ಕು ಮಾತು ಹೇಳಬಯಸುತ್ತೇನೆ.

ಇಲ್ಲಿ ಎತ್ತಿರುವ ವಿಷಯಗಳು ಮುಖ್ಯವಾಗಿ ಎರಡು ವರ್ಗಗಳಿಗೆ ಸೇರುತ್ತವೆ. ಕೆಲವು ಅಂಶಗಳು ಸ್ವರೂಪದಲ್ಲೂ, ಮಹತ್ವದಲ್ಲೂ ನಿರ್ದಿಷ್ಟವಾದವು; ಇನ್ನು ಕೆಲವು ಅಂಶಗಳಾದರೋ ಸಾಮಾನ್ಯ ಪ್ರಾಮುಖ್ಯ ಉಳ್ಳವು. ನಾವು ನಿರ್ದಿಷ್ಟ ಅಂಶಗಳನ್ನು ಮಾತ್ರವಲ್ಲದೆ ಸಾಮಾನ್ಯ ಅಂಶಗಳನ್ನೂ ಚರ್ಚಿಸುವುದು ಅಪೇಕ್ಷಣೀಯವಾದರೂ ಕೂಡ, ಸಮಯ ಕಡಿಮೆಯಿರುವುದರಿಂದ, ಹೊರಿಸಿರುವ ಆಪಾದನೆಗಳಲ್ಲಿ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೩,೧೮ ಸೆಪ್ಟೆಂಬರ್ ೧೯೪೨, ಪು. ೨೮೧–೮೭.

ಕೆಲವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸರಕಾರಕ್ಕೆ ವಿರುದ್ಧವಾಗಿರುವ ಪಕ್ಷವು ಮಾಡಿರುವ ಆಪಾದನೆಗಳಲ್ಲಿ ಎರಡನ್ನು ಮಾತ್ರ ಆರಿಸಿಕೊಳ್ಳುತ್ತೇನೆ.

ಮಾನ್ಯರೆ, ಸರಕಾರವನ್ನು ಆಕ್ಷೇಪಿಸುವವರು ಕಾಂಗ್ರೆಸ್ ಸದಸ್ಯರನ್ನು ಬಂಧಿಸಿದ್ದು ಸಮರ್ಥನೀಯವಾಗಿಲ್ಲ ಎಂದು ಹೇಳಿದ್ದಾರೆ. ನಾನು ಅರ್ಥಮಾಡಿಕೊಂಡಿರುವುದು ಸರಿಯಾದರೆ, ಕಾಂಗ್ರೆಸ್ ಅಹಿಂಸೆಯಲ್ಲಿ ವಿಶ್ವಾಸವಿಟ್ಟುಕೊಂಡಿರುವ ಸಂಸ್ಥೆ, ಅವರನ್ನು ಸ್ವತಂತ್ರವಾಗಿ ಬಿಟ್ಟಿದ್ದರೆ ಪರಿಸ್ಥಿತಿಯನ್ನು ನಿಯಂತ್ರಿಸಿ, ಹಿಂಸಾಚಾರವು ತಲೆಯೆತ್ತದ ಹಾಗೆ ಖಂಡಿತವಾಗಿಯೂ ಮಾಡುತ್ತಿದ್ದರು ಎಂಬ ರೀತಿಯಲ್ಲಿ ವಾದವು ಬೆಳೆದಿದೆ. ಈ ನಿಲುವನ್ನು ಹೊಂದಿರುವವರು, ಕಾಂಗ್ರೆಸ್ಸಿಗೂ, ಕಾರ್ಯಕಾರೀ ಸಮಿತಿಯ ಸದಸ್ಯರಿಗೂ ಕಳೆದ ಎರಡು ವರ್ಷಗಳಲ್ಲಿ ಅಹಿಂಸಾ ತತ್ವವನ್ನು ಕುರಿತು ಏನಾಗಿದೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಸ್ವಾಮಿ, ಕಳೆದ ಎರಡು ಮೂರು ವರ್ಷಗಳ ಕಾಂಗ್ರೆಸ್ ಕಾರ್ಯಕಲಾಪಗಳನ್ನು ಓದಿದ ನನ್ನ ಮನಸ್ಸಿಗೆ ತೋರುವುದು ಕಾಂಗ್ರೆಸ್ ಘೋಷಿಸುತ್ತಾ ಬಂದಿರುವ ರೀತಿಯಲ್ಲಿ ಅಹಿಂಸೆಯ ವಿಚಾರದಲ್ಲಿ ಭಾರೀ ಪ್ರಮಾಣದ ಕುಸಿತ ಉಂಟಾಗಿದೆ ಎನ್ನುವುದು. ಅಹಿಂಸಾ ತತ್ವವನ್ನು ಆಳವಾಗಿ ಹುಗಿಯಲಾಗಿದೆ – ಅದರಲ್ಲಿ ನನಗೆ ಸಂದೇಹವೇ ಉಳಿದಿಲ್ಲ.

ಸದನದ ಮುಂದೆ ಕೆಲವು ಮಾಹಿತಿಗಳನ್ನು ನೀಡಬಯಸುತ್ತೇನೆ. ಸ್ವಾಮಿ, ೧೯೩೯ರ ಡಿಸೆಂಬರ್ ೨೨ ರಂದು ಕಾಂಗ್ರೆಸ್ ಮೊದಲ ಸಾರಿ ಕಾಯಿದೆ ಉಲ್ಲಂಘನೆಯ ಬೆದರಿಕೆಯನ್ನು ಒಡ್ಡಿತು. ೧೯೪೦ರ ಮಾರ್ಚ್ ೧೯ರಂದು ರಾಮಗರ್‌ನಲ್ಲಿ ಕಾಂಗ್ರೆಸ್ ತನ್ನ ವಾರ್ಷಿಕ ಅಧಿವೇಶನವನ್ನು ನಡೆಸಿತು. ಈ ವಾರ್ಷಿಕಾಧಿವೇಶನದಲ್ಲಿ ಶ್ರೀ ಗಾಂಧಿಯವರನ್ನು ಸರ್ವಾಧಿಕಾರಿಯನ್ನಾಗಿ ಮಾಡಲಾಯಿತು. ಹೋರಾಟವನ್ನು ಮುನ್ನಡೆಸುವ ಹೊಣೆಯನ್ನು ಪೂರ್ತಿಯಾಗಿ ಅವರಿಗೆ ಹೊರಿಸಲಾಯಿತು. ಆ ನಿರ್ಣಯದ ಪ್ರಕಾರ ಗಾಂಧಿಯವರು ಮಹಾದಂಡನಾಯಕರಾದರು. ಆದರೆ ೧೯೪೦ರ ಜೂನ್ ೨೨ರಂದು, ಕೇವಲ ಮೂರು ತಿಂಗಳಲ್ಲಿ ಶ್ರೀ ಗಾಂಧಿಯವರನ್ನು ಈ ಮಹಾದಂಡನಾಯಕತ್ವದಿಂದ ಕೆಳಗಿಳಿಸಲಾಯಿತು. ಕಾರ್ಯಕಾರೀ ಸಮಿತಿಯು ಅಹಿಂಸೆಯನ್ನು ತನ್ನ ಕಾರ್ಯಕ್ರಮದ ಮಾರ್ಗದರ್ಶಕ ತತ್ವವಾಗಿ ಒಪ್ಪಿಕೊಳ್ಳಲು ನಿರಾಕರಿಸಿತು. ಶ್ರೀ ಗಾಂಧಿ ರಾಜೀನಾಮೆ ಕೊಡಬೇಕಾಯಿತು.

**ಡಾ॥ ಪಿ.ಎನ್. ಬ್ಯಾನರ್ಜಿಯಾ (ಕಲ್ಕತ್ತಾಸಬರ್ಬ್ :** ಮಹಮದೀಯೇತರ ನಗರ ಪ್ರದೇಶ) : ಅದು ಯುದ್ಧಕ್ಕೆ ಸಂಬಂಧಿಸಿದ ಹಾಗೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ದಯವಿಟ್ಟು ಮಧ್ಯೆ ಮಾತಾಡಿ ತೊಂದರೆಪಡಿಸಬೇಡಿ.

೧೯೪೦ರ ಡಿಸೆಂಬರ್ ೧೫ರಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮುಂಬಯಿಯಲ್ಲಿ ಅಧಿವೇಶನ ಸೇರಿತು. ಅಲ್ಲಿ ಮತ್ತೆ ಶ್ರೀ ಗಾಂಧಿಯವರನ್ನು ಮಹಾದಂಡನಾಯಕರನ್ನಾಗಿ ಮಾಡುವ ಒಂದು ನಿರ್ಣಯವನ್ನು ಅಂಗೀಕರಿಸಲಾಯಿತು. ಹೋರಾಟವನ್ನು ಮುಂದುವರಿಸುವ ಹೊಣೆಯನ್ನು ಮತ್ತೆ ಅವರಿಗೆ ಹೊರಿಸಲಾಯಿತು. ೧೯೪೧ರ ಡಿಸೆಂಬರ್ ವರೆಗೂ ಶ್ರೀ ಗಾಂಧಿ ಹಾಗೆಯೇ ಮುಂದುವರಿದರು. ೧೯೪೧ರ ಡಿಸೆಂಬರ್‌ನಲ್ಲಿ ಕಾರ್ಯಕಾರೀ ಸಮಿತಿಯ ಸಭೆಯೊಂದು ಬಾರ್ದೋಲಿಯಲ್ಲಿ ಸೇರಿ ಒಂದು ನಿರ್ಣಯ ಅಂಗೀಕರಿಸಿತು. ಅದರ ಪ್ರಕಾರ ಮತ್ತೆ ಗಾಂಧಿಯವರನ್ನು ಪದಚ್ಯುತಿಗೊಳಿಸಲಾಯಿತು. ೧೯೪೧ರ ಡಿಸೆಂಬರಿನಲ್ಲಿ ಬಾರ್ದೋಲಿಯಲ್ಲಿ ನಡೆದ ಘಟನೆಯ ಒಂದು ಮುಖ್ಯ ಲಕ್ಷಣ ಈ ಸದನದ ಸದಸ್ಯರಿಗೆ ಚೆನ್ನಾಗಿ ಮನವರಿಕೆಯಾಗಿಲ್ಲ ಎಂದು ನನಗನ್ನಿಸುತ್ತಿದೆ. ಶ್ರೀ ಗಾಂಧಿ ಮತ್ತು ಅಹಿಂಸಾ ತತ್ವದಲ್ಲಿ ಪೂರ್ಣ ನಂಬಿಕೆಯಿದ್ದ ಅವರ ಅನುಯಾಯಿಗಳು ಮತ್ತು ಅಹಿಂಸೆಯಲ್ಲಿ ನಂಬಿಕೆಯಿರದ ಕಾರ್ಯಸಮಿತಿಯ ಇತರ ಸದಸ್ಯರ

ನಡುವೆ ಭಾರೀ ಒಡಕು ಮೂಡಿತು. ಈ ವಿಷಯವು ವಾರ್ಧಾದಲ್ಲಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿ ಚರ್ಚೆಗೆ ಬಂದಿತು. ಭಾರತದ ಎಲ್ಲರೂ, ಖಂಡಿತವಾಗಿ ಕಾರ್ಯಕಾರೀ ಸಮಿತಿ ಸದಸ್ಯರೂ ಸಹ, ಶ್ರೀ ಗಾಂಧಿ ಬಾರ್ದೋಲಿಯ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ಮಾಡುತ್ತಾರೆ, ಇಲ್ಲವೆ, ಅವರಿಂದ ಅದು ಸಾಧ್ಯವಾಗದೆ ಹೋದರೆ ರಾಜೀನಾಮೆ ಕೊಡುತ್ತಾರೆ ಎಂದು ನಿರೀಕ್ಷಿಸಿದರು. ಈ ವಿಷಯವು ವಾರ್ಧಾದಲ್ಲಿ ಎಐಸಿಸಿ ಎದುರು ನಿರ್ಣಯಕ್ಕೆ ಬಂದ ಹಂತದಲ್ಲಿ ಶ್ರೀ ಗಾಂಧಿ ದಿಗ್ಭ್ರಮೆಯುಂಟುಮಾಡುವ ಒಂದು ಕೆಲಸ ಮಾಡಿದರು. ಆ ಅಹಿಂಸಾ ಹರಿಕಾರನು ತನ್ನ ಅನುಯಾಯಿಗಳಿಗೆ ಪಕ್ಷವನ್ನು ಒಡೆಯುವ ಹಂತಕ್ಕೆ ಭಿನ್ನಾಭಿಪ್ರಾಯವನ್ನು ಒಯ್ಯಬೇಡಿ ಎಂದು ಬುದ್ಧಿ ಹೇಳಿದರು. ಅಷ್ಟು ಮಾತ್ರವಲ್ಲ ಕಾರ್ಯಕಾರೀ ಸಮಿತಿಯೊಂದಿಗೆ ತಾವೂ ತೊಡಗಿಕೊಳ್ಳುವುದನ್ನು ಮುಂದವರಿಸಿದರಲ್ಲದೇ, ಸೇನಾನಾಯಕರಾಗಿಯೂ ಮುಂದುವರಿದರು. ಮಾನ್ಯರೆ, ಕಾಂಗ್ರೆಸ್ ಪಕ್ಷವು ಗಾಂಧಿಯವರ ಮೂಗಿನ ಕೆಳಗೇ ಹಿಂಸಾ ಮನೋಭಾವದಿಂದ ಪರ್ಯಾಪ್ತಗೊಂಡಿದೆ ಎಂಬುದಕ್ಕೆ ಇದು ತಕ್ಕ ಆಧಾರವಲ್ಲದೆ ಹೋದರೆ, ಇನ್ನು ಬೇರೆ ಯಾವುದಾದರೂ ಆಧಾರವನ್ನು ಕೊಡಬಲ್ಲೆ ಎಂದು ನನಗನಿಸುವುದಿಲ್ಲ.

ಮಾನ್ಯ ಸದಸ್ಯರಿಗೆ ತಿಳಿದಿರದ ಮತ್ತು ನಾನು ಉಲ್ಲೇಖ ಮಾಡಬಹುದಾದ ಇನ್ನೊಂದು ವಿಚಾರವಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಎಲ್ಲಾ ಸದಸ್ಯರು ಕೊನೆಯ ಪಕ್ಷ ಬಹುತೇಕ ಜನ–ಅಹಿಂಸಾ ತತ್ವದಲ್ಲಿ ನಂಬಿಕೆ ಕಳೆದುಕೊಂಡಿದ್ದರು. ಇನ್ನಷ್ಟು ಜನ ಆ ತತ್ವದ ಬಗೆಗೆ ಅಲಕ್ಷ್ಯ ತಾಳಿದ್ದರು. ಆದರೆ ಕಾಂಗ್ರೆಸ್ ಪಕ್ಷದೊಳಗೆಯೇ ಹಿಂಸಾಮಾರ್ಗವನ್ನು ಯೋಜಿತ ರೀತಿಯಲ್ಲಿ ಪ್ರಚಾರ ಮಾಡುವ ಪ್ರಯತ್ನ ನಡೆದಿತ್ತು ಎಂದು ಹೇಳಲು ಸಾಕಷ್ಟು ಸಾಕ್ಷ್ಯಾಧಾರಗಳಿವೆ.

**ಸರ್ದಾರ್ ಸಂತ್‌ಸಿಂಗ್ :** ಅದು ಯುದ್ಧಕ್ಕೆ ಸಂಬಂಧಿಸಿದಂತೆ..........

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ದಯವಿಟ್ಟು ಅಡ್ಡಿಪಡಿಸಬೇಡಿ.

**ಸರ್ದಾರ್ ಸಂತ್‌ಸಿಂಗ್ :** ನೀವು ತಪ್ಪು ಹೇಳಿಕೆಗಳನ್ನು ನೀಡುತ್ತಿದ್ದೀರಿ.

**ಕೆಲವು ಗೌರವಾನ್ವಿತ ಸದಸ್ಯರು :** ಅದು ಸರಿಯಲ್ಲ. ನಿಮ್ಮ ಹೇಳಿಕೆಗೆ ಸಾಕ್ಷ್ಯಾಧಾರಗಳಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಖಚಿತವಲ್ಲದ ಯಾವುದೇ ಹೇಳಿಕೆಯನ್ನು ನಾನು ನೀಡುತ್ತಿಲ್ಲ. ಇದುವರೆಗೂ ಸದನದಲ್ಲಿ ಪ್ರಸ್ತಾಪಿಸದೆ ಇರುವ ಒಂದು ಆಧಾರವಿದೆ. ಅದನ್ನು ಕುರಿತು ಈಗ ಹೇಳಲಿಚ್ಛಿಸುತ್ತೇನೆ.

ಶ್ರೀ ಜಯಪ್ರಕಾಶ್ ನಾರಾಯಣ್ ಅವರನ್ನು ಇರಿಸಿದ್ದ ದೇವೊಲಿ ಕಾರಾಗೃಹದಲ್ಲಿ ಒಂದು ಘಟನೆ ನಡೆಯಿತು. ಶ್ರೀ ಜಯಪ್ರಕಾಶ ನಾರಾಯಣ್ ಅವರು ರಹಸ್ಯವಾಗಿ ತಮ್ಮ ಪತ್ನಿಗೆ ಕಳುಹಿಸಿಕೊಡಲು ಪ್ರಯತ್ನಿಸುತ್ತಿದ್ದ ಕೆಲವು ಪತ್ರಗಳನ್ನು ಜೈಲಿನ ಸೂಪರಿಂಟೆಂಡೆಂಟ್ ವಶಪಡಿಸಿಕೊಂಡರು ಎಂಬ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಘಟನೆ ನಡೆದದ್ದು ೧೯೪೧ರ ಡಿಸೆಂಬರಿನಲ್ಲಿ. ಕಾಂಗ್ರೆಸ್ಸಿನ ಒಳಗೆ – ಕಾರ್ಯಕಾರೀ ಸಮಿತಿಯ ಒಳಗೆ ಏನು ನಡೆಯುತ್ತಿತ್ತು ಎಂಬುದನ್ನು ತಿಳಿದುಕೊಳ್ಳಲು ಬಯಸುವವರು ಆ ದಾಖಲೆಗೆ ಅತಿ ಹೆಚ್ಚಿನ ಗಮನ ಕೊಡಬೇಕು. ಅಂಥದೇನನ್ನು ಆ ದಾಖಲೆ ಬಯಲು ಮಾಡಿತ್ತು? ಸರಿಯಾಗಿ ಓದಿ ನೋಡಿದರೆ ಆ ದಾಖಲೆ ನಾಲ್ಕೈದು ವಿಚಾರಗಳನ್ನು ತೆರೆದು ತೋರಿಸುತ್ತದೆ. ಎಲ್ಲಕ್ಕಿಂತ ಮೊದಲನೆಯದಾಗಿ, ಈಗ ನಾನು ಶ್ರೀ ಜಯಪ್ರಕಾಶ ನಾರಾಯಣ್ ಅವರ ಮಾತುಗಳನ್ನೇ ಬಳಸುತ್ತೇನೆ – ಶ್ರೀ ಗಾಂಧಿ ನಡೆಸುತ್ತಿದ್ದ ಸತ್ಯಾಗ್ರಹವನ್ನು ಬಹುತೇಕ ಕಾಂಗ್ರೆಸಿಗರು ಅರ್ಥವಿಲ್ಲದ ನಾಟಕ ಎಂದು ಭಾವಿಸಿದ್ದರು; ಅದರಲ್ಲಿ ಯಾವುದೇ ಅರ್ಥವಿರಲಿಲ್ಲ, ವಿವೇಕವಿರಲಿಲ್ಲ. ಎರಡನೆಯದಾಗಿ, ಕಾಂಗ್ರೆಸ್ ತನ್ನ

ಗುರಿಯನ್ನು ಸಾಧಿಸಬೇಕೆಂದು ಬಯಸುವುದಾದ ಪಕ್ಷದಲ್ಲಿ ಅದು ನೈತಿಕ ವಿಷಯಗಳ ಗೊಡವೆಯನ್ನು ಬಿಟ್ಟು ರಾಜಕೀಯ ವಿಷಯಗಳನ್ನು ಸಾಧಿಸಲು ಪ್ರಯತ್ನಿಸಬೇಕು ಎಂದು ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಅಭಿಪ್ರಾಯವಾಗಿತ್ತು. ಅದು ನಿಜವಾಗಿಯೂ ಗಾಂಧಿಯವರಿಗೆ ವಿರುದ್ಧ ಒಂದು ಹೊಡೆತ. ಇನ್ನು ದಾಖಲೆಯು ಬಯಲಿಗೆಳೆದ ಎರಡನೆಯ ಅಂಶವೆಂದರೆ ಭಾರತದಲ್ಲಿ, ಅಹಿಂಸೆಯನ್ನು ನಂಬದೆ ಇರುವುದು ಮಾತ್ರವಲ್ಲ, ಹಿಂಸಾತತ್ವಕ್ಕೆ ಪಣತೊಟ್ಟ ಕೆಲವು ಪಕ್ಷಗಳಿದ್ದವು ಎನ್ನುವುದು. ಆ ದಾಖಲೆಯು ಹೇಳುವ ಇಂತಹ ಪಕ್ಷಗಳು ಮುಖ್ಯವಾಗಿ ಇವು : ಕಾಂಗ್ರೆಸಿನ ಒಳಗೆಯೇ ರಹಸ್ಯವಾಗಿ ಇರುವಂಥವು; ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಬಂಗಾಳದಲ್ಲಿ ದಿ ರೆವಲ್ಯೂಷನ್ ಸೋಷಲಿಸ್ಟ್ ಪಾರ್ಟಿ, ದಿ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ, ದಿ ಹಿಂದೂಸ್ತಾನ್ ಸೋಷಲಿಸ್ಟ್, ರಿಪಬ್ಲಿಕನ್ ಅಸೋಸಿಯೇಷನ್. ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಬಳಿ ಒಂದು ಯೋಜನೆ ಇತ್ತು. ಈ ಎಲ್ಲ ಪಕ್ಷಗಳೂ, ಬಹುಶಃ ಕಮ್ಯೂನಿಸ್ಟ್ ಪಕ್ಷದ ಹೊರತು, ಒಟ್ಟುಗೂಡಿ ಒಂದು ಪಕ್ಷವಾಗುವುದು. ಅದು ರಹಸ್ಯವಾಗಿದ್ದುಕೊಂಡು ಕಾಂಗ್ರೆಸ್‌ನೊಳಗಿದ್ದುಕೊಂಡೇ ಭೂಗತ ಚಟುವಟಿಕೆಗಳ ಮೂಲಕ ಕಾರ್ಯನಿರ್ವಾಹ ಮಾಡುವುದು. ಭೂಗತ ಎನ್ನುವುದು ಸರಿಯಾದ ಪಾರಿಭಾಷಿಕ ಉಕ್ತಿಯಾಗಬಹುದು.

ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಈ ರಹಸ್ಯ ಪಕ್ಷವು ಕಾಂಗ್ರೆಸ್ಸಿನೊಳಗೇ ಇರುವುದು ಮಾತ್ರವಲ್ಲ, ತನ್ನದೇ ಧ್ಯೇಯ ಧೋರಣೆಗಳನ್ನು ಅನುಷ್ಠಾನಕ್ಕೆ ತರಲು ರಾಜಕೀಯ ದರೋಡೆ ಮಾಡಿ ನಿಧಿ ಕೂಡಿಸಿಕೊಳ್ಳಬೇಕು ಎಂದೂ ಸೂಚಿಸಿದ್ದರು. ಈಗ ನಾನು ಉಲ್ಲೇಖಿಸಿರುವ ಎರಡು ವಿಚಾರಗಳೂ ಕಾಂಗ್ರೆಸ್ ಬಾಯಿಮಾತಿನಿಂದ ಹೇಳುವ ಅಹಿಂಸಾ ತತ್ವಕ್ಕೆ ಬೆಲೆ ಕೊಡಬಾರದು ಎಂದು ನಂಬುವುದಕ್ಕೆ ಸಾಕಷ್ಟು ಆಧಾರವಾಗದೆ ಹೋದರೆ, ವಿವೇಕಿಯಾದ ಸಾಮಾನ್ಯ ಮನುಷ್ಯನ ಮನವೊಲಿಸುವ ಇದಕ್ಕಿಂತ ಉತ್ತಮ ಆಧಾರವನ್ನು ನಾನು ಕೊಡಲಾರೆ. ಮಾನ್ಯರೆ, ಸರಕಾರವು ಕ್ರಮ ಕೈಗೊಂಡ ಸಂದರ್ಭದಲ್ಲಿ ಇದ್ದ ಪರಿಸ್ಥಿತಿಗಳಲ್ಲಿ ಒಂದು ಇದು.

ಈಗ ನಾನು ಈ ಪ್ರಥಮ ಭಾಷಣದಲ್ಲಿ ಉತ್ತರ ಕೊಡಲು ಆರಿಸಿಕೊಂಡ ಎರಡನೆಯ ವಿಚಾರಕ್ಕೆ ಬರುತ್ತೇನೆ. ಅದು ಸಂದರ್ಭ ಸನ್ನಿವೇಶಗಳಿಂದ ದಮನವು ಸಮರ್ಥನೀಯವೇನೋ ಆಗಬಹುದಾದರೂ ಸರಕಾರವು ದಮನಗೊಳಿಸುವಷ್ಟಕ್ಕೆ ನಿಲ್ಲಕೂಡದು, ಕೆಲವು ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಮಾನ್ಯ ಸದಸ್ಯರು ಮಾಡಿರುವ ಆಕ್ಷೇಪಣೆ. ಸದನದ ಬೇರೆ ಬೇರೆ ವರ್ಗಗಳಿಂದ ರಚನಾತ್ಮಕ ಕ್ರಮಗಳು ಎಂಬ ಹೆಸರಿನಲ್ಲಿ ಬಂದಿರುವುದೆಲ್ಲವನ್ನೂ ಪರೀಕ್ಷಿಸಲು ತೊಡಗಿದರೆ, ಸಲಹೆಗಳ ಗೊಂದಲವೇ ಕಣ್ಣಿಗೆ ಹೊಡೆದು ರಾಚುತ್ತದೆ. ಆದ್ದರಿಂದ ನಾನು ಖಚಿತವಾಗಿದೆ ಎಂದು ತೋರುವುದನ್ನು, ನೀವೂ ವಿವರವಾಗಿ ಪರೀಕ್ಷಿಸಿ ನೋಡಬಹುದಾದುದನ್ನು ಮಾತ್ರ ಆಯ್ದುಕೊಳ್ಳುತ್ತೇನೆ. ಅದು ಇಂದಿನ ಸರಕಾರವನ್ನು ಪುನರ್ ರೂಪಿಸಬೇಕು, ಅದು ರಾಷ್ಟ್ರೀಯ ಸರಕಾರವಾಗಿ ವರ್ತಿಸುವಂತೆ ಮಾಡಬೇಕು ಎಂಬ ಸೂಚನೆ. ಈ ವಿಚಾರವಾಗಿ ನಾನು ಹೇಳಬೇಕಾಗಿರುವುದನ್ನು ಸಮರ್ಪಕವಾಗಿ ನಿರೂಪಿಸಬೇಕಾದರೆ ಈಗ ಇರುವ ಸರಕಾರ ಎಂಥದು, ಅದರ ಸ್ವರೂಪ ಏನು ಎಂಬುದನ್ನು ಮೊದಲು ಹೇಳಬಯಸುತ್ತೇನೆ. ಗೌರವಾನ್ವಿತ ಸದಸ್ಯರು ಈಗಾಗಲೇ ತಿಳಿದಿರುವಂತೆ, ಭಾರತ ಸರಕಾರದ ಶಾಸನ (Government of India Act)ದ ೩೩ನೆಯ ಖಂಡ ಹೇಳುವಂತೆ ಭಾರತದ ಪೌರ, ಮಿಲಿಟರಿ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಗಳು ಗವರ್ನರ್–ಜನರಲ್–ಇನ್–ಕೌನ್ಸಿಲ್ (Governor-General-in-Council)ಗೆ ಸೇರಿವೆ. ನಾನೊಬ್ಬ ಸಂವಿಧಾನ ನ್ಯಾಯವಾದಿ. ತಜ್ಞನೆಂದು ಹೇಳಿಕೊಳ್ಳಲಾರೆ, ಆದರೆ ವಿದ್ಯಾರ್ಥಿ ಎಂದು ಹೇಳಿಕೊಳ್ಳಬಲ್ಲೆ. ಈ ೩೩ನೆಯ

ಖಂಡವನ್ನು ಪರೀಕ್ಷಿಸಿ ಬೇರೆ ಕಡೆಯ ಸಂವಿಧಾನಗಳೊಂದಿಗೆ ಹೋಲಿಸಿ ನೋಡಿದರೆ, ತಮಗೆ ಯಾವ ಬಗೆಯ ಸರಕಾರ ಬೇಕೆಂಬ ವಿಷಯದಲ್ಲಿ ಭಾರತದ ಜನತೆಯು ಹೊಂದಿರುವ ಆಶೋತ್ತರಗಳನ್ನು ಒಂದು ಅಳತೆಗೋಲಾಗಿ ಭಾವಿಸುವುದಾದರೆ ಈ ೩೩ನೆಯ ಖಂಡ ಎರಡು ಅತ್ಯಂತ ಮಹತ್ವಯುತ ಲಕ್ಷಣಗಳನ್ನು ಹೊಂದಿರುವುದು ಗೊತ್ತಾಗುತ್ತದೆ. ಈ ಸರಕಾರದ ಒಂದು ಮುಖ್ಯ ಲಕ್ಷಣವೆಂದರೆ, ಸರ್ವಾಧಿಕಾರವನ್ನು ಸಂಪೂರ್ಣವಾಗಿ ತೊಡೆದು ಹಾಕಿರುವುದು, ಎರಡನೆಯ ಲಕ್ಷಣ ಜಂಟಿ ಜವಾಬ್ದಾರಿಯನ್ನು ಹೊರಿಸಿರುವುದು. ಭಾರತದ ಜನರ ಹೃದಯಗಳೂ ಬಹುವಾಗಿ ತವಕಪಡುತ್ತಿರುವ......

**ಓರ್ವ ಸದಸ್ಯರು :** ಅದನ್ನು ಆಚರಿಸಲಾಗುತ್ತಿದೆಯೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಆ ವಿಷಯಕ್ಕೆ ಬರುತ್ತೇನೆ. ಶಾಸನದಲ್ಲಿ ಬೇಕಾದಷ್ಟು ಅವಕಾಶಗಳನ್ನು ಒದಗಿಸಲಾಗಿದೆ. ಸರಕಾರ ಇರುವುದು ಒಬ್ಬ ವ್ಯಕ್ತಿಯ ಕೈಯಲ್ಲಲ್ಲ, ಒಬ್ಬನ ಅಧಿಕಾರದಲ್ಲಲ್ಲ, ಅದು ಗವರ್ನರ್–ಜನರಲ್–ಇನ್–ಕೌನ್ಸಿಲ್‌ನಲ್ಲಿದೆ.....

**ಮಾನ್ಯ ಜಮ್ನಾದಾಸ್ ಎಂ. ಮೆಹ್ತಾ (ಮುಂಬಯಿ ಕೇಂದ್ರ ವಿಭಾಗ :** ಮಹಮದೀಯೇತರ ಗ್ರಾಮಾಂತರ) : ಭಾರತದ ರಾಜ್ಯ ಕಾರ್ಯದರ್ಶಿಯ (Secretary of State for India) ಆದೇಶಗಳಿಗೆ ಒಳಪಟ್ಟು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅದಕ್ಕೇ ನಾನೀಗ ಬರುತ್ತೇನೆ. ವಸ್ತುಸ್ಥಿತಿ ಹೀಗಿದೆ. ಆಡಳಿತ ಮಂಡಳಿಯ ಪ್ರತಿಯೊಬ್ಬ ಸದಸ್ಯರೂ ಗವರ್ನರ್–ಜನರಲ್ಲರ ಸಹೋದ್ಯೋಗಿ. ಇದನ್ನು ಎಂದಿಗೂ ಮರೆಯುವಂತಿಲ್ಲ, ಮರೆಯಕೂಡದು. ಆದ್ದರಿಂದ ನನ್ನ ಮನವಿ ಇದು. ಪ್ರಜಾಸತ್ತಾತ್ಮಕವಾದ, ಸರ್ವಾಧಿಕಾರವನ್ನು ಕಳೆದುಕೊಂಡ, ರೂಢಿಯನ್ನು ಬಿಟ್ಟು ಕಾನೂನಿನ ಪ್ರಕಾರ ಮಾತ್ರವೇ, ಆಡಳಿತದ ಹೊಣೆ ಹೊತ್ತವರ ಮೇಲೆ ಜಂಟಿ ಜವಾಬ್ದಾರಿಯನ್ನು ಹೊರಿಸುವ ಒಂದು ಸರಕಾರದ ಕೊರತೆಯಿದೆ ಎಂದು ಭಾರತೀಯರು ಭಾವಿಸುವುದಾದ ಪಕ್ಷದಲ್ಲಿ, ಈ ಸದನಕ್ಕೆ ನಾನು ಹೇಳುವುದು ಇಷ್ಟೆ : ಈಗ ನಾವು ಹೊಂದಿರುವುದಕ್ಕಿಂತ ಉತ್ತಮವಾದ ಸರಕಾರವನ್ನು ರೂಪಿಸುವುದು ಸಾಧ್ಯವಿಲ್ಲ. ಇದು ಹೇಗೆ ಇದ್ದರೂ ವೈಸರಾಯರ ವೀಟೊಗೆ, ಭಾರತ ಕಾರ್ಯದರ್ಶಿಯ ನಿರಾಕರಣೆಯ ಅಧಿಕಾರಕ್ಕೆ (ವೀಟೊ) ಅಧೀನವಾಗಿರುತ್ತದಲ್ಲ ಎಂದು ಆಕ್ಷೇಪಿಸುತ್ತೀರಿ ಎಂದು ಬಲ್ಲೆ......

**ಮಾನ್ಯ ಜಮ್ನಾದಾಸ್ ಎಂ. ಮೆಹತಾ :** ಕೇವಲ ವೀಟೊ – ಆದೇಶಗಳು ಮಾತ್ರವಲ್ಲ.....

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನಾನದನ್ನು ವೀಟೊ ಎಂದು ಕರೆಯುತ್ತೇನೆ, ನೀವು ಅದನ್ನು ಆದೇಶಗಳು ಎನ್ನುತ್ತೀರಿ. ಸಂವಿಧಾನದಲ್ಲಿ ನುರಿತವನಾದ್ದರಿಂದ ಸಾಂವಿಧಾನಿಕ ಪದವನ್ನು ಬಳಸಲು ನಾನು ಇಚ್ಛಿಸುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು :** ವೈಟ್‌ಹಾಲ್‌ನಿಂದ ಬರುವ ಧಣಿಯ ಮಾತು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ಸರಕಾರವು ಮುಕ್ತ ಸರಕಾರವಲ್ಲ ಎಂದಷ್ಟೆ ನಾನು ಹೇಳುತ್ತಿದ್ದುದು. ಅದು ವೈಸ್‌ರಾಯರ ವೀಟೊ ಅಧಿಕಾರಕ್ಕೆ ಒಳಪಟ್ಟ ಸರಕಾರ; ಭಾರತ ಕಾರ್ಯದರ್ಶಿಯ ವೀಟೊ ಅಧಿಕಾರಕ್ಕೆ ಒಳಪಟ್ಟ ಸರಕಾರ. ವೈಸರಾಯರ ವೀಟೊ ಬಗ್ಗೆ ಹೇಳುವುದಾದರೆ, ಅದು ಭಾರತದ ಶಾಂತಿ, ಯೋಗಕ್ಷೇಮಗಳಿಗೆ ಸಂಬಂಧಪಟ್ಟಿರುವ ವಿಷಯಗಳಿಗೆ ಸೀಮಿತವಾದದ್ದು. ಅದು ಸಾಮಾನ್ಯ ಸ್ವರೂಪದ ವೀಟೊ ಅಲ್ಲ. ದೇಶದ ದೈನಂದಿನ ಆಡಳಿತಕ್ಕೆ ಅನ್ವಯಿಸುವಂಥದಲ್ಲ.......

**ಸರ್ದಾರ್ ಸಂತ್‌ಸಿಂಗ್ :** ನಾನು ಒಂದು ಪ್ರಶ್ನೆ ಕೇಳಬಹುದೆ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನೀವು ಯಾವ ಪ್ರಶ್ನೆಯನ್ನೂ ಈಗ ಕೇಳಕೂಡದು.

ನನಗಿರುವ ಸಮಯ ಬಹಳ ಸ್ವಲ್ಪ. ವಾದಕ್ಕೋಸ್ಕರವಾಗಿ ವೀಟೊ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಬೇಕಾದಷ್ಟು ಸಂವಿಧಾನಗಳನ್ನು ನಾನು ಅಧ್ಯಯನ ಮಾಡಿದ್ದೇನೆ, ವೀಟೊ ಬಗ್ಗೆ ಹೆದರುವ ಆವಶ್ಯಕತೆಯಿಲ್ಲ.......

**ಸರ್ದಾರ್ ಸಂತ್‌ಸಿಂಗ್ :** ಕಾನೂನು ಸಂಬಂಧವಾದ ಪ್ರಶ್ನೆಯನ್ನು ಕೇಳಬೇಕಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆಮೇಲೆ ನೀವದನ್ನು ಕೇಳಬಹುದು. ಈಗ ಅದರ ಬಗ್ಗೆ ಉಪನ್ಯಾಸ ಕೊಡಲು ನನಗೆ ಸಮಯವಿಲ್ಲ.

ವೀಟೊ ಇದೆ ಎಂದು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ವೀಟೊ ಕುರಿತು ಇಷ್ಟು ಕಳವಳ ಪಡುತ್ತಿರುವ ಗೌರವಾನ್ವಿತ ಸದಸ್ಯರಲ್ಲಿ ನನ್ನದೊಂದು ಪ್ರಶ್ನೆಯಿದೆ : ವೀಟೊ ಅಧಿಕಾರದ ಮಹತ್ವ ಏನು? ವೀಟೊ ಎಂದರೆ ಏನರ್ಥ? ಅನೇಕ ಗೌರವಾನ್ವಿತ ಸದಸ್ಯರ ಮನಸ್ಸುಗಳಲ್ಲಿ ಈ ಬಗ್ಗೆ ತುಂಬ ಗೊಂದಲವಿರುವುದರಿಂದ, ಸಂವಿಧಾನಾತ್ಮಕ ಪ್ರಶ್ನೆಯನ್ನು ಕುರಿತು ಮಾತನಾಡಲು ಅವರು ಬಯಸುತ್ತಿರುವುದರಿಂದ ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತೇನೆ. ನಿರಂಕುಶ ಸರಕಾರಕ್ಕೂ, ಜವಾಬ್ದಾರಿಯುತ ಸರಕಾರಕ್ಕೂ ಇರುವ ವ್ಯತ್ಯಾಸ ಏನು? ಹಿಟ್ಲರನ ವಶದಲ್ಲಿರುವ ಜರ್ಮನಿಯಲ್ಲಿರುವ ಸರಕಾರಕ್ಕೂ, ಗ್ರೇಟ್ ಬ್ರಿಟನ್ನಿನಲ್ಲಿರುವ ಸರಕಾರಕ್ಕೂ ವ್ಯತ್ಯಾಸ ಯಾವುದು? ಉತ್ತರ ಸರಳವಾಗಿದೆ ಇಷ್ಟೆ.... (ಅಡ್ಡಿ).

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಆರ್ಡರ್, ಆರ್ಡರ್. ಮಾನ್ಯ ಸದಸ್ಯರು ಹೀಗೆ ಅಡ್ಡಿಪಡಿಸಬಾರದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಉತ್ತರ ಸರಳ, ಅದನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತೇನೆ. ನಿರುಂಕುಶಾಡಳಿತಕ್ಕೂ ಜವಾಬ್ದಾರಿಯುತ ಸರಕಾರಕ್ಕೂ ಇರುವ ವ್ಯತ್ಯಾಸ, ಮತ್ತೆ ಅದನ್ನು ಹೇಳುತ್ತೇನೆ. ಒತ್ತಿ ಹೇಳುತ್ತೇನೆ, ನಿರಂಕುಶಾಡಳಿತದಲ್ಲಿ ವೀಟೊ ಇರುವುದಿಲ್ಲ, ಜವಾಬ್ದಾರಿ ಸರಕಾರದಲ್ಲಿ ವೀಟೋ ಇರುತ್ತದೆ. ಸಂವಿಧಾನವನ್ನು ಅರ್ಥಮಾಡಿಕೊಳ್ಳಬಯಸುವವರು, ಸಂವಿಧಾನವನ್ನು ರೂಪಿಸಬಯಸುವವರು ಈ ಅಂಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಲಿ.

ಮಾನ್ಯರೆ, ಇರುವ ಒಂದೇ ಪ್ರಶ್ನೆ, ಏಳಬಹುದಾದ ಒಂದೇ ಒಂದು ಜಗಳ–ಆ ಜಗಳದ ಬಗ್ಗೆ ಚೆನ್ನಾಗಿ ಅರ್ಥವಾಗಿದೆ. – ವೀಟೊ ಅಧಿಕಾರ ಯಾರಲ್ಲಿ ಇರಬೇಕು ಎನ್ನುವುದು. ಅದು ಭಾರತದ ಕಾರ್ಯದರ್ಶಿಗಿರಬೇಕೆ? ವೈಸ್‌ರಾಯ್ ಅವರಿಗಿರಬೇಕೆ? ಅಥವಾ ಬೇರೆ ಯಾವುದಾದರೂ ಸ್ಥಳದಲ್ಲೆ? ಸಂಸ್ಥೆಯಲ್ಲೆ? ಅದೊಂದೆ ಜಗಳಕ್ಕೆ ಕಾರಣವಾದ ವಿಷಯ. ವೀಟೊವಿನ ಅಸ್ತಿತ್ವದ ವಿಷಯದಲ್ಲಿ ಹೇಳುವುದಾದರೆ, ಹೊಣೆಗಾರಿಕೆಯಲ್ಲಿ ವಿಶ್ವಾಸವುಳ್ಳವರಿಗೆ, ಪ್ರಜಾಸತ್ತಾತ್ಮಕ ಸರಕಾರದಲ್ಲಿ ನಂಬಿಕೆಯಿರುವವರಿಗೆ ಈ ಪ್ರಶ್ನೆ ಏಳುವುದಿಲ್ಲ. ಆದ್ದರಿಂದ ಇಲ್ಲಿ ಏಳುವ ಪ್ರಶ್ನೆ ಭಾರತದ ಕಾರ್ಯದರ್ಶಿಗೆ ಆ ಅಧಿಕಾರ ಇರಬಾರದು ಎನ್ನುವ ಪಕ್ಷದಲ್ಲಿ, ಅದನ್ನು ಯಾರಿಗೆ ಕೊಡಬೇಕು? ನನಗೆ ತೋರುವುದು, ಕಾರ್ಯದರ್ಶಿಯಿಂದ ಆ ಅಧಿಕಾರವನ್ನು ವರ್ಗಾಯಿಸಬೇಕೆನ್ನುವುದಾದರೆ ಸೂಕ್ತ ಸ್ಥಳವೆಂದು ನನಗೆ ಕಂಡುಬರುತ್ತಿರುವುದು ಶಾಸನ ಸಭೆ ಮಾತ್ರ. ಅದಕ್ಕಿಂತ ಬೇರೆಯ ಉತ್ತಮ ಸ್ಥಳ ವೀಟೊಗೆ ಇಲ್ಲ.

**ಸರ್ ಸಯ್ಯದ್ ರಜಾ ಅಲಿ (ಸಂಯುಕ್ತ ಪ್ರಾಂತಗಳ ನಗರಗಳು :** ಮಹಮದೀಯ–ನಗರ ಪ್ರದೇಶ): ನನ್ನ ಸನ್ಮಾನ್ಯ ಮಿತ್ರರು ಕೊನೆಗಾದರೂ ಶಾಸನ ಸಭೆಯ ಬಗೆಗೆ ಯೋಚಿಸಿದರಲ್ಲ ಎಂದು ನನಗೆ ಸಂತೋಷವಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆದ್ದರಿಂದ ಈ ಪ್ರಶ್ನೆ ಸರಳವಾದ ಪ್ರಶ್ನೆ. ಇಂದು ಇರುವ ರೀತಿಯಲ್ಲಿ ಶಾಸನ ಸಭೆಗೆ ವೀಟೊ ಅಧಿಕಾರವನ್ನು ವರ್ಗಾಯಿಸಬಹುದೆ? (ಪಂಡಿತ್ ಲಕ್ಷ್ಮೀಕಾಂತ ಮೈತ್ರ

ಅವರಿಂದ ಅಡ್ಡಿ). ನಾನು ಸಾಂವಿಧಾನಾತ್ಮಕ ಕಾನೂನಿನ ಪಾಠ ಇಲ್ಲಿ ಹೇಳಲಾರೆ. ಅದಕ್ಕೆ ಒಂದು ತರಗತಿಯನ್ನು ತೆರೆಯಬೇಕಾಗುತ್ತದೋ ಏನೋ. ಲಾ ಕಾಲೇಜಿನಲ್ಲಿ ಸಾಂವಿಧಾನಿಕ ಕಾನೂನನ್ನು ಐದು ವರ್ಷ ನಾನು ಪಾಠ ಹೇಳಿದ್ದೇನೆ. ನನ್ನ ಮನಸ್ಸಿನಲ್ಲಿ ಏಳುವ ಪ್ರಶ್ನೆಯಿದು. ಈ ವೀಟೊ ಅಧಿಕಾರವನ್ನು ಪ್ರಸಕ್ತ ಶಾಸನ ಸಭೆಗೆ ವರ್ಗಾಯಿಸಬಹುದೆ? ಪ್ರಸ್ತುತ ಶಾಸನ ಸಭೆಯ ದೃಷ್ಟಿಯಿಂದಲೇ ಏಕೆ ಹೇಳಬೇಕಾಗಿದೆಯೆಂದರೆ, ಬ್ರಿಟಿಷ್ ಸರಕಾರವು ತಕ್ಷಣವೆ ಅಧಿಕಾರ ತ್ಯಾಗ ಮಾಡಬೇಕೆನ್ನುವುದು ಈಗ ಇರುವ ಒತ್ತಾಯ. ಹಾಗಿದ್ದರೆ ವೀಟೊ ಅಧಿಕಾರವನ್ನು ನೀಡುವುದಕ್ಕೆ ಈ ಶಾಸನ ಸಭೆ ಅರ್ಹವಾಗಿದೆಯೆ?

ಈ ಶಾಸನ ಸಭೆಯ ರಚನೆ, ಲಕ್ಷಣ ಹೇಗಿದೆ? ಮಾನ್ಯರೆ, ನಾನು ಸತ್ಯವನ್ನು ಹೇಳುತ್ತೇನೆ, ಈ ಸದನಕ್ಕೆ ಅಪಮಾನವಾಗುವಂಥದೇನನ್ನೂ ಹೇಳುತ್ತಿಲ್ಲ. ಸರಿದುಹೋದ ಕಾಲಕ್ಕೆ ತಕ್ಕಷ್ಟು ಗೌರವ ಕೊಟ್ಟು ಹೇಳುವುದಾದರೆ ಈ ಸದನವು ಹೆಚ್ಚು ಕಡಮೆ ಮೃತ ಸ್ಥಿತಿಯಲ್ಲಿದೆ.

**ಸರ್ದಾರ್ ಸಂತ್‌ಸಿಂಗ್ :** ಇದು ಯಾವಾಗಲೂ ಹಾಗೆಯೇ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದನ್ನು ಚುನಾಯಿಸಿದ್ದು ಮೂರು ವರ್ಷಗಳ ಅವಧಿಗಾಗಿ. ಆದರೆ ಈಗ ಹೆಚ್ಚು ಕಡಿಮೆ ಒಂಬತ್ತು ವರ್ಷಗಳಿಂದ ಈ ಶಾಸನ ಸಭೆಯೇ ಇದೆ. ಎಷ್ಟರಮಟ್ಟಿಗೆ ಸದಸ್ಯರು ತಮ್ಮ ಮತ ಕ್ಷೇತ್ರಗಳಿಂದ ಹೊಚ್ಚ ಹೊಸದಾದ ಆದೇಶಗಳನ್ನು ಪಡೆದಿರಬಲ್ಲರು? ಆ ಬಗ್ಗೆ ನಾನೇನೂ ಹೇಳಬಯಸುವುದಿಲ್ಲ. ಮುಂದುವರಿದು ಸದನದ ರಚನೆಯನ್ನು ಪರಿಶೀಲಿಸೋಣ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಮಾನ್ಯ ಸದಸ್ಯರು ಈಗಾಗಲೇ ತಮ್ಮ ಸಮಯವನ್ನು ಮೀರಿದ್ದಾರೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** (ಪ್ರೆಸಿಡೆನ್ಸಿ ವಿಭಾಗ – ಮಹಮದೀಯೇತರ ಗ್ರಾಮಾಂತರ): ನನ್ನ ಮಾನ್ಯ ಮಿತ್ರರು ಹೇಳುವುದು ಸದನದ ಮುಂದಿರುವ ನಿರ್ಣಯಕ್ಕೆ ಎಷ್ಟು ಮಾತ್ರಕ್ಕೂ ಸಂಬಂಧಪಟ್ಟಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ಕೊಟ್ಟಿದ್ದ ಕಾಲಾವಕಾಶ ಮುಗಿದು ಹೋಗಿದೆಯೆಂದು ತಾವು ಭಾವಿಸುವುದಾದರೆ........

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಈ ಕಾಲಮಿತಿಯನ್ನು ಎಲ್ಲ ಪಕ್ಷಗಳೂ ಒಪ್ಪಿ ನಿಗದಿಪಡಿಸಿರುವುದು. ನಾನು ಅದನ್ನು ಜಾರಿಗೊಳಿಸಲೇಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗಿದ್ದರೆ ನನ್ನ ಭಾಷಣವನ್ನು ಮುಗಿಸುತ್ತೇನೆ. ಶಾಸನ ಸಭೆಯನ್ನು ಯಾವ ದೃಷ್ಟಿಕೋನದಿಂದ ಬೇಕಾದರೂ ಪರೀಕ್ಷಿಸಿ ನೋಡಿ. ಜನತೆ ನೀಡಿದ ಆದೇಶದ ದೃಷ್ಟಿಯಿಂದ ಪರೀಕ್ಷಿಸಿರಿ, ಶಾಸನ ಸಭೆಯ ರಚನೆ ಹೇಗಿದೆಯೆಂದು ಪರಿಶೀಲಿಸಿ, ಅದರ ಪ್ರಾತಿನಿಧ್ಯದ ಸ್ವರೂಪವನ್ನು ನೋಡಿ. ಯಾರನ್ನು ಪ್ರತಿನಿಧಿಸುತ್ತಿದೆಯೋ ಆ ಮತಕ್ಷೇತ್ರದ ದೃಷ್ಟಿಯಿಂದ ಗಮನಿಸಿ. ಈ ಸದನವು ರಾಷ್ಟ್ರೀಯ ಸರಕಾರವೊಂದರ ಮೇಲೆ ವೀಟೊ ಚಲಾಯಿಸಲು ಸಾಕಷ್ಟು ಪ್ರಾತಿನಿಧ್ಯದ ಬಲ ಹೊಂದಿದೆ ಎಂದು ಹೇಳಲು ಸಾಧ್ಯವಿಲ್ಲ.

**ಮಾನ್ಯ ಜಮ್ನಾದಾಸ್ ಎಂ. ಮೆಹ್ತಾ :** ಅಧಿವೇಶನವನ್ನು ಕರೆದಿರುವುದಾದರೂ ಏಕೆ?

(ಇನ್ನೂ ಹಲವರಿಂದ ಅಡ್ಡಿ)

**ಗೌರವಾನಿವತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಸಕ್ತ ವಿಷಯ ಇಷ್ಟು. ಈ ಸದನವು ವೀಟೊ ಅಧಿಕಾರವನ್ನು ತನ್ನಲ್ಲಿ ಇರಿಸಿಕೊಳ್ಳುವುದಕ್ಕೆ ತಕ್ಕಷ್ಟು ಪ್ರತಿನಿಧಿಸ್ವರೂಪವನ್ನು ಹೊಂದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು; ಇಲ್ಲವೆ, ಯುದ್ಧದ ಈ ಸಮಯದಲ್ಲಿ ಈ ಶಾಸನ ಸಭೆಯನ್ನು ಸಾಕಷ್ಟು ಸಂಖ್ಯೆಯ

ಹಿಂದೂಗಳು, ಸಾಕಷ್ಟು ಸಂಖ್ಯೆಯ ಮುಸಲ್ಮಾನರು, ಸಾಕಷ್ಟು ಸಂಖ್ಯೆಯ ದಲಿತವರ್ಗಗಳು ಮತ್ತು ದೇಶದ ರಾಷ್ಟ್ರೀಯ ಸ್ವರೂಪವನ್ನು ತೋರುವ ಇತರ ಅಂಶಗಳೆಲ್ಲವನ್ನೂ ಪ್ರತಿನಿಧಿಸುವಂತೆ ಪುನರ್ ರಚಿಸಲು ನಮಗೆ ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಬೇಕು. ಆದ್ದರಿಂದ ರಾಷ್ಟ್ರೀಯ ಸರಕಾರಕ್ಕಾಗಿ ಮಂಡಿಸುವ ಬೇಡಿಕೆ ಗೊಂದಲಪೂರ್ಣ ಆಲೋಚನೆಯ ಫಲ ಎಂದು ವಿನಂತಿ ಮಾಡಿಕೊಳ್ಳಬಯಸುತ್ತೇನೆ. ಮತೀಯ ಸೌಹಾರ್ದವನ್ನು ಬಯಸದಿರುವ ಅನೇಕ ಜನರ ಅಪೇಕ್ಷೆಯ ಫಲವಾಗಿರುತ್ತದೆ ಅದು. ಎಲ್ಲಿಯವರೆಗೆ ನಾವು ಮತೀಯ ಸಾಮರಸ್ಯವನ್ನು ಸಾಧಿಸಲಾರೆವೋ ಅಲ್ಲಿಯವರೆಗೂ ಈ ಸದನವನ್ನು, ಕಾರ್ಯಾಂಗದ ಮೇಲೆ ವೀಟೊ ಅಧಿಕಾರ ಚಲಾಯಿಸಲು ಅರ್ಹವಾಗುವಂತೆ ಪುನರ್ ರೂಪಿಸುವುದು, ನೂತನ ಸಂವಿಧಾನದಲ್ಲೇ ಆಗಲಿ, ಬೇರೆಯ ವಿಧಾನದಿಂದಾಗಲೀ ಸಾಧ್ಯವಿಲ್ಲ. ಮಾನ್ಯರೆ ನನಗೆ ಕೊಟ್ಟಿದ್ದ ಕಾಲಾವಕಾಶ ಮುಗಿದುಹೋಗಿರುವುದರಿಂದ ಇನ್ನು ನಾನು ಮುಂದುವರಿಸದೆ ಇಲ್ಲಿಗೇ ನಿಲ್ಲಿಸುತ್ತೇನೆ.

## ೬
## ಭಾರತೀಯ ಭೂವಿಜ್ಞಾನ ಸರ್ವೇಕ್ಷಣಾ ಶಾಖೆಯ ಸಲಹಾ ಸಮಿತಿಯ ಓರ್ವ ಸದಸ್ಯರ ಚುನಾವಣೆ *

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಸೆಪ್ಟಂಬರ್ ೧೪, ಸೋಮವಾರ ಮಂಡಿಸಿದ ಗೊತ್ತುವಳಿಯನ್ನು ಕುರಿತು ಮುಂದಿನ ಪರಿಶೀಲನೆ. ಡಾ॥ ಅಂಬೇಡ್ಕರ್ ಅವರು ಕೆಲವು ಮಾಹಿತಿಗಳನ್ನು ಒದಗಿಸುವುದಾಗಿಯೂ ಅಲ್ಲಿಯವರೆಗೆ ವಿಚಾರವು ಮುಂದಕ್ಕೆ ಹೋಗಬೇಕೆಂದೂ ಹೇಳಿದ್ದರು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಲೇಬರ್ ಸದಸ್ಯರು)** : ಮಾನ್ಯರೆ, ಮಾನ್ಯ ಸದಸ್ಯರು ಉದ್ದೇಶಿಸಿರುವ ತಿದ್ದುಪಡಿಗಳ ಬಗ್ಗೆ ತಿಳಿದುಕೊಳ್ಳಬಯಸುತ್ತೇನೆ. ತಿದ್ದುಪಡಿಗಳನ್ನು ಮೊದಲು ಮಂಡಿಸಿದರೆ ಗೊತ್ತುವಳಿ ಹಾಗೂ ತಿದ್ದುಪಡಿಗಳೆರಡನ್ನೂ ಸೇರಿಸಿಯೇ ನಾನು ಮಾತನಾಡಬಹುದು.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ತಮ್ಮ ತಮ್ಮ ತಿದ್ದುಪಡಿಗಳನ್ನು ಮಂಡಿಸಬೇಕಾಗಿರುವ ಗೌರವಾನ್ವಿತ ಸದಸ್ಯರು ಈಗ ವಿಧ್ಯುಕ್ತವಾಗಿ ಮಂಡಿಸಬಹುದು. ಆಮೇಲೆ ಗೊತ್ತುವಳಿ ಮತ್ತು ತಿದ್ದುಪಡಿ ಎಲ್ಲವೂ ಒಟ್ಟಿಗೆ ಸದನದ ಮುಂದೆ ಚರ್ಚೆಗೆ ಬರಬಹುದು.

**ಮಾನ್ಯ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಟ್ (ಪಶ್ಚಿಮ ಕರಾವಳಿ ಮತ್ತು ನೀಲಗಿರಿ – ಮಹಮ್ಮದೀಯ)** : ಮಾನ್ಯರೆ, ನಾನು ಈ ತಿದ್ದುಪಡಿ ಸೂಚಿಸುತ್ತೇನೆ :

"ಗೊತ್ತುವಳಿಯಲ್ಲಿ 'ಒಬ್ಬ ಪ್ರತಿನಿಧಿಯನ್ನು' ಎಂಬ ಪದಗಳಿಗೆ ಬದಲಾಗಿ 'ನಾಲ್ವರು ಪ್ರತಿನಿಧಿಗಳನ್ನು' ಎಂಬ ಪದಗಳನ್ನು ಸೇರಿಸಬೇಕು."

**ಪಂಡಿತ್ ಲಕ್ಷ್ಮೀಕಾಂತ್ ಮೈತ್ರ (ಪ್ರೆಸಿಡೆನ್ಸಿ ವಿಭಾಗ – ಮಹಮ್ಮದೀಯೇತರ ಗ್ರಾಮಾಂತರ)**: ಮಾನ್ಯರೆ, ನಾನು ಈ ತಿದ್ದುಪಡಿ ಸೂಚಿಸಬಯಸುತ್ತೇನೆ:

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಆಗಸ್ಟ್ ೨೧–೯–೧೯೪೨, ಪು. ೩೫೯–೬೨.

"ಗೊತ್ತುವಳಿಯಲ್ಲಿ 'ಒಬ್ಬ ಪ್ರತಿನಿಧಿಯನ್ನು' ಎಂಬ ಪದಗಳಿಗೆ ಬದಲಾಗಿ ಮೂವರು ಪ್ರತಿನಿಧಿಗಳನ್ನು' ಎಂಬ ಪದಗಳು ಸೇರಿಸಬೇಕು."

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಗೊತ್ತುವಳಿಯೂ, ಅದರ ಮೇಲೆ ಬಂದಿರುವ ತಿದ್ದುಪಡಿಗಳೂ ಎರಡು ಪ್ರಶ್ನೆಗಳನ್ನು ಎತ್ತುತ್ತವೆ. ಕಳೆದ ಸಾರಿ ನಾನು ಗೊತ್ತುವಳಿಯನ್ನು ಮಂಡಿಸಿದಾಗ, ನನ್ನ ಮಾನ್ಯ ಮಿತ್ರರಾದ ಶ್ರೀ ನಿಯೋಗಿ ಅವರು, ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದ ಬಳಕೆ ಶಾಖೆಯನ್ನು ರಚಿಸುವುದರ ಸಂಬಂಧ ಕೆಲವು ಮಾಹಿತಿಗಳನ್ನು ಸದನದ ಮುಂದಿರಿಸಬೇಕೆಂದು ಕೇಳಿದರು. ತಮಗೆ ನೆನಪಿರುವ ಹಾಗೆ, ಅದಾದ ಮಾರನೆಯ ದಿನವೇ ಅದೇ ವಿಚಾರವಾಗಿ ಶ್ರೀ ನಿಯೋಗಿ ಅವರು ಒಂದು ಪ್ರಶ್ನೆಯನ್ನು ಅಧಿಕೃತವಾಗಿ ಮಂಡಿಸಿದರು. ಅದಕ್ಕೆ ಉತ್ತರ ಕೊಡುತ್ತಾ ನಾನು ಬಳಕೆಯ ಶಾಖೆಯನ್ನು ಕುರಿತು ಕೆಲವು ಮಾಹಿತಿಗಳನ್ನು ನೀಡಿದೆ. ನನ್ನ ಮಾನ್ಯ ಮಿತ್ರರೂ ಇತರ ಸದಸ್ಯರೂ ಈ ಶಾಖೆಗೆ ಸಂಬಂಧಿಸಿದಂತೆ ಇನ್ನೇನಾದರೂ ಮಾಹಿತಿ ಅಪೇಕ್ಷಿಸುವರೋ ಹೇಗೋ ನನಗೆ ತಿಳಿಯದು. ಆದರೆ ಅಂದು ಹೇಳದೆ ಬಿಟ್ಟ ಕೆಲವು ಮಾಹಿತಿಗಳಿವೆಯೆಂದು ತೋರುತ್ತದೆ. ಮುಖ್ಯ ಪ್ರಶ್ನೆಗೆ ಸರಿಯಾದ ಉತ್ತರವಾಗಿ ಅದನ್ನು ಕೊಡಲು ಬರುತ್ತಿರಲಿಲ್ಲ, ಅಥವಾ ಅಂದು ಕೇಳಿದ ಉಪಪ್ರಶ್ನೆಗಳೂ ವಿಚಿತ್ರ ರೀತಿಯಲ್ಲಿದ್ದವು. ಹಾಗಾಗಿ ಅಂದು ಕೊಡಲಾಗದೆ ಹೋದ ಆ ಮಾಹಿತಿಯನ್ನು ಈಗ ಸದನದ ಮುಂದಿಡಬಯಸುತ್ತೇನೆ.

ಮಾಹಿತಿ ದೃಷ್ಟಿಯಿಂದ ನಾನು ಉಲ್ಲೇಖಿಸಲಿರುವ ಮೊದಲನೆಯ ವಿಷಯ ಬಳಕೆ ಶಾಖೆಯ (Utilisation Branch) ಕರ್ತವ್ಯಗಳನ್ನು ಕುರಿತದ್ದು. ಇದನ್ನು ಅಂದು ನಾನು ಹೇಳಲಿಲ್ಲವೆಂದು ತೋರುತ್ತದೆ. ಬಳಕೆ ಶಾಖೆಯ ನಿಯಮಗಳಿಗನುಸಾರವಾಗಿ, ಅದಕ್ಕೆ ಮೂರು ಮುಖ್ಯ ಕರ್ತವ್ಯಗಳಿರುತ್ತವೆ. ಮೊದಲನೆಯದಾಗಿ, ಲೋಹದ ಅದಿರಿನ ನಿಕ್ಷೇಪಗಳ ಶೋಧನೆಗೆ ಅಗತ್ಯವಾದ ಕ್ಷೇತ್ರಕಾರ್ಯ ನಡೆಸುವುದು; ಎರಡನೆಯದಾಗಿ, ಅಗತ್ಯವಿರುವ ಕಡೆ ಪ್ರಾಥಮಿಕ ಗಣಿಕಾರ್ಯವನ್ನು ಪ್ರಾರಂಭಿಸುವುದು; ಮೂರನೆಯದಾಗಿ, ಖನಿಜವನ್ನು ಸಂಸ್ಕರಿಸುವಲ್ಲಿ, ಅದಿರನ್ನು ಕರಗಿಸುವಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ತಕ್ಕ ಪ್ರಯೋಗಕಾರ್ಯಗಳನ್ನು ನಿರ್ವಹಿಸುವುದು. ಇವು ಬಳಕೆ ಶಾಖೆಯ ಕರ್ತವ್ಯಗಳಾಗಿರುತ್ತವೆ.

ಆಮೇಲೆ, ಬಳಕೆ ಶಾಖೆಯ ಕಾರ್ಯಕ್ರಮದ ವಿಚಾರ. ಈಗ ಸದ್ಯಕ್ಕೆ ಅದು ಆರು ವಿಭಾಗಗಳಲ್ಲಿರುತ್ತದೆ ಎಂದು ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ :

೧. ಉದಯಪುರ ರಾಜ್ಯದ ಜವರ್‌ನಲ್ಲಿ, ಮೇವಾರದಲ್ಲಿ ಸೀಸ ಮತ್ತು ಸತುವಿನ ಗಣಿಗಳನ್ನು ಪುನರಾರಂಭಿಸುವುದು

೨. ರಾಜಪುತಾಣದ ಮೈಕಾ ಗಣಿಗಳ ಅಭಿವೃದ್ಧಿ

೩. ಬಲೂಚಿಸ್ತಾನದಲ್ಲಿ ಗಂಧಕ ನಿಕ್ಷೇಪಗಳನ್ನು ತೆಗೆಯುವ ಪ್ರಯತ್ನ

೪. ವೂಲ್‌ಫ್ರಾಮ್ ಅಥವಾ ಟಂಗ್‌ಸ್ಟನ್ ಅದಿರಿನ ಕೆಲಸ–ಬಂಗಾಳ ಮತ್ತು ಸೆಂಟ್ರಲ್ ಕೇಂದ್ರ ಪ್ರಾಂತಗಳಲ್ಲಿ

೫. ಬಿಹಾರದ ಕೆಲವು ನಿಕ್ಷೇಪಗಳ ವಿಚಾರ

೬. ಕೆಲವು ಲೋಹಗಳು, ಶಿಲೆಗಳು ಮತ್ತು ಲವಣಗಳು, ಅವುಗಳಿಗೆ ಸಂಬಂಧಿಸಿದ ವಸ್ತುಗಳಿಗಾಗಿ ಅನ್ವೇಷಣೆ.

ನನ್ನ ಮಾನ್ಯ ಮಿತ್ರರಾದ ಶ್ರೀ ನಿಯೋಗಿ ಅವರು ಮಾಹಿತಿ ಬೇಕೆಂದು ಕೇಳಿದ ಮೂರನೆಯ ಪ್ರಶ್ನೆ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಗೂ (Board of Scientific and Industrial

Research) ಬಳಕೆ ಶಾಖೆಗೂ ಇರುವ ಸಂಬಂಧವನ್ನು ಕುರಿತದ್ದು. ಮಾನ್ಯರೆ, ವಸ್ತುಸ್ಥಿತಿ ಹೀಗಿದೆ. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯು ಮುಖ್ಯವಾಗಿ ಮೂರು ವಿಷಯಗಳನ್ನು ಕುರಿತು ವ್ಯವಹರಿಸುತ್ತದೆ. ಅವು, ಆವಿಷ್ಕಾರಗಳು, ಭಾರ ರಾಸಾಯನಿಕಗಳು ಮತ್ತು ನೈಸರ್ಗಿಕವಾಗಿ ದೊರಕುವ ಲವಣಗಳು. ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದ ಬಳಕೆ ಶಾಖೆಯಾದರೋ ಲೋಹಗಳನ್ನು ಕಂಡುಹಿಡಿಯುವುದು ಮತ್ತು ಅವುಗಳ ನಿಕ್ಷೇಪಗಳ ಶೋಧನೆಗೆ ಗಮನ ಕೊಡುತ್ತದೆ. ಇವೆರಡರ ಕಾರ್ಯಗಳೇ ಬೇರೆ ಬೇರೆ ಎಂಬುದು ಸ್ಪಷ್ಟವಾಗಿದೆ. ಅದೇ ಸಮಯದಲ್ಲಿ ವೈಜ್ಞಾನಿಕ ಔದ್ಯೋಗಿಕ ಸಂಶೋಧನಾ ಮಂಡಳಿಗೂ ಬಳಕೆ ಶಾಖೆಗೂ ನಡುವೆ ಅಂತರ್ ಸಂಬಂಧ ಸ್ವಲ್ಪಮಟ್ಟಿಗಿದೆ. ಜಿಯಲಾಜಿಕಲ್ ಸರ್ವೆ ಆಫ್ ಇಂಡಿಯಾದ ಹೊಣೆಹೊತ್ತಿರುವ ಡಾ. ಫಾಕ್ಸ್, ಮಂಡಳಿಯ ಅಧೀನದಲ್ಲಿ ಕೆಲಸ ಮಾಡುತ್ತಿರುವ ಭಾರ ರಾಸಾಯನಿಕಗಳನ್ನು ಕುರಿತು ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ಹಾಗೆಯೇ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಮಂಡಳಿಯ ನಿರ್ದೇಶಕರು ಜಿಯಾಲಾಜಿಕಲ್ ಸರ್ವೆಯ ಬಳಕೆ ಶಾಖೆಯ ಸಲಹಾ ಸಮಿತಿಗೆ ಒಬ್ಬ ಸದಸ್ಯರಾಗಿರುತ್ತಾರೆ. ಈ ವ್ಯವಸ್ಥೆಯಿಂದ ಎರಡೂ ಇಲಾಖೆಗಳ ನಡುವೆ ಸೂಕ್ತ ವಿಚಾರ ವಿನಿಮಯ ನಡೆಯುವುದು ಸಾಧ್ಯವಿದೆ ಎಂಬುದನ್ನು ಸದನವು ಗಮನಿಸಬಹುದು.

ಇನ್ನೆರಡು ಪ್ರಶ್ನೆಗಳ ಬಗೆಗೆ ನನ್ನ ಮಾನ್ಯ ಮಿತ್ರರು ಉಲ್ಲೇಖಿಸಿದ್ದಾರೆ. ಅವು ಸರಕಾರವು ಕೈಗೊಂಡ ಕ್ರಮಗಳ ಬಗೆಗಿನ ಆಕ್ಷೇಪಣೆಯಾಗಿವೆ. ಭಾರತದ ಖನಿಜ ಮೂಲಗಳನ್ನು ಕಡೆಗಣಿಸಲಾಗಿದೆ ಎಂದು ಅವರು ಹೇಳಿದರು. ಬರ್ಮಾದಿಂದ ಬಂದಿರುವ ನಿರಾಶ್ರಿತರಿಗೆ ವೃತ್ತಿ ಕಲ್ಪಿಸುವ ಉದ್ದೇಶದಿಂದ ಮಾತ್ರ ಬಳಕೆ ಇಲಾಖೆಯನ್ನು ಪ್ರಾರಂಭಿಸಲಾಗುತ್ತಿದೆ ಎಂದರು. ಮಾನ್ಯರೆ, ಮೊದಲನೆಯ ಪ್ರಶ್ನೆ ಕುರಿತು ಹೇಳುವುದಾದರೆ, ಭಾರತದ ಖನಿಜ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಇದಕ್ಕಿಂತ ಮೊದಲು ಕೈಗೆತ್ತಿಕೊಂಡಿರದುದಕ್ಕೆ ನನ್ನ ಮಾನ್ಯ ಮಿತ್ರರಷ್ಟೇ ನಾನೂ ವಿಷಾದ ವ್ಯಕ್ತಪಡಿಸುತ್ತೇನೆ. ಈಗ ನಾವು ಕೈಗೆತ್ತಿಕೊಂಡಿರುವ ಕಾರ್ಯಕ್ರಮವನ್ನು, ಬಳಕೆ ಶಾಖೆಯ ಸ್ಥಾಪನೆಯನ್ನು, ಈ ಮೊದಲೇ ಕೈಗೆತ್ತಿಕೊಳ್ಳಲು ಬಹುಶಃ ಮೂರು ಮುಖ್ಯವಾದ ಅಡಚಣೆಗಳಿದ್ದುವೆಂದು ತೋರುತ್ತದೆ. ಇದುವರೆಗೂ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ ತಕ್ಕ ಅರ್ಹತೆ ಪಡೆದ ಅಧಿಕಾರಿ, ಗಣಿಗಾರಿಕೆಯ ಸಿಬ್ಬಂದಿ ಇರಲಿಲ್ಲ. ದುರದೃಷ್ಟವಶಾತ್ ಭಾರತದ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾವು ಇಂಗ್ಲೆಂಡಿನ ಜಿಯಾಲಾಜಿಕಲ್ ಸರ್ವೆಯನ್ನು ಅನುಸರಿಸುತ್ತಿತ್ತು. ಅಂದರೆ ಅದು ಕೇವಲ ಗಣಿಗಳ ಮೇಲ್ವಿಚಾರಣೆ ಮಾಡುವ ಸಂಸ್ಥೆಯಾಗಿತ್ತು. ದೇಶದ ಖನಿಜ ಮೂಲವನ್ನು ಅಭಿವೃದ್ಧಿಪಡಿಸುವ ತಜ್ಞರ ಒಂದು ಸಂಸ್ಥೆಯಾಗಿರಲಿಲ್ಲ. ಎರಡನೆಯದಾಗಿ, ಖನಿಜಾನ್ವೇಷಣೆಯಲ್ಲಿ ಏನೋ ಒಂದು ಬಗೆಯ ಅಳುಕು, ಸಂಕೋಚ ಇತ್ತು. ಅದಕ್ಕೆ ಕಾರಣ ಖನಿಜ ನಿಕ್ಷೇಪಗಳನ್ನು ತೆರೆಯುವಲ್ಲಿ ಇದ್ದ ಅಪಾಯಗಳು. ಸಾಮಾನ್ಯವಾಗಿ ಭಾರತದಲ್ಲಿ ಖನಿಜಗಳು ಸಾಕಷ್ಟಿಲ್ಲ. ರಫ್ತು ಮಾಡಲು ಯೋಗ್ಯವಾದ ಮ್ಯಾಂಗನೀಸ್ ಮತ್ತು ಮೈಕಾ ಮಾತ್ರವೇ ಇರುವುದು ಎಂಬ ಒಂದು ಸಾಮಾನ್ಯ ಭಾವನೆ ಇತ್ತು. ಈಗ ಮಾಡುತ್ತಿರುವುದಕ್ಕಿಂತ ಮೊದಲು ಪ್ರಾರಂಭ ಮಾಡಲು ಸಾಧ್ಯವಾಗಲಿಲ್ಲವಲ್ಲ ಎಂದು ಮಾನ್ಯ ಮಿತ್ರರಿಗೂ ಸದನಕ್ಕೂ ವಿಷಾದ ವ್ಯಕ್ತಪಡಿಸುವುದರ ಜೊತೆಗೆಯೇ ಇದು 'ಇಲ್ಲಿಯವರೆಗೆ ಮಾಡಲಾಗದಿದ್ದರೂ ಈ ಕೆಲಸವನ್ನು ಮಾಡದೆ ಇರುವುದಕ್ಕಿಂದ ಈಗಲಾದರೂ ಪ್ರಾರಂಭಿಸುವುದು ಲೇಸು' ಎಂಬ ಮಾತು ಅನ್ವಯಿಸುವ ಸಂದರ್ಭವಲ್ಲವೆ ಎಂದು ಕೇಳಬಯಸುತ್ತೇನೆ.

ಬರ್ಮೀಯ ನಿರಾಶ್ರಿತರಿಗೆ ಕೆಲಸ ಕೊಡುವ ವಿಚಾರವಾಗಿ, ನನ್ನ ಮಾನ್ಯ ಮಿತ್ರರಿಗೂ ಸದನಕ್ಕೂ, ಇದಲ್ಲದೆ ನಮಗೆ ಬೇರೆ ಆಯ್ಕೆಯಿರಲಿಲ್ಲ ಎಂಬುದನ್ನು ಸೂಚಿಸಬಯಸುತ್ತೇನೆ. ಈಗಾಗಲೆ ಹೇಳಿದಂತೆ

ಗಣಿಗಾರಿಕೆ ಸಿಬ್ಬಂದಿಯ ತೀವ್ರ ಕೊರತೆ ನಮಗಿದೆ. ಬರ್ಮಾ ಸೀಸ ಮತ್ತು ಸತುಗಳ ಗಣಿಗಾರಿಕೆಯು ವ್ಯಾಪಕವಾಗಿ ನಡೆಯುತ್ತಿರುವ ದೇಶ. ಗಣಿಗಾರಿಕೆಯ ಎಂಜಿನಿಯರುಗಳಿಗೆ ತರಬೇತಿ ಕೊಡುವ ಸ್ಥಳ ಬರ್ಮಾ ಒಂದೇ. ಆದ್ದರಿಂದ ಬರ್ಮೀಯ ನಿರಾಶ್ರಿತರಿಗೆ ವೃತ್ತಿ ಕಲ್ಪಿಸುವ ಉದ್ದೇಶದಿಂದ ಬಳಕೆ ಶಾಖೆಯನ್ನು ತೆರೆಯಲಾಗುತ್ತದೆ ಎಂದು ಹೇಳುವುದಕ್ಕಿಂತ, ಬರ್ಮೀಯ ನಿರಾಶ್ರಿತರ ಸೇವೆಯನ್ನು ಬಳಸಿಕೊಳ್ಳುತ್ತಿರುವುದರಿಂದ ಈ ಯೋಜನೆಯನ್ನು ಕೈಗೊಳ್ಳುವುದು ಸಾಧ್ಯವಾಗಿದೆ ಎಂದು ಹೇಳುವುದು ಸರಿಯಾದ ವ್ಯಾಖ್ಯಾನವಾಗಬಹುದು. ಇದು ಭಾರತದ ಯುದ್ಧ ಪ್ರಯತ್ನದ ಒಂದು ಅಂಶಮಾತ್ರವಾಗಿ ಉಳಿಯದೆ, ಭಾರತದ ಭವಿಷ್ಯಕ್ಕೆ ಅತ್ಯುತ್ತಮವಾದ ಕಾರ್ಯಕ್ರಮವಾಗಿ ನಿಲ್ಲುತ್ತದೆ ಎನ್ನುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಮಾನ್ಯರೆ, ಇನ್ನು ತಿದ್ದುಪಡಿಗಳ ಪ್ರಶ್ನೆಗೆ ಬಂದರೆ, ಈ ತಿದ್ದುಪಡಿಗಳು ಬಂದದ್ದರಿಂದ ನನಗೆ ತುಂಬಾ ಸಂತೋಷವಾಗಿದೆ ಎಂದು ಮೊದಲಿಗೆ ಹೇಳಬೇಕು. ಬಳಕೆ ಶಾಖೆಯನ್ನು ಕುರಿತು ನಾನು ಕೊಟ್ಟಿರುವ ನಿರೂಪಣೆ ಎಷ್ಟರಮಟ್ಟಿಗೆ ಒಪ್ಪಿಗೆಯಾಗಿದೆಯೆಂದರೆ, ತೆಗಳಬಂದವರು ಹೊಗಳಲು ನಿಂತಿದ್ದಾರೆ. ಆದರೆ ದೇವಾಲಯ ತುಂಬ ಚಿಕ್ಕದು. ಆರಾಧಕರ ಉತ್ಸಾಹವನ್ನು ಸ್ವಾಗತಿಸುತ್ತೇನೆಯಾದರೂ, ಉಸಿರಾಡಲೂ ಸ್ಥಳವಿಲ್ಲದಷ್ಟು ಮಟ್ಟಿಗೆ ಈ ಪುಟ್ಟ ದೇವಾಲಯವು ಗಿಜಿಗುಟ್ಟುವುದಕ್ಕೆ ಬಿಡಲಾರೆ. ಕ್ಷಮಿಸಬೇಕು, ತಿದ್ದುಪಡಿಗಳನ್ನು ಒಪ್ಪಲು ಸಾಧ್ಯವಿಲ್ಲ.

**ಸರ್ ಸಯ್ಯದ್ ರಜಾ ಅಲಿ (ಯುನೈಟೆಡ್ ಪ್ರಾವಿನ್ಸ್‌ಸ್ ನಗರಗಳು** – ಮಹಮದೀಯ – ನಗರ) : ಅವರಿಗೆ ದೇವಾಲಯ ಪ್ರವೇಶವನ್ನೂ ನಿರಾಕರಿಸುವಿರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ಷಮಿಸಬೇಕು. ನಾನು ಈ ತಿದ್ದುಪಡಿಗಳನ್ನು ವಿರೋಧಿಸಲೇಬೇಕಾಗಿದೆ. ಈ ನೀತಿಯನ್ನು ರೂಪಿಸಿದ್ದಕ್ಕೆ ನಿಜವಾಗಿ ಕಾರಣಗಳೇನು ಎಂಬುದನ್ನು ನಾನು ಸದನಕ್ಕೆ ಹೇಳುತ್ತೇನೆ. ಈ ತಿದ್ದುಪಡಿಗಳನ್ನು ತಂದ ನನ್ನ ಮಾನ್ಯ ಮಿತ್ರರ ಗಮನವನ್ನು, ಈ ಸಮಿತಿಯು ಒಂದು ಕಾರ್ಯಕಾರಿ ಸಮಿತಿಯಲ್ಲ ಎಂಬುದರ ಕಡೆಗೆ ಸೆಳೆಯಬಯಸುತ್ತೇನೆ. ಈ ಸಮಿತಿಯು ಯಾವುದೇ ನಿರ್ಣಯ ಕೈಗೊಳ್ಳುವ ಸಮಿತಿಯಲ್ಲ. ಆದ್ದರಿಂದ ಈ ಸಮಿತಿಯಲ್ಲಿ ಏನೇ ಮಾಡಿದರೂ ಅದಕ್ಕೆ ಈ ಸದನವು ಯಾವ ರೀತಿಯಲ್ಲೂ ಬದ್ಧವಾಗುವುದಿಲ್ಲ. ಅದು ಶುದ್ಧಾಂಗವಾಗಿ ಒಂದು ಸಲಹಾ ಸಮಿತಿ. ಇದಕ್ಕಿಂತಲೂ ಮುಖ್ಯವಾದ ಕಾರಣವನ್ನು ಒದಗಿಸುವ ಅಂಶವೆಂದರೆ, ಸಮಿತಿಯ ಉದ್ದೇಶಕ್ಕೆ ಸಂಬಂಧಿಸಿದ್ದು. ಸಮಿತಿಯ ಉದ್ದೇಶ ವಾಣಿಜ್ಯ ಮತ್ತು ಉದ್ಯಮ ಎರಡರ ತಜ್ಞ ಪ್ರತಿನಿಧಿಗಳನ್ನು ಒಟ್ಟಿಗೆ ತರುವುದು. ಇದು ಈ ಸಮಿತಿಯ ಪ್ರಧಾನ ಉದ್ದೇಶ. ಇದನ್ನು ಸಾಧಿಸಲು ಅನುಕೂಲವಾಗುವ ಹಾಗೆ ಸಮಿತಿಯ ರಚನೆ ಆಗುತ್ತದೆನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಈಗ ಯೋಜಿಸಿರುವ ಹಾಗೆ ಸಮಿತಿಯಲ್ಲಿ ೧೬ ಜನ ಸದಸ್ಯರಿರುತ್ತಾರೆ. ಐದು ಜನ ಪರಿಣತರನ್ನೂ, ವಾಣಿಜ್ಯ ಹಾಗೂ ಉದ್ಯಮ ಕ್ಷೇತ್ರಗಳಿಂದ ತಲಾ ಐವರನ್ನೂ ಸೇರಿಸಿರುವುದನ್ನು ನೋಡಬಹುದು. ಮೊದಲು, ಜಿಯಾಲಾಜಿಕಲ್ ಸರ್ವೆಯ ನಿರ್ದೇಶಕರಿರುತ್ತಾರೆ. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯ ನಿರ್ದೇಶಕರಿರುತ್ತಾರೆ. ಗಣಿಗಾರಿಕೆ ಮತ್ತು ಲೋಹಶಾಸ್ತ್ರ ಸಂಸ್ಥೆಯ ಒಬ್ಬ ಪ್ರತಿನಿಧಿ, ಭಾರತೀಯ ಗಣಿ ಸಂಘದ ಓರ್ವ ಪ್ರತಿನಿಧಿ, ಭಾರತೀಯ ಒಕ್ಕೂಟದ ಓರ್ವ ಪ್ರತಿನಿಧಿ ಇರುತ್ತಾರೆ. ಇವರು ಸಮಿತಿಯ ತಜ್ಞರಾಗಿರುತ್ತಾರೆ. ವಾಣಿಜ್ಯ ಮತ್ತು ಕೈಗಾರಿಕೆಗಳ ಪ್ರತಿನಿಧಿಗಳಲ್ಲಿ ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್‌ಗೆ ಎರಡು ಸ್ಥಾನಗಳಿವೆ. ಉಕ್ಕು ಕೈಗಾರಿಕೆಗೆ ಎರಡು ಸ್ಥಾನಗಳು. ವಾಣಿಜ್ಯ ಇಲಾಖೆಯ

ಕಾರ್ಯದರ್ಶಿಯವರು ಈ ಸಮಿತಿಯಲ್ಲಿ ವಾಣಿಜ್ಯ ಇಲಾಖೆಯನ್ನು ಪ್ರತಿನಿಧಿಸುತ್ತಾರೆ. ಈ ಸಮಿತಿಯಲ್ಲಿ ತಜ್ಞರಿದ್ದು, ಅವರು ಕೈಗಾರಿಕೋದ್ಯಮಿಗಳಿಗೂ ವಾಣಿಜ್ಯೋದ್ಯಮಿಗಳಿಗೂ ಯಾವ ಖನಿಜಗಳನ್ನು ತಾವು ಸ್ಥಿರಪಡಿಸಬಲ್ಲೆವು ಎಂದು ಹೇಳುತ್ತಾರೆ. ವಾಣಿಜ್ಯ ಮತ್ತು ಕೈಗಾರಿಕಾ ಪ್ರತಿನಿಧಿಗಳು ಎಷ್ಟರಮಟ್ಟಿಗೆ ಲಾಭಕರವಾಗಿ ಅವುಗಳನ್ನು ಬಳಸಿಕೊಳ್ಳಬಹುದು ಎನ್ನುವುದನ್ನು ತಿಳಿಸುತ್ತಾರೆ.

ಮಾನ್ಯರೆ, ಈ ಸಮಿತಿಯ ಮುಖ್ಯ ಉದ್ದೇಶ ಹೀಗಿದೆ ಎನ್ನುವುದನ್ನು ಸದನವು ಅರ್ಥ ಮಾಡಿಕೊಂಡ ಪಕ್ಷದಲ್ಲಿ ದೇಶದ ಸಾಮಾನ್ಯ ಅಭಿಪ್ರಾಯಕ್ಕೆ ದನಿಗೊಡಲು ಇಲ್ಲಿ ಅವಕಾಶ ಉಳಿದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

**ಡಾ॥ ಪಿ.ಎನ್. ಬ್ಯಾನರ್ಜಿ (ಕಲ್ಕತ್ತಾ ಬಡಾವಣೆಗಳು** – ಮಹಮದೀಯೇತರ – ನಗರ) : ಜನಸಾಮಾನ್ಯರ ಪ್ರತಿನಿಧಿಗಳು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಜನಸಾಮಾನ್ಯರ ಪ್ರತಿನಿಧಿಗಳು. ನಾನು ಉಲ್ಲೇಖಿಸಬಯಸುವ ಮುಂದಿನ ಅಂಶ ಈ ಸಮಿತಿಯು ಈಗಾಗಲೇ ಸಾಕಷ್ಟು ದೊಡ್ಡ ಗಾತ್ರದ್ದಾಗಿದೆ ಎನ್ನುವುದು. ಈಗ ಯೋಜಿಸಿರುವಂತೆ ಅದರಲ್ಲಿ ೧೪ ಜನ ಸದಸ್ಯರಿದ್ದಾರೆ. ತಿದ್ದುಪಡಿಯು ಸೂಚಿಸುವ ನಾಲ್ಕು ಸ್ಥಾನಗಳನ್ನು ಒಪ್ಪಿಕೊಂಡ ಪಕ್ಷದಲ್ಲಿ ಸಮಿತಿಯ ಸದಸ್ಯಬಲ ೧೮ ಆಗುತ್ತದೆ. ಈ ಸದನದ ನಾಲ್ಕು ಜನರಿಗೆ ಅವಕಾಶ ಕೊಟ್ಟರೆ, ಮೇಲ್ಮನೆಯು ಖಂಡಿತವಾಗಿ ಮೂರು ಸ್ಥಾನಗಳನ್ನಾದರೂ ಕೇಳುತ್ತದೆ. ಅದರರ್ಥ ಸಮಿತಿಯಲ್ಲಿ ೨೧ ಜನರಿದ್ದರೆ ಉದ್ದೇಶಿತ ಕಾರ್ಯವನ್ನು ಮಾಡಲು ಸಾಧ್ಯವೇ ಇಲ್ಲದಷ್ಟು ದೊಡ್ಡದಾಗಿ ಪರಿಣಮಿಸುತ್ತದೆ ಎಂಬುದನ್ನು ತಾವು ಒಪ್ಪುವಿರಿ ಎಂದು ಭಾವಿಸುತ್ತೇನೆ.

ಸದನದ ಗಮನ ಸೆಳೆಯಬೇಕಾಗಿರುವ ಮುಂದಿನ ಅಂಶ ಇದು. ಸಮಿತಿಯ ನಿಯಮಾವಳಿಯು ಲೇಬರ್ ಸದಸ್ಯರು ನಾಲ್ಕು ಜನ ಸದಸ್ಯರನ್ನು ನಾಮಕರಣ ಮಾಡಲು ಅವಕಾಶ ಕೊಟ್ಟಿದೆ. ಈ ನಾಮಕರಣಾಧಿಕಾರವನ್ನು ಬಳಸದೆಯೇ ಸದನದ ಓರ್ವ ಸದಸ್ಯರನ್ನು ಸಮಿತಿಗೆ ನಾಮಕರಣ ಮಾಡಲು ಅವಕಾಶ ಇದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ, ಮಾನ್ಯರೆ, ಇದುವರೆಗೆ ಸದನದ ಮುಂದಿರಿಸಿರುವ ಅಂಶಗಳ ಬೆಳಕಿನಲ್ಲಿ ಈ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ.

## ೭

## ಭಾರತೀಯ ಕಾರ್ಮಿಕ ವರ್ಗವು ಯುದ್ಧವನ್ನು ಗೆಲ್ಲಲೇಬೇಕೆಂದು ಏಕೆ ನಿರ್ಧರಿಸಿದೆ? *

(ಅಖಿಲ ಭಾರತ ಆಕಾಶವಾಣಿಯ ಮುಂಬಯಿ ಕೇಂದ್ರದಿಂದ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಪ್ರಸಾರ ಮಾಡಿದ ಭಾಷಣ).

"ಪ್ರಸ್ತುತ ಯುದ್ಧವು ನೂತನ ನಾಝೀ ವ್ಯವಸ್ಥೆಯ ವಿರುದ್ಧದ ಯುದ್ಧವಾದ ಪಕ್ಷದಲ್ಲಿ ಇದು ಹಳೆಯ ವ್ಯವಸ್ಥೆ ವಿರುದ್ಧವಾದ ಯುದ್ಧವಲ್ಲ ಎನ್ನುವುದು ಕಾರ್ಮಿಕ ವರ್ಗಕ್ಕೆ ತಿಳಿದಿದೆ. ಇದು ಹಳೆಯ

* ಇಂಡಿಯನ್ ಇನ್‌ಫರ್ಮೇಷನ್, ಜನವರಿ ೧, ೧೯೪೩, ಪು. ೧೬–೧೯.

ವ್ಯವಸ್ಥೆ ಹಾಗೂ ಹೊಸ ನಾಝೀ ವ್ಯವಸ್ಥೆ ಎರಡರ ಎದುರಿಗೂ ಹೋರಾಡುತ್ತಿರುವ ಯುದ್ಧ. ಈ ಯುದ್ಧಕ್ಕೆ ತೆರುವ ಬೆಲೆಗೆ ತಕ್ಕ ಏಕೈಕ ಪರಿಹಾರವೆಂದರೆ ಸ್ವಾತಂತ್ರ್ಯ, ಸಮಾನತೆ, ಸೋದರತ್ವಗಳು ಕೇವಲ ಘೋಷಣೆಗಳಾಗಿರದೆ ಬದುಕಿನ ಅಂಶಗಳಾಗುವಂತಹ ನೂತನ ವ್ಯವಸ್ಥೆಯೊಂದರ ಸ್ಥಾಪನೆ ಎಂಬುದೂ ಅವರಿಗೆ ಗೊತ್ತು" ಎಂದರು ಡಾ॥ ಬಿ.ಆರ್. ಅಂಬೇಡ್ಕರ್. ಭಾರತ ಸರಕಾರದ ಲೇಬರ್ ಸದಸ್ಯರಾಗಿ ಅವರು ಆಲ್ ಇಂಡಿಯಾ ರೇಡಿಯೋದ ಮುಂಬಯಿ ಕೇಂದ್ರದಿಂದ 'ಭಾರತೀಯ ಕಾರ್ಮಿಕ ವರ್ಗವು ಯುದ್ಧವನ್ನು ಗೆಲ್ಲಲೇಬೇಕೆಂದು ಏಕೆ ನಿರ್ಧರಿಸಿದೆ' ಎಂಬ ವಿಷಯವಾಗಿ ಪ್ರಸಾರ ಭಾಷಣ ಮಾಡಿದರು.

ಡಾ॥ ಅಂಬೇಡ್ಕರ್ ಅವರ ಭಾಷಣದ ಪೂರ್ಣಪಾಠ ಇಲ್ಲಿದೆ:

"ಕಾರ್ಮಿಕರಲ್ಲಿ ಆಸಕ್ತಿಯಿರುವ, ಅವರೊಂದಿಗೆ ಸಂಪರ್ಕವಿರುವ ವ್ಯಕ್ತಿಗಳಿಂದ ಉಪನ್ಯಾಸಗಳ ಒಂದು ಸರಣಿಯು ಪ್ರಸಾರವಾಗಲಿದೆ. ನನ್ನ ಉಪನ್ಯಾಸ ಈ ಮಾಲೆಯಲ್ಲಿ ಮೊದಲಿನದು. ನನ್ನ ಭಾಷಣದ ವಸ್ತು ಸಾಮಾನ್ಯ ಸ್ವರೂಪದ್ದು. ಇದು ಒಂದು ರೀತಿಯಲ್ಲಿ ಇಡೀ ಸರಣಿಗೆ ಪೀಠಿಕೆಯಾಗಿರುತ್ತದೆ. ನಾನು ಈ ಭಾಷಣಕ್ಕೆ ಆರಿಸಿರುವ ಶೀರ್ಷಿಕೆ 'ಭಾರತೀಯ ಕಾರ್ಮಿಕ ವರ್ಗವು ಯುದ್ಧವನ್ನು ಗೆಲ್ಲಲೇಬೇಕೆಂದು ಏಕೆ ನಿರ್ಧರಿಸಿದೆ' ಎಂದು. ಎಲ್ಲರ ಗಮನವನ್ನೂ ಹಿಡಿದಿಡುವ ಒಂದು ಅಂಶ ಇಲ್ಲಿದೆ. ಅದು ಯುದ್ಧವನ್ನು ಕುರಿತು ಭಾರತೀಯ ಕಾರ್ಮಿಕ ವರ್ಗದ ಮನೋಭಾವ ಎಂಥದಿದೆ ಎಂಬುದಕ್ಕೆ ಸಂಬಂಧಿಸಿದೆ. ಈಗ ನಾವು ಭಾರತದಲ್ಲಿ ಇದ್ದಕ್ಕಿದ್ದಂತೆ ಯುದ್ಧದ ಪ್ರಯತ್ನಕ್ಕೆ ಅಸಹಕಾರವನ್ನೂ ವಿರೋಧವನ್ನೂ ನೋಡುತ್ತಿದ್ದೇವೆ. ಇದರ ನಡುವೆ ಕಾರ್ಮಿಕ ವರ್ಗವು ಮಾತ್ರ ಯುದ್ಧಕ್ಕೆ ಸಕ್ರಿಯವಾಗಿ ಸಹಕರಿಸುತ್ತಿದೆ. ಈ ವಿಷಯದಲ್ಲಿ ಅನುಮಾನವೇ ಇಲ್ಲ. ಹಾಗೆ ಮಾಡದಂತೆ ಒಲಿಸುವ ಪ್ರಯತ್ನಗಳು ನಿರಂತರವಾಗಿ ನಡೆದಿದ್ದರೂ ಕಾರ್ಮಿಕರು ದೃಢನಿರ್ಧಾರ ಮಾಡಿ ನಿಂತಿದ್ದಾರೆ.

**ಕಾರ್ಮಿಕರಿಗೆ ಏನು ಬೇಕು ?**

"ಯುದ್ಧದ ಸಮಯದಲ್ಲಿ ಕಾರ್ಮಿಕರು ಬೇಕಾದಷ್ಟು ಪ್ರಯೋಜನ ಪಡೆದಿದ್ದಾರೆ, ಇನ್ನೂ ಪಡೆಯಲಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಈಚೆಗೆ ನಾನು ತೋರಿಸಕೊಟ್ಟ ಹಾಗೆ, ಕಾರ್ಮಿಕರಿಗೆ ಶಾಸನಬದ್ಧ ರಕ್ಷಣೆ ದೊರಕಿದೆ. ಸುರಕ್ಷೆ, ಕಾಳಜಿ, ಹಿತರಕ್ಷಣೆಗಳ ಹಕ್ಕು ಅವರಿಗೆ ದೊರಕಿದೆ. ಕೇಂದ್ರ ಸರಕಾರವು ಉದ್ಯಮಪತಿಗಳ ಮೇಲೆ ಈ ನಿಯಮಗಳನ್ನು ಹೊರಿಸಿ ಕಾರ್ಮಿಕವರ್ಗವು ಕ್ಷೇಮವಾಗಿ ಇರುವಂತೆ ನೋಡಿಕೊಂಡಿದೆ. ಆದರೆ ಕಾರ್ಮಿಕ ವರ್ಗವು ಯುದ್ಧ ಪ್ರಯತ್ನವನ್ನು ಚುರುಕುಗೊಳಿಸಲು ತನ್ನಿಂದ ಸಾಧ್ಯವಾದುದನ್ನೆಲ್ಲ ಮಾಡುವುದಾಗಿ ನಿರ್ಧರಿಸಿದ್ದರೆ ಅದು ಕೇವಲ ಈ ಸದ್ಯದ ಪ್ರಯೋಜನಗಳ ಅಲಕ್ಷ್ಯದಿಂದಲ್ಲ. ಈ ನಿರ್ಧಾರಕ್ಕೆ ಆಧಾರವಾಗಿ ಇನ್ನೂ ಬೇರೆ ಬಲವಾದ ಕಾರಣಗಳಿವೆ. ಕೇವಲ ಕೆಲಸದ ವಾತಾವರಣವು ಉತ್ತಮವಾಗುವುದಷ್ಟರಿಂದ ಕಾರ್ಮಿಕರು ತೃಪ್ತರಾಗುವುದಿಲ್ಲ. ಅವರಿಗೆ ಬೇಕಾದದ್ದು ಉತ್ತಮ ಬದುಕು. ಕಾರ್ಮಿಕರು ಉತ್ತಮ ಜೀವನ ಪರಿಸ್ಥಿತಿ ಎಂದರೆ ಏನು ಅರ್ಥ ಇಟ್ಟುಕೊಂಡಿದ್ದಾರೆ ಎಂಬುದನ್ನು ವಿವರಿಸುತ್ತೇನೆ.

**ಸ್ವಾತಂತ್ರ್ಯ, ಸಮಾನತೆ, ಸೋದರತ್ವ**

"ಕಾರ್ಮಿಕರಿಗೆ ಸ್ವಾತಂತ್ರ್ಯ ಬೇಕು. ಬಹುಶಃ ಇದರಲ್ಲಿ ಹೊಸದೇನೂ ಇಲ್ಲ. ಹೊಸದಾಗಿರುವುದು ಸ್ವಾತಂತ್ರ್ಯವನ್ನು ಕುರಿತು ಕಾರ್ಮಿಕರ ಕಲ್ಪನೆ. ಸ್ವಾತಂತ್ರ್ಯ ಎಂದರೆ ಸಂಯಮದ ಅಭಾವ ಎಂಬ ನೇತ್ಯಾತ್ಮಕ

ಭಾವನೆಯನ್ನು ಅವರು ತಳೆದಿಲ್ಲ. ಅಥವಾ ಜನರಿಗೆ ಮತ ನೀಡುವ ಅಧಿಕಾರ ಎಂದು ಅದನ್ನು ಸೀಮಿತಗೊಳಿಸುವುದೂ ಇಲ್ಲ. ಕಾರ್ಮಿಕರ ಸ್ವಾತಂತ್ರ್ಯದ ಕಲ್ಪನೆ ತುಂಬಾ ಇತ್ಯಾತ್ಮಕವಾದದ್ದು. ಅದು ಜನತೆಯ ಸರಕಾರದ ಕಲ್ಪನೆಯನ್ನು ಒಳಗೊಳ್ಳುತ್ತದೆ. ಕಾರ್ಮಿಕರ ಅಭಿಪ್ರಾಯದಲ್ಲಿ ಪ್ರಜಾ ಸರ್ಕಾರವೆಂದರೆ ಸಂಸದೀಯ ಪ್ರಜಾಪ್ರಭುತ್ವ ಅಲ್ಲ.

"ಸಂಸದೀಯ ಪ್ರಜಾಪ್ರಭುತ್ವ ಸರಕಾರ ಎಂದರೆ ಜನರ ಕೆಲಸ ತಮ್ಮ ಮುಖಂಡರಿಗೆ ವೋಟುಕೊಟ್ಟು ಅವರು ತಮ್ಮನ್ನು ಆಳುವಂತೆ ನೋಡಿಕೊಳ್ಳುವುದಾಗಿ ಪರಿಣಮಿಸಿದೆ. ಇಂತಹ ಸರಕಾರದ ವ್ಯವಸ್ಥೆ, ಕಾರ್ಮಿಕರ ಅಭಿಪ್ರಾಯದಲ್ಲಿ ಒಂದು ವೈಪರೀತ್ಯ. ಕಾರ್ಮಿಕರು ಬಯಸುವುದು ಜನತೆಯ ಸರಕಾರವನ್ನು. ಹೆಸರಿನಲ್ಲೂ ಮತ್ತು ವಾಸ್ತವಿಕವಾಗಿಯೂ. ಎರಡನೆಯದಾಗಿ, ಕಾರ್ಮಿಕರು ಕಲ್ಪಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಸಮಾನ ಅವಕಾಶದ ಹಕ್ಕು ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಅಗತ್ಯಕ್ಕೆ ತಕ್ಕಂತೆ ಬೆಳೆಯಲು ಪೂರ್ಣ ಸೌಕರ್ಯಗಳನ್ನು ಸರಕಾರವು ಒದಗಿಸುತ್ತದೆ.

"ಕಾರ್ಮಿಕರಿಗೆ ಸಮಾನತೆ ಬೇಕು. ಇಲ್ಲಿ ಸಮಾನತೆಯೆಂದರೆ, ನ್ಯಾಯಾಂಗದಲ್ಲಿ, ಪೌರಸೇವೆಯಲ್ಲಿ, ಸೇನೆಯಲ್ಲಿ, ತೆರಿಗೆಯಲ್ಲಿ, ವಾಣಿಜ್ಯದಲ್ಲಿ, ಕೈಗಾರಿಕೆಯಲ್ಲಿ ಎಲ್ಲ ಕಡೆಯೂ ವಿಶೇಷ ಸೌಲಭ್ಯಗಳನ್ನು ರದ್ದುಪಡಿಸುವುದು. ಅಸಮಾನತೆಗೆ ದಾರಿ ಮಾಡಿಕೊಡುವ ಎಲ್ಲಾ ಪ್ರಕ್ರಿಯೆಗಳನ್ನೂ ತೊಡೆದುಹಾಕುವುದು.

"ಕಾರ್ಮಿಕರು ಸೋದರತ್ವವನ್ನು ಬಯಸುತ್ತಾರೆ. ಅದರ ಅರ್ಥ ಮಾನವೀಯ ಸೋದರತ್ವದ ಸರ್ವವ್ಯಾಪಿ ಭಾವನೆ. ಎಲ್ಲಾ ರಾಷ್ಟ್ರಗಳನ್ನೂ, ಎಲ್ಲಾ ವರ್ಗಗಳನ್ನೂ ಒಗ್ಗೂಡಿಸಿ, 'ಭೂಮಿಯ ಮೇಲೆ ಶಾಂತಿ, ಮಾನವ ವರ್ಗದ ಎಲ್ಲರ ಬಗೆಗೆ ಸದ್ಭಾವ' ಎಂಬ ಧ್ಯೇಯವನ್ನಿಟ್ಟುಕೊಳ್ಳುವುದು.

**ನಾಝಿ ನೂತನ ವ್ಯವಸ್ಥೆ**

"ಮೇಲೆ ಹೇಳಿರುವುದು ಕಾರ್ಮಿಕರ ಆದರ್ಶಗಳು. ಇವು ಒಂದು ನೂತನ ವ್ಯವಸ್ಥೆಯನ್ನು ಹೇಳುತ್ತವೆ. ಮಾನವ ಜನಾಂಗವು ನಾಶವಾಗದಿರಬೇಕಾದರೆ ಇವನ್ನು ಸ್ಥಾಪಿಸಬೇಕು. ಮಿತ್ರ ರಾಷ್ಟ್ರಗಳು ಯುದ್ಧದಲ್ಲಿ ಸೋತರೆ ಈ ನೂತನ ವ್ಯವಸ್ಥೆಯನ್ನು ಸ್ಥಾಪಿಸಲು ಸಾಧ್ಯವೇನು? ಅತಿ ಮಹತ್ವದ ಪ್ರಶ್ನೆ ಇದು. ಈ ಪ್ರಶ್ನೆಯನ್ನು ಎದುರಿಸದಿರುವುದಾಗಲೀ ಅಥವಾ ಅದಕ್ಕೆ ಉತ್ತರವನ್ನು ಹುಡುಕುವುದರಿಂದ ಹಿಂಜರಿಯುವುದಾಗಲೀ ಅನರ್ಥಕ್ಕೆ ಆಹ್ವಾನ ಕೊಟ್ಟಂತಾಗುವುದು ಎಂಬುದನ್ನು ಅವರು ಬಲ್ಲರು. ಸೋಮಾರಿಯಾಗಿ ಕುಳಿತುಕೊಳ್ಳುವುದರಿಂದ ಅಥವಾ ಹೋರಾಡಲು ನಿರಾಕರಿಸುವುದರಿಂದ ಈ ನೂತನ ವ್ಯವಸ್ಥೆಯ ಸ್ಥಾಪನೆ ಸಾಧ್ಯವೇನು? ಮಿತ್ರ ರಾಷ್ಟ್ರಗಳ ವಿಜಯವೊಂದೇ ತಮ್ಮ ಕನಸಾದ ಈ ನೂತನ ವ್ಯವಸ್ಥೆಯ ಸ್ಥಾಪನೆಗೆ ಇರುವ ಏಕೈಕ ಭರವಸೆ ಎಂದು ಕಾರ್ಮಿಕರು ನಂಬುತ್ತಾರೆ. ಮಿತ್ರ ರಾಷ್ಟ್ರಗಳು ಪರಾಭವಗೊಂಡರೂ ಒಂದು ನೂತನ ವ್ಯವಸ್ಥೆ ಬರುತ್ತದೆ. ಆದರೆ ಅದು ನಾಝಿ ವ್ಯವಸ್ಥೆಯಲ್ಲದೆ ಬೇರೆಯಲ್ಲ. ಸ್ವಾತಂತ್ರ್ಯವನ್ನು ತುಳಿವ, ಸಮಾನತೆಯನ್ನು ವಂಚಿಸುವ, ಸೋದರಿಕೆಯನ್ನು ಹಾನಿಕರ ಸಿದ್ಧಾಂತವೆಂದು ಹೊರಗಟ್ಟುವ ವ್ಯವಸ್ಥೆಯಾಗಿರುತ್ತದೆ.

"ನೂತನ ನಾಝಿ ವ್ಯವಸ್ಥೆಯೆಂದರೆ ಇದಿಷ್ಟೇ ಅಲ್ಲ. ಪ್ರತಿಯೊಬ್ಬ ಭಾರತೀಯನೂ ಅದರ ಅಪಾಯಗಳನ್ನು ಕುರಿತು ತೀವ್ರವಾಗಿ ಆಲೋಚನೆ ಮಾಡಬೇಕು, ಅವನ ಧರ್ಮ ಯಾವುದೇ ಇರಲಿ, ಜಾತಿ, ರಾಜಕೀಯ ನಿಲವು ಏನೇ ಇರಲಿ. ಅತ್ಯಂತ ಮುಖ್ಯವಾದ ವಿಷಯವೆಂದರೆ, ಜನಾಂಗಿಕ ವರ್ಗೀಕರಣವನ್ನು ಅದು ನಂಬುವುದು ಮತ್ತು ಆಚರಿಸುವುದು. ಇದೇ ನಾಝಿ ವ್ಯವಸ್ಥೆಯ ಪ್ರಧಾನ ಸೂತ್ರ. ನಾಝಿಗಳು ಜರ್ಮನ್

ಜನಾಂಗವು ಅತಿಮಾನವ ಜನಾಂಗವೆಂದು ಗೌರವಿಸುತ್ತಾರೆ. ಇತರ ಬಿಳಿಯ ಜನಾಂಗಗಳನ್ನು ಅದಕ್ಕಿಂತ ಕೆಳಗಿನ ಸ್ಥಾನದಲ್ಲಿ ಇರಿಸುತ್ತಾರೆ. ಆದರೆ ಕಂದು ಬಣ್ಣದ ಜನರನ್ನು ಭಾರತೀಯರನ್ನು ಈ ವರ್ಗಕ್ಕೆ ಸೇರಿಸಲಾಗುತ್ತದೆ – ಶ್ರೇಣಿಯಲ್ಲಿ ಕೊಟ್ಟಕೊನೆಯ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ – ಇದೇ ಸಾಕಷ್ಟು ಅಪಮಾನಕರವಾಗಿದ್ದರೂ, ಅದಷ್ಟು ಸಾಲದೆಂದು ಕಂದು ಜನರು ಜರ್ಮನರ ಮತ್ತು ಬಿಳಿಯ ಜನಾಂಗಗಳ ಜೀತದಾಳುಗಳಾಗಿರತಕ್ಕದ್ದು ಎಂದು ನಿರ್ಣಯಿಸಿದ್ದಾರೆ. ಅವರಿಗೆ ಶಿಕ್ಷಣ ಬೇಡ, ರಾಜಕೀಯವೇ ಆಗಲಿ, ಆರ್ಥಿಕ ಸ್ವಾತಂತ್ರ್ಯವನ್ನೂ ಒಳಗೊಂಡಂತೆ, ಯಾವುದೇ ಸ್ವಾತಂತ್ರ್ಯ ಬೇಡ.

**'ನೇರವಾದ ಗಂಡಾಂತರ'**

"'ಮೇನ್ ಕೆಂಫ್' (Mein Kemf) ಕೃತಿಯಲ್ಲಿ ಹಿಟ್ಲರನು ಭಾರತೀಯರಿಗೆ ಶಿಕ್ಷಣವನ್ನೂ ರಾಜಕೀಯ ಸ್ವಾತಂತ್ರ್ಯವನ್ನೂ ಕೊಟ್ಟಿರುವುದಕ್ಕಾಗಿ ಬ್ರಿಟಿಷ್ ಸರಕಾರವನ್ನು ಎಷ್ಟು ತೀವ್ರವಾಗಿ ಖಂಡಿಸುತ್ತಾನೆ ಎಂಬುದು ಪ್ರಸಿದ್ಧವೇ ಆಗಿದೆ. ನಾಝೀ ತತ್ವವು ಭಾರತೀಯರ ಸ್ವಾತಂತ್ರ್ಯಕ್ಕೆ ಒಡ್ಡಿದ ನೇರ ಗಂಡಾಂತರವಾಗಿದೆ.

"ಈ ಕಾರಣದಿಂದ ಭಾರತೀಯರು ನಾಝಿಸಂ ವಿರುದ್ಧವಾಗಿ ಶಕ್ತಿಮೀರಿ ಹೋರಾಡಲು ಮುಂದೆ ಬರಬೇಕು. ನಾಝಿ ವ್ಯವಸ್ಥೆಯೊಂದಿಗೆ, ಕಾರ್ಮಿಕ ವರ್ಗವು ಮನಸ್ಸಿನಲ್ಲಿಟ್ಟುಕೊಂಡಿರುವ ನೂತನ ವ್ಯವಸ್ಥೆಯನ್ನು ಹೋಲಿಸಿದವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ – ನಾಝಿಸಂ ಅನ್ನು ಸೋಲಿಸಿ ನಾಶಪಡಿಸಬೇಕಾದರೆ ವಿವೇಕಯುತರಾದವರು ತೆಗೆದುಕೊಳ್ಳಬಹುದಾದ ಏಕೈಕ ನಿಲವು ಮತ್ತು ತೀರ್ಮಾನ ಎಂದರೆ ಮಿತ್ರ ರಾಷ್ಟ್ರಗಳ ಪರವಾಗಿ ಹೋರಾಡುವುದು. ಆದರೆ ಈ ದೃಷ್ಟಿಯನ್ನು ಒಪ್ಪಲು ನಿರಾಕರಿಸುವ ಜನರು ಇದ್ದಾರೆ.

"ನಾಝಿಗಳು ಜಯಗಳಿಸಿ, ಹೊಸ ನಾಝಿ ವ್ಯವಸ್ಥೆ ಬಂದರೆ ಬರಲಿ ಎಂದು ಆಲೋಚಿಸುವ ಕೆಲವರಿದ್ದಾರೆ. ಅದೃಷ್ಟವಶಾತ್ ಇಂಥವರು ಭಾರತದಲ್ಲಿ ಹೆಚ್ಚು ಜನರಿಲ್ಲ. ಅಲ್ಲದೆ ಈ ದೃಷ್ಟಿ ತಳೆದಿರುವ ಕೆಲವರೂ ನಿಜವಾಗಿ ಈ ವಿಷಯದಲ್ಲಿ ಗಂಭೀರವಾಗಿಲ್ಲ. ಯಾರೂ ಇವರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಅವರು ಕಹಿ ಉಂಡ ರಾಜಕಾರಣಿಗಳು, ಅವರಿಗೆ ತಮ್ಮ ಇಚ್ಛೆಯಂತೆಯೇ ಎಲ್ಲವೂ ನಡೆಯಬೇಕು. ಅವರ ಧ್ಯೇಯ 'ಎಲ್ಲವೂ ಬೇಕು ಅಥವಾ ಯಾವುದೂ ಬೇಡ' ಎನ್ನುವುದು.

"ಯುದ್ಧ ಮಾಡುವುದೇ ತಪ್ಪು ಎಂದು ವಾದಿಸುವ ಶಾಂತಿಪ್ರಿಯರಿದ್ದಾರೆ. ಇಂದು ಜಗತ್ತಿನಲ್ಲಿ ಕಂಡುಬರುವ ಎಲ್ಲಾ ಕಷ್ಟಗಳಿಗೆ ಕಷ್ಟದಿಂದ ಬೆಳೆಸಿದ ಮಾನವ ನಾಗರಿಕತೆಯನ್ನು ನಾಶಮಾಡಿರುವ, ವಿರೂಪಗೊಳಿಸಿರುವ ಯುದ್ಧಗಳೇ ಬಹುಮಟ್ಟಿಗೆ ಕಾರಣ ಎನ್ನುತ್ತಾರೆ ಇವರು. ಅದು ನಿಜ. ಇಷ್ಟೆಲ್ಲ ಇದ್ದರೂ ಕಾರ್ಮಿಕ ವರ್ಗವು ಶಾಂತಿವಾದವನ್ನು ಜೀವನ ತತ್ವವಾಗಿ ಒಪ್ಪಿಕೊಳ್ಳುವುದಿಲ್ಲ. ವೈರಿಯು ಆಕ್ರಮಣ ಮಾಡಿದಾಗ ಯುದ್ಧಮಾಡಲು ನಿರಾಕರಿಸುವುದರಿಂದ ಯುದ್ಧಗಳನ್ನು ಇಲ್ಲದಂತೆ ಮಾಡುವುದು ಸಾಧ್ಯವಿಲ್ಲ. ಹಿಂಸಾ ಶಕ್ತಿಗಳಿಗೆ ಶರಣಾಗತರಾಗುವುದರ ಮೂಲಕ ಗಳಿಸುವ ಶಾಂತಿಯು ಶಾಂತಿಯೇ ಅಲ್ಲ. ಅದು ಆತ್ಮಹತ್ಯೆ, ಅದಕ್ಕೆ ಯಾವುದೇ ಸಮರ್ಥನೆಯನ್ನು ಕಂಡು ಹಿಡಿಯುವುದು ಸಾಧ್ಯವಿಲ್ಲ. ಅದು ಉದಾತ್ತವಾದ ಸಮಸ್ತವನ್ನೂ, ಅರ್ಹ ಮಾನವ ಜೀವನವನ್ನು ಬಾಳಲು ಅಗತ್ಯವಾದ ಸಮಸ್ತವನ್ನೂ ಕ್ರೌರ್ಯ ಮತ್ತು ಅನಾಗರಿಕತೆಯ ಶಕ್ತಿಗಳಿಗೆ ಬಲಿಕೊಟ್ಟು ಹಾಳಾಗುತ್ತದೆ.

"ಯುದ್ಧ ಇಲ್ಲದಂತೆ ಮಾಡಲು ಕಾರ್ಮಿಕರು ಹಿಡಿಯುವ ದಾರಿ ಶರಣಾಗತಿಯಲ್ಲ. ಕಾರ್ಮಿಕ ವರ್ಗದ ದೃಷ್ಟಿಯಲ್ಲಿ ಎರಡು ಸ್ಥಿತಿಗಳು ಮಾತ್ರ ಯುದ್ಧವನ್ನು ಇಲ್ಲವಾಗಿಸುತ್ತವೆ. ಒಂದು, ಯುದ್ಧದಲ್ಲಿ ಗೆಲ್ಲುವುದು; ಇನ್ನೊಂದು, ನ್ಯಾಯಯುತ ಶಾಂತಿಯನ್ನು ನೆಲೆಗೊಳಿಸುವುದು. ಕಾರ್ಮಿಕರ ದೃಷ್ಟಿಯಿಂದ

ಎರಡೂ ಸಮಾನವಾಗಿ ಮುಖ್ಯ. ಯುದ್ಧದ ಮೂಲವಿರುವುದು ಮನುಷ್ಯನ ರಕ್ತದಾಹದಲ್ಲಲ್ಲ ಎಂದು ಕಾರ್ಮಿಕರು ಹೇಳುತ್ತಾರೆ. ವಿಜೇತರು ಅಧೀನರ ಮೇಲೆ ಹೇರಿದ ನಿಷ್ಪ್ರಯೋಜಕ ಶಾಂತಿಯಲ್ಲಿ ಯುದ್ಧದ ನಿಜವನ್ನು ಕಾಣಬಹುದು. ಯುದ್ಧ ನಡೆಯುತ್ತಿರುವಾಗ ಶಾಂತಿವಾದಿಯ ಕರ್ತವ್ಯ ಹಿಂಜರಿಯುವುದಾಗಲಿ, ಯುದ್ಧಮಾಡಲು ನಿರಾಕರಿಸುವುದಾಗಲಿ ಅಲ್ಲ. ಶಾಂತಿವಾದಿಯು ಯುದ್ಧ ನಡೆದಿರುವಾಗಲೂ ಶಾಂತಿ ಮಾತುಕತೆಗಳು ನಡೆದಿರುವಾಗಲೂ ಚುರುಕಾಗಿಯೂ ಸಕ್ರಿಯವಾಗಿಯೂ ಇರಬೇಕು. ಶಾಂತಿವಾದಿಯು ಸರಿಯಾದ ಸಮಯದಲ್ಲಿ ಸರಿಯಾದ ಕೆಲಸ ಮಾಡಲು ವಿಫಲನಾಗುತ್ತಾನೆ. ಯುದ್ಧವು ನಡೆಯುತ್ತಿರುವಾಗ ಇಲ್ಲಿಯ ಶಾಂತಿವಾದಿಗಳು ಯುದ್ಧದ ವಿರುದ್ಧವಾಗಿ ಸಕ್ರಿಯತೆ ತೋರಿಸುತ್ತಿದ್ದಾರೆ. ಯುದ್ಧ ಮುಗಿದು ಶಾಂತಿಯು ನೆಲೆಗೊಳ್ಳುತ್ತಿರುವಾಗ ಅವರು ಜಡತೆಯಿಂದ ಅಥವಾ ಅಲಕ್ಷ್ಯದಿಂದ ಇರುತ್ತಾರೆ. ಈ ರೀತಿಯಲ್ಲಿ ಶಾಂತಿವಾದಿಯು ಯುದ್ಧ ಮತ್ತು ಶಾಂತಿ ಎರಡರಲ್ಲೂ ವಿಫಲವಾಗುತ್ತಾನೆ. ಕಾರ್ಮಿಕರು ಈ ಯುದ್ಧದಲ್ಲಿ ಸಹಕರಿಸಬೇಕೆಂದು ಹೊರಟರೆ ಅದಕ್ಕೆ ಕಾರಣ ಅವರಿಗೆ ಯುದ್ಧನಿರ್ಮೂಲನಕ್ಕೆ ಶಾಂತಿ ಸರಿಯಾದ ದಾರಿ ಅನ್ನಿಸದಿರುವುದು.

## ಸ್ಮರಣೆಗೆ ಬಂದ ಫ್ರೆಂಚ್ ಮಹಾಕ್ರಾಂತಿ

"ವಿಜಯದ ಬೆನ್ನಲ್ಲೇ ನೂತನ ವ್ಯವಸ್ಥೆ ಬಂದುಬಿಡುತ್ತದೆ ಎನ್ನುವುದಕ್ಕೆ ಯಾವ ಭರವಸೆಯೂ ಇಲ್ಲ ಎನ್ನುವ ನಿರಾಶಾವಾದಿಗಳೂ ಇದ್ದಾರೆ. ಈ ಹತಾಶೆಯ ಭಾವನೆಗೆ ಅವಕಾಶ ಇದೆ ಎಂದು ತೋರುತ್ತದೆ. ಕಾರ್ಮಿಕರ ಆದರ್ಶವಾದ ನೂತನ ವ್ಯವಸ್ಥೆಯ ಬೇರುಗಳು, ಫ್ರೆಂಚ್ ಮಹಾಕ್ರಾಂತ್ರಿಯಲ್ಲಿವೆ. ಫ್ರೆಂಚ್ ಮಹಾಕ್ರಾಂತಿಯು ಎರಡು ತತ್ವಗಳ ಉದಯಕ್ಕೆ ಕಾರಣವಾಯಿತು. ಅವು ಸ್ವಯಮಾಡಳಿತ ತತ್ವ ಮತ್ತು ಸ್ವಯಂನಿರ್ಧಾರಣ ತತ್ವ. ಸ್ವಯಮಾಡಳಿತ ತತ್ವವು ಇತರರು ಅಂದರೆ, ಚಕ್ರವರ್ತಿಗಳು, ಸರ್ವಾಧಿಕಾರಿಗಳು ಅಥವ ವಿಶೇಷ ಸವಲತ್ತಿರುವ ವರ್ಗಗಳನ್ನು ತಮ್ಮನ್ನು ಆಳಲು ಬಿಡದೆ ತಾವೇ ಆಳಿಕೊಳ್ಳಬೇಕು ಎಂಬ ಜನಗಳ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತದೆ. ಅದನ್ನೇ 'ಪ್ರಜಾಪ್ರಭುತ್ವ' ಎನ್ನುವುದು.

"ಸಮಾನ ಆದರ್ಶ, ಸಮಾನ ಉದ್ದೇಶಗಳಿಂದ ಒಟ್ಟುಗೂಡಿರುವ ಒಂದು ಜನತೆಯು ಹೊರಗಿನ ಒತ್ತಾಯವಿಲ್ಲದೆ, ತನ್ನ ರಾಜಕೀಯ ನೆಲೆ–ಸ್ವಾತಂತ್ರ್ಯವೆ, ಸ್ವಾವಲಂಬನವೆ, ಜಗತ್ತಿನ ಇತರರೊಂದಿಗೆ ವಿಲೀನಗೊಳ್ಳುವುದೆ ಮೊದಲಾದ ವಿಷಯಗಳನ್ನು ತಾವೇ ನಿರ್ಧರಿಸಿಕೊಳ್ಳುವ ಅಪೇಕ್ಷೆಯೇ ಸ್ವಯಂ ನಿರ್ಧಾರಣ ತತ್ವ. ಇದನ್ನು ರಾಷ್ಟ್ರೀಯತೆ ಎಂದು ಕರೆಯುತ್ತಾರೆ. ಮಾನವ ಜನಾಂಗದ ಆಶೋತ್ತರವು ಈ ತತ್ವಗಳು ಫಲಪ್ರದವಾಗುವುದರ ಮೇಲೆ ಕೇಂದ್ರೀಕರಿಸಿತ್ತು. ದುರದೃಷ್ಟವಶಾತ್ ಸುಮಾರು ೧೫೦ ವರ್ಷಗಳಾದ ಮೇಲೆ ಕೂಡ ಈ ತತ್ವಗಳು ಇನ್ನೂ ಬೇರು ಬಿಟ್ಟಿಲ್ಲ. ಹಳೆಯ ವ್ಯವಸ್ಥೆಯೇ ಮುಂದುವರಿದಿದೆ– ಅದೇ ನಗ್ನಸ್ವರೂಪದಲ್ಲಿ ಇಲ್ಲವೆ, ಈ ಎರಡೂ ತತ್ವಗಳಿಗೆ ಅಲ್ಪಸ್ವಲ್ಪ ರಿಯಾಯಿತಿ ತೋರಿಸುವ ನಾಟಕ ಆಡಿ. ಕೆಲವು ದೇಶಗಳನ್ನು ಬಿಟ್ಟರೆ ಜಗತ್ತಿನಾದ್ಯಂತ ಎಲ್ಲಿಯೂ ಸ್ವಯಮಾಡಳಿತವಾಗಲಿ, ಸ್ವಯಂ ನಿರ್ಧಾರಣವಾಗಲಿ ಕಂಡುಬರುವುದಿಲ್ಲ. ಇದೆಲ್ಲ ಸತ್ಯ, ಸರಿ. ಆದರೆ ಇದು ಕಾರ್ಮಿಕ ವರ್ಗವು ತೆಗೆದುಕೊಂಡ ನಿಲವಿನ – ನೂತನ ವ್ಯವಸ್ಥೆಯ ಸ್ಥಾಪನೆಯ ಹಾದಿಯಲ್ಲಿ ಮೊದಲು ನಾಝಿಸಂ ಅನ್ನು ಜಯಿಸುವುದು ಎಂಬ ನಿಲವಿನ – ವಿರುದ್ಧದ ವಾದವಾಗುವುದಿಲ್ಲ. ಇದರ ಉದ್ದೇಶವೆಂದರೆ, ಕಾರ್ಮಿಕ ವರ್ಗವು ತುಂಬಾ ಜಾಗರೂಕರಾಗಿರಬೇಕು, ನಾಝಿಗಳ ಮೇಲೆ ವಿಜಯ ಸಾಧಿಸುವಷ್ಟಕ್ಕೆ ಯುದ್ಧವು ನಿಲ್ಲಕೂಡದು, ಹಳೆಯ ವ್ಯವಸ್ಥೆ ಎಲ್ಲೆಲ್ಲಿದೆಯೋ ಅಲ್ಲೆಲ್ಲ ಅದರ ವಿರುದ್ಧ ಹೋರಾಡಿ ಜಯಗಳಿಸುವವರೆಗೂ ಶಾಂತಿ ಇರುವುದಿಲ್ಲ.

**ಕಾರ್ಮಿಕರು ಮತ್ತು ರಾಷ್ಟ್ರೀಯತೆ**

"ಕಾರ್ಮಿಕರ ಕಡು ವಿರೋಧಿಗಳು ರಾಷ್ಟ್ರೀಯವಾದಿಗಳು. ಭಾರತದ ರಾಷ್ಟ್ರೀಯತೆಗೆ ಹೊಂದಿಕೊಳ್ಳದ ಮತ್ತು ಅದಕ್ಕೆ ಹಾನಿಕಾರಕವಾದ ನಿಲವನ್ನು ತಳೆದಿದ್ದಾರೆ ಎಂದು ಅವರು ಕಾರ್ಮಿಕರನ್ನು ಆಕ್ಷೇಪಿಸುತ್ತಾರೆ. ಎರಡನೆಯ ಆಕ್ಷೇಪಣೆಯೆಂದರೆ, ಭಾರತದ ಸ್ವಾತಂತ್ರ್ಯವನ್ನು ಕುರಿತ ಯಾವುದೇ ಭರವಸೆಗಳನ್ನು ಪಡೆಯದೆಯೇ ಯುದ್ಧಕ್ಕಾಗಿ ಶ್ರಮಿಸಲು ಅವರು ಹೊರಟಿದ್ದಾರೆ ಎನ್ನುವುದು. ಪದೇಪದೇ ಎತ್ತಿರುವ ಪ್ರಶ್ನೆಗಳು ಇವು. ವಾಸ್ತವವಾಗಿ ಕಾರ್ಮಿಕರು ಈ ಆಕ್ಷೇಪಣೆಗಳ ಬಗೆಗೆ ಏನು ಯೋಚಿಸುತ್ತಾರೆ ಎಂದು ಹೇಳುವುದು ಅಗತ್ಯ.

"ರಾಷ್ಟ್ರೀಯತೆಯನ್ನು ಕುರಿತು ಕಾರ್ಮಿಕರ ಮನೋಧರ್ಮ ಅತ್ಯಂತ ಸ್ಪಷ್ಟವಾಗೇ ಇದೆ. ರಾಷ್ಟ್ರೀಯತೆಯನ್ನು ಒಂದು ಅಂಧಶ್ರದ್ಧೆಯನ್ನಾಗಿ ಸ್ವೀಕರಿಸಲು ಕಾರ್ಮಿಕರು ಸಿದ್ಧರಿಲ್ಲ. ಗತಕಾಲವನ್ನು ಆರಾಧಿಸುವುದಷ್ಟೇ ರಾಷ್ಟ್ರಭಕ್ತಿಯಾಗುವುದಾದರೆ, ಮೂಲದಲ್ಲಿ, ಬಣ್ಣದಲ್ಲಿ ದೇಶೀಯವಲ್ಲದ ಸಮಸ್ತವನ್ನೂ ತಿರಸ್ಕರಿಸುವುದೇ ರಾಷ್ಟ್ರೀಯತೆಯಾಗುವುದಾದರೆ, ಕಾರ್ಮಿಕ ವರ್ಗವು ಆ ರಾಷ್ಟ್ರೀಯತೆಯನ್ನು ತನ್ನ ಪಂಥವೆಂದು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ. ಮೃತರ ಬಗ್ಗೆ ಜೀವಂತ ಶ್ರದ್ಧೆಯನ್ನು, ಜೀವಂತವಾಗಿರುವವರ ಮೃತ ಶ್ರದ್ಧೆಯಾಗಲು ಕಾರ್ಮಿಕರು ಬಿಡುವುದಿಲ್ಲ. ಯಾವಾಗಲೂ ವಿಸ್ತರಿಸುತ್ತಲೇ ಇರುವ ಮಾನವನ ಆತ್ಮದ ಕೊರಳನ್ನು ವರ್ತಮಾನದ ಬಗೆಗೆ, ಅರ್ಥವಿಲ್ಲದ ಭವಿಷ್ಯತ್ತಿನ ಬಗೆಗೆ ಆಶೆಯಿಲ್ಲದ ಭೂತಕಾಲದ ಕರಾಳ ಹಸ್ತವು ಹಿಚುಕುವುದಕ್ಕೆ ಕಾರ್ಮಿಕ ಒಪ್ಪುವುದಿಲ್ಲ. ಅಥವಾ ಸ್ಥಳೀಯವಾದ ನಿರ್ದಿಷ್ಟತೆಯ ಬಿಗಿಯಾದ ಅಂಗಿಯೊಳಗೆ ಇರುಕಿಸಿಕೊಳ್ಳುವುದನ್ನೂ ಇಷ್ಟಪಡುವುದಿಲ್ಲ. ಕಾರ್ಮಿಕರು ಜನರ ಜೀವನವನ್ನು ಸದಾ ಪುನರುಜ್ಜೀವನಗೊಳಿಸುತ್ತಲೇ ಇರಬೇಕೆಂದು ಬಯಸುತ್ತಾರೆ. ದೇಶವನ್ನು ದುರಸ್ತಿಪಡಿಸಲು, ಪರಿವರ್ತಿಸಲು, ಪುನರ್‌ರಚಿಸಲು ಎರವಲು ಪಡೆಯುವುದಕ್ಕೆ ಅವರು ಸದಾ ಸಿದ್ಧರಾಗಿರುತ್ತಾರೆ. ಬದುಕಿನ ಪುನರ್ನಿರ್ಮಾಣಕ್ಕೆ, ಪುನಾರಚನೆಗೆ ರಾಷ್ಟ್ರೀಯತೆಯು ಅಡ್ಡಿಯಾಗುವುದಾದ ಪಕ್ಷದಲ್ಲಿ ಕಾರ್ಮಿಕರು ಅದನ್ನು ನಿರಾಕರಿಸಲೇ ಬೇಕು.

"ಕಾರ್ಮಿಕರ ಧ್ಯೇಯ ಅಂತರರಾಷ್ಟ್ರೀಯತೆ. ರಾಷ್ಟ್ರೀಯತೆಯಲ್ಲಿ ಏಕೆ ಆಸಕ್ತರಾಗಿದ್ದಾರೆ ಎಂದರೆ, ಪ್ರಜಾಪ್ರಭುತ್ವದ ಚಕ್ರಗಳಾದ ಸಂಸತ್ತು, ಹೊಣೆಯಿರುವ ಕಾರ್‍ಯಾಂಗ, ಸಾಂವಿಧಾನಿಕ ಸಂಪ್ರದಾಯಗಳು, ಇವೆಲ್ಲ ರಾಷ್ಟ್ರೀಯ ಭಾವನೆಗಳಿಂದ ಬೆಸೆಯಲ್ಪಟ್ಟ ಒಂದು ಸಮುದಾಯದಲ್ಲಿ ಉತ್ತಮವಾಗಿ ಕೆಲಸ ಮಾಡುತ್ತವೆ ಎಂಬ ಒಂದೇ ಒಂದು ಕಾರಣದಿಂದ. ಕಾರ್ಮಿಕರಿಗೆ ರಾಷ್ಟ್ರೀಯತೆಯು ಗುರಿಸಾಧನೆಗೆ ಇರುವ ಒಂದು ಮಾರ್ಗ ಅಷ್ಟೆ, ಅದೇ ಗುರಿಯಲ್ಲ. ಬದುಕಿನ ಅತ್ಯಾವಶ್ಯಕ ತತ್ವಗಳೆಂದು ತಾವು ಭಾವಿಸಿರುವುದನ್ನು ಅದಕ್ಕಾಗಿ ಅವರು ಬಲಿಕೊಡಲಾರರು.

**ಸ್ವಾತಂತ್ರ್ಯ : ಒಂದು ತಪ್ಪುಹಾದಿ**

"ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಕಾರ್ಮಿಕ ವರ್ಗವು ಅದರ ಮಹತ್ವವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದೆ. ಆದರೆ ಸ್ವಾತಂತ್ರ್ಯಪ್ರಜ್ಞೆಯಲ್ಲಿ ಒಂದು ದೋಷಪೂರಿತ ದಾರಿ ಹಿಡಿದಿರುವುದು ಕಂಡುಬರುತ್ತದೆ. ಅದರ ಪ್ರಾಮುಖ್ಯತೆಯ ಬಗೆಗೆ ತಪ್ಪು ಅಭಿಪ್ರಾಯ ಮೂಡಿದೆ ಎಂದು ಅವರು ಭಾವಿಸುತ್ತಾರೆ. ಒಂದು ರಾಷ್ಟ್ರದ ಸ್ವಾತಂತ್ರ್ಯವು ಅದನ್ನು ಯಾವುದೇ ಒಂದು ನಿರ್ದಿಷ್ಟ ಮಾದರಿಯ ಸರಕಾರಕ್ಕೆ ಅಥವಾ ಸಾಮಾಜಿಕ ಸಂಸ್ಥೆಗೆ ಬದ್ಧಗೊಳಿಸುವುದಿಲ್ಲ. ಬಾಹ್ಯ ಸ್ವಾತಂತ್ರ್ಯ ಆಂತರಿಕ ದಾಸ್ಯದೊಂದಿಗೆ ಹೊಂದಿಕೊಂಡಿರಬಹುದು.

"ಸ್ವಾತಂತ್ರ್ಯ ಎಂದರೆ ಒಂದು ದೇಶವು ತನಗೆ ಎಂತಹ ಸರಕಾರ ಬೇಕು ಎನ್ನುವುದನ್ನೂ, ಸಾಮಾಜಿಕ ವ್ಯವಸ್ಥೆ ಹೇಗಿರಬೇಕೆನ್ನುವುದನ್ನೂ, ಹೊರಗಿನ ಯಾವ ಅಂಕೆಯೂ ಇಲ್ಲದೆ ತಾನೇ ನಿರ್ಧರಿಸಿಕೊಳ್ಳಲು ಇರಬೇಕಾದ ಅವಕಾಶವೇ ಹೊರತು ಬೇರೇನೂ ಅಲ್ಲ. ಒಂದು ದೇಶದ ಸರಕಾರದ ಸ್ವರೂಪವೇನು, ಅದು ಕಟ್ಟಿರುವ ಸಮಾಜ ಯಾವ ತೆರನಾದುದು ಎನ್ನುವುದನ್ನು ಅವಲಂಬಿಸಿ ಸ್ವಾತಂತ್ರ್ಯದ ಮೌಲ್ಯ ನಿಲ್ಲುತ್ತದೆ. ಇಂದು ಜಗತ್ತು ಯಾವುದರ ವಿರುದ್ಧ ಹೋರಾಡುತ್ತಿದೆಯೋ ಆ ಸರಕಾರ, ಆ ಸಮಾಜ ಇರುವ ದೇಶದ ಸ್ವಾತಂತ್ರ್ಯಕ್ಕೆ ಅಂತಹ ಮೌಲ್ಯವಿಲ್ಲ. ಭಾರತ ಬಿಟ್ಟು ತೊಲಗಿ ಎನ್ನುವುದಕ್ಕಿಂತ ನವಭಾರತ ಎಂಬ ಘೋಷಣೆಗೆ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿತ್ತು. ನೂತನ ವ್ಯವಸ್ಥೆ ಇರುವ ನವಭಾರತದ ಆಕರ್ಷಣೆ ಸ್ವಾತಂತ್ರ್ಯದ ಆಕರ್ಷಣೆಗಿಂತಲೂ ಖಂಡಿತವಾಗಿಯೂ ಹೆಚ್ಚಿನದ್ದಾಗಿರುತ್ತದೆ. ವಾಸ್ತವವಾಗಿ ನವಭಾರತದಲ್ಲಿನ ನೂತನ ವ್ಯವಸ್ಥೆಯೊಂದರ ದರ್ಶನವು ಸ್ವಾತಂತ್ರ್ಯವನ್ನು ಗಳಿಸಲೇಬೇಕು ಎಂಬ ನಿರ್ಧಾರವನ್ನು ಬಲಪಡಿಸುತ್ತದೆ. ಈಗ ಯಾವುದಕ್ಕಾಗಿ ಕೇಳುತ್ತಿರುವ ಸ್ವಾತಂತ್ರ್ಯ, ಯಾರಿಗಾಗಿ ಸ್ವಾತಂತ್ರ್ಯ ಮುಂತಾದ ಅನೇಕ ಮುಜುಗರದ ಪ್ರಶ್ನೆಗಳನ್ನು ಅಂಥದೊಂದು ಮಾರ್ಗವು ಖಂಡಿತವಾಗಿಯೂ ತಪ್ಪಿಸುತ್ತಿತ್ತು.

"ಎರಡನೆಯದಾಗಿ, ಯುದ್ಧದ ಪ್ರಯತ್ನಕ್ಕೆ ಬೆಂಬಲ ಬೇಕಾದರೆ ಮೊದಲು ತಕ್ಷಣವೆ ಸ್ವಾತಂತ್ರ್ಯ ಕೊಡಬೇಕು ಎಂಬ ವಾದ ಕಾರ್ಮಿಕರಿಗೆ ಅರ್ಥವಾಗುವುದಿಲ್ಲ. ಈ ಷರತ್ತು ಯುದ್ಧವನ್ನು ಕುರಿತು ಕೆಲವು ವ್ಯಕ್ತಿಗಳ ಮನೋಧರ್ಮವಾಗಿದ್ದು ದಿಢೀರನೆ ಬೆಳದದ್ದಾಗಿದೆ. ಭಾರತಕ್ಕೆ ಇರುವ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳಲು ಯಾರಾದರೂ ಸಂಚು ನಡೆಸಿದ್ದರೆ ಆಗ ಈ ಷರತ್ತು ಸಮರ್ಥನೀಯವಾಗುತ್ತಿತ್ತು. ಅಂತಹ ಸಂಚಿನ ಸೂಚನೆಯೇನೂ ಇಲ್ಲ. ಸಂಚುಕೋರರು ಯಾರೇ ಆಗಿರಲಿ, ಅವರ ಹೂಟ ಫಲಿಸುವುದೂ ಇಲ್ಲ. ಭಾರತದ ಸ್ವಾತಂತ್ರ್ಯದ ಹಕ್ಕನ್ನು ಯಾರೊಬ್ಬರೂ ವಂಚಿಸಲಾರರು ಎಂದು ಕಾರ್ಮಿಕ ವರ್ಗವು ನಂಬಿದೆ. ಎಲ್ಲ ಜನರ ಒಟ್ಟುಗೂಡಿದ ಶಕ್ತಿಯಿಂದ ದೇಶವು ಒಂದಾಗಬೇಕು. ಭಾರತದ ಸ್ವಾತಂತ್ರ್ಯವು ತೂಗುಯ್ಯಾಲೆಯಲ್ಲಿದ್ದರೆ ಅದಕ್ಕೆ ಕಾರಣ ಭಾರತೀಯರಲ್ಲಿರುವ ಅನೈಕ್ಯತೆ. ಭಾರತದ ಸ್ವಾತಂತ್ರ್ಯಕ್ಕೆ ವೈರಿಗಳು ಭಾರತೀಯರೇ ಹೊರತು ಬೇರೆಯವರಲ್ಲ.

**ಕಾರ್ಮಿಕರು ಮತ್ತು ಯುದ್ಧ**

"ಯುದ್ಧದಲಿ ಏನೇನು ಅಂಶಗಳು ಒಳಗೊಳ್ಳುತ್ತವೆ ಎಂಬುದನ್ನು ಪೂರ್ಣವಾಗಿ ಅರ್ಥಮಾಡಿಕೊಂಡೇ ಯುದ್ಧವನ್ನು ಕುರಿತು ಕಾರ್ಮಿಕರು ತಮ್ಮ ಅಭಿಪ್ರಾಯ ರೂಪಿಸಿಕೊಂಡಿದ್ದಾರೆ. ತಾವು ಯುದ್ಧವನ್ನು ಗೆಲ್ಲಲೇಬೇಕು, ಮತ್ತು ಜಗತ್ತಿನಿಂದ ಯುದ್ಧವನ್ನೇ ತೊಡೆದುಹಾಕಬೇಕಾದರೆ ಶಾಂತಿಯನ್ನು ಗಳಿಸಲೇಬೇಕು ಎಂದು ಕಾರ್ಮಿಕರು ಬಲ್ಲರು. ನಾಝಿಗಳನ್ನು ಸೋಲಿಸುವುದು, ನೂತನ ನಾಝಿ ವ್ಯವಸ್ಥೆಯ ಸಾಧ್ಯತೆಗಳನ್ನು ನಾಶಪಡಿಸುವುದಷ್ಟೆ ಸಾಲದು ಎಂದೂ ಅವರಿಗೆ ಗೊತ್ತು. ಈ ಯುದ್ಧವು ಹಳೆಯ ವ್ಯವಸ್ಥೆ ವಿರುದ್ಧ ಮಾತ್ರವಷ್ಟೇ ಅಲ್ಲ. ಒಂದು ಕಡೆ ಹಳೆಯ ವ್ಯವಸ್ಥೆ, ಇನ್ನೊಂದು ಕಡೆ ನಾಝಿ ವ್ಯವಸ್ಥೆ ಎರಡರ ವಿರುದ್ಧವೂ ಯುದ್ಧ ನಡೆಯಬೇಕಾಗಿದೆ. ಈ ಯುದ್ಧಕ್ಕೆ ತಗುಲುವ ಭಾರೀ ವೆಚ್ಚಕ್ಕೆ ತಕ್ಕ ಏಕೈಕ ಪರಿಹಾರವೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳು ಕೇವಲ ಘೋಷಣೆಗಳಾಗಿರದೆ ಬದುಕಿನ ವಾಸ್ತವಾಂಶಗಳಾಗಿರುವ ನೂತನ ಸಮಾಜ ವ್ಯವಸ್ಥೆಯ ಸ್ಥಾಪನೆಯೊಂದೇ ಎಂದು ಕಾರ್ಮಿಕರು ತಿಳಿದುಕೊಂಡಿದ್ದಾರೆ. ಆದರೆ ಅತಿಮುಖ್ಯ ಪ್ರಶ್ನೆ ಇದು : ಈ ನೂತನ ವ್ಯವಸ್ಥೆಯ ಅಭೀಪ್ಸೆಯನ್ನು ಮೂರ್ತಗೊಳಿಸಿಕೊಳ್ಳುವುದು ಹೇಗೆ? ಈ ಎಲ್ಲಾ ಆದರ್ಶಗಳ ಸಾಕಾರ ಸಾಧನೆಗೆ ಒಂದು ಅತಿ ಮುಖ್ಯ ಪೂರ್ವಭಾವಿ ಅಗತ್ಯ ಎಂದು

ಕಾರ್ಮಿಕರು ಒತ್ತಿ ಹೇಳುತ್ತಾರೆ. ಅದೇ ಯುದ್ಧದಲ್ಲಿ ಗೆಲ್ಲುವುದು. ಯುದ್ಧದಲ್ಲಿ ಗೆಲ್ಲದೆ ಭಾರತಕ್ಕೆ ಸ್ವಯಮಾಡಳಿತವಾಗಲಿ, ಸ್ವಯಂನಿರ್ಧಾರವಾಗಲಿ ದೊರಕುವುದಿಲ್ಲ. ಯುದ್ಧ ವಿಜಯವಿಲ್ಲದೆ ಸ್ವಾತಂತ್ರ್ಯವೆನ್ನುವುದು ಕೇವಲ ಗೊಡ್ಡು ಹರಟೆಯಾಗುತ್ತದೆ. ಕಾರ್ಮಿಕರು ಯುದ್ಧದಲ್ಲಿ ಗೆಲ್ಲಲೇಬೇಕೆಂದು ನಿರ್ಧರಿಸಿರುವುದಕ್ಕೆ ಇದೇ ಕಾರಣ.

**ಪ್ರಸ್ತುತ ಯುದ್ಧದ ಎರಡು ಲಕ್ಷಣಗಳು**

"ಈ ಯುದ್ಧದಲ್ಲಿ ಬೇಕಾದಷ್ಟು ಅನುಕೂಲಗಳಿವೆ. ಅದು ನೂತನ ವ್ಯವಸ್ಥೆಯ ಉದಯದ ಭರವಸೆ ಕೊಡುತ್ತದೆ. ಈ ಯುದ್ಧವು ಇತರ ಯುದ್ಧಗಳಿಗಿಂತ ಬೇರೆ ಬಗೆಯದು ಎಂದು ಕಾರ್ಮಿಕರು ಭಾವಿಸಿದ್ದಾರೆ. ಹೀಗೆ ಅದನ್ನು ಬೇರೆ ಮಾಡುವ ಎರಡು ಲಕ್ಷಣಗಳಿವೆ. ಮೊದಲನೆಯದಾಗಿ, ಇದು ಹಿಂದಿನ ಯುದ್ಧಗಳಂತೆ ಜಗತ್ತಿನ ಬಲಿಷ್ಠ ದೇಶಗಳು ಭೂಪ್ರದೇಶವನ್ನು ವಿಭಾಗಿಸಿ ಹಂಚಿಕೊಳ್ಳುವುದಕ್ಕಾಗಿ ನಡೆದಿರುವ ಯುದ್ಧವಲ್ಲ. ಮಾನವ ಜನಾಂಗದ ಬದುಕಿನ ರೀತಿ, ಸರಕಾರದ ಹಾಗೂ ಸ್ವರೂಪಗಳು ಮತ್ತು ವಿಧಾನಗಳಿಗೆ ಸಂಬಂಧಿಸಿದ ತತ್ವಗಳ ಸಂಘರ್ಷ ಈ ಯುದ್ಧದಲ್ಲಿ ನಡೆದಿದೆ. ಎರಡನೆಯದಾಗಿ, ಇತರ ಯುದ್ಧಗಳ ಹಾಗೆ ಇದು ಕೇವಲ ಯುದ್ಧವಲ್ಲ. ಇದರ ಉದ್ದೇಶ ವೈರಿಯನ್ನು ಸೋಲಿಸುವುದು, ಅವನ ರಾಜಧಾನಿಗೆ ಹೋಗಿ ಅಲ್ಲಿ ಶಾಂತಿಯನ್ನು ನೆಲೆಗೊಳಿಸುವುದು ಇಷ್ಟೇ ಅಲ್ಲ. ಇದು ಒಂದು ಯುದ್ಧವಾಗಿರುವುದರ ಜೊತೆಗೆ ಒಂದು ಕ್ರಾಂತಿಯೂ ಆಗಿದೆ. ಸಮಾಜದ ಪುನಾರಚನೆಗಾಗಿ, ಸಹಜೀವನದ ನೀತಿ ನಿಯಮಗಳಲ್ಲಿ ಮೂಲಭೂತ ಬದಲಾವಣೆಯನ್ನು ತರುವ ಸಲುವಾಗಿ ನಡೆಯುವ ಕ್ರಾಂತಿ ಇದು. ಈ ಅರ್ಥದಲ್ಲಿ ಇದು ಜನತೆಯ ಹೋರಾಟ; ಅದು ಹಾಗಾಗಲು ಸಾಧ್ಯವಿದೆ, ಇದನ್ನು ಜನತೆಯ ಯುದ್ಧವನ್ನಾಗಿ ಮಾಡಬೇಕಾಗಿದೆ.

"ಈ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಕಾರ್ಮಿಕರು ಯುದ್ಧದ ಬಗೆಗೆ, ಅದರ ಫಲದ ಬಗೆಗೆ ಅಲಕ್ಷ್ಯದ ಧೋರಣೆ ತಳೆಯುವುದು ಸಾಧ್ಯವಿಲ್ಲ ಎನ್ನುವುದು ವೇದ್ಯವಾಗುತ್ತದೆ. ಈ ಹಿಂದೆ ನೂತನ ವ್ಯವಸ್ಥೆಯನ್ನು ಸ್ಥಾಪಿಸಲು ನಡೆಸಿದ ಪ್ರಯತ್ನಗಳೆಲ್ಲ ಮತ್ತೆ ಮತ್ತೆ ವ್ಯರ್ಥವಾಗಿರುವುದನ್ನು ಕಾರ್ಮಿಕರು ಬಲ್ಲರು. ಅದೇಕೆಂದರೆ ಪ್ರಜಾಪ್ರಭುತ್ವವನ್ನು ಅಸ್ತಿತ್ವಕ್ಕೆ ತಂದಮೇಲೆ ಅದನ್ನು ಟೋರಿ ಪಕ್ಷದ ಕೈಗೆ ಬಿಟ್ಟರು. ಪ್ರಪಂಚದ ಜನರು ಮತ್ತೊಮ್ಮೆ ಇದೇ ತಪ್ಪು ಸಂಭವಿಸದಂತೆ ಎಚ್ಚರ ವಹಿಸಿದ್ದೇ ಆದರೆ ಈ ಯುದ್ಧವನ್ನು ಗೆದ್ದು ನೂತನ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವುದರಿಂದ ಜಗತ್ತನ್ನು ಪ್ರಜಾಪ್ರಭುತ್ವಕ್ಕೆ ಅತ್ಯಂತ ಸುರಕ್ಷಿತವಾದ ಸ್ಥಳವನ್ನಾಗಿ ಮಾಡಬಹುದು ಎಂದು ಕಾರ್ಮಿಕರು ನಂಬುತ್ತಾರೆ.

**ಸರಿಯಾದ ನಾಯಕತ್ವ**

"ದೇಶಕ್ಕೆ ನಾಯಕತ್ವದ ಅಗತ್ಯವಿದೆ. ಅದನ್ನು ಕೊಡಬಲ್ಲವರು ಯಾರು ಎಂಬುದೀಗ ಪ್ರಶ್ನೆ. ಅಗತ್ಯವಾಗಿರುವ ನಾಯಕತ್ವವನ್ನು ಕಾರ್ಮಿಕರ ವರ್ಗವು ನೀಡಲು ಸಮರ್ಥವಾಗಿದೆ ಎಂದು ಹೇಳುವ ಸಾಹಸ ಮಾಡುತ್ತೇನೆ. ಸರಿಯಾದ ಮುಂದಾಳತ್ವಕ್ಕೆ, ಇತರ ಅಂಶಗಳ ಜೊತೆಗೆ ಆದರ್ಶವೂ, ಮುಕ್ತ ಚಿಂತನೆಯೂ ಅಗತ್ಯ. ಶ್ರೀಮಂತ ವರ್ಗಕ್ಕೆ ಆದರ್ಶವಿರುವುದು ಸಾಧ್ಯ, ಮುಕ್ತ ಆಲೋಚನೆ ಇಲ್ಲದೆ ಹೋಗಬಹುದು. ಇವೆರಡೂ ಕಾರ್ಮಿಕ ವರ್ಗದಲ್ಲಿ ಇರುವುದು ಸಾಧ್ಯವಿದೆ. ಆದರೆ ಆದರ್ಶವಾಗಲಿ, ಮುಕ್ತ ಚಿಂತನೆಯಾಗಲಿ ಮಧ್ಯಮ ವರ್ಗಕ್ಕೆ ಇಲ್ಲ. ಮಧ್ಯಮ ವರ್ಗಕ್ಕೆ ಶ್ರೀಮಂತರ ಉದಾರ ಭಾವನೆ ಇರುವುದಿಲ್ಲ. ಒಂದು ಆದರ್ಶವನ್ನು ಸ್ವಾಗತಿಸಿ, ಘೋಷಿಸಲು ಅದು ಬೇಕು. ಆ ವರ್ಗಕ್ಕೆ ನೂತನ

ವ್ಯವಸ್ಥೆಯ ಹಂಬಲ ಇಲ್ಲ. ಕಾರ್ಮಿಕ ವರ್ಗ ಬದುಕಿರುವುದೇ ಈ ಹಂಬಲದ ಮೇಲೆ. ಆದ್ದರಿಂದ ಭಾರತೀಯರು ತಮ್ಮ ರಾಜಕೀಯ ಭವಿಷ್ಯವನ್ನು ಸಾಧಿಸಲು ಹಿಂದಿನಿಂದ ಮಾಡುತ್ತಾ ಬಂದ ಪ್ರಯತ್ನಕ್ಕೆ ಕಾರ್ಮಿಕ ವರ್ಗವು ಅತ್ಯಂತ ದೃಢವಾದ, ವಿಶಿಷ್ಟವಾದ ಕೊಡುಗೆಯನ್ನು ನೀಡಬಲ್ಲುದು. ಭಾರತಕ್ಕೆ ಮತ್ತು ಭಾರತೀಯರಿಗೆ ಕಾರ್ಮಿಕ ವರ್ಗದ ನಾಯಕತ್ವವೆಂದರೆ, ಯುದ್ಧದಲ್ಲಿ ಪಾಲುಗೊಳ್ಳುವುದು ಮತ್ತು ಒಗ್ಗಟ್ಟಾಗಿರುವುದು. ವಿಜಯದ ಫಲ ಸ್ವಾತಂತ್ರ್ಯ ಮತ್ತು ನೂತನ ಸಮಾಜ ವ್ಯವಸ್ಥೆ. ಇಂಥದೊಂದು ಗೆಲುವಿಗೆ ಎಲ್ಲರೂ ಒಟ್ಟಾಗಿ ಹೋರಾಡಬೇಕು. ಆಗ ಮಾತ್ರವೆ ವಿಜಯದ ಫಲವು ಎಲ್ಲರಿಗೂ ದೊರೆತ ಪಿತ್ರಾರ್ಜಿತ ಸ್ವತ್ತಾಗುತ್ತದೆ. ಆಗ ಈ ಪಿತ್ರಾರ್ಜಿತವನ್ನು ಹಂಚಿಕೊಳ್ಳಲು ಇರುವ ಐಕ್ಯಭಾರತದ ಹಕ್ಕನ್ನು ಯಾರೂ ವಂಚಿಸಲಾರರು."

# ೮
# ಕಾಗದ ನಿಯಂತ್ರಣ ಆಜ್ಞೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) :

ಗೌರವಾನ್ವಿತ ಶ್ರೀ ಬಜೋರಿಯ ಅವರು ಈ ನಿಲುವಳಿ ಸೂಚನೆ ಮಂಡಿಸಿದ್ದರಿಂದ ನನಗೆ ತುಂಬಾ ಸಂತೋಷವಾಗಿದೆ. ಇದರಿಂದಾಗಿ ಸರಕಾರವು ದೇಶದಲ್ಲಿನ ಕಾಗದದ ಪರಿಸ್ಥಿತಿಯ ಬಗೆಗೆ ವಾಸ್ತವಾಂಶಗಳನ್ನು ಸದನದ ಮುಂದೆ ಇಡಲು ಸಹಾಯವಾಗುತ್ತದೆ. ಮಾನ್ಯರೆ, ಇದುವರೆಗೆ ಭಾಷಣಗಳಲ್ಲಿ ಸರಕಾರವನ್ನು ಕುರಿತು ಕೆಲವು ಅತ್ಯಂತ ಕಟುವಾದ ಮಾತುಗಳನ್ನು ಹೇಳಲಾಗಿದೆ. ಸರಕಾರವು ಜಡ್ಡುಗಟ್ಟಿದೆ, ಸ್ವಾರ್ಥ ತುಂಬಿದೆ, ಕಠಿಣ ಹೃದಯವುಳ್ಳದ್ದಾಗಿದೆ, ಈ ದೇಶದ ಶೈಕ್ಷಣಿಕ ಸಂಸ್ಥೆಗಳ ವಿಷಯದಲ್ಲಿ ಸ್ವಲ್ಪವೂ ಪರಿಗಣನೆ ಅದಕ್ಕಿಲ್ಲ ಎಂದೆಲ್ಲ ದೂರಲಾಗಿದೆ. ನಾನು ಈ ಸದನದ ಮುಂದೆ ವಾಸ್ತವಾಂಶಗಳನ್ನು, ಅವು ಹೇಗಿವೆಯೋ ಹಾಗೆ, ಮಂಡಿಸುತ್ತೇನೆ. ಸರಕಾರವು ಈ ಆದೇಶವನ್ನು ಹೊರಡಿಸಲು ಕಾರಣಗಳೇನು ಎಂಬುದನ್ನೂ, ಪರಿಸ್ಥಿತಿಯನ್ನು ತಕ್ಷಣವೆ ಸಡಿಲಗೊಳಿಸಿ ಮುಂದೆ ತೊಂದರೆಯಾಗದಂತೆ ಮಾಡಲು ಸರಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನೂ ತಿಳಿಸುತ್ತೇನೆ.

ಮೊದಲಿಗೆ ಸರಕಾರವು ಹೊರಡಿಸಿದ ಆದೇಶದ ಸ್ವರೂಪವನ್ನು ಕುರಿತು ತಪ್ಪು ಅಭಿಪ್ರಾಯವಿರುವಂತೆ ತೋರುತ್ತದೆ. ಸದಸ್ಯರು ಒಬ್ಬರಾದ ಮೇಲೊಬ್ಬರಂತೆ, ಸರಕಾರವು ಹೊರಡಿಸಿರುವ ಆದೇಶದ ಅರ್ಥ ಕಾಗದ ಉತ್ಪಾದನೆಯ ಶೇ. ೯೦ ರಷ್ಟನ್ನು ತನಗಾಗೇ ಇಟ್ಟುಕೊಳ್ಳುತ್ತದೆ ಎಂಬುದಾಗಿ ಎಂದು ಹೇಳುತ್ತಿದ್ದಾರೆ. ಇದು ಸಂಪೂರ್ಣವಾಗಿ ತಪ್ಪು ಅಭಿಪ್ರಾಯ ಎಂದು ಸದನಕ್ಕೆ ನಾನು ವಿವರಿಸಬಯಸುತ್ತೇನೆ. ಕಾಗದ ನಿಯಂತ್ರಣ ಅಧಿಕಾರಿಯು ಹೊರಡಿಸಿರುವ ಆದೇಶ, ಬೇಡಿಕೆ ಆದೇಶವಲ್ಲ. ಕಾಗದ ತಯಾರಕರು ಉತ್ಪಾದನೆಯ ಶೇ. ೯೦ ರಷ್ಟನ್ನು ಸರಕಾರದ ವಶಕ್ಕೆ ಕೊಡತಕ್ಕದ್ದು ಎಂದು ಆ ಆದೇಶ ಹೇಳುತ್ತದೆ. ಇದು ಒಂದು ರೀತಿಯಲ್ಲಿ ಸ್ಥಗಿತಗೊಳಿಸುವ ಆದೇಶ. ನಾನು ತೋರಿಸಿಕೊಡುತ್ತಿರುವ ವ್ಯತ್ಯಾಸ ನಿಜವಾದ ವ್ಯತ್ಯಾಸ. ಅದು ವಿಶಿಷ್ಟವಲ್ಲದ ವ್ಯತ್ಯಾಸವಲ್ಲ. ಏಕೆಂದರೆ ಈಗಿರುವಂತೆ ಆ ಆದೇಶವು ಹೇಳುವುದಿಷ್ಟೆ: ಕಾಗದ ತಯಾರಕರು

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೧, ಫೆಬ್ರವರಿ ೧೧, ೧೯೪೩, ಪು. ೧೨೮ – ೩೧.

ತಮ್ಮ ಉತ್ಪಾದನೆಯ ಶೇ. ೧೦ ಕ್ಕಿಂತ ಹೆಚ್ಚು ಕಾಗದವನ್ನು ಸಾರ್ವಜನಿಕರಿಗೆ ಮಾರುವಂತಿಲ್ಲ. ಶೇ. ೯೦ ರಷ್ಟನ್ನು ಸರಕಾರಕ್ಕೆ ತಂದೊಪ್ಪಿಸತಕ್ಕದ್ದು ಎಂದು ಅದು ಹೇಳುವುದಿಲ್ಲ. ಇದು ಮೂಲಭೂತವಾದ ವ್ಯತ್ಯಾಸ. ಸದನವು ಇದನ್ನು ಗಮನಿಸಬೇಕು ಎಂದು ನನ್ನ ಅಭಿಪ್ರಾಯ.

**ಪಂಡಿತ ಲಕ್ಷ್ಮೀಕಾಂತ ಮೈತ್ರ (ಪ್ರೆಸಿಡೆನ್ಸಿ ವಿಭಾಗ** : ಮಹಮದೀಯೇತರ – ಗ್ರಾಮಾಂತರ): ಪರಿಣಾಮದಲ್ಲಿ ಏನು ವ್ಯತ್ಯಾಸವಾಗುತ್ತಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರಕಾರವು ಶೇ. ೧೦ ಕ್ಕಿಂತ ಹೆಚ್ಚು ಕಾಗದವನ್ನು ಬಿಡುಗಡೆ ಮಾಡಬಹುದು.

**ಬಾಪುರ್ ಬೈಜನಾಥ್ ಬಜೋರಿಯಾ :** ಹೇಗೆ ?

**ಡಾ॥ ಪಿ.ಎನ್. ಬ್ಯಾನರ್ಜಿ :** ಸರಕಾರಕ್ಕೆ ಜ್ಞಾನೋದಯವಾದದ್ದು ಯಾವಾಗ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗಿರುವಂತೆ ಆದೇಶ ಇರುವುದು ಹೀಗೆ. ನಾನು ಆದೇಶವನ್ನು ವ್ಯಾಖ್ಯಾನಿಸುತ್ತಿಲ್ಲ. ಅದರ ಸ್ವರೂಪವನ್ನು ವಿವರಿಸುತ್ತಿದ್ದೇನೆ.

(ಹಲವು ಸದಸ್ಯರು ಮಾತನಾಡುತ್ತಾ ಕಲಾಪಕ್ಕೆ ಅಡ್ಡಿ)

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಆರ್ಡರ್, ಆರ್ಡರ್

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದನವು ಗಮನದಲ್ಲಿಟ್ಟುಕೊಳ್ಳಬೇಕಾದ ಎರಡನೆಯ ವಿಚಾರವೆಂದರೆ, ಆದೇಶವನ್ನು ಕಾಗದ ತಯಾರಿಸುವ ಮಿಲ್ಲುಗಳಿಗೆ ಜಾರಿಮಾಡಲಾಗಿದೆ ಎನ್ನುವುದು. ಅದನ್ನು ದಾಸ್ತಾನುಗಾರರಿಗೆ ಕಳಿಸುತ್ತಿಲ್ಲ. ಈಗಾಗಲೇ ಅವರು ತಮ್ಮ ಉಗ್ರಾಣದಲ್ಲಿ ಬೃಹತ್ ಪ್ರಮಾಣದ ಕಾಗದ ದಾಸ್ತಾನು ಇಟ್ಟುಕೊಂಡಿದ್ದಾರೆ. ಅಲ್ಲದೆ, ಈಗಲೂ ಆದೇಶವು ಜಾರಿಯಾಗುವುದಕ್ಕೆ ಮೊದಲೇ ಸಾರ್ವಜನಿಕರು ಹೀಗೆ ದಾಸ್ತಾನು ಇಟ್ಟಿರುವುದರಿಂದ ತಮ್ಮ ಆವಶ್ಯಕತೆ ಪೂರೈಸುವಷ್ಟು ಕಾಗದವನ್ನು ಕೊಂಡಿಟ್ಟುಕೊಳ್ಳಲು ಏನೂ ಅಡ್ಡಿಯಿಲ್ಲ. ಇನ್ನು ಈ ಆದೇಶವನ್ನು ಕುರಿತು ನಾನು ಹೇಳಬೇಕಾಗಿರುವ ಮೂರನೆಯ ಅಂಶವೆಂದರೆ, ಈಗ ರಚಿತವಾಗಿರುವ ರೀತಿಯಲ್ಲಿ ಈ ಆದೇಶದನ್ವಯ, ಕಾಗದ ನಿಯಂತ್ರಣ ಅಧಿಕಾರಿಯು ಶೇ. ೧೦ಕ್ಕಿಂತ ಹೆಚ್ಚು ಕಾಗದವನ್ನು ಮಾರಲು ಮಿಲ್ಲುಗಳಿಗೆ ಅವಕಾಶಕೊಡಬಹುದಾಗಿದೆ. ನವೆಂಬರ್ ೫ರಂದು ಅಂಗೀಕೃತವಾದ ಆದೇಶವು ಏನೇ ಇರಲಿ ಸಾರ್ವಜನಿಕರ ಬಳಕೆಗೆ ಶೇ. ೧೦ ಕ್ಕಿಂತ ಹೆಚ್ಚು ಪ್ರಮಾಣದ ಕಾಗದವನ್ನು ಬಿಡುಗಡೆ ಮಾಡುವುದು ಸಾಧ್ಯ ಎಂದು ಕಾಗದ ನಿಯಂತ್ರಕರಿಗೆ ಅನ್ನಿಸಿದರೆ ಅದಕ್ಕೆ ಅಡ್ಡಿಯಿಲ್ಲ, ಯಾವ ತಡೆಯೂ ಇಲ್ಲ. ಮಾಡಬಹುದಾದ್ದೆಲ್ಲ ಈಗಲೂ ಅವರ ಕೈಯಲ್ಲೇ ಇದೆ. ಸರಕಾರವು ಹೊರಡಿಸಿರುವ ಆದೇಶದಲ್ಲಿ ವಾಸ್ತವವಾಗಿ ಇರುವುದೇನು ಎಂಬುದನ್ನು ವಿವರಿಸಿದ ನಂತರ, ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರಕಾರವು ಆ ಆದೇಶವನ್ನು ಏಕೆ ಹೊರಡಿಸಲೇಬೇಕಾಯಿತು ಎಂಬುದನ್ನು ಹೇಳಬಯಸುತ್ತೇನೆ.

ಸಂಕ್ಷೇಪವಾಗಿ ವಾಸ್ತವಾಂಶ ಹೀಗಿದೆ : ಮೊದಲ ಆರು ತಿಂಗಳಲ್ಲಿ ಅಂದರೆ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ನಮ್ಮ ಕಾಗದದ ಬೇಡಿಕೆ, ಕೇಂದ್ರ ಲೇಖನಸಾಮಗ್ರಿ ಕಚೇರಿಯ ಮೂಲಕ ಮಂಡಿಸಿದ್ದು ೩೪,೦೦೦ ಟನ್ನು. ಕೇಂದ್ರ ಸ್ಟೇಷನರಿ ಕಚೇರಿಯ ವತಿಯಿಂದ ಆಗಲೇ ಮಿಲ್ಲುಗಳು ೧೬,೦೦೦ ಟನ್ನುಗಳಷ್ಟನ್ನು ಕೊಟ್ಟಿವೆ ಎಂದು ತಿಳಿಯಬಂದಿತು. ಪೇಪರ್ ಮಿಲ್ಲುಗಳ ಜೊತೆ ನಾವು ಕರಾರು ಮಾಡಿಕೊಂಡಿದ್ದೇವೆ ಎಂಬ ವಿಚಾರವನ್ನು ಸದನವು ಮರೆಯಬಾರದು. ಅದು ೨೫,೦೦೦ ಟನ್ನು ಒದಗಿಸುವುದಕ್ಕಾಗಿ. ಮೊದಲ ಆರು ತಿಂಗಳ ಲೆಕ್ಕಾಚಾರವನ್ನು ನೋಡಲಾಗಿ, ಇನ್ನು ಕೇವಲ ೯,೦೦೦ ಟನ್ನುಗಳು ದೊರಕಲಿವೆ. ಅದು

ಆರು ತಿಂಗಳ ಉಪಯೋಗಕ್ಕಾಗಿ ಎಂಬುದು ವ್ಯಕ್ತವಾಯಿತು. ಇದರಿಂದ ಸರಕಾರ ಹೀಗೆ ಮಾಡಿತು. ಕಳೆದ ಆರು ತಿಂಗಳ ಪರಿಸ್ಥಿತಿಯ ಬೆಳಕಿನಲ್ಲಿ ಸರಕಾರವು ತನ್ನ ಅಂದಾಜನ್ನು ಪುನರ್ವಿಮರ್ಶೆ ಮಾಡಿತು. ಕಾಗದಕ್ಕೆ ಬೇಡಿಕೆ ಕೊಡುವ ವಿಧಾನವನ್ನು ಸ್ವಲ್ಪ ಬದಲಿಸಿ, ಒಂದು ರೂಪಕ್ಕೆ ತಂದಿತು. ಇಲ್ಲಿ ಸದನಕ್ಕೆ ಒಂದು ವಿಚಾರ ವಿವರಿಸಬೇಕು. ಪ್ರಸ್ತುತ ಆದೇಶವು ಹೊರಡುವುದಕ್ಕಿಂತ ಮೊದಲು ಸರಕಾರದ ಪರವಾಗಿ ಕಾಗದದ ಬೇಡಿಕೆಯನ್ನು ಎರಡು ವಿಧಾನಗಳಿಂದ ಮಂಡಿಸಲಾಗುತ್ತಿತ್ತು. ಒಂದು ವಿಧಾನ, ಕೇಂದ್ರಿಯ ಲೇಖನಸಾಮಗ್ರಿ ಕಚೇರಿಯ ಮೂಲಕ. ಇದು ಕೇಂದ್ರ ಸರಕಾರದ ಪರವಾಗಿ, ಬಂಗಾಳ, ಒರಿಸ್ಸಾ, ಅಸ್ಸಾಂ ಮತ್ತು ವಾಯುವ್ಯ ಗಡೀಪ್ರಾಂತ ಮತ್ತು ಕೇಂದ್ರ ಪ್ರಾಂತಗಳು – ಇವುಗಳ ಪರವಾಗಿ ಸಲ್ಲಿಸುವ ಬೇಡಿಕೆ. ಇನ್ನೊಂದು, ಕೇಂದ್ರೀಯ ಲೇಖನ ಸಾಮಗ್ರಿ ಕಚೇರಿಯೇತರ ಬೇಡಿಕೆ. ಅಂದರೆ ಈ ಕಚೇರಿಯ ಮೂಲಕವಲ್ಲದೆ ಸ್ವತಂತ್ರವಾಗಿ ಬೇಡಿಕೆ ಸಲ್ಲಿಸುವ ಪ್ರಾಂತಗಳು, ಜೊತೆಗೆ ಭಾರತೀಯ ಸಂಸ್ಥಾನಗಳು, ಸೆಕ್ಯೂರಿಟಿ ಮುದ್ರಣ, ಪೂರೈಕೆ ವಿಭಾಗ, ಸರಕಾರಿಯೇತರ ರೈಲ್ವೆ – ಇವುಗಳ ಬೇಡಿಕೆ. ಹೀಗೆ ಎರಡು ಬಗೆಯ ಬೇಡಿಕೆಗಳಿರುತ್ತಿದ್ದುದು ಖಚಿತವಾಗಿ ಅಂದಾಜು ಮಾಡಲು ಸಾಧ್ಯವಾಗದೆ ತುಂಬಾ ಗೊಂದಲವುಂಟಾಗುತ್ತಿತ್ತು. ಆದ್ದರಿಂದ ಸರಕಾರವು ಕೈಗೊಂಡ ಮೊದಲನೆಯ ಕ್ರಮ ಬೇಡಿಕೆಯ ಈ ಎರಡೂ ಮಾರ್ಗಗಳನ್ನು ಒಟ್ಟುಗೂಡಿಸಿದ್ದು, ಇಡೀ ಬೇಡಿಕೆಯು ಈಗ ಕೇಂದ್ರೀಯ ಲೇಖನ ಸಾಮಗ್ರಿ ಕಚೇರಿಯ ವಶದಲ್ಲಿರುತ್ತದೆ.

ಮೊದಲೇ ಸದನಕ್ಕೆ ಸ್ಪಷ್ಟಪಡಿಸಿರುವಂತೆ ಕಾಗದದ ಅತಿ ಬಳಕೆ ಅಪಾಯಕಾರಿಯಾಯಿತು ಎನ್ನಿಸಿದಾಗ, ಕರಾರಿಗಿಂತ ಅಧಿಕವಾಗಿ ಬಳಸುತ್ತಿದ್ದೇವೆ ಎನಿಸಿದಾಗ ನಾವು ಅಂದಾಜನ್ನು ಪರಿಷ್ಕರಿಸಿದೆವು. ಬೇಡಿಕೆಗಳನ್ನು ಕೇಂದ್ರೀಕರಿಸಿದೆವು. ಅಕ್ಟೋಬರ್ ಅಂತ್ಯದಲ್ಲಿನ ಅಂಕಿ ಅಂಶಗಳು ಹೀಗಿದ್ದವು.

| | | |
|---|---|---|
| | | **ಟನ್ನುಗಳು** |
| ಮುಂದಿನ ಆರು ತಿಂಗಳವರೆಗೆ, ಅಂದರೆ ಅಕ್ಟೋಬರ್‌ನಿಂದ ೧೯೪೩ರ ಮಾರ್ಚ್‌ವರೆಗೆ ಸಿ.ಎಸ್.ಓ. ಬೇಡಿಕೆ | | ೩೨,೦೦೦.೦೦ |
| ಸಿ.ಎಸ್.ಓ. ಅಲ್ಲದ ಬೇಡಿಕೆಗಳು | | ೯,೩೦೦.೦೦ |
| | **ಒಟ್ಟು** | **೪೧,೩೦೦.೦೦** |

ಆ ವರ್ಷ ಮಿಲ್ಲುಗಳಲ್ಲಿ ಆದ ಉತ್ಪಾದನೆಯ ಆಧಾರದಿಂದ ಅಕ್ಟೋಬರ್‌ನಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಮಿಲ್ಲುಗಳು ೪೭,೫೭೫ ಟನ್ನುಗಳನ್ನು ಉತ್ಪಾದಿಸುತ್ತವೆಂದು ಅಂದಾಜು ಮಾಡಲಾಯಿತು. ಅಂದರೆ ಸರಕಾರೀ ಬೇಡಿಕೆಯಾದ ೪೧,೩೦೦ ಟನ್ನು ಮಿಲ್ಲುಗಳ ಉತ್ಪಾದನೆ ಶೇ. ೮೭ ಆಗುತ್ತದೆ. ಸ್ಥೂಲವಾಗಿ ಅದು ಶೇ. ೯೦ ಆಗಿದ್ದಿತಾದ್ದರಿಂದ ಆದೇಶದಲಿ ಶೇ. ೯೦ ಎಂದು ನಮೂದಿಸಲಾಯಿತು. ಏಕೆ ನವೆಂಬರ್‌ನಲ್ಲಿ ಆದೇಶ ಹೊರಡಿಸಲಾಯಿತು ಎಂಬುದು ಈಗ ಸದನಕ್ಕೆ ವೇದ್ಯವಾದೀತು. ಕಾಗದ ಉತ್ಪಾದನೆಯಲ್ಲಿ ಹೆಚ್ಚು ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳನ್ನು ಕುರಿತು ನಾಲ್ಕು ಮಾತು ಹೇಳಬಯಸುತ್ತೇನೆ.

ಒಂದು ಮಾತು. ಕಾಗದದ ಕಾರ್ಖಾನೆಗಳು ತಮ್ಮ ಉತ್ಪಾದನೆಯನ್ನು ಅಧಿಕಗೊಳಿಸಲು ಹೆಚ್ಚುವರಿ ಯಂತ್ರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಸರಕಾರವು ನೆರವು ನೀಡಲು ಸಾಧ್ಯವಾಗುವುದಿಲ್ಲ ಎಂಬುದು ಸದನಕ್ಕೆ ಸ್ಪಷ್ಟವಾಗಿ ತಿಳಿದಿದೆ. ಹಡಗುಗಳ ಮೂಲಕ ಸಾಗಣೆ ಕಷ್ಟ ಎಂದೂ ಗೊತ್ತಿದೆ. ಸರಕಾರ ಇಲ್ಲಿ ಏನನ್ನೂ ಮಾಡಲು ಬರುವುದಿಲ್ಲ. ಆದ್ದರಿಂದ ನಮಗಿರುವ ಅವಕಾಶದಲ್ಲಿಯೇ ಕಾಗದದ ಉತ್ಪಾದನೆಯನ್ನು

ಹೆಚ್ಚುಮಾಡಲು ಏನು ಬೇಕೋ ಅದನ್ನು ಮಾಡಬೇಕು. ಈ ಸಂದರ್ಭದಲ್ಲಿ ಸರಕಾರವು ಕೈಗೊಂಡಿರುವ ಮೂರು ಕ್ರಮಗಳ ಕಡೆಗೆ ಮಾನ್ಯ ಸದಸ್ಯರ ಗಮನ ಸೆಳೆಯ ಬಯಸುತ್ತೇನೆ. ಸರಕಾರವು ಒಬ್ಬ ಕಾಗದ ಉತ್ಪಾದನಾ ಅಧಿಕಾರಿಯನ್ನು ನೇಮಿಸಿದೆ. ಕಾಗದ ತಯಾರಿಕೆಯನ್ನು ಅಧಿಕಗೊಳಿಸುವ ವಿಧಾನಗಳನ್ನು ಕಂಡುಹಿಡಿಯುವುದು ಇವರ ಕರ್ತವ್ಯವಾಗಿರುತ್ತದೆ.

**ಓರ್ವ ಗೌರವಾನ್ವಿತ ಸದಸ್ಯರು :** ಈ ಸಭ್ಯರು ಯಾರು ಎಂದು ತಿಳಿಯಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಶ್ರೀ ಭಾರ್ಗವ. ಎರಡನೆಯದಾಗಿ, ಸರಕಾರವು ಅಗತ್ಯವಲ್ಲದ ಅತ್ಯುತ್ತಮ ದುಬಾರಿ ಬಗೆಯ ಕಾಗದಗಳ ಉಪಯೋಗವನ್ನು ನಿಲ್ಲಿಸಿದೆ. ಅತ್ಯಂತ ಸುಲಭವಾಗಿ ತಯಾರಿಸುವ ಸಾಮಾನ್ಯ ಗುಣಮಟ್ಟದ ಕೆಲವೇ ಬಗೆಯ ಕಾಗದಗಳಿಗೆ ತನ್ನ ಬೇಡಿಕೆಯನ್ನು ಸೀಮಿತಗೊಳಿಸಿದೆ. ಮೊದಲನೆಯದಾಗಿ, ಸರಕಾರವು ಪ್ರತಿಯೊಂದೂ ಮಿಲ್ಲಿನೊಂದಿಗೆ ವ್ಯವಹರಿಸಿ ಯಾವ ಮಿಲ್ಲು ತನ್ನಲ್ಲಿರುವ ಯಂತ್ರೋಪಕರಣಗಳಿಗೆ ಅನುಸಾರವಾಗಿ ಯಾವ ಬಗೆಯ ಕಾಗದವನ್ನು, ಗರಿಷ್ಠ ಎಷ್ಟು ತಯಾರಿಸಬಹುದು ಎಂದು ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಉತ್ಪಾದನೆಯನ್ನು ಹೆಚ್ಚಿಸಲು ಕೈಗೊಂಡ ಈ ಕ್ರಮಗಳಿಂದ ಈಗ ಸುಮಾರು ೧೨,೦೦೦ ಟನ್ನುಗಳಷ್ಟು ಅಧಿಕ ಉತ್ಪಾದನೆಯಾಗಬಹುದು ಎಂದು ಅಂದಾಜು ಮಾಡಲಾಗಿದೆ.

ಸರಕಾರವು ಮಾಡಿರುವ ಇನ್ನೂ ಒಂದು ಕೆಲಸವೆಂದರೆ, ವಿವಿಧ ಇಲಾಖೆಗಳು ಕಾಗದಕ್ಕೆ ಮಂಡಿಸಿರುವ ಬೇಡಿಕೆಗಳಲ್ಲಿ ನಿರ್ದಾಕ್ಷಿಣ್ಯವಾಗಿ ಕಡಿತಗೊಳಿಸುವುದು. ವಿವರ ಹೀಗಿದೆ : ಪ್ರಾಂತೀಯ ಮತ್ತು ರಾಜ್ಯ ಬೇಡಿಕೆಗಳಲ್ಲಿ ಶೇ. ೧೦, ಇದರಿಂದ ೯೫೦ ಟನ್ನು ಉಳಿತಾಯವಾಗುತ್ತದೆ. ಎರಡನೆಯದಾಗಿ, ಕೇಂದ್ರ ಸರಕಾರಕ್ಕೆ ಸಂಬಂಧಿಸಿದಂತೆ, ವಿವಿಧ ಇಲಾಖೆಗಳು ಮಂಡಿಸಿದ ಮೂಲ ಅಂದಾಜು ಬೇಡಿಕೆಗಳನ್ನು ಪರಿಷ್ಕರಿಸಿ ಒಪ್ಪಬಹುದಾದ ಪ್ರಮಾಣಕ್ಕೆ ಇಳಿಸಲಾಗಿದೆ. ಈ ಅಂದಾಜುಗಳನ್ನು ಪರಿಷ್ಕರಿಸುವ ವಿಷಯದಲ್ಲಿ ಸರಕಾರ ಏನು ಮಾಡಿದೆ ಎಂಬುದನ್ನು ನಿದರ್ಶನ ಸಮೇತ ವಿವರಿಸುತ್ತೇನೆ. ಸಿವಿಲ್ ಇಲಾಖೆಗಳ ಮೊದಲ ಅಂದಾಜು ೧೧,೪೦೦ ಟನ್ ಆಗಿತ್ತು, ಅದನ್ನು ಮುಂದಿನ ಆರು ತಿಂಗಳಿಗೆ ೪,೬೦೦ ಟನ್‌ಗಳಿಗೆ ಇಳಿಸಲಾಗಿದೆ. ರಕ್ಷಣಾ ಇಲಾಖೆಯ ಬೇಡಿಕೆ ೧೫,೦೦೦ ಟನ್ ಇದ್ದುದನ್ನು ೧೦,೦೦೦ ಟನ್‌ಗಳಿಗೆ ಇಳಿಸಿದೆ. ಈಸ್ಟರ್ನ್ ಗ್ರೂಪ್ ಸಪ್ಲೈ ಕೌನ್ಸಿಲಿನ ಮೊದಲ ಅಂದಾಜು ೯,೪೦೦ ಟನ್; ಅದನ್ನು ೭,೯೦೦ ಟನ್‌ಗಳಿಗೆ ಪರಿಷ್ಕರಿಸಿದೆ. ಪೂರೈಕೆ ಇಲಾಖೆಯ ಅಗತ್ಯ ೩,೧೦೦ ಟನ್ ಇದ್ದುದನ್ನು ೪,೫೦೦ ಟನ್‌ಗಳಿಗೆ ಏರಿಸಿದೆ. ಕೈಗಾರಿಕೆಗೆ ವಾಣಿಜ್ಯ ಕಾಗದವನ್ನು ಬಳಸಲಾಗಿದೆ. ಹೀಗೆ ಎಲ್ಲ ಇಲಾಖೆಗಳ ಒಟ್ಟು ಅಂದಾಜು ಬೇಡಿಕೆ ೩೯,೧೦೦ ಟನ್ ಇದ್ದುದನ್ನು ಪರಿಷ್ಕೃತ ೨೭,೬೦೦ ಟನ್ ಮಾಡಲಾಗಿದೆ. ಮೊದಲೇ ಹೇಳಿದಂತೆ ಪ್ರಾಂತ ಹಾಗೂ ರಾಜ್ಯ ಸರಕಾರಗಳ ಬೇಡಿಕೆಯ ಪರಿಷ್ಕರಣದಿಂದ ೯೫೦ ಟನ್ ಉಳಿಯುತ್ತದೆ. ಎರಡೂ ಕೂಡಿ ೧೨,೮೫೦ ಟನ್ನುಗಳು. ಭಾರತದಲ್ಲಿ ಬಳಕೆಯಾಗುವ ಕಾಗದದ ಪ್ರಮಾಣದೊಂದಿಗೆ ಇದನ್ನು ಸ್ವಲ್ಪ ಹೋಲಿಸಿ ನೋಡಿ. ಇಲ್ಲಿ ಕರಾರುವಾಕ್ಕಾದ ಸಂಖ್ಯೆ ದೊರಕುವುದಿಲ್ಲ. ಪಡೆಯುವುದು ಸಾಧ್ಯವೂ ಇಲ್ಲ. ಆದರೆ ಸರಕಾರ ತೋರಿಸಿರುವ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಒಂದು ವರ್ಷದ ಬಳಕೆ ಒಂದು ಲಕ್ಷ ಟನ್ ಕಾಗದ. ಆರು ತಿಂಗಳಿಗೆ ಅದು ೫೦,೦೦೦ ಟನ್. ಇದರಲ್ಲಿ ಶೇ. ೧೦ ರಷ್ಟನ್ನು ಕಾಗದ ನಿಯಂತ್ರಕರು ನೀಡಿರುವ ಆದೇಶದ ಪ್ರಕಾರ ಸಾರ್ವಜನಿಕ ಬಳಕೆಗೆ ಇರಿಸಲಾಗಿದೆ ಎಂಬುದನ್ನು ಸದನವು ಗಮನಿಸಬಹುದು. ಇದು ಸಾರ್ವಜನಿಕರಿಗೆ ೫,೦೦೦ ಟನ್ನುಗಳನ್ನು ಕೊಡುತ್ತದೆ. ಇದಕ್ಕೆ ಈಗ ಉಳಿಸಿರುವ ಅಥವಾ ಮೇಲೆ ಸೂಚಿಸಿದ ಕಡಿತಗಳಿಂದ ಉಳಿಸಲಾಗುವ ೧೨,೮೫೦ ಟನ್ನುಗಳನ್ನೂ

ಸೇರಿಸಿದರೆ ಒಟ್ಟು ಬಿಡುಗಡೆ ಮಾಡುವ ಕಾಗದ ೧೭,೮೫೦ ಟನ್ನುಗಳು. ಇದು ಒಟ್ಟು ಉತ್ಪಾದನೆಯ ಸುಮಾರು ಶೇ. ೩೩, ಶಾಂತಿ ಕಾಲದಲ್ಲಿ ಸಾರ್ವಜನಿಕ ಬಳಕೆಗೆ ದೊರಕುವ ಕಾಗದ......

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್. ಅಬ್ದುರ್ ರಹೀಮ್)** : ಮಾನ್ಯ ಸದಸ್ಯರಿಗೆ ಕೊಟ್ಟಿದ್ದ ಸಮಯ ಮುಗಿಯಿತು; ಬೇರೆ ದಾರಿಯಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ನಾನು ಕಾಗದವು ಪೋಲಾಗುವುದನ್ನು ತಪ್ಪಿಸಲು ಅಗತ್ಯವಾದ ಕ್ರಮಗಳನ್ನು ಕುರಿತು ಹೇಳಬೇಕಾಗಿತ್ತು. ಸಮಯ ಮುಗಿದುಹೋಗಿರುವುದರಿಂದ ಆ ವಿವರಗಳಿಗೆ ಹೋಗುವುದಿಲ್ಲ. ಸದನವು ಬಯಸಿದ ಪಕ್ಷದಲ್ಲಿ ಅದನ್ನು ಪತ್ರಿಕೆಗಳಿಗೆ ಕಳುಹಿಸುತ್ತೇನೆ.

ಈ ಗೌರವಾನ್ವಿತ ಸದನದ ಮುಂದೆ ನಾನು ಉಲ್ಲೇಖಿಸಬೇಕಾದ ಮುಂದಿನ ವಿಷಯ, ಮುಂದಿನ ವರ್ಷ ನಾವು ಏನು ಮಾಡಲಿದ್ದೇವೆ ಎನ್ನುವುದು. ಮುಂದಿನ ವರ್ಷದ ಅಂದಾಜು ೭೦,೦೦೦ ಟನ್ನುಗಳು. ಕಾಗದದ ಅಗತ್ಯವಿರುವ ಎಲ್ಲಾ ಇಲಾಖೆಗಳಿಗೂ ಕೋಟಾ ನಿಗದಿಪಡಿಸಲಾಗಿದೆ. ಉದಾಹರಣೆಗೆ ಪ್ರಸಾರ ನಿಯಂತ್ರಕ ಅಧಿಕಾರಿಗೆ ೨೬೦ ಟನ್ನುಗಳಿಗಿಂತ ಹೆಚ್ಚು ದೊರಕುವುದಿಲ್ಲ ಎಂದು ತಿಳಿಸಲಾಗಿದೆ. ಪ್ರತಿ ಪ್ರಚಾರ ನಿರ್ದೇಶನಾಯಲಕ್ಕೆ ಕೇವಲ ೧೦೦ ಟನ್ ಸಿಕ್ಕುತ್ತದೆ; ರಾಷ್ಟ್ರೀಯ ಯುದ್ಧರಂಗ ೩೫೦ ಟನ್ ಪಡೆದರೆ, ಸಾರ್ವಜನಿಕ ವಾರ್ತಾ ಇಲಾಖೆಗೆ ೩೦೦ ಟನ್ ಕೊಟ್ಟಿದೆ. ಸಮಯ ಇದ್ದಿದ್ದರೆ ಸದನಕ್ಕೆ ಒದಗಿಸಬಹುದಾದ ಇನ್ನೂ ಬೇಕಾದಷ್ಟು ವಿಷಯಗಳಿದ್ದುವು. ಸದನದೆದುರು ನಾನು ಹೇಳುವ ಒಂದೇ ಒಂದು ಮಾತು, ಸರಕಾರವು ನಿಷ್ಕ್ರಿಯವಾಗಿದೆ, ಅಲಕ್ಷ್ಯ ತೋರಿಸಿದೆ ಎಂದು ಹೇಳುವುದು ಸೂಕ್ತವಲ್ಲ. ಮಿತವ್ಯಯಕ್ಕೆ ಇನ್ನೂ ಹಲವು ಕ್ರಮಗಳಿರಬಹುದು. ಯಾವ ಯಾವ ವಿಧಾನಗಳಿಂದ ಅದನ್ನು ಸಾಧಿಸಬಹುದು ಎಂದು ಸೂಚಿಸಿರುವ ಮಾನ್ಯ ಸದಸ್ಯಮಿತ್ರರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಈ ಸಲಹೆ ಸೂಚನೆಗಳನ್ನು ಖಂಡಿತವಾಗಿಯೂ ಸೂಕ್ತ ಸ್ಥಳಕ್ಕೆ ತಲುಪಿಸುತ್ತೇನೆ, ಅವರು ಕ್ರಮ ಕೈಗೊಳ್ಳುತ್ತಾರೆ. ಸರಕಾರವು ತನ್ನಿಂದಾಗುವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರು ಸಮಾಧಾನಹೊಂದಬಹುದು.

## ೯
## ನೌಕರರಿಗೆ ಅಸಮರ್ಪಕ ತುಟ್ಟಿಭತ್ಯೆ ನೀಡಿದ ಪ್ರಕಟಣೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ಮಾನ್ಯ ಮೆಹ್ತಾ ಅವರು ಮಂಡಿಸಿದ ಸೂಚನೆಯು ಎರಡು ಅಂಶಗಳನ್ನು ನಮ್ಮ ಮುಂದಿಡುತ್ತದೆ. ಒಂದು, ಸರಕಾರವು ತುಟ್ಟಿಭತ್ಯೆಯನ್ನು ಏರಿಸಿದಾಗ ಟ್ರೇಡ್ ಯೂನಿಯನ್ನುಗಳ ಪ್ರತಿನಿಧಿಗಳ ಸಲಹೆ ಪಡೆಯಲಿಲ್ಲ ಎನ್ನುವುದು. ಎರಡನೆಯ ಅಂಶ, ಕಳೆದ ಜನವರಿ ೨೧ ರಂದು ಪ್ರಕಟಿಸಿದ ತುಟ್ಟಿಭತ್ಯೆ ಬಹಳ ಕಡಮೆ, ಏನೇನೂ ಸಾಲದು ಎಂಬುದು. ಮಾನ್ಯರೆ, ಈ ಸೂಚನೆಯನ್ನು ತಂದುದಕ್ಕಾಗಿ ಶ್ರೀ ಮೆಹ್ತಾ ಅವರ ಬಗೆಗೆ ನನಗೆ ತುಂಬ ಸಹಾನುಭೂತಿಯಿದೆ. ಆದರೆ ಈ ಸೂಚನೆಯನ್ನು ತಪ್ಪು ತಿಳಿವಳಿಕೆಯಿಂದ ತರಲಾಗಿದೆ ಎಂದು ಹೇಳಲು ವಿಷಾದಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೧, ಫೆಬ್ರವರಿ ೧೨, ೧೯೪೩. ಪುಟ. ೧೯೭–೯೯.

ಮಾನ್ಯರೆ, ಮೊದಲನೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುತ್ತೇನೆ. ಭಾರತ ಸರಕಾರವು ಪ್ರಕಟಿಸಿದ ತುಟ್ಟಿಭತ್ಯೆ ಕಡಮೆ, ಏನೇನೋ ಸಾಲದು ಎಂಬುದೇ ಈ ಪ್ರಶ್ನೆ. ಇಲ್ಲಿ ಸರಕಾರವು ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಂಡಿಲ್ಲ ಎಂಬ ಅಂಶವನ್ನು ಸದನವು ಗಮನದಲ್ಲಿ ಇರಿಸಿಕೊಳ್ಳಬೇಕು. ಫೆಬ್ರವರಿ ೨೩ ನೆಯ ತಾರೀಕು ಪ್ರಕಟಣೆಯಲ್ಲಿ ಹೇಳಿರುವ ಅಂಕಿಗಳನ್ನು ಬದಲಾಯಿಸುವಂತಿಲ್ಲ, ಅಥವಾ ಹೆಚ್ಚಿಸುವಂತಿಲ್ಲ ಎಂದೇನೂ ಇಲ್ಲ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ (ಪ್ರೆಸಿಡೆನ್ಸಿ ವಿಭಾಗ** : ಮಹಮದೀಯೇತರ – ಗ್ರಾಮಾಂತರ): ಹಾಗೆಂದರೆ ಅದು ತಾತ್ಕಾಲಿಕವಾದದ್ದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇರಬಹುದು. ಆ ಪ್ರಕಟನೆಯಲ್ಲಿನ ಅಂಕಿಗಳಿಂದ ಸಾಕಷ್ಟು ತುಟ್ಟಿಭತ್ಯೆ ಕೊಡಲಾಗಿಲ್ಲ ಎಂದು ತೋರುತ್ತದೆ. ಆದರೆ ನಾನು ಆಗಲೇ ಹೇಳಿದ ಹಾಗೆ ಇದು ಕೊನೆಯ ನಿರ್ಣಯವಾಗಿಲ್ಲ. ಇನ್ನೂ ಪರಿಸ್ಥಿತಿ ಅಂತಿಮವಾಗಿಲ್ಲ. ತುಟ್ಟಿಭತ್ಯೆಯನ್ನು ಯಾವ ರೂಪದಲ್ಲಿ ನೀಡಬೇಕು ಎಂಬುದು ಈಗ ಸರಕಾರ ಪರಿಶೀಲಿಸಬೇಕಾಗಿರುವ ಅಂಶ. ಅದು ನಗದು ಭತ್ಯೆ ಆಗಿರಬೇಕೆ ಅಥವಾ ಆಹಾರ ಸಾಮಗ್ರಿಯ ರೂಪದಲ್ಲಿರಬೇಕೆ ಎಂಬುದನ್ನು ನಿರ್ಧರಿಸಿ ಆಮೇಲೆ ಯಾವ ದರದಲ್ಲಿ ತುಟ್ಟಿಭತ್ಯೆ ನೀಡಬೇಕೆಂಬುದನ್ನು ಅಂತಿಮಗೊಳಿಸಬಹುದು. ಆದ್ದರಿಂದ ಈ ವಿಷಯದಲ್ಲಿ ಸರಕಾರವು ತಿದ್ದಲಾಗದ, ಸರಿಪಡಿಸಲಾಗದ ನಿರ್ಣಯ ತೆಗೆದುಕೊಂಡಿದೆ ಎಂದು ಹೇಳಲು ಬರುವುದಿಲ್ಲ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** ಒಳ್ಳೆಯ ನಡವಳಿಕೆಗಾಗಿ ಭತ್ಯೆಯೂ ಇದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಂಚೆ ಇಲಾಖೆಯಲ್ಲಿ ಅಂಥದೊಂದು ರಿಯಾಯಿತಿ ಇದೆ ಎಂದು ನನ್ನ ಭಾವನೆ. ತುಟ್ಟಿಭತ್ಯೆಯ ಕೊರತೆಗೆ ಸಂಬಂಧಿಸಿದಂತೆ ಹೇಳುವುದಾದರೆ ವಿಷಯ ಇನ್ನೂ ಮುಗಿದಿಲ್ಲ, ಸೂಕ್ತ ಕಾಲದಲ್ಲಿ ಪರಿಶೀಲಿಸಬಹುದು.

ಇನ್ನು ಎರಡನೆಯ ಆಕ್ಷೇಪಣೆ, ಸರಕಾರವು ಟ್ರೇಡ್ ಯೂನಿಯನ್ನುಗಳ ಪ್ರತಿನಿಧಿಗಳ ಸಲಹೆ ಪಡೆಯಲಿಲ್ಲ ಎನ್ನುವುದರ ಬಗೆಗೆ, ಈ ಕೆಲವು ಅಂಶಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಮೊದಲನೆಯದಾಗಿ ಕಾರ್ಮಿಕರೊಂದಿಗೆ ಸಂಪರ್ಕ ಸ್ಥಾಪಿಸಿಕೊಳ್ಳುವುದರಲ್ಲಿ ಕೆಲವು ಕಷ್ಟಗಳಿವೆ. ನನ್ನ ಮಾನ್ಯ ಮಿತ್ರರಾದ ಶ್ರೀ ಜಮ್ನಾದಾಸ್ ಮೆಹ್ತಾ ಅವರಿಗೇ ತಿಳಿದಿರುವ ಹಾಗೆ, ರೈಲ್ವೆಯಲ್ಲಿ ಕಾರ್ಮಿಕ ಸಂಘಗಳಿವೆ. ಅವೆಲ್ಲ ಒಕ್ಕೂಟವಾಗಿ ಒಂದು ಸಂಸ್ಥೆಯಾಗಿದೆ. ರೈಲ್ವೆ ಕೆಲಸಗಾರರೊಂದಿಗೆ ಸಂಪರ್ಕ ಸ್ಥಾಪಿಸುವುದಕ್ಕೆ, ಅಗತ್ಯ ಬಂದಾಗ ಅವರ ಸಲಹೆ ಪಡೆಯುವುದಕ್ಕೆ ಇದರಿಂದ ತುಂಬ ಸುಲಭವಾಗಿದೆ. ಸರಕಾರ ಇದನ್ನು ಮಾಡುತ್ತದೆ ಎಂಬುದನ್ನು ಮಾನ್ಯ ಮಿತ್ರ ಜಮ್ನಾದಾಸ್ ಮೆಹ್ತಾ ಒಪ್ಪುತ್ತಾರೆ ಎಂದು ಎಣಿಸುತ್ತೇನೆ. ರೈಲ್ವೆ ಮಂಡಳಿ ಹಾಗೂ ರೈಲ್ವೆ ನೌಕರರ ಒಕ್ಕೂಟಗಳು ವರ್ಷಕ್ಕೆ ಎರಡು ಬಾರಿ ಅಧಿವೇಶನ ಸೇರಿ ಸಮಾನ ಹಿತದ ಅಂಶಗಳನ್ನು ಚರ್ಚಿಸುವುದು ಈಗ ಸಂಪ್ರದಾಯವಾಗಿ ಪರಿಣಮಿಸಿದೆ.

ಇದಲ್ಲದೆ, ಕೇಂದ್ರ ಸರಕಾರದ ಅಧೀನದಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ನೌಕರರಿದ್ದಾರೆ. ನನಗೆ ತಿಳಿದುಬಂದಿರುವಂತೆ ಅಂಚೆ ಮತ್ತು ತಂತಿ ಕೆಲಸಗಾರರನ್ನು ಪ್ರತಿನಿಧಿಸುವ ಹನ್ನೆರಡು ಸಂಘಗಳಿವೆ. ಅವುಗಳಲ್ಲಿ ನಾಲ್ಕು ಮೇಲಧಿಕಾರಿಗಳನ್ನು ಪ್ರತಿನಿಧಿಸಿದರೆ ಎಂಟು ಕೆಲಸಗಾರರನ್ನು ಪ್ರತಿನಿಧಿಸುತ್ತವೆ. ದುರದೃಷ್ಟವಶಾತ್ ಇಡೀ ಅಂಚೆ ಮತ್ತು ತಂತಿ ಇಲಾಖೆಯನ್ನು ಪ್ರತಿನಿಧಿಸುವ ಒಂದು ಸಂಸ್ಥೆ, ಒಂದು ಒಕ್ಕೂಟ ಇಲ್ಲ. ರೈಲ್ವೆ ಮಂಡಳಿಯು ರೈಲ್ವೆ ನೌಕರರ ಒಕ್ಕೂಟದೊಂದಿಗೆ ಸ್ಥಾಪಿಸಿಕೊಂಡಿರುವಂತಹ ಸಂಪರ್ಕವನ್ನು ಇಲ್ಲಿ ಸ್ಥಾಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಕಷ್ಟವಿದ್ದರೂ ಸರಕಾರವು ಅಂಚೆ ಮತ್ತು ತಂತಿ

ಇಲಾಖೆಯ ನೌಕರರನ್ನು ಸಂಪರ್ಕಿಸಿತು ಎಂದು ತಮಗೆ ತಿಳಿಸಲು ಇಚ್ಛಿಸುತ್ತೇನೆ. ಜನವರಿ ೧೯೪೩ರ ಟೆಲಿಗ್ರಾಫ್ ರಿವ್ಯೂ ಎಂಬ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಒಂದು ಸಣ್ಣ ಪ್ಯಾರಾ ಅನ್ನು ತಮ್ಮ ಎದುರಿಗೆ ಇಡುತ್ತೇನೆ. ಇದು ಅಂಚೆ ಮತ್ತು ತಂತಿ ಇಲಾಖೆಯು ಆ ನೌಕರರೊಂದಿಗೆ ಸಂಪರ್ಕ ಸಾಧಿಸಲು ಮಾಡಿದ ಪ್ರಯತ್ನಗಳನ್ನು ದಾಖಲಿಸಿದೆ. ರಿವ್ಯೂ ಹೀಗೆ ಹೇಳುತ್ತದೆ:

"ಇತ್ತೀಚೆಗೆ ಕಲ್ಕತ್ತೆಗೆ ಭೇಟಿ ನೀಡಿದ ಸಮಯದಲ್ಲಿ ಮಹಾ ನಿರ್ದೇಶಕರು (ಡೈರೆಕ್ಟರ್ ಜನರಲ್) ಮಾನ್ಯತೆ ಪಡೆದ ವಿವಿಧ ಸಂಘಗಳ ಪ್ರತಿನಿಧಿಗಳನ್ನು ಆಹ್ವಾನಿಸಿದರು. ೧೯೪೨ರ ಡಿಸೆಂಬರ್ ೧೦ ರಂದು ಒಂದು ಜಂಟಿ ಸಭೆ ನಡೆಸಿ ತುಟ್ಟಿಭತ್ಯೆ ಸಂಬಂಧವಾಗಿ ಮಾತುಕತೆ ನಡೆಸಿದರು. ಈ ಸಭೆಯಲ್ಲಿ ಪ್ರತಿನಿಧಿಗಳು ಈ ಪ್ರಶ್ನೆಯ ಬಗ್ಗೆ ಒಂದು ಒಟ್ಟಾಭಿಪ್ರಾಯವನ್ನು ಕೊಡಲು ಶಕ್ತರಾಗಲಿಲ್ಲ. ಆಮೇಲೆ ೧೯೪೨ರ ಡಿಸೆಂಬರ್ ೧೨ ರಂದು ಸಂಜೆ ಕಲ್ಕತ್ತೆಯ ಪೋಸ್ಟಲ್ ಕ್ಲಬ್‌ನ ತಾರಾಪದ್ ಭವನದಲ್ಲಿ ಅವರು ಮತ್ತೆ ಸಭೆ ಸೇರಿದರು. ಪರಸ್ಪರ ವಿಚಾರ ವಿನಿಮಯ ನಡೆಸಿ ತುಟ್ಟಿಭತ್ಯೆಯ ಬಗ್ಗೆ ಹೊಸ ಸೂತ್ರವೊಂದನ್ನು ರೂಪಿಸಿದರು. ಅದನ್ನು ಈ ಸಂಚಿಕೆಯ ಬೇರೆ ಕಡೆ ಪ್ರಕಟಿಸಲಾಗಿದೆ".

**ಮಾನ್ಯ ಜಮ್ನಾದಾಸ್ ಎಂ. ಮೆಹ್ತಾ :** ಆ ಯೋಜನೆಯಲ್ಲಿ ಅವರು ಕೇಳಿದ್ದೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರು ಮತ್ತೆ ಮಹಾ ನಿರ್ದೇಶಕರನ್ನು ಭೇಟಿ ಮಾಡಿದರು. ೧೯೪೨ರ ಡಿಸೆಂಬರ್ ೧೮ರಂದು ಪ್ರತಿನಿಧಿಗಳು ಈ ಭೇಟಿ ನಡೆಸಿ ತಮ್ಮ ಯೋಜನೆಯನ್ನು ಅವರೆದುರಿನಲ್ಲಿ ಮಂಡಿಸಿದರು.

**ಮಾನ್ಯ ಜಮ್ನಾದಾಸ್ ಎಂ. ಮೆಹ್ತಾ :** ಅವರ ಬೇಡಿಕೆ ಏನಿತ್ತು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ತುಂಬಾ ದೀರ್ಘವಾಗಿದೆ. ಕ್ಷಮಿಸಬೇಕು, ಸಮಯ ಸಾಕಷ್ಟಿಲ್ಲವಾದ್ದರಿಂದ ಅದನ್ನು ಪೂರ್ತಿಯಾಗಿ ಇಲ್ಲಿ ಓದಲಾರೆ. ನನ್ನ ಮಿತ್ರರು ಅಪೇಕ್ಷೆ ಪಡುವುದಾದರೆ ಅವರ ಅವಲೋಕನಕ್ಕಾಗಿ ಅದನ್ನು ಕಳುಹಿಸಿಕೊಡುತ್ತೇನೆ. ಇಲ್ಲಿ ನಾನು ಹೇಳಬೇಕಾಗಿರುವ ವಿಚಾರವೇನೆಂದರೆ, ಅಂಚೆ ಮತ್ತು ತಂತಿ ವಿಭಾಗದ ವಿಷಯದಲ್ಲಿ, ತುಟ್ಟಿಭತ್ಯೆಯ ಪ್ರಕಟಣೆಗೆ ಮೊದಲು ಸರಕಾರಕ್ಕೂ ನೌಕರರಿಗೂ ನಡುವೆ ಸಮಾಲೋಚನೆ ನಡೆಯಲಿಲ್ಲ ಎಂದು ಹೇಳುವುದು ಸಾಧ್ಯವಿಲ್ಲ.

ಇನ್ನು ಉಳಿಯುವುದು ಕೇಂದ್ರ ಸರಕಾರದ ಗುಮಾಸ್ತ ವರ್ಗದ ನೌಕರರು. ಇವರಲ್ಲಿ ಸಂಘವೂ ಇಲ್ಲ, ಒಕ್ಕೂಟವೂ ಇಲ್ಲ. ಒಂದು ಸಣ್ಣ ಸಂಘ, ಇಂಪೀರಿಯಲ್ ಸೆಕ್ರೆಟೇರಿಯಟ್ ಅಸೋಸಿಯೇಷನ್ ಎಂಬ ಸಂಘವಿದೆ. ಎರಡನೆಯದಾಗಿ, ದಫ್ತರಿ ಎಂಡ್ ರಿಕಾರ್ಡ್ ಸಾರ್ಟರ್ಸ್ ಅಸೋಸಿಯೇಷನ್, ಮೂರನೆಯದಾಗಿ, ಜನರಲ್ ಹೆಡ್‌ಕ್ವಾರ್ಟರ್ಸ್ ಅಸೋಸಿಯೇಷನ್. ಈ ಸಂಘಗಳನ್ನು ಸಂಪರ್ಕಿಸಿ ನಾವು ಸಲಹೆ ಪಡೆಯುವುದಿರಲಿ, ಅವರೇ ತಮ್ಮ ಪ್ರತಿನಿಧಿಗಳನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದರು. ಮಾನ್ಯ ಗೃಹಖಾತೆಯ ಸದಸ್ಯರು ಹಾಗೂ ಹಣಕಾಸು ಖಾತೆಯ ಸದಸ್ಯರು ಅವರೊಡನೆ ಮಾತುಕತೆ ನಡೆಸಿದರು ಅಂದಮೇಲೆ ಪ್ರಾರಂಭದಲ್ಲೇ ನಾನು ಹೇಳಿದ ಹಾಗೆ ಮಾನ್ಯ ಜಮ್ನಾದಾಸ್ ಮೆಹ್ತಾ ಅವರು ಕಳುಹಿಸಿರುವ ಸೂಚನೆಗೆ ಆಧಾರವಿಲ್ಲ. ಅದು ಸರಿಯಾಗಿಲ್ಲ. ಸರಕಾರವು ಉದ್ದಕ್ಕೂ ತನ್ನ ಎಂದಿನ ಧೋರಣೆಯನ್ನೇ, ಅಂದರೆ ನೌಕರರೊಡನೆ ಸಾಧ್ಯವಿರುವಷ್ಟೂ ಸಮಾಲೋಚಿಸುವ ಪದ್ಧತಿಯನ್ನೇ ಉಳಿಸಿಕೊಂಡು ಬಂದಿದೆ.

# ೧೦
# ಭಾರತೀಯ ಹಣಕಾಸು ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ಈ ಚರ್ಚೆಯ ನಡುವೆ ಸನ್ಮಾನ್ಯ ಸದಸ್ಯರು ಕಾರ್ಮಿಕ ಇಲಾಖೆಗೆ ಸಂಬಂಧಿಸಿದಂತೆ ಸರಕಾರವು ಕೈಗೊಂಡ ಕೆಲವು ಕ್ರಮಗಳ ಗುಣ ದೋಷಗಳನ್ನು ಕುರಿತು ಮಾಡಿರುವ ಟೀಕೆಗಳಿಗೆ ಉತ್ತರ ಕೊಡಲು ನಾನೀಗ ನಿಂತಿದ್ದೇನೆ. ಮೊದಲು ಸರ್ ಫ್ರೆಡರಿಕ್ ಜೇಮ್ಸ್ ಅವರು ಎತ್ತಿರುವ ಅಂಶಗಳನ್ನು ತೆಗೆದುಕೊಳ್ಳುತ್ತೇನೆ. ಸದನಕ್ಕೆ ತಿಳಿದಿರುವಂತೆ, ಅವರು ಕಾರ್ಮಿಕ ವಿಭಾಗದ ವಿಷಯವಾಗಿ ಎರಡು ಅಂಶಗಳಿಗೆ ವಿಶೇಷ ಗಮನ ನೀಡಿದರು. ಮೊದಲನೆಯದು ಕಾಗದಕ್ಕೆ ಸಂಬಂಧಿಸಿದ್ದು. ಭಾರತ ಸರಕಾರವು ಕಾಗದದ ಬಳಕೆಯಲ್ಲಿ ಅನಗತ್ಯವಾಗಿ ಪೋಲು ಮಾಡುತ್ತಿದೆ, ತಾವು ನಷ್ಟ ಎಂದು ಕರೆದುದಕ್ಕೆ ಹೇಗೆ ಸರಕಾರವೇ ಎಲ್ಲ ದೃಷ್ಟಿಗಳಿಂದಲೂ ಹೊಣೆಗಾರ ಎಂದು ಅವರು ವಾದಿಸಿದರು. ಸ್ವಾಮಿ, ಕಾಗದವನ್ನು ಕುರಿತ ಪ್ರಶ್ನೆ ಈ ಅವಧಿಯಲ್ಲೇ ಒಮ್ಮೆ ಚರ್ಚಿತವಾಗಿ ಮುಗಿದಿದೆ. ಸರಕಾರದ ಪರವಾಗಿ ಅದಕ್ಕೆ ನಾನೇ ಉತ್ತರ ನೀಡಿದೆ. ಬಹುಶಃ ಮಾನ್ಯ ಮಿತ್ರರಾದ ಸರ್ ಫ್ರೆಡರಿಕ್ ಜೇಮ್ಸ್ ಅವರಿಗೆ ಸರಕಾರವು ಕೊಟ್ಟ ಉತ್ತರ ತೃಪ್ತಿಕರವಾಗಿರಲಿಕ್ಕಿಲ್ಲ. ಹಾಗಾಗಿ ಮತ್ತೆ ಅದೇ ವಿಷಯವನ್ನು ಅವರು ಎತ್ತಿದ್ದಾರೆ. ಹಾಗೆ ಅವರು ಪುನಃ ಆ ವಿಷಯವನ್ನೆತ್ತಿಕೊಂಡುದನ್ನು ನಾನು ಆಕ್ಷೇಪಿಸುವುದಿಲ್ಲ. ಏಕೆಂದರೆ ಅದರಿಂದ ನನಗೆ ಕಾಗದ ಬಳಕೆಯ ವಿಷಯದಲ್ಲಿ ಸರಕಾರ ಏನು ಮಾಡುತ್ತಿದೆ ಎಂದು ವಿವರಿಸಲು ಮತ್ತೊಂದು ಅವಕಾಶ ದೊರಕಿದ ಹಾಗಾಯಿತು. ಮಾನ್ಯರೆ, ನೇರವಾಗಿ ವಿಷಯ ಪ್ರವೇಶ ಮಾಡುವುದಕ್ಕೆ ಮೊದಲು, ನನಗೆ ತಿಳಿದಿರುವಂತೆ ಸದನವು ಕಾಗದದ ಅಭಾವ ಉಂಟಾಗಿದೆ ಎಂಬ ಅತಿ ಕಾತರ ಕಳವಳ ಪ್ರದರ್ಶಿಸುತ್ತಿದೆ ಎಂದು ನನಗೆ ತೋರುತ್ತಿದೆ. ಇದನ್ನು ಹೇಳುವುದು ಅಪೇಕ್ಷಣೀಯ. ಆದರೆ ತೀವ್ರವಾದ ಕೊರತೆಯನ್ನು ನಾವು ಅನುಭವಿಸುತ್ತಿದ್ದೇವೆ ಎಂದು ನನಗೆ ನಿಜವಾಗಿ ಅನ್ನಿಸುತ್ತಿಲ್ಲ. ಗ್ರೇಟ್ ಬ್ರಿಟನ್ನಿನಲ್ಲೂ ಭಾರತದಲ್ಲೂ ಪ್ರಕಟಿಸಿರುವ ಕೆಲವು ಪ್ರಕಟಣೆಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಇದು ತಮಗೆ ಸ್ವಾರಸ್ಯಕರವಾಗಿ ತೋರಬಹುದು.

ಸ್ವಾಮಿ, ೧೯೩೯ರಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ೧೫,೦೦೦ ಪುಸ್ತಕಗಳು ಹೊರಬಂದವು. ೧೯೪೦ರಲ್ಲಿ ಹನ್ನೊಂದು ಸಾವಿರ, ೧೯೪೧ರಲ್ಲಿ ಈ ಸಂಖ್ಯೆ ೧೪ ಸಾವಿರ. ಕಾಗದದ ಕೊರತೆ ನಮಗೆ ಸಂಬಂಧಪಡದ ವಿಚಾರ ಎಂದು ನಾನು ಹೇಳುವುದಿಲ್ಲ. ನಾನು ಈಗಾಗಲೇ ಹೇಳಿರುವಂತೆ ಕೊರತೆಯೇನೋ ಇದೆ, ಆದರೆ ಈ ವಿಷಯದಲ್ಲಿ ತೀವ್ರವಾದ ಕೊರತೆಯಿಲ್ಲ.

ಮುಂದುವರಿಯುವುದಕ್ಕೆ ಮೊದಲು, ಸದನಕ್ಕೆ ನೆನಪಿರುವ ಹಾಗೆ, ಸರ್ ಫ್ರೆಡರಿಕ್ ಜೇಮ್ಸ್ ಅವರು ಭಾರತ ಸರಕಾರದ ಮೇಲೆ ದುಂದುಗಾರಿಕೆಯ ಆಪಾದನೆ ಹೊರಿಸುವುದಕ್ಕೆ ಎರಡು ನಿದರ್ಶನಗಳನ್ನು ಅವಲಂಬಿಸಿದರು. ಕಳೆದ ಬಾರಿ ವಿಷಯ ಚರ್ಚಿತವಾದಾಗ, ಕಲ್ಕತ್ತಾದ ನಿವಾಸಿಗಳಿಗೆ ಜಾರಿ ಮಾಡಿರುವ, ವೆಸ್ಟರ್ನ್ ಕೋರ್ಟ್ ನೀಡಿರುವ ಒಂದು ಬಾಡಿಗೆ ಬಿಲ್ಲನ್ನು ತೋರಿಸಿದರು. ಈ ಬಿಲ್ಲನ್ನು ಬಾಡಿಗೆದಾರರಿಗೆ ಕೊಡಲಾಯಿತು, ಬಾಡಿಗೆ ಅಗಾಧವಾಗಿದೆ, ಅದರಲ್ಲಿನ ಎಷ್ಟೋ ಅಂಶಗಳು ಅನಾವಶ್ಯಕವಾಗಿದ್ದವು, ಅದರಲ್ಲೂ ಯುದ್ಧದ ಈ ಸಮಯದಲ್ಲಿ ಅವುಗಳಲ್ಲಿ ಕಡಿತ ಮಾಡಬಹುದಾಗಿತ್ತು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ಮಾರ್ಚ್ ೧೬, ೧೯೪೩, ಪು. ೧೧೩೦–೩೪

ಎಂಬುದು ಅವರ ಅಭಿಪ್ರಾಯ. ಈ ಸಾರಿ ಕಲ್ಕತ್ತ ಗೆಜೆಟಿನ ಹರಿದುಹೋದ ಪ್ರತಿಯೊಂದನ್ನು ಹಾಜರುಪಡಿಸಿ, ಯುದ್ಧದ ಸಮಯದಲ್ಲಿ ಪ್ರಕಟಿಸುವ ಅಗತ್ಯವಿರದ ಎಷ್ಟೋ ಅಂಶಗಳನ್ನು ಇದು ಹೊಂದಿದೆ ಎಂದು ಆಕ್ಷೇಪಿಸಿದ್ದಾರೆ.

**ಸರ್ ಎಫ್.ಇ. ಜೇಮ್ಸ್ (ಮದರಾಸ್** : ಯೂರೋಪಿಯನ್) : ನನ್ನ ಮಾನ್ಯ ಮಿತ್ರರ ಮಾತಿಗೆ ಒಂದೇ ಕ್ಷಣ ತಡೆಯೊಡ್ಡಬಹುದೇ? ನಾನು ನೀಡಿರುವ ಕಲ್ಕತ್ತ ಗೆಜೆಟ್ ಅದೇ ಇತ್ತೀಚೆಗೆ ಕಲ್ಕತ್ತೆಯಿಂದ ಬಂದದ್ದು. ಈ ವರ್ಷದ ಫೆಬ್ರವರಿ ಎಂದು ಅದರಲ್ಲಿ ದಾಖಲಾಗಿದೆ ಎಂದು ನನ್ನ ಭಾವನೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನ್ನ ಮಾನ್ಯ ಮಿತ್ರರಿಗೆ ನಾನು ಆಭಾರಿ. ಈಗ ನಾನು ಹೇಳಬೇಕಾಗಿರುವ ಮಾತು ಇದು. ಸರ್ ಫ್ರೆಡರಿಕ್ ಜೇಮ್ಸ್ ಅವರು ವಕೀಲರಾಗಿದ್ದ ಪಕ್ಷದಲ್ಲಿ ಈ ಎರಡು ವಸ್ತುಗಳನ್ನೂ ತಮ್ಮ ವಾದಕ್ಕೆ ಪೂರಕವಾಗಿ ತರುತ್ತಿರಲಿಲ್ಲ ಎಂದು ನಾನು ಖಂಡಿತವಾಗಿ ಹೇಳುತ್ತೇನೆ. ಬಾಡಿಗೆ ಬಿಲ್ಲಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ಮುದ್ರಿತವಾಗಿರುವ ತಾರೀಖನ್ನು ಅವರು ಗಮನಿಸಲಿಲ್ಲ ಎಂದು ತೋರುತ್ತದೆ. ಆ ಬಿಲ್ಲು ಮುದ್ರಿತವಾದದ್ದು ೧೯೩೮ ರಲ್ಲಿ. ಆ ಬಿಲ್ಲನ್ನು ಬಳಸಿದ್ದಕ್ಕಾಗಿ ಭಾರತ ಸರಕಾರವನ್ನು ಟೀಕಿಸುವುದಕ್ಕೆ ಬದಲಾಗಿ, ಹಳೆಯ, ಉಳಿದುಹೋದ ದಾಸ್ತಾನನ್ನು ಹಾಳಾಗಲು ಬಿಡದೆ, ಹಾಳು ಮಾಡದೆ, ಬಳಸಿದ್ದಕ್ಕಾಗಿ ಅಭಿನಂದಿಸಬೇಕಾಗುತ್ತದೆ. ಬೇಕಾದಷ್ಟು ಬಿಲ್ ಪುಸ್ತಕಗಳು ಉಳಿದುಹೋಗಿದ್ದುದರಿಂದ, ಅವುಗಳನ್ನು ಬದಲಿಸಬೇಕಾದ ಅಗತ್ಯವಿದ್ದರೂ ಕೂಡ ಕಾಗದದ ಉಳಿತಾಯದ ದೃಷ್ಟಿಯಿಂದ ಹಳೆಯ ದಾಸ್ತಾನನ್ನು ಬಳಸಿ ಮುಗಿಸಲು ಸರಕಾರವು ತೀರ್ಮಾನಿಸಿತು.

**ಸರ್ ಎಫ್.ಇ. ಜೇಮ್ಸ್ :** ಅವುಗಳನ್ನು ರದ್ದಿಗೆ ಹಾಕಿ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಇನ್ನು ಗೆಜೆಟ್ ಸಂಬಂಧವಾಗಿ ಹೇಳುವುದಾದರೆ, ಇಲ್ಲೂ ಸರ್ ಫ್ರೆಡರಿಕ್ ಜೇಮ್ಸ್ ಅವರು ಎಡವಿದ್ದಾರೆ. ಗೆಜೆಟ್ಟಿನ ಮಹತ್ವವನ್ನು ಅವರು ಅರ್ಥ ಮಾಡಿಕೊಳ್ಳಲು ಶಕ್ತರಾಗಿಲ್ಲ. ಗೆಜೆಟ್ಟಿನಲ್ಲಿ ಉಪಯುಕ್ತ ಮಾಹಿತಿಗಳಿರುತ್ತವೆ. ಸರಕಾರಕ್ಕೆ ಉಪಯೋಗವಾಗುವ ಮಾಹಿತಿಗಳು ಇರುತ್ತವೆ. ಆದರೆ ಪ್ರತಿಯೊಬ್ಬ ವಕೀಲನೂ ಒಂದು ವಿಚಾರ ತಿಳಿದುಕೊಂಡಿರುತ್ತಾನೆ. ನ್ಯಾಯಾಲಯದಲ್ಲಿ ಕೆಲವು ಸಂದರ್ಭಗಳಲ್ಲಿ ಬೇರೆ ಯಾವ ಸಾಕ್ಷ್ಯಾಧಾರವೂ ಇಲ್ಲವಾದಾಗ ಗೆಜೆಟ್‌ನ್ನು ಮಂಡಿಸಿ ಅದರ ಮಾಹಿತಿಯನ್ನು ಆಧಾರವಾಗಿ ಒದಗಿಸಲಾಗುತ್ತದೆ. ಕೊನೆಗೆ ಶತ್ರುಗಳಿಗೆ ಸೇರಿದ ಅಂಗಡಿ ಮುಂಗಟ್ಟುಗಳು, ಪೇಟೆಂಟುಗಳು ಇಂಥವನ್ನೂ ಕೂಡ ಎವಿಡೆನ್ಸ್ ಆ್ಯಕ್ಟ್ ಪ್ರಕಾರ ಗೆಜೆಟ್ಟಿನಿಂದ ಸಮರ್ಥಿಸಬಹುದು. ಆದ್ದರಿಂದ, ಸರಕಾರದ ಕಾಗದ ಬಳಕೆಯ ಮಿತಿಯ ವಿಷಯದಲ್ಲಿ ಬೇರೆ ಏನನ್ನಾದರೂ ಮಾಡಬಹುದು, ಆದರೆ ಗೆಜೆಟ್ಟನ್ನು ನಾವು ಮುಟ್ಟಲೂ ಕೂಡದು ಎಂಬ ನನ್ನ ಮಾತನ್ನು ಸರ್ ಫ್ರೆಡರಿಕ್ ಜೇಮ್ಸ್ ಒಪ್ಪುವುದಿಲ್ಲವೇ?

**ಸರ್ ಎಫ್.ಇ. ಜೇಮ್ಸ್ :** ನನ್ನ ವಾದ ಹೀಗಿತ್ತು. ಕೇಂದ್ರ ಸರಕಾರದ ಗೆಜೆಟ್ಟಿನಲ್ಲಿ ಪ್ರಕಟವಾದ ಸಮಸ್ತವನ್ನೂ ಎಲ್ಲಾ ಪ್ರಾಂತೀಯ ಗೆಜೆಟ್ಟುಗಳಲ್ಲೂ – ನಿಸ್ಸಂದೇಹವಾಗಿ ಅವು ಅವರಿಗೆ ಅಮುಖ್ಯವಾಗಿರುತ್ತದೆ – ಪ್ರಕಟಿಸುವುದು ಅಗತ್ಯವೆ ಎಂಬ ಬಗ್ಗೆ ಒಂದು ವಿಚಾರಣೆ ನಡೆಸಬೇಕು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಅದಕ್ಕಿರುವ ಸ್ಪಷ್ಟ ಕಾರಣ, ಪ್ರತಿಯೊಂದು ಪ್ರಾಂತೀಯ ಸರಕಾರವೂ ತನ್ನದೇ ಪ್ರಾಂತೀಯ ಗೆಜೆಟ್ಟನ್ನು ಪ್ರಕಟಿಸಬೇಕು ಎನ್ನುವುದು. ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್ ಅದನ್ನು ವಿಧಿಸುತ್ತದೆ. ಆದರೆ, ಮಾನ್ಯರೆ ವಾದಕ್ಕಾಗಿ ವಾದ ಮಾಡುತ್ತಾ ನಿಲ್ಲಬೇಕಾದ ಪ್ರಮೇಯವಿಲ್ಲ. ಭಾರತ ಸರಕಾರವು ಕಾಗದ ಬಳಕೆಯನ್ನು ಕಡಮೆಮಾಡಲು ಕೈಗೊಂಡಿರುವ ವಾಸ್ತವಿಕ ಕ್ರಮಗಳನ್ನು ಮಾತ್ರ ಹೇಳುತ್ತೇನೆ. ಮೊದಲು ಗೆಜೆಟ್ ವಿಷಯವನ್ನೇ ತೆಗೆದುಕೊಳ್ಳುತ್ತೇನೆ. ನನ್ನ ಮಿತ್ರರಾದ ಸರ್

ಫ್ರೆಡರಿಕ್ ಜೇಮ್ಸ್ ಅವರೂ, ಈ ವಿಷಯದಲ್ಲಿ ಆಸಕ್ತಿಯುಳ್ಳ ಇತರ ಸದಸ್ಯರೂ ದಯವಿಟ್ಟು ಆಗಸ್ಟ್ ೨೯ನೆಯ ತಾರೀಕಿನ ಗೆಜೆಟ್ ಆಫ್ ಇಂಡಿಯಾದ ಎರಡನೇ ಭಾಗದ ೧ನೇ ಉಪವಿಭಾಗವನ್ನು ೧೯೪೩ರ ಮಾರ್ಚ್ ೬ನೇ ತಾರೀಕಿನ ಸಂಚಿಕೆಯ ಎರಡನೇ ಭಾಗದ ೧ನೇ ಉಪವಿಭಾಗದೊಂದಿಗೆ ದಯವಿಟ್ಟು ಹೋಲಿಸಿ ನೋಡಬೇಕು. ವಾಸ್ತವವಾಗಿ ಒಂದೂವರೆ ಪುಟಗಳನ್ನು ಆಕ್ರಮಿಸಿಕೊಳ್ಳುತ್ತಿದ್ದ ವಿಷಯವನ್ನು ಈಗ ಕೇವಲ ಅರ್ಧ ಕಾಲಂಗೆ ಕುಗ್ಗಿಸಲಾಗಿದೆ. ಬೇಕಾದಷ್ಟು ಕಾಗದ ಉಳಿತಾಯವಾಗಿದೆ. ಪಕ್ಕದ ತೆರಪುಗಳನ್ನೆಲ್ಲಾ ವಜಾ ಮಾಡಲಾಗಿದೆ.

**ಡಾ॥ ಪಿ.ಎನ್. ಬ್ಯಾನರ್ಜಿ (ಕಲ್ಕತ್ತಾ ಸಬರ್ಬ್** : ಮಹಮದೀಯೇತರ ನಗರ) : ದೃಷ್ಟಿ ದೋಷವುಳ್ಳವರ ಗತಿಯೇನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಎಲ್ಲರನ್ನು ಮೆಚ್ಚಿಸಲಾರೆ. ಮಾನ್ಯರೆ, ಸರ್ ಫ್ರೆಡರಿಕ್ ಜೇಮ್ಸ್ ಈಗತಾನೇ ಎತ್ತಿರುವ ಅಂಶದ ಬಗ್ಗೆ ಅವರಿಗೆ ನಾನು ಇನ್ನೂ ಒಂದು ಮಾತು ಹೇಳಬೇಕು. ಭಾರತ ಸರಕಾರವು ಎಲ್ಲ ಪ್ರಾಂತೀಯ ಸರಕಾರಗಳಿಗೆ ಒಂದು ಸುತ್ತೋಲೆ ಕಳಿಸಿಕೊಟ್ಟಿದೆ. ಕೇಂದ್ರ ಗೆಜೆಟ್ಟಿನಲ್ಲಿ ಸರಕಾರವು ಪ್ರಕಟಿಸುವ ನೋಟಿಫಿಕೇಷನ್ನುಗಳನ್ನೇ ಅವರೂ ಬಳಸಿಕೊಂಡರೆ ಸಾಕಾಗದೆ, ಮತ್ತೆ ಪ್ರಾಂತೀಯ ಗೆಜೆಟ್ಟುಗಳಲ್ಲಿ ಅವುಗಳನ್ನು ಪುನರುಕ್ತಿಸಬೇಕೇ ಎಂಬುದನ್ನು ಪರಿಶೀಲಿಸಿರಿ ಎಂದು ಕೇಳಿದೆ. ಅಂದರೆ, ನಾವು ಸಲಹೆಕೊಡಬಹುದು, ಶಿಫಾರಸುಮಾಡಬಹುದು ಅಷ್ಟೆ.

ನಂತರ, ಇಂಡಿಯನ್ ಇನ್‌ಫಾರ್ಮೇಷನ್ ಬಗ್ಗೆ ಹೇಳುವುದಾದರೆ, ಅದರ ಗಾತ್ರವನ್ನು ಅರ್ಧಕ್ಕೆ ಕುಗ್ಗಿಸಬೇಕೆಂದು ಈಗಾಗಲೆ ಆದೇಶಿಸಲಾಗಿದೆ.

ಇನ್ನು ನಮೂನೆ (ಫಾರಂ)ಗಳ ವಿಷಯ. ಸದನಕ್ಕೆ ಈ ವಿಷಯ ತಿಳಿದುಕೊಳ್ಳಲು ಆಸಕ್ತಿ ಇರಬಹುದು. ಯುದ್ಧದ ಸಮಯದಲ್ಲಿ ೧೪೯ ನಮೂನೆಗಳನ್ನು ನಿಲ್ಲಿಸಿದೆ. ಒಟ್ಟಿನ ಮೇಲೆ ೧೯೦ ನಮೂನೆಗಳನ್ನು ಪೂರ್ತಿಯಾಗಿ ರದ್ದುಪಡಿಸಲಾಗಿದೆ. ಎರಡನೆಯದಾಗಿ, ನಮೂನೆಗಳ ಆಕಾರವನ್ನು ೧೯೪೧ರ ಆಕಾರದ ಅರ್ಧಕ್ಕೆ ಕುಗ್ಗಿಸಲಾಗಿದೆ. ೧೯೪೨ರ ಜುಲೈ ಆದ ನಂತರ ಅಚ್ಚಾಗಿರುವ ನಮೂನೆಗಳಲ್ಲಿ ಹೆಚ್ಚುವರಿ ಸ್ಥಳಾವಕಾಶ ಬಿಟ್ಟಿಲ್ಲ. ಈ ಸಂಬಂಧವಾಗಿ ಮಾನ್ಯ ಸದಸ್ಯರು ಭಾರತ ಸರಕಾರಕ್ಕೆ ಇನ್ನೇನಾದರೂ ಸಲಹೆ ನೀಡುವುದಿದ್ದ ಪಕ್ಷದಲ್ಲಿ ನಾನು ಖಂಡಿತವಾಗಿ ಅವರಿಗೆ ಆಭಾರಿಯಾಗಿರುತ್ತೇನೆ ಮತ್ತು ಸಲಹೆಗೆ ಅತಿ ಹೆಚ್ಚಿನ ಗಮನ ಕೊಡುತ್ತೇನೆ.

ಪ್ರಕಟಣೆಗೆ ಸಂಬಂಧಿಸಿದಂತೆ, ಅತ್ಯಂತ ಅಗತ್ಯ ಎನ್ನಿಸದ ಹೊರತು ಯಾವುದನ್ನೂ ಸರಕಾರವು ಪ್ರಕಟಿಸುವುದಿಲ್ಲ ಎಂದು ಈ ಸದನಕ್ಕೆ ಭರವಸೆ ನೀಡಬಯಸುತ್ತೇನೆ. ಯಾವುದೇ ಪ್ರಕಟಣೆಯ ಅಗತ್ಯತೆಯನ್ನು ನಿರ್ಧರಿಸುವುದಕ್ಕಾಗಿ ಭಾರತ ಸರಕಾರವು ಪ್ರಕಟಣೆಗಳ ಮೇಲೆ ಮೂರು ಬೇರೆ ಬೇರೆ ತಡೆಗಳನ್ನು ಹಾಕಿದೆ. ಮೊದಲು ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿಯಂತ್ರಣಾಧಿಕಾರಿಯು ಅದನ್ನು ಪರೀಕ್ಷಿಸುತ್ತಾರೆ. ಮುದ್ರಣಾದೇಶಕ್ಕೆ ತಕ್ಕಂತೆ ಪರೀಕ್ಷಿಸದೆ ಮುದ್ರಿಸಿಕೊಡುತ್ತಿದ್ದ ಯಾಂತ್ರಿಕ ವ್ಯಕ್ತಿ ಅವರಾಗಿರುವುದಿಲ್ಲ. ಮುದ್ರಣಕ್ಕೆ ತಮ್ಮೆದುರಿಗೆ ಬಂದ ಪ್ರಕಟಣೆ ಸಾಮಗ್ರಿಯ ಆವಶ್ಯಕತೆಯನ್ನು ಪರೀಕ್ಷಿಸುವ, ಪರಿಶೀಲಿಸುವ ಅಧಿಕಾರವನ್ನು ಅವರಿಗೆ ನೀಡಲಾಗಿದೆ. ಅವರು ನಿರಾಕರಿಸಿದಾಗ ಅದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರೆ ಮಾತ್ರ ಅದನ್ನು ಲೇಬರ್ ವಿಭಾಗದ ಕಾರ್ಯದರ್ಶಿಯವರಿಗೆ ಕಳಿಸಲಾಗುತ್ತದೆ. ಲೇಬರ್ ವಿಭಾಗವೂ ನಿಯಂತ್ರಣಾಧಿಕಾರಿಯೂ ಒಂದು ಸಾಮಗ್ರಿಯು ಅನಗತ್ಯ ಎಂದು ಅಭಿಪ್ರಾಯಪಟ್ಟರೆ, ಆಗ ಅದನ್ನು ಒಂದು ಸಮಿತಿಗೆ ಕಳುಹಿಸಲಾಗುವುದು. ಸಮಿತಿಯ ನಿರ್ಣಯವೇ ಕೊನೆಯದು. ಅಲ್ಲದೆ ಮಾನ್ಯರೆ, ಮುದ್ರಕರಿಗೆ ಸೂಚನೆ

ನೀಡಲಾಗಿದೆ. ಸ್ಥಳಾವಕಾಶ, ಅರಿತು ತೆರಪು ಬಿಡುವುದು ಈ ಎಲ್ಲ ವಿಷಯಗಳಲ್ಲೂ ಕಾಗದದ ಮಿತ ಬಳಕೆಯನ್ನೇ ಗಮನದಲ್ಲಿಟ್ಟುಕೊಂಡು ಮಾಡಬೇಕು ಎಂಬುದಾಗಿ. ಭಾರತ ಸರಕಾರವು ಕೈಗೊಂಡಿರುವ ಈ ಕ್ರಮಗಳು ಅಂತಹ ಮಹತ್ವದ ಕ್ರಮಗಳಲ್ಲ ಎಂದು ಮೇಲುನೋಟಕ್ಕೆ ತೋರಬಹುದು. ಆದರೆ ಮಿತವ್ಯಯ ಸಾಧನೆಗೆ ಇದು ನಿಜವಾಗಿ ಗಂಭೀರ ಪ್ರಯತ್ನ. ಸ್ವಾಮಿ, ಲೋಕೋಕ್ತಿಯಿರುವ ಹಾಗೆ ಆನೆಯು ಒಂಟೆಯ ಹೆಜ್ಜೆಯಿಡಲು ಕಲಿಯಬೇಕೆಂದು ಅಪೇಕ್ಷಿಸಬಾರದು. ಭಾರತ ಸರಕಾರವು, ಈ ದೃಷ್ಟಿಯಿಂದ ಯಾವುದೇ ಸರಕಾರವು, ಒಂದು ಅಗಾಧ ಗಾತ್ರದ ಪ್ರಾಣಿ. ಅದರದ್ದು ಮಂದಗತಿ, ನಿಧಾನದ ನಡೆ; ಹೆಣ್ಣು ಬಾತು ಕೋಳಿಯ ಚುರುಕು ನಡಿಗೆಯನ್ನು ಅದು ಕಲಿತಿಲ್ಲ. ಇನ್ನೂ ಕಲಿತಿರದಿದ್ದರೆ, ಈಗ ಕಲಿಯಲು ಸಿದ್ಧವಿದೆ ಎಂಬುದನ್ನು ಸದನವು ಒಪ್ಪುತ್ತದೆ ಎಂದು ಭಾವಿಸುತ್ತೇನೆ.

**ಸರ್ ಎಫ್.ಇ. ಜೇಮ್ಸ್ :** ಅದಿನ್ನೂ ಎಳೆಯ ವಯಸ್ಸಿನದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ನನ್ನ ಮಾನ್ಯ ಮಿತ್ರರಾದ ಸರ್ ಫ್ರೆಡರಿಕ್ ಜೇಮ್ಸ್ ಅವರು ಭಾರತ ಸರಕಾರವು ಕಾಗದದ ಮಿತ ಬಳಕೆಯ ವಿಷಯದಲ್ಲಿ ಕೊಟ್ಟಿರುವ ಖಚಿತವಾದ ಸಲಹೆಯನ್ನು ತೆಗೆದುಕೊಳ್ಳುತ್ತೇನೆ. ನಾನು ಅವರ ಸಲಹೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವುದಾದ ಪಕ್ಷದಲ್ಲಿ, ಇಂಗ್ಲೆಂಡಿನಲ್ಲಿ ಇರುವಂತೆ, ನಾವೂ ಒಂದು ಸಮಿತಿಯನ್ನು ರಚಿಸಬೇಕು, ಅದರಲ್ಲಿ ಒಬ್ಬ ಚಾರ್ಟರ್ಡ್ ಅಕೌಂಟೆಂಟ್, ಪ್ರಕಟಣ ಸಂಸ್ಥೆಗಳ ಒಬ್ಬ ಪ್ರತಿನಿಧಿ ಮತ್ತು ಮುದ್ರಣಾಲಯಗಳ ಓರ್ವ ಪ್ರತಿನಿಧಿ ಇರಬೇಕು. ಸ್ವಾಮಿ, ಈ ಸಮಿತಿಯು ಇಂಗ್ಲೆಂಡಿನಲ್ಲಿ ಹೇಗೆ ಕೆಲಸ ಮಾಡುತ್ತದೆ ಎಂಬುದರ ವಿಧಾನವನ್ನಾಗಲಿ, ವಿವರವನ್ನಾಗಲಿ ಕೊಟ್ಟಿಲ್ಲ. ಅಥವಾ ಮಿತ ಬಳಕೆಯನ್ನು ಜಾರಿಗೆ ತರಲು ಈ ಸಮಿತಿಯು ಯಾವ ತೆರನಾದ ಶಿಫಾರಸುಗಳನ್ನು ಮಾಡುತ್ತದೆ ಎಂದೂ ತಿಳಿದಿಲ್ಲ. ಆದ್ದರಿಂದ ಈ ಹಂತದಲ್ಲಿ ಅವರು ಮಾಡಿರುವ ಈ ಸಲಹೆಯನ್ನು ಒಪ್ಪಿಕೊಳ್ಳಲು ನಾನು ಸಿದ್ಧನಾಗಿಲ್ಲ. ಆದರೆ ನಾವು ಕೈಗೊಂಡಿರುವ ಕ್ರಮಗಳನ್ನು ಅವರು ಗಮನಿಸಿದರೆ, ಅದು ಹೆಚ್ಚು ಕಡಮೆ ಅವರು ಸೂಚಿಸಿದ ದಾರಿಯಲ್ಲೇ ಇದೆ ಎನ್ನುವುದನ್ನು ಒಪ್ಪಿಯಾರು. ಕಮರ್ಷಿಯಲ್ ಮಾಸ್ಟರ್ ಪ್ರಿಂಟರ್ ಎಂಬ ಅಧಿಕಾರಿಯನ್ನು ನೇಮಿಸಿದ್ದೇವೆ. ಇವರು ಮುದ್ರಣ ಕಂಟ್ರೋಲರ್ ಅವರಿಗೆ ಸಲಹೆ ನೀಡುತ್ತಾರೆ. ಈಚೆಗೆ ಹಣಕಾಸು ಇಲಾಖೆಯಿಂದ ಇದಕ್ಕೆ ಮಂಜೂರಾತಿ ದೊರಕಿದೆ, ಶೀಘ್ರದಲ್ಲೇ ಅವರು ಇಂಗ್ಲೆಂಡಿನಲ್ಲಿ ಸೂಚಿತ ಸಮಿತಿಯು ಏನು ಕೆಲಸ ಮಾಡುವುದಿತ್ತೋ ಅದನ್ನು ಮಾಡುತ್ತಾರೆ ಎಂಬ ನನಗೆ ಭರವಸೆಯಿದೆ.

**ಡಾ॥ ಪಿ.ಎನ್. ಬ್ಯಾನರ್ಜಿ :** ಅವರು ಭಾರತೀಯರೋ ಯೂರೋಪಿಯನ್ನರೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಣಕಾಸು ಇಲಾಖೆಯ ಮಂಜೂರಾತಿ ಇದೇ ತಾನೇ ಬಂದಿದೆ.

**ಮಾನ್ಯ ಜಮ್ನಾದಾಸ್ ಎಂ. ಮೆಹ್ತಾ (ಮುಂಬಯಿ ಸೆಂಟ್ರಲ್ ವಿಭಾಗಕ್ಕೆ** – ಮಹಮದೀಯೇತರ– ಗ್ರಾಮಾಂತರ) : ಅವರ ಮೇಲೆ ಎಷ್ಟು ವೆಚ್ಚ ಮಾಡಬೇಕಾಗುತ್ತದೋ ಅದಕ್ಕಿಂತ ಹೆಚ್ಚು ಉಳಿತಾಯ ಮಾಡಿಕೊಂಡುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆಂದು ಆಶಿಸೋಣ. ಊಹಿಸುವುದರಿಂದ, ಆಶಿಸುವುದರಿಂದ ಕೆಡುಕೇನೂ ಇಲ್ಲ. ಕಾಗದವನ್ನು ಕುರಿತ ಪ್ರಶ್ನೆಗೆ ನಾನು ಹೇಳಬೇಕಾಗಿರುವುದು ಇಷ್ಟೆ.

ಸರ್ ಫ್ರೆಡರಿಕ್ ಜೇಮ್ಸ್ ತಿಳಿಸಿದ ಇನ್ನೊಂದು ವಿಚಾರ ಇದು : ಸಿಮ್ಲಾದಲ್ಲಿ ಅಧಿಕಾರಿಗಳ ಕುಟುಂಬಗಳಿಗೆ ವಸತಿ ಒದಗಿಸುವುದು. ವಸತಿಯನ್ನು ಕುರಿತಂತೆ ಇದು ಸರಕಾರಕ್ಕೆ ಬಹಳ ಇಕ್ಕಟ್ಟಿನ

ವಿಷಯ ಎಂಬುದನ್ನು ಸದನವು ಅರ್ಥಮಾಡಿಕೊಳ್ಳಬಲ್ಲದು ಎಂದು ಭಾವಿಸುತ್ತೇನೆ. ಅಲ್ಲಿ ಸರಕಾರದ ವಶದಲ್ಲಿದ್ದ ಹಾಗೂ ಬೇಡಿಕೆಗಳು ಬಂದಹಾಗೆ ನಿಯಂತ್ರಿಸಲು ಸಾಧ್ಯವಾದ ವಸತಿಗಳ ಸಂಖ್ಯೆ, ಯುದ್ಧದ ಅವಶ್ಯಕತೆಯಿಂದಾಗಿ ಭಾರತ ಸರಕಾರವು ನೇಮಿಸಿಕೊಳ್ಳಬೇಕಾಗಿ ಬಂದ ಅಧಿಕಾರಿಗಳ ಸಂಖ್ಯೆಗೆ ಹೋಲಿಸಿದರೆ, ಏನೇನೂ ಸಾಲದು. ಯುದ್ಧ ಪ್ರಯತ್ನವನ್ನು ನಾವು ಪೂರ್ಣ ಪ್ರಮಾಣದಲ್ಲಿ ಮುಂದುವರಿಸಬೇಕಾದರೆ, ನಾವು ವಸತಿಯ ಆದ್ಯತೆಯ ಪಟ್ಟಿ ಇಟ್ಟುಕೊಳ್ಳಲೇ ಬೇಕಾಗುತ್ತದೆ. ಇದನ್ನು ಮಾನ್ಯ ಸದಸ್ಯ ಮಿತ್ರರು ಒಪ್ಪುತ್ತಾರೆ. ಆದ್ಯತೆ ಎಂದ ಮೇಲೆ ಅಧಿಕಾರಿಗಳ ಕುಟುಂಬಕ್ಕೆ ಎರಡನೆಯ ಸ್ಥಾನ, ಅಧಿಕಾರಿಗಳಿಗೆ ಮೊದಲ ಆದ್ಯತೆ ಎನ್ನುವುದನ್ನೂ ಅವರು ಒಪ್ಪಿಯಾರು. ಅದೇ ಸಮಯದಲ್ಲಿ ಪತಿ–ಪತ್ನಿ, ತಂದೆ–ಮಕ್ಕಳು ಅಗಲಿರುವುದು ಯುದ್ಧೋದ್ವೇಗದಲ್ಲಿ ನಿರತನಾಗುವ ಅಧಿಕಾರಿಯ ಮಾನಸಿಕ ಸಮತೋಲನಕ್ಕೆ ಎಂತಹ ಆಘಾತವನ್ನುಂಟುಮಾಡುತ್ತದೆ ಎನ್ನುವುದನ್ನು ಸರಕಾರ ತಿಳಿದುಕೊಳ್ಳದೆ ಇಲ್ಲ. ಈ ಯಾತನೆಯನ್ನು ಸ್ವಲ್ಪವಾದರೂ ಕಡಮೆ ಮಾಡುವುದಕ್ಕೋಸ್ಕರ ಭಾರತ ಸರಕಾರವು ಮೂರು ಬೋರ್ಡಿಂಗ್ ಹೌಸ್‌ಗಳನ್ನು ತೆರೆಯಲು ಉದ್ದೇಶಿಸಿದೆ. ಕಾರ್ಯಗೌರವದಿಂದ ಸ್ಥಳ ಬಿಡುವುದು ಸಾಧ್ಯವಿಲ್ಲದ ಅಧಿಕಾರಿಗಳ ಪತ್ನಿಯರಿಗಾಗಿ ಇಲ್ಲಿ ವಸತಿ ಕಲ್ಪಿಸಲಾಗುತ್ತದೆ. ಸರ್ ಫ್ರೆಡರಿಕ್ ಜೇಮ್ಸ್ ಅವರು ತೀವ್ರವಾಗಿರುವ ಈ ಸಮಸ್ಯೆಯ ಕಡೆಗೆ ಭಾರತ ಸರಕಾರವು ತೋರಿಸುತ್ತಿರುವ ಸಾಂಕೇತಿಕ ಸದ್ಭಾವನೆ ಎಂದು ಒಪ್ಪಿಕೊಳ್ಳುವರೆಂದು ಆಶಿಸುತ್ತೇನೆ.

ಇನ್ನು ಮೂರನೆಯ ವಿಷಯಕ್ಕೆ ಬರುತ್ತೇನೆ. ನನ್ನ ಮಾನ್ಯ ಮಿತ್ರರಾದ ಸರ್ ಜಮ್ನಾದಾಸ್ ಮೆಹ್ತಾ ಅವರು ಇದನ್ನು ಎತ್ತಿದ್ದಾರೆ.

**ಮಾನ್ಯ ಜಮ್ನಾದಾಸ್ ಮೆಹ್ತಾ :** ಏನೆಂದಿರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನೀವು ನೈಟ್ ಪದವಿ ಪಡೆಯುವ ಹಾದಿಯಲ್ಲಿದ್ದೀರಿ ಎಂದು ಆಶಿಸುತ್ತೇನೆ. ನಾನು ಹಿಂತೆಗೆದುಕೊಳ್ಳುವುದಿಲ್ಲ, ಕ್ಷಮೆ ಕೋರುವುದೂ ಇಲ್ಲ; ಅದು ಕೇವಲ ನಿರೀಕ್ಷೆ ಎಂದಷ್ಟು ಮಾತ್ರ ಹೇಳಬಯಸುತ್ತೇನೆ.

**ಮೌಲಾನಾ ಜಫರ್ ಅಲಿ ಖಾನ್ (ಈಸ್ಟ್ ಸೆಂಟ್ರಲ್ ಪಂಜಾಬ್** : ಮಹಮದೀಯ) : ಬರಲಿರುವ ಘಟನೆಗಳು ಮೊದಲೇ ಸೂಚನೆ ಕೊಡುತ್ತವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಚರ್ಚೆಯ ಸಮಯದಲ್ಲಿ ಮಾನ್ಯ ಜಮ್ನಾದಾಸ್ ಮೆಹ್ತಾ ಅವರು ಡೊಮಿನಿಯನ್ ಲೇಬರ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಇಂಗ್ಲೆಂಡಿನಲ್ಲಿ ನಡೆಯುತ್ತದೆ ಅಥವಾ ಇನ್ನೇನು ನಡೆಯಲಿದೆ; ಅದರಲ್ಲಿ ಭಾರತೀಯ ಕಾರ್ಮಿಕರು ಏಕೆ ಪ್ರತಿನಿಧಿಸುತ್ತಿಲ್ಲ ಎಂದು ಕೇಳಿದ್ದಾರೆ. ಮಾನ್ಯರೆ, ಅತಿಮುಖ್ಯವಾದ ಈ ಲೇಬರ್ ಅಧಿವೇಶನದಲ್ಲಿ ಭಾರತೀಯ ಕಾರ್ಮಿಕ ವರ್ಗವು ಪ್ರತಿನಿಧಿಸದಿರುವುದಕ್ಕೆ ಮಾನ್ಯ ಜಮ್ನಾದಾಸ್ ಮೆಹ್ತಾ ಅವರಷ್ಟೇ ನಾನೂ ವಿಷಾದಿಸುತ್ತೇನೆ. ಅವರ ಅತೃಪ್ತಿಯನ್ನು ಹಂಚಿಕೊಳ್ಳುತ್ತೇನೆ. ಆದರೆ ಈ ನತದೃಷ್ಟ ಪರಿಣಾಮಕ್ಕೆ ಲೇಬರ್ ಇಲಾಖೆಯು ಎಷ್ಟು ಮಾತ್ರಕ್ಕೂ ಕಾರಣವಲ್ಲ ಎಂದು ಮಾನ್ಯ ಜಮ್ನಾದಾಸ್ ಮೆಹ್ತಾ ಅವರಿಗೆ ತಿಳಿಸಬಯಸುತ್ತೇನೆ. ಈ ಸಮ್ಮೇಳನದ ವ್ಯವಸ್ಥಾಪಕರು ಲೇಬರ್ ಇಲಾಖೆಯ ಸಲಹೆಯನ್ನು ಕೇಳಲಿಲ್ಲ; ನಮ್ಮನ್ನು ಕೇಳದೆಯೇ ಇರುವಾಗ ನಾವು ಏನನ್ನೂ ಮಾಡಲು ಸಾಧ್ಯವಿರಲಿಲ್ಲ ಎಂಬುದನ್ನು ಶ್ರೀ ಮೆಹ್ತಾ ಒಪ್ಪಿಯಾರು. ಈ ಸಮ್ಮೇಳನಕ್ಕಾಗಿ ಶ್ರಮಿಸುತ್ತಿರುವವರಿಗೆ ಚೆನ್ನಾಗಿ ಪರಿಚಯವಿದ್ದವರಾದರೂ ಲೇಬರ್ ಇಲಾಖೆಯನ್ನು ಅವರು ಏಕೆ ಕೇಳಲಿಲ್ಲ ಎಂದಾಗಲಿ, ಅಥವಾ ನೇರವಾಗಿ ಈ ದೇಶದ ಕಾರ್ಮಿಕ ಚಳವಳಿಯ ನೇತಾರರೊಂದಿಗೆ ವ್ಯವಹರಿಸಲಿಲ್ಲ ಎಂದಾಗಲಿ ನನಗೆ ಅರ್ಥವಾಗುತ್ತಿಲ್ಲ. ಆದರೆ, ಇತರ ಯಾವುದೇ ಇಲಾಖೆಯಂತೆ ಲೇಬರ್ ಇಲಾಖೆಯು ಕಾರ್ಮಿಕ

ವರ್ಗದ ಹಿತಾಸಕ್ತಿಯನ್ನೂ ಸ್ಥಾನಗೌರವವನ್ನೂ ಕಾಪಾಡಲು ಕಟ್ಟೆಚ್ಚರದಿಂದ ಇದೆ ಎಂಬುದನ್ನು ಮಾನ್ಯ ಮೆಹ್ತಾ ಅವರು ಒಪ್ಪಬೇಕು. ಇಷ್ಟು ಹೇಳಿ ವಿರಮಿಸುತ್ತೇನೆ.

# ೧೧
# ಕಾರ್ಮಿಕ ಇಲಾಖೆಯ ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ನಾನು ಈ ಸೂಚನೆಯನ್ನು ಮಂಡಿಸಬಯಸುತ್ತೇನೆ.

"ಲೇಬರ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಮೇಲೆ ಸರಕಾರಕ್ಕೆ ಸಲಹೆ ನೀಡಲು ಸ್ಥಾಯಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುವಂತೆ ಮೂವರು ಅಧಿಕಾರಿಯೇತರ ಸದಸ್ಯರನ್ನು ಚುನಾಯಿಸಲು, ಗೌರವಾನ್ವಿತ ಅಧ್ಯಕ್ಷರ ನಿರ್ದೇಶನದಂತೆ ಈ ಸದನವು ಕ್ರಮ ಕೈಗೊಳ್ಳಬೇಕು."

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸೂಚನೆಯನ್ನು ಮಂಡಿಸಲಾಗಿದೆ: "ಲೇಬರ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಮೇಲೆ ಸರಕಾರಕ್ಕೆ ಸಲಹೆ ನೀಡಲು ಸ್ಥಾಯಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುವಂತೆ ಮೂವರು ಅಧಿಕಾರಿಯೇತರ ಸದಸ್ಯರನ್ನು ಚುನಾಯಿಸಲು, ಗೌರವಾನ್ವಿತ ಅಧ್ಯಕ್ಷರ ನಿರ್ದೇಶನದಂತೆ ಈ ಸದನವು ಕ್ರಮ ಕೈಗೊಳ್ಳಬಹುದು".

**ಡಾ॥ ಪಿ.ಎನ್. ಬ್ಯಾನರ್ಜಿ (ಕಲ್ಕತ್ತಾ ಸಬರ್ಬ್** : ಮಹಮದೀಯೇತರ ನಗರ) : ಮಾನ್ಯರೆ, ವಿವಿಧ ಇಲಾಖೆಗೆ ಸೇರಿದಂತೆ ಹಲವು ಸ್ಥಾಯಿ ಸಮಿತಿಗಳಿವೆ. ಆದರೆ ಈ ಸದನದ ಮೂವರು ಸದಸ್ಯರನ್ನು ಮಾತ್ರ ಹೊಂದಿರುವ ಯಾವ ಸಮಿತಿಯೂ ಇಲ್ಲ. ಈ ಸದನವು ಆಯ್ಕೆ ಮಾಡಬೇಕಾದ ಸದಸ್ಯ ಸಂಖ್ಯೆ ಕೇವಲ ಮೂರೇ ಆಗಿರುವುದಕ್ಕೆ ಕಾರಣವಾದರೂ ಏನು? ಲೇಬರ್ ಇಲಾಖೆ ಮುಖ್ಯವಾದ ಇಲಾಖೆಯಲ್ಲವಾಗಿರಬಹುದು; ಇಲ್ಲವೇ, ಸ್ಥಾಯಿ ಸಮಿತಿಯ ಸಭೆಯನ್ನು ಕರೆಯದೆಯೇ ಇರಬಹುದು, ಅಥವಾ ಬಹಳ ಅಪರೂಪಕ್ಕೆ ಕರೆಯಬಹುದು. ಈ ಎರಡೂ ಅಂಶಗಳ ಮೇಲೆ ಮಾಹಿತಿ ಪಡೆಯಲು ಇಚ್ಛಿಸುತ್ತೇನೆ. ಕಾರ್ಮಿಕ ಖಾತೆ ಮಹತ್ವದ ಖಾತೆಯೆ? ಅದು ಡಾ॥ ಅಂಬೇಡ್ಕರ್ ಅಂತಹ ಸಮರ್ಥ ವ್ಯಕ್ತಿಯ ವಶದಲ್ಲಿದೆ. ಈ ಮೊದಲು ಅದು ಅಮುಖ್ಯವಾದ ಇಲಾಖೆಯೇ ಆಗಿದ್ದರೂ ಕೂಡ ಇಂದು, ಕೊನೆಯ ಪಕ್ಷ ಅವರ ಅಧೀನದಲ್ಲಿರುವ ವರೆಗೆ ಅದು ಅಮುಖ್ಯವಾದ, ಗೌಣವಾದ ಇಲಾಖೆಯಾಗಿರಲು ಸಾಧ್ಯವಾಗಬಾರದು. ಆದರೆ ಅದು ಒಂದು ಮುಖ್ಯ ವಿಭಾಗವಾಗಬೇಕಾದರೆ ಅದರ ಸ್ಥಾಯಿ ಸಮಿತಿಯ ಸದಸ್ಯರ ಸಂಖ್ಯೆ ದೊಡ್ಡದಿರಬೇಕು. ಸ್ಥಾಯಿ ಹಣಕಾಸು ಸಮಿತಿಯನ್ನು ನೋಡಿ, ಸ್ಥಾಯಿ ರೈಲ್ವೆ ಹಣಕಾಸು ಸಮಿತಿಯನ್ನು ನೋಡಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನು ನೋಡಿ. ಈ ಯಾವುದೇ ಸಮಿತಿಯ ಸದಸ್ಯಬಲ ಮೂರಕ್ಕಿಂತ ತುಂಬಾ ಹೆಚ್ಚು. ಈ ಸಮಿತಿಯು ಪದೇ ಪದೇ ಸಭೆ ಸೇರುವುದಿಲ್ಲ ಎಂದೂ, ಸೇರಿದಾಗಲೂ ಹೆಚ್ಚಿನ ವ್ಯವಹಾರ ಅದರ ಮುಂದೆ ಬರುವುದಿಲ್ಲ ಎಂದೂ ಕೇಳಿದ್ದೇನೆ. ಅದು ನಿಜವಾಗಿದ್ದ ಪಕ್ಷದಲ್ಲಿ ಸಮಿತಿಯ ಪ್ರಯೋಜನ ಅತ್ಯಂತ ಕಡಮೆಯಾಗುತ್ತದೆ. ಆದ್ದರಿಂದ ಸದಸ್ಯರ ಸಂಖ್ಯೆಯನ್ನು ಎಂಟಕ್ಕೆ ಏರಿಸಬೇಕೆಂದು ನಾನು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇಬ್ಬರು ಸದಸ್ಯರನ್ನು ಬೇರೆ

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ–೨, ಮಾರ್ಚ್ ೨೦, ೧೯೪೩, ಪುಟ : ೧೨೭೮–೮೦.

ಕಡೆಯಿಂದ ಆರಿಸಲಾಗುತ್ತದೆ ಎಂದು ತಿಳಿದಿದ್ದೇನೆ. ಆದ್ದರಿಂದ ಈ ಸದನವು ಎಂಟು ಜನರನ್ನು ಚುನಾಯಿಸಲಿ ಎಂದು ಸೂಚಿಸುತ್ತೇನೆ. ತಾವು ಬಯಸಿದರೆ ಮೇಲ್ಮನೆಗೆ ಕೊಟ್ಟಿರುವ ಸದಸ್ಯ ಸಂಖ್ಯಾ ಬಲವನ್ನೂ ಹೆಚ್ಚಿಸಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನನ್ನ ಸೂಚನೆಯು ಸದನದಲ್ಲಿ ಇಷ್ಟೊಂದು ಆಸಕ್ತಿಯನ್ನು ಕೆರಳಿಸಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಮೂರು ಎಂಬ ಸಂಖ್ಯೆಗೆ ಆಧಾರ ಇಲಾಖೆಯ ಪ್ರಾಮುಖ್ಯತೆಯೂ ಅಲ್ಲ ಅಥವಾ ಬೇರೆ ಯಾವುದೇ ಪರಿಗಣನೆಯೂ ಅಲ್ಲ. ಅದೊಂದು ಸಾಮಾನ್ಯವಾಗಿ ಸ್ವೀಕೃತ ಸಂಖ್ಯೆ. ಅದರ ಮೇಲೆ ಮಾಡುವ ವಿಸ್ತರಣ ಅಥವಾ ವ್ಯತ್ಯಾಸ ಅಪವಾದವಾಗಿರುತ್ತದೆಯೇ ಹೊರತು ನಿಯಮವಲ್ಲ.

ಮಾನ್ಯರೇ, ನನ್ನ ಮಿತ್ರರಾದ ಡಾ॥ ಬ್ಯಾನರ್ಜಿಯವರು ಈ ಸಮಿತಿಗೆ ಮೂರೇ ಜನರನ್ನು ನಿಗದಿಪಡಿಸಿರುವುದಕ್ಕೆ ಕಾರಣ ಇಲಾಖೆಯು ಈ ಸಮಿತಿಗೆ ಪ್ರಾಮುಖ್ಯತೆ ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ಯಾವ ಆಧಾರವೂ ಇಲ್ಲ. ೧೯೪೦ರಲ್ಲಿ ಈ ಸಮಿತಿಯು ಎರಡು ಸಭೆಗಳನ್ನು ನಡೆಸಿತು, ಅತಿ ಮುಖ್ಯವಾದ ಕೆಲವು ವಿಚಾರಗಳನ್ನು ಪರಿಶೀಲಿಸಿತು. ಕಾರ್ಮಿಕ ಸಮ್ಮೇಳನದ ನಿರ್ಣಯಗಳು, ತಾಂತ್ರಿಕ ತರಬೇತಿ ವಿಚಾರಣಾ ಸಮಿತಿಯ ವರದಿ, ಕುಶಲಕರ್ಮಿಗಳಿಗೆ ವಿಶೇಷ ಶಿಕ್ಷಣ ಕೊಡಲು ಯೋಜನೆ, ದೆಹಲಿಯ ವಸತಿ ಸಮಸ್ಯೆ ಇಂತಹ ಮುಖ್ಯ ವಿಚಾರಗಳನ್ನು ಈ ಸಭೆಗಳಲ್ಲಿ ಚರ್ಚಿಸಲಾಗಿದೆ. ೧೯೪೧ರಲ್ಲಿ ಒಂದು ಸಭೆ ನಡೆಯಿತು. ಅಲ್ಲಿ ಸಭೆಯ ಮುಂದೆ ಬಂದ ವಿಷಯಗಳಲ್ಲಿ, ಕಾರ್ಮಿಕ ಸಚಿವರ ಎರಡನೆಯ ಸಮ್ಮೇಳನದ ನಿರ್ಣಯಗಳು, ಬೆವಿನ್ ತರಬೇತಿ ಯೋಜನೆಯನ್ವಯ ತಾಂತ್ರಿಕ ತರಬೇತಿ ನೀಡುವಲ್ಲಿ ಆಗಿರುವ ಪ್ರಗತಿ ಇವು ಸೇರಿದ್ದವು. ೧೯೪೨ರಲ್ಲಿ ಒಂದು ಸಭೆ ನಡೆಯಿತು. ಆಮೇಲೆ ಮುಂದುವರಿದ ಇನ್ನೊಂದು ಸಭೆಯೂ ನಡೆಯಿತು. ಕಾರ್ಮಿಕ ಸಚಿವರ ಮೂರನೆಯ ಸಮ್ಮೇಳನದ ಕಾರ್ಯಕಲಾಪಗಳು, ಉದ್ಯಮಪತಿಗಳ ಮತ್ತು ಕಾರ್ಮಿಕರ ಪ್ರತಿನಿಧಿಗಳ ಅಭಿಪ್ರಾಯಗಳ ಸಾರಾಂಶ, ದೆಹಲಿಯಲ್ಲಿ ಮತ್ತು ಸಿಮ್ಲಾದಲ್ಲಿ ಕಟ್ಟಡ ನಿರ್ಮಾಣ ಕಾರ್ಯಕ್ರಮ, ಟ್ರೇಡ್ ಯೂನಿಯನ್‌ಗಳಿಗೆ ಮಾನ್ಯತೆ ಕೊಡುವುದರ ಸಂಬಂಧವಾದ ಸಲಹೆಗಳು, ಬೆವಿನ್ ತರಬೇತಿ ಯೋಜನೆಯನ್ವಯ ಆಗಿರುವ ತಾಂತ್ರಿಕ ತರಬೇತಿಯ ಪ್ರಗತಿ ಮತ್ತು ನ್ಯಾಷನಲ್ ಸರ್ವೀಸ್ (ಟೆಕ್ನಿಕಲ್ ಪರ್ಸನೆಲ್) ಆರ್ಡಿನೆನ್ಸ್ ೧೯೪೦ ಇದರ ತಿದ್ದುಪಡಿಗಳೂ ಈ ಸಭೆಯಲ್ಲಿ ಚರ್ಚೆಗೊಂಡವು. ಮುಖ್ಯವಾದ ಹಾಗೂ ಕಾರ್ಮಿಕರ ಹಿತಾಸಕ್ತಿಯ ವಿಷಯಗಳನ್ನು ಈ ಸಮಿತಿಯ ಮುಂದೆ ತರುತ್ತಿಲ್ಲ ಎಂದು ಯಾರೂ ಹೇಳಲಾರರು.

ಇನ್ನು, ಈ ಸದನದ ಮುಂದೆ ಮಂಡಿಸಬೇಕಾದ ಇನ್ನೊಂದು ವಿಚಾರವಿದೆ. ಲೇಬರ್ ಇಲಾಖೆಗೆ ಸಲಹೆ ಕೊಡಲು ಇರುವುದು ಇದೊಂದೇ ಸಮಿತಿಯಲ್ಲ. ಇದರ ಜೊತೆಗೆ ಒಂದು ಪ್ಲೀನರಿ ಸಮಿತಿಯನ್ನು ರಚಿಸಿದ್ದೇವೆ. ಅದರಲ್ಲಿ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಹಾಗೂ ಭಾರತೀಯ ಸಂಸ್ಥಾನಗಳ ಪ್ರತಿನಿಧಿಗಳು, ಉದ್ಯಮಪತಿಗಳು ಮತ್ತು ಕಾರ್ಮಿಕ ವರ್ಗದ ಪ್ರತಿನಿಧಿಗಳು ಇರುತ್ತಾರೆ. ಆದ್ದರಿಂದ ಇದು ಡಾ॥ ಬ್ಯಾನರ್ಜಿ ಅವರು ಸೂಚಿಸುವಷ್ಟು ದೊಡ್ಡ ಗಾತ್ರದ ಸಮಿತಿಯಾಗಬೇಕಾದ ಅಗತ್ಯವಿಲ್ಲ. ಇದರ ಜೊತೆಗೆ ಸ್ಥಾಯಿ ಲೇಬರ್ ಸಲಹಾ ಸಮಿತಿಯೂ ಇದೆ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದ ಪಕ್ಷದಲ್ಲಿ, ಸಮಿತಿಯ ಸದಸ್ಯರ ಸಂಖ್ಯೆಯನ್ನು ವಿಸ್ತರಿಸಲು ಕಾರಣವಿದ್ದರೆ, ಪ್ಲೀನರಿ ಸಮಿತಿ ಹಾಗೂ ಸ್ಥಾಯಿ ಲೇಬರ್ ಸಮಿತಿಗಳ ರಚನೆಯಿಂದ ಅದು ಪರಿಹಾರವಾಗಿಬಿಟ್ಟಿದೆ. ಹಾಗೂ ನನ್ನ ಸನ್ಮಾನ್ಯ

ಮಿತ್ರರು ಈ ಸಮಿತಿಯ ಸದಸ್ಯ ಸಂಖ್ಯೆಯನ್ನು ಹೆಚ್ಚಿಸಲು ತೀವ್ರ ಆಸಕ್ತರಾಗಿರುವುದಾದರೆ, ಆಗಬಹುದು, ಸಂಖ್ಯೆಯನ್ನು ಎಂಟಕ್ಕೆ ಏರಿಸಿ ಈ ಸದನಕ್ಕೆ ಐದು, ಮೇಲ್ಮನೆಗೆ ಮೂರು ಎಂದು ನಿಗದಿಪಡಿಸಲು ಸಿದ್ಧನಿದ್ದೇನೆ. ಇದು ಸದನದ ನನ್ನ ಮಾನ್ಯ ಮಿತ್ರರಿಗೆ ತೃಪ್ತಿಯುಂಟುಮಾಡುವುದೆಂದು ನಂಬುತ್ತೇನೆ.

**ಮಾನ್ಯ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಟ್ (ಪಶ್ಚಿಮ ಕರಾವಳಿ ಮತ್ತು ನೀಲಗಿರಿ :** ಮಹಮದೀಯ**):** ಮಾನ್ಯ ಸದಸ್ಯರು ಈ ಸಮಿತಿಯ ಸದಸ್ಯರು ಪ್ಲೀನರಿ ಸಮಿತಿಯ ಸದಸ್ಯರೂ ಆಗಿರುತ್ತಾರೆಯೇ ಎಂಬುದನ್ನು ಸದನಕ್ಕೆ ತಿಳಿಸುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರಲ್ಲಿ ಕೆಲವರು ಶ್ರೀ ಮೆಹ್ತಾ ಮತ್ತು ಶ್ರೀ ಜೋಶಿ ಪ್ಲೀನರಿ ಸಮಿತಿ ಹಾಗೂ ಸ್ಥಾಯಿ ಸಮಿತಿಗಳೆರಡಕ್ಕೂ ಸದಸ್ಯರಾಗಿದ್ದಾರೆ.

**ಮಾನ್ಯ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಟ್ :** ಅವರು ಪ್ಲೀನರಿ ಸಮಿತಿಯಲ್ಲಿ ಎಕ್ಸ್ – ಅಫಿಷಿಯೋ ಸದಸ್ಯರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ, ಅವರು ತಮ್ಮ ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ.

**ಮೌಲ್ವಿ ಮಹಮ್ಮದ್ ಅಬ್ದುಲ್ ಘನಿ (ತಿರ್ಹತ್ ವಿಭಾಗ :** ಮಹಮದೀಯ) : ಸ್ವಾಮಿ, ಯುದ್ಧ ಪರಿಸ್ಥಿತಿಗಳಿಂದಾಗಿ ಈ ಲೇಬರ್ ಸಮಿತಿ ಅತ್ಯಂತ ಪ್ರಾಮುಖ್ಯವನ್ನು ಪಡೆದಿದೆ. ಅದು ಕಾರ್ಮಿಕ ಸಂಬಂಧವಾದ ಪ್ರಶ್ನೆಗಳನ್ನು ಪರಿಶೀಲಿಸುತ್ತದೆ. ಅಲ್ಲದೆ ಮಾನ್ಯ ಪದಾಧಿಕಾರಿ ಸದಸ್ಯರು ನಿರೂಪಿಸಿದಂತೆ ಕಟ್ಟಡ ನಿರ್ಮಾಣವೇ ಮೊದಲಾದ ಅನೇಕ ಇತರ ಸಮಸ್ಯೆಗಳನ್ನೂ ಅದು ಪರಿಶೀಲಿಸುತ್ತದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಮಾನ್ಯ ಲೇಬರ್ ಸದಸ್ಯರು ಈಗಾಗಲೇ ಉತ್ತರ ಕೊಟ್ಟಾಗಿದೆ.

ಈಗ ಸದನದ ಎದುರಿಗಿರುವ ಸೂಚನೆ ಇದು :

**"**ಈ ಅಸೆಂಬ್ಲಿಯು, ಅಧ್ಯಕ್ಷರು ನಿರ್ದೇಶಿಸುವ ರೀತಿಯಲ್ಲಿ, ಲೇಬರ್ ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಸಲಹೆ ನೀಡುವ ಸಲುವಾಗಿ ಸ್ಥಾಯಿ ಸಮಿತಿಗೆ ಐದು ಜನ ಅಧಿಕಾರಿಯೇತರ ಸದಸ್ಯರನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಬಹುದು.**"**

ಸೂಚನೆಯು ಅಂಗೀಕೃತವಾಯಿತು.

## ೧೨

## ಭಾರತ ಚಹಾ ನಿಯಂತ್ರಣ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಲೇಬರ್ ಸದಸ್ಯರು) : ನನ್ನ ಮಿತ್ರರಾದ ಮಾನ್ಯ ಜೋಷಿಯವರು ನೀಡಿದ ಅಭಿಪ್ರಾಯಗಳನ್ನು ನೋಡಿದರೆ, ಅವರು ಎತ್ತಿರುವ ವಿಷಯಗಳಲ್ಲಿ ಸರಕಾರದ ನಿಲವು ಏನು ಎಂಬುದನ್ನು ನಿರೂಪಿಸುವುದು ಸೂಕ್ತವೆನಿಸುತ್ತದೆ. ಒಂದು ಅರ್ಥದಲ್ಲಿ ಮಾನ್ಯ ಜೋಷಿಯವರು ಹೇಳಿದ ಮಾತುಗಳು ಅಸಂಗತವಾಗಿ ತೋರುತ್ತವೆ. ನಾವೀಗ ಚಹಾ ನಿಯಂತ್ರಣ ಶಾಸನವನ್ನು ಕುರಿತು ಚರ್ಚಿಸುತ್ತಿದ್ದೇವೆ. ಆದ್ದರಿಂದ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ಚರ್ಚೆಗಳು ಇಲ್ಲಿ ಹೊಂದಿಕೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ. ಆದರೆ ಇನ್ನೂ ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಿದಾಗ, ಯಾವುದೇ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨ ಮಾರ್ಚ್ ೨೩, ೧೯೪೩, ಪು. ೧೩೭೦–೭೩.

ಕೈಗಾರಿಕೆಗೆ ಸಂಬಂಧಿಸಿದಂತೆ ಪೂರೈಕೆ ಮತ್ತು ಬೇಡಿಕೆ ನಿಯಮಗಳನ್ನು ವಜಾ ಮಾಡಬೇಕು ಎಂದು ಸರಕಾರವನ್ನು ಒತ್ತಾಯಪಡಿಸಿದರೆ, ಆಗ ಕಾರ್ಮಿಕರ ಬಗೆಗೆ ಆಸಕ್ತಿಯುಳ್ಳ ಯಾರೇ ಆದರೂ ಅವರ ಹಿತಾಸಕ್ತಿಗಳನ್ನು ರಕ್ಷಿಸಲೇಬೇಕು ಎಂದು ಒತ್ತಡ ಹಾಕುವುದು ನ್ಯಾಯವಾಗಿಯೇ ಇದೆ. ಈ ದೃಷ್ಟಿಯಿಂದಲೇ, ಸರಕಾರದ ಉತ್ತರ ಅಗತ್ಯವಾಗಿದೆ ಎಂದು ನಾನು ಹೇಳಿದ್ದು.

ಮಾನ್ಯರೆ, ಶ್ರೀ ಜೋಷಿಯವರು ಎತ್ತಿದ ಮೊದಲನೆಯ ವಿಚಾರ, ಕಾರ್ಮಿಕರನ್ನು ಕುರಿತ ರಾಯಲ್ ಕಮೀಷನ್ ತನ್ನ ವರದಿಯನ್ನು ಸಲ್ಲಿಸಿ ಹನ್ನೆರಡು ವರ್ಷಗಳಾಗಿವೆ, ಈ ಸಮಿತಿಯ ಶಿಫಾರಸುಗಳ ಬಗೆಗೆ ಭಾರತ ಸರಕಾರವು ಯಾವ ಕ್ರಮವನ್ನೂ ಕೈಗೊಂಡಿಲ್ಲ ಎನ್ನುವುದು. ಸ್ವಾಮಿ, ನಿಜ. ಈ ವಿಚಾರದ ಪರಿಶೀಲನೆಗಾಗಿ ರಾಯಲ್ ಕಮೀಶನ್ ಸಲ್ಲಿಸಿದ ಶಿಫಾರಸುಗಳ ಬಗೆಗೆ ಕ್ರಮ ಕೈಗೊಳ್ಳಲು ಯಾವುದೇ ಸರಕಾರಕ್ಕೆ ಹನ್ನೆರಡು ವರ್ಷ ದೀರ್ಘ ಕಾಲವೇ ಸರಿ. ಆದರೆ ಈಗ ನಾನು ನಿರೂಪಿಸಲಿರುವ ಅಂಶಗಳನ್ನು ಮಾನ್ಯ ಜೋಷಿಯವರೂ, ಸದನದ ಇತರ ಮಿತ್ರರೂ ಅರ್ಥ ಮಾಡಿಕೊಂಡಿದ್ದೇ ಆದ ಪಕ್ಷದಲ್ಲಿ ಭಾರತ ಸರಕಾರದ ಮೇಲೆ ಅತಿ ಹೆಚ್ಚಿನ ಆಪಾದನೆಗಳನ್ನು ಹೊರಿಸುವಂತಿಲ್ಲ ಎಂಬುದು ಗೊತ್ತಾಗುತ್ತದೆ. ಮಿತ್ರರಿಗೆ ತಿಳಿದಿರುವಂತೆ, ಕಾರ್ಮಿಕ ವರ್ಗವನ್ನು ಕುರಿತ ರಾಯಲ್ ಕಮೀಶನ್ ಟೀ ತೋಟಗಳ ಬಗೆಗೆ ಐದು ಶಿಫಾರಸುಗಳನ್ನು ಮಾಡಿತು. ಮೊದಲನೆಯದು, ಅಸ್ಸಾಂ ಕಾರ್ಮಿಕ ವಲಸೆ ಶಾಸನ(Assam Labour Emigrant Act)ವನ್ನು ಹಿಂತೆಗೆದುಕೊಂಡು ಅದರ ಸ್ಥಳದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಸವಲತ್ತು ಕೊಡುವ ಬೇರೊಂದು ಶಾಸನವನ್ನು ತರತಕ್ಕದ್ದು ಎಂಬುದು. ಎರಡನೆಯದು, ಅಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ವೇತನವನ್ನು ನಿಗದಿಪಡಿಸಲು ಒಂದು ವೇತನ ಮಂಡಳಿಯನ್ನು ರಚಿಸಬೇಕು, ಮೂರನೆಯದಾದರೋ, ಸೂಕ್ತ ಸ್ಥಳಗಳಲ್ಲಿ ಕಾರ್ಮಿಕರ ಕ್ಷೇಮ ದೃಷ್ಟಿಯಿಂದ ಆರೋಗ್ಯ ಮಂಡಳಿಯನ್ನು ಸ್ಥಾಪಿಸಬೇಕು, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಕೊಳಚೆ ನೀರಿನ ಹರಿವು, ಆರೋಗ್ಯ ಸೌಲಭ್ಯಗಳು ಮತ್ತು ವಸತಿ – ಈ ವಿಷಯಗಳಲ್ಲಿ ಸೂಕ್ತ ಕಾನೂನುಗಳನ್ನು ಮಾಡಲು ಈ ಮಂಡಳಿಗೆ ಅಧಿಕಾರವಿರಬೇಕು – ಎನ್ನುವುದು. ಕ್ರಮವಾದ ವೇತನ ಪಾವತಿ ಮತ್ತು ಕಾರ್ಮಿಕರಿಗೆ ಕೊಟ್ಟ ಮುಂಗಡಗಳ ಬಾಬ್ತು ಕಡಿತಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶಗಳನ್ನು ಚಹಾ ಕಾರ್ಮಿಕರಿಗೂ ಅನ್ವಯಿಸಬೇಕೆಂದು ನಾಲ್ಕನೆಯ ಶಿಫಾರಸು ಹೇಳುತ್ತದೆ. ಕೊನೆಯದು ಚಹಾ ತೋಟಗಳಿಗೆ ಸಾರ್ವಜನಿಕರು ಹೋಗಿಬರಲು ಅವಕಾಶವಿರಬೇಕು ಎಂಬುದು.

ಈ ಶಿಫಾರಸುಗಳು ಬಂದೊಡನೆ, ಭಾರತ ಸರಕಾರವು ಸ್ವಲ್ಪವೂ ವಿಳಂಬ ಮಾಡದೆ ಇವುಗಳನ್ನು ಕುರಿತು ವ್ಯವಹರಿಸಲು ತಕ್ಕ ಪ್ರಾಧಿಕಾರ ಯಾವುದು ಎಂಬುದನ್ನು ಪರಿಶೀಲಿಸುವುದಕ್ಕಾಗಿ ಶಿಫಾರಸುಗಳ ಅಧ್ಯಯನ ಮಾಡಿತು. ಮೊದಲನೆಯದಾದ ವಲಸೆ ಶಾಸನವನ್ನು ಹಿಂತೆಗೆದುಕೊಂಡು ಅದರ ಸ್ಥಾನದಲ್ಲಿ ಬೇರೊಂದನ್ನು ತರುವ ಶಿಫಾರಸನ್ನು ಹೊರತುಪಡಿಸಿದರೆ, ಮಿಕ್ಕವೆಲ್ಲ ಸ್ಥಳೀಯವಾಗೇ ನಿರ್ವಹಿಸಬೇಕಾದಂಥವು ಎಂಬ ನಿರ್ಣಯಕ್ಕೆ ಬರಲಾಯಿತು. ಹೀಗೆ ಸರಕಾರವು ಜವಾಬ್ದಾರಿಯನ್ನು ವಿಭಾಗಿಸಿದ್ದು ತಪ್ಪು ಎಂದು ಯಾರೂ ಹೇಳಲಾರರು ಎಂದು ಭಾವಿಸುತ್ತೇನೆ. ರಾಯಲ್ ಕಮೀಶನ್ನಿನ ವರದಿಯನ್ನು ಬಹು ಶೀಘ್ರವಾಗಿಯೇ ಮತ್ತು ಬಹು ಗಂಭೀರವಾಗಿಯೇ ಸರಕಾರವು ಪರಿಗಣಿಸಿ ಅಸ್ಸಾಂ ಸರಕಾರಕ್ಕೆ ಒಂದು ಪತ್ರವನ್ನು ಕಳುಹಿಸಿತು. ಸ್ಥಳೀಯ ಸರಕಾರಕ್ಕೆ ಇತರ ಶಿಫಾರಸುಗಳನ್ನು ಕುರಿತು ವ್ಯವಹರಿಸಲು ಸ್ವಾತಂತ್ರ್ಯ ನೀಡಲಾಗಿದೆ ಎಂದು ಅದರಲ್ಲಿ ತಿಳಿಸಿತು. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಕಾಲ ವಿಳಂಬ ಮಾಡದೆ ಅಗತ್ಯವಾದ ಶಾಸನವನ್ನು ಅಂಗೀಕರಿಸಲು ಕೇಂದ್ರ ಸರಕಾರವು ಕ್ರಮ ಕೈಗೊಂಡಿತು. ಇದೀಗ ಶಾಸನಗಳ ಹೊತ್ತಿಗೆಯಲ್ಲಿದೆ.

ಅದು ಕಾರ್ಮಿಕರನ್ನು ಕುರಿತ ರಾಯಲ್ ಕಮೀಶನ್ನಿನ ಮೊದಲನೆಯ ಶಿಫಾರಸನ್ನು ಒಳಗೊಳ್ಳುತ್ತದೆ. ಮಾನ್ಯರೆ, ದುರದೃಷ್ಟವಶಾತ್, ಅಸ್ಸಾಮಿನ ಸ್ಥಳೀಯ ಸರಕಾರವು ಈ ವಿಷಯದಲ್ಲಿ ಕ್ರಮ ಕೈಗೊಂಡಿಲ್ಲ. ಅದಕ್ಕೆ ಏನು ಕಾರಣವೋ ನನಗೆ ತಿಳಿಯದು, ನಾನು ಇದನ್ನು ಹೇಳಲೇಬೇಕು. ಶಿಫಾರಸುಗಳು ಬಂದ ದಿನದಿಂದಲೂ ಈ ಸದನದಲ್ಲಿರುವ ಮಾನ್ಯ ಮಿತ್ರ ಜೋಷಿಯವರೂ ಕೂಡ ಇದುವರೆಗೆ ಈ ಪ್ರಶ್ನೆಯನ್ನು ಎತ್ತಿಕೊಳ್ಳಲಿಲ್ಲ, ಎತ್ತಿದಂತೆ ತೋರುತ್ತಿಲ್ಲ. ಆದರೆ ಮಾನ್ಯರೆ, ಭಾರತ ಸರಕಾರವು ತನ್ನ ಕೆಲಸವನ್ನು ಮಾಡಿದೆ. ೧೯೩೮ರಲ್ಲಿ ಚಹಾ ನಿಯಂತ್ರಣ ಮಸೂದೆಯು ವಿಸ್ತರಣೆಗಾಗಿ ಸಂಸತ್ತಿನ ಮುಂದೆ ಬಂದಾಗ ಭಾರತ ಸರಕಾರವು ಆಸಕ್ತಿ ವಹಿಸಿ ತೋಟಗಾರಿಕಾ ವಿಭಾಗದೊಂದಿಗೆ ವ್ಯವಹರಿಸಿ ಟೀ ತೋಟಗಳ ಕಾರ್ಮಿಕರ ಸ್ಥಿತಿಗತಿಗಳ ಬಗೆಗೆ ವಿಚಾರ ಮಾಡುವ ಸಲಹೆ ನೀಡಿತು. ಮಾನ್ಯ ಮಿತ್ರರಾದ ಶ್ರೀ ಗ್ರಿಫೀತ್ಸ್ ಮತ್ತು ಸರ್ ಫ್ರೆಡರಿಕ್ ಜೇಮ್ಸ್ ಅವರಿಗೆ ನೆನಪಿರಬಹುದು. ಲೇಬರ್ ಇಲಾಖೆಯ ಪ್ರತಿನಿಧಿಗಳು ಮತ್ತು ಟೀ ತೋಟಗಾರರ ಪ್ರತಿನಿಧಿಗಳ ನಡುವೆ ಒಂದು ಸಭೆಯೂ ನಡೆದಿತ್ತು.

**ಮೌಲಾನಾ ಜಫರ್ ಆಲಿಖಾನ್ :** ಭಾರತ ಸರಕಾರವು ಅಸ್ಸಾಂ ಸರಕಾರವನ್ನು ಏಕೆ ಕ್ರಮಕೈಗೊಂಡಿಲ್ಲವೆಂದು ಕೇಳಲಿಲ್ಲವೇಕೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದಕ್ಕೆ ಸಂಬಂಧಪಟ್ಟ ಇಲಾಖೆಯ ಸದಸ್ಯರು ಆಗ ಈ ಪ್ರಶ್ನೆಗೆ ತಕ್ಕ ಉತ್ತರ ಕೊಟ್ಟಿರಬಹುದು. ನಾನು ನೆನ್ನೆ ತಾನೇ ಬಂದಿದ್ದೇನೆ, ಈ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿಲ್ಲ. ಶಿಫಾರಸುಗಳನ್ನು ಕುರಿತು ವಿಚಾರ ಮಾಡಬೇಕಾದ ಸಮಯ ಬಂದಿಲ್ಲವೆ ಎಂಬ ಮಾನ್ಯ ಮಿತ್ರ ಜೋಷಿಯವರ ಪ್ರಶ್ನೆಯನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ವಿಷಯ ಪಕ್ವಗೊಂಡು ಅಂತಿಮ ನಿರ್ಣಯದ ಹಂತ ಬಂದಿದೆ ಎನ್ನುವ ಸಮಯದಲ್ಲಿ ಹೊಸ ಅಸ್ಸಾಂನ ಕಾಂಗ್ರೆಸ್ ಸರಕಾರವು ವಿಷಯವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿತು. ಒಂದು ನಿರ್ಣಯವನ್ನು ಅಂಗೀಕರಿಸಿ ೧೯೩೯ರ ಮೇ ೨೩ನೆಯ ತಾರೀಕು ಒಂದು ಸಮಿತಿಯನ್ನು ನೇಮಿಸಿತು. ಅಸ್ಸಾಂ ಸರಕಾರವು ಕ್ರಮ ಕೈಗೊಂಡುದರಿಂದ ಭಾರತ ಸರಕಾರವು ರಂಗದಿಂದ ಹಿಂದಕ್ಕೆ ಸರಿಯಲೇಬೇಕಾಯಿತು. ಮೊದಲು ಕಳಿಸಿದ್ದ ಪತ್ರದ ಪ್ರಕಾರ ಇದು ಸೂಕ್ತವಾಗಿತ್ತು. ನನ್ನ ಮಾನ್ಯ ಮಿತ್ರ ಶ್ರೀ ಜೋಷಿಯವರು ಹೇಳಿದಂತೆ, ನಿಜವಾಗಿ ಕಾರಣ ಏನಿತ್ತು ಎಂದು ಹೇಳಲು ನಾನು ಸಿದ್ಧನಾಗಿಲ್ಲ. ಆದರೆ ಹೇಗೋ ಏನೋ ಸಮಿತಿಯ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಅದು ಬೆಳೆದು ಸಂಘರ್ಷವಾಯಿತು, ಪರಿಣಾಮವಾಗಿ ಸಮಿತಿಯ ಕೆಲಸವನ್ನು ರದ್ದುಪಡಿಸಲಾಯಿತು. ಕೊನೆಗೂ ಅಸ್ಸಾಂ ಸರಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ನಡೆದದ್ದೇನು? ಏಕೆ ಸಮಿತಿಯನ್ನು ರದ್ದುಪಡಿಸಲಾಯಿತು ಎಂಬ ವಿಚಾರವಾಗಿ ಒಂದು ಪ್ರಕಟಣೆ ಹೊರಡಿಸಿದ್ದಷ್ಟೆ ಅವರು ಮಾಡಿದ ಕೆಲಸ. ಇಷ್ಟಾಗುವ ವೇಳೆಗೆ ೧೯೩೯ರ ಜುಲೈ ಕೊನೆಯ ಭಾಗ ಬಂದಿತ್ತು ಎಂಬುದು ಎಲ್ಲರಿಗೂ ತಿಳಿದೇ ಇದೆ. ಯುದ್ಧದ ಘೋಷಣೆಯಾದ ಕೆಲವು ತಿಂಗಳಲ್ಲಿ ಸ್ಥಳೀಯ ಸರಕಾರವೇ ಆಗಲಿ, ಭಾರತ ಸರಕಾರವೇ ಆಗಲಿ ಯಾರಿಗೂ ಈ ಬಗ್ಗೆ ವಿಚಾರಣೆ ನಡೆಸಲು ಸಾಧ್ಯವಿರಲಿಲ್ಲ. ಆದ್ದರಿಂದ ಈ ಸನ್ನಿವೇಶಗಳನ್ನು ಅರ್ಥ ಮಾಡಿಕೊಂಡರೆ ಭಾರತ ಸರಕಾರವು ನಿಷ್ಕ್ರಿಯವಾಗಿತ್ತು ಎಂದು ಮಾನ್ಯ ಜೋಷಿಯವರು ಆಕ್ಷೇಪಿಸುವುದಿಲ್ಲ ಎಂಬ ಭರವಸೆ ನನಗಿದೆ.

ಇನ್ನು ಸರಕಾರವು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಅಗತ್ಯತೆಯನ್ನು ಪರಿಗಣಿಸುವುದಿಲ್ಲ ಎಂಬ ಮುಖ್ಯ ಪ್ರಶ್ನೆ. ಸರಕಾರವು ಈ ಪ್ರಶ್ನೆಯನ್ನು ಭಾರೀ ಮಹತ್ವದ ಪ್ರಶ್ನೆ ಎಂದು ಪರಿಗಣಿಸುತ್ತದೆ ಎಂದು ಹೇಳುತ್ತಾ ಪ್ರಾರಂಭಿಸುತ್ತೇನೆ. ಟೀ ತೋಟಗಳ ಕಾರ್ಮಿಕರ ಸ್ಥಿತಿಗತಿಗಳಿಗೆ ಸಂಬಂಧಪಟ್ಟ ಮಟ್ಟಿಗೆ

ನಾನು ಇದನ್ನು ಪರಿಗಣಿಸುವುದಿಲ್ಲ. ವರ್ತಮಾನ ಪತ್ರಿಕೆಗಳಿಗೆ ಹಲವು ಬಗೆಯ ಅಂಕಿಅಂಶಗಳು ಪ್ರಕಟವಾಗುತ್ತವೆ. ಸಿಲೋನಿನಲ್ಲಿ ಕೊಡುವ ಕೂಲಿಯ ದರ, ಅಸ್ಸಾಮಿನ ತೋಟಗಳಲ್ಲಿ ಕೊಡುವ ಕೂಲಿಯ ದರಗಳೊಂದಿಗೆ ಹೋಲಿಕೆ ಇವೆಲ್ಲ ಬರುತ್ತವೆ. ಎರಡು ವಿಧದ ಅಂಕಿಗಳಿಗೂ ನಾನು ಸರಕಾರದ ಅಧಿಕೃತ ಮಂಜೂರಾತಿ ಕೊಡುವುದಕ್ಕೆ ಸಿದ್ಧನಾಗಿಲ್ಲ. ನಮ್ಮ ಹತ್ತಿರ ಕರಾರುವಾಕ್ಕಾದ ಅಂಕಿಅಂಶಗಳಿಲ್ಲ ; ಅದಕ್ಕೆ ಕಾರಣ ಆ ದಿಕ್ಕಿನಲ್ಲಿ ಪ್ರಯತ್ನಿಸಿಲ್ಲ. ಆದರೆ ಒಂದು ಮಾತು ಹೇಳಬಹುದು. ಟೀ ತೋಟಗಳಲ್ಲಿನ ಪರಿಸ್ಥಿತಿ ಅನಿಯಂತ್ರಿತವಾಗಿದೆ. ಒಂದು ಸ್ಥಳದಿಂದ ಇನ್ನೊಂದಕ್ಕೆ ಅದು ವಿಪರೀತ ವ್ಯತ್ಯಾಸಗೊಳ್ಳುತ್ತದೆ. ಕಾರ್ಯ ಪರಿಸ್ಥಿತಿಯಲ್ಲಿ ಒಂದು ಸಮಾನವಾದ, ಏಕರೂಪದ ಮಟ್ಟವಂತೂ ಇಲ್ಲ. ಭಾರತ ಸರಕಾರವು ಈ ಪರಿಸ್ಥಿತಿಯನ್ನು ಸಹಿಸುತ್ತದೆ ಎಂದು ನಾನು ಹೇಳಲಾರೆ. ನಿಷ್ಪಕ್ಷಪಾತ ವಿಚಾರಣೆಯಿಂದ ಸಾಕಷ್ಟು ಮಾಹಿತಿ ನಮ್ಮ ಮುಂದೆ ಬಂದ ಹೊರತು ನಾವು ಯಾವುದೇ ಶಾಸಕಾಂಗ ಕ್ರಮ ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ಟೀ ತೋಟದ ಕಾರ್ಮಿಕರ ಹಿತರಕ್ಷಣೆಗಾಗಿ ಕೈಗೊಳ್ಳುವ ಯಾವುದೇ ಕ್ರಮವನ್ನು ತಡೆಯುವಂತೆ ಸರಕಾರವು ತಟಸ್ಥವಾಗಿ ಕುಳಿತಿದೆ ಎಂಬುದು ಇದರ ಅರ್ಥವಲ್ಲ ರಾಯಲ್ ಕಮೀಷನ್‌ನವರೇ ಒಂದು ತಡೆಯನ್ನು ಒಡ್ಡಿದ್ದಾರೆ ಎಂಬುದನ್ನು ಮಾನ್ಯ ಮಿತ್ರ ಶ್ರೀ ಜೋಷಿ ನೆನಪು ಮಾಡಿಕೊಳ್ಳಬಹುದು. ತಾನು ಮಾಡುವ ಶಿಫಾರಸುಗಳನ್ನು ಜಾರಿಗೆ ತರುವುದಕ್ಕೆ ಮೊದಲು, ಪ್ಲಾಂಟೇಷನ್ನುಗಳಲ್ಲಿನ ಪರಿಸ್ಥಿತಿಯ ಬಗೆಗೆ ನಿರ್ದಿಷ್ಟವಾಗಿ ವಿಚಾರಣೆ ನಡೆಸಬೇಕು ಎಂದು ರಾಯಲ್ ಕಮೀಶನ್ ವರದಿ ಹೇಳುತ್ತದೆ. ಈ ವಿಚಾರಣೆ ನಡೆಯಬೇಕೆಂಬ ವಿಚಾರದಲ್ಲಿ ಭಾರತ ಸರಕಾರಕ್ಕೆ ಸಂದೇಹವೇ ಇಲ್ಲ. ಸರಕಾರದ ಪರವಾಗಿ ಮಾತನಾಡುತ್ತಾ, ಪ್ಲಾಂಟೇಷನ್ನುಗಳ ಮೇಲೆ ಕಾರ್ಮಿಕ ಯೋಗಕ್ಷೇಮದ ವಿಷಯದಲ್ಲಿ ಸೂಕ್ತ ಮಟ್ಟ ಕಾಪಾಡಬೇಕೆಂಬ ಕಡ್ಡಾಯವನ್ನು ಹೇರುವುದು ಅತ್ಯಂತ ಸೂಕ್ತವೆಂದು ಸರಕಾರವು ಭಾವಿಸುತ್ತದೆ ಎಂದು ಹೇಳಲು ಸಿದ್ಧನಾಗಿದ್ದೇನೆ. ಇದರಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನನ್ನ ಮಾನ್ಯ ಮಿತ್ರ ಶ್ರೀ ಜೋಷಿಯವರು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಉತ್ತಮ ವೇತನಮಟ್ಟವನ್ನು ಮೊದಲು ಸಿಲೋನಿನಲ್ಲಿ ಅನ್ವಯಿಸುವುದು, ಅಲ್ಲಿಯ ಕೂಲಿಕಾರರ ಜೀವನಮಟ್ಟವನ್ನು ಭಾರತಕ್ಕೆ ಪೂರ್ವನಿದರ್ಶನವಾಗಿ ತೋರಿಸುವುದು, ಅಲ್ಲಿಯ ಸ್ಥಿತಿಗತಿಗಳನ್ನು ಇಲ್ಲಿ ಅನ್ವಯಿಸದಿರುವುದು ಇವು ಭಾರತ ಸರಕಾರಕ್ಕೆ ಸೇರಿದ ವಿಷಯಗಳಲ್ಲ. ಕಾರ್ಮಿಕರ ಮೇಲೆ ಎಲ್ಲೆಲ್ಲಿ ಅನಗತ್ಯ ಸೀಮಿತಗಳನ್ನು ಹೇರಲಾಗಿದೆಯೋ ಅಲ್ಲೆಲ್ಲ ಹಲವಾರು ಸುಗ್ರೀವಾಜ್ಞೆಗಳನ್ನು ಹೊರಡಿಸಿ ಸರಕಾರವು ಸೂಕ್ತ, ಉತ್ತಮ ಕಾರ್ಯಪರಿಸ್ಥಿತಿಯು ಕಾರ್ಮಿಕರಿಗೆ ದೊರಕುವಂತೆ ಮಾಡುತ್ತದೆ. ಪ್ಲಾಂಟೇಷನ್ ಕಾರ್ಮಿಕರ ಸಂಬಂಧವಾಗಿಯೂ ಸರಕಾರವು ಹಾಗೆಯೇ ಮಾಡುತ್ತದೆ. ಟೀ ತೋಟಗಳಲ್ಲಿನ ಈ ಹಿಂದಿನ ಪರಿಸ್ಥಿತಿ ಏನೇ ಇದ್ದಿರಲಿ, ಈಗ ಅಲ್ಲಿ ಯಾವ ಸ್ಥಿತಿಯಿದೆಯೆಂದರೆ, ಒಂದು ವೇತನ ಮಂಡಳಿಯು ಅವರ ಮೇಲೆ ಹೊರಿಸಬಹುದಾದ ಕಾರ್ಯಗಳ ಭಾರವನ್ನು ತಡೆದುಕೊಳ್ಳಬಲ್ಲದು ಎಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಆದ್ದರಿಂದ ಈಗ ಏಳಬಹುದಾದ ಒಂದೇ ಒಂದು ಪ್ರಶ್ನೆ ಇದು : ಈಗ ನಾವು ಈ ವಿಷಯದಲ್ಲಿ ವಿಚಾರಣೆಯನ್ನು ನೇಮಿಸಬಹುದೆ? ನನ್ನ ಮಿತ್ರರಾದ ಶ್ರೀ ಜೋಷಿಯವರಿಗೂ, ಎರಡೂ ವಿಷಯಗಳನ್ನು ಕುರಿತು ಭಾರತ ಸರಕಾರವನ್ನು ಪ್ರತಿನಿಧಿಸುತ್ತಿರುವ ನನಗೂ ಉತ್ತಮ ಗುಣಮಟ್ಟಗಳನ್ನು ವಿಧಿಸಬೇಕೆನ್ನುವ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಶ್ರೀ ಜೋಷಿ ಮತ್ತು ಇತರ ಮಾನ್ಯ ಮಿತ್ರರು ಚೆನ್ನಾಗಿಯೇ ತಿಳಿದುಕೊಂಡಿರುವಂತೆ, ಬಹುತೇಕ ಚಹಾ ತೋಟಗಳು ಇರುವುದು ಭಾರತದ ಪೂರ್ವದ ಮೂಲೆಯಲ್ಲಿ, ಅಸ್ಸಾಂ ಮತ್ತು ಬಂಗಾಳಗಳಲ್ಲಿ. ಆ ಪ್ರದೇಶಗಳು ಶತ್ರುಗಳ ಕಾರ್ಯಾಚರಣೆಗೆ ಬಹಳವಾಗಿ ಅವಕಾಶವಿರುವ

ಸ್ಥಳಗಳೆನ್ನುವುದು ಸ್ಪಷ್ಟವಾಗೇ ಇದೆ. ಆ ಮೂಲೆಯಲ್ಲಿ ಪ್ರಾರಂಭಿಸುವ ಯಾವುದೇ ವಿಚಾರಣೆಯು ಕ್ಷೋಭೆಯ ಪರಿಣಾಮವನ್ನು ಉಂಟುಮಾಡುವ ಸಾಧ್ಯತೆ ಇದೆ. ಆದ್ದರಿಂದ ದಕ್ಷಿಣ ಭಾರತದ ಪ್ಲಾಂಟೇಷನ್ನುಗಳಿಗೆ ಸಂಬಂಧಿಸಿ ವಿಚಾರಣೆಯನ್ನು ಪ್ರಾರಂಭ ಮಾಡಬಹುದೆ ಎಂಬ ಪ್ರಶ್ನೆ ಉಳಿಯುತ್ತದೆ. ಈ ತೋಟಗಳು ಹೇಗೆ ಉತ್ತರ, ದಕ್ಷಿಣ ಭಾರತಗಳಲ್ಲಿ ಹಂಚಿಕೊಂಡಿವೆ ಎಂಬುದನ್ನು ಸದನಕ್ಕೆ ತಿಳಿಸಬೇಕು. ಈಗ ನನ್ನ ಮುಂದಿರುವ ಅಂಕಿಗಳು ೧೯೪೧ಕ್ಕೆ ಸಂಬಂಧಿಸಿದವು. ಇವುಗಳ ಪ್ರಕಾರ ತೋಟಗಳ ಎಕರೆವಾರು ಪ್ರಮಾಣ ನೋಡಿದರೆ ಉತ್ತರ ಭಾರತದಲ್ಲಿ ೬೦೭,೦೦೦ ಎಕರೆಗಳಿವೆ, ದಕ್ಷಿಣ ಭಾರತದಲ್ಲಿ ಕೇವಲ ೧೬೩,೧೩೨ ಮಾತ್ರ. ಈ ಟೀ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆಯಾದರೋ ಉತ್ತರ ಭಾರತದಲ್ಲಿ ೭೭೩,೯೬೯ ಆಗಿದ್ದರೆ ದಕ್ಷಿಣ ಭಾರತದಲ್ಲಿ ೧೪೪,೩೮೫ ಆಗಿದೆ.

**ಸರ್ ಎಫ್.ಇ. ಜೇಮ್ಸ್ (ಮದರಾಸು–ಯೂರೋಪಿಯನ್) :** ಅದು ಟೀಗೆ ಮಾತ್ರ ಅನ್ವಯಿಸುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ನಾವು ಮಾತನಾಡುತ್ತಿರುವುದು ಟೀ ವಿಷಯ ಮಾತ್ರ. ನಾನು ಕೊಟ್ಟಿರುವ ಅಂಕಿಗಳಿಂದ ದಕ್ಷಿಣ ಭಾರತದ ಪ್ಲಾಂಟೇಷನ್‌ಗಳು ಒಟ್ಟಾರೆ ಭಾರತದ ಟೀ ತೋಟ ಬೆಳೆಸುವ ಉದ್ಯಮದ ಅತ್ಯಲ್ಪ ಭಾಗವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

**ಮೌಲಾನಾ ಜಫರ್ ಅಲಿಖಾನ್ :** ಅಸ್ಸಾಮಿನಲ್ಲಿರುವ ಟೀ ತೋಟಗಳ ಎಕರೆ ಪ್ರಮಾಣ ಎಷ್ಟು ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಉತ್ತರ–ದಕ್ಷಿಣ ಭಾರತದ ವಿಷಯ ಮಾತನಾಡುತ್ತಿದ್ದೇನೆಯೇ ಹೊರತು ಅಸ್ಸಾಮನ್ನು ಪ್ರತ್ಯೇಕವಾಗಿ ತೆಗೆದುಕೊಂಡಿಲ್ಲ. ಅಸ್ಸಾಂ ಕೂಡ ಉತ್ತರ ಭಾರತದಲ್ಲಿ ಸೇರಿಕೊಂಡಿದೆ. ಅಂಕಿಗಳಿಂದ ತಿಳಿದುಬರುವ ಅಂಶ, ದಕ್ಷಿಣ ಭಾರತದ ಚಹಾ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಈ ದೇಶದ ಅಂತಹ ಕಾರ್ಮಿಕರ ಸಂಖ್ಯೆಗೆ ಹೋಲಿಸಿದರೆ ತುಂಬ ಸಣ್ಣ ಭಾಗ. ಆದ್ದರಿಂದ ಅಂತಹ ಭಾಗಶಃ ಆದ ಸೀಮಿತವಾದ ವಿಚಾರಣೆ ನಡೆಸುವುದರಿಂದ ಭಾರತ ಸರಕಾರಕ್ಕಾಗಲಿ, ಕಾರ್ಮಿಕರಿಗಾಗಲಿ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ಸರಕಾರಕ್ಕೆ ತೋರುತ್ತದೆ. ಪ್ರಸ್ತುತ ಯುದ್ಧ ಪರಿಸ್ಥಿತಿಯಲ್ಲಂತೂ ಸೂಕ್ಷ್ಮದರ್ಶಕದಲ್ಲಿ ನೋಡಬೇಕಾದಷ್ಟು ಸಣ್ಣ ಪ್ರದೇಶಕ್ಕೆ ಸೀಮಿತಗೊಳಿಸಿ ಪ್ರಾರಂಭಿಸುವುದು ಸಾಧ್ಯವಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಈ ಸೂಚನೆಯ ಮೇಲೆ ಕಾರ್ಮಿಕ ಪ್ರಶ್ನೆ ಗೌಣವಾಗಿ ಬಂದಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು ಎಂದು ಸೂಚಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಹೇಳುವುದು ಬೇರೇನೂ ಉಳಿದಿಲ್ಲ.

**ಡಾ॥ ಸರ್ ಜಿಯಾ ಉದ್ದೀನ್ ಅಹಮದ :** ಟೀ ತೋಟದ ಮಾಲೀಕರಿಗೆ ತೋಟಗಳಲ್ಲಿ ಚಹಾ ಬೆಳೆದಿರುವುದಕ್ಕೆ ಸಾಕಷ್ಟು ದೊಡ್ಡ ಮೊತ್ತದ ಹಣ ಕೊಡಲಾಗಿದೆಯೇ? ಅದು ಗ್ರಾಹಕರ ಮೇಲೆ ಹೊರೆಯಾಗಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದು ವಾಣಿಜ್ಯ ಕಾರ್ಯದರ್ಶಿಯವರು ವ್ಯವಹರಿಸಬೇಕಾದ ವಿಚಾರ.

**ಕೆಲವು ಮಾನ್ಯ ಸದಸ್ಯರು :** ಈಗ ಮಂಡನೆಯನ್ನು ಮಂಡಿಸಬಹುದು.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಪ್ರಶ್ನೆ ಇದು

ಮಂಡನೆಯನ್ನು ಮಂಡಿಸಬಹುದು

ಮಂಡನೆಯನ್ನು ಅಂಗೀಕರಿಸಲಾಯಿತು.

# ೧೩
# ಯುದ್ಧದಲ್ಲಿ ಆಗುವ ಗಾಯಗಳ (ಪರಿಹಾರ ವಿಮಾ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ಈ ಸೂಚನೆಯನ್ನು ಮಂಡಿಸುತ್ತೇನೆ.

"ಯುದ್ಧದಲ್ಲಿ ಗಾಯುಗೊಳ್ಳುವ ಕಾರ್ಮಿಕರಿಗೆ ಪರಿಹಾರ ಕೊಡುವಂತೆ ಮತ್ತು ಈ ಹೊಣೆಗಾರಿಕೆಯ ನಿರ್ವಹಣೆಗೆ ವಿಮೆ ಇಳಿಸುವಂತೆ ಕಡ್ಡಾಯ ಮಾಡುವ ಮಸೂದೆಯನ್ನು ಒಂದು ಸೆಲೆಕ್ಟ್ ಕಮಿಟಿಗೆ ವಹಿಸಬೇಕು. ಅದರಲ್ಲಿ ಸರ್ ವಿಠ್ಠಲ ಎನ್. ಚಂದಾವರ್ಕರ್, ಶ್ರೀ ಎನ್.ಎಂ. ಜೋಷಿ, ಶ್ರೀ ಜಮ್ನಾದಾಸ್ ಎಂ. ಮೆಹ್ತಾ, ಶ್ರೀ ಡಿ.ಎಸ್. ಜೋಷಿ, ಶ್ರೀ ಹುಸೇನ್ ಭಾಯ್ ಎಂ. ಲಾಲ್ಜೀ, ಶ್ರೀ ಖಾನ್ ಬಹಾದ್ದೂರ್ ಮಿಯಾ, ಶ್ರೀ ಘುಲಾಂ ಕಾದಿರ್ ಮಹಮ್ಮದ್ ಶಭಾನ್, ಶ್ರೀ ಸಿ.ಸಿ. ಮಿಲ್ಲರ್, ಶ್ರೀ ಇಎಲ್‌ಸಿ ಗಿಲ್ಬ್, ಶ್ರೀ ಮೌಲಾನಾ ಜಫರ್ ಅಲಿ ಖಾನ್, ಶ್ರೀ ಯೂಸುಫ್ ಅಬ್ದುಲಾ ಹರೂನ್, ಶ್ರೀ ಹಾಜೀ ಚೌಧುರಿ ಮಹಮ್ಮದ್ ಇಸ್ಮಾಯಿಲ್ ಖಾನ್, ಶ್ರೀ ಎಚ್.ಎ. ಸತ್ತಾರ್, ಶ್ರೀ ಎಚ್. ಎಸ್ಸಾಕ್ ಸೇಟ್, ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ, ಶ್ರೀ ಆರ್.ಆರ್. ಗುಪ್ತ ಮತ್ತು ಈ ಸೂಚನೆ ಮಂಡಿಸುತ್ತಿರುವವರು ಇರುತ್ತಾರೆ. ಸಮಿತಿಯು ಸಭೆ ನಡೆಸಲು ಹಾಜರಿರಲೇಬೇಕಾದ ಸದಸ್ಯರ ಸಂಖ್ಯೆ ಐದು. ಸಮಿತಿಯು ಸಿಮ್ಲಾದಲ್ಲಿ ತನ್ನ ಸಭೆ ನಡೆಸಲು ಅಧಿಕಾರ ಹೊಂದಿದೆ".

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಮಾನ್ಯ ಸದಸ್ಯರು ಹೆಸರುಗಳನ್ನು ಕೊಟ್ಟಿದ್ದಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಸ್ವಾಮಿ, ಪಟ್ಟಿಯನ್ನು ಈಗ ಕೊಡುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಹೆಸರುಗಳನ್ನು ಮೊದಲೇ ಕೊಟ್ಟಿರಬೇಕಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಸ್ವಾಮಿ, ಗೌರವಾನ್ವಿತ ಸದಸ್ಯರಿಗೆ ಪಟ್ಟಿಯನ್ನು ಹಂಚುತ್ತಾ ಸದನದ ಹೆಚ್ಚು ಕಾಲವನ್ನು ವ್ಯರ್ಥ ಮಾಡುವುದು ಅಗತ್ಯ ಎಂದು ನನಗನ್ನಿಸುವುದಿಲ್ಲ. ಮಸೂದೆಯ ಮುಖ್ಯವಾದ ವಿಧಿಗಳು ಮೂರು. ಈ ಮಸೂದೆಯು ಯುದ್ಧದಲ್ಲಿ ಗಾಯಗೊಂಡ ನೌಕರರಿಗೆ ಪರಿಹಾರ ಕೊಡುವಂತೆ ನಿಬಂಧಿಸುತ್ತದೆ. ಎರಡನೆಯದಾಗಿ, ಉದ್ಯಮಪತಿಗಳ ಮೇಲೆ ಆ ಪರಿಹಾರವನ್ನು ಕೊಡುವ ಹೊಣೆಯನ್ನು ವಿಧಿಸುತ್ತದೆ; ಮೂರನೆಯದಾಗಿ, ತಮ್ಮ ಮೇಲೆ ಹೊರಿಸಿದ ಈ ಹೊಣೆಯನ್ನು ನಿಭಾಯಿಸಲು ಉದ್ಯಮಪತಿಗಳು ವಿಮೆ ಇಳಿಸತಕ್ಕದ್ದು ಎಂದು ವಿಧಿಸುತ್ತದೆ.

ಪರಿಹಾರದ ಪ್ರಶ್ನೆಯನ್ನು ತೆಗೆದುಕೊಳ್ಳುವುದಾದರೆ, ಸದನದ ಗಮನವನ್ನು ಒಂದು ಅಂಶದ ಕಡೆಗೆ ನಾನು ಸೆಳೆಯಬೇಕು. ಅದೇಂದರೆ ಈ ಮಸೂದೆಯು ಒಂದು ಕೊಂಡಿಯಾಗಿದ್ದು ಅದು ಕಾರ್ಮಿಕರ ಪರಿಹಾರ ಅಧಿನಿಯಮ (Workmen's Compenstion Act) ದೊಂದಿಗೆ ಸೇರಿಕೊಂಡಿದೆ. ಇನ್ನು ಈ ಮಸೂದೆಯು ಯುದ್ಧದ ಗಾಯಗಳ ಸುಗ್ರೀವಾಜ್ಞೆಯೊಂದಿಗೂ (War Injuries Ordinance) ಸಂಬಂಧಿಸಿದೆ. ೧೯೪೧ರ ವಾರ್ ಇಂಜುರೀಸ್ ಆರ್ಡಿನೆನ್ಸ್ ಅರ್ಹತಾ ಗಾಯಗಳು ಎಂದರೆ ಯಾವುವು ಎಂದು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೫, ೩–೧೩–೧೯೪೩, ಪು. ೧೬೪೯–೫೧.

ವಿವರಿಸುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಆ ಸುಗ್ರೀವಾಜ್ಞೆಯಲ್ಲಿ ಗಾಯಗಳನ್ನು ವರ್ಗೀಕರಿಸಲಾಗಿದೆ. ಪ್ರಸ್ತುತ ಮಸೂದೆಯು ಆ ಸುಗ್ರೀವಾಜ್ಞೆಯಲ್ಲಿ ನಿರೂಪಿಸಿರುವ ಅರ್ಹತಾ ಗಾಯಗಳ ವ್ಯಾಪ್ತಿಯನ್ನೂ, ಮಿತಿಯನ್ನೂ ತನ್ನಲ್ಲಿ ಅಳವಡಿಸಿಕೊಳ್ಳುತ್ತದೆ. ಇನ್ನು ಈ ಮಸೂದೆಗೂ ಕಾರ್ಮಿಕ ಪರಿಹಾರ ಶಾಸನಕ್ಕೂ ಇರುವ ಸಂಬಂಧಗಳ ಬಗೆಗೆ ಹೇಳುವುದಾದರೆ, ಪ್ರಸ್ತುತ ಮಸೂದೆಯಲ್ಲಿ ಯುದ್ಧ ಗಾಯಾಳುವಿಗೆ ನಿಗದಿಪಡಿಸಿರುವ ಪರಿಹಾರಕ್ಕಾಗಿ ಆ ಶಾಸನದಲ್ಲಿ ನಿಗದಿಪಡಿಸಿರುವ ದರವನ್ನೇ ಹೆಚ್ಚುಕಡಮೆ ಇಟ್ಟುಕೊಂಡಿದೆ.

ಮಾನ್ಯರೆ, ಈ ಕ್ರಮ ಕೈಗೊಳ್ಳಬೇಕಾಗಿ ಬಂದುದಕ್ಕೆ ಕಾರಣವಿದೆ. ೧೯೪೧ರಲ್ಲಿ ಯುದ್ಧ ಗಾಯಗಳ ಸುಗ್ರೀವಾಜ್ಞೆಯನ್ನು ಹೊರಡಿಸಿದ ಮೇಲೆ ಒಂದು ಪ್ರಶ್ನೆ ಎದ್ದಿತು. ಅದು ಸಾಕಷ್ಟು ಮುಖ್ಯವಾದ ಪ್ರಶ್ನೆಯಾಗಿತ್ತು. ದುರದೃಷ್ಟವಶಾತ್, ಪರಿಹಾರಾರ್ಹ ಗಾಯಗಳು ಎಂದು ವಿವರಿಸಿರುವ ರೀತಿಯ ಗಾಯಗಳಿಗೆ ಒಬ್ಬ ನೌಕರನು ತುತ್ತಾದರೆ ಅವನಿಗೆ ಕೊಡುವುದು ತಾತ್ಕಾಲಿಕ ನೆರವಿನ ರೂಪದಲ್ಲಿರಬೇಕೆ? ಪರಿಹಾರವಾಗಿರಬೇಕೆ? ಇದು ಆ ಪ್ರಶ್ನೆ. ತತ್ಕಾಲೀನ ನೆರವಿಗೂ ಪರಿಹಾರಧನಕ್ಕೂ ವ್ಯತ್ಯಾಸ ಸ್ಪಷ್ಟವೇ ಇದೆ. ಯುದ್ಧದಲ್ಲಾದ ಗಾಯದಿಂದಾಗಿ ಯಾವುದೇ ಬಗೆಯ ಅಂಗ ದೌರ್ಬಲ್ಯವುಂಟಾಗಿ ತನ್ನ ಎಂದಿನ ವೇತನವನ್ನು ಗಳಿಸುವ ಶಕ್ತಿಯನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದವನಿಗೆ ನೀಡುವ ಸಹಾಯ ತತ್ಕಾಲೀನ ನೆರವು (Relief). ಕಾರ್ಮಿಕರ ಪರಿಹಾರ ಶಾಸನದಲ್ಲಿ ನಿರೂಪಿಸಿರುವಂತೆ ವ್ಯಕ್ತಿಗೆ ಈ ಕಾರಣದಿಂದಾದ ನಷ್ಟಕ್ಕೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಕಟ್ಟಿಕೊಡುವುದು ಪರಿಹಾರ ಧನವೆನಿಸುತ್ತದೆ (Compensation). ಈ ಪ್ರಶ್ನೆ ಬಂದಾಗ ಇಂಗ್ಲೆಂಡಿನಲ್ಲಿ ಚಾಲ್ತಿಯಲ್ಲಿರುವ ಸ್ಥಿತಿಗತಿಗಳನ್ನು ಉಲ್ಲೇಖಿಸಲಾಯಿತು. ಬ್ರಿಟಿಷ್ ಪಾರ್ಲಿಮೆಂಟು ಯುದ್ಧ ಗಾಯಗಳ ಸಂಕೀರ್ಣ ಶಾಸನ (War Injuries Miscellaneous Act, ೧೯೩೯) ಎಂಬ ಶಾಸನವನ್ನು ಜಾರಿಗೆ ತಂದಿತು. ಈ ಇಂಗ್ಲಿಷ್ ಶಾಸನದ ಉಪಬಂಧಗಳನ್ನು ಪರೀಕ್ಷಿಸಿ ನೋಡಿದಾಗ ಶಾಸನದನ್ವಯ ಗಾಯಾಳುಗಳಿಗೆ ಕೊಟ್ಟದ್ದು ಪರಿಹಾರ ಧನವೇ ಹೊರತು ತಾತ್ಕಾಲಿಕ ನೆರವಲ್ಲವೆಂಬುದು ವ್ಯಕ್ತವಾಯಿತು. ಇಂಗ್ಲಿಷ್ ಕಾನೂನಿನಲ್ಲಿರುವ ಮಾದರಿಯನ್ನೇ ಅಳವಡಿಸಿಕೊಳ್ಳುವುದು ಭಾರತ ಸರಕಾರಕ್ಕೆ ಸೂಕ್ತವಲ್ಲವೆ ಎಂಬ ಪ್ರಶ್ನೆ ಬಂದಿತು. ಎರಡನೆಯದಾಗಿ, ೧೯೪೧ರ ಯುದ್ಧ ಗಾಯಗಳ ಸುಗ್ರೀವಾಜ್ಞೆಯು ಜಾರಿಗೆ ಬಂದನಂತರ ಕೆಲವು ಉದ್ಯಮಪತಿಗಳು ತಾವಾಗಿಯೇ ಭಾರತ ಸರಕಾರಕ್ಕೆ ಒಂದು ಪತ್ರ ಬರೆದು, ವಾರ್ ಇಂಜುರೀಸ್ ಆರ್ಡಿನೆನ್ಸ್‌ನಲ್ಲಿ ಕೊಟ್ಟಿರುವ ಅವಕಾಶಗಳು ಕಾರ್ಮಿಕರ ನೈತಿಕ ಶಿಸ್ತು, ಸ್ಥೈರ್ಯಗಳನ್ನು ಕಾಪಾಡಲು ಸಾಕಾಗುವುದಿಲ್ಲ ಎಂಬುದು ತಮ್ಮ ದೃಷ್ಟಿಯಾಗಿದೆ ಎಂದು ತಿಳಿಸಿದರು. ವಿಕ್ಷುಬ್ಧ ಪ್ರದೇಶಗಳಲ್ಲಿ ಕೆಲಸ ಮಾಡುವ ಇತರ ನೌಕರರು ತಮ್ಮ ಕೆಲಸದಲ್ಲಿ ಸ್ಥಿರ ಮನಸ್ಸು ಹೊಂದಿರುವ ಹಾಗೆ ಪೂರ್ಣ ಪ್ರಮಾಣದ ಪರಿಹಾರ ಧನವನ್ನು ಕೊಡಬೇಕು ಎಂದು ಆಗ್ರಹಪಡಿಸಿದರು. ಈ ಎರಡೂ ದೃಷ್ಟಿಗಳನ್ನು ಗಮನಕ್ಕೆ ತಂದುಕೊಂಡು ಭಾರತ ಸರಕಾರವು ಮೊದಲು ಕೇವಲ 'ತಾತ್ಕಾಲಿಕ ನೆರವು' ಎಂದಿದ್ದುದಕ್ಕೆ ಪ್ರತಿಯಾಗಿ ನೌಕರರಿಗೆ 'ಪರಿಹಾರ ಕೊಡುವುದು' ಎಂದು ನಿರ್ಧರಿಸಿತು.

ಯುದ್ಧ ಗಾಯಗಳ ಸುಗ್ರೀವಾಜ್ಞೆಯಲ್ಲಿರುವ ಅವಕಾಶಗಳನ್ನು ಪರೀಕ್ಷಿಸಲಾಗಿ, ಸುಮಾರು ೨೪ ರೂ. ಗಳ ಮಟ್ಟದಲ್ಲಿ ಸುಗ್ರೀವಾಜ್ಞೆಯ ಪ್ರಕಾರ ಮಾಡಿದ ಪಾವತಿ ತಾತ್ಕಾಲಿಕ ನೆರವು ಮಾತ್ರವಲ್ಲದೆ ಪರಿಹಾರ ಧನವೂ ಆಗುವಂತಿತ್ತು. ಆದ್ದರಿಂದ ೨೪ ರೂಪಾಯಿಗಳಿಗಿಂತ ಹೆಚ್ಚಿಗೆ ವೇತನ ಪಡೆಯುವ ನೌಕರನಿಗೆ ಹೆಚ್ಚಿನ ರಿಯಾಯಿತಿ ಕೊಡಬೇಕು, ಅದರಿಂದ ಅವನಿಗೆ ಕೊಡುವ ಹಣವು ಪರಿಹಾರ ಧನವಾಗುತ್ತದೆ. ಅಂದರೆ, ಸುಗ್ರೀವಾಜ್ಞೆಯ ಪ್ರಕಾರ ಅವನು ಏನು ಪಡೆಯುತ್ತಾನೆಯೋ ಅದಕ್ಕೆ ಪೂರಕವಾಗಿ ಕೊಡಬೇಕು. ಆದ್ದರಿಂದ ಈಗ ಕೈಗೊಳ್ಳುತ್ತಿರುವ ಕ್ರಮವು ಪೂರಕ ಕ್ರಮ, ವಾರ್ ಇಂಜುರೀಸ್ ಆರ್ಡಿನೆನ್ಸ್ ೧೯೪೧ರಲ್ಲಿ

ಮಾಡಿರುವ ಅವಕಾಶಗಳಿಗೆ ಪೂರಕವಾಗುವ ಕ್ರಮ.

ಹೀಗೆ ಈ ಸದನಕ್ಕೆ ಮಸೂದೆಯ ಮುಖ್ಯ ವಿಧಿಗಳನ್ನೂ ಮತ್ತು ಮಸೂದೆಯು ಹೇಗೆ ವಾರ್ ಇಂಜುರೀಸ್‌ದೊಂದಿಗೆ ಹಾಗೂ ವರ್ಕ್‌ಮೆನ್ಸ್ ಕಾಂಪೆನ್ಸೇಷನ್ (ಕಾರ್ಮಿಕರ ನಷ್ಟಪರಿಹಾರ ಅಧಿನಿಯಮ) ಆ್ಯಕ್ಟ್‌ನೊಂದಿಗೆ ಸಂಬಂಧಪಟ್ಟಿದೆ ಎನ್ನುವುದನ್ನೂ ವಿವರಿಸಿ ಭಾರತ ಸರಕಾರವು ಈ ಪೂರಕ ಶಾಸನ ಕ್ರಮವನ್ನು ತರಲು ಏನು ಕಾರಣ ಎಂಬುದನ್ನು ವಿವರಿಸಿದ ನಂತರ ಈಗ, ಮಸೂದೆಯ ಎರಡನೆಯ ಮುಖ್ಯ ಅವಕಾಶವನ್ನು ತೆಗೆದುಕೊಳ್ಳುತ್ತೇನೆ. ವಿಧಿಯನ್ನು ಈಗ ಕೈಗೆತ್ತಿಕೊಳ್ಳುತ್ತೇನೆ ಉದ್ಯಮಪತಿ ಅಥವಾ ಮಾಲೀಕನು ಆ ಪರಿಹಾರ ಕೊಡಲು ಬದ್ಧನಾಗಿರುತ್ತಾನೆ ಎನ್ನುವುದು ಅದು. ವಾರ್ ಇಂಜುರೀಸ್ ಆರ್ಡಿನೆನ್ಸ್‌ನ ವಿಧಿಗಳ ಪ್ರಕಾರ ಈ ಮಸೂದೆ ಅನ್ವಯವಾಗುವ ವರೆಗೆ ಅವರಿಗೆ ತಾತ್ಕಾಲಿಕ ನೆರವು ಕೊಡುವುದು ಸರಕಾರ, ಆದ್ದರಿಂದ ಪೂರ್ಣ ಪ್ರಮಾಣದ ಪರಿಹಾರ ಧನ ಕೊಡುವ ಹೊಣೆಗಾರಿಕೆಯನ್ನು ಸರಕಾರವೇ ವಹಿಸಿಕೊಳ್ಳಬೇಕು. ಸರಕಾರವು ಇದನ್ನು ವಹಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗೇ ಇದೆ. ಈಗಿನ ಪರಿಸ್ಥಿತಿಯಲ್ಲಿ ಏನು ಬೇಕಾದರೂ ಆಗಬಹುದು. ಭಾರತವು ಈಗಿರುವಂತೆಯೇ ಉಳಿದ ಪಕ್ಷದಲ್ಲಿ ಇದರಿಂದಾಗಿ ಯಾವ ಹೊಸ ಹೊಣೆಗಾರಿಕೆಯೂ ಉದ್ಭವವಾಗುವುದಿಲ್ಲ. ಅಥವಾ ಪರಿಸ್ಥಿತಿ ಇನ್ನೂ ಹದಗೆಟ್ಟರೆ, ಹೊಣೆಗಾರಿಕೆ ಅನಿಶ್ಚಿತವಾಗುತ್ತದೆ, ಅಂತಹ ಅನಿಶ್ಚಿತ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಬೇಕೆಂದು ಸರಕಾರವನ್ನು ಕೇಳಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಎರಡನೆಯದಾಗಿ, ಸರಕಾರವು ಜವಾಬ್ದಾರಿ ಹೊತ್ತುಕೊಳ್ಳುವುದಿಲ್ಲ ಎನ್ನುವ ಮಾತನ್ನು ದೊಡ್ಡದು ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ, ಮಾಲೀಕನು ಈ ಹೊಣೆಗಾರಿಕೆಯ ಪ್ರಕಾರ ಎಷ್ಟು ಹಣವನ್ನು ಪಾವತಿ ಮಾಡುತ್ತಾನೋ ಅದಷ್ಟೂ ಇ.ಪಿ.ಟಿ. ಪ್ರಕಾರ ಅಧಿಕೃತ ರೆವಿನ್ಯೂ ವೆಚ್ಚವೆಂದು ಅಂಗೀಕೃತವಾಗುತ್ತದೆ. ಇದರ ಫಲ, ಅಂತಿಮವಾಗಿ ಹೊರೆಯು ಸರಕಾರದ ಬೊಕ್ಕಸದ ಮೇಲೆ ತಾನೆ ಬೀಳುತ್ತದೆ?

ಇನ್ನೂ ಒಂದು ಅಂಶವನ್ನು ಇಲ್ಲಿ ಸೂಚಿಸಬೇಕಾಗಿದೆ. ಭಾರತ ಸರಕಾರವು ಈ ಹೊಣೆಗಾರಿಕೆಯನ್ನು ಮಾಲೀಕರ ಮೇಲೆ ಹೊರಿಸುತ್ತಿರುವಂತೆಯೇ ಅದು ತನ್ನ ನೌಕರರ ಬಗೆಗೆ ತನಗಿರುವ ಹೊಣೆಗಾರಿಕೆಯನ್ನು ಮರೆತಿಲ್ಲ. ಮಾನ್ಯ ಸದಸ್ಯರು ಅಲ್ಲೊಂದು ಉಪವಾಕ್ಯವಿರುವುದನ್ನು ಗಮನಿಸಬಹುದು. ಅಲ್ಲಿ, ಈ ಮಸೂದೆಯು ಘನ ಚಕ್ರವರ್ತಿಯವರ ಸೇವೆಯಲ್ಲಿರುವ ನೌಕರರಿಗೆ ಅಥವಾ ಫೆಡರಲ್ ರೈಲ್ವೆಯ ನೌಕರರಿಗೆ ಅನ್ವಯಿಸುವುದಿಲ್ಲ ಎಂದಿದೆ. ಅಂದ ಮಾತ್ರಕ್ಕೆ ಈ ನೌಕರರು, ನಾವು ಮಸೂದೆಯಲ್ಲಿ ಇತರರಿಗೆ ನೀಡುತ್ತಿರುವ ಸೌಲಭ್ಯದಿಂದ ವಂಚಿತರಾಗುತ್ತಾರೆ ಎಂದು ಅರ್ಥವಲ್ಲ. ಫೆಡರಲ್ ರೈಲ್ವೆ ಹಾಗೂ ಭಾರತ ಸರಕಾರ ತಮ್ಮ ನೌಕರರಿಗೆ ತಿಳಿಸಿದೆ. ಅವರು ನಾಗರಿಕ ಸೇವಾ ನಿಯಮಾವಳಿಯಲ್ಲಿರುವಂತೆ (ಸಿವಿಲ್ ಸರ್ವೀಸ್ ರೆಗ್ಯುಲೇಷನ್ಸ್) ಹೆಚ್ಚಿನ ನಿವೃತ್ತಿ ವೇತನವನ್ನು ಪಡೆಯುತ್ತಾರೆ. ರೈಲ್ವೆ ನೌಕರರ ಸೇವೆಗೆ ಸಂಬಂಧಿಸಿದ ಕಾನೂನುಗಳಲ್ಲಿರುವಂತಹ ನಿವೃತ್ತಿ ವೇತನವನ್ನು ಹೆಚ್ಚಾಗಿ ಪಡೆಯುತ್ತಾರೆ.

ಮಾನ್ಯರೇ, ಈಗ ಮೂರನೆಯ ಅಂಶಕ್ಕೆ ಬರುತ್ತೇನೆ. ಮಾಲೀಕನು ತನ್ನ ಮೇಲೆ ವಿಧಿಸಿದ ಈ ಹೊಣೆಗಾರಿಕೆಯನ್ನು ವಿಮೆಯಿಳಿಸಿ ಭದ್ರಗೊಳಿಸಬೇಕು ಎನ್ನುವುದು ತುಂಬಾ ಅಗತ್ಯವಾದ, ಅಪೇಕ್ಷಣೀಯವಾದ ಅವಕಾಶವಾಗಿದೆ. ಕೆಲಸಗಾರನು ಯಾವುದೇ ಸಮಯದಲ್ಲಾಗಲೀ, ತಾನು ಈ ಮಸೂದೆಯ ವಿಧಿಗಳ ಪ್ರಕಾರ ಪಡೆಯಬಹುದಾದ ಪರಿಹಾರವನ್ನು ಖಂಡಿತವಾಗಿ ಪಡೆಯಬೇಕೆನ್ನುವುದು ಉದ್ದೇಶ. ಒಂದು ಕಾರ್ಖಾನೆಯ ಮೇಲೆ ಬಾಂಬ್ ಬಿದ್ದಿತೆನ್ನೋಣ, ಅಥವಾ ಬೇರೆ ರೀತಿಯಲ್ಲಿ ಅದು ನಾಶವಾಯಿತು ಎನ್ನೋಣ, ಮಾಲೀಕನ ಆಸ್ತಿಯೆಲ್ಲ ನಾಶವಾಗಿಬಿಡುತ್ತದೆ. ಅಂಥ ಸಂದರ್ಭದಲ್ಲಿ ಕಾರ್ಮಿಕರಿಗೆ ಈ

ಮಸೂದೆಯಲ್ಲಿ ಅವಕಾಶ ಮಾಡಿಕೊಟ್ಟಿರುವ ಪರಿಹಾರ ಧನ ಹೇಗೆ ದೊರಕೀತು? ಅವರು ಇದ್ದ ಹಾಗೆ ಇರಬೇಕಾಗುತ್ತದೆ. ಆದ್ದರಿಂದ ವಿಮೆ ಮಾಡಿಸಿದ್ದರೆ ನೌಕರನಿಗೆ ಎಲ್ಲಾ ಸಂದರ್ಭಗಳಲ್ಲೂ ಪರಿಹಾರ ಧನ ಖಂಡಿತವಾಗಿಯೂ ದೊರಕುತ್ತದೆ ಎಂಬ ಭರವಸೆ ಇರುತ್ತದೆ. ಈ ವ್ಯವಸ್ಥೆಯ ಕಾರ್ಯವಿಧಾನ ಸುಮಾರಾಗಿ ಹೀಗಿರುತ್ತದೆ: ಮಾಲೀಕನು ನೌಕರನಿಗೆ ಮೊದಲು ಪರಿಹಾರ ಧನವನ್ನು ಕೊಟ್ಟುಬಿಡುತ್ತಾನೆ, ಮಸೂದೆಯಲ್ಲಿ ನಿರೂಪಿಸಿರುವ ಪ್ರಕಾರ. ಸರಕಾರವು ವ್ಯವಹರಿಸುವ ಒಂದು ವಿಮಾ ನಿಧಿಯಿಂದ ಅವನು ಪಾವತಿ ಮಾಡಿದ ಹಣವನ್ನು ಮರಳಿ ಪಡೆಯಬಹುದು. ಈ ವಿಮಾ ನಿಧಿಗೆ ಮಾಲೀಕನು ಪ್ರತಿ ತಿಂಗಳೂ ಪ್ರೀಮಿಯಂ ಪಾವತಿ ಮಾಡುತ್ತಾ ಹೋಗುತ್ತಾನೆ. ಅದರ ಮೊತ್ತ ಎಷ್ಟು ಎಂಬುದನ್ನು ಯುದ್ಧದ ಕೊನೆಗೆ ನಿಗದಿಪಡಿಸಲಾಗುತ್ತದೆ. ಏಕೆಂದರೆ ಆಗ ನಿಜವಾಗಿ ಋಣ ಎಷ್ಟು ಎನ್ನುವುದು ಆ ಸಮಯದಲ್ಲಿ ತಿಳಿಯುತ್ತದೆ. ಈ ಮಧ್ಯೆ ಸರಕಾರವು ಮಾಲೀಕರಿಂದ ಮುಂಗಡವಾಗಿ ಪ್ರೀಮಿಯಮ್ಮನ್ನು ಪಡೆಯುತ್ತಿರುತ್ತದೆ. ಅಂತಿಮ ಕಡಿತ ಯುದ್ಧವಾದ ಮೇಲೆ ನಿರ್ಧಾರವಾಗುತ್ತದೆ. ಮುಂಗಡದ ಮೊತ್ತವೂ ಅಷ್ಟೆ, ಸ್ಥಳದಿಂದ ಸ್ಥಳಕ್ಕೆ ಅದು ವ್ಯತ್ಯಾಸಗೊಳ್ಳುತ್ತದೆ. ಏನೇ ಆದರೂ ಮೊದಲನೆಯ ಮೂರು ತಿಂಗಳಲ್ಲಿ ಅದು ವೇತನ ಮಸೂದೆಯ ೧೦೦ಕ್ಕೆ ಎಂಟು ಆಣೆ ದರವನ್ನು ಮೀರುವುದಿಲ್ಲ. ಮುಂದಿನ ಅವಧಿಗಳಲ್ಲಿ ಅದು ಬಾಕಿಯಿರುವ ಹೊಣೆಗಾರಿಕೆಯನ್ನು ಅವಲಂಬಿಸಿ ವ್ಯತ್ಯಾಸಗೊಳ್ಳುತ್ತದೆ. ಹಿಂದಿನ ತ್ರೈಮಾಸಿಕಾವಧಿಯಲ್ಲಿ ಮರಣಗಳೂ ಸಂಭವಿಸಲಿಲ್ಲ ಎಂದಿಟ್ಟುಕೊಳ್ಳೋಣ. ಹಾಗಿದ್ದರೆ ಮಾಲೀಕನಿಂದ ಮುಂಗಡ ವಸೂಲಿ ಮಾಡಲಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ವಿಮಾ ಯೋಜನೆಯ ಅನುಕೂಲವೆಂದರೆ ನೌಕರನಿಗೆ ಪರಿಹಾರ ಧನದ ಭರವಸೆ. ಅಲ್ಲದೆ ಹೊಣೆಯು ಹಂಚಿಹೋಗಿರುತ್ತದೆ. ಯುದ್ಧದ ಪರಿಣಾಮಗಳಿಲ್ಲದ ಪ್ರದೇಶಗಳಲ್ಲೂ ಮಾಲೀಕರು ಕಾರ್ಮಿಕರಿಗಾಗಿ ವಿಮಾ ಪ್ರೀಮಿಯಂ ಪಾವತಿ ಮಾಡುತ್ತಲೇ ಇರುತ್ತಾರೆ. ಮೂರನೆಯದಾಗಿ, ಹೊರೆಯು ಪರಿಮಾಣಾನುಸಾರವಾಗಿರುತ್ತದೆ. ಪ್ರತಿಯೊಬ್ಬ ಉದ್ಯಮಪತಿಯೂ ನೀಡುವ ವೇತನದ ಪ್ರಮಾಣವನ್ನು ಅವಲಂಬಿಸಿರುತ್ತದೆ.

ಆದ್ದರಿಂದ ಈ ಮಸೂದೆಯು ತುಂಬ ಸರಳವಾದ ಕ್ರಮವಾಗಿದೆ ಎಂಬುದನ್ನು ತಾವು ಗಮನಿಸಬಹುದು. ಅಲ್ಲದೆ ಯಾವುದೇ ತೆರನಾದ ಚರ್ಚೆ, ಭಿನ್ನಾಭಿಪ್ರಾಯಗಳಿಗೆ ಅವಕಾಶವಿಲ್ಲದ ಮಸೂದೆಯಿದು ಎಂದೂ ನಾನು ಹೇಳಬಹುದು. ಈ ಮಸೂದೆಯ ಕಲ್ಪನೆ ಬಂದದ್ದು ಮುಂಬಯಿ ಗಿರಣಿ ಮಾಲೀಕರ ಸಂಘದಿಂದ, ೧೯೪೨ರ ಪ್ರಾರಂಭದಲ್ಲಿ. ಈ ಸಂಘವು ಭಾರತ ಸರಕಾರಕ್ಕೆ ಒಂದು ಸೂಚನೆಯನ್ನು ಕಳುಹಿಸಿದ ಮೇಲೆ, ೧೯೪೨ರ ಏಪ್ರಿಲ್‌ನಲ್ಲಿ ಕಾರ್ಮಿಕ ಖಾತೆಯ ಕಾರ್ಯದರ್ಶಿಗಳು, ಸರ್ ಹೆನ್ರಿ ರಿಚರ್ಡ್‌ಸನ್, ಸರ್ ಫ್ರೆಡರಿಕ್ ಜೇಮ್ಸ್, ಮಿ. ಹ್ಯಾಡ್ಡೋ, ಮಿ. ಗಿಲ್ಪ್ ಮತ್ತು ಶ್ರೀ ಹುಸೇನ್ ಭಾಯ್ ಲಾಲ್‌ಜೀ ಇವರು ಕೂಡಿದ ಒಂದು ಅನೌಪಚಾರಿಕ ಸಭೆ ನಡೆಯಿತು. ಅವರು ನೀಡಿದ ಸೂಚನೆಯಂತೆ ಎರಡು ಉದ್ಯಮಪತಿಗಳ ಸಂಘಗಳನ್ನು ಸಂಪರ್ಕಿಸಲಾಯಿತು. ಎರಡು ಅಖಿಲ ಭಾರತ ಕೈಗಾರಿಕೋದ್ಯಮಿಗಳ ಸಂಸ್ಥೆಗಳು ಈ ಕ್ರಮವನ್ನು ಹೃತ್ಪೂರ್ವಕವಾಗಿ ಬೆಂಬಲಿಸಿದ್ದಾರೆ. ಮಾಲೀಕರ ಒಕ್ಕೂಟಕ್ಕೆ ಸಂಬಂಧಿಸಿ ಹೇಳುವುದಾದರೆ, ದುರದೃಷ್ಟವಶಾತ್ ಅದರಲ್ಲಿ ಭಿನ್ನಾಭಿಪ್ರಾಯ ವ್ಯಕ್ತವಾಯಿತು. ಒಂದು ಗುಂಪು ಮಸೂದೆಯ ಪರವಾಗಿದೆ, ಇನ್ನೊಂದು ಇಲ್ಲ. ಇನ್ನು ಕಾರ್ಮಿಕ ಪ್ರಾತಿನಿಧ್ಯದ ಬಗ್ಗೆ ಹೇಳುವುದಾದರೆ, ಸ್ಥಾಯಿ ಲೇಬರ್ ಸಮಿತಿಯು ಸರ್ವಾನುಮತಿಯಿಂದ ಈ ಕ್ರಮವನ್ನು ಶಿಫಾರಸು ಮಾಡಿತು. ಮಸೂದೆಯ ಸಕಲ ಉಪಬಂಧಗಳನ್ನೂ ಅರ್ಥಮಾಡಿಕೊಳ್ಳಲು ಇದಕ್ಕಿಂತ ಹೆಚ್ಚಿನ ಮಾಹಿತಿ ಏನೂ ಅವಶ್ಯಕವಿಲ್ಲವೆಂದು ತೋರುತ್ತದೆ. ಇಷ್ಟು ಹೇಳಿ, ಮಾನ್ಯರೆ, ಸೂಚನೆಯನ್ನು ಮಂಡಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್*** : ಮಾನ್ಯರೆ, ಇಂದು ಬೆಳಗ್ಗೆ ನಾನು ಮಂಡಿಸಿದ ಸೂಚನೆಯ ಬಗೆಗೆ ಇಷ್ಟು ವ್ಯಾಪಕವಾಗಿ ಬೆಂಬಲ ದೊರಕಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಇದರ ಮೇಲೆ ಬಂದ ಟೀಕೆಗಳು ಇಲ್ಲವೇ ಇಲ್ಲವೆಂಬಷ್ಟು ವಿರಳ, ಬಂದವುಗಳೂ ಕೂಡ ನನ್ನ ಮಾನ್ಯ ಮಿತ್ರರಾದ ಶ್ರೀ ಮಿಲ್ಲರ್ ಮತ್ತು ಶ್ರೀ ಜೋಷಿ ಇವರಿಂದ ಬಂದಂಥವು. ಈ ಮಸೂದೆಯನ್ನು ಕುರಿತು ಇನ್ನೂ ಹೆಚ್ಚಿನ ಮಾಹಿತಿ ನೀಡಬೇಕು ಎಂದು ಮಿತ್ರರಾದ ಶ್ರೀ ಮಿಲ್ಲರ್ ಹೇಳಿದರು. ಅವರ ಮನಸ್ಸನ್ನು ಕೊರೆಯುತ್ತಿರುವ ಅಂಶಗಳು ಯಾವುವು ಎಂಬುದನ್ನು ದಯವಿಟ್ಟು ಹೇಳಿದರೆ ಸಾಕು, ನಾನು ಅವರಿಗೆ ಬೇಕಾದ ಮಾಹಿತಿಯನ್ನು ಒದಗಿಸಲು ಸದಾ ಸಿದ್ಧನಾಗಿದ್ದೇನೆ. ಅವರ ಮನಸ್ಸಿನಲ್ಲಿ ಇನ್ನೊಂದು ವಿಷಯ ಮೂಡಿದೆ ಎಂದು ನನಗೆ ಅನ್ನಿಸುತ್ತದೆ. ನಾವು ವಾರ್ ಇಂಜುರೀಸ್ ಆರ್ಡಿನೆನ್ಸ್ ಪ್ರಕಾರ ಕೊಡುತ್ತಿರುವ ಪರಿಹಾರದ ದರಕ್ಕೂ ಈಗ ಪ್ರಸ್ತುತ ಕ್ರಮದ ಆಧಾರದಿಂದ ಕೊಡುವ ದರಕ್ಕೂ ವ್ಯತ್ಯಾಸವಿದೆ ಎಂದು ಅವರಿಗೆ ತೋರುತ್ತದೆ. ಅವರದು ತಪ್ಪು ಅಭಿಪ್ರಾಯವಾಗಿದೆ. ಏಕೆಂದರೆ, ನಾನು ವಿವರಿಸಲು ಪ್ರಯತ್ನಪಟ್ಟಿರುವ ಹಾಗೆ, ಪ್ರಸ್ತುತ ಕ್ರಮದ ಉದ್ದೇಶ ವಾರ್ ಇಂಜುರೀಸ್ ಆರ್ಡಿನೆನ್ಸ್ ಅನ್ವಯವಾಗುವವರು ಪಡೆಯುವ ಹಣ, ಪ್ರಸ್ತುತ ಶಾಸನದಿಂದಾಗಿ ಪಡೆಯುವ ಹಣ ಎರಡನ್ನೂ ಸಮಾನಗೊಳಿಸುವುದೇ ಆಗಿದೆ. ನಾನು ಮೊದಲೇ ಸೂಚಿಸಿದಂತೆ, ಯುದ್ಧ ಗಾಯಾಳುಗಳಿಗೆ ಕೊಡುವ ಹಣದ ದರವನ್ನು ಪರಿಶೀಲಿಸಿದಾಗ ಅದು ೨೪ ರೂಪಾಯಿ ಮಾತ್ರವಿರುವುದು ತಿಳಿಯುತ್ತದೆ. ಅದಕ್ಕಿಂತ ಹೆಚ್ಚು ವೇತನ ಪಡೆಯುವವರು ಕೇವಲ ತಾತ್ಕಾಲಿಕ ನೆರವು ಪಡೆಯುವರು. ೨೪ ರೂ.ಗಳಿಗಿಂತ ಕಡಮೆ ಪಡೆಯುವವರಿಗೆ ಪರಿಹಾರ ಧನ ದೊರಕುತ್ತದೆ. ೨೪ ರೂ.ಗಿಂತ ಮೇಲ್ಪಟ್ಟು ವೇತನವುಳ್ಳವರಿಗೂ ಪರಿಹಾರ ಧನ ನೀಡಬೇಕೆಂದು ಈಗ ನಾವು ಸೂಚಿಸುತ್ತಿದ್ದೇವೆ. ಆದ್ದರಿಂದ ಇಲ್ಲಿ ಪಕ್ಷಪಾತ ಎಂದು ಕರೆಯಿಸಿಕೊಳ್ಳುವಂಥದೇನೋ ಆಗುವುದಕ್ಕೆ ಬದಲಾಗಿ ಎಲ್ಲ ನೌಕರರನ್ನೂ ಒಂದೇ ಬಗೆಯಾಗಿ ನೋಡಿ ಎರಡೂ ಕ್ರಮಗಳು ಇಬ್ಬರಿಗೂ ಅನ್ವಯವಾಗುವಂತೆ ಸಮಾನಗೊಳಿಸುತ್ತಿದ್ದೇವೆ ಎಂಬುದು ನನ್ನ ಮಾನ್ಯ ಮಿತ್ರರಿಗೆ ವೇದ್ಯವಾದೀತು. ನನ್ನ ಮಾನ್ಯ ಮಿತ್ರ ಶ್ರೀ ಮಿಲ್ಲರ್ ಹೇಳಿದ ಇನ್ನೊಂದು ಮಾತನ್ನು ಗಮನಿಸಿದ್ದೇನೆ. ಈ ಕ್ರಮವು ಕೆಲವು ವರ್ಗದ ಕಾರ್ಮಿಕರಿಗೆ, ೫ನೇ ಉಪವಿಭಾಗದಲ್ಲಿ ನಿರೂಪಿಸಿರುವ ವರ್ಗದ ಕೆಲಸಗಾರರಿಗೆ ಮಾತ್ರ ಸೀಮಿತಗೊಂಡಿದೆ ಎಂದು ಅವರು ಹೇಳಿದರು. ಮಸೂದೆಯ ಅವಕಾಶಗಳಲ್ಲೇ ಅದು ಸ್ಪಷ್ಟವಾಗಿದೆ. ಎರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಮೊದಲನೆಯದಾಗಿ, ಎಲ್ಲ ನೌಕರರಿಗೂ ಪರಿಹಾರ ಧನ ನೀಡುವ ಹೊಣೆಯನ್ನು ಸರಕಾರ ಹೊತ್ತುಕೊಳ್ಳುವುದು ಸಾಧ್ಯವಿಲ್ಲ. ಎರಡನೆಯದಾಗಿ, ಸರಕಾರವು ಹಾಕುವ ಯಾವುದೇ ವಿಮೆ ಯೋಜನೆಯು ಆಡಳಿತಾತ್ಮಕವಾಗಿ ಕಾರ್ಯಸಾಧ್ಯವಾಗಿರಬೇಕು. ಅಂದಮೇಲೆ ಸರಕಾರವು ಎಲ್ಲ ನೌಕರರನ್ನೂ ಅಳವಡಿಸುವಷ್ಟು ವ್ಯಾಪಕವಾಗಿ ಇದನ್ನು ವಿಸ್ತರಿಸುವುದು ಸಾಧ್ಯವಿಲ್ಲ. ವಿಮಾ ಯೋಜನೆ ನಡೆಯಬೇಕಾದರೆ, ಜವಾಬ್ದಾರಿ ಹೊರುವಂತಹ ಒಬ್ಬ ಮಾಲೀಕನನ್ನು ನಾವು ಪತ್ತೆ ಹಚ್ಚಬೇಕು, ಅವನಿಂದ ವಿಮಾ ಪ್ರೀಮಿಯಂ ಕಂತುಗಳನ್ನು ವಸೂಲುಮಾಡಬೇಕು. ಸಾಮಾನ್ಯ ಸಾರ್ವಜನಿಕ ವರ್ಗದಲ್ಲಿ ಹೀಗೆ ಒಬ್ಬ ಧಣಿಯನ್ನು ಕಂಡುಹಿಡಿದು ಹೊಣೆಯನ್ನು ಹೊರಿಸುವುದು ಸಾಧ್ಯವಾಗುವುದಿಲ್ಲ. ನಾವು ೫ನೇ ಉಪವಿಭಾಗದಲ್ಲಿ ಪಟ್ಟಿಮಾಡಿರುವ ನೌಕರ ವರ್ಗಗಳಮಟ್ಟಿಗೆ ಈ ಯೋಜನೆಯನ್ನು ಸೀಮಿತಗೊಳಿಸುವುದಕ್ಕೆ ಇದೇ ಕಾರಣ. ಹೀಗೆ ಸೀಮಿತಗೊಳಿಸಿದ್ದಕ್ಕೆ ನಾವು ಸಮರ್ಥನೆ ಕೊಟ್ಟಿಲ್ಲ ಎಂದು ಶ್ರೀ ಮಿಲ್ಲರ್ ಹೇಳಿದರು.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ಮಾರ್ಚ್ ೩೧, ೧೯೪೩. ಪು. ೧೬೫೯–೬೧.

ನಾನು ಅವರಿಗೆ ಕೊಡಬಹುದಾದ ಬಹುತೇಕ ಉತ್ತರಗಳನ್ನು ನನ್ನ ಮಾನ್ಯ ಮಿತ್ರ ಶ್ರೀ ಜೋಷಿಯವರು ಕೊಟ್ಟುಬಿಟ್ಟಿದ್ದಾರೆ, ಮತ್ತೆ ಅವುಗಳ ಪುನರುಕ್ತಿಯನ್ನು ನಾನು ಮಾಡಬಯಸುವುದಿಲ್ಲ. ಉದ್ದೇಶ ಮತ್ತು ಕಾರಣಗಳ ಪಟ್ಟಿಕೆಯಲ್ಲೇ ನಿಜವಾಗಿ ಉತ್ತರ ದೊರಕುತ್ತದೆ. ಈ ಪಟ್ಟಿಕೆಯ (೨ನೇ ಪ್ಯಾರಾ) ಫ್ಯಾಕ್ಟರಿಗಳಲ್ಲಿ ಮತ್ತು ಇತರ ಔದ್ಯಮಿಕ ಸ್ಥಾವರಗಳಲ್ಲಿ ನೌಕರರಿಗೆ ಅಪಾಯವು ಸದಾ ಎದುರಾಗಿರುತ್ತದೆ ಎಂದು ಹೇಳುತ್ತದೆ. ಅಲ್ಲಿ ನಿರೂಪಿಸಿದ ವರ್ಗದ ಕಾರ್ಮಿಕರಿಗೆ ಈ ಕ್ರಮವನ್ನು ಸೀಮಿತಗೊಳಿಸುವುದಕ್ಕೆ ಕೊಡಬಹುದಾದ ಅತ್ಯುತ್ತಮ ಕಾರಣವೆಂದರೆ ಇದು. ಕಾರ್ಖಾನೆಗಳು ಮತ್ತು ಔದ್ಯಮಿಕ ಸ್ಥಾವರಗಳು ಶತ್ರುದಾಳಿಗೆ ಸುಲಭವಾದ ಗುರಿಗಳಾಗಿರುತ್ತವೆ. ಆದ್ದರಿಂದ ಅಲ್ಲಿ ಕೆಲಸ ಮಾಡುವ ನೌಕರರಿಗೆ, ಇತರ ಸಾರ್ವಜನಿಕ ವರ್ಗದ ನೌಕರರಿಗಿಂತ ಅಪಾಯ ಹೆಚ್ಚು.

ಇನ್ನು ನನ್ನ ಮಿತ್ರ ಶ್ರೀ ಜೋಷಿಯವರು ಎತ್ತಿದ ಪ್ರಶ್ನೆ. ಈ ಮಸೂದೆಯು ಎಲ್ಲ ಕಾರ್ಮಿಕರಿಗೂ ಅನ್ವಯಿಸುವುದಿಲ್ಲ ಎಂದು ಹೇಳಿ ಎರಡು ನಿರ್ದಿಷ್ಟ ಉದಾಹರಣೆಗಳನ್ನು ನೀಡಿದರು. ಅಸ್ಸಾಮಿನ ಚಹಾ ತೋಟಗಳಲ್ಲಿ ಕೆಲಸ ಮಾಡುವ ಕೂಲಿಕಾರರು ಹಾಗೂ ಸಮುದ್ರದ ಮೇಲೆ ಇರುವ ನಾವಿಕರು ಇವರ ಬಗೆಗೆ ತುಸು ನಿರ್ದಿಷ್ಟ ಉತ್ತರ ಬೇಕು ಎಂದರು. ಶ್ರೀ ಜೋಷಿಯವರು ಮಾಡಿರುವ ಈ ಟೀಕೆಗೆ ನನ್ನ ಸಾಮಾನ್ಯ ಉತ್ತರ ಹೀಗಿದೆ. ಸರಕಾರವು ೫ನೇ ಉಪ ವಿಭಾಗದಲ್ಲಿ (ಸಿ) ಎಂಬ ಒಳವಿಭಾಗವೊಂದನ್ನು ಸೇರಿಸಿರುವುದು ಇದೇ ಉದ್ದೇಶದಿಂದ. ಮಸೂದೆಯ ಅವಕಾಶಗಳನ್ನು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯಾವುದೇ ನೌಕರ ವರ್ಗಕ್ಕೂ ವಿಸ್ತರಿಸುವ ಅಧಿಕಾರವನ್ನು ಸರಕಾರವು ತನ್ನ ಕೈಯಲ್ಲೇ ಇಟ್ಟುಕೊಂಡಿದೆ. ಮಸೂದೆಯಲ್ಲಿ ಪಟ್ಟಿಮಾಡಿದ ನೌಕರ ವರ್ಗಗಳು ಅಂತಿಮವೇನಲ್ಲ, ಬೇರೆಯವರನ್ನು ಸೇರಿಸುವ ಸಂದರ್ಭ ಇರಕೂಡದು ಎಂದೂ ಅಲ್ಲ.

**ಡಾ॥ ಪಿ.ಎನ್. ಬ್ಯಾನರ್ಜಿ :** ಅದು ಸರ್ವವ್ಯಾಪಿಯಾಗಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಸರ್ವವ್ಯಾಪಿಯಾಗಿಲ್ಲ. ಆದ್ದರಿಂದಲೇ, ಈ ಶಾಸನದ ವಿಧಿಗಳನ್ನು ಬೇರೆ ಕಾರ್ಯಕ್ಷೇತ್ರಗಳಲ್ಲಿ ದುಡಿಯುತ್ತಿರುವ ಇತರ ನೌಕರರಿಗೂ ಅನ್ವಯಿಸಬೇಕಾಗಿದೆ ಎಂದು ಸರಕಾರಕ್ಕೆ ಸ್ಪಷ್ಟವಾದಾಗ ಖಂಡಿತವಾಗಿಯೂ ಈ ವಿಷಯವನ್ನು ಪರಿಶೀಲಿಸಲಾಗುತ್ತದೆ.

ಇನ್ನು ಅಸ್ಸಾಮಿನ ಪ್ರಶ್ನೆ. ಈಗ ನಾವು ಈ ಕ್ರಮವನ್ನು ಅಪಾಯಕ್ಕೆ ತೆರೆದಿರುವ ಕೇಂದ್ರಗಳು ಎಂದು ಯಾವುದನ್ನು ಗುರುತಿಸುವೆವೋ, ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸೀಮಿತಗೊಳಿಸಿದ್ದೇವೆ. ನನಗನ್ನಿಸುವಂತೆ, ಮತ್ತು ಈಗ ನಮ್ಮ ಬಳಿ ಇರುವ ಮಾಹಿತಿಯಂತೆ ಟೀ ತೋಟಗಳು ಹಾಗೆ ಅಪಾಯಕ್ಕೆ ತೆರೆದ ಕೇಂದ್ರಗಳೆಂದು ಹೇಳಲು ಬರುವುದಿಲ್ಲ. ಮುಂದೆ ಯಾವಾಗಲೇ ಆಗಲಿ ಟೀ ತೋಟಗಳೂ ಅಪಾಯದ ಭೀತಿಯಿರುವ ಸ್ಥಳಗಳಾದರೆ, ಆಗ ಮಾನ್ಯ ಜೋಷಿಯವರು ಈ ವಿಷಯವನ್ನು ಎತ್ತಬಹುದು, ಅಥವಾ ಸರಕಾರವೇ ಪರಿಸ್ಥಿತಿಯನ್ನು ಗಮನಿಸಿ ಈ ಮಸೂದೆಯ ಅವಕಾಶಗಳು ಅಸ್ಸಾಂ ಕಾರ್ಮಿಕರಿಗೂ ಅನ್ವಯವಾಗುವಂತೆ ಮಾಡಬಹುದು.

ಸಮುದ್ರಯಾನದಲ್ಲಿ ಕೆಲಸ ಮಾಡುವ ಕಾರ್ಮಿಕರ ವಿಷಯದಲ್ಲಿ ಈ ವಿಚಾರವನ್ನು ವಾಣಿಜ್ಯ ಇಲಾಖೆಯೆದುರು ತರಲಾಯಿತು ಎಂದು ನನಗೆ ನೆನಪು. ಅಲ್ಲೊಂದು ಪರಿಹಾರ ಕಾರ್ಯಕ್ರಮ ಇದೆ, ಅದು ಇದರಷ್ಟು ಶಕ್ತಿಯುತವಾಗಿಲ್ಲವಾದರೂ ನಾವು ಇಟ್ಟುಕೊಂಡಿರುವ ಯೋಜನೆಯನ್ನೇ ಹೋಲುತ್ತಿದೆ ಎಂದು ತಿಳಿದಿದ್ದೇನೆ. ನನ್ನ ಮಾನ್ಯ ಮಿತ್ರರಾದ ಜೋಷಿಯವರು ಸೆಲೆಕ್ಟ್ ಸಮಿತಿಯು ಈ ವಿಷಯವನ್ನು ಪರಿಶೀಲಿಸಿ ಕೆಲವು ಅವಕಾಶ ಕಲ್ಪಿಸಬೇಕು ಎಂದು ಅಪೇಕ್ಷಿಸುವುದಾದರೆ, ಆ ಅವಕಾಶವು ಮಸೂದೆಯ ಮುಖ್ಯಾಂಶಗಳಿಗೆ

ಅಸಂಗತವಾಗುವುದಿಲ್ಲವಾದರೆ, ಅವರು ಸೆಲೆಕ್ಟ್ ಸಮಿತಿಯಲ್ಲಿ ಈ ವಿಷಯವನ್ನು ಪರಿಶೀಲಿಸುವುದಕ್ಕೆ ನಾನು ಯಾವ ಆಕ್ಷೇಪಣೆಯನ್ನೂ ಎತ್ತುವುದಿಲ್ಲ.

ಸನ್ಮಾನ್ಯ ಮಿತ್ರ ಮಿಲ್ಲರ್ ಅವರು ಮಸೂದೆಯ ಒಂದೆರಡು ಉಪ ವಿಭಾಗವನ್ನು ಉಲ್ಲೇಖಿಸಿ ಮಾತನಾಡಿದರು. ಮೊದಲನೆಯದು ೫(೩)ನೆಯ ಉಪವಿಭಾಗ. ಅದಕ್ಕೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಸರಕಾರವು ಉದ್ದೇಶಪೂರ್ವಕವಾಗಿಯೇ ಆ ಉಪವಿಭಾಗವನ್ನು ಸೇರಿಸಿದೆ. ಮುಂದೆ ಈ ಮಸೂದೆಯ ಉಪಬಂಧಗಳನ್ನು ವಿಸ್ತರಿಸಬೇಕಾದ ಸಂದರ್ಭ ಬರಬಹುದು ಎಂದು ಸರಕಾರ ಜಾಗರೂಕತೆ ವಹಿಸಿದೆ.

ಅವರು ಉಲ್ಲೇಖಿಸಿದ ಇನ್ನೊಂದು ಉಪವಿಭಾಗ (೩)ನೆಯ ಉಪವಿಭಾಗದ ೧೦ನೆಯ ಸೆಕ್ಷನ್. ಈ ಉಪಬಂಧದ ಪ್ರಕಾರ, ನಿಧಿಯಲ್ಲಿ ಹಣವು ಉಳಿದಿದ್ದರೆ ಅದನ್ನು ಸಾಮಾನ್ಯ ರಾಜಸ್ವ ಖಾತೆಗೆ ಸೇರಿಸಲಾಗುತ್ತದೆ. ಸರಕಾರದ ಈ ನೀತಿ ಸಮರ್ಥನೀಯವಾಗಿಲ್ಲ ಎಂಬುದು ಶ್ರೀ ಮಿಲ್ಲರ್ ಅವರ ಅಭಿಪ್ರಾಯ. ನಾನು ಈಗಾಗಲೇ ಹೇಳಿರುವ ವಾಸ್ತವಾಂಶವನ್ನು ಅವರು ಗಮನಿಸಿದರೆ ಅರ್ಥವಾಗುತ್ತದೆ. ಉದ್ಯಮಪತಿಗಳೂ ಪ್ರೀಮಿಯಂ ಆಗಿ ಈ ನಿಧಿಗೆ ಪಾವತಿ ಮಾಡುವ ಹಣದ ಸಾಕಷ್ಟು ಭಾಗವು ಇ.ಪಿ.ಟಿ. (EPT)ಯಿಂದ ಹೊರಬರುತ್ತದೆ. ಹಾಗೆ ಬರುವ ಉಳಿಕೆ ಹಣವನ್ನು ಸರಕಾರವೇ ಪಡೆಯುವುದು ಅತ್ಯಂತ ಸೂಕ್ತವಲ್ಲವೆ? ಇದಕ್ಕಿಂತ ಹೆಚ್ಚೇನೂ ಹೇಳಲಾರೆ.

**ಮಾನ್ಯ ಇ.ಎಲ್.ಸಿ. ಗಿಲ್ಟ್ (ಮುಂಬಯಿ–ಯೂರೋಪಿಯನ್)** : ಮಾನ್ಯ ಸದಸ್ಯರನ್ನು ನಾನೊಂದು ಪ್ರಶ್ನೆ ಕೇಳಬಹುದೆ? ಪ್ರಾಸ್ತಾವಿಕ ಭಾಷಣದಲ್ಲಿ ಅವರು ಈ ಯೋಜನೆಗೆ ಮೂಲ ಪ್ರೇರಣೆ ಕಾರ್ಖಾನೆಗಳ ಮಾಲೀಕರ ಸಂಘ ಎಂದು ಹೇಳಿದರು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಅವರು ಸೂಚನೆ ಕೊಟ್ಟರು.

**ಮಾನ್ಯ ಇ.ಎಲ್.ಸಿ.ಗಿಲ್ಟ್** : ಅವರು ಇದನ್ನೂ ಹೇಳಲಿಲ್ಲವೆ? ಪರಿಹಾರ ಧನವನ್ನು ಪೂರ್ತಿಯಾಗಿ ಕೊಟ್ಟನಂತರ ನಿಧಿಯಲ್ಲಿ ಉಳಿಯುವ ಹಣವನ್ನು ಔದ್ಯಮಿಕ ಸಂಶೋಧನೆಗಾಗಿ ವಿನಿಯೋಗಿಸಬಹುದು ಎಂದು? ಮಾನ್ಯ ಸದಸ್ಯರು ಈ ಸೂಚನೆಯನ್ನು ಪರಿಶೀಲಿಸುತ್ತಾರೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ನನಗೆ ನೆನಪಿಲ್ಲ. ಆದರೆ ಅದೇನೆಂದು ವಿಚಾರ ಮಾಡಿ ನೋಡುತ್ತೇನೆ.

**ಮಾನ್ಯ ಅಧ್ಯಕ್ಷರು (ಸೈಯದ್ ಘುಲಾಂ ಬಿಕ್ ನೈರಾಂಗ್)** : ಪ್ರಸ್ತಾವನೆ ಹೀಗಿದೆ:

"ಯುದ್ಧ ಗಾಯಗಳನ್ನು ಅನುಭವಿಸುವ ನೌಕರರಿಗೆ ಪರಿಹಾರಧನವನ್ನು ಕೊಡುವ ಹೊಣೆಯನ್ನು ಉದ್ಯಮಪತಿಗಳ ಮೇಲೆ ಹೊರಿಸುವುದು; ಮತ್ತು ಉದ್ಯಮಪತಿಗಳು ಆ ಹೊಣೆಗಾರಿಕೆಯನ್ನು ನಿಭಾಯಿಸಿ ವಿಮೆ ಇಳಿಸುವಂತೆ ಮಾಡುವುದು, ಈ ವಿಚಾರವನ್ನು ಒಂದು ಸೆಲೆಕ್ಟ್ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಬೇಕು. ಈ ಸಮಿತಿಯಲ್ಲಿ ಸರ್ ವಿಠ್ಠಲ ಎನ್. ಚಂದಾವರ್ಕರ್, ಶ್ರೀ ಎನ್.ಎಂ. ಜೋಷಿ, ಶ್ರೀ ಜಮ್ನಾದಾಸ್ ಎಂ. ಮೆಹ್ತಾ, ಶ್ರೀ ಡಿ.ಎಸ್.ಸಿ. ಗಿಲ್ಟ್, ಶ್ರೀ ಮೌಲಾನಾ ಜಫರ್ ಅಲಿ ಖಾನ್, ಶ್ರೀ ಯೂಸುಫ್ ಅಬ್ದುಲ್ಲಾ ಹರೂನ್, ಶ್ರೀ ಹಾಜೀ ಚೌಧುರಿ ಮಹಮ್ಮದ್ ಇಸ್ಮಾಯಿಲ್ ಖಾನ್, ಶ್ರೀ ಎಚ್.ಎ. ಸತ್ತಾರ್ ಎಚ್. ಎಸ್ಸಾಕ್ ಸೇಟ್, ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ, ಶ್ರೀ ಆರ್.ಆರ್. ಗುಪ್ತಾ ಮತ್ತು ಸೂಚನೆಯನ್ನು ಮಂಡಿಸಿದವರು – ಇರುತ್ತಾರೆ. ಸಮಿತಿಯ ಸಭೆ ನಡೆಯಲು ಹಾಜರಾಗಿರಬೇಕಾದ ಸದಸ್ಯರ ಸಂಖ್ಯೆ ಐದು; ಮತ್ತು ಸಮಿತಿಯು ಸಿಮ್ಲಾದಲ್ಲಿ ಸಭೆ ಸೇರಲು ಅನುಮತಿಸಲಾಗಿದೆ"

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

# ೧೪
# ಕುಶಲ ಮತ್ತು ಅರೆಕುಶಲ ನೌಕರರಿಗಾಗಿ ಉದ್ಯೋಗ ವಿನಿಮಯ ಕೇಂದ್ರಗಳು *

## ಸ್ಥಾಯಿ ಕಾರ್ಮಿಕ ಸಮಿತಿಯ ಚರ್ಚೆಗಳು

ಮುಂಬಯಿಯಲ್ಲಿ ಮೇ ೭ ಮತ್ತು ೮ನೆಯ ತಾರೀಕುಗಳಂದು ಸ್ಥಾಯಿ ಕಾರ್ಮಿಕ ಸಮಿತಿಯ ಸಭೆ ನಡೆಯಿತು. ಲೇಬರ್ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಅಧ್ಯಕ್ಷತೆ ವಹಿಸಿದ್ದರು. ಆ ಸಭೆಯಲ್ಲಿ ಕಾರ್ಮಿಕರ ಯೋಗಕ್ಷೇಮ, ಯುದ್ಧಕಾಲದಲ್ಲಿನ ಉತ್ಪಾದನೆ, ಕುಶಲ ಮತ್ತು ಅರೆಕುಶಲ ನೌಕರರ ಉದ್ಯೋಗ ವಿನಿಮಯ ಕೇಂದ್ರಗಳು, ಕೈಗಾರಿಕಾ ಸಂಬಂಧವಾದ ಸಮಸ್ಯೆಗಳು ಇವುಗಳನ್ನು ಚರ್ಚಿಸಲಾಯಿತು.

ಸ್ಥೂಲವಾಗಿ ಅಭಿಪ್ರಾಯವು ಕುಶಲ, ಅರೆಕುಶಲ ನೌಕರರ ಉದ್ಯೋಗ ವಿನಿಮಯ ಕೇಂದ್ರದ ಸ್ಥಾಪನೆಯನ್ನು ಬೆಂಬಲಿಸಿತು. ಈ ಯೋಜನೆಯನ್ನು ಸ್ವಯಂ ಸೇವಾ ಆಧಾರದ ಮೇಲೆ ಪ್ರಾರಂಭಿಸಲಾಗುವುದಿತ್ತು. ಈ ಉದ್ಯೋಗ ವಿನಿಮಯ ಕೇಂದ್ರಗಳ ಸಲಹಾ ಸಮಿತಿಗೆ ಪ್ರಾಂತೀಯ ಸರಕಾರಗಳ ಪ್ರತಿನಿಧಿಗಳನ್ನೂ ಸೇರಿಸಿಕೊಳ್ಳಬೇಕು ಎಂಬ ಸೂಚನೆಯನ್ನೂ ಅಂಗೀಕರಿಸಲಾಯಿತು.

ಸರಕಾರೀ ಗುತ್ತಿಗೆ ಕರಾರುಗಳಲ್ಲಿ ವಿಹಿತ ವೇತನ ಕಲಮು (Fair Wage Clause) ಒಂದಿರಬೇಕೆಂಬ ವಿಷಯವನ್ನು ಸಭೆ ಚರ್ಚಿಸಿತು. ಇದಕ್ಕೆ ಲೋಕೋಪಯೋಗಿ ಇಲಾಖೆಯ ಗುತ್ತಿಗೆಗಳಲ್ಲದೆ ಬೇರೆಯವನ್ನೂ ಸೇರಿಸಿಕೊಳ್ಳಬೇಕು ಎಂದೂ ಸೂಚನೆಗಳು ಬಂದವು.

ಕಾರ್ಮಿಕ ಶಾಸನ ಯುದ್ಧದ ಸಮಯದಲ್ಲಿ ಕಾರ್ಮಿಕ ಸಂಬಂಧಿ ಶಾಸನ, ಕಾರ್ಮಿಕ ಹಿತರಕ್ಷಣೆಗಳ ಯೋಜನೆಯು ಸಾಮಾಜಿಕ ಭದ್ರತೆ, ವೇತನಗಳು, ಯೋಗಕ್ಷೇಮ ಈ ಅಂಶಗಳನ್ನು ಒಳಗೊಂಡಿತು. ಭಾರತದಲ್ಲಿ ವೇತನ ಮಂಡಲಿಗಳು ಇರುವುದು ಅಪೇಕ್ಷಣೀಯವೆ ಎಂಬ ಪ್ರಶ್ನೆಯೂ ಚರ್ಚೆಗೆ ಬಂದಿತು. ಕಾರ್ಮಿಕ ಹಿತರಕ್ಷಣೆ ಸಂಬಂಧವಾದ ಕ್ರಮಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಹಾಯ ಮಾಡುವಂತೆ ತ್ರಿಪಕ್ಷೀಯ ಸಮ್ಮೇಳನ ವ್ಯವಸ್ಥಾ ಜಾಲವನ್ನು ಒಂದು ಸಲಹಾ ಸಮಿತಿಯನ್ನಾಗಿ ಉಪಯೋಗಿಸಿಕೊಳ್ಳಲು ಸರಕಾರಕ್ಕೆ ತುಂಬ ಆಸಕ್ತಿಯಿದೆ ಎಂದು ಭರವಸೆಯನ್ನು ನೀಡಲಾಯಿತು.

ಔದ್ಯಮಿಕ ಸ್ಥಾವರಗಳಲ್ಲಿ ಕಾರ್ಮಿಕರೊಂದಿಗೆ ನಿಕಟವಾಗಿ ಸಂಪರ್ಕವನ್ನು ಇಟ್ಟುಕೊಳ್ಳುವ ಸಲುವಾಗಿ, ಅವರ ಕಷ್ಟಸುಖಗಳನ್ನು ಕೇಳಿ, ಎಷ್ಟುಬೇಗ ಸಾಧ್ಯವೊ ಅಷ್ಟು ಬೇಗ ಅವಕ್ಕೆ ಪರಿಹಾರ ಒದಗಿಸುವ ಸಲುವಾಗಿ ಲೇಬರ್ ಅಧಿಕಾರಿಗಳನ್ನು ನೇಮಿಸುವುದು ಸೂಕ್ತ ಎಂದು ಸಾಮಾನ್ಯವಾಗಿ ಒಪ್ಪಲಾಯಿತು. ಲೇಬರ್ ಅಧಿಕಾರಿಗಳಿಗೆ ತರಬೇತಿ ಕೊಡಲು ಮುಂಬಯಿ ಗಿರಣಿ ಮಾಲೀಕರ ಸಂಘದ ಯೋಜನೆಯನ್ನು ಪರಿಶೀಲಿಸಲಾಯಿತು.

ಸಭೆಯಲ್ಲಿ ಈ ಕೆಳಗೆ ನಮೂದಿಸಿದ ಪ್ರತಿನಿಧಿಗಳು, ಪ್ರಾಂತಗಳು ಮತ್ತು ಭಾರತೀಯ ಸಂಸ್ಥಾನಗಳಿಂದ ಬಂದ ಸಲಹಾಕಾರರು, ಉದ್ಯಮಗಳ ಮಾಲೀಕರು ಮತ್ತು ಕಾರ್ಮಿಕರ ಪ್ರತಿನಿಧಿಗಳು ಭಾರತದ ಎಲ್ಲ ಭಾಗಗಳಿಂದ ಬಂದು ಭಾಗವಹಿಸಿದ್ದರು :–

---

* ಇಂಡಿಯನ್ ಇನ್‌ಫರ್ಮೇಷನ್, ಜೂನ್ ೧, ೧೯೪೩, ಪು. ೪೩೧.

ಭಾರತ ಸರಕಾರ : ಶ್ರೀ ಎಚ್.ಸಿ. ಪ್ರೈಯರ್, ಸಿಐಇ, ಐಸಿಎಸ್, ಕಾರ್ಯದರ್ಶಿ, ಲೇಬರ್ ವಿಭಾಗ, ಡಾ.ಡಿ.ಟಿ. ಜಾಕ್ (ಸಲಹೆಗಾರರು); ಶ್ರೀ ಆರ್ ಎಸ್. ನಿಂಬ್ಕರ್ (ಸಲಹೆಗಾರರು); ಸರ್ ಥಿಯೊಡೋರ್ ಗ್ರೆಗರಿ (ಸಲಹೆಗಾರರು) ; ಮತ್ತು ಶ್ರೀ ಡಿ.ಎಸ್. ಜೋಷಿ (ಸಲಹೆಗಾರರು).

ಮುಂಬಯಿ : ಶ್ರೀ ಸಿ.ಎಚ್. ಬ್ರಿಸ್ಟೋ, ಸಿಐಇ, ಐಸಿಎಸ್, ಸನ್ಮಾನ್ಯ ಗವರ್ನರ್ ಅವರ ಸಲಹೆಗಾರರು ; ಶ್ರೀ ಜೆ.ಬಿ. ಕಾನ್‌ಸ್ಟಂಟೈನ್, ಐಸಿಎಸ್, ಲೇಬರ್ ಕಮೀಶನರ್ (ಸಲಹೆಗಾರರು).

ಬಂಗಾಳ : ಶ್ರೀ ಹ್ಯೂಸ್, ಐಸಿಎಸ್, ಲೇಬರ್ ಕಮೀಶನರ್.

ಸಂಯುಕ್ತ ಪ್ರಾಂತಗಳು (ಯುನೈಟೆಡ್ ಪ್ರಾವಿನ್ಸಸ್) : ಜೆ.ಇ. ಪೆಡ್ಲೇ, ಸಿಐಡಿ, ಎಂ.ಸಿ.,; ಐಸಿಎಸ್., ಲೇಬರ್ ಕಮೀಶನರ್.

ಮದರಾಸು ಮತ್ತು ಸೆಂಟ್ರಲ್ ಪ್ರಾವಿನ್ಸಸ್ ಮತ್ತು ಬೀರಾರ್ : ರಾವ್ ಬಹಾದುರ್ ಎನ್.ಆರ್. ಚಾಂದೋರ್ಕರ್, ಲೇಬರ್ ಕಮೀಶನರ್. ಮದರಾಸು (ಸಲಹೆಗಾರರು).

ಪಂಜಾಬ್, ಸಿಂಧ್ ಮತ್ತು ವಾಯುವ್ಯದ ಪ್ರಾಂತಗಳು : ಶ್ರೀ ಎ.ಪಿ. ಲೆಮೆಸೂರಿಯರ್, ಐಸಿಎಸ್., ಲೇಬರ್ ಕಮೀಶನರ್, ಸಿಂಧ್; ಶ್ರೀ ಅಮೀನ್–ಉಹದೀನ್, ಐಸಿಎಸ್, ಕಾರ್ಯದರ್ಶಿ, ವಿದ್ಯುತ್ ಮತ್ತು ಕೈಗಾರಿಕಾ ಇಲಾಖೆ, ಪಂಜಾಬ್ (ಸಲಹೆಗಾರರು).

ಬಿಹಾರ್, ಅಸ್ಸಾಂ ಮತ್ತು ಒರಿಸ್ಸಾ : ಶ್ರೀ ಎಸ್.ಎನ್ ಮಜುಂದಾರ್, ಐಸಿಎಸ್, ಲೇಬರ್ ಕಮೀಶನರ್, ಬಿಹಾರ್ ; ಶ್ರೀ ಎ.ಎಸ್. ರಾಮಚಂದ್ರ ಪಿಳ್ಳೈ, ಲೇಬರ್ ಕಮೀಶನರ್, ಅಸ್ಸಾಂ (ಸಲಹೆಗಾರರು); ಶ್ರೀ ಎಸ್. ಸಾಲೋಮನ್, ಐಸಿಎಸ್. ಕೈಗಾರಿಕೆಗಳ ನಿರ್ದೇಶಕರು ಮತ್ತು ಕಾರ್ಖಾನೆಗಳ ಮುಖ್ಯ ಪರೀಕ್ಷಕರು, ಒರಿಸ್ಸಾ, (ಸಲಹೆಗಾರರು).

ರಾಜರುಗಳ ಸಂಘ : ಶ್ರೀ ಮಕ್‌ಬೂಲ್ ಮಹಮೂದ್, ಕಾರ‍್ಯದರ್ಶಿ, ರಾಜರುಗಳ ಚೇಂಬರ್.

ಹೈದರಾಬಾದು, ಮೈಸೂರು, ತಿರುವಾಂಕೂರು, ಬರೋಡಾ, ಗ್ವಾಲಿಯರ್, ಮತ್ತು ಹೋಳ್ಕರ್ ಸಂಸ್ಥಾನಗಳು : ಶ್ರೀ ಮಹದೀ ಅಲಿ ಮಿರ್ಜಾ, ಲೇಬರ್ ಕಮೀಶನರ್, ಹೈದರಾಬಾದ್; ಕರ್ನಲ್ ಸರ್ದಾರ್ ಎಂ.ಎಸ್. ಶಿತೋಲೆ, ಕೈಗಾರಿಕೆಗಳು ವಾಣಿಜ್ಯ ಕಮೀಷನರ್, ಮೈಸೂರು (ಸಲಹೆಗಾರರು); ಶ್ರೀ ಇ.ಐ. ಜೋಕೋ, ಕೈಗಾರಿಕೆಗಳ ನಿರ್ದೇಶಕರು ಮತ್ತು ಲೇಬರ್ ಮತ್ತು ಸಂಪರ್ಕಮಂತ್ರಿ, ಗ್ವಾಲಿಯರ್; ಶ್ರೀ ಬಿ.ಜಿ.ಎ. ಮುದಲಿಯಾರ್ ಲೇಬರ್ ಕಮೀಶನರ್, ತಿರುವಾಂಕೂರು (ಸಲಹೆಗಾರರು); ಶ್ರೀ ಕೆ.ಆರ್. ದೋತಿವಾಲಾ, ಕೈಗಾರಿಕೆಗಳ ಮತ್ತು ಲೇಬರ್ ನಿರ್ದೇಶಕರು, ಬರೋಡಾ (ಸಲಹೆಗಾರರು); ಕ್ಯಾಪ್ಟನ್ ಎಚ್.ಸಿ. ಧಂಡಾ, ವಾಣಿಜ್ಯ ಸಚಿವರು, ಹೋಳ್ಕರ್ ಸಂಸ್ಥಾನ (ಸಲಹೆಗಾರರು).

ಅಖಿಲ ಭಾರತ ಕೈಗಾರಿಕಾ ಮಾಲೀಕರ ಸಂಸ್ಥೆ : ಸರ್ ರಹೀಮತುಲ್ಲಾ, ಎಂ. ಜಿನಾಯ್, ಮುಂಬಯಿ; ಶ್ರೀ ಕಸ್ತೂರ್‌ಭಾಯ್ ಲಾಲ್‌ಭಾಯ್, ಅಹಮದಾಬಾದ್; ಶ್ರೀ ಡಿ.ಜಿ. ಮುಳೇರ್‌ಕರ್, ದೆಹಲಿ (ಸಲಹೆಗಾರರು).

ಎಂಪ್ಲಾಯರ್ಸ್ ಫೆಡರೇಷನ್ ಆಫ್ ಇಂಡಿಯಾ : ಸರ್ ವಿ.ಎನ್. ಚಂದಾವರ್ಕರ್, ಮುಂಬಯಿ; ಶ್ರೀ ಕೆ. ಡಬ್ಲ್ಯೂ ಮೀಲಿಂಗ್, ಕಲ್ಕತ್ತ; ಶ್ರೀ ಎ.ಎಚ್. ಬಿಷಪ್ (ಸಲಹೆಗಾರರು).

ಇತರ ಉದ್ಯಮಿಗಳು : ದಿವಾನ್ ಬಹದ್ದೂರ್ ಸಿ.ಎಸ್. ರತ್ನಸಭಾಪತಿ ಮುದಲಿಯಾರ್, ಸಿ.ಬಿ.ಇ. ಕೊಯಮತ್ತೂರು.

ಆಲ್ – ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ : ಶ್ರೀ ಎನ್.ಎಂ. ಜೋಷಿ, ಮುಂಬಯಿ;

ಶ್ರೀ ಫಜಲ್ ಎಲಾಹಿ ಕುರ್ಬಾನ್, ಲಾಹೋರ್; ಶ್ರೀ ಬಿ.ಕೆ. ಮುಖರ್ಜಿ, ಲಖನೌ (ಸಲಹೆಗಾರರು); ಶ್ರೀ ಪಿ.ಆರ್.ಕೆ. ಶರ್ಮ, ಮದರಾಸು (ಸಲಹೆಗಾರರು).

ಭಾರತೀಯ ಕಾರ್ಮಿಕರ ಒಕ್ಕೂಟ : ಶ್ರೀ ಎಸ್. ಗುರುಸ್ವಾಮಿ, ಮದರಾಸು; ಶ್ರೀ ಎಸ್.ಸಿ. ಮಿಶ್ರಾ, ಕಾನ್ಪುರ; ಶ್ರೀ ಎಂ.ಎ. ಖಾನ್, ಲಾಹೋರ್ (ಸಲಹೆಗಾರರು).

ಇತರ ನೌಕರರು : ಶ್ರೀ ಆರ್. ಭೋಲೆ, ಎಂ.ಎಲ್.ಎ. (ಮುಂಬಯಿ) ಪೂನಾ.

## ೧೫
## ಭಾರತದ ಬಾಯ್ಲರುಗಳ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ನಾನು ಈ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ :

"೧೯೨೩ರ ಇಂಡಿಯನ್ ಬಾಯ್ಲರ್ಸ್ ಅಧಿನಿಯಮಕ್ಕೆ ತಿದ್ದುಪಡಿ ತರುವ ಮಸೂದೆಯನ್ನು ಪರಿಶೀಲಿಸಬೇಕು."

ಇದೊಂದು ಬಹು ಸರಳವಾದ ಕ್ರಮವಾಗಿದೆ. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ, ಯಾವುದೇ ತತ್ವ ಇದರಲ್ಲಿ ಸೇರಿಲ್ಲ. ಪರಿಸ್ಥಿತಿಯು ಹೀಗಿರುವುದರಿಂದ ಮಸೂದೆಯ ವಿಧಿಗಳನ್ನು ಕುರಿತು ವಿಸ್ತಾರವಾಗಿ ಮಾತನಾಡಲು ನಾನು ಇಚ್ಛಿಸುವುದಿಲ್ಲ. ಈ ತಿದ್ದುಪಡಿ ಮಸೂದೆಯನ್ನು ಸರಕಾರವು ಏಕೆ ತರಬೇಕಾಯಿತು ಎಂಬ ಬಗ್ಗೆ ನಾಲ್ಕು ಮಾತು ಹೇಳಿದರೆ ಸಾಕು.

೧೯೪೨ರ ಫೆಬ್ರವರಿ ೨೩ನೆಯ ತಾರೀಕು ಮುಂಬಯಿಯ ಗಿರಣಿಯೊಂದರಲ್ಲಿ ಒಂದು ಬಾಯ್ಲರ್ ಸಿಡಿದು ಅಪಘಾತ ಸಂಭವಿಸಿತು, ಬೇಕಾದಷ್ಟು ಪ್ರಾಣಹಾನಿಯುಂಟಾಯಿತು. ಮುಂಬಯಿ ಸರಕಾರವು ಈ ಅಪಘಾತದ ಕಾರಣವನ್ನು ಕಂಡುಹಿಡಿಯುವ ಸಲುವಾಗಿ ಒಂದು ವಿಚಾರಣೆ ನಡೆಸಿತು. ಬಾಯ್ಲರಿನಲ್ಲಿರುವ 'ಇಕಾನಮೈಸರ್' ಎಂಬ ಉಪಕರಣದಲ್ಲಿದ್ದ ಒಂದು ದೋಷವೇ ಆ ಸಿಡಿತಕ್ಕೆ ಕಾರಣ ಎಂಬುದು ವಿಚಾರಣೆಯಿಂದ ತಿಳಿದುಬಂದಿತು. ಇದನ್ನು ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ, ತಾಂತ್ರಿಕವಾಗಿ ಅವುಗಳನ್ನು 'ಫೀಡ್ ಪೈಪ್ಸ್' ಎಂದು ಕರೆಯಲ್ಪಡುವ ಇಕಾನಮೈಸರಿನ ಪೈಪುಗಳು ದೀರ್ಘಕಾಲದ ಬಳಕೆಯಿಂದ ಒಳಗೇ ಸವೆದು ದುರ್ಬಲಗೊಂಡಿದ್ದವು. ವಿಚಾರಣೆಯ ಈ ಫಲಿತಾಂಶವು ಸರಕಾರಕ್ಕೆ ಅಚ್ಚರಿಯಾಗೇ ಬಂದಿತು. ಏಕೆಂದರೆ, ಇಂಡಿಯನ್ ಬಾಯ್ಲರ್ಸ್ ಅಧಿನಿಯಮ ೧೯೨೩ರ ಪ್ರಕಾರ ಬಾಯ್ಲರ್ ಇನ್ಸ್‌ಪೆಕ್ಟರ್ ಆಗಾಗ ಹೋಗಿ ಬಾಯ್ಲರುಗಳನ್ನು ಪರೀಕ್ಷಿಸಬೇಕು, ಅವು ಸುಸ್ಥಿತಿಯಲ್ಲಿವೆ ಎಂದು ಪ್ರಮಾಣಪತ್ರ ನೀಡಬೇಕು. ಇಕಾನಮೈಸರಿನ ಫೀಡ್ ಪೈಪುಗಳು ಕೆಲಸ ಮಾಡಲು ಅನರ್ಹವಾದ ಸ್ಥಿತಿಯಲ್ಲಿವೆ ಎಂದು ತಿಳಿದಿದ್ದರೂ ಇನ್ಸ್‌ಪೆಕ್ಟರ್ ಪ್ರಮಾಣ ಪತ್ರವನ್ನು ಹೇಗೆ ನೀಡಿದರು ಎನ್ನುವುದು ಪ್ರಶ್ನೆ. ಆಮೇಲೆ ಮತ್ತಷ್ಟು ಬೆದಕಿ ನೋಡಲಾಗಿ, ಇಂಡಿಯನ್ ಬಾಯ್ಲರ್ಸ್ ಅಧಿನಿಯಮದ ೨೮ನೇ ಖಂಡದ ಪ್ರಕಾರ ಬಾಯ್ಲರಿನ ಫೀಡ್ ಪೈಪನ್ನಾಗಲೀ, ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಉಪಕರಣವನ್ನಾಗಲೀ ಪರೀಕ್ಷೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಜುಲೈ ೨೯, ೧೯೪೩, ಪು. ೧೭೬–೭೭.

ಮಾಡುವುದು ಬಾಯ್ಲರ್ ಇನ್ಸ್‌ಪೆಕ್ಟರನ ಕರ್ತವ್ಯವಾಗಿರಲಿಲ್ಲ. ಆಸ್ಫೋಟಿಸಿದ ಬಾಯ್ಲರಿನ ಫೀಡ್ ಪೈಪುಗಳನ್ನು ಪರೀಕ್ಷಿಸದೆ ಹೋದುದಕ್ಕೆ ಇದೇ ಕಾರಣ. ಶಾಸನದಲ್ಲಿರುವ ಈ ಕೊರತೆಯನ್ನು ತುಂಬುವ ಸಲುವಾಗಿ ಈ ತಿದ್ದುಪಡಿ ಮಸೂದೆಯನ್ನು ಈಗ ತರಲಾಗುತ್ತಿದೆ.

ಪ್ರಸ್ತುತ ಮಸೂದೆಯು ಎರಡು ತಿದ್ದುಪಡಿಗಳನ್ನು ತರುತ್ತದೆ. ಮೊದಲನೆಯದು, ೨ನೇ ಖಂಡಕ್ಕೆ ಹೊಸತೊಂದು ಕಲಮು (ಸಿಸಿ)ವನ್ನು ಸೇರಿಸುವುದು. 'ಫೀಡ್ ಪೈಪ್' ಎಂಬ ಪದವನ್ನು ಹೊಸದಾಗಿ ಸೇರಿಸಿ ಫೀಡ್ ಪೈಪ್ ಎಂದರೆ ಏನು ಎಂಬುದನ್ನು ವಿವರಿಸುತ್ತದೆ. ಎರಡನೆಯ ತಿದ್ದುಪಡಿಯು 'ಸ್ಟೀಮ್ ಪೈಪ್' ಎಂಬುದರ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಈಗಿರುವ ಸ್ಥಿತಿಯಲ್ಲಿ ಸ್ಟೀಮ್–ಪೈಪ್ ಎಂದರೆ ಮುಖ್ಯ ಕೊಳವೆ; ತಿದ್ದುಪಡಿಯಾದರೋ ಅದು ಮುಖ್ಯ ಕೊಳವೆಯನ್ನು ಮಾತ್ರವಲ್ಲದೆ ಫೀಡ್ ಪೈಪುಗಳನ್ನೂ ಒಳಗೊಳ್ಳುತ್ತದೆ. ಈ ತಿದ್ದುಪಡಿಯನ್ನು ಅಂಗೀಕರಿಸಿದಾಗ, ೨೮ನೆಯ ಖಂಡದ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಲು ಸರಕಾರಕ್ಕೆ ಸಾಧ್ಯವಾಗುತ್ತದೆ. ಬಾಯ್ಲರ್ ಇನ್ಸ್‌ಪೆಕ್ಟರನು ಸ್ಟೀಮ್ ಪೈಪುಗಳನ್ನು ಮಾತ್ರವಲ್ಲ, ಫೀಡ್ ಪೈಪುಗಳನ್ನೂ ಪರೀಕ್ಷಿಸಬೇಕಾಗುತ್ತದೆ, ಅದು ಅವನ ಕರ್ತವ್ಯವಾಗುತ್ತದೆ. ಈ ಉದ್ದೇಶದಿಂದ ಪ್ರಸ್ತುತ ಮಸೂದೆಯನ್ನು ಮಂಡಿಸಲಾಗಿದೆ. ಮಾನ್ಯರೆ, ಮಸೂದೆಯನ್ನು ಪರಿಶೀಲಿಸಬೇಕೆಂದು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಪ್ರಸ್ತಾವ ಮಂಡಿತವಾಗಿದೆ : "ಇಂಡಿಯನ್ ಬಾಯ್ಲರ್ಸ್ ಆ್ಯಕ್ಟ್ ೧೯೨೩ಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಶೀಲಿಸಬೇಕು".

**ಶ್ರೀ ಸಿ.ಪಿ. ಮಿಲ್ಲರ್ (ಬಂಗಾಳ–ಯೂರೋಪಿಯನ್)** : ಮಾನ್ಯ ಸದಸ್ಯರಿಂದ ವಿವರಣೆ ಪಡೆಯಬೇಕಾದ ಒಂದು ಸಣ್ಣ ವಿಚಾರವಿದೆ. ಅದು ಇಕಾನಮೈಸರ್ ಎಂದು ಕರೆಯುವ ಫೀಡ್ ಪೈಪುಗಳ ಸಂಪರ್ಕ ತೆಗೆದುಬಿಡುವುದಾಗಿ ಒಪ್ಪಿ ಮುಚ್ಚಳಿಕೆ ಕೊಟ್ಟರೆ ಅವುಗಳಲ್ಲಿ ದೋಷವಿದ್ದರೂ ಬಾಯ್ಲರು ಒಳ್ಳೆಯ ಸ್ಥಿತಿಯಲ್ಲಿರುವ ಬಗ್ಗೆ ಪ್ರಮಾಣಪತ್ರ ಕೊಡಲು ನಿರಾಕರಿಸುವುದು ಸಾಧ್ಯವಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಈ ಪ್ರಶ್ನೆಗೆ ತಕ್ಷಣವೆ ನಾನು ಉತ್ತರ ಕೊಡುವುದು ಸಾಧ್ಯವಿಲ್ಲ ಎನ್ನುವುದು ಮಾನ್ಯ ಮಿತ್ರರಿಗೆ ಅರ್ಥವಾದೀತು. ಆದರೆ ನನಗೆ ತಿಳಿದುಬಂದಿರುವಂತೆ ಅವರು ಹೇಳಿದ ಮಾತು ಸರಿ ಎಂದು ತೋರುತ್ತದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈಗ ಅಂಗೀಕರಿಸಬೇಕಾಗಿರುವ ಪ್ರಸ್ತಾವ:

"ಇಂಡಿಯನ್ ಬಾಯ್ಲರ್ಸ್ ಆ್ಯಕ್ಟ್ ೧೯೨೩ ಶಾಸನಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಅಂಗೀಕರಿಸಬೇಕು".

ಪ್ರಸ್ತಾವ ಅಂಗೀಕೃತವಾಯಿತು.

ಮಸೂದೆಗೆ ೧ ಮತ್ತು ೩ನೇ ಕಲಮುಗಳನ್ನು ಸೇರಿಸಲಾಯಿತು. ಮಸೂದೆಗೆ ೧ನೇ ಕಲಮನ್ನು ಕೂಡಿಸಲಾಯಿತು.

ಮಸೂದೆಗೆ ಶೀರ್ಷಿಕೆಯನ್ನೂ, ಪ್ರಸ್ತಾವನೆಯನ್ನೂ ಕೂಡಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮಸೂದೆಯನ್ನು ಅಂಗೀಕರಿಸಬಹುದೆಂದು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ವಿಷಯ ಇದು.

"ಮಸೂದೆಯನ್ನು ಅಂಗೀಕರಿಸಬಹುದು"

ಮಸೂದೆ ಅಂಗೀಕೃತವಾಯಿತು.

# ೧೬
# ಮೋಟಾರು ವಾಹನಗಳ (ಚಾಲಕರ) ತಿದ್ದುಪಡಿ ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ಈ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ :

**"**ಮೋಟಾರು ವಾಹನಗಳ (ಚಾಲಕರ) ಸುಗ್ರೀವಾಜ್ಞೆ ೧೯೪೨ಕ್ಕೆ ತಿದ್ದುಪಡಿ ಮಾಡುವ ಸಲುವಾಗಿ ಮಸೂದೆಯನ್ನು ಪರಿಗಣಿಸಬಹುದು**"**.

ಇದೊಂದು ಸರಳವಾದ ಕ್ರಮ. ಸದನಕ್ಕೆ ನೆನಪಿರುವಂತೆ, ಹಲವಾರು ಸುಗ್ರೀವಾಜ್ಞೆಗಳ ಅನ್ವಯ ಹಲವಾರು ವರ್ಗದ ಜನರ ಸೇವೆಯನ್ನು ಸರಕಾರವು ಪಡೆದುಕೊಂಡಿದೆ.

**ಒಬ್ಬ ಗೌರವಾನ್ವಿತ ಸದಸ್ಯರು** : ಇಂಥವರು ಒಟ್ಟು ಎಷ್ಟು ಜನ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ನಿಖರವಾದ ಮಾಹಿತಿ ನನ್ನ ಬಳಿ ಈಗ ಇಲ್ಲ. ಆದರೆ ಸಾಮಾನ್ಯವಾಗಿ ಪರಿಸ್ಥಿತಿ ಏನೆಂದು ಗೊತ್ತು. ಮೋಟಾರು ಚಾಲಕರ ಸೇವೆಯನ್ನು ಕೋರುವ ಸುಗ್ರೀವಾಜ್ಞೆಯು ಅವುಗಳಲ್ಲಿ ಒಂದು. ಆ ಆಜ್ಞೆಯು ಜಾರಿಗೆ ಬಂದ ಮೇಲೆ ಇತರ ಅಂತಹ ಆದೇಶಗಳಲ್ಲಿ ಇದ್ದು ಮೋಟಾರು ಚಾಲಕರ ಸಂಬಂಧವಾದ ಆಜ್ಞೆಯಲ್ಲಿ ಇರದ ಒಂದು ಅವಕಾಶವಿದೆ ಎಂದು ಗೊತ್ತಾಯಿತು. ಒಬ್ಬ ಮೋಟಾರು ಚಾಲಕನ ಸೇವೆಯನ್ನು ಪಡೆದುಕೊಂಡಿದ್ದ ಪ್ರಾಧಿಕಾರವು ಕೆಲಸಮುಗಿದು ಚಾಲಕನನ್ನು ಹಿಂದಕ್ಕೆ ಕಳಿಸಿದಾಗ ಅವನನ್ನು ಮತ್ತೆ ನೇಮಿಸಿಕೊಳ್ಳುವುದು ಮಾಲೀಕನ ಕರ್ತವ್ಯವಾಗಿರುತ್ತದೆ ಎನ್ನುವಂತಹ ಯಾವೊಂದು ಷರತ್ತೂ ಶಾಸನದಲ್ಲಿ ಇರಲಿಲ್ಲ. ಈ ಕೊರತೆಯನ್ನು ತುಂಬುವ ಸಲುವಾಗಿ ಪ್ರಸ್ತುತ ಮಸೂದೆಯನ್ನು ಮಂಡಿಸಲಾಗಿದೆ. ಎರಡನೆಯದಾಗಿ, ಮಾಲೀಕನ ಮೇಲೆ ಬಂದ ಈ ಹೊಣೆಗಾರಿಕೆಗೆ ಸಂಬಂಧಿಸಿದ ವ್ಯಾಜ್ಯಗಳ ಪರಿಹಾರಕ್ಕೆ ಮಸೂದೆಯು ಒಂದು ವಿಧಾನವನ್ನು ಹಾಕಿಕೊಡುತ್ತದೆ. ಪ್ರಾಂತೀಯ ಸರಕಾರವು ತನ್ನ ಪರವಾಗಿ ನೇಮಿಸಿರುವ ಪ್ರಾಧಿಕಾರಕ್ಕೆ ಆ ವ್ಯಾಜ್ಯವನ್ನು ಒಯ್ಯತಕ್ಕದ್ದು ಎಂದು ಹೇಳುತ್ತದೆ. ಮೂರನೆಯದಾಗಿ, ಪ್ರಾಧಿಕಾರವು ಕೊಟ್ಟ ಆದೇಶವನ್ನು ಪಾಲಿಸದೆ ಹೋದರೆ ಶಿಕ್ಷೆಯನ್ನು ವಿಧಿಸಲಾಗಿದೆ. ಮಸೂದೆಯ ಇತರ ವಿಧಿಗಳಲ್ಲಿ, ಒಬ್ಬ ಮೋಟಾರು ಚಾಲಕನಿಗಿರುವ ವೃತ್ತಿಯ ಹಕ್ಕಿಗೆ ಕೆಲವು ಮಿತಿಗಳಿವೆ ಎಂದು ಹೇಳಲಾಗಿದೆ. ಈ ಮಿತಿಗಳು ಎರಡು ಬಗೆ. ಮೊದಲನೆಯದಾಗಿ, ಪುನರ್ನೇಮಕದ ಹಕ್ಕನ್ನು ಕೇಳುವ ಚಾಲಕನು ಆರು ತಿಂಗಳ ಕಾಲ ತೆರಪಿಲ್ಲದ ಸೇವೆ ಸಲ್ಲಿಸಿರಬೇಕು. ಎರಡನೆಯದಾಗಿ, ರಾಷ್ಟ್ರಸೇವೆಯಿಂದ ಬಿಡುಗಡೆ ಹೊಂದಿದ ತಾರೀಕಿನಿಂದ ಎರಡು ತಿಂಗಳ ಒಳಗಾಗಿ ಪುನರ್ನೇಮಕಕ್ಕೆ ಅರ್ಜಿ ಸಲ್ಲಿಸಿರಬೇಕು. ಈ ಅಂಶಗಳನ್ನು ಪೂರೈಸಲಾಗಿದ್ದರೆ, ಈ ಮಸೂದೆಯ ಪ್ರಕಾರ ಸೇವೆಯನ್ನು ರಾಷ್ಟ್ರಕ್ಕಾಗಿ ಕೋರಿರುವ ಇತರರ ಸಮಾನವಾದ ಮಟ್ಟದಲ್ಲಿಯೇ ಅವನು ಕೂಡ ನಿಲ್ಲುತ್ತಾನೆ. ಈ ಮಸೂದೆಯ ಬಗೆಗೆ ನಾನು ಹೇಳಬೇಕಾದುದು ಬೇರೇನೂ ಇಲ್ಲ. ಮಾನ್ಯರೆ, ಈ ಮಾತುಗಳಿಂದ ನಾನು ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್)** : ವಿಷಯ ಹೀಗಿದೆ :

**"**೧೯೪೨ ರ ಮೋಟಾರು ವಾಹನಗಳ (ಚಾಲಕರ) ಅಧ್ಯಾದೇಶಕ್ಕೆ ತಿದ್ದುಪಡಿ ತಂದಿರುವ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಜುಲೈ ೨೯, ೧೯೪೩, ಪು. ೧೭೯–೮೦.

ಮಸೂದೆಯನ್ನು ಪರಿಶೀಲಿಸಬಹುದು".

ಪ್ರಸ್ತಾವ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಕಲಮು –೨

**ಸರ್ ಕವಾಸ್ಜಿ ಜಹಾಂಗೀರ್*** **(ಮುಂಬಯಿ ನಗರ** : ಮಹಮದೀಯ–ನಗರ): ಮಾನ್ಯರೆ, ಈ ಎರಡನೆಯ ಕಲಮು ಮಸೂದೆಯ ಅತ್ಯಂತ ಮುಖ್ಯ ಕಲಮು ಆಗಿದೆ. ಸರಕಾರವು ಯುದ್ಧೋದ್ದೇಶಗಳಿಗಾಗಿ ಎರವಲು ಪಡೆದುಕೊಂಡ ಮೋಟಾರು ಚಾಲಕರಿಗೆ ಅದು ಮುಗಿದ ಮೇಲೆ ಮತ್ತೆ ವೃತ್ತಿಯನ್ನು ಒದಗಿಸಿಕೊಡುವುದೇ ಈ ಮಸೂದೆಯ ಮಂಡನೆಗೆ ಇರುವ ಕಾರಣ. ಮೊದಲಿನ ಮಾಲೀಕನೇ ಮತ್ತೆ ಆ ಚಾಲಕನಿಗೆ ಕೆಲಸ ಕೊಡಬೇಕು, ಅದಕ್ಕೆ ಚಾಲಕನು ಎರಡು ಷರತ್ತುಗಳನ್ನು ಪೂರೈಸಿರಬೇಕು. ಹಿಂದೆ ಆ ಮಾಲೀಕನ ಬಳಿ ಎಡೆಬಿಡದೆ ಆರು ತಿಂಗಳ ಸೇವೆ ಸಲ್ಲಿಸಿರಬೇಕು, ಮತ್ತು ಎರಡು ತಿಂಗಳೊಳಗೆ ಪುನರ್ನೇಮಕಕ್ಕೆ ಅರ್ಜಿ ಸಲ್ಲಿಸಿರಬೇಕು. ಮಾನ್ಯ ಮಿತ್ರರು ಇನ್ನೂ ಸ್ವಲ್ಪ ಪರಿಶೀಲನೆ ಮಾಡಿ ಹೆಚ್ಚು ಸಮಯ ಪಡೆದುಕೊಳ್ಳಬಹುದು. ಆದ್ದರಿಂದ ಮಾನ್ಯ ಸದಸ್ಯರು ಸಾರ್ವಜನಿಕರಿಗೂ, ಈ ಗೌರವಾನ್ವಿತ ಸದನಕ್ಕೂ ಒಳ್ಳೆಯದನ್ನು ಮಾಡಿದಂತಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮಿತ್ರರಾದ ಸರ್ ಕವಾಸ್ಜಿ ಜಹಾಂಗೀರ್ ಅವರ ಅಭಿಪ್ರಾಯವನ್ನು ಕೇಳಿದರೆ, ಮಾಲೀಕನೊಬ್ಬನನ್ನು ಹಿಂದಿನ ಚಾಲಕನನ್ನು ಮರಳಿ ನೇಮಿಸಿಕೊಳ್ಳಬೇಕೆಂದು ಕೇಳಿದಾಗ ಏನಾಗಬಹುದೆಂಬ ಬಗ್ಗೆ ಭೂತಾಕಾರದ ಬಣ್ಣ ಬಳಿದ ಚಿತ್ರ ಕೊಟ್ಟಿದ್ದಾರೆ ಎನ್ನಿಸುತ್ತದೆ. ಒಮ್ಮೆ ಈ ವಿಚಾರವು ವಿವಾದಗ್ರಸ್ತವಾದರೆ, ಲಾಯರುಗಳ ಬಳಿ ಸಿಲುಕಿ ಸಿವಿಲ್ ಮೊಕದ್ದಮೆಯಾಗಿ ದಾಖಲಾಗಿ ದೀರ್ಘಕಾಲ ನಡೆಯುವ ವ್ಯಾಜ್ಯವಾಗಬಹುದು ಎಂಬ ಭೀತಿ ಅವರಿಗಿದೆ. ಇಲ್ಲ, ಅದು ತುಂಡಂಗಿಗಿಂತಲೂ ತುಂಡಾಗಿರುತ್ತದೆ ಎಂಬ ಭರವಸೆ ಕೊಡುತ್ತೇನೆ. ಪ್ರಾಂತೀಯ ಸರಕಾರವು ಈ ವಿಚಾರದಲ್ಲಿ ಒಂದು ಪ್ರಾಧಿಕಾರವನ್ನು ನೇಮಿಸಲು ಅವಕಾಶ ಕಲ್ಪಿಸಿದೆ. ಈ ಪ್ರಾಧಿಕಾರವು ಎರಡೂ ಪಕ್ಷಗಳಿಗೆ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತದೆನ್ನುವುದರಲ್ಲಿ ಸಂದೇಹವಿಲ್ಲ.

**ಸರ್ ಕವಾಸ್ಜಿ ಜಹಾಂಗೀರ್ :** ಅದು ನಮಗೆ ಹೇಗೆ ಗೊತ್ತಾಗುತ್ತದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಾಂತೀಯ ಸರಕಾರವು ಅತ್ಯುತ್ತಮ ರೀತಿಯಲ್ಲಿ ಇದನ್ನು ನಿರ್ವಹಿಸುತ್ತದೆ ಎಂದು ನಾವು ವಿಶ್ವಾಸವಿಡಬೇಕು ಅಷ್ಟೆ.

**ಸರ್ ಕವಾಸ್ಜಿ ಜಹಾಂಗೀರ್ :** ಅಂಥದೊಂದು ಪ್ರಾಧಿಕಾರವನ್ನು ನೇಮಿಸಿದ್ದೇ ಆದ ಪಕ್ಷದಲ್ಲಿ, ಅದರ ನಿಯಮಾವಳಿಗಳು ವಿಪರೀತ ವಿಸ್ತಾರವಾಗಿ ಬೆಳೆದು, ಗಣನೀಯವಾಗಿ ಅನನುಕೂಲವುಂಟುಮಾಡುತ್ತದೆ. ಇದು ಮಾನ್ಯ ಸದಸ್ಯರಿಗೆ ತಿಳಿಯದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಜನರು ತಮ್ಮ ಈ ಬಗೆಯ ವ್ಯಾಜ್ಯಗಳನ್ನು ಶೀಘ್ರವಾಗಿ ಪರಿಹರಿಸಿಕೊಳ್ಳಲು ಕಷ್ಟವಾಗುವಷ್ಟು ಅನನುಕೂಲವೇನೂ ಆಗುವುದಿಲ್ಲ. ಆದ್ದರಿಂದ ಈ ಕ್ರಮವನ್ನು ತಡೆಹಿಡಿಯಬೇಕೆಂದು ಒತ್ತಾಯಪಡಿಸುವುದರಲ್ಲಿ ಅಷ್ಟಾಗಿ ಸತ್ವವಿಲ್ಲ ಎಂದು ನನಗನ್ನಿಸುತ್ತದೆ. ಇಲ್ಲಿ ಏಳುವ ಪ್ರಶ್ನೆಗಳು ಅಲ್ಪ ಪ್ರಮಾಣದ್ದಾಗಿರುತ್ತವೆ, ಎರಡೂ ಪಕ್ಷಗಳಿಗೆ ಹೆಚ್ಚು ಕಷ್ಟವಿಲ್ಲದೆ ಪರಿಹಾರ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ನಂ. ೩, ಜುಲೈ ೨೯, ೧೯೪೩, ಪು. ೧೭೯–೮೦.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈಗ ಮುಂದಿರುವ ವಿಷಯ "೨ನೆಯ ಕಲಮು ಮಸೂದೆಯ ಭಾಗವಾಗುತ್ತದೆ".

ಪ್ರಸ್ತಾವ ಅಂಗೀಕೃತವಾಯಿತು.

೨ನೆಯ ಕಲಮನ್ನು ಮಸೂದೆಗೆ ಸೇರಿಸಲಾಯಿತು.

೩ನೆಯ ಕಲಮನ್ನು ಮಸೂದೆಗೆ ಸೇರಿಸಲಾಯಿತು.

೧ನೆಯ ಕಲಮನ್ನು ಮಸೂದೆಗೆ ಸೇರಿಸಲಾಯಿತು.

ಶೀರ್ಷಿಕೆಯನ್ನೂ ಪೀಠಿಕೆಯನ್ನೂ ಮಸೂದೆಗೆ ಸೇರಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ಮಸೂದೆಯನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಪ್ರಸ್ತಾವನೆ ಹೀಗಿದೆ :

"ಮಸೂದೆಯನ್ನು ಅಂಗೀಕರಿಸಬಹುದು".

ಮಸೂದೆಯನ್ನು ಅಂಗೀಕರಿಸಲಾಯಿತು.

## ೧೭
## ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯದ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು) : ಮಾನ್ಯರೆ, ಈ ಸೂಚನೆ ಮಂಡಿಸುತ್ತೇನೆ :

"೧೯೪೧ರ ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಲಭ್ಯ ಶಾಸನವನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು".

ಈ ತಿದ್ದುಪಡಿ ತರುವುದು ಏಕೆ ಆವಶ್ಯಕವಾಯಿತು ಎಂಬುದನ್ನು ನಾನು ಸದನಕ್ಕೆ ವಿವರಿಸುವುದು ಅಪೇಕ್ಷಣೀಯವಾಗಿದೆ. ಮೈನ್ಸ್ ಮೆಟರ್ನಿಟಿ ಬೆನಿಫಿಟ್ ಆ್ಯಕ್ಟ್ ಪ್ರಕಾರ ಗಣಿಯಲ್ಲಿ ಕೆಲಸ ಮಾಡುವ ಒಬ್ಬ ಮಹಿಳೆಗೆ ಎಂಟು ವಾರಗಳ ಹೆರಿಗೆ ಸೌಲಭ್ಯವನ್ನು ದಿನಕ್ಕೆ ೮ ಆಣೆ ವೇತನದ ಮೇಲೆ ಪಡೆಯುವ ಸೌಲಭ್ಯವಿದೆ. ಈ ಎಂಟು ವಾರಗಳನ್ನು ಎರಡಾಗಿ ವಿಭಾಗಿಸಿದೆ. ಮೊದಲ ನಾಲ್ಕು ವಾರಗಳ ಅವಧಿ ಹೆರಿಗೆಗೆ ಮುಂಚಿನದು, ಎರಡನೆಯ ನಾಲ್ಕು ವಾರಗಳ ಅವಧಿ ಹೆರಿಗೆಯ ನಂತರದ್ದು. ಪ್ರಸವಪೂರ್ವದ ನಾಲ್ಕು ವಾರಗಳ ಅವಧಿಯದು ಐಚ್ಛಿಕ ವಿಶ್ರಾಂತಿಯ ಸಮಯ. ಅಂದರೆ ಆ ಸಮಯದಲ್ಲೂ ಮಹಿಳೆ ಬೇಕಾದರೆ ಕೆಲಸ ಮಾಡುತ್ತಿದ್ದು ಪೂರ್ತಿ ವೇತನವನ್ನೇ ಪಡೆಯಬಹುದು, ಅಥವಾ ಕೆಲಸಕ್ಕೆ ಹಾಜರಾಗದೆ ಹೆರಿಗೆ ಸೌಲಭ್ಯವನ್ನು ಪಡೆಯಬಹುದು. ಪ್ರಸವಾನಂತರ ನಾಲ್ಕು ವಾರಗಳ ಅವಧಿಯಾದರೋ ಕಡ್ಡಾಯ ವಿಶ್ರಾಂತಿಯ ಅವಧಿ. ಈ ಸಮಯದಲ್ಲಿ ಅವಳು ಕೆಲಸ ಮಾಡಲೇಕೂಡದು. ಅದು ನ್ಯಾಯಬಾಹಿರವಾಗುತ್ತದೆ, ಅಪರಾಧವಾಗುತ್ತದೆ. ಹೆರಿಗೆ ಸೌಲಭ್ಯವಷ್ಟರಿಂದಲೇ ತೃಪ್ತಿಪಡಬೇಕು. ಹೆರಿಗೆ ಸೌಲಭ್ಯ ಶಾಸನದ ೫ನೆಯ ವಿಭಾಗವನ್ನು ಮಾನ್ಯ ಸದಸ್ಯರು ದಯವಿಟ್ಟು ನೋಡಬೇಕು. ಆ ವಿಭಾಗದ ೯ನೆಯ ಪಂಕ್ತಿಯಲ್ಲಿ 'ಕೆಲಸದಿಂದ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಜುಲೈ ೨೯, ೧೯೪೨. ಪು. ೧೮೦.

ಗೈರುಹಾಜರಾಗಿ' ಎಂಬ ಪದಗಳಿವೆ. ಈ ಪದಗಳು ಅದರಲ್ಲೂ 'ಕೆಲಸದಿಂದ ಗೈರುಹಾಜರು', 'ಕೆಲಸದಿಂದ' ಎಂಬ ಪದ ಅಸ್ಪಷ್ಟವಾಗಿದೆ. ಏಕೆ ಈ ಪದಗಳು ಅಸ್ಪಷ್ಟವಾಗಿವೆ ಎಂಬುದನ್ನು ಹೇಳುತ್ತೇನೆ. ಯಾವುದೋ ಒಂದು ದಿನ ಮಾಲೀಕನು ಗಣಿಯನ್ನು ಮುಚ್ಚಿದ್ದಾನೆ ಎಂದಿಟ್ಟುಕೊಳ್ಳೋಣ. ಆ ದಿನಕ್ಕೆ ಮಹಿಳೆಗೆ ಹೆರಿಗೆ ಸೌಲಭ್ಯ ದೊರಕುತ್ತದೆಯೇ? ದೊರಕುವುದಿಲ್ಲ ಎಂದು ಸೂಚಿಸಲಾಗಿದೆ. ಏಕೆಂದರೆ 'ಕೆಲಸದಿಂದ ಗೈರುಹಾಜರಾಗುವುದು' ಎಂದರೆ, ಕೆಲಸ ಇದೆ, ಗಣಿ ಮುಚ್ಚಿರುವಾಗ ಕೆಲಸ ಇಲ್ಲ. ಆದ್ದರಿಂದ 'ಕೆಲಸದಿಂದ' ಎಂಬ ಪದವು ಈ ಅಸ್ಪಷ್ಟತೆಗೆ ಕಾರಣವಾಗಿದೆ. ಬೇರೆ ಬೇರೆ ಪ್ರಾಂತಗಳಲ್ಲಿ ಅಂಗೀಕರಿಸಿರುವ ಐದು ಬೇರೆ ಬೇರೆ ಹೆರಿಗೆ ಸೌಲಭ್ಯ ಶಾಸನಗಳನ್ನು ನಾನು ೫ನೆಯ ಖಂಡದೊಂದಿಗೆ ಹೋಲಿಸಿ ನೋಡಿದ್ದೇನೆ. ಅಲ್ಲೆಲ್ಲ 'ಕೆಲಸದಿಂದ' ಎಂಬ ಪದ ಇಲ್ಲ. ಪರಿಣಾಮವಾಗಿ, ಈ ಪದವನ್ನು ತೆಗೆದು ಹಾಕುವುದರ ಮೂಲಕ ಅಸ್ಪಷ್ಟತೆಯನ್ನು ಪರಿಹರಿಸುವುದು ಅಗತ್ಯವಾಗಿದೆ. ಎರಡು ಬೇರೆ ಬೇರೆ ತಿದ್ದುಪಡಿಗಳನ್ನು ತರಬೇಕಾಗಿದೆ. ಮೊದಲನೆಯದು, ೫ನೆಯ ಖಂಡದಲ್ಲಿ ಈ ಅಸ್ಪಷ್ಟತೆಯನ್ನು ಉಂಟುಮಾಡಿರುವ ಪದಗಳನ್ನು ತೆಗೆದುಹಾಕುವುದು. ಆಮೇಲೆ ವಾಕ್ಯವು ಈ ಅರ್ಥ ಕೊಡುತ್ತದೆ. ಪ್ರಸವಪೂರ್ವದ ನಾಲ್ಕು ವಾರಗಳಲ್ಲಿ ಪ್ರತಿಯೊಂದು ದಿನಕ್ಕೂ ಮಹಿಳೆಗೆ ಹೆರಿಗೆ ಸೌಲಭ್ಯವು ದೊರಕುತ್ತದೆ. ಅವಳ ಆಯ್ಕೆಗೆ ಬಿಟ್ಟ ಅವಧಿಯಲ್ಲಿ ಅಂದರೆ ವಿಶ್ರಾಂತಿ ಪಡೆಯಬೇಕೋ ಕೆಲಸ ಮಾಡಬೇಕೋ ಎಂಬುದನ್ನು ಅವಳೇ ನಿರ್ಣಯಿಸಿಕೊಳ್ಳುವ ಸಮಯದಲ್ಲಿ ಕೆಲಸಕ್ಕೆ ಹೋಗಿ ಪೂರ್ಣವೇತನ ಪಡೆಯಬಹುದು ಇಲ್ಲವೆ, ಮನೆಯಲ್ಲಿದ್ದು ಹೆರಿಗೆ ಸೌಲಭ್ಯವನ್ನು ಪಡೆಯಬಹುದು ಎಂದಿರುವಲ್ಲಿ ನಾವು ಇನ್ನೊಂದು ತಿದ್ದುಪಡಿ ಸೇರಿಸುತ್ತಿದ್ದೇವೆ – ಅವಳಿಗೆ ಆಗ ಹೆರಿಗೆ ಸೌಲಭ್ಯದ ಹಣ ದೊರಕುವುದಿಲ್ಲ. ಇಷ್ಟು ಹೇಳಿ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** ವಿಷಯ ಇದು.

"ಗಣಿಗಳಲ್ಲಿನ ಮಹಿಳಾ ಕಾಮಿಕರ ಹೆರಿಗೆ ಸೌಲಭ್ಯ ಶಾಸನ ೧೯೪೧ಕ್ಕೆ ತಿದ್ದುಪಡಿ ಮಸೂದೆಯನ್ನು ಪರಿಶೀಲಿಸಬಹುದು."

ಸೂಚನೆಯನ್ನು ಅಂಗೀಕರಿಸಲಾಯಿತು.

ಮಸೂದೆಗೆ ೨ನೆಯ ಉಪವಿಭಾಗವನ್ನು ಸೇರಿಸಲಾಯಿತು.

ಮಸೂದೆಗೆ ೧ನೆಯ ಉಪವಿಭಾಗವನ್ನು ಸೇರಿಸಲಾಯಿತು.

ಶೀರ್ಷಿಕೆಯನ್ನು ಪ್ರಸ್ತಾವನೆಯನ್ನೂ ಮಸೂದೆಗೆ ಕೂಡಿಸಲಾಯಿತು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಮಸೂದೆಯನ್ನು ಅಂಗೀಕರಿಸಬಹುದೆಂದು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಸೂಚನೆ:

"ಮಸೂದೆಯು ಅಂಗೀಕೃತವಾಗಬಹುದು".

# ೧೮
# ಯುದ್ಧದಲ್ಲುಂಟಾದ ಗಾಯಗಳ (ಪರಿಹಾರ ವಿಮಾ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಲೇಬರ್ ಸದಸ್ಯರು): ಮಾನ್ಯರೆ, ಈ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ. :

**“**ಯುದ್ಧ ಗಾಯಗಳಿಗೆ ತುತ್ತಾದ ನೌಕರರಿಗೆ ಪರಿಹಾರ ಧನ ಕೊಡುವುದನ್ನು ಮಾಲೀಕರ ಹೊಣೆಗಾರಿಕೆಯನ್ನಾಗಿ ಮಾಡುವುದು ಹಾಗೂ ಆ ಹೊಣೆಗಾರಿಕೆಯನ್ನು ನಿರ್ವಹಿಸಲು ಉದ್ಯಮಪತಿಗಳ ವಿಮೆ ಇಳಿಸತಕ್ಕದೆಂದು ವಿಧಿಸುವುದು – ಎಂಬುದಾಗಿ ಸೆಲೆಕ್ಟ್ ಸಮಿತಿಯು ಮಾಡಿರುವ ವರದಿಯನ್ನು ಪರಿಶೀಲಿಸಬಹುದು**”**.

ಈ ಮೊದಲು ಮಸೂದೆಯು ಸದನದ ಮುಂದೆ ಬಂದಿದ್ದಾಗ, ಈ ಮಸೂದೆಯ ಹಿನ್ನೆಲೆಯಲ್ಲಿರುವ ತತ್ವಗಳನ್ನು ವಿವರಿಸಿದ್ದಾಗಿದೆ. ಈಗ ಮತ್ತೆ ಅದೇ ವಿಷಯವಾಗಿ ಮಾತನಾಡಬೇಕಾದ ಅಗತ್ಯವಿಲ್ಲ. ಸೆಲೆಕ್ಟ್ ಸಮಿತಿಯು ಮೂಲ ಮಸೂದೆಯಲ್ಲಿ ಮಾಡಿರುವ ಬದಲಾವಣೆಯ ವಿಷಯದ ಮಟ್ಟಿಗೆ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ. ಹಲವಾರು ಬದಲಾವಣೆಗಳಿದ್ದರೂ ಮುಖ್ಯವಾಗಿ ತತ್ವಕ್ಕೆ ಸಂಬಂಧಿಸಿದವು ನಾಲ್ಕು ಮಾತ್ರ ಎಂಬುದನ್ನು ಸದನವು ಗಮನಿಸಿರಬೇಕು. ಮೊದಲನೆಯದಾಗಿ, ಈ ಮಸೂದೆಯು ಅನ್ವಯವಾಗುವ ಕಾರ್ಮಿಕರ ವರ್ಗಗಳನ್ನು ವಿಸ್ತರಿಸಿದೆ. ಈಗ ಪ್ಲಾಂಟೇಷನ್‌ಗಳಲ್ಲಿ ಕೆಲಸಮಾಡುವ ಕಾರ್ಮಿಕರನ್ನೂ ಸೇರಿಸಿದ್ದೇವೆ. ಎರಡನೆಯ ಬದಲಾವಣೆ, ವಿಮಾ ನಿಧಿಗೆ ಸಲ್ಲಿಸಬೇಕಾದ ಮೊದಲನೆಯ ಕಂತಿನ ಕೊಡುಗೆಯ ದರವನ್ನು ಕುರಿತದ್ದು. ಮೊದಲು, ಉದ್ಯಮಿಯ ವೇತನ ಬಿಲ್ಲಿನ ೧೦೦ ರೂಪಾಯಿಗೆ ಎಂಟು ಆಣೆಗಳಂತೆ ದರವನ್ನು ನಿಗದಿಪಡಿಸಲಾಗಿತ್ತು. ಸೆಲೆಕ್ಟ್ ಸಮಿತಿಯು ಎಂಟು ಆಣೆ ದರವನ್ನು ನಾಲ್ಕು ಆಣೆಗೆ ಇಳಿಸಿದೆ. ಮೂರನೆಯ ಬದಲಾವಣೆ ವಿಮಾ ನಿಧಿಯಲ್ಲಿ ಉಪಯೋಗವಾಗದೆ ಉಳಿದ ಹೆಚ್ಚುವರಿ ಹಣದ ವಿನಿಯೋಗವನ್ನು ಕುರಿತದ್ದು. ಅದನ್ನು ಸಾಮಾನ್ಯ ವರಮಾನಕ್ಕೆ ಸೇರಿಸಿ ಸರಕಾರಿ ವೆಚ್ಚದ ಸಾಮಾನ್ಯ ಉದ್ದೇಶಕ್ಕೆ ಉಪಯೋಗಿಸಬೇಕೆಂದು ಮಸೂದೆಯಲ್ಲಿ ಮೂಲ ಸಲಹೆಯಲ್ಲಿ ಹೇಳಲಾಗಿತ್ತು. ಆದರೆ ಸೆಲೆಕ್ಟ್ ಸಮಿತಿಯು ಉಳಿಕೆ ಹಣವನ್ನು ಉದ್ಯಮಿಗೇ ಅವನು ನೀಡಿದ ಹಣದ ಪ್ರಮಾಣಾನುಸಾರವಾಗಿ ಹಿಂದಿರುಗಿಸಬೇಕೆಂದು ಸಲಹೆ ಮಾಡಿದೆ. ನಾಲ್ಕನೆಯ ಬದಲಾವಣೆಯು ಗುತ್ತಿಗೆ ಕೆಲಸಕ್ಕೆ ಅನ್ವಯಿಸುತ್ತದೆ. ಉದ್ಯಮಿಯು ಒಬ್ಬ ಗುತ್ತಿಗೆದಾರನನ್ನು ಗೊತ್ತುಮಾಡಿಕೊಳ್ಳುತ್ತಾನೆ. ಗುತ್ತಿಗೆದಾರನಾದರೋ ತಾನು ಗುತ್ತಿಗೆಗೆ ಪಡೆದಿರುವ ಕೆಲಸವನ್ನು ಮಾಡಲು ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ಗುತ್ತಿಗೆದಾರನನ್ನು ಗೊತ್ತುಪಡಿಸಿಕೊಂಡ ಉದ್ಯಮಿಯೂ ಪರಿಹಾರ ಧನ ನೀಡಲು ಜವಾಬ್ದಾರನಾಗುತ್ತಾನೆ ಎಂದು ಹೇಳಿದೆ.

ಸೆಲೆಕ್ಟ್ ಸಮಿತಿಯು ಮಾಡಿರುವ ಮೂಲಭೂತ ಬದಲಾವಣೆಗಳು ಇವು. ಸದನವು ಗಮನಿಸಬಹುದಾದಂತೆ ಮಸೂದೆಗೆ ಹಲವಾರು ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಕೆಲವು ವಿಧಿವಿಧಾನಗಳನ್ನು ಕುರಿತವು, ಸೆಲೆಕ್ಟ್ ಸಮಿತಿಯಿಂದ ಬಂದನಂತರ ಮಸೂದೆಯ ಮೇಲೆ ಬಂದ ಆಕ್ಷೇಪಣೆಗಳಂತಹವನ್ನು ಉತ್ತರಿಸಲು ಸರಕಾರವು ಮಂಡಿಸಿರುವವು. ಈ ತಿದ್ದುಪಡಿಗಳ ಮೇಲೆ ಅಷ್ಟಾಗಿ ವಿವಾದ ಇರಲಾರದು ಎಂದು ಭಾವಿಸಿದ್ದೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಆಗಸ್ಟ್ ೧೩, ೧೯೪೩, ಪು. ೭೦೧.

ಮಾನ್ಯರೆ, ಈ ಮಸೂದೆಯನ್ನು ಕುರಿತು ಬೇರೇನೂ ಹೇಳಬೇಕಾದ ಅಗತ್ಯವಿಲ್ಲ. ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಪ್ರಸ್ತಾವವನ್ನು ಮಂಡಿಸಿದೆ.

"ಯುದ್ಧದಲ್ಲಿ ಗಾಯಗೊಳ್ಳುವ ಕಾರ್ಮಿಕರಿಗೆ ಪರಿಹಾರಧನವನ್ನು ಕೊಡುವ ಹೊಣೆಯನ್ನು ಉದ್ಯಮಿಗಳ ಮೇಲೆ ವಿಧಿಸಬಹುದು ಮತ್ತು ಆ ಹೊಣೆಗಾರಿಕೆಗೋಸ್ಕರವಾಗಿ ಉದ್ಯಮಿಗಳು ವಿಮೆ ಇಳಿಸತಕ್ಕದ್ದು. ಸೆಲೆಕ್ಟ್ ಸಮಿತಿಯು ವರದಿ ಮಾಡಿರುವಂತೆ ಈ ಮಸೂದೆಯನ್ನು ಪರಿಶೀಲನೆಗೆ ಅಂಗೀಕರಿಸಬಹುದು."

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರು ಮಾಡಿದ ಭಾಷಣಗಳಿಂದ ಹೇಳುವಂತಹ ಹೊಸ ವಿಷಯವೇನೂ ಹೊರಬಂದಂತೆ ತೋರುವುದಿಲ್ಲ. ಆದ್ದರಿಂದ ವಿಸ್ತಾರವಾದ ಉತ್ತರ ಕೊಡಬೇಕಾದ ಅಗತ್ಯವೇನಿಲ್ಲ. ಆದರೂ ಕೆಲವು ಅಂಶಗಳಿವೆ, ಮಸೂದೆಯನ್ನು ಮೊದಲನೆಯ ಬಾರಿ ಮಂಡಿಸಿದಾಗ ಅವು ಸುಸಂಗತವಾಗುತ್ತಿದ್ದವು. ಅವುಗಳನ್ನು ಆಗಲೂ ಎತ್ತಲಾಗಿತ್ತು. ನಾನು ಉತ್ತರ ಕೊಡುವ ಪ್ರಯತ್ನವನ್ನೂ ಮಾಡಿದ್ದ ನೆನಪಿದೆ. ಆದ್ದರಿಂದ ಅದೇ ವಿಷಯವನ್ನು ಕುರಿತು ಮಾತನಾಡುತ್ತಾ ಕಾಲಹರಣ ಮಾಡಲು ನನಗೆ ಅಪೇಕ್ಷೆಯಿಲ್ಲ.

ಕೆಲವು ನಿರ್ದಿಷ್ಟ ಅಂಶಗಳಿಗೆ ಹಾಗೂ ಕಾರ್ಯಕ್ರಮ ಪಟ್ಟಿಯಲ್ಲಿರುವ ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ, ಸಮಯ ಉಳಿಸುವ ಸಲುವಾಗಿ ಈ ಹಂತದಲ್ಲಿ ಅವುಗಳನ್ನು ಕುರಿತು ನನ್ನ ಭಾಷಣವನ್ನು ಮಾಡಬಾರದು. ತಿದ್ದುಪಡಿಗಳನ್ನು ಮಂಡಿಸಿದಾಗ ಅವುಗಳ ಬಗೆಗೆ ಮಾತನಾಡುವುದು ಸೂಕ್ತ ಮತ್ತು ಸುಸಂಗತ ಆಗುತ್ತದೆ.

***ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್)** : ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ:

"ಮಸೂದೆಯಲ್ಲಿ ಹಾಲಿ ಇರುವ ೬ನೆಯ ಉಪವಿಭಾಗವು ಹೀಗೆ ತಿದ್ದುಪಡಿ ಮಾಡಲ್ಪಟ್ಟಿದೆ : ೬. ಈ ಶಾಸನವು ೧೯೨೩ರ ವರ್ಕ್‌ಮೆನ್ಸ್ ಕಾಂಪನ್ಸೇಷನ್ ಆ್ಯಕ್ಟ್ ಅನ್ವಯವಾಗುವ ಎಲ್ಲ ಕಾರ್ಮಿಕರಿಗೂ ಅನ್ವಯವಾಗುತ್ತದೆ".

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಕ್ಷಮಿಸಬೇಕು, ಶ್ರೀ ಜೋಷಿಯವರ ತಿದ್ದುಪಡಿಯನ್ನು ನಾನು ವಿರೋಧಿಸಬೇಕಾಗಿದೆ. ನಾನು ಹೀಗೆ ವಿರೋಧಿಸುವುದು ಕಾರ್ಮಿಕರ ಬಗೆಗೆ ನನಗೆ ಸಹಾನುಭೂತಿಯಿಲ್ಲದ್ದರಿಂದ ಅಲ್ಲ ಎಂಬುದನ್ನು ಮಾನ್ಯ ಮಿತ್ರ ಶ್ರೀ ಜೋಷಿ ಅರ್ಥಮಾಡಿಕೊಂಡಾರು.

**ಶ್ರೀ ಎನ್.ಎಂ. ಜೋಷಿ :** ನಾನು ಹಾಗೆಂದು ಹೇಳಲಿಲ್ಲ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯ ಜೋಷಿಯವರು ಸೂಚಿಸಿರುವ ತಿದ್ದುಪಡಿಯನ್ನು ಒಪ್ಪಿದ್ದೇ ಆದ ಪಕ್ಷದಲ್ಲಿ, ಈ ಮಸೂದೆಯಿಂದ ಪ್ರಯೋಜನ ಪಡೆಯುವ ನೌಕರರ ಸಂಖ್ಯೆಯ ಮೇಲೆ ತುಂಬಾ ಮಿತಿಯನ್ನು ಒಡ್ಡಿದ ಹಾಗಾಗುತ್ತದೆ ಎಂದು ನನ್ನ ಅಭಿಪ್ರಾಯ. ಮೊದಲನೆಯದಾಗಿ, ಈ ವಿಚಾರದಲ್ಲಿ ನಾವು ಬಹು ಜಾಗರೂಕತೆಯಿಂದ ಹೆಜ್ಜೆಯಿಡಬೇಕಾಗುತ್ತದೆ. ಇದನ್ನೂ ಶ್ರೀ ಜೋಷಿಯವರೇ ಹೇಳಿದ್ದಾರೆ. ಏಕೆಂದರೆ, ಶಾಸನದ ಪ್ರಕಾರ ಹೊಣೆಗಾರಿಕೆಯನ್ನು ವಿಧಿಸಬೇಕಾದರೆ ವ್ಯವಸ್ಥಿತವಾದ ಉದ್ಯಮಿಗಳ ಸಂಘವೊ ಅಥವಾ ಬೇರೊಂದು ಸಂಘಟನೆಯೋ ಇರಬೇಕು. ಇದು ವಿಮಾ ಕಂತುಗಳನ್ನು ವಸೂಲು ಮಾಡುವ ವಿಚಾರ, ಸುಮ್ಮನೆ ಬೀದಿಯಲ್ಲಿ ನಡೆಯುತ್ತಿರುವವರಿಂದ ವಿಮಾ ಕಂತು ವಸೂಲು ಮಾಡಲಾಗದು. ಒಂದು ಸಂಸ್ಥೆಯಿರಬೇಕು, ಈ ಜವಾಬ್ದಾರಿಯನ್ನು ಅದಕ್ಕೆ ಹೊರಿಸಬೇಕು. ಆದ್ದರಿಂದ ಈ ಮಸೂದೆಗೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಆಗಸ್ಟ್ ೧೩, ೧೯೪೩, ಪು. ೭೧೦.

ಅಳವಡಿಸಬಹುದಾದ ಕಾರ್ಮಿಕರ ಸಂಖ್ಯೆಯ ವಿಷಯದಲ್ಲಿ ಎಚ್ಚರದಿಂದ ವರ್ತಿಸಬೇಕು. ನನ್ನ ಮನಸ್ಸಿಗೆ ತೋರುವ ಎರಡನೆಯ ಕಷ್ಟ ಇದು : ಮಾನ್ಯ ಜೋಷಿಯವರು ತಂದಿರುವ ತಿದ್ದುಪಡಿಗಳನ್ನು ಅಂಗೀಕರಿಸಿ ಮಾತನಾಡಿದ ಮಾತ್ರಕ್ಕೆ ಪ್ರಸ್ತುತ ಮಸೂದೆಯಲ್ಲಿ ಈಗ ಸೇರಿಸಿರುವ ಕೆಲಸಗಾರರ ಸಂಖ್ಯೆಯೇನೂ ವಿಸ್ತಾರಗೊಂಡಂತಾಗುವುದಿಲ್ಲ. ಮಾನ್ಯರೆ, ಕಾರ್ಮಿಕರ ಪರಿಹಾರ ಧನ ಶಾಸನವನ್ನು ನಾನು ಜಾಗರೂಕತೆಯಿಂದ ಪರಿಶೀಲಿಸಿದ್ದೇನೆ. ಆ ಶಾಸನವು ಒಟ್ಟಾರೆ ೯ ಕಾರ್ಮಿಕ ವರ್ಗಗಳಿಗೆ ಅನ್ವಯಿಸುತ್ತದೆ. ಆ ವರ್ಗಗಳೊಂದಿಗೆ ಈಗ ನಾನು ಮಸೂದೆಯಲ್ಲಿ ಸೇರಿಸಲಿಚ್ಛಿಸಿರುವ ನೌಕರರ ವರ್ಗಗಳನ್ನು ಹೋಲಿಸಿ ನೋಡಿದರೆ, ಒಂದೇ ಒಂದು ವ್ಯತ್ಯಾಸವಿರುವಂತೆ ತೋರುತ್ತದೆ. ಕಟ್ಟಡ ನಿರ್ಮಾಣ ಮತ್ತು ಲೋಕೋಪಯೋಗಿ ಕೆಲಸಗಳಿಗೂ ಆ ಶಾಸನವು ಅನ್ವಯಿಸುತ್ತದೆ, ಪ್ರಸ್ತುತ ಮಸೂದೆಯಲ್ಲಿ ಅದೊಂದು ವರ್ಗವು ಮಾತ್ರ ಸೇರಿಲ್ಲ. ಮಿಕ್ಕ ಎಲ್ಲ ವರ್ಗಗಳ ಕೆಲಸಗಾರರು ಶಾಸನದಲ್ಲೂ, ಈ ಮಸೂದೆಯಲ್ಲೂ ಸೇರಿದ್ದಾರೆ. ಆ ದೃಷ್ಟಿಯಿಂದ ಎರಡೂ ಸಮಾನವಾಗಿವೆ. ವರ್ಕ್‌ಮೆನ್ಸ್ ಕಾಂಪನ್ಸೇಷನ್ ಆ್ಯಕ್ಟ್‌ನ್ನು ಅನ್ವಯಿಸಿದ್ದೇ ಆದ ಪಕ್ಷದಲ್ಲಿ ಅದು ಕೆಲಸಗಾರರು ಎಂಬುದಕ್ಕೆ ಶಾಸನವು ಕೊಡುವ ವಿವರಣೆಯನ್ನು ಇಲ್ಲಿಗೂ ಅನ್ವಯಿಸಬಹುದು. ಆ ವಿವರಣೆ ತುಂಬ ಮಿತಿಯುಳ್ಳದ್ದಾಗಿದೆ. ಅನಿಯತ ಕೂಲಿಗಾರರನ್ನು ಶಾಸನವು ಕಾರ್ಮಿಕರು ಎಂಬ ವಿವರಣೆಯಿಂದ ಹೊರಗಿಡುತ್ತದೆ. ಈ ಮಸೂದೆಯು ಅನ್ವಯವಾಗುವ ಯಾವುದೇ ಉದ್ಯಮದಲ್ಲಿ ಹಾಗೆ ಅನಿಯತವಾಗಿ ನೇಮಿತವಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟಿದೆಯೋ ಯಾರು ಬಲ್ಲರು? ಅಲ್ಲದೆ ಮಾನ್ಯ ಜೋಷಿಯವರಿಗೂ ತಿಳಿದಿರಬೇಕು, ಗುಮಾಸ್ತರಾಗಿ ನೇಮಕಗೊಂಡಿರುವ ನೌಕರರನ್ನು ಶಾಸನವು ತನ್ನ ವ್ಯಾಪ್ತಿಗೆ ಸೇರಿಸಿಕೊಳ್ಳುವುದಿಲ್ಲ. ನಮ್ಮ ಮಸೂದೆಯಾದರೋ ಇಬ್ಬರನ್ನೂ, ಅನಿಯತ ಕೆಲಸಗಾರರನ್ನು ಮತ್ತು ಗುಮಾಸ್ತ ವರ್ಗದ ನೌಕರರನ್ನೂ ಒಳಗೊಳ್ಳುತ್ತದೆ. ಪರೀಕ್ಷಿಸಿ ನೋಡುವಾಗ ಯಾವುದೋ ಒಂದು ಸಣ್ಣ ಕಾರ್ಮಿಕ ವರ್ಗವು ಬಿಟ್ಟುಹೋಗಿದೆಯೆಂದು ಅನ್ನಿಸಿದರೂ, ಕಾರ್ಮಿಕ ಎನ್ನುವುದಕ್ಕೆ ಕೊಟ್ಟಿರುವ ವಿವರಣೆ, ವರ್ಕ್‌ಮೆನ್ಸ್ ಕಾಂಪೆನ್ಸೇಷನ್ ಆ್ಯಕ್ಟ್‌ನಲ್ಲಿರುವುದಕ್ಕಿಂತ ಹೆಚ್ಚು ವಿಸ್ತಾರವಾಗಿದೆ, ವ್ಯಾಪಕವಾಗಿದೆ ಎನ್ನುವುದನ್ನು ಶ್ರೀ ಜೋಷಿಯವರು ಒಪ್ಪಿಯಾರು. ಈ ಬೆಳಕಿನಲ್ಲಿ ಮಾನ್ಯ ಮಿತ್ರರು ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವರೆಂದು ಆಶಿಸುತ್ತೇನೆ.

*__ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)__ : ಪ್ರಸ್ತಾವನೆ ಹೀಗಿದೆ

ಮಸೂದೆಯ ೬ನೆಯ ಉಪವಿಭಾಗಕ್ಕೆ ಈ ವಾಕ್ಯವನ್ನು ಬದಲಿಯಾಗಿ ಸೇರಿಸಲಿ

"೬. ವರ್ಕ್‌ಮೆನ್ಸ್ ಕಾಂಪೆನ್ಸೇಷನ್ ಆ್ಯಕ್ಟ್ ೧೯೨೩ ಅನ್ವಯಿಸುವ ಆ ಎಲ್ಲ ನೌಕರರಿಗೂ ಈ ಶಾಸನವು ಅನ್ವಯಿಸುತ್ತದೆ".

ಪ್ರಸ್ತಾವನೆ ಬಿದ್ದುಹೋಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಮುಂದಿನ ತಿದ್ದುಪಡಿ ಸಂಖ್ಯೆ ೫. ಈಗ ತಾನೆ ಸದನವು ಇರಬೇಕೆಂದು ಒಪ್ಪಿಕೊಂಡ ೩ನೆಯ ಕಲಮನ್ನು ಇದು ಅವಲಂಬಿಸಿದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಇದು ಇನ್ನೊಂದು ತಿದ್ದುಪಡಿಗೆ ಬದಲಿಯಾಗಿಯೇ? ಈ ತಿದ್ದುಪಡಿ ಅಂಗೀಕಾರವಾದರೆ ೩ನೇ ಕಲಮಿಗೆ ತಂದ ೩ನೆಯ ತಿದ್ದುಪಡಿ ಅನಾವಶ್ಯಕವಾಗುತ್ತದೆ ಎಂದು ಭಾವಿಸಬೇಕೆ?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಆಗಸ್ಟ್ ೧೩, ೧೯೪೩, ಪು. ೭೧೧

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ ಸ್ವಾಮಿ, ಅದೂ ಇರಬೇಕು. ಎರಡು ತಿದ್ದುಪಡಿಗಳೂ ಅವಶ್ಯವಾಗಿದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಹಾಗಿದ್ದರೆ ನೀವು ತಿದ್ದುಪಡಿ ಸೂಚಿಸಲು ಏನೂ ಅಡ್ಡಿಯಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ೫ನೆಯ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"೬ನೆಯ ಕಲಮಿನ (೨)ನೆಯ ಉಪಕಲಮನ್ನು ಕೈಬಿಡಬಹುದು".

ಈ ತಿದ್ದುಪಡಿಯನ್ನು ಸಮರ್ಥಿಸಲು ಹೆಚ್ಚಿನ ವಿವರಣೆಯ ಅಗತ್ಯವಿರುವಂತೆ ಕಾಣುವುದಿಲ್ಲ. ಈ ಸದನಕ್ಕೆ ತಿಳಿದಿರುವಂತೆ, ಈ ಕಲಮಿನಿಂದಾಗಿ ಸರಕಾರೀ ನೌಕರರನ್ನೂ, ರೈಲ್ವೆ ಕೆಲಸಗಾರರನ್ನೂ ಮಸೂದೆಯ ವ್ಯಾಪ್ತಿಯೊಳಗೆ ಸೇರಿಸಲು ಬರುವುದಿಲ್ಲ. ನಾನು ಮೊದಲು ಈ ಮಸೂದೆಯನ್ನು ಸದನದಲ್ಲಿ ಓದಿದಾಗ, ಇದು ಈ ನೌಕರರ ವರ್ಗಕ್ಕೆ ಅನ್ವಯವಾಗುವಂತಿಲ್ಲದಿದ್ದರೂ, ಸರಕಾರವು ತನ್ನ ನೌಕರರಿಗೆ ಪರಿಹಾರ ಧನ ಕೊಡಲು ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಿದ್ದೆ. ದುರದೃಷ್ಟವಶಾತ್, ನನ್ನ ಭಾಷಣದಿಂದ ಕೆಲವು ಸದಸ್ಯರಿಗೆ ಸಮಾಧಾನವಾಗಿಲ್ಲ. ಆಡಳಿತಾತ್ಮಕವಾಗಿ ಜವಾಬ್ದಾರಿ ಹೊತ್ತುಕೊಳ್ಳುವ ಬದಲು ಒಂದು ಕಾನೂನಿನ ಮೂಲಕ ಜವಾಬ್ದಾರಿ ಹೊರಿಸುವುದೇ ಉತ್ತಮ ಎಂದು ಅವರು ವಾದಿಸಿದರು, ಒತ್ತಾಯಪಡಿಸಿದರು. ಅವರ ಸೂಚನೆಯನ್ನು ಒಪ್ಪಿಕೊಳ್ಳುವುದು ಸೂಕ್ತವೆಂದು ನಾನು ನಿರ್ಧರಿಸಿದೆ. ಆದ್ದರಿಂದ ಮುಂದೆ ೩ನೆಯ ಕಲಮಿಗೆ ನನ್ನ ಹೆಸರಿನಲ್ಲಿ ನಿಂತಿರುವ ತಿದ್ದುಪಡಿಯನ್ನು ಮಂಡಿಸುತ್ತೇನೆ. ಸ್ವಾಮಿ, ಈಗ ನಾನು ಅದನ್ನು ಪ್ರಸ್ತಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ ಅಬ್ದುರ್ ರಹೀಮ್)** : ತಿದ್ದುಪಡಿಯನ್ನು ಮಂಡಿಸಲಾಗಿದೆ:

"೬ನೆಯ ಕಲಮಿನ (೨)ನೆಯ ಉಪಕಲಮನ್ನು ಕೈಬಿಡಬಹುದು"

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುಲ್ ರಹೀಮ್)** : ಈಗ ಮಂಡಿತವಾಗಿರುವ ಪ್ರಸ್ತಾವನೆ:

"ತಿದ್ದುಪಡಿಯಾಗಿರುವಂತೆ ೬ನೆಯ ಕಲಮು ಮಸೂದೆಯ ಭಾಗವಾಗುತ್ತದೆ".

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

ತಿದ್ದುಪಡಿಯಾಗಿರುವ ರೂಪದಲ್ಲಿ ೬ನೆಯ ಕಲಮನ್ನು ಮಸೂದೆಗೆ ಸೇರಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈಗ ಈ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ:

"ಮಸೂದೆಯ ೭ನೆಯ ಕಲಮಿನ (೫)ನೆಯ ಉಪಕಲಮಿನ (ಜಿ) ಭಾಗದಲ್ಲಿ ಈ ಕೆಳಗಿನಂತೆ ಹೆಚ್ಚಿನ ವಿಧಿಯನ್ನು ಸೇರಿಸಬೇಕು."

"ಮೊದಲನೆಯ ಪಾವತಿಯಾದ ನಂತರ, ಕಾಲಕಾಲಕ್ಕೆ ಮಾಡುವ ಪಾವತಿ ದರವು, ಮುಂಗಡಗಳನ್ನು ನಿಧಿಗೆ ಕೇಂದ್ರ ಸರಕಾರವು ೧೧ನೇ ಖಂಡದ(೨)ನೇ ಉಪಖಂಡದಲ್ಲಿ ಹೇಳಿರುವಂತೆ ಮರುಪಾವತಿ ಮಾಡಿದ ನಂತರ ನಿಧಿಯಲ್ಲಿ ಹದಿನೈದು ಲಕ್ಷರೂಪಾಯಿಗಳಿಗಿಂತ ಹೆಚ್ಚಾಗಿರದಂತೆ ನೋಡಿಕೊಳ್ಳಬೇಕು" ಎಂದು ನಿಗದಿಪಡಿಸಲಾಗಿದೆ.

ಈ ವಿಧಿಯನ್ನೂ ಕೂಡ ಕೆಲವು ಸದಸ್ಯರ, ಉದ್ಯಮಿಗಳ ವರ್ಗವನ್ನು ಪ್ರತಿನಿಧಿಸುವ ಸದಸ್ಯರ ಭೀತಿಯನ್ನು ಪರಿಹರಿಸುವ ಸಲುವಾಗಿ ಮಾಡಲಾಗಿದೆ. ಈ ಮೊದಲು ಪ್ರಸ್ತುತ ಕಲಮು ಇರುವಂತೆ ಅದರ ಉಪಬಂಧಗಳನ್ನು ಬಳಸಿಕೊಂಡು, ನಿಧಿಯು ಏತಕ್ಕಾಗಿ ಅಗತ್ಯವಾಗಿದೆಯೋ ಆ ಅಗತ್ಯವನ್ನು ಪೂರೈಸಿದಮೇಲೂ ಅನಗತ್ಯವಾಗಿ ಭಾರೀ ಮೊತ್ತವನ್ನು ಸಂಗ್ರಹಿಸಿ ಸರಕಾರವು ನಿಧಿಯನ್ನು ಬೆಳೆಸಿಕೊಳ್ಳಬಹುದು

ಎಂದು ಅವರು ಭೀತರಾಗಿದ್ದಾರೆ. ಈ ಮೊದಲೇ ನಾನು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದೆ. ಸರಕಾರಕ್ಕೆ ಈ ಮಸೂದೆಯಲ್ಲಿ ದೊರಕುವ ಅಧಿಕಾರವನ್ನು ಉಪಯೋಗಿಸಿಕೊಂಡು ಅನಗತ್ಯವಾದ ನಿಧಿಯನ್ನು ಬೆಳೆಸಿ ಉದ್ಯಮಿಗಳಿಗೆ ಹಿಂಸೆ ಮಾಡುವ ಉದ್ದೇಶ ಖಂಡಿತವಾಗಿಯೂ ಇಲ್ಲ. ಮಾನ್ಯರೆ, ಮತ್ತೆ ನನ್ನ ಈ ಹೇಳಿಕೆಯೂ ಅವರಿಗೆ ಸಮಾಧಾನಕರವಾಗಿರಲಿಲ್ಲ. ಆದ್ದರಿಂದ ಈ ಕಲಮನ್ನು ಸೇರಿಸುವುದರ ಮೂಲಕ ಅವರಿಗೆ ಸಮಾಧಾನ ಉಂಟುಮಾಡುವುದೇ ಅತ್ಯುತ್ತಮ ಎಂದು ಭಾವಿಸಿ ಮಂಡಿಸುತ್ತಿದ್ದೇನೆ. ಈಗ ನಿಧಿಯಲ್ಲಿ ಉಳಿಯಬಹುದಾದ ಹಣ ೧೫ ಲಕ್ಷ ರೂಪಾಯಿಗಳು ಎಂದು ಮಿತಿಯನ್ನು ನಿಗದಿಗೊಳಿಸಲಾಗಿದೆ. ಈ ತಿದ್ದುಪಡಿಯ ಉದ್ದೇಶವನ್ನು ಈಗ ಅವರು ಅರ್ಥಮಾಡಿಕೊಳ್ಳುತ್ತಾರೆ, ಸರಕಾರಕ್ಕೆ ತೆರಿಗೆ ವಿಧಿಸಲು ಇರುವ ಅಧಿಕಾರವನ್ನು ಮತ್ಸರದಿಂದ ನೋಡುವವರಿಗೆ ಈಗ ತೃಪ್ತಿಯಾಗುತ್ತದೆ ಎಂದು ಭಾವಿಸುತ್ತೇನೆ. ಮಾನ್ಯರೆ, ಸೂಚನೆಯನ್ನು ಮಂಡಿಸುತ್ತೇನೆ.

***ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಪ್ರಸ್ತಾವಿಸಿರುವ ಸೂಚನೆ :

**"**ಮಸೂದೆಯ ೯ನೇ ಕಲಮಿನ (೨)ನೆಯ ಉಪಕಲಮಿನಲ್ಲಿ ಎರಡನೆಯ ಸಾಲಿನಲ್ಲಿ ಬರುವ **'**ಫೇಲ್ಸ್**'** ಎಂಬ ಪದವಾದ ನಂತರ 'ನೋಟೀಸು ಕೊಟ್ಟ ನಂತರ**'** ಎಂಬ ಪದಗಳನ್ನು ಸೇರಿಸಬೇಕು.**"**

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನೋಟೀಸು ಕೊಡಬೇಕಾದ ಅಗತ್ಯವನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ಸದಸ್ಯ ಮಿತ್ರರಿಗೆ, ನೋಟೀಸು ಕೊಡುವ ಅವಕಾಶ ಈಗಾಗಲೆ ಇದೆ ಎಂದು ತಿಳಿಸಬಯಸುತ್ತೇನೆ. ೯ನೆಯ ಕಲಮಿನಲ್ಲಿ ಕೆಲವು ಮುಖ್ಯವಾದ ಪದಗಳಿವೆ. **'**ಯೋಜನೆಗೆ ಅನುಸಾರಿಯಾಗಿ**'**, ಮಾನ್ಯ ಮಿತ್ರರು ೯ನೆಯ ಕಲಮನ್ನು ನೋಡಿದರೆ, ಯೋಜನೆ ಏನೆಂಬುದನ್ನು ವಿವರವಾಗಿ ಗಮನಿಸಿದರೆ ಅಲ್ಲೊಂದು ಉಪಕಲಮು ಇರುವುದು ಗೋಚರಿಸುತ್ತದೆ. ಅದನ್ನು ನೋಡಿಲ್ಲವಾದ್ದರಿಂದಲೇ ಈ ತಿದ್ದುಪಡಿಯನ್ನು ಅವರು ಮಂಡಿಸಿದ್ದಾರೆ ಎಂದು ನನ್ನ ಭಾವನೆ. ಈಗ ಅದೇ ೧ (viii) (ಎ) ಉಪಕಲಮು ಆಗಿದೆ. ಅಲ್ಲಿ ಹದಿನೈದು ದಿನಗಳ ನೋಟೀಸು ಕೊಡುವ ಅವಕಾಶವಿದೆ. ಆದ್ದರಿಂದ ಮಾನ್ಯ ಸದಸ್ಯರು ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತಾರೆ ಎಂದು ಆಶಿಸುತ್ತೇನೆ.

***ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಪ್ರಸ್ತಾವಿಸಿರುವ ತಿದ್ದುಪಡಿ ಹೀಗಿದೆ:

**"**ಮಸೂದೆಯ ೯ನೆಯ ಕಲಮಿನ (೨)ನೆಯ ಉಪಕಲಮಿನ ನಾಲ್ಕನೆಯ ಪಂಕ್ತಿಯಲ್ಲಿ **'**ಶಿಕ್ಷಾರ್ಹ**'** ಎಂಬ ಪದವಾದ ನಂತರ 'ಪಾವತಿ ದಿನಾಂಕದಿಂದ ಮೂವತ್ತು ದಿನಗಳ ಕೃಪಾ ಅವಧಿಯ ನಂತರ**'** ಎಂಬ ಪದಗಳನ್ನು ಸೇರಿಸಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ನನ್ನ ಮಾನ್ಯ ಮಿತ್ರರು ಹೇಳುತ್ತಿರುವ ವಿಷಯವನ್ನು ಒಪ್ಪಬೇಕಾದ ಅಗತ್ಯ ಕಾಣಿಸುತ್ತಿಲ್ಲ. ಸದನಕ್ಕೆ ಈಗಾಗಲೆ ನಾನು ಸೂಚಿಸಿರುವಂತೆ ನೋಟೀಸು ಕೊಡಲು ಅವಕಾಶ ಮಾಡಲಾಗಿದೆ. ಆ ಅವಧಿ ಈಗ ಹದಿನೈದು ದಿನ. ಅವಿಧೇಯನಾಗಿರುವ ಮಾಲೀಕನಿಗೆ ಇನ್ನಷ್ಟು ಕೃಪಾ ಅವಧಿಯ ಅವಕಾಶ ಕೊಡಲು ಮಾನ್ಯ ಮಿತ್ರರು ಏಕೆ ಪಟ್ಟು ಹಿಡಿದಿದ್ದಾರೋ ನನಗೆ ತಿಳಿಯದು. ನಮ್ಮ ಯೋಜನೆಯಲ್ಲಿ ನೋಟೀಸಿಗೆ ಅವಕಾಶ ಮಾಡಿರದಿದ್ದರೆ ಹೀಗೆ ಗ್ರೇಸ್ ಅವಧಿಯನ್ನು ಕೊಡಲು ಸಮರ್ಥನೆಯಾದರೂ ಇರುತ್ತಿತ್ತು. ಆದರೆ ಈಗಿರುವಂತೆ ನೋಟೀಸು ಅವಧಿಗೂ ಕೃಪಾ ಅವಧಿಗೂ ವ್ಯತ್ಯಾಸ ನನಗೆ ತೋರುತ್ತಿಲ್ಲ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ಆಗಸ್ಟ್ ೧೩, ೧೯೪೩, ಪು. ೭೧೩.

**ಮಾನ್ಯ ಹುಸೇನ್‌ಭಾಯ್ ಎ. ಲಾಲ್ಜೀ :** ಸ್ವಾಮಿ, ನನ್ನ ಮಾನ್ಯ ಮಿತ್ರರಾದ ಮಿ. ಅಬ್ದುರ್ ರಶೀದ್ ಚೌಧುರಿ ಮಂಡಿಸಿದ ಬೇಡಿಕೆ ನ್ಯಾಯವಾಗಿಯೇ ಇದೆ ಎಂಬುದು ನನ್ನ ಅಭಿಪ್ರಾಯ...... ಏನೇ ಇದ್ದರೂ ವ್ಯವಹಾರ ಜೀವನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅಷ್ಟೊಂದು ಜನರನ್ನು ಒಂದು ಕಟ್ಟಿಗೆ ಒಳಪಡಿಸುತ್ತಿರುವಾಗ ೧೫ ದಿನಗಳ ನೋಟೀಸು, ೧೫ ದಿನಗಳ ಗ್ರೇಸ್ ಅವಧಿ ಕೊಟ್ಟರೆ ಅಂಥ ವ್ಯತ್ಯಾಸವೇನೂ ಆಗುವುದಿಲ್ಲ. ಎಲ್ಲಾ ೩೦ ದಿನಗಳಿಗೂ ನೋಟೀಸ್ ಎಂಬ ಪದಕ್ಕಿಂತ ಗ್ರೇಸ್ ಎಂಬ ಪದವೇ ಇದ್ದರೆ ಮೇಲು ಎಂದು ನನಗನ್ನಿಸುತ್ತದೆ. ಏಕೆಂದರೆ ಅದು ಸರಕಾರವು ತಾವಾಗಿ ತೋರಿಸುವ ಕೃಪೆಯ ಅವಧಿ. ಆದ್ದರಿಂದ ನನ್ನ ಮಿತ್ರರು ನಾವು ಭಾರತೀಯರು ಜಗತ್ತಿನ ಇತರರಿಗಿಂತ ಅಪ್ರಾಮಾಣಿಕರು ಎಂದು ನಂಬುವವರ ಮಾತಿಗೆ ಕಿವಿಗೊಡಬಾರದು ಎಂದು ವಿನಂತಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಯೋಜನೆಯಲ್ಲಿ ಅವರಿಗೆ ೧೫ ದಿನಗಳ ಗ್ರೇಸ್ ಅವಧಿಯನ್ನು ಸೇರಿಸಲು ನಾನು ಸಿದ್ಧನಾಗಿದ್ದೇನೆ, ಸ್ವಾಮಿ.

***ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸೂಚನೆ ಹೀಗಿದೆ : **"**ಮಸೂದೆಯ ೧೧ನೆಯ ಕಲಮಿನ (೧) ನೆಯ ಉಪಕಲಮಿಗೆ ಈ ಕೆಳಗಿನ ಅವಕಾಶವನ್ನು ಕೂಡಿಸತಕ್ಕದ್ದು :

**"**ಸರಕಾರವು ತನ್ನ ಸೇವೆಯಲ್ಲಿರುವ ನೌಕರರಿಗೆ ಇತರ ಯಾವುದೇ ಜವಾಬ್ದಾರಿಯನ್ನು ನಿಭಾಯಿಸಲು ಈ ನಿಧಿಯಿಂದ ಪರಿಹಾರ ಧನವನ್ನು ಕೊಡತಕ್ಕದ್ದಲ್ಲ**"**.

ಸೂಚನೆ ಅಂಗೀಕೃತವಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಸೂಚಿಸುತ್ತಿದ್ದೇನೆ :

**"**ಮಸೂದೆಯ ೧೧ನೇ ಕಲಮಿನ (೩) ನೆಯ ಉಪಕಲಮಿನ ಬದಲಿಗೆ ಈ ಕೆಳಗಿನದನ್ನು ಹಾಕಬೇಕು :

(೩) ನಿಧಿಯಿಂದ ಮಾಡಬೇಕಾದ ಎಲ್ಲ ಪಾವತಿಗಳನ್ನೂ ಮಾಡಿ ಮುಗಿಸಿದ ನಂತರ ಏನಾದರೂ ಉಳಿಕೆ ಹಣ ಇದ್ದರೆ, ಅದನ್ನು ಒಂದು ನಿಧಿಯಾಗಿ ಮಾಡಿ ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರ ಸರಕಾರವು ಉಪಯೋಗಿಸಬೇಕು**"**

ನಾನು ಈ ಮೊದಲೇ ಸೂಚಿಸಿದಂತೆ ಮಸೂದೆಯನ್ನು ಮಂಡಿಸಿದಾಗ ಇದ್ದ ಮೂಲ ಪರಿಸ್ಥಿತಿ ಆ ಉಳಿಕೆ ಹಣವನ್ನು ಸರಕಾರದ ಸಾಮಾನ್ಯ ಉಪಯೋಗಗಳಿಗಾಗಿ ವೆಚ್ಚ ಮಾಡಿಕೊಳ್ಳಬಹುದು ಎಂದಾಗಿತ್ತು. ಸರಕಾರದ ಸಾಮಾನ್ಯ ರಾಜಸ್ವ ಖಾತೆಗೆ ಅದು ಸೇರಿಹೋಗುತ್ತಿತ್ತು. ಸೆಲೆಕ್ಟ್ ಸಮಿತಿಯು ಕಲಮನ್ನು ತಾನು ಬದಲಾಯಿಸಿ, ಉಳಿಕೆ ಹಣವೇನಾದರೂ ಇದ್ದರೆ ಅದು ನಿಧಿಗೆ ಕೊಡುಗೆ ನೀಡಿದ ಉದ್ಯಮಿಗಳಿಗೇ, ಅವರವರು ನೀಡಿದ ಕೊಡುಗೆಯ ಪ್ರಮಾಣಾನುಸಾರವಾಗಿ ಸಲ್ಲಬೇಕು ಎಂಬ ಅವಕಾಶ ಕಲ್ಪಿಸಿತು. ಈಗ ನಾನು ಮಂಡಿಸುತ್ತಿರುವ ತಿದ್ದುಪಡಿಯಾದರೋ ಈ ಎರಡೂ ನಿಲುವುಗಳ ನಡುವೆ ಹೊಂದಾಣಿಕೆ ಮಾಡಿದುದಾಗಿದೆ. ನಿಧಿಯನ್ನು ಸರಕಾರವು ತನ್ನ ಸಾಮಾನ್ಯೋದ್ದೇಶಗಳಿಗಾಗಿ ಬಳಸಕೂಡದು ಎಂದು ಅದು ಹೇಳುತ್ತದೆ. ಅಥವಾ ಅದನ್ನು ಮಾಲೀಕನಿಗೂ ಹಿಂದಿರುಗಿಸುವುದಿಲ್ಲ. ಬದಲಿಗೆ ಅದನ್ನೊಂದು ವಿಶ್ವಸ್ಥ ನಿಧಿಯನ್ನಾಗಿ ಮಾಡಿ ಕೇಂದ್ರ ಸರಕಾರವು ಕಾರ್ಮಿಕರ ಕಲ್ಯಾಣಕ್ಕಾಗಿ ಉಪಯೋಗಿಸುತ್ತದೆ, ನಿರ್ವಹಿಸುತ್ತದೆ. ಇದು ಬಹಳ ನ್ಯಾಯಯುತವಾದ ಮಾರ್ಗ ಎಂದು ನನ್ನ ಭಾವನೆ. ಯಾವುದೇ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ–೩, ಆಗಸ್ಟ್ ೧೩, ೧೯೪೩, ಪು . ೭೧೪–೧೫.

ಸಂಕೋಚವಿಲ್ಲದೆ ಸದನವು ಇದನ್ನು ಒಪ್ಪುತ್ತದೆ ಎಂದು ಭಾವಿಸುತ್ತೇನೆ. ಆದರೆ ಇನ್ನೂ ಕೆಲವು ಸದಸ್ಯರಿದ್ದಾರೆ. ಅವರಿಗೆ ಈ ತಿದ್ದುಪಡಿಯಲ್ಲಿ ನಿರೂಪಿತವಾಗಿರುವ ಕ್ರಮವೂ ತೃಪ್ತಿ ನೀಡುವುದಿಲ್ಲ. ತಿದ್ದುಪಡಿಯನ್ನು ಸಮರ್ಥಿಸಲು ನಾನು ಕೊಡುವ ಆಧಾರಗಳು ಹೀಗಿವೆ : ಮೊದಲನೆಯದಾಗಿ, ವಿಮಾ ನಿಧಿಗೆ ಉದ್ಯಮಿಗಳು ನೀಡುವ ಕೊಡುಗೆಯನ್ನು ಹಣಕಾಸು ಇಲಾಖೆಯು ವರಮಾನ ಎಂದೇ ಪರಿಗಣಿಸುತ್ತದೆ. ಈ ರೆವಿನ್ಯೂಗೆ ಹಣಕಾಸು ಇಲಾಖೆಯು ಪಾವತಿ ಕೊಡುತ್ತದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ವರಮಾನ ತೆರಿಗೆಯ ರೂಪದಲ್ಲೋ, ಹೆಚ್ಚುವರಿ ಲಾಭದ ತೆರಿಗೆಯ ರೂಪದಲ್ಲೋ ಭಾರತ ಸರಕಾರಕ್ಕೆ ಸಲ್ಲುವ ರೆವಿನ್ಯುವಿನಂತೆಯೇ ಇದೂ ಸೇರಬೇಕು. ಆದ್ದರಿಂದ ಈ ನಿಧಿಯ ಹೆಚ್ಚು ಭಾಗವನ್ನು ಯಾರಿಗೆ ಉದ್ದೇಶಿತವಾಗಿದೆಯೋ ಅವರೂ, ತನ್ನ ಪಾಲಿನದನ್ನು ಸರಕಾರವೂ ಉಪಯೋಗಿಸಿಕೊಂಡರೆ ಅದು ನ್ಯಾಯಯುತವಾದದ್ದೇ. ಆ ನಿಲವನ್ನು ವಿರೋಧಿಸಿ ಸವಾಲು ಹಾಕುವ ಗಂಭೀರವಾದ ವಾದ ಯಾವುದೂ ಬಂದಂತೆ ಕಾಣುವುದಿಲ್ಲ. ಆದರೆ ನಾನು ಈಗಾಗಲೇ ಹೇಳಿದಂತೆ, ಆ ನಿಲವಿನಿಂದ ನಾನು ಸರಿದಿದ್ದೇನೆ. ಈ ನಿಧಿಯನ್ನು ಸಾಮಾನ್ಯ ರೆವಿನ್ಯೂವಿನಂತೆ ವ್ಯವಹರಿಸಲು ನಾನು ಸಿದ್ಧನಾಗಿಲ್ಲ. ಆದರೆ ಕಾರ್ಮಿಕ ಕಲ್ಯಾಣಕ್ಕಾಗಿ ಉಪಯೋಗಿಸಬೇಕಾದ ಒಂದು ಬಗೆಯ ಕ್ರೆಡಿಟ್ ಫಂಡ್ ಆಗಿ ನೋಡಿಕೊಳ್ಳಲೇಬೇಕು. ಸದನದ ಮೊಗಸಾಲೆಯಲ್ಲಿ ನನ್ನ ಕಿವಿಗೆ ಬಿದ್ದವಾದ್ದರಿಂದ ಕೆಲವು ಸನ್ಮಾನ್ಯ ಸದಸ್ಯರಿಗೆ ಇದರಿಂದ ಸಮಾಧಾನವಾಗಿಲ್ಲ ಎಂದು ತೋರುತ್ತದೆ. ಅವರು ಇದನ್ನು ಬೆಣೆಯ ಚೂಪಾದ ತುದಿ ಎಂದು ಭಾವಿಸುತ್ತಾರೆ. ಸರಕಾರವು ನಿಜವಾಗಿ ಕಾರ್ಮಿಕರಿಗೋಸ್ಕರವಾಗಿ ಕೈಗಾರಿಕೆಗಳ ಮೇಲೆ ಸುಂಕ ವಿಧಿಸಲು ಪೂರ್ವನಿದರ್ಶನವಾಗುತ್ತದೆ ಎಂಬುದು ಅವರ ಭೀತಿ. ಆ ಬಗೆಯ ಭೀತಿಯನ್ನು ಬೆಳೆಸಿಕೊಂಡಿರುವವರ ಮನಸ್ಸಿಗೆ ಸಮಾಧಾನ ಉಂಟುಮಾಡಲು ಬಯಸುತ್ತೇನೆ. ಮೊದಲೂ ನಾನು ಭರವಸೆ ಕೊಟ್ಟಿದ್ದೆ, ಈ ಕಲಮನ್ನು ದುರುಪಯೋಗಪಡಿಸಿಕೊಂಡು ಕೈಗಾರಿಕೆಯ ಮೇಲೆ ತೆರಿಗೆ ಹೊರಿಸಿ ಉದ್ದೇಶಿತವಲ್ಲದ ಉದ್ದೇಶಕ್ಕಾಗಿ ಒಂದು ನಿಧಿ ಮಾಡಿಕೊಳ್ಳುವ ಇರಾದೆ ಸರಕಾರಕ್ಕೆ ಇಲ್ಲ. ಅಲ್ಲದೆ ಸರಕಾರಕ್ಕೆ ಗೋಪ್ಯವಾಗಿ ಒಂದು ಪೂರ್ವನಿದರ್ಶನವನ್ನು ಹಾಕುವುದೂ ಅನಾವಶ್ಯಕ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇನೆ. ಸರಕಾರಕ್ಕೆ ಅಧಿಕಾರವಿದೆ, ಶಕ್ತಿಯಿದೆ. ಇಲ್ಲೂ, ಇಂಗ್ಲೆಂಡಿನಲ್ಲೂ ಕಾನೂನು ಪ್ರಕಾರವೇ ಪೂರ್ವನಿದರ್ಶನಗಳನ್ನು ಸರಕಾರವು ಸ್ಥಾಪಿಸಬಹುದು. ಕಾರ್ಮಿಕರಿಗೋಸ್ಕರವಾಗಿಯೇ ವಿಶೇಷವಾದ ಮೇಲ್ತೆರಿಗೆಯೊಂದನ್ನು ಸರಕಾರ ವಿಧಿಸಬಹುದು. ಈ ಲೆವಿಯಿಂದ ಸಂಗ್ರಹವಾದ ಮೊತ್ತವನ್ನು ಕಾರ್ಮಿಕ ಕಲ್ಯಾಣಕ್ಕಾಗಿ ಕಾದಿರಿಸಲಾಗಿದೆ. ಆದ್ದರಿಂದ ಸರಕಾರವು ಮುಚ್ಚುಮರೆ ಮಾಡಿ ಗೋಪ್ಯ ರೀತಿಯಲ್ಲಿ ಪೂರ್ವನಿದರ್ಶನವನ್ನು ಸ್ಥಾಪಿಸಬೇಕಾದ ಆವಶ್ಯಕತೆಯೇನೂ ಇಲ್ಲ ಎಂದು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ. ನಮ್ಮ ಉದ್ದೇಶ ಕಾರ್ಮಿಕರಿಗೆ ಪೋಷಣೆ ಕೊಡುವುದು. ತಮ್ಮ ನೌಕರರ ಕಲ್ಯಾಣ ಕಾರ್ಯಕ್ರಮಗಳನ್ನು ಉತ್ಸಾಹದಿಂದ ಬೆಂಬಲಿಸುತ್ತಾ ಅಷ್ಟೊಂದು ಆಸಕ್ತಿ ತೋರಿಸುವ ಉದ್ಯಮಿಪತಿಗಳು, ಈಗ ಸೂಚಿಸುತ್ತಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಏಕೆ ಹಿಂಜರಿಯಬೇಕು? ಮಾನ್ಯರೆ, ಇಷ್ಟು ಹೇಳಿ ಸೂಚನೆಯನ್ನು ಮಂಡಿಸುತ್ತೇನೆ.

*ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ : ಸ್ವಾಮಿ, ನನ್ನ ಮಿತ್ರ ಮಿ. ಚಾಪ್‌ಮನ್–ಮಾರ್ಟಿಮರ್ ಹೇಳಿದ ಮಾತು ಇದು ಎಂದು ಭಾವಿಸುತ್ತೇನೆ. ನಾವು ನಮ್ಮ ಉದ್ದೇಶವನ್ನು ಬದಲಾಯಿಸುತ್ತಿದ್ದೇವೆ ಎಂದು ಅವರು ಹೇಳಿದರು. ಮೂಲತಃ ನಿಧಿಯನ್ನು ನಿರ್ಮಿಸಹೊರಟಿದ್ದು ಪರಿಹಾರ ಧನ ಕೊಡಲೋಸುಗ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ನಂ. ೩, ಆಗಸ್ಟ್ ೧೩, ೧೯೪೩, ಪು. ೭೧೮.

ಈಗ ನಾವು ಅದರ ಉಳಿಕೆಯನ್ನು ಕಲ್ಯಾಣ ಕಾರ್ಯಕ್ರಮಗಳಿಗಾಗಿ ಬಳಸಲು ಹೊರಟಿದ್ದೇವೆ. ಹೌದು, ಇದು ಉದ್ದೇಶದ ಬದಲಾವಣೆಯೇ ಸರಿ, ಆದರೆ ಅದರಲ್ಲಿ ಅನುಚಿತವಾದದ್ದು ಏನೂ ಇಲ್ಲ ಎಂದು ಈಗಲೂ ನಾನು ಹೇಳುತ್ತೇನೆ. ನಾನು ಮಾರ್ಟಿಮರ್ ಅವರ ವಾದವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಅವರ ನಿಲುವು ಹೀಗೆ ಆಯವ್ಯಯ ರಚನೆಯಲ್ಲಿ ಹಿಂದಿನಿಂದಲೂ ರೂಢಿಯಾಗಿಬಂದ ಮೂಲ ತತ್ವವನ್ನು ಹಿಡಿದು ಅವರು ಮಾತನಾಡುತ್ತಿದ್ದಾರೆ ಎನ್ನುತ್ತೇನೆ ನಾನು. ಶಾಸನ ಸಭೆಯು ಹಣವನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಮಂಜೂರು ಮಾಡಿರುವಾಗ, ಆ ಉದ್ದೇಶದೊಳಗೆ ಸೇರಿಲ್ಲದ ಬೇರಾವುದೋ ಒಂದು ಕಾರಣಕ್ಕಾಗಿ ಆ ಹಣವನ್ನು ಬಳಸಕೂಡದು ಎಂಬುದೇ ಆ ತತ್ವ. ಅದನ್ನು ನಾನೂ ಒಪ್ಪುತ್ತೇನೆ. ಆದರೆ ಅದೇನಿದ್ದರೂ ಕಾರ್ಯಾಂಗವು ಕೈಗೊಳ್ಳಬೇಕಾದ ಕ್ರಮಕ್ಕೆ ಸಂಬಂಧಿಸಿದ ವಿಚಾರ. ನಾನು ಕಾರ್ಯಾಂಗದ ಪ್ರಕಾರ ಕ್ರಮ ಕೈಗೊಂಡು ನಿಧಿಯನ್ನು ಬಳಸಲು ಇಚ್ಛಿಸುವುದಿಲ್ಲ. ಯಾವುದೇ ಅನುಚಿತ ಕಾರ್ಯ ಮಾಡಿ ಅಪರಾಧಿಯಾಗಬಾರದೆಂಬ ಕಾರಣದಿಂದಲೇ, ನಾನು ಈ ಸದನದ ಎದುರು ನಿಂತಿದ್ದೇನೆ. ಇಡೀ ಸದನವು ನಿಜವಾಗಿ ಪ್ರಯೋಜನಕಾರಿ ಎಂದು ಸಮ್ಮತಿಸುವ ಬೇರೆ ಒಂದು ಉದ್ದೇಶಕ್ಕಾಗಿ ನಿಧಿಯ ಉಳಿಕೆ ಹಣವನ್ನು ವಿನಿಯೋಗಿಸಲು ಸದನದ ಮಂಜೂರಾತಿಯನ್ನು ಕೋರುತ್ತಿರುವುದರಿಂದ ನಾವು ಮೂಲ ಉದ್ದೇಶವನ್ನು ಬದಲಾವಣೆ ಮಾಡಿದೆವು ಎಂಬ ಅಪರಾಧಿ ಭಾವನೆ ನಮಗಿಲ್ಲ. ಈ ಕ್ರಮದಲ್ಲಿ ಅನುಚಿತವಾದದ್ದು ಏನೂ ಇಲ್ಲ ಎಂದು ವಿನಂತಿಸುತ್ತೇನೆ.

ಇನ್ನು **'ಕಲ್ಯಾಣ'** (Welfare) ಎನ್ನುವುದು ಒಂದು ವ್ಯಾಪಕ ಪದ ಎಂದು ಆಕ್ಷೇಪ ಎತ್ತಲಾಗಿದೆ. ಅದು ಒಂದು ಸರ್ವವ್ಯಾಪಕವಾದ ಪದ ಎಂಬುದನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಈ ಸದನವು ಏಕಾಭಿಪ್ರಾಯದಿಂದ ಒಪ್ಪುವ ಯಾವ ಯಾವ ಅಂಶಗಳನ್ನು ಅಳವಡಿಸಲಾಗುತ್ತದೆ ಎನ್ನುವುದನ್ನು ನಾನೂ ಹೇಳುವ ಸ್ಥಿತಿಯಲ್ಲಿಲ್ಲ. ಆದ್ದರಿಂದ **'ಯೋಗಕ್ಷೇಮ'** ಅಥವಾ **'ಕಲ್ಯಾಣ'** ಎನ್ನುವ ಪದದಲ್ಲಿ ಏನು ಅಡಕವಾಗುತ್ತದೆಂದು ನಾವೀಗ ನಿರ್ದಿಷ್ಟಪಡಿಸುವುದಿಲ್ಲ. ಆದರೆ ಒಂದು ವಿಷಯ. **'ಕಲ್ಯಾಣ'** ಎಂಬ ಪದಕ್ಕೆ ಅರ್ಥ ತಿಳಿಯದ ಮಾನ್ಯ ಸದಸ್ಯರ ಸಲುವಾಗಿ ಹಾಗೂ ಸರಕಾರವು ಈ ನಿಧಿಯನ್ನು ವ್ಯವಹರಿಸುವುದಕ್ಕೆ ಬಿಡಬಾರದಿತ್ತು ಎಂದು ಭಾವಿಸುವ ಸದಸ್ಯರ ಸಲುವಾಗಿ ಒಂದು ಮಾತು ಹೇಳುತ್ತೇನೆ. ಇಷ್ಟೆಲ್ಲ ಆದರೂ ವಿಷಯವು ಈ ಸದನದ ಕೈಲೇ ಇದೆ. ಈ ಹಣವನ್ನು ಹೇಗೆ ಉಪಯೋಗಿಸಬೇಕು ಎಂದು ಹೇಳುವ ಪ್ರಶ್ನೆ ಎತ್ತುವ ಅನೇಕಾನೇಕ ಅವಕಾಶಗಳು ಸದಸ್ಯರಿಗೆ ದೊರಕುತ್ತವೆ. ಆ ಸಮಯದಲ್ಲಿ **'ಕಲ್ಯಾಣ ಕಾರ್ಯಕ್ರಮ'** ಎಂದರೇನೆಂದು ತಿಳಿದವರು ವಿವರಿಸಬಹುದು. ಮಾನ್ಯರೆ, ಈಗ ನನ್ನ ಪ್ರಸ್ತಾವನೆಯನ್ನು ಅಂಗೀಕರಿಸುವಂತೆ ಸದನಕ್ಕೆ ಸಲಹೆ ಮಾಡಬಹುದು.

*__ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)__ : ಈಗಿರುವ ಪ್ರಸ್ತಾವನೆ "ಮಸೂದೆಯ ೩ನೆಯ ಕಲಮಿನ (೧)ನೆಯ ಉಪಕಲಮಿಗೆ ಈ ಕೆಳಗಿನ ಉಪಬಂಧವನ್ನು ಸೇರಿಸಬೇಕು" :

**"**ಮಾಲೀಕನು ಒಂದು ವಿಮಾ ಪಾಲಿಸಿಯನ್ನು ತೆಗೆದುಕೊಂಡು ೯ನೇ ಖಂಡದ (೧)ನೇ ಯೋಜನೆಯ ಉಪಖಂಡಗಳ ಪ್ರಕಾರ ಎಲ್ಲ ಪ್ರೀಮಿಯಂ ಹಣವನ್ನು ಕಟ್ಟಿ ಮುಗಿಸಿದ್ದರೆ, ಅಥವಾ ೧೨ನೇ ಖಂಡದ (೧)ನೇ ಉಪಖಂಡದಂತೆ ಉದ್ಯಮಿಯೂ ವಿಮೆ ಮಾಡಿಸಬೇಕಾದ ಅಗತ್ಯವಿರದಿದ್ದರೆ – ಅಂತಹ ಸಂದರ್ಭಗಳಲ್ಲಿ ಕೇಂದ್ರ ಸರಕಾರವು ಮಾಲೀಕನ ಪರವಾಗಿ ಪರಿಹಾರ ಧನವನ್ನು ಪಾವತಿ ಮಾಡುವ ಹೊಣೆಯನ್ನು ನಿರ್ವಹಿಸುತ್ತದೆ**"**.

ಸೂಚನೆಯು ಅಂಗೀಕೃತವಾಯಿತು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನಾನು ಪ್ರಸ್ತಾವನೆ ಮಂಡಿಸುತ್ತಿದ್ದೇನೆ.

"ಮಸೂದೆಯ ೩ನೇ ಕಲಮಿಗೆ ಈ ಕೆಳಗಿನಂತೆ ಹೊಸ ಉಪಕಲಮನ್ನು ಸೇರಿಸಬೇಕು".

'(೩) ಈ ಖಂಡಕ್ಕೆ ಆಧಿಪತ್ಯವು ಬದ್ಧವಾಗಿರುತ್ತದೆ.'

ನಾವೀಗ ಚಕ್ರವರ್ತಿಯನ್ನು ಈ ಮಸೂದೆಯ ಉಪಬಂಧಗಳಿಗೆ ಕಾನೂನು ಪ್ರಕಾರ ಬದ್ಧವಾಗುವಂತೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಈ ಮಾತುಗಳೊಂದಿಗೆ ಪ್ರಸ್ತಾವನೆಯನ್ನು ಮಂಡಿಸುತ್ತೇನೆ.

*ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸೂಚಿತವಾಗಿರುವ ತಿದ್ದುಪಡಿ ಹೀಗಿದೆ :

"ಮಸೂದೆಯ ೧೩ನೆಯ ಕಲಮಿನ (೧)ನೆಯ ಉಪಕಲಮಿನಲ್ಲಿ (ಬಿ) ವಿಭಾಗವನ್ನು ಕೈಬಿಡಬೇಕು".

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಸ್ವಾಮಿ, ನನಗೆ ಸಾಕಷ್ಟು ಮಟ್ಟಿನ ಸಂಸ್ಕೃತಿಯಿಲ್ಲದಿರಬಹುದು, ಆದರೆ ಸಾಕಷ್ಟು ಮಟ್ಟದ ಬುದ್ಧಿಶಕ್ತಿಯಿದೆ. ನನಗಿರುವ ಬುದ್ಧಿಯನ್ನು ಪ್ರಯೋಗಿಸಿ ಈ ಉಪಕಲಮನ್ನು ಪರಿಶೀಲಿಸಿದರೆ ನನ್ನ ಮಾನ್ಯ ಮಿತ್ರರು ಇದರ ಉದ್ದೇಶವನ್ನೂ, ಅಗತ್ಯವನ್ನೂ ಪೂರ್ತಿ ತಪ್ಪಾಗಿ ತಿಳಿದುಕೊಂಡಿರುವುದು ವೇದ್ಯವಾಗುತ್ತದೆ. ಈ ಉಪಕಲಮಿನ ಉದ್ದೇಶ ಹಿಂಸೆ ಮಾಡುವುದೂ ಅಲ್ಲ, ಜಪ್ತಿ ಆದೇಶ ಪಡೆಯುವುದೂ ಅಲ್ಲ. ಮಾಹಿತಿಯನ್ನು ಪಡೆಯುವುದಕ್ಕೆ, ಮಾಹಿತಿಯನ್ನು ಹುಡುಕುವುದಕ್ಕೆ ಇದರಿಂದ ಸಹಾಯವಾಗುತ್ತದೆ ಅಷ್ಟೆ ಸ್ವಾಮಿ, ಇಂತಹ ಸಂದರ್ಭದಲ್ಲಿ ಕರಾರುವಾಕ್ಕಾದ ಮಾಹಿತಿ ಏಕೆ ಅಗತ್ಯವಾಗಿದೆ ಎಂಬುದನ್ನು ತಿಳಿಸಬಯಸುತ್ತೇನೆ. ವಂಚಕನಾದ ಒಬ್ಬ ಮಾಲೀಕನು, ನಿದರ್ಶನಕ್ಕೆ, ಸುಳ್ಳು ಮಾಹಿತಿ ಕೊಡಬಹುದು, ದೋಷಪೂರ್ಣ ಮಾಹಿತಿ ನೀಡಬಹುದು, ತನ್ನ ವೇತನಪಟ್ಟಿಯನ್ನು ಇರುವುದಕ್ಕಿಂತ ಕಡಮೆ ಮಾಡಿ ಕೊಡಬಹುದು, ತನ್ನಲ್ಲಿ ಕೆಲಸಕ್ಕಿರುವ ಕಾರ್ಮಿಕರ ಸಂಖ್ಯೆಯನ್ನು ಕಡಮೆ ಮಾಡಿ ಹೇಳಬಹುದು. ವಿಮಾ ಪ್ರೀಮಿಯಂ ಅನ್ನು ಅವನು ಒದಗಿಸುವ ಮಾಹಿತಿಯ ಆಧಾರದಿಂದ ತಾನೆ ನಿಗದಿ ಪಡಿಸುವುದು? ಇದರಿಂದಾಗಿ ನ್ಯಾಯಪರರಾದ, ಸಜ್ಜನರಾದ ಮಾಲೀಕರು ಅನಗತ್ಯವಾಗಿ ದಂಡ ತೆರಬೇಕಾಗುತ್ತದೆ, ಒಬ್ಬ ವಂಚಕ ಮಾಲೀಕನ ಕುಯುಕ್ತಿಯಿಂದಾಗಿ ಇವರು ಹೆಚ್ಚಿನ ಹಣವನ್ನು ತೆರಬೇಕಾಗುತ್ತದೆ, ಸುಳ್ಳು ಸುದ್ದಿ ಒದಗಿಸಿ ಕಾನೂನು ವಿಧಿಸುವ ಹೊಣೆಗಾರಿಕೆಯನ್ನು ಅವರು ತಪ್ಪಿಸಿಕೊಳ್ಳಲು ಹವಣಿಸುತ್ತಾರಾದ್ದರಿಂದ. ಹಾಗಾಗಿ ಈ ಉಪವಿಭಾಗ ಅತ್ಯಂತ ಅಗತ್ಯವಾಗಿದೆ. ಉದ್ಯಮಿಗಳ ಹಿತದೃಷ್ಟಿಯಿಂದಲೇ ಅದು ಅಗತ್ಯವಾಗಿದೆ. ಸರಕಾರಕ್ಕೆ ಸರಿಯಾದ ಮಾಹಿತಿ ಬಂದಿಲ್ಲ ಎಂದು ಅನುಮಾನ ಬಂದಾಗ ಕರಾರುವಾಕ್ಕಾದ ಮಾಹಿತಿ ಪಡೆಯಲು ಅಧಿಕಾರ ಪಡೆದಿರಬೇಕು. ಅದೇ ಇಡೀ ವ್ಯವಸ್ಥೆಯು ನಿಂತಿರುವ ಆಧಾರ ಶಿಲೆ. ಅದಕ್ಕೆ ಅವಕಾಶ ಮಾಡಿಕೊಡುವ ಕಾನೂನನ್ನು ಏಕೆ ಆಕ್ಷೇಪಿಸಬೇಕೆಂದು ನನಗೆ ತಿಳಿಯುವುದಿಲ್ಲ. ಮಾನ್ಯರೆ, ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ನಂ. ೩, ಆಗಸ್ಟ್ ೧೩, ೧೯೪೩, ಪು. ೭೧೯.

# ೧೯
# ಸರ್ವ ಕಾರ್ಮಿಕರ ಬಹಿರಂಗ ಸಮ್ಮೇಳನದ ಮೊದಲನೆಯ ಅಧಿವೇಶನ *

## ಸಾಮಾಜಿಕ ಭದ್ರತೆಯನ್ನು ಕುರಿತು ಡಾ॥ ಅಂಬೇಡ್ಕರ್

ಸೆಪ್ಟೆಂಬರ್ ೬ನೆಯ ತಾರೀಕು ಸೋಮವಾರ ನವದೆಹಲಿಯಲ್ಲಿ ನಡೆದ ಸಮಗ್ರ ಕಾರ್ಮಿಕ ಸಮ್ಮೇಳನದ ಮೊದಲನೆಯ ಅಧಿವೇಶನದಲ್ಲಿ ಸರಕಾರದ ಲೇಬರ್ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅವರು ಮಾಡಿದ ಭಾಷಣದ ಪೂರ್ಣಪಾಠ :–

“ಈ ಸಮಗ್ರ ಕಾರ್ಮಿಕ ಸಮ್ಮೇಳನಕ್ಕೆ ನಿಮ್ಮೆಲ್ಲರನ್ನೂ ನಾನು ಸ್ವಾಗತಿಸುತ್ತೇನೆ. ಹದಿಮೂರು ತಿಂಗಳ ಹಿಂದೆ, ಕಳೆದ ವರ್ಷದ ಆಗಸ್ಟ್ ೭ರಂದು ಪ್ರಾಂತೀಯ ಸರಕಾರಗಳು, ಭಾರತೀಯ ಸಂಸ್ಥಾನಗಳು, ಉದ್ಯಮಪತಿಗಳು ಮತ್ತು ಕಾರ್ಮಿಕರು ಇವರ ಪ್ರತಿನಿಧಿಗಳನ್ನು ಭಾರತ ಸರಕಾರವು ದೆಹಲಿಗೆ ಆಹ್ವಾನಿಸಿ ಒಂದು ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನ ನಡೆಸುವಂತೆ ಮಾಡಿತ್ತು.

“ಅಂಥದೊಂದು ಸಮ್ಮೇಳನವನ್ನು ಕರೆಯಲು ಎರಡು ಉದ್ದೇಶಗಳಿದ್ದುವು. ಮೂರು ಪಕ್ಷಗಳಾದ ಸರಕಾರ, ಮಾಲೀಕರು ಮತ್ತು ಕಾರ್ಮಿಕರು ಪರಸ್ಪರ ಜವಾಬ್ದಾರಿಯನ್ನು ಅರಿತು ಪರಸ್ಪರರ ಅಭಿಪ್ರಾಯಗಳಿಗೆ ಗೌರವ ಕೊಡದೆ ಹೋದರೆ, ಕೊಡುಕೊಳ್ಳುವ ಭಾವನೆಯಿಂದ ಕೆಲಸ ಮಾಡದೆ ಹೋದರೆ ಕೈಗಾರಿಕಾ ಸಮಸ್ಯೆಗಳನ್ನಾಗಲಿ, ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನಾಗಲಿ ಪರಿಹರಿಸುವುದು ಸಾಧ್ಯವೇ ಇಲ್ಲ ಎಂಬ ವಿಚಾರ ಸಾಕಷ್ಟು ಸಮಯದಿಂದ ಹರಳುಗಟ್ಟಿತ್ತು. ಒಬ್ಬರು ಇನ್ನೊಬ್ಬರ ಬಗೆಗೆ ಹಗುರವಾಗಿ ಮಾತನಾಡುವುದು ನಿಂತ ಹೊರತು ಆ ಬಗೆಯ ಪರಸ್ಪರ ಗೌರವ ಮತ್ತು ಹೊಣೆಗಾರಿಕೆ ಬೆಳೆಯುವ ಸಾಧ್ಯತೆಯೇ ಇರಲಿಲ್ಲ. ಮೂರೂ ಪಕ್ಷಗಳನ್ನು ಒಂದು ಕಡೆ ಸೇರಿಸಿ ಚರ್ಚೆ ಮಾಡಿ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವಂತೆ ಮಾಡುವುದು ಸೂಕ್ತ, ಇದಕ್ಕೊಂದು ಯೋಜನೆ ಸಿದ್ಧವಾಗಬೇಕು ಎಂಬ ವಿಚಾರ ಬಂದಿತು.

“ತ್ರಿಪಕ್ಷೀಯ ಸಮ್ಮೇಳನ ನಡೆಸಬೇಕೆಂಬ ವಿಚಾರವಿದ್ದರೂ, ಯುದ್ಧ ಸಂದರ್ಭವೂ ಒದಗಿಬಂದು ಕಾರ್ಮಿಕರ ನೈತಿಕ ಸ್ಥೈರ್ಯವನ್ನು ಕಾಪಾಡುವುದು ತುರ್ತು ಮತ್ತು ಅಗತ್ಯವೂ ಆಗಿರದೆ ಹೋಗಿದ್ದರೆ ಇಷ್ಟು ಬೇಗ ಇದು ಕಾರ್ಯರೂಪಕ್ಕೆ ಬರುತ್ತಿದ್ದುದು ಸಂದೇಹ. ಯುದ್ಧವು ಬೇರೊಂದು ರೀತಿಯಲ್ಲಿ ತ್ರಿಪಕ್ಷೀಯ ಸಮ್ಮೇಳನವನ್ನು ತುರ್ತಾಗಿ ಜರುಗಿಸುವಂತೆ ಮಾಡಿದೆ.

### ದಿಟ್ಟತನದ ನೀತಿ

“ಯುದ್ಧದ ಒತ್ತಡದಲ್ಲಿ ಭಾರತ ಸರಕಾರವು ಕೈಗಾರಿಕಾ ಸಮಸ್ಯೆಗಳನ್ನೂ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳನ್ನು ಕುರಿತ ಸಮಸ್ಯೆಗಳನ್ನೂ ಶೀಘ್ರವಾಗಿ ಪರಿಹರಿಸಬೇಕಾಗಿ ಬಂದಿತು. ಅತ್ಯಂತ ಧೈರ್ಯದ, ದಿಟ್ಟತನದ ಕ್ರಮ ಕೈಗೊಳ್ಳಲು ಸರಕಾರವು ಹಿಂಜರಿಯಲಿಲ್ಲ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

“ಕುಶಲಿಗಳಲ್ಲದವರಿಗೆ ಸೂಕ್ತ ತಾಂತ್ರಿಕ ತರಬೇತಿ ನೀಡಿ ಅವರನ್ನು ಕುಶಲ ಕಾರ್ಮಿಕರನ್ನಾಗಿ

---

* ಇಂಡಿಯನ್ ಇನ್‌ಫರ್ಮೇಷನ್, ಸೆಪ್ಟೆಂಬರ್ ೧೫, ೧೯೪೩, ಪು. ೧೪೩–೪೪

ಮಾಡುವುದಕ್ಕೆ ಅಸಂಖ್ಯಾತ ತರಬೇತಿ ಶಾಲೆಗಳನ್ನು ಸರಕಾರವು ಪ್ರಾರಂಭಿಸಿತು.

"ಚಾಲ್ತಿಯಲ್ಲಿರುವ ಕಾರ್ಮಿಕ ಸಂಹಿತೆಯಲ್ಲಿ (ಲೇಬರ್ ಕೋಡ್) ದೂರವ್ಯಾಪಿ ಮಹತ್ವವುಳ್ಳ, ಸಂಪ್ರದಾಯದಿಂದ ಬೇರೆಯಾಗಿರುವುದನ್ನು ಸ್ಪಷ್ಟವಾಗಿ ತೋರಿಸುವ ಎರಡು ನೂತನ ತತ್ವಗಳನ್ನು ಅಳವಡಿಸಿಕೊಂಡಿತು.

"ನ್ಯಾಯಯುತವಾದ ವೇತನವನ್ನೂ, ಉತ್ತಮ ಸೇವಾ ಸನ್ನಿವೇಶಗಳನ್ನು ವಿಧಿಸುವ ಹಕ್ಕನ್ನೂ, ಹೊಣೆಗಾರಿಕೆಯನ್ನೂ ತನ್ನ ಕರ್ತವ್ಯವೆಂಬಂತೆ ಸ್ವೀಕರಿಸಿತು.

"ಮಾಲೀಕರ ಮತ್ತು ಕಾರ್ಮಿಕರ ವಿವಾದಗಳನ್ನು ಪಂಚಾಯಿತಿಗೆ ಒಪ್ಪಿಸುವಂತೆ ಒತ್ತಾಯಪಡಿಸುವುದನ್ನು ತನ್ನ ಕರ್ತವ್ಯ ಮತ್ತು ಹೊಣೆಗಾರಿಕೆ ಎಂಬಂತೆ ತನ್ನ ಹೆಗಲಿಗೆ ಕಟ್ಟಿಕೊಂಡಿತು. ಅಷ್ಟೇ ಅಲ್ಲ, ಭಾರತ ಸರಕಾರವು ನೌಕರರ ಯೋಗಕ್ಷೇಮಕ್ಕಾಗಿ ಏನು ಮಾಡಬೇಕು ಎಂದು ನಿರ್ದೇಶನ ನೀಡಿ ಸುಮ್ಮನೆ ಕೂರದೆ, ತನ್ನದೇ ಆದ ಒಂದು ಏಜನ್ಸಿಯನ್ನು ನೇಮಿಸಿ ತನ್ನ ಆದೇಶಗಳು ಜಾರಿಗೆ ಬರುವಂತೆ ನೋಡಿಕೊಳ್ಳುವ ಹೊಣೆಯನ್ನೂ ಹೊತ್ತುಕೊಂಡಿತು.

"ಈ ದಿಟ್ಟ ನೀತಿಯನ್ನು ಸರಕಾರವು ತಾನಾಗಿ ತನ್ನದೇ ಪ್ರೇರಣೆಯಿಂದ ಕೈಗೊಂಡಿತು. ಆದರೂ, ಭಾರತ ಸರಕಾರದ ಲೇಬರ್ ನೀತಿಯ ಹಿತದೃಷ್ಟಿಯಿಂದ, ಒಂದು ವ್ಯವಸ್ಥೆಯನ್ನು ರೂಪಿಸಿ, ಪ್ರಾಂತೀಯ ಮತ್ತು ಸಂಸ್ಥಾನ ಸರಕಾರಗಳಿಂದ, ಮಾಲೀಕರು ಮತ್ತು ಕಾರ್ಮಿಕರಿಂದ ಸಲಹೆ ಪಡೆದು, ಧೈರ್ಯವಾಗಿ ಕೆಲಸ ಮಾಡಿ, ತನ್ನ ಹೆಗಲ ಮೇಲೆ ಬಿದ್ದ ನೂತನ ಹೊಣೆಗಳನ್ನು ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಳ್ಳಬೇಕು ಎಂದು ಭಾವಿಸಿತು.

**ಎರಡು ಸಂಸ್ಥೆಗಳ ರಚನೆ**

"ಈ ಇಮ್ಮಡಿ ಉದ್ದೇಶದಿಂದ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಕರೆಯಲಾಯಿತು. ಕಾರ್ಮಿಕ ಕಲ್ಯಾಣ ಸಂಬಂಧದ ಕೈಗಾರಿಕಾ ಸಮಸ್ಯೆಗಳನ್ನು ಶಾಸಕಾಂಗ, ಕಾರ್ಯಾಂಗಗಳೆರಡೂ ಹಂತಗಳಲ್ಲಿ ಚರ್ಚಿಸುವುದಕ್ಕೂ, ಆ ಸಮಸ್ಯೆಗಳನ್ನು ಅತ್ಯಂತ ವಿಹಿತವಾಗಿ ವ್ಯವಹರಿಸುವುದು ಹೇಗೆಂದು ಭಾರತ ಸರಕಾರಕ್ಕೆ ಸಲಹೆ ನೀಡುವುದಕ್ಕೂ ಒಂದು ಖಾಯಂ ಆದ ಮತ್ತು ಪ್ರಾತಿನಿಧಿಕವಾದ ಸಂಸ್ಥೆಯನ್ನು ರೂಪಿಸುವ ಸಮಯ ಬಂದಿಲ್ಲವೆ ಎಂದು ಸಮ್ಮೇಳನವನ್ನು ಕೇಳುವುದಿತ್ತು. ಆಗ ಹಾಜರಿದ್ದ ಪ್ರತಿನಿಧಿಗಳು ಸರ್ವಾನುಮತದಿಂದ ಸೂಚನೆಯನ್ನು ಅಂಗೀಕರಿಸಿದರು ಮತ್ತು ಎರಡು ವ್ಯವಸ್ಥೆಗಳನ್ನು ರೂಪಿಸಲು ನಿರ್ಣಯಿಸಿದರು. ಅವುಗಳಲ್ಲಿ ದೊಡ್ಡದನ್ನು ಸಮಗ್ರ ಕಾರ್ಮಿಕ ಸಮ್ಮೇಳನ (Plenary Labour Conference) ಎಂದೂ, ಚಿಕ್ಕದನ್ನು ಸ್ಥಾಯಿ ಕಾರ್ಮಿಕ ಸಮಿತಿ ಎಂದೂ ಕರೆಯಲಾಯಿತು.

"ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಉಗಮ ಯುದ್ಧದ ಒತ್ತಡ ಪರಿಸ್ಥಿತಿಯಲ್ಲಿ ಆದದ್ದು. ಆದರೆ ಯುದ್ಧ ಮುಗಿದ ಮೇಲೂ ಅದು ಇರುತ್ತದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ನಮ್ಮ ದೇಶದ ಆರ್ಥಿಕ ರಚನೆಯಲ್ಲಿ ಒಂದು ಖಾಯಂ ಸ್ಥಾನವು ಅದಕ್ಕಿರುತ್ತದೆ.

"ಕೈಗಾರಿಕಾ ಮತ್ತು ಕಾರ್ಮಿಕ ಸಮಸ್ಯೆಗಳನ್ನು ಕುರಿತ ಚರ್ಚೆಗೆ ಇಂಥದೊಂದು ಪ್ರಾತಿನಿಧಿಕ ವೇದಿಕೆಯನ್ನು ರಚಿಸಲು ಕೈಗೊಂಡ ನಿರ್ಧಾರವನ್ನು ಯಾರೂ ಶಂಕಿಸಲಾರರು. ಕಳೆದ ೧೩ ತಿಂಗಳಲ್ಲಿ ಮಾಡಿರುವ ಕೆಲಸಗಳನ್ನು ಒಮ್ಮೆ ನೋಡಿದರೆ ಸಾಕು, ಸಂದೇಹಗಳು ತಾವಾಗಿ ಮಾಯವಾಗುವುವು.

"೧೯೪೨ರ ಆಗಸ್ಟ್ ೭ನೆಯ ತಾರೀಕು ಈ ಎರಡೂ ಅಂಗಗಳು ಅಸ್ತಿತ್ವಕ್ಕೆ ಬಂದವು. ಇಲ್ಲಿಯವರೆಗೆ

ಸ್ಥಾಯಿ ಕಾರ್ಮಿಕ ಸಮಿತಿಯ ಮೂರು ಸಭೆಗಳಾಗಿವೆ. ಸ್ಥಾಯಿ ಕಾರ್ಮಿಕ ಸಮಿತಿಯ ಮೊದಲನೆಯ ಸಭೆಗೆ ಇಟ್ಟಿದ್ದ ಕಾರ್ಯಸೂಚಿಯಲ್ಲಿ ಯುದ್ಧಕಾಲದ ಕಾರ್ಮಿಕ ಶಾಸನ ರಚನೆ; ವ್ಯಾಜ್ಯಗಳ ಪರಿಹಾರ, ಗೈರುಹಾಜರಾತಿ, ಕೆಲಸದ ಅವಧಿ, ಕೈಗಾರಿಕಾ ಬಳಲಿಕೆ, ಆರೋಗ್ಯ ಸಂಶೋಧನಾ ಮಂಡಲಿಗಳು, ಕಾರ್ಮಿಕರ ಗಳಿಕೆ, ತುಟ್ಟಿಭತ್ಯೆ, ಲಾಭದ ಬೋನಸ್‌ಗಳು, ಉಳಿತಾಯ, ಕಲ್ಯಾಣ ಕಾರ್ಯಕ್ರಮಗಳು, ಮೂಲಬೆಲೆಗೆ ಧಾನ್ಯ ಮಾರುವ ಅಂಗಡಿಗಳು, ಎ.ಆರ್.ಪಿ. ಗಾಗಿ ಜಂಟಿ ಸಮಿತಿ, ಮತ್ತು ಕಲ್ಯಾಣ ಕಾರ್ಯಕ್ರಮ; ಚಿಲ್ಲರೆಯ ಅಭಾವದಿಂದ ವೇತನವನ್ನು ಮುಂದಿನ ಮೂಲಾಂಶಕ್ಕೆ ತುಂಬಿಸುವುದು – ಇವು ಸೇರಿದ್ದವು.

“ಎರಡನೆಯ ಸಭೆಯ ಕಾರ್ಯಸೂಚಿಯಲ್ಲಿ, ಕಾರ್ಮಿಕರಿಗೆ ಅಗತ್ಯವಾದ ಆಹಾರ ವಸ್ತುಗಳ ಪೂರೈಕೆ, ಭಾರತ ರಕ್ಷಣಾ ಕಾನೂನಿನ ೮೧–ಅನೇ ನಿಯಮದ ಅನ್ವಯ ಜಂಟಿ ನ್ಯಾಯ ತೀರ್ಮಾನ ಮತ್ತು ಮುಂದೂಡಿದ ಬೋನಸ್ ಪಾವತಿ ವಿಚಾರಗಳು ಸೇರಿದ್ದವು.

“ಮೂರನೆಯ ಸಭೆಯು ಸರಕಾರೀ ಗುತ್ತಿಗೆಗಳಲ್ಲಿ ನ್ಯಾಯಯುತವಾದ ಕೂಲಿ ದರ ಕುರಿತ ಉಪವಿಭಾಗ, ಜಂಟಿ ಉತ್ಪಾದನಾ ಸಮಿತಿಗಳು, ಔದ್ಯೋಗಿಕ ಸ್ಥಾವರಗಳಲ್ಲಿ ಲೇಬರ್ ಅಧಿಕಾರಿಗಳ ನೇಮಕಾತಿ, ಡಿಫೆನ್ಸ್ ಆಫ್ ಇಂಡಿಯಾ ನಿಯಮ ೮೧–ಎ ಕಾರ್ಯವಿಧಾನ, ಉದ್ಯೋಗ ವಿನಿಮಯ ಕೇಂದ್ರಗಳ ಸ್ಥಾಪನೆ, ಕೈಗಾರಿಕಾ ಅಂಕಿಅಂಶಗಳ ಅಧಿನಿಯಮ ಪ್ರಕಾರ ಅಂಕಿಅಂಶಗಳ ಸಂಗ್ರಹಣ– ಇವುಗಳಿಗೆ ಮೀಸಲಾಗಿದ್ದಿತು.

“ಇದರಿಂದ ಸ್ಥಾಯಿ ಕಾರ್ಮಿಕ ಸಮಿತಿಯು ಎಷ್ಟು ವ್ಯಾಪಕವಾದ ವಿಷಯಗಳನ್ನು ಚರ್ಚಿಸಿದೆ ಎಂಬ ವಿಚಾರ ನಮಗೆ ಗೊತ್ತಾಗುತ್ತದೆ. ಆದರೆ ಚರ್ಚಿತ ವಿಷಯಗಳಲ್ಲಿ ಸರ್ವಾನುಮತದ ನಿರ್ಣಯಗಳಿಗೆ ಬರಲು ಸಾಧ್ಯವಾಗಿಲ್ಲ.

### ಅತ್ಯಂತ ಉಪಯುಕ್ತ

ಆದರೆ ಚರ್ಚೆಗಳು ತುಂಬ ಉಪಯುಕ್ತವಾಗಿವೆ. ಭಾರತ ಸರಕಾರವು ಅವುಗಳಿಂದ ಅಪಾರ ಪ್ರಯೋಜನ ಪಡೆಯುತ್ತಿದೆ. ಸರ್ವಾನುಮತಿಯಿರಲಿಲ್ಲವಾದ್ದರಿಂದ ಚರ್ಚಿತ ಬಹುತೇಕ ವಿಷಯಗಳ ಮೇಲೆ ಇತ್ಯಾತ್ಮಕ ಕಾರ್ಯ ಕೈಗೊಳ್ಳುವುದು ಸರಕಾರಕ್ಕೆ ಸಾಧ್ಯವಾಗಿಲ್ಲವೆಂಬುದು ನಿಜ. ಆದರೆ ಎಲ್ಲೆಲ್ಲಿ ಏಕಾಭಿಪ್ರಾಯ ಮೂಡಿತೋ ಅಲ್ಲಿ ಆ ನಿರ್ಣಯಗಳನ್ನು ಒಪ್ಪಲು, ಅವುಗಳನ್ನು ಜಾರಿಗೆ ಕೊಡಲು ಭಾರತ ಸರಕಾರವು ಹಿಂದೆಮುಂದೆ ನೋಡಿಲ್ಲ. ನನ್ನ ಈ ಮಾತಿಗೆ ಸಮರ್ಥನೆಯಾಗಿ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಯುದ್ಧ ಗಾಯಗಳ (ಪರಿಹಾರ ವಿಮಾ) ಶಾಸನ, ರಾಷ್ಟ್ರೀಯ ಸೇವಾ (ತಾಂತ್ರಿಕ ಸಿಬ್ಬಂದಿ ತಿದ್ದುಪಡಿ) ಅಧ್ಯಾದೇಶ, ಔದ್ಯೋಗಿಕ ಅಂಕಿಅಂಶಗಳ ಶಾಸನ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳ ಯೋಜನೆ ಇವೂ ಅಂತಹ ಉದಾಹರಣೆಗಳು. ಈ ಎರಡು ವಿಷಯಗಳಲ್ಲಿ ಸಮ್ಮೇಳನದ ನಿರ್ಣಯಗಳಿಗೆ ಅನುಸಾರವಾಗಿ ಬೇಗನೆಯೇ ಕ್ರಮ ಕೈಗೊಳ್ಳಲಾಗುವುದು.

### ದೃಷ್ಟಿಕೋನದಲ್ಲೇ ಮೂಲಭೂತ ವ್ಯತ್ಯಾಸ

“ಈ ಪ್ರಗತಿ ತುಂಬಾ ಗೌಣವಾದದ್ದು ಎಂದು ಕೆಲವರಿಗೆ ತೋರಬಹುದು. ಅವರದ್ದು ತಪ್ಪು ದೃಷ್ಟಿ ಎಂದಷ್ಟು ಮಾತ್ರ ಹೇಳಬಲ್ಲೆ. ಪ್ರಗತಿಗೆ ಒಳದಾರಿ ಯಾವುದೂ ಇಲ್ಲ. ಇದ್ದರೂ, ಆ ಒಳದಾರಿಗಳೇ

ಸರಿಯಾದ ದಾರಿಗಳೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಶಾಂತಿಯುತ ವಿಧಾನಗಳಿಂದ ಪ್ರಗತಿ ಸಾಧಿಸುವುದು ಯಾವಾಗಲೂ ನಿಧಾನದ ಪ್ರಕ್ರಿಯೆ; ಅಸಹನೆಯ ನನ್ನಂತಹ ಭಾವನಾವಾದಿಗಳಿಗೆ ಕೆಲವು ವೇಳೆ ನೋವುಂಟುಮಾಡುವಷ್ಟು ಮಂದಗತಿ ಅದು. ಭಾರತದಂತಹ ಪ್ರಾಚೀನ ದೇಶದಲ್ಲಿ, ಸಾಮೂಹಿಕ ಕ್ರಿಯೆಯ ಪರಂಪರೆ ಇಲ್ಲದಾಗ, ಸಾಮಾಜಿಕ ಪ್ರಜ್ಞೆಯ ಕುರುಹೂ ಇಲ್ಲದ ಪರಿಸ್ಥಿತಿಯಲ್ಲಿ ಪ್ರಗತಿ ಇನ್ನೂ ನಿಧಾನ, ಇದರಿಂದ ಯಾರೂ ಎದೆಗುಂದಬೇಕಾಗಿಲ್ಲ. ಏಕೆಂದರೆ ನನ್ನ ಮನಸ್ಸಿಗೆ ಮುಖ್ಯವಾಗಿ ತೋರುವುದು ದೃಷ್ಟಿಕೋನದ ಸ್ವರೂಪವೇ ಹೊರತು ಪ್ರಗತಿಯ ವೇಗವಲ್ಲ.

"ಈ ದೃಷ್ಟಿಯಿಂದ ತ್ರಿಪಕ್ಷೀಯ ಸಮ್ಮೇಳನವನ್ನು ನೋಡಿದಾಗ, ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರಕಾರದ, ಮಾಲೀಕರ ಮತ್ತು ಕಾರ್ಮಿಕರ ದೃಷ್ಟಿಕೋನದಲ್ಲಿ ಮಾಡಿರುವ ಮೂಲಭೂತ ಪರಿವರ್ತನೆ ಇದೆಯಲ್ಲ, ಅದೇ ತ್ರಿಪಕ್ಷೀಯ ಸಮ್ಮೇಳನದ ಅತಿ ದೊಡ್ಡ ಸಾಧನೆ ಎನ್ನುವುದರಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ. ಈ ಸಮ್ಮೇಳನಗಳಲ್ಲಿ ಭಾಗವಹಿಸಿರುವ ಯಾರ ಅನುಭವಕ್ಕೇ ಆದರೂ ಇದು ಬಂದಿರುತ್ತದೆ. ಆರೋಗ್ಯಕರವೂ ಪೂರ್ಣವೂ ಆದ ದೃಷ್ಟಿ–ಪರಿವರ್ತನೆಯಿಂದ ನಾವು ನಮ್ಮ ಪ್ರಗತಿಯ ವೇಗವು ವರ್ಧಿಸುತ್ತದೆಂದು ಧೈರ್ಯವಾಗಿ ಆಶಿಸಬಹುದು.

**ಕಾರ್ಯಸೂಚಿಯ ಅಂಶಗಳು**

ಈ ಸಮಗ್ರ ಕಾರ್ಮಿಕ ಸಮ್ಮೇಳನದ ಕಾರ್ಯಸೂಚಿಯಲ್ಲಿ ಎಂಟು ಅಂಶಗಳಿವೆ. ಅವು :–

(೧) ಕಲ್ಲಿದ್ದಲು, ಕಚ್ಚಾ ವಸ್ತುಗಳು ಮೊದಲಾದವುಗಳಲ್ಲಿನ ಕೊರತೆಯಿಂದಾಗಿ ಅನೈಚ್ಛಿಕ ನಿರುದ್ಯೋಗ.

(೨) ಸಾಮಾಜಿಕ ಭದ್ರತೆ; ಕನಿಷ್ಠ ವೇತನ.

(೩) ತುಟ್ಟಿಭತ್ಯೆಯನ್ನು ನಿಗದಿಪಡಿಸಲು ಸೂತ್ರಗಳು.

(೪) ಭಾರೀ ಕೈಗಾರಿಕಾ ಸ್ಥಾವರಗಳಲ್ಲಿ ಮುಂಬಯಿ ಕೈಗಾರಿಕಾ ವ್ಯಾಜ್ಯಗಳ ಶಾಸನದ ೫ನೆಯ ಅಧ್ಯಾಯದ ಅವಕಾಶಗಳ ರೀತಿಯಲ್ಲೇ ಸ್ಥಾಯಿ ಆದೇಶಗಳಿಗೆ ಅವಕಾಶ ಕಲ್ಪಿಸುವುದು.

(೫) ಪ್ಲೀನರಿ ಸಮ್ಮೇಳನಕ್ಕೆ ವಿಹಿತ ಕಾರ್ಯವಿಧಾನ ನಿಯಮಗಳನ್ನು ಒಪ್ಪುವುದು.

(೬) ಪ್ರಾಂತಗಳಲ್ಲಿ ತ್ರಿಪಕ್ಷೀಯ ಸಂಸ್ಥೆಗಳನ್ನು ರಚಿಸುವುದು.

(೭) ಶಾಸನ ಸಭೆಗಳಲ್ಲಿ ಮತ್ತಿತರ ಸಂಸ್ಥೆಗಳಲ್ಲಿ ಕಾರ್ಮಿಕರ ಪ್ರಾತಿನಿಧ್ಯ.

(೮) ಭವಿಷ್ಯನಿಧಿಗಾಗಿ ಮಾದರಿ ನಿಯಮಗಳು.

"ಈ ಅಂಶಗಳಲ್ಲಿ ಎರಡರ ಮಹತ್ವವನ್ನು ನೀವು ಗಮನಿಸದೆ ಇರಲಾರಿರಿ. ಅದು ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಪ್ರಾತಿನಿಧ್ಯ. ಇವು ಬೇರ್ಪಡಿಸಲಾಗದಂಥವು, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದಂಥವು. ಇವು ಜಗತ್ತಿನಾದ್ಯಂತ ಎಲ್ಲ ಭಾಗಗಳಲ್ಲೂ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳು. ಬೇವರಿಜ್ ವರದಿ (Beveridge Report) ಹಾಗೆ ಸಾಮಾನ್ಯ ಆಸಕ್ತಿಯ ಒಂದು ನಿದರ್ಶನ. ಈ ಸಮಸ್ಯೆಯು ಪ್ರಪಂಚದ ಎಲ್ಲೆಡೆಗಳಲ್ಲೂ ಗಮನವನ್ನು ಸೆಳೆದಿದೆ. ಭಾರತದಲ್ಲಿ ನಾವಾದರೂ ಈ ಸಮಸ್ಯೆಯತ್ತ ಕಡೆಗೆ ಕಣ್ಣು ಮುಚ್ಚಿಕೊಂಡು ಕುಳಿತಿರಲು ಸಾಧ್ಯವಿಲ್ಲ. ಅವುಗಳನ್ನು ಕುರಿತು ನೀವು ಹೇಗೆ ವ್ಯವಹರಿಸಬೇಕೆಂದಾಗಲಿ, ಅವುಗಳ ಬಗೆಗೆ ನಿಮಗಿರಬೇಕಾದ ಸರಿಯಾದ ದೃಷ್ಟಿಯೇನು ಎಂದಾಗಲಿ ನಾನಿಲ್ಲಿ ಹೇಳುವುದಿಲ್ಲ. ಆದರೆ ಮೂಲಭೂತವಾದ ಎರಡು ಅಂಶಗಳನ್ನು ಮಾತ್ರ ವಿವರಿಸುತ್ತೇನೆ. ಮೊದಲನೆಯದು ಇದು :

## ಎರಡು ವೈರುಧ್ಯಗಳು

"ಬಂಡವಾಳಶಾಹೀ ಕೈಗಾರಿಕಾ ವ್ಯವಸ್ಥೆಯಲ್ಲಿ, ಸಂಸದೀಯ ಪ್ರಜಾಪ್ರಭುತ್ವ ಎಂಬ ಹೆಸರಿನ ರಾಜಕೀಯ ವ್ಯವಸ್ಥೆಯಲ್ಲಿ ಇರುವವರು ತಮ್ಮ ವ್ಯವಸ್ಥೆಗಳಲ್ಲಿರುವ ದ್ವಂದ್ವಗಳನ್ನು ಗಮನಿಸಬೇಕು. ಮೊದಲನೆಯದು, ಬೃಹತ್ ಮೊತ್ತದ ಸಂಪತ್ತು ಹಾಗೂ ಕಡುಬಡತನಗಳ ನಡುವೆ ಇಂದು ಕಥೆಯೆನಿಸುವಷ್ಟು ಇರುವ ವೈರುಧ್ಯ. ಅಷ್ಟೇ ಅಲ್ಲ, ದುಡಿಯದವರಿಗೆ ಸಂಪತ್ತು, ದುಡಿಯುವವರಿಗೆ ಗಂಜಿಯೂ ಇಲ್ಲದ ಬಡತನ.

"ಎರಡನೆಯ ವೈರುಧ್ಯವು ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳಲ್ಲಿದೆ. ರಾಜಕೀಯದಲ್ಲಿ ಸಮಾನತೆ; ಆರ್ಥಿಕವಾಗಿ ಅಸಮಾನತೆ. ಒಬ್ಬ ಮನುಷ್ಯ, ಒಂದು ವೋಟು, ಒಂದು ಮೌಲ್ಯ ಎನ್ನುವುದು ನಮ್ಮ ರಾಜಕೀಯ ಆದರ್ಶವಾಗಿದ್ದು ಆರ್ಥಿಕ ಜೀವನದಲ್ಲಿ ಇದನ್ನು ತಿರಸ್ಕರಿಸುವುದೇ ಆದರ್ಶ ಸೂಕ್ತಿ. ಈ ವೈರುಧ್ಯಗಳನ್ನು ಪರಿಹರಿಸುವಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಈ ವೈರುಧ್ಯಗಳಿವೆ ಎಂಬ ವಿಷಯದಲ್ಲಿ ಯಾವುದೇ ಬಗೆಯ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ.

"ಈ ವೈರುಧ್ಯಗಳು ಕಣ್ಣು ಕುಕ್ಕುವಂತಿದ್ದರೂ ಜನಸಾಮಾನ್ಯರು ಅವುಗಳನ್ನು ಕಡೆಗಣಿಸಿದ್ದರು ಎನ್ನುವುದು ನಿಜ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಅತ್ಯಂತ ತೀಕ್ಷ್ಣಮತಿಯಾಗಿದ್ದವನ ಗಮನಕ್ಕೂ ಬಾರದೆ ಹೋಗಿದ್ದ ವೈರುಧ್ಯಗಳನ್ನು ಈಗ ಅತ್ಯಂತ ಮಂದಮತಿಯಾದವನ ಗಮನಕ್ಕೂ ಬರುವಂತೆ ಮಾಡಲಾಗುತ್ತಿದೆ.

"ಇನ್ನು ಎರಡನೆಯ ಅಂಶ ಇದು. ಸಾಮಾಜಿಕ ಜೀವನದ ಆಧಾರವು ಅಂತಸ್ತಿನಿಂದ ಗುತ್ತಿಗೆಗೆ ಯಾವಾಗ ಬದಲಾಯಿತೋ ಆಗಿನಿಂದಲೂ ಬದುಕಿನ ಅಭದ್ರತೆಯು ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದೆ, ಅದರ ಪರಿಹಾರವನ್ನು ಕುರಿತು ಮಾನವ ಜೀವನದ ಏಳಿಗೆಯಲ್ಲಿ ನಂಬಿಕೆಯಿರುವವರೆಲ್ಲರೂ ಆಲೋಚನೆ ಮಾಡುತ್ತಿದ್ದಾರೆ. ಮಾನವನ ಹಕ್ಕುಗಳನ್ನು ನಿರೂಪಿಸಲು ಬೇಕಾದ ಹಾಗೆ ಶಕ್ತಿಯ ವ್ಯಯವನ್ನು ಮಾಡಲಾಗುತ್ತಿದೆ. ಅವನ ಜನ್ಮಸಿದ್ಧ ಹಕ್ಕುಗಳೆಂದು ಭಾವಿಸಬೇಕಾದ ಸ್ವಾತಂತ್ರ್ಯಗಳು ಯಾವುವೆಂದು ಪಟ್ಟಿ ಮಾಡಲಾಗುತ್ತಿದೆ. ಇದೆಲ್ಲ ಒಳ್ಳೆಯದೇ, ಸಂತೋಷ ಉಲ್ಲಾಸಗಳನ್ನು ತರುವಂಥ ವಿಚಾರವೇ. ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿರುವುದೇನೆಂದರೆ, ಪೆಸಿಫಿಕ್ ಸಂಬಂಧಗಳ ಸಮ್ಮೇಳನದ ಆರ್ಥಿಕ ವಿಚಾರಗಳ ತಂಡದ ವರದಿಯ ಮಾತುಗಳನ್ನು ಬಳಸಿ ಹೇಳುವುದಾದರೆ, ಎಲ್ಲಿಯವರೆಗೆ ಈ ಹಕ್ಕುಗಳನ್ನು ಸಾಮಾನ್ಯ ಮನುಷ್ಯನು ಅರ್ಥ ಮಾಡಿಕೊಳ್ಳುವ ಹಾಗೆ ರೂಪಾಂತರಿಸಿ ಕೊಡುವುದಿಲ್ಲವೋ, ಅಂದರೆ ಶಾಂತಿ, ಒಂದು ಮನೆ, ಸಾಕಷ್ಟು ಬಟ್ಟೆಬರೆ, ಶಿಕ್ಷಣ, ಒಳ್ಳೆಯ ಆರೋಗ್ಯ, ಎಲ್ಲಕ್ಕಿಂತ ಹೆಚ್ಚಾಗಿ ಬಿದ್ದು ಬಿಡುತ್ತೇನೆಂಬ ಗಾಬರಿಯಿಲ್ಲದೆ ಜಗತ್ತಿನ ವಿಖ್ಯಾತ ರಸ್ತೆಗಳಲ್ಲಿ ಗಾಂಭೀರ್ಯದಿಂದ ನಡೆಯುವ ಸ್ವಾತಂತ್ರ್ಯ – ಇವುಗಳನ್ನು ಕೊಡಲಾಗುವುದಿಲ್ಲವೋ ಅಲ್ಲಿಯವರೆಗೆ ಸುಭದ್ರತೆ, ಸುರಕ್ಷೆ ಇರುವುದಿಲ್ಲ.

## ಗೌರವಾನ್ವಿತ ಅಸ್ತಿತ್ವಕ್ಕಾಗಿ

"ಭಾರತದಲ್ಲಿ ನಾವು ಈ ಸಮಸ್ಯೆಗಳನ್ನು ಗುರುತಿಸದೆ ಇರಲು ಸಾಧ್ಯವಿಲ್ಲ, ಅಥವಾ ಅತ್ತ ಸರಿಸಿ ಬಳಸಿಕೊಂಡು ಹೋಗಲೂ ಸಾಧ್ಯವಿಲ್ಲ. ಮೌಲ್ಯಗಳ ಪುನರ್ ಮೌಲ್ಯೀಕರಣಕ್ಕೆ ನಾವು ಸಿದ್ಧರಾಗಿರಬೇಕು. ಭಾರತದ ಕೈಗಾರಿಕಾ ಅಭಿವೃದ್ಧಿಯೊಂದನ್ನೇ ನಮ್ಮ ಗುರಿಯನ್ನಾಗಿ ಮಾಡಿಕೊಂಡರೆ ಸಾಲದು. ಅಂತಹ ಯಾವುದೇ ಔದ್ಯೋಗಿಕ ಅಭಿವೃದ್ಧಿಯನ್ನು ಕಾಪಾಡಬೇಕಾದರೆ ಅದು ಸಾಮಾಜಿಕವಾಗಿ ಅಪೇಕ್ಷಣೀಯ ಸ್ತರದಲ್ಲಿ ಮಾತ್ರ. ಸುಮ್ಮನೆ ಭಾರತದ ಸಂಪತ್ತನ್ನು ಹೆಚ್ಚಿಸಲು ಶಕ್ತಿಯನ್ನು ವ್ಯಯಮಾಡಿದರೆ ಸಾಲದು. ಎಲ್ಲ

ಭಾರತೀಯರಿಗೂ ಆ ಸಂಪತ್ತನ್ನು ಹಂಚಿಕೊಳ್ಳುವ ಮೂಲಭೂತ ಹಕ್ಕಿದೆ ಎಂದು ಪರಿಗಣಿಸುವಷ್ಟಾದರೆ ಸಾಲದು, ಗೌರವಯುತವೂ, ಗಂಭೀರವೂ ಆದ ಜೀವನ ನಡೆಸಲು, ಅಭದ್ರತೆ, ಅರಕ್ಷಣೆಗಳ ಎದುರಾಗಿ ಪ್ರತಿಯೊಬ್ಬನಿಗೂ ಭದ್ರತೆ, ರಕ್ಷಣೆಗಳ ಭರವಸೆ ಕೊಡಬೇಕು.

"ಮುಗಿಸುವುದಕ್ಕೆ ಮೊದಲು ಉಲ್ಲೇಖಿಸಬೇಕಾದ ಇನ್ನೊಂದು ಮಾತಿದೆ. ನಮ್ಮ ಸಭೆಗಳಲ್ಲಿ ಚರ್ಚೆಗಳು ಕೆಲವು ಸಾರಿ ಸುತ್ತಿ ಬಳಸಿ ಸಾಗುತ್ತವೆ, ವ್ಯವಹಾರಾತ್ಮಕವಾಗಿರುವುದಿಲ್ಲ.

"ಈ ವಿಷಯದಲ್ಲಿ ಹೆಚ್ಚು ಆಕ್ಷೇಪಿಸುವುದಕ್ಕೆ ನನಗೆ ಇಷ್ಟವಿಲ್ಲ. ಆದರೆ ಸಾಧ್ಯವಾದಷ್ಟು ಸಂಗ್ರಹವಾಗಿ ಮಾತನಾಡಿ, ನೇರವಾಗಿ ವಿಷಯವನ್ನು ಕುರಿತು ಮಾತನಾಡಿ ಎಂದು ಪ್ರತಿನಿಧಿಗಳಿಗೆ ಸೂಚಿಸಬಯಸುತ್ತೇನೆ. ಯಾವ ಪ್ರತಿನಿಧಿಗೂ ಚರ್ಚೆಯಲ್ಲಿ ಭಾಗವಹಿಸುವ ಅವಕಾಶವನ್ನು ತಪ್ಪಿಸುವುದಕ್ಕೆ ನನಗೆ ಇಷ್ಟವಿಲ್ಲ. ಆದರೆ, ನಮಗೆ ಬೇಕಾಗಿರುವುದು ಆ ಪ್ರತಿನಿಧಿಯ ದೃಷ್ಟಿ ಏನು ಎಂಬ ವಿಚಾರ ಅಷ್ಟೆ. ಇದು ಅವರಿಗೆ ತಿಳಿದಿರಬೇಕು. ಅವರು ತಮ್ಮ ಅಭಿಪ್ರಾಯಗಳನ್ನು ವಿವರಿಸಲಿ. ಆದರೆ ತಮ್ಮ ದೃಷ್ಟಿ ಏನೆಂದು ಪಟ್ಟಿ ಮಾಡುವಾಗ ವಿಸ್ತಾರವಾಗಿ ತರ್ಕ ಮಾಡುತ್ತಾ ಕಾರಣಗಳ ಸರಪಣಿಯನ್ನು ನೇಯುವ ಅಗತ್ಯ ಇಲ್ಲವೇ ಇಲ್ಲ. ನಮ್ಮ ಕಾರ್ಯಕಲಾಪಗಳು ಕ್ಷಿಪ್ರಗತಿಯಲ್ಲಿ ವ್ಯವಹಾರಾತ್ಮಕವಾಗಿ ಸಾಗಬೇಕು ಎಂದು ನನ್ನ ಹಾಗೆಯೇ ನೀವೂ ಬಯಸುತ್ತಿದ್ದೀರಿ ಎಂದು ಬಲ್ಲೆ. ಕಾರ್ಲೈಲನು ಹೌಸ್ ಆಫ್ ಕಾಮನ್ಸ್ ಮೇಲೆ ಮಾಡಿದ ಆಕ್ಷೇಪಣೆಯನ್ನು ನಮ್ಮ ತಲೆಯ ಮೇಲೂ ಹಾಕಿಕೊಳ್ಳುವುದು ಬೇಡ."

## ೨೦
## ಕಾರ್ಮಿಕರು ಮತ್ತು ಸಂಸದೀಯ ಪ್ರಜಾಪ್ರಭುತ್ವ*

[ಇಂಡಿಯನ್ ಫೆಡರೇಷನ್ ಆಫ್ ಲೇಬರ್, ದೆಹಲಿಯಲ್ಲಿ ೧೯೪೩ರ ಸೆಪ್ಟೆಂಬರ್ ೮ ರಿಂದ ೧೭ ರವರೆಗೆ ಏರ್ಪಡಿಸಿದ್ದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ವರ್ಕರ್ಸ್ ಸ್ಟಡಿ ಕ್ಯಾಂಪಿನ ಮುಕ್ತಾಯ ಸಮಾವೇಶದಲ್ಲಿ ಮಾಡಿದ ಭಾಷಣ]

"ಈ ಸಂಜೆ ನಿಮ್ಮನ್ನುದ್ದೇಶಿಸಿ ಭಾಷಣ ಮಾಡಬೇಕೆಂದು ನನ್ನನ್ನು ಆಮಂತ್ರಿಸಿದ್ದಕ್ಕಾಗಿ ನಿಮ್ಮ ಕಾರ್ಯದರ್ಶಿಯವರಿಗೆ ನನ್ನ ವಂದನೆಗಳು. ಈ ಆಮಂತ್ರಣವನ್ನು ಒಪ್ಪಿಕೊಳ್ಳಲು ಮೊದಲು ನನಗೆ ಸಂಕೋಚವೆನಿಸಿತು. ಅದಕ್ಕೆ ಎರಡು ಕಾರಣಗಳು ಉಂಟು. ಮೊದಲನೆಯದಾಗಿ, ಸರ್ಕಾರವನ್ನು ಒತ್ತಾಯಿಸುವ ರೀತಿಯಲ್ಲಿ ನಾನು ಹೆಚ್ಚು ಮಾತಾಡಲಾರೆ. ಎರಡನೆಯದಾಗಿ, ನಿಮ್ಮ ಆಸಕ್ತಿಯ ಪ್ರಮುಖ ವಿಷಯವಾದ ಕಾರ್ಮಿಕ ಸಂಘ ಪದ್ಧತಿಯ (Trade Unionism) ಬಗೆಗೆ ಹೆಚ್ಚು ಮಾತಾಡಲಾರೆ. ಆದರೂ ನಾನು ಈ ಆಮಂತ್ರಣವನ್ನು ಒಪ್ಪಿಕೊಂಡಿದ್ದೇಕೆಂದರೆ, ನಾನು ನಿರಾಕರಿಸಿದರೆ ನಿಮ್ಮ ಕಾರ್ಯದರ್ಶಿಯವರು ಕೇಳಲೇ ಇಲ್ಲ. ಅಲ್ಲದೆ, ಭಾರತದಲ್ಲಿ ಕಾರ್ಮಿಕರ ಸಂಘಟನೆ ಎಂಬ ವಿಷಯವನ್ನು ಕುರಿತು ನಾನು ಬಹಳ ದಿನಗಳಿಂದ ತೀವ್ರವಾಗಿ ಚಿಂತಿಸುತ್ತಿದ್ದು, ಅದನ್ನು ನಿಮ್ಮ ಮುಂದಿಡಬೇಕು, ಕಾರ್ಮಿಕ ಸಂಘ ಪದ್ಧತಿಯಲ್ಲಿ ಪ್ರಮುಖ ಆಸಕ್ತಿ ಇದ್ದವರಿಗೂ ಸಹ ಈ ನನ್ನ ಚಿಂತನೆ ಹಿಡಿಸಬಹುದು ಎಂದುಕೊಂಡು ಈ ನನ್ನ ಚಿಂತನೆಯನ್ನು ತಮ್ಮ ಮುಂದಿಡಲು ಇದೇ ಸದವಕಾಶ ಎಂದೂ ಎನಿಸಿತು.

* ಈ ಭಾಷಣವನ್ನು ಇಂಡಿಯನ್ ಫೆಡರೇಷನ್ ಆಫ್ ಲೇಬರ್, ೩೦, ಫೈಯಾಜ್ ಬಜಾರ್, ದೆಹಲಿ, ಪ್ರಕಟಿಸಿದ್ದಾರೆ. ಈ ಪ್ರತಿಯನ್ನು ನೀಡಿದವರು ಮುಂಬಯಿನ ಶ್ರೀ ಆರ್.ಟಿ. ಶಿಂಧೆ.

"ಮಾನವ ಸಮಾಜದ ಆಡಳಿತವು ಕೆಲವು ಮಹತ್ವಪೂರ್ಣ ಬದಲಾವಣೆಗಳನ್ನು ಕಂಡಿದೆ. ಮಾನವ ಸಮಾಜದಲ್ಲಿ ಆಡಳಿತವು ದಬ್ಬಾಳಿಕೆಯ ಸರ್ವಾಧಿಕಾರಿಗಳು ಅನುಸರಿಸುತ್ತಿದ್ದ ನಿರಂಕುಶಾಧಿಪತ್ಯದ ರೂಪದಲ್ಲಿದ್ದ ಕಾಲವೊಂದಿತ್ತು. ಇದರ ಸ್ಥಾನದಲ್ಲಿ, ದೀರ್ಘ ಹಾಗೂ ರಕ್ತಪಾತದ ಹೋರಾಟದ ನಂತರ ಸಂಸದೀಯ ಪ್ರಜಾಪ್ರಭುತ್ವ ಎಂದು ಪ್ರಸಿದ್ಧವಾಗಿರುವ ಒಂದು ಸರ್ಕಾರದ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಆಗ ಇದೇ ಶ್ರೇಷ್ಠತಮ ಸರ್ಕಾರ ಎಂದು ಭಾವಿಸಲಾಯಿತು. ಅದು ಪ್ರತಿಯೊಬ್ಬನಿಗೂ ಸ್ವಾತಂತ್ರ್ಯ, ಸ್ವತ್ತು ಮತ್ತು ಸಂತೋಷ ಸಾಧನೆಯ ಹಕ್ಕನ್ನು ನೀಡುವ ಸುವರ್ಣಯುಗವೊಂದನ್ನು ಸೃಷ್ಟಿಸುತ್ತದೆ ಎಂದೂ ಆಗ ನಂಬಲಾಯಿತು. ಅಲ್ಲದೆ ಅಂತಹ ಉನ್ನತ ಭರವಸೆಗಳಿಗೆ ಬಲವಾದ ಕಾರಣಗಳೂ ಇದ್ದವು. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನರ ಅಭಿಮತವನ್ನು ವ್ಯಕ್ತಪಡಿಸಲು ಶಾಸಕಾಂಗವಿರುತ್ತದೆ; ಶಾಸಕಾಂಗಕ್ಕೆ ಅಧೀನವಿದ್ದು, ಅದಕ್ಕೆ ವಿಧೇಯತೆಯನ್ನು ತೋರಿಸಬೇಕಾದ ಕಾರ್ಯಾಂಗವಿರುತ್ತದೆ. ಶಾಸಕಾಂಗ ಮತ್ತು ಕಾರ್ಯಾಂಗಗಳ ಮೇಲೆ ನ್ಯಾಯಾಂಗವಿದ್ದು, ಅದು ಅವೆರಡನ್ನೂ ನಿಯಂತ್ರಿಸುವ ಮೂಲಕ ಅವುಗಳನ್ನು ತಮ್ಮ ತಮ್ಮ ಹದ್ದುಬಸ್ತಿನಲ್ಲಿಟ್ಟಿರುತ್ತದೆ. ಪ್ರಜೆಗಳದ್ದೇ ಆದ, ಪ್ರಜೆಗಳಿಂದಲೇ ಆಳಲ್ಪಡುವ ಮತ್ತು ಪ್ರಜೆಗಳಿಗೋಸ್ಕರವೇ ಆಳುವ ಈ ಪ್ರಜಾ ಸರ್ಕಾರಕ್ಕೆ ಸಂಸದೀಯ ಪ್ರಜಾಪ್ರಭುತ್ವದ ಎಲ್ಲ ಲಕ್ಷಣಗಳೂ ಇರುತ್ತವೆ. ಆದ್ದರಿಂದ, ಸಂಸದೀಯ ಪ್ರಜಾಪ್ರಭುತ್ವವು ಪ್ರಾರಂಭವಾಗಿ ಹಾಗೂ ಸಾರ್ವತ್ರಿಕವಾಗಿ ಸ್ವೀಕರಿಸಲ್ಪಟ್ಟು, ಒಂದು ಶತಮಾನ ಸಹ ಆಗಿಲ್ಲದಿದ್ದರೂ ಅದರ ವಿರುದ್ಧ ಬಂಡೇಳುತ್ತಿರುವುದು ಆಶ್ಚರ್ಯದ ವಿಷಯವೇ ಸರಿ. ಅದರ ವಿರುದ್ಧ ಇಟಲಿ, ಜರ್ಮನಿ, ರಷ್ಯಾ ಮತ್ತು ಸ್ಪೆಯಿನಿನಲ್ಲಿ ಬಂಡೇಳಲಾಗುತ್ತಿದೆ; ಸಂಸದೀಯ ಪ್ರಜಾಪ್ರಭುತ್ವದ ವಿರುದ್ಧ ಅತೃಪ್ತಿ ಸೂಚಿಸುತ್ತಿರುವ ದೇಶಗಳ ಸಂಖ್ಯೆ ಅತ್ಯಲ್ಪ. ಆದರೂ, ಸಂಸದೀಯ ಪ್ರಜಾಪ್ರಭುತ್ವದ ವಿರುದ್ಧ ಈ ಅಸಹನೆ, ಈ ಅತೃಪ್ತಿ ಏತಕ್ಕಾಗಿ? ಈ ಪ್ರಶ್ನೆ ಪರಿಶೀಲನಾರ್ಹ. ಉಳಿದ ದೇಶಗಳಿಗಿಂತ ಭಾರತಕ್ಕೆ ಈ ಪ್ರಶ್ನೆಯ ಪರಿಶೀಲನಾರ್ಹತೆಯ ಆವಶ್ಯಕತೆ ಹೆಚ್ಚಾಗಿದೆ. ಭಾರತವು ಸಂಸದೀಯ ಪ್ರಜಾತಂತ್ರವನ್ನು ರಚಿಸಲು ಮಾತುಕತೆ ನಡೆಸುತ್ತಿದೆ. "ಸಂಸದೀಯ ಪ್ರಜಾತಂತ್ರದ ಬಗ್ಗೆ ಹುಷಾರಾಗಿರಿ; ಮೇಲ್ನೋಟಕ್ಕೆ ಕಾಣುವಂತೆ ಅದೇನೂ ಅತ್ಯುತ್ಕೃಷ್ಟ ವ್ಯವಸ್ಥೆಯಲ್ಲ" ಎಂದು ಭಾರತೀಯರಿಗೆ ಸಾಕಷ್ಟು ಧೈರ್ಯದಿಂದ ಹೇಳಬಲ್ಲಂಥವರು ಇಂದು ಬೇಕಾಗಿದ್ದಾರೆ.

"ಸಂಸದೀಯ ಪ್ರಜಾತಂತ್ರ ಏಕೆ ಸೋತಿದೆ? ಸರ್ವಾಧಿಕಾರಿಗಳ ದೇಶದಲ್ಲಿ ಅದು ಸೋತಿದೆ. ಏಕೆಂದರೆ, ಅಲ್ಲಿ ಅದೊಂದು ನಿಧಾನವಾಗಿ ಚಲಿಸುವ ವ್ಯವಸ್ಥೆ, ಯಂತ್ರ, ಬೇಗ ಮಾಡಬೇಕಾದ ಕೆಲಸಗಳನ್ನು ಅದು ನಿಧಾನಗೊಳಿಸುತ್ತದೆ. ಸಂಸದೀಯ ಪ್ರಜಾತಂತ್ರದಲ್ಲಿ ಕಾರ್ಯಾಂಗಕ್ಕೆ ಬೇಕಾದ ಶಾಸನಗಳನ್ನು ಶಾಸಕಾಂಗವು ಮಾಡದಿರುವ ಮೂಲಕ, ಅದು ಕಾರ್ಯಾಂಗಕ್ಕೆ ಅಡೆತಡೆಗಳನ್ನು ಒಡ್ಡಬಹುದು; ಒಂದು ವೇಳೆ ಶಾಸಕಾಂಗವು ಕಾರ್ಯಾಂಗಕ್ಕೆ ಅಡ್ಡಿಮಾಡದಿದ್ದರೆ, ನ್ಯಾಯಾಂಗವೇ ಕೆಲವು ಶಾಸನಗಳನ್ನು ಕಾನೂನುಬಾಹಿರವೆಂದು ಘೋಷಿಸಬಹುದು. ಸಂಸದೀಯ ಪ್ರಜಾತಂತ್ರವಂತೂ ಸರ್ವಾಧಿಕಾರಿಗೆ ಪೂರ್ಣಸ್ವಾತಂತ್ರ್ಯ ಕೊಡುವುದಿಲ್ಲ. ಅದಕ್ಕಾಗಿಯೇ ಇಟಲಿ, ಸ್ಪೆಯಿನ್ ಮತ್ತು ಜರ್ಮನಿಗಳಂಥ ಸರ್ವಾಧಿಕಾರಿಗಳಿಂದ ಆಳಲ್ಪಡುವ ದೇಶಗಳಲ್ಲಿ ಅದಕ್ಕೆ ಕೆಟ್ಟ ಹೆಸರು ಬಂದಿದೆ. ಸರ್ವಾಧಿಕಾರಿಗಳಷ್ಟೇ ಸಂಸದೀಯ ಪ್ರಜಾತಂತ್ರದ ವಿರುದ್ಧವಾಗಿದ್ದರೆ, ಅದೇನೂ ಆಶ್ಚರ್ಯದ ವಿಷಯವಾಗುತ್ತಿರಲಿಲ್ಲ. ಸಂಸದೀಯ ಪ್ರಜಾತಂತ್ರದ ವಿರುದ್ಧದ ಅವರ ಪ್ರಮಾಣವು ಪ್ರಮಾಣವೇ ಅಲ್ಲ. ವಾಸ್ತವವಾಗಿ ಸಂಸದೀಯ ಪ್ರಜಾತಂತ್ರವು ಸರ್ವಾಧಿಕಾರಿಗಳನ್ನು ನಿಯಂತ್ರಿಸಲು ಸಿಕ್ಕ ಒಂದು ಒಳ್ಳೆಯ ಅಂಕುಶ ಎಂಬ ಕಾರಣದಿಂದ ನಾವು ಅದನ್ನು ಸ್ವಾಗತಿಸಬಹುದಿತ್ತು. ಆದರೆ ದುರದೃಷ್ಟವಶಾತ್, ಸರ್ವಾಧಿಕಾರಿಗಳನ್ನು ವಿರೋಧಿಸುವಂಥ ದೇಶಗಳಲ್ಲಿಯೂ

ಸಹ, ಸಂಸದೀಯ ಪ್ರಜಾತಂತ್ರದ ಬಗೆಗೆ ಅತೀವ ಅತೃಪ್ತಿಯಿದೆ. ಸಂಸದೀಯ ಪ್ರಜಾತಂತ್ರದ ಬಗೆಗಿನ ಅತ್ಯಂತ ದುರದೃಷ್ಟಕರ ಸಂಗತಿಯಿದು. ಇದು ನಿಜಕ್ಕೂ ಬಹಳ ಶೋಚನೀಯ ಸಂಗತಿ. ಏಕೆಂದರೆ, ಸಂಸದೀಯ ಪ್ರಜಾತಂತ್ರವು ಬದಲಾಗುತ್ತಿರುವ ಕಾಲವಿದು. ಅದು ಮೂರು ದಿಕ್ಕಿನಲ್ಲಿ ಪ್ರಗತಿಹೊಂದಿದೆ. ರಾಜಕೀಯ ಹಕ್ಕುಗಳ ಸಮಾನತೆ ಎಂಬ ಪರಿಕಲ್ಪನೆಯನ್ನು ವಿಸ್ತರಿಸುವ ಮೂಲಕ ಅದು ಪ್ರಗತಿ ಹೊಂದಿದೆ. ವಯಸ್ಕರಿಗೆ ವೋಟಿನ ಅಧಿಕಾರವನ್ನು ಕೊಡದಿರುವ ಸಂಸದೀಯ ಪ್ರಜಾತಂತ್ರದ ದೇಶಗಳೂ ಕೆಲವಿವೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಎಲ್ಲರಿಗೂ ಸಮಾನ ಅವಕಾಶವಿದೆ ಎಂಬ ತತ್ವವನ್ನು ಅದು ಮಾನ್ಯ ಮಾಡಿದೆ. ಮೂರನೆಯದಾಗಿ, ಯಾವುದೇ ಸಂಸ್ಥೆಯು ತನ್ನ ಸಮಾಜವಿರೋಧೀ ಉದ್ದೇಶಕ್ಕಾಗಿ ರಾಜ್ಯವನ್ನು ವಿರೋಧಿಸಲಾಗದು ಎಂಬ ತತ್ವವನ್ನು ಅದು ಮನ್ನಿಸಿದೆ. ಇಷ್ಟೆಲ್ಲಾ ಇದ್ದರೂ ಪ್ರಜಾತಂತ್ರಕ್ಕೇ ಕಟಿಬದ್ಧವಾಗಿರುವ ದೇಶಗಳಲ್ಲಿಯೂ ಸಹ ಸಂಸದೀಯ ಪ್ರಜಾತಂತ್ರದ ಬಗೆಗೆ ಅತೀವ ಅಸಹನೆ ಇದೆ. ಅಂತಹ ದೇಶಗಳಲ್ಲಿ ಅಸಹನೆಗೆ ಇರುವ ಕಾರಣಗಳೂ ಸರ್ವಾಧಿಕಾರೀ ದೇಶಗಳು ಕೊಡುವ ಕಾರಣಗಳಿಂದ ಭಿನ್ನವಾಗಿರಲೇ ಬೇಕು. ಇಲ್ಲಿ ಹೆಚ್ಚಿನ ವಿವರಗಳಿಗೆ ಕಾಲಾವಕಾಶವಿಲ್ಲ. ಸಂಸದೀಯ ಪ್ರಜಾತಂತ್ರವು ಸ್ವಾತಂತ್ರ್ಯ, ಸ್ವತ್ತು ಮತ್ತು ಸಂತೋಷಗಳ ಗಳಿಕೆಗೆ ಅವಕಾಶ ಮಾಡಿಕೊಡುವ ಹಕ್ಕನ್ನು ಕೊಡುವಲ್ಲಿ ಜನತೆಗೆ ನಿರಾಶೆಯನ್ನುಂಟುಮಾಡಿದೆ ಎಂಬ ಅರಿವೇ ಅದರ ಬಗೆಗಿನ ಅಸಹನೆಗೆ ಕಾರಣ ಎಂದು ಸ್ಥೂಲವಾಗಿ ಹೇಳಬಹುದು. ಒಂದು ವೇಳೆ ಇದು ನಿಜವೇ ಆದರೆ, ಅದರ ಸೋಲಿನ ಕಾರಣಗಳನ್ನು ತಿಳಿದುಕೊಳ್ಳುವುದು ಆವಶ್ಯಕ. ಪ್ರಾಯಶಃ ದೊಷಯುಕ್ತ ತತ್ವ ಅಥವಾ ದೋಷಯುಕ್ತ ಅನುಷ್ಠಾನ, ಅಥವಾ ಇವೆರಡೂ, ಅದರ ಸೋಲಿಗೆ ಕಾರಣವಿರಬಹುದು. ಈ ಎರಡೂ ಕಾರಣಗಳಿರಬೇಕೆಂಬುದೇ ನನ್ನ ಅಭಿಪ್ರಾಯ. ಸಂಸದೀಯ ಪ್ರಜಾತಂತ್ರವನ್ನು ಕಲುಷಿತಗೊಳಿಸಿರುವ ತತ್ವಕ್ಕೆ ನಾನು ಎರಡು ನಿದರ್ಶನಗಳನ್ನು ಕೊಡುತ್ತೇನೆ. ಸಂಸದೀಯ ಪ್ರಜಾತಂತ್ರವನ್ನು ಹಾಳು ಮಾಡಿರುವುದು ಒಪ್ಪಂದದ ಸ್ವಾತಂತ್ರ್ಯ ಸಿದ್ಧಾಂತವೇ ಎಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಈ ಸಿದ್ಧಾಂತಕ್ಕೆ ಮಾನ್ಯತೆ ನೀಡಲಾಯಿತಲ್ಲದೆ, ಅದನ್ನು ಸ್ವಾತಂತ್ರ್ಯದ ಹೆಸರಿನಲ್ಲಿ ಎತ್ತಿ ಹಿಡಿಯಲಾಯಿತು. ಸಂಸದೀಯ ಪ್ರಜಾತಂತ್ರವು ಆರ್ಥಿಕ ಅಸಮಾನತೆಗೆ ಗಮನಕೊಡಲಿಲ್ಲ. ಒಂದು ವೇಳೆ ಒಪ್ಪಂದಕ್ಕೆ ಬದ್ಧವಾಗಿರುವ ಪಕ್ಷಗಳು ಆರ್ಥಿಕವಾಗಿ ಅಸಮಾನವಾಗಿದ್ದರೆ, ಅವುಗಳ ಮೇಲೆ ಒಪ್ಪಂದದ ಸ್ವಾತಂತ್ರ್ಯವು ದುರ್ಬಲ ಪಕ್ಷಕ್ಕೆ ಮೋಸಮಾಡುವ ಅವಕಾಶವನ್ನು ಪ್ರಬಲ ಪಕ್ಷಕ್ಕೆ ಕೊಟ್ಟರೂ, ಅದು ಉದಾಸೀನ ಭಾವವನ್ನೇ ತಳೆಯಿತು. ಇದರ ಪರಿಣಾಮವಾಗಿ ಸಂಸದೀಯ ಪ್ರಜಾತಂತ್ರವು, ತಾನು ಸ್ವಾತಂತ್ರ್ಯದ ಪ್ರತಿಪಾದಕನೆಂದು ಹೇಳಿಕೊಳ್ಳುತ್ತಲೇ ಬಡವರಿಗೂ, ತುಳಿಯಲ್ಪಟ್ಟವರಿಗೂ, ಉತ್ತರಾಧಿಕಾರವನ್ನು ಕಳೆದುಕೊಂಡವರಿಗೂ ಸತತವಾಗಿ ಆರ್ಥಿಕ ಅನ್ಯಾಯಗಳನ್ನು ಎಸಗುತ್ತಾ ಬಂದಿದೆ. ಸಂಸದೀಯ ಪ್ರಜಾತಂತ್ರವನ್ನು ಕಲುಷಿತಗೊಳಿಸಿರುವ ಮತ್ತೊಂದು ಸಿದ್ಧಾಂತವೆಂದರೆ, ಎಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾತಂತ್ರವಿಲ್ಲವೋ, ಅಲ್ಲಿ ರಾಜಕಿಯ ಪ್ರಜಾತಂತ್ರಕ್ಕೆ ಏಳಿಗೆಯಿಲ್ಲ ಎಂಬುದನ್ನು ಅರಿಯದೇ ಇರುವುದು. ಇದನ್ನು ಕೆಲವರು ಆಕ್ಷೇಪಿಸಬಹುದು. ಹಾಗೆ ಆಕ್ಷೇಪಿಸಬಯಸುವವರಿಗೆ ನಾನೊಂದು ಪ್ರಶ್ನೆ ಕೇಳುತ್ತೇನೆ. ಇಟಲಿ, ಜರ್ಮನಿ ಮತ್ತು ರಷ್ಯಾ ದೇಶಗಳಲ್ಲಿ ಸಂಸದೀಯ ಪ್ರಜಾತಂತ್ರವು ಅಷ್ಟು ಸುಲಭವಾಗಿ ಪತನವಾಯಿತೇಕೆ? ಅಷ್ಟೇ ಸುಲಭವಾಗಿ ಇಂಗ್ಲೆಂಡಿನಲ್ಲಾಗಲೀ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಾಗಲೀ ಅದು ಪತನವಾಗಲಿಲ್ಲವೇಕೆ? ನನ್ನ ಪ್ರಕಾರ ಇದಕ್ಕೆ ಒಂದೇ ಉತ್ತರವಿದೆ – ಅದೆಂದರೆ, ಇಂಗ್ಲೆಂಡ್ ಮತ್ತು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಹೆಚ್ಚಿನ ಮಟ್ಟದ ಸಾಮಾಜಿಕ ಮತ್ತು ಆರ್ಥಿಕ ಪ್ರಜಾತಂತ್ರಗಳಿದ್ದವು ಮತ್ತು ಅವು ಉಳಿದ ದೇಶಗಳಲ್ಲಿ ಇರಲಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಪ್ರಜಾತಂತ್ರಗಳು ರಾಜಕೀಯ

ಪ್ರಜಾತಂತ್ರದ ಸ್ನಾಯು ಮತ್ತು ನರಗಳು. ಸ್ನಾಯು ಮತ್ತು ನರಗಳು ಗಟ್ಟಿಯಾದಂತೆಲ್ಲಾ ದೇಹವೂ ಗಟ್ಟಿಯಾಗುತ್ತದೆ. ಪ್ರಜಾತಂತ್ರವು ಸಮಾನತೆಗೆ ಮತ್ತೊಂದು ಹೆಸರು. ಸಂಸದೀಯ ಪ್ರಜಾತಂತ್ರವು ಸ್ವಾತಂತ್ರ್ಯದ ಒತ್ತಾಸೆಯನ್ನು ಮೂಡಿಸಿತು. ಆದರೆ ಅದು ಸಮಾನತೆಯ ಸಾಮಾನ್ಯ ಪರಿಚಯವನ್ನೂ ಮಾಡಿಕೊಳ್ಳಲಿಲ್ಲ. ಸಮಾನತೆಯ ಮಹತ್ವವನ್ನು ಅರಿತುಕೊಳ್ಳುವಲ್ಲಿ ಅದು ಸೋತಿತು; ಅಲ್ಲದೆ, ಅದು ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಸರಿದೂಗಿಸಿಕೊಂಡು ಹೋಗಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇದರ ಪರಿಣಾಮವಾಗಿ, ಸ್ವಾತಂತ್ರ್ಯವು ಸಮಾನತೆಯನ್ನು ನುಂಗಿಹಾಕಿತಲ್ಲದೆ, ಅಸಮಾನತೆಯ ಸಂತತಿಯನ್ನು ಉಳಿಸಿಕೊಂಡಿವೆ. ಸಂಸದೀಯ ಪ್ರಜಾತಂತ್ರದ ಸೋಲಿಗೆ ನನ್ನ ಪ್ರಕಾರ, ಈ ದೋಷಯುಕ್ತ ಸಿದ್ಧಾಂತಗಳೇ ಕಾರಣವೆಂಬುದನ್ನು ನಾನು ತೋರಿಸಿಕೊಟ್ಟಿದ್ದೇನೆ. ಆದರೆ ದೋಷಯುಕ್ತ ಸಿದ್ಧಾಂತಕ್ಕಿಂತ ದೋಷಯುಕ್ತ ಅನುಷ್ಠಾನವೇ ಸಂಸದೀಯ ಪ್ರಜಾತಂತ್ರದ ಸೋಲಿಗೆ ಹೆಚ್ಚಿನ ಕಾರಣ ಎಂಬುದೂ ಸಹ ನನಗೆ ಖಚಿತವಾಗಿದೆ. ರಾಜಕೀಯವಾಗಿ ನಾವು ಯಾವುದೇ ಸಮಾಜವನ್ನು ಆಳುವವರು ಮತ್ತು ಆಳಲ್ಪಡುವವರು ಎಂದು ಎರಡು ವರ್ಗ ಮಾಡಬಹುದು. ಈ ವರ್ಗೀಕರಣವೊಂದು ಅನಿಷ್ಟವೇ ಸರಿ. ಈ ಅನಿಷ್ಟ ಇಷ್ಟಕ್ಕೇ ಇದ್ದರೆ ಅದೇನೂ ಮಹತ್ವದ ವಿಷಯವಾಗುತ್ತಿರಲಿಲ್ಲ. ಆದರೆ, ಈ ವರ್ಗೀಕರಣ ದುರದೃಷ್ಟವಶಾತ್, ಮುಂದೆ ಒಂದು ಮಾದರಿಯಾಗಿಬಿಡುತ್ತದೆ, ಹಾಗೂ ತಾರತಮ್ಯಕ್ಕೆ ಕಾರಣವಾಗುತ್ತದೆ. ಅಂದರೆ, ಆಳುವವರು ಯಾವಾಗಲೂ ಆಳುವವರ ವರ್ಗದಿಂದಲೇ ಬರುತ್ತಾರೆ ಮತ್ತು ಆಳಲ್ಪಡುವವರ ವರ್ಗ ಎಂದೂ ಆಳುವವರ ವರ್ಗವಾಗುವುದಿಲ್ಲ. ಜನರೆಂದೂ ತಮ್ಮನ್ನು ತಾವೇ ಆಳಿಕೊಳ್ಳುವುದಿಲ್ಲ. ಅವರು ಸರ್ಕಾರವನ್ನು ಸ್ಥಾಪಿಸಿ, ಅದರಿಂದ ತಾವೇ ಆಳಿಸಿಕೊಳ್ಳುತ್ತಾರೆ.; ಅಲ್ಲದೆ, ಅದು ತಮ್ಮದೇ ಆದ ಸರ್ಕಾರ ಎಂಬುದನ್ನು ಮರೆತುಬಿಡುತ್ತಾರೆ. ಪರಿಸ್ಥಿತಿ ಹೀಗಿರುವಾಗ ಸಂಸದೀಯ ಪ್ರಜಾತಂತ್ರವು ಎಂದೂ ಜನರ ಸರ್ಕಾರವಾಗಿಲ್ಲ, ಜನರಿಂದ ಆಳುವ ಸರ್ಕಾರವೂ ಆಗಿಲ್ಲ; ಅದಕ್ಕಾಗಿಯೇ ಅದು ಜನರಿಗೋಸ್ಕರವೇ ಆದ ಸರ್ಕಾರವೂ ಆಗಿಲ್ಲ. ಸಂಸದೀಯ ಪ್ರಜಾತಂತ್ರವು – ಅದಕ್ಕೆ ಜನತಂತ್ರದ ಎಲ್ಲ ಲಕ್ಷಣಗಳಿದ್ದರೂ. ವಾಸ್ತವವಾಗಿ, ವಂಶಪಾರಂಪರ್ಯವಾಗಿ ಆಳಲ್ಪಡುವವರ ವರ್ಗ ಮತ್ತು ವಂಶ ಪಾರಂಪರ್ಯವಾಗಿ ಆಳುವವರ ವರ್ಗಗಳ ಸರ್ಕಾರವಾಗಿದೆ. ಸಂಸದೀಯ ಪ್ರಜಾತಂತ್ರದ ಈ ಶೋಚನೀಯ ಸೋಲಿಗೆ ರಾಜಕೀಯ ಜೀವನದ ದುಷ್ಟ ಅನುಷ್ಠಾನವೇ ಕಾರಣ. ಈ ಕಾರಣದಿಂದಾಗಿಯೇ ಸಂಸದೀಯ ಪ್ರಜಾತಂತ್ರವು ಸ್ವಾತಂತ್ರ್ಯ, ಸ್ವತ್ತು ಮತ್ತು ಸಂತೋಷ ಸಂಪಾದಿಸಿಕೊಡಲಾಗುವುದೆಂದು ಜನಸಾಮಾನ್ಯರಿಗೆ ಕೊಟ್ಟ ಭರವಸೆಯನ್ನು ಈಡೇರಿಸದೇ ಇರುವುದು.

"ಇದಕ್ಕೆ ಯಾರು ಹೊಣೆ ಎಂಬುದೇ ಈಗಿನ ಪ್ರಶ್ನೆ. ಬಡಜನರು, ಕೂಲಿಕಾರರು ಮತ್ತು ತುಳಿಯಲ್ಪಟ್ಟವರ ವರ್ಗಗಳಿಗೆ ಸಂಸದೀಯ ಪ್ರಜಾತಂತ್ರವು ಒಳ್ಳೆಯದನ್ನು ಮಾಡುವಲ್ಲಿ ಸೋತಿದ್ದರೆ, ಅದಕ್ಕೆ ಈ ಮೂರು ವರ್ಗಗಳೇ ಮುಖ್ಯ ಕಾರಣ. ಮೊದಲನೆಯದಾಗಿ, ಮಾನವ ಜೀವನವನ್ನು ರೂಪಿಸುವಲ್ಲಿ ಆರ್ಥಿಕ ಅಂಶದ ಪರಿಣಾಮದ ಬಗೆಗೆ ಈ ವರ್ಗದವರು ಅತ್ಯಂತ ಭಯಂಕರ ಅಲಕ್ಷ್ಯವನ್ನು ತೋರಿಸಿದ್ದಾರೆ. ಯಾರೋ ಒಬ್ಬರು ಇತ್ತೀಚೆಗೆ 'ದಿ ಎಂಡ್ ಆಫ್ ದಿ ಎಕಾನಾಮಿಕ್ ಮ್ಯಾನ್' ('ಆರ್ಥಿಕ ಮನುಷ್ಯನ ಅವಸಾನ') ಎಂಬ ಪುಸ್ತಕ ಬರೆದಿದ್ದಾರೆ. ಆದರೆ ನಾವು ನಿಜವಾಗಿಯೂ ಆರ್ಥಿಕ ಮಾನವನ ಅಂತ್ಯದ ಬಗೆಗೆ ಮಾತಾಡಲು ಬರುವುದೇ ಇಲ್ಲ, ಏಕೆಂದರೆ, ಆರ್ಥಿಕ ಮನುಷ್ಯ ಹುಟ್ಟಲೇ ಇಲ್ಲ. ಮಾರ್ಕ್ಸನನ್ನು ಮೂದಲಿಸುವಾಗ ಹೇಳುವ 'ಮನುಷ್ಯನು ಕೇವಲ ತಿಂದುಂಡು ಬದುಕುವ ಪ್ರಾಣಿಯಲ್ಲ' ಎಂಬ ಮಾತು ದುರದೃಷ್ಟವಶಾತ್ ಸತ್ಯವಾಗಿದೆ. ಹಂದಿಗಳನ್ನು ಕೊಬ್ಬಿಸುವಂತೆ ಮನುಷ್ಯನನ್ನು ಕೊಬ್ಬಿಸುವುದಷ್ಟೇ ನಾಗರಿಕತೆಯಲ್ಲ ಎಂಬ ಕಾರ್ಲೈಲನ ಮಾತನ್ನು ನಾನು ಒಪ್ಪುತ್ತೇನೆ. ಆದರೆ ನಾವು ಅದರಿಂದ ಬಹಳ ದೂರ ಇದ್ದೇವೆ.

ಕಾರ್ಮಿಕ ವರ್ಗದವರು ಹಂದಿಗಳಂತೆ ಕೊಬ್ಬಿಲ್ಲವಷ್ಟೆ ಅಲ್ಲ, ಅವರು ಉಪವಾಸವಿರುತ್ತಾರೆ; ಅವರಿಗೆ ಆಹಾರ ಮೊದಲು, ಉಳಿದುದು ಆಮೇಲೆ, ಎಂಬುದನ್ನು ನಾವು ಯೋಚಿಸಿದರೆ ಒಳಿತು.

"ಮಾರ್ಕ್ಸ್ ಇತಿಹಾಸದ ಆರ್ಥಿಕ ವ್ಯಾಖ್ಯಾನ ಸಿದ್ಧಾಂತವನ್ನು ಪ್ರತಿಪಾದಿಸಿದನು. ಅದರ ಸಾಮಂಜಸ್ಯತೆಯ ಬಗ್ಗೆ ಈಗಾಗಲೇ ಸಾಕಷ್ಟು ವಾದವಿವಾದವೆದ್ದಿದೆ. ನನ್ನ ಪ್ರಕಾರ, ಮಾರ್ಕ್ಸ್ ಇದನ್ನು ಕೇವಲ ಒಂದು ಸಿದ್ಧಾಂತವೆಂಬಂತೆ ಪ್ರತಿಪಾದಿಸದೆ, ಕಾರ್ಮಿಕರಿಗೊಂದು ದಿಕ್ಸೂಚಿಯೆಂಬಂತೆ ಪ್ರತಿಪಾದಿಸಿದನು. ಅಂದರೆ, ಆರ್ಥಿಕ ಆಸಕ್ತಿಯೇ ಅತಿ ಮುಖ್ಯ ಆಸಕ್ತಿ ಎಂದು ಮಾಲೀಕರ ವರ್ಗ ಭಾವಿಸುವಂತೆ ಕಾರ್ಮಿಕರೂ ಭಾವಿಸಿದರೆ, ಇತಿಹಾಸವು ಜೀವನದಲ್ಲಿ ಆರ್ಥಿಕ ಅಂಶಕ್ಕಿರುವ ಪ್ರಾಮುಖ್ಯವನ್ನು ಇದುವರೆಗೂ ಪ್ರತಿಬಿಂಬಿಸಿರುವುದಕ್ಕಿಂತ ಹೆಚ್ಚಿಗೆ ಪ್ರತಿಬಿಂಬಿಸಿದಂತಾಗುತ್ತದೆ. ಇತಿಹಾಸದ ಆರ್ಥಿಕ ವ್ಯಾಖ್ಯಾನ ಸಿದ್ಧಾಂತವು ಪೂರ್ಣ ಸತ್ಯವಾಗಿಲ್ಲದಿದ್ದರೆ, ಅದಕ್ಕೆ ಕಾರ್ಮಿಕ ವರ್ಗದವರೆಲ್ಲರೂ ಈ ಸಹಬಾಳ್ವೆಯ ನಿಯಮಗಳನ್ನು ನಿರ್ಧರಿಸುವ ವಿಧಿರೂಪದ ಶಕ್ತಿಯನ್ನು ಆರ್ಥಿಕ ಅಂಶಗಳಿಗೆ ಕೊಡಲು ಸೋತಿದ್ದುದೇ ಕಾರಣ. ಕಾರ್ಮಿಕ ವರ್ಗದವರು ಮನುಕುಲದ ಸರ್ಕಾರವನ್ನು ವಿವರಿಸುವ ಸಾಹಿತ್ಯವನ್ನು ಪರಿಚಯಮಾಡಿಕೊಳ್ಳಲು ಸೋತಿದ್ದಾರೆ. ಕಾರ್ಮಿಕ ವರ್ಗದ ಪ್ರತಿಯೊಬ್ಬನೂ ಆಧುನಿಕ ಕಾಲದ ಸಮಾಜ ಮತ್ತು ಸರ್ಕಾರದ ಬಗೆಗೆ ತಿಳಿಸುವ ನಾಲ್ಕು ದಾಖಲೆಗಳನ್ನು ಪರಿಚಯ ಮಾಡಿಕೊಳ್ಳಲೇಬೇಕು; ಅವೆಂದರೆ, ರೂಸೋನ 'ಸಾಮಾಜಿಕ ಒಪ್ಪಂದ' (ಸೋಷಿಯಲ್ ಕಾಂಟ್ರ್ಯಾಕ್ಟ್), ಮಾರ್ಕ್ಸ್‌ನ 'ಸಮತಾವಾದದ ಪ್ರಣಾಳಿಕೆ' (ಕಮ್ಯುನಿಸ್ಟ್ ಮ್ಯಾನಿಫೆಸ್ಟೋ), ಹದಿಮೂರನೆಯ ಪೋಪ್ ಲಿಯೋ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಬರೆದಿರುವ 'ಜ್ಞಾನಕೋಶ' (ಎನ್‌ಸೈಕ್ಲಿಕಲ್) ಮತ್ತು ಸ್ವಾತಂತ್ರ್ಯದ ಬಗೆಗೆ ಜಾನ್ ಸ್ಟೂವರ್ಟ್ ಮಿಲ್‌ನ ಬರವಣಿಗೆ (ಆನ್ ಲಿಬರ್ಟಿ). ಆದರೆ ಕಾರ್ಮಿಕ ವರ್ಗದವರು ಅವುಗಳಿಗೆ ಕೊಡಬೇಕಾದ ಗಮನವನ್ನು ಕೊಡುವುದಿಲ್ಲ. ಅದರ ಬದಲು ಅವರು ಪುರಾತನ ರಾಜರಾಣಿಯರ ಸುಳ್ಳು ಹಾಗೂ ಪೌರಾಣಿಕ ಕತೆಗಳನ್ನು ಓದಿ ಆನಂದಿಸುತ್ತಾರೆ ಹಾಗೂ ಆ ಚಟಕ್ಕೇ ಅಂಟಿಕೊಂಡಿದ್ದಾರೆ.

"ಅವರು ಇನ್ನೂ ಒಂದು ಗುರುತರವಾದ ಅಪರಾಧವನ್ನು ತಮಗೆ ತಾವೇ ಎಸಗಿಕೊಂಡಿದ್ದಾರೆ. ಸರ್ಕಾರವನ್ನು ತಮ್ಮ ಕೈಗೇ ತೆಗೆದುಕೊಳ್ಳಬೇಕೆಂಬ ಹಂಬಲವನ್ನು ಅವರು ಬೆಳೆಸಿಕೊಂಡೇ ಇಲ್ಲ; ಅಷ್ಟೇ ಅಲ್ಲ, ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಬೇಕಾದರೆ ಸರ್ಕಾರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬ ಅಗತ್ಯದ ಅರಿವೂ ಅವರಿಗಿಲ್ಲ. ಅವರಿಗೆ ಸರ್ಕಾರದಲ್ಲಿ ಆಸಕ್ತಿ ಸಹಾ ಇಲ್ಲ. ಮನುಕುಲವನ್ನು ಇದುವರೆಗೂ ಕಾಡಿರುವ ದುರಂತಗಳಲ್ಲೇ ಇದು ಅತ್ಯಂತ ದೊಡ್ಡದು ಹಾಗೂ ಶೋಚನೀಯ. ಈಗಿರುವ ಸಂಸ್ಥೆಗಳಲ್ಲಿ ಕೇವಲ ಕಾರ್ಮಿಕ ಸಂಘ–ಧೋರಣೆ ಮಾತ್ರವಿದೆ. ನಾನೇನೂ ಕಾರ್ಮಿಕ ಸಂಘಗಳ ವಿರೋಧಿಯಲ್ಲ. ಅವು ಬಹಳ ಪ್ರಯೋಜನಕಾರಿ ಉದ್ದೇಶಗಳನ್ನು ಸಾಧಿಸುತ್ತವೆ. ಆದರೆ ಕಾರ್ಮಿಕರ ಪ್ರತಿಯೊಂದು ಪಿಡುಗಿಗೂ ಕಾರ್ಮಿಕ ಸಂಘಗಳೇ ಸರ್ವೌಷಧ ಎಂದು ತಿಳಿಯುವುದು ಬಹಳ ದೊಡ್ಡ ತಪ್ಪು. ಕಾರ್ಮಿಕ ಸಂಘಗಳೇನೋ ಪ್ರಬಲವಾಗಿರಬಹುದು. ಆದರೆ ಅವು ಬಂಡವಾಳಷಾಹಿಯನ್ನಾದರೂ ಚೆನ್ನಾಗಿ ನಡೆಸಿಕೊಂಡು ಹೋಗುವಂತೆ ಬಂಡವಾಳಷಾಹಿಗಳನ್ನು ಬಲಾತ್ಕಾರಿಸುವಷ್ಟು ಪ್ರಬಲವಾಗಿಲ್ಲ. ಕಾರ್ಮಿಕ ಸಂಘಗಳಿಗೆ ವಿಶ್ವಾಸಾರ್ಹವಾದ ಕಾರ್ಮಿಕರದೇ ಆದ ಸರ್ಕಾರವೊಂದಿದ್ದರೆ, ಆಗ ಆ ಸಂಘಗಳು ಇನ್ನೂ ಬಹಳ ಪರಿಣಾಮಕಾರಿಯಾಗಿರುತ್ತಿದ್ದವು. ಸರ್ಕಾರವನ್ನು ನಿಯಂತ್ರಿಸುವುದೇ ಕಾರ್ಮಿಕರ ಗುರಿಯಾಗಬೇಕು. ಕಾರ್ಮಿಕ ಸಂಘಗಳ ಧೋರಣೆಯು ಸರ್ಕಾರವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಗುರಿಯನ್ನಿಟ್ಟುಕೊಳ್ಳುವವರೆಗೂ ಅವು ಕಾರ್ಮಿಕರಿಗೆ ಏನೊಂದು ಒಳ್ಳೆಯದನ್ನೂ ಮಾಡುವುದಿಲ್ಲ. ಅಷ್ಟೇ ಅಲ್ಲ, ಅವು ಕಾರ್ಮಿಕ ಸಂಘಗಳ

ಧುರೀಣರ ನಡುವೆ ನಡೆಯುವ ನಿರಂತರ ಕಚ್ಚಾಟಕ್ಕೆ ಮೂಲವಾಗುತ್ತವೆ.

"ಕಾರ್ಮಿಕ ವರ್ಗದವರನ್ನು ಕಾಡುತ್ತಿರುವ ಮೂರನೆಯ ಅನಿಷ್ಟವೆಂದರೆ, ರಾಷ್ಟ್ರೀಯತೆಯ ಸೋಗಿನಲ್ಲಿ ಅವರನ್ನು ದಾರಿತಪ್ಪಿಸುವುದು. ಭಿಕ್ಷುಕರಂತಿರುವ, ಏನನ್ನೂ ಕೊಡಲು ಶಕ್ತರಲ್ಲದ ಅವರು, ಕೆಲವು ವೇಳೆ, ರಾಷ್ಟ್ರಕ್ಕಾಗಿ ತಮ್ಮೆಲ್ಲವನ್ನೂ ತ್ಯಾಗ ಮಾಡಬೇಕಾಗುತ್ತದೆ. ಹೀಗೆ ತ್ಯಾಗ ಮಾಡಿ ಪಡೆದ ರಾಷ್ಟ್ರವು ಸ್ಥಾಪಿತವಾದಾಗ ಅದು ತಮಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಕೊಟ್ಟೀತೇ, ಇಲ್ಲವೇ ಎಂಬುದನ್ನೂ ಅವರು ವಿಚಾರಿಸುವ ಗೋಜಿಗೇ ಹೋಗುವುದಿಲ್ಲ. ಅನೇಕ ವೇಳೆ, ಇಂತಹ ರಾಷ್ಟ್ರೀಯ ಧೋರಣೆಯಿಂದಲೂ ಕಾರ್ಮಿಕರ ತ್ಯಾಗದಿಂದಲೂ ಹುಟ್ಟಿದ ಸ್ವತಂತ್ರ ರಾಷ್ಟ್ರವು ಕಾರ್ಮಿಕ ನಾಯಕರ ಆಳ್ವಿಕೆಯಿಂದಾಗಿ ಕಾರ್ಮಿಕ ವರ್ಗದವರ ಶತ್ರುವಾಗುವ ಸಂಭವವೇ ಹೆಚ್ಚು. ಕಾರ್ಮಿಕರು  ಈಡಾಗಿರುವ ಶೋಷಣೆಗಳಲ್ಲೇ ಇದು ಅತ್ಯಂತ ಕೆಟ್ಟದು.

"ಒಂದು ವೇಳೆ ಕಾರ್ಮಿಕ ವರ್ಗದವರು ಸಂಸದೀಯ ಪ್ರಜಾತಂತ್ರದಲ್ಲಿ ಇರಬೇಕಾದ ಪ್ರಸಂಗ ಬಂದರೆ, ಆಗ ಅವರು ಅದನ್ನು ತಮ್ಮ ಅನುಕೂಲಕ್ಕೆ ಅನುವಾಗುವಂತೆ ಮಾಡಿಕೊಳ್ಳಬೇಕು. ಈ ಗುರಿಯನ್ನು ಸಾಧಿಸಬೇಕಾದರೆ, ನನ್ನ ಪ್ರಕಾರ ಎರಡು ವಿಷಯಗಳು ಆವಶ್ಯಕ. ಮೊದಲನೆಯದಾಗಿ, ಭಾರತೀಯ ಕಾರ್ಮಿಕರಿಗೆ ಕಾರ್ಮಿಕರ ಸಂಘಗಳನ್ನು ಸ್ಥಾಪಿಸುವುದಷ್ಟೇ ಅಂತಿಮ ಗುರಿ ಎಂಬ ಧೋರಣೆಯನ್ನು ಕೈಬಿಡಬೇಕು. ಕಾರ್ಮಿಕ ಸಂಘವು ಸರ್ಕಾರವನ್ನು ನೋಡಿಕೊಳ್ಳಲು ಕಾರ್ಮಿಕರೇ ಬೇಕು ಎಂದು ಘೋಷಿಸಬೇಕು. ಅದಕ್ಕಾಗಿ, ಕಾರ್ಮಿಕ ಪಕ್ಷವೆಂಬ ರಾಜಕೀಯ ಪಕ್ಷವನ್ನು ಕಟ್ಟಬೇಕು. ಅಂಥ ಪಕ್ಷವು ತನ್ನ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳನ್ನು ಸೇರಿಸಿಕೊಳ್ಳಬೇಕು. ಆದರೆ, ಅದು ಕಾರ್ಮಿಕ ಸಂಘಗಳ ಧೋರಣೆಯ ಸಂಕುಚಿತ ಹಾಗೂ ಕಪಿಮುಷ್ಟಿಯ ಧೋರಣೆಯಿಂದ ಮುಕ್ತವಾಗಬೇಕು; ಅಂತಿಮ ಲಾಭವನ್ನು ಬಲಿಗೊಟ್ಟು, ತಾತ್ಕಾಲಿಕ ಲಾಭಕ್ಕೆ ಒತ್ತು ಕೊಡುವುದನ್ನೂ, ಕಾರ್ಮಿಕರನ್ನು ಪ್ರತಿನಿಧಿಸಲು ಕಾರ್ಮಿಕ ಸಂಘದ ಅಧಿಕಾರಿಗಳಿಗೆ ಅಧಿಕಾರಯುಕ್ತ ಹಕ್ಕಿದೆ ಎಂಬ ಧೋರಣೆಯನ್ನೂ ಕೈಬಿಡಬೇಕು. ಅಲ್ಲದೆ, ಹಿಂದೂ ಮಹಾಸಭಾದಂತಹ ಕೋಮುವಾದಿ ರಾಜಕೀಯ ಪಕ್ಷಗಳಿಂದಲೂ ಕಾಂಗ್ರೆಸ್ಸಿನಂತಹ ಬಂಡವಾಳಷಾಹಿ ರಾಜಕೀಯ ಪಕ್ಷಗಳಿಂದಲೂ, ಅದು ದೂರವಿರಬೇಕು. ಕಾಂಗ್ರೆಸ್ ಅಥವಾ ಹಿಂದೂ ಮಹಾಸಭೆಯಲ್ಲಿ ಕಾರ್ಮಿಕರು ವಿಲೀನವಾಗುವ ಆವಶ್ಯಕತೆಯೇನಿಲ್ಲ; ಅಥವಾ ಅವೆರಡೂ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿವೆ ಎಂಬ ಕಾರಣಕ್ಕಾಗಿ ಅವುಗಳಲ್ಲಿ ಯಾವೊಂದರ ಅನುಯಾಯಿಯಾಗುವುದೂ ಅವಶ್ಯವಿಲ್ಲ. ಕಾರ್ಮಿಕರು ತಾವೇ ಒಂದು ಪ್ರತ್ಯೇಕ ರಾಜಕೀಯ ಪಕ್ಷವಾಗುವ ಮೂಲಕ ಎರಡು ಉದ್ದೇಶಗಳನ್ನು ಸಾಧಿಸಬಹುದು. ಕಾಂಗ್ರೆಸ್ ಮತ್ತೂ ಹಿಂದೂ ಮಹಾಸಭೆಗಳ ಹಿಡಿತದಿಂದ ತಪ್ಪಿಸಿಕೊಂಡರೆ, ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಇನ್ನೂ ಚೆನ್ನಾಗಿ ಹೋರಾಡಬಹುದು; ರಾಷ್ಟ್ರೀಯತೆಯ ಹೆಸರಿನಲ್ಲಿ ನಡೆಯುವ ಮೋಸದಿಂದ ಅವರು ತಪ್ಪಿಸಿಕೊಳ್ಳಬಲ್ಲರು. ಎಲ್ಲಕ್ಕಿಂತ ಮುಖ್ಯವಾದುದೆಂದರೆ, ಭಾರತೀಯ ರಾಜಕಾರಣದ ಅವಿಚಾರತೆಯನ್ನು ಅವರು ತಡೆಯಬಲ್ಲರು. ಕಾಂಗ್ರೆಸ್ ರಾಜಕಾರಣವು ಕ್ರಾಂತಿಕಾರಿಯೆಂದು ಹೇಳಲಾಗುತ್ತಿದೆ; ಅದಕ್ಕೆ ಅದು ಬಹಳ ಸಂಖ್ಯೆಯ ಅನುಯಾಯಿಗಳನ್ನು ಗಳಿಸಿಕೊಂಡಿದೆ. ಆದರೆ ಕಾಂಗ್ರೆಸ್ ರಾಜಕಾರಣವು ನಿರಾಶೆಯನ್ನು ಬಿಟ್ಟರೆ ಮತ್ತೇನನ್ನೂ ಉಂಟು ಮಾಡಿಲ್ಲ ಎಂಬುದೂ ಸತ್ಯ. ಇದಕ್ಕೆ ಕಾಂಗ್ರೆಸ್ ರಾಜಕಾರಣವು ಬಹಳ ವಿಚಾರಹೀನವಾಗಿರುವುದೇ ಕಾರಣ, ಮತ್ತು ಅದು ವಿಚಾರಹೀನವಾಗಿರುವುದಕ್ಕೆ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಿಲ್ಲದಿರುವುದೇ ಮುಖ್ಯ ಕಾರಣ. ಕಳೆದ ಎರಡು ದಶಕಗಳಿಂದ ಭಾರತೀಯ ರಾಜಕಾರಣದ ಅಧಿಕಾರ ನಡೆಸುತ್ತಿರುವ ಈ ವಿಚಾರಹೀನತೆಯನ್ನು ತಿದ್ದಿಕೊಳ್ಳಲು ಭಾರತದಲ್ಲೊಂದು ಕಾರ್ಮಿಕರ ಪಕ್ಷ

ಹುಟ್ಟಬೇಕಾದುದು ಸ್ವಾಗತಾರ್ಹ. ಎರಡನೆಯದಾಗಿ, ಜ್ಞಾನವಿಲ್ಲದಿದ್ದರೆ ಅಧಿಕಾರವೂ ಇಲ್ಲ ಎಂಬುದನ್ನೂ ಭಾರತೀಯ ಕಾರ್ಮಿಕರು ಮನಗಾಣಬೇಕು. ಭಾರತದಲ್ಲಿ ಕಾರ್ಮಿಕ ಪಕ್ಷ ಹುಟ್ಟಿ, ಜನತೆಯನ್ನು ಆಳುವುದಾಗಿ ಘೋಷಿಸಿದಾಗ, ಕಾರ್ಮಿಕರು ಆಳಲು ಯೋಗ್ಯರೇ ಎಂಬ ಪ್ರಶ್ನೆಯು ಖಂಡಿತವಾಗಿ ಏಳುತ್ತದೆ. ಕಾರ್ಮಿಕರು ಬೇರೆಯವರಿಗಿಂತ ಕೆಟ್ಟದಾಗಿ ಆಳಲಾರರು ಅಥವಾ ಗೃಹಖಾತೆಯಲ್ಲಾಗಲಿ, ವಿದೇಶಖಾತೆಯಲ್ಲಾಗಲೀ, ಹೆಚ್ಚು ದಾರಿದ್ರ್ಯವನ್ನು ತೋರಿಸಲಾರರು ಎಂದು ಉತ್ತರಿಸಿದರೆ, ಅದು ಸೂಕ್ತ ಉತ್ತರವಾಗಲಾರದು. ಕಾರ್ಮಿಕರು ತಾವು ಇತರರಿಗಿಂತ ಚೆನ್ನಾಗಿ ಆಳುತ್ತೇವೆಂಬುದನ್ನೂ ಸಾಬೀತುಪಡಿಸಬೇಕು. ಕಾರ್ಮಿಕರ ಸರ್ಕಾರವು ತಟಸ್ಥ ಸರ್ಕಾರವಲ್ಲ. ಅದೊಂದು ನಿಯಂತ್ರಣ ವ್ಯವಸ್ಥೆಯನ್ನುಳ್ಳ ಸರ್ಕಾರ. ತಟಸ್ಥ ಸರ್ಕಾರಕ್ಕೆ ಬೇಕಾಗುವ ಜ್ಞಾನಕ್ಕಿಂತ ನಿಯಂತ್ರಣ ವ್ಯವಸ್ಥೆಗೆ ಹೆಚ್ಚಿನ ಜ್ಞಾನ ಬೇಕು. ದುರದೃಷ್ಟವಶಾತ್, ಕಾರ್ಮಿಕರಿಗೆ ವ್ಯಾಸಂಗದ ಆವಶ್ಯಕತೆಯ ಅರಿವೇ ಆಗಿಲ್ಲ. ಕೈಗಾರಿಕೋದ್ಯಮಿಗಳನ್ನು ಚೆನ್ನಾಗಿ ಬೈಯುವುದನ್ನು ಬಿಟ್ಟರೆ ಭಾರತದ ಕಾರ್ಮಿಕ ನಾಯಕರು ಮತ್ತೇನೂ ಕಲಿತಿಲ್ಲ. ಬರೀ ಬೈಯುವುದೇ ಕಾರ್ಮಿಕ ನಾಯಕರ ಸರ್ವಸ್ವ ಮತ್ತು ಗುರಿ.

"ಆದ್ದರಿಂದ ಭಾರತೀಯ ಕಾರ್ಮಿಕರ ಪರಿಷತ್ತು ಈ ದೋಷವನ್ನು ಗುರುತಿಸುವುದು ಮತ್ತು ಕಾರ್ಮಿಕ ವರ್ಗಗಳಿಗಾಗಿ ಅಧ್ಯಯನ ವೃತ್ತಗಳನ್ನು ಪ್ರಾರಂಭಿಸುವುದು ನನಗೆ ಸಂತೋಷವನ್ನುಂಟು ಮಾಡಿದೆ. ಇವು ಕಾರ್ಮಿಕರನ್ನು ಯೋಗ್ಯ ಪ್ರಭುಗಳನ್ನಾಗಿ ಮಾಡುವಲ್ಲಿ ಬಹಳ ಪರಿಣಾಮಕಾರಿಯಾದ ಸಾಧನಗಳಾಗಿವೆ. ಪರಿಷತ್ತು ಮತ್ತೊಂದು ಆವಶ್ಯಕತೆಯನ್ನು, ಅಂದರೆ ಕಾರ್ಮಿಕ ಪಕ್ಷದ ರಚನೆಯನ್ನೂ ಮರೆಯುವುದಿಲ್ಲವೆಂದೂ ಆಶಿಸುತ್ತೇನೆ. ಇದನ್ನು ಮಾಡಿದಾಗ, ಕಾರ್ಮಿಕ ವರ್ಗದವರು ಆಳುವ ವರ್ಗದ ಮಟ್ಟಕ್ಕೇರಿದ್ದಕ್ಕಾಗಿ, ಪರಿಷತ್ತು ಅವರ ಅಭಿನಂದನೆಗೆ ಪಾತ್ರವಾಗುತ್ತದೆ."

## ೨೧
## ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆ*

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ); ಮಾನ್ಯರೇ, ನಾನು ಈ ಕೆಳಗಿನ ನಿರ್ಣಯವನ್ನು ಮಂಡಿಸುತ್ತೇನೆ.

"೧೯೨೬ ಭಾರತೀಯ ಕಾರ್ಮಿಕ ಸಂಘಗಳ ಶಾಸನದಲ್ಲಿ ತಿದ್ದುಪಡಿ ಮಾಡುವ ಸಲುವಾಗಿ ಮಸೂದೆಯನ್ನು ಎಲ್ಲರಿಗೂ ಕಳುಹಿಸಿ, ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು".

ಈ ಬಗ್ಗೆ ಜನರ ಅಭಿಪ್ರಾಯಗಳನ್ನು ಪಡೆಯುವ ಉದ್ದೇಶದಿಂದ ಮಾಡಿದ ಗೊತ್ತುವಳಿ ಸೂಚನೆಯ ಪ್ರಸ್ತಾಪವಿದು, ಅಷ್ಟೇ. ಹೀಗಿರುವಾಗ ಈ ಮಸೂದೆಯ ಪರಿಣಾಮಗಳನ್ನು ಕುರಿತು ನಾನು ದೀರ್ಘವಾಗಿ ಮಾತಾಡಿದರೆ, ಸದನದ ಕಾಲವನ್ನು ಅನಾವಶ್ಯಕವಾಗಿ ವ್ಯಯ ಮಾಡಿದಂತಾದೀತೇನೋ. ಈ ಮಸೂದೆಯ ಮುಖ್ಯ ಲಕ್ಷಣಗಳಾವುವು, ಈ ವಿಶಿಷ್ಟ ಶಾಸನವನ್ನು ಅಂಗೀಕರಿಸಲು ಸರ್ಕಾರ ಏಕೆ ಮುಂದೆ ಬಂದಿತು, ಎಂಬುದನ್ನಷ್ಟೇ ಸದನಕ್ಕೆ ತಿಳಿಸಿದರೆ ಸಾಕು ಎಂದೆನಿಸುತ್ತದೆ.

ಈ ಮಸೂದೆಯಲ್ಲಿ ಮೂರು ಮುಖ್ಯ ಲಕ್ಷಣಗಳಿವೆ. ಮೊದಲನೆಯದಾಗಿ, ಈ ಮಸೂದೆಯು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ–೪, (೧೯೪೩), ೧೩–೧೧–೧೯೪೩, ಪು.೨೫೭–೫೪.

ಉದ್ಯೋಗದಾತರನ್ನು ಕಾರ್ಮಿಕ ಸಂಘಕ್ಕೆ ಮಾನ್ಯತೆ ನೀಡುವಂತೆ ಒತ್ತಾಯಿಸುತ್ತದೆ. ಎರಡನೆಯದಾಗಿ, ಉದ್ಯೋಗದಾತರು ಕಾರ್ಮಿಕ ಸಂಘಕ್ಕೆ ಮಾನ್ಯತೆ ನೀಡಬೇಕಾದರೆ, ಕಾರ್ಮಿಕ ಸಂಘವು ಕೆಲವು ವಿಶಿಷ್ಟ ನಿಯಮಗಳನ್ನು ಪಾಲಿಸಬೇಕೆಂದು, ಈ ಮಸೂದೆ ವಿಧಿಸುತ್ತದೆ. ಮೂರನೆಯದೆಂದರೆ, ಕಾರ್ಮಿಕ ಸಂಘವು ಆ ನಿಯಮಗಳನ್ನು ಪಾಲಿಸಿ, ಉದ್ಯೋಗದಾತನ ಮಾನ್ಯತೆಗೆ ಅದು ಯೋಗ್ಯವಾಗಿದ್ದರೂ, ಅವನು ಅದನ್ನು ಅಮಾನ್ಯ ಮಾಡಿದರೆ, ಈ ಮಸೂದೆಯು ಅವನನ್ನು ಅಪರಾಧಿಯೆಂದು ಪರಿಗಣಿಸಿ, ಕಾನೂನು ರೀತ್ಯಾ ಅವನು ಶಿಕ್ಷೆಗೊಳಗಾಗುವಂತೆ ಮಾಡುತ್ತದೆ.

ನಾನು ಈಗಾಗಲೇ ಹೇಳಿರುವಂತೆ, ಈ ಕ್ರಮದ ಯೋಗ್ಯತೆಯನ್ನು ಕುರಿತು ಚರ್ಚಿಸುವುದು ಅನಾವಶ್ಯಕ. ಗೊತ್ತುವಳಿ ಸೂಚನೆಯು ಇನ್ನೂ ಸದನದ ಮುಂದಿದೆ. ಅಂದರೆ ಸರ್ಕಾರವು ಈ ಮಸೂದೆಯಲ್ಲಿ ಸೇರಿಸಿರುವ ಉಪಬಂಧಗಳು ಸದ್ಯಕ್ಕೆ ತಾತ್ಕಾಲಿಕವೆಂದು ಪರಿಗಣಿಸಬೇಕು. ಅವೇನೂ ಅಂತಿಮ ನಿರ್ಣಯಗಳಲ್ಲ; ಅಲ್ಲದೆ, ಕಾರ್ಮಿಕ ನಾಯಕರು, ಉದ್ಯೋಗದಾತರು, ಪ್ರಾಂತ್ಯ ಸರ್ಕಾರಗಳೂ ಮತ್ತು ಇದಕ್ಕೆ ಸಂಬಂಧಿಸಿದ ಇತರ ಪಕ್ಷಗಳೂ ಒಪ್ಪಿಗೆ ನೀಡುವವರೆಗೂ ಸರ್ಕಾರವು ಅದಕ್ಕೆ ಅಂತಿಮ ನಿರ್ಣಯದ ಸ್ಥಾನವನ್ನೂ ಕೊಡುವುದಿಲ್ಲ. ನಿರೀಕ್ಷಿಸಿದ ವಿವಿಧ ಅಭಿಪ್ರಾಯಗಳನ್ನು ಸರ್ಕಾರವು ಪರಿಶೀಲಿಸಿದಾಗ, ಮಸೂದೆಯು ಪ್ರಾಯಶಃ ಈಗಿರುವುದಕ್ಕಿಂತ ಭಿನ್ನ ರೀತಿಯಲ್ಲಿರಬಹುದು.

**ಶ್ರೀ ಎನ್.ಎಮ್. ಜೋಷಿ (ನಾಮಕರಣ,** ಅಧಿಕಾರೇತರರು) : ಪ್ರಾಯಶಃ ಅದು ಈಗಿರುವುದಕ್ಕಿಂತ ಉತ್ತಮವಾಗೇ ಇರಬಹುದೆಂದು ಆಶಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಎಲ್ಲರ ದೃಷ್ಟಿಯಿಂದಲೂ ಅದು ಉತ್ತಮವಾಗಿರುತ್ತದೆಂದು ನಾನೂ ನಂಬುತ್ತೇನೆ. ಆದ್ದರಿಂದ, ಭಾರತ ಸರ್ಕಾರವು ಈ ಹೊಣೆ ಹೊರುವಂತೆ ಮಾಡಿದ ಪ್ರಸಂಗಗಳನ್ನಷ್ಟೇ ನಾನು ಸದನಕ್ಕೆ ತಿಳಿಸಬಯಸುತ್ತೇನೆ.

ಈ ವಿಷಯ ಈ ಹಿಂದೆ ಚರ್ಚೆಗೆ ಬಂದಿತ್ತು ಮತ್ತು ಉದ್ಯೋಗದಾತರು ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಪ್ರಶ್ನೆಗೆ ನಮ್ಮ ಗಮನವನ್ನು ಮೀಸಲಿಡಲಾಗಿತ್ತು ಎಂಬುದನ್ನು ಸದನವು ಇಲ್ಲಿ ಸ್ಮರಿಸಬಹುದು. ಕಾರ್ಮಿಕ ಸಂಘಗಳ ಆರೋಗ್ಯಕರ ಬೆಳವಣಿಗೆಗೂ, ಉದ್ಯೋಗದಾತರ ಮತ್ತು ಕಾರ್ಮಿಕರ ನಡುವಿನ ಸೌಹಾರ್ದಯುತ ಸಂಬಂಧಕ್ಕೂ, ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಬೇಕಾದುದು ಎಷ್ಟು ಆವಶ್ಯಕ ಎಂಬುದನ್ನು ರಾಯಲ್ ಕಮಿಷನ್ ಒತ್ತಿ ಹೇಳಿದೆ, ಕಾರ್ಮಿಕರ ಬಗೆಗೆ ರಾಯಲ್ ಕಮಿಷನ್ ಸಲ್ಲಿಸಿರುವ ವರದಿಯನ್ನು ಓದಿರುವ ಸನ್ಮಾನ್ಯ ಸದಸ್ಯರೆಲ್ಲರಿಗೂ ಇದರ ಅರಿವಿದೆ. ಕಾನೂನಿನ ಒತ್ತಾಯದ ಬದಲು, ಉದ್ಯೋಗದಾತರು ತಾವಾಗಿಯೇ ಮಾನ್ಯತೆ ನೀಡಿದರೆ ಒಳ್ಳೆಯದು ಎಂಬುದನ್ನು ರಾಯಲ್ ಕಮಿಷನ್ ಆಗಲೇ ತಿಳಿಸಿತ್ತು ಎಂಬುದನ್ನೂ ಇಲ್ಲಿ ಸದನವು ಸ್ಮರಿಸಬಹುದು. ಉದ್ಯೋಗದಾತರು ತಾವಾಗಿಯೇ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಲು ಮನಸ್ಸು ಮಾಡುವುದಿಲ್ಲ ಎಂಬುದನ್ನು ರಾಯಲ್ ಕಮಿಷನ್ ಆಗಲೇ ವರದಿ ಮಾಡಿತ್ತು (ಹೀಗೆ ಮಾಡಿ ಆಗಲೇ ಹನ್ನೆರಡು ವರ್ಷಗಳು ಕಳೆದಿವೆ) ಎಂಬ ಮಾತನ್ನು ಸದನವು ಸ್ಮರಿಸಿಕೊಳ್ಳಬೇಕು. ಕಾರ್ಮಿಕ ಸಂಘಕ್ಕೆ ಮನ್ನಣೆ ನೀಡುವುದರ ವಿರುದ್ಧ ಅಂದು ರಾಯಲ್ ಕಮಿಷನ್ ಎದುರು ಉದ್ಯೋಗದಾತರು ಯಾವ ಆಕ್ಷೇಪಣೆಗಳನ್ನು ಎತ್ತಿದ್ದರೋ, ಇಂದೂ ಸಹ ಅದೇ ಆಕ್ಷೇಪಣೆಗಳನ್ನೇ ಅವರು ಎತ್ತುತ್ತಿದ್ದಾರೆ. ಇದರ ಪರಿಣಾಮವಾಗಿ, ಪರಿಸ್ಥಿತಿಯಲ್ಲಿ ಸುಧಾರಣೆಯಾಗಿಲ್ಲ.

ಸನ್ಮಾನ್ಯ ಸದಸ್ಯರು ಇಲ್ಲಿ ಒಂದು ವಿಷಯದಲ್ಲಿ ಜ್ಞಾಪಿಸಿಕೊಳ್ಳಬಹುದು – ಹೊಸ ಶಾಸನದ ಪ್ರಕಾರ ಅಧಿಕಾರವನ್ನು ವಹಿಸಿಕೊಂಡ ಅನೇಕ ಪ್ರಾಂತ್ಯ ಸರ್ಕಾರಗಳು, (೧೯೩೭ರ ನಂತರ ಪ್ರಾಂತೀಯ ಸ್ವಾಯತ್ತತೆ

ಬಂದಾಗ) ಈ ಪ್ರಶ್ನೆಯನ್ನು ಕೈಗೆತ್ತಿಕೊಂಡವು. ಉದ್ಯೋಗದಾತರು ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವಂತೆ ಮಾಡಲು ಕೆಲವು ಖಾಸಗಿ ಕ್ರಮಗಳೂ ಸರ್ಕಾರದ ಕ್ರಮಗಳೂ ಜಾರಿಗೆ ಬಂದವು. ಉದಾಹರಣೆಗೆ, ಮದ್ರಾಸಿನಲ್ಲಿ ಖಾಸಗಿ ಮಸೂದೆಯೊಂದು ಜಾರಿಗೆ ಬಂದಿತು; ಅಲ್ಲದೆ ಅಂದಿನ ಸರ್ಕಾರವೂ ಸಹ ಆ ಮಸೂದೆಯನ್ನು ಜಾರಿಗೆ ತಂದಿತು. ಮುಂಬಯಿಯಲ್ಲಿ, ಮುಂಬಯಿ ಕಾರ್ಮಿಕ ವಿವಾದ ಮಸೂದೆ (ಬಾಂಬೇ ಟ್ರೇಡ್ ಯೂನಿಯನ್ ಡಿಸ್ಪ್ಯೂಟ್ಸ್ ಆಕ್ಟ್) ಜಾರಿಗೆ ಬಂದಿತು. ಅಂತಹುದೇ ಮಸೂದೆಯೊಂದರ ಬಗ್ಗೆ ಮಧ್ಯಪ್ರಾಂತ್ಯ (ಸೆಂಟ್ರಲ್ ಪ್ರೊವಿನ್ಸ್) ದಲ್ಲಿ ಆಲೋಚನೆ ಮಾಡಿ, ಅದರ ಕರಡನ್ನೂ ತಯಾರಿಸಲಾಯಿತು; ಹಾಗೇ ಉತ್ತರ ಪ್ರದೇಶದಲ್ಲಿಯೂ ಮಾಡಲಾಯಿತು. ಆದರೆ ಮುಂಬಯಿಯನ್ನುಳಿದು, ಈ ಪ್ರಾಂತ್ಯಗಳ ಸರಕಾರಗಳು ಈ ಯೋಜನೆ ಜಾರಿಗೆ ಬರುವ ಮೊದಲೇ ರಾಜೀನಾಮೆ ಕೊಟ್ಟವು. ಆದರೆ ಪ್ರಾಂತ್ಯಗಳಿಗೆ ಸ್ವಾಯತ್ತತೆ ಬಂದ ಮೇಲೆ, ಭಾರತ ಸರ್ಕಾರವು ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಸಹಕಾರವನ್ನು ಪ್ರಾರಂಭಿಸಿತು; ಮತ್ತು ಅದು ಪ್ರಾರಂಭಿಸಿದ ಕಾರ್ಮಿಕ ಮಂತ್ರಿಗಳ ಸಭೆಗಳು ಸಹಕಾರವನ್ನು ಏರ್ಪಡಿಸಲು ಸಾಧನವಾದವು.  ಮೊದಲನೇ ಕಾರ್ಮಿಕ ಮಂತ್ರಿಗಳ ಸಭೆಯು ೧೯೪೦ರಲ್ಲಿ ನಡೆದಾಗ, ಪ್ರಾಂತ್ಯ ಸರ್ಕಾರಗಳ ಮತ್ತು ಕೇಂದ್ರ ಸರ್ಕಾರದ ನಡುವೆ ಈ ವಿಷಯವು ಚರ್ಚಿತವಾಯಿತು. ಆಗ ಸಭೆಯ ಮುಂದಿಟ್ಟ ಅಪೂರ್ಣ ವಿಷಯಗಳ ಮೇಲೆ ಯಾವುದೇ ತೀರ್ಮಾನಕ್ಕೆ ಬರಲಾಗದೆಂದು ಸಭೆಯು ನಿರ್ಣಯಿಸಿತಲ್ಲದೆ, ಕೇಂದ್ರ ಸರ್ಕಾರವು ಇದನ್ನು ಪ್ರಾಂತ್ಯ ಸರ್ಕಾರಗಳಿಗೆ ವಹಿಸಿಕೊಡಬೇಕೆಂದೂ, ಪ್ರಾಂತ್ಯ ಸರ್ಕಾರಗಳು ತಮ್ಮ ಹಾಗೂ ಕಾರ್ಮಿಕ ನಾಯಕರ ಮತ್ತು ಉದ್ಯೋಗದಾತರ ಅಭಿಪ್ರಾಯಗಳನ್ನು ಪಡೆದು, ಅವನ್ನು ೧೯೪೧ರಲ್ಲಿ ನಡೆಯಬೇಕಿರುವ ಎರಡನೇ ಕಾರ್ಮಿಕ ಮಂತ್ರಿಗಳ ಸಭೆಯ ಮುಂದಿಡಬೇಕೆಂದೂ, ಕೇಂದ್ರ ಸರ್ಕಾರಕ್ಕೆ ಸೂಚಿಸಿತು. ಅದರಂತೆ, ಭಾರತ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಪತ್ರ ಬರೆದು, ಈ ವಿಷಯದ ಬಗೆಗೆ ವಿವಿಧ ಪಕ್ಷಗಳ ಅಭಿಪ್ರಾಯಗಳನ್ನು ಸಂಗ್ರಹಿಸಬೇಕೆಂದು ಕೇಳಿಕೊಂಡಿತು; ಮತ್ತು ವಿವಿಧ ಪ್ರಾಂತ್ಯ ಸರ್ಕಾರಗಳು ವಿವಿಧ ಅಭಿಪ್ರಾಯಗಳ ಬಹು ದೊಡ್ಡ ಸಂಗ್ರಹ ಮಾಡಿ, ಅದನ್ನು ತಮ್ಮ ತಮ್ಮ ಅಭಿಪ್ರಾಯಗಳ ಜೊತೆಗೂಡಿಸಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟವು. ಇದೆಲ್ಲವನ್ನೂ ೧೯೪೧ರಲ್ಲಿ ನಡೆದ ಕಾರ್ಮಿಕ ಮಂತ್ರಿಗಳ ಸಭೆಯ ಮುಂದಿಡಲಾಯಿತು. ಕೇಂದ್ರ ಸರ್ಕಾರವೇ ಒಂದು ಶಾಸನ ಮಾಡಬೇಕೆಂದೂ, ಆ ಶಾಸನವು ಪ್ರಾಂತ್ಯಗಳಿಗಷ್ಟೇ ಸೀಮಿತವಾಗಿರಬಾರದೆಂದೂ, ಕರಡನ್ನು ಪ್ರಾಂತ್ಯಗಳಿಂದಲೂ, ಈ ವಿಷಯಕ್ಕೆ ಸಂಬಂಧಿಸಿದ ಇತರ ಪಕ್ಷಗಳಿಂದಲೂ ಪಡೆದ ಅಭಿಪ್ರಾಯಗಳ ಆಧಾರದ ಮೇಲಿಂದ ರಚಿಸಬೇಕೆಂದೂ ಆಗ ನಿರ್ಣಯಿಸಲಾಯಿತು. ಇದರ ಪರಿಣಾಮವಾಗಿ, ಈಗ ಭಾರತ ಸರ್ಕಾರವು ಇದನ್ನು ಕೈಗೆತ್ತಿಕೊಂಡಿದೆ. ಈಗ ಮಂಡಿಸಲಾಗಿರುವ ಮಸೂದೆಯು, ಸಂಬಂಧಪಟ್ಟ ಪಕ್ಷಗಳು ವ್ಯಕ್ತಪಡಿಸಿದ ಅಭಿಪ್ರಾಯಗಳ ಮತ್ತು ಈ ರೀತಿ ಪಡೆದ ಅಭಿಪ್ರಾಯಗಳನ್ನು ಕೇಂದ್ರ ಸರ್ಕಾರ ವರ್ಗೀಕರಣ ಮಾಡಿದುದರ ಫಲವಾಗಿದೆ. ಈ ಕ್ರಮ ಹುಟ್ಟಿದುದು ಹೀಗೆ. ಕಾರ್ಮಿಕರಿಗೆ ಸಂಬಂಧಿಸಿದ ಶಾಸನವು ಪ್ರಾಂತ್ಯಗಳ ವಿಷಯವಾಗಿದ್ದರೂ, ಕೇಂದ್ರ ಸರ್ಕಾರವು ಏಕೆ ಈ ಕ್ರಮವನ್ನು ಕೈಗೊಂಡಿತು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಈ ಕ್ರಮದ ಬಗೆಗೆ ನಾನು ಇನ್ನೂ ಹೆಚ್ಚಿಗೆ ಹೇಳುವುದು ಅನಾವಶ್ಯಕವೆನಿಸುತ್ತದೆ. ನಾನಾಗಲೇ ಹೇಳಿರುವಂತೆ, ಈ ಸೂಚನೆಗಳು ಕೇವಲ ತಾತ್ಕಾಲಿಕವೇ ಹೊರತು, ಅಂತಿಮವಲ್ಲ. ಈಗಿರುವಂತಹ ಕರಡಿನ ಬಗೆಗೆ ವಿವಿಧ ಅಭಿಪ್ರಾಯಗಳನ್ನು ಪಡೆಯುವವರಿಗೂ ಇದು ಅಂತಿಮ ರೂಪವನ್ನು ಪಡೆಯುವುದಿಲ್ಲ. ನಾನು ಹೇಳುವುದಿಷ್ಟೆ: ಈ ವಿಧಾನಸಭೆಯು ಕಾರ್ಯಗತ ಮಾಡಬೇಕಾದ ಕ್ರಮಗಳಲ್ಲೆಲ್ಲಾ ಇದು ಅತ್ಯಂತ

ಮುಖ್ಯವಾದುದು. ಅಲ್ಲದೆ, ಈ ಕ್ರಮವು ಒಂದು ವಿಶಿಷ್ಟ ಕ್ರಮವೂ ಆಗಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಸ್ವೀಡನ್ ಬಿಟ್ಟರೆ, ಉಳಿದೆಲ್ಲ ದೇಶಗಳಲ್ಲಿಯೂ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವುದನ್ನು ಉದ್ಯೋಗದಾತರ ಇಚ್ಛೆಗೇ ಬಿಡಲಾಗಿದೆ. ಇದು ವಿವಾದಾತ್ಮಕ ಕ್ರಮವಾಗುವುದಿಲ್ಲವೆಂದು ಆಶಿಸುತ್ತೇನೆ. ಮಸೂದೆಯು ಮಾಡಿಕೊಡುವ ಅವಕಾಶಗಳಿಗೆ ನಾನೇ ಹೊಣೆಗಾರನೆನ್ನಿಸಿಕೊಳ್ಳುವ ಮೊದಲು ಈ ಮಸೂದೆಯನ್ನು ಸಾರ್ವಜನಿಕರ ಪರಿಶೀಲನೆಗೆ ಒಪ್ಪಿಸಿರುವುದರಿಂದ, ನಾನು ಈಗಾಗಲೇ ಹೇಳಿರುವುದಕ್ಕಿಂತ ಹೆಚ್ಚೇನೂ ಹೇಳಬಯಸುವುದಿಲ್ಲ. ಆದ್ದರಿಂದ, ಸನ್ಮಾನ್ಯರೇ, ಈ ಮಸೂದೆಯನ್ನು ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಮಂಡಿಸಲಾಗಿದೆ:

**"**ಭಾರತೀಯ ಕಾರ್ಮಿಕ ಸಂಘಗಳ ಶಾಸನ (೧೯೨೬)ದಲ್ಲಿ ತಿದ್ದುಪಡಿ ಮಾಡುವ ಸಲುವಾಗಿ, ಮಸೂದೆಯ ಮೇಲಿನ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಅದನ್ನು ಕಳುಹಿಸಬೇಕು.**"** (ಮಸೂದೆ ಮಂಡಿಸಲ್ಪಟ್ಟಿತು)

* * *

***ಶ್ರೀ ಪಿ.ಜೆ. ಗ್ರಿಫಿತ್ಸ್ (ಅಸ್ಸಾಂ –** ಯುರೋಪಿಯನ್) : ಮಾನ್ಯ ಅಧ್ಯಕ್ಷರೇ, ಸದರಿ ಮಸೂದೆಯ ಮೇಲಿನ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಅದನ್ನು ಪ್ರಸಾರ ಮಾಡಬೇಕೆಂಬ ಗೊತ್ತುವಳಿಯು ಸದನದ ಮುಂದಿದೆ....... ಕಾರ್ಮಿಕ ಸಂಘಗಳಿಗೆ ಅನೇಕ ಶತ್ರುಗಳಿದ್ದಾರೆಂಬುದನ್ನು ನನ್ನ ಸನ್ಮಾನ್ಯ ಮಿತ್ರರಿಗೆ ನೆನಪಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರಲ್ಲಿ ಉದ್ಯೋಗದಾತರೂ ಸೇರಿದ್ದಾರೆ.

* * *

****ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು ಸೂಚಿಸಿರುವ ಮಸೂದೆಯು ವಾದವಿವಾದಕ್ಕೆಡೆ ಮಾಡಿಕೊಟ್ಟಿದೆ. ಇದು ಅನಿರೀಕ್ಷಿತವೇನಲ್ಲ. ನಾನು ಈ ಮೊದಲೇ ಹೇಳಿದಂತೆ, ಈ ಮಸೂದೆಯು ವಿವಾದಾತ್ಮಕ ಕ್ರಮವೆಂಬುದರಲ್ಲಿ ಸಂಶಯವಿಲ್ಲ. ಆದರೆ, ನಾನು ಯಾವ ವಾದವಿವಾದಕ್ಕೂ ಪ್ರವೇಶಿಸುವುದಿಲ್ಲವೆಂದೂ ಈಗ ಎತ್ತಿರುವ ಆಕ್ಷೇಪಣೆಗಳಿಗೆ ಉತ್ತರ ಸಹ ಕೊಡುವುದಿಲ್ಲವೆಂದೂ ನಾನಾಗಲೇ ನನ್ನ ಪ್ರಾರಂಭಿಕ ಭಾಷಣದಲ್ಲಿ ಹೇಳಿದ್ದೇನೆ. ಆದರೆ ನಾನು ಹಾಗೆ ಮಾಡುವುದು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಸನ್ಮಾನ್ಯ ಸದಸ್ಯರಿಗೆ ಅಪಮಾನ ಮಾಡುವ ಉದ್ದೇಶದಿಂದಲ್ಲ. ಅವರು ಮಂಡಿಸಿದ ಅಂಶಗಳನ್ನು ನಾನು ನೆನಪಿನಲ್ಲಿಟ್ಟುಕೊಂಡು, ಸಂದರ್ಭ ಬಂದಾಗ ಅವುಗಳ ಸಾಮಂಜಸ್ಯವನ್ನು ಪರಿಶೀಲಿಸುತ್ತೇನೆಂದು ನಾನು ಅವರಿಗೆ ಭರವಸೆ ನೀಡುತ್ತೇನೆ.

ನಾನೀಗ ಮೇಲೆದ್ದರೆ, ಅದು ಕೆಲವು ಪ್ರಶ್ನೆಗಳಿಗೆ ಸಮಾಧಾನ ಕೊಡುವುದಕ್ಕಾಗಿ ಅಲ್ಲ. ಆದರೆ, ನನ್ನ ಸನ್ಮಾನ್ಯ ಮಿತ್ರ ಶ್ರೀ ಗ್ರಿಫಿತ್ಸ್ ಮಾಡಿರುವ ಕೆಲವು ಟೀಕೆಗಳಿಗೆ ನಾನು ಉತ್ತರ ಕೊಡಬೇಕಾಗಿದೆ. ಅವರು ಒಂದು ಅಂಶವನ್ನು ಹೇಳಿದರು, ಅದನ್ನು ನಾನು – ಅವರ ಅಪ್ಪಣೆ ಕೇಳಿ – ಅನ್ಯಾಯವೆಂದೇ ತಿಳಿಯುತ್ತೇನೆ. ನಾನು ಮಸೂದೆಯಲ್ಲಿ ಸಾಕಷ್ಟು ಅಸ್ಪಷ್ಟ ವಿಷಯಗಳನ್ನು ಸೇರಿಸಿದ್ದೇನೆಂದೂ, ಅದರಲ್ಲಿ – ಅವರೇ ಹೇಳಿದಂತೆ ವಿಷಯರಹಿತ ಷರತ್ತುಗಳಿವೆ ಎಂದೂ ಅವರು ಹೇಳಿದ್ದರು. ನನ್ನ ನಿಲವಿಗೆ ಸಮರ್ಥನೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೪ (೧೯೪೩), ೧೩–೧೧–೧೯೪೩; ಪು. ೨೫೬.

** ಅದೇ – ಪು. ೨೭೬.

ಇಲ್ಲವೆಂದೂ, ಅಸ್ಪಷ್ಟ ಹಾಗೂ ಅರ್ಥಹೀನ ಷರತ್ತುಗಳನ್ನೊಳಗೊಂಡ ಮಸೂದೆಯನ್ನು ಸದನವು ಪರಿಶೀಲಿಸಬೇಕೆಂದು ನಾನು ಕೇಳುವುದು ಅನ್ಯಾಯವೆಂದೂ ಅವರು ಟೀಕಿಸಿದ್ದಾರೆ. ಅವರ ಈ ಟೀಕೆಯನ್ನು ನಾನು ಒಪ್ಪುವುದಿಲ್ಲ; ಅವರು ಅಪಾರ್ಥ ಮಾಡಿಕೊಂಡಿದ್ದಾರಲ್ಲದೆ, ಅವರ ಟೀಕೆ ನಿರಾಧಾರವಾದುದು. ಈ ಮಸೂದೆಯಲ್ಲಿ ಅಸ್ಪಷ್ಟ ಷರತ್ತುಗಳಿವೆ ಎಂಬುದನ್ನಾಗಲಿ, ಈ ಮಸೂದೆಯ ಗುರಿ ಏನಿರಬಹುದೆಂದು ಶಂಕೆಗೆ ಎಡೆಮಾಡಿಕೊಡುವಂಥ ವಿಷಯರಹಿತ ಷರತ್ತುಗಳಿವೆ ಎಂಬುದನ್ನಾಗಲಿ ನಾನು ಒಪ್ಪುವುದಿಲ್ಲ. ಕೆಲವು ಷರತ್ತುಗಳು ಅಸ್ಪಷ್ಟವೆಂದೂ, ಮತ್ತೆ ಕೆಲವು ವಿಷಯವಿಲ್ಲದ ಷರತ್ತುಗಳೆಂದೂ ಒಂದು ವೇಳೆ ಊಹಿಸಿಕೊಂಡರೂ, ಆ ಟೀಕೆ ಸಮಂಜಸವಾದುದೆಂದು ನನಗನಿಸುವುದಿಲ್ಲ – ಏಕೆಂದರೆ, ಈಗಿರುವ ರೂಪದ ಮಸೂದೆಯನ್ನೇ ಸದನವು ಅಂಗೀಕರಿಸಬೇಕೆಂದು ಒಂದು ವೇಳೆ ನಾನು ಕೇಳಿಕೊಂಡಿದ್ದರೆ, ಆಗ ಆ ಟೀಕೆಯ ಉದ್ದೇಶ ನನಗೆ ಅರ್ಥವಾಗುತ್ತಿತ್ತು. ಆದರೆ ನಾನು ಹಾಗೆ ಕೇಳುತ್ತಿಲ್ಲ. ಈಗಿನ ರೂಪದ ಮಸೂದೆಯನ್ನು ಎಲ್ಲರಿಗೂ ಹಂಚಿ, ಅವರಿಂದ ಮತ್ತಷ್ಟು ಅಭಿಪ್ರಾಯಗಳನ್ನು ಸಂಗ್ರಹಿಸಿ, ಮಾರ್ಗದರ್ಶನ ಕೊಡಬಲ್ಲಂಥ ಪಕ್ಷಗಳಿಂದ ಸರ್ಕಾರವು ಮಾರ್ಗದರ್ಶನವನ್ನು ಪಡೆದು ಅದರಲ್ಲಿರುವ ಲೋಪದೋಷಗಳನ್ನು ಸರ್ಕಾರವು ತಿದ್ದಿ, ಅಸ್ಪಷ್ಟವಿದ್ದುದನ್ನು ಸ್ಪಷ್ಟಮಾಡಿಕೊಳ್ಳಬೇಕು, ಎಂದಷ್ಟೇ ಸದನವನ್ನು ಕೇಳಿಕೊಳ್ಳುತ್ತಿದ್ದೇನೆ. ಆದ್ದರಿಂದ ಶ್ರೀ ಗ್ರಿಫಿತ್ಸ್ ಮಾಡಿದ ಟೀಕೆಯಲ್ಲಿ ಹುರುಳಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಗ್ರಿಫಿತ್ಸ್, ತಮ್ಮ ಅಭಿಪ್ರಾಯದಲ್ಲಿ, ಮಸೂದೆಯು ತತ್ವಶಃ ದೋಷಯುಕ್ತವೆಂದೂ ಹೇಳಿದರು. ಆದರೆ ಅದು ಅವರವರ ಅಭಿಪ್ರಾಯ. ಮತ್ತೊಂದು ಕಡೆಯವರು ಮಸೂದೆಯಲ್ಲಿ ಸಾಕಷ್ಟು ತರ್ಕಬದ್ಧವಾದ ತತ್ವವಿದೆಯೆಂದೂ, ಶಾಸನದಲ್ಲಿ ಅದು ಸೇರಲೇಬೇಕೆಂದೂ, ವಾದಿಸಿರುವುದನ್ನು ನಾವು ಈಗಾಗಲೇ ಕೇಳಿದ್ದೇವೆ. ಆದ್ದರಿಂದ ಗ್ರಿಫಿತ್ಸರ ಟೀಕೆಯ ಆ ಅಂಶದ ಬಗ್ಗೆ ನಾನು ಹೆಚ್ಚು ಮಾತಾಡುವುದಿಲ್ಲ.

ಅವರು ತಿಳಿಸಿದ ಎರಡನೆ ಅಂಶವೆಂದರೆ, ಪ್ರಾತಿನಿಧಿಕ ಕಾರ್ಮಿಕ ಸಂಘವೆಂದರೇನೆಂದು ತಿಳಿಸುವುದನ್ನು ನಾನು ಹೇಗೋ ಮರೆತಿದ್ದೇನೆ, ಎಂಬುದು. ಅವರು ಮಸೂದೆಯ ಷರತ್ತುಗಳನ್ನು ಓದಿರಲಾರರು ಅಥವಾ ಓದಿದ್ದರೂ ಅರ್ಥ ಮಾಡಿಕೊಂಡಿರಲಾರರು – ನಾನು ಹೀಗೆ ಹೇಳಿದರೆ ಅನ್ಯಥಾ ಭಾವಿಸಬಾರದು. ಮಸೂದೆಯಲ್ಲಿ ಎರಡು ಮುಖ್ಯ ಷರತ್ತುಗಳನ್ನು ವಿಧಿಸಲಾಗಿದೆ ಎಂಬುದುನ್ನು ಮಸೂದೆಯು ಮಾಡಿಕೊಡುವ ಅವಕಾಶಗಳೇ ಸ್ಪಷ್ಟಪಡಿಸುತ್ತವೆ. ಮೊದಲನೆಯದು : ಕಾರ್ಮಿಕ ಸಂಘವು ಕೆಲವು ವಿಧಿಗಳನ್ನು ಪೂರೈಸದ ಹೊರತು, ಅದಕ್ಕೆ ಮನ್ನಣೆ ಸಿಗುವುದಿಲ್ಲ. ಎರಡನೆಯದು: ಕೇವಲ ಕೆಲವು ವಿಧಿಗಳನ್ನು ಪೂರೈಸುವುದಲ್ಲದೆ, ಬೋರ್ಡೊಂದರ ಪ್ರಮಾಣೀಕರಣ ಪರೀಕ್ಷೆಗೂ ಅದು ಒಳಗಾಗಬೇಕು. ಸಂಘದ ಪ್ರಾತಿನಿಧ್ಯ ಗುಣವು (ಉಳಿದ ವಿಧಿಗಳನ್ನು ಪೂರೈಸಿದ ನಂತರ) – ಕಾರ್ಮಿಕರನ್ನೂ, ಸರ್ಕಾರವನ್ನೂ, ಉದ್ಯೋಗದಾತರನ್ನೂ ಪ್ರತಿನಿಧಿಸುವ ತ್ರಿಭಾಗೀಯ ಬೋರ್ಡ್ ಕೊಡುವ ಪ್ರಮಾಣ ಪತ್ರವನ್ನವಲಂಬಿಸುತ್ತದೆ ಎಂಬುದೇ ಈ ಮಸೂದೆಯ ನಿಜವಾದ ತತ್ವ, ಇದೇ ಅದರ ಜೀವಾಳ. ಆಮೇಲೆ ನನ್ನ ಮಿತ್ರರು, 'ಇನ್ನೂ ವಿಧಿಸಬಹುದಾದ ಇತರ ನಿಯಮಗಳು' ಎಂದು ತಿಳಿಸುವ ಷರತ್ತು ೨೮ ಡಿ, ಉಪಷರತ್ತು(ಜಿ) ಎಂಬುದನ್ನು ಬಹಳ ದೊಡ್ಡದು ಮಾಡಿ ತೋರಿಸಿದ್ದಾರೆ. ಆದರೆ ಆ ಷರತ್ತಿನ ಉದ್ದೇಶವನ್ನು ಶ್ರೀ ಗ್ರಿಫಿತ್ಸರು ಸಂಪೂರ್ಣವಾಗಿ ಹೇಗೆ ಅಪಾರ್ಥಮಾಡಿಕೊಂಡರೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಈ ಬಗ್ಗೆ ಸರ್ಕಾರದ ನಿಲುವು ಹೀಗಿದೆ........

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಇಲ್ಲೊಂದು ವೈಯಕ್ತಿಕ ಸ್ಪಷ್ಟೀಕರಣದ ಅವಶ್ಯಕತೆ ಇದೆ. ನಾನು ಉಪಷರತ್ತು (ಜಿ)ಯ ಬಗ್ಗೆ ಮಾತನಾಡಿಯೇ ಇಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಸದಸ್ಯರನ್ನು ನಾನು ಅಪಾರ್ಥ ಮಾಡಿಕೊಂಡಿದ್ದರೆ

ನಾನು ಅದಕ್ಕೆ ವಿಷಾದಿಸುತ್ತೇನೆ. ಆದರೆ ನಾನು ಹಾಗೆಂದು ಇಲ್ಲಿ ಬರೆದುಕೊಂಡಿದ್ದೇನೆ. ನಾನು ಹೇಳಬಯಸುವುದಿಷ್ಟೇ. ಸರ್ಕಾರದ ನಿಲವು ಅತಿ ಸ್ಪಷ್ಟವಿದೆ, ಹಾಗೂ ಅದನ್ನು ಸಂಕ್ಷಿಪ್ತವಾಗಿ ನಿವೇದಿಸಬಹುದು. ೧೯೪೧ರಲ್ಲಿ ನಮಗೆ ಕಳುಹಿಸಿದ ಅಭಿಪ್ರಾಯಗಳ ಆಧಾರದ ಮೇಲೆ ಮತ್ತು ಕಾರ್ಮಿಕರನ್ನೂ ಬಂಡವಲುದಾರರನ್ನೂ ಪ್ರತಿನಿಧಿಸಿದ ಅನೇಕ ಸಂಸ್ಥೆಗಳು ನಮಗೆ ಕಳುಹಿಸಿದ ಅಭಿಪ್ರಾಯಗಳ ಆಧಾರದ ಮೇಲೆ, ಸರ್ಕಾರವು ತಾನು ಈಗಾಗಲೇ, ತಿಳಿಸಿರುವ ವಿಧಿರೂಪದ ನಿಯಮಗಳೇ ಸಾಕು ಎಂಬ ತೀರ್ಮಾನಕ್ಕೆ ಬಂದಿತು. ಆದರೆ ಸರ್ಕಾರವೇನೂ ಈ ಬಗ್ಗೆ ಹಠ ಹಿಡಿಯುವುದಿಲ್ಲ. ಅಲ್ಲದೆ, ಮಸೂದೆಗೆ ಮಾನ್ಯತೆ ನೀಡುವ ಮೊದಲು ಅದಕ್ಕೆ ಸೇರಿಸಬೇಕಾದ ಕೆಲವು ಷರತ್ತುಗಳನ್ನು ಸೇರಿಸುವುದು ಪ್ರಾಂತ್ಯ ಸರ್ಕಾರಕ್ಕೆ ಅಥವಾ ಕಾರ್ಮಿಕರ ಧಣಿಗಳಿಗೆ ಅಥವಾ ಬಂಡವಾಳದಾರರಿಗೆ ಆವಶ್ಯಕವೆನಿಸಬಹುದು, ಎಂದು ಸರ್ಕಾರಕ್ಕೂ ಅನಿಸಿದೆ. ಇಂತಹ ಅನಿಶ್ಚಿತತೆಗೆ ಅವಕಾಶ ಮಾಡಿಕೊಡುವ ಸಲುವಾಗಿ, ಇನ್ನೂ ಹೆಚ್ಚಿನ ಷರತ್ತುಗಳನ್ನು ವಿಧಿಸಬಹುದು ಎಂದು ಎಲ್ಲೆಲ್ಲಿ ತಿಳಿಸಿದ್ದೇವೆಯೋ, ಅಲ್ಲಿ ಈ ಷರತ್ತುಗಳನ್ನು ಸೇರಿಸಿದ್ದೇವೆ. ಅದೊಂದು ನಾವೇ ಬಿಟ್ಟ ಖಾಲಿ ಜಾಗ; ಈ ಬಗ್ಗೆ ಬೇರೆಯವರು ಕೊಡಬಹುದಾದ ಸಲಹೆಗಳಿಂದ ಲಾಭ ಪಡೆಯಲು ನಾವೇ ಮಾಡಿರುವ ಯೋಜನೆ. ಪ್ರಾತಿನಿಧ್ಯ ಗುಣ ಎಂದರೇನೆಂಬುದರ ಬಗೆಗೆ ಮಸೂದೆ ಮಾಡಿಕೊಡುವ ಅವಕಾಶಗಳು ಖಂಡಿತವಾಗಿಯೂ ಅಸ್ಪಷ್ಟವೂ ಅಲ್ಲ, ಅನಿಶ್ಚಿತವೂ ಅಲ್ಲ.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಇಲ್ಲಿ ಮಾಹಿತಿಯ ಆವಶ್ಯಕತೆ ಇದೆ. ದಯವಿಟ್ಟು ಹೊಸ ಷರತ್ತು ೨೮ ಡಿ, ಉಪಷರತ್ತು (ಇ) ಹೇಳುವ 'ಪ್ರಾತಿನಿಧಿಕ ಕಾರ್ಮಿಕ ಸಂಘ' ವೆಂದರೇನೆಂಬುದರ ಬಗ್ಗೆ ಸದನಕ್ಕೆ ವಿವರಿಸುತ್ತೀರಾ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆಂದರೆ, ಪ್ರಾತಿನಿಧಿಕ ಕಾರ್ಮಿಕ ಸಂಘವೆಂದು ಬೋರ್ಡಿನಿಂದ ಪ್ರಮಾಣೀಕೃತವಾದ ಒಂದು ಸಂಘ.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಬೋರ್ಡಿನವರು ತಮ್ಮ ಸ್ವಂತ ಇಚ್ಛೆಯಿಂದ ಪ್ರಮಾಣೀಕರಿಸಿದುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೋರ್ಡು ಮೊದಲು ಒಂದು ತನಿಖೆ ಮಾಡುತ್ತದೆ. ಇದನ್ನೇ ನನ್ನ ಮಿತ್ರರಾದ ಶ್ರೀ ಜೋಷಿಯವರು ವಿಮರ್ಶಿಸಿದುದು. ಖಾಸಗಿ ಜನರ ಅಭಿಪ್ರಾಯಗಳೂ ಸೇರಿದಂತೆ ಎಲ್ಲ ರೀತಿಯ ಮಾಹಿತಿಗಳನ್ನೂ ಪಡೆಯಲು ಬೋರ್ಡಿಗೆ ಅಧಿಕಾರವಿದೆ ಎಂದು ಅವರು ಹೇಳಿದ್ದಾರೆ.

**ಶ್ರೀ ಪಿ.ಜೆ. ಗ್ರಿಫಿತ್ಸ್ :** 'ಪ್ರಾತಿನಿಧಿಕ' ಎಂದರೇನೆಂಬುದನ್ನು ನಿರ್ಧರಿಸಲು ಬೋರ್ಡಿಗೆ ಸಲಹೆ ಸೂಚನೆಗಳು ಬೇಕು ಎಂಬ ಉದ್ದೇಶವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ನಮ್ಮ ಉದ್ದೇಶ. ನಾವು ಯಾವ ರೀತಿಯ ಅಪ್ಪಣೆಗಳನ್ನು ಬೋರ್ಡಿಗೆ ಕೊಡಬೇಕು ಎಂಬುದರ ಬಗ್ಗೆ ವಿವಿಧ ಪಕ್ಷಗಳನ್ನು ಕೇಳಲಿದ್ದೇವೆ.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಹಾಗಾದರೆ ಈ ವಿಷಯದಲ್ಲಿ ನಿಮ್ಮ ಬುದ್ಧಿ ಖಾಲಿ ಇದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನದು ಖಾಲಿ ಬುದ್ಧಿಯಲ್ಲ, ತೆರೆದ ಬುದ್ಧಿ. ನನ್ನ ನಿಲವನ್ನು ಹೀಗೆ ವ್ಯಾಖ್ಯಾನಿಸಲು ಇಚ್ಛಿಸುತ್ತೇನೆ. ಸರ್ಕಾರಿ ಕಾರ್ಮಿಕರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲವೆಂದು ಹೇಳುವ ಷರತ್ತು ೨೭ ಜೆ ಯನ್ನು ಅಂಗೀಕರಿಸುವ ಸರ್ಕಾರದ ಕ್ರಮವು ಅಸಮರ್ಥನೀಯ (ಅಥವಾ ಅವರ ಭಾಷೆಯಲ್ಲಿಯೇ ಹೇಳಬೇಕೆಂದರೆ, 'ತಾರ್ಕಿಕವಲ್ಲದ್ದು') ಎಂದು ಮಸೂದೆಯನ್ನು ಕುರಿತು ಮಾತಾಡಿದ ಶ್ರೀ ಗ್ರಿಫಿತ್ಸ್ ಮತ್ತು ಇತರರು ಅಭಿಪ್ರಾಯಪಟ್ಟರು.

ಆದರೆ, ಮಾನ್ಯರೇ ಇದಕ್ಕೆ ಉತ್ತರವಾಗಿ, ಮೊಟ್ಟಮೊದಲು, ತರ್ಕವೇ ಯಾವಾಗಲೂ ಮುಖ್ಯ ಎಂಬುದನ್ನು ತಿಳಿಸಲಿಚ್ಛಿಸುತ್ತೇನೆ. ಅನೇಕ ಸಾರಿ, ನಮ್ಮ ಕುತರ್ಕವು ನಮ್ಮನ್ನು ಉಗ್ರಗಾಮಿಗಳನ್ನಾಗಿ ಮಾಡುತ್ತದೆ. ನಮ್ಮಲ್ಲಿ ಯಾರೂ ಕುತರ್ಕವನ್ನು ಬಿಟ್ಟು ಉಗ್ರಗಾಮಿತ್ವವನ್ನು ಆರಿಸಿಕೊಳ್ಳುವುದಿಲ್ಲವೆಂದು ನನಗನಿಸುತ್ತದೆ. ಷರತ್ತು ೨೮ ಜೆ ಗೆ ಸಂಬಂಧಿಸಿದಂತೆ ನನ್ನ ಸ್ವಂತ ಅಭಿಪ್ರಾಯವೇನೆಂದರೆ, ಸರ್ಕಾರವು ಹೇಡಿಯೂ ಅಲ್ಲ; ಕುತರ್ಕಿಯೂ ಅಲ್ಲ; ಸರ್ಕಾರವು ವಿವೇಕಿ; ಸರ್ಕಾರವು ಜಾಗರೂಕವಿದೆ. ಸದಸ್ಯರು ಈ ಷರತ್ತನ್ನು ಅಪಾರ್ಥ ಮಾಡಿಕೊಂಡಿದ್ದಾರೆ ಎಂದು ನನಗನಿಸುತ್ತದೆ. ಮಸೂದೆಯ ನಿಯಮಗಳಿಂದ ಸರ್ಕಾರವನ್ನು ಮುಕ್ತ ಮಾಡುವುದು ಅದರ ಉದ್ದೇಶವಲ್ಲ. ಅದು ಹೇಳುವುದಿಷ್ಟೆ; ಸರ್ಕಾರಿ ಖಾತೆಗಳಿಗೆ ಈ ಮಸೂದೆಯ ನಿಯಮಗಳನ್ನು ಅನ್ವಯಿಸಲು ಒಂದು ದಿನಾಂಕವನ್ನು ಗೊತ್ತುಪಡಿಸಲಾಗುವುದು; ಆದ್ದರಿಂದ, ಸರ್ಕಾರಕ್ಕೇನಾದರೂ ಅನುಗ್ರಹ ತೋರಿಸಿದ್ದರೆ, ಅದು ಮಸೂದೆಯನ್ನು ಅದಕ್ಕೆ ಅನ್ವಯಿಸುವ ವಿಚಾರದಲ್ಲಿ ಅಲ್ಲ; ಸರ್ಕಾರಕ್ಕೆ ಎಂದಿನಿಂದ ಅದನ್ನು ಅನ್ವಯಿಸಬೇಕೆಂಬ ವಿಚಾರದಲ್ಲಿ ಮಾತ್ರ.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಈ ತಾರತಮ್ಯವೇಕೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದರ ಆವಶ್ಯಕತೆ ಇರಬಹುದು.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ಏನದು ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನಾಗಲೇ ಹೇಳಿದಂತೆ, ಸದ್ಯಕ್ಕೆ ನಾನು ಯಾವ ವಾದವಿವಾದಕ್ಕೂ ಪ್ರವೇಶಿಸಲಿಚ್ಛಿಸುವುದಿಲ್ಲ. ಸದ್ಯಕ್ಕಂತೂ, ಕಾರ್ಮಿಕರನ್ನು ನೇಮಿಸಿಕೊಂಡಿರುವ ಸರ್ಕಾರಿ ಇಲಾಖೆಗಳು ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಲು ಸಾಕಷ್ಟು ಅವಕಾಶ ಮಾಡಿಕೊಟ್ಟಿವೆಯೆಂಬುದು ಸರ್ಕಾರದ ಅಭಿಪ್ರಾಯ–ಹೀಗೆಂದು ಅಂಚೆ ಮತ್ತು ತಂತಿ ಇಲಾಖೆಯ ಕಾರ್ಯದರ್ಶಿಯವರು ಹೇಳಿದ್ದಾರೆ. ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಲು ಖಾಸಗಿ ಉದ್ಯೋಗದಾತರಿಗಿಂತ ಸರ್ಕಾರವೇ ಹೆಚ್ಚು ಆಸಕ್ತವಿರುವುದರಿಂದ, ಮಸೂದೆಯನ್ನು ಅನುಷ್ಠಾನಕ್ಕೆ ತರುವುದನ್ನು ಮುಂದಕ್ಕೆ ಹಾಕಿದರೆ ಕಾರ್ಮಿಕರ ಹಿತಾಸಕ್ತಿಗಳಿಗೆ ಧಕ್ಕೆಯಾಗುವುದು ಎಂದೇನೂ ನನಗನಿಸುವುದಿಲ್ಲ. ಮಾನ್ಯರೇ, ನಾನು ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಿಲ್ಲ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈಗಿನ ಚರ್ಚೆಯ ವಿಷಯವೇನೆಂದರೆ "ಭಾರತೀಯ ಕಾರ್ಮಿಕ ಸಂಘಗಳ ಶಾಸನ (೧೯೨೬) ದಲ್ಲಿ ತಿದ್ದುಪಡಿ ಮಾಡುವ ಸಲುವಾಗಿ ವಿವಿಧ ಅಭಿಪ್ರಾಯಗಳನ್ನು ತಿಳಿದುಕೊಳ್ಳಲೋಸ್ಕರ ಮಸೂದೆಯನ್ನು ಪ್ರಸಾರ ಮಾಡಬೇಕು".

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

# ೨೨

# ಯುದ್ಧಾನಂತರ ಭಾರತದಲ್ಲಿ ವಿದ್ಯುಚ್ಛಕ್ತಿಯ ಅಭಿವೃದ್ಧಿ*

### ಡಾ॥ ಬಿ.ಆರ್. ಅಂಬೇಡ್ಕರ್ ಭಾಷಣ

ಹೊಸ ದೆಹಲಿಯಲ್ಲಿ ಡಿಸೆಂಬರ್ ೨೫ರಂದು ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಸದಸ್ಯರು, ಭಾರತ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪುನಾರಚನಾ ಕಾರ್ಯನೀತಿ ಸಮಿತಿಯ

* ಇಂಡಿಯನ್ ಇನ್‌ಫರ್ಮೇಶನ್, ನವೆಂಬರ್ ೧೫, ೧೯೪೩, ಪು. ೨೭೯–೮೧

ಸಭೆಯಲ್ಲಿ, ಭಾರತದಲ್ಲಿನ ವಿದ್ಯುಚ್ಛಕ್ತಿಯ ಯುದ್ಧೋತ್ತರ ಬೆಳವಣಿಗೆಯ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಯಿತು. ಕೇಂದ್ರ ಸರ್ಕಾರದ ಆಮಂತ್ರಣ ಮೇರೆಗೆ ಪ್ರಾಂತ್ಯ ಸರ್ಕಾರಗಳು, ವಿದ್ಯುತ್ತನ್ನು ಉತ್ಪಾದಿಸುವ ರಾಜ್ಯಗಳು ಮತ್ತು ಯಂತ್ರಶಿಲ್ಪದಲ್ಲಿ ಹಿತಾಸಕ್ತಿಯುಳ್ಳವರು ಕಳುಹಿಸಿದ ಅನೇಕ ನಿಯೋಗದವರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರರು ಸಮಿತಿಯನ್ನುದ್ದೇಶಿಸಿ ಹೀಗೆ ನುಡಿದರು :

"ಮಹನೀಯರೇ, ಪುನರ್ರಚನಾ ಸಮಿತಿ ನಂ. ೩ (ಸಿ) ಯ ಭಾಗವಾದ ಕಾರ್ಯನೀತಿ ಸಮಿತಿಯ ಈ ಸಭೆಗೆ ತಮ್ಮನ್ನು ಸ್ವಾಗತಿಸುತ್ತಿದ್ದೇನೆ. ಅಧ್ಯಕ್ಷನಿಗೆ ಪ್ರಾರಂಭಿಕ ಭಾಷಣವನ್ನು ಮಾಡುವ ಕರ್ತವ್ಯ ಮತ್ತು ವಿಶೇಷಾಧಿಕಾರ ಎರಡೂ ಇವೆ. ಕರ್ತವ್ಯವನ್ನೇನೋ ನಾನು ಸ್ವೀಕರಿಸುತ್ತೇನೆ. ಆದರೆ ಒಂದು ಉದ್ದನೆಯ ಭಾಷಣ ಮಾಡುವ ಮೂಲಕ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲು ನಾನು ಇಚ್ಛಿಸುವುದಿಲ್ಲ. ನಮ್ಮ ಅವಧಾನವು ಕೇಂದ್ರಿಕೃತವಾಗುವಂತೆ ಮಾಡಲು ನಾನು ಇದಕ್ಕೆ ಸಂಬಂಧಿಸಿದ ಕೆಲ ಮುಖ್ಯ ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ, ಅಷ್ಟೆ.

೧. ಪುನಾರಚನೆಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಅಧ್ಯಯನ ಮಾಡಲು ಭಾರತ ಸರ್ಕಾರ ಒಂದು ವ್ಯವಸ್ಥೆಯನ್ನು ನಿಯೋಜಿಸಿದೆ. ನಿಮ್ಮಲ್ಲಿಯ ಕೆಲವರ ಭಾಗವಹಿಸುವಿಕೆಯು ಆವಶ್ಯಕವಾಗಿದ್ದರೂ ಅವರಿಗೆ ಈ ಕಾರ್ಯ ಯೋಜನೆಯ ಬಗೆಗೆ ಗೊತ್ತಿಲ್ಲದಿದ್ದರೆ, ನಾನು ಸಂಕ್ಷಿಪ್ತವಾದ ಈ ಮಾಹಿತಿ ಕೊಡಬಯಸುತ್ತೇನೆ.

೨. ಪರಿಷತ್ತಿನ ಪುನಾರಚನಾ ಸಮಿತಿಯು ಕೈಗೆತ್ತಿಕೊಂಡಿರುವ ಕಾರ್ಯಗಳನ್ನು ಸುಗಮವಾಗಿ ಹಾಗೂ ಶೀಘ್ರಗತಿಯಲ್ಲಿ ಅನುಷ್ಠಾನಕ್ಕೆ ತರಲು ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ.

**ಐದು ಸಮಿತಿಗಳು**

"ನಿಮಗೆ ಗೊತ್ತಿರಬಹುದು, ಮಾಜಿ ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೋ ಕಳೆದ ಮಾರ್ಚಿಯಲ್ಲಿ ಪರಿಷತ್ತಿನ ಪುನಾರಚನಾ ಸಮಿತಿಯನ್ನು ರಚಿಸಬೇಕೆಂದೂ, ಅದಕ್ಕೆ ನನ್ನ ಸಾಹಸಿ ಮಿತ್ರ ಮತ್ತು ಸಹೋದ್ಯೋಗಿಗಳಾದ ಸನ್ಮಾನ್ಯ ಸರ್ ಜೆ.ಪಿ. ಶ್ರೀವಾಸ್ತವ ಅವರನ್ನು ಅಧ್ಯಕ್ಷರೆಂದೂ, ತೀರ್ಮಾನಿಸಿದರು. ಪರಿಷತ್ತಿನ ಪುನಾರಚನಾ ಸಮಿತಿಯು ಐದು ಬೇರೆ ಬೇರೆ ಪುನಾರಚನಾ ಸಮಿತಿಗಳನ್ನು ರಚಿಸಿದೆ. ಮೊದಲನೆಯದು, ಪುನರ್ವಸತಿ ಮತ್ತು ಮತ್ತೆ ನೌಕರಿ ಕೊಡುವುದಕ್ಕೆ ಸಂಬಂಧಿಸಿದೆ; ಎರಡನೆಯದು, ಫೈಸಲ್ ಮಾಡುವುದು, ಒಪ್ಪಂದಕ್ಕೆ ಬರುವುದು ಮತ್ತು ಸರ್ಕಾರ ಕೊಂಡುಕೊಳ್ಳುವುದಕ್ಕೂ ಸಂಬಂಧಿಸಿದೆ. ಮೂರನೆಯ ಸಮಿತಿಯ ಕೆಲಸಗಳನ್ನು ಮೂರು ಸಮಿತಿಗಳಿಗೆ ಹಂಚಿಕೊಡಲಾಗಿದೆ. ಮೂರನೆಯದರಲ್ಲಿ [ಎ] ಸಾರಿಗೆ ವ್ಯವಸ್ಥೆಯನ್ನೂ, [೩]ಬಿ ಅಂಚೆ, ತಂತಿ, ಮತ್ತು ವಾಯು ಸಂಚಾರಗಳನ್ನೂ ಮತ್ತು [೩] ಸಿ ಕಾಮಗಾರಿ ಮತ್ತು ವಿದ್ಯುಚ್ಛಕ್ತಿಯನ್ನೂ ನೋಡಿಕೊಳ್ಳುತ್ತವೆ. ನಾಲ್ಕನೆಯದು ವ್ಯಾಪಾರ ಮತ್ತು ಕೈಗಾರಿಕೆಗಳೊಡನೆಯೂ, ಮತ್ತು ಐದನೆಯದು ವ್ಯವಸಾಯದೊಡನೆಯೂ ವ್ಯವಹರಿಸುತ್ತದೆ.

"ಪ್ರತಿಯೊಂದು ಸಮಿತಿಗೂ ಒಂದೊಂದು ಪ್ರತ್ಯೇಕ ಕಾರ್ಯನೀತಿ ಸಮಿತಿ ಇದ್ದು, ಪರಿಷತ್ ಸದಸ್ಯರೊಬ್ಬರು ಅದಕ್ಕೆ ಅಧ್ಯಕ್ಷರಿರುತ್ತಾರೆ. ಕೇಂದ್ರ ಸರ್ಕಾರದ, ಪ್ರಾಂತ್ಯ ಸರ್ಕಾರಗಳ, ರಾಜ್ಯ ಸರ್ಕಾರಗಳ ಮತ್ತು ವಾಣಿಜ್ಯ ಕೈಗಾರಿಕೆ ಮತ್ತು ವ್ಯಾಪಾರಿಗಳಲ್ಲಿ ಆಸಕ್ತಿ ಉಳ್ಳವರ ಪ್ರತಿನಿಧಿಗಳನ್ನೊಳಗೊಂಡಿರುವ ಈ

ಸಮಿತಿಯು ಈ ಅಧ್ಯಕ್ಷರ ನೇತೃತ್ವದಲ್ಲಿ ಕೆಲಸ ಮಾಡುತ್ತದೆ. ಪ್ರತಿಯೊಂದಕ್ಕೂ ಒಂದು ಕಾರ್ಯನಿರ್ವಾಹಕ ಸಮಿತಿಯಿದ್ದು, ಅದು ಇಲಾಖೆಯ ಕಾರ್ಯದರ್ಶಿಯ ನೇತೃತ್ವದಲ್ಲಿ ಕೆಲಸ ಮಾಡುತ್ತದೆ; ಅಲ್ಲದೆ ಅದರಲ್ಲಿ ಸಂಬಂಧಪಟ್ಟ ಬೇರೆ ಬೇರೆ ಇಲಾಖೆಗಳ ಕಾರ್ಯದರ್ಶಿಗಳೂ ಇರುತ್ತಾರೆ.

"ಕೆಲವು ಪುನರ್‌ರಚನಾ ಸಮಿತಿಗಳಲ್ಲಿ ಈ ಎರಡು ರೀತಿಯ ಸಮಿತಿಗಳೂ ಅಲ್ಲದೆ, ವಿಷಯ ಸಮಿತಿ ಎಂಬ ಮೂರನೆಯ ಸಮಿತಿಯೂ ಇದ್ದು, ಅದು ತನ್ನ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ವಿಷಯಗಳೊಡನೆ ವ್ಯವಹರಿಸುತ್ತದೆ. ಇವೂ ಅಲ್ಲದೆ, ಸಾಮಾಜಿಕ ಸೇವೆಗಳ ಕಾರ್ಯನಿರ್ವಾಹಕ ಸಮಿತಿ ಮತ್ತು ಆರ್ಥಿಕ ತಜ್ಞರ ಸಲಹಾ ಸಮಿತಿಗಳೂ ಇರುತ್ತವೆ. ಪುನಾರಚನೆಗೆ ಸಂಬಂಧಿಸಿದ ಸಮಸ್ಯೆಗಳನ್ನೆದುರಿಸಲು ಕೇಂದ್ರ ಸರ್ಕಾರವು ರೂಪಿಸಿರುವ ಕಾರ್ಯಯೋಜನೆ ಇದು. ಪ್ರಸ್ತುತ ಸಭೆಯು ಮೂರನೆಯ ಪುನಾರಚನಾ ಸಮಿತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಅವುಗಳನ್ನು ಪರಿಹರಿಸಲು ಉತ್ತಮ ಉಪಾಯಗಳನ್ನು ಸೂಚಿಸುವುದು.

"ಈ ಸಮಸ್ಯೆಗಳ ವಿಶ್ಲೇಷಣೆಯಲ್ಲಿ ತೊಡಗುವ ಮೊದಲು, ನಾವು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಂಬಂಧಿಸಿದ ಒಂದು ಸಮಸ್ಯೆಯನ್ನು ಪರಿಶೀಲಿಸಬೇಕಾಗಿದೆ. ಉಳಿದ ವಿಷಯಗಳ ಚರ್ಚೆ ಸುಗಮವಾಗಬೇಕಾದರೆ, ಇದನ್ನು ಮೊದಲು ಪರಿಶೀಲಿಸುವುದು ಅಗತ್ಯ. ಇದು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅಗತ್ಯವಾದ ಯಂತ್ರೋಪಕರಣಗಳನ್ನೂ, ಸ್ಥಾವರಗಳನ್ನೂ ತರಿಸಿಕೊಳ್ಳುವ ಪ್ರಶ್ನೆಗೆ ಸಂಬಂಧಿಸಿದುದು. ಆ ಯಂತ್ರಗಳನ್ನು ಹೊರಗಿನಿಂದ, ಹೆಚ್ಚಾಗಿ, ಗ್ರೇಟ್ ಬ್ರಿಟನ್ನಿನಿಂದ, ನಾವು ತರಿಸಿಕೊಳ್ಳಬೇಕಾಗುತ್ತದೆ. ಹಾಗೆ ತರಿಸಿಕೊಳ್ಳುವುದು ಸುಲಭವೇನಲ್ಲ. ಗ್ರೇಟ್ ಬ್ರಿಟನ್ ತನ್ನ ಉತ್ಪಾದನಾ ಸಾಮರ್ಥ್ಯದಲ್ಲಿನ ಹೆಚ್ಚಿನದನ್ನು ತನ್ನ ಸ್ವಂತಕ್ಕಾಗಿಯೇ ಮೀಸಲಾಗಿಟ್ಟುಕೊಳ್ಳಬಹುದು.

"ಇತರ ಯುರೋಪಿಯನ್ ಮತ್ತು ಏಷ್ಯನ್ ರಾಷ್ಟ್ರಗಳೂ ಇಂಥ ಅಗತ್ಯವಾದ ಉಪಕರಣಗಳನ್ನೂ, ಸ್ಥಾವರಗಳನ್ನೂ ಕೊಳ್ಳಲು ಬ್ರಿಟಿಷ್ ಮತ್ತು ಅಮೆರಿಕನ್ ಮಾರುಕಟ್ಟೆಗಳಿಗೆ ಬರುತ್ತವೆ. ಇಂಥ ಒಂದು ಸ್ಪರ್ಧೆಯಲ್ಲಿ ಭಾರತವು ತನಗೆ ಬೇಕಾದಷ್ಟನ್ನು ಪಡೆಯಲು ಕಷ್ಟವಾಗಬಹುದು. ಭಾರತವು ತನ್ನ ಹಿತಾಸಕ್ತಿಯ ದೃಷ್ಟಿಯಿಂದ, ಉಪಕರಣ ಮತ್ತು ಸ್ಥಾವರಗಳ ಬೇಡಿಕೆಯನ್ನು ಆದಷ್ಟು ಬೇಗ ನೋಂದಾಯಿಸಿ, ಸಾಧ್ಯವಾದಷ್ಟು ಹೆಚ್ಚಿನ ಆದ್ಯತೆಯನ್ನು ಪಡೆದರೆ ಒಳ್ಳೆಯದು. ಆದ್ಯತೆ ಪಡೆಯುವ ಕಷ್ಟ ಬಹಳ ದೊಡ್ಡದೇನಲ್ಲ. ಯುದ್ಧದಲ್ಲಿ ಭಾರತವು ಸಹಾಯ ಮಾಡಿರುವುದರಿಂದ, ಅದಕ್ಕೆ (ಭಾರತಕ್ಕೆ) ಮಹಾಪ್ರಭುಗಳು ಹೆಚ್ಚಿನ ಆದ್ಯತೆ ದೊರಕಿಸಿಕೊಡುತ್ತಾರೆಂದು ನನಗೆ ದೃಢ ವಿಶ್ವಾಸವಿದೆ. ಆದರೆ ಕೆಲವು ಬೇರೆ ತೊಡಕುಗಳೂ ಇವೆ. ಅವುಗಳಲ್ಲಿ ಮುಖ್ಯವಾದುವೆಂದರೆ, ಬೇಡಿಕೆಯ ಪತ್ರಗಳನ್ನು ಸಿದ್ಧಪಡಿಸುವುದು ಮತ್ತು ಅವುಗಳನ್ನು ಉತ್ಪಾದಕರ ಮುಂದಿಡುವುದು.

"ಮೊದಲನೆಯದಾಗಿ, ವಿದ್ಯುಚ್ಛಕ್ತಿಯು ಪೂರ್ಣವಾಗಿ ಪ್ರಾಂತ್ಯಕ್ಕೆ ಸಂಬಂಧಿಸಿದ ವಿಷಯ. ಆದ್ದರಿಂದ ಯಂತ್ರೋಪಕರಣಗಳ ಅಂದಾಜು ಖರ್ಚಿನ ಪಟ್ಟಿಯು ಪ್ರಾಂತ್ಯಗಳಿಂದಲೇ ಬರಬೇಕು. ಕೇಂದ್ರವು ಅವುಗಳನ್ನು ಕೇವಲ ಕ್ರೋಡೀಕರಿಸಬಲ್ಲದು.

"ಎರಡನೆಯದಾಗಿ, ಯಾವ ರೀತಿಯ ಯಂತ್ರಗಳು ಬೇಕೆಂಬುದು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಮುಖ್ಯ ಚಾಲಕ ವಸ್ತು ಯಾವುದು – ನೀರೋ, ಆವಿಯೋ, ಎಣ್ಣೆಯೋ ಎಂಬ ತೀರ್ಮಾನವನ್ನು ಅವಲಂಬಿಸುತ್ತದೆ.

"ಮೂರನೆಯ ತೊಡಕು ಯುದ್ಧಾನಂತರ ಬರುವ ಸರ್ಕಾರಗಳ ಧೋರಣೆಯೇನಿರುತ್ತದೆ ಎಂಬ

ಅನಿಶ್ಚಿತತೆಯಿಂದ ಹುಟ್ಟುತ್ತದೆ. ಈಗಿನ ಸರ್ಕಾರ ತಯಾರಿಸಿರುವ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ಮುಂದೆ ಬರುವ ಸರ್ಕಾರ ಒಪ್ಪಿಕೊಳ್ಳುತ್ತದೆಯೆ? ಯೋಜನೆಗಳಿಗೂ ಕಾರ್ಯಕ್ರಮಗಳಿಗೂ ಆವಶ್ಯಕವೆಂದು ಈಗಿನ ಸರ್ಕಾರಗಳು ತೀರ್ಮಾನಿಸಿರುವ ತೆರಿಗೆಯ ಮಟ್ಟವನ್ನು ಮುಂದೆ ಬರುವ ಸರ್ಕಾರಗಳೂ ಉಳಿಸಿಕೊಳ್ಳುತ್ತವೆಯೆ? ಈ ವಿಷಯಗಳ ಬಗೆಗೆ ಯಾರೂ ಖಚಿತವಾದ ಉತ್ತರ ಕೊಡಲಾರರು. ಆದರೂ ಯುದ್ಧಾನಂತರ ವಿದ್ಯುದೀಕರಣಕ್ಕೆ ಆವಶ್ಯಕವಾದ ಯಂತ್ರೋಪಕರಣ ಮತ್ತು ಸ್ಥಾವರಗಳನ್ನು ಪಡೆಯಬೇಕೆಂಬ ಭಾರತದ ಭರವಸೆಯನ್ನು ಗಟ್ಟಿ ಮಾಡಿಕೊಳ್ಳದಿದ್ದರೆ, ಈಗಿನ ಸರ್ಕಾರದ ಕರ್ತವ್ಯಕ್ಕೆ ಚ್ಯುತಿ ಬಂದಂತೆಯೇ.

**ಕಾರ್ಯನೀತಿ ಸಮಿತಿಯ ಕರ್ತವ್ಯಗಳು**

"ಈ ವಿಷಯವನ್ನು ಜರೂರು ಮತ್ತು ಮುಖ್ಯವೆಂದು ತಿಳಿದು ಅದನ್ನು ನಿಮಗೆ ತಿಳಿಸುತ್ತಿದ್ದೇನೆ. ಆದರೆ ಇದು ಈ ಸಮಿತಿಯ ಮುಖ್ಯ ವ್ಯವಹಾರವಲ್ಲವೆಂದು ನಿಮಗೇ ತಿಳಿಯುವುದು ಎಂದು ನಾನು ದೃಢವಾಗಿ ನಂಬಿದ್ದೇನೆ. ಇದು ಕಾರ್ಯನೀತಿ ಸಮಿತಿ. ನಮ್ಮ ಮುಖ್ಯ ಕರ್ತವ್ಯವೆಂದರೆ, ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಆಡಳಿತ, ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ವಿತರಣೆಗಳಿಂದ ಉದ್ಭವಿಸುವ ಸಮಸ್ಯೆಗಳೊಡನೆ ವ್ಯವಹರಿಸುವುದು ಮತ್ತು ಮುಂದಿನ ಭಾರತ ಸರ್ಕಾರಕ್ಕೆ ಮಾರ್ಗದರ್ಶನ ನೀಡಬಲ್ಲ ಕೆಲವು ನಿಯಮಗಳನ್ನು ಶಿಫಾರಸ್ಸು ಮಾಡುವುದು. ಇಂದು ಕಾರ್ಯನೀತಿ ಸಮಿತಿಗೆ ಸಭೆ ಸೇರುವ ಸುಯೋಗ ಒದಗಿದ್ದು, ಪ್ರಾಂತ್ಯ ಸರ್ಕಾರಗಳ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಕೊಡುವ ಅಭಿಪ್ರಾಯಗಳ ಲಾಭ ಪಡೆಯಲು, ಅವರನ್ನು ಈ ಸಭೆಗೆ ಕಳುಹಿಸಿಕೊಡಬೇಕೆಂದು ನಾವು ಆ ಸರ್ಕಾರಗಳನ್ನು ಕೇಳಿಕೊಳ್ಳುತ್ತೇವೆ.

"ವಿದ್ಯುಚ್ಛಕ್ತಿಯ ವಿಷಯವನ್ನು ಒಂದು ಸಾರ್ವಜನಿಕ ವಿಷಯವೆಂದು ಪರಿಗಣಿಸಿದಾಗ, ಅದು ಅನೇಕ ಬದಲಾವಣೆಗಳಿಗೆ ಒಳಪಟ್ಟಿರುವುದು ಕಾಣುತ್ತದೆ. ಭಾರತ ಸರ್ಕಾರವು ಮೊಟ್ಟಮೊದಲು ಇದನ್ನು ೧೯೦೫ರಲ್ಲಿ ಗಮನಿಸಿತು. ಆಗ ಅದು ಪ್ರಾಂತ್ಯ ಸರ್ಕಾರಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿತು. ಅಂದಿನಿಂದ ಪ್ರಾಂತ್ಯ ಸರ್ಕಾರಗಳೂ ಕೇಂದ್ರ ಸರ್ಕಾರವೂ ಪ್ರಾಯಶಃ ನಿದ್ರಿಸುತ್ತಲೇ ಇವೆ. ೧೯೧೮ರಲ್ಲಿ ಪ್ರಕಟವಾದ ಭಾರತೀಯ ಕೈಗಾರಿಕೆಗಳ ಆಯೋಗದ ವರದಿ ಮತ್ತು ಮರು ವರ್ಷ ಪ್ರಕಟವಾದ ಭಾರತೀಯ ರಕ್ಷಣಾ ಸಾಮಗ್ರಿಗಳ ಬೋರ್ಡಿನ ವರದಿಗಳು ವಿದ್ಯುಚ್ಛಕ್ತಿಯ ಬಗೆಗೆ ನಾವು ತೋರಿಸಬೇಕಾದ ಕ್ರಿಯಾತ್ಮಕ ಆಸಕ್ತಿ ಎಷ್ಟೊಂದು ಜರೂರಾಗಿದೆ ಎಂಬುದನ್ನು ಒತ್ತಿ ಹೇಳಿದಾಗ ಈ ಸರ್ಕಾರಗಳು ಎಚ್ಚೆತ್ತವು. ಕೈಗಾರಿಕಾ ಆಯೋಗವು ಭಾರತದ ಜಲಶಕ್ತಿಯ ಸಮೀಕ್ಷೆಗೆ ಶಿಫಾರಸು ಮಾಡಿ ಆ ಸಮೀಕ್ಷೆಯನ್ನು ಖಾಸಗಿ ಸಂಸ್ಥೆಯ ಬದಲು ಸರ್ಕಾರವೇ ನಡೆಸಬೇಕೆಂದು ಹೇಳಿತು. ಭಾರತ ಸರ್ಕಾರವು ಈ ಶಿಫಾರಸನ್ನು ಒಪ್ಪಿತಲ್ಲದೆ, ಆಗಿನ ಸಂಯುಕ್ತ ಪ್ರಾಂತ್ಯಗಳಲ್ಲಿ ನೀರಾವರಿ ಖಾತೆಯ ಮುಖ್ಯ ಅಭಿಯಂತರರಾಗಿದ್ದ ಶ್ರೀ ಜೆ.ಟಿ. ಬಾರ್ಲೊ, ಸಿ.ಆಯ್.ಇ. ಅವರನ್ನು ಜಲಶಕ್ತಿಯ ಸಮೀಕ್ಷೆಯನ್ನು ನೋಡಿಕೊಳ್ಳಲು ಮುಖ್ಯ ಅಭಿಯಂತರರೆಂದು ನೇಮಿಸಲಾಯಿತು, ಮತ್ತು ಈ ಸಮೀಕ್ಷೆಯಲ್ಲಿ ನೆರವಾಗಲು ಭಾರತ ಸರ್ಕಾರಕ್ಕೆ ವಿದ್ಯುಚ್ಛಕ್ತಿ ಸಲಹಾಕಾರರಾಗಿದ್ದ ಶ್ರೀ ಜೆ.ಎಂ. ಮೇಯರ್ಸ್, ಎಂ.ಆಯ್.ಸಿ.ಇ. ಅವರನ್ನು ನೇಮಕ ಮಾಡಲಾಯಿತು. ಶ್ರೀ ಬಾರ್ಲೊ ತೀರಿಕೊಂಡ ನಂತರ ಅವರ ಕೆಲಸವನ್ನು ಶ್ರೀ ಮೇಯರ್ಸ್ ಮುಂದುವರಿಸಿ, ೧೯೧೯ರಿಂದ ೧೯೨೨ರ ವರೆಗಿನ ಕಾಲದಲ್ಲಿ ಮೂರು ಅತ್ಯುತ್ಕೃಷ್ಟ ವರದಿಗಳನ್ನು ಒಪ್ಪಿಸಿದರು. ಪ್ರತಿಯೊಂದು ಪ್ರಾಂತ್ಯದಲ್ಲಿನ ವಿದ್ಯುಚ್ಛಕ್ತಿ ಸರಬರಾಜಿನ ಸಾಧ್ಯತೆ ಕುರಿತ ಈ ವರದಿಗಳಲ್ಲಿ ಐದು ಮುಖ್ಯ ಶೀರ್ಷಿಕೆಗಳಿವೆ. (೧) ಈಗಾಗಲೇ ಅಭಿವೃದ್ಧಿಗೊಂಡ ವಿದ್ಯುಚ್ಛಕ್ತಿ ಸ್ಥಾವರಗಳು, (೨) ಇನ್ನೂ ಕಟ್ಟಲಾಗುತ್ತಿರುವ ಸ್ಥಾವರಗಳು,

(೩) ಸಮೀಕ್ಷೆಗೊಳಗಾದ – ಆದರೆ ಇನ್ನೂ ಅಭಿವೃದ್ಧಿಗೊಳ್ಳದ – ಕ್ಷೇತ್ರಗಳು, (೪) ಗೊತ್ತಿರುವ ನಿವೇಶನಗಳು – ಆದರೆ ಅವುಗಳ ಬಗೆಗೆ ಇನ್ನೂ ಹೆಚ್ಚಿನ ವಿವರಗಳು ಅಪೇಕ್ಷಣೀಯ ಮತ್ತು (೫) ಇನ್ನೂ ಪರೀಕ್ಷಿಸದ ಕ್ಷೇತ್ರಗಳು ಮತ್ತು ನಿವೇಶನಗಳು.

**ವಿದ್ಯುಚ್ಛಕ್ತಿ – ಒಂದು ಪ್ರಾಂತೀಯ ವಿಷಯ**

"೧೯೧೯ರಲ್ಲಿ ಜಾರಿಗೆ ಬಂದ ಶಾಸನದನ್ವಯವಾಗಿ ಭಾರತ ಸರ್ಕಾರದಲ್ಲಿ ಆದ ಬದಲಾವಣೆಯ ಪರಿಣಾಮವಾಗಿ, ದುರದೃಷ್ಟವಶಾತ್, ವಿದ್ಯುಚ್ಛಕ್ತಿಯು ಪ್ರಾಂತೀಯ ವಿಷಯವಾಯಿತು. ದುರದೃಷ್ಟವಶಾತ್, ಆ ಶಾಸನವು, ಕೇಂದ್ರ ಸರ್ಕಾರಕ್ಕೆ ಯೋಗ್ಯವೆನಿಸಿದ ಬಾಬ್ತುಗಳ ಮೇಲೆ (ಅವು ಅದರ ಆಡಳಿತದ ಪರಿಧಿಯ ಹೊರಗಿದ್ದರೂ) ಖರ್ಚು ಮಾಡಲು ಅನುಮತಿ ನೀಡುವಂತಹ ಅವಕಾಶವನ್ನು ಮಾಡಿಕೊಡಲಿಲ್ಲ. ಇದರ ಪರಿಣಾಮವಾಗಿ, ಜಲರಾಶಿ ಸಮೀಕ್ಷೆಗೆ ಹಣವೊದಗಿಸುವುದು ಭಾರತ ಸರ್ಕಾರಕ್ಕೆ ಅಸಾಧ್ಯವಾಯಿತು. ಹೀಗಾಗಿ, ಭಾರತಕ್ಕೆ ವಿದ್ಯುಚ್ಛಕ್ತಿ ಸರಬರಾಜಿಗೆ ಅವಕಾಶ ಮಾಡಿಕೊಡುವ ಒಂದು ಒಳ್ಳೆಯ, ಮಹಾನ್ ಮತ್ತು ಆವಶ್ಯಕ ಕಾರ್ಯವು ಕೊನೆಗೊಂಡಿತು.

"ಈಗ ಭಾರತದ ವಿದ್ಯುಚ್ಛಕ್ತಿ ಅಭಿವೃದ್ಧಿಯನ್ನು ನೋಡಿಕೊಳ್ಳುವ ಅಧಿಕಾರಿ ಕೇಂದ್ರ ಸರ್ಕಾರದಲ್ಲಿಲ್ಲ. ಇದರಿಂದಾಗಿ, ವಿದ್ಯುಚ್ಛಕ್ತಿಯ ಉತ್ಪಾದನೆ, ವಿತರಣೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಅಂಕಿಅಂಶಗಳು ಕೇಂದ್ರದಲ್ಲಿರುವ ನಮಗೆ ಇದುವರೆಗೂ ದೊರಕುತ್ತಿಲ್ಲ.

"ಆದ್ದರಿಂದ, ಭಾರತದಲ್ಲಿ ವಿದ್ಯುಚ್ಛಕ್ತಿ ಎಂಬ ವಿಷಯವು ಗಂಭೀರ ಪರಿಶೀಲನೆಗಾಗಿ ಪುನಃ ಬಂದಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ನನಗೆ ತೋರುವಂತೆ, ನಮ್ಮ ಸಮಿತಿಯು ಈ ಕೆಳಗಿನ ಸಮಸ್ಯೆಗಳನ್ನು ಪರಿಶೀಲಿಸಬೇಕಾಗಿದೆ.

೧. ವಿದ್ಯುಚ್ಛಕ್ತಿಯು ಖಾಸಗಿ ಸ್ವಾಮ್ಯದಲ್ಲಿರಬೇಕೆ ಅಥವಾ ಸರ್ಕಾರಿ ಸ್ವಾಮ್ಯದಲ್ಲಿರಬೇಕೆ?
೨. ಅದು ಖಾಸಗಿ ಸ್ವಾಮ್ಯದಲ್ಲಿದ್ದರೆ, ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ, ಯಾವುದಾದರೂ ಷರತ್ತುಗಳನ್ನು ವಿಧಿಸುವುದು ಆವಶ್ಯಕವೆ?
೩. ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆಯು ಕೇಂದ್ರ ಸರ್ಕಾರಕ್ಕೆ ಸೇರಬೇಕೊ ಅಥವಾ ಪ್ರಾಂತ್ಯ ಸರ್ಕಾರಕ್ಕೆ ಸೇರಬೇಕೊ?
೪. ಆ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕೆ ಸೇರುವುದಾದರೆ, ಅಗ್ಗವಾದ ಬೆಲೆಗೆ ಯಥೇಚ್ಛವಾಗಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಮತ್ತು ಸಂಪನ್ಮೂಲಗಳು ಹಾಳಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ, ಆ ಹೊಣೆಗಾರಿಕೆಯನ್ನು ಚಲಾಯಿಸುವ ಅತ್ಯುತ್ತಮ ಕ್ರಮ ಯಾವುದು?
೫. ಆ ಹೊಣೆಗಾರಿಕೆ ಪ್ರಾಂತ್ಯಕ್ಕೆ ಸೇರುವುದಾದರೆ, ಆ ಪ್ರಾಂತ್ಯಗಳ ಆಳ್ವಿಕೆಯು, ಸಲಹೆ ಕೊಡುವ ಮತ್ತು ಸಹಕರಿಸುವ ಅಧಿಕಾರವನ್ನುಳ್ಳ ಅಂತರಪ್ರಾಂತೀಯ ಬೋರ್ಡಿನ ಅಧೀನಕ್ಕೊಳಪಡಬೇಕೆ?

**ಮೂರು ಪರಿಶೀಲನೆಗಳು**

"ಈ ಪ್ರಶ್ನೆಗಳಲ್ಲಿನ ಪ್ರತಿಯೊಂದಕ್ಕೂ ಎರಡು ಪಕ್ಷಗಳಿವೆ. ಪ್ರತಿಯೊಂದು ಪಕ್ಷಕ್ಕೂ ಬೆಂಬಲಿಗರಿದ್ದಾರೆ. ಈ ಹಂತದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಲಿಚ್ಛಿಸುವುದಿಲ್ಲ. ನನ್ನದು ತೆರೆದ ಬುದ್ಧಿ. ಆದರೆ ಖಾಲಿ

ಬುದ್ಧಿಯಲ್ಲ. ನಾನು ಹೇಳಬಯಸುವುದಿಷ್ಟೆ : ವಿದ್ಯುಚ್ಛಕ್ತಿಯ ಅಭಿವೃದ್ಧಿಗೆ ಉತ್ತಮ ವಿಧಾನ ಯಾವುದು ಎಂದು ತೀರ್ಮಾನಿಸುವಲ್ಲಿ ನಾವು ಈ ಕೆಳಗಿನ ಮೂರು ಪರಿಶೀಲನೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು:

೧. ಇವೆರಡರಲ್ಲಿ ಯಾವ ಪಕ್ಷವು ಅಗ್ಗದ ವೆಚ್ಚದ್ದಲ್ಲಿ ಅಂದರೆ ಅತ್ಯಂತ ಅಗ್ಗದ ವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತದೆ?

೨. ಇವೆರಡರಲ್ಲಿ ಯಾವುದು ನಮಗೆ ಕೇವಲ ಸಾಕಷ್ಟಲ್ಲದೆ ಯಥೇಚ್ಛವಾದ ವಿದ್ಯುಚ್ಛಕ್ತಿಯನ್ನು ಕೊಡುತ್ತದೆ?

೩. ರೇಲ್ವೆ ಜಾಲವನ್ನು ಹೇಗೋ ಹಾಗೆ ವಿದ್ಯುಚ್ಛಕ್ತಿಯನ್ನೂ ಪರಿಗಣಿಸಿದರೆ, ಅಂದರೆ ತಾತ್ಕಾಲಿಕ ಲಾಭವನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭಿಸುವ ಒಂದು ವ್ಯಾಪಾರವೆಂದು ಪರಿಗಣಿಸದಿದ್ದರೆ, ಈ ಎರಡರಲ್ಲಿ ಯಾವ ಪಕ್ಷವು ಭಾರತವನ್ನು ವಿದ್ಯುಚ್ಛಕ್ತಿಯಿಂದ ಸುಸಜ್ಜಿತವನ್ನಾಗಿ ಮಾಡುತ್ತದೆ?

"ನಾನು ಈ ಮೂರು ಪರಿಶೀಲನೆಗೆ ಒತ್ತು ಕೊಡುತ್ತೇನೆ. ಏಕೆಂದರೆ, ಭಾರತಕ್ಕೆ ಬೇಕಿರುವುದು ವಿದ್ಯುಚ್ಛಕ್ತಿಯ ನಿರಂತರ ಸರಬರಾಜು, ಅಗ್ಗದ ವಿದ್ಯುಚ್ಛಕ್ತಿ, ಮತ್ತು ಯಥೇಚ್ಛ ವಿದ್ಯುಚ್ಛಕ್ತಿ.

"ಇವು ಪ್ರಾಥಮಿಕ ರೀತಿಯ ಪ್ರಶ್ನೆಗಳು. ಈ ಪ್ರಶ್ನೆಗಳನ್ನು ಎದುರಿಸಲು ನಿಮ್ಮಲ್ಲಿ ಕೆಲವರಿಗೆ – ಈ ಪ್ರಶ್ನೆಗಳು ಸಂವಿಧಾನದಲ್ಲಿ ಬದಲಾವಣೆಯ ಪ್ರಶ್ನೆಯನ್ನು ಎತ್ತುವ ಕಾರಣಕ್ಕಾಗಿ – ಸಂಕೋಚವೆನಿಸಬಹುದು. ನನ್ನನ್ನು ಕೇಳಿದರೆ, ನನಗೇನೂ ಸಂಕೋಚವಾಗುವುದಿಲ್ಲ. ಸಂವಿಧಾನ ಪ್ರಶ್ನೆಗಳನ್ನು ಇತ್ಯರ್ಥಪಡಿಸುವುದಕ್ಕೂ, ಆ ಪ್ರಶ್ನೆಗಳ ಬಗೆಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೂ ವ್ಯತ್ಯಾಸವಿದೆ. ಇಲ್ಲಿ ನಾವು ಯಾವ ಸಂವಿಧಾನದ ಪ್ರಶ್ನೆಯನ್ನೂ ಇತ್ಯರ್ಥಪಡಿಸುತ್ತಿಲ್ಲ; ಅವುಗಳ ಬಗೆಗಿನ ನಮ್ಮ ಅಭಿಪ್ರಾಯಗಳನ್ನಷ್ಟೇ ವ್ಯಕ್ತಪಡಿಸುತ್ತಿದ್ದೇವೆ. ಅವು ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳೆಂಬ ಕಾರಣದಿಂದ ನಾವು ಅವುಗಳನ್ನು ಪರಿಶೀಲಿಸಬಾರದೆಂದು ಯಾರೂ ನಮ್ಮನ್ನು ತಡೆಯುವುದಿಲ್ಲ. ನಮಗೊಪ್ಪಿಸಿರುವ ವಿಷಯಕ್ಕೆ ನಾವು ಯೋಗ್ಯ ಪ್ರಾಮುಖ್ಯವನ್ನು ಕೊಡಬೇಕಾದರೆ, ನಾವು ಆ ಪ್ರಶ್ನೆಗಳನ್ನು ಕೈಬಿಡುವಂತೆಯೇ ಇಲ್ಲ ಎಂದು ನನಗನಿಸುತ್ತದೆ.

**ವಿದ್ಯುಚ್ಛಕ್ತಿ ಪೂರೈಕೆ ಇಲಾಖೆ**

"ಈ ಪ್ರಾಥಮಿಕ ಮಟ್ಟದ ಪ್ರಶ್ನೆಗಳೂ ಅಲ್ಲದೆ, ಬೇರೆ ಪ್ರಶ್ನೆಗಳೂ ಇವೆ. ಆದರೆ ಅವು ಎರಡನೆಯ ದರ್ಜೆಯವೇನಲ್ಲ. ವಿದ್ಯುದೀಕರಣವು ಯಶಸ್ವಿಯಾಗಬೇಕಾದರೆ ಆ ಪ್ರಶ್ನೆಗಳ ಪರಿಶೀಲನೆಯನ್ನು ಕೈಬಿಡಬಾರದು. ಅವೆಂದರೆ :

೧. ಕಲ್ಲಿದ್ದಲು, ಪೆಟ್ರೋಲು, ಮದ್ಯಸಾರ, ಹರಿಯುವ ನೀರು, ಮುಂತಾದ ಲಭ್ಯವಿರುವ ಸಂಪನ್ಮೂಲಗಳ ವ್ಯವಸ್ಥಿತ ಸಮೀಕ್ಷೆ ನಡೆಸುವ ಮತ್ತು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಮಾರ್ಗೋಪಾಯಗಳನ್ನು ತಿಳಿಸುವ ಒಂದು ವಿದ್ಯುಚ್ಛಕ್ತಿ ಪೂರೈಕೆ ಇಲಾಖೆಯನ್ನು ಕೇಂದ್ರದಲ್ಲಿ ಸ್ಥಾಪಿಸಬೇಕೆ?

೨. ಲಭ್ಯವಿರುವ ವಿದ್ಯುಚ್ಛಕ್ತಿಯನ್ನು ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ಬಳಸುವ ವಿಧಾನವನ್ನು ತಿಳಿದುಕೊಳ್ಳುವ ಸಲುವಾಗಿ, ಆ ಶಕ್ತಿಯ ಮೂಲಗಳಿಗೂ, ಯಂತ್ರೋಪಕರಣಗಳಿಗೂ ಇರುವ ಸಂಬಂಧಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡುವ ವಿದ್ಯುಚ್ಛಕ್ತಿ

ಸಂಶೋಧನಾ ಕಾರ್ಯಾಗಾರವೊಂದನ್ನು ಕೇಂದ್ರದಲ್ಲಿ ಸ್ಥಾಪಿಸುವುದು ಅಗತ್ಯವೇ?

೩. ವಿದ್ಯುತ್ ಸ್ಥಾವರ ಮತ್ತು ಯಂತ್ರೋಪಕರಣಗಳ ರಚನೆ, ಸಂರಕ್ಷಣೆ ಮತ್ತು ಸುಧಾರಣೆಗಳ ಯೋಜನೆಯನ್ನೂ, ಅನುಷ್ಠಾನವನ್ನೂ ಮಾಡುವ ಭಾರತೀಯ ಸಿಬ್ಬಂದಿಗೆ ವಿದ್ಯುಚ್ಛಕ್ತಿ ತಂತ್ರಜ್ಞಾನದಲ್ಲಿ ತರಬೇತಿ ಕೊಡುವ ವಿಧಾನವನ್ನು ಅನುಷ್ಠಾನಕ್ಕೆ ತರುವುದು ಆವಶ್ಯಕವೇ?

"ನಾನು ನನ್ನ ಮಾತು ಮುಗಿಸುವ ಮೊದಲು, ಭಾರತದಲ್ಲಿ ವಿದ್ಯುತ್ತಿನ ಅಭಿವೃದ್ಧಿಯ ಮಹತ್ವವನ್ನೂ, ಅದರ ಆವಶ್ಯಕತೆಯ ಹಿಂದಿರುವ ಚರಮ ಉದ್ದೇಶವನ್ನೂ ವ್ಯಕ್ತಪಡಿಸುವ ಕೆಲವು ಟೀಕೆಗಳನ್ನು ನಾನು ಮಾಡಬಹುದೆ? ಇದರ ಉಸ್ತುವಾರಿ ನೋಡಿಕೊಳ್ಳುತ್ತಿರುವವರಿಗೆ ಇದರ ಮಹತ್ವ ಉದ್ದೇಶಗಳ ಬಗೆಗೆ ಗಾಢವಾದ ಅರಿವಿರಬೇಕಾದುದು ಆವಶ್ಯಕ. ಈ ನನ್ನ ಮಾತನ್ನು ನೀವು ಒಪ್ಪುವಿರಾದರೆ, ನಿಮಗೆ ನೀವೇ 'ಭಾರತದಲ್ಲಿ ನಮಗೆ ಅಗ್ಗವಾದ ಹಾಗೂ ವಿಪುಲವಾದ ವಿದ್ಯುಚ್ಛಕ್ತಿ ಏಕೆ ಬೇಕು?' ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಿ. ಆಗ, ಅಗ್ಗ ಹಾಗೂ ವಿಪುಲ ವಿದ್ಯುಚ್ಛಕ್ತಿ ಇಲ್ಲದಿದ್ದರೆ ಭಾರತದಲ್ಲಿ ಕೈಗಾರಿಕೆ ಸ್ಥಾಪಿಸುವ ಯಾವುದೇ ಪ್ರಯತ್ನ ಯಶಸ್ವಿಯಾಗಲಾರದು ಎಂಬ ಉತ್ತರ ಸಿಕ್ಕುತ್ತದೆ. ಈ ಸಮಿತಿಯು ಕೈಗೊಳ್ಳಬೇಕಾಗಿರುವ ಕರ್ತವ್ಯದ ಮಹತ್ವದ ಒಂದಂಶವನ್ನು ಮಾತ್ರ ಈ ಉತ್ತರ ವ್ಯಕ್ತಪಡಿಸುತ್ತದೆ.

"'ಕೈಗಾರಿಕೆ ಸ್ಥಾಪಿಸುವುದು ಅಗತ್ಯವೆ?' ಎಂಬ ಮತ್ತೊಂದು ಪ್ರಶ್ನೆಯನ್ನು ಕೇಳಿ. ತಕ್ಷಣವೇ ಪೂರ್ಣ ಮಹತ್ವದ ಸ್ಪಷ್ಟ ಅರಿವು ನಿಮಗಾಗುತ್ತದೆ. ಏಕೆಂದರೆ, ಪ್ರಶ್ನೆಗೆ ಉತ್ತರ ಹೀಗಿರುತ್ತದೆ : ಸತತವಾಗಿ ಚಲಿಸುತ್ತಿರುವ ಬಡತನದ ಚಕ್ರದಲ್ಲಿ ಸಿಕ್ಕಿಹಾಕಿಕೊಂಡಿರುವ ಜನರನ್ನು ಮುಕ್ತಗೊಳಿಸಲು ಭಾರತದಲ್ಲಿ ಕೈಗಾರಿಕೀಕರಣವೆಂಬ ನಿಶ್ಚಿತ ಸಾಧನ ಬೇಕೇ ಬೇಕು. ಆದ್ದರಿಂದ ನಾವು ತಕ್ಷಣವೇ ಭಾರತದ ಔದ್ಯೋಗೀಕರಣವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕು.

**ಭಾರತದ ಕೈಗಾರಿಕೀಕರಣ**

"ಬಹಳ ವರ್ಷಗಳಿಂದ ಭಾರತದ ಔದ್ಯೋಗೀಕರಣದ ಬಗ್ಗೆ ಚಿಂತಿಸಲಾಗುತ್ತಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಯಾವ ಗಂಭೀರ ಪ್ರಯತ್ನವನ್ನೂ ಮಾಡಿಲ್ಲ ಎಂಬುದು ಯಾರಿಗಾದರೂ ಕಾಣುತ್ತದೆ. ಮತ್ತೆ ಕೆಲವರು ಈ ಬಗ್ಗೆ ಕೇವಲ ಔಪಚಾರಿಕ ಮಾತುಗಳನ್ನಾಡುತ್ತಾರೆ. ಮತ್ತೆ ಕೆಲವರ ಪ್ರಕಾರ, ಇದು ಹುಚ್ಚಲ್ಲದಿದ್ದರೂ, ಒಂದು ಖಯಾಲಿ. ಭಾರತವು ಕೃಷಿ ದೇಶವೆಂದೂ, ಆದ್ದರಿಂದ, ವ್ಯವಸಾಯವನ್ನು ಸುಧಾರಿಸುವುದಕ್ಕೇ ನಮ್ಮ ಶಕ್ತಿಯನ್ನೆಲ್ಲ ಮೀಸಲಾಗಿಸಬೇಕೆಂದೂ, ಕೈಗಾರಿಕೀಕರಣದ ಬೆನ್ನು ಹತ್ತಬಾರದೆಂದೂ ಉಪದೇಶಿಸಲು ಕೆಲವರಿಗೆ ಆಯಾಸವಾಗುವುದೇ ಇಲ್ಲ. ಭಾರತವು ಮೂಲತಃ ಕೃಷಿ ದೇಶವೆಂದು ಉಪದೇಶಿಸಲು ನಮಗೆ ಯಾರ ಆವಶ್ಯಕತೆಯೂ ಇಲ್ಲ. ಅದು ಪ್ರತಿಯೊಬ್ಬರಿಗೂ ಗೊತ್ತು. ಆದರೆ ಇದೊಂದು ದುರದೃಷ್ಟವೆಂದು ಯಾರಿಗೂ ಎನ್ನಿಸದಿರುವುದು ಆಶ್ಚರ್ಯವೇ ಸರಿ. ನನಗೆ ಗೊತ್ತು, ಇದನ್ನು ತಕ್ಷಣವೇ ಯಾರೂ ಒಪ್ಪುವುದಿಲ್ಲವೆಂದು. ಬಂಗಾಳವೂ ಭಾರತದ ಇತರ ಪ್ರದೇಶಗಳೂ ಕ್ಷಾಮಕ್ಕೀಡಾಗಿದ್ದು, ಅಲ್ಲಿ ಆಹಾರದ ಅಭಾವದಿಂದಲೂ, ಕೊಳ್ಳುವ ಶಕ್ತಿಯ ಅಭಾವದಿಂದಲೂ ಪ್ರತಿನಿತ್ಯ ಅನೇಕ ಬೇಸಾಯಗಾರರು ಸಾಯುತ್ತಿದ್ದಾರೆ. ಇದೊಂದು ದುರದೃಷ್ಟವೆಂದು ಸಾಬೀತುಪಡಿಸಲು ಇದಕ್ಕಿಂತ ಹೆಚ್ಚಿನ ಸಾಕ್ಷ್ಯವೇನು ಬೇಕು ?

"ಆಹಾರವನ್ನಲ್ಲದೆ ಮತ್ತೇನನ್ನೂ ಉತ್ಪಾದಿಸದ ಭಾರತವು ತನ್ನ ಜನರಿಗೆ ಸಾಕಾಗುವಷ್ಟು ಆಹಾರವನ್ನು ಉತ್ಪಾದಿಸುತ್ತಿಲ್ಲ ಎಂಬುದು ಅತ್ಯಂತ ಸ್ಪಷ್ಟ ವಿಷಯ. ಅಂದರೆ, ಭಾರತದ ವ್ಯವಸಾಯವು ಸೋತಿದೆಯಷ್ಟೇ ಅಲ್ಲ, – ಶೋಚನೀಯವಾಗಿ ಸೋತಿದೆ – ಎಂದು ಸಾಬೀತುಪಡಿಸಲು ಹೆಚ್ಚಿನ ಪುರಾವೆಗಳೇನೂ ಬೇಕಿಲ್ಲ

ಎಂದು ನನಗನಿಸುತ್ತದೆ. ಇದಕ್ಕೆ ಕಾರಣವೇನು? ವ್ಯವಸಾಯವನ್ನೇ ಪೂರ್ಣವಾಗಿ ಅವಲಂಬಿಸಿರುವುದೇ ಭಾರತದ ಬಡತನಕ್ಕೆ ಕಾರಣ ಎಂಬುದು ನನ್ನ ಅಭಿಮತ.

"ಭಾರತದ ಜನಸಂಖ್ಯೆಯು ದಶಕದಿಂದ ದಶಕಕ್ಕೆ ಜ್ಯಾಮಿತೀಯ ಅನುಪಾತದಲ್ಲಿ ಬೆಳೆಯುತ್ತಿದೆ. ಆದರೆ ಈ ಅಪರಿಮಿತ ಜನಸಂಖ್ಯಾ ಬೆಳವಣಿಗೆಗೆ ತಕ್ಕಂತೆ ಬೇಸಾಯಕ್ಕೆ ಯೋಗ್ಯವಾದ ಭೂಮಿ ಸಾಕಷ್ಟು ಸಿಕ್ಕುತ್ತಿಲ್ಲ; ಅಲ್ಲದೆ, ಆ ಪರಿಮಿತ ಭೂಮಿಯ ಫಲವತ್ತು ವರ್ಷ ವರ್ಷವೂ ಕಡಿಮೆಯಗುತ್ತಿರುತ್ತದೆ. ಹೀಗೆ ಭಾರತವು ಚಿಮುಟದಲ್ಲಿ ಸಿಕ್ಕಿಕೊಂಡಿದೆ – ಒಂದು ಕಡೆ, ಜನಸಂಖ್ಯೆಯ ಹೆಚ್ಚಳ; ಮತ್ತೊಂದು ಕಡೆ, ಫಲವತ್ತಿನ ಕ್ಷೀಣತೆಯ ಹೆಚ್ಚಳ.

## ಹುಳುಕು ಪ್ರಾರಂಭವಾಗಿದೆ

"ಇದರಿಂದಾಗಿ, ಪ್ರತಿಯೊಂದು ದಶಕದ ಕೊನೆಯಲ್ಲಿ ನೋಡಿದಾಗ, ಜನಸಂಖ್ಯೆ ಮತ್ತು ಉತ್ಪಾದನೆಗಳಲ್ಲಿ ಅಸಮತೋಲನ ಮತ್ತು ಜೀವನಮಟ್ಟದಲ್ಲಿ ಸತತವಾದ ಇಳಿಮುಖ – ಇವು ಉಳಿದಿರುತ್ತವೆ. ಈ ಜನಸಂಖ್ಯೆ ಮತ್ತು ಉತ್ಪಾದನೆಗಳಲ್ಲಿನ ವ್ಯತ್ಯಾಸ ದಶಕದಿಂದ ದಶಕಕ್ಕೆ ಭಯಂಕರ ಗತಿಯಲ್ಲಿ ಹೆಚ್ಚಾಗುತ್ತಿದೆ; ಹೀಗಾಗಿ ಇದು ಭಾರತದಲ್ಲಿ ಬಡತನ, ಹೆಚ್ಚು ಬಡತನ ಮತ್ತು ಸತತವಾದ ಬಡತನಗಳ ಪರಂಪರೆಯನ್ನೇ ಸೃಷ್ಟಿಸಿದೆ. ಹುಳುಕು ಪ್ರಾರಂಭವಾಗಿದೆ. ವ್ಯವಸಾಯ ವಸ್ತು ಪ್ರದರ್ಶನ, ಪ್ರಾಣಿ ಪ್ರದರ್ಶನ ಅಥವಾ ಉತ್ತಮ ಗೊಬ್ಬರ ಪ್ರಚಾರಗಳನ್ನು ಮಾಡಿದರೆ ಹುಳುಕನ್ನು ಖಂಡಿತ ನಿಲ್ಲಿಸಲು ಸಾಧ್ಯವೆಂದು ನನಗೇನನ್ನಿಸುವುದಿಲ್ಲ. ವ್ಯವಸಾಯವನ್ನು ಲಾಭದಾಯಕವನ್ನಾಗಿ ಮಾಡಿದಾಗ ಮಾತ್ರ ಹುಳುಕನ್ನು ತಡೆಯಬಹುದು. ಕೈಗಾರಿಕೀಕರಣದ ಪರವಾಗಿ ಗಂಭೀರ ಪ್ರಚೋದನೆ ನೀಡುವುದನ್ನು ಬಿಟ್ಟರೆ, ಭಾರತದ ವ್ಯವಸಾಯವನ್ನು ಲಾಭದಾಯಕವನ್ನಾಗಿ ಮಾಡುವ ಯಾವ ಸಾಧ್ಯತೆಯೂ ಇಲ್ಲ. ವ್ಯವಸಾಯದ ಮೇಲೆ ಭಾರವಾಗಿ ಹೇರಿಕೊಂಡಿರುವ ಹೆಚ್ಚುವರಿ ಜನಸಂಖ್ಯೆಯು ಲಾಭದಾಯಕ ವ್ಯವಸಾಯೇತರ ಕಸುಬುಗಳನ್ನು ಹಿಡಿಯುವಂತೆ ಮಾಡಲು ಔದ್ಯೋಗೀಕರಣಕ್ಕೆ ಮಾತ್ರ ಸಾಧ್ಯ.

"ಸಾರಾಂಶವಿಷ್ಟೆ : ಅನೇಕ ಯುರೋಪಿಯನ್ ರಾಷ್ಟ್ರಗಳಲ್ಲಿ ಜರ್ಮನರು ಕೈಗಾರಿಕಾ ಸಂಸ್ಥೆಗಳನ್ನು ನಾಶಮಾಡಿದಾಗ, ಅಲ್ಲಿ ಅನೇಕ ಪುನಾರಚನಾ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಗುರಿ ಮತ್ತು ಉದ್ದೇಶಗಳ ದೃಷ್ಟಿಯಿಂದ, ಇದೇ ಮಾದರಿಯಲ್ಲಿ ನಮ್ಮ ಪುನಾರಚನಾ ಸಮಿತಿಗಳನ್ನು ರಚಿಸಲಾಗಿದೆ. ಪುನಾರಚನೆಯ ಸಮಸ್ಯೆಗಳು ದೇಶದಿಂದ ದೇಶಕ್ಕೆ ಬೇರೆಯಾಗುತ್ತವೆ; ಬೇರೆಯಾಗಲೇ ಬೇಕು. ಅನೇಕ ದೇಶಗಳಲ್ಲಿ ಪುನಾರಚನೆಯ ಸಮಸ್ಯೆಯೆಂದರೆ, ಹಾಳಾಗಿರುವ ಸ್ಥಾವರಗಳನ್ನೂ ಯಂತ್ರಗಳನ್ನೂ ದುರಸ್ತಿಪಡಿಸುವುದು.

## ಭಾರತದಲ್ಲಿನ ಸಮಸ್ಯೆಯ ಸ್ವರೂಪ

"ಕೆಲವು ರಾಷ್ಟ್ರಗಳಲ್ಲಿ ಪುನಾರಚನೆಯ ಸಮಸ್ಯೆಯೆಂದರೆ, ಯುದ್ಧದಲ್ಲಿ ನಾಶವಾದ ಯಂತ್ರೋಪಕರಣ ಮತ್ತು ಸ್ಥಾವರಗಳ ಸ್ಥಾನದಲ್ಲಿ ಬೇರೆ ಯಂತ್ರೋಪಕರಣಗಳನ್ನೂ ಸ್ಥಾವರಗಳನ್ನೂ ಸ್ಥಾಪಿಸುವುದು. ಭಾರತದಲ್ಲಿನ ಪುನಾರಚನಾ ಸಮಸ್ಯೆಯು ಯುದ್ಧದಲ್ಲಿ ತೊಡಗಿರುವ ರಾಷ್ಟ್ರಗಳು ಪರಿಶೀಲಿಸುತ್ತಿರುವ ಸಮಸ್ಯೆಗಳನ್ನೂ ಒಳಗೊಳ್ಳಬೇಕು.

"ಅಲ್ಲದೆ, ಭಾರತದಲ್ಲಿನ ಪುನಾರಚನೆಯ ಸಮಸ್ಯೆಗೂ ಬೇರೆ ದೇಶಗಳಲ್ಲಿನ ಪುನಾರಚನೆಯ ಸಮಸ್ಯೆಗೂ ಸಾರತಃ ವ್ಯತ್ಯಾಸವಿದೆಯೆಂಬುದನ್ನು ನಾವು ಮರೆಯಬಾರದು. ಬೇರೆ ದೇಶಗಳಲ್ಲಿ ಈ ಮೊದಲೇ ಇದ್ದ

ಕೈಗಾರಿಕೆಯನ್ನು ಮತ್ತೆ ಸ್ಥಾಪಿಸುವುದು ಹೇಗೆಂಬ ಸಮಸ್ಯೆಯೇ ಪುನಾರಚನಾ ಸಮಸ್ಯೆ.

"ಭಾರತದಲ್ಲಿನ ಪುನಾರಚನೆಯ ಸಮಸ್ಯೆಯು, ನನಗೆ ಕಾಣುವಂತೆ, ಮುಖ್ಯವಾಗಿ ಭಾರತದ ಕೈಗಾರಿಕೀಕರಣದ ಸಮಸ್ಯೆಯಾಗಿದೆ. ಈ ಸಮಸ್ಯೆಗೂ ಕೈಗಾರಿಕೆ ಮತ್ತು ಕೈಗಾರೀಕರಣಗಳ ಮರುಸ್ಥಾಪನೆಯ ಸಮಸ್ಯೆಗೂ ವ್ಯತ್ಯಾಸವಿದೆ. ಹೇಗಿದ್ದರೂ, ಪಾರಂಪರಿಕ ದಾರಿದ್ರ್ಯ ನಿರ್ಮೂಲನೆಯೇ ಇದರ ಕೊನೆಯ ಉದ್ದೇಶ.

"ಆದ್ದರಿಂದ, ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಸ್ಪರ್ಧಾತ್ಮಕ ಬೇಡಿಕೆಗಳೆಂದು ಪರಿಗಣಿಸದೆ, ಮಾನವ ಜೀವನದ ದೃಷ್ಟಿಯಿಂದ ಪರಿಗಣಿಸಿ, ಅವುಗಳನ್ನು ಪ್ರಾಮಾಣಿಕ ಮತ್ತು ಮುತ್ಸದ್ದಿಯ ರೀತಿಯಲ್ಲಿ ಬಗೆಹರಿಸಲು ಸಾಧ್ಯವೆಂದು, ನಾನು ಆಶಿಸುತ್ತೇನೆ.

"ಪುನಾರಚನೆಯ ನಮ್ಮ ಹಿಂದಿನ ಪ್ರಯತ್ನಗಳು ದುಃಖದಾಯಕವಾಗಿದ್ದವೆಂಬುದನ್ನು ನಾನು ನೆನಸಿಕೊಂಡರೂ, ನಾನು ನಿರಾಶಾವಾದದ ಧ್ವನಿಯಿಂದ ನನ್ನ ಮಾತುಗಳನ್ನು ಮುಗಿಸಲು ಇಚ್ಛಿಸುವುದಿಲ್ಲ. ಆವಶ್ಯಕತೆಯು ಹೇಗೆ ಸಂಶೋಧನೆಗೆ ಎಡೆ ಮಾಡಿಕೊಡುತ್ತದೆಯೊ ಅಥವಾ ಸಂಕಟವು ಹೇಗೆ ಪರಮಾತ್ಮನಲ್ಲಿ ನಂಬಿಕೆಯನ್ನು ಹುಟ್ಟಿಸುತ್ತದೆಯೊ, ಹಾಗೆಯೇ ಯುದ್ಧವು ಪುನಾರಚನೆಯ ಅಗತ್ಯವನ್ನು ಹುಟ್ಟಿಸುತ್ತದೆ. ಆದರೆ, ಶೋಚನೀಯ ಸಂಗತಿಯೆಂದರೆ, ಹೀಗೆ ಯುದ್ಧದಿಂದ ಹುಟ್ಟಿದ ಈ ಅಗತ್ಯವು ಶಾಂತಿ ಬಂದಾಗ ಸಾಯುವಂತೆ ತೋರುತ್ತದೆ. ಭಾರತದಲ್ಲಿ ಭಾರತೀಯ ಕೈಗಾರಿಕಾ ಆಯೋಗ ಮತ್ತು ಭಾರತೀಯ ಯುದ್ಧ ಸಾಮಗ್ರಿ ಮಂಡಲಿಗಳು ಕೈಗೆತ್ತಿಕೊಂಡಿದ್ದ ಪುನಾರಚನೆಯ ಯೋಜನೆಗೆ, ಕಳೆದ ಯುದ್ಧದ ನಂತರ ಒದಗಿದ ಗತಿ ಇದೇ. ಈಗ ಪುನಾರಚನೆಯ ಯೋಜನೆಯನ್ನು ಕೃಶವಾಗಲೂ, ಅಳಿಸಿ ಹೋಗಲೂ ಬಿಡುವುದಿಲ್ಲ ಎಂಬ ವಿಶ್ವಾಸ ನನಗಿದೆ. ಈ ಯುದ್ಧವು ಭಾರತದಲ್ಲಿ ಬಡತನ ಹೇಗಿರುತ್ತದೆ ಎಂಬುದರ (ವಿಲಿಯಂ ಜೇಮ್ಸ್ ಹೇಳಿದಂತೆ) 'ಪರಿಣಾಮಕಾರೀ ಸತ್ಯದ ಕಟು ಅರ್ಥ'ವನ್ನು ನಮಗೆ ತಿಳಿಸಿಕೊಟ್ಟಿದೆ. ಹಿಂದಿನ ಯುದ್ಧದ ರಾಜ್ಯನೀತಿಜ್ಞರಿಗೆ ಬಡತನದ ಈ ಶಕ್ತಿಯುತವಾದ ಅರ್ಥ ಗೊತ್ತಾಗಲಿಲ್ಲ."

## ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೂ ಭಾರತೀಯ ವಲಸಿಗರಿಗೂ ಸಹಾಯ*

(ಸ್ಥಾಯಿ ಆರ್ಥಿಕ ಸಮಿತಿಯಿಂದ ಮನ್ನಣೆ ಪಡೆದ ಸೂಚನೆಗಳು)

ಭಾರತ ಸರ್ಕಾರದಲ್ಲಿ ಆರ್ಥಿಕ ಸದಸ್ಯರಾಗಿದ್ದ ಸನ್ಮಾನ್ಯ ಸರ್ ಜೆರೆಮಿ ರೇಸ್‌ಮನ್ ಅವರ ಅಧ್ಯಕ್ಷತೆಯಲ್ಲಿ ೨೦–೧೧–೧೯೪೩ರಂದು, ನವದೆಹಲಿಯಲ್ಲಿ ಜರುಗಿದ ಸ್ಥಾಯಿ ಆರ್ಥಿಕ ಸಮಿತಿಯ ಸಭೆಯಲ್ಲಿ ಎರಡು ಸೂಚನೆಗಳನ್ನು ಒಪ್ಪಿಕೊಳ್ಳಲಾಯಿತು. ಅವೆಂದರೆ : ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು; ಮತ್ತು ಯುದ್ಧ ವಲಯಗಳಿಂದ ವಲಸೆ ಬಂದವರ ಮತ್ತು ಅಲ್ಲಿ ಸೆರೆಹಿಡಿಯಲ್ಪಟ್ಟವರ ಅವಲಂಬಿತರಿಗಾಗಿ ಖರ್ಚು ಮಾಡುವುದು.

ಇವುಗಳಲ್ಲಿನ ಮೊದಲನೆಯ ಸೂಚನೆಯು ಐದು ವರ್ಷಗಳವರೆಗೆ ಪ್ರತಿ ವರ್ಷ ಮೂರು ಲಕ್ಷ ರೂಪಾಯಿಗಳನ್ನು, ಎರಡನೆಯ ಸೂಚನೆಯು ೧೯೪೪–೪೫ರಲ್ಲಿ ರೂ. ೨೨೫ ಲಕ್ಷವನ್ನೂ ಒಳಗೊಳ್ಳುವುದು.

---

* ಇಂಡಿಯನ್ ಇನ್‌ಫರ್ಮೇಶನ್, ಡಿಸೆಂಬರ್ ೧೫, ೧೯೪೩, ಪು–೩೩.

**ವಿದ್ಯಾರ್ಥಿ ವೇತನಗಳು**

ಹೈಸ್ಕೂಲ್ ಮಟ್ಟವನ್ನು ಮುಟ್ಟಿದ ಪರಿಶಿಷ್ಟ ಜಾತಿಗಳವರು ಉನ್ನತ ವ್ಯಾಸಂಗ ಮಾಡಲು ಇಚ್ಛಿಸಿದರೆ, ಅವರಿಗೆ ಸಹಾಯ ಮಾಡುವ ಸಲುವಾಗಿ ಪ್ರತಿ ವರ್ಷ ಮೂರು ಲಕ್ಷ ರೂಪಾಯಿಗಳಂತೆ ಐದು ವರ್ಷಗಳವರೆಗೆ ವಿದ್ಯಾರ್ಥಿ ವೇತನಗಳನ್ನು ಮಂಜೂರು ಮಾಡಬೇಕೆಂದು ಸೂಚಿಸಲಾಯಿತು. ಭಾರತದಲ್ಲೂ ವಿದೇಶಗಳಲ್ಲೂ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯಗಳನ್ನು ಓದುವವರಿಗೆ ವಿದ್ಯಾರ್ಥಿವೇತನಗಳನ್ನು ನೀಡಲಾಗುವುದು.

ಸಮಿತಿಯು ಈ ಸೂಚನೆಯನ್ನು ಒಪ್ಪಿಕೊಂಡಿತು.

## ೨೩
## ಝರಿಯಾ ಕಲ್ಲಿದ್ದಲು ಗಣಿಗೆ ಕಾರ್ಮಿಕ ಸದಸ್ಯರ ಭೇಟಿ*

ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರು ಎಂಥ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಅಧ್ಯಯನ ಮಾಡಲು ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯರು), ಗೌರವಾನ್ವಿತ ಶ್ರೀ ಎಚ್.ಸಿ. ಪ್ರಯರ್ (ಕಾರ್ಯದರ್ಶಿ ಕಾರ್ಮಿಕ ಇಲಾಖೆ) ಮತ್ತು ಶ್ರೀ ಆರ್.ಎಸ್. ನಿಂಬ್ಕರ್ (ಭಾರತ ಸರ್ಕಾರಕ್ಕೆ ಕಾರ್ಮಿಕ ಕಲ್ಯಾಣ ಸಲಹೆಗಾರರು) ಇತ್ತೀಚೆಗೆ ಧನಬಾದಿಗೆ ಭೇಟಿ ನೀಡಿದರು.

ಅವರು ಧನಬಾದಿನಲ್ಲಿ ಉಳಿದುಕೊಂಡಿದ್ದಾಗ, ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಗಣಿ ಕಾರ್ಮಿಕರ ಕೊರತೆಯಿಂದ ಉಂಟಾಗಿರುವ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ ಮಾಡಿರುವ ಸೂಚನೆಗಳನ್ನು ಕುರಿತು ಚರ್ಚಿಸಲಾಯಿತು.

ನೆಲದೊಳಗೆ ಕೆಲಸ ಮಾಡಲು ಹೆಂಗಸರನ್ನು ನೇಮಕ ಮಾಡಿಕೊಳ್ಳುವುದನ್ನು ಮತ್ತೆ ಪ್ರಾರಂಭಿಸಿದ ಮೇಲೆ, ಗಣಿ ಕಾರ್ಮಿಕರಿಗೆ ರಿಯಾಯಿತಿ ಕೊಡುವ ಪ್ರಶ್ನೆಗೂ, ಗಣಿ ಕ್ಷೇತ್ರಗಳಲ್ಲಿ ಕಲ್ಯಾಣಕಾರ್ಯಗಳ ಸ್ಥಿತಿಗಳ ಸುಧಾರಣೆಗೂ ಹೆಚ್ಚಿನ ಪ್ರಾಮುಖ್ಯ ಬಂದಿದೆ. ಆಹಾರ ಪದಾರ್ಥಗಳನ್ನು ಮತ್ತು ಇತರ ರಿಯಾಯಿತಿಗಳನ್ನು ಕಾರ್ಮಿಕರಿಗೆ ಕೊಡಲು ಕೇಂದ್ರ ಸರ್ಕಾರ ತುರ್ತುಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿದುಬಂದಿದೆ. ಬಂಗಾಳದಲ್ಲಿ ಆಹಾರದ ಕೊರತೆಯಿಂದುಂಟಾದ ಕಷ್ಟಗಳನ್ನೂ, ಬಂಗಾಳ ಮತ್ತು ಬಿಹಾರಗಳಲ್ಲಿ ಕಾರ್ಮಿಕರಿಗೆ ಕೊಡುವ ರಿಯಾಯ್ತಿಯಲ್ಲಿ ಕೊರತೆಯಿಂದುಂಟಾದ ಕಷ್ಟಗಳನ್ನೂ ಕಾರ್ಮಿಕ ಇಲಾಖೆಯು ಕೆಲಕಾಲದಿಂದ ಪರಿಶೀಲಿಸುತ್ತಿದೆ.

ಹೊಸ ದೆಹಲಿಯಲ್ಲಿ ಇತ್ತೀಚೆಗೆ ನಡೆದ ಕಲ್ಲಿದ್ದಲು ಸಮಾವೇಶದಲ್ಲಿ ಈ ಪ್ರಶ್ನೆಯನ್ನು ಚರ್ಚಿಸಲಾಯಿತು ಮತ್ತು ಕಾರ್ಮಿಕ ಸದಸ್ಯರು ಧನಬಾದಿನಲ್ಲಿ ಉಳಿದುಕೊಂಡಿದ್ದಾಗ, ಗಣಿ ಉದ್ಯಮಿಗಳೊಡನೆ ಇನ್ನೂ ಕೆಲವು ಸಮಾಲೋಚನೆಗಳು ನಡೆದವು ಎಂದು ತಿಳಿದುಬಂದಿದೆ.

---

* ಇಂಡಿಯನ್ ಇನ್‌ಫರ್ಮೇಶನ್, ಡಿಸೆಂಬರ್ ೧೫, ೧೯೪೩, ಪು–೩೬.

# ೨೪
# ಕಾರ್ಮಿಕ ಸದಸ್ಯರು ಕಲ್ಲಿದ್ದಲು ಗಣಿಗಳಿಗೆ ಭೇಟಿ ಕೊಟ್ಟದ್ದು*

## ಕಾರ್ಮಿಕರು ಕೆಲಸ ಮಾಡುವ ಪರಿಸ್ಥಿತಿಗಳನ್ನೂ ಗಣಿ ಕಾರ್ಮಿಕರ ಮನೆಗಳನ್ನೂ ಪರೀಕ್ಷಿಸಿದ್ದು

ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಖಾತೆಯ ಸದಸ್ಯರು, ಭಾರತ ಸರ್ಕಾರ, ಇವರು ಕಲ್ಲಿದ್ದಲು ಗಣಿಗಳಲ್ಲಿ ಕಾರ್ಮಿಕರು ಕೆಲಸ ಮಾಡುವ ಪರಿಸ್ಥಿತಿಗಳನ್ನು ಅಭ್ಯಸಿಸಲು ಗುರುವಾರ, ಡಿಸೆಂಬರ್ ೯ ರಂದು ಧನಬಾದಿಗೆ ಆಗಮಿಸಿದರು. ಅವರನ್ನು ಸ್ವಾಗತಿಸಲು ಶ್ರೀ ಎಸ್.ಎನ್. ಮಜುಮ್‌ದಾರ್, ಲೇಬರ್ ಕಮಿಷನರ್, ಬಿಹಾರ, ಮತ್ತು ಶ್ರೀ ಡಬ್ಲ್ಯು. ಕಿರ್ಬಿ, ಗಣಿಗಳ ಮುಖ್ಯ ಇನ್‌ಸ್ಪೆಕ್ಟರ್, ಸೇರಿದಂತೆ ಅನೇಕ ಸ್ಥಳೀಯ ಕಚೇರಿಗಳ ಅಧಿಕಾರಿಗಳೂ, ವಿವಿಧ ಗಣಿ ಸಂಘಗಳ ಹಾಗೂ ಗಣಿ ಮಾಲೀಕರ ಪ್ರತಿನಿಧಿಗಳೂ ಬಂದಿದ್ದರು. ಶ್ರೀ ಎಚ್.ಸಿ. ಪ್ರಯರ್, ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಮತ್ತು ಶ್ರೀ ಆರ್.ಎಸ್. ನಿಂಬ್ಕರ್, ಭಾರತ ಸರ್ಕಾರಕ್ಕೆ ಕಾರ್ಮಿಕ ಕಲ್ಯಾಣ ಸಲಹಾಗಾರರು ಆ ದಿನ ಮೊದಲೇ ಬಂದಿದ್ದರು.

ಬಂದ ಸ್ವಲ್ಪ ಹೊತ್ತಿನಲ್ಲೇ ಕಾರ್ಮಿಕ ಸದಸ್ಯರು, ಗಣಿಗಳ ಮುಖ್ಯ ಇನ್ಸ್‌ಪೆಕ್ಟರ್, ಕಲ್ಲಿದ್ದಲು ಗಣಿ ಮಾಲೀಕರು, ಶ್ರೀ ಪ್ರಯರ್ ಮತ್ತು ಶ್ರೀ ನಿಂಬ್ಕರ್ ಅವರ ಜೊತೆಗೂಡಿ ಭುಲನ್ ಬರಾರಿ ಕಲ್ಲಿದ್ದಲು ಗಣಿಗೆ ಕಾರಿನಲ್ಲಿ ತೆರಳಿದರು. ಕಾರ್ಮಿಕರನ್ನು ಪ್ರತಿನಿಧಿಸುವ ಭಾರತೀಯ ಕಾರ್ಮಿಕ ಸಂಘಗಳ ಪರಿಷತ್ತಿನ ಶ್ರೀ ಕರಣಿಕ್, ಮತ್ತು ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸ್ಸನ್ನು ಪ್ರತಿನಿಧಿಸುವ ಕುಮಾರಿ ಶಾಂತಾ ಭಲ್ಲೆರಾವ್ – ಇವರು ಸಹ, ಕಲ್ಲಿದ್ದಲು ಗಣಿಯಲ್ಲಿ ಕಾರ್ಮಿಕರು ಯಾವ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆಂದು ತಿಳಿದುಕೊಳ್ಳಲು, ಅವರೊಡನೆ ಹೋದರು.

### ೪೦೦ ಅಡಿ ಭೂಮಿಯೊಳಗೆ

ಸೈನಿಕರು ತೊಡುವ ತವರದ ಶಿರಸ್ತ್ರಾಣಗಳನ್ನೇ ಹೆಚ್ಚಾಗಿ ಹೋಲುವ, 'ಸುರಕ್ಷಾ ತಲೆಕಾಪು'ಗಳನ್ನು ತೊಟ್ಟ ಕಾರ್ಮಿಕ ಸದಸ್ಯರೂ ಅವರ ಜೊತೆಯವರೂ ಎರಡು ತಂಡಗಳಲ್ಲಿ ೪೦೦ ಅಡಿ ಕೆಳಗಿಳಿದು, ಅಲ್ಲಿ ಕಾರ್ಮಿಕರು ಕಲ್ಲಿದ್ದಲನ್ನು ಕತ್ತರಿಸಿ ತೆಗೆಯುವುದನ್ನು ವೀಕ್ಷಿಸಿದರು. ಗಣಿಗಳಲ್ಲಿ ಸ್ತ್ರೀಯರ ನೇಮಕಕ್ಕೆ ಇದ್ದ ನಿಷೇಧವನ್ನು ತೆಗೆದಿದ್ದರಿಂದ, ಕೆಲ ದಿನಗಳ ಹಿಂದೆ ನೇಮಕಗೊಂಡಿದ್ದ ಕೆಲ ಮಹಿಳಾ ಕಾರ್ಮಿಕರೂ ಅಲ್ಲಿ ಇದ್ದರು. ಕಾರ್ಮಿಕ ಸದಸ್ಯರೂ, ಶ್ರೀ ನಿಂಬ್ಕರರೂ, ಜೊತೆಯಲ್ಲಿದ್ದ ಇತರರೂ ಕಾರ್ಮಿಕರನ್ನು ಅವರ ಕೂಲಿ ಮತ್ತು ಸಂಪಾದನೆಗಳ ಬಗ್ಗೆ ವಿಚಾರಿಸಿದರು.

ಭುಲನ್ ಬರಾರಿ ಗಣಿಯ ವೀಕ್ಷಣೆಯಲ್ಲಿ ತೊಡಗಿದ್ದಾಗ, ತಂಡದವರು ಆಗ ಪ್ರಗತಿಯಲ್ಲಿದ್ದ ಗಣಿ ಸುರಕ್ಷಾ ಕೆಲಸವನ್ನು ವೀಕ್ಷಿಸಿದರು. ಮೇಲ್ಮೈ ವೀಕ್ಷಣೆಯಲ್ಲಿ ತೊಡಗಿದ್ದಾಗ, ಡಾ॥ ಅಂಬೇಡ್ಕರರು ಕಾರ್ಮಿಕರೊಡನೆ ಸ್ನೇಹಪೂರ್ವಕ ಮಾತುಗಳನ್ನಾಡಿ, ಅವರ ಕೂಲಿ ಮತ್ತು ದುಡಿಮೆಗಳ ಬಗ್ಗೆ ವಿಚಾರಿಸಿಕೊಂಡರು.

ಕಾರ್ಮಿಕ ಸದಸ್ಯರು ಅನಂತರ ಗಣಿಯ ಹತ್ತಿರದಲ್ಲೇ ಇದ್ದ ಕಾರ್ಮಿಕರ ಮನೆಗಳಿಗೆ ಭೇಟಿ ಇತ್ತರು.

---

* ಇಂಡಿಯನ್ ಇನ್‌ಫರ್ಮೇಶನ್, ಜನವರಿ ೧, ೧೯೪೪, ಪು–೩೯–೪೦

ಕಾರ್ಮಿಕ ಸದಸ್ಯರು ಪ್ರತಿಯೊಂದು ಮನೆಯನ್ನೂ ಪ್ರವೇಶಿಸುವ ಮೊದಲು 'ನಾವು ಒಳಗೆ ಬರಬಹುದೆ?' ಎಂದು ಕೂಗಿ, ಮನೆಯಲ್ಲಿ ವಾಸಿಸುತ್ತಿದ್ದವರ ಅಪ್ಪಣೆ ಕೇಳುತ್ತಿದ್ದರು, ಹಾಗೂ ಅಪ್ಪಣೆ ಅವರಿಗೆ ತಕ್ಷಣವೇ ಸಿಗುತ್ತಿತ್ತು. ಅವರು ಪೀಠೋಪಕರಣಗಳನ್ನೂ ಮನೆಯ ಇತರ ವಸ್ತುಗಳನ್ನೂ ಪರೀಕ್ಷಿಸಿ, ಗಾಳಿಯಾಡಲು ಯಾವ ಏರ್ಪಾಡು ಮಾಡಲಾಗಿದೆ ಎಂದು ಸುತ್ತ ನೋಡುತ್ತಿದ್ದರು.

ಅನಂತರ ತಂಡದವರನ್ನು ಸುಸಜ್ಜಿತವೂ ಸ್ವಚ್ಛವೂ ಆಗಿಟ್ಟಿದ್ದ ಒಂದು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಗಣಿ ಮಾಲೀಕರೆ ನಡೆಸುತ್ತಿದ್ದ ಈ ಆಸ್ಪತ್ರೆಯಲ್ಲಿನ ಕೆಲ ಒಳರೋಗಿಗಳೊಡನೆ ಕಾರ್ಮಿಕ ಸದಸ್ಯರು ಮಾತನಾಡಿದರು. ಅನಂತರ ಅವರನ್ನು ಸ್ತ್ರೀಯರ ವಿಶೇಷ ವಾರ್ಡಿಗೆ ಭೇಟಿ ಕೊಡಲು ಕರೆದುಕೊಂಡು ಹೋಗಲಾಯಿತು.

## ಕಾರ್ಮಿಕರ ಕೇರಿಯಲ್ಲಿ

ಅನಂತರ ತಂಡವು ದಿಗ್‌ವಾಡಿ ಕಲ್ಲಿದ್ದಲ ಗಣಿಗೆ ತೆರಳಿ, ಅಲ್ಲಿನ ಕಲ್ಲಿದ್ದಲು ಉತ್ಪಾದನೆಗೆ ಅಳವಡಿಸಲಾಗಿದ್ದ ಆಧುನಿಕ ಸ್ಥಾವರವನ್ನೂ, ಯಂತ್ರೋಪಕರಣಗಳನ್ನೂ ನೋಡಿತು. ಅಲ್ಲಿ ಕಾರ್ಮಿಕ ಸದಸ್ಯರು ಕಾರ್ಮಿಕರ ಕೇರಿಯಲ್ಲಿ ಒಂದು ತಾಸು ಕಾಲ ಕಳೆದು, ಅವರಿಗಾಗಿ ಮಾಲೀಕರು ಕಟ್ಟಿಸಿದ್ದ ವಿವಿಧ ರೀತಿಯ ಮನೆಗಳನ್ನು ವೀಕ್ಷಿಸಿದರು. ಅಲ್ಲದೆ, ಅವರು ಗಣಿ ಕಾರ್ಮಿಕರನ್ನು ನೇಮಿಸಿಕೊಳ್ಳುವ ಕ್ರಮ ಮತ್ತು ರೀತಿಗಳಲ್ಲಿ ಬಹಳ ಆಸಕ್ತಿಯನ್ನು ತೋರಿಸಿದರು.

ತೀಸ್ರಾ ಕಲ್ಲಿದ್ದಲು ಗಣಿಯನ್ನು ವೀಕ್ಷಿಸುವುದೂ ಆ ದಿನದ ಕಾರ್ಯಕ್ರಮದಲ್ಲಿ ಸೇರಿತ್ತು. ಅದು ಮಾಲೀಕರು ಕಾರ್ಮಿಕರಿಗೆ ಕೊಡುವ ಕೂಲಿ ದರದ ವಿಚಾರಣೆಯೊಂದಿಗೆ ಪ್ರಾರಂಭವಾಯಿತು. ತಂಡವು ಗಣಿಯ ಮೇಲ್ಮೈ ವೀಕ್ಷಣೆ ಪ್ರಾರಂಭಿಸಿದಾಗ ಆಗಲೇ ಬಹಳ ಸಂಜೆಯಾಗಿತ್ತು. ಸಲಿಕೆ, ಪಿಕಾಶಿ ಮತ್ತು ಲಾಟೀನುಗಳನ್ನು ಹಿಡಿದ ಕಾರ್ಮಿಕರು ಸಾವಧಾನವಾಗಿ ಮನೆಗೆ ಹಿಂತಿರುಗುತ್ತಿದ್ದರು. ಹೀಗೆ, ಕಾರ್ಮಿಕ ಸದಸ್ಯರು, ಕಾರ್ಮಿಕರನ್ನೂ ಅವರ ಮನೆಯಲ್ಲಿ ಹೆಂಗಸರು ರಾತ್ರಿಯ ಅಡಿಗೆ ಮಾಡುವುದನ್ನೂ ನೋಡುವ ಅವಕಾಶ ಪಡೆದರು. ಕಾರ್ಮಿಕರಿಗೆ ಸಿಕ್ಕುವ ಮತ್ತು ಅವರು ಊಟ ಮಾಡುವ ಆಹಾರದ ಪ್ರಮಾಣ ಮತ್ತು ಗುಣಮಟ್ಟದ ಬಗ್ಗೆ ಪರಿಚಯ ಮಾಡಿಕೊಳ್ಳಲೂ ಅವರು ಆಸಕ್ತಿ ತೋರಿಸಿದರು; ತೀಸ್ರಾ ಕಲ್ಲಿದ್ದಲು ಗಣಿಯ ಮೇಲ್ಮೈ ಗುಂಡಿಯೊಂದರಲ್ಲಿ ಹೆಂಗಸರೂ ಗಂಡಸರೂ ಕೆಲಸ ಮಾಡುತ್ತಿದ್ದುದನ್ನು ವೀಕ್ಷಿಸಿದರು.

## ರಾಣಿಗಂಜ್ ಕಲ್ಲಿದ್ದಲು ಗಣಿಗೆ ಭೇಟಿ

ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ತಂಡದವರು ರಾಣಿಗಂಜಿನ ಕೆಲವು ಕಲ್ಲಿದ್ದಲು ಗಣಿಯಲ್ಲಿ ಪರಿಸ್ಥಿತಿಗಳನ್ನು, ಕಲ್ಲಿದ್ದಲು ಉತ್ಪಾದನಾ ಕ್ರಮವನ್ನು ಅಧ್ಯಯನ ಮಾಡಲು ಇಡೀ ಶುಕ್ರವಾರವನ್ನು ಮೀಸಲಾಗಿಟ್ಟರು.

ಶಿವಪುರ ಕಲ್ಲಿದ್ದಲು ಗಣಿಯ ಮಾಲೀಕರು ತಮ್ಮ ಕಾರ್ಮಿಕರಿಗಾಗಿ ಮಾಡಿದ್ದ ಕಲ್ಯಾಣ ಮತ್ತು ವೈದ್ಯಕೀಯ ಏರ್ಪಾಡುಗಳ ವಿಚಾರಣೆಯೊಂದಿಗೆ ವೀಕ್ಷಣೆ ಪ್ರಾರಂಭವಾಯಿತು. ಆಧುನಿಕ ಎಕ್ಸ್‌ರೇ ಮತ್ತು ಶಸ್ತ್ರಚಿಕಿತ್ಸೆಯ ಸಲಕರಣೆಗಳನ್ನು ಹೊಂದಿದ್ದ ಚೌಕಾಂಗಳ ಆಕಾರದ ಒಂದಸ್ತಿನ ಕಟ್ಟಡದಲ್ಲಿದ್ದ ಆಸ್ಪತ್ರೆಯನ್ನು ತೋರಿಸಲು ತಂಡವನ್ನು ಕರೆದೊಯ್ಯಲಾಯಿತು. ಆಸ್ಪತ್ರೆಯು ಸದ್ಯದಲ್ಲಿಯೇ ಕೆಲಸ ಮಾಡಲು ಪ್ರಾರಂಭಿಸುವುದೆಂದು ತಿಳಿದು ಬಂದಿತು.

ಬಹಳ ಹೊತ್ತಿನ ನಂತರ ಕಾರ್ಮಿಕ ಸದಸ್ಯರನ್ನು ಕುಷ್ಠರೋಗಿಗಳ ಕಲ್ಯಾಣ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಪ್ರಾಥಮಿಕ ಹಂತದ ಕುಷ್ಠರೋಗಕ್ಕೆ ಪರಿಣಾಮಕಾರಿ ರೀತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಡಾ॥ ಅಂಬೇಡ್ಕರರು ಶಿಶುಕಲ್ಯಾಣಕೇಂದ್ರವನ್ನೊಳಗೊಂಡ ಒಂದು ಅಚ್ಚುಕಟ್ಟಾದ ಕಟ್ಟಡಕ್ಕೂ ಭೇಟಿ ನೀಡಿ, ಆಯಾಗಳ ರಕ್ಷಣೆಯಲ್ಲಿದ್ದ, ದುರ್ಬಲ ದೇಹದ, ಕೂಲಿಕಾರರ ಮಕ್ಕಳನ್ನು ನೋಡಿದರು. ಕಾರ್ಮಿಕ ಸದಸ್ಯರು ಕಲ್ಯಾಣಕಾರ್ಯಗಳನ್ನು ಶ್ಲಾಘಿಸಿದರಾದರೂ, ಮಕ್ಕಳೇಕೆ ದುರ್ಬಲವೂ, ಎಲುಬಿನ ಹಂದರದವೂ ಆಗಿವೆಯೆಂದು ಕೇಳಿದರು. ಪೌಷ್ಟಿಕ ಆಹಾರದ ಕೊರತೆಯೇ ಕಾರಣವೆಂದು ಅವರಿಗೆ ತಿಳಿಸಲಾಯಿತು.

**ಕಾರ್ಮಿಕರ ಮಕ್ಕಳಿಗೆ ಪಾಠಶಾಲೆ**

ಸೀತಾಪುರ ಕಲ್ಲಿದ್ದಲ ಗಣಿಗೆ ಸುತ್ತಿಕೊಂಡು ಹೋಗುವ ದಾರಿಯಲ್ಲಿ ತಂಡವು ಪ್ರಾಥಮಿಕ ಶಾಲೆಯೊಂದಕ್ಕೆ ಭೇಟಿ ನೀಡಿದಾಗ, ಅಲ್ಲಿ ಕಾರ್ಮಿಕರ ಮಕ್ಕಳು ಡಾ॥ ಅಂಬೇಡ್ಕರರಿಗೆ ಮಾಲಾರ್ಪಣೆ ಮಾಡಿದರು. ಕಾರ್ಮಿಕ ಸದಸ್ಯರು ಗಣಿ ಕಾರ್ಮಿಕನೊಬ್ಬನ ಏಳು ವರ್ಷದ ಮಗನೊಂದಿಗೆ ಅವನ ಕುಟುಂಬದ ದುಡಿಮೆಯ ಬಗ್ಗೆ ಮಾತಾಡಿದರು. ಆ ಹುಡುಗ ಇಂಗ್ಲಿಷಿನಲ್ಲಿ ತಡೆತಡೆದು ಮಾತಾಡಿದನಾದರೂ, ಅದು ಅರ್ಥವಾಗುವಂತಿತ್ತು.

ಇದಕ್ಕೂ ಮೊದಲು ತಂಡವು ಸೋಧ್‌ಪುರ್ ಸುರಕ್ಷಾ ಸ್ಥಾವರಕ್ಕೆ ಭೇಟಿಕೊಟ್ಟಿತು. ಭಾರಿ ಯಾಂತ್ರಿಕ ರಚನೆಯಾದ ಇದಕ್ಕೆ ಹತ್ತಿರದಲ್ಲಿ ಇರುವ ದಾಮೋದರ ನದಿಯ ಜಲಾನಯನ ಭೂಮಿಯಿಂದ ಗಂಟೆಗೆ ೨೦೦ ಟನ್ ಮರಳನ್ನು ತೆಗೆದು, ಯಾಂತ್ರಿಕ ಹೊರಜಿನ (ರೋಪ್ ವೇ) ಮೂಲಕ ಅದನ್ನು ಗಣಿಗೆ ಸಾಗಿಸುವ ಸಾಮರ್ಥ್ಯವಿರುವ ವ್ಯವಸ್ಥೆಯನ್ನು ನೋಡಿದರು.

ಸೀತಾಪುರ ಕಲ್ಲಿದ್ದಲ ಗಣಿಯಲ್ಲಿ ಭೂಮಿಯ ಒಳಗಿನ ಕಾರ್ಯ ಪರಿಸ್ಥಿತಿಗಳನ್ನು ವೀಕ್ಷಿಸುತ್ತ ತಂಡದವರು ಸುಮಾರು ೧೦೦೦ ಅಡಿ ಕೆಳಗಿಳಿದು, ಕಲ್ಲಿದ್ದಲನ್ನು ಕತ್ತರಿಸುವ ಆಧುನಿಕ ಯಂತ್ರವನ್ನೂ ಮತ್ತು ಅದು ಕಲ್ಲಿದ್ದಲನ್ನು ಹೇಗೆ ಮೇಲಕ್ಕೆ ಕಳಿಸುತ್ತದೆ ಎಂಬುದನ್ನೂ ನೋಡಿದರು.

ಧನಬಾದಿಗೆ ಹಿಂದಿರುಗುವಾಗ ಕಾರ್ಮಿಕ ಸದಸ್ಯರು ಬೇಗುನಿಯಾ ಕಲ್ಲಿದ್ದಲು ಗಣಿಗಳಲ್ಲಿನ ಕಾರ್ಮಿಕರ ಕೇರಿಗೆ ಭೇಟಿ ನೀಡಿ, ಕಾರ್ಮಿಕರ ಧೋವಡಾ(ಜೋಪಡಿ)ಗಳನ್ನು ನೋಡಿದರು. ಅವುಗಳಲ್ಲಿ ಕತ್ತಲೆಯೇ ಇತ್ತು; ಮತ್ತೊಂದು ಕಡೆ, ಸೋಮಾರಿಯಂತೆ ಮಲಗಿ, ಒಣ ಹುಲ್ಲನ್ನು ತಿನ್ನುತ್ತಿದ್ದ ಕರುವೊಂದು ಜನರಿಗಿದ್ದ ಸ್ವಲ್ಪ ಜಾಗವನ್ನೇ ಹಂಚಿಕೊಂಡಿದ್ದುದು ಕಂಡುಬಂದಿತು. ಅಲ್ಲಿಯ ನಿವಾಸಿಗಳೊಡನೆ ಡಾ॥ ಅಂಬೇಡ್ಕರ್ ಮಾತನಾಡಿದರು. ಕಾರ್ಮಿಕರಿಗೆ ಗೃಹ ಬಳಕೆಗಾಗಿ ಸಾಕಷ್ಟು ಪ್ರಮಾಣದಲ್ಲಿ ಕಲ್ಲಿದ್ದಲು ಪುಕ್ಕಟೆಯಾಗಿ ಸಿಗುತ್ತದೆ ಎಂಬುದು ತಿಳಿದುಬಂದಿತು. ಅವರು ಕಾರ್ಮಿಕರ ಆಹಾರ, ಬಟ್ಟೆ ಮತ್ತು ಆರೋಗ್ಯದ ಬಗ್ಗೆ ಮತ್ತಷ್ಟು ವಿಚಾರಣೆ ಮಾಡಿದರು.

**ಧನಬಾದಿನಲ್ಲಿ ಚರ್ಚಿತವಾದ ಕಾರ್ಮಿಕ ಸಮಸ್ಯೆಗಳು**

ಕಲ್ಲಿದ್ದಲಿನ ಈಗಿನ ಕೊರತೆಗೆ ಕಾರಣವನ್ನೂ, ಅದನ್ನೆದುರಿಸಲು ಕೈಕೊಂಡ ಕ್ರಮಗಳನ್ನೂ ಧನಬಾದಿನಲ್ಲಿ ಶನಿವಾರ ಸೇರಿದ್ದ ಸಭೆಯಲ್ಲಿ ಚರ್ಚಿಸಲಾಯಿತು. ಕೇಂದ್ರ ಸರ್ಕಾರ, ಬಂಗಾಳ ಮತ್ತು ಬಿಹಾರ ಸರ್ಕಾರ, ಮೂರು ಗಣಿ ಸಂಘಗಳ ಪ್ರತಿನಿಧಿಗಳು, ಕಾರ್ಮಿಕ ಖಾತೆಯ ವಕ್ತಾರರೂ ಈ ಸಭೆಯಲ್ಲಿ ಹಾಜರಿದ್ದರು. ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಸದಸ್ಯರು, ಅಧ್ಯಕ್ಷರಾಗಿದ್ದರು.

ತಮ್ಮ ಪುಟ್ಟ ಪ್ರಾರಂಭಿಕ ಭಾಷಣದಲ್ಲಿ ಅಧ್ಯಕ್ಷರು ಈ ಸಭೆಯನ್ನು, ಕೈಗಾರಿಕಾ ಕಾರ್ಮಿಕ ಸಮಸ್ಯೆಗಳನ್ನು ಚರ್ಚಿಸುವ ತ್ರಿಪಕ್ಷೀಯ ಕಾರ್ಮಿಕ ಸಭೆಗಳಿಗೆ ಹೋಲಿಸಿದರು. ಭಾರತದ ಕೈಗಾರಿಕೆಗಳಿಗೂ, ಯುದ್ಧದ ಉದ್ದೇಶಗಳಿಗೂ ಬೇಕಾದ ಕಲ್ಲಿದ್ದಲನ್ನು ಹೆಚ್ಚು ಉತ್ಪಾದಿಸುವ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದರು, ಮತ್ತು ಈ ವಿಷಯವಾಗಿ ಮಾಲೀಕರ ಮತ್ತು ಕಾರ್ಮಿಕರ ಪ್ರತಿನಿಧಿಗಳು ತಮ್ಮ ಉತ್ತಮ ಸಲಹೆಗಳನ್ನು ಕೊಡುತ್ತಾರೆಂದೂ ಆಶಿಸಿದರು.

'ಹೆಚ್ಚು ಆಹಾರ ಬೆಳೆಯಿರಿ' ಆಂದೋಲನದ ಫಲವಾಗಿ ಅಸಾಧಾರಣ ರೀತಿಯಲ್ಲಿ ಫಸಲು ಬಂದಿದ್ದರಿಂದ ಸಾಮಾನ್ಯಕ್ಕಿಂತ ಹೆಚ್ಚು ಕೂಲಿಗಳು ಆ ಕಡೆ ಹೋದದ್ದರಿಂದಲೂ, ಸೈನ್ಯಕ್ಕೆ ಸೇರಲು ಸ್ಪರ್ಧೆ ಇದ್ದುದರಿಂದಲೂ, ಕಲ್ಲಿದ್ದಲ ಗಣಿಗಳ ಕಾರ್ಮಿಕರ ಸಂಖ್ಯೆ ಕಡಿಮೆಯಾಯಿತು. ಈ ಸಮಸ್ಯೆಯನ್ನು ಪರಿಹರಿಸುವ ಕ್ರಮವನ್ನು ಪರಿಶೀಲಿಸಲಾಯಿತು ಮತ್ತು ಗಣಿಗಳಿಗೆ ಹತ್ತಿರದ ಹಳ್ಳಿಗಳಿಂದ ಕೂಲಿಗಳನ್ನು ತರಲು ಅನುಕೂಲವಾಗುವಂತೆ ಹೆಚ್ಚು ಪೆಟ್ರೋಲ್ ಮತ್ತು ಟೈರುಗಳನ್ನು ಕೊಡಬೇಕೆಂದು ಮಾಲೀಕರ ಪ್ರತಿನಿಧಿಗಳು ಕೇಳಿದರು.

ಕೇಂದ್ರ ಸರ್ಕಾರವು ಸ್ವಲ್ಪ ಕಾಲದ ಹಿಂದೆ ಸೂಚಿಸಿದ್ದ ಮತ್ತು ಗಣಿ ಕಾರ್ಮಿಕರಿಗೆ (ಗಂಡಸರು ಮತ್ತು ಹೆಂಗಸರು ಇಬ್ಬರಿಗೂ) ಸಾಕಷ್ಟು ಪಡಿತರ ಪಡೆಯಲು ಅವಕಾಶ ಮಾಡಿಕೊಡುವ ಒಂದು ಪಡಿತರ ಯೋಜನೆಯು ಚರ್ಚಾ ಪಟ್ಟಿಯ ಮುಂದಿನ ವಿಷಯವಾಗಿತ್ತು. ಬಿಹಾರ ಸರ್ಕಾರವು ಪಡಿತರ ಪದ್ಧತಿಯನ್ನು ಆ ಕ್ಷೇತ್ರದಲ್ಲಿ ಪ್ರಾರಂಭಿಸುವ ಸಾಧ್ಯತೆಯನ್ನು ಚರ್ಚೆಯ ಸಮಯದಲ್ಲಿ ತಿಳಿಸಲಾಯಿತು. ಒಂದು ವೇಳೆ ಅದು ಪ್ರಾರಂಭವಾದರೆ, ಗಣಿ ಕಾರ್ಮಿಕರ ಸಲುವಾಗಿ ಮಾಡಿದ ಯೋಜನೆಯನ್ನು ಪುನರ್‌ಪರಿಶೀಲಿಸಬೇಕೆಂದು ನಿರ್ಣಯಿಸಲಾಯಿತು.

ಗಣಿ ಕಾರ್ಮಿಕ ಪಡಿತರ ಯೋಜನೆಯಲ್ಲಿ ಅವರ ಅವಲಂಬಿತರೂ ಆಹಾರ ಪಡೆಯುವ ಅವಕಾಶವು ಸೇರಿರುತ್ತದೆ. ಒಂದು ವಾರದ ಪೂರ್ಣ ಪಡಿತರ ಪಡೆಯಲು ವಾರದಲ್ಲಿ ಐದು ದಿನಗಳು ಕೆಲಸ ಮಾಡಬೇಕೆಂದರೂ, ಅದಕ್ಕಿಂತ ಕಡಿಮೆ ದಿನ ಕೆಲಸ ಮಾಡುವವರಿಗೂ ಸಾಕಷ್ಟು ಪಡಿತರ ಕೊಡಲು ಈ ಯೋಜನೆಯು ಅವಕಾಶ ಮಾಡಿಕೊಡುತ್ತದೆ. ಪ್ರಾರಂಭದಲ್ಲಿ, ಕಾರ್ಮಿಕರಿಗೆ ಒಂದು ರೂಪಾಯಿಗೆ ಆರು ಸೇರು ಅಕ್ಕಿ ಮಾರಬೇಕೆಂದೂ, ಅದೇ ದರದಲ್ಲಿ ಸಾಕಷ್ಟು ಬೇಳೆಯನ್ನು ಮಾರಬೇಕೆಂದೂ ನಿರ್ಣಯಿಸಲಾಯಿತು.

ಕಾರ್ಮಿಕರಿಗೆ ಉಪ್ಪು, ಸಾಸಿವೆ ಎಣ್ಣೆ, ಮತ್ತಿತರ ಒಳ್ಳೆಯ ಉಪಭೋಗ ವಸ್ತುಗಳನ್ನು ಕೊಡಬೇಕೆಂಬ ಕೇಂದ್ರ ಸರ್ಕಾರದ ಯೋಜನೆಯನ್ನು ಸಭೆಯು ಪರಿಶೀಲಿಸಿತು. ಗಣಿಕಾರರ ಸಂಘಗಳೇ ಕಾರ್ಮಿಕರಿಗೆ ಹಂಚಲಿ ಎಂಬ ಉದ್ದೇಶದಿಂದ ಆ ಸಂಘಗಳಿಗೆ ದೊಡ್ಡ ಪ್ರಮಾಣದ ಸರಬರಾಜು ಮಾಡಬೇಕು. ಸರ್ಕಾರವು ಸಭೆಯ ಪರಿಶೀಲನೆಗಾಗಿ ಮುಂದಿಟ್ಟ ಗಣಿ ಕಾರ್ಮಿಕರ ಕಲ್ಯಾಣ ಕಾರ್ಯಗಳಿಗೆ ಖರ್ಚು ಮಾಡುವ ಉದ್ದೇಶದಿಂದ, ಒಂದು ಪುದುವಟ್ಟು ಸ್ಥಾಪಿಸಲು ತಕ್ಷಣವೇ ಕಲ್ಯಾಣ ತೆರಿಗೆ ವಿಧಿಸುವ ಯೋಜನೆ ಮತ್ತು ೧,೦೦,೦೦೦ ಟನ್ನಿಗಿಂತ ಹೆಚ್ಚು ಉತ್ಪಾದನೆಯುಳ್ಳ ಎಲ್ಲ ಗಣಿಗಳಲ್ಲೂ ಕಾರ್ಮಿಕ ಇನ್ಸ್‌ಪೆಕ್ಟರುಗಳನ್ನು ನೇಮಿಸುವ ಯೋಜನೆ ಸೇರಿವೆ.

**ಸಂಬಳದಲ್ಲಿ ಹೆಚ್ಚಳ**

ಸಭೆಯ ಚರ್ಚಾ ವಿಷಯಗಳ ಪಟ್ಟಿಯಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರ ಸಂಬಳಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಸೇರಿದ್ದವು. ಗಣಿ ಮಾಲೀಕರ ಸಂಘಗಳು ೧೯೩೯ರಲ್ಲಿದ್ದ ಸಂಬಳವನ್ನು ಹೆಚ್ಚಿಸಲು ಸಿದ್ಧರಿರುವಂತೆ ಕಂಡುಬಂದಿತು. ಇದರಿಂದಾಗಿ, ತಾತ್ಕಾಲಿಕ ಯುದ್ಧ ಸಮಯದ ಸಂಬಳದಲ್ಲಿ ಯುದ್ಧಪೂರ್ವದ

ಸಂಬಳಕ್ಕಿಂತ ಶೇ. ೫೦ ರಷ್ಟು ಹೆಚ್ಚಾಗುವಂತಾಯಿತು. ಆದರೆ, ಉಪಭೋಗ ವಸ್ತುಗಳು ಗಣಿ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗದಿದ್ದರೆ, ಸಂಬಳದಲ್ಲಿನ ಈ ಹೆಚ್ಚಳವು ನಿಷ್ಪ್ರಯೋಜಕವಾಗುವುದೆಂಬ ಭಯ ಅವರಿಗಾಯಿತು; ಮತ್ತು ವಸ್ತುಗಳು ಲಭ್ಯವಾಗುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಆವಶ್ಯಕತೆಯನ್ನು ಗಮನಿಸಲಾಯಿತು.

ಚರ್ಚಿತವಾದ ಉಳಿದ ವಿಷಯಗಳಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರಿಗೆ ಸಂಬಳ ಸಂದಾಯ ಶಾಸನವನ್ನು ಅನ್ವಯಿಸುವ ಸಾಧ್ಯತೆಯೂ ಇತ್ತು; ಅಲ್ಲದೆ, ಹಾಗೆ ಅನ್ವಯಿಸುವುದರಿಂದಾಗುವ ತೊಂದರೆಗಳನ್ನು ಗಮನಿಸಲಾಯಿತು. ಹೆಚ್ಚುವರಿ ಲಾಭದ ಮೇಲಿನ ಕರದ ವಿಷಯವಾಗಿ ಸಹಾಯ ಮತ್ತು ಯಂತ್ರೋಪಕರಣಗಳನ್ನು ಕೊಳ್ಳಲು ಅವಕಾಶಗಳ ವಿಷಯವಾಗಿ ಕೈಗಾರಿಕೆಗಳು ಸಲ್ಲಿಸಿದ ಬೇಡಿಕೆಗಳನ್ನು ಪರಿಶೀಲಿಸಲಾಯಿತು.

# ೨೫
# ಭಾರತದಲ್ಲಿ ಕಾರ್ಮಿಕ ಕಲ್ಯಾಣದ ಅಭಿವೃದ್ಧಿ*

ಲಖನೌದಲ್ಲಿ ಜನವರಿ ೨೫ ಮತ್ತು ೨೬ ರಂದು ಜರುಗಿದ ನಾಲ್ಕನೇ ಸ್ಥಾಯಿ ಕಾರ್ಮಿಕ ಸಮಿತಿಯ ಸಭೆಯಲ್ಲಿ ಚರ್ಚೆಗೆ ಬಂದ ವಿಷಯಗಳಲ್ಲಿ ಕೈಗಾರಿಕಾ ಕಾರ್ಮಿಕರಿಗೆ ತುಟ್ಟಿಭತ್ಯೆ, ಗೈರು ಹಾಜರು, ಸೇವಾ ದಾಖಲೆ ಮತ್ತು ಫಲಾಹಾರ ಮಂದಿರಗಳು – ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳಿದ್ದವು.

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯು, ಪರಿಷತ್ ಭವನದಲ್ಲಿ ಜರುಗಿತು. ಮಾಲೀಕರ ಸಂಸ್ಥೆಗಳು, ಕಾರ್ಮಿಕರ ಸಂಸ್ಥೆಗಳು (ಪ್ರತಿಯೊಂದರಿಂದಲೂ ತಲಾ ಐವರಂತೆ), ಪ್ರಾಂತ್ಯ ಸರ್ಕಾರಗಳು ಕಳುಹಿಸಿದ ಐವರು ಪ್ರತಿನಿಧಿಗಳು, ಮತ್ತು ಭಾರತ ರಾಜ್ಯಗಳು ಕಳುಹಿಸಿದ ಮೂವರು ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು.

### ಡಾ॥ ಅಂಬೇಡ್ಕರರ ಭಾಷಣ

ಅಧ್ಯಕ್ಷರು ತಮ್ಮ ಪ್ರಾರಂಭಿಕ ಭಾಷಣದಲ್ಲಿ, ಸ್ಥಾಯಿ ಕಾರ್ಮಿಕ ಸಮಿತಿಯು ತನ್ನ ಸಭೆಯೊಂದರಲ್ಲಿ ಅಂಗೀಕರಿಸಿದ್ದ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರವು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾತನಾಡುತ್ತಾ, ಸರ್ಕಾರವು ಕೇಂದ್ರೀಯ ಕಾಮಗಾರಿ ಇಲಾಖೆಯು ಮಾಡಿಕೊಂಡ ಒಪ್ಪಂದಗಳಿಗೆ 'ನ್ಯಾಯಯುತ ಸಂಬಳದ ಕಾಯಿದೆ'ಯನ್ನು ಅನ್ವಯಿಸಲು ನಿರ್ಧರಿಸಿದೆ ಎಂದು ಹೇಳಿದರು. ಕೇಂದ್ರ ಸರ್ಕಾರದ ಇತರ ಇಲಾಖೆಗಳು ಮಾಡಿಕೊಂಡ ಒಪ್ಪಂದಗಳಿಗೂ ಅಂತಹ ಕಾಯಿದೆಯನ್ನು ಅನ್ವಯಿಸುವ ವಿಚಾರವು ಪರಿಶೀಲನೆಯಲ್ಲಿದೆ ಎಂದೂ ಅವರು ಹೇಳಿದರು.

ಕಾರ್ಮಿಕ ಸಮಾವೇಶದ ಸರ್ವಸಾಧಾರಣ ಸಭೆಯಲ್ಲಿ ಅಂಗೀಕೃತವಾದ ನಿರ್ಣಯಕ್ಕನುಸಾರವಾಗಿ, ಭಾರತ ಸರ್ಕಾರವು, ಕಾರ್ಮಿಕರ ಸಂಬಳ, ಸಂಪಾದನೆ ಮತ್ತು ಇತರ ಪರಿಸ್ಥಿತಿಗಳನ್ನು ತನಿಖೆ ಮಾಡಲು, ಕಾರ್ಮಿಕ ತನಿಖಾ ಸಮಿತಿಯನ್ನು ನೇಮಕ ಮಾಡಿದೆ ಎಂದು ಅಧ್ಯಕ್ಷರು ಪ್ರಕಟಿಸಿದರು. ಈ ತನಿಖೆಯನ್ನು

---

* ಇಂಡಿಯನ್ ಇನ್‌ಫರ್ಮೇಶನ್, ಫೆಬ್ರವರಿ ೧೫, ೧೯೪೪, ಪು-೧೫೧-೫೨

ಸೂಕ್ತ ರೀತಿಯಲ್ಲಿ ಬೇಸಾಯದ ಕೂಲಿಯಾಳುಗಳಿಗೂ ವಿಸ್ತರಿಸುವ ಪ್ರಶ್ನೆಯನ್ನು ಪ್ರಾಂತ್ಯ ಸರ್ಕಾರಗಳೊಂದಿಗೆ ಸಮಾಲೋಚನೆಯ ಮೂಲಕ ಪರಿಶೀಲಿಸಲಾಗುತ್ತಿದೆ ಎಂದೂ ಅವರು ಹೇಳಿದರು. ಅನಂತರ ಸಮಿತಿಯು, ಭಾರತದಲ್ಲಿ ಶಾಸನಬದ್ಧ ವೇತನ ನಿಯಂತ್ರಣವು ಬೇಕೆಂದಾದರೆ, ಅದರ ಕಾರ್ಯಕ್ರಮಗಳು ಹೇಗಿರಬೇಕೆಂಬುದನ್ನು ಚರ್ಚಿಸಿತು.

ವೇತನ ಸಮಿತಿಗಳನ್ನು ರಚಿಸುವಾಗ ಅದು ಪ್ರಾಂತೀಯ ಆಧಾರದ ಮೇಲೆಯೇ ಇರಬೇಕು ಮತ್ತು ಬೇರೆ ಬೇರೆ ಕೈಗಾರಿಕೆಗಳಿಗೆ ಬೇರೆ ಬೇರೆಯಾಗಿ ಅನ್ವಯಿಸಬೇಕು, ಎಂಬುದನ್ನು ಸಾಮಾನ್ಯವಾಗಿ ಎಲ್ಲ ಪ್ರತಿನಿಧಿಗಳೂ ಅನುಮೋದಿಸಿದರೆಂಬುದು ತಿಳಿದುಬಂದಿತು.

ಉದ್ಯೋಗ ವಿನಿಮಯ ಯೋಜನೆಯನ್ನು ಕುರಿತ ಸಣ್ಣ ಚರ್ಚೆ ಮತ್ತು ಪ್ರಾಂತ್ಯ ಸರ್ಕಾರಗಳ ಪ್ರತಿನಿಧಿಗಳು, ತಮ್ಮ ಪ್ರಾಂತ್ಯದಲ್ಲಿ ಆ ಯೋಜನೆಯು ಯಾವ ಗತಿಯಲ್ಲಿ ನಡೆಯುತ್ತಿದೆ ಎಂಬುದರ ಬಗ್ಗೆ ಮಾಡಿದ ಹೇಳಿಕೆಗಳ ನಂತರ, ಸಮಿತಿಯು, ಕೇಂದ್ರ ಸರ್ಕಾರವು (ಪ್ರತಿನಿಧಿಗಳ ಅಭಿಪ್ರಾಯಗಳನ್ನು ಪಡೆಯಲೋಸ್ಕರ) ಈಗಾಗಲೇ ಪ್ರಸಾರ ಮಾಡಿದ್ದ ಮಾದರಿ ಭವಿಷ್ಯ ನಿಧಿಯ ನಿಯಮಗಳನ್ನು ಪರಿಶೀಲಿಸಿತು. ಅಲ್ಲದೆ, ಆ ನಿಧಿಯನ್ನು ನಿರ್ವಹಿಸುವ ಕ್ರಮದ ವಿವರಣೆಗಳನ್ನೂ, ಆ ನಿಧಿಗೆ ಮಾಲೀಕರ ಮತ್ತು ಕಾರ್ಮಿಕರ ಕೊಡುಗೆಗಳು ಮತ್ತು ಅದರಿಂದ ಪಡೆಯಬಹುದಾದ ಸಾಲಗಳನ್ನೂ ಕುರಿತು ಚರ್ಚಿಸಲಾಯಿತು.

**ತುಟ್ಟಿಭತ್ಯೆ**

ಗ್ರೆಗರಿ ಸಮಿತಿಯು ಸಲ್ಲಿಸಿದ್ದ ತುಟ್ಟಿಭತ್ಯೆಯ ಮೇಲಿನ ವರದಿಯನ್ನೂ ಸಮಿತಿಯು ಪರಿಶೀಲಿಸಿತು. ತ್ರಿಪಕ್ಷೀಯ ಕಾರ್ಮಿಕ ಸಮಾವೇಶವು ತನ್ನ ಕಳೆದ ಸಭೆಯಲ್ಲಿ ಕೈಗೊಂಡಿದ್ದ ನಿರ್ಣಯಕ್ಕನುಸಾರವಾಗಿ, ಅದರ ಅಧ್ಯಕ್ಷರು ಗ್ರೆಗರಿ ಸಮಿತಿಯನ್ನು ರಚಿಸಿದ್ದರು. ಈ ವರದಿಯಿಂದ ಉದ್ಭವಿಸಿದ ಸಮಸ್ಯೆಗಳಲ್ಲಿ ಕೆಲವಾದ ತುಟ್ಟಿಭತ್ಯೆಯನ್ನು ನಿರ್ಧರಿಸುವ ಸಾಮಾನ್ಯ ನಿಯಮಗಳಾವುವು, ಈ ನಿಯಮಗಳ ಸ್ವರೂಪ ಹೇಗಿರಬೇಕು, ಬೇರೆ ಬೇರೆ ಕೈಗಾರಿಕೆಗಳಿಗೆ ಅಥವಾ ಬೇರೆ ಬೇರೆ ವಲಯಗಳಿಗೆ ಬೇರೆ ಬೇರೆ ದರಗಳಿರಬೇಕಾದುದು ಅಪೇಕ್ಷಣೀಯವೆ, ತುಟ್ಟಿಭತ್ಯೆಗೂ ಜೀವನ ವೆಚ್ಚದ ಅಂಶಗಳಿಗೆ ಏರಿಕೆ ಅಥವಾ ಕಡಿಮೆಯಾಗುವುದಕ್ಕೂ ಸಂಬಂಧವಿರಬೇಕೆ – ಮುಂತಾದವುಗಳನ್ನು ಚರ್ಚಿಸಲಾಯಿತು. ಕೈಗಾರಿಕಾ ಸಂಸ್ಥೆಗಳು ಕೊಟ್ಟಿರುವ ಅಥವಾ ಕೊಡುವ ತುಟ್ಟಿಭತ್ಯೆಯ ಪ್ರಶ್ನೆಯನ್ನು ನಿರ್ಣಯಿಸುವ ದೃಷ್ಟಿಯಿಂದ, ಅದಕ್ಕೆ ಸಂಬಂಧಿಸಿದ ಸಾಮಾನ್ಯ ನಿಯಮಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸರ್ಕಾರವೆ ರೂಪಿಸಬೇಕು ಎಂಬುದಕ್ಕೆ ಸಮಿತಿ ಒಪ್ಪಿಗೆ ನೀಡಿತು, ಎಂದು ತಿಳಿದುಬಂದಿದೆ. ಸರ್ಕಾರವು ತುಟ್ಟಿಭತ್ಯೆಯ ನಿಯಮಗಳನ್ನು ರೂಪಿಸಲು ಉಪಸಮಿತಿಯು ಸಲ್ಲಿಸಿದ ವರದಿ ಪರಿಣಾಮಕಾರಿ ಮಾರ್ಗದರ್ಶನ ನೀಡಬಲ್ಲದು ಎಂಬ ಮಾತನ್ನು ಒಪ್ಪಿಕೊಂಡ ಸಮಿತಿಯು, ಆ ವರದಿಯನ್ನು ಭಾರತ ಸರ್ಕಾರಕ್ಕೆ ಕಳಿಸಿಕೊಡಬೇಕೆಂದೂ, ಪ್ರತಿನಿಧಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳ ಬೆಳಕಿನಲ್ಲಿ ಸರ್ಕಾರವು ಅದನ್ನು ಪರಿಶೀಲಿಸಬೇಕೆಂದೂ ನಿರ್ಣಯಿಸಿತು.

**ಗೈರುಹಾಜರಿ ರೂಢಿ**

ಕೈಗಾರಿಕೆಯಲ್ಲಿ, ಅದರಲ್ಲೂ ಯುದ್ಧಕಾಲದಲ್ಲಿ ನಡೆಯುವ ಗೈರುಹಾಜರಿಯ ಅಭ್ಯಾಸದ ಮಾದರಿಯ ಸಮೀಕ್ಷೆ ನಡೆಸಲು ಸಿದ್ಧಪಡಿಸಿದ ಕರಡು ಯೋಜನೆ ಚರ್ಚಾವಿಷಯಗಳ ಪಟ್ಟಿಯಲ್ಲಿತ್ತು. ಸಮಸ್ಯೆಗೆ

ಸಂಬಂಧಿಸಿದ ವಾಸ್ತವಿಕತೆಯ – ಅಂದರೆ ಕಾಯಿಲೆ, ಅಪಘಾತ, ಪ್ರಯಾಣ, ಸಾಮಾಜಿಕ ಅಥವಾ ಧಾರ್ಮಿಕ ಕಾರಣಗಳು, ಸಾರಿಗೆಯ ತೊಂದರೆಗಳು, ತಡವಾಗುವುದು ಮುಂತಾದ ಗೈರುಹಾಜರಿಗೆಡೆಮಾಡಿಕೊಡುವ ಕಾರಣಗಳ – ಸಮೀಕ್ಷೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿತ್ತು. ಕೆಲವು ಬದಲಾವಣೆಗಳಿಗೆ ಒಳಗಾದನಂತರ ಈ ಯೋಜನೆಯು ಸರ್ವಾನುಮತದಿಂದ ಸ್ವೀಕೃತವಾಯಿತು.

ಇದಕ್ಕೂ ಮೊದಲು ಸಮಿತಿಯು, ತನ್ನ ಸಭೆಯಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರಿಗಾಗಿ ಪ್ರಾರಂಭಿಸಿದ ಊಟದ ಮತ್ತು ತಿಂಡಿಯ ಕ್ಯಾಂಟೀನುಗಳ ಪ್ರಗತಿಯನ್ನು ಪುನರವಲೋಕಿಸಿತು. ಈ ಬಗ್ಗೆ ಕೆಲವು ತೊಂದರೆಗಳಿದ್ದಾಗ್ಯೂ, ಅಂಥ ಕ್ಯಾಂಟೀನುಗಳು ಸಾಕಷ್ಟು ಸಂಖ್ಯೆಯಲ್ಲಿದ್ದವು ಮತ್ತು ಕಾರ್ಮಿಕರಿಗೆ ಅವು ಪ್ರಿಯವೂ ಆಗಿದ್ದವು ಎಂಬುದು ವ್ಯಕ್ತವಾಯಿತು.

* * *

## ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ಕಾಯ್ದೆ ೧೯೪೪*

ಈ ದಿನ 'ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ಶಾಸನ, ೧೯೪೪' ಎಂಬ ಶಾಸನವು ಜಾರಿಗೆ ಬಂದಿದ್ದು, ಇದು ಕಲ್ಲಿದ್ದಲು ಗಣಿ ಉದ್ಯಮದಲ್ಲಿ ನೇಮಕಗೊಂಡಿರುವ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಕಾರ್ಯಗಳ ಆರ್ಥಿಕ ನೆರವಿಗೆ ಅವಕಾಶ ಮಾಡಿಕೊಡುವ ಒಂದು ನಿಧಿಯನ್ನು ಸ್ಥಾಪಿಸುತ್ತದೆ. ಈ ಶಾಸನವು ಇಡೀ ಬ್ರಿಟಿಷ್ ಭಾರತಕ್ಕೆ ಅನ್ವಯವಾಗುತ್ತದೆ ಮತ್ತು ತತ್‌ಕ್ಷಣವೆ ಜಾರಿಗೆ ಬರುತ್ತದೆ, ಎಂದು ಜನವರಿ ೩೧ರಂದು, ಭಾರತ ಸರ್ಕಾರದ ಕಾರ್ಮಿಕ ಇಲಾಖೆಯು ಪ್ರಕಟಿಸಿರುವ ವಾರ್ತಾಪತ್ರವು ತಿಳಿಸಿತ್ತು. ಅದು ಇನ್ನೂ ಮುಂದುವರಿದು, ಹೀಗೆ ತಿಳಿಸಿತು : ಈ ನಿಧಿಯನ್ನು ಸ್ಥಾಪಿಸಲು, ಕೇಂದ್ರ ಸರ್ಕಾರವು ಬ್ರಿಟಿಷ್ ಭಾರತದ ಎಲ್ಲ ಕಲ್ಲಿದ್ದಲ ಗಣಿಗಳಿಂದ ರೈಲಿನ ಮೂಲಕ ಸಾಗಿಸಲಾಗುವ ಎಲ್ಲ ಕಲ್ಲಿದ್ದಲು ಮತ್ತು ಕಲ್ಲಿದ್ದಲ ಮೆದು ಕಿಟ್ಟದ ಮೇಲೂ ತೆರಿಗೆ ವಿಧಿಸುವುದು. ಯಾವ ದರದಲ್ಲಿ ಈ ತೆರಿಗೆ ವಿಧಿಸಬೇಕೆಂಬುದನ್ನು ಗೆಜೆಟ್ ಆಫ್ ಇಂಡಿಯಾದಲ್ಲಿ ನೋಟೀಸ್ ಕೊಟ್ಟು ಮತ್ತು ಸಲಹಾಕಾರ ಮಂಡಳಿಯೊಂದರೊಡನೆ ಕಾಲದಿಂದ ಕಾಲಕ್ಕೆ ಸಮಾಲೋಚನೆ ನಡೆಸಿದನಂತರ ನಿರ್ಣಯಿಸಲಾಗುವುದು. ಈ ತೆರಿಗೆಯು ಟನ್ ಒಂದಕ್ಕೆ ಒಂದಾಣೆಗಿಂತ ಕಡಿಮೆಯಾಗಲಿ ನಾಲ್ಕಾಣೆಗಿಂತ ಹೆಚ್ಚಾಗಲಿ ಇರುವುದಿಲ್ಲ. ಕಲ್ಲಿದ್ದಲು ಅಥವಾ ಅದರ ಮೆದು ಕಿಟ್ಟವನ್ನು ಸಾಗಾಟ ಮಾಡುವ ರೈಲ್ವೆ ಆಡಳಿತ ವರ್ಗವು ಕೇಂದ್ರ ಸರ್ಕಾರದ ಪರವಾಗಿ ಈ ತೆರಿಗೆಯನ್ನು ಸಂಗ್ರಹಿಸುತ್ತದೆ.

"ಕಲ್ಲಿದ್ದಲ ಗಣಿ ಕಾರ್ಮಿಕರ ಕಲ್ಯಾಣಾಭಿವೃದ್ಧಿಗೆ ಆವಶ್ಯಕವಾದ ಅಥವಾ ಅಭಿವೃದ್ಧಿಯನ್ನು ತ್ವರಿತಗೊಳಿಸುವ" ಕ್ರಮಗಳಿಗೆ ಬೇಕಾದ ಖರ್ಚನ್ನು ಪೂರೈಸಲೆಂದೇ ಇರುವ ಕಾರ್ಮಿಕ ಕಲ್ಯಾಣ ನಿಧಿಗೆ, ಹೀಗೆ ಸಂಗ್ರಹಿಸಲ್ಪಟ್ಟ ತೆರಿಗೆಯ ಹಣ ಜಮಾ ಆಗಬೇಕೆಂದು ಈ ಶಾಸನವು ತಿಳಿಸಿದರೂ, ಅದು ಯಾವ ಯಾವ ವಿಶಿಷ್ಟ ವಿಷಯಗಳಿಗೆ ಆ ಹಣ ಖರ್ಚಾಗಬೇಕೆಂಬುದನ್ನು ಅದು ಸ್ಪಷ್ಟಪಡಿಸಿತ್ತು. ಈ ನಿಧಿಯಿಂದ ಆರ್ಥಿಕ ನೆರವು ಪಡೆದ ಕಾರ್ಮಿಕ ಕಲ್ಯಾಣ ಕಾರ್ಯಕ್ರಮದ ಧ್ಯೇಯವು ಕಾರ್ಮಿಕರಿಗೆ ವಸತಿ, ನೀರು ಸರಬರಾಜು, ನೈರ್ಮಲ್ಯ, ಉನ್ನತ ಶಿಕ್ಷಣದ ಅನುಕೂಲತೆ, ಜೀವನಮಟ್ಟವನ್ನು ಏರಿಸಿಕೊಳ್ಳಲು ಅವಕಾಶ,

* ಇಂಡಿಯನ್ ಇನ್‌ಫರ್ಮೇಶನ್, ಫೆಬ್ರವರಿ ೧೫, ೧೯೪೪, ಪು – ೧೫೩

ಪೌಷ್ಟಿಕಾಂಶ, ಸಾಮಾಜಿಕ ಪರಿಸ್ಥಿತಿ ಉತ್ತಮೀಕರಣ, ಮತ್ತು ಕ್ರೀಡೆ ಹಾಗೂ ಸಾರಿಗೆಗಳ ಅನುಕೂಲವನ್ನು ಮಾಡಿಕೊಡುವುದೇ ಆಗಿತ್ತು.

ಅಲ್ಲದೆ, ಸಾರ್ವಜನಿಕ ಆರೋಗ್ಯ ಮತ್ತು ನಿರ್ಮಲೀಕರಣಗಳಲ್ಲಿ ಸುಧಾರಣೆ, ರೋಗಗಳನ್ನು ತಡೆಗಟ್ಟುವುದು, ವೈದ್ಯಕೀಯ ಅನುಕೂಲತೆಗಳನ್ನು ಒದಗಿಸುವುದು, ಈಗಿರುವ ಅನುಕೂಲತೆಗಳಲ್ಲಿ ಸುಧಾರಣೆ ಮಾಡುವುದು – ಇವೂ ಸಹ ಅದರಲ್ಲಿ ಸೇರಿದ್ದವು. ಪ್ರಾಂತ್ಯ ಸರ್ಕಾರಕ್ಕೆ, ಸ್ಥಳೀಯ ಅಧಿಕಾರಿಗೆ, ಕಲ್ಲಿದ್ದಲ ಗಣಿಯ ಮಾಲೀಕ, ಅಥವಾ ಏಜೆಂಟ್ ಅಥವಾ ಕಾರ್ಯನಿರ್ವಾಹಕರಿಗೆ, ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ಯಾವುದೇ ಕಾರ್ಮಿಕ ಕಲ್ಯಾಣ ಯೋಜನೆಗೋಸ್ಕರ ಈ ನಿಧಿಯಿಂದ ಅನುದಾನ ಪಡೆಯುವ ಅವಕಾಶ ಉಂಟು. ಆವಶ್ಯಕವೆನಿಸುವಷ್ಟು ಆರ್ಥಿಕ ಬೆಂಬಲ ಪಡೆದ ಈಗಿರುವ ಸಂಸ್ಥೆಗಳ ಮತ್ತು ಈ ನಿಧಿಯಿಂದ ಇನ್ನು ಮುಂದೆ ಆರ್ಥಿಕ ನೆರವನ್ನು ಪಡೆಯಲಿರುವ ಅಂಗೀಕೃತವಾದ ಕಲ್ಯಾಣ ಯೋಜನೆಗಳ ಪೂರ್ಣ ಉಪಯೋಗವಾಗುವುದು ಎಂಬುದನ್ನು ಈ ಕಾಯ್ದೆಯು ದೃಢಪಡಿಸುತ್ತದೆ.

**ಸಲಹಾ ಮಂಡಳಿ**

ಈ ಶಾಸನವು ಕೇಂದ್ರ ಸರ್ಕಾರಕ್ಕೆ ಒಂದು ಸಲಹಾ ಮಂಡಳಿಯನ್ನು ಸ್ಥಾಪಿಸುವ ಅಧಿಕಾರವನ್ನು ನೀಡುತ್ತದೆ. ಈ ಸಲಹಾ ಮಂಡಳಿಯಲ್ಲಿ ಇತರರಲ್ಲದೆ, ಕಲ್ಲಿದ್ದಲ ಗಣಿ ಮಾಲೀಕರ ಪ್ರತಿನಿಧಿಗಳೂ, ಅಷ್ಟೇ ಸಂಖ್ಯೆಯ ಕಲ್ಲಿದ್ದಲ ಗಣಿ ಕಾರ್ಮಿಕರ ಪ್ರತಿನಿಧಿಗಳೂ ಇರುತ್ತಾರೆ. ಸಲಹಾ ಮಂಡಳಿಯ ಒಬ್ಬ ಮಹಿಳಾ ಸದಸ್ಯರು ಇರಲೇಬೇಕು. ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಈ ಶಾಸನದನ್ವಯ ಸಲಹೆ ಪಡೆಯಬೇಕೋ, ಆ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಲಹಾ ಮಂಡಳಿಯು ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡಬೇಕು. ಈ ಶಾಸನವನ್ನು ಅನ್ವಯಿಸುವ ವಿಷಯದಲ್ಲಿಯೂ ಅದು ಸಲಹೆ ಕೊಡಬಹುದು.

## ೨೬
## ಕಲ್ಲಿದ್ದಲ ಗಣಿಗಳ ಭೂಮಿಯೊಳಗೆ ಕೆಲಸ ಮಾಡಲು ಮಹಿಳೆಯರ ನೇಮಕಾತಿ ಮಾಡುವ ಮೇಲೆ ಇರುವ ನಿಷೇಧವನ್ನು ರದ್ದುಪಡಿಸುವುದು*

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೇ, ನಮ್ಮ ಮಹಿಳಾ ಸದಸ್ಯರು ಸಭೆಯನ್ನು ಮುಂದೂಡಬೇಕೆಂಬ ಸೂಚನೆಯನ್ನು ಮಂಡಿಸಿದ್ದಕ್ಕಾಗಿ, ನನಗೆ ಸಂತೋಷವಾಗಿದೆ. ಏಕೆಂದರೆ ಅದು, ಬಹಳ ದಿನಗಳಿಂದ ನನ್ನನ್ನು ಕಾಡುತ್ತಿರುವ ವಿಷಯವೊಂದನ್ನು ಸದನಕ್ಕೆ ಸ್ಪಷ್ಟಪಡಿಸಲು ಅವಕಾಶ ಮಾಡಿಕೊಡುತ್ತದೆ. ಈ ವಿಷಯವಾಗಿ ನನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳಲಿ ಎಂಬ ಉದ್ದೇಶದಿಂದ, ಭಾರತ ಸರ್ಕಾರದ ಈ ತೀರ್ಮಾನವು ದುರದೃಷ್ಟಕರ ಎಂದು ನಾನು ಮೊದಲೇ ಹೇಳಬಯಸುತ್ತೇನೆ. ಇದರಿಂದ ನನಗೆ ಚಿಂತೆಯಾಗಿದೆ. ನಾನು ಹೇಳುವುದಿಷ್ಟೆ: ಭಾರತ ಸರ್ಕಾರವು ಕಡ್ಡಾಯಪೂರ್ವಕವಾಗಿ ಇದ್ದ ಆಗಿನ ಪರಿಸ್ಥಿತಿಯನ್ನು ಗಮನಿಸಿದರೆ ಇದೇನೂ ನಮ್ಮ ಪಾಲಿನ ತಪ್ಪು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ : ಸಂ–೧, ೮–೨–೧೯೪೪, ಪು–೧೩೧.

ಎಂದೆನಿಸುವುದಿಲ್ಲ. ನಾನು ತೋರಿಸುತ್ತಿರುವ ಭಿನ್ನತೆ ಸದನಕ್ಕೆ ಅರ್ಥವಾಗುತ್ತಿದೆ ಎಂದು ನನಗನಿಸುತ್ತದೆ.

ನಾನು ಇದುವರೆಗೂ ಆಲಿಸಿರುವ ಚರ್ಚೆಯು ನನ್ನ ಮನಸ್ಸಿಗೆ ನಾಟಿದೆ. ಸನ್ಮಾನ್ಯ ಸದಸ್ಯರಲ್ಲಿ ಬಹಳಷ್ಟು ಜನ ಮಾನವೀಯತೆಯ ಜಾಡಿನಲ್ಲೇ ಮಾತನಾಡಿದ್ದಾರೆ. ಆದರೆ ನನಗೆ, ಅವರ ಮಾತು ಸತ್ಯಕ್ಕೆ ದೂರವಾಗಿದೆ ಎಂದೆನಿಸುತ್ತದೆ. ನಾನು ಈ ಚರ್ಚೆಯಲ್ಲಿ ಪರಿಸ್ಥಿತಿಯ ವಾಸ್ತವಿಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತಾಡಬಯಸುತ್ತೇನೆ. ಸದನದ ತೀರ್ಮಾನ ಪಡೆಯಲೋ ಎಂಬಂತೆ ಅನೇಕ ವಿಷಯಗಳನ್ನು ಚರ್ಚೆಯಲ್ಲಿ ತರಲಾಯಿತು. ಕಲ್ಲಿದ್ದಲ ಗಣಿಗಳಲ್ಲಿ ಕೊಡಲಾಗುವ ಸಂಬಳದ ಬಗ್ಗೆ ಪ್ರಸ್ತಾಪಮಾಡಲಾಯಿತು ಎಂದು ನಾನು ವಿಶೇಷವಾಗಿ ಹೇಳಬೇಕಾಗಿದೆ. ಕಲ್ಲಿದ್ದಲ ಗಣಿ ಕಾರ್ಮಿಕರ ಕಲ್ಯಾಣ ಕಾರ್ಯಗಳಿಗೆ ಅನ್ಯಾಯವಾಗುತ್ತಿರುವುದರ ಬಗೆಗೂ ಪ್ರಸ್ತಾಪಿಸಲಾಯಿತು. ನಾನು ವಿಮರ್ಶೆ ಮಾಡುವಾಗ ಈ ಬಗ್ಗೆ ಮಾತಾಡುತ್ತೇನೆ. ಸದಸ್ಯರ ಸೂಚನೆಯನ್ನೇನೋ ನಾನು ಗೌರವಿಸುತ್ತೇನೆ. ಆದರೆ, ಇವೆಲ್ಲ ಪ್ರಾಸಂಗಿಕ ವಿಷಯಗಳೇ ಹೊರತು ಸದನವು ನಿರ್ಣಯಿಸಲೇಬೇಕಾದ ವಿಷಯಗಳಲ್ಲ ಎಂಬ ನನ್ನ ಮಾತು ನ್ಯಾಯಯುತವೆಂದು ನನಗನಿಸುತ್ತದೆ.

ಈ ಪ್ರಾಸ್ತಾವಿಕ ಅವಲೋಕನೆಗಳ ನಂತರ ನಾನು ಮೊದಲು ತಿಳಿಸಬೇಕಾದ ವಿಷಯ ಏನೆಂದರೆ ಭೂಮಿಯ ಒಳಗೆ ಹೆಂಗಸರು ಕೆಲಸ ಮಾಡುವುದನ್ನು ನಿಷೇಧಿಸುವ ಒಂದು ಒಡಂಬಡಿಕೆಗೆ ಮಾನ್ಯ ಸದಸ್ಯರು ೧೯೩೫ರಲ್ಲಿ ಒಪ್ಪಿಗೆ ನೀಡಿದ್ದರು ಮತ್ತು ಭಾರತ ಸರ್ಕಾರಕ್ಕೆ ಆ ಒಡಂಬಡಿಕೆಯನ್ನು ಅನುಷ್ಠಾನಕ್ಕೆ ತರಲು ಎಂದೂ ಮನಸ್ಸಿರಲಿಲ್ಲ ಎಂಬ ಕಾರಣದಿಂದ ನಾಲ್ಕೇ ವರ್ಷಗಳಲ್ಲಿ ಆ ಒಪ್ಪಿಗೆಯಿಂದ ಹಿಂದೆ ಸರಿದಿದ್ದರು ಎಂಬ ಅಭಿಪ್ರಾಯ ಬರುವಂತೆ ಮಾನ್ಯ ಸದಸ್ಯರು ಮಾತಾಡಿದ್ದಾರೆ. ಮಾನ್ಯರೇ, ವಸ್ತುಸ್ಥಿತಿ ಏನೆಂಬುದನ್ನು ತೋರಿಸಲು ನಾನು ಈ ವಿಷಯದ ಮೇಲೆ ಟಿಪ್ಪಣಿ ಮಾಡಬೇಕಾಗಿದೆ. ಈ ಒಡಂಬಡಿಕೆಯು ಜಾರಿಗೆ ಬರುವುದಕ್ಕಿಂತ ಬಹಳ ಹಿಂದೆಯೇ, ಭಾರತ ಸರ್ಕಾರವು ಹೆಂಗಸರು ಭೂಮಿಯೊಳಗೆ ಕೆಲಸ ಮಾಡುವುದನ್ನು ನಿಷೇಧಿಸುವ ನಿಯಮವನ್ನು ಒಪ್ಪಿಕೊಂಡಿತ್ತು ಎಂಬುದನ್ನು ಸದನವು ಇಲ್ಲಿ ಸ್ಮರಿಸಬಹುದು. ಆ ವಿಷಯವನ್ನು ಕುರಿತು ನನ್ನ ಅಧ್ಯಯನದ ಪ್ರಕಾರ ಅದನ್ನು ೧೯೨೩ರಲ್ಲಿ ಮೊಟ್ಟ ಮೊದಲು ಚರ್ಚಿಸಲಾಗಿ, ಆಗಲೇ ಭಾರತೀಯ ಕಲ್ಲಿದ್ದಲ ಗಣಿ ಶಾಸನದಲ್ಲಿ ತಿದ್ದುಪಡಿ ಮಾಡಲು ಸರ್ಕಾರವು ಒಂದು ಮಸೂದೆಯನ್ನು ತಂದಿತು. ಈ ಮಸೂದೆಯ ಮೂಲ ಉದ್ದೇಶ ಬಹಳ ಸೀಮಿತವಾಗಿತ್ತು ಎಂಬುದನ್ನು ಸದನಕ್ಕೆ ಜ್ಞಾಪಿಸಿಕೊಡಬಯಸುತ್ತೇನೆ. ಕಲ್ಲಿದ್ದಲ ಗಣಿಗಳಲ್ಲಿ ಸುರಕ್ಷಾ ಕ್ರಮಗಳನ್ನು ಜಾರಿಗೆ ತರಬೇಕೆಂಬುದಷ್ಟೇ ಮಸೂದೆಯ ಉದ್ದೇಶವಾಗಿತ್ತು. ಆದರೆ ಈ ಕಾಯ್ದೆ ಕ್ರಮಗಳನ್ನು ಜಾರಿಗೆ ತರಬೇಕೆಂದು ಆಯ್ಕೆ ಸಮಿತಿಗೆ ತಂದಾಗ, ಆ ಸಮಿತಿಯು, ಹೆಂಗಸರು ಭೂಮಿಯೊಳಗೆ ಕೆಲಸ ಮಾಡುವುದನ್ನು ತಡೆಗಟ್ಟಲು ಭಾರತ ಸರ್ಕಾರವು ಮುಂದೆ ಬಂದು, ದಿಟ್ಟ ಹೆಜ್ಜೆಯನ್ನಿಟ್ಟು, ಶಾಸನ ಮಾಡಲು ತನಗಿರುವ ಅಧಿಕಾರವನ್ನು ಚಲಾಯಿಸಬೇಕೆಂದು ತೀರ್ಪಿತ್ತಿತು. ಆಯ್ಕೆ ಸಮಿತಿಯಲ್ಲಿ ಈ ತತ್ವವನ್ನು ಭಾರತ ಸರ್ಕಾರ ಅಂಗೀಕರಿಸಿತಲ್ಲದೆ, ಅದು ಹೆಂಗಸರು ಭೂಮಿಯೊಳಗೆ ಕೆಲಸ ಮಾಡುವುದನ್ನು ತಪ್ಪಿಸುವ ಸ್ಪಷ್ಟ ಉದ್ದೇಶದಿಂದ, ನಿಯಮಗಳನ್ನೂ ರೂಪಿಸಿತು. ಅಲ್ಲದೆ, ಭೂಮಿಯೊಳಗೆ ಕೆಲಸ ಮಾಡುವ ಹೆಂಗಸರ ಸಂಖ್ಯೆಯನ್ನು ಪ್ರತಿವರ್ಷ ಕಡಿಮೆ ಮಾಡುವಂತಹ ಒಂದು ನಿಶ್ಚಿತ ಕಾರ್ಯಕ್ರಮವನ್ನು ಭಾರತ ಸರ್ಕಾರ ಹಾಕಿಕೊಟ್ಟಿತ್ತು ಎಂಬುದನ್ನು ಸದನಕ್ಕೆ ತಿಳಿಸಬೇಕಾಗಿದೆ. ಇದರಿಂದಾಗಿ, ಈ ಸದನದಲ್ಲಿ ಅದಕ್ಕೆ ಒಪ್ಪಿಗೆ ನೀಡುವ ಎರಡು ವರ್ಷ ಮೊದಲು, ಭಾರತ ಸರ್ಕಾರದ ಧೋರಣೆಯನ್ವಯ, ಗಣಿಯಲ್ಲಿ ಯಾವ ಹೆಂಗಸರೂ ಕೆಲಸ ಮಾಡುತ್ತಿರಲಿಲ್ಲ. ಮಾನ್ಯರೇ. ಈ ಸಂಗತಿಯ ಬಗೆಗೆ ಸೂಚನೆಯನ್ನು ಮಾಡಿದ ಮಾನ್ಯ ಸದಸ್ಯರು

ಪ್ರಸ್ತಾಪಿಸಿದ್ದಾರೆ. ಭಾರತ ಸರ್ಕಾರವು ಈ ಒಪ್ಪಂದ ಜಾರಿಗೆ ಬರುವ ಬಹಳ ಹಿಂದೆಯೇ, ಹೆಂಗಸರು ಗಣಿಗಳಲ್ಲಿ ಕೆಲಸ ಮಾಡಬಾರದೆಂಬ ನಿಲುವನ್ನು ತಳೆದಿತ್ತು, ಹಾಗೂ ಅದರ ಪ್ರಕಾರ, ಕೆಲವು ನಿಶ್ಚಿತ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಮಾನ್ಯ ಮಹಿಳಾ ಸದಸ್ಯರು ಈ ತೀರ್ಮಾನವನ್ನು ಪಡೆಯದಿದ್ದುದಕ್ಕಾಗಿ ನಾನು ವಿಷಾದಿಸುತ್ತೇನೆ.

ಭಾರತ ಸರ್ಕಾರವು ಯಾವ ಸಮರ್ಥನೆಯೂ ಇಲ್ಲದೆ ಈಗ ಈ ನಿಷೇಧವನ್ನು ರದ್ದುಗೊಳಿಸಿದೆ ಎಂಬ ಕಾರಣಕ್ಕಾಗಿ ಅದನ್ನು ದೂಷಿಸಲಾಗಿದೆ. ಆ ರೀತಿಯ ಹೇಳಿಕೆಯು ನನ್ನನ್ನು ಚಕಿತಗೊಳಿಸಿದೆ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕು. ಮಾನ್ಯರೇ, ಎರಡು ವಿಷಯಗಳನ್ನು ನಾನು ಸದನಕ್ಕೆ ತಿಳಿಸಬಯಸುತ್ತೇನೆ. ಅಲ್ಲದೆ, ನಾನು ಸದನದ ಮುಂದಿಡುವ ಈ ವಿಷಯಗಳು ತುರ್ತು ವಿಷಯಗಳೋ ಅಲ್ಲವೋ ಎಂಬುದನ್ನು ಸದನವು ಪರಿಶೀಲಿಸಬೇಕೆಂದೂ ಪ್ರಾರ್ಥಿಸುತ್ತೇನೆ. ಮಾನ್ಯರೇ, ಭೂಮಿಯೊಳಗೆ ಹೆಂಗಸರು ಕೆಲಸ ಮಾಡಬಾರದೆಂಬ ನಿಷೇಧಾಜ್ಞೆಯನ್ನು ರದ್ದುಗೊಳಿಸುವ ವಿಷಯವು ನೇರವಾಗಿ ಕಲ್ಲಿದ್ದಲಿಗೆ ಸಂಬಂಧಿಸಿದೆ. ಅದು ನಿರ್ವಿವಾದದ ಸಂಗತಿ. ಕಲ್ಲಿದ್ದಲು ಎಲ್ಲ ದೃಷ್ಟಿಯಿಂದಲೂ ಮುಖ್ಯವಾದ ವಸ್ತುವೋ ಅಲ್ಲವೋ ಎಂಬುದನ್ನು ಸದನದ ಮಾನ್ಯ ಸದಸ್ಯರು ಪರಿಶೀಲಿಸಬೇಕೆಂಬುದು ನನ್ನ ಬಯಕೆ. ಕೈಗಾರಿಕೆಯ ದೃಷ್ಟಿಯಿಂದ, ಅದು ಮುಖ್ಯವಾದ ವಸ್ತುವಲ್ಲವೇ? ಸಾರಿಗೆಯ ದೃಷ್ಟಿಯಿಂದ, ಅದು ಮುಖ್ಯವಾದ ವಸ್ತುವಲ್ಲವೇ? ನಾಗರಿಕ ಬಳಕೆಯ ದೃಷ್ಟಿಯಿಂದ, ಅದು ಮುಖ್ಯ ವಸ್ತುವಲ್ಲವೇ? ಸದನವು ಇದನ್ನು ಪರಿಶೀಲಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಇದು ನಾವು ಬೇಕೆಂದಾಗ ಬಿಡಬಹುದಾದ ವಸ್ತುವಲ್ಲ ಎಂಬ ವಿಷಯವನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಅದು ನಮಗೆ ಅತ್ಯಗತ್ಯವಾದ ವಸ್ತು: ಅಲ್ಲದೆ, ಅದು ಆಹಾರಕ್ಕಿಂತ ಮೊದಲು – ಯಾವುದೇ ವಸ್ತುವಿಗಿಂತ ಮೊದಲು – ನಮಗೆ ಬೇಕು. ಸದನವು ಪರಿಶೀಲಿಸಬೇಕೆಂದು ನಾನು ಕೇಳುವ ಮೊದಲ ವಿಷಯವಿದು. ಸದನವು ಪರಿಶೀಲಿಸಬೇಕೆಂದು ನಾನು ಕೇಳುವ ಎರಡನೇ ವಿಷಯವೆಂದರೆ, ಪರಿಸ್ಥಿತಿ ತಂತಾನೇ ಸರಿ ಹೋಗುವವರೆಗೂ ಭಾರತ ಸರ್ಕಾರವು ಕಾಯಲು ಸಾಧ್ಯವಿತ್ತೇ ಎಂಬ ಪ್ರಶ್ನೆ. ಆಗಲೂ ಕಲ್ಲಿದ್ದಲನ್ನು ಯಥಾ ರೀತಿ ಉತ್ಪಾದಿಸಲಾಗುತ್ತಿತ್ತು ಎಂಬುದು ನನಗೆ ಗೊತ್ತು. ಸನ್ಮಾನ್ಯ ಸದಸ್ಯರಿಗೂ ಗೊತ್ತು. ೧೯೪೩ರಲ್ಲಿ ಪ್ರಾಯಶಃ ಅದನ್ನು ಉತ್ಪಾದಿಸಲಾಗುತ್ತಿರಲಿಲ್ಲ; ಪ್ರಾಯಶಃ ೧೯೪೪ರಲ್ಲೂ ಅದನ್ನು ಉತ್ಪಾದಿಸಲಾಗುತ್ತಿರಲಿಲ್ಲ. ಆದರೆ ೧೯೪೫ರಲ್ಲಿ ಅದನ್ನು ಉತ್ಪಾದಿಸಬಹುದಿತ್ತು. ಆದರೆ ಸದನವು ಪರಿಶೀಲಿಸಬೇಕೆಂದು ನಾನು ಕೇಳುವ ಪ್ರಶ್ನೆಯಿದು. ಆಗ ನಾವು ಕಾಯಬಹುದಾದ ಪರಿಸ್ಥಿತಿಯಿತ್ತೇ? ಪರಿಸ್ಥಿತಿ ಯಥಾ ರೀತಿಯಲ್ಲೇ ಮುಂದುವರಿಯಲು ನಾವು ಬಿಡಬಹುದಿತ್ತೇ? ಮಾನ್ಯರೇ, ಇದೊಂದು ತುರ್ತಾದ ಹಾಗು ಪ್ರಥಮ ಆದ್ಯತೆ ಪಡೆಯಬೇಕಾದ ಪ್ರಸಂಗ, ಇಂಥ ಪ್ರಸಂಗದ ಸುಧಾರಣೆಗಾಗಿ ತಕ್ಷಣವೇ ಕ್ರಮ ಕೈಕೊಳ್ಳದ ಸರ್ಕಾರಕ್ಕೆ ಸರ್ಕಾರವೆಂದು ಕರೆಸಿಕೊಳ್ಳುವ ಯೋಗ್ಯತೆ ಇಲ್ಲ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಆದ್ದರಿಂದ, ನಾವು ತುರ್ತುಪರಿಸ್ಥಿತಿಯೊಂದನ್ನು ಪರಿಶೀಲಿಸುತ್ತಿದ್ದೇವೆ ಎಂಬುದನ್ನು ಮರೆಯಬಾರದು. ಆದ್ದರಿಂದ ಹೆಂಗಸರು ಭೂಮಿಯೊಳಗೆ ಕೆಲಸ ಮಾಡುವ ನಿಷೇಧವನ್ನು ರದ್ದುಪಡಿಸುವ ಶಾಸನವು ಒಂದು ವ್ಯರ್ಥ ಶಾಸನವಲ್ಲ; ಸರ್ಕಾರದ ಬೇಜವಾಬ್ದಾರಿಯುತ ಕಾರ್ಯವೂ ಅಲ್ಲ; ಅದೊಂದು ವಸ್ತುಸ್ಥಿತಿಗಳಿಗೂ ಸಂದರ್ಭಕ್ಕೆ ತಕ್ಕಂತಹ ಪರಿಸ್ಥಿತಿಗಳಿಗೂ ಅನುಗುಣವಾಗಿ ಎಸಗಿದ ಕಾರ್ಯ. ಆದ್ದರಿಂದ, ಮಾನ್ಯರೇ, ಸರ್ಕಾರದ ನಡವಳಿಕೆಯನ್ನು ಈ ತುರ್ತುಪರಿಸ್ಥಿತಿಯ ಬೆಳಕಿನಲ್ಲಿ ಮಾತ್ರ ಪರಾಮರ್ಶಿಸಬೇಕೆಂದು ನಾನು ಸನ್ಮಾನ್ಯ ಸದಸ್ಯರನ್ನು ಬೇಡಿಕೊಳ್ಳುತ್ತೇನೆ. ಸರ್ಕಾರವು ಮಾಡಲೇಬೇಕಾದುದನ್ನು ಮಾಡುವುದರಲ್ಲಿ ಸೋತಿದೆಯೇ? ಸರ್ಕಾರವು ಮಾಡಬಾರದ್ದನ್ನು ಮಾಡಿದೆಯೇ? ನಾನು ತಿಳಿಸಿದ ಎರಡು ಪರಿಶೀಲನೆಗಳ

ದೃಷ್ಟಿಯಿಂದ ನೋಡಿದಾಗ ಸರ್ಕಾರದ ಕಾರ್ಯವು ಅತ್ಯಂತ ಸೂಕ್ತ ಎಂದು ನಾನು ನಿಸ್ಸಂಕೋಚವಾಗಿ ಹೇಳುತ್ತೇನೆ. ಇದು ನನ್ನ ನಿವೇದನೆ.

ನನ್ನ ಸನ್ಮಾನ್ಯ ಮಿತ್ರ ಶ್ರೀ ಜೋಷಿಯವರು ಇದೊಂದು ಒಪ್ಪಂದವೆಂದೂ, ಅದನ್ನು ಮುರಿಯಲಾಗದೆಂದೂ ಹೇಳಿದರು. ಇದೊಂದು ಒಪ್ಪಂದ, ತನ್ನನ್ನು ತಾನೇ ತಾತ್ಕಾಲಿಕವಾಗಿ ರದ್ದು ಮಾಡಿಕೊಳ್ಳುವಂತಹ ನಿಯಮ ಅದರಲ್ಲಿಲ್ಲ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಪ್ರತಿಯೊಂದು ರಾಷ್ಟ್ರಕ್ಕೂ ಕೆಲವು ವಿಶೇಷ ಸಂದರ್ಭಗಳಲ್ಲಿ ಅಂತರರಾಷ್ಟ್ರೀಯ ಒಪ್ಪಂದವನ್ನಾಗಲಿ ಅಂತಾರಾಷ್ಟ್ರೀಯ ಕೌಲನ್ನಾಗಲೀ ಮುರಿಯುವ ಅಧಿಕಾರವಿರುತ್ತದೆ ಎಂದು ನಿಸ್ಸಂಕೋಚವಾಗಿ ಹೇಳಬಲ್ಲೆ. ಅದೊಂದು ಚೆನ್ನಾಗಿ ರೂಢಿಯಲ್ಲಿರುವ ಅಂತಾರಾಷ್ಟ್ರೀಯ ಕಾಯ್ದೆಯ ನಿಯಮ. ಜಿನೀವಾದಲ್ಲಿ ೧೯೪೦ರಲ್ಲಿ ಜರುಗಿದ ಆಡಳಿತ ಮಂಡಳಿಯ ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರ ಅಭಿಪ್ರಾಯ ಇದೇ ಆಗಿತ್ತು, ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಮಾನ್ಯರೇ, ನಾವೀಗ ತೆಗೆದುಕೊಂಡಿರುವ ಕ್ರಮವನ್ನು ತೆಗೆದುಕೊಳ್ಳದಿರಲು ಸಾಧ್ಯವಿತ್ತೇ? ಈ ಕ್ರಮವನ್ನು ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದ ಕೆಲವು ಪರಿಸ್ಥಿತಿಗಳ ವಿವರಗಳನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಕಲ್ಲಿದ್ದಲ ಕೊರತೆಗೆ ಕಾರ್ಮಿಕರ ಕೊರತೆಯೇ ಕಾರಣ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಇಂಥ ಪರಿಸ್ಥಿತಿ ನಿರ್ವಿವಾದಾಸ್ಪದ ಎಂಬುದು ನನ್ನ ಅಭಿಪ್ರಾಯ. ಮಾನ್ಯರೇ, ಸರ್ಕಾರ ಮಾಡಿರುವ ಸಮೀಕ್ಷೆಯ ಪ್ರಕಾರ, ಕಾರ್ಮಿಕರ ಕೊರತೆಗೆ ಮೂರು ಕಾರಣಗಳಿವೆ. ಮೊದಲನೆಯದೆಂದರೆ, ಭಾರತ ಸರ್ಕಾರವು ಪ್ರಾರಂಭಿಸಿದ 'ಹೆಚ್ಚು ಆಹಾರ ಬೆಳೆಯಿರಿ' ಚಳುವಳಿಯ ಪರಿಣಾಮ ಮತ್ತು ಸೈನ್ಯದಲ್ಲಿ ಉದ್ಯೋಗ ಪಡೆಯುವ ಅವಕಾಶದಲ್ಲಿ ಹೆಚ್ಚಳಗಳೊಂದಿಗೆ ಈ ಅಂಶವನ್ನು ನಿರ್ವಿಕಾರವಾಗಿ ಹೋಲಿಸಿದ ಯಾರಿಗಾದರೂ ಕಲ್ಲಿದ್ದಲ ಗಣಿ ಕಾರ್ಮಿಕರ ಸಂಖ್ಯೆ ಏಕೆ ಕಡಿಮೆಯಾಯಿತು ಎಂಬುದು ತಿಳಿಯುತ್ತದೆ. ಮಾನ್ಯರೇ, ಆಹಾರ ಧಾನ್ಯಗಳ ಬೆಲೆಗಳು ತೀವ್ರ ಗತಿಯಲ್ಲಿ ಏರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ 'ಹೆಚ್ಚು ಆಹಾರ ಬೆಳೆಯಿರಿ' ಚಳವಳಿಯು ಜನರನ್ನು ವ್ಯವಸಾಯದ ಕಡೆಗೆ ಆಕರ್ಷಿಸಿತು ಎಂಬುದು ಸ್ಪಷ್ಟವಾಗುತ್ತದೆ. ಕಲ್ಲಿದ್ದಲ ಗಣಿಗಳಲ್ಲಿ ಕೆಲಸ ಮಾಡುವವರು ನಮಗೆಲ್ಲಾ ತಿಳಿದಿರುವಂತೆ, ಪಕ್ಕಾ ರೈತರೇ ಆಗಿರುವುದರಿಂದ, ಅವರು 'ಹೆಚ್ಚು ಆಹಾರ ಬೆಳೆಯಿರಿ' ಚಳುವಳಿಯಿಂದ ಆಕರ್ಷಿತರಾದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಅದೇ ರೀತಿ, ಸೈನ್ಯಕ್ಕೆ ಸೇರಿದವರ ಹೆಚ್ಚಿನ ವರಮಾನವು ಈ ಜನರನ್ನು ಆಕರ್ಷಿಸಿರಬಹುದು. ಆದರೆ, ಮಾನ್ಯರೇ, ಇಲ್ಲಿ ಮತ್ತೊಂದು ಪರಿಸ್ಥಿತಿ ಇರುವುದನ್ನೂ ನಾವು ಗಮನಿಸಬೇಕು. ಇದರ ಮೇಲೆ ಮಾತಾಡಿದ ಸನ್ಮಾನ್ಯ ಸದಸ್ಯರು ಅದನ್ನು ಗೌಣವೆಂಬಂತೆ ಪರಿಗಣಿಸಿದ್ದರೂ, ಅದೊಂದು ಸತ್ಯ. ಮೊದಲನೆಯದಾಗಿ, ಕಲ್ಲಿದ್ದಲ ಗಣಿಯೊಳಗೆ ಕೆಲಸ ಮಾಡುವುದು ಅತ್ಯಂತ ಅಹಿತಕರವಾಗಿದ್ದು; ಅಪಾಯಕರವಾದದ್ದೂ ಹೌದು, ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅದನ್ನು ಯಾರೂ ಇಷ್ಟಪಡುವುದಿಲ್ಲ. ಅದರ ಮೇಲ್ಮೈಯಲ್ಲಿ ಕೆಲಸ ಮಾಡುವವನೂ ಸಹ, ತನಗೆ ಸಿಕ್ಕ ಮೊದಲ ಅವಕಾಶದಲ್ಲೇ ಅದನ್ನು ಬಿಟ್ಟುಬಿಡುತ್ತಾನೆ. ಆದರೆ 'ಹೆಚ್ಚು ಆಹಾರ ಬೆಳೆಯಿರಿ' ಚಳುವಳಿಯೂ, ಸೈನ್ಯದ ಕೆಲಸವೂ ಗಣಿ ಕಾರ್ಮಿಕನಿಗೆ ಕಡಿಮೆ ಅಪಾಯಕರವೂ ಹೆಚ್ಚು ಹಿತಕರವೂ ಆದ ಉದ್ಯೋಗವನ್ನು ಪಡೆಯುವ ಅವಕಾಶವನ್ನು ಕೊಡುತ್ತವೆ. ಎರಡನೆಯದಾಗಿ–ಇದನ್ನು ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ–'ಹೆಚ್ಚು ಆಹಾರ ಬೆಳೆಯಿರಿ' ಚಳುವಳಿಯಲ್ಲಿ ಹಾಗೂ ಸೈನ್ಯ ಕೆಲಸದಲ್ಲಿ ಗಣಿ ಕಾರ್ಮಿಕನು ತೊಡಗಿಸಿಕೊಂಡರೆ ಅವನಿಗೂ ಮತ್ತು ಅವನ ಕುಟುಂಬದ ಇತರರಿಗೂ ಆಗುವಷ್ಟು ದುಡಿಯುವ ಸದವಕಾಶವಿದೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸನ್ಮಾನ್ಯ ಸದಸ್ಯರಿಗೆ ಇನ್ನು ಒಂದೇ ನಿಮಿಷ ಬಾಕಿ ಇದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಇದಕ್ಕೆ ವಿಷಾದಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಹೆಚ್ಚು ವೇಳೆಗೆ ಅನುಮತಿ ಕೊಡುವುದಕ್ಕಾಗುವುದಿಲ್ಲ. ಸನ್ಮಾನ್ಯ ಸದಸ್ಯರು ಮುಗಿಸಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಪರಿಸ್ಥಿತಿ ಹೀಗಿರುವುದರಿಂದ ಕಾರ್ಮಿಕರ ಕೊರತೆಯಾಗಿದೆ.

ಇದೂ ಅಲ್ಲದೆ, ಇನ್ನೂ ಎರಡು ವಿಷಯಗಳಿವೆ. ಸದನವು ಅದನ್ನು ಪರಿಶೀಲಿಸಬೇಕಾದರೆ ನಾನು ಅದನ್ನು ಪ್ರಸ್ತಾಪಿಸುವುದು ಅಗತ್ಯ. ಮೊದಲನೆಯದಾಗಿ, ಸರ್ಕಾರವು, ಇದೊಂದು ಅಮುಖ್ಯ ವಿಷಯವೆಂಬಂತೆ ಮುಂದಾಲೋಚನೆಯಿಲ್ಲದೆ ವರ್ತಿಸಿಲ್ಲ. ಸರ್ಕಾರವು ಬಹಳ ಎಚ್ಚರಿಕೆಯಿಂದ ವರ್ತಿಸಿದೆ ಎಂದು ಸದನಕ್ಕೆ ತಿಳಿಸಬಯಸುತ್ತೇನೆ. ಅದರ ಮೊದಲ ಪ್ರಕಟನೆ ಮಧ್ಯ ಪ್ರಾಂತ್ಯಗಳಿಗಷ್ಟೆ ಅನ್ವಯವಾಗುತ್ತಿತ್ತೇ ಹೊರತು, ಎಲ್ಲ ಕಲ್ಲಿದ್ದಲ ಗಣಿ ಪ್ರದೇಶಗಳಿಗೂ ಅಲ್ಲ. ಈ ಪ್ರಕಟನೆಯನ್ನು ಬಂಗಾಳ ಮತ್ತು ಬಿಹಾರಗಳಿಗೂ ವಿಸ್ತರಿಸುವ ಆವಶ್ಯಕತೆ ಇದೆ ಎಂದು ಸರ್ಕಾರಕ್ಕೆ ನವೆಂಬರಿನಲ್ಲಿ ತಿಳಿಯಿತು. ಮತ್ತು ಈ ಪ್ರಕಟನೆಯನ್ನು ಡಿಸೆಂಬರ್‌ನಲ್ಲಿ ಒರಿಸ್ಸಾಕ್ಕೆ ವಿಸ್ತರಿಸಲಾಯಿತು. ಅಲ್ಲದೆ, ಹೆಂಗಸರಿಗೆ ಗಂಡಸರಿಗೆ ಕೊಟ್ಟಷ್ಟೇ ವೇತನ ಕೊಡಬೇಕು, ಎಂಬ ಎಚ್ಚರಿಕೆಯನ್ನೂ ನಾವು ಕೊಟ್ಟಿದ್ದೇವೆ. ಇದು ಬಹಳ ಮಹತ್ವದ ವಿಷಯ. ಲಿಂಗಭೇದ ಮಾಡದೇ, 'ಸಮಾನ ಕೆಲಸಕ್ಕೆ ಸಮಾನ ವೇತನ' ನೀತಿಯನ್ನು ಕೈಗಾರಿಕೆಯೊಂದರಲ್ಲಿ ಮೊಟ್ಟಮೊದಲು ಅನ್ವಯಿಸಿದುದು ಪ್ರಾಯಶಃ ಇದೇ ಮೊದಲಿರಬೇಕೆಂದು ನನಗನಿಸುತ್ತದೆ. ಅಲ್ಲದೆ ೫$^{1}/_{2}$ ಅಡಿಗಿಂತ ಕಡಿಮೆ ಅಗಲವಿರುವ ಕಿರುದಾರಿಯಲ್ಲಿ ಹೆಂಗಸರು ಕೆಲಸ ಮಾಡಬಾರದು ಎಂಬ ಎಚ್ಚರಿಕೆಯನ್ನೂ ನಾವು ನೀಡಿದ್ದೇನೆ. ಈ ಪ್ರಕಟಣೆಗಳು ತಾತ್ಕಾಲಿಕ ಎಂಬುದನ್ನು ಸದನವು ಸ್ಮರಿಸಬೇಕೆಂದು ನಾನು ಒತ್ತಿ ಹೇಳುತ್ತಿದ್ದೇನೆ. ಇವು ಯುದ್ಧ ಕಾಲದಲ್ಲಿಯೂ ಜಾರಿಯಲ್ಲಿರುತ್ತವೆ ಎಂದೇನೂ ನಾವು ಹೇಳಿಲ್ಲ; ಈ ಪ್ರಕಟಣೆಗಳು ಸಂಪೂರ್ಣವಾಗಿ ಅಸ್ಥಿರವಾದ ವಿಷಯಗಳು; ಅವನ್ನು ಬೇಕೆಂದಾಗ ಮತ್ತು ಸಾಧ್ಯವಾದಾಗ ಮತ್ತೆ ಜಾರಿಗೊಳಿಸಬಹುದು. ಇದನ್ನು ಪೂರ್ಣ ತುರ್ತಾದ ಹಾಗೂ ತಾತ್ಕಾಲಿಕವಾದ ಕ್ರಮವೆಂದು ನಾವು ಪರಿಗಣಿಸಬೇಕು ಎಂದು ಸದನಕ್ಕೆ ತಿಳಿಸಬಯಸುತ್ತೇನೆ. ಈ ಪ್ರಕಟಣೆಯ ಕಾಲದ ಅವಧಿಯನ್ನು ಮೊಟಕುಗೊಳಿಸಲು ನಾವು ಮತ್ತೊಂದು ಕ್ರಮವನ್ನು ಕೈಗೊಳ್ಳಲಿದ್ದೇವೆ. ನಾವು ಸದ್ಯದಲ್ಲೇ ಒಂದು ಕಾರ್ಮಿಕ ಶಿಬಿರವನ್ನೇರ್ಪಡಿಸಿ, ಅಲ್ಲಿ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡಲು ಪುರುಷ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತೇವೆ. ಈ ಪ್ರಕಟಣೆಯ ಅವಧಿಯನ್ನು ಮೊಟಕುಗೊಳಿಸಲು ನಾವು ಮತ್ತೂ ಒಂದು ಕ್ರಮವನ್ನು ಕೈಗೊಳ್ಳಲಿದ್ದೇವೆ. ಅದೆಂದರೆ, ಕಾರ್ಮಿಕರನ್ನು ಸರಬರಾಜು ಮಾಡುವ ಸಮಿತಿಗಳನ್ನು ನೇಮಿಸುವುದು. ಸೇನಾ ವಿಭಾಗದ ಕೆಲಸ ಮಾಡಿಸುತ್ತಿರುವ ಕಂಟ್ರಾಕ್ಟರುಗಳಿಗೆ ಕಾರ್ಮಿಕರನ್ನು ಸರಬರಾಜು ಮಾಡುವುದು ಮತ್ತು ಆ ಕಾರ್ಮಿಕರನ್ನು ಅವರಿಂದ ಬಿಡುಗಡೆ ಮಾಡಿ ಕಲ್ಲಿದ್ದಲ ಗಣಿಗಳಲ್ಲಿ ಕೆಲಸ ಮಾಡಲು ಕಳಿಸುವುದು ಈ ಸಮಿತಿಗಳ ಕೆಲಸ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಸನ್ಮಾನ್ಯ ಸದಸ್ಯರ ವೇಳೆ ಮುಗಿಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನನಗೆ ಮತ್ತೊಂದು ನಿಮಿಷದ ಅವಧಿಯನ್ನು ಕೊಟ್ಟರೆ.....

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಕೊಡಲಾರೆ, ಎನಿಸುತ್ತದೆ. ಏಕೆಂದರೆ

ತೀರ್ಮಾನವು ಅಂತಿಮವಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆದುದರಿಂದ, ಇದೊಂದು ತುರ್ತುಕ್ರಮವೆಂಬುದನ್ನು ಸದನವು ತಿಳಿಯಬೇಕು, ಮತ್ತು ಈ ಪರಿಸ್ಥಿತಿಯಲ್ಲಿ ಆವಶ್ಯಕವಾದುದಕ್ಕಿಂತ ಒಂದು ನಿಮಿಷವೂ ಹೆಚ್ಚು ಕಾಲ ಇದನ್ನು ಮುಂದುವರಿಸುವ ಉದ್ದೇಶ ಸರ್ಕಾರಕ್ಕಿಲ್ಲ.

## ೨೭
## ಕಲ್ಲಿದ್ದಲ ಗಣಿ ಸುರಕ್ಷತೆ (ಸುರಂಗ ಮುಚ್ಚುವ) ತಿದ್ದುಪಡಿ ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ) : ಮಾನ್ಯರೇ, ನಾನು ಈ ಕೆಳಗಿನ ಮಸೂದೆಯನ್ನು ಮಂಡಿಸುತ್ತೇನೆ :

"೧೯೨೯ರ ಕಲ್ಲಿದ್ದಲ ಗಣಿ ಸುರಕ್ಷತಾ (ಸುರಂಗ ಮುಚ್ಚುವ) ಶಾಸನವನ್ನು ತಿದ್ದುವ ಸಲುವಾಗಿ ಮಸೂದೆಯನ್ನು ಪರಿಶೀಲನೆಗಾಗಿ ಮಂಡಿಸುತ್ತೇನೆ."

ಮಾನ್ಯರೇ, ಈ ಮಸೂದೆಯಲ್ಲಿ ೧೯೩೯ರ ಕಲ್ಲಿದ್ದಲ ಗಣಿ ಸುರಕ್ಷತಾ (ಮರಳು ತುಂಬುವುದು) ಶಾಸನದಲ್ಲಿ ತಿದ್ದುಪಡಿ ಮಾಡುವ ಉದ್ದೇಶವಿದೆ. ಸದನದ ಸನ್ಮಾನ್ಯ ಸದಸ್ಯರಿಗೆ ನೆನಪಿರುವಂತೆ, ಕಲ್ಲಿದ್ದಲ ಗಣಿ ಶಾಸನವನ್ನು ೧೯೩೯ರಲ್ಲಿ ಅಂಗೀಕರಿಸಲಾಯಿತು. ಆಗ ಅದು ಸುರಂಗ ಭರಣಾ ಮಂಡಳಿ ಎಂಬ ಮಂಡಳಿಯನ್ನು ರಚಿಸಿತು. ಕಲ್ಲಿದ್ದಲು ಮತ್ತು ಅದರ ಮೆದು ಕಿಟ್ಟದ ಮೇಲೆ ವಿಧಿಸಲಾಗುವ ತೆರಿಗೆಗೆ ಸಂಬಂಧಿಸಿದ ಆಡಳಿತವನ್ನು ನೋಡಿಕೊಳ್ಳುವುದು ಮತ್ತು ಗಣಿಗಳಲ್ಲಿ ಬೆಂಕಿಯನ್ನು ತಪ್ಪಿಸಲೋಸ್ಕರ ಸುರಂಗಗಳಲ್ಲಿ ಮರಳು ತುಂಬಿಡುವ ಕ್ರಮಗಳಿಗೆ ಆ ಹಣವನ್ನು ಖರ್ಚು ಮಾಡುವುದು – ಇವು ಆ ಮಂಡಳಿಯ ಮುಖ್ಯ ಕೆಲಸಗಳು. ಈ ಶಾಸನವು ಜಾರಿಯಲಿದ್ದಾಗ ಅದರಲ್ಲಿ ಕೆಲವು ದೋಷಗಳು ಕಂಡು ಬಂದವು ಮತ್ತು ಅವನ್ನು ಈಗ ತಿದ್ದಿಕೊಳ್ಳಬೇಕಾಗಿದೆ. ಈ ಮಸೂದೆಯು ಅಂತಹ ಮೂರು ಪ್ರಶ್ನೆಗಳಿಗೆ ಮಾತ್ರ ಸಂಬಂಧಿಸಿದೆ. ಏಕೆಂದರೆ ಅವು ಈಗ ಅತಿ ಜರೂರು ಇವೆ; ಮತ್ತು ಅವುಗಳ ಕಡೆಗೆ ತಕ್ಷಣವೇ ಗಮನಹರಿಸಬೇಕಾಗಿದೆ. ಈ ಮೂರು ಪ್ರಶ್ನೆಗಳಲ್ಲಿ ಮೊದಲನೆಯದು ಉಪವಿಭಾಗ ೮ರ ನಿಯಮದ ತಿದ್ದುಪಡಿಗೆ ಸಂಬಂಧಿಸಿದೆ. ಖಂಡ ೮ ಮಂಡಳಿಯ ಕಾರ್ಯಗಳಿಗೆ ಸಂಬಂಧಿಸಿದೆ ಮತ್ತು ಹೀಗೆ ಕೂಡಿಟ್ಟ ನಿಧಿಯನ್ನು ಯಾವ ಉದ್ದೇಶಗಳಿಗೆ ಖರ್ಚು ಮಾಡಬೇಕೆಂಬುದನ್ನು ಅದು ನಿರ್ಧರಿಸುತ್ತದೆ ಎಂಬ ವಿಚಾರವನ್ನು ಸದನವು ಇಲ್ಲಿ ಸ್ಮರಿಸಬಹುದು. ಖಂಡ ೮ ಮಂಡಳಿಗೆ ಆಡಳಿತದ ಉದ್ದೇಶಕ್ಕಾಗಿ ಖರ್ಚುಮಾಡಲು ಅನುಮತಿ ನೀಡುತ್ತದೆ. ಎರಡನೆಯದಾಗಿ, ಈ ಖಂಡದ ನಿಯಮವು ಮಂಡಳಿಗೆ ಸುರಂಗಗಳನ್ನು ತುಂಬಲು ಕಲ್ಲಿದ್ದಲ ಗಣಿ ಮಾಲೀಕರಿಗೆ, ಏಜೆಂಟರಿಗೆ ಮತ್ತು ಕಾರ್ಯನಿರ್ವಾಹಕರಿಗೆ, ಸುರಂಗ ಭರಣೆಯ ಸಲಕರಣೆ ಮತ್ತು ಇತರ ಸಹಾಯವನ್ನು ಮಂಜೂರು ಮಾಡುವ ಅಧಿಕಾರವನ್ನು ಮಂಡಳಿಗೆ ಕೊಟ್ಟಿದೆ. ಅಲ್ಲದೆ, (ಮೂರನೆಯದಾಗಿ) ಖಂಡ ೮ ಶಾಸನದ ಧ್ಯೇಯಕ್ಕನುಗುಣವಾದ ಇತರ ಕಾರ್ಯಗಳನ್ನು ಆಚರಿಸಲೂ ಅನುಮತಿ ನೀಡುತ್ತದೆ. ನಾಲ್ಕನೆಯದಾಗಿ, ಅದು ಸುರಂಗ ಭರಣೆಗೆ ಸಂಬಂಧಿಸಿದ ಸಂಶೋಧನಾ ಕಾರ್ಯಗಳಿಗೆ ಹಣ ಖರ್ಚು ಮಾಡಲೂ, ಮಂಡಳಿಗೆ ಅಧಿಕಾರ ಕೊಡುತ್ತದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೧, ೨೩–೨–೧೯೪೪, ಪು. ೪೪೩–೪೬.

ಆದರೆ, ಮಂಡಳಿಯು ತಾನೇ ಸುರಂಗ ಭರಣಾ ಕಾರ್ಯಗಳನ್ನು ಮಾಡುವುದಾದರೆ ಅದಕ್ಕೆ ಬೇಕಾಗುವ ಹಣವನ್ನು ಖರ್ಚು ಮಾಡಲು ಖಂಡ ೮ ಅಧಿಕಾರ ನೀಡುವುದಿಲ್ಲ, ಎಂಬುದು ನಮ್ಮ ಗಮನಕ್ಕೆ ಬಂದಿದೆ. ಇದೊಂದು ದೊಡ್ಡ ಲೋಪ. ಅಂತಹ ಅಧಿಕಾರವನ್ನು ಮಂಡಳಿಗೆ ಕೊಡಬೇಕಾದುದು ಆವಶ್ಯಕ ಎಂಬುದು ಪರಿಣತರ ಅಭಿಪ್ರಾಯ. ಆದ್ದರಿಂದ, ಮಸೂದೆಯ ನಿಯಮ ೨ ಸೂಚಿಸುವ ಮೊದಲನೆ ತಿದ್ದುಪಡಿಯೆಂದರೆ, ಮಂಡಳಿಗೆ ತಾನೇ ಸುರಂಗ ಭರಣೆ ಮಾಡಲೂ, ಮತ್ತು ಮಂಡಳಿಯು ನಿರ್ವಹಿಸುತ್ತಿರುವ ನಿಧಿಯಿಂದ ಈ ಉದ್ದೇಶಕ್ಕಾಗಿ ಹಣ ಖರ್ಚು ಮಾಡಲೂ ಅನುಮತಿ ಕೊಡಬೇಕು, ಹಾಗೂ ಅದಕ್ಕನುಗುಣವಾಗಿ ಖಂಡ ೮ರ ಕಲಮು (೧)ರ ಉಪಕಲಮು (ಇ)ರ ಭಾಷೆಯನ್ನು ಬದಲಾಯಿಸಬೇಕು. ಮಸೂದೆ ಸೂಚಿಸುವ ಎರಡನೆ ತಿದ್ದುಪಡಿಯು ಖಂಡ ೧೦ಕ್ಕೆ ಸಂಬಂಧಿಸಿದುದು. ಕಲ್ಲಿದ್ದಲ ಗಣಿ ಸುರಕ್ಷಾ (ಸುರಂಗ ಭರಣಾ) ಶಾಸನದ ಖಂಡ ೯, ಉಪಕಲಮು (ಇ)ರ ಪ್ರಕಾರ ಗಣಿಗಳ ಮುಖ್ಯ ಇನ್ಸ್‌ಪೆಕ್ಟರನಿಗೆ, ಕಲ್ಲಿದ್ದಲಿನ ಸಂರಕ್ಷಣೆಯ ಹಿತದೃಷ್ಟಿಯಿಂದ ಅಗತ್ಯವಾದ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕಲ್ಲಿದ್ದಲ ಗಣಿ ಮಾಲೀಕ ಅಥವಾ ಏಜೆಂಟನಿಗೆ ಅಜ್ಞಾಪಿಸುವ ಅಧಿಕಾರವಿದೆ. ಶಾಸನದ ಖಂಡ ೧೦ ಆ ಆಜ್ಞೆಯ ವಿರುದ್ಧ ಮನವಿ ಸಲ್ಲಿಸಲು ಅವಕಾಶ ಮಾಡಿಕೊಡುತ್ತದೆ. ಆದರೆ, ಕಲ್ಲಿದ್ದಲು ಗಣಿತಜ್ಞ ಅಥವಾ ಅವರು ಇನ್‌ಸ್ಪೆಕ್ಟರ್ ಹೊರಡಿಸಿದ ಆಜ್ಞೆಯ ವಿರುದ್ಧ ಅಪೀಲು ಮಾಡಿಕೊಳ್ಳಬಹುದಾದರೂ, ಮಾಲೀಕನಿಗೆ ಮೇಲ್ಮನವಿ ಮಂಡಳಿಯನ್ನು ಪ್ರಾರ್ಥಿಸಿ, ತನ್ನ ವಿರುದ್ಧ ಕಲ್ಲಿದ್ದಲ ಗಣಿ ಇನ್‌ಸ್ಪೆಕ್ಟರ್ ಅವರು ಹೊರಡಿಸಿರುವ ಆಜ್ಞೆಗೆ ತಡೆಯಾಜ್ಞೆ ತರುವ ಅವಕಾಶವನ್ನು ಈ ಶಾಸನ ಕೊಡುವುದಿಲ್ಲ, ಎಂದು ತಿಳಿದು ಬಂದಿದೆ. ಇದೊಂದು ದುರದೃಷ್ಟಕರ ನಿಯಮ; ಅಪೀಲು ಮಾಡಿಕೊಳ್ಳಲು ಹಕ್ಕಿರಬೇಕು, ಆದರೆ ಮೂಲ ಆಜ್ಞೆಯ ಜಾರಿಗೆ ತಡೆಯಾಜ್ಞೆ ತರುವ ಅವಕಾಶವಿರಬಾರದು, ಎಂದು ಕೆಲವರು ಸೂಚಿಸಿದ್ದಾರೆ. ಈ ಶಾಸನದ ಉಪವಿಭಾಗ ೧೦ಕ್ಕೆ ಒಂದು ನಿಯಮವನ್ನು ಸೇರಿಸುವ ಮೂಲಕ, ಈ ದೋಷವನ್ನು ನಿವಾರಿಸಬಹುದು; ಮತ್ತು ಈಗಿನ ಮಸೂದೆಯ ಖಂಡ ೩ ಅದನ್ನು ನಿವಾರಿಸುತ್ತದೆ. ಶಾಸನದಲ್ಲಿ ಮಾಡಬೇಕಾಗಿರುವ ಮೂರನೆಯ ತಿದ್ದುಪಡಿಯು ಸುರಕ್ಷಾ ಮಂಡಳಿಗೆ ತಾನೇ ಸುರಂಗ ಭರಣಾ ಕೆಲಸ ಮಾಡುವ ಅಧಿಕಾರ ಇರಬೇಕೋ ಬೇಡವೋ ಎಂಬ ಪ್ರಶ್ನೆಗೆ ಸಂಬಂಧಿಸಿದುದು. ಸುರಕ್ಷತೆಗಾಗಿ ಸುರಂಗ ಮುಚ್ಚುವುದು ಒಂದು ಮುಖ್ಯ ಕಾರ್ಯ. ಅದರ ಉದ್ದೇಶ ಕಲ್ಲಿದ್ದಲು ಉರಿದು ಹಾಳಾಗುವುದಕ್ಕೆ ಬಿಡದೆ, ಅದನ್ನು ಸಂರಕ್ಷಿಸುವುದು. ಯಾರ ನಿಯಂತ್ರಣಕ್ಕೂ ಒಳಪಡದ, ಎಲ್ಲರೂ ಕೈಬಿಟ್ಟ ಕೆಲವು ಗಣಿಗಳಿರುವುದು ತಿಳಿದು ಬಂದಿದೆ. ಭೂಮಿಯ ಕೆಳಗಿರುವ ಕಲ್ಲಿದ್ದಲು ಆಗಲೇ ಸುಟ್ಟಿದೆ, ಎಂದು ತಿಳಿದುಕೊಂಡ ಅನೇಕರು ಆ ಗಣಿಗಳನ್ನು ತ್ಯಜಿಸುತ್ತಾರೆಂದೂ ತಿಳಿದು ಬಂದಿದೆ. ಗಣಿಗಳ ಸ್ವಾಮ್ಯವು ವಿವಾದಾಸ್ಪದವಾಗಿರುವ ಸಂದರ್ಭಗಳೂ, ಮಾಲೀಕರು ತಾವೇ ಸುರಂಗ ಭರಣಾ ಕಾರ್ಯಗಳನ್ನು ಮಾಡಲು ಅಶಕ್ತರಿರುವ ಸಂದರ್ಭಗಳೂ ಸಾಕಷ್ಟಿವೆ. ಅಂತಹ ಸಂದರ್ಭಗಳಲ್ಲಿ ನಾವು ಯಾರ ಮೇಲೂ ಸಂರಕ್ಷಣೆಯ ಹೊಣೆಗಾರಿಕೆಯನ್ನು ಹೇರಲಾರೆವು; ಯಾರ ವಿರುದ್ಧವೂ ನಾವು ಆಜ್ಞೆಯನ್ನು ಜಾರಿ ಮಾಡಲಾರೆವು; ಇಂತಹ ಸಂದರ್ಭಗಳನ್ನು ತಪ್ಪಿಸಲು ಮಂಡಳಿಯು ತಾನೇ ಸುರಂಗ ಮುಚ್ಚುವ ಕಾರ್ಯವನ್ನು ಮಾಡಲು ಸಾಧ್ಯವಾಗುವಂತೆ ಮಂಡಳಿಗೆ ಅಧಿಕಾರ ಕೊಡಬೇಕು, ಎಂದು ಭಾವಿಸಲಾಗಿದೆ. ಒಂದು ವೇಳೆ ಮಂಡಳಿಯು ಅಂಥ ಕಾರ್ಯವನ್ನು ಮಾಡಬೇಕಾಗಿ ಬಂದರೆ, ಅದಕ್ಕೆ ಗಣಿ ಮಾಲೀಕನ ಭೂಮಿಯನ್ನು ಪ್ರವೇಶಿಸುವ ಅಧಿಕಾರವನ್ನು ಕೊಡಬೇಕು. ಇದನ್ನು ಒಂದು ಹೊಸ ಕಲಮು – ೧೦ಎ ಕೊಡುತ್ತದೆ; ಅದು ಮಂಡಳಿಗೆ ಸಂರಕ್ಷಿಸುವ ಅಧಿಕಾರವನ್ನೂ ಮಾಲೀಕನ ಭೂಮಿಯನ್ನು ಪ್ರವೇಶಿಸುವ ಅಧಿಕಾರವನ್ನೂ ನೀಡುತ್ತದೆ.

ಈ ಮಸೂದೆಯು ಒಂದು ಸರಳ ಕ್ರಮವಾಗಿದೆ. ನಾನು ಈಗಾಗಲೇ ಕೊಟ್ಟಿರುವ ಸ್ಪಷ್ಟೀಕರಣಕ್ಕಿಂತ ಹೆಚ್ಚಿನದೇನೂ ಅಗತ್ಯವಿಲ್ಲ, ಎಂದು ಭಾವಿಸುತ್ತೇನೆ. ಇದೊಂದು ವಿವಾದಾಸ್ಪದವಲ್ಲದ ಕ್ರಮವಿದ್ದು, ಸದನವು ಅದಕ್ಕೆ ಒಪ್ಪಿಗೆ ನೀಡುತ್ತದೆ ಎಂದು ಆಶಿಸುತ್ತೇನೆ.

ಮಾನ್ಯರೇ, ಇಷ್ಟುಹೇಳಿ ನಾನು ಈ ಮಸೂದೆಯ ಮಂಡನೆಯನ್ನು ಮಾಡುತ್ತೇನೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನಾನು "ಈ ಮಸೂದೆಗೆ ಸದನದ ಒಪ್ಪಿಗೆಯನ್ನು ಕೋರಿ" ಎಂದು ಮಂಡಿಸುತ್ತೇನೆ.

ನನ್ನ ಸನ್ಮಾನ್ಯ ಮಿತ್ರರು ಎತ್ತಿರುವ ಕೆಲವು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ದೃಷ್ಟಿಕೋನ ಏನಿದೆ ಎಂಬುದನ್ನು ವಿವರಿಸಲು ನಾನು ಈ ಅವಕಾಶವನ್ನು ಬಳಸಿಕೊಳ್ಳಲಿಚ್ಛಿಸುತ್ತೇನೆ. ಸರ್ಕಾರವು ಸಾಕಷ್ಟು ಸಮಯಾವಕಾಶ ಕೊಡದೇ ಮಸೂದೆಗಳನ್ನು ಮಂಡಿಸುವ ಚಟಕ್ಕೆ ಬಿದ್ದಿದೆ ಎಂಬ ನನ್ನ ಮಿತ್ರ ಶ್ರೀ ಮಿಲ್ಲರ್ ಅವರ ಆಕ್ಷೇಪಣೆಗಳಿಗೆ ನಾನು ಇಷ್ಟನ್ನು ಹೇಳಬಯಸುತ್ತೇನೆ : ಈ ಮಸೂದೆಗಳ ವಿಷಯದಲ್ಲಿ ಸರ್ಕಾರವು ಯಾವ ನಿಷ್ಕೃಷ್ಟ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಿರ್ಬಂಧಿಸುವುದು ಕೇವಲ ಸದಸ್ಯನಾದ ನನಗೆ ಸಾಧ್ಯವಿಲ್ಲದಿರಬಹುದು. ಆದರೆ, ಸರ್ಕಾರದ ಪ್ರಸ್ತುತ ಕ್ರಮಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ, ಈ ಮಸೂದೆಯನ್ನು ಅವಸರದಿಂದ ಮಂಡಿಸಲಾಗುತ್ತಿದೆ ಎಂದು ಸರ್ಕಾರವನ್ನು ದೂಷಿಸಬಾರದು ಎಂದು ಹೇಳಬಯಸುತ್ತೇನೆ. ಈ ಮಸೂದೆಯು ಕಳೆದ ಕನಿಷ್ಠ ಆರು ತಿಂಗಳಿಂದ ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದನ್ನು ನಾನು ಸನ್ಮಾನ್ಯ ಸದಸ್ಯರಿಗೆ ನೆನಪಿಸ ಬಯಸುತ್ತೇನೆ. ಎರಡನೆಯದಾಗಿ–ಇದು ಮಹತ್ವದ ವಿಷಯ – ಈ ಮಸೂದೆಯು ಈಗ ಮಂಡಿಸಿರುವಂತೆ, ಸುರಕ್ಷಾ ಮಂಡಳಿಯಿಂದ ಸೂಚಿತವಾಗಿದೆ, ವಾಸ್ತವಿಕವಾಗಿ ಯೋಜಿಸಲ್ಪಟ್ಟಿದೆ–ಎಂಬುದನ್ನು ಸನ್ಮಾನ್ಯ ಸದಸ್ಯರು ನೆನಪಿನಲ್ಲಿಡಬೇಕೆಂದು ಬಯಸುತ್ತೇನೆ; ಅಲ್ಲದೆ, ಸುರಕ್ಷಾ ಮಂಡಳಿಯು, ಸನ್ಮಾನ್ಯ ಸದಸ್ಯರಿಗೆ ನೆನಪಿರುವಂತೆ, ಗಣಿ ಕೈಗಾರಿಕೆಗೆ ಸಂಬಂಧಿಸಿದ ಸಂಸ್ಥೆಗಳಲ್ಲೇ ಅತಿ ಹೆಚ್ಚು ಪ್ರತಿನಿಧಿಗಳನ್ನುಳ್ಳ ಸಂಸ್ಥೆ. ಆದ್ದರಿಂದ, ಈ ಮಸೂದೆಯನ್ನು ಅವಸರವಾಗಿ ಮಂಡಿಸಲಾಗಿದೆ ಎಂಬ ಕಾರಣದಿಂದ ನನ್ನನ್ನು ದೂಷಿಸುವುದು ಸರಿಯಲ್ಲವೆಂದು ನನಗನಿಸುತ್ತದೆ. ಈ ಕಾಯಿದೆ ಕ್ರಮವನ್ನು ಬೇರೆ ಕಾಯಿದೆಗಳಂತಲ್ಲದೆ ಕೇವಲ ತುರ್ತು ಪರಿಸ್ಥಿತಿಗಳಲ್ಲಿ ಮಾತ್ರ ಬಳಸಿ, ಅದನ್ನು ಜಾರಿಗೊಳಿಸಲಾಗುವುದು ಎಂಬುದು ಅವರ ಮತ್ತೊಂದು ಮಾತು. ನಾನು ಅವರಿಗೆ ಈ ವಿಷಯದಲ್ಲಿ ಭರವಸೆ ಕೊಡಲು ಸಿದ್ಧನಿದ್ದೇನೆ. ವಾಸ್ತವಿಕವಾಗಿ ನಾವು ಮಂಡಳಿಗೆ ಈಗ ಕೊಡುತ್ತಿರುವ ಅಧಿಕಾರವನ್ನು ತುರ್ತುಪರಿಸ್ಥಿತಿಯಲ್ಲಿ ಮಾತ್ರ ಕೊಡಬೇಕೆಂಬುದೇ ನಮ್ಮ ಉದ್ದೇಶ.

ನನ್ನ ಸನ್ಮಾನ್ಯ ಮಿತ್ರ ಡಾ॥ ಜಿಯಾವುದ್ದೀನ್ ಒಂದು ವಿಷಯವನ್ನೆತ್ತಿದ್ದಾರೆ. ಅವರು ಈಗ ಸಭೆಯಲ್ಲಿಲ್ಲ. ಅವರು ಸೂಚಿಸಿದುದು ನನಗೇನೂ ಬಹಳ ಮೆಚ್ಚಿಗೆಯಾಗಲಿಲ್ಲ. ನನಗೆ ತಿಳಿದಂತೆ ಕಲ್ಲಿದ್ದಲ ಗಣಿ ಸುರಕ್ಷಾ ಮಂಡಳಿಗೂ ಕಲ್ಲಿದ್ದಲ ಗಣಿ ಮಾಲೀಕರಿಗೂ ಯಾವ ಭಿನ್ನಾಭಿಪ್ರಾಯವಾಗಲಿ ವಾದವಿವಾದವಾಗಲಿ ಇಲ್ಲ. ಅಲ್ಲದೆ, ಈಗ ನಾವು ಕೈಗೊಳ್ಳಲಿರುವ ಮುನ್ನೆಚ್ಚರಿಕೆ ಕ್ರಮವು ಕಲ್ಲಿದ್ದಲ ಗಣಿ ಮಾಲೀಕರು ಮತ್ತು ಸುರಕ್ಷಾ ಮಂಡಳಿಗಳ ನಡುವೆ ಭಿನ್ನಾಭಿಪ್ರಾಯವನ್ನುಂಟು ಮಾಡುವುದಿಲ್ಲವೆಂದು ತಿಳಿದಿದ್ದೇನೆ. ಅವೆರಡೂ, ನನಗೆ ತಿಳಿದಿರುವಂತೆ, ಒಂದು ಸಂತೋಷದಿಂದ ಇರುವ ಒಂದು ಒಟ್ಟು– ಕುಟುಂಬದಂತಿದೆ. ಅಲ್ಲದೆ ಮಂಡಳಿಯು ತನ್ನ ಕಾರ್ಯನೀತಿಯ ಬಗೆಗೆ ಕೈಕೊಂಡ ತೀರ್ಮಾನವನ್ನು ಕಲ್ಲಿದ್ದಲ ಗಣಿ ಸಂಘದ ಯಾವೊಬ್ಬ ವಿಶಿಷ್ಟ

ಸದಸ್ಯನೂ ವಿರೋಧಿಸುವುದು ನನಗೆ ತಿಳಿದು ಬಂದಿಲ್ಲ.

ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಹುಸೇನ್‌ಭಾಯ್ ಲಾಲ್‌ಜಿ ಒಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ; ಅದನ್ನು ಪರಿಶೀಲಿಸುವುದು ಅನಗತ್ಯವೆಂದು ನನ್ನ ಅಭಿಪ್ರಾಯ. ಸರ್ಕಾರವು ಸುರಕ್ಷಾ ಕ್ರಮಗಳಿಗೆ ಹಣ ಖರ್ಚು ಮಾಡಿರುವುದರಿಂದ ಸರ್ಕಾರಕ್ಕೆ ಗಣಿಗಳ ಮೇಲಿರುವ ಹಕ್ಕಿನ ಬಗ್ಗೆ ಅವರು ಪ್ರಸ್ತಾಪಿಸಿದರು. ಖಂಡಿತ ಇದೊಂದು ಬಹಳ ಅಮೂಲ್ಯ ಸಲಹೆ, ಮತ್ತು ಮುಖ್ಯವಾದ ವಿಷಯ. ಈ ಬಗೆಗೆ ಸರ್ಕಾರದ ಧೋರಣೆಯೇನೆಂಬುದನ್ನು ಮುಂದೆ ತಿಳಿಸುತ್ತೇನೆ.

ಮಾನ್ಯರೇ, ಇದಕ್ಕಿಂತ ಹೆಚ್ಚು ಹೇಳುವುದು ಏನೂ ಇಲ್ಲ.

# ೨೮
# ಕಾರ್ಮಿಕರನ್ನು ಕುರಿತಂತೆ ಸರ್ಕಾರದ ನಿಲವು*

## (ಕೇಂದ್ರೀಯ ವಿಧಾನಸಭೆಯಲ್ಲಿ ಮಾಡಿದ ಭಾಷಣ)

"ಕಾರ್ಮಿಕರಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ನಿಲವಿನ ಬಗ್ಗೆ ಏನೆಲ್ಲ ಹೇಳಬಹುದಾದರೂ, ಭಾರತ ಸರ್ಕಾರವು ತಳೆದಿರುವ ಧೋರಣೆಗೆ ಒಂದು ಹೊಸ ನಿರ್ದೇಶನ ಸಿಕ್ಕಿದೆ ಎಂದು ಹೇಳುವುದಂತೂ ಸಮಂಜಸವೆಂಬುದು ನನ್ನ ಭಾವನೆ" ಎಂದು ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಹೇಳಿದರು. ಅವರು ಕೇಂದ್ರೀಯ ವಿಧಾನ ಸಭೆಯ ಚರ್ಚೆಯೊಂದರಲ್ಲಿ (೧೬ನೇ ಮಾರ್ಚ್) ಶ್ರೀಯುತ ಎನ್.ಎಂ. ಜೋಷಿಯವರು ಕಾರ್ಮಿಕರಿಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆ ತಳೆದಿರುವ ಧೋರಣೆಯ ಬಗೆಗೆ ಪ್ರಶ್ನಿಸಿದಾಗ, ಹೀಗೆಂದು ಉತ್ತರಿಸಿದರು. ಡಾ॥ ಅಂಬೇಡ್ಕರರು ಮುಂದುವರಿದು ಹೀಗೆ ಹೇಳಿದರು.

"ಶ್ರೀಯುತ ಜೋಷಿಯವರ ಮಾತು ವಿಸ್ತಾರವಾದ ವ್ಯಾಪ್ತಿಯುಳ್ಳದ್ದು. ಅವರು ಎಷ್ಟೊಂದು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆಂದರೆ, ಅವುಗಳಲ್ಲಿ ಪ್ರತಿಯೊಂದಕ್ಕೂ ವಿಶೇಷ ಗಮನ ಕೊಡುವುದಾಗಲಿ ಚರ್ಚಿಸುವುದಾಗಲಿ, ಕಾರ್ಮಿಕ ಸದಸ್ಯನಾಗಿ, ಉತ್ತರ ಕೊಡುವುದಕ್ಕಾಗಲಿ ನನಗೆ ಸಾಧ್ಯವಿಲ್ಲವೆನಿಸುತ್ತದೆ. ಕಾಲಾವಕಾಶದ ಕೊರತೆಯನ್ನು ಗಮನದಲ್ಲಿಟ್ಟುಕೊಂಡು, ಈ ಚರ್ಚೆಯ ಸಮಯದಲ್ಲಿ, ನನಗೆ ಅಗತ್ಯವೆಂದು ಕಂಡು ಬಂದ ವಿಷಯಗಳನ್ನಷ್ಟೇ ಆರಿಸಿಕೊಂಡು ಅದಕ್ಕೆ ಉತ್ತರ ಕೊಡಬೇಕಾಗಿ ಬಂದಿದೆ."

### ಕಾರ್ಮಿಕರ ಪರಿಸ್ಥಿತಿ

ಮಾನ್ಯರೇ, ಪ್ರಪಂಚದ ಇತರ ದೇಶಗಳ ಕಾರ್ಮಿಕರ ಪರಿಸ್ಥಿತಿಗಳಿಗೆ ಹೋಲಿಸಿದರೆ ಭಾರತದ ಕಾರ್ಮಿಕರ ಪರಿಸ್ಥಿತಿಗಳು ಬಹಳ ಅತೃಪ್ತಿಕರವಾಗಿದೆ ಎಂಬ ಸಾಮಾನ್ಯ ಹೇಳಿಕೆಯೊಂದಿಗೆ ಮಾನ್ಯ ಜೋಷಿಯವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ನಾನು ಈ ಹೇಳಿಕೆಯನ್ನು ಒಪ್ಪುವುದಿಲ್ಲ ಎಂದು ಹೇಳುವುದು ಸರಿಯಲ್ಲ. ನಿಸ್ಸಂದೇಹವಾಗಿಯೂ ಇದು ವಸ್ತುಸ್ಥಿತಿ. ಆದರೆ ನಾನು ಹೇಳುವುದಿಷ್ಟೇ. ಪರಿಸ್ಥಿತಿ

---

* ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್ ೧೫, ೧೯೪೪, ಪು. ೪೧೦–೧೩ (ಅಥವಾ ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೨, ೧೬–೩–೧೯೪೪, ಪು. ೧೧೮೭–೯೧)

ಶ್ರೀ ಜೋಷಿಯವರು ಹೇಳಿದಷ್ಟು ಅತೃಪ್ತಿಕರವಾಗಿದ್ದರೆ, ಅದಕ್ಕೆ ಭಾರತ ಸರ್ಕಾರ ಹೊಣೆಯಲ್ಲ.

ಮಾನ್ಯರೇ, ಭಾರತದ ಕಾರ್ಮಿಕರ ಪರಿಸ್ಥಿತಿಗಳು ಹೆಚ್ಚಾಗಿ ಈ ದೇಶದ ಕೈಗಾರಿಕಾ ಅಭಿವೃದ್ಧಿಯಿಂದ ಪ್ರಭಾವಿತಗೊಂಡಿವೆ. ಈ ಅಭಿವೃದ್ಧಿಯ ಮೇಲೆ ಸರ್ಕಾರಕ್ಕೆ ಯಾವ ನಿಯಂತ್ರಣವೂ ಇಲ್ಲ. ಆದ್ದರಿಂದ, ಸ್ಥಿತಿಗತಿಗಳು ನಿಜವಾಗಿಯೂ ಅತೃಪ್ತಿಕರವಾಗಿದ್ದರೆ, ಭಾರತ ಸರ್ಕಾರವನ್ನು ನಿಂದಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಈ ವಿಚಾರವಾಗಿ ಭಾರತ ಸರ್ಕಾರದ ನಡವಳಿಕೆಯನ್ನು ಪರೀಕ್ಷಿಸಿದಾಗ, ಸರ್ಕಾರವೇ ಅಲಕ್ಷ್ಯ ಮತ್ತು ನಿಷ್ಕ್ರಿಯತೆಯ ಅಪರಾಧವೆಸಗಿದೆ ಎಂದು ಕಂಡು ಬಂದಿದೆ, ಎಂದು ಶ್ರೀ ಜೋಷಿ ಹೇಳಿದರು. ಸರ್ಕಾರವು ಅಂಜುಬುರುಕ, ಎಂದೂ, ಅದು ಮಾಡಿರುವುದೆಲ್ಲಾ ಅಪೂರ್ಣವೆಂದೂ ಅವರು ಹೇಳಿದರು. ಆದರೆ ಶ್ರೀ ಜೋಷಿಯವರು ಈ ತೀರ್ಪನ್ನು ಕೊಡುವಾಗ ಅವರು ಅವಶ್ಯಕವಾಗಿ ಗುರುತಿಸಬೇಕಾಗಿದ್ದ ಒಂದು ವ್ಯತ್ಯಾಸವನ್ನು ಗುರುತಿಸಿಲ್ಲ ಎಂದು ನನಗನಿಸುತ್ತದೆ.

ಕಾರ್ಮಿಕ ಸಮಸ್ಯೆಗಳಿರುವುದಂತೂ ನಿರ್ವಿವಾದ. ಕೆಲವು ಕಾರ್ಮಿಕ ಸಮಸ್ಯೆಗಳು ಯಾವ ಆರ್ಥಿಕ ಪರಿಣಾಮವನ್ನೂ ಉಂಟು ಮಾಡುವುದಿಲ್ಲ. ಸಂಬಂಧಪಟ್ಟ ಪಕ್ಷಗಳ ನಡುವೆ ವಾದವಿವಾದಕ್ಕೆ ಎಡೆಮಾಡಿಕೊಡದ ಅಥವಾ ಯಾವ ಆರ್ಥಿಕ ಪ್ರಶ್ನೆಗಳನ್ನೂ ಎತ್ತದ, ಯಾವುದಾದರೂ ಸಮಸ್ಯೆ ಇದ್ದು, ಅದರ ಮೇಲೆ ಭಾರತ ಸರ್ಕಾರವು, ಅಗತ್ಯವಾದಷ್ಟು ಶೀಘ್ರಗತಿಯಲ್ಲಿ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೇ? ಶ್ರೀ ಜೋಷಿಯವರು ಇದಕ್ಕೆ ಕೊಡುವ ಉತ್ತರವನ್ನು ನಾನು ತಿಳಿದುಕೊಳ್ಳಬಯಸುತ್ತೇನೆ. ಸಂಪೂರ್ಣ ಐಕಮತ್ಯ ಅಥವಾ ಹೆಚ್ಚು ಕಡಿಮೆ ಐಕಮತ್ಯ ಇದ್ದಾಗಲೆಲ್ಲಾ, ಮತ್ತು ಯಾವ ಆರ್ಥಿಕ ಹೊರೆಯೂ ಇಲ್ಲದಾಗಲೆಲ್ಲಾ, ಭಾರತ ಸರ್ಕಾರವು ನಿರೀಕ್ಷಿಸಿದಷ್ಟು ಶೀಘ್ರವಾಗಿಯೇ ಕ್ರಮ ಕೈಗೊಂಡಿದೆ.

**ನವಾಬ್‌ಜಾದಾ ಮೊಹಮ್ಮದ್ ಲಿಯಾಖತ್ ಆಲಿ ಖಾನ್ :** ಅಂತಹ ಪ್ರಸಂಗಗಳಲ್ಲಿ ಯಾವ ಕ್ರಮದ ಅಗತ್ಯವೂ ಇರಲಿಲ್ಲ.

**ಗೌರವಾನ್ವಿತ ಡಾ॥ ಅಂಬೇಡ್ಕರ್ :** ಹೆಚ್ಚು ಕ್ರಮಗಳ ಆವಶ್ಯಕತೆ ಇತ್ತು.

## ಯುದ್ಧಕಾಲದ ಸಿದ್ಧತೆಗಳು

ಯುದ್ಧಕಾಲದಲ್ಲಿ ಕಾರ್ಮಿಕರ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿದ್ದವು. ಸರ್ಕಾರವು ಗಿರಣಿ ಶಾಸನಕ್ಕೆ, ಕೆಲಸದ ವೇಳೆಗೆ ಸಂಬಂಧಿಸಿದಂತೆ, ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದುದು, ಹದಿನೈದು ದಿನ ಕಾಲಾವಕಾಶ ಕೊಟ್ಟು ಮುಷ್ಕರ ಹೂಡಲು ಕಾರ್ಮಿಕರಿಗಿದ್ದ ಹಕ್ಕನ್ನು ಮೊಟಕುಗೊಳಿಸಿದ್ದುದು ಇದಕ್ಕೆ ಕಾರಣ, ಎಂದು ಶ್ರೀ ಜೋಷಿ ಹೇಳಿದರು. ಅಲ್ಲದೆ ಅವರು ಸರ್ಕಾರವು ರಾಷ್ಟ್ರೀಯ ಕಾರ್ಮಿಕ ಸೇವಾ ಅಧ್ಯಾದೇಶ (ನ್ಯಾಷನಲ್ ಲೇಬರ್ ಸರ್ವೀಸ್ ಆರ್ಡಿನೆನ್ಸ್) ಹಾಗೂ ತಾಂತ್ರಿಕ ಸಿಬ್ಬಂದಿ ಅಧ್ಯಾದೇಶವನ್ನು ಹೊರಡಿಸಿ, ಸಿಬ್ಬಂದಿಗಳಿಗೆ ಮನಸ್ಸಿಲ್ಲದಿದ್ದರೂ ಅವರು ತಮ್ಮ ಉದ್ಯೋಗಕ್ಕೇ ಅಂಟಿಕೊಳ್ಳುವಂತೆ ಒತ್ತಾಯ ಮಾಡಿದುದನ್ನೂ ಪ್ರಸ್ತಾಪಿಸಿದರು. ಯುದ್ಧ ಸಮಯದಲ್ಲಿ ಇಂಥ ಕೊರತೆಗಳು ಸಮರ್ಥನೀಯ ಎಂಬುದನ್ನು ಒಪ್ಪಿಕೊಳ್ಳುವಂಥ ನ್ಯಾಯಪರತೆ ಶ್ರೀ ಜೋಷಿಯವರಿಗೆ ಇದೆ ಎಂದು ನನಗೆ ಸಂತೋಷವಾಗಿದೆ. ಯುದ್ಧ ಸಮಯದಲ್ಲಿ ತೆಗೆದುಕೊಂಡ ಇಂಥ ಕ್ರಮಗಳ ವಿರುದ್ಧದ ದೂರುಗಳು ನನ್ನ ಗಮನಕ್ಕೆ ಬಂದಾಗಲೆಲ್ಲಾ ವಿಪತ್ತನ್ನು ನಿವಾರಿಸಲು ಶೀಘ್ರ ಕ್ರಮಗಳನ್ನು ಕೈಗೊಂಡಿದ್ದೇನೆ ಎಂದು ನನ್ನ ಮಟ್ಟಿಗೆ ಹೇಳಬಲ್ಲೆ. ಇದಕ್ಕೆ ಒಂದೇ ಒಂದು ನಿದರ್ಶನವನ್ನು ಕೊಡುತ್ತೇನೆ. ಅಧ್ಯಾದೇಶವು ಕಾರ್ಮಿಕನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಕೊಟ್ಟಿರುವುದು ಕಾರ್ಮಿಕನನ್ನು ಪೀಡಿಸಲು ಅವಕಾಶ ಕೊಟ್ಟಂತೆ ಎಂದು ಶ್ರೀ ಜೋಷಿ

ಹೇಳಿದುದು ನನಗೆ ನೆನಪಿದೆ. ಈ ಮಾತನ್ನು ನಾನು ಒಪ್ಪಿದೆ; ಅಲ್ಲದೆ, ಅಧ್ಯಾದೇಶದಲ್ಲಿ ತಿದ್ದುಪಡಿ ಮಾಡುವ ಮೂಲಕ, ಆ ಅಧಿಕಾರವನ್ನು ಮಾಲೀಕನಿಂದ ಕಿತ್ತುಕೊಂಡು, ಅದನ್ನು ಸರ್ಕಾರಿ ಅಧಿಕಾರಿಗಳಿಗೆ ಕೊಟ್ಟಿದೆ.

ಮಾನ್ಯರೇ, ನಾನು ಈ ಮೊದಲೇ ಹೇಳಿದಂತೆ, ಈ ವಿಷಯಗಳನ್ನು ಸವಿಸ್ತಾರವಾಗಿ ಪ್ರಸ್ತಾಪಿಸಲಾರೆ, ಆದರೆ ಈ ಎಲ್ಲ ವಿಷಯಗಳನ್ನು ಸಾರಾಂಶದ ರೂಪದಲ್ಲಿ ಹೀಗೆ ಹೇಳಬಲ್ಲೆ: ಕಾರ್ಮಿಕನ ಸ್ವಾತಂತ್ರ್ಯವನ್ನು ನಿಸ್ಸಂದೇಹವಾಗಿ ಮೊಟಕುಗೊಳಿಸುವಂಥ ಭಾರತ ಸರ್ಕಾರದ ಯುದ್ಧಕಾಲದ ಶಾಸನವನ್ನು ಪರೀಕ್ಷಿಸಿದಾಗ, ಎರಡು ತತ್ವಗಳು ಅದರಿಂದ ವ್ಯಕ್ತವಾಗುತ್ತವೆ. ಅದರಲ್ಲಿ ಮೊದಲನೆಯದಿದು : ಕಾರ್ಮಿಕನ ನೇಮಕಾತಿಗೆ ಸಂಬಂಧಿಸಿದ ನಿಯಮಗಳನ್ನು ನಿರ್ಧರಿಸುವುದರ ಹೊಣೆಯನ್ನು ಭಾರತ ಸರ್ಕಾರವು ಮೊಟ್ಟಮೊದಲ ಬಾರಿಗೆ ಹೊತ್ತುಕೊಂಡಿದೆ ಮತ್ತು ಇಂಥ ಹೊಣೆಯನ್ನು ಅದು ಈ ಮೊದಲು ಹೊತ್ತಿರಲಿಲ್ಲ. ನನ್ನ ಪ್ರಕಾರ, ಇದೊಂದು ಸಂಪೂರ್ಣವಾದ ಹೊಸ ತತ್ವವಾಗಿದ್ದು, ಅದಕ್ಕೆ ಕಾರ್ಮಿಕ ಶಾಸನದಲ್ಲಿ ಇದುವರೆಗೂ ಸ್ಥಾನವಿರಲಿಲ್ಲ; ಯುದ್ಧಕಾಲದ ಶಾಸನದಲ್ಲಿ ಸ್ಥಾನ ಪಡೆದಿರುವ ಈ ತತ್ವಕ್ಕೆ ಈ ದೇಶದ ಕಾರ್ಮಿಕ ಶಾಸನದಲ್ಲಿ ಒಂದು ಶಾಶ್ವತ ಸ್ಥಾನವನ್ನು ಕೊಡಲಾಗುವುದು ಎಂಬುದು ನನಗೆ ಖಚಿತವಾಗಿದೆ.

ಈ ಯುದ್ಧ ಸಮಯದ ಕಾರ್ಮಿಕ ಶಾಸನದಲ್ಲಿ ಅಡಕವಾಗಿರುವ ಎರಡನೆಯ ಮುಖ್ಯ ತತ್ವವೆಂದರೆ ಕಡ್ಡಾಯವಾಗಿ ಮಧ್ಯಸ್ಥರಿಂದ ವ್ಯಾಜ್ಯ–ತೀರ್ಮಾನದ ತತ್ವ. ಮಾನ್ಯರೇ, ನನಗೆ ಕಾರ್ಮಿಕರ ಬಗೆಗೆ ಸ್ವಲ್ಪ ವೈಯ್ಯಕ್ತಿಕ ಅನುಭವವಿದೆ ಎಂದು ಹೇಳಲು ನನ್ನ ಮಿತ್ರರಾದ ಶ್ರೀ ಜೋಷಿಯವರೂ, ಶ್ರೀ ಜಮ್ನಾದಾಸ್ ಮೆಹ್ತಾರವರೂ ಅಪ್ಪಣೆ ಕೊಡುತ್ತಾರೆಂದು ಭಾವಿಸುತ್ತೇನೆ. ತಮ್ಮ ಮಾಲೀಕರಿಂದ ಕೆಲವು ವಿಶಿಷ್ಟ ಲಾಭಗಳನ್ನು ಪಡೆಯಲೋಸ್ಕರ, ಕಾರ್ಮಿಕರು ಮುಷ್ಕರ ಹೂಡುವ ವ್ಯರ್ಥ ಪ್ರಯತ್ನ ಮಾಡಿದ್ದಾರೆಂಬುದು ನನಗೆ ಗೊತ್ತಿದೆ, ಮತ್ತು ನಾನದನ್ನು ನೋಡಿದ್ದೇನೆ. ದೀರ್ಘಕಾಲದ, ಪ್ರಯಾಸರಕವಾದ, ಯಾತನಾದಾಯಕ, ವ್ಯರ್ಥ ಹೋರಾಟವನ್ನು ತಿಂಗಳುಗಟ್ಟಲೆ ಮಾಡಿದ ಕಾರ್ಮಿಕರು ಕೊನೆಯಲ್ಲಿ ತಮ್ಮ ಮಾಲೀಕರಿಗೆ ಶರಣಾಗಿ, ಹಳೆ ನಿಯಮಗಳಿಗನುಸಾರವಾಗಿ ಅಥವಾ ಅವಕ್ಕಿಂತ ಕೀಳಾದ ನಿಯಮಗಳಿಗನುಸಾರವಾಗಿ, ಕೆಲಸ ಮಾಡಲು ಹಿಂದಿರುಗುತ್ತಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದು ಭಾವಿಸುತ್ತೇನೆ.

ಆದರೆ, ಮಾನ್ಯರೇ, ಭಾರತ ಸಂರಕ್ಷಣಾ ನಿಯಮಗಳ ೮೧ನೇ ನಿಯಮವು ಸರ್ಕಾರಕ್ಕೆ ವ್ಯಾಜ್ಯವನ್ನು ಮಧ್ಯಸ್ಥರ ಮೂಲಕ ಬಗೆಹರಿಸಿಕೊಳ್ಳಬೇಕೆಂದು ಮಾಲೀಕರನ್ನು ಒತ್ತಾಯಿಸುವ ಅಧಿಕಾರವನ್ನು ಕೊಡುತ್ತದೆ; ಅಲ್ಲದೆ, ಅದು, ನನಗೆ ತಿಳಿದಂತೆ ಕಾರ್ಮಿಕರಿಗೆ ಬಹು ದೊಡ್ಡ ಲಾಭದಾಯಕ ವಿಷಯವಾಗಿದೆ.

ನನಗೆ ತಿಳಿದಂತೆ ಈ ಅಧಿಕಾರವು ಜಾರಿಗೆ ಬಂದರೂ, ಕಾರ್ಮಿಕರು ಯಾವುದಕ್ಕಾಗಿ ಹೋರಾಡುತ್ತಿದ್ದರೋ ಅದು ಸಿಕ್ಕದ ಸಂದರ್ಭಗಳು ಅಪರೂಪ. ನನಗೆ ತಿಳಿದಂತೆ, ಕಾರ್ಮಿಕರಿಗೆ ಜಯವನ್ನು ತಂದುಕೊಡದ ಮುಷ್ಕರಗಳು ತೀರಾ ಕಡಿಮೆ. ನಿಯಮ ೮೧ರಲ್ಲಿ ನಿಯಮಕ್ಕೆ ಸಂಬಂಧಿಸಿದಂತೆ ಶ್ರೀ ಜೋಷಿಯವರು ಕೊಟ್ಟಿರುವ ದೂರೆಂದರೆ, ನಾವು ಈ ನಿಯಮವನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರಯೋಗಿಸಿಲ್ಲ ಎಂಬುದು. ಎಲ್ಲಿ ಕಾರ್ಮಿಕರೇ ವಿವಾದವನ್ನೆಬ್ಬಿಸುತ್ತಾರೋ ಅಲ್ಲಿ ಸರ್ಕಾರಕ್ಕೆ ಈ ನಿಯಮವನ್ನು ಅನ್ವಯಿಸಲು ಮನಸ್ಸಿರುವುದಿಲ್ಲ ಎಂಬುದು ಶ್ರೀ ಜೋಷಿಯವರ ವಾದ, ಎಂಬುದು ನನಗೆ ಕಂಡುಬಂದಿದೆ.

ಮಾನ್ಯರೇ, ಈ ವಿಷಯಕ್ಕೆ ನನ್ನ ಸಹಾನುಭೂತಿ ಇದೆ. ಆದರೆ ಮಾನ್ಯ ಜೋಷಿಯವರ ವಾದವನ್ನು ಒಪ್ಪಲಾಗದೆಂಬುದು ಸರ್ವವಿದಿತ. ತನ್ನ ಕುಂದುಕೊರತೆಗಳನ್ನು ನಿವಾರಿಸಿಲ್ಲ ಎಂಬ ಕಾರಣದಿಂದ ಮುಷ್ಕರ ಹೂಡುವ ಉದ್ದೇಶವನ್ನು ಕಾರ್ಮಿಕ ಸಂಘವು ಘೋಷಿಸಿದ ತಕ್ಷಣ ಈ ನಿಯಮವನ್ನು ಅನ್ವಯಿಸಬೇಕು ಎಂಬ ಶ್ರೀ ಜೋಷಿಯವರ ನಿಲುವು ಕೆಲವು ಷರತ್ತುಗಳ ಮೇಲೂ ನಮಗೆ

ಒಪ್ಪಿಗೆಯಾಗುವುದಿಲ್ಲ.

**ಒಬ್ಬ ಸನ್ಮಾನ್ಯ ಸದಸ್ಯರು :** ಈ ನಿಯಮವು ಬೇರೆ ದೇಶಗಳಲ್ಲಿ ಮಾನ್ಯವಾಗಿದ್ದು, ಭಾರತದಲ್ಲೇಕೆ ತಿರಸ್ಕೃತವಾಗಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೇರೆ ದೇಶಗಳಲ್ಲಿ ಕಡ್ಡಾಯಪೂರ್ವಕ ಮಧ್ಯಸ್ಥರ ಮೂಲಕ ವ್ಯಾಜ್ಯ ನಿರ್ಣಯದ ಪದ್ಧತಿಯಿಲ್ಲ, ಎಂದು ನನ್ನ ಸನ್ಮಾನ್ಯ ಮಿತ್ರರಿಗೆ ತಿಳಿಸಬಯಸುತ್ತೇನೆ.

ಈ ವಿಷಯದ ಬಗ್ಗೆ ನಾನು ಮೊದಲೇ ಹೇಳಿದಂತೆ, ಕಾರ್ಮಿಕ ಸಂಘವು ಮಾಲೀಕನಿಗೆ ನೋಟೀಸು ಕೊಟ್ಟ ತಕ್ಷಣ ಅಥವಾ ಮುಷ್ಕರ ಹೂಡುವುದಾಗಿ ಬೆದರಿಕೆ ಹಾಕಿದಾಕ್ಷಣ ನಾವು ನಿಯಮ ೮೧ನ್ನು ಅನ್ವಯಿಸಲು ಸಿದ್ಧರಾಗಬೇಕು ಎಂಬ ತತ್ವವನ್ನು ನಾವು ಒಪ್ಪಲಾಗುವುದಿಲ್ಲ. ಕಾರ್ಮಿಕರ ಬೇಡಿಕೆಗಳು ನ್ಯಾಯಸಮ್ಮತವೇ, ಅಲ್ಲವೆ ಎಂಬುದನ್ನು ಪರೀಕ್ಷಿಸುವ ಅವಕಾಶ ಮತ್ತು ಹೊಣೆಗಾರಿಕೆ ನಮಗಿರಬೇಕು. ಅಲ್ಲದಿದ್ದರೆ, ಮುಷ್ಕರವು ದೈನಂದಿನ ಕೆಲಸವಾಗುತ್ತದೆ. ಆಗ ಅದಕ್ಕೆ ಖಂಡಿತವಾಗಿಯೂ ಸದನದಲ್ಲಿರುವ ಯಾರೂ ಗಮನ ಕೊಡುವುದಿಲ್ಲ.

ಮಾನ್ಯ ಶ್ರೀ ಜೋಷಿಯವರು ಪ್ರಸ್ತಾಪಿಸಿದ ಮತ್ತೊಂದು ವಿಷಯವು ಕಾರ್ಮಿಕ ಸಮಸ್ಯೆಗಳೊಡನೆ ವ್ಯವಹರಿಸಲು ಕಾರ್ಮಿಕ ಇಲಾಖೆ ತೋರಿಸಿದ ಅಸಮರ್ಥತೆ. ಕಾರ್ಮಿಕರ ಸಮಸ್ಯೆಗಳೊಡನೆ ವ್ಯವಹರಿಸಲೆಂದೇ ಒಂದು ಪ್ರತ್ಯೇಕ ಕಾರ್ಮಿಕ ಮಂತ್ರಿಗಳ ಇಲಾಖೆ ಇರಬೇಕು ಮತ್ತು ವೃದ್ಧಾಪ್ಯದ ಪಿಂಚಣಿಯ ಬಗೆಗೆ ವರದಿ ಮಾಡಲು ಒಬ್ಬರು, ಅನಾರೋಗ್ಯದ ವಿಮೆಯ ಬಗೆಗೆ ವರದಿ ಮಾಡಲು ಮತ್ತೊಬ್ಬರು, ಇತರ ಅತಿ ಜರೂರು ಸಮಸ್ಯೆಯ ಬಗೆಗೆ ವರದಿ ಮಾಡಲು ಮೂರನೆಯವರು – ಹೀಗೆ ಕೆಲವು ಅಧಿಕಾರಿಗಳನ್ನು ನೇಮಕ ಮಾಡಬೇಕು, ಎಂದು ಅವರು ವಾದಿಸಿದರು. ಮಾನ್ಯರೇ, ಶ್ರೀ ಜೋಷಿಯವರು ಹೇಳಿದುದನ್ನು ನಿರಾಕರಿಸುವುದು ನನ್ನ ಕೆಲಸವಲ್ಲ; ವಾಸ್ತವವಾಗಿ, ಅವರು ಹೇಳಿದುದಕ್ಕೆ ನನ್ನ ಪೂರ್ಣ ಒಪ್ಪಿಗೆಯಿದೆ.

**ಕಾರ್ಮಿಕ ಇಲಾಖೆಯ ವಿಸ್ತರಣೆ**

ಈ ವಿಷಯವಾಗಿ ನಾನು ಹೇಳುವುದಿಷ್ಟೆ : ನಾವು ಯಾವ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ ಮತ್ತು ಆಡಳಿತ ನಡೆಸುತ್ತಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಕಾರ್ಮಿಕ ಇಲಾಖೆಯು, ಈಗ ರಚಿತವಾಗಿರುವಂತೆ, ಕಾರ್ಮಿಕರ ಸಮಸ್ಯೆಗಳನ್ನು ಎದುರಿಸಲು ಸಮರ್ಥವಿಲ್ಲ ಎಂದು ಹೇಳಬಾರದು. ಮಾನ್ಯರೇ, ಕಾರ್ಮಿಕ ಇಲಾಖೆಯು ಯಾವೊಂದು ಇಲಾಖೆಗೆ ಸೇರಿದ ಮುಖ್ಯವಲ್ಲದ ಭಾಗವಲ್ಲ ಎಂಬುದನ್ನು ಗಮನಿಸಬೇಕು. ಒಂದು ಕಾಲದಲ್ಲಿ ಅದು ವಾಣಿಜ್ಯ ಇಲಾಖೆಯ, ಮತ್ತೊಂದು ಕಾಲದಲ್ಲಿ ಕೈಗಾರಿಕೆ ಇಲಾಖೆಯ ಭಾಗವಾಗಿತ್ತು. ಆದರೆ ಈಗ ಹಾಗಿಲ್ಲ. ಅದೊಂದು ಪ್ರತ್ಯೇಕ ಹಾಗೂ ಸ್ವತಂತ್ರ ಇಲಾಖೆಯಾಗಿದೆ. ಆದರೆ ಅದೊಂದು ಸಂಪೂರ್ಣವಾದ ಇಲಾಖೆಯಲ್ಲ ಎಂಬುದೂ ಸತ್ಯ. ಅಷ್ಟು ಮಾತ್ರಕ್ಕೆ, ಅದೊಂದು ಸ್ವತಂತ್ರವೂ ಬಹಳ ಮುಖ್ಯವೂ ಆದ ಇಲಾಖೆಗಳಲ್ಲಿ ಒಂದು, ಅಂಥವುಗಳನ್ನು ಮಾನ್ಯ ಸದಸ್ಯರು ನಿಯಂತ್ರಿಸುತ್ತಾರೆ ಎಂದು ಯಾರೂ ವಾದಿಸಬಾರದು.

ಇಷ್ಟೂ ಅಲ್ಲದೆ, ನಾವು ಇತ್ತೀಚೆಗೆ ಇಲಾಖೆಯನ್ನು ಗಣನೀಯವಾಗಿ ವಿಸ್ತರಿಸಿದ್ದೇವೆ. ೧೯೪೨ಕ್ಕೆ ಮೊದಲು ಕಾರ್ಮಿಕ ಸಮಸ್ಯೆಗಳೊಂದಿಗೆ ವ್ಯವಹರಿಸಲು ಕಾರ್ಮಿಕ ಇಲಾಖೆಯಲ್ಲಿ ಕೇವಲ ಒಬ್ಬರೇ ಉಪಕಾರ್ಯದರ್ಶಿ ಇದ್ದರು. ಆದರೆ ಈಗ ಅಲ್ಲಿ ಒಬ್ಬರು ಸಹಾಯಕ ಕಾರ್ಯದರ್ಶಿ ಮತ್ತು ಇಬ್ಬರು ಉಪಕಾರ್ಯದರ್ಶಿಗಳಿದ್ದಾರೆ. ಅಲ್ಲದೆ, ಅಲ್ಲಿ ಒಬ್ಬರು ಕಾರ್ಮಿಕ ಸಲಹಾಕಾರರೂ, ಕಾರ್ಮಿಕ ಕಲ್ಯಾಣ

ಸಲಹಾಕಾರರೂ (ಶ್ರೀ ನಿಂಬ್ಕರ್), ಎಂಟು ಸಹಾಯಕ ಕಾರ್ಮಿಕ ಕಲ್ಯಾಣ ಸಲಹಾಕಾರರೂ ಇದ್ದಾರೆ. ಕಾರ್ಮಿಕರಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಲೋಸ್ಕರ ನಮ್ಮಲ್ಲಿ ಒಬ್ಬ ಅಂಕಿಅಂಶತಜ್ಞರೂ ನೇಮಕಗೊಂಡಿದ್ದಾರೆ. ಇಷ್ಟೂ ಅಲ್ಲದೆ, ನಮ್ಮಲ್ಲಿ ಬಹಳ ದೊಡ್ಡ ಸಿಬ್ಬಂದಿ ವರ್ಗ – ವಾಸ್ತವವಾಗಿ, ಗಣನೀಯವಾಗಿ ದೊಡ್ಡ ಸಿಬ್ಬಂದಿ ವರ್ಗ – ಇದ್ದು, ಅದು ತಾಂತ್ರಿಕ ಪ್ರಶಿಕ್ಷಣವನ್ನು ಕೊಡುತ್ತದೆ. ಇದು ಖಂಡಿತವಾಗಿ ಎಲ್ಲ ಕಾರ್ಮಿಕರಿಗೆ ಬಹು ಲಾಭದಾಯಕ ಎಂದು ನಂಬುತ್ತೇನೆ.

**ಒಬ್ಬ ಸನ್ಮಾನ್ಯ ಸದಸ್ಯರು :** ಇದರಿಂದ ಒಂದು ವಿಚಕ್ಷಣಾ ಸಮಿತಿಯ ಆವಶ್ಯಕತೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ವಿಶೇಷ ಅಧಿಕಾರಿಗಳ ನೇಮಕಾತಿಯ ಸಮಸ್ಯೆಯು ಕಾರ್ಮಿಕ ಇಲಾಖೆಗೆ ಗೊತ್ತಿಲ್ಲದ ವಿಷಯವೇನಲ್ಲ. ವಾಸ್ತವವಾಗಿ, ಆನಾರೋಗ್ಯ ವಿಮೆಯನ್ನು ವರದಿ ಮಾಡಲು ಒಬ್ಬ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವ ಮೂಲಕ ನಾವು ಈ ದಿಸೆಯಲ್ಲಿ ಆಗಲೇ ಹೆಜ್ಜೆ ಇಟ್ಟಿದ್ದೇವೆ. ಪ್ರೊಫೆಸರ್ ಅಡರ್‌ಕರ್ ಅವರೇ ಈ ವಿಶೇಷಾಧಿಕಾರಿ. ಅಂಥ ಸಮಸ್ಯೆಗಳೊಡನೆ ವ್ಯವಹರಿಸಲು, ಅಂಥ ವಿಶೇಷಾಧಿಕಾರಿಗಳನ್ನು ನೇಮಕ ಮಾಡುತ್ತಾ ಹೋಗುವುದು ನಮ್ಮ ಇಚ್ಛೆ ಮತ್ತು ನಮ್ಮ ಸಲಹೆ. ಆ ಸಮಸ್ಯೆಗಳ ಬಗ್ಗೆ ವರದಿ ಮಾಡಲು, ಹಾಗೂ ಈ ಸಲಹೆಯನ್ನು ಶಾಸನವನ್ನಾಗಿ ಮಾಡಲು ಸಹಾಯಕವಾಗುವ ಮಾರ್ಗೋಪಾಯಗಳನ್ನು ಸೂಚಿಸುವುದೂ ಈ ವಿಶೇಷಾಧಿಕಾರಿಗಳ ಕರ್ತವ್ಯ.

ಆದರೆ ಆದದ್ದೇ ಬೇರೆ. ಕಳೆದ ಆಗಸ್ಟಿನಲ್ಲಿ ನಡೆದ ತ್ರಿಪಕ್ಷ ಸಮ್ಮೇಳನದ ಸಭೆ ಸೇರಿದಾಗ, ಪರಿಶೀಲನೆಗಾಗಿ ನಾವು ಈ ವರದಿಯನ್ನು ಸಭೆಯ ಮುಂದಿಟ್ಟೆವು. ಆಗ, ಸಮಾಜಕಲ್ಯಾಣದ ಮಾರ್ಗೋಪಾಯಗಳನ್ನು ಪರಿಶೀಲಿಸಲು ಭಾರತ ಸರ್ಕಾರವು ಒಂದು ಸಮಿತಿಯನ್ನು ನೇಮಿಸಬೇಕೆಂದೂ, ಸಾಮಾಜಿಕ ಭದ್ರತಾ ನಿಯಮವನ್ನು ಭಾರತದ ಕಾರ್ಮಿಕ ವರ್ಗಕ್ಕೆ ಅನ್ವಯಿಸುವ ಮಾರ್ಗೋಪಾಯಗಳನ್ನು ಸೂಚಿಸಲು ಸರ್ಕಾರವು ಮತ್ತೊಂದು ಸಮಿತಿಯನ್ನು ನೇಮಿಸಬೇಕೆಂದೂ ನಮ್ಮ ಸಮಿತಿ ಮತ್ತು ತ್ರಿಪಕ್ಷೀಯ ಸಮ್ಮೇಳನ ಸರ್ವಾನುಮತದಿಂದ ಒಂದು ನಿರ್ಣಯವನ್ನು ಅಂಗೀಕರಿಸಿದವು.

ಈ ನಿರ್ಣಯವನ್ನು ನಾವು ತಕ್ಷಣವೇ ಅನುಷ್ಠಾನಕ್ಕೆ ತಂದೆವೆಂದು ಹೇಳಲು ನನಗೆ ಸಂತೋಷವೆನಿಸುತ್ತದೆ. ಇದಕ್ಕೆಂದೇ ನಾವು ಒಂದು ಸಮಿತಿಯನ್ನು ರಚಿಸಿದೆವು. ಈ ಸಮಿತಿಯು ಈಗ ಈ ವಿಷಯದಲ್ಲಿ ಕೆಲಸಮಾಡುತ್ತಿದೆ. ಮಾನ್ಯರೇ, ಬೇರೆ ಬೇರೆ ವಿಷಯಗಳ ಮೇಲೆ ವರದಿ ಸಲ್ಲಿಸಲು ಪ್ರತ್ಯೇಕ ವಿಶೇಷಾಧಿಕಾರಿಗಳನ್ನು ಇಲಾಖೆಯು ನೇಮಿಸುತ್ತಾ ಹೋಗಿದ್ದರೆ, ಅದು ಖಂಡಿತ ತಪ್ಪಾಗುತ್ತಿತ್ತು. ಸಮಿತಿಯ ವರದಿ ನಮ್ಮನ್ನು ತಲಪುವವರೆಗೂ ನಾವು ಕಾಯಬೇಕಾಗಿತ್ತು. ವಿಶೇಷ ಸಮಸ್ಯೆಗಳನ್ನು ತನಿಖೆ ಮಾಡಲು ವಿಶೇಷಾಧಿಕಾರಿಗಳನ್ನು ನೇಮಿಸಬೇಕೆಂಬ ಉದ್ದೇಶವನ್ನು ನಾವು ಕೈಬಿಟ್ಟಿಲ್ಲ ಎಂದು ನನ್ನ ಸನ್ಮಾನ್ಯ ಮಿತ್ರರಿಗೆ ಭರವಸೆ ನೀಡುತ್ತೇವೆ; ಆದರೆ ಈ ಸಮಿತಿಯ ವರದಿ ಸರ್ಕಾರಕ್ಕೆ ಸಿಕ್ಕಿದನಂತರ ಈ ವಿಷಯವನ್ನು ಕೈಗೆತ್ತಿಕೊಳ್ಳಲಾಗುವುದು. ಮಾನ್ಯರೇ, ಈ ವಿಷಯದ ಮೇಲೆ ನಾನು ಈಗಾಗಲೇ ಹೇಳಿರುವುದನ್ನು ಗಮನದಲ್ಲಿಟ್ಟಕೊಂಡು ಶ್ರೀ ಜೋಷಿಯವರು, ಕಾರ್ಮಿಕ ಸಮಸ್ಯೆಯನ್ನು ಎದುರಿಸಲು ಭಾರತ ಸರ್ಕಾರದ ಈಗಿನ ವ್ಯವಸ್ಥೆಯು ಅಸಂಪೂರ್ಣವೇನಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ.

**ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನ**

ಮಾನ್ಯ ಶ್ರೀ ಜಮ್ನಾಲಾಲ್ ಮೆಹ್ತಾರವರು ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಕುರಿತಂತೆ ಕೆಲವು ಟೀಕೆಗಳನ್ನು ಮಾಡಿದರು. ಅವರು ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಅಂತಾರಾಷ್ಟ್ರೀಯ ಕಾರ್ಮಿಕ ಕಚೇರಿಯ ಮಟ್ಟಕ್ಕೆ ಏರಿಸಬೇಕೆಂದರು. ಮಾನ್ಯ ಶ್ರೀ ಜೋಷಿಯವರು ಅದಕ್ಕೊಂದು ಪ್ರತ್ಯೇಕ ಕಾರ್ಯಾಲಯ ಇರಬೇಕೆಂದರು. ಮತ್ತು ಮಾನ್ಯ ಶ್ರೀ ಮೆಹ್ತಾರವರು, ಕಾರ್ಮಿಕ ಇಲಾಖೆಯನ್ನು ನೋಡಿಕೊಳ್ಳುವ ಸದಸ್ಯರೇ ಈ ಸಮ್ಮೇಳನದ ಕಾರ್ಯಕಲಾಪಗಳಿಗೆ ಅಧ್ಯಕ್ಷರಾಗಿರಬೇಕೆಂದೂ, ಅವರು ತಮ್ಮ ಈ ಅಧಿಕಾರವನ್ನು ತ್ಯಜಿಸಬೇಕೆಂದೂ ಸೂಚಿಸಿದರು. ಅಲ್ಲದೆ ಶ್ರೀ ಮೆಹ್ತಾರವರು ಸಮಿತಿಯ ವರದಿಗಳನ್ನು ತಿದ್ದುಪಡಿಗಾಗಿ ಶಾಸಕಾಂಗದ ಮುಂದಿಡಬೇಕೆಂದೂ ಸೂಚಿಸಿದರು.

ಮಾನ್ಯರೇ, ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಮೆಹ್ತಾರವರೂ ಶ್ರೀ ಜೋಷಿಯವರೂ ಹೇಳಿದುದೆಲ್ಲಕ್ಕೂ ನನ್ನ ಪೂರ್ಣ ಸಮ್ಮತಿ ಇದೆ. ಆದರೂ ಇದನ್ನು ತಿಳಿಸಬಯಸುತ್ತೇನೆ; ಅವರಿಬ್ಬರಿಗೂ ಗೊತ್ತಿರುವಂತೆ, ಸಮಿತಿಯ ಕಾರ್ಯಕಲಾಪಗಳ ಬಗ್ಗೆ ತೀರ್ಮಾನ ಪಡೆದುಕೊಳ್ಳುವ ವಿಚಾರ ಹೆಚ್ಚು ಕಡಿಮೆ ಸಮ್ಮೇಳನಕ್ಕೆ ಬಿಟ್ಟಿದ್ದು. ಸಮ್ಮೇಳನಕ್ಕೆ ತನ್ನದೇ ಆದ ಒಂದು ಕಚೇರಿ ಇರಬೇಕೇ ಬೇಡವೇ ಎಂಬುದನ್ನು ಸಮ್ಮೇಳನದ ಉದ್ಘಾಟನೆಯ ವೇಳೆಯಲ್ಲಿ ಚರ್ಚಿಸಲಾಯಿತು, ಮತ್ತು ಸಮ್ಮೇಳನಕ್ಕೆ ತನ್ನದೇ ಆದ ಪ್ರತ್ಯೇಕ ಕಾರ್ಯಾಲಯ ಇರಬೇಕೆಂದು ಕೈಗೊಂಡ ತೀರ್ಮಾನವು ಸರಿ ಎಂದು ನನಗನ್ನಿಸುತ್ತದೆ. ಆದರೆ ಮುಂದಿನ ಸಮ್ಮೇಳನದಲ್ಲಿ ಅದನ್ನು ಬದಲಾಯಿಸಿದುದರಿಂದ, ಬೇರೆ ರೀತಿಯಲ್ಲಿ ಯೋಚಿಸಬೇಕಾಯಿತು. ಅಂತೂ ಈ ವಿಚಾರವನ್ನು ಮತ್ತೆ ಪರಿಶೀಲಿಸಲಾಗುವುದೆಂಬ ದೃಢ ವಿಶ್ವಾಸ ನನಗಿದೆ.

ಮಾನ್ಯರೇ, ಶ್ರೀಯುತ ಮೆಹ್ತಾರವರೂ ಶ್ರೀಯುತ ಜೋಷಿಯವರೂ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವು ಗೌಣವೆಂದೂ ಅದಕ್ಕೇನೂ ಹೆಚ್ಚಿನ ಬೆಲೆಯಿಲ್ಲವೆಂದೂ ತಿಳಿದುಕೊಂಡಿದ್ದರೆ, ನಾನು ಈ ವಿಚಾರದಲ್ಲಿ ನನ್ನ ಅಭಿಪ್ರಾಯವು ಭಿನ್ನವಿದೆಯೆಂದು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಕಾರ್ಮಿಕ ಸಮ್ಮೇಳನವು ಎಂಥ ಉತ್ಕೃಷ್ಟ ಕಾರ್ಯ ಮಾಡುತ್ತಿದೆಯೆಂದರೆ, ಅದನ್ನು ಅತಿಶಯೋಕ್ತಿ ಎಂದು ಕರೆಯುವುದು ಅಸಾಧ್ಯ ಎನಿಸುತ್ತದೆ.

ನಾನು ಹೇಳಬೇಕಾಗಿರುವ ಮತ್ತು ಸದನದ ಸದಸ್ಯರು ವಿಶೇಷವಾಗಿ ಗಮನಿಸಬೇಕಾಗಿರುವ ವಿಷಯ ಇದು : ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಅಥವಾ ಸ್ಥಾಯಿ ಕಾರ್ಮಿಕ ಸಮಿತಿಯ ಮುಂದೆ ಮಂಡಿಸಲಾದ ಕಾರ್ಯಕ್ರಮದ ಪಟ್ಟಿಯನ್ನು ಪರೀಕ್ಷಿಸಿದ ಯಾರಾದರೂ, ಅಲ್ಲಿ ಪರಿಶೀಲನೆಗೆ ಮತ್ತು ಚರ್ಚೆಗೆ ಒಳಗಾದ ವಿಷಯಗಳು ಅತಿ ಪ್ರಮುಖ ವಿಷಯಗಳೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಇದನ್ನು ಕೇವಲ ನೆನಪಿನಿಂದ ಹೇಳುತ್ತಿರಬಹುದು. ಆದರೆ, ಕಾರ್ಮಿಕ ಜಗತ್ತಿಗೆ ಸಂಬಂಧಿಸಿದ ಅತ್ಯಂತ ಮಹತ್ವದ ವಿಚಾರಗಳು ಅವು ಎಂದು ಹೇಳಬಹುದು.

ನಾನು ಇನ್ನೂ ಒಂದು ಮಾತನ್ನು ಹೇಳಬಯಸುತ್ತೇನೆ. ತ್ರಿಪಕ್ಷೀಯ ಸಮ್ಮೇಳನಕ್ಕೆ ಸೇರದ ಯಾವ ಪ್ರತಿನಿಧಿಗೆ ಆಗಲಿ ಮಾಲೀಕರನ್ನು ಭೇಟಿಮಾಡಿ, ಈ ಯೋಜನೆಗಳನ್ನು ಪರಿಶೀಲಿಸುವಂತೆ, ಕೇಳಲು ಅಥವಾ, ಕೊನೆಗೆ, ಅವುಗಳ ಬಗ್ಗೆ ಮಾತನಾಡಲು ಸಾಧ್ಯವಿತ್ತೆ? ಭಾರತೀಯ ಕಾರ್ಮಿಕರ ಈಗಿನ ಅವ್ಯವಸ್ಥೆಯನ್ನು ನೋಡಿದರೆ, ಕಾರ್ಮಿಕರ ಪ್ರತಿನಿಧಿಗಳು ಮಂಡಿಸಿದ ಯಾವ ಸಮಸ್ಯೆಗೂ ಮಾಲೀಕರಾರೂ ಒಂದು ಚಿಕ್ಕಾಸಿನ ಗಮನವನ್ನೂ ಕೊಡುತ್ತಿರಲಿಲ್ಲ ಎಂಬುದರಲ್ಲಿ ನನಗೇನೂ ಅನುಮಾನವಿಲ್ಲ.

*"ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ರಚಿಸಿದುದಕ್ಕಾಗಿ ನನಗೆ ಹೆಮ್ಮೆ ಎನಿಸುತ್ತದೆ. ನಾವು*

*ಬಹಳಷ್ಟೇನೂ ಮಾಡಿಲ್ಲದಿದ್ದರೂ, ಕೊನೆಯ ಪಕ್ಷ ಇಷ್ಟನ್ನು ಮಾಡಿದ್ದೇವೆ. ಅದೇನೆಂದರೆ, ಮಾಲೀಕರ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರೊಡನೆ ಮುಖ್ಯವಾದ ಹಾಗೂ ಅತಿ ಜರೂರಾದ ವಿಷಯಗಳನ್ನು ಕುರಿತು ಚರ್ಚಿಸುವಂತೆ ನಾವು ಕಾರ್ಮಿಕರ ಪ್ರತಿನಿಧಿಗಳನ್ನು – ಬಲಾತ್ಕರಿಸದಿದ್ದರೂ – ಪ್ರೇರೇಪಿಸಿದ್ದೇವೆ".*

ನನ್ನ ಪ್ರಕಾರ, ತ್ರಿಪಕ್ಷೀಯ ಸಮ್ಮೇಳನವು ಈ ದೇಶದ ಕಾರ್ಮಿಕ ವರ್ಗಕ್ಕೆ ಒಂದು ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ.

**ಕಲ್ಲಿದ್ದಲ ಗಣಿಗಳಲ್ಲಿ ಮಹಿಳೆಯರು**

ನನ್ನ ಸನ್ಮಾನ್ಯ ಗೆಳತಿಯರಾದ ಶ್ರೀಮತಿ ಸುಬ್ಬರಾಯನ್ ತಮ್ಮ ಭಾಷಣದಲ್ಲಿ ವಿಶೇಷವಾಗಿ ಕಲ್ಲಿದ್ದಲ ಗಣಿಗಳಲ್ಲಿ ಹೆಂಗಸರನ್ನು ನೇಮಿಸಿಕೊಳ್ಳುವುದರ ಬಗ್ಗೆ ಮಾತನಾಡಿದರು, ಇಂಥ ಸಮಸ್ಯೆಯನ್ನು ಕುರಿತಂತೆ ಅವರಿಗಿರುವ ಕಳಕಳಿಯ ಬಗೆಗೆ ನನಗೆ ಯಾವ ಸಂದೇಹವೂ ಇಲ್ಲ. ಆದರೆ, ಮಾನ್ಯರೇ ನನಗೆ ಮತ್ತೆ ಮೊದಲಿಂದ ಮಾತನಾಡುವ ಇಚ್ಛೆಯಿಲ್ಲ. ಏಕೆಂದರೆ ಈ ವಿಷಯವನ್ನು ನಿಲುವಳಿ ಸೂಚನೆಯಲ್ಲಿ ಈಗಾಗಲೇ ಚರ್ಚಿಸಲಾಗಿದೆ ಎಂಬುದನ್ನು ಸದನವು ಸ್ಮರಿಸಬಹುದು. ಆದ್ದರಿಂದ ಇಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳಲು ನಾವು ವಿಷಾದಿಸುತ್ತೇವೆ ಎಂದು ಮತ್ತೊಮ್ಮೆ ಹೇಳುತ್ತೇನೆ. ಗಣಿಗಳಲ್ಲಿ ಕಾರ್ಮಿಕರ ಸಂಖ್ಯೆಯನ್ನು ಏರಿಸಲು ಹಾಗೂ ಕಲ್ಲಿದ್ದಲ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಮಹಿಳೆಯರ ನೇಮಕಾತಿ ನಿಷೇಧವನ್ನು ಆದಷ್ಟು ಬೇಗನೆ ಮತ್ತೆ ಜಾರಿಗೊಳಿಸುತ್ತೇನೆಂದೂ ನಾನು ಸದನಕ್ಕೆ ಭರವಸೆ ಕೊಡುತ್ತೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಸನ್ಮಾನ್ಯ ಸದಸ್ಯರನ್ನು ಒಂದು ಪ್ರಶ್ನೆ ಕೇಳಬಹುದೆ? ಕಲ್ಲಿದ್ದಲ ಗಣಿಗಳ ಒಳಭೂಮಿಯಲ್ಲಿ ಕೆಲಸಮಾಡಲು ಹೆಂಗಸರ ನೇಮಕಾತಿ ಕುರಿತು ಪ್ರಕಟಣೆ ಹೊರಡಿಸುವ ಮುನ್ನ ಸರ್ಕಾರವು ತ್ರಿಪಕ್ಷೀಯ ಸಮ್ಮೇಳನದ ಸಲಹೆ ಪಡೆಯಿತೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹಾಗೆ ಮಾಡಲು ನಮಗೆ ಸಮಯವಿರಲಿಲ್ಲ ಎಂದು ಹೇಳಲು ನನಗೆ ಸಂಕೋಚವಾಗುತ್ತಿದೆ. ನಾನು ಮೊದಲೇ ಹೇಳಿದಂತೆ, ಅದು ತುರ್ತುಪರಿಸ್ಥಿತಿ ಮತ್ತು ಅದನ್ನು ಅತ್ಯಂತ ಜರೂರಾದ ಕ್ರಮಗಳಿಂದ ಎದುರಿಸಬೇಕಾಗಿತ್ತು.

ನಮ್ಮ ಮಹಿಳಾ ಸದಸ್ಯರು ಎತ್ತಿದ ಪ್ರಶ್ನೆಗೂ ನಾನು ಉತ್ತರಿಸಬೇಕಾಗಿದೆ. ಅವರು ಸರ್ಕಾರವು ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸುವುದರ ಬದಲು, ಕಾರ್ಮಿಕ ಧುರೀಣರನ್ನು ಜೈಲಿಗೆ ಹಾಕಿದೆ ಎಂದಿದ್ದಾರೆ. ಆದರೆ, ನಮ್ಮ ಇಲಾಖೆಯವರು ಈ ವಿಚಾರದಲ್ಲಿ ತಲೆಹಾಕುವುದಿಲ್ಲ. ಇದರ ಬಗೆಗೆ ನಿನ್ನೆ ಸಾಕಷ್ಟು ಚರ್ಚೆ ಆಗಿದೆ. ಆದರೆ ಸರ್ಕಾರವು ಕಾರ್ಮಿಕ ಧುರೀಣರನ್ನು ಜೈಲಿಗೆ ಹಾಕಿದ್ದಕ್ಕೆ ಒಂದೇ ಒಂದು ಖಚಿತವಾದ ನಿದರ್ಶನ ನಿನ್ನೆಯಾಗಲಿ, ಇವತ್ತಾಗಲಿ, ನನ್ನ ಗಮನಕ್ಕೆ ಬರಲಿಲ್ಲ.

**ಸೇಠ್ ಯೂಸೂಫ್ ಅಬ್ದುಲ್ಲಾ ಹಾರೂನ್ :** ನಾನು ಕರಾಚಿ ಬಂದರು ಟ್ರಸ್ಟಿನ ಒಂದು ಪ್ರಕರಣದ ಬಗ್ಗೆ ಪ್ರಸ್ತಾಪಿಸಿದ್ದೆ, ಅಷ್ಟೆ.

**ಶ್ರೀ ಹುಸೇನ್‌ಭಾಯ್ ಎ. ಲಾಲ್‌ಜಿ :** ಆ ಬಂದರಿನ ಟ್ರಸ್ಟ್ ನಿಮ್ಮ ಅಧೀನದಲ್ಲಿದೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ.

**ಶ್ರೀ ಲಾಲ್‌ಜಿ :** ರೈಲ್ವೆಯವರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರೂ ನಮ್ಮ ಅಧೀನಕ್ಕೊಳಪಟ್ಟಿಲ್ಲ.

**ಶ್ರೀ ಲಾಲ್‌ಜಿ :** ಸಮುದ್ರ ನಾವಿಕರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರೂ ಇಲ್ಲ.

**ಶ್ರೀ ಲಾಲ್‌ಜಿ :** ಹಾಗಾದರೆ ನಿಮ್ಮ ಅಧೀನದಲ್ಲಿ ಯಾರಿದ್ದಾರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇವರಲ್ಲದೆ ಇನ್ನೂ ಅನೇಕ ರೀತಿಯ ಕಾರ್ಮಿಕರಿದ್ದಾರೆ. ನಾನು ಕಾರ್ಮಿಕ ಧುರೀಣರ ಬಂಧನದ ಬಗ್ಗೆ ಪ್ರಸ್ತಾಪಿಸುತ್ತಿದ್ದೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಹಾಗಾದರೆ, ಶ್ರೀ ಡಾಂಗೆಯವರನ್ನು ಬಂಧಿಸಲಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗ ಆ ವಿಷಯಕ್ಕೇ ಬರುತ್ತಿದ್ದೆ. ಕಾರ್ಮಿಕ ಧುರೀಣರನ್ನು ನಾನು ಬಲ್ಲೆನಾದ್ದರಿಂದ ಹೇಳುತ್ತೇನೆ. ಕಾರ್ಮಿಕ ಧುರೀಣರು ಒಂದಕ್ಕಿಂತ ಹೆಚ್ಚು ಪಾತ್ರವಹಿಸುತ್ತಾರೆ, ಎಂಬುದೇ ಒಂದು ಸಮಸ್ಯೆ.

*"ಅವರು ಕೆಲವು ಸಲ ಕಾರ್ಮಿಕ ಧುರೀಣರಾಗುತ್ತಾರೆ. ಕೆಲವು ಸಲ ಅವರು ಸಮತಾವಾದಿಗಳಾಗುತ್ತಾರೆ; ಕೆಲವು ಸಲ ಅವರು ರಾಷ್ಟ್ರ ನಾಯಕರಾಗುತ್ತಾರೆ; ಕೆಲವು ಸಲ ಅವರು ಕಾಂಗ್ರೆಸ್ ನಾಯಕರಾಗುತ್ತಾರೆ; ಕೆಲವು ಸಲ ಅವರು ಹಿಂದೂ ಮಹಾಸಭೆಯ ಅಥವಾ ಬೇರೆ ಸಂಸ್ಥೆಯ ಸದಸ್ಯರಾಗುತ್ತಾರೆ".*

**ಒಬ್ಬ ಸನ್ಮಾನ್ಯ ಸದಸ್ಯರು :** ಹಾಗಾದರೆ ಇವರೆಲ್ಲರನ್ನೂ ನಿಷೇಧಿಸೋಣ!

**ಗೌರವಾನ್ವಿತ ಡಾ॥ ಅಂಬೇಡ್ಕರ್ :** ಹೀಗೆ ಕಾರ್ಮಿಕ ಧುರೀಣರು ಬಹು ಪಾತ್ರಧಾರಿಗಳಾದ್ದರಿಂದ, ಅವರನ್ನು ಕಾರ್ಮಿಕ ಧುರೀಣರೆಂಬ ಕಾರಣಕ್ಕೆ ಬಂಧಿಸಿದರೋ ಅಥವಾ ಅವರು ಸಮತಾವಾದಿಗಳಾದ್ದರಿಂದ, ಅಥವಾ ಕಾಂಗ್ರೆಸ್ಸಿನ ಸದಸ್ಯರಾದ್ದರಿಂದ, ಅಥವಾ ಹಿಂದೂ ಮಹಾಸಭೆಯ ಸದಸ್ಯರಾದ್ದರಿಂದ ಅವರನ್ನು ಬಂಧಿಸಿದರೋ ಎಂದು ಹೇಳುವುದು ಕಷ್ಟ. ನನ್ನ ಪ್ರಕಾರ ಹೇಳುವುದಾದರೆ – ನಾನು ಇದನ್ನು ಬಹಳ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ – ಕಾರ್ಮಿಕ ಧುರೀಣರು ಬೇರೆ ಬೇರೆ ಬಣ್ಣಗಳ, ಗುಣಗಳ ಅಥವಾ ಕಾರ್ಯಕ್ರಮಗಳ ರಾಜಕೀಯ ಪಕ್ಷಗಳ ಒಂದು ಸಲಕರಣೆಯಂತೆ ಕೆಲಸ ಮಾಡದೆ, ತಮ್ಮ ಸೇವೆಯನ್ನು ಕೇವಲ ಕಾರ್ಮಿಕರ ಏಳಿಗೆಗಾಗಿಯೇ ಮುಡಿಪಾಗಿಟ್ಟಿದ್ದರೆ, ಆಗ ಅವರು ನಿಯಮ ೨೬ರ ಹಿಡಿತದಿಂದ ತಪ್ಪಿಸಿಕೊಳ್ಳುತ್ತಿದ್ದರಷ್ಟೇ ಅಲ್ಲ, ಕಾರ್ಮಿಕರಿಗೆ ಒಂದು ದೊಡ್ಡ ಸೇವೆಯನ್ನು ಸಲ್ಲಿಸಿದಂತಾಗುತ್ತಿತ್ತು. ಆದರೆ ದುರದೃಷ್ಟವಶಾತ್, ನಮ್ಮ ದೇಶದಲ್ಲಿ ಕಾರ್ಮಿಕರಿಗಾಗಿಯೇ ತಮ್ಮನ್ನು ಮುಡಿಪಾಗಿಟ್ಟಕೊಂಡಂತೆ ಕಾರ್ಮಿಕ ಧುರೀಣರು ಇಲ್ಲ.

**ಒಬ್ಬ ಸನ್ಮಾನ್ಯ ಸದಸ್ಯರು :** ಮಾನ್ಯ ಶ್ರೀ ಜೋಷಿಯವರು ಇಲ್ಲೇ ಇದ್ದಾರೆ.

**ಗೌರವಾನ್ವಿತ ಡಾ॥ ಅಂಬೇಡ್ಕರ್ :** ಈ ಚರ್ಚೆಯ ಅಂಗವಾಗಿ ಎತ್ತಿದ ಪ್ರಶ್ನೆಗಳಿಗೆ ನಾನು ಯಾವುದಕ್ಕಾದರೂ ಇನ್ನೂ ಉತ್ತರ ಕೊಟ್ಟಿಲ್ಲವೋ, ಅಥವಾ ಕೊಡಲೇಬೇಕಾಗಿದೆಯೋ ನನಗೆ ಗೊತ್ತಿಲ್ಲ.

*"ಕಾರ್ಮಿಕರ ವಿಷಯದಲ್ಲಿ ಭಾರತ ಸರ್ಕಾರವು ಏನು ಮಾಡಿದೆ ಎಂಬುದರ ಬಗ್ಗೆ ಏನೆಲ್ಲ ಹೇಳಬಹುದು. ಆದರೆ, ಕಾರ್ಮಿಕರಿಗೆ ಸಂಬಂಧಿಸಿದಂತೆ ಸರ್ಕಾರದ ನಿಲವಿಗೆ ಒಂದು ಹೊಸ ದಿಕ್ಸೂಚಿ ಸಿಕ್ಕಿದೆ ಎಂದಂತೂ ನ್ಯಾಯಬದ್ಧವಾಗಿ ಹೇಳಬಹುದು".*

**ಶ್ರೀ ಅಮರೇಂದ್ರನಾಥ ಚಟ್ಟೋಪಾಧ್ಯಾಯ :** ಈ ನಿಲವಿನ ಹಿಂದಿರುವ ಕಾರ್ಯನೀತಿ ಎಂತಹುದು?

**ಗೌರವಾನ್ವಿತ ಡಾ॥ ಅಂಬೇಡ್ಕರ್ :** ಕಳೆದ ಅರ್ಧ ಗಂಟೆಯಿಂದಲೂ ನಾನು ಅದನ್ನು ಬಿಟ್ಟು ಮತ್ತೇನೂ ಹೇಳುತ್ತಿಲ್ಲ.

**ಮೌಲಿ ಮೊಹಮ್ಮದ್ ಅಬ್ದುಲ್ ಘನಿ :** ಮಾನ್ಯ ಸದಸ್ಯರಿಂದ ಒಂದು ಸಣ್ಣ ಮಾಹಿತಿ ಪಡೆಯಬಹುದೆ?

ತಂತ್ರಜ್ಞರು ಒಂದು ಕೇಂದ್ರದಲ್ಲಿ ತರಬೇತಿ ಪಡೆದನಂತರ, ಅವರಿಗೆ ಪ್ರಮಾಣ ಪತ್ರಗಳನ್ನು ಕೊಡುತ್ತಿಲ್ಲವೇಕೆ?

**ಡಾ॥ ಅಂಬೇಡ್ಕರ್ :** ನಾನು ಅದರ ಬಗ್ಗೆ ವಿಚಾರಿಸುತ್ತೇನೆ.

**ಶ್ರೀ ಎನ್.ಎಂ. ಜೋಷಿ :** ಮಾನ್ಯರೇ, ಈ ಚರ್ಚೆಯು ಕಾರ್ಮಿಕ ಇಲಾಖೆಯನ್ನು ಹೆಚ್ಚಿನ ಮತ್ತು ಉತ್ತಮ ಕಾರ್ಯ ಮಾಡುವಂತೆ ಪ್ರೇರೇಪಿಸುತ್ತದೆ ಎಂದು ನಂಬಿ, ನಾನು ನನ್ನ ನಿಲುವಳಿ ಸೂಚನೆಯನ್ನು ಹಿಂದೆಗೆದುಕೊಳ್ಳಲು ಅಪ್ಪಣೆ ಕೊಡಬೇಕು ಎಂದು ಕೋರುತ್ತೇನೆ.

ವಿಧಾನಸಭೆಯ ಒಪ್ಪಿಗೆಯ ನಂತರ ನಿಲುವಳಿ ಸೂಚನೆಯನ್ನು ಹಿಂತೆಗೆದುಕೊಳ್ಳಲಾಯಿತು.

* * *

## ಫಿಲಡೆಲ್ಫಿಯಾದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನ*

೧೯೪೪ರ ಏಪ್ರಿಲ್ ೨೦ರಂದು ಅಮೆರಿಕ ಸಂಯುಕ್ತ ಸಂಸ್ಥಾನದ ಫಿಲಡೆಲ್ಫಿಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಲೆಂದು ಭಾರತ ಸರ್ಕಾರವು ಈ ಕೆಳಗಿನ ನಿಯೋಗವನ್ನು ನಾಮಕರಣ ಮಾಡಿದೆ ಎಂದು ಮಾರ್ಚ್ ೨೪ರಂದು ಹೊರಡಿಸಲಾದ ಪ್ರೆಸ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಸರ್ಕಾರದ ಪ್ರತಿನಿಧಿಗಳು :** ಸರ್ ಸ್ಯಾಮ್ಯುಯೆಲ್ ರಂಗನಾಥನ್, ಭಾರತದ ಹೈ ಕಮಿಷನರ್, ನಾಯಕ; ಶ್ರೀ ಎಚ್.ಸಿ. ಪ್ರಯರ್, ಕಾರ್ಯದರ್ಶಿ, ಕಾರ್ಮಿಕ ಇಲಾಖೆ – ನಿಯೋಗದ ಸದಸ್ಯರು, ಸರ್ಕಾರದ ಪ್ರತಿನಿಧಿಗಳಿಗೆ ಸಲಹಾಕಾರರಾಗಿಯೂ, ಭಾರತೀಯ ನಿಯೋಗಕ್ಕೆ ಕಾರ್ಯದರ್ಶಿಯಾಗಿಯೂ ಕೆಲಸ ಮಾಡುವ ಹೈ ಕಮಿಷನರ್ ಕಚೇರಿಯ ಒಬ್ಬ ಸದಸ್ಯರು.

**ಮಾಲೀಕರ ಪ್ರತಿನಿಧಿಗಳು :** ಶ್ರೀ ಜೆ.ಸಿ. ಮಹೀಂದ್ರ, ಪ್ರತಿನಿಧಿ; ಶ್ರೀ ಡಿ.ಜಿ. ಮುಳ್ಹೇರ್‌ಕರ್, ಸಲಹಾಕಾರರು.

**ಕಾರ್ಮಿಕರ ಪ್ರತಿನಿಧಿಗಳು :** ಶ್ರೀ ಜಮ್ನಾದಾಸ್ ಮೆಹ್ತಾ, ಪ್ರತಿನಿಧಿ; ಶ್ರೀ ಅಫ್ತಾಬ್ ಆಲಿ, ಸಲಹಾಕಾರರು; ಶ್ರೀ ಆರ್.ಆರ್. ಭೋಲೆ, ಸಲಹಾಕಾರರು.

ಅಂತಾರಾಷ್ಟ್ರೀಯ ಸಂಸ್ಥೆಯ ಸದಸ್ಯರಾಗಿ ಭಾರತವು ಸರ್ಕಾರೇತರ ಸದಸ್ಯರನ್ನೂ, ತಮ್ಮ ತಮ್ಮ ದೇಶಗಳ ಮಾಲೀಕರ ಅಥವಾ ಕಾರ್ಮಿಕರನ್ನು ಪ್ರತಿನಿಧಿಸುವ ಕೈಗಾರಿಕಾ ಸಂಸ್ಥೆಗಳ (ಅಂತಹ ಸಂಸ್ಥೆಗಳು ಇದ್ದರೆ) ಒಪ್ಪಿಗೆ ಪಡೆದು ಸಲಹಾಕಾರರನ್ನೂ ನೇಮಕ ಮಾಡಲು ಪ್ರಾರಂಭಿಸಿದೆ. ಈ ರೀತಿ ಸರ್ವಸಮ್ಮತವಾದ ಶಿಫಾರಸುಗಳನ್ನು ಪರಿಶೀಲಿಸಿ, ಮಾಲೀಕರ ಪ್ರತಿನಿಧಿಗಳನ್ನು ಆರಿಸಲಾಗಿದೆ.

ಕಾರ್ಮಿಕರ ವಿಚಾರವಾಗಿ ಹೇಳಬೇಕೆಂದರೆ, ಅವರ ಮುಖ್ಯವಾದ ಎರಡು ಸಂಸ್ಥೆಗಳಿವೆ; ಮತ್ತು ಅವುಗಳು ಕಳುಹಿಸಿರುವ ಸಲಹೆಸೂಚನೆಗಳಲ್ಲಿ ಒಮ್ಮತವಿಲ್ಲ. ಇವೆರಡು ಸಂಸ್ಥೆಗಳಲ್ಲಿ ಯಾವುದು ಕಾರ್ಮಿಕರನ್ನು ಹೆಚ್ಚು ಸಮಂಜಸವಾಗಿ ಪ್ರತಿನಿಧಿಸುತ್ತದೆ ಎಂಬುದನ್ನು ಪರೀಕ್ಷಿಸುವ ವಿಧಾನವು ಸರ್ಕಾರಕ್ಕೆ ಗೊತ್ತಿಲ್ಲವಾದ್ದರಿಂದಲೂ ಮತ್ತು ಅವುಗಳಲ್ಲಿ ಒಮ್ಮತವಿಲ್ಲ ಎಂಬ ಒಂದೇ ಕಾರಣಕ್ಕಾಗಿ ಕಾರ್ಮಿಕರು ತಮ್ಮ ಅಭಿಪ್ರಾಯಗಳನ್ನು ಈ ಸಮ್ಮೇಳನದಲ್ಲಿ ವ್ಯಕ್ತಪಡಿಸಲು ಸಿಕ್ಕಿರುವ ಅವಕಾಶವನ್ನು ಕಳೆದುಕೊಳ್ಳಬಾರದೆಂದು ಸರ್ಕಾರವು ಆಶಿಸುತ್ತಿರುವುದರಿಂದಲೂ, ಸರ್ಕಾರವು ಸದ್ಯಕ್ಕೆ ಈ ಎರಡು ಸಂಸ್ಥೆಗಳ ಒಪ್ಪಿಗೆ ಪಡೆದು, ಆ ಸಂಸ್ಥೆಗಳೆರಡರ ಪ್ರತಿನಿಧಿಗಳನ್ನೂ ಪರ್ಯಾಯವಾಗಿ ನೇಮಕ ಮಾಡಲು ನಿರ್ಧರಿಸಿದೆ.

---

* ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್ ೧೫, ೧೯೪೪, ಪುಟ ೪೧೬.

ಈ ತೀರ್ಮಾನದ ಪ್ರಕಾರ, ಸರ್ಕಾರವು ಇಂಡಿಯನ್ ಫೆಡರೇಶನ್ ಆಫ್ ಲೇಬರ್ ಶಿಫಾರಸಿಗನುಗುಣವಾಗಿ, ನಿಯೋಗದ ಸದಸ್ಯರನ್ನೂ ಒಬ್ಬ ಸಲಹಾಕಾರರನ್ನು ಕಾರ್ಮಿಕರ ಪ್ರತಿನಿಧಿಗಳೆಂದು ನೇಮಿಸಿದೆ. ಅಲ್ಲದೆ, ಸರ್ಕಾರವು ಆಲ್ ಇಂಡಿಯಾ ಮುನಿಸಿಪಲ್ ಎಂಪ್ಲಾಯಿಸ್ ಫೆಡರೇಶನ್ ಶಿಫಾರಸಿಗನುಗುಣವಾಗಿ ಶ್ರೀಯುತ ಆರ್.ಆರ್. ಭೋಲೆಯವರನ್ನೂ ಒಬ್ಬ ಸಲಹಾಕಾರರೆಂದು ಸೇರಿಸಿದೆ. ಕಾರ್ಮಿಕರ ನಿಯೋಗವು ಶ್ರೀಯುತ ಭೋಲೆಯವರನ್ನು ಉಪಸಲಹಾಕಾರರೆಂದು ಮಾನ್ಯ ಮಾಡಿದೆ.

## ೨೯
## ಇತರೆ ಇಲಾಖೆಗಳು*

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈ ಹಿಂದೆ ಕೈಬಿಡಲಾಗಿದ್ದ ಡಿಮ್ಯಾಂಡ್ ನಂ. ೬೪: 'ಇತರೆ ಇಲಾಖೆಗಳು' ಎಂಬುದನ್ನು ಈಗ ಸದನವು ಕೈಗೆತ್ತಿಕೊಳ್ಳುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಶ್ರೀಯುತ ಅವಿನಾಶಿಲಿಂಗಂ ಚೆಟ್ಟಿಯಾರ್ ಅವರು ರೂ. ೧೫,೨೬,೦೦೦ ಹಣದ ಬಗೆಗೆ ಸ್ಥಾಯಿ ಆರ್ಥಿಕ ಸಮಿತಿಯ ವರದಿಯಲ್ಲಿ ಪ್ರಸ್ತಾವವೇ ಇಲ್ಲ, ಆದರೂ ಇಲ್ಲಿ ಅದು ಹೇಗೆ ಬಂತು, ಎಂಬುದನ್ನು ತಿಳಿಯಬಯಸುತ್ತಾರೆ. ನಾನು ಆ ವರದಿಯನ್ನು ಪರಿಶೀಲಿಸಿ, ಅವರು ಹೇಳುತ್ತಿರುವುದು ಸರಿ ಎಂಬುದನ್ನು ಖಚಿತಪಡಿಸಿಕೊಂಡಿದ್ದೇನೆ. ಇಲ್ಲಿ ನಮೂದಿಸಿರುವ ಮೊತ್ತವನ್ನು ಯಾವುದರ ಖರ್ಚಿಗಾಗಿ ಮಾಡಲಾಯಿತು ಎಂಬ ಮಾಹಿತಿ ಕೊಡಬೇಕು ಎಂದು ಸಂಬಂಧಪಟ್ಟ ಇಲಾಖೆಗೆ ತಿಳಿಸಿದ್ದೇನೆ. ಆ ಉತ್ತರ ಬರುವುದರೊಳಗೆ ಸನ್ಮಾನ್ಯ ಸದಸ್ಯರು ಈ ಪೂರಕ ಅನುದಾನಕ್ಕೆ ಸಂಬಂಧಿಸಿದ ಕೆಲವು ಸ್ಥೂಲ ಮಾಹಿತಿಗಳ ಬಗ್ಗೆ ತಿಳಿಯಲಿಚ್ಛಿಸಿದರೆ, ನಾನು ಅವರಿಗೆ ಆ ಮಾಹಿತಿಯನ್ನು ಕೊಡಲು ಸಿದ್ಧನಿದ್ದೇನೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ಆ ಎಲ್ಲ ಮಾಹಿತಿಯನ್ನು ಈಗಾಗಲೇ ಜ್ಞಾಪನಾಪತ್ರದಲ್ಲಿ ಕೊಡಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯ ವಿಧಾನವನ್ನು ಸ್ಥಾಯಿ ಆರ್ಥಿಕ ಸಮಿತಿಯ ವರದಿಯಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ.

**ಶ್ರೀ ಟಿ.ಎಸ್. ಅವಿನಾಶಿಲಿಂಗಂ ಚೆಟ್ಟಿಯಾರ್ :** ನಮಗೆ ಬೇಕಾಗಿರುವುದು ಈ ಮೊತ್ತದ ಸ್ಪಷ್ಟೀಕರಣ ಮಾತ್ರ.

**ಸನ್ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್ :** ದೊಡ್ಡ ಖರ್ಚಿಗೆ ಸಂಬಂಧಿಸಿದ ಸಂಗತಿಗಳು ಇಲ್ಲಿವೆ. ಸನ್ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ, ಸೇನಾ ಇಲಾಖೆಗೂ ಸಾರ್ವಜನಿಕ ಇಲಾಖೆಗೂ ಕೆಲಸ ಮಾಡುವ ಕಂಟ್ರಾಕ್ಟರು ಅಕುಶಲ ಕಾರ್ಮಿಕರನ್ನು ಪಡೆಯಲು ಭಾರಿ ಸ್ಪರ್ಧೆ ನಡೆಸುತ್ತಿದ್ದಾರೆ. ಇದರಿಂದಾಗಿ, ಮುಖ್ಯ ಕಾರ್ಯಕ್ಷೇತ್ರದಲ್ಲಿ ಆವಶ್ಯಕವಾಗಿ ಬೇಕಾಗಿರುವ ಕಾರ್ಮಿಕರನ್ನು ಆಕರ್ಷಿಸಬೇಕಾಗುತ್ತದೆ ಹಾಗೂ ಅವರಿಗೆ ನ್ಯಾಯವಾದುದಕ್ಕಿಂತ ಹೆಚ್ಚಾದ ವೇತನ ಕೊಡಬೇಕಾಗುತ್ತದೆ. ಈ ಪರಿಣಾಮಗಳನ್ನುಂಟುಮಾಡುವ ಕಾರಣಗಳನ್ನು ನಿರ್ಮೂಲನೆ ಮಾಡಲೋಸ್ಕರ, ಸರ್ಕಾರಕ್ಕೆ ಈ ಸಮಸ್ಯೆಯನ್ನು ಪರಿಶೀಲನೆ ಮಾಡಲು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೩, ೨೯–೩–೧೯೪೪, ಪು.೧೭೨೦

ಕೆಲವು ಸಮಿತಿಗಳನ್ನು ಸ್ಥಾಪಿಸುವುದು ಸೂಕ್ತವೆನಿಸಿತು. ಈ ದಿಸೆಯಲ್ಲಿ ಸರ್ಕಾರವು ಎರಡು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಕಾರ್ಮಿಕ ಸರಬರಾಜು ಸಮಿತಿ ಯೋಜನೆ ಎಂಬ ಒಂದು ಯೋಜನೆಯು, ಬಂಗಾಳ, ಅಸ್ಸಾಂ, ಮುಂತಾದ ಮಿಲಿಟರಿ ಚಟುವಟಿಕೆಗಳಿರುವ ಪ್ರಾಂತ್ಯಗಳಲ್ಲಿ ಜಾರಿಗೆ ಬಂದಿದೆ. ಸರ್ಕಾರ ಮಾಡಿರುವ ಎರಡನೆ ಕೆಲಸವೆಂದರೆ, ಕಾರ್ಮಿಕ ಡಿಪೋಗಳನ್ನು ಸ್ಥಾಪಿಸುವುದು. ಅಂಥ ಒಂದು ಡಿಪೋ ಗೋರಖ್‌ಪುರದಲ್ಲಿ ಸ್ಥಾಪಿತವಾಗಿದೆ. ಈ ಡಿಪೋದಲ್ಲಿ ಅಕುಶಲ ಕಾರ್ಮಿಕರನ್ನು ಸಂಗ್ರಹಿಸಿ ವಿಂಗಡಿಸಿ, ಅವರನ್ನು ಕಲ್ಲಿದ್ದಲ ಗಣಿಗಳಿಗಾಗಲಿ ಅಥವಾ ಮಿಲಿಟರಿ ಕೆಲಸಗಳಿಗಾಗಲಿ ಸರಬರಾಜು ಮಾಡಲಾಗುವುದು. "ಎಂ" – ಅಕುಶಲ ಕಾರ್ಮಿಕರ ಸಂಘಟನಾ ಯೋಜನೆಯಡಿ ತೋರಿಸಿರುವ ಖರ್ಚು ನಿಜವಾಗಿಯೂ ನಾನೀಗ ತಿಳಿಸಿದ ಈ ಎರಡು ಯೋಜನೆಗಳಿಗೆ ಸಂಬಂಧಿಸಿದ ಖರ್ಚು. ನಾನು ಹೇಳುವುದಿಷ್ಟೆ.

**ಶ್ರೀ ಎನ್. ಎಂ. ಜೋಷಿ** (ನಾಮಕರಣಗೊಂಡ ಸರ್ಕಾರೇತರರು) : ಮಾನ್ಯರೆ, ಸನ್ಮಾನ್ಯ ಸದಸ್ಯರು ತಮ್ಮ ಎರಡು ಯೋಜನೆಗಳ ಬಗೆಗೆ ನಮಗೆ ತಿಳಿಸಿಕೊಟ್ಟಿದ್ದಾರೆ. ಮೊದಲನೆಯದು, ಕಾರ್ಮಿಕ ಸರಬರಾಜು ಸಮಿತಿಯದು; ಎರಡನೆಯದು, ಕಾರ್ಮಿಕರನ್ನು ಸರಬರಾಜು ಮಾಡಲು ಹಾಗೂ ವಿವಿಧ ಉದ್ದೇಶಗಳಿಗಾಗಿ ಬೇರೆ ಬೇರೆ ಸ್ಥಳಗಳಿಗೆ ಅವರನ್ನು ಕಳಿಸಿಕೊಡಲು ಏರ್ಪಾಡುಮಾಡುವ ಡಿಪೋಗಳ ಯೋಜನೆ. ಮಾನ್ಯರೆ, ಇಂಥ ಸಮಿತಿಗಳಲ್ಲಿ – ಅವು ಎಲ್ಲಾದರೂ ಇರಲಿ – ಕಾರ್ಮಿಕರ ಪ್ರತಿನಿಧಿಗಳು ಇದ್ದಾರೋ ಇಲ್ಲವೊ ಎಂಬುದನ್ನು ತಿಳಿಸಬೇಕೆಂದು ನಾನು ಸನ್ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಾರ್ಮಿಕ ಸರಬರಾಜು ಸಮಿತಿಗಳಲ್ಲಿ ಕಾರ್ಮಿಕರ ಪ್ರತಿನಿಧಿಗಳು ಇರಬೇಕೆಂದು ನಿನ್ನೆ ತಾನೆ ನಾನು ಆಜ್ಞೆಯೊಂದನ್ನು ಹೊರಡಿಸಿದ್ದೇನೆ.

## ೩೦
## ನವದೆಹಲಿಯಲ್ಲಿನ ಮಸೀದಿಗಳ ರಕ್ಷಣೆ*

ಮಾನ್ಯ ಅಧ್ಯಕ್ಷರು (**ಗೌರವಾನ್ವಿತ ಸರ್ ಅಬ್ದುರ್ ರಹೀಮ್**) : ಈ ತಿದ್ದುಪಡಿ ಸೂಚಿಸಲಾಗಿದೆ:

" ಈ ಮೊದಲಿನ ಗೊತ್ತುವಳಿಯ ಬದಲು ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಬೇಕು:

"ನವದೆಹಲಿಯಲ್ಲಿರುವ ಮಸೀದಿಗಳನ್ನು ರಕ್ಷಿಸಲು ಹಾಗೂ ಸರಿಯಾಗಿ ದುರಸ್ತಿಮಾಡಲು ಗವರ್ನರ್ ಜನರಲ್‌ರವರ ಪರಿಷತ್ತು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ವಿಧಾನ ಸಭೆಯು ಶಿಫಾರಸ್ಸು ಮಾಡಿದೆ :

ಅ. ಮಸೀದಿಗಳಿರುವ ಆವರಣಗಳಲ್ಲಿ ಬಂಗಲೆಗಳೂ ಇದ್ದರೆ, ಅವನ್ನು ಸಂಬಂಧಪಟ್ಟ ಇಲಾಖೆಗಳು ವಾರಸುದಾರರಿಗೆ ವಹಿಸಿಕೊಡಬೇಕು ಮತ್ತು ಹಾಗೆ ವಹಿಸಿಕೊಡುವಾಗ ಮಸೀದಿಗಳನ್ನು ರಕ್ಷಿಸಲಾಗಲಿ ಅಥವಾ ಮಸೀದಿಗಳಲ್ಲಿ ಮುಸ್ಲಿಮರು ಪ್ರಾರ್ಥನೆಯನ್ನು ಸಲ್ಲಿಸಲಾಗಲಿ ವಾರಸುದಾರರು ಅಡ್ಡಿ ಮಾಡಬಾರದು ಎಂದು ನಿರ್ಬಂಧಿಸಬೇಕು. ಮತ್ತು

ಆ. ಅವರು, ನವದೆಹಲಿಯಲ್ಲಿರುವ ಮಸೀದಿಗಳನ್ನು ದುರಸ್ತಿ ಮಾಡಲು, ರಕ್ಷಿಸಲು ಅಥವಾ ಮತ್ತೆ ಕಟ್ಟಲು ಮುಂದೆ ಬರುವಂಥ ಮುಸಲ್ಮಾನರಿಗೆ ಎಲ್ಲ ಅನುಕೂಲಗಳನ್ನೂ, ಸಹಾಯವನ್ನೂ,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ೩೦–೩–೧೯೪೪, ಪು. ೧೭೯೮.

ಅಗತ್ಯವಾದ ಅಧಿಕೃತ ಅನುಮತಿಗಳನ್ನೂ ಕೊಡಬೇಕೆಂದು ಸಂಬಂಧಪಟ್ಟ ಇಲಾಖೆಗಳಿಗೆ ನವದೆಹಲಿಯ ನಗರಪಾಲಿಕೆ ಆದೇಶ ಕೊಡಬೇಕು"

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೇ, ಈ ಗೊತ್ತುವಳಿಯನ್ನು ಭಾಗ (ಅ) ಮತ್ತು ಭಾಗ (ಆ) ಎಂದು ಎರಡು ಭಾಗಗಳಾಗಿ, ವಿಂಗಡಿಸಲಾಗಿದೆ. ನನಗೆ ಭಾಗ (ಅ) ಮಾತ್ರ ಸಂಬಂಧಿಸಿದೆ. ಭಾಗ (ಆ) ಶಿಕ್ಷಣ, ಆರೋಗ್ಯ ಮತ್ತು ಭೂ ಅಭಿವೃದ್ಧಿ ಇಲಾಖೆಯ ಸನ್ಮಾನ್ಯ ಕಾರ್ಯದರ್ಶಿಗಳಿಗೆ ಸಂಬಂಧಿಸಿರುವುದು. ನನಗೆ ಸಂಬಂಧಿಸಿದ ಭಾಗ (ಅ) ಎರಡು ಶಿಫಾರಸ್ಸುಗಳನ್ನು ಮಾಡಿದೆ. ಮಸೀದಿಗಳು ಇರುವ ಬಂಗಲೆಗಳನ್ನು ಸರ್ಕಾರವು ಭಾರತ ಸರ್ಕಾರದ ನೌಕರರಿಗೆ ವಹಿಸಿಕೊಡಬೇಕೆಂಬುದು ಮೊದಲನೆಯದು. ಅಂಥ ಮಸೀದಿಗಳನ್ನು ರಕ್ಷಿಸಲು ಅಥವಾ ಪ್ರಾರ್ಥನೆಗಳಿಗಾಗಿ ಉಪಯೋಗಿಸಿಕೊಳ್ಳಲು ಯಾರಾದರೂ ಮುಂದೆ ಬಂದರೆ, ಅವರಿಗೆ ಅಡ್ಡಿಮಾಡಬಾರದು ಎಂಬ ಆದೇಶವನ್ನು ಆ ಬಂಗಲೆಗಳಲ್ಲಿ ವಾಸಿಸುವವರಿಗೆ ಕೊಡುವುದು ಎಂಬುದು ಎರಡನೆಯದು.

ಆದರೆ ಈ ಎರಡರಲ್ಲಿ ಯಾವುದನ್ನೂ ನಾನು ಒಪ್ಪುವುದಿಲ್ಲ ಎಂಬುದನ್ನು ನಾನು ವಿಷಾದಪೂರ್ವಕವಾಗಿ ಹೇಳಬಯಸುತ್ತೇನೆ. ಹೀಗೆ ನಾನು ಹೇಳುತ್ತಿರುವುದು, ಈ ಗೊತ್ತುವಳಿಯನ್ನು ಸೂಚಿಸುತ್ತಿರುವ ನನ್ನ ಸನ್ಮಾನ್ಯ ಮಿತ್ರರ ಭಾವನೆಗಳಿಗೆ ನಾನು ಮನ್ನಣೆ ಕೊಡುತ್ತಿಲ್ಲವೆಂಬ ಕಾರಣಕ್ಕಲ್ಲ; ಈ ಗೊತ್ತುವಳಿಯನ್ನು ಒಪ್ಪಿಕೊಳ್ಳುವುದರಿಂದ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ ಎಂಬ ಕಾರಣಕ್ಕಾಗಿ.

ಈ ಗೊತ್ತುವಳಿಯ ಮೊದಲನೆಯ ಭಾಗಕ್ಕೆ ಸಂಬಂಧಿಸಿದಂತೆ, ನನ್ನ ಸನ್ಮಾನ್ಯ ಮಿತ್ರರಾದ ಸರ್ ಯಾಮೀನ್ ಖಾನ್, ಸರ್ಕಾರವು ಒಂದು ಬಂಗಲೆಯನ್ನು ಈಗಾಗಲೇ ಒಬ್ಬ ಸನ್ಮಾನ್ಯ ಮುಸ್ಲಿಂ ಸದಸ್ಯರಿಗೆ ವಹಿಸಿಕೊಟ್ಟಿದೆ ಅಥವಾ ಕಾಯ್ದಿರಿಸಿದೆ ಎಂದು ಹೇಳಿದರು. ನಾನು ಹೇಳಿದ ಸಿದ್ಧಾಂತವನ್ನು ಒಪ್ಪಿ ಅವರು ಈ ರೀತಿ ಮಾತನಾಡುತ್ತಿದ್ದಾರೆ ಎಂದು ನನಗನ್ನಿಸುತ್ತದೆ. ಆದರೆ ಮಾನ್ಯರೇ, ಇದು ತಪ್ಪು ಎಂದು ನಾನು ನಿರುಪಾಧಿಕವಾಗಿ ಹೇಳುತ್ತೇನೆ. ಯಾವ ಬಂಗಲೆಯನ್ನೂ ಯಾವ ಸನ್ಮಾನ್ಯ ಸದಸ್ಯರಿಗೂ ಕಾಯ್ದಿರಿಸಿಲ್ಲ. ಅವರು ಪ್ರಸ್ತಾಪಿಸಿದ ಬಂಗಲೆಯಲ್ಲಿ ಒಬ್ಬ ಮುಸ್ಲಿಂ ಸದಸ್ಯರು ವಾಸಿಸುತ್ತಿರುವುದು ಕೇವಲ ಆಕಸ್ಮಿಕ. ಆದರೆ, ಮುಂದೆ ಒಂದು ವೇಳೆ ಆ ಮನೆಯು ತೆರವಾದರೆ – ಅದು ತೆರವಾಗುವುದಿಲ್ಲವೆಂಬ ನಂಬಿಕೆ ನನಗಿದೆ – ಅದನ್ನು ಪಡೆಯುವ ಹಕ್ಕು ಯಾವುದೇ ಹಿರಿಯ ಸದಸ್ಯರಿಗಾದರೂ ಇದೆ. ಇಲ್ಲಿ ಅಂಥ ಸನ್ಮಾನ್ಯ ಸದಸ್ಯರು ಮುಸ್ಲಿಮರಿರಬೇಕೆ ಮುಸ್ಲಿಮೇತರರಿರಬೇಕೆ ಎಂಬ ಪ್ರಶ್ನೆ ಏಳುವುದಿಲ್ಲ – ಇದರಲ್ಲಿ ಯಾರಿಗೂ ಸಂಶಯ ಬೇಡ.

**ಸರ್ ಮುಹಮ್ಮದ್ ಯಾಮೀನ್ ಖಾನ್** : ಆದರೆ ಅಡ್ಡ ಗೋಡೆಯನ್ನು ಆಗಲೇ ಕಟ್ಟಲಾಗಿದೆಯಲ್ಲ!

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** : ಅದು ಬೇರೆ ವಿಷಯ. ನಾನು ಕೇವಲ ನಿಯಮದ ಬಗ್ಗೆ ಮಾತಾಡುತ್ತಿದ್ದೇನಷ್ಟೆ.

ಆದ್ದರಿಂದ, ಭಾರತ ಸರ್ಕಾರವು ಈ ನಿಯಮವನ್ನು ಒಪ್ಪಿಕೊಂಡಿಲ್ಲ. ನನ್ನ ಸನ್ಮಾನ್ಯ ಮಿತ್ರರಿಗೆ ನಾನು ತಿಳಿಸುವುದಿಷ್ಟೆ. ಸದ್ಯಕ್ಕಂತೂ ಸರ್ಕಾರವು ಇಂಥ ಕಠಿಣ ನಿಯಮವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಮಾನ್ಯರೇ, "ಈ ನಿಯಮವನ್ನು ಒಪ್ಪಿಕೊಳ್ಳುವುದು". ಅನ್ನುವುದರ ಅರ್ಥವೇನು? ಇದಕ್ಕೆ ಎರಡು ಅರ್ಥಗಳಿವೆ. ಈ ಗೊತ್ತುವಳಿಯ ವಿಷಯವಾಗಿರುವ ಬಂಗಲೆಗಳಲ್ಲಿ ವಾಸಿಸುತ್ತಿರುವ ಮುಸ್ಲಿಮೇತರರಿಗೆ ನೋಟೀಸು ಜಾರಿ ಮಾಡಿ, ಅವರನ್ನು ಮನೆ ಬಿಡಿಸಬೇಕು, ಎಂಬುದು ಇದರ ಅರ್ಥ. ಸರ್ಕಾರವು ಈ ಗೊತ್ತುವಳಿಯನ್ನು ಒಪ್ಪಿಕೊಂಡರೆ ಉಂಟಾಗುವ ಪರಿಣಾಮ ಇದು.

ಈ ಗೊತ್ತುವಳಿಯನ್ನು ಒಪ್ಪಿಕೊಂಡರೆ ಆಗುವ ಎರಡನೆ ಪರಿಣಾಮ ಹೀಗಿದೆ : ಒಂದು ವೇಳೆ ಅಂಥ ಬಂಗಲೆಯೊಂದು ಖಾಲಿ ಇತ್ತು ಎಂದು ಊಹಿಸೋಣ. ಭಾರತ ಸರ್ಕಾರವು ಒಬ್ಬ ನೌಕರನನ್ನು ದೆಹಲಿಯ ಹೊರಗಿನಿಂದ ಕರೆಸಿಕೊಂಡರೆ, ಮತ್ತು ಅವನು ದೆಹಲಿಯಲ್ಲೇ ಇರಬೇಕಾದುದು ಅತ್ಯವಶ್ಯವಿದ್ದರೆ, ಆಗ ಅಂಥ ಬಂಗಲೆಯನ್ನು ಅವನಿಗೆ ಕೊಡಲಾಗುತ್ತದೆ ಎಂದು ಊಹಿಸೋಣ. ಆಗ ಆ ನೌಕರನು ಮುಸ್ಲಿಮೇತರನಿದ್ದರೆ, ಸರ್ಕಾರವು ಆ ಬಂಗಲೆಯನ್ನು ಅವನಿಗೆ ಕೊಡಬಾರದು ಎಂದಾಗುತ್ತದೆ. ಆದ್ದರಿಂದ, ಮಾನ್ಯರೇ, ಇದೊಂದು ಅಸಾಧ್ಯ ಷರತ್ತು ಎಂಬುದು ನನ್ನ ವಿನಯಪೂರ್ವಕ ಹೇಳಿಕೆ. ಈಗಿನ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕೆಂದರೆ, ವಾಸಸ್ಥಳದ ಕೊರತೆ ಇಷ್ಟೊಂದು ಹೆಚ್ಚಾಗಿರುವಾಗ, ನಾವು ಇಲ್ಲಿಗೆ ಕರೆಸಿಕೊಂಡ ಅಧಿಕಾರಿಗಳು ಗುಡಿಸಲಿನಂಥ ಮನೆಗಳಲ್ಲಿ ಮತ್ತು ಸಿಕ್ಕ ಸಿಕ್ಕಲ್ಲೇ ವಾಸಿಸುತ್ತಿರುವಾಗ, ಸರ್ಕಾರವು ಇಂಥದೊಂದು ನಿಯಮವನ್ನು ಜಾರಿಗೊಳಿಸಿತೆಂದರೆ, – ಇದನ್ನು ನನಗೆ ಹೇಳಲು ಸಂಕೋಚವಾಗುತ್ತಿದೆ – ಅದೊಂದು ರೀತಿಯ 'ಗೋದಣಿಗೆಯಲ್ಲಿನ ನಾಯಿಯ ನೀತಿ'ಯಾಗುತ್ತದೆ.* ಇಂಥ ಪರಿಸ್ಥಿತಿಯಲ್ಲಿ ಸರ್ಕಾರವು ಇದು ಒಪ್ಪಿಕೊಳ್ಳುವಂತಹುದಲ್ಲ ಎಂಬುದನ್ನು ನನ್ನ ಸನ್ಮಾನ್ಯ ಮಿತ್ರರು ಸುಲಭವಾಗಿ ಮನಗಾಣುತ್ತಾರೆ.

ಈಗ ಗೊತ್ತುವಳಿಯ ಎರಡನೆಯ ಭಾಗಕ್ಕೆ ಬರೋಣ. ಈ ಭಾಗವು ಆ ಬಂಗಲೆಗಳಲ್ಲಿ ವಾಸಿಸುತ್ತಿರುವವರ ಮೇಲೆ ಸರ್ಕಾರವು ಕೆಲವು ನಿರ್ಬಂಧಗಳನ್ನು ಹೇರಬೇಕು ಎಂದು ತಿಳಿಸುತ್ತದೆ. ಆದರೆ ಇದೂ ಸಹ ಕೆಲವು ದೊಡ್ಡ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂದು ಹೇಳಲು ನಾನು ವಿಷಾದಿಸುತ್ತೇನೆ. ಮಾನ್ಯರೇ, ಮನೆ ಮಾಲೀಕರು ಬಾಡಿಗೆದಾರರ ಮೇಲೆ ಕೆಲವು ನಿರ್ಬಂಧಗಳನ್ನು ಹೇರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಮಾಲೀಕನು ಆವರಣವನ್ನು ಸುಸ್ಥಿತಿಯಲ್ಲಿಡುವ ಮುಖ್ಯ ಉದ್ದೇಶದಿಂದ ಬಾಡಿಗೆದಾರನ ಮೇಲೆ ನಿರ್ಬಂಧಗಳನ್ನು ಹೇರುತ್ತಾನೆ, ಎಂಬುದನ್ನು ನನ್ನ ಸನ್ಮಾನ್ಯ ಮಿತ್ರ ಸರ್ ಯಾಮೀನ್ ಖಾನ್‌ರು ಒಪ್ಪುತ್ತಾರೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಇದನ್ನು ವಿಸ್ತಾರವಾಗಿ ಹೇಳಲು ನನಗೆ ಸಮಯವಿಲ್ಲ. ಆದರೆ ಯಾವ ನಿರ್ಬಂಧಗಳನ್ನು ಸರ್ಕಾರವು ಬಾಡಿಗೆದಾರರ ಮೇಲೆ ಹೇರಬೇಕೆಂದು ನನ್ನ ಮಿತ್ರರು ಆಶಿಸುತ್ತಾರೆಯೋ ಆ ನಿರ್ಬಂಧಗಳು ಸಮರ್ಥನೀಯವಲ್ಲ, ಏಕೆಂದರೆ, ಅವುಗಳ ಉದ್ದೇಶ ಆವರಣದ ರಕ್ಷಣೆಯಲ್ಲ.

ಈಗ ಮಾನ್ಯರೇ, ನಾನು ಎರಡನೆಯ ಸಮಸ್ಯೆಗೆ ಬರುತ್ತೇನೆ. ಈ ರೀತಿಯ ನಿರ್ಬಂಧಕ್ಕೊಳಗಾದ ಬಾಡಿಗೆದಾರನ ಪಾಡೇನಾಗುತ್ತದೆ? ಬಾಡಿಗೆದಾರನು ಮುಸ್ಲಿಮನಾಗಲಿ, ಮುಸ್ಲಿಮೇತರನಾಗಲಿ, ಅವನು ನಮಾಜು ಮಾಡಲು ಒಳಗೆ ಬರುವ ಯಾರಿಗೇ ಆಗಲಿ ಅನುಮತಿ ಕೊಡಬೇಕು, ಎಂಬ ಗೊತ್ತುವಳಿಯಲ್ಲಿ ನಮೂದಿತವಾಗಿರುವ ನಿಯಮವನ್ನು ಜಾರಿಗೆ ತಂದರೆ, ಆಗ ಆವರಣದ ಏಕಾಂತತೆಗೆ ಭಂಗ ಬಂದು, ಆವರಣವು ಒಂದು ರೀತಿಯ ಮುಸಾಫಿರ್‌ಖಾನೆಯಾಗಿಬಿಡುತ್ತದೆ. ಇದರಲ್ಲೇನೂ ಸಂದೇಹವಿಲ್ಲ. ನಾನು ಹೇಳುತ್ತಿರುವುದು ಅತಿಶಯೋಕ್ತಿಯಲ್ಲ ಎಂಬುದು ಖಂಡಿತ. ಅಂತಹ ನಿರ್ಬಂಧವನ್ನು ಮುಸ್ಲಿಮೇತರ ಬಾಡಿಗೆದಾರನ ಮೇಲೆ ಹೇರುವುದು ಬಹಳ ಕಷ್ಟ ಎಂಬುದರಲ್ಲಿ ನನಗೆ ಸಂದೇಹವೇ ಇಲ್ಲ; ಅಂಥ ನಿರ್ಬಂಧವನ್ನು ಯುರೋಪಿಯನ್ ಬಾಡಿಗೆದಾರನ ಮೇಲೆ ಹೇರಬೇಕೆಂದು ನನ್ನ ಸನ್ಮಾನ್ಯ ಮಿತ್ರರು ನನಗೆ ಸೂಚಿಸುತ್ತಿದ್ದಾರೆಯೋ ಆ ನಿರ್ಬಂಧ ಮುಸ್ಲಿಂ ಬಾಡಿಗೆದಾರರಿಗೂ ಸಮ್ಮತವಾಗುವುದಿಲ್ಲ ಎಂದು

* ಕೊಟ್ಟಿಗೆಯಲ್ಲಿರುವ ನಾಯಿ ಹುಲ್ಲನ್ನು ತಾನೂ ತಿನ್ನುವುದಿಲ್ಲ, ದನಗಳಿಗೂ ತಿನ್ನಲು ಬಿಡುವುದಿಲ್ಲ.

ನಾನು ಧೈರ್ಯವಾಗಿ ಹೇಳಬಲ್ಲೆ. ಗೊತ್ತುವಳಿಯಲ್ಲಿ ಪ್ರಸ್ತಾಪಿಸಿರುವ ಬಂಗಲೆಯಲ್ಲಿ ವಾಸವಾಗಿರುವ ನನ್ನ ಸನ್ಮಾನ್ಯ ಸಹೋದ್ಯೋಗಿಗಳು, ತಮ್ಮದೇ ಆದ ಧಾರ್ಮಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರೂ ಸಹ, ನಮಾಜು ಮಾಡಲು ಬರುವ ಗುಂಪಿಗೆ ತಮ್ಮ ಆವರಣದೊಳಕ್ಕೆ ಬಿಡುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಮಾನ್ಯರೇ, ನಾನು ಈಗ ಕೊಟ್ಟ ಕಾರಣಗಳು ತಾತ್ಕಾಲಿಕವಲ್ಲ ಎಂಬುದನ್ನು ನನ್ನ ಸನ್ಮಾನ್ಯ ಮಿತ್ರರು ಒಪ್ಪುತ್ತಾರೆಂದು ಭಾವಿಸಿ, ಆ ಕಾರಣಗಳಿಗಾಗಿ, ಈ ಗೊತ್ತುವಳಿಗೆ ನನ್ನ ಒಪ್ಪಿಗೆ ಇಲ್ಲ ಎಂದು ಹೇಳಲು ವಿಷಾದಿಸುತ್ತೇನೆ.

## ೩೧
## ಕಾರ್ಖಾನೆಗಳ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಇಲಾಖೆ ಸದಸ್ಯರು) :

ಮಾನ್ಯರೇ,

"೧೯೩೪ರ ಕಾರ್ಖಾನೆ ಶಾಸನದಲ್ಲಿ ತಿದ್ದುಪಡಿ ಮಾಡಲೋಸ್ಕರ ಈ ಮಸೂದೆಯನ್ನು ಪರಿಶೀಲಿಸಬೇಕು" ಎಂದು ನಾನು ಸೂಚಿಸುತ್ತೇನೆ.

ಈ ಮಸೂದೆಯು ಶಾಸಕಾಂಗದ ಒಂದು ಬಹಳ ಸರಳವಾದ ಅಂಗ ಮತ್ತು ಯಾವುದೇ ವಿವಾದಕ್ಕೊಳಗಾಗದ ಅಂಗ. ಈ ಮಸೂದೆಯು ನಾಲ್ಕು ತಿದ್ದುಪಡಿಗಳನ್ನು ಮಾಡಲು ಉದ್ದೇಶಿಸಿದೆ, ಮತ್ತು ಮಸೂದೆಯ ತಿದ್ದುಪಡಿಗೊಳಗಾಗಬೇಕಾದ ಖಂಡಗಳು ೯, ೧೯, ೨೩, ೪೫ ಮತ್ತು ೫೪.

ಖಂಡ ೯, ಹೀಗೆ ಹೇಳುತ್ತದೆ : ಕಾರ್ಖಾನೆಯ ಫಲಾನುಭವಿಗಳು ಅದನ್ನು ಪ್ರಾರಂಭಿಸುವ ಮೊದಲು ಕಾರ್ಖಾನೆಗಳ ಇನ್‌ಸ್ಪೆಕ್ಟರನಿಗೆ ಆ ಬಗ್ಗೆ ಒಂದು ಮುನ್ಸೂಚನೆಯನ್ನೂ ಕೆಲವು ಮಾಹಿತಿಗಳನ್ನೂ ಕಳಿಸಬೇಕು. ಆದರೆ, ಈ ಭಾಗವು ಇನ್‌ಸ್ಪೆಕ್ಟರನಿಗೆ ತನಗೆ ಸೂಕ್ತವೆಂದು ಕಂಡುಬಂದ ಮಾಹಿತಿಗಳನ್ನು ಕಾರ್ಖಾನೆಯ ಫಲಾನುಭವಿಗಳಿಂದ ಪಡೆಯುವ ಅಧಿಕಾರವಿಲ್ಲವೆಂದೂ, ಫಲಾನುಭವಿಗಳೂ ಸಹ ಅಂಥ ಮಾಹಿತಿಗಳನ್ನು ಕೊಡಬೇಕೆಂಬ ನಿರ್ಬಂಧವಿಲ್ಲವೆಂದೂ ತಿಳಿದು ಬಂದಿದೆ. ಒಬ್ಬ ಫಲಾನುಭವಿಯು ಮತ್ತೊಂದು ಕಾರ್ಖಾನೆಯನ್ನು ಪ್ರಾರಂಭಿಸುವವನಿದ್ದು, ಅವನು ಕಾರ್ಖಾನೆಗಳ ಇನ್‌ಸ್ಪೆಕ್ಟರನು ಕೇಳುತ್ತಿರುವ ಕೆಲವು ಮುಖ್ಯ ಮಾಹಿತಿಗಳನ್ನು ಕೊಡಲು ನಿರಾಕರಿಸಿರುವುದು ಇತ್ತೀಚೆಗೆ ನಮಗೆ ಕಂಡುಬಂದಿದೆ. ಈ ತೊಂದರೆಯನ್ನು ನಿವಾರಿಸಲೋಸ್ಕರ ಖಂಡ ೯ ನ್ನು ತಿದ್ದಬೇಕಾಗಿದೆ. ಈ ತಿದ್ದುಪಡಿಯು ಇನ್‌ಸ್ಪೆಕ್ಟರನಿಗೆ ಬೇಕಾದ ಕೆಲವು ಮಾಹಿತಿಗಳನ್ನು ಪಡೆಯಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ ೧೯, ಕಾರ್ಖಾನೆಗಳಲ್ಲಿನ ನೀರಿನ ಸರಬರಾಜು ಮತ್ತು ಶೌಚಾಲಯಗಳಿಗೆ ಸಂಬಂಧಿಸಿದೆ. ಈ ಭಾಗವು ಸದ್ಯಕ್ಕೆ, ಕಾರ್ಮಿಕರು ಎಲ್ಲಿ ಅನಾರೋಗ್ಯಕರ ಹಾಗೂ ಅಸಹ್ಯಕರ ವಸ್ತುಗಳ ಸಂಪರ್ಕಕ್ಕೆ ಬರುತ್ತಾರೋ ಅಂಥ ಕಾರ್ಖಾನೆಗಳಲ್ಲಿ ಶೌಚಾಲಯಗಳಿರಬೇಕೆಂದು ವಿಧಿಸುತ್ತದೆ. ಆದರೆ ಈ ಎರಡು ರೀತಿಯ ಕಾರ್ಖಾನೆಗಳ ಮಾಲೀಕರು ಶೌಚಾಲಯಗಳನ್ನು ಕಟ್ಟಿಸಬೇಕು ಎಂದು ಈ ಖಂಡ ವಿಧಿಸುವುದಿಲ್ಲ,

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೩, (೧೯೪೪), ೪–೪–೧೯೪೪ ಪು–೧೯೨೯.

ಇಂಥ ದೋಷಗಳನ್ನು ನಿವಾರಿಸಬೇಕೆಂಬ ಸಲಹೆಗಳೂ ಬಂದಿವೆ; ಏಕೆಂದರೆ ಶೌಚಾಲಯಗಳು, ಅನಾರೋಗ್ಯಕರ ಹಾಗೂ ಅಸಹ್ಯಕರ ವಸ್ತುಗಳ ಸಂಪರ್ಕಕ್ಕೆ ಬರುವ ಕಾರ್ಮಿಕರಿಗಷ್ಟೇ ಅಲ್ಲ, ಎಲ್ಲ ರೀತಿಯ ಕಾರ್ಮಿಕರಿಗೂ ಆವಶ್ಯಕ. ಆದ್ದರಿಂದ ಈ ತಿದ್ದುಪಡಿಯು ಎಲ್ಲ ಕಾರ್ಖಾನೆ ಜೊತೆಗೂ ಶೌಚಾಲಯಗಳಿರಬೇಕೆಂದು ನಿರ್ಬಂಧಿಸುತ್ತದೆ.

ಖಂಡ ೨೩, ಕಾರ್ಖಾನೆಗಳಲ್ಲಿ ಸಂಭವಿಸುವ ಬೆಂಕಿ ಅನಾಹುತಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ. ಇಲ್ಲಿಯೂ ಸಹ ಈ ಭಾಗವು ದೋಷಯುಕ್ತವೆಂದು ಕಂಡುಬಂದಿದೆ. ಅಂದರೆ, ಅದು ಕಾರ್ಖಾನೆಗಳ ಫಲಾನುಭವಿಗಳ ಇಚ್ಛೆಗೆ ಬಿಟ್ಟಿದ್ದು. ಒಂದು ಕಾರ್ಖಾನೆಯಲ್ಲಿ ಬೆಂಕಿ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಎಷ್ಟು ಮಾರ್ಗಗಳು ಅಗತ್ಯ ಎಂಬುದನ್ನು ನಿರ್ಧರಿಸಲು ಈ ಭಾಗವು ಸರ್ಕಾರಕ್ಕೆ ಯಾವ ಅಧಿಕಾರವನ್ನೂ ಕೊಡುವುದಿಲ್ಲ. ಆದುದರಿಂದ ಖಂಡ ೨೩ನ್ನು ಈ ಮಸೂದೆಯ ಮೂಲಕ ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ, ಆಯಾ ಕಾರ್ಖಾನೆಗಳಲ್ಲಿ ಬೆಂಕಿಯಿಂದ ತಪ್ಪಿಸಿಕೊಳ್ಳುವ ಮಾರ್ಗಗಳ ಸಂಖ್ಯೆಯು ಕಾರ್ಖಾನೆಗಳ ಇನ್ಸ್ಪೆಕ್ಟರನಿಗೆ ಎಷ್ಟು ಆವಶ್ಯಕವಾಗಿ ಇರಲೇಬೇಕು ಎನಿಸುತ್ತದೆಯೋ ಅಷ್ಟು ಆವಶ್ಯಕ ಸಂಖ್ಯೆಯನ್ನು ನಿಗದಿಪಡಿಸಲು ಸರ್ಕಾರಕ್ಕೆ ಅಧಿಕಾರ ಸಿಗುತ್ತದೆ.

ಮಾನ್ಯರೇ, ಖಂಡ ೪೫ ಮತ್ತು ೫೪ರ ಪರಿಸ್ಥಿತಿ ಹೀಗಿದೆ : ಇವು ಎರಡು ವಿಷಯಗಳಿಗೆ ಸಂಬಂಧಿಸಿದ ಭಾಗಗಳು. ಕಾರ್ಖಾನೆಯಲ್ಲಿ ಮಕ್ಕಳು ಮತ್ತು ಹೆಂಗಸರು ಎಷ್ಟು ಗಂಟೆ ಕೆಲಸ ಮಾಡಬೇಕು ಎಂಬುದಕ್ಕೆ ಸಂಬಂಧಿಸಿವೆ; ಅಲ್ಲದೆ, ಅವರ ಕೆಲಸದ ಸಮಯವನ್ನು ಎಷ್ಟೆಷ್ಟು ಭಾಗಗಳಾಗಿ ವಿಂಗಡಿಸಬೇಕು ಎಂಬುದಕ್ಕೂ ಅವು ಸಂಬಂಧಿಸಿವೆ. ಈಗಿನ ತಿದ್ದುಪಡಿಯು ಮಕ್ಕಳು ಮತ್ತು ಹೆಂಗಸರು ಗಿರಣಿಗಳಲ್ಲಿ ಮಾಡಬೇಕಾದ ಕೆಲಸದ ಕಾಲಾವಧಿಗೆ ಸಂಬಂಧಿಸಿದ ನಿಯಮವನ್ನೇನೂ ಬದಲಾಯಿಸುವುದಿಲ್ಲ; ಅಲ್ಲದೆ, ೧೩ ಗಂಟೆಗಳ ಅವಧಿಯ ಹಂಚುವಿಕೆಗೆ ಸಂಬಂಧಿಸಿದ ನಿಯಮವನ್ನು ಬದಲಾಯಿಸುವುದಿಲ್ಲ. ಈಗ ಮಾಡುವ ತಿದ್ದುಪಡಿ ಕೇವಲ ಸಾಯಂಕಾಲದ ೭–೩೦ರಿಂದ ೮–೩೦ರ ವರೆಗಿನ ಕಾಲದ ಬದಲಾವಣೆಗಷ್ಟೇ ಸಂಬಂಧಿಸಿದೆ. ಈ ಬದಲಾವಣೆಯು ಆವಶ್ಯಕವೆಂದು ತೋರಿಸುವ ಎರಡು ಕಾರಣಗಳಿವೆ. ಮೊದಲನೆಯದು, ಸ್ಟ್ಯಾಂಡರ್ಡ್ ಟೈಂ ಈಗ ಬದಲಾಗಿರುವುದರಿಂದ ಮತ್ತು ಎರಡನೆಯದು, ವಿದ್ಯುತ್ತನ್ನು ಉಳಿಸುವ ಆವಶ್ಯಕತೆಯಿಂದ.

ಮಾನ್ಯರೆ, ಈ ಮಸೂದೆಯು ಮಾಡಿಕೊಡುವ ಉಪಬಂಧಗಳನ್ನು ಇನ್ನೂ ಹೆಚ್ಚಿಗೆ ವಿವರಿಸುವ ಅಗತ್ಯವಿಲ್ಲವೆಂದು ಭಾವಿಸಿ, ನಾನು ಅದನ್ನು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : "ಕಾರ್ಖಾನೆ ಶಾಸನ (೧೯೩೪)ರಲ್ಲಿ ತಿದ್ದುಪಡಿ ಮಾಡಲೋಸ್ಕರ ಈ ಮಸೂದೆಯನ್ನು ಪರಿಶೀಲಿಸಬೇಕು" ಎಂದು ಸೂಚಿಸಲಾಗಿದೆ.

ಮೌಲ್ವಿ ಮುಹಮ್ಮದ್ ಅಬ್ದುಲ್ ಘನಿಯವರು ತಿದ್ದುಪಡಿ ನೋಟೀಸನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಆದರೆ ಅವರು ಈಗ ಸದನದಲ್ಲಿಲ್ಲ. ಆದರೂ ಸದನವು ಮಸೂದೆಯ ಪರಿಶೀಲನೆಯನ್ನು ಕೈಗೆತ್ತಿಕೊಳ್ಳಲಿ.

**ಶ್ರೀ ಮುಹಮ್ಮದ್ ನೌಮನ್ (ಪಟ್ನಾ, ಛೋಟಾ ನಾಗಪುರ ಮತ್ತು ಒರಿಸ್ಸಾ, ಮಹಮ್ಮದೀಯರು)**: ಮಾನ್ಯರೆ, ಸನ್ಮಾನ್ಯ ಸದಸ್ಯರು ಸ್ಪಷ್ಟಪಡಿಸಿರುವ ಮಸೂದೆಯನ್ನೂ ಅದರ ತತ್ವವನ್ನೂ ನಾನು ಒಪ್ಪುತ್ತೇನೆ. ನನ್ನ ಒಂದೇ ಆಕ್ಷೇಪಣೆಯೆಂದರೆ: ಇಂಥ ತಿದ್ದುಪಡಿಗಳೂ ಅಗತ್ಯವೇ, ಇಲ್ಲವೇ ಎಂಬುದನ್ನು ನಿಜವಾಗಿಯೂ ನಿರ್ಧರಿಸುವ ಸಮರ್ಪಕ ಜನರೆಂದರೆ, ಮಂಡಳಿಗಳು ಮತ್ತು ವರ್ತಕರು. ಆದರೆ ಸನ್ಮಾನ್ಯ ಸದಸ್ಯರು

ಅವರ ಸಲಹೆ ಸೂಚನೆಗಳನ್ನು ಪಡೆಯುವ ತೊಂದರೆಯನ್ನು ತೆಗೆದುಕೊಂಡಿಲ್ಲ. ಖಂಡ ೧೯ ರಲ್ಲಿ ಹೇಳಿರುವಂಥ ನಿರ್ಬಂಧಗಳನ್ನು ಹೇರಿದರೆ, ಕಾರ್ಖಾನೆಗಳನ್ನು ಹೊಂದಿರುವವರಿಗೆ ಅಥವಾ ಕಾರ್ಖಾನೆಗಳನ್ನು ಸ್ಥಾಪಿಸುವವರಿಗೆ, ತಮಗೆ ಬೇಕಾದಂಥ ನಿಯಮಾವಳಿಗಳನ್ನು ರಚಿಸಲು ಬಹಳ ಕಷ್ಟವಾದೀತೆಂಬುದು ನನ್ನ ಸಂದೇಹ. ಇದೇ ನನ್ನ ಏಕಮಾತ್ರ ಆಕ್ಷೇಪಣೆ. ಒಂದು ವೇಳೆ ಸರ್ಕಾರವು ಈ ವಿಷಯದಲ್ಲಿ ವಾಣಿಜ್ಯಕಾರರ ಮತ್ತು ಉದ್ಯಮಿಗಳ ಅಭಿಪ್ರಾಯವನ್ನು ಪಡೆಯುವ ತೊಂದರೆಯನ್ನು ತೆಗೆದುಕೊಂಡಿದೆ ಎಂದು ನನಗೆ ಮನದಟ್ಟಾದರೆ, ನಾನು ಸಂತೋಷವಾಗಿ ಈ ಸೂಚನೆಯನ್ನು ಅನುಮೋದಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ನನ್ನ ಸನ್ಮಾನ್ಯ ಮಿತ್ರರಾದ ಶ್ರೀ ಮುಹಮ್ಮದ್ ನೌಮನ್ ಎತ್ತಿದ ಪ್ರಶ್ನೆಗೆ ಸಂಬಂಧಿಸಿದಂತೆ, ನಾನು ಈ ಮಸೂದೆಯು ಭಾರತದ ಎಲ್ಲ ಭಾಗಗಳ ಕಾರ್ಖಾನೆಗಳ ಇನ್‌ಸ್ಪೆಕ್ಟರುಗಳ ಸಮ್ಮೇಳನದಲ್ಲಿ ಮಾಡಿದ ಶಿಫಾರಸುಗಳ ಫಲ ಎಂದು ಹೇಳಬಯಸುತ್ತೇನೆ. ಮಸೂದೆಯು ಈಗಿರುವಂತೆ ದೋಷಯುಕ್ತವಾಗಿದೆ ಎಂದು ತೀರ್ಮಾನಿಸಿದವರು ಅವರು. ಭಾರತದ ಎಲ್ಲ ಭಾಗಗಳ ಕಾರ್ಖಾನೆ ಇನ್‌ಸ್ಪೆಕ್ಟರುಗಳು ಸರ್ವಾನುಮತದಿಂದ ಮಾಡಿರುವ ಶಿಫಾರಸುಗಳನ್ನು ಕೇವಲ ಅನುಷ್ಠಾನಕ್ಕೆ ತರುವುದಷ್ಟೇ ಸರ್ಕಾರ ಮಾಡುತ್ತಿರುವುದು. ಈ ವಿಷಯವಾಗಿ ವಾಣಿಜ್ಯ ಮಂಡಳಿಗಳೊಡನೆ ಸಮಾಲೋಚನೆ ಮಾಡಲಾಯಿತೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆಗಳೂ ನನ್ನಲ್ಲಿಲ್ಲ. ಆದರೆ ಕಾರ್ಖಾನೆ ಶಾಸನಗಳ ಬಗ್ಗೆ ವಾಣಿಜ್ಯ ಮಂಡಳಿಗಳೊಡನೆ ಸಮಾಲೋಚನೆ ಮಾಡುವುದು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯ. ಆದರೆ ಉದ್ಯಮಿಗಳ ಸಂಸ್ಥೆಗಳೊಡನೆ ಸಮಾಲೋಚನೆ ಮಾಡಲಾಗಿದೆ ಎಂದು ಭಾವಿಸಿದ್ದೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** "೧೯೩೪ರ ಕಾರ್ಖಾನೆ ಶಾಸನದಲ್ಲಿ ತಿದ್ದುಪಡಿ ಮಾಡಲೋಸ್ಕರ ಈ ಮಸೂದೆಯನ್ನು ಪರಿಶೀಲಿಸಬೇಕು" ಎಂಬುದು ಈಗಿನ ಪ್ರಶ್ನೆ.

ಈ ಮಂಡನೆಯನ್ನು ಸ್ವೀಕರಿಸಲಾಯಿತು.

**ಶ್ರೀ ಸಿ.ಸಿ. ಮಿಲ್ಲರ್ (ಬಂಗಾಳ :** ಯುರೋಪಿಯನ್) : ಮಾನ್ಯರೇ, "ಮಸೂದೆಯಲ್ಲಿನ ಕಲಮು ೨ರ, ಸೂಚಿತವಾಗಿರುವ ಉಪಕಲಮು ೧ರ (ಎಫ್) ಭಾಗಕ್ಕೆ "ಈ ಶಾಸನದ ಸಲುವಾಗಿ" ಎಂಬ ಪದಗಳನ್ನು ಸೇರಿಸಬೇಕು" ಎಂದು ನಾನು ಸೂಚಿಸುತ್ತೇನೆ.

ಮಾನ್ಯರೇ, ಈ ತಿದ್ದುಪಡಿಯನ್ನು ಸಂಕ್ಷಿಪ್ತವಾಗಿ ಸ್ಪಷ್ಟಪಡಿಸುತ್ತೇನೆ. ಸನ್ಮಾನ್ಯ ಸದಸ್ಯರು ಈಗಾಗಲೇ ತಿಳಿಸಿರುವಂತೆ ಮೂಲ ಖಂಡ ೯, ಕೆಲವು ವಿಶಿಷ್ಟ ಶೀರ್ಷಿಕೆಗಳಡಿಯಲ್ಲಿ, ಕಾರ್ಖಾನೆಯ ಮಾಲೀಕನು ಕಾರ್ಖಾನೆಯ ಇನ್‌ಸ್ಪೆಕ್ಟರನಿಗೆ ಕೊಡಲೇಬೇಕಾದ ಮಾಹಿತಿಗಳನ್ನು ಕೊಡುತ್ತದೆ. ಒಂದು ವೇಳೆ ಹೆಚ್ಚಿನ ಮಾಹಿತಿ ಬೇಕಾದರೆ, ಮಸೂದೆಯ ಖಂಡ ೭೭ ಅದನ್ನು ಪೂರೈಸುತ್ತದೆ. ಹೀಗಿರುವಾಗ, ತಿದ್ದುಪಡಿಯ ನಿಯಮ ಆವಶ್ಯಕವೇ ಎಂಬುದು ನಮ್ಮ ಸಂದೇಹ. ಸರ್ಕಾರದ ಈ ತಿದ್ದುಪಡಿಯು ಸಕ್ರಮವೇ ಆಗಿದ್ದರೂ ಸಹ, ಇಂಥ ವಿಷಯಗಳಲ್ಲಿ ಮಾಡಲಾಗುವ ಸಮಗ್ರ ತಿದ್ದುಪಡಿಯು ಸ್ವಲ್ಪ ಅತಿಯಾಯಿತು ಎನಿಸುತ್ತದೆ. ಕಾರ್ಖಾನೆ ಇನ್‌ಸ್ಪೆಕ್ಟರನಿಗೆ ಕಾರ್ಖಾನೆ ಶಾಸನಕ್ಕೆ ಆವಶ್ಯಕವಾದ ಮಾಹಿತಿಯನ್ನು ಪಡೆಯುವ ಅಧಿಕಾರವಿರಬೇಕು ಎಂಬುದನ್ನಷ್ಟೇ ನಾವೀಗ ಕೇಳುತ್ತಿದ್ದೇವೆ. ಈ ಅಲ್ಪ ತಿದ್ದುಪಡಿಯು ಸನ್ಮಾನ್ಯ ಸದಸ್ಯರಿಗೆ ಒಪ್ಪಿಗೆಯಾಗುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** "ಮಸೂದೆಯಲ್ಲಿನ ಕಲಮು ೨ರ ಸೂಚಿತವಾಗಿರುವ ಉಪಕಲಮು ೧ರ (ಎಫ್) ಭಾಗಕ್ಕೆ, "ಈ ಶಾಸನದ ಸಲುವಾಗಿ" ಎಂಬ ಪದಗಳನ್ನು

ಸೇರಿಸಬೇಕು" ಎಂಬ ತಿದ್ದುಪಡಿಯನ್ನು ಸೂಚಿಸಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : "ಮಸೂದೆಯಲ್ಲಿನ ಕಲಮು ೨ ರ ಸೂಚಿತವಾಗಿರುವ ಉಪಕಲಮು ೧೮ (ಎಫ್) ಭಾಗಕ್ಕೆ "ಈ ಶಾಸನದ ಸಲುವಾಗಿ" ಎಂಬ ಪದಗಳನ್ನು ಸೇರಿಸಬೇಕು" ಎಂಬ ಪ್ರಶ್ನೆ ನಮ್ಮೆದುರಿಗಿದೆ.

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

ತಿದ್ದಲಾದ ಕಲಮ ೨ನ್ನು ಮಸೂದೆಗೆ ಸೇರಿಸಲಾಯಿತು.

ಕಲಮುಗಳು ೩, ೪ ಮತ್ತು ೫ನ್ನು ಮಸೂದೆಗೆ ಸೇರಿಸಲಾಯಿತು.

ಕಲಮು ೧ನ್ನು ಮಸೂದೆಗೆ ಸೇರಿಸಲಾಯಿತು.

ಶೀರ್ಷಿಕೆ ಮತ್ತು ಪೀಠಿಕೆಯನ್ನು ಮಸೂದೆಗೆ ಸೇರಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, "ತಿದ್ದಲಾದ ಶಾಸನವನ್ನು ಅಂಗೀಕರಿಸಬೇಕು" ಎಂದು ನಾನು ಸೂಚಿಸುತ್ತೇನೆ.

**ಮಾನ್ಯ ಅಧ್ಯಕ್ಷರು : (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ನಮ್ಮ ಮುಂದೆ "ತಿದ್ದಲಾದ ಶಾಸನವನ್ನು ಅಂಗೀಕರಿಸಬೇಕು" ಎಂಬ ವಿಷಯವಿದೆ.

ಗೊತ್ತುವಳಿಯನ್ನು ಅಂಗೀಕರಿಸಲಾಯಿತು.

## ೩೨

## ಕಲ್ಲಿದ್ದಲ ಗಣಿಗಳ ಕಲ್ಯಾಣ ನಿಧಿಗೆ ಸಲಹಾ ಸಮಿತಿ*

ಕಳೆದ ಜನವರಿಯಲ್ಲಿ ಮಾಡಿದ ಕಲ್ಲಿದ್ದಲ ಗಣಿಗಳ ಕಾರ್ಮಿಕರ ಕಲ್ಯಾಣ ಕಾರ್ಯಗಳ ಶಾಸನದ ಆಡಳಿತಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಸಮಸ್ಯೆಗಳನ್ನು ಕುರಿತು ಸಲಹೆ ಕೊಡಲು ಕೇಂದ್ರ ಸರ್ಕಾರವು ಸಲಹಾ ಸಮಿತಿಯೊಂದನ್ನು ರಚಿಸಿದೆ.

ಸಮಿತಿಯು ಪೂರ್ಣವಾಗಿ ರಚಿತವಾದಾಗ ಅದರಲ್ಲಿ ಈ ಕೆಳಗಿನವರು ಇರುತ್ತಾರೆ. ಕಾರ್ಯದರ್ಶಿ (ಕಾರ್ಮಿಕ ಇಲಾಖೆ); ಕಲ್ಲಿದ್ದಲು ಕಮಿಷನರ್, ಕಾರ್ಮಿಕ ಕಲ್ಯಾಣ ಸಲಹಾಕಾರ, ಗಣಿಗಳ ಮುಖ್ಯ ಇನ್‌ಸ್ಪೆಕ್ಟರ್ ; ರೇಲ್ವೆ ಮಂಡಳಿ, ಬಂಗಾಳ ಸರ್ಕಾರ, ಬಿಹಾರ ಸರ್ಕಾರ ಮತ್ತು ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್ ಸರ್ಕಾರಗಳು ನಾಮಕರಣ ಮಾಡಿದ ಒಬ್ಬೊಬ್ಬ ಅಧಿಕಾರಿ; ಭಾರತೀಯ ಗಣಿಕಾರರ ಸಂಘ ನಾಮಕರಣ ಮಾಡಿದ ಇಬ್ಬರು ವ್ಯಕ್ತಿಗಳು; ಭಾರತೀಯ ಗಣಿಕಾರರ ಫೆಡರೇಷನ್, ಭಾರತೀಯ ಗಣಿ ಮಾಲೀಕರ ಸಂಘ, ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ ಗಣಿಕಾರರ ಸಂಘಗಳು ನಾಮಕರಣ ಮಾಡಿದ ಒಬ್ಬ ವ್ಯಕ್ತಿ; ಇಬ್ಬರು ಗಣಿ ಇಂಜಿನಿಯರುಗಳು ಮತ್ತು ಗಣಿ ಮಾಲೀಕರ ಅಥವಾ ಗಣಿ ಉದ್ಯಮದಲ್ಲಿ ನೇಮಕಗೊಂಡ ಕೂಲಿಕಾರರ ಹಿತಾಸಕ್ತಿಗಿಂತ ಭಿನ್ನವಾದ ಹಿತಾಸಕ್ತಿಯನ್ನುಳ್ಳ ಇಬ್ಬರು ಪ್ರತಿನಿಧಿಗಳು.

ಇದಲ್ಲದೆ, ಗಣಿ ಕಾರ್ಮಿಕರ ಹಿತಾಸಕ್ತಿಯನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರದಿಂದ ನಾಮಕರಣಗೊಂಡ

---

* ಇಂಡಿಯನ್ ಇನ್‌ಫರ್ಮೇಷನ್, ಮೇ ೧೫, ೧೯೪೪, ಪು. ೫೨೨–೨೩.

ಐದು ಜನರು ಇರುತ್ತಾರೆ. ಇವರಲ್ಲಿ ನಾಲ್ಕು ಜನರನ್ನು ಈಗಾಗಲೇ ನೇಮಿಸಲಾಗಿದೆ ಮತ್ತು ಸದ್ಯದಲ್ಲೆ ಐದನೆಯವರನ್ನೂ ನೇಮಿಸಲಾಗುವುದು. ಈ ಶಾಸನದ ಪ್ರಕಾರ, ಸಲಹಾ ಸಮಿತಿಯಲ್ಲಿ ಒಬ್ಬ ಮಹಿಳಾ ಸದಸ್ಯರೂ ಇರಬೇಕು ಮತ್ತು ಈ ನಾಮಕರಣವೂ ಸದ್ಯದಲ್ಲೇ ಆಗುವುದೆಂದು ನಿರೀಕ್ಷಿಸಲಾಗಿದೆ.

ಸಮಿತಿಯು, ಈಗ ರಚಿತವಾಗಿರುವಂತೆ, ಭಾರತ ಸರ್ಕಾರದ ಈ ಕೆಳಗಿನ ಪ್ರತಿನಿಧಿಗಳನ್ನು ಒಳಗೊಂಡಿದೆ. ಶ್ರೀ ಎಸ್. ಲಾಲ್, ಕಾರ್ಮಿಕ ಖಾತೆಯ ಕಾರ್ಯದರ್ಶಿ; ಶ್ರೀ ಆರ್.ಎಸ್. ನಿಂಬ್ಕರ್, ಕಾರ್ಮಿಕ ಕಲ್ಯಾಣ ಸಲಹೆಗಾರರು; ಮತ್ತು ಶ್ರೀ ಡಬ್ಲ್ಯೂ ಎಚ್. ಕಿರ್ಬಿ, ಗಣಿಗಳ ಮುಖ್ಯ ಇನ್‌ಸ್ಪೆಕ್ಟರ್; ರೇಲ್ವೆ ಮಂಡಳಿಯ ಪ್ರತಿನಿಧಿ ಶ್ರೀ ಎ. ಓರ್; ಬಂಗಾಳ, ಬಿಹಾರ, ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ ಸರ್ಕಾರಗಳ ಪ್ರತಿನಿಧಿ ಶ್ರೀ ಎ. ಹ್ಯೂಸ್, ಐ.ಸಿ.ಎಸ್., ಬಂಗಾಳದ ಕಾರ್ಮಿಕ ಕಮಿಷನರ್; ಶ್ರೀ ಎ.ಜಿ. ಬನ್ ಐ.ಸಿ.ಎಸ್., ಅಡಿಷನಲ್ ಡೆಪ್ಯೂಟಿ ಕಮಿಷನರ್, ಧನಬಾದ್; ಸರ್ದಾರ್ ಬಹಾದೂರ್ ಇಷಾರ್ ಸಿಂಗ್, ಕಾರ್ಮಿಕ ಕಮಿಷನರ್ (ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್). ಗಣಿ ಉದ್ಯಮವನ್ನು ಪ್ರತಿನಿಧಿಸಲು ಶ್ರೀಯುತರಾದ ಜೆ. ಲ್ಯಾಟಿಮರ್, ಎಸ್.ಎಫ್. ಟಾರ್ಲೆಟನ್, ಎಂ.ಎನ್. ಮುಖರ್ಜಿ, ಆರ್.ಡಿ. ರಾಥೋಡ್, ಮತ್ತು ಎ.ಇ. ಡಗ್ಲಾಸ್ ಇವರನ್ನು ನಾಮಕರಣ ಮಾಡಿದ್ದು, ಇವರೂ ಸಲಹಾ ಸಮಿತಿಯಲ್ಲಿರುತ್ತಾರೆ.

**ಮೊದಲ ಸಭೆ**

ನಾಲ್ಕು ಜನ ಕಾರ್ಮಿಕರ ಪೈಕಿ ಶ್ರೀಯುತರಾದ ಪಿ. ಭಟ್ಟಸಾಲಿ ಮತ್ತು ಎಚ್. ಗೋಸಾಲ್ ಇಂಡಿಯನ್ ಫೆಡರೇಶನ್ ಆಫ್ ಲೇಬರ್‌ಗೆ ಸೇರಿದ ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ ಹಾಗೂ ಶ್ರೀಯುತರಾದ ನಿರ್ಪಾದ ಮುಖರ್ಜಿ ಮತ್ತು ಚಪಾಲ್ ಭಟ್ಟಾಚಾರ್ಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಅಧೀನವಾದ ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ; ಗಣಿ ಎಂಜಿನಿಯರುಗಳಾದ ಶ್ರೀ ಎಸ್.ಎನ್. ಮಲ್ಲಿಕ್ ಮತ್ತು ಶ್ರಿ ಡಬ್ಲ್ಯು.ಎನ್. ಬುರ್ಚ್ ಅವರನ್ನು ಸಲಹಾ ಸಮಿತಿಗೆ ನೇಮಿಸಲಾಗಿದೆ.

ಏಪ್ರಿಲ್ ೨೭ರಂದು ಧನಬಾದಿನಲ್ಲಿ ನಡೆದ ಸಲಹಾ ಸಮಿತಿಯ ಮೊದಲನೆಯ ಸಭೆಗೆ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಸದಸ್ಯರು, ಭಾರತ ಸರ್ಕಾರ, ಇವರು ಅಧ್ಯಕ್ಷರಾಗಿದ್ದರು.

ತಮ್ಮ ಸಂಕ್ಷಿಪ್ತ ಪ್ರಾರಂಭಿಕ ಭಾಷಣದಲ್ಲಿ ಡಾ॥ ಅಂಬೇಡ್ಕರರು, ಕಳೆದ ಡಿಸೆಂಬರಿನಲ್ಲಿ ತ್ರಿಪಕ್ಷೀಯ ಸಮಿತಿಯ ಸಭೆಯು ನಡೆಯಿತು, ಹಾಗೂ ಅದರಲ್ಲಿ ಮೊದಲನೆಯದಾಗಿ, ಕಲ್ಲಿದ್ದಲ ಉತ್ಪಾದನೆಯ ಸಮಸ್ಯೆಯನ್ನೂ ಮತ್ತು ಎರಡನೆಯದಾಗಿ, ಕಾರ್ಮಿಕರನ್ನು ಸತತವಾಗಿ ಪಡೆಯುವ ಸಮಸ್ಯೆಯನ್ನೂ ಪರಿಶೀಲಿಸಲಾಯಿತು ಎಂಬುದನ್ನು ಸ್ಮರಿಸಿದರು. ಆ ಸಭೆಯಲ್ಲಿ ಸ್ವೀಕರಿಸಲಾದ ಸಲಹೆ ಸೂಚನೆಗಳು ಈಗ ಫಲ ಕೊಟ್ಟಿವೆ ಎಂದೂ ಹೇಳಿದರು. ಉತ್ಪಾದನೆಯ ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುವುದೆಂದೂ, ಆದರೆ ಕಲ್ಲಿದ್ದಲ ಗಣಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಶೀಲಿಸಲು ಮಾತ್ರ ಈ ಸಭೆ ಕರೆಯಲಾಗಿದೆ ಎಂದರು. ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಭಾರತ ಸರ್ಕಾರವು ಕಲ್ಲಿದ್ದಲ ಗಣಿಯ ಕಲ್ಯಾಣಕ್ಕಾಗಿ ಒಂದು ನಿಧಿಯನ್ನು ಸ್ಥಾಪಿಸಿದ ಬಗೆಗೆ ಒಂದು ಅಧ್ಯಾದೇಶವನ್ನು ಜಾರಿಗೆ ತಂದಿದೆ ಮತ್ತು ಈ ಆಜ್ಞೆಯ ಷರತ್ತುಗಳ ಪ್ರಕಾರ ಈ ಸಲಹಾ ಸಮಿತಿಯನ್ನು ನೇಮಕ ಮಾಡಲಾಗಿದೆ.

ಅನಂತರ ಸಮಿತಿಯು ತನ್ನ ಮುಂದಿರಿಸಿದ ಸಲಹಾ ಸಮಿತಿಯ ರಚನೆಗೆ ಸಂಬಂಧಿಸಿದ ಹಾಗೂ, ಆ ನಿಧಿಯಿಂದ ಮಾಡಬಹುದಾದ ಖರ್ಚು ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕರಡು ನಿಯಮಗಳನ್ನು ಚರ್ಚಿಸಿತು. ಸಲಹಾ ಸಮಿತಿಯು, ತನ್ನ ಅಧ್ಯಕ್ಷರ ಅಧೀನದಲ್ಲಿರುವ ಒಂದು

ಕಾರ್ಯಾಲಯವನ್ನು ಧನಬಾದಿನಲ್ಲಿ ಪ್ರಾರಂಭಿಸಲು ಈ ನಿಯಮಗಳು ಅವಕಾಶ ಮಾಡಿಕೊಡುತ್ತವೆ. ಈ ಸಲಹಾ ಸಮಿತಿಯಿಂದ ಆಯ್ಕೆಗೊಂಡ ಹಾಗೂ ಅದಕ್ಕೆ ಸೇರಿದ ಅನೇಕ ಉಪಸಮಿತಿಗಳಿರುತ್ತವೆ. ಆರ್ಥಿಕ ಉಪಸಮಿತಿಯು ಈ ನಿಧಿಯಿಂದ ಪಡೆದ ಎಲ್ಲಾ ಹಣದ ಖರ್ಚಿನ ಬಗೆಗೂ ಸಲಹೆ ಕೊಡುತ್ತದೆ; ಕಾಮಗಾರಿ ಉಪಸಮಿತಿಯು ಈ ನಿಧಿಯಿಂದ ಪಡೆದ ಹಣವನ್ನು ಕಾಮಗಾರಿ ಮತ್ತು ಕಟ್ಟಡಗಳ ಯೋಜನೆಗೆ ಮಾಡಬಹುದಾದ ಖರ್ಚಿನ ಬಗೆಗೆ ಸಲಹೆ ಕೊಡುತ್ತದೆ. ಬಂಗಾಳ, ಬಿಹಾರ, ಮಧ್ಯಪ್ರಾಂತ್ಯಗಳ ಮತ್ತು ಬೇರಾರ್, ಮತ್ತು ಅಸ್ಸಾಂ, ಇವುಗಳಲ್ಲಿನ ಪ್ರತಿಯೊಂದರ ಮುಖ್ಯ ಕಲ್ಲಿದ್ದಲಿನ ಕ್ಷೇತ್ರಗಳಿಗೆ ಪ್ರತ್ಯೇಕ ಕಲ್ಲಿದ್ದಲ ಕ್ಷೇತ್ರ ಉಪಸಮಿತಿ ಇದ್ದು, ಅವು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡುವ ಖರ್ಚಿನ ಬಗೆಗೆ ಸಲಹೆ ನೀಡುತ್ತವೆ. ಈ ಉಪಸಮಿತಿಗಳನ್ನು ರಚಿಸುವಾಗ ಕಲ್ಲಿದ್ದಲ ಗಣಿ ಮಾಲೀಕರಿಗೂ ಕಲ್ಲಿದ್ದಲ ಗಣಿ ಉದ್ಯಮದಲ್ಲಿ ನೇಮಕಗೊಂಡ ಕಾರ್ಮಿಕರಿಗೂ ಸಮಾನ ಪ್ರಾತಿನಿಧ್ಯ ಕೊಡಲಾಗುವುದು.

**ನಿಧಿಯ ಮೇಲ್ವಿಚಾರಣೆ**

ಈಗಾಗಲೇ ಒಪ್ಪಿಗೆ ಪಡೆದ ಆಯವ್ಯಯ ಪಟ್ಟಿಯಲ್ಲಿ ಬರುವಂತಹ ಖರ್ಚಿನ ಯೋಜನೆಗಳನ್ನು ಸಲಹಾ ಸಮಿತಿಯು ತಯಾರಿಸಿ, ಅವನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳಿಸಲು, ಸಲಹಾ ಸಮಿತಿಯು ಪರಿಶೀಲಿಸಿದ ನಿಯಮಗಳೂ ಅವಕಾಶ ಮಾಡಿಕೊಡುತ್ತವೆ. ಈ ಯೋಜನೆಗಳಲ್ಲಿ ಎರಡು ಭಾಗಗಳಿರುತ್ತವೆ – ಆಡಳಿತಕ್ಕೆ ಸಂಬಂಧಿಸಿದ ಯೋಜನೆಗಳು (ಕಾರ್ಯಾಲಯದ ಖರ್ಚುಗಳನ್ನೂ, ಅಧ್ಯಕ್ಷರು ನೇಮಕ ಮಾಡಿದ ಸಿಬ್ಬಂದಿ ವೇತನ ಇತ್ಯಾದಿಗಳನ್ನೂ ಇವು ಒಳಗೊಳ್ಳುತ್ತವೆ) ಮತ್ತು ಕಲ್ಯಾಣ ಯೋಜನೆಗಳು (ಇವು ನಿರ್ಬಂಧಿತವಾಗಿರಬಹುದು ಅಥವ ಅನಿರ್ಬಂಧಿತವಾಗಿರಬಹುದು).

ಅಲ್ಲದೆ, ಕೇಂದ್ರ ಸರ್ಕಾರದ ಮಂಜೂರಾತಿ ಪಡೆದ ಯೋಜನೆಗಳಿಗೆ ಖರ್ಚು ಮಾಡಲು ಕಲ್ಲಿದ್ದಲ ಗಣಿ ಕಾರ್ಮಿಕ ಕಲ್ಯಾಣ ನಿಧಿಯಿಂದ ಸಹಾಯಧನವನ್ನು ಪಡೆದ ಪ್ರಾಂತ್ಯ ಸರ್ಕಾರ, ಸ್ಥಳೀಯ ಅಧಿಕಾರಿ ಅಥವಾ ಕಲ್ಲಿದ್ದಲ ಗಣಿಯ ಮಾಲೀಕ ಅಥವಾ ಏಜೆಂಟ್ ಅಥವಾ ನಿರ್ವಾಹಕ – ಇವರ ಮೇಲೆ ಕೆಲವು ಷರತ್ತುಗಳನ್ನು ಹೇರಲು ಈ ನಿಯಮಗಳು ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಕೊಡುತ್ತವೆ. ಯಾವ ಯೋಜನೆಗಾಗಿ ಈ ಹಣವನ್ನು ಪಡೆಯಲಾಯಿತೋ ಆ ಯೋಜನೆಯನ್ನು ಸರಿಯಾಗಿ ಮತ್ತು ಬೇಗ ಅನುಷ್ಠಾನಕ್ಕೆ ತರುವುದನ್ನು, ಅವುಗಳ ಪರೀಕ್ಷೆಗೆ ಅಗತ್ಯವಾದ ಎಲ್ಲ ಅನುಕೂಲಗಳನ್ನು ಮಾಡಿಕೊಡುವುದನ್ನು, ಪಡೆದ ಹಣಕ್ಕೆ ಸರಿಯಾದ ಲೆಕ್ಕಪತ್ರಗಳನ್ನಿಟ್ಟಿರುವುದನ್ನು ಖಚಿತಪಡಿಸಿಕೊಳ್ಳಲೋಸ್ಕರ ಈ ನಿಯಮಗಳನ್ನು ವಿಧಿಸಲಾಗುವುದು.

ಸ್ಥಳೀಯ ಅಧಿಕಾರಿಗೆ ಅಥವಾ ಅನುಷ್ಠಾನಕ್ಕೆ ತರುವ ಏಜೆಂಟನಿಗೆ ಅಥವಾ ಕಲ್ಲಿದ್ದಲ ಗಣಿಯ ನಿರ್ವಾಹಕನಿಗೆ ಈ ನಿಧಿಯಿಂದ ಹಣ ಮಂಜೂರು ಮಾಡುವ ಮೊದಲು ಕೇಂದ್ರ ಸರ್ಕಾರವು ಸಂಬಂಧಪಟ್ಟವರು ನಿಯಾಮಾನುಸಾರವಾಗಿ ಒಂದು ಬಾಂಡು ಬರೆದುಕೊಡಬೇಕೆಂದು ಷರತ್ತು ಹಾಕುವುದು.

ಈ ನಿಧಿಯಿಂದ ಪಡೆದ ಹಣವನ್ನು ಖರ್ಚು ಮಾಡಲು ಝರಿಯಾ ಮತ್ತು ಅಸನ್ಸೋಲ್ ಆರೋಗ್ಯ ಮಂಡಳಿಗಳನ್ನೂ, ಝರಿಯಾ ಜಲಮಂಡಳಿಯನ್ನೂ ಎಷ್ಟರ ಮಟ್ಟಿಗೆ ಕಾರ್ಯನಿರ್ವಾಹಕ ಅಧಿಕಾರಿಯಂತೆ ಉಪಯೋಗ ಮಾಡಿಕೊಳ್ಳಬಹುದು ಎಂಬುದನ್ನೂ ಸಮಿತಿಯು ಪರಿಶೀಲಿಸಿತು. ಯಾವ ಕಲ್ಯಾಣ ಮತ್ತು ಇತರ ಯೋಜನೆಗಳಿಗೋಸ್ಕರ ನಿಧಿಯನ್ನು ಸ್ಥಾಪಿಸಲಾಯಿತೋ ಆ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಈಗಾಗಲೇ ಕಲ್ಲಿದ್ದಲ ಕ್ಷೇತ್ರಗಳಲ್ಲಿರುವ ಸಮಿತಿಗಳನ್ನು ಬಳಸಿಕೊಳ್ಳಬೇಕು ಎಂದೂ ಸೂಚಿಸಲಾಯಿತು.

ಸ್ಥಳೀಯ ಮಂಡಳಿಗೆ ಅನುದಾನ ನೀಡಬೇಕೆ ಬೇಡವೇ ಎಂಬ ಪ್ರಶ್ನೆಯನ್ನು, ಆಯಾ ಸಂದರ್ಭಕ್ಕೆ ತಕ್ಕಂತೆ, ಸಲಹಾ ಮಂಡಳಿಯೇ ನಿರ್ಣಯಿಸಬೇಕು ಎಂದು ಅಧ್ಯಕ್ಷರು ಮಾಡಿದ ಸೂಚನೆಯನ್ನು ಸಮಿತಿಯು ಅಂಗೀಕರಿಸಿತು. ಸಮಿತಿಯು ತನ್ನ ಖರ್ಚಿನ ಆವಶ್ಯಕತೆಗಳಿಗೆ ಸಂಬಂಧಿಸಿದ ವಿಷಯವನ್ನು ತಕ್ಷಣವೇ ಪರಿಶೀಲಿಸಿತಲ್ಲದೆ, ಕಲ್ಯಾಣ ನಿಧಿಯಿಂದಲೇ ಖರ್ಚಿನ ಹಣ ಕೊಡಬೇಕೆಂದು ತೀರ್ಮಾನಿಸಿತು. ಈ ಉದ್ದೇಶದಿಂದ ಸೂಚಿತವಾದ ಹಲವಾರು ವಿಷಯಗಳ ಪೈಕಿ ಇವು ಕೆಲವು : ಕಲ್ಯಾಣ ನಿಧಿಯ ಆಡಳಿತ ಸಿಬ್ಬಂದಿಯ ಖರ್ಚು; ಮತ್ತು ಈಗ ಸದ್ಯಕ್ಕೆ ಮಧ್ಯ ಪ್ರಾಂತ್ಯಗಳು ಮತ್ತು ಬೇರಾರ್‌ಗಳಲ್ಲಿ ಪ್ರಚಲಿತವಿರುವ ಹಾಗೂ ಬಂಗಾಳ ಮತ್ತು ಬಿಹಾರಗಳಿಗೆ ಇನ್ನು ಮುಂದೆ ಮಂಜೂರು ಮಾಡಲಾಗುವ ಮಲೇರಿಯಾ ನಿರ್ಮೂಲನೆ ಯೋಜನೆಗಳಿಗೆ ಸಂಬಂಧಿಸಿದ ಖರ್ಚು. ಈ ಶಾಸನದಡಿಯಲ್ಲಿ ಈ ತೆರಿಗೆಯನ್ನು ಯಾವ ದರದಲ್ಲಿ ವಿಧಿಸಬೇಕೆಂಬುದನ್ನು ಸಮಿತಿಯು ಚರ್ಚಿಸಿತು.

## ೩೩
## ಅಭ್ರಕ ಉದ್ದಿಮೆಗೆ ಸುಭದ್ರ ಮತ್ತು ಸ್ಥಿರ ತಳಹದಿಯನ್ನೊದಗಿಸುವುದು*

"ಭಾರತ ಸರ್ಕಾರವು ಅಭ್ರಕ ಕೈಗಾರಿಕೆಯನ್ನು ಬಲವಾದ ಹಾಗೂ ಸ್ಥಿರವಾದ ತಳಹದಿಯ ಮೇಲೆ ಕಟ್ಟಲು ಸಿದ್ಧವಾಗಿದೆ" ಎಂದು ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಹೇಳಿದರು. ಅವರು ಭಾರತದ ಸರ್ಕಾರ, ಬಿಹಾರ ಸರ್ಕಾರ, ವಾಣಿಜ್ಯ ಸಂಘಗಳು ಮತ್ತು ಅಭ್ರಕ ಕಾರ್ಮಿಕರ ವಕ್ತಾರರುಗಳ ಪ್ರತಿನಿಧಿಗಳು ಏಪ್ರಿಲ್ ೨೯ರಂದು ಸೇರಿದ್ದ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬಿಹಾರ ಸರ್ಕಾರವನ್ನು ಇತರರೊಂದಿಗೆ ಈ ಕೆಳಗಿನವರೂ ಪ್ರತಿನಿಧಿಸಿದ್ದರು; ಶ್ರೀ ಇ.ಸಿ. ಆನ್‌ಸೋರ್ಗ್ (ಸಲಹಾಕಾರ), ಶ್ರೀ ಜೆ.ಎಸ್. ವಿಲ್ಕಾಕ್ (ಕಾರ್ಯದರ್ಶಿ, ಕಾರ್ಮಿಕ ಇಲಾಖೆ) ಮತ್ತು ಶ್ರೀ ಎಂ. ಜಡ್ ಖಾನ್ (ಡೆಪ್ಯೂಟಿ ಕಮಿಷನರ್, ಹಜಾರಿಬಾಗ್ ಜಿಲ್ಲೆ). ಶ್ರೀ ಎ.ಇ.ಎಲ್. ಮಜುಮ್‌ದಾರ (ಕಾರ್ಮಿಕ ಇಲಾಖೆಯ ಸಹಕಾರ್ಯದರ್ಶಿ), ಡಾ॥ ಇ.ಎಲ್.ಜಿ. ಕ್ಲೆಗ್ (ಭಾರತದ ಭೂಗರ್ಭ ಸರ್ವೇಕ್ಷಣೆಯ ನಿರ್ದೇಶಕರು) ಮತ್ತು ಶ್ರೀ ಜಿ.ಟಿ.ಕೆ. ಕ್ರಾಸ್‌ಫೀಲ್ಡ್ (ಭೂಗರ್ಭ ಇಲಾಖೆಯ ಅಧೀಕ್ಷಕ, ಕ್ಷೇತ್ರಾಧಿಕಾರಿ) ಇವರು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದರು.

"ಪ್ರಾಯಶಃ ಯುದ್ಧದ ನಂತರ, ಭಾರತವು ಅಭ್ರಕದ ಮೇಲೆ ಈಗಿರುವಷ್ಟು ಏಕಸ್ವಾಮ್ಯತೆಯನ್ನು ಉಳಿಸಿಕೊಳ್ಳಲಾರದೆಂಬುದು ಭಾರತ ಸರ್ಕಾರಕ್ಕೆ ಮನವರಿಕೆಯಾಗಿದೆ." ಎಂದು ಡಾ॥ ಬಿ.ಆರ್. ಅಂಬೇಡ್ಕರ್ ಹೇಳಿದರು. ಆ ಕೈಗಾರಿಕೆಯನ್ನು ಭದ್ರ ಹಾಗೂ ಶಾಶ್ವತವಾದ ಬುನಾದಿಯ ಮೇಲೆ ನಿಲ್ಲಿಸುವ ಉದ್ದೇಶದಿಂದ ಸರ್ಕಾರವು ಒಂದು ವಿಚಾರಣಾ ಸಮಿತಿಯನ್ನು ನೇಮಿಸುವುದಾಗಿಯೂ, ಆ ಸಮಿತಿಯು ಅಭ್ರಕ ಕೈಗಾರಿಕೆಗೆ ಸಂಬಂಧಿಸಿದ ಈಗಿನ ಮತ್ತು ಅತಿಮುಖ್ಯ ಸಮಸ್ಯೆಗಳನ್ನು ಪರಿಶೀಲಿಸುವುದಾಗಿಯೂ ಅವರು ನುಡಿದರು.

ಸಮಿತಿಯು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಹೀಗಿರುತ್ತವೆ : ಅಭ್ರಕ ನಿಯಂತ್ರಣ ಆಜ್ಞೆಯು ಯುದ್ಧದ ಸಮಯದಲ್ಲಿನ ಅಭ್ರಕದ ಉತ್ಪಾದನೆ ಮತ್ತು ದೀರ್ಘಾವಧಿ ಕಾರ್ಯಕ್ರಮದ ಮೇಲೆ ಈ ಆಜ್ಞೆಯ ಪರಿಣಾಮ ಎರಡಕ್ಕೂ ಸಂಬಂಧಿಸಿದಂತೆ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಪರೀಕ್ಷಿಸುವುದು ಮತ್ತು

---

* ಇಂಡಿಯನ್ ಇನ್‌ಫರ್ಮೇಶನ್, ಮೇ ೧೫, ೧೯೪೪, ಪು. ೫೩೩–೩೫.

ಸರ್ಕಾರವು ಈ ಆಜ್ಞೆಗೆ ಸಂಬಂಧಿಸಿದಂಥ ಇತರ ಆಜ್ಞೆಗಳ ಪುನರಾವಲೋಕನ; ಈಗಿನ ಮಾರಾಟ ವ್ಯವಸ್ಥೆ (ದೇಶದ ಒಳಗೆ ಮತ್ತು ಹೊರಗೆ ಎರಡಕ್ಕೂ ಸಂಬಂಧಿಸಿದಂತೆ); ಗುಣಮಟ್ಟದ ನಿರ್ಧಾರ; ಮಸ್ಕೋಪೈಟ್ ಅಭ್ರಕವನ್ನು ರಫ್ತು ಮಾಡುವ ಮುಖ್ಯ ದೇಶವಾದ ಭಾರತಕ್ಕೆ ಅಭ್ರಕವನ್ನು ರಫ್ತುಮಾಡುವ ಬೇರೆ ದೇಶಗಳು ಎಷ್ಟರ ಮಟ್ಟಿಗೆ ಹಾನಿ ಮಾಡಬಹುದಿತ್ತು ಅಥವಾ ಇನ್ನೂ ಹಾನಿ ಮಾಡಲು ಸಾಧ್ಯವಿದೆ ಎಂಬುದನ್ನೂ, ಅಭ್ರಕದ ಆವಶ್ಯಕತೆಗೆ ಅಥವಾ ಕೈಗಾರಿಕೆಯಲ್ಲಿ ಅದರ ಬಳಕೆಯ ಸ್ಥಾನಕ್ಕೆ ಎಷ್ಟರ ಮಟ್ಟಿನ ಚ್ಯುತಿಯಾದೀತೆಂಬುದನ್ನು ಪರಿಶೀಲಿಸುವುದು; ಈ ದೇಶದಲ್ಲಿ ಸಿದ್ಧವಸ್ತುಗಳ ತಯಾರಿಕೆಯಲ್ಲಿ ಅಭ್ರಕವನ್ನು ಹೆಚ್ಚು ಹೆಚ್ಚಾಗಿ ಬಳಸುವುದು; ಹಾಗೂ ಅಭ್ರಕದ ವಾಣಿಜ್ಯ ಮತ್ತು ಉದ್ಯಮದ ಹಿತವನ್ನು ಕಾಪಾಡಲೋಸ್ಕರ ಒಂದು ಕೇಂದ್ರ–ಅಭ್ರಕ ಸಮಿತಿ ಅಥವಾ ಅಂಥ ಸಮಿತಿಗಳನ್ನು ರಚಿಸುವ ಮೂಲಕ, ಒಂದು ವ್ಯವಸ್ಥೆಯನ್ನು ಪ್ರಾರಂಭಿಸುವ ಅಪೇಕ್ಷಣೀಯತೆಯನ್ನೂ ಪರಿಶೀಲಿಸುವುದು.

ವಿಚಾರಣಾ ಸಮಿತಿಯಲ್ಲಿ ಒಬ್ಬ ಪೂರ್ಣಾವಧಿಯ ಅಧ್ಯಕ್ಷರೂ, ಇಬ್ಬರು ಅಲ್ಪಾವಧಿ ಸದಸ್ಯರೂ (ಇವರಲ್ಲಿ ಒಬ್ಬರು ಒಳನಾಡಿನ ವಾಣಿಜ್ಯದಲ್ಲಿಯೂ ಮತ್ತೊಬ್ಬರು ರಫ್ತು ವಾಣಿಜ್ಯದಲ್ಲಿಯೂ ಪರಿಣತರು) ಹಾಗೂ ಒಬ್ಬರು ಪೂರ್ಣಾವಧಿ ಕಾರ್ಯದರ್ಶಿಗಳು ಇರುತ್ತಾರೆ, ಎಂದು ಡಾ॥ ಅಂಬೇಡ್ಕರ್ ತಿಳಿಸಿದರು. ಈ ಸಮಿತಿಯ ಜೊತೆಗೆ ಏಳು ಜನ ಪರಿಶೀಲಕರಿರುತ್ತಾರೆ – ಇವರಲ್ಲಿ ಇಬ್ಬರು ಬಿಹಾರ ಸರ್ಕಾರವನ್ನೂ, ಇಬ್ಬರು ಬಿಹಾರದ ವರ್ತಕರನ್ನೂ, ಇಬ್ಬರು ಮದ್ರಾಸ್ ಮತ್ತು ರಾಜಪುತಾಣ ವಾಣಿಜ್ಯವನ್ನೂ ಮತ್ತು ಒಬ್ಬರು ಅಭ್ರಕ ಕಾರ್ಮಿಕರನ್ನೂ ಪ್ರತಿನಿಧಿಸುತ್ತಾರೆ. ಅಲ್ಲದೆ ಈ ಸಮಿತಿಗೆ ಇಬ್ಬರು ತಾಂತ್ರಿಕ ಸಲಹೆಗಾರರೂ ಇರುತ್ತಾರೆ – ಅವರಲ್ಲಿ ಒಬ್ಬರು ಭಾರತದ ಭೂಗರ್ಭ ಸರ್ವೇಕ್ಷಣೆಯ ನಿರ್ದೇಶಕರು, ಮತ್ತೊಬ್ಬರು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಪ್ರತಿನಿಧಿ.

**ಕಾರ್ಮಿಕ ಕಲ್ಯಾಣ**

ಕಾರ್ಮಿಕರು ಮತ್ತು ಉದ್ಯಮಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಾ, ಕಾರ್ಮಿಕ ಸದಸ್ಯರು ಸರ್ಕಾರವು ಉದ್ಯಮಕ್ಕೆ ಸಹಾಯ ನೀಡಲೇಬೇಕೆಂದಿದ್ದರೆ, ಅದು ಉದ್ಯಮಿಗಳು ಕಾರ್ಮಿಕರನ್ನು ಶೋಷಿಸಲು ಬಿಡಬಾರದು, ಎಂಬುದನ್ನು ಒತ್ತಿ ಹೇಳಿದರು. ಅಭ್ರಕದ ಮೇಲಿನ ಭಾರತದ ಏಕಸ್ವಾಮ್ಯತೆಗೆ ಅಗ್ಗದ ಬೆಲೆಗೆ ಸಿಕ್ಕುವ ಕೂಲಿಗಳೇ ಕಾರಣ ಎಂದು ಹೇಳಲಾಗಿದೆ. ಒಂದು ವೇಳೆ ಈ ಮಾತು ನಿಜವಾಗಿದ್ದರೆ, ಅದು ಉದ್ಯಮದ ವಿಷಯದಲ್ಲಾಗಲಿ ಕಾರ್ಮಿಕರ ವಿಷಯದಲ್ಲಾಗಲಿ ಹೊಗಳಿಕೆಯ ಮಾತಾಗುವುದಿಲ್ಲ. ಸರ್ಕಾರವು ಈ ಉದ್ಯಮಕ್ಕೆ ಭದ್ರತೆ ನೀಡಲು ಮಧ್ಯ ಪ್ರವೇಶಿಸುವುದಾದರೆ ಅಥವಾ ಕ್ರಮ ತೆಗೆದುಕೊಳ್ಳುವುದಾದರೆ, ಉದ್ಯಮಿಗಳು ಕಾರ್ಮಿಕರ ಹಿತವನ್ನು ಕಾಪಾಡಬೇಕೆಂದು ಸರ್ಕಾರವು ಆಶಿಸುತ್ತದೆ.

ಕಾರ್ಮಿಕರ ಕಲ್ಯಾಣದ ಹಿತಾಸಕ್ತಿಯನ್ನು ಕಾಪಾಡಲು, ಕಾರ್ಮಿಕರಿಗೆ ತಮ್ಮ ಜೀವನೋಪಾಯಕ್ಕೆ ಅಗತ್ಯವಾದ ವೇತನದ ಬಗೆಗೆ ಖಚಿತತೆ ಇರಬೇಕೆಂದೂ, ಕೆಲಸದ ನೇಮಕ ಮತ್ತು ಸಾಮಾನ್ಯ ಕಲ್ಯಾಣ ಕಾರ್ಯಗಳಿಗೆ ಸಂಬಂಧಿಸಿದಂತೆ, ನ್ಯಾಯವಾದ ಷರತ್ತುಗಳಿರಬೇಕೆಂದು ಸರ್ಕಾರವು ವಿಧಿಸಬೇಕಾಗುತ್ತದೆ ಎಂದು ಕಾರ್ಮಿಕ ಸದಸ್ಯರು ತಿಳಿಸಿದರು. ಕಾರ್ಮಿಕ ಕಲ್ಯಾಣಕ್ಕೋಸ್ಕರ ಉದ್ಯಮಿಗಳಿಂದ ಹಣ ಸಂಗ್ರಹಿಸಲು ರೂಪಿಸಿದ ನೀತಿಯನ್ನು ಅವರು ಇಲ್ಲಿ ಸ್ಮರಿಸಿ, ಕಲ್ಲಿದ್ದಲ ಮೇಲೆ ವಿಧಿಸುವ ಕಲ್ಯಾಣ ತೆರಿಗೆಯನ್ನು ಉದಾಹರಿಸಿದರು. ಅವರು ಇನ್ನೂ ಮುಂದುವರಿದು, ಈ ವಿಶೇಷ ತೆರಿಗೆಯನ್ನು ತೆರುವ ಮೂಲಕ ಉದ್ಯಮಿಗಳು ಕಲ್ಯಾಣದ ಖರ್ಚನ್ನು ತಾವೇ ಹೊರಬೇಕೆಂದರು.

ಕಾರ್ಮಿಕ ಸದಸ್ಯರು ತಮ್ಮ ಭಾಷಣದ ಮೊದಲಲ್ಲಿ ಭಾರತೀಯ ಅಭ್ರಕ ಉದ್ಯಮದ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಿದರಲ್ಲದೆ, ವಿದ್ಯುತ್-ತಾಂತ್ರಿಕ ಕೈಗಾರಿಕೆಗಳು ತಮ್ಮ ಅಸ್ತಿತ್ವಕ್ಕಾಗಿ ಅಭ್ರಕವನ್ನು ಅವಲಂಬಿಸಿರುವುದಾಗಿಯೂ, ಅಭ್ರಕವು ಅತ್ಯಗತ್ಯವಾದ ವಸ್ತುವೆಂದೂ, ಅದಿಲ್ಲದಿದ್ದರೆ ನಮ್ಮ ದೇಶದ ರಕ್ಷಣಾ ವ್ಯವಸ್ಥೆ ನಡೆಯುವುದಿಲ್ಲವೆಂದೂ ನುಡಿದರು. ೧೯೧೩ರಲ್ಲಿ ಪ್ರಪಂಚದಲ್ಲಿ ಆದ ೧೭,೦೧೮ ಮೆಟ್ರಿಕ್ ಟನ್ ಅಭ್ರಕದ ಹಾಳೆಗಳ ಉತ್ಪನ್ನದಲ್ಲಿ, ಭಾರತದ ಉತ್ಪನ್ನವೇ ೧೪,೫೯೮ ಮೆಟ್ರಿಕ್ ಟನ್, ಅಂದರೆ ಶೇಕಡಾ ೮೧.೭ರಷ್ಟು ಇತ್ತು. ಆದರೂ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಅಭ್ರಕ ಕೈಗಾರಿಕೆ ಯಾವ ಮುಖ್ಯ ಪಾತ್ರವನ್ನೂ ವಹಿಸಲಿಲ್ಲ.

"ಅರಳೆ, ಹತ್ತಿಬಟ್ಟೆ ಮತ್ತು ಕತ್ತಾಳೆ ಕೈಗಾರಿಕೆಗಳ ಬಗ್ಗೆ ಮಾತಾಡುವುದನ್ನು ನಾವು ಕೇಳಿದ್ದೇವೆ. ಆದರೆ, ಭಾರತದ ಅಭ್ರಕ ಉದ್ಯಮದ ಬಗ್ಗೆ ಮಾತಾಡುವುದನ್ನು ಕೇಳುವುದು ತುಂಬಾ ವಿರಳ" ಎಂದು ಅವರು ಹೇಳಿದರು. ಅದಕ್ಕೆ ಕಾರಣಗಳನ್ನು ಕೊಡುತ್ತಾ ಅವರು ಹೀಗೆ ನುಡಿದರು : ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಉತ್ಪಾದಿಸಲ್ಪಟ್ಟ ಅಭ್ರಕವು ಭಾರತದಲ್ಲಿ ಬಳಕೆಯಾಗುತ್ತಿಲ್ಲ. ಉತ್ಪಾದಿತವಾದ ಅಭ್ರಕವೆಲ್ಲಾ ರಫ್ತಾಗುತ್ತಿದೆ. ಆದ್ದರಿಂದ ಭಾರತೀಯರು ಆ ಬಗ್ಗೆ ಉದಾಸೀನರಾಗಿದ್ದಾರೆ. ಅಂದರೆ, ಹೊರದೇಶಗಳಿಂದ ಮಾತ್ರ ಲಾಭ ಬರುತ್ತಿದೆ; ಆದ್ದರಿಂದ ಸಾರ್ವಜನಿಕರಿಗೆ ಅಭ್ರಕ ಉದ್ಯಮದಲ್ಲಿ ಆಸಕ್ತಿಯಿಲ್ಲ. ಎರಡನೇ ರೀತಿಯ ಕಾರಣಗಳಲ್ಲಿ, ಆ ಉದ್ಯಮದ ಪರಿಣಾಮಕಾರಿಯಲ್ಲದ ಹಾಗೂ ಅವ್ಯವಸ್ಥಿತ ಸ್ಥಿತಿಯೂ ಒಂದು. ಭಾರತದಲ್ಲಿ ಅಭ್ರಕದ ಹಾಳೆಗಳ ಉತ್ಪನ್ನ ೧೯೦೫ರಲ್ಲಿ ೧೭೦೪ ಮೆಟ್ರಿಕ್ ಟನ್ ಇದ್ದು, ಅದು ೧೯೩೭ರಲ್ಲಿ ೧೪,೫೯೮ ಮೆಟ್ರಿಕ್ ಟನ್‌ಗೆ ಏರಿತು. ಈ ಉದ್ಯಮವು ಒಣ ಹವೆಯಲ್ಲಿ ಗಣಿ ಮತ್ತು ಗಿರಣಿಗಳಲ್ಲಿ ಅರವತ್ತು ಸಾವಿರ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತದೆ ಎಂಬುದನ್ನು ನೋಡಿದರೆ, ಈ ಉದ್ಯಮದ ದೈತ್ಯಾಕಾರದ ಬೆಳವಣಿಗೆಯ ಅರಿವಾಗುತ್ತದೆ. ಆದರೆ, ಇಷ್ಟೆಲ್ಲ ಹೆಚ್ಚಿನ ಪ್ರಮಾಣದ ಬೆಳವಣಿಗೆಯಿದ್ದರೂ ಗಿರಣಿ ಮಾಲೀಕರ ಸಂಘ ಅಥವಾ ಉತ್ತರ ಭಾರತದ ಉದ್ಯಮಿಗಳ ಪರಿಷತ್ತಿನಂಥ ಸುವ್ಯವಸ್ಥಿತ ಸಂಸ್ಥೆಗಳು ಅಭ್ರಕ ಉದ್ಯಮದಲ್ಲಿಲ್ಲ.

**ದರೋಡೆ**

ಈ ದುಸ್ಥಿತಿಗೆ ಕಾರಣಗಳನ್ನು ಕೊಡುತ್ತಾ ಅವರು, ಅಭ್ರಕ ಉದ್ಯಮದಲ್ಲಿ ನಿರತರಾದವರು ಪರಸ್ಪರರ ಬಗೆಗೆ ಹೊಟ್ಟೆಕಿಚ್ಚಿನಿಂದ ಹಾಗೂ ವಾಣಿಜ್ಯ ಪ್ರತಿಸ್ಪರ್ಧೆಯ ಭಾವನೆಯಿಂದ ಪರಸ್ಪರರಿಂದ ದೂರವಿದ್ದಾರೆ, ಎಂಬುದನ್ನು ತಿಳಿಸಿದರು. ಪ್ರತಿಯೊಬ್ಬನೂ ಬೇರೆಯವರ ಖರ್ಚಿನ ಮೇಲೆ ತನ್ನ ಕಟ್ಟಡವನ್ನು ಕಟ್ಟಲು ಪ್ರಯತ್ನಿಸುತ್ತಿದ್ದಾನೆ. ಇಲ್ಲಿ ಬರೀ ಸ್ಪರ್ಧೆಯಿದೆಯೇ ವಿನಾ, ಸಹಕಾರವಿಲ್ಲ. ಅಭ್ರಕ ಉದ್ಯಮದ ಭವಿಷ್ಯದ ಬಗೆಗೆ ಮಾತನಾಡುತ್ತಾ ಕಾರ್ಮಿಕ ಸದಸ್ಯರು, ಈ ಉದ್ಯಮವನ್ನು ಒಂದು ಬಲವಾದ ಮತ್ತು ಸ್ಥಿರವಾದ ತಳಹದಿಯ ಮೇಲೆ ಕಟ್ಟಲು ಭಾರತ ಸರ್ಕಾರವು ಅತ್ಯುತ್ತಮವಾದುದನ್ನು ಮಾಡಲು ಸಿದ್ಧವಿದೆ ಎಂದರು. ಸರ್ಕಾರಕ್ಕೆ ಈ ಉದ್ಯಮದಲ್ಲಿ ಎರಡು ಸಮಸ್ಯೆಗಳಿರುವುದು ಕಂಡುಬಂದಿದೆ – ಒಂದು ತಾತ್ಕಾಲಿಕ ಸಮಸ್ಯೆ, ಮತ್ತೊಂದು ದೀರ್ಘಾವಧಿ ಸಮಸ್ಯೆ. ಈ ಎರಡನೆಯದಕ್ಕೆ ಒಂದು ದೀರ್ಘಾವಧಿ ನೀತಿ ಬೇಕಾಗಿದೆ. ತಾತ್ಕಾಲಿಕ ಸಮಸ್ಯೆಯೆಂದರೆ ಅಭ್ರಕದ ಕಳ್ಳತನದ ಸಮಸ್ಯೆ. ಸಾಧಾರಣ ಪರಿಸ್ಥಿತಿಗಳಲ್ಲಾಗಿದ್ದರೆ, ಕಳ್ಳತನ ಮಾಡುವುದು ಮತ್ತು ಕಳ್ಳ ಮಾಲುಗಳನ್ನು ಪಡೆಯುವುದು ಇದಕ್ಕೆ ಸಂಬಂಧಿಸಿದ ಸಾಧಾರಣ ಕಾನೂನೇ ಸಾಕು ಎಂದು ಭಾರತ ಸರ್ಕಾರವು ಪರಿಗಣಿಸುತ್ತಿತ್ತು. ಆದರೆ ಅಭ್ರಕಕ್ಕಿರುವ ಪ್ರಾಮುಖ್ಯತೆಯನ್ನು ಗಮನಿಸಿ

ಸರ್ಕಾರವು ಆ ಉದ್ಯಮಕ್ಕೆ ಅತ್ಯುತ್ತಮ ಸಹಾಯ ನೀಡಲು ಆಸಕ್ತವಾಗಿತ್ತು. ಅಭ್ರಕ ನಿಯಂತ್ರಣ ಶಾಸನ ಜಾರಿಯಲ್ಲಿತ್ತು. ಮತ್ತು ಆ ಶಾಸನದ ದೋಷಗಳೇನೇ ಇರಲಿ, ಅಭ್ರಕದ ಕಳ್ಳತನವನ್ನು ಸ್ವಲ್ಪವಾದರೂ ಕಡಿಮೆ ಮಾಡುವ ತಂತ್ರ ಅದರಲ್ಲಿತ್ತು. ಅವರು ಈ ಉದ್ಯಮದಲ್ಲಿ ನಿರತರಾದ ಎಲ್ಲರೂ ಸಹಕರಿಸಬೇಕೆಂದು ವಿನಂತಿಸಿಕೊಂಡರಲ್ಲದೆ, ಅಭ್ರಕದ ಕಳ್ಳತನ ತಪ್ಪಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳಲು ಸಿದ್ಧವಿರುವುದಾಗಿ ಆಶ್ವಾಸನೆ ನೀಡಿದರು.

**ಪ್ರಸ್ತಾವನೆಗೆ ಸುಸ್ವಾಗತ**

ಸಮ್ಮೇಳನಕ್ಕೆ ಬಂದಿದ್ದ ಉದ್ಯಮದ ಪ್ರತಿನಿಧಿಗಳು ವಿಚಾರಣಾ ಸಮಿತಿಯನ್ನು ರಚಿಸಬೇಕೆಂಬ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಸ್ವಾಗತಿಸಿದರು. ಆ ಸಮಿತಿಯು ಅಭ್ರಕ ಉದ್ಯಮವನ್ನು ಯುದ್ಧಾನಂತರ ಪುನರ್ನಿರ್ಮಾಣ ಮಾಡಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಪರಿಶೀಲಿಸಿ ಎಂಬ ಸೂಚನೆಯನ್ನು ಆಗ ಮಾಡಲಾಯಿತು.

ಇದಕ್ಕೂ ಮೊದಲು ಸಮ್ಮೇಳನವು ಈ ಉದ್ಯಮಕ್ಕಿರುವ ತಕ್ಷಣದ ಅಗತ್ಯಗಳನ್ನು ಪೂರೈಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಕುರಿತು ಚರ್ಚಿಸಿತು. ಇವುಗಳಲ್ಲಿ, ಕೆಲವು ರೀತಿಯ ಅಭ್ರಕಗಳನ್ನು ಕೊಳ್ಳುವುದು, ಮಾರುವುದು ಅಥವಾ ವರ್ಗಾಯಿಸುವುದನ್ನು ನಿಷೇಧಿಸುವ ಯೋಜನೆ, ಪ್ರಮಾಣ ಪತ್ರಗಳನ್ನು ಕೊಡಲು ಮತ್ತು ಅನುಮತಿ ಪಡೆದ ಏಜೆಂಟರುಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಯಲು, ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೂ ಪ್ರಾಂತ್ಯ ಸರ್ಕಾರಗಳಿಗೂ ಕೆಲವೊಂದು ಅಧಿಕಾರವನ್ನು ಕೊಡಬೇಕೆಂಬ ವಿಷಯ; ಅಭ್ರಕ ಉಗ್ರಾಣಗಳ ಸ್ಥಳಗಳ ನಿಯಂತ್ರಣ ಮತ್ತು ಆಡಳಿತ ಯಂತ್ರದಲ್ಲಿ ಸುಧಾರಣೆ, –ಇವು ಸೇರಿದ್ದವು.

ಈ ಕ್ರಮಗಳಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ, ಕೇಂದ್ರ ಸರ್ಕಾರಕ್ಕೆ ಅತಿ ಶೀಘ್ರದಲ್ಲಿಯೇ ೧೯೪೦ರ ಅಭ್ರಕ ನಿಯಂತ್ರಣ ಶಾಸನಕ್ಕೆ ತಿದ್ದುಪಡಿ ಮಾಡಬೇಕೆಂಬ ಉದ್ದೇಶವಿದೆ ಎಂಬುದು ವ್ಯಕ್ತವಾಯಿತು.

ಅಭ್ರಕ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ, ಈಗ ಜಾರಿಯಲ್ಲಿರುವ ಆಹಾರ ಧಾನ್ಯಗಳನ್ನು ಕೊಳ್ಳುವಲ್ಲಿ ರಿಯಾಯಿತಿ, ತುಟ್ಟಿಭತ್ಯೆ, ವಾಸಸ್ಥಳದ ಸ್ಥಿತಿಗಳು, ನೀರಿನ ಸರಬರಾಜು, ವೈದ್ಯಕೀಯ ಅನುಕೂಲತೆಗಳು ಮತ್ತು ವೇತನಗಳ ಪುನರಾವಲೋಕನ ಮಾಡಲಾಯಿತು. ಕಾರ್ಮಿಕ ಸದಸ್ಯರು ಅಭ್ರಕ ಕಾರ್ಮಿಕರಿಗೆ ಕನಿಷ್ಠ ವೇತನ ಎಂಬುದಿದೆಯೇ ಎಂದು ವಿಚಾರಿಸಿದರು. ಅಲ್ಲದೆ, ಕಾರ್ಮಿಕರಿಗೆ ವೈದ್ಯಕೀಯ ಸವಲತ್ತು, ವಾಸದ ಸವಲತ್ತುಗಳು ಮತ್ತು ನೀರಿನ ಸರಬರಾಜುಗಳು ಆವಶ್ಯಕವಾಗಿ ಬೇಕೆಂಬುದನ್ನು ಅವರು ಒತ್ತಿ ಹೇಳಿದರು. ಕಾರ್ಮಿಕರಲ್ಲಿ ಬಹಳಷ್ಟು ಜನ ತಂತಮ್ಮ ಹಳ್ಳಿಗಳಲ್ಲಿ ವಾಸಿಸುತ್ತಾರೆ ಎಂಬುದನ್ನು ಅಲ್ಲಿ ತಿಳಿಸಲಾಯಿತು. ಅಭ್ರಕ ಕಾರ್ಮಿಕರ ಹಿತದೃಷ್ಟಿಯಿಂದ, ಕಲ್ಯಾಣ ಮತ್ತು ಅಭಿವೃದ್ಧಿ ತೆರಿಗೆ ವಿಧಿಸಬೇಕೆಂಬ ಯೋಜನೆಯ ಬಗ್ಗೆ ಸರ್ವಾನುಮತವಿತ್ತು ಎಂಬುದೂ ವ್ಯಕ್ತವಾಯಿತು. ಅಲ್ಲದೆ, ಭಾರತದ ಭೂಗರ್ಭ ಸರ್ವೇಕ್ಷಣೆಯು ಅಭ್ರಕ ಗಣಿಗಳಿಗೆ ಕಲ್ಲಿದ್ದಲನ್ನು ಹಂಚುವ ಹೊಣೆ ಹೊರಬೇಕೆಂಬುದನ್ನು ಅಂಗೀಕರಿಸಲಾಯಿತು.

**ಅಭ್ರಕ ಗಣಿಗಳಿಗೆ ಕಾರ್ಮಿಕ ಸದಸ್ಯರ ಭೇಟಿ**

ಏಪ್ರಿಲ್ ೨೮ ರಂದು ಡಾ॥ ಅಂಬೇಡ್ಕರ್‌ರವರು ಶ್ರೀ ಮಜುಮ್‌ದಾರ್, ಡಾ॥ ಕ್ಲೆಗ್ ಮತ್ತು ಶ್ರೀ ಕ್ರಾಸ್‌ಫೀಲ್ಡ್‌ರವರ ಜೊತೆಗೂಡಿ ಒಂದು ಅಭ್ರಕ ಗಣಿಗೂ, ಅಭ್ರಕ ಕಾರ್ಖಾನೆಗೂ ಭೇಟಿಕೊಟ್ಟರು. ಗಣಿಯಲ್ಲಿದ್ದ ಒಂದು ಏಣಿಯ ಮೂಲಕ ಆ ತಂಡವು ಸುಮಾರು ೪೦೦ ಅಡಿ ಕೆಳಗಿಳಿಯಿತು. ಗಣಿ ಕೆಲಸಕ್ಕೆ

ಸಂಬಂಧಿಸಿದ ಅನೇಕ ವಿಷಯಗಳ ಜೊತೆಗೆ, ಕಾರ್ಮಿಕ ಸದಸ್ಯರು, ಕೊರೆಯುವ ಕೆಲಸವನ್ನು ನೋಡಿದರು. ಈ ಕೊರೆಯುವ ಕೆಲಸವನ್ನು ವಾತಶಕ್ತಿಯಿಂದ ನಡೆಯುವ ಯಂತ್ರಗಳಿಂದ ಮಾಡಲಾಗುತ್ತಿದ್ದು, ಆ ಯಂತ್ರಗಳನ್ನು ಭಾರತ ಸರ್ಕಾರವು ಅಭ್ರಕದ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕೈಗಾರಿಕೆಗಳಿಗೆ ನೀಡಿತ್ತು. ಮೇಲಕ್ಕೆ ಬಂದ ನಂತರ, ಕಾರ್ಮಿಕ ಸದಸ್ಯರು ಗುಡಿಸಲುಗಳಿದ್ದ ಕಾರ್ಮಿಕರ ಕೇರಿಗೆ ಭೇಟಿಕೊಟ್ಟರು. ಆ ಕೇರಿಯ ಮಧ್ಯದಲ್ಲಿ ಕುಂಕುಮ ಹಚ್ಚಿದ್ದ ಎರಡು ಮುಮ್ಮೂಲೆಯ ಕಲ್ಲುಗಳಿದ್ದು, ಅವನ್ನು ಒಂದು ಮರಕ್ಕೆ ಒರಗಿಸಲಾಗಿತ್ತು. ಆ ಕಲ್ಲುಗಳನ್ನು 'ಅಭ್ರಕದ ದೇವತೆ' ಎಂದು ಕಾರ್ಮಿಕರು ಪೂಜಿಸುತ್ತಿದ್ದರು ಎಂದು ಕಾರ್ಮಿಕ ಸದಸ್ಯರಿಗೆ ತಿಳಿಸಲಾಯಿತು.

ಕೋದರ್ಮದ ಗಿರಣಿಯಲ್ಲಿ ಗಂಡಸರೂ ಹೆಂಗಸರೂ ಸೇರಿದಂತೆ ಸಾವಿರಾರು ಕಾರ್ಮಿಕರು ಶಯನಾಗಾರವೊಂದರಲ್ಲಿ ಕುಳಿತೇ, ಅಭ್ರಕದ ಗಡ್ಡೆಗಳನ್ನು ಒಡೆಯುತ್ತಿದ್ದರು. ಭೇಟಿಕೊಟ್ಟ ಆ ತಂಡವು ಅಲ್ಲಿ ಅಭ್ರಕ ತಯಾರಿಕೆಯ ವಿವಿಧ ಹಂತಗಳನ್ನು ನೋಡಿದರು. ಉದಾಹರಣೆಗೆ, ಅಭ್ರಕದ ಹಾಳೆಗಳನ್ನು ತೆಗೆಯುವುದು; ಚಾಕುವಿನಿಂದ ಅಂಚುಗಳನ್ನು ಕತ್ತರಿಸುವುದು; ಎಲ್ಲೂ ತಪ್ಪು ಮಾಡದೆ ಹಾಗೂ ಕುಶಲತೆಯಿಂದ ಕೈಯಿಂದ ಒಡೆಯುವುದು. ಗಿರಣಿಯ ಒಂದು ಭಾಗದಲ್ಲಿ ಕಾರ್ಮಿಕರು ಅಭ್ರಕದ ಗಡ್ಡೆಗಳಿಂದ ತೆಳುವಾದ ಹಾಗೂ ಒಂದೇ ಗಾತ್ರದ ಹಾಳೆಗಳನ್ನು ತೆಗೆಯುತ್ತಿದ್ದರು (ಈ ಹಾಳೆಗಳನ್ನು ವಿಮಾನಗಳ ಸ್ಪಾರ್ಕ್ ಪ್ಲಗ್ಗುಗಳಲ್ಲಿ ವಿದ್ಯುತ್ ಸಂಗ್ರಾಹಕ ಪೊರೆಯಂತೆ ಬಳಸಲಾಗುವುದು). ಮತ್ತೊಂದು ಭಾಗದಲ್ಲಿ ಕಾರ್ಮಿಕ ಸದಸ್ಯರು ಅಭ್ರಕದ ಗಡ್ಡೆಗಳನ್ನು ಒಡೆದು, ಅವುಗಳಿಂದ ಮಿಕಾನೈಟ್ ತಯಾರಿಕೆಗೆ ಬೇಕಾದ ಸಣ್ಣ ಹಾಳೆಗಳನ್ನು ತೆಗೆಯುವುದನ್ನು ನೋಡಿದರು.

**ವಿಜ್ಞಾನವು ಅಭ್ರಕದ ಪ್ರಾಮುಖ್ಯವನ್ನು ಹೆಚ್ಚಿಸಿದೆ**

ಅಭ್ರಕದ ಹಾಳೆಗಳನ್ನು ಉತ್ಪಾದಿಸುವ ದೇಶಗಳಲ್ಲಿ ಭಾರತವೇ ಅಗ್ರಗಣ್ಯ. ಗಣಿಗಳಿಂದ ಅಭ್ರಕವನ್ನು ತೆಗೆಯುವ ಕಾರ್ಯ ಮುಖ್ಯವಾಗಿ ಬಿಹಾರದ ಹಜಾರಿಬಾಗ್ ಮತ್ತು ಗಯಾ ಜಿಲ್ಲೆಗಳಲ್ಲಿಯೂ, ಮದ್ರಾಸಿನ ನೆಲ್ಲೂರಿನಲ್ಲಿಯೂ, ಅಲ್ಪ ಪ್ರಮಾಣದಲ್ಲಿ ಮದ್ರಾಸಿನ ಇತರ ಜಿಲ್ಲೆಗಳಲ್ಲಿಯೂ, ಟೋಂಕ್ ರಾಜ್ಯದಲ್ಲಿಯೂ ರಾಜಪುತಾಣದ ಅಜ್ಮೇರ್–ಮೇವಾರದಲ್ಲಿಯೂ ನಡೆಯುತ್ತಿದೆ. ಇದರಲ್ಲಿ ಸುಮಾರು ಶೇ. ೮೦ ಬಿಹಾರದಲ್ಲಿ ಉತ್ಪಾದನೆಯಾದರೆ, ಉಳಿದದ್ದರಲ್ಲಿ ಹೆಚ್ಚು ಭಾಗ ನೆಲ್ಲೂರಿನಲ್ಲಿ ಉತ್ಪಾದನೆಯಾಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬರಲು ಕಾರಣವೇನೆಂದರೆ, ಬಿಹಾರದಲ್ಲಿ ಸಿಕ್ಕುವ 'ಬಂಗಾಳದ ಮಾಣಿಕ್ಯ' ಎಂಬ ಹೆಸರಿನ ಅಭ್ರಕದ ಉತ್ತಮ ಗುಣಮಟ್ಟ ಮತ್ತು ಮೂಲ ನಿವಾಸಿಗಳು – ಅದರಲ್ಲೂ ಮುಖ್ಯವಾಗಿ ಹೆಂಗಸರು – ಒರಟಾದ ಬೀಡುಕಬ್ಬಿಣದ ಕುಡುಗೋಲುಗಳಿಂದ (ನೆಲ್ಲೂರಿನಲ್ಲಿ ಕತ್ತರಿಗಳಿಂದ) ನಿಪುಣತೆಯಿಂದ ಅಭ್ರಕವನ್ನು ಪರಿಷ್ಕರಿಸುವುದು ಮತ್ತು ಬೇರ್ಪಡಿಸುವುದು. ಇದು ಎಷ್ಟು ಹೆಚ್ಚಾಗಿತ್ತೆಂದರೆ, ಯುದ್ಧಪೂರ್ವ ಕಾಲದಲ್ಲಿ ಭಾರತವು ಗಣನೀಯ ಪ್ರಮಾಣದಲ್ಲಿ ಅಭ್ರಕದ ಗಡ್ಡೆಗಳನ್ನು ಆಮದು ಮಾಡಿಕೊಂಡು, ಪರಿಷ್ಕೃತ ರೂಪದಲ್ಲಿ ಮತ್ತೆ ರಫ್ತು ಮಾಡುತ್ತಿತ್ತು. ಭಾರತದಲ್ಲಿ ಅನೇಕ ಶತಮಾನಗಳಿಂದ ಅಭ್ರಕವನ್ನು ಆಲಂಕಾರಿಕ ಹಾಗೂ ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ.

ಅಭ್ರಕವು 'ಪುಸ್ತಕ' ರೂಪದಲ್ಲಿ, ಅಂದರೆ ದೊಡ್ಡಗಾತ್ರದ ಕೆಲವು ಸಾರಿ ಹತ್ತು ಅಡಿ ವ್ಯಾಸವುಳ್ಳ ಹರಳಿನ ರೂಪದಲ್ಲಿ ಸಿಕ್ಕುತ್ತದೆ. ಅವುಗಳಲ್ಲಿ ಅನೇಕ ಪದರುಗಳಿರುತ್ತವೆ. ಸಾಮಾನ್ಯ ಅಭ್ರಕವು ಬಿಳಿಯ ಅಥವಾ ನಸುಗಂಪಿನ ಸ್ಫಟಿಕ ಮತ್ತು ಬೆಣಚುಕಲ್ಲುಗಳೊಂದಿಗೂ, ಬೆರಿಲ್ ಎಂಬ ಪ್ರಶಸ್ತ ಶಿಲೆಯೊಂದಿಗೂ

ದೊರಕುತ್ತಿದ್ದು, ಅದನ್ನು ಅಜ್ಮೇರದಿಂದ ಬೆರಿಲಿಯಂ ಎಂಬ ಅದಿರಿನಂತೆ ರಫ್ತು ಮಾಡಲಾಗುತ್ತದೆ.

ಭಾರತದಿಂದ ರಫ್ತಾಗುವ ಅಭ್ರಕದಲ್ಲಿ ಹೆಚ್ಚಿನ ಭಾಗ ಬ್ರಿಟನ್ನಿಗೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೂ ಹೋಗುತ್ತದೆ.

ವಿಜ್ಞಾನದ ಪ್ರಗತಿಯು ಈ ನೈಸರ್ಗಿಕ ವಸ್ತುವಿನ ಬಳಕೆಯನ್ನು ಕ್ಷೀಣಗೊಳಿಸುವ ಬದಲು ಅದರ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಜನರೇಟರುಗಳಲ್ಲಿ ವಿದ್ಯುದ್ಬಲದ ಹೆಚ್ಚು ಉಷ್ಣಾಂಶದ ಬಳಕೆಯಿಂದಾಗಿ, ರೇಡಿಯೋ ಮತ್ತು ಟೆಲಿವಿಷನ್‌ಗಳ ಅಭಿವೃದ್ಧಿಯಾದಂತೆಲ್ಲಾ, ಕಾರು ಮತ್ತು ವಿಮಾನಗಳ ಸಂಖ್ಯೆ ಹೆಚ್ಚಿದಂತೆಲ್ಲಾ, ವಿದ್ಯುನ್ಮಾನಗಳ ಮೇಲಿನ ಮಾನವನ ನಿಯಂತ್ರಣ ಹೆಚ್ಚಾದಂತೆಲ್ಲಾ, ಅಭ್ರಕದ ಪ್ರಾಮುಖ್ಯತೆಯೂ ಹೆಚ್ಚಾಗುತ್ತಾ ಹೋಗುತ್ತದೆ.

ಅಭ್ರಕದ ಬಳಕೆ ಈ ಕೆಳಗಿನ ಸಲಕರಣೆಗಳಲ್ಲಿ ಅತ್ಯಾವಶ್ಯಕವಾಗಿದೆ :

೧. ಮೋಟಾರು ಮತ್ತು ಜನರೇಟರುಗಳಲ್ಲಿ, ವಿದ್ಯುತ್ ಪರಿವರ್ತಕ ಭಾಗಗಳು

೨. ಮೋಟಾರು ಮತ್ತು ಜನರೇಟರುಗಳಲ್ಲಿ, ವಿದ್ಯುತ್ ಪರಿವರ್ತಕ ಉಂಗುರಗಳು

೩. ವಿದ್ಯುತ್ ಸಂಗ್ರಾಹಕಗಳು (ಅತಿ ಉಷ್ಣಾಂಶಗಳು ಹಾಗೂ ಅತಿ ವಿದ್ಯುದ್ಬಲಗಳು)

೪. ವಿಮಾನದ ಮೋಟಾರುಗಳಲ್ಲಿ ಸ್ಪಾರ್ಕ್ ಪ್ಲಗ್ಗುಗಳು

೫. ರೇಡಿಯೋ ಕೊಳವೆಗಳು

೬. ವಿದ್ಯುದ್ಬಲ ಪರಿವರ್ತಕಗಳು

೭. ರೇಡಿಯೋದಲ್ಲಿ ವಿದ್ಯುತ್ ಸಂಗ್ರಾಹಕಗಳು.

## ೩೪
## ಸ್ಥಾಯಿ ಕಾರ್ಮಿಕ ಸಮಿತಿಯಲ್ಲಿ ಕಾರ್ಮಿಕ ಸಂಘಗಳಿಗೆ ಮಾನ್ಯತೆ ಕೊಡುವ ಬಗ್ಗೆ ಚರ್ಚೆ*

೧೯೪೨ರ ಭಾರತೀಯ ಕಾರ್ಮಿಕ ಸಂಘಗಳ (ತಿದ್ದುಪಡಿ) ಮಸೂದೆಯಲ್ಲಿ ಉಕ್ತವಾಗಿರುವಂತೆ, ಕಾರ್ಮಿಕ ಸಂಘಗಳು ಕಡ್ಡಾಯವಾಗಿ ಮಾನ್ಯತೆ ಪಡೆಯುವುದು, ಮಾನ್ಯತೆ ಕೊಡುವ ಮಂಡಳಿಗಳ ನೇಮಕ ಮತ್ತು ಸಂವಿಧಾನಗಳಿಗೆ ಸಂಬಂಧಿಸಿದ ಸಲಹೆ ಇವುಗಳನ್ನು ಕುರಿತು, ನವದೆಹಲಿಯಲ್ಲಿ ಜೂನ್ ೨೭ರಂದು ನಡೆದ ಸ್ಥಾಯಿ ಕಾರ್ಮಿಕ ಸಮಿತಿಯ ಐದನೇ ಸಭೆಯಲ್ಲಿ ಚರ್ಚಿಸಲಾಯಿತು. ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಸದಸ್ಯರು) ಅಧ್ಯಕ್ಷತೆ ವಹಿಸಿದ್ದರು.

ಉದ್ಯಮಿಗಳ ಮತ್ತು ಕಾರ್ಮಿಕರ ಪ್ರತಿನಿಧಿಗಳು, ಕಾರ್ಮಿಕ ಸಂಘದ ಪ್ರತಿನಿಧಿತ್ವವನ್ನು ನಿರ್ಧರಿಸುವ ಲಕ್ಷಣಗಳ ಬಗೆಗಿನ ತಮ್ಮ ಅಭಿಪ್ರಾಯಗಳನ್ನು ವಿವರಿಸಿದರು.

ಉದ್ಯಮಿಗಳ ಪ್ರತಿನಿಧಿಗಳು, ಉದ್ಯಮಿಗಳು ಮತ್ತು ಕಾರ್ಮಿಕರ ನಡುವೆ ಸಹಕಾರವಿರಬೇಕೆಂದು ಮಾತನಾಡಿದಾಗ ಅಂಥ ಸಹಕಾರ ಐಚ್ಛಿಕವಾಗಿ ಇರಬೇಕೇ ವಿನಾ ಕಾನೂನು ರೀತ್ಯಾ ಅಲ್ಲ ಎಂಬುದು

* ಇಂಡಿಯನ್ ಇನ್‌ಫರ್ಮೇಶನ್, ಜುಲೈ ೧೫, ೧೯೪೪, ಪುಟ : ೫೩ ಮತ್ತು ೫೭.

ಅವರ ಅಭಿಪ್ರಾಯವಿರುವಂತೆ ಕಂಡುಬಂದಿತು. ಕಾರ್ಮಿಕ ಸಂಘಗಳು ಆರೋಗ್ಯಕರ ಸ್ಥಿತಿಯಲ್ಲಿ ಬೆಳೆದರೆ ಅವಕ್ಕೆ ಮಾನ್ಯತೆ ಪಡೆಯುವುದು ಕಷ್ಟವಾಗುವುದಿಲ್ಲ ಎಂದು ತಿಳಿಸಲಾಯಿತು. ಕಾರ್ಮಿಕರ ಪ್ರತಿನಿಧಿಗಳು ಕಡ್ಡಾಯವಾಗಿ ಮಾನ್ಯತೆ ಪಡೆಯುವ ಅಭಿಪ್ರಾಯಕ್ಕೆ ತಮ್ಮ ಒಲವನ್ನು ತೋರಿಸಿದರು. ಅಲ್ಲದೆ, ಮಸೂದೆಯನ್ನು ತಿದ್ದುಪಡಿ ಮಾಡುವಾಗ, ಕಾರ್ಮಿಕ ಸಂಘಗಳಿಗೆ ಹೆಚ್ಚಿನ ಅಧಿಕಾರಗಳನ್ನೂ, ವಿಶೇಷ ಅಧಿಕಾರಗಳನ್ನೂ ಕೊಡುವಂತೆ ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕು ಎಂದು ವಿನಂತಿಸಿಕೊಂಡರು.

**ಕಾರ್ಮಿಕ ವಿವಾದಗಳ ಅಂಕಿ–ಅಂಶಗಳು**

ಅನಂತರ, ಸಮಿತಿಯು ಕಾರ್ಮಿಕರ ಜಗಳಗಳನ್ನು ಕುರಿತ ಈಗಿರುವ ಅಂಕಿ–ಅಂಶಗಳನ್ನು ಸುಧಾರಿಸುವ ಯೋಜನೆಯೊಂದನ್ನು ಪರಿಶೀಲಿಸಿತು. ಈ ಅಂಕಿ–ಅಂಶಗಳನ್ನು ಸಂಗ್ರಹಿಸುವ ವಿಧಾನಗಳಲ್ಲಿ ಏಕರೂಪತೆ ತರುವುದು ಮತ್ತು ಭಾರತದ ಪ್ರಾಂತ್ಯಗಳನ್ನು ಇತರ ದೇಶಗಳೊಡನೆ ಹೋಲಿಸುವಾಗ ಅವುಗಳು ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿತ್ತು. ಪ್ರಾಂತ್ಯ ಸರ್ಕಾರಗಳಿಗೆ ಅಂಕಿ–ಅಂಶಗಳನ್ನು ಪಡೆಯುವ ಅಧಿಕಾರ ಕೊಡುವ ೧೯೪೨ರ ಕೈಗಾರಿಕಾ ಅಂಕಿ–ಅಂಶಗಳ ಶಾಸನಗಳನ್ನು ಸಮಿತಿಯು ಉಪಯೋಗಿಸಿಕೊಳ್ಳಬೇಕು ಎಂಬ ಸೂಚನೆಯೂ ಆಗ ಬಂದಿತು. ಅಲ್ಲದೆ, ಈ ವಿಷಯದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ ಅನುಸರಿಸಿದ ವಿಧಾನವನ್ನೇ ಅನುಸರಿಸಬೇಕೆಂದು ನಿರ್ಣಯಿಸಲಾಯಿತು. ಇದಕ್ಕೆ ಸರ್ವಾನುಮತದ ಅನುಮೋದನೆಯಿತ್ತು.

ಅನಂತರ ಸಮಿತಿಯು ಎಲ್ಲ ಮಾಲೀಕರ ಮೇಲೆ – ಅವರು ನೇಮಿಸಿಕೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟೇ ಇರಲಿ – ನೋಟೀಸು ಜಾರಿ ಮಾಡಬೇಕೆ ಅಥವಾ ಹತ್ತು ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರ ಮೇಲೆ ಮಾತ್ರ ನೋಟೀಸು ಜಾರಿಮಾಡಬೇಕೇ ಎಂಬ ವಿಷಯವನ್ನು ಚರ್ಚಿಸಿತು. ಕರಡು ನಿಯಮಗಳನ್ನೂ, ಯೋಜಿಸಿದ ವಿಧಾನದ ಮೇರೆಗೆ ಅಂಕಿ–ಅಂಶಗಳನ್ನು ಸಂಗ್ರಹಿಸಲು ಮಾಡಿದ ಕರಡು ನಮೂನೆಗಳನ್ನೂ ಸಮಿತಿಯ ಸದಸ್ಯರಿಗೆ ಹಂಚಲಾಯಿತು.

**ಬಟ್ಟೆ ಗಿರಣಿಗಳಿಗೆ ಭೇಟಿ**

ಈ ಸಭೆಯನಂತರ, ಸರ್ ಶ್ರೀರಾಮ್ ಅವರ ಆಮಂತ್ರಣದ ಮೇರೆಗೆ, ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಸ್ಥಾಯಿ ಕಾರ್ಮಿಕ ಸಮಿತಿಯ ಇತರ ಸದಸ್ಯರು ಡೆಲ್ಲಿ ಕ್ಲಾಥ್ ಮಿಲ್ಸ್‌ಗೆ ಭೇಟಿ ಕೊಟ್ಟರು. ಅಲ್ಲಿ ಅವರು ಬಟ್ಟೆ ತಯಾರಿಕೆಯ ವಿವಿಧ ಹಂತದ ಕಾರ್ಯಗಳನ್ನೂ, ವ್ಯವಸ್ಥಾಪಕರು ಕೈಕೊಂಡಿರುವ ಕಾರ್ಮಿಕ ಕಲ್ಯಾಣಕಾರ್ಯಗಳನ್ನೂ ವೀಕ್ಷಿಸಿದರು. ಸರ್ ಶ್ರೀರಾಮ್ ಸದಸ್ಯರೊಂದಿಗೆ ಕಾರ್ಮಿಕರ ಮನೆಗಳಿಗೂ ಹೋದರಲ್ಲದೆ, ನಿರ್ಮಲೀಕರಣ ವ್ಯವಸ್ಥೆ ಮತ್ತು ಕುಡಿಯುವ ನೀರು ಮತ್ತು ಸ್ನಾನದ ನೀರಿಗೆ ಮಾಡಿರುವ ಅನುಕೂಲತೆಗಳ ಬಗ್ಗೆ ವಿವರಿಸಿದರು. ಕಾರ್ಮಿಕರ ಕೇರಿಯಲ್ಲಿ ಒಂದು ಪಾಠಶಾಲೆ, ಒಂದು ಆಸ್ಪತ್ರೆ ಮತ್ತು ಒಂದು ಗ್ರಂಥಾಲಯವಿತ್ತಲ್ಲದೆ, ಅಲ್ಲೊಂದು ರೇಡಿಯೋ ಸಹಾ ಇತ್ತು. ಅದರಲ್ಲಿ ದೆಹಲಿಯ ಆಕಾಶವಾಣಿ ಬಿತ್ತರಿಸುತ್ತಿದ್ದ ಸಿನಿಮಾ ಹಾಡೊಂದು ಬರುತ್ತಿತ್ತು.

ಅನಂತರ ಈ ತಂಡವು ಒಂದು ಈಜುಗೊಳವನ್ನು ನೋಡಿತು. ಅದರಲ್ಲಿ ಕಲಿಯುವವರಿಗೂ ಪರಿಣತರಿಗೂ ಸರಿಹೊಂದುವಂತೆ ಬೇರೆ ಬೇರೆ ಆಳದ ವ್ಯವಸ್ಥೆ ಮಾಡಿದ್ದರು. ಕಾರ್ಮಿಕರ ಆಟದ ಕ್ಲಬ್ಬಿನಲ್ಲಿ ಕಬಡ್ಡಿ ಪಂದ್ಯ ನಡೆದಿತ್ತು. ಹತ್ತಿರದಲ್ಲಿಯೇ ಒಂದು ಕಾರ್ಮಿಕರ ರಂಗಭೂಮಿಯೂ ಇತ್ತು. ಅಲ್ಲೆ ಆಗಾಗ್ಗೆ,

ಕಾರ್ಮಿಕರೇ ಪಾತ್ರವಹಿಸಿ, ಅಭಿನಯಿಸುತ್ತಿದ್ದ ಐತಿಹಾಸಿಕ ಮತ್ತು ಇತರ ರೀತಿಯ ನಾಟಕಗಳನ್ನು ಆಡಲಾಗುತ್ತಿತ್ತು ಎಂದು ಅವರಿಗೆ ತಿಳಿಸಲಾಯಿತು.

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು, ಭಾರತದ ರಾಜ್ಯಗಳು, ಅಖಿಲ ಭಾರತ ಕೈಗಾರಿಕಾ ಉದ್ಯಮಿಗಳ ಸಂಸ್ಥೆ, ಭಾರತದ ಉದ್ಯಮಿಗಳ ಫೆಡರೇಶನ್, ಅಖಿಲ ಭಾರತ ಕಾರ್ಮಿಕ ಸಂಘಗಳ ಒಕ್ಕೂಟ, ಇಂಡಿಯನ್ ಫೆಡರೇಶನ್ ಆಫ್ ಲೇಬರ್, ಕೆಲವು ಉದ್ಯಮಿಗಳು ಹಾಗೂ ಕಾರ್ಮಿಕರು ಇವರನ್ನು ಪ್ರತಿನಿಧಿಸುವ ಈ ಕೆಳಗಿನ ನಿಯೋಗಿಗಳು ಮತ್ತು ಸಲಹೆಗಾರರು ಈ ಸಭೆಯಲ್ಲಿ ಹಾಜರಿದ್ದರು.

ಸನ್ಮಾನ್ಯ ಶ್ರೀ ಎಚ್.ಸಿ. ಪ್ರಯರ್, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ, ಮತ್ತು ಶ್ರೀ ಎಸ್.ಲಾಲ್, ಉಪಕಾರ್ಯದರ್ಶಿ (ಇಬ್ಬರೂ – ಕೇಂದ್ರ ಸರ್ಕಾರ); ಸರ್ದಾರ್ ಬಹಾದೂರ್ ಇಷರ್ ಸಿಂಗ್, ಕಾರ್ಮಿಕ ಕಮಿಷನರ್, ನಾಗಪುರ; ಮತ್ತು ಶ್ರೀ ಸಿ.ಕೆ. ವಿಜಯರಾಘವನ್, ಐ.ಸಿ.ಎಸ್. ಕಾರ್ಮಿಕ ಕಮಿಷನರ್, ಮದ್ರಾಸ್ (ಮದ್ರಾಸ್ ಮತ್ತು ಕೇಂದ್ರ ಪ್ರಾಂತ್ಯಗಳು ಮತ್ತು ಬೇರಾರ್); ಶ್ರೀ ಎಸ್.ವಿ. ಜೋಷಿ, ಕಾರ್ಮಿಕ ಕಮಿಷನರ್ ಮತ್ತು ಶ್ರೀ ವಿ.ಪಿ. ಕೇಣಿ, ಸಹಾಯ ಕಾರ್ಮಿಕ ಕಮಿಷನರ್ (ಮುಂಬಯಿ); ಶ್ರೀ ಎ. ಹ್ಯೂಸ್, ಐ.ಸಿ.ಎಸ್., ಕಾರ್ಮಿಕ ಕಮಿಷನರ್, ಬಂಗಾಳ; ಶ್ರೀ ಜೆ.ಇ. ಪೆಡ್ಲೆ, ಐ.ಸಿ.ಎಸ್., ಕಾರ್ಮಿಕ ಕಮಿಷನರ್ (ಸಂಯುಕ್ತ ಪ್ರಾಂತ್ಯಗಳು); ಶ್ರೀ ಎಂ. ಎಚ್. ಮಹಮೂದ್, ಕೈಗಾರಿಕೆಗಳ ನಿರ್ದೇಶಕ, ಪಂಜಾಬ್ ಮತ್ತು ಶ್ರೀ ಪಿ.ಕೆ. ಕೌಲ್, ಐ.ಸಿ.ಎಸ್., ಸರ್ಕಾರದ ಕಾರ್ಯದರ್ಶಿ, ವಿದ್ಯುಚ್ಛಕ್ತಿ ಮತ್ತು ಕೈಗಾರಿಕೆಗಳ ಇಲಾಖೆ, ಪಂಜಾಬ್ (ಪಂಜಾಬ್, ಸಿಂಧ್ ಮತ್ತು ವಾಯವ್ಯ ಗಡಿ ಪ್ರಾಂತ್ಯಗಳು); ಶ್ರೀ ಎಂ.ಎಸ್. ರಾಮಚಂದ್ರನ್ ಪಿಳ್ಳೆ, ಕಾರ್ಮಿಕ ಕಮಿಷನರ್, ಅಸ್ಸಾಂ ಮತ್ತು ಗಿರಣಿಗಳ ಅಭಿವೃದ್ಧಿ ನಿರ್ದೇಶಕ ಮತ್ತು ಮುಖ್ಯ ಇನ್ಸ್‌ಪೆಕ್ಟರ್, ಓಡಿಸ್ಸಾ (ಅಸ್ಸಾಂ ಮತ್ತು ಓಡಿಸ್ಸಾ); ಶ್ರೀ ಕೆ.ಎಸ್. ಶ್ರೀಕಾಂತನ್, ಕೈಗಾರಿಕೆಗಳ ನಿರ್ದೇಶಕ, ಇಂದೂರು; ಶ್ರೀ ಬಿ.ಎಸ್. ದೇಸಾಯಿ, ಕಾರ್ಮಿಕ ಉಪನಿರ್ದೇಶಕ, ಬರೋಡ ಮತ್ತು ಶ್ರೀ ಎನ್.ಡಿ. ಗುಪ್ತಾ, ಕಾರ್ಮಿಕ ಅಧಿಕಾರಿ, ಗ್ವಾಲಿಯರ್ (ಬರೋಡ, ಇಂದೂರು ಮತ್ತು ಗ್ವಾಲಿಯರ್ ಸಂಸ್ಥಾನಗಳು); ಶ್ರೀ ಇ.ಐ. ಚಾಕೊ, ಕೈಗಾರಿಕೆಗಳ ನಿರ್ದೇಶಕ ಮತ್ತು ಕಾರ್ಮಿಕ ಅಧಿಕಾರಿ, ಹೈದರಾಬಾದ್, ಡೆಕ್ಕನ್ (ಮೈಸೂರು ಮತ್ತು ತಿರುವಾಂಕೂರು ಸಂಸ್ಥಾನಗಳು); ಮೀರ್ ಮಕ್ಬೂಲ್ ಮಹಮೂದ್ (ಛೇಂಬರ್ ಆಫ್ ಪ್ರಿನ್ಸಸ್); ಸರ್ ಶ್ರೀರಾಮ್, ಶ್ರಿ ಕಸ್ತೂರಭಾಯಿ ಲಾಲ್ ಭಾಯ್, ಮತ್ತು ಶ್ರೀ ಡಿ.ಜಿ. ಮುಳ್ವೇರ್‌ಕರ್, ಕಾರ್ಯದರ್ಶಿ, ಅಖಿಲಭಾರತ ಕೈಗಾರಿಕಾ ಉದ್ಯಮಿಗಳ ಸಂಸ್ಥೆ (ಅಖಿಲ ಭಾರತ ಕೈಗಾರಿಕಾ ನೌಕರಿದಾತರ ಸಂಸ್ಥೆ); ಶ್ರೀ ಎಚ್.ಎಸ್. ಟೌನ್, ಶ್ರೀ ಸಿ.ಸಿ. ಮಿಲ್ಲರ್, ಎಂ.ಎಲ್.ಎ,; ಶ್ರೀ ಜೆ. ಲ್ಯಾಟಿಮರ್ ಮತ್ತು ಶ್ರೀ ಟಿ.ಎಸ್. ಸ್ವಾಮಿನಾಥನ್, ಕಾರ್ಯದರ್ಶಿ, ಭಾರತದ ಉದ್ಯಮಿಗಳ ಫೆಡರೇಷನ್ (ಭಾರತ ಉದ್ಯಮಿಗಳ ಫೆಡರೇಶನ್); ಶ್ರೀ ಎನ್.ಎಸ್. ಮಿರಜ್‌ಕರ್, ಶ್ರೀ ವಿ. ಚಕ್ಕರಾಯಿ ಚೆಟ್ಟಿಯಾರ್, ಶ್ರೀ ಖಾಜಿ ಮುಜ್ತಬಾ ಮತ್ತು ಶ್ರೀ ವಿ.ಜಿ. ಬಲವಾಯಿಕೆ (ಅಖಿಲ ಭಾರತ ಕಾರ್ಮಿಕ ಸಂಘಗಳ ಒಕ್ಕೂಟ); ಪ್ರೊ. ಬಿ.ಎಸ್. ಬ್ಯಾನರ್ಜಿ, ಶ್ರೀ ಜಮ್ನಾದಾಸ್ ಎಂ. ಮೆಹ್ತಾ, ಶ್ರೀ ಅಬ್ದುಲ್ ಸತ್ತಾರ್ ಮತ್ತು ಶ್ರೀ ವಿ.ಜಿ. ಕರಣಿಕ್ (ಇಂಡಿಯನ್ ಫೆಡರೇಷನ್ ಆಫ್ ಲೇಬರ್), ರಾಯ್ ಬಹಾದುರ್ ಶ್ಯಾಮ್ ನಂದನ್ ಸಹಾಯ (ಇತರ ಉದ್ಯಮಿಗಳು), ಶ್ರೀ ಎಸ್. ಸಿ. ಜೋಷಿ, ಎಂ.ಎಲ್.ಸಿ., ಮತ್ತು ಶ್ರೀ ಪಿ.ಟೊ. ದೇವಾರ್ (ಇತರ ಕಾರ್ಮಿಕರು).

# ೩೫
# ಯುದ್ಧಾನಂತರ ಪರಿಣತ ಕಾರ್ಮಿಕರ ನೇಮಕಾತಿ *

"ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಶಿಕ್ಷಣಕ್ಕೆ (ತರಬೇತಿಗೆ) ಅವಕಾಶ ಮಾಡಿಕೊಡದ, ರಾಷ್ಟ್ರದ ಭವಿಷ್ಯತ್ತಿನ ಪ್ರಗತಿಯ ಯಾವುದೇ ಯೋಜನೆಯು ಪೂರ್ಣವಾಯಿತೆಂದು ಪರಿಗಣಿಸಲಾಗದು. ಇದು ಯಂತ್ರಗಳ ಕಾಲ ಮತ್ತು ಯಾವ ರಾಷ್ಟ್ರಗಳಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಶಿಕ್ಷಣವು ಉನ್ನತ ಮಟ್ಟವನ್ನು ಮುಟ್ಟಿದೆಯೊ, ಆ ರಾಷ್ಟ್ರಗಳಷ್ಟೇ (ಯುದ್ಧಾನಂತರ ಪ್ರಾರಂಭವಾಗುವ) ಉತ್ತಮ ಜೀವನ ಮಟ್ಟವನ್ನು ಕಾಯ್ದುಕೊಳ್ಳುವ ಹೋರಾಟದಲ್ಲಿ ಯಶಸ್ವಿಯಾಗುತ್ತವೆ. ಭಾರತ ಸರ್ಕಾರವೂ ಈ ವಿಷಯದಲ್ಲಿ ಉದಾಸೀನವೇನೂ ಆಗಿಲ್ಲ; ಮತ್ತು ಈ ದಿಸೆಯಲ್ಲಿ ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನು ಜಾರಿಗೆ ತರಲು ಹಾಗೂ ದೇಶದ ತುಂಬೆಲ್ಲಾ ಅದನ್ನು ವಿಸ್ತರಿಸಲು, ಹಾಗೂ ಅದನ್ನು ದೇಶದ ಶಿಕ್ಷಣ ವ್ಯವಸ್ಥೆಯ ಒಂದು ಶಾಶ್ವತ ಅಂಗವನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ" ಎಂದು ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಭಾರತ ಸರ್ಕಾರದ ಕಾರ್ಮಿಕ ಸದಸ್ಯರು, ನುಡಿದರು. ಅವರು ಕಲ್ಕತ್ತಾದಲ್ಲಿ ಆಗಸ್ಟ್ ೨೪ರಂದು ಜರುಗಿದ, ತಾಂತ್ರಿಕ ಪ್ರಶಿಕ್ಷಣ ಯೋಜನೆಯ ಸಲಹಾ ಸಮಿತಿಯ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನೂ ಸಾರ್ವಜನಿಕ ಕೈಗಾರಿಕೆಗಳ ಆವಶ್ಯಕತೆಗಳಿಗೆ ಸರಿಹೊಂದಿಸುವ ಪ್ರಶ್ನೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಈ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯಲ್ಲಿ ಇಂಜಿನಿಯರುಗಳ ಸಂಘಗಳು, ಅಖಿಲ ಭಾರತ ಕೈಗಾರಿಕಾ ನೌಕರಿದಾತರ ಸಂಸ್ಥೆ, ಭಾರತದ ನೌಕರಿದಾತರ ಫೆಡರೇಷನ್, ಬಂಗಾಳದ ವಾಣಿಜ್ಯ ಮಂಡಳಿ, ಸರಬರಾಜು ಇಲಾಖೆ, ರೈಲ್ವೆ ಮಂಡಳಿ ಮತ್ತು ಇತರ ಇಂಜಿನಿಯರಿಂಗ್ ಸಂಸ್ಥೆಗಳ ಪ್ರತಿನಿಧಿಗಳಿದ್ದರು.

### ಕಾರ್ಮಿಕ ಸದಸ್ಯರ ಭಾಷಣ

ಕಾರ್ಮಿಕ ಸದಸ್ಯರ ಭಾಷಣದ ಪೂರ್ಣಪಾಠ ಇಲ್ಲಿದೆ :

"ಮಹನೀಯರೇ, ನಿಮ್ಮನ್ನು ಸ್ವಾಗತಿಸುವ ಈ ಸಮಯದಲ್ಲಿ, ತಾವೆಲ್ಲ ಈ ಸಭೆಗೆ ಬರುವ ತೊಂದರೆ ತೆಗೆದುಕೊಂಡದ್ದಕ್ಕಾಗಿ, ನಾನು ತಮ್ಮನ್ನು ಶ್ಲಾಘಿಸಲು ಹಾಗೂ ವಂದಿಸಲು ಇಚ್ಛಿಸುತ್ತೇನೆ. ಇತ್ತೀಚಿನ ದಿನಗಳಲ್ಲಿ ನಾವೆಲ್ಲಾ ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಎಷ್ಟು ಮುಳುಗಿ ಹೋಗಿದ್ದೇವೆಂದರೆ, ಯಾವುದೇ ಒಂದು ಹೆಚ್ಚಿನ ಕೆಲಸವೂ ಭಾರದ ಕೆಲಸವೆನಿಸುತ್ತದೆ. ಈ ದೇಶದ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಲು ಮಾಡಿರುವ ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನು ಪುನಾರೂಪಿಸುವಲ್ಲಿ, ತಾವು ಸರ್ಕಾರಕ್ಕೆ ಸಹಾಯ ಮಾಡುತ್ತಿದ್ದೀರಿ; ಅದಕ್ಕಾಗಿ ನಾನು ತಮಗೆಲ್ಲಾ ಋಣಿಯಾಗಿದ್ದೇನೆ.

"ಈ ಸಮಿತಿಯು ಮಾಡಬೇಕಾಗಿರುವ ಕೆಲಸಕ್ಕೆ ನಾನು ಎಷ್ಟು ಹೆಚ್ಚು ಮಹತ್ವವನ್ನು ಕೊಡುತ್ತಿದ್ದೇನೆ ಎಂಬುದನ್ನು ಹೇಳಬೇಕಾಗಿಲ್ಲ. ಕೊನೆಯ ಗಳಿಗೆಯಲ್ಲಿ ಒಂದು ಅಡ್ಡಿ ಉಂಟಾದರೂ, ನಿಮ್ಮನ್ನು ಭೇಟಿಮಾಡಿ, ನಿಮ್ಮ ಕೆಲಸದಲ್ಲಿ ಯಶಸ್ಸುಂಟಾಗಲಿ ಎಂದು ಶುಭಕೋರಲು, ನಾನು ಕಲ್ಕತ್ತೆಗೆ ಬರಲು ನಿರ್ಧರಿಸಿದೆ. ನನಗೆ

---

* ಇಂಡಿಯನ್ ಇನ್‌ಫರ್ಮೇಶನ್, ಸೆಪ್ಟೆಂಬರ್ ೧೫, ೧೯೪೪, ಪು. ೨೭೪–೭೭.

ಇದರಲ್ಲಿ ಎಷ್ಟು ಕಳಕಳಿ ಇದೆ ಎಂದು ತೋರಿಸಲು – ಹಾಗೆ ತೋರಿಸುವ ಆವಶ್ಯಕತೆ ಇದ್ದರೆ – ಇಷ್ಟೇ ಸಾಕು.

“ನಮ್ಮ ತಾಂತ್ರಿಕ ಪ್ರಶಿಕ್ಷಣ ಯೋಜನೆಯ ಭವಿಷ್ಯವನ್ನು ಪರಿಶೀಲಿಸಲು ತಾವೆಲ್ಲ ಇಲ್ಲಿ ಸೇರಿದ್ದೀರಿ. ಸೇನೆಯ ತಾಂತ್ರಿಕ ಅಗತ್ಯಗಳನ್ನು ಪೂರೈಸುವುದಕ್ಕಾಗಿ, ಈ ಯೋಜನೆಯನ್ನು ಒಂದು ತುರ್ತು ಕ್ರಮವೆಂಬಂತೆ ಆಚರಣೆಗೆ ತರಲಾಯಿತು. ಆದರೆ, ಇದರ ಪರಿಣಾಮವಾಗಿ, ಹಿಂದೆಂದೂ ಕಾಣದಂತಹ ಅರೆಕುಶಲ ಮಾನವ–ಶಕ್ತಿಯು ಭಾರತಕ್ಕೆ ಲಭಿಸಿದಂತಾಗಿದೆ.

“ತಾಂತ್ರಿಕ ಪ್ರಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಕೆಲಸದ ಗಾತ್ರವನ್ನು ನಿಮಗೆ ಪರಿಚಯಿಸಬೇಕಾದರೆ, ತಾಂತ್ರಿಕ ಪ್ರಶಿಕ್ಷಣ ಯೋಜನೆಯು ಹೇಗೆ ಪ್ರಾರಂಭವಾಯಿತು ಎಂಬುದರಿಂದ ಹಿಡಿದು ಅದರ ಇತಿಹಾಸವನ್ನು ಸಂಕ್ಷಿಪವಾಗಿ ಹೇಳಬೇಕಾಗುತ್ತದೆ. ಇದನ್ನು ೩೧/೨ ವರ್ಷಗಳ ಹಿಂದೆ ಒಂದು ಗಂಭೀರ ತೊಂದರೆಯನ್ನು – ಅಂದರೆ, ಸೇನೆಗೆ ಅಗತ್ಯವಾದ ತಾಂತ್ರಿಕ ಸಿಬ್ಬಂದಿಯ ಅಭಾವವನ್ನು – ನಿವಾರಿಸಲು ಪ್ರಾರಂಭಿಸಲಾಯಿತು. ಇದನ್ನು ನಾವು ೩,೦೦೦ ಜನರಿಗೆ ಪ್ರಶಿಕ್ಷಣ ಕೊಡುವ ಗುರಿಯೊಂದಿಗೆ ಪ್ರಾರಂಭಿಸಿದೆವು. ಆದರೆ ಎರಡೇ ವರ್ಷದಲ್ಲಿ ಈ ಸಂಖ್ಯೆ ೪೫,೦೦೦ಕ್ಕೆ ಏರಿದ್ದರಿಂದ, ನಾವು ೩೯೪ ತರಬೇತಿ ಪಡೆದ ಸಿಬ್ಬಂದಿಯನ್ನು ಒದಗಿಸಿದೆವು. ಜೂನ್ ೧೯೪೪ರೊಳಗಾಗಿ ನಾವು ೭೫,೦೦೦ ಜನರಿಗೆ ಪ್ರಶಿಕ್ಷಣ ಕೊಟ್ಟಿದ್ದೆವು. ಅವರಲ್ಲಿ ೭೩,೦೦೦ ಜನರು ರಕ್ಷಣಾ ಸೇನೆಯ ತಾಂತ್ರಿಕ ಶಾಖೆಗಳಿಗೂ, ೩೦೦೦ ಜನರು ಯುದ್ಧೋಪಕರಣ ತಯಾರಿಕೆಯ ಗಿರಣಿಗಳಿಗೂ ಸೇರಿದರು. ಇಷ್ಟು ಅಲ್ಪಕಾಲದ ಅವಧಿಯನ್ನು ಗಮನದಲ್ಲಿಟ್ಟು ಹೇಳುವುದಾದರೆ, ನಾವು ಸಾಧಿಸಿರುವುದು ಅಲ್ಪವೇನಲ್ಲ ಎಂಬ ಮಾತನ್ನು ನೀವೂ ಖಂಡಿತವಾಗಿ ಒಪ್ಪುತ್ತೀರಿ.

“ನಾನು ಈ ಮೊದಲೇ ಹೇಳಿದಂತೆ ತಾಂತ್ರಿಕ ಪ್ರಶಿಕ್ಷಣ ಯೋಜನೆಯು ಪ್ರಾರಂಭವಾದುದು ಯುದ್ಧದಿಂದುಂಟಾದ ಸೇನೆಯ ಅಗತ್ಯಗಳನ್ನು ಪೂರೈಸುವುದಕ್ಕಾಗಿ. ಯುದ್ಧವು, ನಿಮಗೇ ಕಾಣುವಂತೆ, ಕೊನೆಗೊಳ್ಳುತ್ತಾ ಬರುತ್ತಿದೆ, ಹಾಗೂ ಸೇನೆಯ ಸಲುವಾದ ತಾಂತ್ರಿಕ ಪ್ರಶಿಕ್ಷಣದ ಬೇಡಿಕೆಯೂ ಮುಂದೆ ಕಡಿಮೆಯಾಗುವುದು.

“ಯುದ್ಧವು ಕೊನೆಗೊಳ್ಳುವುದರಿಂದ ಉಂಟಾಗುವ ಈ ಪರಿಸ್ಥಿತಿಯಿಂದಾಗಿ ನಾವು ಎರಡು ಪ್ರಶ್ನೆಗಳನ್ನು ಪರಶೀಲಿಸಬೇಕಾಗುತ್ತದೆ. ಮೊದಲನೆಯದು : ಈಗಾಗಲೇ ಪ್ರಶಿಕ್ಷಣ ಪಡೆದು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು, ಸೇನೆಯಿಂದ ಸದ್ಯದಲ್ಲೇ ನಿವೃತ್ತಿ ಮಾಡಿದಾಗ ಅವರು ಉದ್ಯೋಗಕ್ಕಾಗಿ ಕಾಯುತ್ತಾ ಕುಳಿತರೆ, ನಾವು ಅವರಿಗಾಗಿ ಏನು ಮಾಡಬಹುದು; ಎರಡನೆಯದು : ತಾಂತ್ರಿಕ ಪ್ರತಿಕ್ಷಣ ಯೋಜನೆಯನ್ನು ಆಮೇಲೆ ಏನು ಮಾಡುವುದು?

“ಕೆಲವರು, ಸರ್ಕಾರವು ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನು ಕೊನೆಗಾಣಿಸಲು ನಿರ್ಣಯಿಸಿದೆ ಎಂದು ತೀರ್ಮಾನಿಸಿದ್ದಾರೆ. ಇದು ಪೂರ್ಣ ಅಸತ್ಯ. ಸರ್ಕಾರವು ಕೆಲವು ಪ್ರಶಿಕ್ಷಣ ಕೇಂದ್ರಗಳನ್ನು ಮುಚ್ಚಿರುವುದೇನೋ ಸತ್ಯವೇ. ೧೯೪೨ರಲ್ಲಿ ನಾವು ೪೫,೦೦೦ ಜನರನ್ನು ತರಬೇತಿ ಮಾಡಲು ೪೦೦ ತರಬೇತಿ ಕೇಂದ್ರಗಳನ್ನು ಹೊಂದಿದ್ದೆವು. ಈಗ ಅದರ ಬದಲು, ಕೇವಲ ೧೭೦ ತರಬೇತಿ ಕೇಂದ್ರಗಳಿದ್ದು, ಅದರಲ್ಲಿ ಕೇವಲ ೩,೨೦೦ ಜನರಿಗೆ ಪ್ರಶಿಕ್ಷಣ ಕೊಡುತ್ತಿದ್ದೇವೆ. ಇದಕ್ಕೆ ಅನೇಕ ಕಾರಣಗಳಿವೆ, ಅದರಲ್ಲಿ ಮುಖ್ಯವಾದುವು ಎರಡು. ಮೊದಲನೆಯದು, ಸೇನೆಯ ಬೇಡಿಕೆ ಕಡಿಮೆಯಾದದ್ದು; ಎರಡನೆಯದು, ಸಣ್ಣ ಕೇಂದ್ರಗಳನ್ನು ನಡೆಸಲು ತಗಲುವ ಭಾರೀ ವೆಚ್ಚ.

**ಸರ್ಕಾರದ ಉದ್ದೇಶ**

"ಪರಿಸ್ಥಿತಿಯ ಜರೂರತ್ತಿನಿಂದಾಗಿ, ಸರ್ಕಾರವು ಆವಶ್ಯಕ ಹೊಂದಾಣಿಕೆಯನ್ನು ಮಾಡಬೇಕಾಯಿತು ಎಂಬುದನ್ನು ಈ ಕ್ರಮಗಳು ತೋರಿಸುತ್ತವೆ. ಸರ್ಕಾರಕ್ಕೆ ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನು ಕೊನೆಗೊಳಿಸುವ ಉದ್ದೇಶವಿದೆ ಎಂಬುದನ್ನು ಈ ಕ್ರಮಗಳು ಸೂಚಿಸುವುದಿಲ್ಲ. ಅಂಥ ಉದ್ದೇಶವೇನಾದರೂ ಸರ್ಕಾರಕ್ಕಿದ್ದಿದ್ದರೆ, ಸರ್ಕಾರವು ಇಂಥ ಸಮಿತಿಗಳನ್ನು ರಚಿಸಬೇಕಾಗಿರಲಿಲ್ಲ. ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಶಿಕ್ಷಣಕ್ಕೆ ಅವಕಾಶ ಮಾಡಿಕೊಡದ ರಾಷ್ಟ್ರದ ಭವಿಷ್ಯತ್ತಿನ ಪ್ರಗತಿಯ ಯಾವುದೇ ಯೋಜನೆಯು ಪೂರ್ಣವಾಗಿದೆಯೆಂದು ಪರಿಗಣಿಸಲಾಗದು. ಇದು ಯಂತ್ರಗಳ ಯುಗ, ಮತ್ತು ಯಾವ ರಾಷ್ಟ್ರಗಳಲ್ಲಿ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಶಿಕ್ಷಣವು ಉನ್ನತ ಮಟ್ಟವನ್ನು ಮುಟ್ಟಿದೆಯೋ, ಆ ರಾಷ್ಟ್ರಗಳಷ್ಟೇ, ಯುದ್ಧಾನಂತರ ಪ್ರಾರಂಭವಾಗುವ, ಉತ್ತಮ ಜೀವನಮಟ್ಟವನ್ನು ಕಾಯ್ದುಕೊಳ್ಳುವ ಹೋರಾಟದಲ್ಲಿ ಯಶಸ್ವಿಯಾಗುತ್ತವೆ. ಭಾರತ ಸರ್ಕಾರವೇನೂ ಈ ವಿಷಯದಲ್ಲಿ ಉದಾಸೀನವಾಗಿಲ್ಲ; ಅಲ್ಲದೆ ಈ ದಿಸೆಯಲ್ಲಿ ತಾಂತ್ರಿಕ ಪ್ರಶಿಕ್ಷಣ ಯೋಜನೆಯನ್ನು ಉಳಿಸಿಕೊಳ್ಳಲು ಹಾಗೂ ದೇಶದ ತುಂಬೆಲ್ಲ ಅದನ್ನು ವಿಸ್ತರಿಸಲು ಹಾಗೂ ಅದನ್ನು ದೇಶದ ಶಿಕ್ಷಣ ವ್ಯವಸ್ಥೆಯ ಒಂದು ಶಾಶ್ವತ ಅಂಗವನ್ನಾಗಿ ಮಾಡಲು ಪ್ರಯತ್ನಿಸುತ್ತಿದೆ.

**ಕೈಗಾರಿಕೆಗಳು ಪ್ರಶಿಕ್ಷಿತರನ್ನು ಸೇರಿಸಿಕೊಳ್ಳಬೇಕು**

"ಇದೇನೋ ಸರ್ಕಾರದ ಧ್ಯೇಯ. ಆದರೆ ಈ ಯೋಜನೆಯ ಯಶಸ್ಸು ಪ್ರಶಿಕ್ಷಿತರಿಗೆ ಉದ್ಯೋಗ ದೊರಕುವ ಸಾಧ್ಯತೆಗಳನ್ನು ಅವಲಂಬಿಸುತ್ತದೆ. ಪ್ರಶಿಕ್ಷಣದ ನಂತರ ಪ್ರಶಿಕ್ಷಿತರಿಗೆ ನೌಕರಿ ಸಿಗದೆಹೋದರೆ, ತಾಂತ್ರಿಕ ಪ್ರಶಿಕ್ಷಣ ಯೋಜನೆಯು ಸೋತಂತೆಯೇ. ಈ ಸಮಸ್ಯೆಗೆ ಇರುವ ಉತ್ತರವು ಪ್ರಶಿಕ್ಷಣ ಕೇಂದ್ರದಿಂದ ಹೊರಬರುವ ಪ್ರಶಿಕ್ಷಿತರ ಬಗೆಗೆ ಕೈಗಾರಿಕೆಯ ಧೋರಣೆಯನ್ನು ಪೂರ್ಣವಾಗಿ ಅವಲಂಬಿಸುತ್ತದೆ. ಈ ಯೋಜನೆಯ ಅದೃಷ್ಟವೆಲ್ಲಾ ಕೈಗಾರಿಕೆಯ ಕೈಯಲ್ಲಿದೆ. ಕೈಗಾರಿಕೆಯು ಅವರಿಗೆ ನೌಕರಿ ಕೊಡಲು ನಿರಾಕರಿಸಿದರೆ, ತಾಂತ್ರಿಕ ಪ್ರಶಿಕ್ಷಣದ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದರ್ಥ; ಆಗ ಪ್ರಶಿಕ್ಷಣ ಕೇಂದ್ರಗಳನ್ನು ಮುಚ್ಚಲೇಬೇಕಾಗುತ್ತದೆ. ಈ ದುರದೃಷ್ಟಕರ ಪರಿಣಾಮವನ್ನು ತಡೆಗಟ್ಟಬೇಕೆಂದರೆ ನಾಗರಿಕ ಕೈಗಾರಿಕೆಗಳು ಪ್ರಶಿಕ್ಷಿತರನ್ನು ನೇಮಿಸಿಕೊಳ್ಳುವ ಆಸಕ್ತಿಯನ್ನು ತೋರಿಸಬೇಕಾಗುತ್ತದೆ.

"೬,೦೦೦ಕ್ಕೂ ಹೆಚ್ಚಿನ ಪ್ರಶಿಕ್ಷಿತರಲ್ಲಿ ೩,೦೦೦ ಜನರು ಮಾತ್ರ ನಾಗರಿಕ ಕೈಗಾರಿಕೆಯಲ್ಲಿ ಸೇರಿದ್ದಾರೆ. ಉದ್ಯಮಿಗಳು ವಾಸ್ತವವಾಗಿ ಪ್ರಶಿಕ್ಷಿತರಲ್ಲದವರನ್ನು ನೇಮಕ ಮಾಡಿಕೊಂಡು, ಕೆಲಸದ ಮೂಲಕವೇ ಕುಶಲತೆಯನ್ನೂ ಪ್ರಶಿಕ್ಷಣವನ್ನೂ ಪಡೆಯಲಿ ಎಂದು ಆಶಿಸುತ್ತಾರೆ. ನಮ್ಮ ಪ್ರಶಿಕ್ಷಣ ಕೇಂದ್ರದಿಂದ ಪ್ರಶಿಕ್ಷಣ ಪಡೆದವರಿಗೆ ನೌಕರಿ ಕೊಡಲು ಉದ್ಯಮಿಗಳಿಗೆ ಮನಸ್ಸಿಲ್ಲದಿರುವುದಕ್ಕೆ ವಿವಿಧ ಕಾರಣಗಳಿರಬಹುದು. ನಾವು ಕೊಡುವ ಪ್ರಶಿಕ್ಷಣ ಅಪೂರ್ಣವೆಂಬ ದೂರು ನನಗೆ ಬಂದಿದೆ. ಸಾರ್ವಜನಿಕ ಕೈಗಾರಿಕೆಯು ತಮ್ಮ ತಾಂತ್ರಿಕ ಸಿಬ್ಬಂದಿಗೆ ನಮ್ಮ ಯೋಜನೆಯು ಕೊಡುವುದಕ್ಕಿಂತ ಹೆಚ್ಚಿನ ಮಟ್ಟದ ಕುಶಲತೆ ಬೇಕೆನ್ನುತ್ತದೆ. ಯುದ್ಧಕ್ಕೆ ಮೊದಲು ತಾಂತ್ರಿಕ ಶಿಕ್ಷಣವನ್ನು ೫ ವರ್ಷಗಳ ವರೆಗೆ ಕೊಡಲಾಗುತ್ತಿತ್ತು. ಯುದ್ಧದ ಒತ್ತಡದಿಂದಾಗಿ ನಾವು ಅದನ್ನು ಕೇವಲ ಎಂಟೇ ತಿಂಗಳುಗಳಲ್ಲಿ ಕೊಡಲು ಪ್ರಯತ್ನಿಸಿದೆವು.

"ನಾಗರಿಕ ಕೈಗಾರಿಕೆಯ ಅಗತ್ಯಗಳನ್ನು ಪೂರೈಸಲು ತಾಂತ್ರಿಕ ಪ್ರಶಿಕ್ಷಣವು ಪೂರ್ಣ ಐದು ವರ್ಷಗಳವರೆಗೆ ನಡೆಯಲೇಬೇಕಾಗಿಲ್ಲ ಎಂಬುದು ನನಗೆ ಖಚಿತವಾಗಿದೆ. ಗಾಢವಾದ ಪ್ರಶಿಕ್ಷಣದ ಮೂಲಕ ಅರೆ-ಕುಶಲ ಕಾರ್ಮಿಕರಿಗೆ ಶೀಘ್ರವಾಗಿ ತರಬೇತಿ ಕೊಟ್ಟು ಕೈಗಾರಿಕೆಗಳಿಗೆ ಕಳಿಸಬಹುದು ಎಂಬ ವಿಷಯವು ಬೇರೆ

ದೇಶಗಳ ಯುದ್ಧ ಸಮಯದಲ್ಲಿನ ತಾಂತ್ರಿಕ ಪ್ರಶಿಕ್ಷಣ ಯೋಜನೆಗಳ ಅನುಭವದಿಂದ ವ್ಯಕ್ತವಾಗುತ್ತದೆ.

### ಕೈಗಾರಿಕೆಯ ಹೊಣೆಗಾರಿಕೆ

"ಆದ್ದರಿಂದ, ತಾಂತ್ರಿಕ ಪ್ರಶಿಕ್ಷಣ ಯೋಜನೆಯಡಿಯಲ್ಲಿ ಪಡೆದ ಪ್ರಶಿಕ್ಷಣದ ಜೊತೆಗೆ 'ಪೂರ್ವಾಗ್ರಹ ಪೀಡಿತ' ಪ್ರಶಿಕ್ಷಣವನ್ನು ಪಡೆದರೆ, ಅದು ನಾಗರಿಕ ಕೈಗಾರಿಕೆಗೆ ಸಮ್ಮತವಾಗಬಹುದು. ಆದರೆ, ನಮ್ಮ ಪ್ರಶಿಕ್ಷಣ ಯೋಜನೆಯಲ್ಲಿ ಕೆಲವು ದೋಷಗಳೂ ಇವೆ ಎಂಬುದನ್ನು ನಾನು ಒಪ್ಪುತ್ತೇನೆ. ಅಲ್ಲದೆ, ನಮ್ಮ ಪ್ರಶಿಕ್ಷಿತರನ್ನು ಕೈಗಾರಿಕೆಗಳಿಗೆ ಕಳಿಸುವಂತೆ ಮಾಡುವ ಯಾವುದೇ ತರ್ಕಸಮ್ಮತ ಬದಲಾವಣೆಗಳು ಬಂದರೂ ನಾನು ಅವನ್ನು ಸ್ವಾಗತಿಸಲು ಸಿದ್ಧನಿದ್ದೇನೆ. ಆದರೆ ಎಲ್ಲಿಯವರೆಗೆ ಕೈಗಾರಿಕೆಯು ಪ್ರಶಿಕ್ಷಿತರನ್ನು ನೇಮಿಸಿಕೊಳ್ಳಲು ಒಪ್ಪುವುದಿಲ್ಲವೋ ಅಲ್ಲಿಯವರೆಗೂ ಈ ದೇಶದಲ್ಲಿ ತಾಂತ್ರಿಕ ಪ್ರಶಿಕ್ಷಣ ಯೋಜನೆಗಳಿಗೆ ಯಶಸ್ಸಿರುವುದಿಲ್ಲ. ಆದ್ದರಿಂದ, ಕೈಗಾರಿಕೆಯು ತನ್ನ ಮೇಲೆ ಒಂದು ಭಾರಿ ಜವಾಬ್ದಾರಿ ಬಿದ್ದಿದೆ ಎಂಬುದನ್ನು ಗಮನಿಸಬೇಕು.

"ಮಾನ್ಯರೇ, ಕೈಗಾರಿಕೆಯ ಅಗತ್ಯಗಳ ಬಗ್ಗೆ ನನಗಿಂತ ನಿಮಗೇ ಹೆಚ್ಚು ಗೊತ್ತು. ನಾನು ಹೇಳುವುದಿಷ್ಟೆ: ಈ ಯೋಜನೆಯು ಯಶಸ್ವಿಯಾಗಬೇಕಾದರೆ, ಅದರ ಭವಿಷ್ಯವನ್ನು ನಿರ್ಧರಿಸಲು ಉದ್ಯಮಿಗಳ ಮತ್ತು ಕಾರ್ಮಿಕರ ಸಹಕಾರ ಬೇಕಾಗುತ್ತದೆ. ಈಗ ನಾವು ಕಾಲ ವ್ಯರ್ಥ ಮಾಡಬಾರದು; ಅಲ್ಲದಿದ್ದರೆ, ನಾವು ಯುದ್ಧದಲ್ಲಿ ಗೆದ್ದರೂ, ಶಾಂತಿಗಾಗಿ ಏನನ್ನೂ ಮಾಡಿದಂತಾಗುವುದಿಲ್ಲ.

ನಾನೀಗಾಗಲೇ ಹೇಳಿರುವಂತೆ, ನಾವು ಎರಡು ಪ್ರಶ್ನೆಗಳನ್ನು ಪರಿಶೀಲಿಸಬೇಕಾಗಿದೆ :

೧. ಯುದ್ಧ ಮುಗಿದನಂತರ ಸೇನೆಯಿಂದ ನಿವೃತ್ತರಾಗಿರುವ ಪ್ರಶಿಕ್ಷಿತರಿಗೂ, ಪೂರ್ವನಿರ್ಧಾರದಂತೆ ಪ್ರಶಿಕ್ಷಣವನ್ನು ಸದ್ಯದಲ್ಲೇ ಮುಗಿಸುವವರಿಗೂ ನೌಕರಿ ಹುಡುಕುವುದು.

೨. ಯುದ್ಧೋತ್ತರ ಕೈಗಾರಿಕಾ ಪುನರ್ನಿರ್ಮಾಣ ಯೋಜನೆಯ ಅಂಗವಾಗಿ ತಾಂತ್ರಿಕ ಪ್ರಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಯನ್ನು ಪರಿಷ್ಕರಿಸುವುದು.

ಈ ಪ್ರಶ್ನೆಗಳು ಬೇರೆ ಬೇರೆ ಇದ್ದು, ನಾವು ಅವುಗಳನ್ನು ಪ್ರತ್ಯೇಕವಾಗಿಯೇ ಎದುರಿಸಲು ಯೋಜಿಸಿದ್ದೇವೆ. ಆದ್ದರಿಂದಲೇ, ನಮ್ಮ ಮುನ್ನಡೆಗೆ ಎರಡು ಹಂತಗಳಿದ್ದರೆ ಒಳ್ಳೆಯದೆಂದು ನಾವು ಭಾವಿಸಿರುವುದು. ಎರಡನೆಯ ಹಂತಕ್ಕೆ ಸಂಬಂಧಿಸಿದ ಪ್ರಶ್ನೆ ಹೀಗಿದೆ: ನಾಗರಿಕ ಕೈಗಾರಿಕೆಗಳ ಇಂದಿನ ಬೇಡಿಕೆಗಳಿಗನುಗುಣವಾಗಿ ನಾವು ತಾಂತ್ರಿಕ ಪ್ರಶಿಕ್ಷಣ ಯೋಜನೆಯಲ್ಲಿ ಯಾವ ಯಾವ ಬದಲಾವಣೆಗಳನ್ನು ಮಾಡಬೇಕು? ಈ ಪ್ರಶ್ನೆಯ ಪರಿಶೀಲನೆಯಲ್ಲಿ ಒಂದು ದೀರ್ಘಾವಧಿ ನೀತಿಯನ್ನು – ಅಂದರೆ, ನಮ್ಮ ದೇಶದ ಯುದ್ಧೋತ್ತರ ಕೈಗಾರಿಕೆಯ ಅಭಿವೃದ್ಧಿಗೆ ಪ್ರಶಿಕ್ಷಿತ ತಾಂತ್ರಿಕ ಸಿಬ್ಬಂದಿ ವರ್ಗವನ್ನು ಒದಗಿಸುವ ನೀತಿಯನ್ನು – ಒಳಗೊಂಡಿದೆ.

### ಪರಿಣತ ಕಾರ್ಮಿಕರಿಗೆ ಉದ್ಯೋಗ ಕೊಡುವುದು

"ಮೊದಲನೆಯ ಘಟ್ಟಕ್ಕೆ ಸಂಬಂಧಿಸಿದಂತೆ, ನಾವು ಪರಶೀಲಿಸಬೇಕಾದ ಸಮಸ್ಯೆ ಹೀಗಿದೆ: ನಮ್ಮ ಪ್ರಶಿಕ್ಷಣ ಕೇಂದ್ರಗಳಲ್ಲಿ ತರಬೇತಿ ಪಡೆದು ಈಗ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಜನ ಪರಿಣತ ಕರ್ಮಿಗಳನ್ನು ಯುದ್ಧ ಮುಗಿದನಂತರ ನಿವೃತ್ತಿಗೊಳಿಸಿದಾಗ, ಅವರಿಗೆ ಪುನರ್ವಸತಿ ಕಲ್ಪಿಸುವ ಮಾರ್ಗೋಪಾಯಗಳಾವುವು? ಇವರನ್ನು ನೇಮಿಸಿಕೊಳ್ಳಲು ಕೈಗಾರಿಕೆಗಳಿಗೆ ಏನೂ ಕಷ್ಟವಾಗುವುದಿಲ್ಲ ಎಂಬುದು ನಮ್ಮ ನಿರೀಕ್ಷೆ. ಏಕೆಂದರೆ, ಯುದ್ಧಾನಂತರ ನಾಗರಿಕ ಕೈಗಾರಿಕೆಗಳ ವಿಸ್ತರಣೆಯಾಗುವುದು ಮತ್ತು ಅದರಿಂದಾಗಿ, ತಾಂತ್ರಿಕ ತರಬೇತಿ ಪಡೆದ ಕೆಲಸಗಾರರಿಗಾಗಿ ಬೇಡಿಕೆ ಹೆಚ್ಚಾಗುವುದು ಎಂಬುದು

ನಮ್ಮ ಭರವಸೆ.

"ಈಗ ನಮ್ಮ ಮುಂದಿರುವ ಸಮಸ್ಯೆಯೆಂದರೆ, ಯುದ್ಧಾನಂತರದ ಕೈಗಾರಿಕಾ ರಚನೆಯಲ್ಲಿ ಅವರನ್ನು ಎಲ್ಲಿ ಸೇರಿಸಬೇಕು ಎಂಬುದು. ಇದಕ್ಕೆ ಸಂಬಂಧಿಸಿದ ತೊಂದರೆಗಳನ್ನು ನಾವು ಪರಿಶೀಲಿಸಿ, ಅದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮುಂದಾಲೋಚಿಸುತ್ತೇವೆ. ಇದರಲ್ಲಿ ಯಶಸ್ವಿಯಾಗಬೇಕಾದರೆ, ನಮ್ಮಿಂದ ತರಬೇತಿ ಪಡೆದವರು ಈಗಿರುವ ಕೈಗಾರಿಕೆಗಳಿಗೆ ಅಪೇಕ್ಷಣೀಯವೆಂದೆನಿಸಲು, ಯಾವ ಹೆಚ್ಚಿನ ತರಬೇತಿ ಕೊಡಬೇಕು, ಯಾವ ಪಾಠಗಳನ್ನು ಸೇರಿಸಿ ಅಥವಾ ಬದಲಾಯಿಸಿ ಅವರ ಪಠ್ಯಕ್ರಮಗಳನ್ನು ಬದಲಾಯಿಸಬೇಕು, ಯಾವ ಪೂರಕ ವಿಷಯಗಳನ್ನು ಸೇರಿಸಬೇಕು ಎಂಬುದನ್ನು ನಾವು ಪರಿಶೀಲಿಸಬೇಕಾಗುತ್ತದೆ. ನಿಮ್ಮ ಪರಿಶೀಲನೆಯ ಪರಿಣಾಮಗಳು ಮುಂದಿನ ಘಟ್ಟದಲ್ಲಿ ನಾವು ಯಾವ ಪ್ರಗತಿಯನ್ನು ಸಾಧಿಸಬಹುದೆಂಬುದನ್ನು ನಿರ್ಧರಿಸುತ್ತವೆ. ಇವೆರಡು ಘಟ್ಟಗಳೂ ಪರಸ್ಪರ ಬಹಳ ನಿಕಟವಾಗಿ ಸಂಬಂಧಿಸಿವೆ, ಮತ್ತು ಎರಡನೆಯದು ಮೊದಲನೆಯದಕ್ಕಿಂತ ಕಡಿಮೆ ಮುಖ್ಯವೇನಲ್ಲ.

"ಇನ್ನೊಂದು ಮಾತು ಹೇಳಿ, ನಾನು ಮುಗಿಸುತ್ತೇನೆ. ಸೇನೆಗೆ ಸೇರಿ ಸ್ವಲ್ಪದರಲ್ಲೇ ನಾಗರಿಕ ಜೀವನ ನಡೆಸಲಿರುವ ಪ್ರಶಿಕ್ಷಿತ ನಿರುದ್ಯೋಗಿಗಳ ಗತಿಯೇನು? ಅವರು ಸಲ್ಲಿಸಿದ ಸೇವೆಗೆ ಹಾಗೂ ಎದುರಿಸಿದ ಗಂಡಾಂತರಗಳಿಗೆ ಇದೆ 'ಪ್ರತಿಫಲವೇ'? ಖಂಡಿತ ನಾವು ಅವರನ್ನು ಕೈಬಿಡಬಾರದು. ನಾವು ಅವರನ್ನು ಅಲಕ್ಷಿಸಿದರೆ, ಕೈಗಾರಿಕೆಗಳಲ್ಲಿ ಅವರದೇ ಆದ ಒಂದು ಅತೃಪ್ತಿಯ ಕೇಂದ್ರ ಏರ್ಪಡುತ್ತದೆ. ಯುದ್ಧಾನಂತರ ಒಂದು ವೇಳೆ ನಾಗರಿಕ ಜೀವನದಲ್ಲಿ ಅವರಿಗೂ ಸೂಕ್ತ ಸ್ಥಾನ ಸಿಕ್ಕಿದರೆ, ಅವರು ಕೈಗಾರಿಕೆಗೆ ಭದ್ರತೆಯನ್ನು ಕೊಡುವುದರಲ್ಲಿ ಸಹಾಯಕರಾಗುತ್ತಾರೆ. ಸೇನೆಯಲ್ಲಿ ದೊರೆತ ಶಿಸ್ತನ್ನು ಅವರು ನಾಗರಿಕ ಕೈಗಾರಿಕೆಗೂ ಕೊಡುತ್ತಾರೆ. ಅವರನ್ನು ನಾಗರಿಕ ನೌಕರಿಯಲ್ಲಿ ತೊಡಗಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನಿಮಗೇ ಬಿಟ್ಟಿದೆ. ನಿಮ್ಮ ಯಾವುದೇ ಸಲಹೆಗೆ ಸರ್ಕಾರ ನಿಮಗೆ ಋಣಿಯಾಗಿರುವುದಲ್ಲದೆ, ವಿಚಾರಯೋಗ್ಯ ಮತ್ತು ಸಾಧ್ಯವೆಂದು ಕಂಡು ಬಂದ ಕ್ರಮಗಳನ್ನು ಅನುಷ್ಠಾನಕ್ಕೂ ತರುತ್ತದೆ ಎಂಬ ಭರವಸೆಯನ್ನು ನಾನು ನೀಡುತ್ತೇನೆ."

### ಸಮಿತಿಯ ಚರ್ಚೆಗಳು

ಅನಂತರ ಸಮಿತಿಯು ತಾಂತ್ರಿಕ ತರಬೇತಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಚರ್ಚಿಸಿತಲ್ಲದೆ, ತಾಂತ್ರಿಕ ಪ್ರಶಿಕ್ಷಿತರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದರ ಪ್ರಾಮುಖ್ಯತೆಗೆ ಒತ್ತುಕೊಟ್ಟಿತು. ಶ್ರೀ ಎಸ್. ಲಾಲ್, ಸಹಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಅಧ್ಯಕ್ಷತೆ ವಹಿಸಿದ್ದರು.

### ಉದ್ಯೋಗ ವಿನಿಮಯ ಕೇಂದ್ರಕ್ಕೆ ಭೇಟಿ*

ಕಲ್ಕತ್ತೆಗೆ ಆಗಸ್ಟ್ ೨೩ರಂದು ಆಗಮಿಸಿದ ಡಾ॥ ಬಿ.ಆರ್. ಅಂಬೇಡ್ಕರರು ಕಲ್ಕತ್ತಾ ಉದ್ಯೋಗ ವಿನಿಮಯ ಕೇಂದ್ರವನ್ನು ವೀಕ್ಷಿಸಿದರು. ಅವರ ಜೊತೆಯಲ್ಲಿ, ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಸಹಕಾರ್ಯದರ್ಶಿಯಾಗಿರುವ ಹಾಗೂ ಹಿಂದೆ ಲಂಡನ್ನಿನಲ್ಲಿ ಭಾರತ ಡೆಪ್ಯೂಟಿ ಹೈಕಮಿಷನರ್ ಆಗಿದ್ದ ಶ್ರೀ ಎಸ್. ಲಾಲ್ ಇದ್ದರು.

---

* ಇಂಡಿಯನ್ ಇನ್‌ಫರ್ಮೇಷನ್, ಸೆಪ್ಟೆಂಬರ್ ೧೫, ೧೯೪೪, ಪು–೨೭೮.

ಕಾರ್ಮಿಕ ಖಾತೆಯ ಸದಸ್ಯರು ಬಂಗಾಳ ಸರ್ಕಾರದ ಲೇಬರ್ ಕಮಿಷನರ್ ಶ್ರೀ ಹ್ಯೂಸ್ ಅವರೊಡನೆ ಕಲ್ಕತ್ತದಲ್ಲಿ ಉದ್ಯೋಗ ವಿನಿಮಯ ಯೋಜನೆಯ ಕಾರ್ಯ ವಿಧಾನಕ್ಕೂ ರಾಷ್ಟ್ರೀಯ ಸೇವಾ (ತಾಂತ್ರಿಕ ಸಿಬ್ಬಂದಿ) ಶಾಸನದ ಕಾರ್ಯ ವಿಧಾನಕ್ಕೂ ಸಂಬಂಧಿಸಿದ ಅನೇಕ ವಿಷಯಗಳನ್ನು ಕುರಿತು ಚರ್ಚಿಸಿದರು. ಅಲ್ಲದೆ, ಬಂಗಾಳದಲ್ಲಿನ ತಾಂತ್ರಿಕ ಪ್ರಶಿಕ್ಷಣ ಕೇಂದ್ರಗಳನ್ನು ಮುಚ್ಚುವ ಬಗೆಗೆ ಇರುವ ಭಾರತದ ಧೋರಣೆಯನ್ನು ಕುರಿತು ಚರ್ಚಿಸಲಾಯಿತು.

ಡಾ॥ ಅಂಬೇಡ್ಕರರು, ಬಹಳ ಸಂಖ್ಯೆಯಲ್ಲಿ ಕಾರ್ಮಿಕರು ತಮ್ಮ ಹೆಸರನ್ನು ನೋಂದಾಯಿಸಲು ವಿನಿಮಯ ಕೇಂದ್ರಕ್ಕೆ ಬಂದಿದ್ದುದನ್ನು ವೀಕ್ಷಿಸಿದರು. ಶ್ರೀ ಹ್ಯೂಸ್ ಮತ್ತು ಶ್ರೀ ಬೆನೆಟ್ (ವಿನಿಮಯ ಕೇಂದ್ರದ ನಿರ್ವಾಹಕರು) ನೋಂದಾಯಿಸುವ ಕ್ರಮವನ್ನೂ ಕಾರ್ಡು ಸೂಚೀಪದ್ಧತಿಯನ್ನೂ (ಕಾರ್ಡ್ ಇಂಡೆಕ್ಸ್ ಸಿಸ್ಟಮ್) ವಿವರಿಸಿ ತಿಳಿಸಿದರು.

## ಉದ್ಯೋಗ ನೇಮಕಾತಿಯಲ್ಲಿ ಹೆಚ್ಚಳ

ನೋಂದಾಯಿಸುವವರ ಮತ್ತು ವಿನಿಮಯ ಕೇಂದ್ರದ ಮೂಲಕ ಪಡೆದ ಉದ್ಯೋಗಗಳ ಸಂಖ್ಯೆ ಸತತವಾಗಿ ಏರುತ್ತಿರುವುದನ್ನು ಕಾರ್ಮಿಕ ಸದಸ್ಯರು ಗಮನಿಸಿದರು. ಇತ್ತೀಚಿನ ಅಂಕಿಅಂಶಗಳ ಪ್ರಕಾರ, ತಾಂತ್ರಿಕ ಪ್ರಶಿಕ್ಷಣ ಯೋಜನೆಯಡಿಯಲ್ಲಿ ತರಬೇತಿ ಪಡೆದ ೧,೦೨೯ ಜನರು ತಮ್ಮ ಹೆಸರನ್ನು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ್ದು, ಅವರಲ್ಲಿ ೩೮೮ ಜನರಿಗೆ ನೌಕರಿ ಸಿಕ್ಕಿತು, ಎಂದು ಡಾ॥ ಅಂಬೇಡ್ಕರರಿಗೆ ತಿಳಿಸಲಾಯಿತು. ಉದ್ಯೋಗ ವಿನಿಮಯ ಕೇಂದ್ರದಲ್ಲಿ ೧೯೪೪ರ ಜನವರಿಯಿಂದ ಜುಲೈ ೨೧ರ ವರೆಗೆ ಒಟ್ಟು ೨,೨೬೪ ತಾಂತ್ರಿಕ ಸಿಬ್ಬಂದಿ ವರ್ಗದವರು ತಮ್ಮ ಹೆಸರುಗಳನ್ನು ನೋಂದಾಯಿಸಿದ್ದು, ಅದೇ ಅವಧಿಯಲ್ಲಿ ಅವರಲ್ಲಿ ೫೩೭ ಜನರಿಗೆ ಉದ್ಯೋಗ ಕೊಡಲಾಗಿತ್ತು.

ಡಾ॥ ಅಂಬೇಡ್ಕರರಿಗೆ ಬಂಗಾಳದಲ್ಲಿ ಆಗುತ್ತಿದ್ದ ತಾಂತ್ರಿಕ ಪ್ರಶಿಕ್ಷಣ ಯೋಜನೆಯ ಪ್ರಗತಿಯ ಬಗೆಗೆ ಹೊಸ ಮಾಹಿತಿ ಕೊಡುವ ಒಂದು ಪಟ್ಟಿಯನ್ನು ತೋರಿಸಲಾಯಿತು. ಬಂಗಾಳದಲ್ಲಿ ೨೪ ಸೇನಾ ಕೇಂದ್ರಗಳಿದ್ದು, ಅವುಗಳಲ್ಲಿ ೪,೧೬೪ ಜನರಿಗೆ ತರಬೇತಿ ಕೊಡುವ ಸಾಮರ್ಥ್ಯವಿದೆಯೆಂದೂ, ಅಲ್ಲದೆ ೧೫ ನಾಗರಿಕ ಕೇಂದ್ರಗಳಿದ್ದು, ಅಲ್ಲೆ ೨,೨೭೦ ಜನರಿಗೆ ತರಬೇತಿ ಕೊಡುವ ಸಾಮರ್ಥ್ಯವಿದೆಯೆಂದೂ ಅವರಿಗೆ ತಿಳಿಸಲಾಯಿತು. ಇವುಗಳಲ್ಲಿ ೧೭ ಕೇಂದ್ರಗಳು ತಾಂತ್ರಿಕ ಸಂಸ್ಥೆಗಳಾಗಿದ್ದು, ಎರಡು ಮಾತ್ರ ಕೈಗಾರಿಕೆಗಳ ಸ್ವಾಮ್ಯದಲ್ಲಿದ್ದವು. ೧೯೪೪ರ ಜುಲೈ ೨೧ರ ವರೆಗೆ, ೨,೫೪೦ ತರಬೇತಿ ಪಡೆದು ತೇರ್ಗಡೆ ಹೊಂದಿದ ಜನರನ್ನು ನಾಗರಿಕ ಕೈಗಾರಿಕೆಗಳಲ್ಲಿ ನೇಮಕ ಮಾಡಲಾಗಿತ್ತು. ಕಾರ್ಮಿಕ ಸದಸ್ಯರು ಭಾರತ ಸರ್ಕಾರದ ಮುದ್ರಣಾಲಯಕ್ಕೂ ಕೇಂದ್ರೀಯ ಲೇಖನ ಸಾಮಗ್ರಿ ಕಚೇರಿಗೂ ಭೇಟಿಕೊಟ್ಟರು.

ಸುಮಾರು ಸಂಜೆಯ ಹೊತ್ತಿಗೆ, ಅವರು ಬಂಗಾಳ ಸರ್ಕಾರ ರಚಿಸಿದ್ದ ಕಾರ್ಮಿಕ ಸಂಘಗಳ ಸಲಹೆಗಾರರ ಸಮಿತಿಯ ಸದಸ್ಯರನ್ನುದ್ದೇಶಿಸಿ ಮಾತನಾಡಿದರು ಮತ್ತು ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಪೀಠವು ಹೊರಡಿಸಿದ್ದ ಆಜ್ಞೆಗಳ ಕಾರ್ಯ ವಿಧಾನವನ್ನು ಕುರಿತು ಚರ್ಚಿಸಿದರು.

# ೩೬

# ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಸರ್ವಸದಸ್ಯರ ಸಭೆ *

## ಡಾ॥ ಅಂಬೇಡ್ಕರರ ಭಾಷಣ

ಅಕ್ಟೋಬರ್ ೨೭ರಂದು ನವದೆಹಲಿಯಲ್ಲಿ ಪ್ರಾರಂಭವಾದ ಆರನೆಯ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದ, ಭಾರತ ಸರ್ಕಾರದ ಕಾರ್ಮಿಕ ಸದಸ್ಯ ಡಾ॥ ಬಿ.ಆರ್. ಅಂಬೇಡ್ಕರರು ಸಮ್ಮೇಳನದ ಸಂವಿಧಾನದಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿದರಲ್ಲದೆ, ಸಮ್ಮೇಳನದ ಎರಡು ವರ್ಷಗಳ ಅಸ್ತಿತ್ವದಲ್ಲಿ ಕಂಡು ಬಂದ ವ್ಯವಸ್ಥೆಗೆ ಸಂಬಂಧಿಸಿದ ಕೆಲವು ದೋಷಗಳನ್ನು ಈ ಮೂಲಕ ಪರಿಹರಿಸಬಹುದೆಂದರು.

ಅವರು ಸಮ್ಮೇಳನದ ಪರಿಧಿಯಲ್ಲಿ ಬರುವ ವಿಷಯಗಳನ್ನು ಎರಡು ಪಟ್ಟಿಗಳಾಗಿ ಮಾಡಬೇಕೆಂದು ಸೂಚಿಸಿದರು : ಮೊದಲನೆಯ ಪಟ್ಟಿಯಲ್ಲಿ ನೌಕರಿಯ ಷರತ್ತುಗಳು, ಕಾರ್ಮಿಕ ಶಾಸನ, ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಸಮಸ್ಯೆಗಳಂಥ ಸಾಮಾನ್ಯ ವಿಷಯಗಳಿರಬೇಕು. ಎರಡನೆಯ ಪಟ್ಟಿಯಲ್ಲಿ ಕಾರ್ಮಿಕರ ಕಲ್ಯಾಣ ಮತ್ತು ಕಾರ್ಮಿಕ ಶಾಸನಗಳ ಆಡಳಿತಕ್ಕೆ ಸಂಬಂಧಿಸಿದಂಥ ವಿಶಿಷ್ಟ ವಿಷಯಗಳಿರಬೇಕು ಎಂದು ಅವರು ಸೂಚಿಸಿದರು.

ಡಾ॥ ಅಂಬೇಡ್ಕರರ ಭಾಷಣದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ :

"ಅಧ್ಯಕ್ಷನ ಪ್ರಾರಂಭಿಕ ಭಾಷಣವು ಕೇವಲ ಸ್ವಾಗತ ಭಾಷಣವಾದರೆ, ಸಮ್ಮೇಳನದಲ್ಲಿ ನೆರೆದಿರುವ ನಿಯೋಗದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುವ ಭಾಷಣವಾದರೆ, ಅಧ್ಯಕ್ಷನ ಕೆಲಸ ನಿಜವಾಗಿಯೂ ಬಹಳ ಸುಲಭವಾದ ಹಾಗೂ ಬಹಳ ಸಂತಸದಾಯಕ ಕೆಲಸವೇ ಸರಿ. ಆದರೆ ಅಧ್ಯಕ್ಷರು ಇದಕ್ಕಿಂತ ಹೆಚ್ಚಿನದನ್ನು ಹೇಳಬೇಕು ಎಂಬ ರೂಢಿ ಇದೆ. ನಮ್ಮ ಕಾರ್ಮಿಕ ಸಮ್ಮೇಳನದಂಥ ಸಮ್ಮೇಳನದ ಅಧ್ಯಕ್ಷನಿಗೆ ಭಾಷಣದ ವಿಷಯವನ್ನು ಆರಿಸಿಕೊಳ್ಳುವುದು ಸುಲಭದ ಕೆಲಸವೇನಲ್ಲ. ಇದು ದಾರ್ಶನಿಕರ ಸಮ್ಮೇಳನವಲ್ಲ. ಆದ್ದರಿಂದ ಅವನು ಪಾಂಡಿತ್ಯ ಪ್ರದರ್ಶನ ಮಾಡಬೇಕಿಲ್ಲ ಮತ್ತು ಸಾಮಾಜಿಕ ಪ್ರಯೋಜನವಿಲ್ಲದ, ಬೌದ್ಧಿಕ ದೊಂಬರಾಟದಲ್ಲಿ ಮುಳುಗಿ, ಯಾವುದಕ್ಕೂ ವಚನಬದ್ಧನಾಗದೆ ಜಾರಿಕೊಳ್ಳುವಂತಿಲ್ಲ. ಇದು ಸಮಾಜವನ್ನು ಪುನಾರೂಪಿಸುವ ಸಮ್ಮೇಳನವೂ ಅಲ್ಲ. ಆದ್ದರಿಂದ ಅಧ್ಯಕ್ಷನಾದವನು ತನ್ನ ಪ್ರಾರಂಭಿಕ ಭಾಷಣದಲ್ಲಿ ಬಂಡವಾಳಶಾಹಿ, ಸಮಾಜವಾದ, ಸಮತಾವಾದ ಮುಂತಾದ ಸಿದ್ಧಾಂತಗಳ ಬಗೆಗೆ ಉದ್ದುದ್ದ ಭಾಷಣ ಮಾಡಬೇಕಿಲ್ಲ.

"ಈ ಸಮ್ಮೇಳನವು ನೀತಿಶಾಸ್ತ್ರ ಸಂಘದ ಸಭೆಯೂ ಅಲ್ಲ, ಆದ್ದರಿಂದ ಸಂವೇಗಗಳನ್ನು ಬಡಿದೆಬ್ಬಿಸುವಂಥ ನೈತಿಕತೆಯನ್ನು ನನ್ನ ಭಾಷಣದಲ್ಲಿ ತುಂಬಬೇಕಾಗಿಲ್ಲ. ಕಾರ್ಮಿಕ ಸಮ್ಮೇಳನದಲ್ಲಿ ಅಧ್ಯಕ್ಷನಾದವನು ಯಾವ ರೀತಿ ಮಾತಾಡಿದರೆ ಉತ್ತಮ ಎಂಬುದು ನನಗೆ ಗೊತ್ತಿಲ್ಲ. ಈ ಅವಕಾಶವನ್ನು ಉಪಯೋಗಿಸಿಕೊಂಡು, ನಾನು ವ್ಯಾವಹಾರಿಕವಾಗಿ ಪ್ರಾಮುಖ್ಯವನ್ನು ಪಡೆದ ವಿಷಯಗಳನ್ನು ಕುರಿತು ಮಾತಾಡಬಯಸುತ್ತೇನೆ. ನೀವು ಅದನ್ನು ಅಪ್ರಸ್ತುತವೆಂದು ಪರಿಗಣಿಸಲಾರಿರಿ ಎಂದು ನಾನು ಭಾವಿಸುತ್ತೇನೆ.

"ಈ ಸಮ್ಮೇಳನದ ಸದಸ್ಯರಿಗೆ ಪ್ರಿಯವಾಗುವಂತಹ ಎರಡು ವಿಶಿಷ್ಟ ವಿಷಯಗಳನ್ನು ನನ್ನ ಭಾಷಣದಲ್ಲಿ

---

* ಇಂಡಿಯನ್ ಇನ್‌ಫರ್ಮೇಶನ್, ನವೆಂಬರ್ ೧೫, ೧೯೪೪, ಪು. ೫೯೦–೯೭.

ಸೇರಿಸಿಕೊಂಡಿದ್ದೆ. ಮೊದಲನೆಯದಾಗಿ, ಸಮ್ಮೇಳನವೂ ಸ್ಥಾಯಿ ಕಾರ್ಮಿಕ ಸಮಿತಿಯೂ ಪರಿಶೀಲಿಸಿರುವ ಅನೇಕ ಸಮಸ್ಯೆಗಳ ಬಗೆಗೆ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ ಎಂಬುದರ ಬಗ್ಗೆ ಒಂದು ಸಮೀಕ್ಷೆ ಮಾಡುವುದು; ಎರಡನೆಯದಾಗಿ, ತ್ರಿಪಕ್ಷೀಯ ಸಂಸ್ಥೆಯ ಸಂವಿಧಾನದಲ್ಲೂ ಕಾರ್ಯವಿಧಾನದಲ್ಲೂ ಇರುವ ದೋಷಗಳ ಬಗೆಗೆ ಪ್ರಸ್ತಾಪಿಸುವುದು.

"ಆದರೆ ಮೊದಲನೆಯ ವಿಷಯದ ವ್ಯಾಪ್ತಿ ಈ ಭಾಷಣಕ್ಕೆ ಹೆಚ್ಚಾಯಿತು ಎಂಬುದು ನನಗೆ ಖಚಿತವಾಯಿತು. ಆ ವಿಷಯವು ನಿಮ್ಮ ಬಹಳಷ್ಟು ಸಮಯವನ್ನು ಕಬಳಿಸುತ್ತಿತ್ತು ಮತ್ತು ಕಾರ್ಯಕ್ರಮದ ಪಟ್ಟಿಯನ್ನು ನೋಡಿದರೆ ನೀವು ಅಷ್ಟು ಕಾಲವನ್ನು ಅದಕ್ಕೆ ಮೀಸಲಾಗಿಡಲು ಸಾಧ್ಯವಿರಲಿಲ್ಲ. ಆದ್ದರಿಂದ ಆ ವಿಷಯದ ಮೇಲೆ ಒಂದು ಪ್ರತ್ಯೇಕ ಜ್ಞಾಪನಾಪತ್ರವನ್ನು ಕೊಡಬೇಕೆಂದು ಯೋಚಿಸಿದೆ(ಅದು ಈ ಭಾಷಣದ ಜೊತೆಯಲ್ಲಿ ಅಚ್ಚಾಗಿದೆ). ಆ ಜ್ಞಾಪನಾಪತ್ರ ಈಗ ನಿಮ್ಮ ಕೈ ಸೇರಿದೆ. ಅದನ್ನು ನನ್ನ ಭಾಷಣದ ಒಂದು ಭಾಗವೆಂದು ಪರಿಗಣಿಸಬಹುದು.

**ತ್ರಿಪಕ್ಷೀಯ ಸಂಸ್ಥೆ**

"ಹೀಗಾಗಿ, ನಾನು ಎರಡನೆಯ ವಿಷಯವನ್ನು ಕುರಿತು ಮತಾಡುವುದಷ್ಟೇ ಉಳಿದಿದೆ. ಅದೆಂದರೆ: ಸಂಘಟನೆಯ ಹಾಗೂ ಈ ಸಮ್ಮೇಳನದ ಕಾರ್ಯವಿಧಾನದ ಸಮಸ್ಯೆ. ಸರ್ವಸದಸ್ಯರ ಸಮ್ಮೇಳನ ಮತ್ತು ಸ್ಥಾಯಿ ಕಾರ್ಮಿಕ ಸಮಿತಿಗಳು ಮಾಡುವ ಕೆಲಸದ ಬಗ್ಗೆ ನಮಗಾಗಲೇ ಎರಡು ವರ್ಷಗಳ ಅನುಭವವಿದೆ. ಇದನ್ನು ಒಂದು ದೀರ್ಘ ಅನುಭವ ಎಂದು ಕರೆಯಲಾಗದು. ಅದು ಸಣ್ಣದೇ ಇದ್ದರೂ, ನಾವು ಪ್ರಾರಂಭಿಸಿರುವ ಸಂಘಟನೆಯಲ್ಲಿನ ಕೆಲವು ದೋಷಗಳನ್ನು ಅದು ತೋರಿಸಿದೆ. ಅವುಗಳಲ್ಲಿ ಈ ಕೆಳಗಿನವು ನನಗೆ ಗಂಭೀರ ರೀತಿಯವು ಎನಿಸುತ್ತದೆ.

೧. ಸಮ್ಮೇಳನದ ಕಾರ್ಯಗಳಾವುವು, ಸ್ಥಾಯಿ ಕಾರ್ಮಿಕ ಸಮಿತಿಯ ಕಾರ್ಯಗಳಾವುವು ಎಂಬುದರ ಬಗ್ಗೆ ಸ್ಪಷ್ಟ ವ್ಯತ್ಯಾಸ ಮಾಡಿಲ್ಲ. ಒಂದು ಪರಿಶೀಲನಾತ್ಮಕ (ಸಲಹೆಗಾರ) ಸಂಘಟನೆ ಮತ್ತೊಂದು ಅನುಷ್ಠಾನ ಮಾಡುವ ಸಂಘಟನೆ ಎಂದು ತಿಳಿಯುವಂತಿಲ್ಲ. ಎರಡೂ ಪರಿಶೀಲನಾತ್ಮಕ ಸಂಘಟನೆಗಳೇ.

೨. ಅವು ಮಾಡುವ ಕಾರ್ಯಗಳು ಒಂದರೊಳಗೊಂದು ಸೇರ್ಪಡೆಯಾಗುತ್ತವೆ. ಅಂದರೆ, ಅವೆರಡರ ಕಾರ್ಯಗಳೂ ಕೆಲವು ವೇಳೆ ಒಂದೇ ತೆರನಾಗಿರುತ್ತವೆ.

೩. ಸಾಮಾನ್ಯ ಸಮಸ್ಯೆಗಳಿಗೂ ವಿಶಿಷ್ಟ ಸಮಸ್ಯೆಗಳಿಗೂ ಇರುವ ವ್ಯತ್ಯಾಸವನ್ನು ನಾವು ಮನಗಾಣುತ್ತಿಲ್ಲವಾದ್ದರಿಂದ, ಸಮ್ಮೇಳನದಲ್ಲಿ ನಡೆದ ಚರ್ಚೆಗಳೇ ಸಮಿತಿಯಲ್ಲಿಯೂ ಬರುತ್ತಿದ್ದವು. ಹೀಗಾಗಿ ಸಾಮಾನ್ಯ ಸಮಸ್ಯೆಗಳಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಕೆಲವು ವೇಳೆ ವಿಶಿಷ್ಟ ಸಮಸ್ಯೆಗಳನ್ನೇ ಸಾಮಾನ್ಯ ಸಮಸ್ಯೆಗಳೆಂಬಂತೆ ಚರ್ಚಿಸಲಾಗುತ್ತದೆ.

೪. ಈಗ ಸದ್ಯಕ್ಕೆ ವಿಶೇಷ ಸಮಸ್ಯೆಗಳನ್ನು ಪರಿಶೀಲನೆ ಮಾಡಿ, ಅವುಗಳ ಬಗ್ಗೆ ವರದಿ ಮಾಡಬಲ್ಲಂಥ ಒಂದು ವ್ಯವಸ್ಥೆ ನಮ್ಮಲ್ಲಿಲ್ಲ. ಇದು ಒಂದು ಮುಖ್ಯ ಕಾರ್ಯ, ಮತ್ತು ಅಂಥ ಕಾರ್ಯ ಮಾಡಬಲ್ಲ ಒಂದು ವ್ಯವಸ್ಥೆ ಅತ್ಯಗತ್ಯ.

೫. ಪ್ರತಿಯೊಂದು ಕೈಗಾರಿಕೆಗೆ ಸಂಬಂಧಿಸಿದ ಕಾರ್ಮಿಕರ ಕಲ್ಯಾಣಗಳ ಸಮಸ್ಯೆಯನ್ನು ಅಧ್ಯಯನ ಮಾಡಿ, ಸಲಹೆಗಳನ್ನು ಕೊಡಬಲ್ಲಂತಹ ವ್ಯವಸ್ಥೆಯೂ ನಮ್ಮಲ್ಲಿಲ್ಲ.

**ಪ್ರತ್ಯೇಕ ಕಾರ್ಯಾಲಯ**

"ಸಮ್ಮೇಳನದ ಕೆಲವು ಸದಸ್ಯರು ಸಂಸ್ಥೆಯ ಎರಡನೇ ದೋಷವೊಂದನ್ನು ಬೆಳಕಿಗೆ ತಂದಿದ್ದಾರೆ. ಅದೇಂದರೆ, ಕಾರ್ಮಿಕ ಸಮ್ಮೇಳನಕ್ಕೆ ಒಂದು ಪ್ರತ್ಯೇಕ ಕಾರ್ಯಾಲಯವಿಲ್ಲದಿರುವುದು. ಈ ಕೆಳಗಿನ ಕಾರ್ಯಗಳನ್ನು ಮಾಡಲು ಒಂದು ಪ್ರತ್ಯೇಕ ಕಾರ್ಯಾಲಯವಿರಬೇಕು ಎಂದು ಸೂಚಿಸಲಾಗಿದೆ.

೧. ಸಭೆಗೆ ಸಿದ್ಧತೆ ನಡೆಸುವುದು (ಪತ್ರಗಳನ್ನು ಹಂಚುವುದು, ನಿಗದಿಪಡಿಸಿದ ತಾರೀಖು ಮತ್ತು ವಿಷಯಗಳ ಪಟ್ಟಿಯನ್ನು ಸದಸ್ಯರಿಗೆ ತಿಳಿಸುವುದು, ಇತ್ಯಾದಿ).

೨. ಸಭೆಯ ನಡಾವಳಿಗಳನ್ನು ಬರೆದಿಡುವುದು.

೩. ಕರಪತ್ರಗಳನ್ನು ಹಂಚುವ ಮೂಲಕ ಮತ್ತು ಪ್ರವಾಸ ಮಾಡುವ ಮೂಲಕ ಪ್ರಚಾರ ಮಾಡುವುದು.

೪. ಸಿಬ್ಬಂದಿಗೆ ವೇತನ ಕೊಡುವುದು; ಸಮ್ಮೇಳನಕ್ಕೆ ಬಂದ ಸರ್ಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆ ಕೊಡುವುದು ಮುಂತಾದ ಹಣಕಾಸಿನ ಕಾರ್ಯನಿರ್ವಹಣೆ.

೫. ಚರ್ಚೆ ಮಾಡಲು ಹಾಗೂ ಶಿಫಾರಸು ಮಾಡಲು ಸಹಾಯಕವಾಗುವಂಥ ಸಂಶೋಧನೆ ಮತ್ತು ವಿಷಯ ಸಂಗ್ರಹಣೆ ಮಾಡುವುದು.

೬. ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪರೀಕ್ಷಿಸುವುದು.

"ದೂಷಣೆಗೆ ಆಸ್ಪದವನ್ನು ನೀಡುವಂತಹ ಇನ್ನೂ ಎರಡು ವಿಷಯಗಳಿವೆ. ಇದರಲ್ಲಿ ಒಂದು, ಕಾರ್ಮಿಕ ಸಮ್ಮೇಳನ ಮತ್ತು ಸ್ಥಾಯಿ ಕಾರ್ಮಿಕ ಸಮಿತಿಯ ಚರ್ಚಾ ವಿಷಯಗಳ ಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದುದು. ವಿಷಯಗಳ ಪಟ್ಟಿ ರಚನೆಯ ಈಗಿರುವ ಪದ್ಧತಿಯಲ್ಲಿ ಎರಡು ದೋಷಗಳಿವೆ. ಮೊದಲನೆಯದು: ಸಮ್ಮೇಳನದ ಮತ್ತು ಸಮಿತಿಯ ಸದಸ್ಯರಿಗೆ, ತಾವು ಆಸಕ್ತರಾದ ವಿಷಯಗಳನ್ನು ತಮಗೆ ಬೇಕೆನಿಸಿದರೆ ವಿಷಯಗಳ ಪಟ್ಟಿಯಲ್ಲಿ ಸೇರಿಸುವ ಅಧಿಕಾರವಿಲ್ಲ. ಎರಡನೆಯ ದೋಷವೆಂದರೆ, ವಿಷಯಗಳ ಪಟ್ಟಿಯ ಜೊತೆಗೆ ಲಗತ್ತಿಸಿರುವ ಜ್ಞಾಪಕಪತ್ರಗಳು ಸದಸ್ಯರಿಗೆ ಎಷ್ಟು ತಡವಾಗಿ ಮುಟ್ಟುತ್ತವೆಯೆಂದರೆ, ಅವರು ಅವುಗಳನ್ನು ಓದಿ, ಚರ್ಚೆಗೆ ಯಾವುದೇ ರೀತಿಯ ಕೊಡುಗೆಯನ್ನು ನೀಡಲು ಅವರಿಗೆ ಸಾಧ್ಯವಾಗುವುದಿಲ್ಲ.

"ಆಕ್ಷೇಪಣೆಗೆ ಎಡೆಮಾಡಿಕೊಟ್ಟಿರುವ ಮತ್ತೊಂದು ವಿಷಯವು ಸಮ್ಮೇಳನ ಮತ್ತು ಸ್ಥಾಯಿ ಕಾರ್ಮಿಕ ಸಮಿತಿಗಳಲ್ಲಿ ವಿವಿಧ ಪಕ್ಷಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದುದು. ಸರ್ಕಾರದಿಂದ ನಾಮಕರಣಗೊಂಡ ನೌಕರಿದಾತರಿಗೆ ಮೂರು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸರ್ಕಾರ ಕೇಳುವುದು ನಿಂದನೀಯ ಎಂಬುದಾಗಿ ಉದ್ಯಮಿಗಳು ತಿಳಿಸಿದ್ದಾರೆ. ಭಾರತದ ಉದ್ಯಮಿಗಳ ಒಕ್ಕೂಟ ಮತ್ತು ಅಖಿಲ ಭಾರತ ಕೈಗಾರಿಕೋದ್ಯಮಿಗಳ ಸಂಸ್ಥೆಗಳು ಭಾರತದ ಎಲ್ಲ ಉದ್ಯಮಿಗಳನ್ನೂ ಪ್ರತಿನಿಧಿಸುತ್ತವೆ; ಆದ್ದರಿಂದ, ನಾಮಕರಣದ ಮೂಲಕ ಮತ್ತಷ್ಟು ಉದ್ಯಮಿಗಳ ಪ್ರತಿನಿಧಿಗಳನ್ನು ನೇಮಿಸಲು ಅವಕಾಶ ಕೊಡುವುದು ಅನಾವಶ್ಯಕ ಎಂಬುದು ಅವರ ವಾದ. ಕಾರ್ಮಿಕರನ್ನು ಪ್ರತಿನಿಧಿಸುವ ವಿಧಾನದಲ್ಲಿಯೂ ಒಂದು ದೋಷವಿದೆಯೆಂದು ಹೇಳಲಾಗಿದೆ; ಅದೇಂದರೆ, ಕಾರ್ಮಿಕರನ್ನು ಪ್ರತಿನಿಧಿಸುವವರಲ್ಲಿ ಕಾರ್ಮಿಕರ ವರ್ಗಕ್ಕೆ ಸೇರಿದ ಒಬ್ಬನೂ ಇಲ್ಲ.

"ಈ ಸಂದರ್ಭದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಲು ಸಿದ್ಧವಿದೆ ಎಂಬುದನ್ನು ತಿಳಿಸಲು ನೀವು ನನ್ನನ್ನು ಸ್ವಾಭಾವಿಕವಾಗೇ ಕೇಳುತ್ತೀರಿ. ಕಾರ್ಮಿಕ ಸಮ್ಮೇಳನವು ಸರಿಯಾಗಿ ಕೆಲಸ ಮಾಡುವಂತೆ ಮಾಡಲು ಹಾಗೂ ತನ್ನ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಅದರ ಕಾರ್ಯಕ್ರಮಗಳು

ಕುಂಠಿತವಾಗದಿರಲು ನಾನು ನನಗೆ ಸಾಧ್ಯವಾದುದನ್ನೆಲ್ಲಾ ಮಾಡಲು ಕಾತರನಾಗಿದ್ದೇನೆ. ಯಾವುದೇ ಒಂದು ಖಚಿತ ತೀರ್ಮಾನಕ್ಕೆ ಬರುವ ಮುನ್ನ ಈ ವಿಷಯಗಳನ್ನು ಸ್ವಲ್ಪ ಕೆದಕಿ ನೋಡಿ, ಪರೀಕ್ಷೆ ಮಾಡುವುದು ಅಗತ್ಯ ಎಂಬುದು ನಿಮಗೇ ಗೊತ್ತಾಗುತ್ತದೆ. ಇವುಗಳಲ್ಲಿ ಕೆಲವನ್ನು ಇನ್ನೂ ಪರೀಕ್ಷೆ ಮಾಡಿಲ್ಲ. ಸರ್ಕಾರವು ಯಾವ ವಿಷಯಗಳ ಬಗೆಗೆ ಪರಿಶೀಲನೆಯ ನಂತರ ಒಂದು ನಿರ್ಧಾರ ಕೈಗೊಂಡಿದೆಯೋ ಅವುಗಳನ್ನು ನಾನು ಮೊದಲು ಪ್ರಸ್ತಾಪಿಸುತ್ತೇನೆ. ಅವುಗಳಲ್ಲಿ ಪ್ರತ್ಯೇಕ ಕಾರ್ಯಾಲಯ, ವಿಷಯಗಳ ಪಟ್ಟಿ ಮತ್ತು ಪ್ರಾತಿನಿಧ್ಯ ಸೇರಿದೆ.

**ಕೇವಲ ಸಲಹಾ ಮಂಡಳಿ**

"ಕಾರ್ಮಿಕ ಸಮ್ಮೇಳನಕ್ಕಾಗಿಯೆ ಒಂದು ಪ್ರತ್ಯೇಕ ಕಾರ್ಯಾಲಯದ ಬೇಡಿಕೆಯು, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ಅಂ.ಕಾ.ಸಂ.) ಹೋಲಿಕೆಯ ಮೇಲೆ ನಿಂತಿದೆ ಎಂದು ನನಗನ್ನಿಸುತ್ತದೆ. ಆದರೆ ಸರ್ಕಾರದ ಪ್ರಕಾರ ಅಂ.ಕಾ.ಸಂ.ಗೂ ತ್ರಿಪಕ್ಷೀಯ ಸಂಸ್ಥೆಗೂ ವ್ಯತ್ಯಾಸವಿದೆ. ಅಂ.ಕಾ.ಸಂ.ಯು ವರ್ಸೇಲಿನ ಶಾಂತಿ ಒಪ್ಪಂದದಿಂದ ಹುಟ್ಟಿದ ಒಂದು ಸ್ವತಂತ್ರ ಸಂಸ್ಥೆ. ಅದರ ಪದ್ಧತಿಗಳೂ ಶಿಫಾರಸುಗಳೂ ಸದಸ್ಯ ರಾಷ್ಟ್ರಗಳ ಮೇಲೆ ಕೆಲವೊಂದು ಹೊಣೆಯನ್ನು ಹೇರುತ್ತವೆ ಮತ್ತು ಆ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡರೆ, ಅವು ಕೆಲವು ಅಂತರರಾಷ್ಟ್ರೀಯ ದಂಡ ತರಬೇಕಾಗುತ್ತದೆ. ಅದು ತನ್ನ ಸಂವಿಧಾನಕ್ಕೆ ಬದ್ಧವಾಗಿದೆಯೇ ಹೊರತು, ಹೊರಗಿನ ಯಾವುದೇ ಶಾಸನಕ್ಕಲ್ಲ. ಇದಲ್ಲದೆ, ಅಂ.ಕಾ.ಸಂ.ಗೆ ತನ್ನದೇ ಆದ ನಿಧಿ ಇದೆ ಮತ್ತು ಯಾವುದೇ ಹೊಸ ಕಾರ್ಯವನ್ನು ಕೈಗೊಳ್ಳಬೇಕಾದರೆ ಅದಕ್ಕೆ ತಗಲುವ ವೆಚ್ಚಕ್ಕಾಗಿ, ಅದು ಯಾವುದೇ ರಾಷ್ಟ್ರವನ್ನಾಗಲಿ ಖಾತೆಯನ್ನಾಗಲಿ ಅವಲಂಬಿಸಬೇಕಾಗಿಲ್ಲ.

"ಆದರೆ ನಮ್ಮ ತ್ರಿಪಕ್ಷೀಯ ಸಂಸ್ಥೆಯು ಅಂ.ಕಾ.ಸಂ.ಯಂತೆ ಸ್ವತಂತ್ರವಲ್ಲ. ಅದಕ್ಕೆ ಸ್ವತಂತ್ರ ನಿಧಿ ಇಲ್ಲ; ಇರಲು ಸಾಧ್ಯವೂ ಇಲ್ಲ. ಅದು ಕೇವಲ ಸಲಹಾ ಮಂಡಳಿ; ತನಗೆ ಕಳಿಸಿದ ವಿಷಯಗಳ ಮೇಲೆ ಭಾರತ ಸರ್ಕಾರಕ್ಕೆ ಸಲಹೆ ನೀಡುವುದಕ್ಕಾಗಿ ರಚಿತವಾದ ಸಂಸ್ಥೆ ಅದು; ಅದು ಯಾವ ನಿರ್ಣಯವನ್ನೂ ತೆಗೆದುಕೊಳ್ಳಲಾರದು. ಹಾಗೆ ನಿರ್ಣಯಿಸಲು ಅನುಮತಿ ಕೊಡುವುದೂ ಒಂದೇ, ಶಾಸಕಾಂಗದ ಕಾರ್ಯಗಳನ್ನು ಕಿತ್ತುಕೊಳ್ಳುವುದೂ ಒಂದೇ. ಈ ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು, ಕಾರ್ಮಿಕ ಸಮ್ಮೇಳನಕ್ಕೆ ಒಂದು ಪ್ರತ್ಯೇಕ ಕಾರ್ಯಾಲಯವನ್ನು ಕೊಟ್ಟರೆ, ಸರ್ಕಾರಕ್ಕೂ ಸಮ್ಮೇಳನಕ್ಕೂ ತಿಕ್ಕಾಟ ಉಂಟಾಗುತ್ತದೆ ಎಂದು ಖಂಡಿತವಾಗಿ ಹೇಳಬಹುದು.

"ಅಂ.ಕಾ.ಸಂ.ಗೆ ಒಂದು ಸ್ವತಂತ್ರ ಕಾರ್ಯಾಲಯವಿರುವುದರಿಂದಲೇ ಹಾಗೂ ಒಳ್ಳೆಯ ಸಮಿತಿಗಳನ್ನು ಸಂಗ್ರಹಿಸಿದುದರಿಂದಲೇ ಅದಕ್ಕೆ ಸಾಮರ್ಥ್ಯ ಬಂದಿದೆ ಎಂಬ ಮಾತೇನೋ ನಿಜ. ಆದರೆ, ಭಾರತ ಸರ್ಕಾರದ ಪ್ರಕಾರ, 'ಸಂಶೋಧನೆ ಮತ್ತು ಮಾಹಿತಿ' ಒಂದನ್ನು ಬಿಟ್ಟು ಕಾರ್ಯಾಲಯದ ಉಳಿದೆಲ್ಲ ಕಾರ್ಯಗಳನ್ನೂ ಭಾರತ ಸರ್ಕಾರದ ಕಾರ್ಮಿಕ ಕಾರ್ಯಾಲಯವೇ ಸಮರ್ಥವಾಗಿ ನಿರ್ವಹಿಸಬಲ್ಲದು. 'ಸಂಶೋಧನೆ ಮತ್ತು ಮಾಹಿತಿಗಳಿಗೆ' ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯು ಕೆಲವು ಯೋಜನೆಗಳನ್ನು ಪರಿಶೀಲಿಸುತ್ತಿದೆ. ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪುನರ್ ಸಂಘಟಿಸಲು ಈ ಯೋಜನೆಗಳನ್ನು ಮಾಡಲಾಗಿದ್ದು, ಅವು ಕಾರ್ಮಿಕರ ಹಾಗೂ ಅವರಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸಂಶೋಧನೆ ಮತ್ತು ವಿಷಯ ಸಂಗ್ರಹಣೆಗೆ ಆವಶ್ಯಕವಾದ ಯಂತ್ರವನ್ನು ರಚಿಸುತ್ತದೆ. ಈ ಕಾರಣಗಳಿಂದಾಗಿ, ತ್ರಿಪಕ್ಷೀಯ ಸಂಸ್ಥೆಗೆ ಒಂದು ಪ್ರತ್ಯೇಕ ಕಾರ್ಯಾಲಯವನ್ನು ಕೊಡುವ ವಿಚಾರಕ್ಕೆ ಭಾರತ ಸರ್ಕಾರವು

ಸದ್ಯಕ್ಕೆ ಒಲವು ತೋರಿಸುತ್ತಿಲ್ಲ.

**ವಿಷಯಗಳ ಪಟ್ಟಿ ತಯಾರಿಸುವ ಹಕ್ಕು**

"ವಿಷಯಗಳ ಪಟ್ಟಿಯ ಬಗೆಗೂ ಸರ್ಕಾರ ಪರಿಶೀಲನೆಮಾಡಿದೆ. ಸಮ್ಮೇಳನದ ವಿಷಯಗಳ ಪಟ್ಟಿ ನಿರ್ಧರಿಸುವ ಹಕ್ಕನ್ನು ತಾನು ಬಿಟ್ಟುಕೊಡುವುದಿಲ್ಲವೆಂದು ಸರ್ಕಾರ ತೀರ್ಮಾನಿಸಿದೆ. ಸಮ್ಮೇಳನವು ಶಾಸಕಾಂಗವಲ್ಲ. ಅದೊಂದು ಸಲಹಾ ಮಂಡಳಿಯಷ್ಟೇ. ತನಗೆ ಯಾವ ವಿಷಯಗಳ ಬಗೆಗೆ ಸಲಹೆ ಬೇಕೆಂಬುದನ್ನು ಸರ್ಕಾರ ನಿರ್ಧರಿಸಬೇಕು.

"ಸಮ್ಮೇಳನದ ವಿಷಯ ಪಟ್ಟಿ ನಿರ್ಧರಿಸುವ ಹಕ್ಕನ್ನು ಸರ್ಕಾರ ಬಿಟ್ಟುಕೊಡದಿರಲು ಇನ್ನೂ ಒಂದು ಕಾರಣವಿದೆ. ಸದಸ್ಯರೆಲ್ಲರ ವಿಚಾರ ವಿಮರ್ಶೆಗೆ ಸಹಾಯಕವೂ ಮಾರ್ಗದರ್ಶಕವೂ ಆಗುವಂಥ ಸಂಗತಿಗಳನ್ನು ಸರ್ಕಾರವು ಸಮಿತಿಗೆ ಒದಗಿಸುವಂತಿರಬೇಕು ಹಾಗೂ ಸದಸ್ಯರು ಆ ಸಂಗತಿಗಳನ್ನು ಸಾಕಷ್ಟು ಕೂಲಂಕಷವಾಗಿ ಪರೀಕ್ಷೆ ಮಾಡಿ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತಿರಬೇಕು. ಇಲ್ಲದಿದ್ದರೆ, ವಿಷಯವೊಂದನ್ನು ಪಟ್ಟಿಗೆ ಸೇರಿಸಬೇಕೆಂಬ ಕಡ್ಡಾಯವನ್ನು ಒಪ್ಪಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಿಲ್ಲ. ಸಾಕಷ್ಟು ಮುನ್ಸೂಚನೆ ಕೊಡದಿದ್ದರೆ, ಅಂಥ ಸಂಗತಿಗಳನ್ನು ಒದಗಿಸಲು ಸಿದ್ಧವಿರುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ಆದರೆ, ವಿಷಯ ಪಟ್ಟಿಯನ್ನು ತಯಾರಿಸುವ ಹಕ್ಕನ್ನು ಉಳಿಸಿಕೊಂಡು, ಸರ್ಕಾರವು ಕಾರ್ಯವಿಧಾನದಲ್ಲಿ ಬದಲಾವಣೆ ಮಾಡಲು ಸಿದ್ಧವಿದೆ.

"ಈಗಿರುವ ಕಾರ್ಯವಿಧಾನದಂತೆ, ಕಾರ್ಮಿಕ ಇಲಾಖೆಯು ವಿವಿಧ ಸರ್ಕಾರಗಳನ್ನೂ ಉದ್ಯಮಿಗಳ ಮತ್ತು ಕಾರ್ಮಿಕ ಸಂಘಗಳನ್ನೂ ತಮ್ಮ ಸಭೆ ಮುಗಿದನಂತರ, ಮುಂದಿನ ಸಭೆಯ ವಿಷಯಗಳ ಪಟ್ಟಿಗೆ ಬೇಕಾಗುವ ವಿಷಯಗಳನ್ನು ನಿರ್ಧರಿಸಲು ಸರ್ಕಾರವು ಸಮ್ಮೇಳನದೊಡನೆಯಾಗಲಿ ಸಮಿತಿಯೊಡನೆಯಾಗಲಿ ಸಮಾಲೋಚನೆ ನಡೆಸುವುದಿಲ್ಲ. ತಿದ್ದುಪಡಿ ಮಾಡಿದ ಕಾರ್ಯವಿಧಾನದಂತೆ, ಸರ್ಕಾರಗಳೂ, ಉದ್ಯಮಿಗಳ ಮತ್ತು ಕಾರ್ಮಿಕರ ಸಂಘಗಳೂ ವಿಷಯಗಳ ಪಟ್ಟಿಗೆ ಸಂಬಂಧಿಸಿದಂತೆ, ತಮಗೆ ಬೇಕೆನಿಸಿದ ಸಲಹೆಗಳನ್ನು ಕಳಿಸಿದರೆ, ಸರ್ಕಾರವು ಆ ಸಲಹೆಗಳನ್ನು ಸ್ವೀಕರಿಸಲು ಸಿದ್ಧವಿರುತ್ತದೆ. ಅವು ಸ್ವೀಕಾರಾರ್ಹವಲ್ಲದಿದ್ದರೆ, ಆಗ ಸರ್ಕಾರವು ಪ್ರತಿ ಸಭೆಯಲ್ಲಿಯೂ ನಿಯೋಗದ ಸದಸ್ಯರನ್ನು ಸಲಹೆ ಕೊಡಲು ಕೇಳಿಕೊಳ್ಳುತ್ತದೆ.

"ಸರ್ಕಾರವು ಮತ್ತೊಂದು ಬದಲಾವಣೆಯನ್ನು ಮಾಡಲು ಸಿದ್ಧವಿದೆ. ಅದೆಂದರೆ, ಅಂತಿಮ ತೀರ್ಮಾನ ಸರ್ಕಾರದ್ದೇ ಆದರೂ, ಪ್ರತಿಯೊಂದು ಸಭೆಯಲ್ಲಿಯೂ ವಿಷಯಗಳ ಪಟ್ಟಿಯನ್ನು ತಯಾರಿಸಲು ಸ್ವೀಕರಿಸಿದ ಎಲ್ಲ ಸಲಹೆಗಳನ್ನೂ ಪರಿಶೀಲನೆಗೆ ಇಡಲಾಗುವುದು. ಇದರಿಂದಾಗಿ ಸರ್ಕಾರಕ್ಕೆ ಸದಸ್ಯರ ಅಭಿಮತವನ್ನು ಪಡೆಯಲು ಅವಕಾಶ ಸಿಗುತ್ತದೆ, ಹಾಗೂ ಸದಸ್ಯರಿಗೆ ತಮ್ಮ ಅಭೀಷ್ಟಗಳನ್ನು ವ್ಯಕ್ತಪಡಿಸಲು ಅವಕಾಶ ಸಿಕ್ಕುತ್ತದೆ. ಈಗಿರುವ ವಿಧಾನಕ್ಕಿಂತ ಇದು ಸುಧಾರಿಸಿದ ವಿಧಾನ ಎಂಬುದನ್ನು ನೀವು ಖಂಡಿತ ಒಪ್ಪುತ್ತೀರಿ.

"ಸಮ್ಮೇಳನದ ರಚನೆಯ ಬಗೆಗೆ ಹೇಳಬೇಕೆಂದರೆ, ಈಗ ಮಾಡಿರುವ ಸಲಹೆ ಸೂಚನೆಗಳಲ್ಲಿ ಸಾಕಷ್ಟು ಬಲವಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಈಗಿರುವ ಉದ್ಯಮಿಗಳ ಎರಡು ಸಂಘಗಳಿಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿದ್ದರೆ, ಉದ್ಯಮಿಗಳನ್ನು ಮತ್ತೆ ನಾಮಕರಣ ಮಾಡುವುದು ಖಂಡಿತ ನ್ಯಾಯವಲ್ಲ. ಅದೇ ರೀತಿ ಕಾರ್ಮಿಕ ವರ್ಗದವರು ತಮ್ಮ ನೌಕರಿ ಹಾಗೂ ಕಲ್ಯಾಣಗಳನ್ನು ಚರ್ಚೆಗೆ ಬರುವಂತೆ ಮಾಡಬೇಕು; ಮತ್ತು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವಂತೆ ಅವರಿಗೆ ತರಬೇತಿ ಕೊಡಬೇಕು. ಪುರುಷ ಕಾರ್ಮಿಕರನ್ನೂ ಮಹಿಳಾ ಕಾರ್ಮಿಕರನ್ನೂ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸುವಂತೆ

ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ನಿಮಗೆ ಈ ಸಂಗತಿಯ ಅರಿವಿರಬಹುದು; ಇತ್ತೀಚೆಗೆ ಕಲ್ಲಿದ್ದಲ ಗಣಿಗಳ ಕಲ್ಯಾಣ ಕಾರ್ಯಸಮಿತಿಯನ್ನು ರಚಿಸಿದಾಗ, ಸರ್ಕಾರವು ಸಮಿತಿಗೆ ಒಬ್ಬ ಕಲ್ಲಿದ್ದಲ ಗಣಿ ಕಾರ್ಮಿಕನನ್ನೂ ಒಬ್ಬ ಕಾರ್ಮಿಕಳನ್ನೂ ಕಲ್ಲಿದ್ದಲ ಗಣಿ ಕಾರ್ಮಿಕರ ಪ್ರತಿನಿಧಿಗಳೆಂದು ನೇಮಕ ಮಾಡಿತು.

**ಸಂವಿಧಾನ – ಕೆಲವು ಸಲಹೆಗಳು**

"ಆದ್ದರಿಂದ, ಸಮ್ಮೇಳನದ ರಚನೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಸರ್ಕಾರವು ವಿರೋಧಿಸುವುದಿಲ್ಲ. ಆದರೆ, ಸಮ್ಮೇಳನದ ರಚನೆಯಲ್ಲಿನ ಬದಲಾವಣೆಗೆ ಸಂಬಂಧಿಸಿದ ವಿಷಯಗಳು ತುರ್ತು ವಿಷಯಗಳಲ್ಲ ಎಂಬುದು ಸರ್ಕಾರದ ಅನಿಸಿಕೆ, ಹಾಗೂ ಅದರ ಪರಿಶೀಲನೆಯನ್ನು ಸ್ವಲ್ಪ ಕಾಲದವರೆಗೆ ಮುಂದೂಡಿದರೆ ಏನೂ ನಷ್ಟವಾಗುವುದಿಲ್ಲ. ನಾನು ಮೊದಲನೆಯ ತ್ರಿಪಕ್ಷೀಯ ಸಮ್ಮೇಳನದಲ್ಲಿ ಹೇಳಿದಂತೆ, ಬೇರು ಬಿಟ್ಟಿದೆಯೋ ಇಲ್ಲವೋ ಎಂದು ನೋಡಲು ಗಿಡವನ್ನು ಆಗಾಗ ಕಿತ್ತು ನೋಡುತ್ತಾ ಇರಬಾರದು. ಇದೊಂದು ಗಿಡವನ್ನು ಸಾಯಿಸುವ ದಾರಿ ಅಷ್ಟೆ.

"ಈಗ ನಾನು ಸಮ್ಮೇಳನದ ಸಂವಿಧಾನದಲ್ಲಿರುವ ಕೆಲವು ದೋಷಗಳನ್ನು ಪ್ರಸ್ತಾಪಿಸುತ್ತೇನೆ. ಸರ್ಕಾರವೇ ಒಪ್ಪಿಕೊಂಡಿರುವಂತೆ ಇದೊಂದು ಗಂಭೀರ ದೋಷ ಮತ್ತು ಇದಕ್ಕೇನಾದರೂ ಔಷಧಿ ಮಾಡಲೇಬೇಕು. ಆದರೆ ಸರ್ಕಾರ ಯಾವುದೇ ತೀರ್ಮಾನಕ್ಕೆ ಬರಲಿಲ್ಲ. ನೀವು ಕೊಡಬಯಸುವ ಯಾವುದೇ ಸಲಹೆ ಸೂಚನೆಗಳನ್ನು ಸರ್ಕಾರ ಸ್ವಾಗತಿಸುತ್ತದೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯಗಳನ್ನು ನಿಮ್ಮ ಮುಂದೆ ಮಂಡಿಸಬಹುದೆ? ಸಂವಿಧಾನದಲ್ಲಿ ಈ ಕೆಳಗಿನ ತಿದ್ದುಪಡಿಗಳಾಗಬೇಕೆಂದು ನಾನು ಸೂಚಿಸುತ್ತೇನೆ.

೧. ಸಮ್ಮೇಳನದ ವ್ಯಾಪ್ತಿಯಲ್ಲಿ ಬರುವ ವಿಷಯಗಳನ್ನು ಎರಡು ಪಟ್ಟಿಗಳಲ್ಲಿ ಮಾಡುವುದು. ಮೊದಲನೆಯ ಪಟ್ಟಿಯಲ್ಲಿ (ಅ) ಉದ್ಯೋಗದ ಷರತ್ತುಗಳು, (ಆ) ಕಾರ್ಮಿಕ ಶಾಸನ, (ಇ) ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಪ್ರಶ್ನೆ, ಮುಂತಾದ ಸಾಮಾನ್ಯ ವಿಷಯಗಳು ಸೇರುತ್ತವೆ; ಎರಡನೆಯ ಪಟ್ಟಿಯಲ್ಲಿ (ಅ) ಕಾರ್ಮಿಕ ಕಲ್ಯಾಣ ಕಾರ್ಯಗಳಿಗೆ ಸಂಬಂಧಿಸಿದ ಹಾಗೂ (ಆ) ಕಾರ್ಮಿಕ ಶಾಸನಗಳ ಜಾರಿಗೆ ಸಂಬಂಧಿಸಿದ ವಿಷಯಗಳು ಸೇರುತ್ತವೆ. ಮೂರನೆಯ ಪಟ್ಟಿಯ ವಿಷಯಗಳನ್ನು ಸರ್ವಸದಸ್ಯರ ಸಮ್ಮೇಳನಕ್ಕೆ ಬಿಡಲಾಗುವುದು. ಇನ್ನು ಮುಂದೆ 'ಸರ್ವಸದಸ್ಯ ಮತ್ತು ತ್ರಿಪಕ್ಷೀಯ' ಎಂಬ ಉಚ್ಚಾರಣೆಗೆ ಕಷ್ಟವಾದ ಪದಗಳನ್ನು ಸೇರಿಸದೆ ಸಮ್ಮೇಳನವನ್ನು ಸರಳವಾಗಿ, 'ಕಾರ್ಮಿಕ ಸಮ್ಮೇಳನ'ವೆಂದು ಕರೆಯಬೇಕೆಂದು ನಾನು ಸೂಚಿಸುತ್ತೇನೆ.

೨. ಕಾರ್ಮಿಕ ಕಲ್ಯಾಣ ಸಮಿತಿ ಎಂಬ ಹೊಸ ಸಮಿತಿಯನ್ನು ರಚಿಸಿ, ಅದಕ್ಕೆ ಎರಡನೆಯ ಪಟ್ಟಿಯಲ್ಲಿನ ವಿಷಯಗಳನ್ನು ಒಪ್ಪಿಸಬೇಕು.

೩. ಕಾರ್ಮಿಕ ಕಲ್ಯಾಣ ಸಮಿತಿಯ ರಚನೆ ಹೀಗಿರುತ್ತದೆ; ಅದರಲ್ಲಿ (ಅ) ಸ್ಥಾಯಿ ಕಾರ್ಮಿಕ ಸಮಿತಿ ಚುನಾಯಿಸಿದ ಸದಸ್ಯರು; (ಆ) ಉದ್ಯಮಿಗಳ ಒಬ್ಬ ಪ್ರತಿನಿಧಿ ಮತ್ತು ವ್ಯವಸ್ಥಿತ ಕೈಗಾರಿಕೆ, ಮುನಿಸಿಪಾಲಿಟಿ ಮುಂತಾದ ನೌಕರಿ ಕೊಡುವ ಸಂಸ್ಥೆಗಳಿಂದ ಆರಿಸಲ್ಪಟ್ಟ ಒಬ್ಬ ಕಾರ್ಮಿಕರ ಪ್ರತಿನಿಧಿ; (ಇ) ಅಧಿಕಾರಿಗಳಲ್ಲದ ವರ್ಗಕ್ಕೆ ಸೇರಿದ ಸರ್ಕಾರದಿಂದ ನಾಮಕರಣಗೊಂಡ ವ್ಯಕ್ತಿಗಳು; (ಈ) ಭಾರತದ ರಾಜ್ಯಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು; ಮತ್ತು (ಉ) ಪ್ರಾಂತ್ಯ ಸರ್ಕಾರಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು.

೪. ಸ್ಥಾಯಿ ಕಾರ್ಮಿಕ ಸಮಿತಿಯ ರಚನೆಗೆ ಸಂಬಂಧಿಸಿದಂತೆ ಯಾವ ಬದಲಾವಣೆಯೂ ಇರುವುದಿಲ್ಲ. ಆದರೆ ಅದರ ಕಾರ್ಯಗಳಲ್ಲಿ ಬದಲಾವಣೆಯಿರುತ್ತದೆ. ಇನ್ನು ಮುಂದೆ ಅದು ಪರಿಶೀಲಕ ಮಂಡಳಿಯಾಗಿರುವುದಿಲ್ಲ. ಅದು ಸಮ್ಮೇಳನದ ಕಾರ್ಯ ನಿರ್ವಾಹಕವಾಗಿರುತ್ತದೆ. ಅಂದರೆ, ಆಗಾಗ್ಗೆ ಸಮ್ಮೇಳನವು ಹೇಳಿದ ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ವ್ಯವಸ್ಥೆಯ ಕೆಳಗೆ ಮೂರು ಭಾಗಗಳಿರುತ್ತವೆ. ಸಮ್ಮೇಳನ, ಸ್ಥಾಯಿ ಸಮಿತಿ ಮತ್ತು ಕಲ್ಯಾಣ ಸಮಿತಿ.

ಸಮ್ಮೇಳನದ ಕಾರ್ಯಗಳು ಹಾಗೂ ಅಧಿಕಾರಗಳು ಹೀಗಿರುತ್ತವೆ:

೧. ಉದ್ಯೋಗಕ್ಕೆ ಸಂಬಂಧಿಸಿದ ಷರತ್ತುಗಳಿಗೂ ಮತ್ತು ವಿಷಯಗಳ ಪಟ್ಟಿಯಲ್ಲಿ ಸೇರಿಸಬಹುದಾದ ಸಾಮಾಜಿಕ ಭದ್ರತೆಗೂ ಸಂಬಂಧಿಸಿದ ಪ್ರಶ್ನೆಗಳ ಮೇಲೆ ಸರ್ಕಾರಕ್ಕೆ ಶಿಫಾರಸು ಮಾಡುವುದು;

೨. ಅಂಥ ವಿಷಯಗಳನ್ನು ಅಥವಾ ಆ ವಿಷಯಗಳ ಯಾವುದಾದರೊಂದು ಅಂಶವನ್ನು ಸ್ಥಾಯಿ ಕಾರ್ಮಿಕ ಸಮಿತಿಗೆ ಕಳಿಸಿ, (ಅ) ಸಮ್ಮೇಳನಕ್ಕೆ ವರದಿ ಮಾಡಬೇಕೆಂದೂ, (ಆ) ಸರ್ಕಾರಕ್ಕೆ ಶಿಫಾರಸುಗಳನ್ನು ಕಳಿಸಬೇಕೆಂದೂ ನಿರ್ದೇಶಿಸುವುದು;

೩. ವಿಷಯ ಪಟ್ಟಿಯಲ್ಲಿರುವ ಯಾವುದೇ ವಿಷಯವನ್ನು ಪರಿಶೀಲಿಸಲು ಒಂದು ತತ್ಪೂರ್ತ ಸಮಿತಿಯನ್ನು ರಚಿಸಿ, ಅದಕ್ಕೊಬ್ಬ ನಿರ್ದೇಶಕರನ್ನು ನೇಮಕ ಮಾಡಬೇಕು, ಹಾಗೂ ಅವರು (ಅ) ಸಮ್ಮೇಳನಕ್ಕೂ (ಆ) ಸ್ಥಾಯಿ ಕಾರ್ಮಿಕ ಸಮಿತಿಗೂ ವರದಿ ಸಲ್ಲಿಸಬೇಕು. ಈ ವರದಿಯು ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲು ಸಹಾಯಕವಾಗಬೇಕು ಮತ್ತು ಸಮ್ಮೇಳನಕ್ಕೆ ಇನ್ನೂ ಹೆಚ್ಚಿನ ವರದಿಯನ್ನು ಸಲ್ಲಿಸಲು ಸಹಾಯಕವಾಗಬೇಕು.

"ಸ್ಥಾಯಿ ಕಾರ್ಮಿಕ ಸಮಿತಿಯ ಕಾರ್ಯಗಳೂ ಅಧಿಕಾರಗಳೂ ಹೇಗಿರುತ್ತವೆಯೆಂದರೆ, ಅವುಗಳನ್ನು ಸಮ್ಮೇಳನವು ಸಮಿತಿಗೆ ನೀಡಿರುತ್ತದೆ. ಅದು ಸಮ್ಮೇಳನದ ಕಾರ್ಯನಿರ್ವಾಹಕ ಅಷ್ಟೇ; ಅದಕ್ಕೆ ಅಧಿಕಾರ ಬರುವುದು ಸಮ್ಮೇಳನದಿಂದ, ಮತ್ತು ಸಮ್ಮೇಳನವು ಸೂಚಿಸಿದ ಕಾರ್ಯಗಳ ಹೊರತು ಮತ್ತೇನನ್ನೂ ಮಾಡಬಾರದು (ಕೆಳಗೆ ತಿಳಿಸಿದವುಗಳ ವಿಷಯದಲ್ಲಿ ಮಾತ್ರ ವಿನಾಯಿತಿ ಇದೆ). ಒಂದು ವೇಳೆ ಒಂದು ವಿಷಯದ ಬಗೆಗೆ ಸರ್ಕಾರಕ್ಕೆ ತುರ್ತಾಗಿ ನಿರ್ಣಯ ಬೇಕಾದರೆ, ಸರ್ಕಾರವು ಆ ವಿಷಯವನ್ನು ನೇರವಾಗಿ ಸ್ಥಾಯಿ ಕಾರ್ಮಿಕ ಸಮಿತಿಗೆ ಕಳಿಸಿ, ಅದರ ಮೇಲಿನ ವರದಿಯನ್ನು ಸಮ್ಮೇಳನ್ನಕ್ಕಾಗಲಿ, ಸರ್ಕಾರಕ್ಕಾಗಲಿ ಸಲ್ಲಿಸುವಂತೆ ಕೇಳುವ ಅಥವಾ ಕೈಬಿಡುವ ಅವಕಾಶ ಅದಕ್ಕಿದೆ. ಆದರೆ ಸಾಧಾರಣವಾಗಿ, ಸ್ಥಾಯಿ ಕಾರ್ಮಿಕ ಸಮಿತಿಯು ತನ್ನ ವರದಿ ಅಥವಾ ಶಿಫಾರಸುಗಳನ್ನು ಸಮ್ಮೇಳನಕ್ಕೆ ಸಲ್ಲಿಸುತ್ತದೆ. ಸ್ಥಾಯಿ ಕಾರ್ಮಿಕ ಸಮಿತಿಯ ಅಧಿಕಾರಗಳು ಹೀಗಿವೆ :

೧. ಸಮ್ಮೇಳನವು ಕಳಿಸಿದ ವಿಷಯಗಳ ಮೇಲೆ ಶಿಫಾರಸನ್ನು ಅಥವಾ ವರದಿಗಳನ್ನು ಸಮ್ಮೇಳನಕ್ಕೆ ಸಲ್ಲಿಸುವುದು;

೨. ಒಂದು ವೇಳೆ ಸಮ್ಮೇಳನವು ಸ್ಥಾಯಿ ಕಾರ್ಮಿಕ ಸಮಿತಿಗೆ ತನ್ನ ವರದಿ ಅಥವಾ ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶನ ನೀಡಿದ್ದರೆ, ವರದಿಯನ್ನು ಅಥವಾ ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸುವುದು; ಮತ್ತು

೩. ವಿಷಯ ಪಟ್ಟಿಯಲ್ಲಿರುವ ಯಾವುದೇ ವಿಷಯವನ್ನು ಪರಿಶೀಲಿಸಲು ಒಂದು ತತ್ಪೂರ್ತ ಸಮಿತಿಯನ್ನು ರಚಿಸಿ, ತನ್ನ ವರದಿಯನ್ನು ಸ್ಥಾಯಿ ಕಾರ್ಮಿಕ ಸಮಿತಿಗೆ ಸಲ್ಲಿಸಲು ಆಜ್ಞಾಪಿಸಬೇಕು.

**ಕಾರ್ಮಿಕ ಕಲ್ಯಾಣ ಸಮಿತಿ**

"ಕಾರ್ಮಿಕ ಕಲ್ಯಾಣ ಸಮಿತಿಯ ಕಾರ್ಯಗಳು ಕಾರ್ಮಿಕ ಕಲ್ಯಾಣ ಮತ್ತು ಕಾರ್ಮಿಕ ಶಾಸನಗಳ ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳಿಗೆ ಸೀಮಿತವಾಗಿವೆ. ತನ್ನ ಮುಂದೆ ಬರುವ ಎಲ್ಲ ವಿಷಯಗಳನ್ನು ಪರಿಶೀಲಿಸುವ ಮತ್ತು ಸರ್ಕಾರಕ್ಕೆ ಶಿಫಾರಸುಗಳನ್ನು ಕಳಿಸುವ ಅಧಿಕಾರ ಅದಕ್ಕಿದೆ.

"ಈಗ ಕಂಡುಬಂದಿರುವ ಸಂಘಟನೆಗೆ ಸಂಬಂಧಿಸಿದ ದೋಷಗಳನ್ನು ನಿವಾರಿಸಲು ನಾನು ಈ ಸೂಚನೆಗಳನ್ನು ಮಾಡಿದ್ದೇನೆ. ಈ ಸಮ್ಮೇಳನದ ಸದಸ್ಯನೆಂಬ ವೈಯಕ್ತಿಕ ಮಟ್ಟದಲ್ಲಿ ನಾನು ಇವುಗಳನ್ನು ನಿಮ್ಮ ಮುಂದಿಟ್ಟಿದ್ದೇನೆ. ಅವುಗಳಿಗೆ ಯಾವುದೇ ಮಹತ್ವವಿಲ್ಲದಿರಬಹುದು, ಆದರೆ ಅವುಗಳ ಕಾರ್ಯ ವಿಧಾನ ಸಮರ್ಪಕವಾಗಿದೆ ಎನ್ನಬಹುದು. ಈ ನನ್ನ ಸೂಚನೆಗಳನ್ನು ಭಾರತ ಸರ್ಕಾರವು ಇಲಾಖಾ ದೃಷ್ಟಿಯಿಂದ ಪರೀಕ್ಷಿಸಬೇಕೆಂದು ಸೂಚಿಸುತ್ತಿದ್ದೇನೆ. ಅವು ಕಾರ್ಯಸಾಧ್ಯವೆಂದು ಕಂಡುಬಂದರೆ, ಭಾರತ ಸರ್ಕಾರದ ತೀರ್ಮಾನಗಳನ್ನು ಪರಿಶೀಲನೆಗಾಗಿ ನಿಮ್ಮ ಮುಂದಿಡಲಾಗುವುದು. ಈ ಸಂಘಟನಾತ್ಮಕ ದೋಷವನ್ನು ನಾನು ಬಹಳ ಗಂಭೀರವಾದ ವಿಷಯವೆಂದು ಪರಿಗಣಿಸುತ್ತೇನೆ ಹಾಗೂ ಅದು ತುರ್ತು ವಿಷಯವೆಂಬಂತೆ ಪರಿಶೀಲಿಸುವುದಾಗಿ ಭರವಸೆ ನೀಡುತ್ತೇನೆ.

"ಸಮ್ಮೇಳನಕ್ಕೂ, ಅದರ ಭಾಗಗಳಾದ ವಿವಿಧ ಮಂಡಳಿಗಳ ಪುನರ್‌ರಚನೆಗೂ, ಅವುಗಳ ಕಾರ್ಯ ವಿಧಾನಗಳನ್ನು ಪುನಾರೂಪಿಸುವುದಕ್ಕೂ, ಅವುಗಳ ಸಿಬ್ಬಂದಿ ವರ್ಗವನ್ನು ಸುಧಾರಿಸುವುದಕ್ಕೂ ಸಂಬಂಧಿಸಿದಂತೆ, ನಾನು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದೇನೆ. ಸಮ್ಮೇಳನದ ಸಾಮರ್ಥ್ಯವನ್ನು ಸುಧಾರಿಸಲು ಹಾಗೂ ಅದರ ಪ್ರಯೋಜನವನ್ನು ಹೆಚ್ಚಿಸಲು ಸರ್ಕಾರವು ಕಾತರವಾಗಿದೆ ಎಂಬುದನ್ನು ನೀವು ಒಪ್ಪುತ್ತೀರಿ ಎಂದು ನಾನು ಆಶಿಸುತ್ತೇನೆ.

**ಕಾರ್ಮಿಕ ಶಾಸನ**

"ನಾನು ಇನ್ನೂ ಎರಡು ವಿಷಯಗಳನ್ನು ಪ್ರಸ್ತಾಪಿಸಬಯಸುತ್ತೇನೆ. ಈಗ ಬರುವ ವಿಧಾನಸಭೆಯ ಅಧಿವೇಶನದಲ್ಲಿ ಕಾರ್ಮಿಕ ಇಲಾಖೆಯ ವಿಧಾನಾತ್ಮಕ ಕಾರ್ಯಕ್ರಮದಲ್ಲಿ ಮೂರು ಮಸೂದೆಗಳಿರುತ್ತವೆ. ಅವೆಂದರೆ, ಕಾರ್ಖಾನೆ ತಿದ್ದುಪಡಿ ಮಸೂದೆ (ಇದಕ್ಕೆ ವೇತನಸಹಿತ ರಜಾಮಸೂದೆ ಎಂಬ ಹೆಸರೂ ಇದೆ), ಕಾರ್ಮಿಕ ಸಂಘಗಳ ತಿದ್ದುಪಡಿ ಶಾಸನ – ಇದು ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಅವಕಾಶ ಮಾಡಿಕೊಡುತ್ತದೆ ಮತ್ತು ವೇತನ ತಿದ್ದುಪಡಿ ಮಸೂದೆ. ಮೊದಲಿನ ಎರಡನ್ನು ಸಮ್ಮೇಳನದಲ್ಲಿ ಚರ್ಚಿಸಲಾಗಿದೆ. ಮೂರನೆಯದು ಹೊಸದು ಮತ್ತು ನಮ್ಮ ಕಾರ್ಯ ವಿಧಾನದ ಪ್ರಕಾರ ಅದನ್ನು ಚರ್ಚೆಗೆ ನಿಮ್ಮ ಮುಂದಿಡಲಾಗಿದೆ.

"ನಿಮಗೆ ಗೊತ್ತಿರುವಂತೆ, ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ೨೬ನೇ ಅಧಿವೇಶನವು ಅ.ಸಂ.ಸಂ.ದ ಫಿಲಡೆಲ್ಫಿಯಾದಲ್ಲಿ ಏಪ್ರಿಲ್‌ನಲ್ಲಿ ಜರುಗಿತು. ಈ ಅಧಿವೇಶನಕ್ಕೆ ಒಂದು ಭಾರತೀಯ ನಿಯೋಗವು ಹೋಗಿತ್ತು. ಅದರ ಮುಖಂಡತ್ವವನ್ನು ಲಂಡನ್ನಿನಲ್ಲಿ ಭಾರತದ ಹೈ ಕಮಿಷನರ್ ಆಗಿರುವ ಸರ್ ಸ್ಯಾಮ್ಯುಯೆಲ್ ರಂಗನಾಥನ್ ವಹಿಸಿದ್ದರು. ಭಾರತ ಸರ್ಕಾರವನ್ನು ಸನ್ಮಾನ್ಯ ಶ್ರೀ ಎಚ್.ಸಿ. ಪ್ರಯರ್, ಸಿ.ಎಸ್.ಐ., ಸಿ.ಐ.ಇ., ಐ.ಸಿ.ಎಸ್., ಕಾರ್ಮಿಕ ಖಾತೆಯ ಕಾರ್ಯದರ್ಶಿ, ಪ್ರತಿನಿಧಿಸಿದ್ದರು. ಶ್ರೀ ಡಿ.ಜೆ. ಮುಳ್ವೇರ್‌ಕರ್ ಉದ್ಯಮಿಗಳನ್ನೂ, ಸರ್ವಶ್ರೀ ಜಮ್ನಾದಾಸ್ ಮೆಹ್ತಾ, ಎಂ.ಎಲ್.ಎ., ಅಫ್ತಾಬ್ ಆಲಿ ಮತ್ತು ಆರ್. ಆರ್. ಭೋಲಿ ನೌಕರರನ್ನೂ ಪ್ರತಿನಿಧಿಸಿದ್ದರು. ಸಮ್ಮೇಳನದಲ್ಲಿ ಅವರು ವಹಿಸಿದ ಅದ್ಭುತ ಪಾತ್ರ ಮತ್ತು ಮಾಡಿದ

ಕಾರ್ಯಗಳಿಗೆ ಮಾನ್ಯತೆ ನೀಡುವಲ್ಲಿ ನೀವು ಖಂಡಿತ ನನ್ನ ಜೊತೆ ಸೇರುತ್ತೀರಿ. ನಿಯೋಗವು ಆ ಬಗ್ಗೆ ಮಾಡಿರುವ ವರದಿಯು ನಿಮ್ಮ ಮುಂದಿದೆ. ಅದು ಕುತೂಹಲಕಾರಿಯೂ, ಬೋಧಪ್ರದವೂ ಆಗಿದೆ ಎಂಬುದು ಖಂಡಿತ ನಿಮಗೆ ಗೊತ್ತಾಗುತ್ತದೆ.

"ಇನ್ನು ಮುಂದೆ ಅನಾವಶ್ಯಕವಾಗಿ ಮಾತನಾಡಲಾರೆ. ಆದ್ದರಿಂದ, ನನ್ನ ಮಾತನ್ನು ತಾವೆಲ್ಲ ತಾಳ್ಮೆಯಿಂದ ಕೇಳಿದ್ದಕ್ಕೆ ನಿಮಗೆ ವಂದನೆಗಳನ್ನರ್ಪಿಸಿ, ನನ್ನ ಮಾತು ಮುಗಿಸುತ್ತೇನೆ. ಇನ್ನು ನಮಗಾಗಿ ಕಾಯುತ್ತಿರುವ ಕೆಲಸವನ್ನು ಪ್ರಾರಂಭಿಸೋಣ."

## ಡಾ॥ ಅಂಬೇಡ್ಕರರ ಜ್ಞಾಪನಾಪತ್ರ

ತ್ರಿಭಾಗೀಯ ಕಾರ್ಮಿಕ ಸಮ್ಮೇಳನ ಮತ್ತು ಅದರ ಸ್ಥಾಯಿ ಕಾರ್ಮಿಕ ಸಮಿತಿಗಳಲ್ಲಿ ಆದ ಚರ್ಚೆಗಳನಂತರ, ಕೇಂದ್ರ ಸರ್ಕಾರವು ತೆಗೆದುಕೊಂಡಿರುವ ಕ್ರಮದ ಬಗೆಗಿನ ಸೂಚನೆಯು ಡಾ॥ ಅಂಬೇಡ್ಕರರ ಜ್ಞಾಪನಾಪತ್ರದಲ್ಲಿದೆ ಹಾಗೂ ಆ ಜ್ಞಾಪನಾಪತ್ರವನ್ನು ಕಾರ್ಮಿಕ ಸಮ್ಮೇಳನದಲ್ಲಿ ಮಂಡಿಸಲಾಗಿದೆ. ಈ ಜ್ಞಾಪನಾಪತ್ರದಲ್ಲಿ ಅಡಕವಾಗಿರುವ ವಿಷಯಗಳೆಂದರೆ : ಕಾರ್ಮಿಕರ ವಾದ ವಿವಾದಗಳನ್ನು ಬಗೆಹರಿಸುವುದು, ಕಾರ್ಮಿಕ ಕಲ್ಯಾಣ, ಕೈಗಾರಿಕಾ ಕಾರ್ಮಿಕರಿಗೆ ಆಹಾರ ಸರಬರಾಜು, ಸರ್ಕಾರದ ಒಪ್ಪಂದಗಳಲ್ಲಿ ನ್ಯಾಯವಾದ ವೇತನದ ನಿಯಮ, ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕ ಅಧಿಕಾರಿಗಳು, ಉದ್ಯೋಗ ವಿನಿಮಯ, ಕೈಗಾರಿಕೆಗಳ ಅಂಕಿ-ಅಂಶಗಳು, ಕಡ್ಡಾಯ ನಿರುದ್ಯೋಗ, ಕಾರ್ಮಿಕರ ಪ್ರಾತಿನಿಧ್ಯ, ಸಾಮಾಜಿಕ ಭದ್ರತೆ, ತುಟ್ಟಿಭತ್ಯೆ ಮತ್ತು ಕೈಗಾರಿಕಾ ಕ್ಯಾಂಟೀನುಗಳು.

ಮೇ ೧೯೪೩ರಲ್ಲಿ ನಡೆದ ಸ್ಥಾಯಿ ಕಾರ್ಮಿಕ ಸಮಿತಿಯ ಮೂರನೆಯ ಸಭೆಯಲ್ಲಿ ಭಾರತ ಸರ್ಕಾರವು ಉದ್ಯೋಗ ವಿನಿಮಯ ಕೇಂದ್ರಗಳ ಸ್ಥಾಪನೆಯನ್ನು ಪ್ರಾರಂಭಿಸಬೇಕು ಎಂಬ ಸರ್ವಾನುಮತದ ಅಭಿಪ್ರಾಯವು ವ್ಯಕ್ತವಾಯಿತು. ತಾಂತ್ರಿಕ ಸಿಬ್ಬಂದಿ ಬೇಕೆಂದು ಪ್ರಕಟಿಸುವುದನ್ನು ನಿಷೇಧಿಸಬೇಕೆಂಬ ಕೇಂದ್ರ ಸರ್ಕಾರದ ಸೂಚನೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಈ ಎರಡು ಯೋಜನೆಗಳನ್ನೂ ಈಗ ಜಾರಿಗೊಳಿಸಲಾಗಿದೆ. ತಾಂತ್ರಿಕ ಸಿಬ್ಬಂದಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಅನೇಕ ಕೇಂದ್ರಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

೧) ವಿವಾದಗಳನ್ನು ತೀರ್ಮಾನ ಮಾಡುವ ವ್ಯವಸ್ಥೆಯು ಸತತವಾಗಿ ಕೆಲಸ ಮಾಡುವಂತೆ ಮಾಡಬೇಕು ಮತ್ತು

೨) ಕಾರ್ಮಿಕ ವಿವಾದಗಳಿಗೆ ಸಂಬಂಧಿಸಿದ ಈಗಿನ ಕಾರ್ಯನೀತಿಯನ್ನು ಪೂರ್ತಿಯಾಗಿ ಕೈಬಿಡಬೇಕು ಮತ್ತು ಈಗಿನ ೧೯೨೯ರ ಕಾರ್ಮಿಕರ ವಿವಾದಗಳ ಶಾಸನ ಬದಲು ಒಂದು ಹೊಸ ಶಾಸನವನ್ನು ಜಾರಿಗೊಳಿಸಿ, ಕಾರ್ಮಿಕರು ತಾವೇ ಆಂತರಿಕವಾಗಿ ರಾಜಿ ಮಾಡಿಕೊಳ್ಳಲು ಪ್ರೋತ್ಸಾಹ ಕೊಡಬೇಕು ಎಂಬುದು ಸಭೆಯಲ್ಲಿದ್ದವರೆಲ್ಲರ ಅಭಿಪ್ರಾಯವಾಗಿತ್ತು. ಹೊಸ ಶಾಸನ ಮಾಡಬೇಕೆಂಬ ಸಲಹೆಯನ್ನು ಇನ್ನೂ ಪರಿಶೀಲಿಸಲಾಗುತ್ತಿದೆ. ಅಷ್ಟರಲ್ಲಿ, ಕೇಂದ್ರ ಸರ್ಕಾರವು ಮೇಲ್ಕಾಣಿಸಿದ ವಿಷಯ (೧)ನ್ನು ಪ್ರಾಂತ್ಯ ಸರ್ಕಾರಗಳ ಗಮನಕ್ಕೆ ತಂದಿದ್ದು, ಅವು ಸಾಧ್ಯವಾದಷ್ಟು ಮಟ್ಟಿಗೆ ಸಾತತ್ಯವನ್ನು ಕಾಯ್ದುಕೊಂಡು ಬಂದಿವೆ. ಕಾರ್ಮಿಕರ ವಿವಾದಗಳ ಬಗೆಗೆ ಹೊಸ ಶಾಸನ ಮಾಡಬೇಕೆಂಬ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

## ಬೆವಿನ್ ಪ್ರಶಿಕ್ಷಣ ಯೋಜನೆ

ಈ ಸಭೆಯಲ್ಲಿ ಮತ್ತೂ ಒಂದು ವಿಷಯ ತೀರ್ಮಾನವಾಯಿತು. ಅದೆಂದರೆ, ಕಾರ್ಮಿಕ ಸಂಘಟನೆಗಳು ಬೆವಿನ್ ಪ್ರಶಿಕ್ಷಿತರನ್ನು ಆರಿಸಲು ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಾಲಯದ ಜೊತೆಗೆ ಸೇರಬೇಕು ಮತ್ತು ಅಭ್ಯರ್ಥಿಗಳನ್ನು ಆರಿಸಲು ಈ ನ್ಯಾಯಾಲಯಗಳು ತಮ್ಮ ಪ್ರದೇಶದಲ್ಲಿರುವ ಮುಖ್ಯ ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸಬೇಕು. ಪ್ರಶಿಕ್ಷಿತರನ್ನು ಆರಿಸುವ ಈ ವಿಧಾನವು ಪರಿಶೀಲನೆಯಲ್ಲಿದೆ. ಕಾರ್ಮಿಕ ವಸತಿ, ಶಿಕ್ಷಣ, ಮುಂತಾದವುಗಳಿಗಾಗಿ ಒಂದು ಕಲ್ಯಾಣ ನಿಧಿಯನ್ನು ಅಭಿವೃದ್ಧಿಪಡಿಸಬೇಕು ಎಂದು ಕಾರ್ಮಿಕ ಕಲ್ಯಾಣದ ಬಗೆಗೆ ಸಮಿತಿ ಮಾಡಿರುವ ಸೂಚನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ, ಜ್ಞಾಪನಾಪತ್ರವು, ಒಂದು ಕಾರ್ಯ ಸಾಧ್ಯವಾದ ಯೋಜನೆಯನ್ನು ರಚಿಸುವಲ್ಲಿ ಬಹಳ ಅಡ್ಡಿಗಳಿವೆ, ಎಂದು ತಿಳಿಸಿದೆ.

ಜನವರಿ ೧೯೪೩ರಲ್ಲಿ ಸೇರಿದ ಸ್ಥಾಯಿ ಕಾರ್ಮಿಕ ಸಮಿತಿಯ ಎರಡನೆಯ ಸಭೆಯಲ್ಲಿ ಒಂದು ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಅದರಲ್ಲಿ, ಉದ್ಯಮಿಗಳ ದವಸದ ಅಂಗಡಿಗಳು, ಮಂಜೂರಾತಿ ಪಡೆದ ಮತ್ತು ಮಾನ್ಯತೆ ಪಡೆದ ಕಾರ್ಮಿಕ ಸಂಘಗಳ ಸಂಸ್ಥೆಗಳು, ಅಥವಾ ಕಾರ್ಮಿಕ ಪ್ರತಿನಿಧಿಗಳ ಅಂಗಡಿಗಳು ಆಹಾರ ಧಾನ್ಯಗಳನ್ನು ಕೈಗಾರಿಕೆಯ ಕಾರ್ಮಿಕರಿಗೆ ಹಂಚಬೇಕೆಂದೂ, ಕೈಗಾರಿಕೆಯ ಕಾರ್ಮಿಕರು ಸಹಕಾರೀ ಆಹಾರ ಧಾನ್ಯಗಳ ಅಂಗಡಿಗಳನ್ನು ತೆರೆಯಲು ಪ್ರೋತ್ಸಾಹಿಸಬೇಕೆಂದೂ ಶಿಫಾರಸು ಮಾಡಲಾಯಿತು. ಈ ಶಿಫಾರಸುಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ದೊಡ್ಡ ನಗರ ಮತ್ತು ಪಟ್ಟಣಗಳಲ್ಲಿ ರೇಷನ್ ಪದ್ಧತಿ ಪ್ರಾರಂಭಿಸಿರುವುದರಿಂದ ಹಾಗೂ ಇನ್ನು ಮುಂದೆ ಅದನ್ನು ಸಣ್ಣ ಪಟ್ಟಣಗಳಿಗೂ ವಿಸ್ತರಿಸುವುದರಿಂದ, ಈಗಿರುವ ಶಿಫಾರಸುಗಳು ಅಪ್ರಸ್ತುತವಾಗಿವೆ. ಆದರೆ, ರೇಷನ್ ಅಧಿಕಾರಿಗಳು, ಸಾಧ್ಯವಾದಷ್ಟು ಉದ್ಯಮಿಗಳ ದವಸದ ಅಂಗಡಿಗಳನ್ನು ಬಳಸಿಕೊಳ್ಳುತ್ತಾರೆ.

## ನ್ಯಾಯ ವೇತನ ನಿಯಮ

ಜ್ಞಾಪನಾಪತ್ರವು ಮೇ ೧೯೪೩ರಲ್ಲಿ ನಡೆದ ಮೂರನೆ ಸ್ಥಾಯಿ ಕಾರ್ಮಿಕ ಸಮಿತಿಯ ಸಭೆಯಲ್ಲಿ ಅಂಗೀಕೃತವಾದ ನ್ಯಾಯಯುತ ಒಪ್ಪಂದವನ್ನು ಪ್ರಸ್ತಾಪಿಸಿದ್ದು, ಆ ಒಪ್ಪಂದವು ಸರ್ಕಾರಿ ಕಂಟ್ರಾಕ್ಟುಗಳ ಕಾರ್ಮಿಕರಿಗೆ ನ್ಯಾಯಯುತ ಕೂಲಿ ಕೊಡುವಂತೆ ವಿಧಿಸುತ್ತದೆ. ಕೇಂದ್ರೀಯ ಕಾಮಗಾರಿ ಒಪ್ಪಂದಗಳಲ್ಲಿ ಈಗಾಗಲೇ 'ನ್ಯಾಯಯುತ ಕೂಲಿ' ನಿಯಮವನ್ನು ಸೇರಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಎಲ್ಲೆಲ್ಲಿ ದೊಡ್ಡ ಕೈಗಾರಿಕೆಗಳು ಇರುತ್ತವೆಯೋ ಅಲ್ಲೆಲ್ಲಾ, ಸಾಧ್ಯವಾದಷ್ಟು ಮಟ್ಟಿಗೆ ಕಾರ್ಮಿಕ ಅಧಿಕಾರಿಗಳನ್ನು ನೇಮಿಸಬೇಕು ಎಂಬ ಶಿಫಾರಸನ್ನು, ಕೇಂದ್ರ ಸರ್ಕಾರವು ತನ್ನ ಅಧೀನದಲ್ಲಿರುವ ಕೈಗಾರಿಕೆಗಳಿಗೆ ಅನ್ವಯಿಸುತ್ತಿದೆ. ಹಾಗೆ ಮಾಡಲು ಪ್ರಾಂತ್ಯ ಸರ್ಕಾರಗಳನ್ನೂ, ರಾಜ್ಯ ಸರ್ಕಾರಗಳನ್ನೂ, ಖಾಸಗಿ ಉದ್ಯಮಿಗಳನ್ನೂ ಕೇಳಿಕೊಳ್ಳಲಾಗಿದೆ ಮತ್ತು ಭಾರತೀಯ ಗಣಿ ಮಾಲೀಕರ ಸಂಘದಿಂದ ಪಡೆದ ಒಂದು ವರದಿಯ ಪ್ರಕಾರ, ಅವರೂ ಈ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ.

ವಿವಾದಗ್ರಸ್ತ ವಿಷಯಗಳನ್ನು ತೀರ್ಪಿಗಾಗಿ ಕಳುಹಿಸುವ ಆಜ್ಞೆಯಲ್ಲಿ ವಿವಾದವನ್ನು ಕುರಿತು ಸ್ಪಷ್ಟವಾಗಿ ಹೇಳಬೇಕು ಎಂಬುದಾಗಿ ಸಮಿತಿ ಸೂಚಿಸುತ್ತದೆ, ಹಾಗೂ ಅದಕ್ಕನುಗುಣವಾಗಿ ಭಾರತ ರಕ್ಷಣಾ ನಿಯಮ ೧೮(ಎ)ಯಲ್ಲಿ ತಿದ್ದುಪಡಿ ಮಾಡಲಾಗಿದೆ. ಯಾವ ಕಾರ್ಮಿಕನ ನಡತೆಯು ತನಿಖೆಗೆ ಒಳಪಟ್ಟಿದೆಯೋ ಅಥವಾ ಯಾರು ನೇರವಾಗಿ ಈ ವಿವಾದಗಳಿಗೆ ಸಂಬಂಧಿಸಿದ್ದಾರೋ, ಅವರನ್ನು ಉದ್ಯಮಿಗಳು ಕೆಲಸದಿಂದ

ತೆಗೆಯಬಾರದು. ಆದರೆ, ವಿವಾದಕ್ಕೆ ಸಂಬಂಧಿಸಿದ ದುರ್ನಡತೆಗಾಗಿ, ಅಥವಾ ತೀರ್ಪುಗಾರರ ಅಥವಾ ನಿಗದಿಪಡಿಸಿದ ಅಧಿಕಾರಿಗಳ ಒಪ್ಪಿಗೆ ಪಡೆದು, ಅವರನ್ನು ಕೆಲಸದಿಂದ ತೆಗೆಯಬಹುದು. ತೀರ್ಪಿಗಾಗಿ ಕಳಿಸುವ ಆಜ್ಞೆಯಲ್ಲಿನ ಇಂಥ ಅವಕಾಶದ ಅಪೇಕ್ಷಣೀಯತೆಯ ಕಡೆಗೆ ಪ್ರಾಂತ್ಯ ಸರ್ಕಾರಗಳ ಗಮನವನ್ನು ಸೆಳೆದಿದೆ. ಕೆಲವು ವಿಷಯ ಕೈಗಾರಿಕೆಗಳಿಗೆ ಅನ್ವಯಿಸುವಂತೆ, ಕೂಲಿ, ಸಂಪಾದನೆ ಮತ್ತು ಕೆಲಸದ ಸಮಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸುವ ಕಾರ್ಯ ಅಖಿಲ ಭಾರತ ಮಟ್ಟದಲ್ಲಿ ನಡೆದಿದ್ದು, ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ.

**ಅನೈಚ್ಛಿಕ ನಿರುದ್ಯೋಗ**

ಕಲ್ಲಿದ್ದಲು, ಕಚ್ಚಾ ಸಾಮಗ್ರಿಗಳು, ಮುಂತಾದವುಗಳ ಕೊರತೆಯಿಂದಾಗಿ ಕಡ್ಡಾಯ ನಿರುದ್ಯೋಗಕ್ಕೊಳಗಾದ ಕಾರ್ಮಿಕರಿಗೆ ಯಾವುದಾದರೊಂದು ರೀತಿಯ ಪರಿಹಾರ ಆವಶ್ಯಕ ಎಂಬುದನ್ನು ಐದನೇ ಕಾರ್ಮಿಕ ಸಮ್ಮೇಳನದ ಸೆಪ್ಟೆಂಬರ್ ೧೯೪೩ರ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಕೇಂದ್ರ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ, ಅದರಲ್ಲಿ ಅಡಕವಾಗಿರುವ ಪರಿಹಾರಕ್ಕೆ ಸಂಬಂಧಿಸಿದ ತತ್ವಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಂಡಿದೆ ಹಾಗೂ ಸಂಬಂಧಿತ ಸಂಸ್ಥಾನಗಳ ಗಮನವನ್ನೂ ಈ ಸುತ್ತೋಲೆಯ ಕಡೆ ಸೆಳೆಯಲಾಗಿದೆ. ಈ ಅಧಿವೇಶನದಲ್ಲಿ ಕಾರ್ಮಿಕರು, ತಮಗೆ ಶಾಸಕಾಂಗಗಳಲ್ಲಿಯೂ, ಸ್ಥಳೀಯ ಮಂಡಳಿಗಳಲ್ಲಿಯೂ, ಶಾಸನ ಸಮಿತಿಗಳಲ್ಲಿಯೂ ಸಾಕಷ್ಟು ಪ್ರಾತಿನಿಧ್ಯ ಬೇಕೆಂದು ಬಲವಾಗಿ ವಾದಿಸಿದರು. ಈ ವಿಷಯ ಪರಿಶೀಲನೆಯಲ್ಲಿದೆ, ಹಾಗೂ ಜ್ಞಾಪನಾಪತ್ರದ ಪ್ರಕಾರ, ಕಾರ್ಮಿಕರ ಪ್ರತಿನಿಧಿಗಳು, ಈಗ ಪುನಾರಚನಾ ಕಾರ್ಯನೀತಿ ಸಮಿತಿಗಳು, ಕೇಂದ್ರ ಆರೋಗ್ಯ ಸರ್ವೇಕ್ಷಣೆ ಮತ್ತು ಅಭಿವೃದ್ಧಿ ಸಮಿತಿ ಮತ್ತು ಕೇಂದ್ರ ಆಹಾರ ಸಲಹಾ ಸಮಿತಿಗಳಂಥ 'ಕೇಂದ್ರ' ಸರ್ಕಾರದ ಸಮಿತಿಗಳಲ್ಲಿದ್ದಾರೆ.

**ಕೂಲಿ ಮತ್ತು ಸಂಪಾದನೆ**

ಕೂಲಿ ಮತ್ತು ಸಂಪಾದನೆ, ಉದ್ಯೋಗ ಮತ್ತು ವಸತಿ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಸಂಬಂಧಿಸಿದ ಪ್ರಶ್ನೆಯನ್ನು ತನಿಖೆ ಮಾಡುವುದಕ್ಕಾಗಿ ಒಂದು ವ್ಯವಸ್ಥೆಯನ್ನು ರೂಪಿಸಬೇಕೆಂಬ ನಿರ್ಣಯವನ್ನು ಈ ಅಧಿವೇಶನವು ಅಂಗೀಕರಿಸಿತು. ಸಾಕಷ್ಟು ವಿಷಯಗಳನ್ನು ಒದಗಿಸುವುದು ಮತ್ತು ಅದರ ಆಧಾರದ ಮೇಲೆ, ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವಂಥ ಒಂದು ಕಾರ್ಯ ನೀತಿಯನ್ನು ಯೋಜಿಸುವುದು ಇದರ ಉದ್ದೇಶವಾಗಿತ್ತು. ಈ ನಿರ್ಣಯಕ್ಕೆ ಪೂರಕವಾಗಿ, ಒಂದು ಕಾರ್ಮಿಕ ತನಿಖಾ ಸಮಿತಿಯನ್ನು ರಚಿಸಲಾಗಿದೆ ಹಾಗೂ ಅದರ ವರದಿಯನ್ನು ೧೯೪೫ರ ಮಧ್ಯದೊಳಗಾಗಿ ಪಡೆಯಬಹುದೆಂಬ ನಿರೀಕ್ಷೆ ಇದೆ. ೨೫೦ ಅಥವಾ ಅದಕ್ಕಿಂತ ಹೆಚ್ಚು ಜನರನ್ನು ನೇಮಕ ಮಾಡಿಕೊಳ್ಳುವ ಕೈಗಾರಿಕಾ ಸಂಸ್ಥೆಗಳಲ್ಲಿ ಸ್ಥಾಯಿ ಆಜ್ಞೆಗಳನ್ನು ಜಾರಿಗೆ ತರುವ ಉದ್ದೇಶದಿಂದ ಪ್ರಾಂತ್ಯ ಸರ್ಕಾರ ಮತ್ತು ಸಂಸ್ಥಾನಗಳೊಡನೆಯೂ, ಉದ್ಯಮಿಗಳು ಮತ್ತು ಕಾರ್ಮಿಕರ ಸಂಘಗಳೊಡನೆಯೂ ಸಮಾಲೋಚನೆ ನಡೆಸಲಾಯಿತೆಂದೂ, ಭಾರತದ ರಕ್ಷಣಾ ನಿಯಮಗಳ ಹೆಸರಿನಲ್ಲಿ ಬಲಾತ್ಕಾರ ಮಾಡುವ ಅಧಿಕಾರಕ್ಕೆ ಸಾರ್ವತ್ರಿಕ ವಿರೋಧವಿತ್ತೆಂದೂ ಜ್ಞಾಪನಾಪತ್ರ ತಿಳಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಶೀಘ್ರವಾಗಿ ಒಂದು ಶಾಶ್ವತ ಶಾಸನವನ್ನು ಜಾರಿಗೆ ತರಬೇಕೆಂದು ಸೂಚಿಸಲಾಗಿದೆ. ಈ ಮಧ್ಯೆ, ಎರಡು ಅಖಿಲ ಭಾರತ ಉದ್ಯಮಿಗಳ ಸಂಘಗಳನ್ನು

ತಕ್ಷಣವೇ ಸ್ಥಾಯಿ ಆಜ್ಞೆಗಳನ್ನು ರೂಪಿಸಲು ಕೇಳಲಾಗಿದೆಯಲ್ಲದೆ, ಶಾಸಕಾಂಗದ ಪ್ರಕ್ರಿಯೆಗಳು ಪೂರ್ಣವಾಗುವವರೆಗೆ ಕಾಯಬಾರದೆಂದೂ ತಿಳಿಸಲಾಗಿದೆ, ಸ್ಥಾಯಿ ಆಜ್ಞೆಗಳನ್ನು ರೂಪಿಸುವಲ್ಲಿ ಉದ್ಯಮಿಗಳಿಗೆ ಸಹಾಯಕವಾಗುವಂತೆ ಯೋಜಿಸಲಾದ ಒಂದು ಜ್ಞಾಪನಾಪತ್ರವನ್ನು ಸುತ್ತೋಲೆಯಂತೆ ಕಳಿಸಲಾಗಿದೆ. ನಾಲ್ಕನೆಯ ಸ್ಥಾಯಿ ಕಾರ್ಮಿಕ ಸಮಿತಿಯ ಸಭೆಯಲ್ಲಿ ನಡೆದ ಶಾಸನಬದ್ಧ ವೇತನ ನಿಯಂತ್ರಣದ ಮೇಲಿನ ಚರ್ಚೆಗಳ ಪರಿಣಾಮವಾಗಿ, ವೇತನಗಳನ್ನು ನಿಯಂತ್ರಿಸುವುದಕ್ಕಾಗಿ ಒಂದು ವ್ಯವಸ್ಥೆಯನ್ನು (ಸಾಧನ) ರೂಪಿಸುವ ಬಗೆಗೆ ಸಾಕಷ್ಟು ಒಮ್ಮತವೇರ್ಪಟ್ಟಿತು. ಈ ಶಾಸನದಡಿಯಲ್ಲಿ ಯಾವ ಯಾವ ಕೈಗಾರಿಕೆಗಳು ಬರಬೇಕೆಂಬ ಪ್ರಶ್ನೆಯು ಈಗಿನ ಕಾರ್ಮಿಕ ಸಮ್ಮೇಳನದ ಅಧಿವೇಶನದ ವಿಷಯಗಳ ಪಟ್ಟಿಯಲ್ಲಿದೆ.

**ಕೈಗಾರಿಕಾ ಕ್ಯಾಂಟೀನುಗಳು**

ಉದ್ಯೋಗದ ಮಿತಿಗಳನ್ನು ನಿರ್ಧರಿಸುವ ಪ್ರಶ್ನೆಯನ್ನು ತನಿಖೆ ಮಾಡುವ ಸಲುವಾಗಿ ನಾಲ್ಕು ಪ್ರಾಂತ್ಯಗಳಲ್ಲಿ, ಅಂದರೆ, ಮುಂಬಯಿ, ಸಂಯುಕ್ತ ಪ್ರಾಂತ್ಯಗಳು, ಬಂಗಾಳ ಮತ್ತು ಬಿಹಾರಗಳಲ್ಲಿ, ಸಮಿತಿಗಳನ್ನು ರಚಿಸಲಾಗಿದೆ ಮತ್ತು ಈ ಸಮಿತಿಗಳ ಶಿಫಾರಸುಗಳಿಗಾಗಿ ನಾವು ಕಾಯುತ್ತಿದ್ದೇವೆ. ಈ ಸಭೆಯಲ್ಲಿ ಸೂಚಿತವಾದಂತೆ, ಕಾರ್ಮಿಕರ ಪ್ರತಿನಿಧಿಗಳು, ಉದ್ಯೋಗ ಸಮಿತಿಗಳ ಮೂಲಕ, ಕೇಂದ್ರೀಯ ವಿನಿಮಯ ಕೇಂದ್ರಗಳ ಜೊತೆ ಸೇರಿದ್ದಾರೆ.

ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರ ಕ್ಯಾಂಟೀನುಗಳಿಗೆ ಪ್ರೋತ್ಸಾಹ ಕೊಡಲು ಕೇಂದ್ರ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳನ್ನೂ ಜ್ಞಾಪನಾಪತ್ರವು ಪ್ರಸ್ತಾಪಿಸುತ್ತದೆ. ಸರ್ಕಾರ ಅಥವಾ ಕಾರ್ಮಿಕರು ಅಥವಾ ಇಬ್ಬರೂ ಜೊತೆಗೂಡಿ ನಡೆಸುತ್ತಿರುವ ಕ್ಯಾಂಟೀನುಗಳಿಗೆ ಹಾಗೂ, ಕೆಲವು ಷರತ್ತುಗಳ ಮೇಲೆ, ಕಂಟ್ರಾಕ್ಟರುಗಳು ನಡೆಸುತ್ತಿರುವ ಕ್ಯಾಂಟೀನುಗಳಿಗೆ ಸರ್ಕಾರವು ಬಾಡಿಗೆರಹಿತ ಸ್ಥಳವನ್ನೂ, ಪುಕ್ಕಟೆ ಪೀಠೋಪಕರಣಗಳನ್ನೂ, ಅಡಿಗೆ ಪಾತ್ರೆಗಳನ್ನೂ ಕೊಟ್ಟಿದೆ. ಯೋಗ್ಯ ಬೆಲೆಯ ಆಹಾರ ಧಾನ್ಯಗಳನ್ನೂ ಕೊಡಲಾಗಿದೆ.

## ೩೭
## ಕಾರ್ಖಾನೆಗಳ (ಎರಡನೆ ತಿದ್ದುಪಡಿ) ಮಸೂದೆ*
### ಕಾರ್ಖಾನೆಗಳ ಕಾರ್ಮಿಕರಿಗೆ ವೇತನ ಸಹಿತ ರಜೆ

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ (ಕಾರ್ಮಿಕ ಸದಸ್ಯ)**

ಮಾನ್ಯರೆ,

“ನಾನು ಈ ಮಸೂದೆಯ ಮಂಡನೆಯ ಮೂಲಕ ೧೯೪೩ನೆಯ ಕಾರ್ಖಾನೆಯ ಮಸೂದೆಗೆ (ಎರಡನೆ ತಿದ್ದುಪಡಿ) ಹೆಚ್ಚಿನ ತಿದ್ದುಪಡಿಗಾಗಿ ಕೋರಿಕೆ ಸಲ್ಲಿಸುತ್ತಿದ್ದು, ಈ ಮಸೂದೆಯನ್ನು ಸರ್ವಶ್ರೀಗಳಾದ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ೧–೧೧–೧೯೪೪, ಪು : ೮೯–೯೧.

ನವಾಬ್ ಸಿದ್ದಿಕ್ಕಿ ಆಲೀ ಖಾನ್, ಖಾನ್ ಬಹದ್ದೂರ್ ಷೇಕ್ ಫಜಲ್ ಎ ಹಕ್ ಪಿರಾಚಾ, ಆರ್.ಆರ್. ಗುಪ್ತಾ, ಎ.ಸಿ. ಇನ್‌ಸ್ಕಿಪ್, ಸರ್ ವಿಠಲ ಎನ್. ಚಂದಾವರಕರ್, ರಾವಬಹದ್ದೂರ್ ಎನ್. ಶಿವರಾಜ, ಎನ್.ಎಂ. ಜೋಷಿ, ಡಿ.ಎಸ್. ಜೋಷಿ ಹಾಗೂ ಮಂಡಿಸುವವರ ಮತ್ತು ಇತರ ಸದಸ್ಯರೊಂದಿಗೆ, ಸಮಿತಿಯ ರಚನೆಗೆ ಅವಶ್ಯವಿರುವ ಐವರು ಸದಸ್ಯರೊಂದಿಗೆ ರಚಿಸಲು" ಸೂಚಿಸುತ್ತೇನೆ.

ಪ್ರಮುಖವಾಗಿ ಈ ಕಾನೂನಿನಲ್ಲಿ ಅಡಕವಾಗಿರುವ ವಿಷಯುಗಳನ್ನು ಸರಳವಾಗಿ ತಿಳಿದುಕೊಳ್ಳುವುದಕ್ಕೋಸ್ಕರ, ನಾನು ಅವುಗಳನ್ನು ಎರಡು ಭಾಗಗಳಾಗಿ ವಿಂಗಡಿಸಿ ಸದನದ ಸಮೀಕ್ಷೆಗಾಗಿ ಮಂಡಿಸಲು ಬಯಸುತ್ತೇನೆ. ಮಸೂದೆಯ ಮೊದಲನೆಯ ಭಾಗವು, ಕಡ್ಡಾಯ ರಜಾದಿನಗಳ ನಷ್ಟಕ್ಕೆ ಪರ್ಯಾಯವಾಗಿ ಪರಿಹಾರ ಅಥವಾ ಪ್ರತಿಫಲ ಪಡೆದ ರಜಾದಿನಗಳ ಬಗೆಗೆ ಇದೆ. ಈಗಾಗಲೇ ಸದಸ್ಯರಿಗೆ ತಿಳಿದಿರುವಂತೆ ಕಾರ್ಖಾನೆಯ ಕಾನೂನಿನ ೩೫ನೆಯ ಪ್ರಕರಣದಂತೆ, ಕಾರ್ಖಾನೆಯ ಮಾಲೀಕ ಅಥವಾ ಕಾರ್ಯನಿರ್ವಾಹಕರು, ಕಾರ್ಖಾನೆಯ ಪ್ರತಿಯೊಬ್ಬ ವಯಸ್ಕ ಕಾರ್ಮಿಕನಿಗೆ ಒಂದು ದಿನದ ರಜೆಯನ್ನು ನೀಡಲೇಬೇಕೆಂದು ಕಡ್ಡಾಯ ನಿಯಮವಿದೆ. ಆದರೆ ಈ ೩೫ನೆಯ ಪ್ರಕರಣದ ನ್ಯಾಯ ನಿಯಮಗಳು ಇದೇ ಕಾನೂನಿನ ೪೩ ಹಾಗೂ ೪೪ನೆಯ ಪ್ರಕರಣದನ್ವಯ ನಿಯಮಗಳನ್ನು ಗಮನದಲ್ಲಿರಿಕೊಂಡು ಅವುಗಳ ಉಲ್ಲಂಘನೆಯಾಗದಂತೆ ರಚಿಸಲಾಗಿದೆ. ೪೩ ಹಾಗೂ ೪೪ನೇ ಪ್ರಕರಣದಂತೆ ಕಾರ್ಖಾನೆಯ ಇನ್ಸ್‌ಪೆಕ್ಟರು ಅಥವಾ ಮೇಲಧಿಕಾರಿಯು ಕಾರ್ಖಾನೆಯ ಮಾಲೀಕರಿಗೆ ಅಥವಾ ಕಾರ್ಯನಿರ್ವಾಹಕರಿಗೆ ೩೫ನೆಯ ಪ್ರಕರಣದ ನ್ಯಾಯ ನಿಯಮಗಳಿಂದ ವಿನಾಯಿತಿ ನೀಡಬಹುದಾಗಿದೆ. ಆದರೆ ಈ ವಿಧವಾದ ವಿನಾಯಿತಿಗಳನ್ನು ನೀಡಿದಾಗ ಪರ್ಯಾಯ ಅಥವಾ ಪರಿಹಾರ ರಜಾದಿನಗಳಿಂದ ಪರಿಹಾರ ನೀಡಬೇಕು. ಏಕೆಂದರೆ ಕಾರ್ಮಿಕನ ಕಾರ್ಯಕ್ಷಮತೆ ಹಾಗೂ ಆರೋಗ್ಯದ ದೃಷ್ಟಿಯಿಂದ ಈ ರಜಾದಿನಗಳ ಆವಶ್ಯಕತೆಯನ್ನು ಅರಿತೇ ಇದನ್ನು ಮಸೂದೆಯಲ್ಲಿ ನಿಗದಿ ಪಡಿಸಲಾಗಿದೆ. ಆದರೆ ಈಗ ಜಾರಿಯಲ್ಲಿರುವ ಕಾನೂನಿನಲ್ಲಿ ಈ ವಿಧವಾದ ಪರಿಹಾರ ರಜೆಯ ದಿನಗಳಿಗೆ ಆಸ್ಪದವೇ ಇಲ್ಲ. ಈ ಕಾರಣದಿಂದಾಗಿಯೇ ೩ನೇ ಕಲಮ್ ಅನ್ನು ಈ ಮಸೂದೆಯಲ್ಲಿರುವ ಕೊರತೆಯನ್ನು ನಿವಾರಿಸಲೆಂದೇ ಸೇರಿಸಲಾಗಿದೆ. ಈ ಕ್ರಮದಿಂದಾಗಿ ಈಗ ಪ್ರಾಂತೀಯ ಸರಕಾರಗಳಿಗೆ ಅಲ್ಪಸ್ವಲ್ಪ ಹೊಂದಾಣಿಕೆಯೊಂದಿಗೆ ೩೫ನೆ ಪ್ರಕರಣದಡಿಯಲ್ಲಿ ಕಾರ್ಮಿಕರಿಗೆ ದೊರೆಯಬಹುದಾದ ಪರಿಹಾರ ರಜಾದಿನಗಳ ವಿನಾಯಿತಿ ನೀಡಲು ಅವಕಾಶ ದೊರೆತಂತಾಗುತ್ತದೆ. ಇದು ಕಾನೂನಿನ ಮೊದಲನೆಯ ಭಾಗವಾಗಿದೆ.

**ಕಾರ್ಮಿಕರ ಒಡಂಬಡಿಕೆ**

ಈ ಮಸೂದೆಯ ಎರಡನೆಯ ಭಾಗದ ಬಗೆಗೆ ಹೇಳಬಹುದಾದ ಸಂಗತಿ ಎಂದರೆ, ವೇತನ ಸಹಿತದ ರಜಾದಿನಗಳು. ಮೊಟ್ಟಮೊದಲಿಗೆ ಈ ಸದನಕ್ಕೆ ಈ ಮಸೂದೆಯ ಮೂಲವನ್ನೇ ಅರುಹಬೇಕಾಗಿದೆ.

ಈ ಸದನದ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ, ೧೯೩೬ರಲ್ಲಿ ಜರುಗಿದ ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನವು ವೇತನ ಸಹಿತ ರಜಾದಿನಗಳ ಬಗೆಗೆ ಒಂದು ನಿರ್ಣಯವನ್ನು ಕೈಕೊಂಡಿತು. ಆದರೆ ಈ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ತೆರಳಿದ ಭಾರತೀಯ ಸರಕಾರವು ಈ ನಿರ್ಣಯಕ್ಕೆ ತನ್ನ ಸಹಮತ ನೀಡಲಿಲ್ಲ. ಅಲ್ಲದೆ ಈ ದಿಶೆಯಲ್ಲಿ ಭಾರತೀಯ ಸರಕಾರವು ದಿನಾಂಕ ೨೬ ಜುಲೈ ೧೯೩೭ ರಂದು ಈ ಸದನದಲ್ಲಿ ಒಂದು ನಿರ್ಣಯವನ್ನು ಮಂಡಿಸುವುದರೊಂದಿಗೆ ತನ್ನ ಅಸಮ್ಮತಿಯನ್ನು ಕೂಡಾ ಸೂಚಿಸಿತು ಮತ್ತು ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದ ಸದಸ್ಯರು ಸರಕಾರವು ಈ ವಿಷಯವನ್ನು

ಪ್ರಾಂತೀಯ ಸರಕಾರ ಹಾಗೂ ಮಾಲೀಕರ ಮತ್ತು ನೌಕರರ ಸಂಘಗಳೊಂದಿಗೆ ಚರ್ಚೆಮಾಡಿ ಪೂರ್ಣವಾಗಿ ನಿರಾಕರಿಸದೇ ಭಾಗಶಃ ಒಪ್ಪಿಗೆಯನ್ನಾದರೂ ನೀಡಬೇಕೆಂದು ಕೋರಿದರು. ಹೀಗಾಗಿ ಈ ಕಾನೂನಿನ ಎರಡನೆಯ ಭಾಗದಲ್ಲಿ ಹೇಳಲಾದ ವೇತನ ಸಹಿತ ರಜಾದಿನಗಳ ಬಗೆಗೆ ಹಲವಾರು ವರ್ಷಗಳಿಂದ ಪರೀಕ್ಷೆ, ಪರಿಶೀಲನೆ, ಹಾಗೂ ವಿಚಾರ ವಿನಿಮಯ ನಡೆದೇ ಇದೆ.

**ನಿರಂತರ ಕಾರ್ಖಾನೆಗಳು**

ಈ ಮಸೂದೆಯನ್ನೇ ಮರುಪರಿಶೀಲನೆ ಮಾಡಿದಾಗ ತಿಳಿದುಬರುವ ಅಂಶವೆಂದರೆ ಈ ಮಸೂದೆಯು ಕೇವಲ ನಿರಂತರ ಕಾರ್ಖಾನೆಗಳಿಗೆ ಮಾತ್ರ ಅನ್ವಯಿಸುವುದೇ ಹೊರತು ಎಲ್ಲಾ ಕಾರ್ಖಾನೆಗಳಿಗೆ ಅಲ್ಲ. ಆದುದರಿಂದ ಈ ಕಾನೂನಿನ ವ್ಯಾಪ್ತಿ ನಿಸ್ಸಂದೇಹವಾಗಿ ಸೀಮಿತವಾಗಿದ್ದು ೧೯೩೬ರ ಒಡಂಬಡಿಕೆಯಲ್ಲಿ ಹೇಳಿದಂತೆ ವ್ಯಾಪಕವಾಗಿಲ್ಲ. ಹೀಗಾಗಿ ಈ ಮಸೂದೆಯಲ್ಲಿ ಅಡಕವಾಗಿರುವ ವಿಷಯಗಳನ್ನು ನಾನು ನಾಲ್ಕು ಭಾಗಗಳಲ್ಲಿ ವಿಂಗಡಿಸಬಯಸುತ್ತೇನೆ. ಇದರಿಂದಾಗಿ ವೇತನ ಸಹಿತದ ರಜಾದಿನಗಳ ಬಗೆಗೆ ಅನಿವಾರ್ಯ ಪರಿಶೀಲನೆ ನಾಲ್ಕು ಭಾಗಗಳಲ್ಲಿ ಆದಂತೆ ಆಗುತ್ತದೆ. ನನಗೆ ತಿಳಿದಂತೆ ಇದೊಂದು ಉತ್ತಮಮಾರ್ಗ.

(೧) ರಜೆಯ ಅವಧಿ, (೨) ರಜೆಗೆ ಇರಬಹುದಾದ ಅರ್ಹತೆ ಹಾಗೂ ಹಕ್ಕು, (೩) ಪರಿಮಿತಿಗಳು, (೪) ರಜೆಯ ಅವಧಿಯಲ್ಲಿ ನೀಡಬೇಕಾದ ವೇತನ.

ಮೊದಲನೆಯ ವಿಷಯ, ಅಂದರೆ, ರಜೆಯ ಅವಧಿಯ ಬಗೆಗೆ ನೂತನ ಮಸೂದೆಯಲ್ಲಿಯ ೪೯–ಬ ಪ್ರಕರಣದಲ್ಲಿ ಹೇಳಲಾಗಿದೆ. ಈ ನೂತನ ಕಾರ್ಖಾನೆಯ ಮಸೂದೆಯಂತೆ ಒಟ್ಟಾರೆ ಒಬ್ಬ ಕಾರ್ಮಿಕನಿಗೆ ಒಂದು ವರ್ಷಕ್ಕೆ ಸತತವಾಗಿ ಏಳು ದಿನಗಳ ರಜೆ ಎಂದು ತಿಳಿಸಲಾಗಿದೆ. ಆದರೆ ಕಾರ್ಮಿಕನು ಒಂದು ವರ್ಷಪೂರ್ಣ ಸೇವೆ ಮಾಡಿದಾಗ ಮಾತ್ರ ಈ ಏಳು ದಿನಗಳ ಸತತ ರಜೆಗೆ ಅರ್ಹನಾಗುತ್ತಾನೆ. ಈ ವಿಷಯದಲ್ಲಿ ಏಳೇ ದಿನಗಳ ರಜೆಯನ್ನು ಏಕೆ ನಿಗದಿಪಡಿಸಲಾಗಿದೆ ಎಂದು ಕೇಳಿದರೆ ಅದಕ್ಕೆ ಉತ್ತರವೆಂದರೆ ೧೯೩೬ರ ಜಿನೀವಾ ಸಮ್ಮೇಳನವು ಒಂದು ವರ್ಷ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ೬ ದಿನಗಳ ರಜೆಯನ್ನು ಘೋಷಿಸಿದೆ. ಆದರೆ ನಾವು ನಮ್ಮ ನೂತನ ಕಾರ್ಖಾನೆಯಲ್ಲಿನ ೩೫ನೆ ಪ್ರಕರಣದಲ್ಲಿ ನೀಡಿದ ಒಂದು ದಿನದ ಕಡ್ಡಾಯ ರಜೆಯನ್ನೂ ಸೇರಿಸಿ, ವರ್ಷಕ್ಕೆ ಏಳು ದಿನ ಎಂದು ನಿಗದಿ ಮಾಡಿದ್ದೇವೆ.

ಎರಡನೆಯ ವಿಷಯವಾದ, ರಜೆ ಪಡೆಯಲು ಇರಬೇಕಾದ ಅರ್ಹತೆ ಅಂದರೆ ರಜೆಯನ್ನು ಯಾವ ಸಂದರ್ಭದಲ್ಲಿ ಕಾರ್ಮಿಕರು ಪಡೆಯಬಹುದು ಎಂಬುದರ ಬಗೆಗೆ ಮಸೂದೆಯಲ್ಲಿ ಈ ಕೆಳಕಂಡಂತೆ ಹೇಳಲಾಗಿದೆ. ಸಹಜವಾಗಿ ಕಾರ್ಮಿಕನು ಒಂದು ವರ್ಷ ಪೂರ್ತಿಯಾಗಿ ಸೇವೆಸಲ್ಲಿಸಿದಾಗ ಮಾತ್ರ ಏಳು ದಿನಗಳ ರಜೆಯನ್ನು ಪಡೆಯುವ ಅರ್ಹತೆಯನ್ನು ಹೊಂದಿರುತ್ತಾನೆ. ಆದರೆ ಸತತ ಒಂದು ವರ್ಷದ ಪೂರ್ಣ ಸೇವೆ ಎಂದರೆ ಏನು ಎಂಬ ಸಂಗತಿಯ ಬಗೆಗೆ, ಮಸೂದೆಯಲ್ಲಿ ಈ ಅವಧಿಯಲ್ಲಿ ಬರಬಹುದಾದ ಅಡಚಣೆಗಳನ್ನು ಗಮನಿಸಿ ಅನಿವಾರ್ಯ ಅಡಚಣೆಗಳು ರಜೆಯನ್ನು ಪಡೆಯಲು ಅಡ್ಡಿಯಾಗದಂತೆ ನೋಡಿಕೊಳ್ಳಲಾಗಿದ್ದು; ಅನಿವಾರ್ಯ ಅಡಚಣೆಗಳು ಎಂದರೆ, ಅಪಘಾತ, ಅನಾರೋಗ್ಯ, ಅಧಿಕೃತ ಘೋಷಿತ ರಜೆ, ಮುಷ್ಕರ ಹಾಗೂ ಕಾರ್ಖಾನೆಗೆ ಬೀಗಹಾಕಿದ ದಿನಗಳು ಎಂದು ತಿಳಿಸಲಾಗಿದೆ.

**ಕಡ್ಡಾಯ ನಿರುದ್ಯೋಗ**

ಮಸೂದೆಯಲ್ಲಿ ಈ ಬಗೆಗೆ ಅಂದರೆ ಕಾರ್ಖಾನೆಯ ಮಾಲೀಕ ಕಡ್ಡಾಯವಾಗಿ ಕಾರ್ಖಾನೆಯನ್ನು ೩೦ ದಿನಗಳ ಅವಧಿಯವರೆಗೆ ಮುಚ್ಚಿದ್ದಾಗ ಉದ್ಭವಿಸಬಹುದಾದ ಅಡಚಣೆ. ಈ ವಿಧವಾದ ಸಂದರ್ಭಗಳಲ್ಲಿ ಕಾರ್ಮಿಕರಿಗೆ ದೊರೆಯಬಹುದಾದ ಏಳು ದಿನಗಳ ರಜೆಗೆ ಅಪಾಯವಿಲ್ಲ. ಅಂದರೆ ಕಾರ್ಖಾನೆಯ ಮಾಲೀಕರು ಯಾವುದೇ ನೆಪಹೂಡಿ ಒಂದು ತಿಂಗಳ ವರೆಗೂ ತಮ್ಮ ಕಾರ್ಖಾನೆಯನ್ನು ಮುಚ್ಚಿದ್ದರೂ ಈ ರಜೆ ಕೊಡಲೇಬೇಕು. ಸಾಮಾನ್ಯವಾಗಿ ಈ ೩೦ ದಿನಗಳ ಅವಧಿಯನ್ನೇಕೆ ಸೂಚಿಸಲಾಗಿದೆ ಎಂದರೆ ೨೦ ದಿನಗಳ ಅವಧಿಗಿಂತ ಹೆಚ್ಚಾಗಿ ಕಾರ್ಖಾನೆಯನ್ನು ಮುಚ್ಚಿದಲ್ಲಿ, ಮಾಲೀಕನಿಗೆ ತನ್ನ ಕಾರ್ಖಾನೆಯನ್ನು ನಡೆಸಲು ಬೇಕಾದ ಅರ್ಹತೆಯ ಕೊರತೆ ಇದೆ ಎಂದು ಮನವರಿಕೆಯಾಗುತ್ತದೆ. ಆದುದರಿಂದ ಮಾಲೀಕನೇ ಆಗಲೀ ಅಥವಾ ಕಾರ್ಯನಿರ್ವಾಹಕರೇ ಆಗಲೀ ಒಂದು ತಿಂಗಳ ಅವಧಿಗಿಂತ ಹೆಚ್ಚು ದಿನಗಳು ಕಾರ್ಖಾನೆಯನ್ನು ನಡೆಸದೇ ಹೋದಾಗ ಅವರಿಗೆ ಏಳು ದಿನಗಳ ವಾರ್ಷಿಕ ವೇತನ ಸಹಿತ ರಜೆ ನೀಡಲು ಸಾಮರ್ಥ್ಯವಿಲ್ಲವೆಂದೇ ಪರಿಗಣಿಸಬೇಕು. ಆದರೆ ೩೦ ದಿನಗಳ ಅವಧಿಗೆ ಮಾತ್ರ ಸೀಮಿತವಾಗಿದ್ದಲ್ಲಿ ಅವರಿಗೆ ಈ ವಿಧವಾದ ರಜೆಯನ್ನು ಮಂಜೂರು ಮಾಡಲೇಬೇಕು. ಮಸೂದೆಯಲ್ಲಿ ನಿಗದಿತ ವೇತನ ಸಹಿತ ರಜೆಗಳ ಬಗೆಗೂ ಅವಕಾಶ ಒದಗಿಸಲಾಗಿದೆ. ಹಾಗೂ ಸಂಚಿತ ರಜೆಗಳ ಬಗೆಗೂ ಅವಕಾಶ ನೀಡಲಾಗಿದ್ದು, ಕಾರ್ಮಿಕರು ತಮ್ಮ ಎರಡು ವರ್ಷಗಳ ಸತತ ಸೇವೆಯ ಅವಧಿಯಲ್ಲಿ ೧೪ ಸಂಚಿತ ರಜೆಗಳನ್ನು ಪಡೆಯಬಹುದಾಗಿದೆ.

**ರಜೆಯ ಅವಧಿಯಲ್ಲಿ ವೇತನ**

ರಜೆಯ ಅವಧಿಯಲ್ಲಿಯ ವೇತನದ ಬಗೆಗೆ, ಅನೇಕ ವಿಷಯಗಳನ್ನು ಈ ಸದನದ ಅವಗಾಹನೆಗೆ ತರಲು ಬಯಸಿದ್ದೇನೆ. ಮೊಟ್ಟಮೊದಲನೆಯ ಸಂಗತಿ ಎಂದರೆ, ಒಟ್ಟಾರೆ ಒಂದು ವರ್ಷಕ್ಕೆ ಏಳು ರಜೆಗಳೆಂದು ಘೋಷಿಸಿದ್ದರೂ, ಅದರಲ್ಲಿ ಕೇವಲ ೬ ದಿನಗಳಿಗೆ ಮಾತ್ರ ವೇತನ ನೀಡಲಾಗಿದ್ದು, ನಾನು ಈಗಾಗಲೇ ತಿಳಿಸಿದಂತೆ ೭ನೇ ದಿನವು ೩೫ನೇ ಪ್ರಕರಣದಡಿಯಲ್ಲಿ ನೀಡಿದ ನಿಜವಾದ ರಜೆಯ ದಿನವಾಗಿದೆ. ಸೋಜಿಗದ ಸಂಗತಿ ಎಂದರೆ ಈ ೭ನೇ ರಜಾದಿನದ ವೇತನದ ಬಗೆಗೆ ಕಾನೂನು, ಮಾಲೀಕರಿಗೆ ಯಾವ ವಿಧವಾದ ಕಡ್ಡಾಯ ಹೇರಿಲ್ಲ; ಹಾಗೂ ವೇತನ ಪಡೆಯಲೇಬೇಕೆಂಬ ಹಕ್ಕನ್ನೂ ಕಾರ್ಮಿಕರಿಗೆ ನೀಡಿಲ್ಲ. ಆದರೆ ಸೇವಾ ಒಪ್ಪಂದದ ಪರಿಣಾಮವಾಗಿ ಮಾತ್ರ ಈ ದಿನವನ್ನು ವೇತನ ಸಹಿತ ರಜೆ ಎಂದು ಪರಿಗಣಿಸಬಹುದಾಗಿದೆ. ಹೀಗಾಗಿ ಈ ವಿಷಯ ಸೇವಾ ಒಪ್ಪಂದಕ್ಕೆ ವಹಿಸಿದಂತಾಗಿದೆ. ಮೂರನೆಯ ವಿಷಯವೆಂದರೆ, ಈ ಆರು ದಿನಗಳ ವೇತನ ಸಹಿತ ರಜೆಯ ಹಣ ನೀಡುವ ವಿಧಾನ ಹೇಗೆ ಇರಬೇಕು ಎಂಬುದರ ಬಗೆಗೆ. ನಾವು ಜಾರಿಗೊಳಿಸಬೇಕೆಂದಿರುವ ಮಸೂದೆಯಲ್ಲಿ ಹೆಚ್ಚಿನ ವಿವರಗಳಿಲ್ಲದೇ ಹೋದರೂ ನಾವು ಒಂದು ಸೂಕ್ತವಾದ ನಿಯಮವನ್ನು ಅನುಸರಿಸಿದ್ದೇವೆ. ಅದು ಏನೆಂದರೆ : ಕಾರ್ಮಿಕನಿಗೆ ಹಿಂದಿನ ಮೂರು ತಿಂಗಳ ಸರಾಸರಿ ವೇತನದ ಆಧಾರದ ಮೇಲೆ ಹಣ ನೀಡಬೇಕು; ಈ ಸರಾಸರಿಯಲ್ಲಿ ಅವನ ಹೆಚ್ಚುವರಿ (Overtime) ವೇತನ ಗಣನೆಗೆ ತೆಗೆದುಕೊಳ್ಳುವಂತಿಲ್ಲ. ನನಗೆ ತಿಳಿದಂತೆ ಇದೊಂದು ಸಮನಾದ ಹಾಗೂ ಉತ್ತಮವಾದ ಮಾರ್ಗ; ಏಕೆಂದರೆ ಈ ಮಸೂದೆಯ ಅಡಿಯಲ್ಲಿ ಕಾರ್ಮಿಕರಿಗೆ ರಜೆ ಪಡೆಯುವುದರ ಹಲವು ಸೌಲಭ್ಯಗಳನ್ನೂ ನೀಡಲಾಗಿದೆ. ಅದೇನೆಂದರೆ, ರಜೆಯ ಮೇಲೆ ಹೋಗುವವನಿಗೆ ನಗದು ರೂಪದಲ್ಲಿ ಅವನಿಗೆ ಸಲ್ಲಬೇಕಾದ ಹಣದಲ್ಲಿ ಅರ್ಧದಷ್ಟನ್ನು ಮುಂಗಡವಾಗಿ ನೀಡಬಹುದಾಗಿದೆ.

ಈ ದಿಶೆಯಲ್ಲಿ ಮತ್ತೊಂದು ಮುಖ್ಯ ಹಾಗೂ ಗಮನಾರ್ಹ ವಿಷಯವೆಂದರೆ, ಈ ಮಸೂದೆಯು ಯಾವ ಕಾರ್ಖಾನೆಗಳು ಈಗಾಗಲೇ ವೇತನ ಸಹಿತ ರಜೆ ನೀಡಲು ತೃಪ್ತಿಕರ ವ್ಯವಸ್ಥೆಯನ್ನು ಜಾರಿಗೊಳಿಸಿವೆಯೋ ಆ ಕಾರ್ಖಾನೆಗಳು ಈ ಕಾನೂನಿನ ಅಡಿಯಲ್ಲಿ ಬರುವುದಿಲ್ಲ ಎಂದು ತಿಳಿಸಿದೆ. ಪ್ರಾಂತೀಯ ಸರಕಾರವು ಈ ಬಗೆಗೆ ಪ್ರಮಾಣಪತ್ರ ನೀಡಬೇಕಾಗುತ್ತದೆ. ಈ ಒಪ್ಪಂದದ ಮೂಲ ಉದ್ದೇಶವೇನೆಂದರೆ ಯಾವುದೇ ಕಾರ್ಖಾನೆಗಳಲ್ಲಿ ಮಾಲೀಕರು ತಮ್ಮ ಸ್ವಯಂ ಪ್ರೇರಣೆಯಿಂದ ಕಾರ್ಮಿಕರ ಸೌಲಭ್ಯಗಳನ್ನು ಜಾರಿಗೊಳಿಸಿದ್ದಲ್ಲಿ ಅಲ್ಲಿ ಈ ಕಾನೂನಿಗೆ ಅವಕಾಶವೇ ಇಲ್ಲ; ಏಕೆಂದರೆ ಕಾನೂನಿನ ಕಾರ್ಯವನ್ನು ಮಾಲೀಕರೇ ಮಾಡಿರುವುದರಿಂದ, ಅವರ ಹಾಗೂ ಕಾರ್ಮಿಕರ ಮಧ್ಯೆ ಒಂದು ಸೌಹಾರ್ದ ವಾತಾವರಣ ನಿರ್ಮಾಣಗೊಂಡಿದೆ.

ಮಾನ್ಯರೆ, ನಾನು ಮಂಡಿಸಬೇಕೆಂದಿದ್ದ ಮಸೂದೆಯ ಮುಖ್ಯ ಅಂಶಗಳಿವಾಗಿದ್ದು ಮತ್ತೆರಡು ಸಂಗತಿಗಳ ಬಗೆಗೆ ಪ್ರಸ್ತಾಪಿಸುವುದು ಉಚಿತವೆಂದು ತಿಳಿದು ಅವುಗಳನ್ನು ಸಭೆಯ ಅವಗಾಹನೆಗೆ ತರಲು ಬಯಸುತ್ತೇನೆ. ಮೊದಲನೆಯ ಪ್ರಶ್ನೆ ಎಂದರೆ, ಮಾಲೀಕರು ಕಾರ್ಮಿಕರನ್ನು ರಜೆಯ ಮೇಲೆ ಹೋಗದಂತೆ ಪ್ರಚೋದಿಸುವುದು ಹಾಗೂ ಎರಡನೆಯ ಪ್ರಶ್ನೆ ಎಂದರೆ, ರಜೆಯ ಮೇಲೆ ಹೋಗದಂತೆ ಹಲವಾರು ನಿರ್ಬಂಧಗಳನ್ನು ಹೇರುವುದು. ಈ ಎರಡು ಸಂಗತಿಗಳ ಬಗೆಗೆ ಪ್ರಸ್ತುತ ಸದನದ ಮುಂದೆ ಬಂದಿರುವ ಮಸೂದೆಯಲ್ಲಿ ಯಾವ ಪ್ರಸ್ತಾವನೆಯನ್ನೂ ಮಾಡಿಲ್ಲ. ಹೀಗೆಂದ ಮಾತ್ರಕ್ಕೆ ಸರಕಾರದ ಗಮನಕ್ಕೆ ಈ ವಿಷಯದ ಬಗೆಗೆ ಅರಿವಿಲ್ಲ ಎಂದಲ್ಲ, ಆದರೆ ಅಂತಹ ಪ್ರಸಂಗಗಳು ಈವರೆಗೆ ಬಾರದೇ ಕೇವಲ ಊಹೆಯಿಂದ ಕಾನೂನಿನಲ್ಲಿ ಅವಕಾಶ ಕಲ್ಪಿಸಬಾರದು. ಒಂದು ವೇಳೆ ಅನುಭವಕ್ಕೆ ಬಂದ ಸಮಯದಲ್ಲಿ ಕಾನೂನಿನಲ್ಲಿ ಸೂಕ್ತ ಬದಲಾವಣೆಯನ್ನು ತಂದು ಪರಿಸ್ಥಿತಿಯನ್ನು ಸರಕಾರದವರು ನಿಯಂತ್ರಿಸುತ್ತಾರೆ ಎಂಬ ಭರವಸೆ ನನಗಿದೆ. ಆದುದರಿಂದ ಸದ್ಯದ ಪರಿಸ್ಥಿತಿಯಲ್ಲಿ ವೇತನ ಸಹಿತ ರಜೆಯ ಬಗೆಗೆ ಈ ಮಸೂದೆಯು ಕಾರ್ಮಿಕರ ಹಿತರಕ್ಷಣೆಯಲ್ಲಿ ಸಫಲವಾಗಿದೆ.

ಮಾನ್ಯರೇ, ನಾನು ಇದನ್ನು ಮಂಡಿಸುವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಮಸೂದೆಯನ್ನು ಮಂಡಿಸುವಲ್ಲಿ ಸಭೆಯ ಸಾಮಾನ್ಯ ಸದಸ್ಯರಿಂದ ದೊರೆತ ಸಹಕಾರದಿಂದಾಗಿ ನನ್ನ ಕಾರ್ಯವು ಸುಲಭವಾಗಿರುವುದರಿಂದ ನಾನು ನನ್ನ ಉತ್ತರ ರೂಪವಾಗಿ ಸಂಕ್ಷಿಪ್ತವಾಗಿ ಮಾತನಾಡುವೆ. ನನ್ನ ಸನ್ಮಾನ್ಯ ಮಿತ್ರರಾದ ಡಾ॥ ಸರ್. ಜಿಯಾ ಉದ್ದೀನ್ ಅಹಮದ್ ಅವರ ಭಾಷಣಕ್ಕೆ ಸಂಬಂಧಿಸಿದಂತೆ ನಾನು ನೇರವಾಗಿ ಕೆಲವು ಸಂಗತಿಗಳನ್ನು ಹೇಳುವುದು ಉತ್ತಮವೆಂದೇ ಭಾವಿಸಿರುವೆ. ನಾನು ಹೇಳಬಯಸುವುದೇನೆಂದರೆ – ನಾನು ಅವರು ಮಾತನಾಡಿದ ವಿಷಯದ ಬಗೆಗೆ ಹೆಚ್ಚಿಗೆ ಏನೂ ಮಾತನಾಡುವುದಿಲ್ಲ ಎಂದರೆ ಅವರು ತಪ್ಪು ಭಾವಿಸಬಾರದು. ಏಕೆಂದರೆ ಅವರು ಸಭೆಯ ಮುಂದೆ ಚರ್ಚೆಗೆ ಬಂದಿರುವ ವಿಷಯದ ಬಗೆಗೆ ಏನೂ ಮಾತನಾಡಿಲ್ಲ. ನಾನು ಈ ವಿಷಯ ಅವರನ್ನು ಅಗೌರವಕ್ಕೆ ಗುರಿಮಾಡಬೇಕೆಂದು ಹೇಳದೆ, ಅವರು ಮಾತನಾಡಿದ್ದು ಅಪ್ರಸ್ತುತವಾಗಿತ್ತು ಎಂದಷ್ಟೆ ತಿಳಿಸುವೆ. ಅವರು ಕಾರ್ಮಿಕರ ಸಮಸ್ಯೆಗೆ ಸಂಬಂಧಿಸಿದಂತೆ ಒಂದು ಉತ್ತಮ ಸಿದ್ಧಾಂತವನ್ನೇ ಮಂಡಿಸಿದ್ದಾರೆ. ಅದೇನೆಂದರೆ ಕಾರ್ಮಿಕರ ಪಾಲುಗಾರಿಕೆಯ ಈ ಸಿದ್ಧಾಂತವು ನಮಗೆಲ್ಲಾ ಒಂದು ಹೊಸ ಆಯಾಮವನ್ನು ನೀಡಿದೆ ಹಾಗೂ ಅದು ಒಂದು ನೂತನ ದಿಕ್ಸೂಚಿಯಾಗಬಲ್ಲದು. ಆದರೆ ನಾವು ಈ ಸಿದ್ಧಾಂತವನ್ನು ನಮಗೆ ಸಂವಿಧಾನ ರಚಿಸುವ ಅವಕಾಶ ದೊರೆತಾಗ ಮಾತ್ರ ಸದುಪಯೋಗ ಮಾಡಿಕೊಳ್ಳಬಹುದಾಗಿದೆ. ಈ ವಿಧವಾದ ಸಲಹೆ ನನಗೆ ಮಾತ್ರವಲ್ಲದೇ ನಮಗೆಲ್ಲಾ ಸ್ಫೂರ್ತಿನೀಡಬಲ್ಲದು

ಎಂದು ಧಾರಾಳವಾಗಿ ಹೇಳಬಯಸುತ್ತೇನೆ. ಮತ್ತೊಬ್ಬ ಭಾಷಣಕಾರರಾದ ನನ್ನ ಮಿತ್ರ ಸರ್ ವಿಠಲ ಚಂದಾವರ್‌ಕರ್ ಬಗೆಗೆ ಹೇಳಬಹುದಾದರೆ, ಸರ್ ಫ್ರಾಂಕ್ ನೊಯಸಿ ಅವರು ಈ ಸದನದಲ್ಲಿ ಮಂಡಿಸಿದ ಮಸೂದೆಯಾದ ಅಂತರರಾಷ್ಟ್ರೀಯ ಒಡಂಬಡಿಕೆಯಲ್ಲಿನ ವೇತನ ಸಹಿತ ರಜೆಯ ಬಗ್ಗೆ ಅವರು ಮಾತನಾಡಿದರು. ನನ್ನ ಮಟ್ಟಿಗೆ ಹೇಳಬಹುದಾದರೆ ಅವರು ಸಭೆಯ ಮುಂದೆ ತಮ್ಮ ವಿಷಯವನ್ನು ಫಲಪ್ರದವಾಗಿ ಮಂಡಿಸದೇ ಹೋಗಿದ್ದಾರೆ. ಹಾಗೂ ಅವರ ಹೇಳಿಕೆಯಂತೆ ಭಾರತ ಸರಕಾರವು ಬಹುಶಃ ವೇತನ ಸಹಿತ ರಜೆಯ ಒಡಂಬಡಿಕೆಯ ಬಗೆಗೆ ಈಗ ತನ್ನ ನಿಲುವನ್ನು ಬದಲಾಯಿಸಿದೆ ಎಂಬ ಭಾವನೆ ಮೂಡಿದೆ.

**ಸರ್ ವಿಠಲ ಎನ್. ಚಂದಾವರ್‌ಕರ್ :** ಇಲ್ಲ – ಇಲ್ಲ

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ೧೯೩೬ರಲ್ಲಿ ಅವರು ಅದನ್ನು ವಿರೋಧಿಸಿದ್ದು ಈಗ ಅಂತರರಾಷ್ಟ್ರೀಯ ಒಡಂಬಡಿಕೆಯಲ್ಲಿ ಹೇಳಲಾದ ತತ್ವಕ್ಕೆ ಮನ್ನಣೆ ನೀಡಿದ್ದಾರೆ; ಆದರೆ ನನಗೆ ತಿಳಿದಂತೆ ಭಾರತ ಸರಕಾರದ ನಿಲವಿನಲ್ಲಿ ಯಾವ ಬದಲಾವಣೆಯೂ ಇಲ್ಲ. ನಾನು ತುಂಬಾ ಜಾಗರೂಕತೆಯಿಂದ ಆ ಚರ್ಚೆಯನ್ನು ಗಮನಿಸಿದ್ದೇನೆ, ಹಾಗೂ ಭಾರತ ಸರಕಾರವು, ಈ ಒಡಂಬಡಿಕೆಯನ್ನು ವಿರೋಧಿಸಿದ ಬಗೆಗೆ ನೀಡಲಾದ ಕಾರಣಗಳು ತುಂಬಾ ಸಮಂಜಸವೆಂದೇ ನಾನು ಭಾವಿಸಿದ್ದೇನೆ. ಏಕೆಂದರೆ ಯಾವ ಒಡಂಬಡಿಕೆಯನ್ನೇ ಆಗಲಿ ಭಾಗಶಃ ಒಪ್ಪಲು ಅವಕಾಶವಿಲ್ಲದೇ ಹೋದುದರಿಂದ ಸರಕಾರವು ಒಡಂಬಡಿಕೆಗೆ ತನ್ನ ವಿರೋಧವನ್ನು ಸೂಚಿಸಬೇಕಾಯಿತು. ಅಂದಿನ ಸಂದರ್ಭಗಳಲ್ಲಿ ಭಾರತ ಸರಕಾರಕ್ಕೆ ನೀಡಿದ ಸಲಹೆಯ ಆಧಾರದ ಮೇಲೆ ಹಾಗೂ ಈ ದೇಶದ ಅಂದಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಒಡಂಬಡಿಕೆಯನ್ನು ಪೂರ್ಣವಾಗಿ ಒಪ್ಪುವ ಪರಿಸ್ಥಿತಿ ಇರದೇ ಹೋದುದರಿಂದ ಕೇವಲ ತತ್ವದ ಆಧಾರದ ಮೇಲೆ ಮಾನ್ಯತೆ ನೀಡಬಹುದಾದ ಸಾಧ್ಯತೆಗಳನ್ನು ಪರಿಶೀಲಿಸಿ ತಮಗೆ ಸಾಧ್ಯವಿರಬಹುದಾದ ಮಾರ್ಗವನ್ನೇ ಅನುಸರಿಸಿದರೆಂದು ಹೇಳಬೇಕು. ಈಗ ನನ್ನ ಮಿತ್ರರಾದ ಶ್ರೀ ಜೋಷಿ ಅವರು ಹಲವು ಅಂಶಗಳನ್ನು ಹೇಳಿದ್ದಾರೆ. ಅವರು ಮಾಡಿದ ಭಾಷಣದಲ್ಲಿ ಎರಡು ಪ್ರಮುಖ ಸತ್ವಪೂರ್ಣ ಅಂಶಗಳಿವೆ; ಅವನ್ನು ಒಪ್ಪಲೇಬೇಕಾಗಿದೆ. ಅವರು ಹೇಳಿದ ಮೊದಲನೆಯ ಅಂಶವೆಂದರೆ, ನಾವು ಈ ಮಸೂದೆಯನ್ನು ಕೇವಲ ಕಾರ್ಖಾನೆಗಳಿಗೆ ಸೀಮಿತಗೊಳಿಸಿದ್ದು ಅದನ್ನು ಇತರ ಉದ್ಯಮಗಳಿಗೆ ವಿಸ್ತರಿಸಲಿಲ್ಲವೆಂದಿದ್ದಾರೆ. ನಾನು ಈಗಾಗಲೇ ಹೇಳಿದ್ದಂತೆ, ಅವರು ಹೇಳಿದ ಈ ಅಂಶವನ್ನು ಮನಸಾರೆ ಒಪ್ಪಬಹುದಾಗಿದೆ. ಆದರೆ ಅದೇ ಅಂಶದ ಬಗೆಗೆ ಹೇಳಬೇಕಾದುದೆಂದರೆ, ಈ ಮಸೂದೆಯನ್ನು ಒಂದು ಉದ್ದಿಮೆಗೆ ವಿಸ್ತರಿಸಬೇಕಾದಲ್ಲಿ ಈ ಮಸೂದೆಯ ಅಡಿಯಲ್ಲಿ ಬರಬಹುದಾದ ಕಾರ್ಖಾನೆಗಳು ಹಾಗೂ ವಿವಿಧ ಕಾರ್ಮಿಕರನ್ನು ಒಂದೇ ಉದ್ದಿಮೆಯ ಅಡಿಯಲ್ಲಿ ಪರಿಗಣಿಸಬಹುದೇ? ಅವರು ಹೇಳಿದ ಈ ಅಂಶದ ಬಗೆಗೆ ನನ್ನ ಸಂಪೂರ್ಣ ಸಹಾನುಭೂತಿ ಇದೆ. ಆದರೆ ಅದನ್ನು ಸಂಪೂರ್ಣವಾಗಿ ಪರಿಶೀಲಿಸದೇ ಎಲ್ಲಾ ಕಾರ್ಖಾನೆಗಳನ್ನು ಒಂದೇ ಉದ್ದಿಮೆಯ ಅಡಿಯಲ್ಲಿ ಕೂಡಿಹಾಕುವುದು ಸಮಂಜಸವಾಗಲಾರದು. ಹಾಗೂ ಎಲ್ಲಾ ಕಾರ್ಖಾನೆಗಳನ್ನು ಒಂದೇ ಉದ್ದಿಮೆ ಎಂದೂ ಹೇಳಲಾಗದು. ಇನ್ನೊಂದು ಸಂಗತಿ ಎಂದರೆ ವಿವಿಧ ಕಾರ್ಖಾನೆಗಳಲ್ಲಿಯ ಕಾರ್ಮಿಕರು ಗಳಿಸಿದ ವಿವಿಧ ರಜಾದಿನಗಳ ಸೇವೆಯ ವಿವಿಧ ಅವಧಿಯನ್ನು ಒಂದೇ ಎಂದು ಪರಿಗಣಿಸಲಾಗದೇ ಹೋದುದರಿಂದಲೇ ನಾವು ಈ ಮಸೂದೆಯನ್ನು ಕಾರ್ಖಾನೆಗಳಿಗೆ ಮಾತ್ರ ಸೀಮಿತಗೊಳಿಸಬೇಕಾಗಿದೆ.

ಎರಡನೆಯ ಅಂಶ ಶ್ರೀ ಜೋಷಿ ಅವರ ಹೇಳಿಕೆಯಂತೆ ನಾವು ಈ ಮಸೂದೆಯಲ್ಲಿ ನೀಡಿದ ಏಳು ದಿನಗಳ ರಜೆ ತುಂಬಾ ಕಡಿಮೆ ಅಥವಾ ಕನಿಷ್ಠ. ಅವರ ಈ ವಾದವನ್ನು ನಾನು ಮನಸಾರೆ ಒಪ್ಪುವೆ. ಆದರೆ

ನನ್ನ ಮಿತ್ರರಾದ ಶ್ರೀ ಜೋಷಿ ಹಾಗೂ ಶ್ರೀ ಚಂದಾವರ್‌ಕರ್ ಈರ್ವರೂ ಇಂದಿನ ನಮ್ಮ ಕಾರ್ಮಿಕರ ಮನೋಸ್ಥಿತಿ ಹಾಗೂ ದುರ್ಬಲತೆಗಳನ್ನು ಅರಿಯಲೇಬೇಕೆಂದು ಕೋರುತ್ತೇನೆ. ರಜೆಗಳ ಏಳುದಿನ ಅವಧಿಗಳನ್ನು ವಿಸ್ತರಿಸುವಲ್ಲಿ ಅನೇಕ ತೊಂದರೆಗಳಿವೆ. ಎಲ್ಲರಿಗೂ ತಿಳಿದಂತೆ ನಮ್ಮ ಕಾರ್ಮಿಕರು ವಿವಿಧ ನೆಪಗಳಲ್ಲಿ ರಜೆಯನ್ನು ಪಡೆಯುತ್ತಲೇ ಇರುವುದರಿಂದ ಅವರು ಸತತ ಸೇವೆಯನ್ನು ನೀಡುವಲ್ಲಿ ವಿಫಲರಾಗಿದ್ದಾರೆ. ಈ ಒಂದು ವರ್ತನೆಯಿಂದ ಹೆಚ್ಚಿನ ಅವಧಿಯ ರಜಾದಿನಗಳನ್ನು ನೀಡಲು ಬಾರದಿರುವುದು ಶೋಚನೀಯ. ಒಂದು ವೇಳೆ ನಮ್ಮ ಕಾರ್ಮಿಕ ಬಂಧುಗಳು ತಮ್ಮ ಈ ಅನಿಷ್ಟ ಮನೋಭಾವನೆಯನ್ನು ತೊರೆದಲ್ಲಿ ರಜೆ ದಿನಗಳನ್ನು ಹೆಚ್ಚಿಸುವ ಬಗ್ಗೆ ವಿಚಾರಿಸಬಹುದಾಗಿದೆ. ಆದರೆ ಈಗ ನೀಡಿದ ಏಳು ದಿನಗಳ ವೇತನ ಸಹಿತ ರಜೆ ಕಡಿಮೆ ಎಂದಲ್ಲಿ, ಕಾರ್ಮಿಕರು ತಮ್ಮ ಸೇವೆಯನ್ನು ಸತತವಾಗಿ ನೀಡಿದಲ್ಲಿ ಅದನ್ನು ವಿಸ್ತರಿಸಬಹುದಾಗಿದೆ. ಆದರೆ ಪರಿಸ್ಥಿತಿಯನ್ನು ಗಮನಿಸಿದಾಗ ಸದ್ಯದಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ೧೯೩೬ರ ಒಡಂಬಡಿಕೆಯಲ್ಲಿ ಹೇಳಿದ ೬+೧ ರಜೆಗಳನ್ನೇ ಮುಂದುವರಿಸದೆ ಬೇರೆ ಮಾರ್ಗವಿಲ್ಲವೆಂದೇ ಹೇಳಬಯಸುತ್ತೇನೆ.

ಮಾನ್ಯರೆ, ಈ ದಿಶೆಯಲ್ಲಿ ಹೇಳಲಾದ ಮತ್ತೊಂದು ಅಂಶವೆಂದರೆ ಈ ಕಾನೂನನ್ನು ಕೇವಲ ನಿರಂತರ ಕಾರ್ಖಾನೆಗಳಿಗೆ ಮಾತ್ರ ಸೀಮಿತಗೊಳಿಸಿ ನಿರಂತರವಲ್ಲದ ಕಾರ್ಖಾನೆಗಳನ್ನು ಕೈ ಬಿಟ್ಟಿರುವುದು. ಈ ಅಂಶವನ್ನು ನನ್ನ ಮಿತ್ರರಾದ ಪ್ರೊ॥ ರಂಗಾ ಅವರೂ ಹೇಳಿದ್ದಾರೆ. ಅವರಿಗೂ ನನ್ನ ಉತ್ತರ ಇದೇ ಎಂದು ಹೇಳುತ್ತೇನೆ. ಒಡಂಬಡಿಕೆಯಂತೆ ಹೇಳಲಾದ ಏಳು ದಿನಗಳ ವೇತನ ರಜೆಯು ಸಾಕಷ್ಟು ರಜೆ ಪಡೆಯದೇ ಇರುವ ಕಾರ್ಮಿಕರಿಗೆ ಮಾತ್ರವಿದೆ ಎಂದು ಒತ್ತಿಹೇಳಬೇಕಾಗಿದೆ. ಉದ್ಯೋಗದಲ್ಲಿದ್ದು ನಿರುದ್ಯೋಗಿಗಳಂತೆ ವರ್ತಿಸುವ ಕಾರ್ಮಿಕರ ದೃಷ್ಟಿಕೋನದಿಂದ ನಾನು ನೋಡಬಯಸದೆ ಸದಾ ಸೇವೆಯಲ್ಲಿ ನಿರತರಾದ ಉದ್ಯೋಗಿ ಕಾರ್ಮಿಕರ ದೃಷ್ಟಿಕೋನದಿಂದ ಈ ಅಂಶವನ್ನು ಗಮನಿಸಿದಾಗ ಈ ಮಸೂದೆಯಲ್ಲಿರುವ ಅಂಶಗಳು ಮನವರಿಕೆಯಾಗಬಲ್ಲವು. ನಿರಂತರ ಕಾರ್ಖಾನೆಗಳಲ್ಲದ ಕಾರ್ಖಾನೆಗಳಲ್ಲಿಯ ಕಾರ್ಮಿಕರಿಗೆ ಈ ಏಳು ದಿನಗಳಿಗಿಂತ ಹೆಚ್ಚಿನ ಅವಧಿಯ ರಜೆಗಳ ಸೌಲಭ್ಯ ದೊರೆತೇ ದೊರೆಯುವುದರಿಂದ ಈ ಏಳು ದಿನಗಳ ವೇತನ ರಜೆಯು ಕೇವಲ ಮೂಲ ಕಾರ್ಖಾನೆಗಳ ಕಾರ್ಮಿಕರಿಗೆ ಸೀಮಿತವಾಗಿದ್ದಲ್ಲಿ ಯಾವ ತೊಂದರೆಯೂ ಇರಲಾರದು.

ಮಾನ್ಯರೆ, ಶ್ರೀ ವಿಠಲ ಚಂದಾವರ್‌ಕರ್‌ರು ತಿದ್ದುಪಡಿಯ ಕಲಮ್‌ನಲ್ಲಿರುವ ಒಂದು **'ಕನಿಷ್ಠ ಪಕ್ಷ'** (at least) ಎಂಬ ಪದಕ್ಕೆ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅವರು ಈ ಪದದ ಪ್ರಯೋಗದಿಂದ ತುಂಬಾ ಬೆದರಿದ್ದು ಈ ವಿಧವಾದ ಪದಪ್ರಯೋಗ ಉತ್ತಮವಾದರೂ, ಪ್ರಾಂತೀಯ ಸರಕಾರಗಳೂ ಕಾರ್ಖಾನೆಯ ಮಾಲೀಕರನ್ನು ೭ ಕ್ಕಿಂತ ಹೆಚ್ಚಿನ ರಜೆದಿನಗಳನ್ನು ನೀಡುವಂತೆ ಬಲತ್ಕಾರ ಮಾಡಲು ಆಸ್ಪದವಾಗಬಹುದೆಂಬ ಭಯ ವ್ಯಕ್ತಪಡಿಸಿದ್ದಾರೆ. ಆದರೆ ನಾನು ನನ್ನ ನ್ಯಾಯವಾದಿಗಳ ಸಲಹೆಯಂತೆ ಆ ವಿಧವಾದ ಬಲತ್ಕಾರವನ್ನು ಹೇರುವ ಅವಕಾಶ ತಿದ್ದುಪಡಿ ಮಸೂದೆಯಲ್ಲಿರದು ಎಂಬ ಭರವಸೆಯನ್ನು ನೀಡಬಯಸುತ್ತೇನೆ. ಶ್ರೀ ವಿಠಲ ಚಂದಾವರ್‌ಕರ್‌ರು ಎತ್ತಿರುವ ಇನ್ನೊಂದು ಅಂಶವೆಂದರೆ ಪ್ರಸ್ತುತ ಮಸೂದೆಯು ಮುಂಚೆಯೇ ತೆಗೆದುಕೊಂಡ ಕ್ರಮವೆಂದು ಹೇಳಿದ್ದಾರೆ. ಅವರ ಅಭಿಪ್ರಾಯದಲ್ಲಿ ಈ ಕ್ರಮವು ಕೊನೆಯ ಸಮಯದಲ್ಲಿ ತೆಗೆದುಕೊಂಡಿದ್ದರೆ ಸೂಕ್ತ ಎಂದಿದ್ದಾರೆ. ಅವರ ಹೇಳಿಕೆಯಂತೆ ಈ ಕ್ರಮವು ಸರಕಾರದ ಪರಿಶೀಲನೆಯಲ್ಲಿರುವ 'ಆನಾರೋಗ್ಯ ವಿಮೆಯ ಕಾನೂನಿ'ನ ನಂತರ ಬರಬಹುದಾಗಿತ್ತು. ಈ ಅವರ ಅಭಿಪ್ರಾಯಕ್ಕೆ ನನ್ನ ಭಿನ್ನಾಭಿಪ್ರಾಯವಿದ್ದು ಸಮಯದ ಅಭಾವದಿಂದ ಅದನ್ನು ವಿವರಿಸಲಾರೆ.

ಇಲ್ಲದೇ ಹೋದಲ್ಲಿ ಸಕಾರಣಗಳಿಂದ ಅವರ ಅಭಿಪ್ರಾಯ ಹಾಗೂ ಆತಂಕಗಳನ್ನು ವಿವರಿಸುತ್ತಿದ್ದೆ. ಈ ದಿಶೆಯಲ್ಲಿ ಶ್ರೀಯುತರು ಪ್ರೊ॥ ಆಧಾರ್‌ಕರ್ ಸಲ್ಲಿಸಿದ ಉದ್ದಿಮೆ ಕಾರ್ಮಿಕರ ಆರೋಗ್ಯ ವಿಮೆಯ ವರದಿಯ ೧೧೨ನೆಯ ಪುಟ ನೋಡಬೇಕೆಂದು ಕೋರುತ್ತೇನೆ. ಈ ಪುಟದಲ್ಲಿ ವೇತನ ಸಹಿತ ರಜೆ ಆನಾರೋಗ್ಯ ವಿಮೆಯ ಅಂತರ್ಗತ ಅಂಶವೆಂದು ಬಲವಾಗಿ ಪ್ರತಿಪಾದಿಸಲಾಗಿದ್ದು, ಏನಾದರೂ ಮಹತ್ವ ನೀಡಬೇಕಾದಲ್ಲಿ ಅದು ವೇತನ ಸಹಿತ ರಜೆಗಳಿಗೆ ಮಾತ್ರ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ನಾನು ಈಗಾಗಲೇ ಹೇಳಿದಂತೆ ಪ್ರೊ॥ ಆಧಾರ್‌ಕರ್ ವರದಿಯ ಪ್ರತಿಗಳನ್ನು ಪ್ರಸ್ತಾಪಿಸಿ ಸದನದ ಸಮಯವನ್ನು ಹಾಳು ಮಾಡಲಾರೆ.

ಮಾನ್ಯರೆ, ಸದನದ ಎರಡೂ ವಿಭಾಗಗಳಿಂದ ಬಂದ ಪ್ರಶ್ನೆ ಎಂದರೆ ಈ ವಿಧವಾದ ಮಸೂದೆಯು ಕಡ್ಡಾಯವೇ ಅಥವಾ ಸ್ವಯಂ ನಿರ್ಣಯಕ್ಕೆ ಬಿಡಬಹುದಾದುದೇ ಎಂದಿದ್ದಾರೆ. ಈ ಮಸೂದೆಗೆ ಸಂಬಂಧಿಸಿದಂತೆ ಹೇಳಬೇಕಾದಲ್ಲಿ ಕಾನೂನಿನ ದೃಷ್ಟಿಯಿಂದ ಕಾರ್ಮಿಕರಿಗೆ ಕಡ್ಡಾಯವಾಗಿ ವೇತನ ಸಹಿತ ರಜೆ ನಿಗದಿತ ಅವಧಿಯಂತೆ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ನೀಡಲೇಬೇಕು. ಅಂತೆಯೇ ಮಾಲೀಕರ ಹಾಗೂ ಕಾರ್ಮಿಕರ ನಡುವೆ ಸೇವಾ ಒಪ್ಪಂದದ ಸಂಗತಿಯನ್ನು ಅವರ ಸ್ವಯಂ ನಿರ್ಣಯಕ್ಕೆ ಬಿಟ್ಟಿರುವುದರಿಂದ ಈ ಮಸೂದೆ ಒಂದು ಮಧ್ಯಮ ಮಾರ್ಗವನ್ನು ಅನುಸರಿಸಿರುವುದು ಸಂತೋಷದ ಸಂಗತಿ.

ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ ಈ ಮಸೂದೆಯಲ್ಲಿ, ವೇತನ ಸಹಿತ ರಜೆಯ ಬಗೆಗೆ, ಮಾಲೀಕರು ಹಾಗೂ ಕಾರ್ಮಿಕರು ಒಪ್ಪಂದ ಮಾಡಿಕೊಂಡ ಸಂಗತಿಯು ಸರಕಾರಕ್ಕೆ ಸಂತೃಪ್ತಿ ನೀಡಿದಲ್ಲಿ ಅಂತಹ ಕಾರ್ಖಾನೆಗಳಿಗೆ ಈ ಕಾನೂನಿನಡಿಯಲ್ಲಿ ರಿಯಾಯಿತಿ ನೀಡಲೂ ಸಿದ್ಧವಿದೆ. ನನಗೆ ತಿಳಿದಂತೆ ಈ ಮಾದರಿಯ ಮಸೂದೆ ಬ್ರಿಟನ್ ದೇಶದಲ್ಲಿಯೂ ಜಾರಿಯಲ್ಲಿದೆ, ಈ ಕಾನೂನಿನಿಂದ ಅಂದರೆ ೧೯೩೮ರ ವೇತನ ಸಹಿತ ರಜೆಯ ಸೌಲಭ್ಯವು ೨,೩೦೦,೦೦೦ ಕಾರ್ಮಿಕರಿಗೆ ವಿಸ್ತರಿಸಲಾಗಿದೆ. ಮಿಕ್ಕ ೫ ಮಿಲಿಯನ್ ಕಾರ್ಮಿಕರು ಸ್ವಯಂ ಒಪ್ಪಂದದಡಿಯಲ್ಲಿ ಸೌಲಭ್ಯ ಪಡೆಯುತ್ತಿದ್ದರೆ, ೪,೦೦೦,೭೦೦ ಕಾರ್ಮಿಕರು ಬಹುಕಾಲ ಅಥವಾ ದೀರ್ಘಾವಧಿ ಪದ್ಧತಿಯ ಅಡಿಯಲ್ಲಿ ಈ ಸೌಲಭ್ಯವನ್ನು ಹೊಂದಿದ್ದಾರೆ.

**ಸರ್ ಕವಾಸ್ಜಿ ಜಹಂಗೀರ್ :** ಮಾಲೀಕರು ರಜೆಯನ್ನು ಮುಂದೂಡಲು ಅವಕಾಶ ಎಲ್ಲಿದೆ.?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಆ ವಿಷಯವನ್ನೇ ಪ್ರಸ್ತಾಪಿಸಲಿರುವೆ. ಮಾನ್ಯರೆ, ನಾನು ಪ್ರಸ್ತಾಪಿಸುವ ಸಂಗತಿ ಎಂದರೆ ಕಡ್ಡಾಯ ಹಾಗೂ ಸ್ವಯಂಪ್ರೇರಣೆಗೆ ಸಂಬಂಧಿಸಿದ್ದಾಗಿದೆ. ಮತ್ತೊಂದು ಅಂಶವೆಂದರೆ, ನನ್ನ ಮಿತ್ರರಾದ ಪ್ರೊ॥ ರಂಗಾ ಹಾಗೂ ಶ್ರೀ ಚೆಟ್ಟಿಯಾರ್ ಅವರು, ಮಾಲೀಕರು ಈ ಕಾನೂನನ್ನು ದುರುಪಯೋಗಪಡಿಸಿಕೊಳ್ಳುವುದನ್ನು ನಿರ್ಬಂಧಿಸುವಲ್ಲಿ, ಅಂದರೆ ರಜೆಯ ಸೌಲಭ್ಯ ದೊರೆಯುವ ಅವಧಿಗೆ ಮುಂಚೆಯೇ ಕಾರ್ಮಿಕರನ್ನು ತೆಗೆದುಹಾಕಿದಲ್ಲಿ ಏನು ಕ್ರಮ ಕೈಕೊಳ್ಳಲಾಗುವುದು ಎಂದಿದ್ದಾರೆ. ಈ ಅಂಶವನ್ನು ಕುರಿತು ನಾನು ನನ್ನ ಪ್ರಾಸ್ತಾವಿಕ ಭಾಷಣದಲ್ಲಿಯೇ ಪ್ರಸ್ತಾಪಿಸಿದ್ದು, ಸರಕಾರವು ಈ ವಿಧವಾದ ಕಾನೂನಿನ ದುರುಪಯೋಗವಾಗಬಹುದೆಂಬುದನ್ನು ಅರಿತಿದೆ. ಆದರೂ ಈ ದಿಶೆಯಲ್ಲಿ ಕೆಲಕಾಲ ನೋಡಿ ಯಾವ ವಿಧವಾದ ನಿರ್ಬಂಧಗಳನ್ನು ಯಾವಾಗ ಹೇರಬಹುದೆಂದು ಕಾದು ನೋಡಬೇಕೆಂಬ ನಿಲುವನ್ನು ಹೊಂದಿದೆ. ಹೀಗಾಗಿ ನನಗೆ ತಿಳಿದಂತೆ, ಕಾರ್ಮಿಕರ ಕಲ್ಯಾಣದ ಬಗೆಗೆ ಚಿಂತಿಸುವವರಿಗೆಲ್ಲಾ ಸದ್ಯ ಈ ಮಸೂದೆಯ ಅಡಿಯಲ್ಲಿಯೇ ನಿರ್ಬಂಧಗಳನ್ನು ಹೇರುವ ಮನಸ್ಸಿದ್ದರೂ, ಆ ಸಂಗತಿಯನ್ನು ಪರಿಶೀಲನಾ ಸಮಿತಿಗೆ ಮನವರಿಕೆಯಾಗುವಂತೆ ಮಂಡಿಸಿ ಸರಕಾರವು ಈ ವಿಧವಾದ ಸೇರ್ಪಡೆಗೆ ಅಡಚಣೆ ತಾರದಂತೆ ಮಾಡಬೇಕಾಗಿದೆ.

ಮತ್ತೊಂದು ಅಂಶವೆಂದರೆ ವೇತನ ಸಹಿತ ರಜೆಯನ್ನು ನಿರ್ಧರಿಸುವಲ್ಲಿ ಅದರ ಸೂಕ್ತಸಮಯದ ನಿರ್ಣಯವನ್ನು ಸಂಪೂರ್ಣವಾಗಿ ಕಾರ್ಮಿಕರಿಗೆ ಬಿಡುವುದು ಸೂಕ್ತವೇ? ಸದ್ಯ ಸಭೆಯ ಮುಂದಿರುವ ಈ ಮಸೂದೆಯಲ್ಲಿ ನಾನು ಈ ವಿಷಯದ ಬಗೆಗೆ ಯಾವ ಪ್ರಸ್ತಾವನೆಯನ್ನೂ ಮಾಡಿಲ್ಲ; ಹಾಗೂ ಈ ವಿಷಯದ ಬಗೆಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನೂ ಪ್ರಾಂತೀಯ ಸರಕಾರಗಳಿಗೆ ಬಿಡಲಾಗಿದೆ. ನನಗೆ ತೋರಿದಂತೆ ಪ್ರತಿಯೊಂದು ವಿಷಯವನ್ನೂ ಕಾನೂನಿನಿಂದಲೇ ನಿರ್ಣಯಿಸುವ ಕ್ರಮ ಉತ್ತಮವಾದುದಲ್ಲ. ಈ ಕಾನೂನಿನಡಿಯಲ್ಲಿ ಬರಬಹುದಾದ ಉಪನಿಯಮಗಳನ್ನು ರಚಿಸಿಕೊಳ್ಳಲು ಪ್ರಾಂತೀಯ ಸರಕಾರಗಳಿಗೆ ಅನುವು ಮಾಡಿಕೊಡುವುದೇ ಸೂಕ್ತ. ಏಕೆಂದರೆ ಉಪನಿಯಮಗಳಲ್ಲಿ ಏನಾದರೂ ದೋಷ ಕಂಡುಬಂದಲ್ಲಿ ಅವುಗಳನ್ನು ತಿದ್ದಬಹುದಾಗಿದೆ. ಆದರೂ ಈ ಮಸೂದೆಗೆ ಸಂಬಂಧಿಸಿದ ಸದಸ್ಯರು ಈ ಹಂತದಲ್ಲಿಯೇ ನಿರ್ಣಯ ತೆಗೆದುಕೊಳ್ಳಬೇಕೆಂದು ಬಯಸಿದರೆ ಅದು ಆಯ್ಕೆ ಸಮಿತಿಗೆ ಸೇರಿದ ಸಂಗತಿಯಾಗಿದೆ.

ಹೀಗಾಗಿ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿದ ಅಂಶಗಳಲ್ಲಿ ಏನೂ ಸಾರಾಂಶವಿಲ್ಲವೆಂದೇ ಹೇಳಿ ಹೆಚ್ಚು ಪ್ರಸ್ತಾವನೆ ಇಲ್ಲದೆ ಮಸೂದೆಯನ್ನು ಮಂಡಿಸಿರುವೆ; ಹೀಗಾಗಿ ನಾನು ಹೆಚ್ಚಿನ ವಿಷಯಗಳ ಬಗೆಗೆ ಮಾತನಾಡಲು ಬಯಸುವುದಿಲ್ಲ.

**ಮಾನ್ಯ ಉಪಾಧ್ಯಕ್ಷ (ಶ್ರೀ ಅಖಿಲ ಚಂದ್ರದತ್)** : ಈ ಕಾರ್ಖಾನೆಗಳ ಕಾಯ್ದೆ ೧೯೩೪ (ಎರಡನೆಯ ತಿದ್ದುಪಡಿ) ಮಸೂದೆಯನ್ನು ಆಯ್ಕೆ ಸಮಿತಿಯ ಅವಗಾಹನೆಗೆ ಕಳಿಸಲಾಗುವುದು. "ಈ ಆಯ್ಕೆ ಸಮಿತಿಯು ನವಾಬ ಸಿದ್ಧಿಕಿ ಆಲೀ ಕಾನ್, ಬಹದ್ದೂರ ಷೇಕ್ ಫಜಲ್ ಹಕ್ ಫಿರಾಚ, ಶ್ರೀ ಆರ್.ಆರ್. ಗುಪ್ತಾ, ಶ್ರೀ ಎ.ಸಿ. ಇನ್‌ಸ್ಕಿಪ್, ಸರ್ ವಿಠಲ್ ಎನ್. ಚಂದಾವರ್‌ಕರ್, ರಾವ್ ಬಹದ್ದೂರ ಎನ್. ಶಿವರಾಜ, ಶ್ರೀ ಎನ್. ಎಂ. ಜೋಷಿ, ಶ್ರೀ ಡಿ.ಎಸ್. ಜೋಷಿ ಹಾಗೂ ಈ ಮಸೂದೆಯನ್ನು ಮಂಡಿಸಿದವರು ಮತ್ತು ಸಮಿತಿ ರಚನೆಗೆ ಆವಶ್ಯಕವಿರುವ ಸದಸ್ಯರು ಐದು ಮಂದಿಯನ್ನು ಒಳಗೊಂಡಿರುತ್ತದೆ."

ಮಂಡನೆಯನ್ನು ಅನುಮೋದಿಸಲಾಯಿತು.

## ೩೮
## ವೇತನ ಬಟವಾಡೆ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ)

ಮಾನ್ಯ ಉಪಾಧ್ಯಕ್ಷರೆ, ನಾನು ಇದನ್ನು ಮಂಡಿಸುವೆ.

"೧೯೨೬ರ ವೇತನ ಬಟವಾಡೆ ತಿದ್ದುಪಡಿ ಮಸೂದೆ ಪರಿಶೀಲನಾ ಸಮಿತಿಯ ಅವಗಾಹನೆಗೆ ತರುವುದೂ ಹಾಗೂ ಸಮಿತಿಯ ಸದಸ್ಯರಾದ ಶ್ರೀ ಸೇಟ್ ಯೂಸುಫ್ ಅಬ್ದುಲ್ ಹರೂನ್, ಶ್ರೀ ಮಹಮದ್ ಹುಸೇನ್ ಚೌಧರಿ, ಶ್ರೀ ಲಾಲಚಂದ್ ನವಲ್‌ರಾಯ್, ಶ್ರೀ ಎ.ಸಿ. ಇನ್‌ಸ್ಕಿಪ್, ಸರ್ ವಿಠಲ್ ಎನ್. ಚಂದಾವರ್‌ಕರ್, ಶ್ರೀ ಎಂ.ಎನ್. ಜೋಷಿ, ಡಾ|| ಸರ್ ರತನ್‌ಜೀ ದಿನ್‌ಷಾ ದಲಾಲ, ಶ್ರೀ ಡಿ.ಎಸ್. ಜೋಷಿ ಹಾಗೂ ಈ ತಿದ್ದುಪಡಿ ಮಸೂದೆಯನ್ನು ಮಂಡಿಸುವವರು ಹಾಗೂ ಸಂಖ್ಯೆ ಅವಶ್ಯವಾದ ಸದಸ್ಯರ ಸಮಿತಿಯ ಸಭೆಗೆ ಐದು ಸದಸ್ಯರು ಇರಬೇಕು."

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ಸಂ. ೫, ನವೆಂಬರ್ ೧೬, ೧೯೪೪, ಪು. ೮೮೯–೯೨.

ಮಾನ್ಯರೆ, ಸದ್ಯ ಸದನದ ಮುಂದೆ ಮಂಡಿಸಿರುವ ವೇತನ ಬಟವಾಡೆ ತಿದ್ದುಪಡಿ ಮಸೂದೆಯನ್ನು ೧೯೩೬ರಲ್ಲಿ ಜಾರಿಗೊಳಿಸಲಾಗಿತ್ತು. ಈ ಮಸೂದೆಯನ್ನು ಜಾರಿಗೊಳಿಸಿದ ಸಮಯದಲ್ಲಿ ಇದನ್ನು ಪ್ರಾಯೋಗಿಕ ಕ್ರಮವೆಂದೇ ಭಾವಿಸಲಾಗಿದ್ದುದರ ಕಾರಣವೆಂದರೆ ಈ ಮಸೂದೆಯನ್ನು ರೂಪಿಸುವಾಗ ನಮಗೆ ಯಾವ ಮಾದರಿಯೂ ಲಭ್ಯವಿರದೇ ಹೋದುದರಿಂದ ಈ ಮಸೂದೆಯನ್ನು ಒಂದು ಮಾದರಿ ಮಸೂದೆಯನ್ನಾಗಿ ಮಾಡಲು ಸಾಧ್ಯವಾಗದೇ ಹೋಯಿತು. ಆದರೆ, ಕಳೆದ ಈ ಆರು ವರ್ಷಗಳ ನಮ್ಮ ಅನುಭವದಿಂದ ಈ ಮಸೂದೆಯಲ್ಲಿಯ ಕುಂದುಕೊರತೆಗಳು ನಮ್ಮ ಗಮನಕ್ಕೆ ಬಂದಿವೆ. ನಾನು ಸದನಕ್ಕೆ ಹೇಳಬಹುದಾದರೆ ಈ ಮಸೂದೆಗೆ ಸುಮಾರು ೩೦ ಅಥವಾ ೪೦ ತಿದ್ದುಪಡಿಗಳ ಆವಶ್ಯಕತೆ ಇದೆ. ಆದರೆ ಭಾರತ ಸರಕಾರಕ್ಕೆ ವಿವಿಧ ರಾಜಕೀಯ ಪಕ್ಷಗಳಿಂದ ಸೂಚಿಸಲಾದ ಅನೇಕ ತಿದ್ದುಪಡಿಗಳನ್ನು ಗಮನದಲ್ಲಿರಿಸಿಕೊಂಡು ಸಮಗ್ರ ತಿದ್ದುಪಡಿಯಿಂದ ಮಸೂದೆಯನ್ನು ರಚಿಸಲು ಸಮಯವಿಲ್ಲದೇ ಹೋದುದರಿಂದ ಈ ಮಸೂದೆಯನ್ನು ಸುಧಾರಿಸುವ ಕಾರ್ಯಕ್ಕೆ ಕೈಹಾಕಲಾಗುವುದಿಲ್ಲ. ಹೀಗಾಗಿ ಈಗ ಕೇವಲ ಆಡಳಿತಾತ್ಮಕ ತೊಂದರೆಗಳನ್ನು ನಿವಾರಿಸಲು ಅನಿವಾರ್ಯವಾಗಿರುವ ತಿದ್ದುಪಡಿಗಳನ್ನು ಮಾತ್ರ ಈ ಮಸೂದೆ ಜಾರಿಗೊಳಿಸುತ್ತದೆ. ಹೀಗೆ ಮಾಡದೇ ಹೋದಲ್ಲಿ ಮಸೂದೆಯ ಉದ್ದೇಶವೇ ವಿಫಲವಾಗಬಹುದಾಗಿದೆ.

ಮಾನ್ಯರೆ, ಮಸೂದೆಯ ಕಲಮ್‌ಗಳನ್ನು ಒಂದೊಂದಾಗಿ ಗಮನಕ್ಕೆ ತೆಗೆದುಕೊಂಡಾಗ, ಮಸೂದೆಯ ಎರಡನೆಯ ಕಲಮ್‌ನಲ್ಲಿ ನಿರ್ದಿಷ್ಟ ತಿದ್ದುಪಡಿಯಲ್ಲಿ ಬಯಸುವುದೇನೆಂದರೆ, ಸೂತ್ರದಲ್ಲಿ ಪ್ರಯೋಗಿಸಲಾದ 'ವೇತನಗಳು ಅಥವಾ ಕೂಲಿ'ಯ ಬಗೆಗೆ ಅದರಲ್ಲಿಯೂ, ಅನೇಕ ಪಕ್ಷಗಳಿಂದ 'ಕೂಲಿ' ಪದದ ಬಗೆಗೆ ಬಂದಿರುವ ಆಕ್ಷೇಪಗಳನ್ನು ಮರು ಪ್ರಸ್ತಾಪಿಸಲು ಇಷ್ಟಪಡುವುದಿಲ್ಲ. ಆದರೆ ಈ ದಿಶೆಯಲ್ಲಿ ಪ್ರಮುಖಾಂಶಗಳನ್ನು ಮಾತ್ರ ಹೇಳಬಯಸುವೆ. ಈ ಪದವ್ಯಾಖ್ಯೆಯ ಬಗೆಗೆ ಮುಂಬಯಿಯ ಶ್ರೇಷ್ಠ ನ್ಯಾಯಾಲಯವು ನೀಡಿದ ತೀರ್ಪಿನಂತೆ ಈಗ ಸದ್ಯ ಜಾರಿಯಲ್ಲಿರುವ ವ್ಯಾಖ್ಯೆಯಂತೆ 'ಕೂಲಿ' ಎಂದರೆ ಕಾರ್ಮಿಕನು ಪಡೆಯಬಹುದಾದ ಹಾಗೂ 'ಅಂತಸ್ಥ ಕೂಲಿ' (potential wages), ಅಂದರೆ, ಸಿಗಬಹುದಾದ 'ಕೂಲಿ'ಗೆ ಅನ್ವಯವಾಗುತ್ತದೆ. ಆದರೆ ಮಸೂದೆಯ ಮೂಲ ಮುಖ್ಯ ಉದ್ದೇಶ ಇದಾಗಿರಲಿಲ್ಲ. ಈ ವಿಷಯದಲ್ಲಿರುವ ಮತ್ತೊಂದು ಕುಂದು ಎಂದರೆ ಅದು ನೇಮಕ ಹೊಂದಿದ ಕಾರ್ಮಿಕರಿಗೆ ಸರದಿಯನ್ನು ಹೊರತುಪಡಿಸಿದ ಆಧಾರದ ಮೇಲೂ 'ಕೂಲಿ' ಪಡೆಯುವ ಅವಕಾಶ ನೀಡುತ್ತದೆ. ಹೀಗಾಗಿ ಈ ಮಸೂದೆಯಲ್ಲಿ ಕಾಲಾವಧಿಯ ಆಧಾರದ ಮೇಲೆ ನೇಮಿಸಿಕೊಂಡ ಕಾರ್ಮಿಕರ ಹಾಗೂ ಸರದಿ ಬಿಟ್ಟ (Out of term) ನೌಕರರ 'ಕೂಲಿ' ಬಗೆಗೆ ಗೊಂದಲವಿದೆ. ಅಲ್ಲದೆ ಹಲವರ ಹೇಳಿಕೆಯಂತೆ ಈ ಮಸೂದೆಯಲ್ಲಿ ಬಳಸಲಾದ ಪದಗಳ ವ್ಯಾಖ್ಯೆಯ ಬಗೆಗೆ ತುಂಬಾ ಗೊಂದಲವಿದೆ ಹಾಗೂ ಹಲವು ಪದಗಳನ್ನು ಅನಾವಶ್ಯಕವಾಗಿ ಸೇರಿಸಿರುವುದರಿಂದ ಇನ್ನೂ ಹೆಚ್ಚು ಗೊಂದಲಕ್ಕೆ ಆಸ್ಪದ ನೀಡಿದಂತಾಗಿದೆ. ನಾನು ಉದಾಹರಿಸಬಹುದಾದರೆ "ಬೋನಸ್ ಅಥವಾ ಹೆಚ್ಚುವರಿ ಸಂಭಾವನೆಗಳು ಮೇಲೆ ತಿಳಿಸಿದ ಪದವ್ಯಾಖ್ಯೆ ಪ್ರಕಾರ ತೆರಬೇಕಾಗುತ್ತದೆ". ನಮಗೆ ನೀಡಲಾದ ಸಲಹೆಯಂತೆ ಈ ವಿಧವಾದ ಪದಗಳ ಪ್ರಯೋಗ ಏನೂ ಉಪಯೋಗಕ್ಕೆ ಬಾರದೇ ಹಿಂದಿನ ವ್ಯಾಖ್ಯೆಯಲ್ಲಿ ಸೇರಿಸಲಾಗಿದೆ. ಮತ್ತೊಂದು ಸಲಹೆಯಂತೆ 'ಕೂಲಿ' ಪದದ ವ್ಯಾಖ್ಯೆಯ ಔಚಿತ್ಯವು, ಯುದ್ಧದಿಂದ ಜಾರಿಗೆ ಬಂದ 'ತುಟ್ಟಿಭತ್ಯೆ' ನೀಡುವುದರಿಂದ ತನ್ನ ಮಹತ್ವವನ್ನೇ ಕಳೆದುಕೊಂಡಿದೆ. ಈ ದಿನ ಈ ಪದದ ಬಳಕೆಯು ಅಸಮರ್ಪಕವಾಗಿದೆ. ಏಕೆಂದರೆ ಮಾಲೀಕರು ತುಟ್ಟಿಭತ್ಯೆಯು ಕೂಲಿಯಲ್ಲಿ ಸೇರ್ಪಡೆ ಆಗುವುದಿಲ್ಲ ಎಂದು ವಾದಿಸಲೂಬಹುದು.

ಆದರೆ ಈಗ ನಾವು ಮಂಡಿಸಿದ ಮಸೂದೆಯಲ್ಲಿ ಈ ವಿಧವಾದ ಗೊಂದಲಕ್ಕೆ ಆಸ್ಪದನೀಡದೆ ಎಲ್ಲಾ

ತೊಂದರೆಗಳನ್ನು ನಿವಾರಿಸಲಾಗಿದೆ. ನನಗೆ ತಿಳಿದಂತೆ ವ್ಯಾಖ್ಯೆಯನ್ನು ತುಂಬಾ ಸರಳಗೊಳಿಸಿದ್ದು, ಮೂಲ ಮಸೂದೆಯ ಧ್ಯೇಯಗಳನ್ನು ಉದ್ದೇಶವನ್ನು ಈಡೇರಿಸುವಲ್ಲಿ ಸಾರ್ಥಕವಾಗಿದೆಯೋ ಇಲ್ಲವೋ ಇದರ ಬಗೆಗೆ ನನಗೇ ತೋಚದಂತಾಗಿದೆ. ಆದರೆ ನಾವು ಮಂಡಿಸಿದ ಮಸೂದೆಯಲ್ಲಿಯ ವ್ಯಾಖ್ಯೆಯು ವ್ಯಕ್ತಿ, ಸ್ಥಾನ ಹಾಗೂ ಮತೀಯ ಮನ್ನಣೆಗಳಿಂದ ಮುಕ್ತವಾಗಿದೆ. ಒಂದು ವೇಳೆ ಪರಿಶೀಲನಾ ಸಮಿತಿಯ ಸದಸ್ಯರು ಇದಕ್ಕಿಂತ ಉತ್ತಮ ಪದಗಳಿಂದ ವ್ಯಾಖ್ಯೆಯನ್ನು ರಚಿಸಿದಲ್ಲಿ ನಾನು ಯಾವ ವಿಧವಾದ ತಿದ್ದುಪಡಿಯನ್ನು ತರದೆ ಆ ವ್ಯಾಖ್ಯೆಯನ್ನು ಒಪ್ಪಿಕೊಳ್ಳುವೆ.

ಮೂರನೇ ಕಲಮಿಗೆ ಬಂದರೆ, ಅದು ಪುಸ್ತುತ ೫ನೇ ಖಂಡಕ್ಕೆ ೨ ತಿದ್ದುಪಡಿಗಳನ್ನು ತಂದಿದೆ. ಮಾನ್ಯ ಸದಸ್ಯರಿಗೆ ಜ್ಞಾಪಕವಿರುವಂತೆ ಖಂಡ ೫ ಕೂಲಿಯನ್ನು ನೀಡಲು ಇರಬೇಕಾದ ಅವಧಿಗೆ ಸಂಬಂಧಿಸಿದೆ. ಈ ಖಂಡ ಕಾರ್ಖಾನೆಗಳನ್ನು ಎರಡು ವಿಧವಾಗಿ ವಿಂಗಡಿಸುತ್ತದೆ. ಮೊದಲನೆಯ ವಿಧದಲ್ಲಿ ೧,೦೦೦ ಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರನ್ನು ನೇಮಿಸಿದ ಹಾಗೂ ಎರಡನೇ ವಿಧದಲ್ಲಿ ೧,೦೦೦ ಕ್ಕಿಂತ ಹೆಚ್ಚು ನೌಕರರನ್ನು ನೇಮಿಸಿಕೊಂಡ ಕಾರ್ಖಾನೆಗಳಿವೆ. ಈ ವಿಧವಾದ ಭೇದವನ್ನು ಕಲ್ಪಿಸಿದ ನಂತರ ಈ ಖಂಡ ಮೊದಲನೆಯ ವಿಧದಲ್ಲಿ ಬರುವ ಕಾರ್ಖಾನೆಗಳು ಏಳು ದಿನಗಳೊಳಗೆ ಹಾಗೂ ಎರಡನೆಯ ವಿಧದಲ್ಲಿ ೧೦ ದಿನಗಳೊಳಗೆ ಬಟವಾಡೆ ಮಾಡಬೇಕೆಂದು ನಿರ್ಧರಿಸಿದೆ. ಆದರೆ ವಾಸ್ತವಿಕವಾಗಿ ಗಮನಿಸಿದಲ್ಲಿ ಈ ನಿರ್ಣಯವನ್ನು ಜಾರಿಗೊಳಿಸುವುದು ತೊಂದರೆಯಿಂದ ಕೂಡಿದೆ ಹಾಗೂ ಅದರ ಕಾರಣ ತಿಳಿಯುವುದೂ ತೀರಾ ಸುಲಭ. ಏಕೆಂದರೆ ನೇಮಿಸಿಕೊಂಡಿರುವ ನೌಕರರ ಆಧಾರದ ಮೇಲೆ ಈ ಎರಡು ವಿಧಗಳನ್ನು ನಿರ್ಣಯಿಸಲಾಗಿದೆ. ಸದನದ ಸದಸ್ಯರಿಗೆ ಈಗಾಗಲೇ ಮನವರಿಕೆಯಾದಂತೆ ಯಾವ ಕಾರ್ಖಾನೆಯ ನೌಕರರ ಸಂಖ್ಯೆಯೂ ನಿರ್ದಿಷ್ಟವಾಗಿರುವುದಿಲ್ಲ; ಅದು ಯಾವಾಗಲೂ ಬದಲಾಯಿಸುತ್ತಲೇ ಹೋಗುತ್ತದೆ. ಉದಾಹರಣೆಗಾಗಿ ನಿಗದಿಪಡಿಸಿದ ಸಂಖ್ಯೆಗೆ ಒಂದು ನೇಮಕ ಕಡಿಮೆಯಾದರೆ ಎರಡನೆ ವಿಧದಲ್ಲಿ ಬರಬಹುದಾದ ಕಾರ್ಖಾನೆಯು ಒಂದನೇ ವಿಧಕ್ಕೆ ಸೇರ್ಪಡೆ ಆಗಬೇಕಾಗುತ್ತದೆ. ಅದರಂತೆಯೇ ಒಂದು ಸಂಖ್ಯೆ ಹೆಚ್ಚಿದ್ದರೆ ಕೂಡಾ ವಿಧಗಳಲ್ಲಿ ವ್ಯತ್ಯಾಸ ಹೊಂದುತ್ತದೆ. ನನ್ನ ನಂಬಿಕೆಯಂತೆ ಈ ವಿಧವಾದ ವ್ಯತ್ಯಾಸ ಸರಿಯಾದುದಲ್ಲ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಸಾಧುವಲ್ಲ. ಆದುದರಿಂದ ಈಗ ಮಂಡಿಸುವ ಮಸೂದೆಯಲ್ಲಿ ಈ ವ್ಯತ್ಯಾಸವನ್ನು ತೊಡೆದುಹಾಕಲಾಗಿದ್ದು ಎಲ್ಲಾ ಕಾರ್ಖಾನೆಗಳನ್ನೂ ಒಂದೇ ಸಾಮಾನ್ಯ ವರ್ಗದಲ್ಲಿ ಸೇರಿಸಿ ಕಾರ್ಖಾನೆಯಲ್ಲಿಯ ನೌಕರರ ಸಂಖ್ಯೆಯ ಸೂತ್ರವನ್ನು ಕೈ ಬಿಡಲಾಗಿದೆ. ಆದುದರಿಂದ ಎಲ್ಲ ಕಾರ್ಖಾನೆಗಳಿಗೆ ಒಂದೇ ವಿಧವಾದ ನಿಯಮವಿದ್ದು ಅದರಂತೆ ೧೦ ದಿನಗಳಲ್ಲಿ ಹಣ ಬಟವಾಡೆ ಮಾಡತಕ್ಕದ್ದು. ಮೂರನೇ ಕಲಮ್‌ನ ಎರಡನೇ ತಿದ್ದುಪಡಿ ಏನೆಂದರೆ ಹಾಗೂ ಸದನವು ಅರಿಯಬೇಕಾದ ಸಂಗತಿ ಎಂದರೆ ೫ನೆಯ ಖಂಡದಲ್ಲಿ ಸೇವೆಯಿಂದ ತೆಗೆದುಹಾಕಲಾದವರ ಬಟವಾಡೆಯ ಬಗೆಗೆ ಹೇಳಲಾಗಿದೆ. ಈಗಿರುವ ನಿಯಮಾವಳಿಯಂತೆ ಸೇವೆಯಿಂದ ತೆಗೆದುಹಾಕಿದ ಕಾರ್ಮಿಕರ ಬಟವಾಡೆಯನ್ನು ಎರಡನೆಯ ದಿನದಂದೇ ನೀಡಬೇಕೆಂದು ಹೇಳಲಾಗಿದೆ. ಆದರೆ, ಮಾನ್ಯರೆ, ವೇತನ ಬಟವಾಡೆ ಕಾನೂನು ಕೇವಲ ನಿರಂತರ ಕಾರ್ಖಾನೆಗಳಿಗೆ ಮಾತ್ರ ಅನ್ವಯಿಸಿದಾಗ ಈ ತೊಂದರೆ ಇರಲಾರದು. ಏಕೆಂದರೆ ಅಂತಹ ಕಾರ್ಖಾನೆಗಳು ಎಲ್ಲಾ ದಿನಗಳಂದೂ ಕಾರ್ಯ ಮಾಡುತ್ತಲಿರುತ್ತವೆ. ಆದರೆ ಕೇವಲ ಋತುಮಾನಗಳಿಗನುಗುಣವಾಗಿ ಕಾರ್ಯ ಮಾಡಲಿರುವ ಕಾರ್ಖಾನೆಗಳಲ್ಲಿ ಈ ವಿಧವಾದ ನಿಯಮದಿಂದ ಅನೇಕ ತೊಂದರೆಗಳು ಉಂಟಾಗುವುದರಲ್ಲಿ ಸಂದೇಹವೇ ಇಲ್ಲ. ಉದಾಹರಣೆಗೆ ಒಬ್ಬ ನೌಕರನನ್ನು ಕಾರ್ಖಾನೆಯ ಕೊನೆಯ ಕೆಲಸದ ದಿನದಂದು ತೆಗೆದುಹಾಕಿದಲ್ಲಿ ಅವನಿಗೆ ಬಟವಾಡೆ ದೊರೆಯದೇ

ಹೋಗಬಹುದು ಹೀಗಾಗಿ ಕಾರ್ಮಿಕರು ತೊಂದರೆಗೆ ಈಡಾಗುವುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಕಾರ್ಖಾನೆಯು ನಿರಂತರ ಕಾರ್ಖಾನೆಯಾಗಿರದೇ ಹೋದುದರಿಂದ ಅದು ತೆಗೆಯಲು ಮುಂದಿನ ವರ್ಷದ ಅದೇ ಋತುಮಾನದ ವರೆಗೆ ನೌಕರರು ಕಾಯಬೇಕಾಗುವುದು. ಆದುದರಿಂದ ಈ ನಿಯಮವನ್ನು ತಿದ್ದದೇ ಹೋದಲ್ಲಿ ತಾತ್ಕಾಲಿಕ ಕಾರ್ಖಾನೆಯ ಕಾರ್ಮಿಕರು ಈ ಸೌಲಭ್ಯದಿಂದ ವಂಚಿತರಾಗುತ್ತಾರೆ. ಆದುದರಿಂದ ತಿದ್ದುಪಡಿಯಾದ ಮಸೂದೆಯಲ್ಲಿ ತಾತ್ಕಾಲಿಕ ಅಥವಾ ಮೂಲ ಕಾರ್ಖಾನೆಗಳ ತೆಗೆದುಹಾಕಲಾದ ನೌಕರರಿಗೆ ಏಳನೇ ದಿನದಂದೇ ಬಟವಾಡೆ ಮಾಡಬೇಕೆಂಬುದನ್ನು ಸೇರಿಸಲಾಗಿದ್ದು ಎರಡು ಹಾಗೂ ಮೂರು ಮತ್ತು ಕೆಲಸದ ದಿನ ಎಂಬ ಪದಗಳನ್ನೇ ತಿದ್ದುಪಡಿಯಾದ ಮಸೂದೆಯಲ್ಲಿ ಕೈಬಿಡಲಾಗಿದೆ.

ಈಗ ನಾನು ಮಸೂದೆಯ ೪ನೆಯ ಕಲಮ್‌ನ ಬಗೆಗೆ ಹೇಳಬಯಸುತ್ತೇನೆ. ಸದನದ ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಈ ಕಲಮ್‌ನಲ್ಲಿ ಹೇಳಲಾದ ವಿಷಯಗಳ ಬಗೆಗೆ ಖಂಡ ೭ರಲ್ಲಿ ಹಲವು ತಿದ್ದುಪಡಿಗಳು ಅನಿವಾರ್ಯವಾಗಿವೆ. ಖಂಡ ೭ರಲ್ಲಿ ನೌಕರರ ಬಟವಾಡೆಯಲ್ಲಿ ಮುರಿದುಕೊಳ್ಳಬಹುದಾದ ಕೂಲಿಯ ಬಗೆಗೆ ಪ್ರಸ್ತಾಪಿಸಲಾಗಿದೆ. ಈ ದಿಶೆಯಲ್ಲಿರಬಹುದಾದ ದೋಷಗಳನ್ನು ನಾನು ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಉದಾಹರಣೆಗೆ ಸದ್ಯ ಜಾರಿಯಲ್ಲಿರುವ ಈ ಮಸೂದೆಯಲ್ಲಿ ಮಧ್ಯದಲ್ಲಿಯೇ ನೌಕರಿ ಬಿಟ್ಟುಹೋದ ಕಾರ್ಮಿಕರ ಬಗೆಗೆ ಯಾವ ಪ್ರಸ್ತಾಪವೂ ಇಲ್ಲ. ಅವನು ತನಗೆ ದೊರೆಯಬಹುದಾದ ಗ್ರಾಚ್ಯುಟಿ ಹಾಗೂ ಪ್ರಾವಿಡೆಂಟ್ ಫಂಡ್‌ನ ಹಣವನ್ನು ತೆಗೆದುಕೊಂಡು ಹೋಗುವನೇ ಹೊರತು ಅವನಿಗೆ ತನ್ನ ಸೇವೆಯ ಅವಧಿಗಾಗಿ ದೊರೆಯಲೇಬೇಕಾದ ವೇತನ ಸಹಿತ ರಜೆಯ ಸೌಲಭ್ಯದಿಂದ ಬರಬೇಕಾದ ನಗದು ಹಣ ದೊರೆಯುವುದಿಲ್ಲ. ಕಾರ್ಮಿಕನು ತನ್ನ ಅನಿವಾರ್ಯವಾದ ಆರ್ಥಿಕ ಆವಶ್ಯಕತೆಗಳಿಂದ ಹಲವು ಬಾರಿ ಮಧ್ಯದಲ್ಲಿಯೇ ತನ್ನ ನೌಕರಿಯನ್ನು, ಕೇವಲ ಪ್ರಾವಿಡೆಂಟ್ ಫಂಡ್ ಹಾಗೂ ಗ್ರಾಚ್ಯುಟಿ ಪಡೆದುಕೊಳ್ಳಲೆಂದೇ ತೊರೆದು ಹೋಗುತ್ತಾನೆ. ಹೀಗೆ ಹಣ ಪಡೆದನಂತರ ಅವನು ಮತ್ತೆ ಅದೇ ನೌಕರಿಗೆ ವಾಪಸು ಬರುತ್ತಾನೆ. ಹೀಗಾಗಿ ಅವನು ತನಗೆ ಬರಬೇಕಾದ ಸೌಲಭ್ಯಗಳನ್ನು ಪಡೆಯಲು ಉತ್ಸುಕನಾಗಿರುತ್ತಾನೆ; ಹೀಗಾಗಿ ಅವನು ತಾನು ತೆಗೆದುಕೊಂಡಿರಬಹುದಾದ ಗ್ಯಾಚ್ಯುಟಿ ಹಾಗೂ ಪ್ರಾವಿಡೆಂಟ್ ಫಂಡ್‌ನ ಹಣವನ್ನು ವಾಪಸ್ಸು ಮಾಡಲೂ ಸಿದ್ಧನಿರುತ್ತಾನೆ. ಆದರೆ ಈಗ ಜಾರಿಯಲ್ಲಿರುವ ಕಾನೂನಿನಲ್ಲಿ ಅವನು ನೀಡಬಹುದಾದ ಈ ಮೊತ್ತದ ಹಣವನ್ನು ಅವನಿಗೆ ನೀಡುವ ಕೂಲಿಯಿಂದ ಮುರಿದುಕೊಳ್ಳಲು ಆಸ್ಪದವನ್ನೇ ನೀಡಿಲ್ಲ. ಕಾರ್ಮಿಕರ ಹಿತದೃಷ್ಟಿಯಿಂದ ಈ ಅವಕಾಶವನ್ನು ಕಲ್ಪಿಸುವುದು ಅನಿವಾರ್ಯವೆಂದು ಹೇಳಬಯಸುವೆ. ತರುವಾಯ, ಮಾನ್ಯರೆ, ಹಲವು ವಿಧವಾದ ಸೌಲಭ್ಯಗಳಿಗಾಗಿ ಈಗಿರುವ ಶಾಸನದಲ್ಲಿ ಅವಕಾಶವಿಲ್ಲದೇ ಹೋಗಿದೆ. ತನ್ನ ಸೌಕರ್ಯಕ್ಕಾಗಿ ಕಾರ್ಮಿಕರು ಕೂಲಿಯಲ್ಲಿ ಕಡಿತಕ್ಕೆ ಸ್ವಯಂಸಿದ್ಧರೂ ಹಾಗೂ ಒಪ್ಪಿಗೆ ನೀಡಿದ್ದರೂ ಆ ವಿಧವಾದ ಅವಕಾಶಗಳಿಗೆ ಈಗಿನ ಶಾಸನದಲ್ಲಿ ಆಸ್ಪದವೇ ಇಲ್ಲದಾಗಿದೆ. ಹೀಗಾಗಿ ತಿದ್ದುಪಡಿಯ ಮಸೂದೆಯಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವ ತಿದ್ದುಪಡಿಗಳನ್ನು ತರಲಾಗಿದೆ. ಖಂಡ ೭ರಡಿಯಲ್ಲಿ ಇನ್ನೂ ಅನೇಕ ದೋಷಗಳಿದ್ದು ಅವು ನೌಕರರಿಗೆ ದೊರೆಯಬೇಕಾದ ಬಡ್ತಿ ಶ್ರೇಣಿ ಬಗೆಗೆ ಇದ್ದು ಅದರ ಬಗೆಗೂ ತಿದ್ದುಪಡಿ ಮಸೂದೆಯನ್ನು ಮಂಡಿಸಲಿದ್ದೇನೆ. ಈ ಸಂಗತಿಯು ಹೊಸದಾಗಿದ್ದು ಅದನ್ನು ಈ ಮಸೂದೆಯಲ್ಲಿ ಅಳವಡಿಸಲಾಗಿದ್ದು ಹಾಗೂ ಅದರ ಹಿನ್ನೆಲೆಯನ್ನು ಸದನಕ್ಕೆ ವಿವರಿಸಬಯಸುವೆ. ಈ ಎಲ್ಲಾ ಕಾರಣಗಳಿಂದ ಈ ತಿದ್ದುಪಡಿ ಮಸೂದೆ ತರಲಾಗಿದೆ. ೪ನೆಯ ಪ್ರಕರಣದ ೩ನೆಯ ಉಪಪ್ರಕರಣ ಮೂರು ವಿಷಯಗಳಿಂದ ಕೂಡಿದೆ. ಮೊದಲನೆಯದಾಗಿ, ಅದು ಬಡ್ತಿ ಶ್ರೇಣಿಯಲ್ಲಿಯ ಕಾರ್ಮಿಕರ ಬಡ್ತಿಯನ್ನು ನೀಡದಿರುವ ವಿಷಯದ್ದಾಗಿದೆ. ಎರಡನೆಯ ವಿಷಯವೆಂದರೆ, ಹೆಚ್ಚುವರಿ ದರ್ಜೆಯ ನೌಕರರಿಗೆ

ವೇತನ ಅಥವಾ ಕೂಲಿಯಲ್ಲಿ ಕಡಿತ ನೀಡಿ ಹಿಂಬಡ್ತಿ ನೀಡುವುದರ ಬಗೆಗೆ ಇದೆ. ಮೂರನೆಯದಾಗಿ, ಕಾರ್ಮಿಕರನ್ನು ಇದ್ದ ದರ್ಜೆಯಲ್ಲಿಯೇ ಇಡುವುದರ ಬಗೆಗೆ ಇದೆ; ಹಾಗೂ ಅವರ ವೇತನದಲ್ಲಿ ಕಡಿತವನ್ನು ಕಾರ್ಯಕ್ಷಮತೆಯ ಕೊರತೆ ಎಂದು ಪರಿಗಣಿಸುತ್ತದೆ. ಸಿಂಧ್ ರಾಜ್ಯದ ನ್ಯಾಯಾಂಗ ಆಯುಕ್ತರು ನೀಡಿದ ನಿರ್ಣಯದಿಂದಾಗಿ ೪ನೇ ಖಂಡದ (ಇ)ನೆ ಉಪಖಂಡಕ್ಕೆ ತಿದ್ದುಪಡಿ ತರುವುದು ಅನಿವಾರ್ಯವಾಯಿತು. ಈ ಪ್ರಕರಣವು ನನಗೆ ತಿಳಿದಂತೆ ಒಬ್ಬ ಇಂಜಿನ್ ಡ್ರೈವರನಿಗೆ ಸಂಬಂಧಿಸಿದ್ದಾಗಿದೆ. ಅವನ ದರ್ಜೆಯಲ್ಲಿ ಯಾವ ಕಡಿತವಿಲ್ಲದೇ ಹೋದರೂ ಅವನ ವೇತನದಲ್ಲಿ ಕಡಿತ ಮಾಡಲಾಗಿದೆ. ಹೀಗಾಗಿ ಅವನು ನ್ಯಾಯಾಲಯಕ್ಕೆ ಮೊರೆಹೊಕ್ಕು ತನ್ನ ದರ್ಜೆಯಲ್ಲಿ ಕಡಿತ ಮಾಡದೆ ವೇತನದಲ್ಲಿ ಕಡಿತ ಮಾಡಿದುದು ಕಾನೂನು ಬಾಹಿರ ಕ್ರಮವೆಂದು ಕೋರಿದನು. ನ್ಯಾಯಾಧೀಶರು ಇವನ ಕೋರಿಕೆಯನ್ನು ಎತ್ತಿಹಿಡಿದು, ವೇತನದಲ್ಲಿಯ ಕಡಿತವನ್ನು ಅಕ್ರಮವೆಂದೇ ಸಾರಿದರು. ಆದರೆ ನ್ಯಾಯಾಧೀಶರು ಎತ್ತಿಹಿಡಿದ ಅಂಶವೆಂದರೆ, ಕಾರ್ಮಿಕ ಹಾಗೂ ಮಾಲೀಕನ ಮಧ್ಯೆ ನೂತನ ಒಪ್ಪಂದವೇನಾದರೂ ಮಾಡಿಕೊಂಡಿದ್ದಲ್ಲಿ ಹಾಗೂ ಆ ಒಪ್ಪಂದದಲ್ಲಿ ಕಾರ್ಮಿಕನಿಗೆ ನೀಡಲಾದ ಕಾರ್ಯದಲ್ಲಿ ಕಾರ್ಯಕ್ಷಮತೆ ಕೊರತೆ ಉಂಟಾದಲ್ಲಿ ವೇತನ ಕಡಿತ ಜಾರಿಗೊಳಿಸುವಂತೆ ಕಾರ್ಮಿಕನು ಸಮ್ಮತಿ ನೀಡಿದ್ದಲ್ಲಿ ಅದು ಸೂಕ್ತ ಕ್ರಮವಾಗಬಲ್ಲದು. ಹಾಗೂ ವೇತನ ಕಡಿತ ಕಾನೂನುಬಾಹಿರ ಕ್ರಮವಾಗಲಾರದು. ಹೀಗಾಗಿ ಈಗ ಈ ಮಸೂದೆಯಲ್ಲಿ ನ್ಯಾಯಾಧೀಶರು ಸಲಹೆ ಮಾಡಿದಂತೆ ಯಾವುದೇ ಪ್ರಕರಣದಲ್ಲಿ ಅಧಿಕಾರಿಯು ತನ್ನ ಕಾರ್ಯಕ್ಷಮತೆಯ ಮಟ್ಟವನ್ನು ಕಾಪಾಡಿಕೊಂಡು ಹೋಗದೇ ಇದ್ದ ಸಂದರ್ಭದಲ್ಲಿ ಅವನ ದರ್ಜೆಗೆ ಧಕ್ಕೆಯಾಗದೇ ಹೋದರೂ, ಅವನ ವೇತನದಲ್ಲಿಯ ಕಡಿತವು ಅವನ ಸೇವೆಗೆ ನೀಡಿದ ನೋಟೀಸಿನ ಅವಧಿ ಮುಗಿಯುವ ವರೆಗೂ ಜಾರಿಯಲ್ಲಿ ತರಕೂಡದು ಎಂದು ಸೇರಿಸಲಾಗಿದೆ. ಮಾನ್ಯರೆ, ಈಗ ತಿಳಿಸಬೇಕೆಂದರೆ ಅವನಿಗೆ ಒಂದು ತಿಂಗಳ ಅವಧಿಯ ನೋಟೀಸನ್ನು ನೀಡಲೇಬೇಕು. ಸರಳ ಅಥವಾ ಪರಿಪೂರ್ಣ ವಿಧಾನವೆಂದರೆ ಕಾನೂನು ಬದ್ಧ ನೋಟೀಸನ್ನು ಜಾರಿಗೊಳಿಸುವುದು; ಇದರ ಸಾರಾಂಶವೆಂದರೆ: "ನಾವು ನಿಮಗೆ ಅದೇ ವೇತನವನ್ನು ಅಂದರೆ ಮುಂಚೆ ನೀಡುತ್ತಿದ್ದ ವೇತನವನ್ನೇ ನೀಡಲಾರೆವು. ನೀವು ನೂತನ ವೇತನದ ಆಧಾರದ ಮೇಲೆ ಕಾರ್ಯ ಮಾಡುತ್ತಿದ್ದರೆ ಮಾಡಬಹುದು, ಸಮ್ಮತಿ ಇಲ್ಲದೇ ಹೋದರೆ ಹೊರಟು ಹೋಗಬಹುದು". ನಾವು ಈ ವಿಧವಾದ ದ್ವಂದ್ವಕ್ಕೆ ಆಸ್ಪದ ನೀಡದೇ ಅಂದರೆ ನೋಟೀಸು ಮತ್ತು ಅದಕ್ಕೆ ಉತ್ತರ, ತಿರಸ್ಕರಿಸುವ ಹಾಗೂ ನೀಡುವ ಈ ಎಲ್ಲಾ ದೀರ್ಘ ಕ್ರಮಗಳನ್ನು ನಿವಾರಿಸಲೆಂದೇ ನೋಟೀಸಿನ ಅವಧಿಯನ್ನು ಕಾನೂನಿನಲ್ಲಿ ಸೇರಿಸಲಾಗಿದೆ. ಈ ಅವಧಿಯಲ್ಲಿ ಮಾಲೀಕರು ನೀಡಿದ ಎಚ್ಚರಿಕೆಯನ್ನು ಒಪ್ಪದೇ ಹೋದಲ್ಲಿ ಕಾರ್ಮಿಕನು ತಾನೇ ತಾನಾಗಿ ಹೊರಟು ಹೋಗುವ ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ. ನಾನು ನನ್ನ ಈ ತಿದ್ದುಪಡಿ ಕ್ರಮದಲ್ಲಿ ನೂತನವಾದ ಅಂಶವನ್ನೇನೂ ತಾರದೇ ನ್ಯಾಯಿಕ ಆಯುಕ್ತರು ತಮ್ಮ ತೀರ್ಪಿನಲ್ಲಿ ಸಲಹೆಮಾಡಿದ ಅಂಶವನ್ನೇ ಅಳವಡಿಸಿಕೊಂಡಿದ್ದೇನೆ ಎಂದು ಸದನದ ಗಮನಕ್ಕೆ ತರಬಯಸುವೆ. ನನ್ನ ಈ ಕ್ರಮದಿಂದಾಗಿ ಭವಿಷ್ಯದಲ್ಲಿ ನ್ಯಾಯಾಲಯವು ನಮ್ಮ ಕ್ರಮ ಕಾನೂನುಬಾಹಿರ ಎಂದು ಘೋಷಿಸಲಾಗದಂತೆ ಮುಂಜಾಗ್ರತೆ ವಹಿಸಿದಂತಾಗಿದೆ.

ಮಿಕ್ಕ ಎರಡು ತಿದ್ದುಪಡಿಗಳೆಂದರೆ: ಬಡ್ತಿವೇತನ ತಡೆಹಿಡಿಯುವ ಹಾಗೂ ಹಿಂಬಡ್ತಿಯನ್ನು ಸಾರಿ ದರ್ಜೆಯಲ್ಲಿ ಕಡಿತ ಮಾಡುವ ಕ್ರಮಗಳ ಬಗೆಗೆ ಇವೆ. ಈ ವಿಷಯಗಳಲ್ಲಿ ಯಾವ ಭಿನ್ನಾಭಿಪ್ರಾಯಕ್ಕೂ ಆಸ್ಪದವೇ ಇಲ್ಲ. ಕಾರಣ ಸುಲಭವಾಗಿ ಅರಿಯಬಹುದಾಗಿದೆ. ಏಕೆಂದರೆ ಸಾಮಾನ್ಯವಾಗಿ ಕೆಳದರ್ಜೆಯಿಂದ ಮೇಲು ದರ್ಜೆಗೆ ಬಡ್ತಿಯಾಗಬೇಕಾದಲ್ಲಿ ಕಾಲಾವಕಾಶವನ್ನು ನಿಗದಿಪಡಿಸಲಾಗಿದ್ದು, ಈ ಅವಧಿಯಲ್ಲಿ

ಮಾಲೀಕರಿಗೆ ತೃಪ್ತಿನೀಡುವಂತೆ ಸೇವೆ ಸಲ್ಲಿಸಲಾರದೆ ಹೋದಲ್ಲಿ ಕಾರ್ಮಿಕನನ್ನು ಇನ್ನೂ ಕೆಲವು ಅವಧಿಯವರೆಗೆ ಅದೇ ದರ್ಜೆಯಲ್ಲಿ ಕಾರ್ಯಮಾಡುವಂತೆ ಹೇಳಿದಲ್ಲಿ, ಅವನ ಕಾರ್ಯಕ್ಷಮತೆ ಹೆಚ್ಚಿ ಹಾಗೂ ಅವನ ಸೇವಾ ಅವಧಿಯೂ ಹೆಚ್ಚುವುದರಿಂದ ಮುಂದಿನ ದರ್ಜೆಗೆ ಹೋಗಲು ಅವನಿಗೆ ಸಹಕಾರಿಯಾಗಬಲ್ಲದು. ಏಕೆಂದರೆ ಅವನನ್ನು ಮೇಲು ದರ್ಜೆಗೆ ಬಡ್ತಿಯಾಗದಂತೆ ಮಾಡಿದಲ್ಲಿ ಅದು ಕೊರತೆ ಎಂದು ಭಾವಿಸಲಾಗದು. ಒಂದು ಸಂಗತಿ ಎಂದರೆ ಅವನಿಗೆ ಹೆಚ್ಚಿನ ಗಳಿಕೆಗೆ ಆಸ್ಪದ ನಿರಾಕರಿಸಿದಂತೆ ಮಾತ್ರ ಆಗಬಹುದು.

ಇದೇ ವಿಧವಾಗಿ ಹಿಂಬಡ್ತಿಯ ಬಗೆಗೆ ಹೇಳಬೇಕಾದುದೆಂದರೆ, ಸಾಮಾನ್ಯವಾಗಿ ಹಿಂಬಡ್ತಿಯನ್ನು ಮೇಲಿನ ದರ್ಜೆಯಿಂದ ಕೆಳಗಿನ ದರ್ಜೆಗೆ ಮಾಡಲಾಗುವುದು. ಇಂತಹ ಸಂದರ್ಭಗಳಲ್ಲಿ ಮಾಲೀಕರ ಮನಸ್ಸಿಗೆ ತೃಪ್ತಿಕರವಾಗಿ ಸೇವೆ ಮಾಡದೇಹೋದ ಕಾರ್ಮಿಕನು ಕಾರ್ಯಕ್ಷಮತೆಯ ಕುಂದು ಅಥವಾ ಕೊರತೆ ಹೊಂದಿದವನಾಗಿರುತ್ತಾನೆ. ಹೀಗಾಗಿ ಹಿಂಬಡ್ತಿ ಹೊಂದಿದಾಗ. ಹಿಂಬಡ್ತಿಯೊಂದಿಗೆ ಕಾರ್ಯದ ಜವಾಬ್ದಾರಿ ಅಥವಾ ಹೊಣೆಗಾರಿಕೆಯೂ ಕಡಿಮೆಯಾಗುವುದರಿಂದ, ಅಸಮಾಧಾನಕ್ಕೆ ಆಸ್ಪದವಿಲ್ಲವೆಂದೇ ಭಾವಿಸಬೇಕು.

ಈ ಮಸೂದೆಯ ೫ನೆಯ ಕಲಮಿನ ಬಗೆಗೆ ಹೇಳಬಹುದಾದರೆ ಅದು ತುಂಬಾ ಸುಲಭ : ನನಗೆ ತಿಳಿದಂತೆ ೮ನೆಯ ಖಂಡದ (೭)ನೆಯ ಉಪಖಂಡ ಮಾಲೀಕರು ಕಾರ್ಮಿಕರಿಗೆ ವಿಧಿಸಿದ ದಂಡ ಅಥವಾ ಜುಲ್ಮಾನೆಗಳಿಗೆ ಸೇರಿದ್ದಾಗಿದೆ ಹಾಗೂ ಈ ದಂಡವನ್ನು ಪಡೆಯುವ ಬಗೆಗೂ ಸೇರಿದೆ. ಈ ವಿಷಯದಲ್ಲಿ ಪ್ರಮುಖವಾದ ಪ್ರಶ್ನೆ ಎಂದರೆ ಕಾಲದ ಪ್ರಶ್ನೆ. ಅಪರಾಧ ಮಾಡಿದ ದಿನದಿಂದಲೋ ಅಥವಾ ಅಪರಾಧವನ್ನು ಮಾಲೀಕನು ಗಮನಿಸಿದ ಕಾಲದಿಂದಲೋ? ಸಾಮಾನ್ಯವಾಗಿ ಅಪರಾಧಗಳು ಜರುಗಿದ ಅನೇಕ ದಿನಗಳಾದ ನಂತರವೇ ಅದು ಮಾಲೀಕರ ಗಮನಕ್ಕೆ ಬರುವುದು. ಹೀಗಾಗಿ ಮಾಲೀಕರ ಗಮನಕ್ಕೆ ಬಂದ ದಿನದಿಂದ ಮಾತ್ರ ದಂಡಕ್ಕೆ ಆಸ್ಪದವೇ ಹೊರತು ಅಪರಾಧ ಮಾಡಿದ ದಿನದಿಂದಲ್ಲ. ಆದುದರಿಂದ ಸದನಕ್ಕೆ ನಾನು ತಿಳಿಸುವುದೇನೆಂದರೆ ಈ ದಿಶೆಯಲ್ಲಿ ನಾವು ನೂತನವಾದುದನ್ನೇನೂ ಸೇರ್ಪಡೆ ಮಾಡುತ್ತಿಲ್ಲ. ಸದನದ ನ್ಯಾಯವಾದಿ ಸದಸ್ಯರಿಗೆ ತಿಳಿದಿರುವಂತೆ, ಕಾಲಮಿತಿ ಕಾನೂನಿನ ಅಡಿಯಲ್ಲಿ (Law of Limitation) ಅನೇಕ ಉಪಬಂಧಗಳಿದ್ದು ಹಲವು ಪ್ರಕರಣಗಳಲ್ಲಿ ಅಪರಾಧ ಮಾಡಿದ ದಿನದಿಂದ ಎಂದಿದ್ದರೆ ಇನ್ನೂ ಹಲವು ಪ್ರಕರಣಗಳಲ್ಲಿ ಅಪರಾಧವನ್ನು ಗಮನಿಸಿದ ದಿನದಿಂದ ಎಂದು ಕಾಲನಿರ್ಣಯ ಮಾಡಲಾಗುವುದು.

೬ನೇ ಕಲಮ್‌ನ ಬಗೆಗೆ ಹೇಳಬಹುದಾದರೆ, ಅದು ೯ನೆ ಖಂಡಕ್ಕೆ ತಿದ್ದುಪಡಿ ತರಲು ಉದ್ದೇಶಿಸಿದೆ. ೭(೨) (ಬ) ಕಾರ್ಯದ ಗೈರುಹಾಜರಿಯೆಂದು ಕೂಲಿಯನ್ನು ಮುರಿದುಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ ಶೋಚನೀಯ ಸಂಗತಿ ಎಂದರೆ ಅಧಿನಿಯಮದಲ್ಲಿ 'ಕಾರ್ಯದ ಗೈರುಹಾಜರಿ' (Absence from duty)ಯ ಬಗೆಗೆ ಎಲ್ಲಿಯೂ ಸ್ಪಷ್ಟೀಕರಣವೇ ಇಲ್ಲ. ನಾವು ಮಂಡಿಸಿರುವ ಕಲಮು ಮೇಲೆ ಹೇಳಿದ ಸಂದಿಗ್ಧತೆಯನ್ನು ನಿವಾರಿಸಿ ಖಂಡ ೯ಕ್ಕೆ ಎರಡನೆಯ ವಿವರಣೆಯನ್ನು ಸೇರಿಸುತ್ತದೆ. ಇದರಿಂದ ಕಾರ್ಯದ ಗೈರುಹಾಜರಿಯ ಬಗೆಗೆ ನಿರೂಪಿಸಬೇಕಾಗಿಲ್ಲ. ಕಲಮು ೭ ಖಂಡ ೧೩ಕ್ಕೆ ತಂದ ತಿದ್ದುಪಡಿಯು ಕೇವಲ ಸಾಂದರ್ಭಿಕವೇ ಹೊರತು ಪ್ರಮುಖವಾದುದಲ್ಲ. ಅದು ಖಂಡ ೧೩ರಂತೆ ಅನ್ವಯಿಸಲಾಗುವ ೪ನೇ ಕಲಮ್‌ನಲ್ಲಿ ಹೇಳಲಾದ ಎರಡು ನೂತನ ಕಡಿತಗಳಿಗೆ ಅನ್ವಯಿಸಿದೆ. ಈ ದಿಶೆಯಲ್ಲಿ ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ ಖಂಡ ೧೩, ಪ್ರಾಂತೀಯ ಸರಕಾರಗಳು ಹೇರಬಹುದಾದ ನಿಯಮಗಳಾಧಾರದ ಮೇಲೆ ಆಗಬಹುದುದಾದ ಕಡಿತದ ಬಗೆಗೆ ಇದ್ದು, ನೂತನ ಮಸೂದೆಯಲ್ಲಿ (ತಿದ್ದುಪಡಿ) ಹೇರಬಹುದಾದ

ಕಡಿತಗಳನ್ನೂ ಕೂಡಾ ಪ್ರಾಂತೀಯ ಸರಕಾರಕ್ಕೆ ಅಧಿಕಾರ ಒದಗಿಸಲಾಗಿದೆ.

ಕೊನೆಯ ಕಲಮು ಅಧಿನಿಯಮದ ೧೭ ಖಂಡಕ್ಕೆ ತಿದ್ದುಪಡಿಯ ಮೂಲಕ, ಮೇಲ್ಮನವಿಯ ಹಕ್ಕನ್ನು (Right to Appeal) ಕ್ರಮಬದ್ಧಗೊಳಿಸುತ್ತದೆ. ಸದ್ಯದ ಈ ಪ್ರಕರಣದಲ್ಲಿ, ನೇಮಕ ಹೊಂದಿದ ವ್ಯಕ್ತಿಗೆ ಮೇಲ್ಮನವಿಯ ಆಸ್ಪದವನ್ನು ಒದಗಿಸಲಾಗಿದೆ, ಆದರೆ ಈ ಮಸೂದೆಗೆ ಸಂಬಂಧಿಸಿದಂತೆ ಇರುವ ಮೇಲಧಿಕಾರಿಗೆ ಈ ಆಸ್ಪದವನ್ನು ನೀಡಿಲ್ಲ. ಆದುದರಿಂದ ವಿಶೇಷವಾಗಿ ನೌಕರರ ಹಿತ ಹಾಗೂ ಸಕಲರ ಹಿತ ಕಾಪಾಡುವಲ್ಲಿ ಈ ವಿಧವಾದ ಮೇಲ್ಮನವಿಯ ಅಧಿಕಾರವನ್ನು ಅಡಳಿತವರ್ಗದ ಮೇಲಧಿಕಾರಿಗೂ ನೀಡುವುದೇ ಸಮಂಜಸ.

ಮಾನ್ಯರೆ, ಈ ಮಸೂದೆಯಲ್ಲಿ ತರಬಯಸುವ ಈ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಅಲ್ಲದೆ ನಾನು ಮಂಡಿಸಿರುವ ವಿಷಯಗಳು ಯಾವ ಭಿನ್ನಾಭಿಪ್ರಾಯಕ್ಕೂ ಆಸ್ಪದ ನೀಡದೇ ಇರುವುದರಿಂದ ಸದನವು ಅದಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸುತ್ತದೆ ಎಂದು ನಂಬಿದ್ದೇನೆ. ಮಾನ್ಯರೆ, ನಿಲುವಳಿಯನ್ನು ಮಂಡಿಸಿರುವೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ನಿಲುವಳಿ ಮಂಡಿಸಲಾಗಿದೆ.

"೧೯೩೬ರ ವೇತನ ನೀಡುವ ಅಧಿನಿಯಮ ತಿದ್ದುಪಡಿಗಳೊಂದಿಗೆ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಕಳುಹಿಸಲಾಗುವುದು. ಸಮಿತಿಯ ಸದಸ್ಯರೆಂದರೆ ಸೇಠ್ ಯುಸೂಫ್ ಅಬ್ದುಲ್ ಹರೂನ್, ಶ್ರೀ ಮಹಮದ್ ಹುಸೇನ್ ಚೌಧರಿ, ಶ್ರೀ ಲಾಲ್‌ಚಂದ್ ನವಲ್‌ರಾಯ್, ಶ್ರೀ ವಿ.ಸಿ. ಇನ್‌ಸ್ಕಿಪ್, ಶ್ರೀ ವಿಠಲ ಎನ್. ಚಂದಾವರ್‌ಕರ್, ಎನ್.ಎಮ್. ಜೋಷಿ, ಡಾ. ಸರ್ ರತನ್‌ಜಿ ದಿನ್‌ಷಾ ದಲಾಲ, ಶ್ರೀ ಡಿ.ಎಸ್, ಜೋಷಿ ಮತ್ತು ಈ ಮಸೂದೆಯನ್ನು ಮಂಡಿಸುವವರು ಸೇರಿದಂತೆ ೫ ಸದಸ್ಯರಿಗೆ ಕಡಿಮೆಯಾಗದ ಹಾಜರಿ ಅನಿವಾರ್ಯ.

* * *

**ಶ್ರೀ ಎನ್.ಎಮ್. ಜೋಷಿ :** ಮಾನ್ಯರೆ, ಮಾನ್ಯ ಸದಸ್ಯರು ಗೈರುಹಾಜರಿಯಲ್ಲಿ ಕಡಿತದ ಬಗೆಗೆ ಮಸೂದೆಯಲ್ಲಿ ಅವಕಾಶ ಕಲ್ಪಿಸಿರುವ ವಿಷಯ ಮಂಡಿಸಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಕೇವಲ ಗೈರುಹಾಜರಿಯ ವ್ಯಾಖ್ಯೆಯನ್ನು ಮಾತ್ರ ನಿರೂಪಿಸಿರುವೆ. ಆದರೆ ಕಡಿತವನ್ನು ಸೂಚಿಸಿಲ್ಲ. ಏಕೆಂದರೆ ಅವು ಮಸೂದೆಯಲ್ಲಿ ಈಗಾಗಲೇ ಇವೆ.

**ಶ್ರೀ ಎನ್.ಎಮ್. ಜೋಷಿ :** ನನಗೆ ತಿಳಿದಂತೆ ಮಾನ್ಯ ಸದಸ್ಯರು ತುಂಬಾ ಸರಳ ವ್ಯಕ್ತಿ. ಕೇವಲ ಗೈರುಹಾಜರಿಯ ವ್ಯಾಖ್ಯೆಯನ್ನು ಬದಲಾಯಿಸುವುದರ ಮೂಲಕ ಕಡಿತಕ್ಕೆ ಅವಕಾಶ ನೀಡಿದ್ದಾರೆ; ಏಕೆಂದರೆ ಮೂಲ ಅಧಿನಿಯಮದಲ್ಲಿ ಕೇವಲ ಒಂದು ಅವಧಿಯವರೆಗೆ ಮಾತ್ರ ಗೈರುಹಾಜರಿಯ ಬಗೆಗೆ ವೇತನ ಮುರಿದುಕೊಳ್ಳುವ ಅವಕಾಶವಿತ್ತು. ಈ ವಿಧವಾದ ವೇತನ ಕಡಿತವನ್ನು ಕಾರ್ಯ ಅಥವಾ ಕಾಲದ ಹಾನಿಯನ್ನೇ ಆಧಾರವಾಗಿರಿಸಿಕೊಂಡು ಮಾಡಬಹುದಾಗಿದೆ. ಆದರೆ ಈ ಮಸೂದೆಯಲ್ಲಿಯ ತಿದ್ದುಪಡಿ ನನಗೆ ತಿಳಿದಂತೆ ಮಾಲೀಕರಿಗೆ ಎರಡು ಬಗೆಯ ದಂಡಗಳನ್ನು ಹೇರುವ ಅವಕಾಶ ಕಲ್ಪಿಸಿದೆ ಎಂದು ಹೇಳಬಯಸುವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದಸ್ಯರ ಹೇಳಿಕೆ ಸರಿಯಲ್ಲ.

**ಶ್ರೀ ಎನ್.ಎಮ್. ಜೋಷಿ :** ಒಳ್ಳೆಯದು, ನಾವು ಸರಿಯಾದ ಸಂರ್ಭದಲ್ಲಿ ಈ ಸಂಗತಿಯ ಬಗೆಗೆ

ಚರ್ಚೆ ಮಾಡೋಣ. ಏಕೆಂದರೆ ಈ ಮಸೂದೆಯ ತಿದ್ದುಪಡಿಯಂತೆ ಸಂಭವಿಸಬಹುದಾದ ಸಂಗತಿ ಏನೆಂದರೆ : ಒಬ್ಬ ನೌಕರನು ತನ್ನ ಕೆಲಸದಿಂದ ಒಂದು ಗಂಟೆ ಗೈರುಹಾಜರಿಯಾಗಬಹುದು. ಹೀಗಾಗಿ ಆ ಒಂದು ಗಂಟೆಯ ಕೆಲಸದಲ್ಲಿ ಕೊರತೆ ಆಗುತ್ತದೆ. ಆಗ ಅವನಿಗೆ ಸಮಯಾಧಾರಿತ ಕೂಲಿಯ ಆಧಾರದಂತೆ ವೇತನ ಮುರಿದುಕೊಳ್ಳುವ ಅವಕಾಶಕ್ಕೆ ಆಸ್ಪದ ನೀಡಿದಂತೆ ಆಗಿ ಹೀಗೆ ಮುಂದುವರಿದಲ್ಲಿ ಈ ತಿದ್ದುಪಡಿಯಂತೆ ವ್ಯಕ್ತಿಯ ಕೂಲಿಯಲ್ಲಿ ಕಡಿತ ಮುಂದುವರಿಯುವ ಆಸ್ಪದ ಹೆಚ್ಚು ಎಂಬ ಭಯ ನನಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ, ಇಲ್ಲ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಉಪಾಧ್ಯಕ್ಷರೇ, ಚರ್ಚೆಗೆ ಅವಕಾಶ ನೀಡದೇ ಮಸೂದೆ ಮಂಡನೆಗೆ ಅವಕಾಶ ಕಲ್ಪಿಸುವಂತೆ ಆದರೆ, ನಾನು ಈ ಹಂತದಲ್ಲಿ ನನ್ನ ಮಿತ್ರರು ಸೂಚಿಸಬಹುದಾದ ತಿದ್ದುಪಡಿಯನ್ನು ಒಪ್ಪಲು ಸಿದ್ಧನಿದ್ದೇನೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈಗಾಗಲೇ ತಿಳಿಸಿದಂತೆ ನನ್ನ ಮಿತ್ರರಾದ ಶ್ರೀ ಜೋಷಿ ಅವರು ತರಬಹುದಾದ ನಿಲುವಳಿಯನ್ನು ಅಂಗೀಕರಿಸಲು ಸಿದ್ಧನಿದ್ದೇನೆ. ಆದುದರಿಂದ ಈ ದಿಶೆಯಲ್ಲಿ ಅನಾವಶ್ಯಕ ಭಾಷಣ ಮಾಡಲಾರೆ. ಆದರೂ ನಾನು ಹೇಳಬಯಸುವುದೇನೆಂದರೆ, ನನ್ನ ಮಿತ್ರರು ಸುತ್ತೋಲೆಗಾಗಿ ಸಮರ್ಥವಾದ ವಾದವನ್ನು ಮಂಡಿಸಲು ವಿಫಲರಾಗಿದ್ದಾರೆ. ನಾನು ಈಗ ತಾನೆ ಹೇಳಿದಂತೆ ನಾನು ಮಂಡಿಸಿದ ತಿದ್ದುಪಡಿಯು ಯಾವ ವಿವಾದಕ್ಕೂ ಆಸ್ಪದ ನೀಡುವುದಿಲ್ಲ. ಅಲ್ಲದೆ ನಾನು ಮಂಡಿಸಿದ ನಿಲುವಳಿ ಕೇವಲ ಆಡಳಿತಾತ್ಮಕ ತೊಂದರೆಗಳನ್ನು ನಿವಾರಿಸಲು ಕಾನೂನಿಗೆ ಸಹಕಾರಿಯಾಗುತ್ತದೆ. ನನಗೆ ತಿಳಿದಂತೆ, ನಾನು ಮಂಡಿಸಿದ ತಿದ್ದುಪಡಿಗಳು ಆಯ್ಕೆ ಸಮಿತಿಯ ನನ್ನ ಮಿತ್ರ ಸದಸ್ಯರ ವಿವೇಚನೆಗೆ ಹಾಗೂ ಮಾಹಿತಿಗೆ ಮೀರಿದ್ದು ಎಂದು ಭಾವಿಸಲಾರೆ. ಮಾನ್ಯರೆ, ನನಗೆ ಅಚ್ಚರಿಯ ಸಂಗತಿ ಎಂದರೆ ನನ್ನ ಮಿತ್ರರಾದ ಶ್ರೀ ಜೋಷಿ ಅವರು ತಮ್ಮ ವಿವೇಚನೆಗೆ ತಾವೇ ಒಳಪಡದೇ ಹೋದುದು. ಹಾಗೂ ಮಸೂದೆಯನ್ನು ಸುತ್ತೋಲೆಯ ಮುಖಾಂತರ ಕಾರ್ಮಿಕ ವರ್ಗದಲ್ಲಿ ಪ್ರಚಾರ ಪಡೆಯಲೆಂದೇ ಈ ರೀತಿ ಮಾಡಿದ್ದಾರೆ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ನನ್ನ ಮಿತ್ರರಾದ ಶ್ರೀ ಜೋಷಿ ಹಾಗೂ ಮಾನ್ಯ ಶ್ರೀ ಲಾಲ್‌ಚಂದ್ ನವಲ್‌ರಾಯ್‌ರವರನ್ನು ಬಿಟ್ಟರೆ ಬೇರೆ ಯಾರೂ ಕಾರ್ಮಿಕರ ವಾದವನ್ನು ಮಂಡಿಸಲು ಸಮರ್ಥನೀಯರಲ್ಲ. ಅವರ ಈ ಹಿನ್ನೆಲೆ ಹಾಗೂ ಅನುಭವವನ್ನು ಮನಗಂಡೇ ನಾನು ಅವರನ್ನು ಆಯ್ಕೆ ಸಮಿತಿಗೆ ಆರಿಸಿಕೊಂಡಿದ್ದೆ. ಆದಾಗ್ಯೂ ಮಾನ್ಯ ಸದಸ್ಯರು ನನ್ನಲ್ಲಿ ವಿಶ್ವಾಸ ತೋರದೆ ಹೋದಲ್ಲಿ ಅವರು ಸೂಚಿಸಬಹುದಾದ ತಿದ್ದುಪಡಿಯನ್ನು ಒಪ್ಪಿ ಅವರ ಮಾರ್ಗದಲ್ಲಿಯೇ ಮುನ್ನಡೆಯಲು ಸಿದ್ಧ.

**ಮಾನ್ಯ ಉಪಾಧ್ಯಕ್ಷ (ಶ್ರೀ ಅಖಿಲ ಚಂದ್ರದತ್)** : ನಮ್ಮ ಮುಂದಿರುವ ಪ್ರಶ್ನೆ **"**ಸಾರ್ವಜನಿಕ ಅಭಿಪ್ರಾಯವನ್ನು ಅರಿಯಲೋಸುಗ ಮಸೂದೆಯನ್ನು ಫೆಬ್ರವರಿ ೨೮, ೧೯೪೫ರ ಸುತ್ತೋಲೆಯ ಮೂಲಕ ಕಳುಹಿಸಬೇಕು.**"**

ನಿಲುವಳಿಯನ್ನು ಸ್ವೀಕರಿಸಲಾಯಿತು.

# ೩೯
# ದಾಮೋದರ ಕಣಿವೆ ಯೋಜನೆ*
## (ಕಲ್ಕತ್ತಾ ಸಮ್ಮೇಳನ)

# ಉದ್ಘಾಟನಾ ಭಾಷಣ

"ಭಾರತ ಸರಕಾರವು, ಸದ್ಯದ ಪರಿಸ್ಥಿತಿಯಲ್ಲಿ ಜಲಸಂಪನ್ಮೂಲಗಳಿಂದ ಉಂಟಾಗಿರುವ ಅನಾನುಕೂಲತೆಯನ್ನು ಅರಿತಿದ್ದು, ಸರಿಯಾದ ಕ್ರಮಗಳಿಂದೊಡಗೂಡಿದ, ಒಂದು ಧೋರಣೆಯನ್ನು ಅನುಸರಿಸುವ ಮೂಲಕ, ಬೇರೆ ದೇಶಗಳಲ್ಲಿ ಯಾವ ವಿಧಾನಗಳನ್ನು ಅನುಸರಿಸಿರುವರೋ, ಅದೇ ವಿಧಾನಗಳನ್ನು ಅಳವಡಿಸಿಕೊಂಡು ಸರ್ವರಿಗೂ ಅನುಕೂಲವಾಗುವಂತೆ ದೇಶದ ಜಲಸಂಪನ್ಮೂಲಗಳನ್ನು ಉತ್ತಮ ಪಡಿಸಲಾಗುವುದು". ಹೀಗೆಂದು, ಭಾರತ ಸರಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರರು, ಭಾರತ ಸರಕಾರದ ಪರವಾಗಿ, ಬಂಗಾಲ ಸರಕಾರದ ಕಾರ್ಯಾಲಯದಲ್ಲಿ ದಿನಾಂಕ ೩, ಜನವರಿಯಂದು, ಕಲಕತ್ತಾದಲ್ಲಿ ಸೇರಿದ ಮಧ್ಯ ಬಂಗಾಲ ಹಾಗೂ ಬಿಹಾರ ಸರಕಾರಗಳ ಪ್ರತಿನಿಧಿಗಳನ್ನು ಉದ್ದೇಶಿಸಿ, ದಾಮೋದರ ಕಣಿವೆಯ ಅಭಿವೃದ್ಧಿ ಯೋಜನೆಯಲ್ಲಿ ಅನುಸರಿಸಬಹುದಾದ ವಿಧಾನಗಳ ಬಗೆಗೆ ಕರೆಯಲಾದ ಸಮ್ಮೇಳನವನ್ನು ಉದ್ಘಾಟಿಸಿ ಹೀಗೆ ಹೇಳಿದರು:

"ತಮಗೆ ಅನಾನುಕೂಲತೆಗಳಿದ್ದಾಗ್ಯೂ ತೀರಾ ಕಡಿಮೆ ಸಮಯದಲ್ಲಿಯೇ ಈ ಸಮ್ಮೇಳನವನ್ನು ಸಂಘಟಿಸಿದ್ದಕ್ಕಾಗಿ, ನಾನು, ಭಾರತ ಸರಕಾರದ ಪರವಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುವೆ. ೧೯೪೪ ರಲ್ಲಿ ಬಂಗಾಲ ಸರಕಾರದಿಂದ ನೇಮಕಹೊಂದಿದ "ದಾಮೋದರ ನದಿ ಪ್ರವಾಹ ಪರಿಶೀಲನಾ ಸಮಿತಿ"ಯ ವರದಿಯನ್ನು ಪರಿಶೀಲಿಸಿ, ಅದರಲ್ಲಿ ಸೂಚಿಸಲಾದ ಸಲಹೆಗಳನ್ನು ಚರ್ಚಿಸಲೆಂದೇ ಈ ಸಭೆಯನ್ನು ಕರೆಯಲಾಗಿದೆ. ಈ ದಿಶೆಯಲ್ಲಿ ಮಾತನಾಡುವ ಮುಂಚೆ, ಈ ವಿಧವಾದ ಒಂದು ಸಮಿತಿಯನ್ನು ನೇಮಿಸಿದ ಬಂಗಾಲ ಸರಕಾರಕ್ಕೆ ನನ್ನ ಹೂತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುವೆ. ಅದರಂತೆಯೇ ಸಮಿತಿಯು ದಾಮೋದರ ಕಣಿವೆಯ ಸಮಸ್ಯೆಗೆ ಪರಿಹಾರ ಸೂಚಿಸುವುದಲ್ಲದೇ, ದೇಶದ ಸಮಗ್ರ ಜಲಸಂಪನ್ಮೂಲಗಳ ಉತ್ತಮ ಬಳಕೆಯ ಬಗೆಗೂ ಮಾಡಿದ ಸಲಹೆಗಳಿಗಾಗಿ ನಾನು ಕೃತಜ್ಞತೆ ಸಲ್ಲಿಸುವೆ.

### ಸಮಿತಿಯ ಶಿಫಾರಸುಗಳು

"ಸಮಿತಿಯು ಸಲಹೆ ಮಾಡಿದ ಎರಡು ಶಿಫಾರಸುಗಳನ್ನು ಅಂದರೆ ೮ ಹಾಗೂ ೧೧ರ ಬಗೆಗೆ ನಾನು ಮಾತನಾಡಬಯಸುತ್ತೇನೆ. ಸಮಿತಿಯು ತನ್ನ ೧೧ರ ಸೂಚನೆಯಲ್ಲಿ ಈ ಕೆಳಕಂಡಂತೆ ಹೇಳಿದೆ.

'ನಮ್ಮ ಚರ್ಚೆಯ ಸಮಯದಲ್ಲಿ ಸಮಿತಿಗೆ ಮನವರಿಕೆಯಾದ ಸಂಗತಿ ಎಂದರೆ ಪ್ರವಾಹ ನಿಯಂತ್ರಣ ಹಾಗೂ ಭೂಸವಕಳಿಯ ಸಮಸ್ಯೆಗಳು ಹಾಗೂ ನದಿಗಳು, ಮತ್ತು ಕಾಡುಗಳು ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿದ್ದರೆ ಹೆಚ್ಚು ಅನುಕೂಲ ಎಂದು ನಾವು ಮನಗಂಡೆವು'

"ಅವರ ೮ರ ಶಿಫಾರಸಿನಂತೆ ದಾಮೋದರ ನದಿಗೆ ಕಟ್ಟುವ ಅಣೆಕಟ್ಟು ಕೇವಲ ಪ್ರವಾಹ ನಿಯಂತ್ರಣಕ್ಕೆ

---

* ಇಂಡಿಯನ್ ಇನ್‌ಫರ್ಮೇಷನ್, ಫೆಬ್ರವರಿ ೧, ೧೯೪೫, ಪು. ೯೭–೧೦೧ ಮತ್ತು ೧೦೯.

ಮಾತ್ರ ಸೀಮಿತವಾಗಿರದೆ, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆಗಳ ಕಾರ್ಯಕ್ಕೂ ವಿಸ್ತರಿಸಬೇಕು. ಅನೇಕರಿಗೆ ತಿಳಿದಿರುವಂತೆ ಸದ್ಯ ಜಾರಿಯಲ್ಲಿರುವ ಧೋರಣೆಯಲ್ಲಿ ಈ ಅಂಶವನ್ನೇ ಪರಿಗಣಿಸಿಲ್ಲ. ಭಾರತದ ಜಲಸಂಪನ್ಮೂಲಗಳು ಸಮಗ್ರ ಹಾಗೂ ಸಾರ್ಥಕ ವಿಧಾನದಲ್ಲಿ ಬಳಕೆಯಾಗಬೇಕೆಂದು ಬಯಸುವವರೆಲ್ಲಾ ಸಮಿತಿಯು ಸೂಚಿಸಿದ ಈ ಎರಡೂ ಸಲಹೆಗಳನ್ನು ಸ್ವಾಗತಿಸುತ್ತಾರೆ; ಅಲ್ಲದೆ ಅವುಗಳ ಮಹತ್ವವನ್ನೂ ಮನಗಂಡಿರಲೂಬಹುದು. ಸತ್ಯಕ್ಕೆ ದೂರವಾಗಿರದ ಸಂಗತಿ ಎಂದರೆ, ಭಾರತದ ಜಲಮಾರ್ಗಗಳ ಬಗೆಗೆ ಇಂದು ಸಮಗ್ರವಾದ ಒಂದು ಧೋರಣೆಯೇ ಇರದಿರುವುದು. ಎರಡನೆಯದಾಗಿ ನಮ್ಮ ಜಲಮಾರ್ಗಗಳು ವಿವಿಧೋದ್ದೇಶಗಳಿಂದೊಡಗೂಡಿರಬೇಕೆಂಬ ಧೋರಣೆಯನ್ನು ಮನಗಾಣದೇ ನೀರಾವರಿ, ನಾವೆ ಹಾಗೂ ವಿದ್ಯುಚ್ಛಕ್ತಿಗಳನ್ನು ಅಡಕ ಮಾಡದೇಹೋಗಿರುವುದು.

## ರೈಲು ಹಾಗೂ ಜಲಮಾರ್ಗಗಳು

"ನೀರಾವರಿಯು ಮಾತ್ರ ನಮ್ಮ ಜಲಮಾರ್ಗಗಳ ಉದ್ದೇಶವಾಗಿದೆ. ಅಲ್ಲದೆ ನಾವು ರೈಲು ಮಾರ್ಗಗಳು ಹಾಗೂ ಜಲಮಾರ್ಗಗಳ ಮಹತ್ವ ಒಂದೇ ಎಂಬುದನ್ನು ಅರಿಯದೇ ಹೋಗಿದ್ದೇವೆ ಹಾಗೂ ಅವುಗಳ ಪ್ರಾಮುಖ್ಯತೆಯನ್ನೂ ತಿಳಿದುಕೊಳ್ಳದೇ ಹೋಗಿದ್ದೇವೆ. ಏಕೆಂದರೆ ವಿಭಿನ್ನ ಪ್ರಾಂತಗಳಲ್ಲಿ ಸಂಚರಿಸುವ ರೈಲುಗಳು ಹಾಗೂ ಅದರ ಮಾರ್ಗಗಳು ಕೇಂದ್ರದ ವ್ಯಾಪ್ತಿಯಲ್ಲಿದ್ದರೆ ಅದಕ್ಕೆ ವಿರುದ್ಧವಾಗಿ ನಮ್ಮ ಸಂವಿಧಾನದಲ್ಲಿ ಈ ಎರಡರ ಬಗೆಗೆ ವ್ಯತ್ಯಾಸವನ್ನು ಕಲ್ಪಿಸಿರುವುದರಿಂದ, ರೈಲ್ವೆಯು ಕೇಂದ್ರಕ್ಕೆ ಹಾಗೂ ನದಿ ಜಲಮಾರ್ಗಗಳು ಪ್ರಾಂತೀಯ ಸರಕಾರಕ್ಕೆ ಸೇರಿವೆ.

"ಈ ವಿಧವಾದ ತಪ್ಪಿನಿಂದಾದ ಅನಾನುಕೂಲತೆಗಳು ಹಲವಾರು. ಉದಾಹರಣೆಗೆ ಒಂದು ಪ್ರಾಂತವು ವಿದ್ಯುಚ್ಛಕ್ತಿಯನ್ನು ಬಯಸಿದಾಗ ಅದು ತನ್ನ ಜಲಸಂಪನ್ಮೂಲಗಳನ್ನು ಈ ದಿಶೆಯಲ್ಲಿ ಉಪಯೋಗಿಸಿಕೊಳ್ಳದೇ ಹೋಗಬಹುದು, ಇದಕ್ಕೆ ಕಾರಣವೆಂದರೆ ಮೇಲುಭಾಗದ ಪ್ರಾಂತವು ಕೇವಲ ನೀರಾವರಿಯಲ್ಲಿ ಮಾತ್ರ ಆಸಕ್ತಿ ಹೊಂದಿ ಅಣೆಕಟ್ಟನ್ನು ನಿರ್ಮಿಸಲು ಅವಕಾಶ ನೀಡಲು ನಿರಾಕರಿಸಬಹುದು. ಅಲ್ಲದೆ ಅಣೆಕಟ್ಟಿನ ನಿರ್ಮಾಣಕ್ಕೆ ಬೇಕಾದ ಹಣಕಾಸನ್ನು ಅಥವಾ ಬೇರೆ ಸೌಕರ್ಯಗಳನ್ನು ನಿರಾಕರಿಸಲೂಬಹುದು. ಪ್ರಾಂತೀಯ ಸ್ವಾಯತ್ತತೆಯ ಹೆಸರಿನಲ್ಲಿ ಅಸಹಕಾರ ಮನೋಭಾವನೆಯನ್ನೂ ಸಮರ್ಥಿಸಿಕೊಳ್ಳಲು ಆಸ್ಪದಗಳಿವೆ.

## ಜಲಸಂಪನ್ಮೂಲಗಳ ಬಳಕೆ

"ಎರಡು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ. ಈ ಹಿನ್ನೆಲೆಯಲ್ಲಿ ದಾಮೋದರ ಕಣಿವೆ ಪ್ರವಾಹ ನಿಯಂತ್ರಣದ ಶಿಫಾರಸುಗಳನ್ನು ಪರಿಶೀಲಿಸಲು ತಾವು ಸಮರ್ಥರಾಗಿದ್ದೀರೆಂದು ನನ್ನ ಭಾವನೆ. ನನ್ನ ಎರಡನೆಯ ಉದ್ದೇಶವೆಂದರೆ, ಭಾರತ ಸರಕಾರವು ಈಗಿನ ವಿದ್ಯಮಾನಗಳಲ್ಲಿಯ ಅನಾನುಕೂಲತೆಯನ್ನು ನಿವಾರಿಸಿ ಒಂದು ಉತ್ತಮವಾದ ಕ್ರಮವಿರುವ ಧೋರಣೆಯನ್ನು ನಿರೂಪಿಸಿ ಅದರ ಮೂಲಕ ದೇಶದ ಸಮಸ್ತ ಪ್ರಜೆಗಳಿಗೆ ಸಹಕಾರಿಯಾಗುವಂತೆ ಜಲಸಂಪನ್ಮೂಲಗಳನ್ನು, ಬೇರೆ ದೇಶಗಳಲ್ಲಿರುವಂತೆ ಜಾರಿಗೊಳಿಸಲು ಕಾತರವಾಗಿದೆ.

"ಸಂವಿಧಾನದಲ್ಲಿ ಜಲಮಾರ್ಗಗಳನ್ನು, ರೈಲ್ವೇ ಮಾರ್ಗಗಳಂತೆ ಕೇಂದ್ರದ ವಶಕ್ಕೆ ನೀಡುವುದು ಉತ್ತಮವಾದುದು ಹಾಗೂ ಸ್ವಾಗತಾರ್ಹವಾದುದು. ಆದರೆ ಸಂವಿಧಾನದಲ್ಲಿ ಬದಲಾವಣೆ ತರುವ ಸಮಯದವರೆಗೂ ಕಾಯುವುದು ಸಾಧ್ಯವಿಲ್ಲ ಎಂದು ಸರಕಾರದ ಅಭಿಪ್ರಾಯವಾಗಿದೆ.

“ಪ್ರಾಂತೀಯ ಸರಕಾರಗಳು, ಜಂಟಿ ಯೋಜನೆಗಳ ಬಗೆಗೆ ಸಹಕರಿಸಿದ್ದೇ ಆದರೆ ಸಂವಿಧಾನದಿಂದ ಉಂಟಾದ ಬಿಕ್ಕಟ್ಟು ತಾನೇ ಪರಿಹಾರವಾಗಬಲ್ಲದು.

“ಭಾರತ ಸರಕಾರವು, ಅಮೆರಿಕೆಯಲ್ಲಿ ಟೆನ್ನೆಸ್ಸಿ ಕಣಿವೆಯ ಮಾದರಿಯನ್ನೇ ತನ್ನ ಗಮನದಲ್ಲಿರಿಸಿಕೊಂಡಿದ್ದು, ಆ ಯೋಜನೆಯಂತೆ ಭಾರತದಲ್ಲಿಯೂ ಪ್ರಾಂತೀಯ ಸರಕಾರಗಳ ಸಹಕಾರದಿಂದ, ಈ ದಿಶೆಯಲ್ಲಿರುವ ಆತಂಕಗಳನ್ನು ನಿವಾರಿಸಲು ಆತುರವಾಗಿದೆ. ಮೂಲತಃ ದೇಶದ ಜಲಸಂಪನ್ಮೂಲಗಳನ್ನು ಸಮಗ್ರ ಹಾಗೂ ಸಮರ್ಥ ರೀತಿಯಿಂದ ಉಪಯೋಗಿಸಿಕೊಳ್ಳಲೆಂದೇ ಭಾರತ ಸರಕಾರವು ಕೇಂದ್ರ ತಾಂತ್ರಿಕ ಶಕ್ತಿಮಂಡಳಿಯನ್ನು ರಚಿಸಿದೆ. ಇದೇ ಮಾದರಿಯ ಮೇಲೆ ಕೇಂದ್ರ ಜಲಮಾರ್ಗ ಮಂಡಳಿಯನ್ನೂ ರಚಿಸಬೇಕೆಂಬ, ಹಾಗೂ ನೀರಾವರಿ ಜಲಯಾನ ಆಯೋಗಗಳನ್ನೂ ರಚಿಸಬೇಕೆಂಬ ಮಹದಾಸೆಯನ್ನು ಹೊಂದಿದೆ.

“ಈ ಎರಡು ಸಂಘಟನೆಗಳನ್ನು ನಿರ್ಮಿಸುವ ಮೂಲ ಉದ್ದೇಶವೆಂದರೆ, ಪ್ರಾಂತೀಯ ಸರಕಾರಗಳಿಗೆ ತಮ್ಮ ಜಲಸಂಪನ್ಮೂಲಗಳನ್ನು ಹೇಗೆ ಸಮರ್ಥನೀಯವಾಗಿ ಬಳಕೆ ಮಾಡಬೇಕು, ಹಾಗೂ ಕೇವಲ ನೀರಾವರಿ ಅಣೆಕಟ್ಟಿನ ಯೋಜನೆ ಮಾತ್ರವಲ್ಲದೆ, ವಿವಿಧ ಉದ್ದೇಶಗಳಲ್ಲಿ ಜಲಸಂಪನ್ಮೂಲಗಳನ್ನು ಉಪಯೋಗಿಸುವ ಬಗೆಗೆ ಸಲಹೆ ನೀಡಲೆಂದೇ ಸ್ಥಾಪಿಸಲಾಯಿತು. ಇದಲ್ಲದೆ ವಿವಿಧ ಅಂದರೆ ಕೇಂದ್ರ ಬಳಕೆ ಮಂಡಳಿಯ (Central Utilisation Board) ಹಾಗೂ ತಾತ್ಕಾಲಿಕ ಆಯೋಗಗಳನ್ನೂ ರಚಿಸುವುದು ಅನಿವಾರ್ಯ ಎಂದೂ ಭಾವಿಸಲಾಗಿದೆ. ಈ ವಿಧವಾದ ಸಂಘಟನೆಗಳ ನಿರ್ಮಾಣಕಾರ್ಯಕ್ಕೆ ಕೇಂದ್ರ ಶಕ್ತಿ ಮಂಡಳಿ (Central Power Board) ಹಾಗೂ ಕೇಂದ್ರ ಜಲಮಾರ್ಗ, ನೀರಾವರಿ ಮತ್ತು ಜಲಯಾನ ಆಯೋಗಗಳು ಅಡ್ಡಿಯಾಗಲಾರವು.

“ಈ ದಿಶೆಯಲ್ಲಿ ದಾಮೋದರ ನದಿಗೆ ರಚಿಸುವ ಅಣೆಕಟ್ಟು ಪ್ರಥಮ ಪ್ರಯತ್ನವಾಗಿದ್ದು ಮತ್ತು ಅದನ್ನು ವಿವಿಧ ಉದ್ದೇಶಗಳಿಗೆಂದೇ ರಚಿಸಲಾಗಿದೆ. ಏಕೆಂದರೆ ಈ ಯೋಜನೆಯು ಕೇವಲ ದಾಮೋದರ ನದಿಯ ಪ್ರವಾಹ ತಡೆಗಟ್ಟದೆ, ನೀರಾವರಿ, ಜಲಯಾನ, ಹಾಗೂ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿವಿಧ ಉದ್ದೇಶಗಳನ್ನೂ ಹೊಂದಿದೆ.

“ಈ ವಿಧವಾದ ಯೋಜನೆಯು ಮುಗಿದ ನಂತರ ಅಧಿಕಾರ ವಹಿಸಿಕೊಳ್ಳಲಿರುವ ಪ್ರಾಧಿಕಾರವು ಒಂದು ಮಾದರಿಯ ಪ್ರಾಧಿಕಾರವಾಗಿರುತ್ತದೆ. ಈ ಪ್ರಾಧಿಕಾರವನ್ನು ಆದಷ್ಟು ಅಮೆರಿಕೆಯ ಟೆನ್ನಿಸ್ಸಿ ಕಣಿವೆಯ ಪ್ರಾಧಿಕಾರದ ಮಾದರಿಯಂತೆ ರಚಿಸಲು ಸರಕಾರ ಉತ್ಸುಕವಾಗಿದೆ. ಹೀಗೆ ನಿರ್ಮಾಣಗೊಳ್ಳಲಿರುವ ಪ್ರಾಧಿಕಾರ, ಕೇಂದ್ರ, ಬಿಹಾರ ಹಾಗೂ ಬಂಗಾಲ ಪ್ರಾಂತೀಯ ಸರಕಾರಗಳು ಸಹಕಾರಿ ತತ್ವದ ಮೇಲೆ ಪಾಲುದಾರರಾಗಿ ಕೈಗೆತ್ತಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಈ ವಿಧದ ಯೋಜನೆಯನ್ನು ಸಾಕಾರಗೊಳಿಸಲು ಸರಕಾರ ಅತೀವ ಉತ್ಸಾಹ ಹೊಂದಿರುವುದರಿಂದ, ಈ ದಿಶೆಯಲ್ಲಿ ಅದು ಕಾಲಹರಣ ಮಾಡಲು ಸಿದ್ಧವಿಲ್ಲ.

**ಜಲಮಾರ್ಗಗಳ ನೂತನ ಧೋರಣೆ**

“ಭಾರತ ಸರಕಾರವು, ಈ ದಿಶೆಯಲ್ಲಿ ಹಲವು ನಿರ್ದಿಷ್ಟ ಆದ್ಯತೆಗಳನ್ನು ಅರಿಯುವುದು ಅನಿವಾರ್ಯ ಎಂದೇ ಭಾವಿಸಲಾಗಿದೆ. ಮೊದಲನೆಯ ಆದ್ಯತೆ ಅಣೆಕಟ್ಟಿನ ನಿರ್ಮಾಣಕ್ಕೆ ಅವಶ್ಯವಾಗಿರುವ ಜಾಗ. ಈ ವಿಷಯದಲ್ಲಿ ಕೇವಲ ಬಂಗಾಲ ಅಥವಾ ಬಿಹಾರ ಸರಕಾರಗಳ ಇಚ್ಛೆಯಂತೆ ನಡೆದುಕೊಳ್ಳಲುಬಾರದು.

ಒಂದು ವೇಳೆ ಎರಡೂ ಪ್ರಾಂತಗಳೂ ಸಮ್ಮತಿಸಿ ಒಂದು ಸ್ಥಳ ಅಥವಾ ಜಾಗವನ್ನು ಒಪ್ಪಿಕೊಂಡರೂ, ತಜ್ಞರ ಸಲಹೆಯನ್ನು ಕೇಳದೆ ಅದನ್ನು ನಿರ್ಧರಿಸಲಾಗದು, ಹಾಗೂ ಇನ್ನೂ ಅನೇಕ ವಿಷಯಗಳ ಬಗೆಗೂ ಯೋಚಿಸಬೇಕಾಗಿದೆ. ಏಕೆಂದರೆ ನಾನು ಈಗಾಗಲೇ ಹೇಳಿರುವಂತೆ ದಾಮೋದರ ಯೋಜನೆಯು ವಿವಿಧೋದ್ದೇಶದ ಯೋಜನೆಯಾಗಿದೆ. ನಾವು ಬಯಸುವುದೇನೆಂದರೆ ಈ ಯೋಜನೆಯು ಕೇವಲ ಪ್ರವಾಹ ತಡೆಗಟ್ಟಲು ಮಾತ್ರ ಮೀಸಲಾಗಿರದೆ, ನೀರಾವರಿ, ಜಲಯಾನ ಹಾಗೂ ವಿದ್ಯುಚ್ಛಕ್ತಿ ಸಮಸ್ಯೆಗಳನ್ನು, ಸ್ಥಳವನ್ನು ಆರಿಸುವುದರೊಂದಿಗೆ, ಪರಿಶೀಲಿಸಬೇಕಾದುದು ಅನಿವಾರ್ಯ.

"ಈ ಸಮ್ಮೇಳನದ ಪ್ರಮುಖ ಉದ್ದೇಶವೆಂದರೆ ಈ ಕಾರ್ಯದ ಬಗೆಗೆ ಒಂದು ತಂತವನ್ನು ರೂಪಿಸಿ, ನಿರ್ಣಯ ತೆಗೆದುಕೊಳ್ಳುವುದು. ಆದುದರಿಂದ ಸಮೃದ್ಧಿಯ ನಾಂದಿಗಾಗಿ ನಾವು ನಮ್ಮ ಸಂಕುಚಿತ ಮನೋಭಾವನೆಗಳನ್ನು ಬದಿಗೊತ್ತಿ, ನೂತನ ಧೋರಣೆಯನ್ನು ನಿರೂಪಿಸುವಲ್ಲಿ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆಯೋಣ; ಇದರಲ್ಲಿ ಸಮಸ್ತ ಭಾರತದ ಕಲ್ಯಾಣ ಅಡಗಿದೆ."

**ಸಮ್ಮೇಳನದ ಚರ್ಚೆಗಳು**

ದಾಮೋದರ ಕಣಿವೆಯ ಯೋಜನೆ, ವಿವಿಧ ಉದ್ದೇಶಗಳಿಂದ ಕೂಡಿದ್ದು, ದಾಮೋದರ ನದಿಯ ನೀರು ಸಂಪೂರ್ಣವಾಗಿ ನೀರಾವರಿ, ಜಲಯಾನ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗವಾಗಬೇಕು ಎಂದೇ ಡಾ॥ ಬಿ.ಆರ್. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಕೇಂದ್ರ ಸರಕಾರ ಸಂಗ್ರಹಿಸಿದ ಮಾಹಿತಿಯೇ ಈ ಚರ್ಚೆಗೆ ಮೂಲಾಧಾರವಾಗಿತ್ತು.

ಈ ವಿಧವಾದ ಟಿಪ್ಪಣಿಯಲ್ಲಿ ಮೂರು ಸರಕಾರಗಳೂ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ಒಂದು ಪಟ್ಟಿಯನ್ನು ಸಿದ್ಧಗೊಳಿಸಬೇಕು. ಈ ವಿಧವಾದ ತಪಶೀಲು ಪಟ್ಟಿಯನ್ನು ತಯಾರಿಸುವಾಗ ಕೇಂದ್ರ ಸರಕಾರದ ಪರಿಣತರೊಂದಿಗೆ ಸಮಾಲೋಚಿಸಿ ವಿವರಗಳನ್ನು ಸಂಗ್ರಹಿಸಬೇಕು. ಕೇಂದ್ರ ಸರಕಾರದ ತಾಂತ್ರಿಕ ತಜ್ಞರು ದಾಮೋದರ ಕಣಿವೆಯ ವಿವಿಧ ಉದ್ದೇಶದ ಈ ಕಾರ್ಯವನ್ನು ಕೂಡಿಹಾಕುವಲ್ಲಿ ಬೇಕಾದ ಪ್ರಥಮ ಮಾಹಿತಿಯನ್ನು ಸಂಗ್ರಹಿಸಬೇಕು. ನಂತರ ಮೂರೂ ಸರಕಾರಗಳು ಒಂದೆಡೆ ಸೇರಿ ಸಮಾಲೋಚನೆ ಮಾಡಿ ಅಣೆಕಟ್ಟೆಯ ಯೋಜನೆಯ ಬಗೆಗೆ ಅವಶ್ಯವಾದ ಸಲಹೆಗಳನ್ನು ಕೇಂದ್ರ ಹಾಗೂ ಪ್ರಾಂತೀಯ ಸರಕಾರಿ ತಜ್ಞರಿಗೆ ನೀಡಬೇಕು.

**ಸಾಮಾನ್ಯ ಒಪ್ಪಂದ**

ಸಾಮಾನ್ಯವಾಗಿ, ದಾಮೋದರ ಯೋಜನೆ ವಿವಿಧ ಉದ್ದೇಶಗಳ ಯೋಜನೆ ಆಗಿರಬೇಕೆಂದಿದ್ದರೂ, ಬಂಗಾಲ ಸರಕಾರವು ಪ್ರವಾಹ ನಿಯಂತ್ರಣ ಸಮಸ್ಯೆಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಿತ್ತು. ಈ ದಿಶೆಯಲ್ಲಿ ಸಾಕಷ್ಟು ಚರ್ಚೆಯಾದ ನಂತರ, ನೀರಾವರಿ ವಿಶೇಷ ಎಂಜಿನಿಯರಾದ ಮಾನ್‌ಸಿಂಗ್ ಅವರ ನೇತೃತ್ವದಲ್ಲಿ. ಬಂಗಾಲ ಸರಕಾರದೊಂದಿಗೆ ಪರಿಶೀಲನೆ ಮಾಡಬೇಕೆಂದು ನಿರ್ಧರಿಸಲಾಯಿತು. ಕೇಂದ್ರ ಹಾಗೂ ಬಿಹಾರ ಸರಕಾರಗಳು ಈ ಪರಿಶೀಲನೆಯ ಕಾರ್ಯದಲ್ಲಿ ಮಾನ್‌ಸಿಂಗರಿಗೆ ಸಹಾಯ ಸಲ್ಲಿಸಲು ಸಹಕರಿಸಬೇಕೆಂದೂ ಬಿಹಾರದ ನೀರಾವರಿಯ ಉಪಮುಖ್ಯ ಎಂಜಿನಿಯರಾದ ಎ. ಕರೀಮ್ ಅವರು, ಮಾನ್‌ಸಿಂಗ್ ಅವರೊಂದಿಗೆ ಸಂಪರ್ಕ ಹೊಂದಿರಬೇಕೆಂದೂ ನಿರ್ಧರಿಸಲಾಯಿತು.

ಈ ಸಭೆಯ ಮುಂಚೆಯೇ, ಶ್ರೀ ಎಚ್.ಸಿ. ಪ್ರಯಾರ್, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ,

ಭಾರತ ಸರಕಾರ, ಇವರು ಜಲಮಾರ್ಗಗಳ ಸಮಸ್ಯೆಗಳಿಗೆ ಸಂಬಂಧಿಸಿದ ಆಡಳಿತ ಸಮಸ್ಯೆ ಕುರಿತು ವಿವರಿಸಿದರು.

* * *

ಈ ಸಮ್ಮೇಳನದಲ್ಲಿ ಹಾಜರಿದ್ದವರೆಂದರೆ, ಮಾನ್ಯ ಶ್ರೀ ಬಿ.ಪಿ. ಪೇನ್, ಬಂಗಾಲ ಸರಕಾರದ ಸಂಪರ್ಕ ಹಾಗೂ ಸಾರ್ವಜನಿಕ ಇಲಾಖೆಯ ಮಂತ್ರಿಗಳು, ಶ್ರೀ ಬಿ. ಸರಕಾರ ಐ.ಸಿ.ಎಸ್., ಕಾರ್ಯದರ್ಶಿ, ಸಂಪರ್ಕ ಹಾಗೂ ಸಾರ್ವಜನಿಕ ಇಲಾಖೆ, ಶ್ರೀ ಬಿ.ಎಲ್. ಸಭರ್‌ವಾಲ್, ಶ್ರೀ ಜೆ.ಎಫ್. ರಸೆಲ್, ಬಂಗಾಲದ ಮುಖ್ಯ ಎಂಜಿನಿಯರ್, ಶ್ರೀ ಮಾನ್‌ಸಿಂಗ್, ನೀರಾವರಿ ವಿಶೇಷ ಎಂಜಿನಿಯರ್, ಶ್ರೀ ಎನ್.ಕೆ. ಬೋಸ್, ನಿರ್ದೇಶಕರು, ನದಿ ಸಂಶೋಧನೆ ಸಂಸ್ಥೆ, ಶ್ರೀ ಎನ್. ಧರ್, ಕಾರ್ಯದರ್ಶಿ, ಯುದ್ಧೋತ್ತರ ಪುನರ್ ನಿರ್ಮಾಣ ಸಮಿತಿ, ಶ್ರೀ ಎಚ್.ಎಮ್ ಇಷಾಕ್, ಅಭಿವೃದ್ಧಿ ಆಯುಕ್ತರು ಹಾಗೂ ನೀರಾವರಿ ಇಲಾಖೆಯ ಉಪಮುಖ್ಯ ಎಂಜಿನಿಯರ್, ಶ್ರೀ ಕರೀಮ್, ಬಿಹಾರ ಸರಕಾರ, ಶ್ರೀ ಎಚ್.ಎಮ್. ಮ್ಯಾಥ್ಯೂಸ್, ಅಧ್ಯಕ್ಷರು, ಕೇಂದ್ರ ಶಕ್ತಿ ಮಂಡಳಿ, ಶ್ರೀ ಡಬ್ಲ್ಯು.ಎಲ್. ವೂರ್‌ಡುಯಿನ್, ಜಲವಿದ್ಯುತ್ ಮಂಡಳಿಯ ಸದಸ್ಯ ಮತ್ತು ಶ್ರೀ ಡಿ.ಎಲ್. ಮಜುಮ್‌ದಾರ್, ಕೇಂದ್ರದ ಪ್ರತಿನಿಧಿ.

## ೪೦
## ಯುದ್ಧೋತ್ತರದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ*

ಭಾರತಕ್ಕೆ ಯುದ್ಧೋತ್ತರದಲ್ಲಿ, ಬೇಕಾಗಬಹುದಾದ ಭಾರಿ ಶಕ್ತಿಯ ಸಲಕರಣೆಗಳು ಹಾಗೂ ಅವುಗಳ ಉತ್ಪಾದನೆ ಕುರಿತಂತೆ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ॥ ಬಿ.ಆರ್. ಅಂಬೇಡ್ಕರರು, ಎರಡನೆಯ ಸಮ್ಮೇಳನದ ನೀತಿನಿರೂಪಣಾ ಸಮಿತಿಯ ಸಭೆಯಲ್ಲಿ, 'ಸಾರ್ವಜನಿಕ ಕಾಮಗಾರಿಕೆ ಹಾಗೂ ವಿದ್ಯುಚ್ಛಕ್ತಿ' ಕುರಿತು ದೆಹಲಿಯಲ್ಲಿ ಫೆಬ್ರವರಿ ಎರಡನೇ ತಾರೀಕಿನಂದು ಈ ಕೆಳಕಂಡಂತೆ ಭಾಷಣ ಮಾಡಿದರು.

ಡಾ॥ ಬಿ.ಆರ್. ಅಂಬೇಡ್ಕರರ ಪೂರ್ಣ ಭಾಷಣದ ವರದಿ :

"ಮೊದಲನೆಯದಾಗಿ, ನಾನು ಈ ಸಭೆಗೆ ಆಗಮಿಸಿರುವ ನೂತನ ಹಾಗೂ ಹಳೆಯ ಸದಸ್ಯರಿಗೆ ಸ್ವಾಗತ ಕೋರುವೆ. ನಾನು ಈ ವಿಧವಾಗಿ ನೂತನ ಹಾಗೂ ಹಳೆಯ ಎಂದು ಸಂಬೋಧಿಸುವ ಕಾರಣವೆಂದರೆ, ನಾವು ಕಳೆದ ಸಭೆ ಸೇರಿದಾಗ ನೂತನ ಸದಸ್ಯರು ಆ ಸಭೆಯಲ್ಲಿ ಹಾಜರಿರಲಿಲ್ಲ. ಈ ನೂತನ ಸದಸ್ಯರು ಬೇರೆ ಯಾರೂ ಆಗಿರದೆ, ಭಾರತೀಯ ವಿದ್ಯುಚ್ಛಕ್ತಿ ಉದ್ದಿಮೆಗಳ ಸಂಯುಕ್ತ ಸಂಘದ ಹಾಗೂ ಭಾರತೀಯ ಕಾಂಗ್ರೆಸ್ ಮಜದೂರ ಸಂಘದ ಸದಸ್ಯರಿದ್ದು ಅವರನ್ನು ಈ ಸಮಿತಿಗೆ ನಾಮಕರಣ ಮಾಡಿಕೊಳ್ಳಲಾಗಿದೆ. ವಿದ್ಯುದೀಕರಣ ಹಾಗೂ ಭಾರತ ಭವಿಷ್ಯದಲ್ಲಿ ಕೈಗೆತ್ತಿಕೊಳ್ಳಬಹುದಾದ, ಯಾವುದೇ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಂಘಟಿತ ಕಾರ್ಮಿಕರ ಪಾತ್ರ ಹಾಗೂ ಸಲಹೆ, ಸಹಕಾರ ಅನಿವಾರ್ಯವೆಂದೇ ಭಾವಿಸುತ್ತೇನೆ. ಈ ದಿಶೆಯಲ್ಲಿ ನಾವು ಮಾಡಿರಬಹುದಾದ ಒಂದು ಅಪರಾಧವೆಂದರೆ, ನಾವು ಕಳೆದ ಸಭೆಯಲ್ಲಿಯೇ ಅವರಿಗೆ ಸ್ಥಾನ ನೀಡಬೇಕಾಗಿತ್ತು, ಆದರೆ ಅದು ನಮ್ಮ

---

* ಇಂಡಿಯನ್ ಇನ್‌ಫರ್ಮೇಷನ್, ಫೆಬ್ರವರಿ ೧೫, ೧೯೪೫, ಪು. ೨೩೧–೪೧.

ಗಮನಕ್ಕೆ ಬಾರದೆಹೋದುದರ ಬಗೆಗೆ ಕ್ಷಮೆ ಯಾಚಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಇದೊಂದು ಮಹಾ ಅಪರಾಧ ಎಂದೇ ಭಾವಿಸುತ್ತೇನೆ. ಸಂತಸದ ಸಂಗತಿ ಎಂದರೆ ಆ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿದ್ದಾರೆ ಹಾಗೂ ಅವರು ನೀಡಬಹುದಾದ ಸಲಹೆಗಳು ನಮಗೆ ಹಾಗೂ ಚರ್ಚೆಗೆ ಉಪಯುಕ್ತವಾಗುತ್ತವೆ ಎಂದು ನನ್ನ ಭಾವನೆ.

**ವಿದ್ಯುತ್ ಎಂಜಿನಿಯರರ ಸಮ್ಮೇಳನ**

"ನಾನು ಈ ಸಮಿತಿಯ ಅಧ್ಯಕ್ಷನಾಗಿರುವುದರಿಂದ ಈಗಾಗಲೇ ಈ ದಿಶೆಯಲ್ಲಿ ಭಾರತ ಸರ್ಕಾರದಿಂದ, ಯುದ್ಧೋತ್ತರ ಸಮಯದ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಾಚರಣೆಯ ಅಡಿಯಲ್ಲಿ ಅಕ್ಟೋಬರ್ ೨೫, ೧೯೪೩ರಿಂದ ಈಚೆಗೆ ಕೈಗೆತ್ತಿಕೊಂಡಿರುವ ಕಾರ್ಯವನ್ನು ವಿವರಿಸುವುದು ಸಮಂಜಸ ಎಂದು ಭಾವಿಸುತ್ತೇನೆ. ತಮಗೆ ಈಗಾಗಲೇ ವೃತ್ತಪತ್ರಿಕೆಗಳಿಂದ ತಿಳಿದಿರಬಹುದಾದ ಸಂಗತಿ ಎಂದರೆ ಕಳೆದ ಬಾರಿ ಈ ನೀತಿನಿರೂಪಣಾ ಸಮಿತಿಯ ಸಭೆಯ ನಂತರ, ಭಾರತ ಸರ್ಕಾರದ ವಿದ್ಯುಚ್ಛಕ್ತಿ ಆಯುಕ್ತರಾದ ಶ್ರೀ ಮ್ಯಾಥ್ಯೂಸ್ ಅವರು ಸರ್ಕಾರದ ಪರವಾನಗಿ ಪಡೆದು ದೇಶದಲ್ಲಿಯ ಪ್ರಮುಖ ವಿದ್ಯುತ್ ಎಂಜಿನಿಯರರ ಸಭೆಯನ್ನು ಕರೆದಿದ್ದರು; ಈ ಸಭೆಯಲ್ಲಿ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರೆಲ್ಲಾ ಭಾಗವಹಿಸಿ ಯುದ್ಧೋತ್ತರದಲ್ಲಿಯ ಭಾರತಕ್ಕೆ ಅವಶ್ಯವಿರುವ ವಿದ್ಯುಚ್ಛಕ್ತಿ ಅಭಿವೃದ್ಧಿಯ ಬಗೆಗೆ ಸಮಾಲೋಚನೆ ಮಾಡಿದರು. ಈ ಸಮ್ಮೇಳನವು ಮಾಡಿದ ಮೊದಲನೆಯ ಕಾರ್ಯವೆಂದರೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಭಾರತಕ್ಕೆ ಅವಶ್ಯವಿರುವ ಭಾರೀ ಸಲಕರಣೆಗಳ ಒಂದು ಪಟ್ಟಿಯನ್ನು ತಯಾರಿಸಿತು. ಈ ಕಾರ್ಯದೊಂದಿಗೆ ಸಮ್ಮೇಳನವು ಹಲವು ನಿರ್ಣಯಗಳನ್ನು ಕೈಗೊಂಡಿತು. ಸಮ್ಮೇಳನದ ವರದಿಯಂತೆ ಹೇಳಬಹುದಾದರೆ "ಈ ಸಮ್ಮೇಳನವು ಸಮಸ್ಯೆಯ ಬಗೆಗೆ ಅಧ್ಯಯನ, ಪರೀಕ್ಷೆ ಹಾಗೂ ಚರ್ಚೆ ಮಾಡಲು ಸರ್ವಾನುಮತದಿಂದ ಸಮ್ಮತಿಸಿದೆ". ಈ ನಿರ್ಣಯಗಳು ಈ ಕೆಳಕಂಡಂತೆ ನಾಲ್ಕು ವಿಭಾಗಗಳಿಂದ ಒಡಗೂಡಿವೆ:

೧. ಮೊದಲನೆಯ ಶಿಫಾರಸಿನಂತೆ ಪ್ರಾಂತ ಹಾಗೂ ರಾಜ್ಯಗಳು ತಮ್ಮ ಪ್ರದೇಶಗಳಲ್ಲಿಯ ವಿದ್ಯುಚ್ಛಕ್ತಿ ಅಭಿವೃದ್ಧಿ ಯೋಜನೆಗಳ ಬಗೆಗೆ ಅನುಸರಿಸಬೇಕಾದ ಸಾಮಾನ್ಯ ಹಾಗೂ ನಿರ್ದಿಷ್ಟ ಸೂಚನೆಗಳನ್ನು ಕುರಿತ ಸಂಗತಿಯಾಗಿತ್ತು.

೨. ಎರಡನೆಯದೆಂದರೆ, ವಿದ್ಯುತ್ ತಾಂತ್ರಿಕ ಮಂಡಳಿಯ ನೇಮಕಾತಿ (Technical Power Board)ಯ ಬಗೆಗೆ.

೩. ಸಮಿತಿಯ ದೃಷ್ಟಿಯಲ್ಲಿ ಕೈಗೆತ್ತಿಕೊಳ್ಳಬೇಕಾದ ಪರೀಕ್ಷಾ ಅಧ್ಯಯನ ವಿದ್ಯುತ್ ಅಭಿವೃದ್ಧಿಗೆ ಸಂಬಂಧಿಸಿದಂತೆ.

೪. ನಾಲ್ಕನೆಯ ಶಿಫಾರಸಿನಂತೆ, ರೈಲ್ವೇ ವಿದ್ಯುದ್ದೀಕರಣ, ಕೃತಕ ಗೊಬ್ಬರ ಉತ್ಪಾದನೆ, ಹಾಗೂ ಗ್ರಾಮೀಣ ವಿದ್ಯುದೀಕರಣಗಳ ಬಗೆಗೆ.

"ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಸದಸ್ಯರು ತಮ್ಮ ಅನಿಸಿಕೆಯ ಬಗ್ಗೆ ಬರೆದಿರುವ ಪತ್ರದಲ್ಲಿ ಹೇಳಿದಂತೆ 'ವಿದ್ಯುತ್ ಅಭಿವೃದ್ಧಿ ಬಗ್ಗೆ ಕರೆಯಲಾದ ಈ ಚೊಚ್ಚಲು ಅವಕಾಶದಲ್ಲಿ ಭಾಗವಹಿಸಿದ ಎಂಜಿನಿಯರರು ಪ್ರಾಂತೀಯ ಹಾಗೂ ವಿಭಿನ್ನ ಹಿನ್ನೆಲೆಗಳ ಅನುಭವದಿಂದ ಪರಿಶೀಲನೆ ಮಾಡಿ ಸಂಘಟಿಸಿಕೊಳ್ಳಲು ಸಹಕಾರಿಯಾದ ಸಂಗತಿ ನಮಗೆ ಸಂತಸ ಒದಗಿಸಿದೆ'.

**ಭಾರೀ ವಿದ್ಯುತ್ ಸಲಕರಣೆಗಳು**

"ನಾವು ಈ ಸಮ್ಮೇಳನದ ಸದಸ್ಯರಿಗೆ ಕೃತಜ್ಞರಾಗಿರಬೇಕು. ಏಕೆಂದರೆ, ಈ ಸಮ್ಮೇಳನವು ಭಾರತದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿಗೆ ಇರುವ ಅವಕಾಶಗಳನ್ನು ವಿವರಿಸಿದೆ. ಈ ಸಮ್ಮೇಳನವು ಭಾರತ ಸರ್ಕಾರವನ್ನು, ತಮ್ಮ ಶಿಫಾರಸುಗಳನ್ನು ಕೂಡಲೇ ಜಾರಿಗೊಳಿಸುವಂತೆ ಕೇಳಿಕೊಂಡಿದೆ. ಸಂತಸದ ಸಂಗತಿ ಎಂದರೆ, ಸಮ್ಮೇಳನದ ಶಿಫಾರಸಿನಂತೆ ಎರಡು ನಿರ್ಣಯಗಳನ್ನು ಸರ್ಕಾರ ಕಾರ್ಯಾಚರಣೆಯಲ್ಲಿ ತರಲು ಪ್ರಯತ್ನ ಮಾಡಿದೆ. ಆ ಎರಡು ವಿಷಯಗಳೆಂದರೆ, ಸಲಕರಣೆ, ಸಂಗ್ರಹ ಕಾರ್ಯ, ಹಾಗೂ ವಿದ್ಯುತ್ ತಾಂತ್ರಿಕ ಮಂಡಳಿಯ ರಚನೆ. ಯುದ್ಧದ ಆಕ್ರಮಣಕಾರಿ ಕಾರ್ಯ ಕೊನೆಗೊಳ್ಳುತ್ತಲೇ ಭಾರತಕ್ಕೆ ಬೇಕಾದ ಅವಶ್ಯ ಉತ್ಪಾದನಾ ಸಾಮರ್ಥ್ಯದ ಭಾರೀ ವಿದ್ಯುತ್ ಸಲಕರಣೆಗಳನ್ನು ಸಂಗ್ರಹಿಸುವ ದಿಶೆಯಲ್ಲಿ ಒಂದು ಪಟ್ಟಿಯನ್ನು ತಯಾರಿಸಲಾಗಿದೆ. ಒಂದು ಅಂದಾಜಿನಂತೆ, ೫೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೮೫೦ ಮೆಗಾವಾಟ್ ಉತ್ಪಾದನೆಯ ಸಲಕರಣೆಗಳನ್ನು ಕಾಯ್ದಿರಿಸಲಾಗಿದೆ. ಸರಾಸರಿಯ ಆಧಾರದ ಮೇಲೆ ಈ ಪಟ್ಟಿಯಲ್ಲಿಯ ಕಾರ್ಯಕ್ರಮಗಳಲ್ಲಿ ದೊರೆಯಬಹುದಾದ ವಿದ್ಯುತ್ ಸಾಮರ್ಥ್ಯವು ಈಗ ಭಾರತದಲ್ಲಿ ಸ್ಥಾಪಿಸಲಾದ ವಿದ್ಯುತ್ ಸ್ಥಾವರಗಳ ಶೇಕಡಾ ೬೫ರಷ್ಟು ಸಾಮರ್ಥ್ಯವುಳ್ಳದ್ದು ಎಂದು ಹೇಳಲಾಗಿದೆ. ವಿವರವಾದ ಪರಿಶೀಲನೆಗಳಂತೆ ನಮಗೆ ಬೇಕಾಗಿರುವ ಸಲಕರಣೆ, ಈಗ ನಿರ್ಧರಿಸಿರುವ ಮೊತ್ತಕ್ಕಿಂತಲೂ ಅಧಿಕವಾಗಿದೆ. ಆದುದರಿಂದ ಈ ವಿಧವಾದ ವಿಷಯಗಳಲ್ಲಿ ಅನಾವಶ್ಯಕ ವಿಳಂಬದಿಂದ ನಮ್ಮ ಹಿತಾಸಕ್ತಿಗೆ ಧಕ್ಕೆ ತಗಲುವುದರಿಂದ, ಆದಷ್ಟು ಬೇಗನೆ ಮಾಹಿತಿ ಸಂಗ್ರಹಕಾರ್ಯ ಮುಗಿಸಿ, ನಮಗೆ ದೊರೆಯಬಹುದಾದ ಅಲ್ಪ ಸಮಯದಲ್ಲಿಯೇ ಕಾರ್ಯಪ್ರವೃತ್ತರಾಗಬೇಕೆಂದು ಬಯಸಿದ್ದೇವೆ.

**ವಿದ್ಯುತ್ ತಾಂತ್ರಿಕ ಮಂಡಳಿ**

"ತಮಗೆಲ್ಲಾ ಪತ್ರಿಕಾವರದಿಗಳ ಮೂಲಕ ಈಗಾಗಲೇ ತಿಳಿದಿರುವಂತೆ ನವೆಂಬರ್ ೮, ೧೯೪೪ ರಂದು ಭಾರತ ಸರ್ಕಾರವು ಒಂದು ವಿದ್ಯುತ್ ತಾಂತ್ರಿಕ ಮಂಡಳಿಯನ್ನು ರಚಿಸಿದೆ. ಅಧ್ಯಕ್ಷರಲ್ಲದೆ ಈ ಮಂಡಳಿಯಲ್ಲಿ ಇಬ್ಬರು ಪೂರ್ಣಾವಧಿ ಸದಸ್ಯರು ಹಾಗೂ ಮೂವರು ಅರೆ ಅವಧಿ ಸದಸ್ಯರಿರುತ್ತಾರೆ. ಭಾರತ ಸರ್ಕಾರವು, ತನ್ನ ವಿದ್ಯುಚ್ಛಕ್ತಿ ಆಯುಕ್ತರಾದ ಶ್ರೀ ಮ್ಯಾಥ್ಯೂಸ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಅಲ್ಲದೆ ಅಮೆರಿಕಾದಲ್ಲಿಯ ಶ್ರೀ ಡಬ್ಲ್ಯು. ಎಲ್. ವೂರಡಿನ್ ಅವರ ಸೇವೆಯನ್ನು ಪಡೆದು ಅವರನ್ನು ಸದಸ್ಯರೆಂದು ನೇಮಿಸಲಾಗಿದೆ. ಭಾರತಕ್ಕೆ ಬರುವ ಮುನ್ನ, ಶ್ರೀ ವೂರಡಿನ್ ಅವರು ಟೆನ್ನೆಸ್ಸಿ ಕಣಿವೆಯ ಪ್ರಾಧಿಕಾರದಲ್ಲಿ ಪ್ರಾಜೆಕ್ಟ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಮೂರನೆಯ ಸದಸ್ಯರನ್ನು ಉಪಯುಕ್ತತೆಯಲ್ಲಿ ಸದಸ್ಯರೆಂದು ನೇಮಿಸಿಕೊಳ್ಳಲೂ ಯೋಚಿಸಲಾಗಿದೆ. ಈ ದಿಶೆಯಲ್ಲಿ ವಿದ್ಯುತ್ಬಳಕೆಯಲ್ಲಿ ಅನುಭವ ಪಡೆದಿರುವ ಎಂಜಿನಿಯರರ ಸೇವೆಯನ್ನೇ ಪಡೆಯಲು ಪ್ರಯತ್ನಗಳು ನಡೆದಿವೆ. ಈ ವಿಧವಾದ ಪರಿಣತರನ್ನು ಮಂಡಳಿಯಲ್ಲಿ ತೆಗೆದುಕೊಳ್ಳುವುದರ ಮೂಲಕ, ಕಾರ್ಯಕ್ರಮ ನಿರೂಪಿಸುವಲ್ಲಿ ಅಗತ್ಯವಾದ ಸರ್ವೆ, ಅಭಿಪ್ರಾಯ ಸಂಗ್ರಹಣೆ ಮುಂತಾದ ವಿದ್ಯುಚ್ಛಕ್ತಿ ಕಾರ್ಯಗಳ ಬಗೆಗೆ ಪ್ರಾಂತೀಯ ಸರಕಾರಗಳೊಡನೆ ಸಮಾಲೋಚನೆ ನಡೆಸುವಲ್ಲಿ ತುಂಬಾ ಸಹಕಾರಿಯಾಗಬಹುದು. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ ಭಾರತ ಸರ್ಕಾರವು ಈ ದಿಶೆಯಲ್ಲಿ ಎಷ್ಟು ಕಾತರವಾಗಿದೆ ಎಂಬುದನ್ನು ಅರಿಯದೇ ಹೋಗಲಾರೆವು. ಈ ಕಾರಣಕ್ಕೆಂದೇ ನಾನು ಈ ಅವಧಿಯಲ್ಲಿ ನಡೆದಿರಬಹುದಾದ ಎಲ್ಲಾ ಕಾರ್ಯಗಳ ವಿವರಗಳನ್ನೂ ತಮ್ಮ ಅವಗಾಹನೆಗೆ ತಂದಿರುವೆ.

**ಮೂರು ಕಾರ್ಯಕ್ರಮಗಳು**

"ಅತಿ ಪ್ರಮುಖವಾದ ಮತ್ತೊಂದು ವಿದ್ಯುಚ್ಛಕ್ತಿ ಅಭಿವೃದ್ಧಿ ನೀತಿಯ ಬಗೆಗೆ ತಮ್ಮ ಗಮನ ಸೆಳೆಯಲು ಬಯಸಿದ್ದೇನೆ. ತಮಗೆ ಜ್ಞಾಪಕವಿರುವಂತೆ, ಕಳೆದ ಬಾರಿ ನಡೆದ ಸಭೆಯಲ್ಲಿ ಮುಂಬಯಿ ಸರ್ಕಾರದ ಪ್ರತಿನಿಧಿಯಾಗಿ ಆಗಮಿಸಿದ್ದ ಶ್ರೀ ಕೊಲಿನ್ಸ್ ಅವರು ಮುಂಬೈ ಪ್ರಾಂತದಲ್ಲಿ ಜಾರಿಗೊಳಿಸಲಾಗುವ 'ಗ್ರಿಡ್' ಬಗೆಗೆ ಹಲವು ಸಂಗತಿಗಳನ್ನು ವಿವರಿಸಿದರು. ಭಾರತ ಸರ್ಕಾರವು ಕಳೆದ ವರ್ಷದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ ಬಗೆಗಿನ ಪ್ರಾಂತೀಯ ಹಾಗೂ ಸ್ಥಳೀಯ ಯೋಜನೆಗಳ ಬಗೆಗೆ ದೀರ್ಘವಾಗಿ ಆಲೋಚನೆ ಕೈಕೊಂಡು, ದೇಶದ ವಿವಿಧ ಭಾಗಗಳ ಅಭಿವೃದ್ಧಿಯನ್ನು ಯಾವ ವಿಧಾನದಲ್ಲಿ ಜರುಗಿಸಬೇಕೆಂದೂ ಯೋಚಿಸಿತು. ಈ ದಿಶೆಯಲ್ಲಿ ವಿದ್ಯುಚ್ಛಕ್ತಿಯನ್ನು ಬಳಕೆದಾರರ ಹಾಗೂ ಉತ್ಪಾದಕರ ಸೇವೆಗೆ ಅತಿ ಕಡಿಮೆ ಬೆಲೆಯಲ್ಲಿ ಒದಗಿಸಬೇಕಾದಲ್ಲಿ, ನಾವು ಜಾಗರೂಕತೆ ಹಾಗೂ ದಕ್ಷತೆಯಿಂದ ಒಡಗೂಡಿದ, ಬ್ರಿಟನ್‌ನಲ್ಲಿ ಜಾರಿಯಲ್ಲಿರುವ ಕೇಂದ್ರ ವಿದ್ಯುಚ್ಛಕ್ತಿ ಮಂಡಳಿಯ ಮೂರು ಕಾರ್ಯಕ್ರಮಗಳನ್ನೇ ಆಯ್ದುಕೊಂಡು ಅನುಸರಿಸಬೇಕಾಗುವುದು ಅನಿವಾರ್ಯ. ಆ ಮೂರು ಕಾರ್ಯಕ್ರಮಗಳು ಹೀಗಿವೆ :

ಅ) ಭಾರೀ ಪ್ರಮಾಣದ ವಿದ್ಯುಚ್ಛಕ್ತಿ ಕೇಂದ್ರಗಳನ್ನು ಔದ್ಯೋಗಿಕ ಪ್ರದೇಶಗಳಲ್ಲಿ ಸ್ಥಾಪಿಸಿ, ಅವನ್ನು ಸಾರ್ವಜನಿಕ ವಿತರಣೆಯ ವ್ಯಾಪ್ತಿಗೆ ವಹಿಸಿಕೊಡುವುದು.

ಆ) ಪ್ರಮುಖ ಸರಬರಾಜು ವ್ಯವಸ್ಥೆಯ ರಚನೆಯನ್ನು ಸ್ಥಾಪಿಸಿ, ತನ್ಮೂಲಕ ವ್ಯವಸಾಯ ಹಾಗೂ ಇತರ ಕಾರ್ಯಗಳಿಗೆ ವಿದ್ಯುಚ್ಛಕ್ತಿಯನ್ನು ನೀಡುವ ಮೂಲಕ ಈ ಪ್ರಮುಖ ಸರಬರಾಜು ವ್ಯವಸ್ಥೆಯಿಂದ ಆಯಾ ಭಾಗಗಳ ಸಮಗ್ರ ಅಭಿವೃದ್ಧಿಯಾಗುವಂತೆ ವಿದ್ಯುಚ್ಛಕ್ತಿಯನ್ನು ಬೃಹತ್ ಪ್ರಮಾಣದ ಈ ಕೇಂದ್ರಗಳಿಂದ ನೀಡುವುದು. ಹಾಗೂ

ಇ) ಆ ಪ್ರದೇಶದಲ್ಲಿ ವಿದ್ಯುತ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದಾದ ಮಿತಿಯೊಳಗೆ, ಸಾಧ್ಯವಾದಷ್ಟು ಮಟ್ಟಿಗೆ ವಿದ್ಯುತ್ ಕಂಪನವನ್ನು ಒಂದೇ ಪ್ರಮಾಣಕ್ಕೆ ತರುವುದು.

"ಈ ಮೂರು ಕಾರ್ಯಕ್ರಮಗಳು 'ಗ್ರಿಡ್'ಗೆ ಮೂಲಾಧಾರವಾಗಿವೆ. ಅಲ್ಲದೇ ನಮಗೆ ತಿಳಿದು ಬಂದಂತೆ ೧೯೨೬ರಿಂದ ಬ್ರಿಟನ್‌ನಲ್ಲಿ ಈ ವಿಧಾನ ಜಾರಿಯಲ್ಲಿದೆ. ನನ್ನ ಮಹದಾಸೆ ಎಂದರೆ ಈ ವಿಧಾನವನ್ನು ನಮ್ಮ ದೇಶದಲ್ಲಿ ಅಳವಡಿಸಿದ್ದೇ ಆದರೆ ಪ್ರಾಂತೀಯ ಅಭಿವೃದ್ಧಿಗೆ ಆವಶ್ಯಕವಾದ ವಿದ್ಯುಚ್ಛಕ್ತಿಯನ್ನು ಶ್ರೀಮಂತರ ಹಾಗೂ ಬಡವರ ಮನೆಯ ಬಾಗಿಲಿಗೆ ತುಂಬಾ ಕಡಿಮೆ ಬೆಲೆಯಲ್ಲಿಯೇ ಒದಗಿಸಬಹುದು.

"ತಾವು ಬ್ರಿಟನ್‌ನಲ್ಲಿ ಜಾರಿಯಲ್ಲಿರುವ ಈ 'ಗ್ರಿಡ್' ವ್ಯವಸ್ಥೆಯನ್ನು ಅರಿಯಲು ಕುತೂಹಲರಾಗಿರಬಹುದು. ಈ ವಿಧವಾದ ಭಾರೀ ಪ್ರಮಾಣದ ವ್ಯವಸ್ಥೆಯನ್ನು ಬ್ರಿಟನ್‌ನಲ್ಲಿ ೧೯೪೦–೪೧ರಲ್ಲಿಯೇ ರಾಷ್ಟ್ರೀಯ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ನಿರ್ಮಿಸಲು, ಯೋಚಿಸಲಾಗಿತ್ತು. ಆಗ ಅವರ ಮುಂದಿದ್ದ ಉತ್ಪಾದನೆಯ ಗುರಿ ಎಂದರೆ ೨೫,೦೦೦ ಮಿಲಿಯನ್ ಯೂನಿಟ್ಸ್ ಹಾಗೂ ಒಂದು ಯೂನಿಟ್‌ನ ಬೆಲೆ ೬.೪ ಪೆನ್ನಿ ಎಂದು ೧೯೨೫–೨೬ರ ದಾಖಲೆಗಳು ತಿಳಿಸುತ್ತವೆ. ಒಂದು ಯೂನಿಟ್‌ನ ಕಡಿಮೆ ಬೆಲೆ ಎಂದರೆ ೪ ಪೆನ್ನಿ ಹಾಗೂ ಔದ್ಯೋಗಿಕ ಬಳಕೆದಾರರು, ೧/೪ ಪೆನ್ನಿಗೆ ಒಂದು ಯೂನಿಟ್ ಪಡೆಯಬಹುದಾಗಿತ್ತು.

**ಕಾರ್ಯಕ್ರಮದ ಪಟ್ಟಿಯಲ್ಲಿರುವ ವಿಷಯಗಳು**

"ಈಗ ನಾನು ನಮ್ಮ ಈ ದಿನದ ಸಭೆಯ ಕಾರ್ಯಕಲಾಪಗಳ ಬಗೆಗೆ ಹೇಳಬಯಸುವೆ. ತಮಗೆ

ಗೋಚರಿಸುವಂತೆ ಈ ದಿನದ ಕಾರ್ಯಕ್ರಮದಲ್ಲಿ ೪ ವಿಷಯಗಳಿವೆ. ಕಾರ್ಯಕ್ರಮದ ೪ನೇ ವಿಷಯ, ಎರಡು ಯೋಜನೆಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತದೆ. ಅದರಲ್ಲಿ ಮೊದಲನೆಯದೆಂದರೆ, ತಾಂತ್ರಿಕ ಶಕ್ತಿ ಮಂಡಳಿಯ ರಚನೆ ಹಾಗೂ ಎರಡನೆಯದೆಂದರೆ, ಭಾರತೀಯರನ್ನು ವಿದೇಶಗಳಿಗೆ ವಿದ್ಯುಚ್ಛಕ್ತಿಯ ಬಗೆಗಿನ ತರಬೇತಿಗೆ ಕಳಿಸುವ ಬಗೆಗೆ. ಈ ಎರಡೂ ನಿರ್ವಿವಾದ ಪಡೆಯಲು ತಕ್ಕ ವಿಷಯಗಳಾಗಿವೆ; ಆದುದರಿಂದ ಈ ವಿಷಯಗಳ ಬಗೆಗೆ ನಾನು ಹೆಚ್ಚು ಚರ್ಚಿಸದೇ ಮಿಕ್ಕ ವಿಷಯಗಳ ಬಗೆಗೆ ಗಮನ ಹರಿಸುವೆ. ಕಾರ್ಯಕ್ರಮದ ಪಟ್ಟಿಯಲ್ಲಿಯ ೨ನೇ ವಿಷಯವು ೪ರಂತೆ ನಿರ್ವಿವಾದದ್ದಾಗಿಲ್ಲ. ಏಕೆಂದರೆ ಈ ವಿಷಯವು ವಿದ್ಯುಚ್ಛಕ್ತಿ ಉತ್ಪಾದನೆ ವಹಿಸಿಕೊಳ್ಳುವಲ್ಲಿ ಅನುಸರಿಸಬಹುದಾದ ಲೆಕ್ಕಪದ್ಧತಿ, ಅದರ ಆದಾಯವ್ಯಯ ಬಗೆಗೆ ಇದೆ. ಈ ವಿಷಯ ನಾವು ಭಾವಿಸಿದಂತೆ ವಿವಾದಾತ್ಮಕವಾಗಿರದೇ ಎರಡು ಸಮಸ್ಯೆಗಳಿಂದ ಒಡಗೂಡಿದೆ. ಹೀಗಾಗಿ ನಾವು ನಮ್ಮ ಚರ್ಚೆಯನ್ನು ಈ ಪ್ರಶ್ನೆಗಳಿಗೆ ಮಾತ್ರ ಸೀಮಿತಗೊಳಿಸುವುದು ಉತ್ತಮ ಕ್ರಮವಾಗಿದೆ. ಎರಡೂ ಪ್ರಶ್ನೆಗಳನ್ನು ಬೇರೆ ಬೇರೆಯಾಗಿ ಪರಿಶೀಲಿಸೋಣ.

ಮೊದಲನೆಯ ಪ್ರಶ್ನೆ ಎಂದರೆ, ವಿದ್ಯುಚ್ಛಕ್ತಿ ಉತ್ಪಾದನೆಯ ಬಗೆಗೆ ತಗಲಬಹುದಾದ ವೆಚ್ಚವನ್ನು ಬಳಕೆದಾರರು ವಹಿಸಿಕೊಳ್ಳಬೇಕೆ ಅಥವಾ ಬೇಡವೇ? ಎರಡನೆಯ ಪ್ರಶ್ನೆ: ಸೂಕ್ತ ಪಾಲುಗಾರಿಕೆಯನ್ನು ಹೇಗೆ ಹಾಗೂ ಯಾವ ಆಧಾರಗಳ ಮೇಲೆ ನಿರ್ಧರಿಸಬೇಕು? ಮೊದಲನೆಯ ಪ್ರಶ್ನೆಯ ಬಗೆಗೆ ಧೈರ್ಯವಾಗಿ ಹೇಳಬಹುದಾದರೆ, ಅದು ಯಾವ ವಿವಾದಕ್ಕೂ ಎಡೆ ನೀಡುವುದಿಲ್ಲ. ಏಕೆಂದರೆ ವಿದ್ಯುಚ್ಛಕ್ತಿ ಸಕಲರಿಗೂ ಸಲ್ಲಬೇಕಾದ ವಸ್ತು. ಹೀಗಾಗಿ ಗ್ರಾಹಕರ ಹಿತರಕ್ಷಣೆಯೇ ಪ್ರಮುಖವಾದುದರಿಂದ ಈ ದಿಶೆಯಲ್ಲಿ ಉತ್ಪಾದಕರು ತಮ್ಮ ಅಭಿಪ್ರಾಯವನ್ನು ಹೇರುವ ಪ್ರಶ್ನೆಯೇ ಇಲ್ಲ. ವಿದ್ಯುಚ್ಛಕ್ತಿಯನ್ನು ಅಗ್ಗದರ– ಹಾಗೂ ವಿಪುಲ ಪ್ರಮಾಣದಲ್ಲಿ ಒದಗಿಸದೇ ಹೋದರೆ, ಭಾರತದ ಔದ್ಯೋಗಿಕ ಪ್ರಗತಿಯೇ ಕುಂಠಿತಗೊಳ್ಳಬಹುದು. ಆದುದರಿಂದ ನಿರ್ವಹಣಾವೆಚ್ಚವನ್ನು ಪಾಲುಗಾರಿಕೆಯೊಂದಿಗೆ ಜೋಡಣೆ ಮಾಡಿದರೆ ನಮ್ಮ ಸಮಸ್ಯೆ ಬಹುಪಾಲು ನೀಗಿದಂತೆ. ಈ ಒಂದು ಸೂತ್ರವನ್ನು ನಾವು ಒಪ್ಪಿಕೊಂಡಲ್ಲಿ ನಮ್ಮ ಲೆಕ್ಕಪದ್ಧತಿಯು ಸರಳವಾಗಿ ನಿರ್ವಹಣೆಯ ಕಾರ್ಯ ಹಗುರವಾಗುವುದರಲ್ಲಿ ಸಂಶಯವೇ ಇರಲಾರದು. ಈ ವಿಧಾನದಿಂದಾಗಿ ಲಾಭಗಳಿಕೆಗೆ ಸಂಬಂಧಿಸಿದ ಯಾವ ಸಮಸ್ಯೆಯೂ ಇರುವುದಿಲ್ಲ.

**ಲೆಕ್ಕಾಚಾರದ ಸೂತ್ರಗಳು**

"ಈ ಸಂಗತಿಯು ಗೌಣವೆಂದೇ ಭಾವಿಸಬಹುದಾಗಿದೆ. ಏಕೆಂದರೆ ನಾವು ಈ ದಿಶೆಯಲ್ಲಿ ಯಾವ ಕ್ರಾಂತಿಕಾರಿ ಲೆಕ್ಕಾಚಾರ ಪದ್ಧತಿಯನ್ನು ಅಳವಡಿಸದೇ, ೧೯೨೫ರ ಲಂಡನ್ ವಿದ್ಯುಚ್ಛಕ್ತಿ ಅಧಿನಿಯಮದಲ್ಲಿರಬಹುದಾದ ಸೂತ್ರಗಳನ್ನೇ ಹಾಗೂ ೧೯೨೬ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮವನ್ನೇ ಅನುಸರಿಸುವೆವು. ವಿದ್ಯುಚ್ಛಕ್ತಿ ಆಯುಕ್ತರು ಭಾರತ ಸರಕಾರಗಳ ಹಾಗೂ ವಿದ್ಯುತ್ ಸ್ಥಾವರಗಳ ಗಮನಕ್ಕೆ ಸುತ್ತೋಲೆಯ ಮುಖಾಂತರ ಕಳಿಸಲಾಯಿತು. ಆದರೆ ಶೋಚನೀಯ ಸಂಗತಿ ಎಂದರೆ ಈ ದಿಶೆಯಲ್ಲಿ ಭಿನ್ನಾಭಿಪ್ರಾಯಗಳು ಹೊರಹೊಮ್ಮಿವೆ. ಈ ಭಿನ್ನಾಭಿಪ್ರಾಯಗಳನ್ನು ನಿವಾರಿಸಲೆಂದೇ ಭಾರತ ಸರ್ಕಾರವು ಒಂದು ಸಲಹಾ ಮಂಡಳಿಯನ್ನು ರಚಿಸಿ, ಸೂಕ್ತ ಸಲಹೆಯನ್ನು ನೀಡಬೇಕೆಂದು ಕೋರಿದೆ. ಈ ಒಂದು ಪ್ರಯತ್ನವು ಸಮಸ್ಯೆಯನ್ನು ಬಗೆಹರಿಸುವಲ್ಲಿ ಸಹಕಾರಿಯಾಗಬಹುದೆಂದು ಹಾರೈಸೋಣ.

"ಇನ್ನು ನಮ್ಮ ಕಾರ್ಯಕ್ರಮದ ಪಟ್ಟಿಯ ೧ ಹಾಗೂ ೩ನೇ ವಿಷಯಗಳು. ಅವು ಅತಿ ಪ್ರಮುಖವಾದ ವಿಷಯಗಳಾಗಿರುವುದರಿಂದ ನಾನು ನಿಮ್ಮ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕಾಗಿರುವುದರಿಂದ,

ತಾವು ನನ್ನನ್ನು ಕ್ಷಮಿಸಬೇಕೆಂದು ಕೋರುತ್ತೇನೆ.

"ಮೊದಲನೆಯ ವಿಷಯದ ಬಗೆಗೆ, ತಮ್ಮೆಲ್ಲರಿಗೂ ಜ್ಞಾಪಕವಿರುವಂತೆ, ಕಳೆದ ನೀತಿ ಸಮಿತಿಯ ಸಭೆಯು ತನ್ನ ಕಾರ್ಯಕಲಾಪಗಳ ಕೊನೆಯಲ್ಲಿ ಈ ದಿಶೆಯಲ್ಲಿ ಒಂದು ನಿರ್ಣಯವನ್ನು ಕೈಗೊಂಡು ಸಭೆಯ ಮುಂದೆ ಚರ್ಚೆಗೆ ಇಡುವಂತೆ ಕಾರ್ಮಿಕ ಇಲಾಖೆಗೆ ಸೂಚಿಸಿತು. ಈ ನಿರ್ಣಯದಂತೆ ಇಲಾಖೆಯು ಕಳಿಸಿದ ಸೂಚನೆ ಈ ಮುಂದಿನಂತಿದೆ. "ಈ ಸಭೆಯು ತನ್ನ ಗೊತ್ತುವಳಿಯ ಮೂಲಕ ಶಿಫಾರಸು ಮಾಡುವುದೇನೆಂದರೆ ವಿದ್ಯುಚ್ಛಕ್ತಿ ಸರಬರಾಜಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕ್ರಿಯಾತ್ಮಕವಾಗಿ ತ್ವರಿತಗೊಳಿಸಬೇಕು. ಅಲ್ಲದೆ, ಪ್ರಾಂತೀಯ, ಸ್ಥಳೀಯ ಸರಕಾರ, ಹಾಗೂ ಅರೆಸರಕಾರ ಹಾಗೂ ಉದ್ದಿಮೆಗಳಿಂದ ವಿದ್ಯುಚ್ಛಕ್ತಿ ಅಭಿವೃದ್ಧಿಯ ಬಗ್ಗೆ ಬರಬಹುದಾದ ಎಲ್ಲಾ ಆತಂಕಗಳನ್ನು ನಿವಾರಿಸಿ, ಆರೋಗ್ಯಕರ ಬೆಳವಣಿಗೆಗೆ ಆಸ್ಪದ ಮಾಡಿಕೊಡಬೇಕು".

"ನೀತಿ ಸಮಿತಿಯ ಈ ನಿರ್ಣಯವು ಸ್ಪಷ್ಟವಾಗಿರದೆ ಕೇವಲ ಭವಿಷ್ಯತ್ತಿನಲ್ಲಿಯ ಅಭಿವೃದ್ಧಿಯ ಬಗೆಗೆ ಹೇಳಿದೆಯೇ ಹೊರತು ಈಗಾಗಲೇ ಜಾರಿಯಲ್ಲಿರುವ ಸ್ಥಾವರಗಳ ಬಗ್ಗೆ ಏನೂ ಹೇಳಿಲ್ಲ. ಈ ನಿರ್ಣಯದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿಯಲ್ಲಿ ತೋರಬಹುದಾದ ಆತಂಕಗಳೇನೆಂಬುದನ್ನು ವಿವರಿಸಿಲ್ಲ. ಆದುದರಿಂದ ಈ ನಿರ್ಣಯವನ್ನು ನೀತಿ ಸಮಿತಿಯ ಸಭೆಯಲ್ಲಿ ಮಂಡಿಸಿ ಅದರಲ್ಲಿರಬಹುದಾದ ಲೋಪದೋಷಗಳನ್ನು ಹಾಗೂ ಅನುಮಾನಗಳನ್ನು ನಿವಾರಿಸಬೇಕೆಂದು ನಿರ್ಣಯಿಸಿದೆ. ಇವು ವಿಷಯ ೧ರ ಬಗೆಗೆ ಇರಬಹುದಾದ ಸಂಗತಿಗಳು.

## ರಾಜ್ಯ ನಿಯಂತ್ರಣ ಹಾಗೂ ಒಡೆತನ

"ಕಳೆದ ಧೋರಣಾ ಸಮಿತಿಯ ಸಭೆಯ ಚರ್ಚೆಯಲ್ಲಿ ಹೊರಹೊಮ್ಮಿದ ಅಭಿಪ್ರಾಯವೆಂದರೆ, ವಿದ್ಯುಚ್ಛಕ್ತಿ ಸರಬರಾಜಿನ ಉದ್ದಿಮೆಯನ್ನು ರಾಜ್ಯ ಅಥವಾ ಅರೆ–ರಾಜ್ಯ ನಿಯಂತ್ರಣದ ಅಡಿಯಲ್ಲಿ ತರಬೇಕೆಂದು ಸೂಚಿಸಲಾಯಿತು. ಆದರೆ, ಈ ದಿಶೆಯಲ್ಲಿ ಈಗಾಗಲೇ ಕಾರ್ಯಪ್ರವೃತ್ತವಾಗಿರುವ ಕೇಂದ್ರಗಳನ್ನು ಸರಕಾರ ವಹಿಸಿಕೊಳ್ಳಬೇಕೆ, ಅಥವಾ ಈ ವಿಧವಾದ ಕೇಂದ್ರಗಳ ನಿರ್ವಹಣೆಯಲ್ಲಿ ಯಾವ ರೀತಿಯಲ್ಲಿ ರಾಜ್ಯ ತನ್ನ ನಿಯಂತ್ರಣ ಹೊಂದಿರಬೇಕು ಎಂಬ ವಿಷಯಗಳ ಬಗೆಗೆ ಅನಿಶ್ಚಿತತೆ ಉಂಟಾಗಿದೆ. ಉದಾಹರಣೆಗೆ ಹೇಳುವುದಾದರೆ ಈಗ ಪರವಾನಗಿ ಪಡೆದು ಕಾರ್ಯನಿರತವಾಗಿರುವ ವೈಯಕ್ತಿಕ ಹಾಗೂ ಉದ್ದಿಮೆ ಕಂಪನಿಗಳನ್ನು ನೇರವಾಗಿ ರಾಜ್ಯವೇ ವಹಿಸಿಕೊಳ್ಳಬಹುದೇ, ಅಥವಾ ಸಾಮಾನ್ಯವಾಗಿ ಈಗಿರುವ ಎಲ್ಲಾ ಉತ್ಪಾದನೆಯ ಕೇಂದ್ರಗಳನ್ನು ಸರ್ಕಾರವೇ ಕೈಗೆತ್ತಿಕೊಂಡರೆ ಅಭಿವೃದ್ಧಿಗೆ ಆವಶ್ಯಕವಾಗಿರುವ ವಿದ್ಯುಚ್ಛಕ್ತಿಯನ್ನು ಹೇರಳ ಹಾಗೂ ದೊಡ್ಡ ಪ್ರಮಾಣದಲ್ಲಿ ಒದಗಿಸಲು ಸಹಕಾರಿಯಾಗುವುದೆ? ಆದುದರಿಂದ ಈ ದಿಸೆಯಲ್ಲಿ ನಮಗೆ ಉಂಟಾಗಿರುವ ಅನೇಕ ಸಂಶಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯ ನಿಯಂತ್ರಣ ಯಾವ ಮಟ್ಟದಲ್ಲಿ ಹಾಗೂ ಎಷ್ಟರ ಮಟ್ಟಿಗೆ ಇರಬೇಕು, ಅಲ್ಲದೆ ಈಗ ಜಾರಿಯಲ್ಲಿರುವ ಸ್ಥಾವರಗಳಿಗೆ ಹೆಚ್ಚು ಸರಬರಾಜನ್ನು ನಿರ್ವಹಿಸಿಕೊಂಡು ಹೋಗುವ ದಿಶೆಯಲ್ಲಿ ಸರಕಾರವು ಏನಾದರೂ ಮಾಡಬಹುದೇ ಎಂಬ ಎಲ್ಲಾ ವಿಷಯಗಳ ಬಗೆಗೆ ಮಾರ್ಗದರ್ಶನ ಪಡೆಯಬೇಕು. ಏಕೆಂದರೆ ನಾವು ಭಾವಿಸಿದಂತೆ ರಾಜ್ಯದ ನಿಯಂತ್ರಣವೇ ಆಗಲಿ ಅಥವಾ ಒಡೆತನವೇ ಆಗಲಿ ಜಾರಿಯಲ್ಲಿ ಬರಬೇಕಾದರೆ ತುಂಬಾ ಸಮಯ ಬೇಕಾಗಬಹುದು.

**ಜೆವಾನ್ಸ್ ಆರ್ಥಿಕ ಮಾನದಂಡ**

"ಉದ್ದಿಮೆಗಳ ಒಡೆತನವು ಖಾಸಗಿ ಒಡೆತನದಲ್ಲಿರಬೇಕೆ ಅಥವಾ ರಾಜ್ಯದ ಒಡೆತನದಲ್ಲಿರಬೇಕೆ ಎಂಬ ಸಮಸ್ಯೆ ಯಾವಾಗಲೂ ವಿವಾದಕ್ಕೆ ಎಡೆ ನೀಡಿದೆ. ಆದರೆ ಇತ್ತೀಚಿನ ವಿದ್ಯಮಾನಗಳಂತೆ, ಇಂದಿನ ಭಾರತದಲ್ಲಿ ಈ ಸಮಸ್ಯೆಯ ಬಗೆಗೆ ತುಂಬಾ ಗಂಭೀರ ಹಾಗೂ ಬಹಿರಂಗ ಚರ್ಚೆಗಳು ನಡೆದಿವೆ. ಇದಕ್ಕೆ ಕಾರಣವೆಂದರೆ ಭಾರತವು ಇಂದು ಯೋಜಿತ ಆರ್ಥಿಕ ವ್ಯವಸ್ಥೆಯನ್ನು ಕೈಗೆತ್ತಿಗೊಂಡಿದೆ. ಜೆವಾನ್ಸ್ ತಮ್ಮ 'ಉದ್ದಿಮೆಯೊಡನೆ ರಾಜ್ಯ ಸಂಬಂಧ' ಎಂಬ ಹಳೆಯ ಪ್ರಬಂಧದಲ್ಲಿ ಸರಕಾರದ ಒಡೆತನ ಹಾಗೂ ಖಾಸಗೀ ಒಡೆತನಗಳನ್ನು ಗುರುತಿಸಲು ಸಹಕಾರಿಯಾಗಬಲ್ಲ ಸೂತ್ರಗಳ ಮಾನದಂಡವನ್ನು ನಿರೂಪಿಸಿದ್ದು ಅವು ಈ ಮುಂದಿನಂತೆ ಇವೆ. ಜೆವಾನ್ಸ್‌ರ ಹೇಳಿಕೆಯಂತೆ ರಾಜ್ಯ ಒಡೆತನಕ್ಕೆ ಅನಿವಾರ್ಯವಾಗಿರಬೇಕಾದ ಮಾನದಂಡಗಳು ನಾಲ್ಕು. ೧) ಕನಿಷ್ಠ ಬಂಡವಾಳ, ೨) ದೈನಂದಿನ ಕಾರ್ಯಗಳ ನಿರ್ವಹಣೆ, ೩) ವಿವಿಧ ಸೇವೆಗಳ ಅಂದರೆ ಅಂಚೆ, ತಂತಿ, ದೂರವಾಣಿ ಮುಂತಾದ ಸೇವೆಗಳ ಸಮನ್ವಯ ಮತ್ತು ೪) ಸರ್ವಾಂಗೀಣ, ಸಮರ್ಥ ಕೈಗಾರಿಕೆ ಅಂದರೆ, ಜಲ ಹಾಗೂ ಅನಿಲ ಕೈಗಾರಿಕೆಗಳಂತೆ ಒಂದೆಡೆಯಲ್ಲಿ ಎಲ್ಲಾ ಸಮರ್ಪಕ ಸೇವೆ.

"ಈ ದೇಶದಲ್ಲಿ, ಜೆವಾನ್ಸ್ ಅವರ ಅನುಯಾಯಿಗಳು ಇನ್ನೂ ಹಲವಾರು ಮಾನದಂಡಗಳನ್ನು ಇವುಗಳೊಟ್ಟಿಗೆ ಸೇರ್ಪಡೆಮಾಡಬೇಕೆಂದಿದ್ದಾರೆ. ಇದರ ಏಕೈಕ ಉದ್ದೇಶವೆಂದರೆ ಆದಷ್ಟೂ ಸರಕಾರದ ನಿಯಂತ್ರಣವನ್ನು ವಿರೋಧಿಸಬೇಕು ಎಂಬುದೇ ಆಗಿದೆ. ಆದರೆ ಎಲ್ಲಿ ಖಾಸಗಿಯವರಿಗೆ ಲಾಭದಾಯಕವಾಗಿಲ್ಲವೋ ಆ ಕ್ಷೇತ್ರಗಳಲ್ಲಿ ರಾಜ್ಯ ಒಡೆತನಕ್ಕೆ ಅವರು ವಿರೋಧವಾಗಿಲ್ಲ. ಈ ವಿಧವಾದ ಭಿನ್ನಾಭಿಪ್ರಾಯಗಳು ಖಾಸಗಿ ಉದ್ದಿಮೆಯು ಜಾರಿಯಲ್ಲಿರುವವರೆಗೂ ಸರಿ ಎಂದೇ ಹೇಳಬಹುದು, ಆದರೆ ಇಂದು ಸಾರ್ವಜನಿಕ ಒಡೆತನವನ್ನೇ ಹೆಚ್ಚು ಹೆಚ್ಚಾಗಿ ನಾವು ಉದ್ದಿಮೆಗಳಲ್ಲಿ ಕಾಣುತ್ತಿರುವುದರಿಂದ ಇದಕ್ಕೆ ಹೆಚ್ಚಿನ ಆಸ್ಪದವಿಲ್ಲವೆಂದೇ ಹೇಳಬಹುದು.

"ಸಾರ್ವಜನಿಕ ಜಾಯಿಂಟ್ ಸ್ಟಾಕ್ ಕಂಪನಿಗಳೇ ಕೈಗಾರಿಕೆಗಳನ್ನು ನಡೆಸುತ್ತಿರುವ ಒಂದು ಆರ್ಥಿಕ ವ್ಯವಸ್ಥೆಯಲ್ಲಿ ಖಾಸಗಿ ಎಂಬುವುದೇ ಇಲ್ಲ. ಎಲ್ಲಿ ಒಂದು ವ್ಯಾಪಾರಿ ಸಂಸ್ಥೆಯ ಧ್ಯೇಯ ವಾಕ್ಯ 'ಎಚ್ಚರಿಕೆ' ಆಗಿದ್ದು 'ಸಾಹಸ" ಅಲ್ಲವೋ, ಎಲ್ಲಿ ಅದರ ಮುಖ್ಯಪರಿಗಣನೆ ಅಸ್ತಿತ್ವದಲ್ಲಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಕ್ರಮಬದ್ಧವಾದ ಶಾಶ್ವತತೆಯನ್ನು ಕಾಪಾಡಿಕೊಂಡು ಲಾಭಗಳನ್ನು ಸ್ಥಿರೀಕರಿಸಿಕೊಳ್ಳಬೇಕೆಂದಿದೆಯೋ, ಅಲ್ಲಿ ವೈಯಕ್ತಿಕ ಉದ್ದಿಮೆ ಎಂಬುದೇ ಇಲ್ಲ. ಆದ್ದರಿಂದ ಈ ವಿವಾದದಲ್ಲಿ ಪ್ರವೇಶ ಮಾಡುವುದು ನನಗೆ ಅನಾವಶ್ಯಕ. ಕಾರಣವೆಂದರೆ, ರಾಜ್ಯದ ಒಡೆತನ ಹಾಗೂ ಸರಕಾರದ ಹತೋಟಿಯನ್ನು ವಿರೋಧಿಸುವವರಲ್ಲಿ ವಿದ್ಯುಚ್ಛಕ್ತಿಯ ವಿಷಯದಲ್ಲಿ ವಿನಾಯಿತಿ ಯಾರೂ ತೋರಿಸುವವರಿಲ್ಲ.

"ಮೂರನೇ ವಿಷಯದಲ್ಲಿ ಅಡಕವಾಗಿರುವ ಸಂಗತಿ ಎಂದರೆ, ಈಗಾಗಲೇ ಲೈಸನ್ಸ್ ಅಥವಾ ಪರವಾನಗಿ ಪಡೆದಿರುವ ಉದ್ದಿಮೆಗಳ ಬಗೆಗೆ ಯಾವ ಧೋರಣೆ ಅನುಸರಿಸಬೇಕು ಹಾಗೂ ಯಾರ ಇಚ್ಛೆಯಂತೆ ಜರುಗಬೇಕೆಂಬುದರ ಕುರಿತಾಗಿದೆ. ಇದನ್ನು ಹೇಗೆ ಬಗೆಹರಿಸಬೇಕೆಂಬ ಸಮಸ್ಯೆಯೂ ಇದೆ. ಈ ದಿಶೆಯಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮದ ೭ನೆಯ ಖಂಡದಲ್ಲಿ ತಿಳಿಸಲಾಗಿದೆ. ಈ ನಿಯಮದಂತೆ, ಕೊಂಡುಕೊಳ್ಳುವ ಅಧಿಕಾರವು ಮೊದಲಿಗೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಇದೆ. ಒಂದು ವೇಳೆ ಈ ಸಂಸ್ಥೆಗಳು ತಾವು ಅದನ್ನು ಪ್ರಾಂತೀಯ ಸರ್ಕಾರಗಳಿಗೆ ಬಿಟ್ಟಿದ್ದ ಸಂದರ್ಭಗಳಲ್ಲಿ ಆ ಅಧಿಕಾರ ಪ್ರಾಂತೀಯ ಸರ್ಕಾರಕ್ಕೆ ಸೇರಿರುತ್ತದೆ. ಈಗ ಕಾರ್ಯಕ್ರಮದ ಪಟ್ಟಿಯಲ್ಲಿಯ ೩ನೇ ವಿಷಯದಲ್ಲಿ ಎತ್ತಿರಬಹುದಾದ

ಪ್ರಶ್ನೆ ಎಂದರೆ, ಈ ಮೇಲೆ ತಿಳಿಸಲಾದ ಸಂದರ್ಭಗಳಲ್ಲಿ, ಅಧಿಕಾರವನ್ನು ಪ್ರಾಂತೀಯ ಸರ್ಕಾರಗಳಿಗೆ ನೀಡುವ ಬದಲಾಗಿ, ಕೇಂದ್ರಕ್ಕೆ ನೀಡಿದರೆ ಉತ್ತಮವಲ್ಲವೇ ಎಂದಾಗಿದೆ. ಹೀಗೆ ನೀಡುವುದೇ ಆದರೆ ಯಾವ ಹಂತ ಹಾಗೂ ಪರಿಸ್ಥಿತಿಯಲ್ಲಿ ಇದನ್ನು ನಿರ್ಧರಿಸಬಹುದು? ಅಲ್ಲದೆ ಈ ವಿಧವಾಗಿ ಖರೀದಿ ಮಾಡುವಾಗ ಕೇಂದ್ರಕ್ಕೆ ತನ್ನದೇ ಆದ ಆಯ್ಕೆಯ ಅಧಿಕಾರವಿರಬೇಕೆಂದೂ ಹೇಳಲಾಗಿದೆ. ವಿದ್ಯುಚ್ಛಕ್ತಿ ಇಂದು ಸಾರ್ವಜನಿಕ ಉಪಯುಕ್ತತೆ ಹೊಂದಿರುವ ಸತ್ಯ ಸಂಗತಿ ಎಂಬುದನ್ನು ಅರಿತ ನಂತರ, ಈ ವಿಧವಾದ ಅಧಿಕಾರವನ್ನು ಕೇಂದ್ರಕ್ಕೆ ನೀಡುವಲ್ಲಿ ಯಾವ ಬಗೆಯ ತೊಂದರೆಯೂ ಇರಲಾರದು.

**ಪ್ರಾಂತೀಯ ಅಥವಾ ಕೇಂದ್ರದ ನಿಯಂತ್ರಣ**

"ದುರದೃಷ್ಟವಶಾತ್ ಈ ನೀತಿಯನ್ನು ಒಪ್ಪಿಕೊಳ್ಳಲು ಸ್ವಲ್ಪ ಹಿಂಜರಿತವಿದ್ದಂತೆ ಕಾಣುತ್ತಿದೆ. ಭಾರತದಲ್ಲಿನ ಯೋಜನೆಯು ಎರಡು ವಿಷಯಗಳಿಗೆ ಮಾತ್ರ ಒಳಪಟ್ಟಿದೆ. ಅದೆಂದರೆ ಸರಕಾರಿ ಮತ್ತು ಖಾಸಗಿ ಉದ್ಯಮವೋ ಮತ್ತು ಪ್ರಾಂತ್ಯದ ಅಥವಾ ಕೇಂದ್ರೀಯ ಹತೋಟಿಯೋ? ನಮಗೆ ೨ ವಿಷಯಗಳ ಬಗ್ಗೆ ಚೆನ್ನಾಗಿ ಗೊತ್ತಿದೆ ಮತ್ತು ೩ನೆಯ ವಿಷಯ ಮುಖ್ಯವಾಗಿ ೨ನೆಯ ವಿಷಯವನ್ನು ಕುರಿತದ್ದಾಗಿದೆ. ಸರಕಾರಿ ಉದ್ದಿಮೆಯ ಪರವಾಗಿ ಇರುವವರಿಗೆ, ಉದ್ದಿಮೆ ಪ್ರಾಂತ್ಯಕ್ಕೆ ಸೇರಿರಬೇಕೋ ಅಥವ ಕೇಂದ್ರ ಸರಕಾರಕ್ಕೆ ಸೇರಿರಬೇಕೋ ಎಂಬುದು ಗೌಣವಾಗುತ್ತದೆ; ಮತ್ತು ಪ್ರಾಂತ್ಯವೊಂದಕ್ಕೆ ಇಂಥ ಹತೋಟಿಯನ್ನು ವಹಿಸಿಕೊಳ್ಳಲು ಇಷ್ಟವಿಲ್ಲದಿದ್ದರೆ, ಆಗ ಕೇಂದ್ರದ ಹತೋಟಿಗೆ ಯಾವುದೇ ಆಕ್ಷೇಪಣೆಯನ್ನು ಎತ್ತುವುದಕ್ಕೆ ಆಸ್ಪದವಿಲ್ಲ; ಎಲ್ಲಿ ಪ್ರಾಂತೀಯ ಅಭಿವೃದ್ಧಿಯ ಕೆಲಸ ಆ ಪ್ರಾಂತ್ಯದ ಎಲ್ಲೆಗಳನ್ನು ಮೀರಿ ವಿಸ್ತರಿಸುತ್ತದೆಯೋ, ಅಲ್ಲಿ ಆ ಪ್ರಾಂತ್ಯದ ಹಾಗೂ ಇತರ ಪ್ರಾಂತ್ಯಗಳ ಹಿತದೃಷ್ಟಿಯಿಂದ ಕೇಂದ್ರೀಯ ಹತೋಟಿ ಆವಶ್ಯಕವೆಂದು ಪರಿಗಣಿಸಬಹುದಾಗಿದೆ. ಜಲಮಾರ್ಗಗಳ ವಿಷಯದಂತೆಯೇ, ವಿದ್ಯುಚ್ಛಕ್ತಿಯ ವಿಷಯದಲ್ಲೂ ಸಹ ಯುಕ್ತವಾದ ಯೋಜನೆಗಳನ್ನು ಪ್ರಾಂತೀಯ ಎಲ್ಲೆಗಳಿಗಷ್ಟೇ ಮಿತಿಗೊಳಿಸಲಾಗುವುದಿಲ್ಲ ಮತ್ತು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಬಹಳ ನಿಕಟವಾದ ಸಹಕಾರ ಮತ್ತು ಸಮನ್ವಯಗಳು ಸ್ಪಷ್ಟವಾಗಿ ಇರಲೇಬೇಕು, ಅಲ್ಲದೆ, ಪ್ರಾಂತ್ಯಗಳ ವಿವಿಧ ಭಾಗಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಂತೀಯ ನಿಯಂತ್ರಣ ಅನಿವಾರ್ಯ ಎಂಬ ಸಂದರ್ಭಗಳಲ್ಲಿ ಕೇಂದ್ರ ಮಧ್ಯಪ್ರವೇಶ ಮಾಡುವುದು ಉಚಿತವಾಗುವುದಿಲ್ಲ. ಒಂದು ವೇಳೆ ಈ ಅಧಿಕಾರವನ್ನು ವಹಿಸಿಕೊಳ್ಳಲು ಪ್ರಾಂತ್ಯವೇ ಅನಾಸಕ್ತಿಯನ್ನು ತೋರಿದರೆ, ಕೇಂದ್ರವು ಅನಿವಾರ್ಯವಾಗಿ ಮಧ್ಯಪ್ರವೇಶ ಮಾಡಬೇಕಾಗುತ್ತದೆ.

"ಕಾರ್ಯಕ್ರಮದ ಪಟ್ಟಿಯ ವಿಷಯಗಳ ಬಗೆಗೆ, ಈಗಾಗಲೇ ಹೇಳಿದುದಕ್ಕಿಂತ ಹೆಚ್ಚಿಗೆ ಏನೂ ಹೇಳಲು ನಾನು ಬಯಸುವುದಿಲ್ಲ. ಆದರೆ ಚರ್ಚೆ ಮುಗಿಯುವ ಮುನ್ನ ತಮಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ತಾವು ನಾನು ಹೇಳಿದ ವಿಷಯಗಳ ಬಗೆಗೆ ತಮ್ಮ ಮನಸ್ಸಿಗೆ ಬರಬಹುದಾದ ಯಾವ ನಿರ್ಣಯವನ್ನು ಬೇಕಾದರೂ ತೆಗೆದುಕೊಳ್ಳಬಹುದು. ಆದರೆ, ಇದು ಈ ದೇಶದಲ್ಲಿಯ ಪರಿಣಾಮಕಾರಿಯಾದ ಸಾರ್ವಜನಿಕ ಅಭಿಪ್ರಾಯಕ್ಕೆ ಅನುಗುಣವಾಗಿರಬೇಕೆಂದು ನಾನು ತಮಗೆ ಎಚ್ಚರಿಸಬೇಕಾದುದಿಲ್ಲ. ಏಕೆಂದರೆ ಸಾರ್ವಜನಿಕ ಅಭಿಪ್ರಾಯವನ್ನು ಗೌಣ ಎಂದು ಭಾವಿಸುವುದು, ಕೇವಲ ವಾಮಪಂಥೀಯ ವಿಚಾರವೆಂದೇ ಹೇಳಬಯಸುವೆ. ಭಾರತದ ಭವಿಷ್ಯ ಆರ್ಥಿಕ ಧೋರಣೆಯ ಬಗೆಗೆ ತಮ್ಮ ಈ ನಿರ್ಧಾರವು ಪರಿಣಾಮಕಾರಿ ಪಾತ್ರ ವಹಿಸಬಹುದೆಂದೇ ಹೇಳುತ್ತೇನೆ. ಭಾರತದ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಸಾರ್ವಜನಿಕ ಅಭಿಪ್ರಾಯವಿಲ್ಲ ಎಂದು ಹೇಳಿದರೆ ಅದು ಅಪರಾಧವಾಗಬಹುದು.

"ಸಂಸದೀಯ ಪದ್ಧತಿಯನ್ನು ಹೊಂದಿರುವ ಭಾರತದಲ್ಲಿ ಯೋಜನೆಯ ಬಗೆಗೆ ಇರಬಹುದಾದ ಸಾರ್ವಜನಿಕ ಅಭಿಪ್ರಾಯದ ಪಾತ್ರ ಎಂತಹ ಪ್ರಬಲವಾದುದು ಎಂದು ಎಷ್ಟು ಹೇಳಿದರೂ ಕಡಿಮೆ. ಈ ಒಂದು ಸಂಗತಿಯ ಬಗೆಗೆ ತಮ್ಮ ಗಮನವನ್ನು ಅನಿವಾರ್ಯವಾಗಿ ಸೆಳೆಯಬಯಸುತ್ತೇನೆ. ಸಾರ್ವಜನಿಕರು, ರಷ್ಯಾ ದೇಶದಲ್ಲಿನ ಯೋಜನೆಯ ಸಾಫಲ್ಯವನ್ನು ತುಂಬಾ ಹೊಗಳುತ್ತಾರೆ. ಆದರೆ ಆ ದೇಶದಲ್ಲಿ ಸರ್ವಾಧಿಕಾರಿ ಸರ್ಕಾರವಿದೆ ಎಂಬುದನ್ನು ಅರಿಯರು. ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಯೋಜನೆ ಸಫಲವಾಗುವುದು ಸಹಜ. ಆದರೆ ಸಂಸದೀಯ ಸರಕಾರದ ವ್ಯವಸ್ಥೆಯಲ್ಲಿ ಅದು ಫಲಕಾರಿಯಾಗುವುದು ಸಾಮಾನ್ಯ ಸಂಗತಿ ಅಲ್ಲ. ಏಕೆಂದರೆ ಸಂಸದೀಯ ಸರ್ಕಾರವು ಪ್ರಬಲವಾದ ಸಾರ್ವಜನಿಕ ಅಭಿಪ್ರಾಯದ ಆಧಾರವಾದ ಮೇಲೆ ನಿಂತಿದ್ದು ಯೋಜನೆಯ ಪೂರ್ಣಾವಧಿಯವರೆಗೂ ಅಧಿಕಾರದಲ್ಲಿಯೇ ಉಳಿಯುವ ಸಾಧ್ಯತೆಗಳಿಲ್ಲ. ಆದುದರಿಂದ ಯೋಜನಾಬದ್ಧ ಆರ್ಥಿಕ ವ್ಯವಸ್ಥೆ ಹಾಗೂ ಸಂಸದೀಯ ಸರ್ಕಾರಗಳ ಮಧ್ಯೆ ಇರಬಹುದಾದ ಅಸ್ಥಿರತೆಯ ಸಮನ್ವಯತೆಯನ್ನು ಯಾವ ವಿಧಾನದಿಂದ ಕಾಪಾಡಬೇಕು ಎಂಬುದರ ಬಗೆಗೆ ನಾವು ತೀವ್ರಗಮನ ಹರಿಸಬೇಕಾಗಿದೆ. ಆದುದರಿಂದ ನಾನು ಈ ದಿಶೆಯಲ್ಲಿ ನೀಡಬಹುದಾದ ಎಚ್ಚರಿಕೆ ಎಂದರೆ ನಮ್ಮಿಂದ ಮುಂದೆ ಅಧಿಕಾರವಹಿಸಿಕೊಳ್ಳಲಿರುವವರು ಯೋಜನೆಯನ್ನು ಕೈಬಿಡದಂತೆ ಕಾಪಾಡಿಕೊಳ್ಳುವುದು. ಅಲ್ಲದೆ ಹೆಚ್ಚು ಸುಖ ಸಂತೋಷವನ್ನು ಅತಿ ಹೆಚ್ಚಿನ ಸಂಖ್ಯೆಯ ಜನರಿಗೆ ಒದಗಿಸುವ ಈ ಯೋಜನಾ ಪದ್ಧತಿ ಜಾರಿಯಲ್ಲಿರಬೇಕೆಂಬುದೇ ಅಧಿಕ ಜನರ ಆಕಾಂಕ್ಷೆ."

**ಸಮಿತಿಯ ಶಿಫಾರಸುಗಳು**

'ಸಾರ್ವಜನಿಕ ಕಾಮಗಾರಿ ಮತ್ತು ವಿದ್ಯುಚ್ಛಕ್ತಿ'ಯ ನೀತಿನಿರೂಪಣಾ ಸಮಿತಿಯ ಶಿಫಾರಸಿನಂತೆ ವಿದ್ಯುಚ್ಛಕ್ತಿ ಸರಬರಾಜು ವ್ಯವಸ್ಥೆಯನ್ನು, ಸರಕಾರಿ – ಅರೆ ಸರಕಾರಿ ಅಥವಾ ಇನ್ನಾವುದೇ ವಿಧಾನದಿಂದಾಗಲೀ ಮುಂದುವರಿಸಿಕೊಂಡು ಹೋಗಿ ಅಭಿವೃದ್ಧಿಯನ್ನು ಸಾಧಿಸಲೇಬೇಕೆಂದು ತಿಳಿಸಿದೆ. ಯಾವುದೇ ಕಾರಣಗಳಿಗಾಗಿ, ಒಂದು ಪ್ರದೇಶದಲ್ಲಿ, ರಾಜ್ಯವು ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳದೇ ಹೋದ ಸಂದರ್ಭದಲ್ಲಿ ಆ ಕಾರ್ಯವನ್ನು ಖಾಸಗಿ ವಲಯದವರಿಗೆ ನೀಡುವಲ್ಲಿ ಹಿಂಜರಿಯಬಾರದೆಂದೂ ತಿಳಿಸಲಾಗಿದೆ. ಮುಂದುವರಿದು ಸಮಿತಿಯು ಶಿಫಾರಸು ಮಾಡಿರುವ ವಿಷಯವೆಂದರೆ, ಸಮರ್ಥನೀಯ ಆರ್ಥಿಕ ಆಚರಣೆಯಿಂದ, ದಕ್ಷ ರೀತಿಯಲ್ಲಿ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವಂತಿದ್ದರೆ ಖಾಸಗಿ ರಂಗದವರಿಗೆ ಪರವಾನಗಿ ನೀಡುವಲ್ಲಿ ಉದಾರ ಧೋರಣೆಯನ್ನು ಅನುಸರಿಸಬೇಕು. ಆರೋಗ್ಯಕರವಾದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಬಲ್ಲ ಯಾವುದೇ ವಿದ್ಯುತ್ ಅಭಿವೃದ್ಧಿ ಯೋಜನೆಯಲ್ಲಿ ಪ್ರಾದೇಶಿಕ, ಪ್ರಾಂತೀಯ, ಸ್ಥಳೀಯ ಕ್ಷೇತ್ರಗಳಿಗೆ, ವಾಣಿಜ್ಯ, ಖಾಸಗಿ ಒಡೆತನದವರಿಗೆ ಅವಕಾಶ ನೀಡಬೇಕೆಂದು ಹೇಳಿದೆ.

ಮತ್ತೊಂದು ಶಿಫಾರಸಿನಂತೆ, ಸಮಿತಿಯು ಸಾರ್ವಜನಿಕ ಹಿತರಕ್ಷಣೆಯ ದೃಷ್ಟಿಯಿಂದ, ಸಾರ್ವಜನಿಕ ವಿದ್ಯುಚ್ಛಕ್ತಿ ಸ್ಥಾವರಗಳ ಆರ್ಥಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವಂತೆ ಹಲವು ಹಣಕಾಸಿನ ಸೂತ್ರಗಳನ್ನು ರಚಿಸಬೇಕೆಂದು ಸೂಚಿಸಿದೆ. ಈ ದಿಶೆಯಲ್ಲಿ ಭಾರತೀಯ ವಿದ್ಯುಚ್ಛಕ್ತಿ ಮಸೂದೆಯ ೩೫ನೆಯ ಖಂಡದಡಿಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದೂ ತಿಳಿಸಿದೆ. ಈ ವಿಧವಾದ ಸಮಿತಿಯಲ್ಲಿ ಕೇಂದ್ರದ ಇಬ್ಬರು ಪ್ರತಿನಿಧಿಗಳು, ಒಪ್ಪಂದದ ಆಧಾರದ ಮೇಲೆ ಪ್ರಾಂತ್ಯದ ಇಬ್ಬರು ಸದಸ್ಯರು ಹಾಗೂ ಸಂಯುಕ್ತ ವಿದ್ಯುಚ್ಛಕ್ತಿ ಉತ್ಪಾದಕರ ಒಬ್ಬ ಪ್ರತಿನಿಧಿ ಇರಬೇಕು. ತನಗೆ ಅವಶ್ಯವೆನಿಸುವ ಮಿಕ್ಕ ಸದಸ್ಯರನ್ನು

ಸಮಿತಿಯೇ ನೇಮಿಸಿಕೊಳ್ಳಬಹುದು.

೧೯೧೦ರ ಭಾರತೀಯ ವಿದ್ಯುಚ್ಛಕ್ತಿ ಮಸೂದೆಯ ೭ನೆಯ ಖಂಡಕ್ಕೆ ತರಬೇಕೆಂಬ ತಿದ್ದುಪಡಿಯು, ವಿದ್ಯುಚ್ಛಕ್ತಿ ನೀತಿಯ ಯೋಜನೆ ಸಕ್ರಮ ಹಾಗೂ ಸಮಗ್ರವಾಗಿರಬೇಕೆಂಬ ಉದ್ದೇಶದಿಂದ ತರಲಾಗಿದೆ. ಈ ವಿಷಯದಲ್ಲಿ ಪ್ರಾಂತೀಯ ಸರ್ಕಾರಕ್ಕೆ ಮೊದಲು ಅವಕಾಶ ನೀಡಬೇಕೆಂದೂ ಸಮಿತಿಯು ಸೂಚಿಸಿದೆ. ಈ ವಿಧವಾದ ತಿದ್ದುಪಡಿಯ ಮುಖಾಂತರ ಅವಶ್ಯವೆನಿಸಿದಲ್ಲಿ ಕೇಂದ್ರವೇ ಕಾರ್ಯವನ್ನು ವಹಿಸಿಕೊಳ್ಳಲು ಆಸ್ಪದವನ್ನೂ ನೀಡಿದೆ. ಈ ಬಗೆಗೆ ಹಲವಾರು ಭಿನ್ನಾಭಿಪ್ರಾಯಗಳಿದ್ದು, ಪ್ರಾಂತೀಯ ಸರ್ಕಾರಗಳೊಂದಿಗೆ ಸಮಾಲೋಚನೆಯ ನಂತರ ಅವನ್ನು ಬಗೆಹರಿಸಲಾಗುವುದು.

**ಸರ್ಕಾರದ ತರಬೇತಿ ಯೋಜನೆಗಳು**

ಕೇಂದ್ರ ತಾಂತ್ರಿಕ ವಿದ್ಯುತ್ ಮಂಡಳಿಯ ರಚನೆಯನ್ನು ಸಮಿತಿ ಸ್ವಾಗತಿಸಿದೆ. ಹಾಗೂ ಕೇಂದ್ರದ ಯೋಜನೆಗೆ ಅನುಗುಣವಾಗಿ ಪ್ರತಿವರ್ಷ ಹತ್ತು ಮಂದಿಯನ್ನು ಹೆಚ್ಚಿನ ತರಬೇತಿಗಾಗಿ ವಿದೇಶಕ್ಕೆ ಕಳಿಸಿಕೊಡುವ ಕ್ರಮವನ್ನೂ ಸ್ವಾಗತಿಸಿದೆ. ಈ ವಿಧವಾಗಿ ತರಬೇತಿ ಪಡೆಯುವ ಅಧಿಕಾರಿಗಳಲ್ಲಿ ನಾಲ್ವರು ಇಂಗ್ಲೆಂಡಿನಲ್ಲಿಯೂ, ನಾಲ್ವರು ಅಧಿಕಾರಿಗಳು ಅಮೆರಿಕೆಯ ಟೆನ್ನೆಸ್ಸಿ ಕಣಿವೆಯ ಪ್ರಾಧಿಕಾರದಲ್ಲಿಯೂ, ಹಾಗೂ ಮಿಕ್ಕ ಇಬ್ಬರು ಅಧಿಕಾರಿಗಳು ಕೆನಡಾದಲ್ಲಿಯೂ ತರಬೇತಿ ಪಡೆಯುವರು. ಈ ಹತ್ತು ಅಧಿಕಾರಿಗಳಲ್ಲಿ ಇಬ್ಬರು ಕೇಂದ್ರದ ಅಧಿಕಾರಿಗಳು, ನಾಲ್ವರು ಪ್ರಾಂತದ ಅಧಿಕಾರಿಗಳು, ಇಬ್ಬರು ರಾಜ್ಯದ ಅಧಿಕಾರಿಗಳು ಹಾಗೂ ಮಿಕ್ಕ ಇಬ್ಬರು ಸಾರ್ವಜನಿಕ ಸರಬರಾಜು ಸ್ಥಾವರಗಳಿಗೆ ಸೇರಿದವರಾಗಿರುತ್ತಾರೆ. ಕೇಂದ್ರದ ಇಬ್ಬರು ಅಧಿಕಾರಿಗಳ ಸಮಸ್ತ ಖರ್ಚನ್ನೂ ಕೇಂದ್ರ ವಹಿಸಿಕೊಳ್ಳುತ್ತದೆ. ಈ ಯೋಜನೆಯ ಅಡಿಯಲ್ಲಿ ಹೆಚ್ಚು ಹೆಚ್ಚು ಭಾರತೀಯ ಇಂಜಿನಿಯರುಗಳನ್ನು, ವಿದ್ಯುಚ್ಛಕ್ತಿ ಉದ್ದಿಮೆಯ ಆಡಳಿತ ಹಾಗೂ ವಾಣಿಜ್ಯ ವ್ಯವಸ್ಥೆಯನ್ನು ಅರಿಯಲು ಕಳಿಸಿಕೊಡಲಾಗುವುದು. ಆದುದರಿಂದಲೇ ಇನ್ನೂ ಎರಡು ತಂಡಗಳನ್ನು ಕಳಿಸಿಕೊಡಲಾಗುವುದು. ಸಭೆಯ ಅಧ್ಯಕ್ಷತೆಯನ್ನು ಡಾ॥ ಬಿ.ಆರ್. ಅಂಬೇಡ್ಕರರು ವಹಿಸಿದ್ದರು. ಸರ್ ಆರ್ಡೇಷೇರ್ ವಲಾಲ, ಭಾರತ ಸರ್ಕಾರದ ಯೋಜನೆ ಹಾಗೂ ಅಭಿವೃದ್ಧಿ ಮಂಡಳಿ ಸದಸ್ಯರು, ಬಂಗಾಲ ಸರ್ಕಾರದ ವಾಣಿಜ್ಯ, ಉದ್ದಿಮೆ ಹಾಗೂ ಕಾರ್ಮಿಕ ಮಂತ್ರಿಗಳಾದ ಕೆ. ಷಾಬುದ್ದೀನ್, ಸಿಂಧ್‌ನ ಸಾರ್ವಜನಿಕ ಕಾಮಗಾರಿ ಇಲಾಖೆಯ ಮಂತ್ರಿ ರಾಯ್‌ಬಹದ್ದೂರ್ ಗೋಕುಲ ದಾಸ, ಸರ್ ಮಿರ್ಜಾ ಇಸ್ಮಾಯಿಲ್, ರಾಜಾ ಧರ್ಮ ಕರ್ಮ ಬಹದ್ದೂರ್, ಹಾಗೂ, ಅಖಿಲ ಭಾರತ ಕಾಂಗ್ರೆಸ್ ಮಜದೂರ್ ಸಂಘದ, ಕೇಂದ್ರ ಹಾಗೂ ರಾಜ್ಯಗಳ ಪ್ರತಿನಿಧಿಗಳು ಸದಸ್ಯರಾಗಿ ಹಾಜರಿದ್ದು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

## ೪೧
## ಭಾರತ ಸರ್ಕಾರದ ಖನಿಜ ಸಂಪನ್ಮೂಲ ಕುರಿತು ನೀತಿ*

**ಶ್ರೀ ಕೆ.ಸಿ. ನಿಯೋಗಿ :** ಮಾನ್ಯರೆ, ನಾನು ಈ ಮಸೂದೆಯನ್ನು ಮಂಡಿಸಲು ಪ್ರಾರ್ಥಿಸುವೆ. "ಭೂಗರ್ಭ ಸರ್ವೆ ಖಾತೆಯ ಬೇಡಿಕೆ ಹಣದಲ್ಲಿ ರೂ ೧೦೦ ಖೋತಾ ಆಗಬೇಕು."

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ಮಾರ್ಚ್ ೧೨, ೧೯೪೫, ಪು. ೧೩೮೩–೮೫.

ಭಾರತ ಸರ್ಕಾರದ ಲೋಹಮೂಲಗಳ ಬಗೆಗಿನ ಧೋರಣೆಯನ್ನು ಚರ್ಚಿಸಬೇಕೆಂಬ ಉದ್ದೇಶದಿಂದಲೇ ನಾನು ಮೇಲ್ಕಂಡಂತೆ ನೋಟೀಸ್ ನೀಡಿರುವೆ. ಆದರೆ ಸಮಯಾಭಾವದಿಂದ ನಾನು ಈ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡದೆ, ನನ್ನ ಸನ್ಮಾನ್ಯ ಮಿತ್ರರಿಗೆ ಆ ಸಮಯ ದೊರೆಯಲಿ ಎಂದು ಹಾರೈಸುತ್ತೇನೆ. ನಾನು ನನ್ನ ಮಾನ್ಯ ಮಿತ್ರರಿಗೆ ನನ್ನ ಚರ್ಚೆಯಲ್ಲಿ ಅಡಕವಾಗಿರುವ ಅನೇಕ ಅಂಶಗಳನ್ನು ಈಗಾಗಲೇ ತಿಳಿಸಿದ್ದು ಈಗ ನಾನು ಅದರ ಬಗೆಗೆ ದೀರ್ಘ ಭಾಷಣ ಮಾಡಲು ಬಯಸುವುದಿಲ್ಲ, ಈ ನಿರ್ಣಯದ ಬಗೆಗೆ ನನ್ನ ಮಿತ್ರರು ಮಹತ್ವದ ಹಾಗೂ ವಿವರಗಳಿಂದ ಕೂಡಿದ ಹೇಳಿಕೆಯನ್ನು ನೀಡಲಿ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ಖೋತಾ ನಿರ್ಣಯ ಮಂಡಿಸಲಾಗಿದೆ.

"ಭೂಗರ್ಭ ಸರ್ವೆಯ ಬೇಡಿಕೆ ಹಣದಲ್ಲಿ ರೂ. ೧೦೦ರ ಖೋತಾ."

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) ಮಾನ್ಯ ಉಪಾಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ನಿಯೋಗಿಯವರು ಮುಂದಾಲೋಚನೆಯಿಂದ ಮಂಡಿಸಿದ ಈ ಖೋತಾ ನಿರ್ಣಯದ ಬಗ್ಗೆ ಸಂತಸ ವ್ಯಕ್ತಪಡಿಸುವೆ. ಏಕೆಂದರೆ ಈ ಖೋತಾ ನಿರ್ಣಯದಿಂದಾಗಿ ಭಾರತ ಸರ್ಕಾರದ ಲೋಹಮೂಲಗಳ ಪುನರ್‌ಪರಿಶೀಲನೆಗೆ ಅವಕಾಶ ಒದಗಿಸಿದಂತಾಗಿದೆ. ನಿಜ ಹೇಳಬಹುದಾದರೆ ಈ ಧೋರಣೆಯ ಬಗೆಗೆ ಅಜ್ಞಾನ ಒಂದೇ ಅಲ್ಲ, ಅನೇಕ ಸಂದೇಹಗಳೂ ಇರುವುದರಿಂದ, ಈ ಒಂದು ಪ್ರಮುಖ ವಿಷಯವಾದ ಭಾರತ ಸರ್ಕಾರದ ಲೋಹಮೂಲಗಳ ಧೋರಣೆ ಏನೆಂಬುದನ್ನು, ಸದನದ ಸಕಲ ಸದಸ್ಯರಿಗೆ ಮನವರಿಕೆ ಮಾಡುವೆ. ಆದರೆ ಮಾನ್ಯರೆ, ಈ ದಿಶೆಯಲ್ಲಿ ನನ್ನ ಮಿತ್ರರಾದ ಶ್ರೀ ನಿಯೋಗಿ ಅವರು ಬಿಚ್ಚು ಮನಸ್ಸಿನಿಂದ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದರೆ ಉಪಯುಕ್ತವಾಗುತ್ತಿತ್ತು. ಆದರೆ ಸಮಯದ ಅಭಾವವನ್ನು ಅರಿತ ಅವರು ತಮ್ಮ ಅಮೂಲ್ಯ ಸಮಯಾವಕಾಶವನ್ನು ನನಗೆ ಒದಗಿಸಿಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸಿ ನನ್ನ ಹೇಳಿಕೆಯನ್ನು ಆರಂಭಿಸುವೆ.

ಮಾನ್ಯರೆ, ಸಭೆಯ ಮುಂದೆ ಚರ್ಚೆಗೆ ಬಂದಿರುವ ಈ ವಿಷಯದ ಬಗೆಗೆ ಬಿಚ್ಚು ಮನಸ್ಸಿನಿಂದ ಮಾತನಾಡುವುದೇ ಸಮಂಜಸ. ಏಕೆಂದರೆ ನಿಜವಾಗಿಯೂ ಇಂದಿನವರೆಗೂ ಭಾರತ ಸರ್ಕಾರದ ಬಳಿ ಈ ವಿಷಯ ಕುರಿತಂತೆ ನಿರ್ದಿಷ್ಟ ಧೋರಣೆಯೇ ಇರಲಿಲ್ಲ. ಅದು ದೂರುವುದಕ್ಕೆ ಅವಕಾಶವಾಗಿದೆ. ಆದರೆ ದೂರುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಅರಿತೇ ಯಾವ ಆಶ್ಚರ್ಯಕ್ಕೂ ಆಸ್ಪದವಾಗಬಾರದು ಎಂದು ತಿಳಿಸಬಯಸುತ್ತೇನೆ. ಈ ವಿಧವಾದ ಲೋಹನೀತಿಯ ದೋಷವನ್ನು ಭಾರತ ಭೂಗರ್ಭ ಸರ್ವೆದವರ ಮೇಲೆ ಹೊರಿಸಲಾಗಿರುವುದು ಒಂದು ಅಪರಾಧ. ಈ ವಿಧವಾದ ಆರೋಪವನ್ನು ನಿವಾರಿಸಲೆಂದೇ ನಾನು ಕೆಲವು ನಿಮಿಷಗಳವರೆಗೆ ಈ ಬಗೆಗೆ ಪ್ರಸ್ತಾಪ ಮಾಡಬಯಸುವೆ.

ನನಗೆ ತಿಳಿದಂತೆ ಯಾವುದೇ ಸರಕಾರದ ಲೋಹನೀತಿಯು ಅದರ ಔದ್ಯೋಗಿಕ ನೀತಿಯಲ್ಲಿ ಅಡಕವಾಗಿರುತ್ತದೆ. ಏಕೆಂದರೆ ಲೋಹಗಳು ಔದ್ಯೋಗಿಕ ಅಭಿವೃದ್ಧಿಯಲ್ಲಿ ಅಪಾರ ಪಾತ್ರವನ್ನು ಹೊಂದಿವೆ. ಹೀಗಾಗಿ ರಾಷ್ಟ್ರವು ತನ್ನದೇ ಆದ ಔದ್ಯೋಗಿಕ ನೀತಿ ಅಥವಾ ಧೋರಣೆಯನ್ನು ಹೊಂದದೇ ಇರುವಾಗ ಲೋಹನೀತಿಯನ್ನು ನಿರೀಕ್ಷಿಸುವುದು ನಗೆಪಾಟಲಲ್ಲವೆ? ಯುದ್ಧೋತ್ತರ ಸಮಯದಲ್ಲಿ, ಭಾರತ ಸರ್ಕಾರವು ತನ್ನ ಆರ್ಥಿಕ ಹಾಗೂ ಔದ್ಯೋಗಿಕ ಧೋರಣೆಗಳ ಪುನರ್‌ನಿರ್ಮಾಣದ ಬಗೆಗೆ ಯೋಚಿಸಿ ನಂತರವೇ ಈ ವಿಷಯದ ಧ್ಯೇಯ ಹಾಗೂ ಗುರಿಗಳನ್ನು ನಿರ್ಧರಿಸುವ ಅವಕಾಶ ಒದಗಿಬಂದಿವೆ.

**ಡಾ॥ ಪಿ.ಎನ್. ಬ್ಯಾನರ್ಜಿ :** ಅಯ್ಯೋ ಪಾಪ! ಶೋಚನೀಯ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕನಿಕರ ಅಥವಾ ಕೋಪದ ವಿಷಯಕ್ಕೆ ಆಸ್ಪದ ನೀಡದೆ

ನಾನು ಲೋಹನೀತಿ ಏನೆಂಬುದನ್ನು ವಿವರಿಸಲು ಪ್ರಯತ್ನ ಮಾಡುವೆ. ಮೊದಲಿಗೆ ನಾನು ಹೇಳಬಯಸುವುದೇನೆಂದರೆ ಈ ವಿಷಯದಲ್ಲಿ ಭಾರತದ ಭೂಗರ್ಭ ಸರ್ವೆ ಇಲಾಖೆಯ ಮೇಲೆ ದೋಷಾರೋಪಣೆ ಮಾಡುವುದು ಸರಿಯಾದ ಸಂಗತಿ ಅಲ್ಲ. ದೋಷವು ಅಂದಿನ ಭಾರತ ಸರ್ಕಾರದ್ದು ಹಾಗೂ ಶಾಸಕಾಂಗ ಇದಕ್ಕೆ ಹೊಣೆಗಾರನಾಗಿದೆ ಹಾಗೂ ಇತರ ಸಂಸ್ಥೆಗಳೂ ಇದರಲ್ಲಿ ಸ್ವಲ್ಪ ಆಸಕ್ತಿಯನ್ನೂ ತೋರದಿದ್ದುದೇ ಕಾರಣ. ಇದರಿಂದಾಗಿ ಭಾರತ ತನ್ನದೇ ಆದ ಆರ್ಥಿಕ ಹಾಗೂ ಔದ್ಯೋಗಿಕ ನೀತಿಯನ್ನು ಹೊಂದದೇ ಹೋಯಿತು.

ಭಾರತದ ಭೂಗರ್ಭ ಇಲಾಖೆಯು ತನ್ನ ಪಾತ್ರ ನಿರ್ವಹಿಸದೇ ಇದ್ದುದಕ್ಕೆ ಎರಡನೆಯ ಕಾರಣವೆಂದರೆ, ಈ ಇಲಾಖೆಯಲ್ಲಿಯ ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ. ಈ ವಿಷಯದಲ್ಲಿ ಒಂದು ಸಂಗತಿಯ ಬಗೆಗೆ ನಾನು ಸದನದ ಗಮನವನ್ನು ಸೆಳೆಯ ಬಯಸುತ್ತೇನೆ. ಈ ಭಾರತದ ಭೂಗರ್ಭ ಇಲಾಖೆಯಲ್ಲಿ ಪರಿಣತರ ಕೊರತೆ ಉಂಟಾಗಿದ್ದು ೧೯೨೦ನೆಯ ವರ್ಷದಲ್ಲಿ. ಈ ಕೊರತೆಯನ್ನು ನಿವಾರಿಸಲೆಂದೇ ಪರಿಣತರ ಆಯ್ಕೆಗೆ ಪರವಾನಗಿ ಪಡೆದುಕೊಳ್ಳಲಾಯಿತು. ಶೋಚನೀಯ ಸಂಗತಿ ಎಂದರೆ ಪರಿಣತರು ದೊರಕಲು ಸುಮಾರು ೯ ವರ್ಷಗಳು ಗತಿಸಿಹೋದವು. ಪರಿಶ್ರಮ ವಹಿಸಿ ಇಲಾಖೆಗೆ ಅವಶ್ಯವಿರುವ ಪರಿಣತರನ್ನು ಜಮಾಯಿಸಿದಾಗ ಅಂದರೆ ೧೯೨೧ರಲ್ಲಿ ಶಾಸನ ಸಭೆಯು ಆರ್ಥಿಕ ಕೊರತೆಯ ಒಂದು ನಿಲುವಳಿಯನ್ನು ಅಂಗೀಕರಿಸಿತು. ಹೀಗಾಗಿ ಈ ತರಬೇತಿ ಪಡೆದ ಪರಿಣತರನ್ನು ಕೈ ಬಿಡಬೇಕಾಯಿತು. ಆದುದರಿಂದ ಭಾರತ ಭೂಗರ್ಭ ಇಲಾಖೆಯು ಲೋಹನೀತಿಯ ಬಗೆಗೆ ತನ್ನ ಪಾತ್ರವನ್ನು ವಹಿಸದೇ ಹೋದುದಕ್ಕೆ ಸ್ವಲ್ಪ ಮಟ್ಟಿಗೆ ಶಾಸನ ಸಭೆಯೇ ಕಾರಣ ಎಂದು ಬೇರೆ ಹೇಳಲೇಬೇಕಾಗಿಲ್ಲ.

ನನಗೆ ನೀಡಿರಬಹುದಾದ ಅಲ್ಪ ಅವಕಾಶದಲ್ಲಿ ನಾನು ಗತಿಸಿಹೋದ ವಿಷಯಗಳ ಬಗೆಗೆ ಹೆಚ್ಚು ಮಾತನಾಡಲು ಬಯಸುವುದಿಲ್ಲ. ಭವಿಷ್ಯದ ಬಗೆಗೆ ಹೇಳಬಹುದಾದರೆ ಭಾರತ ಸರಕಾರವು ಲೋಹನೀತಿಯ ಆವಶ್ಯಕತೆಯನ್ನು ಈಗ ಅರಿತಿದೆ. ಇದಕ್ಕೆ ವಿಶೇಷ ಕಾರಣವೆಂದರೆ ಭಾರತ ಸರ್ಕಾರವು ತ್ವರಿತ ಗತಿಯಿಂದ ಸಾಗಿ ರಾಷ್ಟ್ರವನ್ನು ಔದ್ಯೋಗೀಕರಣ ಮಾರ್ಗದಲ್ಲಿ ಮುಂದೆ ನಡೆಸಿಕೊಂಡು ಹೋಗಲು ಕಾತರವಾಗಿದೆ. ಪುನರ್‌ನಿರ್ಮಾಣ ಮತ್ತು ಯೋಜನೆಯ ಮಸೂದೆಯ ೧೪ನೆ ಪ್ರಕರಣದಲ್ಲಿ ಔದ್ಯೋಗೀಕರಣ ಧೋರಣೆ ಕುರಿತು ಹೇಳಲಾಗಿದೆ. ಸದ್ಯ ಸಮಯದ ಅಭಾವದಿಂದಾಗಿ ನಾನು ಸಂಪೂರ್ಣವಾಗಿ ಅದನ್ನು ತಮ್ಮ ಮುಂದೆ ಮಂಡಿಸಲಾರೆ. ಆದರೆ ಈ ವಿಷಯದಲ್ಲಿ ಆಸಕ್ತಿ ಹೊಂದಿದ ಸದಸ್ಯರು ೧೪ನೆಯ ಖಂಡದ ಎರಡನೆಯ ಪ್ಯಾರಾದಲ್ಲಿರುವ ಧೋರಣೆಯ ವಿವರಗಳನ್ನು ಆವಶ್ಯಕವಾಗಿ ಓದುವರು ಎಂದು ನಂಬಿದ್ದೇನೆ.

ಭಾರತ ಸರ್ಕಾರವು ಲೋಹನೀತಿಯ ಬಗೆಗೆ ಅನುಸರಿಸಬೇಕೆಂದಿರುವ ಧೋರಣೆಗಳನ್ನು ಕುರಿತು ಸಂಕ್ಷಿಪ್ತವಾಗಿ ಎರಡು ಹಂತದಲ್ಲಿ ವಿವರಿಸುತ್ತೇನೆ. ಮೊದಲನೆಯದೆಂದರೆ, ಭಾರತ ಭೂಗರ್ಭ ಇಲಾಖೆಯನ್ನು ಪುನರ್‌ಸಂಘಟನೆಮಾಡಿ, ನಮ್ಮ ಲೋಹನೀತಿಯನ್ನು ಸಮಗ್ರವಾಗಿ ಜಾರಿಗೊಳಿಸುವಲ್ಲಿ ಈ ಇಲಾಖೆಯನ್ನೇ ಸಾಧನವನ್ನಾಗಿಸಿಕೊಂಡು, ತೀವ್ರಗತಿಯಲ್ಲಿ ನೀತಿಯನ್ನು ಜಾರಿಗೊಳಿಸುತ್ತೇವೆ. ಈ ಕಾರಣಕ್ಕೆಂದೇ ಇಲಾಖೆಯನ್ನು ವಿಸ್ತರಿಸುವ ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈ ಕಾರ್ಯಕ್ಕೆ ಆಡಳಿತ ಮಂಜೂರಾತಿಯನ್ನು ನೀಡಲಾಗಿದೆ. ವಿಸ್ತರಿಸಬಹುದಾದ ಭೂಗರ್ಭ ಇಲಾಖೆಗಳು ಎಂದರೆ ಭೂಗರ್ಭ ಇಂಜಿನಿಯರಿಂಗ್ ಶಾಖೆ, ಔದ್ಯೋಗಿಕವಾಗಿ ಲೋಹಗಳನ್ನು ಉಪಯೋಗಿಸುವ ಶಾಖೆ, ಕೇಂದ್ರ ಲೋಹ ಅಭಿವೃದ್ಧಿ ಶಾಖೆ, 'ಜಿಯೋಗ್ರಾಫಿಕ್ಸ್' ಅಂದರೆ ಭೂಗರ್ಭ–ಪದಾರ್ಥ ವಿಜ್ಞಾನದ ಶಾಖೆ, ತೈಲ ಅಭಿವೃದ್ಧಿ ಮುಂತಾದ ಶಾಖೆಗಳು ಅಸ್ತಿತ್ವದಲ್ಲಿ ಬರಲಿವೆ. ಇದರೊಂದಿಗೆ ನೈಸರ್ಗಿಕ ಇತಿಹಾಸದ ಮ್ಯೂಸಿಯಂ

ಒಂದನ್ನು ತೆರೆದು ಪ್ರಚಾರ ಹಾಗೂ ಪ್ರಸಾರಾಂಗದ ಮೂಲಕ ಸಾರ್ವಜನಿಕರಿಗೆ ವಿಷಯಗಳನ್ನು ತಿಳಿಸಲಾಗುವುದು.

ಎರಡನೆಯ ಹಂತವೆಂದರೆ, ಭಾರತ ಸರ್ಕಾರವು ಲೋಹನೀತಿಯ ಬಗೆಗೆ ಶಾಸನವನ್ನು ರಚಿಸುವುದು. ಲೋಹಗಳ ನಿಯಂತ್ರಣದ ಬಗ್ಗೆ ಶಾಸನದ ಇತಿಮಿತಿಗಳನ್ನು ಸೂಚಿಸಬಹುದಾದ ಸಂದರ್ಭಗಳು ಎಂದರೆ, ಒಂದನೆಯದಾಗಿ, ಭಾರತದ ರಕ್ಷಣಾ ವ್ಯವಸ್ಥೆಗೆ ಅವಶ್ಯವಿರುವ ಲೋಹಗಳನ್ನು ಅಭಿವೃದ್ಧಿ ಪಡಿಸುವುದು; ಎರಡನೆಯದಾಗಿ, ತಾಂತ್ರಿಕ ದೃಷ್ಟಿಯಿಂದ ಉಪಯುಕ್ತವಾದ ಲೋಹಗಳು; ಮೂರನೆಯದಾಗಿ, ಲೋಹ ಉಪಯುಕ್ತ ಕಾರ್ಯಗಳು, ಲೋಹದಿಂದ ಉತ್ಪನ್ನವಾಗುವ ವಸ್ತುಗಳ ಬೆಲೆ ಆಧಾರ. ಹೀಗಾಗಿ ನಮ್ಮ ಲೋಹನೀತಿಯ ಶಾಸನವು ಎರಡು ಭಾಗಗಳಾಗಿ ಅಥವಾ ಲೋಹಗಳನ್ನೇ ಎರಡು ಭಾಗವಾಗಿ ವಿಂಗಡಿಸಿದೆ. ಮೊದಲನೆಯ ಭಾಗದಲ್ಲಿ ಸಾಮಾನ್ಯವಾಗಿ ಲೋಹಗಳ ಮೇಲೆ ನಿಯಂತ್ರಣ ಹೇರಿ ಪರವಾನಗಿ, ಗುತ್ತಿಗೆ ನೀಡುವ ವಿಧಾನಗಳಿಂದ ಕೂಡಿದೆ. ಬೇರೆ ಹಲವು ಲೋಹಗಳನ್ನು ಆಯ್ದು ಅವುಗಳ ಮೇಲೆ ವಿವರವಾದ ನಿಯಂತ್ರಣ ಹೇರಲಾಗುವುದು. ಹೀಗೆ ವಿಶೇಷವಾಗಿ ಆಯ್ದುಕೊಂಡಿರುವ ೨೮ ಲೋಹಗಳಿವೆ. ಅವಕಾಶದ ಅಭಾವದಿಂದ ಅವುಗಳ ಹೆಚ್ಚಿನ ವಿವರಣೆ ನೀಡಲಾರೆ. ವಿವರವಾದ ನಿಯಂತ್ರಣದ ಅಂಶಗಳೆಂದರೆ ಗಣಿವಿಧಾನ, ಸಂಸ್ಕರಣ, ಅರೆಯುವಿಕೆ (grinding) ಹಾಗೂ ಶ್ರೇಣಿ, ಗಣಿ ಅಭಿವೃದ್ಧಿ ಹಾಗೂ ಲೋಹ ಪಡೆಯುವ ವಿಧಾನಗಳು, ಹಾಗೂ ಸಂಶೋಧನೆಯ ಅಧಿಕಾರ ಕುರಿತು ಇವೆ. ಈ ವಿಧಾನದಿಂದ ಅನೇಕ ಕಾರ್ಯಗಳಿಗೆ ಹೆಚ್ಚಿನ ಉಪಯೋಗವಾಗುತ್ತದೆ.

ನಾನು ಸಂಕ್ಷಿಪ್ತವಾಗಿ, ಭಾರತ ಸರ್ಕಾರವು ಅನುಸರಿಸಬೇಕೆಂದಿರುವ ಲೋಹ ನೀತಿಯನ್ನು ವಿವರಿಸಿದ್ದೇನೆ.

ಈಗ ನಾನು ಶ್ರೀ ನಿಯೋಗಿ ಅವರ ನೋಟೀಸಿನ ವಿವರಗಳ ಬಗೆಗೆ ಹೇಳಬೇಕೆಂದಿರುವೆ. ಅವರು ಮೊದಲಿಗೆ ಲೋಹಗಳ ನಿರ್ಯಾತದ ಬಗೆಗೆ ಕೇಳಿದ್ದಾರೆ. ನಾನು ಸದನಕ್ಕೆ ಭರವಸೆ ಮೂಲಕ ಹೇಳಬಯಸುವುದೇನೆಂದರೆ, ಮಂಡಿಸಬೇಕೆಂದಿರುವ ಮಸೂದೆಯಲ್ಲಿ, ಲೋಹಗಳನ್ನು ವಿದೇಶಕ್ಕೆ ನಿರ್ಯಾತ ಮಾಡಲು ಹೇರಳ ಅವಕಾಶವಿದೆ. ನಿಜವಾದ ಪ್ರಶ್ನೆ ಎಂದರೆ ನಾವು ಸಂಪೂರ್ಣವಾಗಿ ನಿರ್ಯಾತವನ್ನು ನಿಲ್ಲಿಸಲು ಸಾಧ್ಯವೆ? ಈ ಪ್ರಶ್ನೆಯ ಉತ್ತರ ಇನ್ನಿತರ ಪ್ರಶ್ನೆಗಳ ಮೇಲೆ ಅವಲಂಬಿಸಿದೆ. ಅದೇನೆಂದರೆ ನಮ್ಮಲ್ಲಿ ಕೊರತೆಯಿರಬಹುದಾದ ಲೋಹಗಳನ್ನು ನಿರ್ಯಾತ ಮಾಡದೇ ಇರಲೆಂದೇ ನಮ್ಮ ಎಲ್ಲಾ ಲೋಹಗಳ ನಿರ್ಯಾತವನ್ನು ನಿಲ್ಲಿಸಲು ಸಾಧ್ಯವೆ? ಸದನದ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ ನಮಗೆ ತಾಮ್ರ, ಸೀಸ, ಗಂಧಕ ಹಾಗೂ ತವರ ಮುಂತಾದ ಲೋಹಗಳ ಕೊರತೆ ಇದೆ. ಈ ಕೊರತೆಯನ್ನು ನಿವಾರಿಸಲು ನಮ್ಮಲ್ಲಿಯ ಅಧಿಕ ಲೋಹಗಳನ್ನು ನಿರ್ಯಾತ ಮಾಡಿ ಕೊರತೆಯ ಲೋಹಗಳ ಆಯಾತಕ್ಕೆ ಆಸ್ಪದ ನೀಡುವುದು ಸಮಂಜಸ. ಭಾರತ ಸರ್ಕಾರಕ್ಕೆ ಇರಬಹುದಾದ ಒಂದೇ ಒಂದು ಉತ್ತಮ ಮಾರ್ಗವೆಂದರೆ ನಮ್ಮಲ್ಲಿ ಕೊರತೆ ಇರಬಹುದಾದ ಲೋಹಗಳ ನಿರ್ಯಾತದ ಮೇಲೆ ನಿಯಂತ್ರಣ ಹೇರುವುದು. ಇದರಿಂದಾಗಿ ನಮ್ಮ ಔದ್ಯೋಗಿಕ ಬೆಳವಣಿಗೆಗೆ ಅವಶ್ಯವಿರುವ ಲೋಹ ಸರಬರಾಜು ಸುಲಭವಾಗುತ್ತದೆ, ಅಲ್ಲದೆ ಅಭಿವೃದ್ಧಿಯೂ ಕುಂಠಿತವಾಗುವುದಿಲ್ಲ. ಎರಡನೆಯದಾಗಿ, ನಮ್ಮ ಲೋಹಗಳನ್ನು ಕಚ್ಚಾಸ್ಥಿತಿಯಲ್ಲಿಯೇ ನಿರ್ಯಾತಮಾಡದೇ, ನಮ್ಮ ದೇಶದಲ್ಲಿಯೇ ಅವನ್ನು ಸಂಸ್ಕರಿಸುವ ಉದ್ದಿಮೆಗಳನ್ನು ಸ್ಥಾಪಿಸಿ, ಸಂಸ್ಕರಣ ಹೊಂದಿದ ಮಾಲನ್ನು ನಿರ್ಯಾತಮಾಡಬೇಕು. ಶ್ರೀ ನಿಯೋಗಿ ಅವರು ನನ್ನ ಗಮನ ಸೆಳೆದಿರುವ ಮತ್ತೊಂದು ಅಂಶ ಎಂದರೆ, ತೈಲಕ್ಕೆ ನೀಡಬೇಕಾದ ರಿಯಾಯಿತಿಗಳು. ಶ್ರೀ ನಿಯೋಗಿ ಅವರಿಗೆ ತಿಳಿದಂತೆ, ಹಾಗೂ ನನ್ನ ನಂಬಿಕೆಯಂತೆ, ಸದನದ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ ತೈಲದ ಮೇಲೆ ಹಲವಾರು

ನಿರ್ಬಂಧಗಳಿವೆ. ತೈಲಗಣಿಗಳ ಹಾಗೂ ಅವುಗಳಿಗೆ ಬೇಕಾದ ಪರವಾನಗಿಯ ಬಗೆಗೆ ಈ ನಿರ್ಬಂಧಗಳಿವೆ. ಈ ವಿಧವಾದ ನಿರ್ಬಂಧಗಳನ್ನು ಭಾರತ ಸರ್ಕಾರ ಹೇರಿರುವ ಉದ್ದೇಶವೆಂದರೆ, ತೈಲ ಉದ್ದಿಮೆ ಕಂಪನಿಗಳ ಮಾಲೀಕರು ತಮ್ಮ ಸ್ವಾರ್ಥ ಸಾಧನೆಗಾಗಿ ಕೊರತೆ ಇರುವ ಪರಿಣತರ ಸೇವೆಯನ್ನು ಹಾಗೂ ತೈಲವನ್ನು ದುರುಪಯೋಗ ಮಾಡಿಕೊಳ್ಳಬಾರದು. ಈ ನಿರ್ಬಂಧ ಯುದ್ಧ ಮುಗಿದು ಅಲ್ಪ ಕಾಲದವರೆಗೂ ಮುಂದುವರಿಯುವುದು. ಮಾನ್ಯರೆ, ಈಗ ಲೈಸೆನ್ಸ್ ಅಥವಾ ಪರವಾನಗಿ ನೀಡುವ ವಿಧಾನದ ಬಗೆಗೆ ಮಸೂದೆಯನ್ನು ಭಾರತ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ನೀಡಿದೆ. ಆದರೆ ಈ ಬಗೆಗೆ ಅನುಸರಿಸಬೇಕಾದ ಕಾನೂನಿನ ವಿವರಗಳು ೧೯೧೯ನೇ ಅಧಿನಿಯಮದಲ್ಲಿ ಅಡಕವಾಗಿವೆ. ಜಾರಿಗೆ ನೀಡುವ ಸಂಗತಿ ಒಂದೇ ಬಾಕಿ ಉಳಿದಿದೆ ಎಂದು ಹೇಳುತ್ತೇನೆ. ಬ್ರಿಟಿಷೇತರ ಪ್ರಜೆಗಳ ಬಗೆಗೆ **'ಕದ-ಮುಚ್ಚಿದ'** (Closed Door) ನೀತಿ ಎಂದೇ ಹೇಳಲಾಗಿದೆ. ಭಾರತ ಸರ್ಕಾರವು ರಚಿಸಿರುವ ನಿಯಮಾವಳಿಯಲ್ಲಿ ಪರವಾನಗಿ ಪಡೆಯುವ ಕಂಪನಿಯು ಭಾರತೀಯ ಮೂಲ ವ್ಯಕ್ತಿಗಳಿಂದ ಕೂಡಿರಬೇಕು ಅಥವಾ ಅಧಿಕ ಸಂಖ್ಯೆಯ ಬ್ರಿಟಿಷ್ ಪ್ರಜೆಗಳು ಮಂಡಳಿಯಲ್ಲಿರಬೇಕು. ನನಗೆ ಹೊಳೆದಂತೆ ಬಹುಶಃ ನಿಯೋಗಿ ಅವರು ಭಾರತ ಹಾಗೂ ಬ್ರಿಟಿಷ್ ಪ್ರಜೆಗಳಲ್ಲಿಯ ವ್ಯತ್ಯಾಸವೇನು ಎಂಬುದನ್ನು ಅರಿಯಲು ಕಾತರರಾಗಿರಬಹುದು. ಆದರೆ ಸಮಯದ ಅಭಾವದಿಂದ ಅದನ್ನು ನಾನು ವಿವರಿಸಲಾರೆ, ಆದರೆ ಒಂದು ಸಂಗತಿ ಮಾತ್ರ ಖಚಿತವಾಗಿ ಹೇಳಬಲ್ಲೆ. ಅದೇನೆಂದರೆ, ಈ ಸಮಸ್ಯೆ ನಿಕಟವಾಗಿ ಭಾರತ ಸರ್ಕಾರದ ಅಧಿನಿಯಮದ ೧೧೧ರಿಂದ ೧೧೮ನೇ ಖಂಡದಲ್ಲಿ ಇದೆ. ಈ ವಿಷಯವನ್ನು ಬೇರೆ ನಿರ್ಣಯದ ಮೂಲಕ ಸಭೆಯಲ್ಲಿ ಚರ್ಚಿಸಲಾಗುವುದು. ಕಲ್ಲಿದ್ದಲು ಪ್ರಶ್ನೆಯ ಬಗೆಗೆ ಹೇಳಬಹುದಾದರೆ ಅದಕ್ಕೆ ನಮ್ಮ ಶಾಸನದಲ್ಲಿ ಸ್ಥಾನ ನೀಡಲಾಗಿದೆ. ನನ್ನ ಮಿತ್ರರಿಗೆ ತಿಳಿದಂತೆ ಇದು ಜಟಿಲ ಸಮಸ್ಯೆಯಾಗಿದೆ. ಏಕೆಂದರೆ ಈ ಶಾಸನದಲ್ಲಿ ಗಣಿ, ವಿಂಗಡಿಸುವುದು, ಮಾರುಕಟ್ಟೆ ಹಾಗೂ ಕಡಿಮೆ ದರ್ಜೆಯ ಕಲ್ಲಿದ್ದಲಿನ ಉಪಯೋಗ ಮುಂತಾದ ಅನೇಕ ಸಂಗತಿಗಳು ಅಡಕವಾಗಿರುವುದರಿಂದ, ಗಣಿ ಮಾಲೀಕರ, ವ್ಯಾಪಾರಿಗಳ ಸಹಕಾರವಿಲ್ಲದೇ ಸರಕಾರದ ಕ್ರಮ ಫಲಪ್ರದವಾಗಲಾರದು ಎಂದು ಹೇಳಬಯಸುವೆ. ಯುದ್ಧೋತ್ತರ ನೀತಿಗಳ ಅಡಿಯಲ್ಲಿ ಖಂಡಿತವಾಗಿ ಈ ಬಗೆಗೆ ವಿವರವಾದ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂಬ ಭರವಸೆ ನೀಡಬಲ್ಲೆ.

ನನಗೆ ದೊರೆತಿರುವ ಸ್ವಲ್ಪ ಅವಕಾಶದಲ್ಲಿ ಭಾರತ ಸರ್ಕಾರದ ನೀತಿಯ ಸ್ಥೂಲ ಪರಿಚಯ ನೀಡಿರುವೆ. ಕೊನೆಯ ಹಂತದಲ್ಲಿ ಹೇಳಬಯಸುವುದೇನೆಂದರೆ, ಸಮಗ್ರ ಹಾಗೂ ಸಮರ್ಥನೀಯವಾದ ಲೋಹನೀತಿಯನ್ನು ಮೂರು ಸಂದರ್ಭಗಳೊಡನೆ ಹೊಂದುವ ವಿಧಾನದಲ್ಲಿ ಹಮ್ಮಿಕೊಳ್ಳಲಾಗುವುದು. ಅದು ಈ ದೇಶದಲ್ಲಿ ಔದ್ಯೋಗಿಕ ನೀತಿಯನ್ನು ಪ್ರೋತ್ಸಾಹಿಸುವ ಕ್ರಮದ ಮೇಲೇ ಆಧಾರವಾಗಿದೆ. ನಿಜವಾಗಿ ಔದ್ಯೋಗೀಕರಣವನ್ನು ಆಯ್ದುಕೊಂಡಿಲ್ಲ. ಹೆಚ್ಚು ಪ್ರಬಲವಾದ ಲೋಹನೀತಿಯನ್ನು ಜಾರಿಗೊಳಿಸಲಾಗುವುದು. ಈ ಲೋಹನೀತಿಯು ಯಶಸ್ವಿಯಾಗಬೇಕಾದರೆ ಅದು ನಮ್ಮ ಸಂವಿಧಾನದಲ್ಲಿ ಕೇಂದ್ರ-ರಾಜ್ಯಗಳ ಬಾಂಧವ್ಯ ಹಾಗೂ ರಾಜ್ಯಗಳು ಈ ದಿಶೆಯಲ್ಲಿ ವಹಿಸಬಹುದಾದ ಪಾತ್ರವನ್ನು ಅವಲಂಬಿಸಿದೆ. ನನಗೆ ತಿಳಿದಂತೆ ನಾನು ಭಾರತ ಸರ್ಕಾರದ ಲೋಹನೀತಿಯ ಬಗೆಗೆ ಸಾಕಷ್ಟು ಮಾತನಾಡಿರುವುದನ್ನು ಸದನದ ಸದಸ್ಯರು ಪ್ರಶಂಶಿಸುತ್ತಾರೆ ಎಂದು ನಂಬಿದ್ದೇನೆ.

**ಒಬ್ಬ ಮಾನ್ಯ ಸದಸ್ಯ :** ನಾನು ಒಂದು ಪ್ರಶ್ನೆಯನ್ನು ಮಂಡಿಸಬೇಕೆಂದಿರುವೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** ಈಗ ಕೇಳಬಹುದಾದ ಪ್ರಶ್ನೆ ಎಂದರೆ.....

(ಅನೇಕ ಸನ್ಮಾನ್ಯ ಸದಸ್ಯರು; ಇಲ್ಲ-ಇಲ್ಲ)

ಹಾಗಾದರೆ ಅನೇಕ ಸದಸ್ಯರ ಅಭಿಪ್ರಾಯದಂತೆ ಈ ನಿಲುವಳಿಯನ್ನು ಮಂಡಿಸುವುದಿಲ್ಲ.

**ಒಬ್ಬ ಮಾನ್ಯ ಸದಸ್ಯ :** ಹಾಗಾದರೆ ಸಭೆಯ ಚರ್ಚೆ ಮುಂದೂಡಿರಿ.

**ಶ್ರೀ ಎಚ್.ಎ. ಸತ್ತಾರ್ ಎಚ್. ಇಸಾಕ್ ಸೇಟ್ (ಪಶ್ಚಿಮ ಕರಾವಳೀ ಹಾಗೂ ನೀಲಗಿರಿ –** ಮಹಮ್ಮದೀಯರ): ಈಗಿರುವ ವ್ಯವಸ್ಥೆಯಂತೆ ಸುತ್ತೋಲೆಗೆ ಅವಕಾಶ ನೀಡಬೇಕು. ರಾಷ್ಟ್ರೀಯ ಪಕ್ಷಕ್ಕೆ ನೀಡಿದ ಸಮಯ ಮುಗಿದು ಹೋಗಿದೆ. ಆದುದರಿಂದ ಅದು ಮುಗಿದ ಪ್ರಕರಣ. ಈಗ ಬೇರೆ ಪಕ್ಷದವರಿಗೆ ಸದನದಲ್ಲಿ ತಮ್ಮ ಅಭಿಪ್ರಾಯ ಮಂಡಿಸಲು ಅವಕಾಶ ನೀಡಬೇಕು.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಈಗಿರುವ ಪರಿಸ್ಥಿತಿಯಲ್ಲಿ ಖೋತಾನಿರ್ಣಯವನ್ನು ಸಭೆಯಲ್ಲಿ ಮಂಡಿಸಲಾಗದು.

## ೪೨
## ಭಾರತ ಸರ್ಕಾರದ ಕಾರ್ಮಿಕ ನೀತಿ*

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಶ್ರೀ ಜೋಷಿಯವರು ನಿನ್ನೆಯ ದಿನ ಸಭೆಯಲ್ಲಿ ಮಂಡಿಸಿದ ಖೋತಾ ನಿರ್ಣಯವನ್ನು ಮುಂದುವರಿಸಲಾಗುವುದು.

**ಪ್ರೊ॥ ಎನ್.ಜಿ. ರಂಗಾ :** ಮಾನ್ಯರೆ, ಶ್ರೀ ಜೋಷಿ ಅವರು ಮಂಡಿಸಿದ ಖೋತಾ ನಿರ್ಣಯಕ್ಕೆ ನನ್ನ ಹಾಗೂ ನನ್ನ ಪಕ್ಷದ ಸಂಪೂರ್ಣ ಸಹಮತವಿದೆ.

**ಹಲವು ಮಾನ್ಯ ಸದಸ್ಯರು :** ಈಗ ಕೇಳಬಹುದಾದ ಪ್ರಶ್ನೆ

**ಉಪಾಧ್ಯಕ್ಷರು : (ಶ್ರೀ ಅಖಿಲ ಚಂದ್ರದತ್)** : ಪ್ರಶ್ನೆ ಎಂದರೆ........

**ಶ್ರೀ ಎಚ್.ಎ. ಸತ್ತಾರ್ ಎಚ್. ಇಸಾಕ್ ಸೇಟ್ (ಪಶ್ಚಿಮ ಕರಾವಳಿ ಹಾಗೂ ನೀಲಗಿರಿಸ್–** ಮಹಮ್ಮದೀಯರ): ಸರ್ಕಾರದ ಉತ್ತರವೇನು?

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್ತ)** : ನಾನು ಅದನ್ನೇ ಕಾದು ನೋಡಿದೆ. ಆದರೆ ಯಾರೂ ಎದ್ದುನಿಂತಂತೆ ತೋರುವುದಿಲ್ಲ.

(ಈ ಹಂತದಲ್ಲಿ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರರು ತಮ್ಮ ಆಸನದಿಂದ ಏಳುತ್ತಿದ್ದರು)

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ಮಾನ್ಯ ಸದಸ್ಯರು ಮಾತನಾಡಬಯಸುವರೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ) : ಹೌದು.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಸದನವು ಬಹಳ ಅಸಹನೆಯಿಂದ ಇದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆದರೆ ನಾನು ನನ್ನ ಮನಸ್ಸನ್ನು ಶಾಂತವಾಗಿಯೇ ಇರಿಸಿಕೊಂಡಿದ್ದೇನೆ ಮತ್ತು ನನಗೆ ಭರವಸೆಯೂ ಇದೆ. ಶ್ರೀ ಜೋಷಿ ಅವರು ನಿನ್ನೆಯ ದಿನ ತಮ್ಮ ಖೋತಾ ನಿರ್ಣಯವನ್ನು ಕುರಿತಂತೆ ಪ್ರಸ್ತಾಪಿಸಿದಾಗ, ಅವರು ಕಾರ್ಮಿಕ ಇಲಾಖೆಯ ಬಗೆಗೆ ದೂರಿದರು. ತಮ್ಮ ಭಾಷಣದ ಅಂತ್ಯದಲ್ಲಿ, ಕಾರ್ಮಿಕ ಇಲಾಖೆಯು ತಮ್ಮ ಮೂಲ ಕರ್ತವ್ಯವಾದ ಕಾರ್ಮಿಕರ ಹಿತರಕ್ಷಣೆಯಲ್ಲಿ

---

*ಕಾರ್ಮಿಕ ಇಲಾಖೆಯ ೨೩ನೆಯ ಬೇಡಿಕೆಯ ಮೇಲಣ ಚರ್ಚೆ. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ಮಾರ್ಚ್ ೧೩, ೧೯೪೫, ಪು. ೧೪೫೬–೬೨.

ವಿಫಲವಾಗಿದೆ ಎಂದು ಆಪಾದಿಸಿದರು. ಏಕೆಂದರೆ ಕಾರ್ಮಿಕ ಇಲಾಖೆಗೆ ಕಾರ್ಮಿಕರ ಹಿತರಕ್ಷಣೆ ಕಾಳಜಿ ಇಲ್ಲವೆಂದರೆ, ಇದು ಉತ್ಪ್ರೇಕ್ಷೆಯ ಮಾತಾದೀತು. ಮಾನ್ಯರೆ, ನನ್ನ ಮಿತ್ರರು ಒಂದೇ ಉಸಿರಿನಲ್ಲಿ ಸಲ್ಪ ವಿರಾಮ, ಪೂರ್ಣ ವಿರಾಮವಿಲ್ಲದೇ ತಂತಿ ಸಂದೇಶದ ರೀತಿಯಲ್ಲಿ ಸದನದಲ್ಲಿ ಮಾತನಾಡಿದುದರಿಂದ, ಅವರು ಏನು ಹೇಳಬಯಸಿದರೆಂಬುದು ನನಗೆ ತಿಳಿಯದೇ ಹೋದರೂ ಅವರ ಖೋತಾ ನಿರ್ಣಯದ ಬಗೆಗೆ ಹಾಗೂ ಅವರ ಆಪಾದನೆಗಳನ್ನು ಅಲ್ಲಗಳೆಯಲು ಪ್ರಯತ್ನ ಮಾಡುವೆ.

ಮಾನ್ಯರೆ, ಅವರ ಮೊದಲನೆಯ ಆಪಾದನೆ ತುಟ್ಟಿಭತ್ಯೆಗೆ ಸಂಬಂಧಿಸಿದೆ. ಅವರ ಮೊದಲಿನ ಆಕ್ರೋಶವೆಂದರೆ, ಭಾರತ ಸರ್ಕಾರವು ನಿರ್ಧರಿಸಿದ ತುಟ್ಟಿಭತ್ಯೆಯು ಅಪೂರ್ಣವಾಗಿದೆ ಹಾಗೂ ಎರಡನೆಯದೆಂದರೆ, ಭಾರತ ಸರ್ಕಾರದ ತುಟ್ಟಿಭತ್ಯೆಯಲ್ಲಿ ಏಕರೂಪತೆ ಇಲ್ಲ. ಮೊದಲನೆಯ ಆಪಾದನೆಯ ಬಗೆಗೆ ಹೇಳಬಹುದಾದರೆ ಸಂಪೂರ್ಣತೆಯ ಬಗೆಗೆ ಭಿನ್ನಾಭಿಪ್ರಾಯಗಳು ಅನಿವಾರ್ಯ. ಏಕೆಂದರೆ ಯಾವುದೇ ಇಬ್ಬರ ದೃಷ್ಟಿಕೋನದಲ್ಲಿ ತುಟ್ಟಿಭತ್ಯೆಯ ಬಗೆಗೆ ಸಂಪೂರ್ಣ ಸಹಮತವಿರಲು ಸಾಧ್ಯವೇ ಇಲ್ಲ. ಹೀಗಾಗಿ ನಾನು ಈ ದಿಶೆಯಲ್ಲಿ ಹೆಚ್ಚಿನ ಚರ್ಚೆ ಮಾಡಲಾರೆ. ಆದರೆ, ಸದನದ ಗಮನವನ್ನು ಒಂದು ಸಂಗತಿಯ ಬಗೆಗೆ ಸೆಳೆಯಬಯಸುತ್ತೇನೆ, ಅದೇನೆಂದರೆ, ಭಾರತ ಸರ್ಕಾರವು ತುಟ್ಟಿಭತ್ಯೆಯ ಬಗೆಗೆ ಆಸಕ್ತಿಯನ್ನು ಹೊಂದಿದ್ದು, ಕಾಲಕಾಲಕ್ಕೆ ತುಟ್ಟಿಭತ್ಯೆಯನ್ನು ಏರಿಸಲಾಗಿದೆ ಎಂಬುದು ಪ್ರಶ್ನಾತೀತ ವಿಷಯವಾಗಿದೆ. ಉದಾಹರಿಸಬೇಕೆಂದರೆ, ಮೊದಲನೆಯ ತುಟ್ಟಿಭತ್ಯೆಯನ್ನು ಆಗಸ್ಟ್ ೧೯೪೨ರಲ್ಲಿ ನೀಡಲಾಯಿತು, ನಂತರ ಜನವರಿ ೧೯೪೩ರಲ್ಲಿ ಏರಿಸಲಾಯಿತು, ಮತ್ತೊಮ್ಮೆ ಜೂನ್ ೧೯೪೩ರಲ್ಲಿ ಹೆಚ್ಚಿಸಲಾಯಿತು (೧೯೪೨ರಲ್ಲಿ ನೀಡಿದ ತುಟ್ಟಿಭತ್ಯೆ ಎಷ್ಟು ಎಂದು ಹೇಳುವಿರಾ? ಮಾನ್ಯ ಸದಸ್ಯರ ಪ್ರಶ್ನೆ). ನನಗೆ ಈ ದಿಶೆಯಲ್ಲಿ ಸಮಯದ ಅಭಾವದಿಂದಾಗಿ ವಿವರಗಳನ್ನು ನೀಡಲಾರೆ, ಸದಸ್ಯರು ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ ಎಂದು ತಿಳಿಸುತ್ತ ನನ್ನ ಹೇಳಿಕೆಯನ್ನು ಮುಂದುವರಿಸುತ್ತೇನೆ. ೧೯೪೪ರ ಮಾರ್ಚ್‌ನಲ್ಲಿ ಮತ್ತೆ ತುಟ್ಟಿಭತ್ಯೆಯನ್ನು ಹೆಚ್ಚಿಸಲಾಯಿತು. ನಾವು ಸಮಯದಿಂದ ಸಮಯಕ್ಕೆ ತುಟ್ಟಿಭತ್ಯೆ ಪಡೆಯಬಹುದಾದ ಮಿತಿಯನ್ನೂ ಹೆಚ್ಚಿಸುತ್ತಲೇ ಇದ್ದೇವೆ. ಮೊದಲನೆಯ ಬಾರಿ ತುಟ್ಟಿಭತ್ಯೆ ನೀಡಿದಾಗ ಮಿತಿಯು ೧೦೦ರಿಂದ ೧೨೦ ಇತ್ತು. ಮುಂದೆ ಇದನ್ನು ೧೫೦ಕ್ಕೆ ಏರಿಸಲಾಯಿತು. ಮತ್ತೊಮ್ಮೆ ಈ ಮಿತಿಯನ್ನು ೨೫೦ಕ್ಕೆ ವಿಸ್ತರಿಸಲಾಯಿತು. ಮುಂದುವರಿದು ನಾನು ಸದನಕ್ಕೆ ತಿಳಿಸಬಯಸುವುದೇನೆಂದರೆ, ಭಾರತ ಸರ್ಕಾರವು ಸದ್ಯದಲ್ಲಿಯೇ ಇನ್ನಷ್ಟು ಹೆಚ್ಚಿನ ತುಟ್ಟಿಭತ್ಯೆಯನ್ನು ನೀಡಲಿದೆ. ಈ ದಿಶೆಯಲ್ಲಿ ಪ್ರಕಟಣೆ ಹೊರಡಲಿದೆ. ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ ಸರ್ಕಾರದ ಆಸಕ್ತಿ ಎಷ್ಟಿದೆ ಎಂಬುದನ್ನು ಸದನವು ಗಮನಿಸಬಹುದು. ಇನ್ನು ಏಕರೂಪತೆಯ ಬಗೆಗೆ ಹೇಳಬೇಕೆಂದರೆ, ನಾನು ಮಾನ್ಯ ಸದಸ್ಯರ ಹೇಳಿಕೆಯನ್ನು ಒಪ್ಪುತ್ತೇನೆ. ಏಕೆಂದರೆ ಸರ್ಕಾರದ ವಿವಿಧ ವರ್ಗಗಳ ನೌಕರರಿಗೆ ವಿವಿಧ ಮಟ್ಟದ ತುಟ್ಟಿಭತ್ಯೆಯನ್ನು ನೀಡಲಾಗುತ್ತದೆ. ಮಾನ್ಯರೆ, ಈ ವಿಧವಾದ ಏಕರೂಪತೆ ಇರದೇ ಹೋದುದಕ್ಕೆ ಯಾರು ಹೊಣೆಗಾರರು? ಈ ಬಗೆಗೆ ಯಾರಾದರೂ ಹೊಣೆಗಾರರು ಎಂದಿದ್ದರೆ ಅದು ಖಂಡಿತವಾಗಿ ಶ್ರೀ ಜೋಷಿ ಅವರೇ ಎಂದು ಘಂಟಾಘೋಷವಾಗಿ ಹೇಳುತ್ತೇನೆ.

**ಶ್ರೀ ಎನ್.ಎಮ್. ಜೋಷಿ :** ಏಕೆ? ನಾನು ಸರಕಾರವಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು 'ಶ್ರೀ ಜೋಷಿ' ಎಂದರೆ ಸಮಸ್ತ ಕಾರ್ಮಿಕ ಸಂಘಟನೆ ಎಂದೇ ಭಾವಿಸಿರುವೆ. ಈ ಏಕರೂಪತೆ ಇರದೇ ಹೋದುದಕ್ಕೆ ಅವರೇ ಕಾರಣ. ತುಟ್ಟಿಭತ್ಯೆಯನ್ನು ಮಂಜೂರು ಮಾಡುವಾಗ ಕಾರ್ಮಿಕ ಜಗತ್ತಿನಲ್ಲಿ ವಿವಿಧ ಗುಂಪುಗಳಿವೆ ಎಂಬುದನ್ನು ಮರೆಯಬಾರದು. ಏಕೆಂದರೆ ರೈಲ್ವೆ ಸಂಯುಕ್ತ ಸಂಘ, ಅಂಚೆ ಹಾಗೂ ತಂತಿ ಇಲಾಖೆಯ ಸಂಘ, ನೂಲು ಗಿರಣಿಗಳ ಸಂಘ

ಮುಂತಾದ ಅನೇಕ ಸಂಘಟನೆಗಳಿವೆ. ಶ್ರೀ ಜೋಷಿ ಅವರು ನನ್ನೊಡನೆ ಸಹಮತ ವ್ಯಕ್ತಪಡಿಸುವರೆಂದು ನಂಬಿ ಹೇಳುವುದೇನೆಂದರೆ, ಈ ಅನೇಕ ಕಾರ್ಮಿಕ ಸಂಘಟನೆಗಳು ತಮಗೆ ಬರಬೇಕಾದುದನ್ನು ಸರ್ಕಾರದಿಂದ ಆದಷ್ಟು ಬೇಗನೆ ಕೊಳ್ಳೆ ಹೊಡೆಯಲು ಕಾತರವಾಗಿವೆ. ಹೀಗಿರುವಾಗ ಏಕರೂಪತೆಯನ್ನು ಹಾರೈಸುವುದು ಸರಿಯೇ? ಉದಾಹರಣೆಗೆ ರೈಲ್ವೆ ಕಾರ್ಮಿಕರ ಸಂಘಟನೆ, ರೈಲ್ವೆ ಮಂಡಳಿಯ ಮೇಲೆ ಸಾಕಷ್ಟು ಆಗ್ರಹ ಹೇರಿ ಹೆಚ್ಚಿನ ತುಟ್ಟಿಭತ್ಯೆಯನ್ನು ಗಿಟ್ಟಿಸುವಲ್ಲಿ ತನ್ನ ಎಲ್ಲಾ ಪ್ರಭಾವ ಬೀರಲು ಹಿಂಜರಿಯುವುದಿಲ್ಲ. ತರುವಾಯ ನನ್ನ ಮಾನ್ಯ ಮಿತ್ರರ ಅಧೀನದಲ್ಲಿರುವ ಅಂಚೆ ಹಾಗೂ ತಂತಿ ಇಲಾಖೆಯವರು ಮುಷ್ಕರದ ಬೆದರಿಕೆ ಹಾಕಿ ಅವರಿಂದ ತಮ್ಮ ಬೇಡಿಕೆಗಳನ್ನು ಒತ್ತಾಯವಾಗಿ ಪಡೆದುಕೊಳ್ಳುತ್ತಾರೆ. ಹೀಗಾಗಿ ಮಿಕ್ಕ ಸಂಘಟನೆಗಳ ಬೇಡಿಕೆಯನ್ನು ಆಗ್ರಹಪಡಿಸುವ ಯಾರೂ ಇಲ್ಲದೇ ಹೋದುದರಿಂದ, ನನಗೆ ತಿಳಿದಂತೆ ಅಖಿಲ ಭಾರತ ಕಾರ್ಮಿಕ ಸಂಘಟನೆ ಹಾಗೂ ಅಖಿಲ ಭಾರತ ಕಾರ್ಮಿಕರ ಮಹಾ ಸಂಘ ಈ ಏಕರೂಪತೆಯ ಬಗೆಗೆ ಒಮ್ಮತವನ್ನೇ ನೀಡದೆ ಹೋದುದರಿಂದ ಸರಕಾರದ ಹಾಗೂ ಎಲ್ಲಾ ಕಾರ್ಮಿಕರ ವಿಷಯದಲ್ಲಿ ಅನುಸರಿಸಬೇಕಾದ ಏಕರೂಪದ ನೀತಿಯೇ ಇಲ್ಲದಂತಾಗಿದೆ.

**ಶ್ರೀ ಎನ್.ಎಮ್. ಜೋಷಿ :** ಏಕರೂಪತೆಯ ಏಕರೂಪದ ನೀತಿಯನ್ನು ಪಾಲಿಸುವುದು ಭಾರತ ಸರ್ಕಾರದ ಕರ್ತವ್ಯವಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ಖಂಡಿತವಾಗಿ. ನಮಗೆ ಆ ಕರ್ತವ್ಯ ಮಾಡಲು ಸಂಪೂರ್ಣ ಸ್ವಾತಂತ್ರ್ಯ ನೀಡಿದಾಗ ಮಾತ್ರ. ಆದರೆ ಪ್ರತಿ ಬಾರಿಗೂ ಒಂದು ಕಾರ್ಮಿಕರ ಸಂಘಟನೆ ಬಂದು, ತಮ್ಮ ಆಯುಧಗಳನ್ನು ತೋರಿಸಿ "ನಾವು ಕಾರ್ಯಮಾಡುವುದಿಲ್ಲ ಮುಷ್ಕರ ಹೂಡುತ್ತೇವೆ" ಎಂದು ಬೆದರಿಸಿದಾಗ ಸರ್ಕಾರ ಅಸಹಾಯಕ ಪರಿಸ್ಥಿತಿಗೆ ಮಣಿಯಬೇಕಾಗುತ್ತದೆ(ತಾವು ಎಲ್ಲರೂ ಒಟ್ಟಿಗೆ ಏಕೆ ಭೇಟಿಯಾಗಬಾರದು ಎಂದು ಮಾನ್ಯ ಸದಸ್ಯರ ಪ್ರಶ್ನೆ). ತರುವಾಯ ಶ್ರೀ ಜೋಷಿ ಅವರು ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಸಂಭವಿಸಿದ ನಿರುದ್ಯೋಗ ಸಮಸ್ಯೆಯ ಬಗೆಗೆ ಮಾತನಾಡಿದ್ದಾರೆ. ಈ ವಿಷಯದ ಬಗ್ಗೆ ಅವರು ತುಚ್ಛವಾಗಿ ಮಾತನಾಡಿದ್ದಾರೆಂದು ನನ್ನ ಅನಿಸಿಕೆ. ಏಕೆಂದರೆ ನನಗೆ ತಿಳಿದಿರುವಂತೆ, ಕೇಂದ್ರ ಸರ್ಕಾರವು ಪ್ರಾಂತ ಸರ್ಕಾರ ಹಾಗೂ ಮಾಲೀಕರಿಗೆ ಒಂದು ಪರಿಪತ್ರ ಬರೆದು ಅನಿವಾರ್ಯವಾಗಿ ಕಲ್ಲಿದ್ದಲು ಅಥವಾ ಬೇರೆ ಯಾವ ಕಚ್ಚಾಮಾಲಿನ ಕೊರತೆಯಿಂದಲಾದರೂ ನಿರುದ್ಯೋಗ ಸಂಭವಿಸಿದಾಗ, ಕಾರ್ಮಿಕರಿಗೆ ಪರಿಹಾರ ಧನ ನೀಡಬೇಕೆಂದು ಸೂಚಿಸಿದೆ. ನಾವು ಕಳಿಸಿದ ಪರಿಪತ್ರದಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಮುಂದುವರಿದು ತಿಳಿಸಿರುವುದೇನೆಂದರೆ ಈ ವಿಧವಾದ ನಿರುದ್ಯೋಗ ಸಂಭವಿಸಿದ ಸಮಯದಲ್ಲಿ ಭಾರತ ಸರ್ಕಾರವು ಕಾರ್ಮಿಕರಿಗೆ ವೇತನದ ಅಲ್ಪಭಾಗವನ್ನು ನೀಡಲು ಸಿದ್ಧವಿದೆ. ಸುತ್ತೋಲೆಯಲ್ಲಿ ತಿಳಿಸಿರುವಂತೆ, ನಿರುದ್ಯೋಗದ ಮೊದಲನೇ ಹದಿನೈದು ದಿನಗಳಿಗೆ ವೇತನದ ಶೇಕಡಾ ೭೫ರಷ್ಟು, ನಂತರದ ಹದಿನೈದು ದಿನಗಳಿಗೆ ಶೇಕಡಾ ೫೦ರಷ್ಟು ಹೀಗೆ, ಒಂದು ತಿಂಗಳ ಅವಧಿಯವರೆಗೂ ಕಾರ್ಮಿಕರಿಗೆ ಸಹಾಯವೇತನ ನೀಡಬೇಕು. ಹೀಗೆ ಏಳು ತಿಂಗಳ ಅವಧಿಯವರೆಗೂ ಕಾಯಬಹುದೆಂದೂ ಸೂಚಿಸಲಾಗಿದೆ. ಆದರೆ ಶ್ರೀ ಜೋಷಿ ಅವರು ತಮ್ಮ ಭಾಷಣದ ಕೊನೆಯಲ್ಲಿ ಈ ಸೌಕರ್ಯಗಳನ್ನು ಒದಗಿಸುವಲ್ಲಿ ಭಾರತ ಸರ್ಕಾರ ಯಾವ ಕ್ರಮವನ್ನೂ ಕೈಗೆತ್ತಿಕೊಂಡಿಲ್ಲ ಎಂದಿದ್ದಾರೆ. ಮಾನ್ಯರೆ, ನಾನು ಶ್ರೀ ಜೋಷಿ ಅವರಿಗೆ ತಿಳಿಸಬಯಸುವುದೇನೆಂದರೆ, ನಾವು ಕಳಿಸಿದ ಪರಿಪತ್ರವನ್ನು ಶ್ರೀ ಜೋಷಿ ಅವರು ಸರಿಯಾಗಿ ಓದಿದ್ದರೆ, ಅವರಿಗೆ, ನಾವು ಪ್ರಾಂತೀಯ ಸರ್ಕಾರ ಹಾಗೂ ಮಾಲೀಕರಿಗೆ, ಈ ವಿಧವಾದ ನಿರುದ್ಯೋಗ ಸಮಸ್ಯೆಗೆ ಖಚಿತವಾಗಿ ಪರಿಹಾರ ಧನ ನೀಡುವಲ್ಲಿ ಸರ್ಕಾರ ಸಹಕರಿಸುವುದೆಂದು

ಬರೆಯಲಾಗಿರುವುದು ತಿಳಿಯುತ್ತಿತ್ತು. ಈ ವಿಧವಾದ ಅನಿವಾರ್ಯ ನಿರುದ್ಯೋಗ ಸಮಸ್ಯೆಗಳಲ್ಲಿ ನೀಡಿರಬಹುದಾದ ಹಣವನ್ನು ಕಂದಾಯದ ಖರ್ಚೆಂದು ಪರಿಗಣಿಸಿ, ಆದಾಯಕರ ಹಾಗೂ ಇ.ಪಿ.ಟಿ. (E.P.T)ಗಳಿಂದ ವಿನಾಯತಿ ಪಡೆಯಲು ಆಸ್ಪದವಿದೆ. ಈ ದಿಶೆಯಲ್ಲಿ ನಿಜ ಹೇಳಬೇಕೆಂದರೆ, ನಾವು ಬರೆದ ಪರಿಪತ್ರದಲ್ಲಿ ಈ ವಿಶೇಷ ಪ್ರಕರಣವನ್ನು ಸೂಚಿಸುವುದಕ್ಕಿಂತ ಹೆಚ್ಚಿನ ಸಂಗತಿ ಏನೂ ಇಲ್ಲವೆಂದೇ ನಮ್ಮ ಗ್ರಹಿಕೆಯಾಗಿದೆ. ಇನ್ನೂ ಮುಂದುವರಿದು ಹೇಳಬಹುದಾದರೆ, ಭಾರತ ರಕ್ಷಣಾ ನಿಯಮದ ೮೧–ಎ ಅಡಿಯಲ್ಲಿ ಈ ವಿಧವಾದ ಅನಿವಾರ್ಯ ನಿರುದ್ಯೋಗ ಸಮಸ್ಯೆಗೆ ಗುರಿಯಾದ ಕಾರ್ಮಿಕರು, ಪ್ರಾಂತೀಯ ಸರ್ಕಾರಗಳಿಗೆ, ಈ ಸಮಸ್ಯೆಯನ್ನು ನ್ಯಾಯಮಂಡಳಿಗಳ ಮೂಲಕ ಪರಿಹರಿಸಬೇಕೆಂದೂ ಒತ್ತಾಯ ಮಾಡಬೇಕು. ನನಗೆ ಸಂತಸ ನೀಡಿರುವ ಸಂಗತಿ ಎಂದರೆ, ಈಗ ಈ ದಿಶೆಯಲ್ಲಿ ನಾವು ಮುಂದುವರಿಯುತ್ತಿದ್ದೇವೆ. ಸದನದ ಸದಸ್ಯರಿಗೆ ತಿಳಿದಿರುವಂತೆ, ಅಹಮದಾಬಾದಿನಲ್ಲಿ ಕಾರ್ಮಿಕರ ಹಾಗೂ ಮಾಲೀಕರ ಮಧ್ಯದ ಒಂದು ಪ್ರಕರಣವನ್ನು ನ್ಯಾಯಮಂಡಳಿ ಮುಂದೆ ವಿಚಾರಣೆಗೆ ತರಲಾಗಿದೆ.

ಮೂರನೇ ಅಂಶವಾಗಿ ಶ್ರೀ ಜೋಷಿ ಅವರಿಂದ ಪ್ರಸ್ತಾವನೆಗೆ ಬಂದಿರುವ ವಿಷಯ ಎಂದರೆ ಕಾರ್ಮಿಕರಿಗೆ ನೀಡಲಾಗುವ ಪರಿಹಾರ ಧನ. ನನಗೆ, ಈಗಿರುವ ವ್ಯವಸ್ಥೆಯಲ್ಲಿರಬಹುದಾದ ಕುಂದುಗಳ ಬಗೆಗೆ ಜೋಷಿಯವರು ಪ್ರಸ್ತಾಪಿಸಿದ ವಿಷಯ ಸರಿಯಾಗಿ ತಿಳಿಯುತ್ತಿಲ್ಲ; ಹಾಗೂ ಅವರು ನಾನು ಈ ದಿಶೆಯಲ್ಲಿ ಏನು ಮಾಡಬೇಕೆಂದು ಬಯಸುವರೋ ಅದೂ ತಿಳಿಯದೇ ಇದೆ. ನನಗೆ ಅವರ ಹೇಳಿಕೆಯಂತೆ ತಿಳಿದಿರಬಹುದಾದ ಸಂಗತಿ ಎಂದರೆ ಪರಿಹಾರ ಧನ ಅಸಮರ್ಪಕವಾಗಿದೆ. ಈಗ ಸದನವು ನಾವು ಕಾರ್ಮಿಕರ ಕೂಲಿಯ ಬಗೆಗೆ ಕೈಗೊಂಡಿರುವ ವ್ಯಾಖ್ಯೆ ಎಷ್ಟು ವಿಶಾಲವಾಗಿದೆ ಎಂಬುದನ್ನು ನೆನೆಯಬೇಕು. ಕಾರ್ಮಿಕರ ಪರಿಹಾರ ಧನ ಕಾಯ್ದೆಯ ಅಡಿಯಲ್ಲಿ ಕೇವಲ ಹಣದ ರೂಪದಲ್ಲಿ ನೀಡಬಹುದಾದ ಕೂಲಿ ಯಲ್ಲದೆ ಬೇರೆಯ ರೂಪದಲ್ಲಿ ನೀಡಬಹುದಾದ ಪರಿಹಾರಗಳನ್ನು ಪರಿಗಣಿಸಲಾಗಿದೆ. ಈ ಎಲ್ಲಾ ಕ್ರಮಗಳಿಂದ ನಿಸ್ಸಂದೇಹವಾಗಿ ತಿಳಿಯುವುದೇನೆಂದರೆ ಕಾರ್ಮಿಕರಿಗೆ ಯಾವ ಸಂದರ್ಭಗಳಲ್ಲಿಯೇ ಆಗಲಿ ನೀಡಬಹುದಾದ ಪರಿಹಾರ ಧನ, ಕೇವಲ ಅವರ ವೇತನ ಹಣ ಅಲ್ಲದೆ ತುಟ್ಟಿಭತ್ಯೆಯ ಅಂಶಕ್ಕೂ ಅವರಿಗೆ ಅರ್ಹತೆ ಇದೆ ಎಂದು ತಿಳಿದುಬರುತ್ತದೆ. ಮುಂದುವರಿದು, ಶ್ರೀ ಜೋಷಿ ಅವರು ಇಂಗ್ಲೆಂಡಿನಲ್ಲಿ ಈ ದಿಶೆಯಲ್ಲಿ ಪರಿವರ್ತನೆಗಳನ್ನು ತರಲಾಗಿದೆ, ಆದರೆ ಭಾರತದಲ್ಲಿ ಏನೂ ಕಾರ್ಯಕ್ರಮ ಹಮ್ಮಿಕೊಂಡಿಲ್ಲ ಎಂದಿದ್ದಾರೆ. ಏಕೆಂದರೆ ಯುದ್ಧ ಸಮಯದಲ್ಲಿ ಕಾರ್ಮಿಕರ ಪರಿಹಾರ ಧನವನ್ನು ಹೆಚ್ಚಿಸಲಾಗಿದೆ. ಆದರೆ ನಾನು ಪರಿಶೀಲಿಸಿದ್ದ ವಿಷಯ ಹೀಗಿದೆ. ವಿಷಾದದ ವಿಷಯವೆಂದರೆ ಶ್ರೀ ಜೋಷಿ ಅವರಿಗೆ ವ್ಯತ್ಯಾಸವೇನು ಎಂಬುದೇ ಸರಿಯಾಗಿ ತಿಳಿಯದೇ ಇರುವುದು. ಸದನದ ಸದಸ್ಯರಿಗೆ ತಿಳಿದಿರುವಂತೆ, ಬ್ರಿಟನ್ನಿನಲ್ಲಿ ಕಾರ್ಮಿಕರ ಪರಿಹಾರ ಅಧಿನಿಯಮದ ಕೆಳಗೆ ನಿಯತಕಾಲಿಕವಾಗಿ ಪರಿಹಾರ ನೀಡಲಾಗುತ್ತದೆ. ಆದರೆ ಭಾರತದಲ್ಲಿ ನಮ್ಮ ಪಾವತಿಗಳು ಒಂದೇ ಗಂಟಿನಲ್ಲಿ ಇರುತ್ತವೆ. ಹೀಗೆ ಒಂದೇ ಗಂಟಿನಲ್ಲಿ ಪಾವತಿ ಮಾಡಿದಾಗ ಕಾರ್ಮಿಕನ ಮತ್ತು ಮಾಲೀಕನ ಸಂಬಂಧ ಕೊನೆಯಾಗುತ್ತದೆ. ನಂತರ ಮಾಲೀಕನಿಗಾಗಲೀ, ಸರ್ಕಾರಕ್ಕಾಗಲೀ ಹೊಣೆಗಾರಿಕೆ ಇರುವುದಿಲ್ಲ. ಆದರೆ ಎಲ್ಲ ಹೊಣೆಗಾರಿಕೆಯು ಮುಂದುವರೆಯುತ್ತಿರುವ ಹೊಣೆಗಾರಿಕೆಯಾಗಿದ್ದ ಪಕ್ಷದಲ್ಲಿ (ಪ್ರಯೋಜನಗಳನ್ನು ಒಂದು ನಿರ್ದಿಷ್ಟ ಅವಧಿಗೆ ವಿಸ್ತರಿಸಿದಾಗ) ಹೊಣೆಗಾರಿಕೆ ಸ್ಪಷ್ಟವಾಗಿ ಮಾಲೀಕನ ಮೇಲೆ ಮುಂದುವರೆಯುತ್ತದೆ. ಆಗ, ಹೇಗೆ ಮಾಲೀಕ, ಉದಾಹರಣೆಗೆ, ಕೆಲಸದಲ್ಲಿರುವ ಕಾರ್ಮಿಕನಿಗೆ ತುಟ್ಟಿಭತ್ಯೆಯನ್ನು ಕೊಡಬೇಕಾಗಿ ಬರುತ್ತದೆಯೋ, ಅದೇ ರೀತಿ ಇಂಗ್ಲಿಷ್ ಕಾನೂನಿನಲ್ಲಿ ಕೂಡ ಹೆಚ್ಚಿನ ಪರಿಹಾರವನ್ನು ಕೊಡಬೇಕಾಗಿ ಬರುತ್ತದೆ. ಕಾರಣವೆಂದರೆ, ಪಾವತಿ ನಿಯತಕಾಲಿಕವಾದ್ದರಿಂದ

ಪಾವತಿ ಮಾಡುವ ಹೊಣೆಗಾರಿಕೆಯೂ ಮುಂದುವರೆಯುತ್ತದೆ. ಈ ಸದನದ ಇಚ್ಛೆ ಕಾರ್ಮಿಕರಿಗೆ ಪರಿಹಾರ ಕೊಡುವ ನಮ್ಮ ಈಗಿರುವ ವ್ಯವಸ್ಥೆ, ಬದಲಾಯಿಸಬೇಕೆಂದರೆ ಪಾವತಿಯನ್ನು ಒಂದೇ ಗಂಟಿನಲ್ಲಿ ಕೊಡುವ ಬದಲು, ಅವನಿಗೆ ಅವನ ಜೀವನ ಪರ್ಯಂತ, ಅಥವ ಅವನ ಮಕ್ಕಳಿಗೆ ಅವರು ವಯಸ್ಸಿಗೆ ಬರುವವರೆಗೂ, ಪರಿಹಾರವನ್ನು ಕೊಡಬೇಕಾಗುವಂತಾದರೆ, ಆಗ ಬ್ರಿಟನ್ನಿನಲ್ಲಿ ಇರುವಂತೆ, ಈ ದೇಶದಲ್ಲೂ ಆ ಪದ್ಧತಿ ಆಚರಣೆಗೆ ಬರುತ್ತದೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಸದನದ ಅಭಿಪ್ರಾಯದಲ್ಲಿ ಎಂದರೆ ತಮ್ಮ ಭಾಷಣ ತುಂಬಾ ದೀರ್ಘವಾಯಿತು. ದಯಮಾಡಿ ಸಂಕ್ಷಿಪ್ತಗೊಳಿಸಬೇಕೆಂದು ಕೋರಿಕೆ. ಪೀಠದಿಂದ ಆಜ್ಞೆಯಲ್ಲ. ಮುಂದಿನ ನಿಲುವಳಿಗೂ ಆಸ್ಪದ ನೀಡಬೇಕಾಗಿದೆ. ತಾವು ಇದನ್ನು ಯೋಚಿಸಿದರೆ ಉಪಕಾರವಾದೀತು.

**ಸರ್ ಕವಾಸ್ಜಿ ಜಹಂಗೀರ್ :** ಇಲ್ಲ ಮಾನ್ಯರೆ, ಸದನದ ಆಕ್ಷೇಪಣೆ ಏನೂ ಇಲ್ಲ. ನಾನು ಅವರ ಹೇಳಿಕೆಯನ್ನು ಕೇಳಬಯಸುತ್ತೇನೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ಶಿಸ್ತು, ಶಿಸ್ತು, (Order-Order)

**ಸರ್ ಕವಾಸ್ಜಿ ಜಹಂಗೀರ್ :** ತಾವು ಸದನದ ಆಕ್ಷೇಪಣೆ ಎಂದಿರಿ. ಆದರೆ ಈ ಸದನದ ಆಕ್ಷೇಪಣೆ ಏನೂ ಇಲ್ಲವೆಂದು ಸದನದ ಈ ಭಾಗದ ಸದಸ್ಯರು ಅವರು ಭಾಷಣ ಮುಂದುವರಿಸಬೇಕೆಂದಿದ್ದಾರೆ.

**ಡಾ॥ ಪಿ.ಎನ್. ಬ್ಯಾನರ್ಜಿ :** ಸದನದ ಮಿಕ್ಕ ಮಾನ್ಯ ಸದಸ್ಯರು ಅವರು ಮಾತನಾಡಬಾರದೆಂದು ಆಶಿಸುತ್ತಾರೆ.

**ಸರ್ ಕವಾಸ್ಜಿ ಜಹಂಗೀರ್ :** ಆದರೆ ನಾವು ಅವರನ್ನು ಆಲಿಸಬೇಕೆಂದಿದ್ದೇವೆ.

**ಉಪಾಧ್ಯಕ್ಷರು : (ಶ್ರೀ ಅಖಿಲ ಚಂದ್ರದತ್)** : ತಾವು ಸದನವನ್ನು ಪ್ರತಿನಿಧಿಸುವುದಿಲ್ಲ.

**ಶ್ರೀ ಅಬ್ದುಲ್ ಖಯೂಮ್ :** ತಾವು ಸರಿಯಾಗಿ ಹೇಳಿದಿರಿ.

**ಮಾನ್ಯ ಸರ್ ಸುಲ್ತಾನ್ ಅಹಮ್ಮದ್ :** ಎಷ್ಟೇ ಆದರೂ, ಸದನದ ಈ ಭಾಗದ ಸದಸ್ಯರು ಅವರು ಮಾತನಾಡಬಹುದು ಎಂದು ಬಯಸಿದ್ದಾರೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ತೊಂದರೆ ಎಲ್ಲಿದೆ? ಇದು ಅಧ್ಯಕ್ಷ ಪೀಠದ ಆಜ್ಞೆ ಅಲ್ಲ ಎಂದು ಬಾರಿ ಬಾರಿಗೂ ನಾನು ಹೇಳುತ್ತಲೇ ಬಂದಿರುವೆ. ಇದು ಕೇವಲ ಕೋರಿಕೆ. ಅದನ್ನು ಗಮನಿಸುವ ಹಾಗೂ ಬಿಡುವುದು ಮಾನ್ಯ ಸದಸ್ಯರಿಗೆ ಸೇರಿದ ಸಂಗತಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಶ್ರೀ ಜೋಷಿ ಅವರು ಪ್ರಸ್ತಾಪಿಸಿದ ಮತ್ತೊಂದು ವಿಷಯ, ತಾಂತ್ರಿಕ ಸಿಬ್ಬಂದಿ ವಿಶೇಷಾಜ್ಞೆಗೆ ಸಂಬಂಧಿಸಿದೆ. ಅವರ ಹೇಳಿಕೆಯಂತೆ ಈ ವಿಶೇಷಾಜ್ಞೆ ಮಾಲೀಕ ಹಾಗೂ ನೌಕರರ ಮಧ್ಯೆ ಅಸಮಾನತೆಯನ್ನು ಕಲ್ಪಿಸಿದೆ. ಅವರ ಆಪಾದನೆ ಎಂದರೆ ಈ ತಾಂತ್ರಿಕ ಸಿಬ್ಬಂದಿ ವಿಶೇಷಾಜ್ಞೆಯ ಅಡಿಯಲ್ಲಿ ಮಾಲೀಕರು ನೌಕರರನ್ನು ತೆಗೆದುಹಾಕಲು ಆಸ್ಪದವಿದೆ; ಆದರೆ ನೌಕರರು ತಮ್ಮ ರಾಜೀನಾಮೆ ನೀಡಲು ಅವಕಾಶ ನೀಡಿಲ್ಲ. ಮಾನ್ಯರೆ, ವಿಶೇಷಾಜ್ಞೆಯನ್ನು ಪರಿಶೀಲಿಸಿದರೆ ನಿಜವಾಗಿ ಕಾಣಬರುವ ಸಂಗತಿ ಎಂದರೆ, ನೌಕರರು ತಾವು ರಾಜೀನಾಮೆ ನೀಡಬೇಕಾದಲ್ಲಿ, ಮಾಲೀಕರ ಅಪ್ಪಣೆ ಪಡೆಯಬೇಕೆಂದು ಹೇಳಿಲ್ಲ. ವಿಶೇಷಾಜ್ಞೆಯಲ್ಲಿ ಹೇಳಿರುವುದೇನೆಂದರೆ, ನೌಕರರು, ನ್ಯಾಯಮಂಡಳಿಯ ಪರವಾನಗಿ ಪಡೆಯಬೇಕು. ಈ ಅಂಶದ ಬಗೆಗೆ ಬಹುಶಃ ಶ್ರೀ ಜೋಷಿ ಅವರ ಬಳಿ ಇರುವ ಮಾಹಿತಿ ತಪ್ಪಾಗಿರಬಹುದು. ತರುವಾಯ, ಮಾನ್ಯರೆ, ನೌಕರರನ್ನು ತೆಗೆದುಕಾಕುವಲ್ಲಿ ಮಾಲೀಕರು ನ್ಯಾಯಾಧಿಕರಣದಿಂದ ಪರವಾನಗಿ ಪಡೆಯಲೇ ಬೇಕು. ಇದಕ್ಕೆ ಇರಬಹುದಾದ ಒಂದೇ ಒಂದು ಅಪವಾದ ಎಂದರೆ ನೌಕರರ

ದುರ್ನಡತೆ, ಅಶಿಸ್ತು ನಡತೆಗಳ ಸಂದರ್ಭದಲ್ಲಿ ಮಾಲೀಕರು ನ್ಯಾಯಾಧಿಕರಣ ಪರವಾನಗಿ ಪಡೆಯದೇ ಅವರನ್ನು ಕೆಲಸದಿಂದ ಕಿತ್ತೆಸೆಯಬಹುದು.

ಮಾನ್ಯರೆ, ನನಗೆ ತಿಳಿದಂತೆ, ಈ ಅಪವಾದದಡಿಯಲ್ಲಿ ಮಾಲೀಕರು ಅಶಿಸ್ತು ವರ್ತನೆ ಹಾಗೂ ಅವಿಧೇಯ ನೌಕರರನ್ನು ತೆಗೆದುಹಾಕುವುದು ಸೂಕ್ತ ಮತ್ತು ಈ ದಿಶೆಯಲ್ಲಿ ಟೀಕೆ ಮಾಡುವುದು ಸರಿ ಅಲ್ಲ.

**ಶ್ರೀ ಎನ್.ಎಮ್. ಜೋಷಿ :** ಅದನ್ನು ಯಾರು ನಿರ್ಣಯಿಸಬೇಕು ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ದಿಶೆಯಲ್ಲಿ ನ್ಯಾಯಾಧಿಕರಣ ಕಾರ್ಯ ಪ್ರವೃತ್ತವಾಗದೇ ಹೋದ ಸಮಯಗಳಲ್ಲಿ ಹೇಗೆ ಮತ್ತು ಯಾರು ನಿರ್ಣಯ ತೆಗೆದುಕೊಳ್ಳುವರು ಎಂಬ ಸಂಗತಿಯನ್ನು ಶ್ರೀ ಜೋಷಿ ಹೇಳಬಲ್ಲರೆ? ನಮ್ಮ ಉದ್ದಿಮೆಗಳ ಸಂಘಟನೆಯ ಅಡಿಯಲ್ಲಿ, ಸರಿಯಾಗಿಯೋ ಅಥವಾ ತಪ್ಪಾಗಿಯೋ ಮಾಲೀಕರೇ ಈ ನಿರ್ಣಯ ತೆಗೆದುಕೊಳ್ಳುತ್ತಾರೆ. ಅವರಿಗೆ ಬೇಡವಾದ ನೌಕರನನ್ನು ಸೇವೆಯಿಂದ ವಜಾ ಮಾಡುವ ಅಧಿಕಾರ ಹೊಂದಿದ್ದಾರೆ. ಆದರೆ, ಈ ದಿಶೆಯಲ್ಲಿ ಒಂದು ಅಂಶವನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಅದೇನೆಂದರೆ, ಈ ವಿಶೇಷ ಆಜ್ಞೆಯ ದುರುಪಯೋಗವಾಗದಂತೆ ಎರಡು ಪ್ರಮುಖ ತಿದ್ದುಪಡಿಗಳನ್ನು ಮಾಡಲಾಗಿದೆ. ಮೊದಲನೆಯದಾಗಿ, ವಿಶೇಷತಃ ಶ್ರೀ ಜೋಷಿ ಅವರ ಆಗ್ರಹದ ಮೇರೆಗೆ, ನ್ಯಾಯಮಂಡಳಿಗೆ ಒಂದು ಸಲಹಾ ಸಮಿತಿಯನ್ನು ನೇಮಿಸಿದೆ. ಈ ವಿಧವಾದ ಸಲಹಾ ಸಮಿತಿಗಳಲ್ಲಿ ಕಾರ್ಮಿಕ ಸದಸ್ಯರೂ ನೇಮಕ ಹೊಂದಿರುವುದರಿಂದ, ಯಾವುದೇ ವಿಧವಾದ ಅನ್ಯಾಯ ಹಾಗೂ ಅಕ್ರಮ ಜರುಗಿದರೆ, ಕಾರ್ಮಿಕ ಸದಸ್ಯರು ಈ ಸಂಗತಿಯುನ್ನು ನ್ಯಾಯಾಧಿಕರಣದ ಮುಂದೆ ತಂದು ಸರಿಪಡಿಸಲು ಅವಕಾಶವಿದೆ.

ಎರಡನೆಯ ಹಾಗೂ ಪ್ರಮುಖವಾದ ಹೆಜ್ಜೆ ಎಂದರೆ, ಈಗ ನಾವು ಒಂದು ಆಜ್ಞೆಯನ್ನು ಹೊರಡಿಸಿದ್ದು, ಅದರ ಅನ್ವಯ ನ್ಯಾಯಾಧಿಕರಣದ ಅಧ್ಯಕ್ಷರು, ಯಾವುದೇ ನೌಕರನಿಗೆ ರಾಜೀನಾಮೆ ನೀಡಲು ಪರವಾನಗಿ ನಿರಾಕರಿಸಿದಾಗ, ಅದರ ಕಾರಣಗಳನ್ನು ಲಿಖಿತ ದಾಖಲೆ ಮೂಲಕ ತಿಳಿಸಬೇಕು ಎಂದಿದೆ. ನಾವು ಈ ಅಂಶವನ್ನು ಅಪರಾಧ ಸಂಹಿತೆಯಿಂದ ಹೆಕ್ಕಿಕೊಂಡಿದ್ದೇವೆ. ಇದರಿಂದಾಗಿ, ಅಧ್ಯಕ್ಷರು ಪರವಾನಗಿ ನಿರಾಕರಿಸಿದ ಕಾರಣಗಳು ಸರ್ಕಾರದ ಗಮನಕ್ಕೆ ಅನಿವಾರ್ಯವಾಗಿ ಬರಲೇಬೇಕಾಗುತ್ತದೆ.

ಮಾನ್ಯರೆ, ಜೋಷಿ ಅವರು ಮುಂದುವರಿದು, ಕಲ್ಲಿದ್ದಲಿನ ಗಣಿಗಳ ಪರಿಸ್ಥಿತಿಯು ತೃಪ್ತಿಕರವಾಗಿಲ್ಲ ಎಂದು ಹೇಳಿದ್ದಾರೆ. ನಾನು ಅವರ ಹೇಳಿಕೆಯನ್ನು ಅನುಮೋದಿಸುವೆ. ಆದರೆ ಈ ದಿಶೆಯಲ್ಲಿ ಕಲ್ಲಿದ್ದಲು ಗಣಿಗಳ ಸ್ಥಿತಿಗತಿಗಳನ್ನು ಸುಧಾರಿಸಲು ಅನೇಕ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇಂದು ನಮ್ಮ ಕಲ್ಲಿದ್ದಲು ಗಣಿಗಳು ಎರಡು ವಿಧಗಳಲ್ಲಿ ಕಾರ್ಯ ಮಾಡುತ್ತಿವೆ; ಸ್ಥಳೀಯ ಕೂಲಿಕಾರರು – ಪರಸ್ಥಳದ ಕೂಲಿಕಾರರು – ಪ್ರಮುಖವಾಗಿ ಉತ್ತರ ಪ್ರದೇಶದ ಗೋರಖಪುರದವರು. ಈ ದಿಶೆಯಲ್ಲಿ ಕೂಲಿಯ ಹಲವು ಅಂಕಿ ಸಂಖ್ಯೆಗಳನ್ನು ಸದನದ ಅವಗಾಹನೆಗೆ ತರಲು ಇಚ್ಛಿಸುವೆ. ಗೋರಖಪುರದ ಕೂಲಿಕಾರನು ದಿನಕ್ಕೆ ೧೨ ಆಣೆ ಮೂಲವೇತನ ಅಥವಾ ಕೂಲಿ ಪಡೆಯುತ್ತಾನೆ. ಇದರೊಡನೆ ಅವನಿಗೆ ಉತ್ಪಾದನೆಯ ಬೋನಸ್ ಎಂದು ನಾಲ್ಕಾಣೆಯನ್ನು ನೀಡಲಾಗುತ್ತದೆ, ಅಲ್ಲದೆ ಭೂಮಿಯ ಅಡಿಯಲ್ಲಿ ಕಾರ್ಯ ಮಾಡುವುದರಿಂದ ಅಧಿಕ ನಾಲ್ಕಾಣೆಯನ್ನು ನೀಡಲಾಗಿದೆ. ಒಂದು ದಿನದ ಊಟದ ವೆಚ್ಚ ೧೪ ಆಣೆ ಎಂದು ತಿಳಿದು ಬಂದಿದೆ.

**ಶ್ರೀಮತಿ ರೇಣುಕಾ ರೇ (ಅಧಿಕಾರೇತರ ನಾಮಕರಣ ಸದಸ್ಯೆ)** : ಮಾನ್ಯರೆ, ಆಜ್ಞೆಯ ಅಂಶದಂತೆ, ಮಾನ್ಯ ಸದಸ್ಯರು ಈಗಾಗಲೇ ೨೫ ನಿಮಿಷ ಮಾತನಾಡಿದ್ದಾರೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಮಾನ್ಯ ಸದಸ್ಯರಿಗೆ ೨೦ ನಿಮಿಷಗಳಿಗಿಂತ ಹೆಚ್ಚಿನ ಅವಕಾಶವನ್ನು ನೀಡಬಹುದು.

**ಶ್ರೀ ಎನ್. ಎಮ್. ಜೋಷಿ** : ಕಾನೂನಿನಂತೆ ಕೇವಲ ೨೦ ನಿಮಿಷಗಳು.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಅವಶ್ಯವೆನಿಸಿದಾಗ ೨೦ ನಿಮಿಷಗಳಿಗಿಂತ ಹೆಚ್ಚು ಅವಕಾಶ ನೀಡಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ನಾನು ಈಗಾಗಲೇ ಹೇಳಿದಂತೆ ಗೋರಖಪುರ ಕೂಲಿಯವರು ಪ್ರತಿದಿನ ೧೪ ಆಣೆಯನ್ನು ಊಟದ ಬಾಬ್ತಿನಲ್ಲಿ ಪಡೆಯುತ್ತಾರೆ. ಅಲ್ಲದೆ ಉಚಿತ ವಸತಿ ಹಾಗೂ ವೈದ್ಯಕೀಯ ಸೌಕರ್ಯಗಳನ್ನು ನೀಡಲಾಗುತ್ತದೆ.

ಬೇರೆ ಗಣಿಗಳ ಕೂಲಿಕಾರರ ಬಗೆಗೆ ಹೇಳುವುದಾದರೆ ಅವರ ಕೂಲಿ ವಿವರಗಳು ಹೀಗಿವೆ. ಅವರ ಕೂಲಿಯಲ್ಲಿ ಶೇಕಡಾ ೫೦ರ ಹೆಚ್ಚಳವಾಗಿದೆ. ಯುದ್ಧದ ಪೂರ್ವದಲ್ಲಿ ಭೂಮಿಯ ಮೇಲೆ ಕಾರ್ಯಮಾಡುವವರ ಕೂಲಿ ೮ ಆಣೆ ಆದರೆ, ಭೂಮಿ ಅಡಿಯಲ್ಲಿಯ ಕೂಲಿ ಮಾಡುವವರಿಗೆ ೧೪ ಆಣೆ ಕೂಲಿ ದೊರೆಯುತ್ತಿತ್ತು. ಇದಲ್ಲದೆ ಕೂಲಿಯವರು ಗಂಡಸರಿರಲಿ ಅಥವಾ ಹೆಣ್ಣಾಳೇ ಇರಲಿ ಅವರಿಗೆ ಪಡಿತರ ನೀಡಲಾಗುತ್ತಿತ್ತು. ಸ್ಥಳೀಯ ಗಣಿ ಕೂಲಿಯವರಿಗೆ ತಲಾ ೪ ಸೇರು ಆಹಾರ ಧಾನ್ಯಗಳನ್ನು, ನಿಯಂತ್ರಿತ ದರದಲ್ಲಿ ನೀಡಲಾಗುತ್ತಿತ್ತು. ೪ ಸೇರು ಧಾನ್ಯ ವಯಸ್ಕರಿಗೂ(೨ ರಿಂದ ೧೨ರ ವರ್ಷದ), ಅವಲಂಬಿತ ಮಕ್ಕಳಿಗೆ ೨ ಸೇರು. ಇದಲ್ಲದೆ ಅವರ ಪ್ರಮಾಣದ ೧/೬ ಸೇರು ಬೇಳೆಕಾಳು ಹಾಗೂ ಬೇಳೆಯನ್ನು, ರೂಪಾಯಿಗೆ ೬ ಸೇರಿನಂತೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿತ್ತು. ಅಲ್ಲದೆ ಪ್ರತಿಯೊಬ್ಬ ಕಾರ್ಮಿಕನಿಗೂ ನಗದು ಭತ್ಯೆಯನ್ನು ಹಾಜರಿದ್ದ ದಿನ ಕೊಡಲಾಗುತ್ತಿತ್ತು. ಆಶ್ರಿತರಿಲ್ಲದ ಕೂಲಿಕಾರನಿಗೆ ದಿನಕ್ಕೆ ಎರಡಾಣೆ, ಆಶ್ರಿತರಿದ್ದ ಕೂಲಿಕಾರನಿಗೆ ದಿನಕ್ಕೆ ಮೂರಾಣೆ ನಗದು ಭತ್ಯೆ ದೊರೆಯುತ್ತಿತ್ತು. ಒಬ್ಬ ವಯಸ್ಕ ಆಶ್ರಿತನಿದ್ದು ಒಂದು ಮಗುವಿದ್ದರೆ ದಿನಕ್ಕೆ ೫ ಆಣೆ ನೀಡಲಾಗುತ್ತಿತ್ತು.

**ಶ್ರೀ ಪ್ರಕಾಶ** : ಮಾನ್ಯರೆ, ತಮ್ಮ ಆಜ್ಞೆಯ ಮೇರೆಗೆ, ನನಗೆ ಈವರೆಗೆ ತಿಳಿದಿರುವಂತೆ, ಸರ್ಕಾರದ ಸದಸ್ಯರು ಕೇವಲ ೨೦ ನಿಮಿಷಗಳ ಅವಧಿ ಮಾತನಾಡಬಹುದು ಎಂದು ತಾವೇ ಈಗ ಹೇಳಿದ್ದು, ಆದರೆ ಈಗ ಮಾತನಾಡುವವರ ಬಗೆಗೆ ಹೇಳಬಹುದಾದರೆ, ಈ ವಿಷಯ ಹಣಕಾಸಿನ ಸರಕಾರಿ ಸದಸ್ಯರಿಗೆ ಸೇರಿದ್ದು, ಕಾರ್ಮಿಕ ಸದಸ್ಯರ ನಿಲುವಳಿ ಇದಲ್ಲ ಎಂದು ಹೇಳಬಯಸುವೆ.

**ಶ್ರೀ ಸ್ವಾಮಿ ವೆಂಕಟಾಚಲಂ ಸೆಟ್ಟಿ (ಮದರಾಸಿನ** – ಭಾರತೀಯ ವಾಣಿಜ್ಯ) : ಮಾನ್ಯರೆ, ನಾನು ಈಗ ನನ್ನ ಪ್ರಶ್ನೆಯನ್ನು ಮಂಡಿಸುವೆ.

**ಅನೇಕ ಮಾನ್ಯ ಸದಸ್ಯರು** : ಪ್ರಶ್ನೆಯನ್ನು ಮಂಡಿಸಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಈ ವಿಧವಾಗಿ ನನಗೆ ತೊಂದರೆ ನೀಡಬಾರದು.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಶಿಸ್ತು–ಶಿಸ್ತು. ಭಾಷಣ ಕೊನೆಗೊಳಿಸುವ ನಿಲುವಳಿಯನ್ನು, ಭಾಷಣ ಮುಗಿದ ನಂತರವೇ ಮಂಡಿಸಬೇಕು. ನಾನು ವಿರೋಧ ಪಕ್ಷದವರ ಸಲುವಾಗಿ ಮಾಡಬೇಕಾದುದನ್ನೆಲ್ಲಾ ಮಾಡಿರುವೆ. ಮುಂದಿನ ನಿಲುವಳಿಯ ಬಗೆಗೆ ನನ್ನ ಪಾತ್ರವೇನೂ ಇಲ್ಲ.

**ಶ್ರೀ ಅಬ್ದುಲ್ ಖಯೂಮ್** : ಮಾನ್ಯರೆ, ತಮ್ಮ ಅಪ್ಪಣೆ ಮೇರೆಗೆ, ಸರಕಾರಿ ಸದಸ್ಯರು ೨೦ ಅಥವಾ ಹೆಚ್ಚು ನಿಮಿಷಗಳ ಅವಧಿಗೆ ಮಾತನಾಡಬಹುದು. ಆದರೆ ಅದು ಕೇವಲ ಕಾಲಹರಣವಾಗಿರಬಾರದಲ್ಲವೇ? ಅಥವಾ ಸದಸ್ಯರಿಗೆ ನೀಡಬಹುದಾದ ಅವಕಾಶದ ಅವಧಿಯನ್ನು ಪೀಠ ನಿರ್ಧರಿಸಬಹುದಲ್ಲವೇ? ಇದನ್ನು

ಬಿಟ್ಟು ಸರ್ಕಾರಿ ಸದಸ್ಯರು ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಸಾಮಾನ್ಯವಾಗಿ ಸದಸ್ಯರು ಮಾತನಾಡುತ್ತಿರುವಾಗ ಮುಕ್ತಾಯ ಕೋರಿ ನಿಲುವಳಿಯನ್ನು ಮಂಡಿಸುವುದು ಉತ್ತಮವಲ್ಲ. ಆದರೆ ಈಗ ಮಾನ್ಯ ಸದಸ್ಯರು ತಮ್ಮ ಆಸನದಿಂದ ಮಾತನಾಡುವುದನ್ನು, ಗೊಂದಲದ ಕಾರಣದಿಂದ ನಿಲ್ಲಿಸಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಶ್ರೀ ಜೋಷಿಯರ ಹೇಳಿಕೆಯಂತೆ ಕಾರ್ಮಿಕ ಇಲಾಖೆಯಲ್ಲಿ ಕಡಿಮೆ ನೌಕರರಿದ್ದಾರೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಜೋಷಿಯವರು ಈ ವಿಧವಾದ ಹೇಳಿಕೆಯನ್ನು ಹೇಗೆ ನೀಡಿದರು? ಏಕೆಂದರೆ ನನಗೆ ತಿಳಿದಂತೆ ಈಚಿನ ದಿನಗಳಲ್ಲಿ ಇಲಾಖೆಯ ತುಂಬಾ ನೇಮಕಾತಿಗಳಾಗಿದ್ದು ಈ ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಗಣಿ ಇಲಾಖೆಗೆ ಸೇರಿದಂತೆ ಕಲ್ಲಿದ್ದಲು ಗಣಿ ಕಲ್ಯಾಣ ಸಮಿತಿಗೆ ಓರ್ವ ಮುಖ್ಯ ಎಂಜಿನಿಯರ್‌ನನ್ನು ನೇಮಿಸಲಾಗಿದೆ. ಅವರ ಅಧೀನದಲ್ಲಿ ಒಬ್ಬ ಆಡಳಿತಾಧಿಕಾರಿ ಹಾಗೂ ಅವರ ಅಧೀನದಲ್ಲಿ ಇಬ್ಬರು ಇನ್ಸ್‌ಪೆಕ್ಟರರು, ಅವರಲ್ಲಿ ಒಬ್ಬರು ಮಹಿಳಾ ಇನ್ಸ್‌ಪೆಕ್ಟರರು. ಇದಲ್ಲದೆ, ಮಾನ್ಯರೆ, ಕುಶಲರಲ್ಲದ ಕಾರ್ಮಿಕರ ಸರಬರಾಜಿಗೆಂದೇ ಒಬ್ಬ ನಿರ್ದೇಶಕರಿದ್ದು ಅವರ ಅಧೀನದಲ್ಲಿ ನಾಲ್ಕು ಸಹಾಯಕ ಹಾಗೂ ಓರ್ವ ಉಪನಿರ್ದೇಶಕರು ಇದ್ದಾರೆ(ಈ ಸಮಯದಲ್ಲಿ ವಿಪರೀತ ಕೋಲಾಹಲ ಹಾಗೂ ಮೇಜುಗಳನ್ನು ಗುದ್ದುವ ಶಬ್ದ ವಿರೋಧ ಪಕ್ಷದಿಂದ).

**ಶ್ರೀ ಅಬ್ದುಲ್ ಖಯೂಮ್** : ತಮ್ಮ ಬೇಡಿಕೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುವುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮುಖ್ಯ ಇನ್ಸ್‌ಪೆಕ್ಟರ್, ಗಣಿ ಇಲಾಖೆ, ಇವರ ಅಧೀನದಲ್ಲಿ ೨೦ ಅಧಿಕಾರಿಗಳಿದ್ದಾರೆ. ಇದಲ್ಲದೆ ನಾವು ಈಗ ಕಾರ್ಮಿಕ ಆಯುಕ್ತರನ್ನೂ ಕೇಂದ್ರದಲ್ಲಿ ನೇಮಿಸಿದ್ದೇವೆ. ಅವರ ಅಧೀನದಲ್ಲಿ ಮೂವರು ಉಪಕಾರ್ಮಿಕ ಆಯುಕ್ತರು ಎಲ್ಲಾ ಕಲ್ಯಾಣ ಕಾರ್ಯಗಳನ್ನೂ ನಡೆಸಿಕೊಂಡು ಹೋಗಲಿದ್ದಾರೆ. ತರುವಾಯ, ಶ್ರೀ ಜೋಷಿ ಅವರು ಇಲಾಖೆಯು ಯಾವಾಗಲೂ ಸಮಯಕ್ಕೆ ಸರಿಯಾಗಿ ಕಾರ್ಯಮಾಡದೆ ಹಿಂದುಳಿದಿದೆ ಎಂದಿದ್ದಾರೆ. ಈ ದಿಶೆಯಲ್ಲಿ ನಾನು ಹೇಳುವುದೇನೆಂದರೆ, ನಾವು ಅಂದರೆ ಕಾರ್ಮಿಕ ಇಲಾಖೆಯವರು ಕಾರ್ಯ ಮಾಡುತ್ತಿರುವ ಈ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೆಂದೇ ಹೇಳಬೇಕಾಗಿದೆ. ಏಕೆಂದರೆ ನಾವು ಪ್ರಾಂತೀಯ ಸರ್ಕಾರಗಳೊಡನೆ ಹಾಗೂ ಕಾರ್ಮಿಕರ ಸರಬರಾಜು ಸಂಘಟನೆಗಳೊಂದಿಗೆ ಸಮಾಲೋಚನೆ ಮಾಡಬೇಕು. ಅಂತೆಯೇ ನೌಕರರ ಸಂಗಡ ಕೂಡ ಸಮಾಲೋಚನೆ ಮಾಡಬೇಕಾದುದರಿಂದ ಸಮಯ ಹಿಡಿಯುತ್ತದೆ. ಹೀಗಾಗಿ ಜೋಷಿ ಅವರ ಆಪಾದನೆಯಲ್ಲಿ ಏನೂ ಹುರುಳಿಲ್ಲವೆಂದೇ ಭಾವಿಸಿದ್ದೇನೆ.

**ಶ್ರೀ ಎನ್.ಎಮ್. ಜೋಷಿ** : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಕ್ರಿಯಾಲೋಪದ ಮೂಲಕ ತಿಳಿಯಿಸುವುದೇನೆಂದರೆ, ಸರ್ಕಾರಿ ಸದಸ್ಯರು ಎಷ್ಟು ಅವಧಿಯವರೆಗೆ ಮಾತನಾಡಬಹುದು ಎಂದು ತಮ್ಮ ಆದೇಶ? ಈ ವಿಷಯದಲ್ಲಿ ತಮ್ಮ ನಿರ್ಣಯ ತಿಳಿಯಬಯಸುತ್ತೇನೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ನನಗೆ ತೋರಿದಂತೆ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಿದ್ದಾರೆ.

**ಶ್ರೀ ಎನ್.ಎಮ್. ಜೋಷಿ** : ಸದನದ ಸಮಯ ಉಳಿಸಲೆಂದೇ ನಾನು ನನ್ನ ಖೋತಾ ನಿರ್ಣಯವನ್ನು ವಾಪಸು ಪಡೆಯುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** : ಮಾನ್ಯ ಸದಸ್ಯರು ಈ ವಿಷಯವನ್ನು ನನಗೆ ಮೊದಲೇ ತಿಳಿಸಿದ್ದರೆ ನಾನು ಶ್ರಮವಹಿಸಿ ಮಾತನಾಡುತ್ತಿರಲಿಲ್ಲ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್) :** ಶ್ರೀ ಜೋಷಿ ಅವರು ತಮಗೆ ತಿಳಿಸಲೇಬೇಕೆಂಬ ಯಾವ ಕಡ್ಡಾಯವೂ ಇಲ್ಲ.

ಸದನದ ಸಮ್ಮತಿಯಿಂದ ಖೋತಾ ನಿರ್ಣಯವನ್ನು ವಾಪಸು ಪಡೆಯಲಾಗಿದೆ.

## ೪೩
## ಗಣಿಗಳ ಒಳಗೆ ಸ್ತ್ರೀಯರ ನೇಮಕಾತಿಯನ್ನು ನಿಷೇಧಿಸುವ ಕಾನೂನನ್ನು ಕೂಡಲೇ ಜಾರಿಗೊಳಿಸುವ ಆವಶ್ಯಕತೆ*

**ಶ್ರೀಮತಿ ರೇಣುಕಾ ರೇ :** ಮಾನ್ಯರೆ, ನಾನು ಈ ಮಸೂದೆಯನ್ನು ಮಂಡಿಸುವೆ :

**"**ಕಾರ್ಮಿಕ ಇಲಾಖೆಯ ಬೇಡಿಕೆಯಲ್ಲಿ ರೂ ೧೦೦ರ ಖೋತಾ**"**.

ಮಾನ್ಯರೆ, ಆಗಸ್ಟ್ ೧೯೪೩ರಿಂದ ಅದೇ ವರ್ಷದ ಡಿಸೆಂಬರ್ ವರೆಗಿನ ಅವಧಿಯಲ್ಲಿ, ಸ್ತ್ರೀಯರನ್ನು ಭೂಮಿ ಅಡಿಯಲ್ಲಿಯ ಗಣಿಗಳಲ್ಲಿ ಕಾರ್ಯಕ್ಕೆ ನೇಮಿಸುವ ನಿರ್ಬಂಧಾಜ್ಞೆಯನ್ನು ರದ್ದುಗೊಳಿಸಿದ್ದಕ್ಕಾಗಿ, ದೇಶಾದ್ಯಂತ ವಿರೋಧ ವ್ಯಕ್ತಪಡಿಸಲಾಯಿತು. ಈ ದಿಶೆಯಲ್ಲಿ ಭಾರತ ಸರಕಾರವು ಅಂತಾರಾಷ್ಟ್ರೀಯ ವಾಗ್ದಾನವನ್ನು ಮುರಿದುಹಾಕಿ ವಿಶ್ವದ ಅಭಿಪ್ರಾಯಕ್ಕೆ ಧಕ್ಕೆ ಉಂಟುಮಾಡಿದೆ.

ಅಖಿಲ ಭಾರತ ಸ್ತ್ರೀ ಸಮ್ಮೇಳನದಲ್ಲಿ, ಒಂದು ವರ್ಷದ ಹಿಂದೆಯೇ ಅನುಮೋದಿಸಿದ ಗೊತ್ತುವಳಿಯ ಕೋರಿಕೆಯಂತೆ, ನಾನು ಸದನದಲ್ಲಿ ನಿಲುಗಡೆ ನಿಲುವಳಿ ಸೂಚನೆಯನ್ನು ಮಂಡಿಸಿದೆ. ಹಾಗೂ ಸ್ತ್ರೀಯರ ನೇಮಕಾತಿಯನ್ನು ಕೂಡಲೇ ಬಹಿಷ್ಕರಿಸುವ ಆಜ್ಞೆಯನ್ನು ಪುನಃ ಜಾರಿಗೊಳಿಸಬೇಕೆಂದೂ ಕೋರಿದೆ. ನನ್ನ ಮಾನ್ಯ ಮಿತ್ರರಾದ ಶ್ರೀಮತಿ ಸುಬ್ಬರಾಯನ್ ಅವರು ಕೂಡ, ಮುಂಗಡ ಪತ್ರ ಅಧಿವೇಶನದಲ್ಲಿ ಈ ಕಡಿತ ನಿಲುವಳಿಯನ್ನು ಬೆಂಬಲಿಸಿ ಮಾತನಾಡಿದರು. ಆಗ ನಮ್ಮ ಮಾನ್ಯ ಕಾರ್ಮಿಕ ಸದಸ್ಯರು, ಈ ಕ್ರಮ ಕೇವಲ ತಾತ್ಪೂರ್ತಿಕವಾದದ್ದು ಹಾಗೂ ಸುಗ್ಗಿಯ ದಿನಗಳಲ್ಲಿಯ ಕಾರ್ಮಿಕರ ಕೊರತೆಯಿಂದಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು ಮಾಡಿದೆ ಎಂದಿದ್ದರು. ಈ ಮಧ್ಯೆ ಕಾರ್ಮಿಕರ ಕೊರತೆಯನ್ನು ನಿವಾರಿಸುವ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಅಲ್ಪಾವಧಿಯಲ್ಲಿಯೇ ಮತ್ತೆ ಜಾರಿಯಲ್ಲಿ ತರಲಾಗುವುದು ಎಂದಿದ್ದರು.

ಮಾನ್ಯರೆ, ಕೇವಲ ಅಲ್ಪಾವಧಿಗಾಗಿ ನಾವು ಈ ಎಲ್ಲಾ ರಂಪಾಟವನ್ನು ಮಾಡುತ್ತಿರುವೆವು ಎಂಬ ಆಪಾದನೆಗೆ ಕೂಡ ನಮ್ಮನ್ನು ಗುರಿಮಾಡಲಾಯಿತು. ಮಾನ್ಯ ಸದಸ್ಯರು ಹೇಳಿದಂತೆ ಒಂದು ವರ್ಷದ ಅವಧಿ ಸಂದುಹೋದರೂ ಸರ್ಕಾರದ ನಿಲವು ಈ ದಿಶೆಯಲ್ಲಿ ಬದಲಾಗದೇ ಬಲವಾಗುತ್ತಿದೆ. ಗೌರವಾನ್ವಿತ ಕಾರ್ಮಿಕ ಸದಸ್ಯರ ಹೇಳಿಕೆಯಂತೆ ಅವರು ಬಹಿಷ್ಕಾರವನ್ನು ಪುನಃ ಹೇರಲು ಸಿದ್ಧರಿಲ್ಲವೆಂದೇ ತೋರುತ್ತದೆ. ಸದನದ ಸನ್ಮಾನ್ಯ ಸದಸ್ಯರು ಈ ಸಮಯದಲ್ಲಿ ಗಮನಿಸಬೇಕಾದುದೆಂದರೆ, ಈ ಕ್ರಮದಲ್ಲಿ ಅಡಕವಾಗಿರುವ ಕ್ರೂರ, ನಿಷ್ಕರುಣ ಬಂಡವಾಳ ಮನೋಪ್ರವೃತ್ತಿ ಅದೂ ಸರಕಾರದಿಂದ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೨, ೧೩ ಮಾರ್ಚ್, ೧೯೪೫, ಪು. ೧೪೬೩–೬೬.

(ಈ ಸಮಯದಲ್ಲಿ **ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುಲ್ ರಹೀಮ್)** ಪೀಠ ಅಲಂಕರಿಸಿದರು)

ನಮಗೆ ದಿಗ್ಭ್ರಮೆ ಉಂಟುಮಾಡಿರುವ ಸಂಗತಿ ಎಂದರೆ, ಯಾರು ಸಾಮಾನ್ಯ ಜನತೆಯ ಹಿತಾಸಕ್ತಿಯನ್ನು ಕಾಪಾಡಬೇಕೋ ಅವರೇ ಈ ವಿಧವಾದ ಶೋಷಣೆಯನ್ನು ಮುಂದುವರಿಸುವರೆಂದು ಕನಸು ಮನಸ್ಸಿನಲ್ಲಿಯೂ ನಾವು ಎಣಿಸಿರಲಿಲ್ಲ.

ಮಾನ್ಯರೆ, ನಾನು ಈ ದಿಶೆಯಲ್ಲಿ ಸದನದ ಎಲ್ಲಾ ಸದಸ್ಯರ ಸಹಕಾರ ಕೋರುವೆ. ಸರಕಾರ ಹಾಗೂ ವಿರೋಧ ಪಕ್ಷ ಹಾಗೂ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಭೇದಭಾವಗಳನ್ನು ಬದಿಗೊತ್ತಿ ಬೆಂಬಲಿಸಬೇಕು. ಏಕೆಂದರೆ ಈ ನಮ್ಮ ಬೇಡಿಕೆಯು ಸಾಧುವಾಗಿದ್ದು, ಅತ್ಯಂತ ಪ್ರಾಥಮಿಕ ಮಾನವೀಯತೆಯ ಮರ್ಯಾದೆಯ ಸೂತ್ರದ ವಿಷಯವಾಗಿದೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಖೋತಾ ನಿರ್ಣಯ ಮಂಡಿಸಲಾಗಿದೆ. ಈ ನೂರು ರೂಪಾಯಿ ಖೋತಾ ಮಾಡಬೇಕೆಂಬ (ಕಾರ್ಮಿಕ ಇಲಾಖೆ ಬೇಡಿಕೆಯಲ್ಲಿ) ನಿರ್ಣಯ ಮಂಡಿಸಲಾಗಿದೆ.

**ಹಲವಾರು ಸದಸ್ಯರು :** ಈಗ ಪ್ರಶ್ನೆ ಎಂದರೆ...

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ನೀಡಲಾದ ಈ ಅಲ್ಪಾವಕಾಶದ ಅವಧಿಯಿಂದಾಗಿ, ಈಗ ಮಂಡಿಸಲಾದ ಖೋತಾ ನಿರ್ಣಯದ ಬಗೆಗೆ ನಾನು ಪೂರ್ಣವಾಗಿ ಮಾತನಾಡಲಾರೆ, ಆದರೂ ಒಂದು ವಿಷಯ ಹೇಳುವೆ. ಕಳೆದ ಬಾರಿ ಈ ವಿಷಯವನ್ನು ನಿಲುಗಡೆ ನಿಲುವಳಿಯ ಮೂಲಕ ಪ್ರಸ್ತಾವಿಸಿದಾಗ ಭಾರತ ಸರ್ಕಾರವು ಈ ವಿಧವಾದ ನಿರ್ಧಾರ ತೆಗೆದುಕೊಂಡಿದ್ದರ ಬಗೆಗೆ ಅಸಂತೋಷದಿಂದಿದೆ ಎಂದು ತಿಳಿಸಿದ್ದೆ. ಇಂದಿಗೂ ನಾನು ಈ ದಿಶೆಯಲ್ಲಿ ಅಸಂತುಷ್ಟನಾಗಿಯೇ ಇರುವೆ. ಆದರೆ ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಈ ಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಸದನ ಇನ್ನೂ ಹಲವು ನಿಮಿಷಗಳ ಸಂಯಮ ತೋರಿದಲ್ಲಿ....

**ಹಲವಾರು ಮಾನ್ಯ ಸದಸ್ಯರು :** ಇಲ್ಲ, ಇಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ದಿಶೆಯಲ್ಲಿ ನಮ್ಮನ್ನು ಬಲವಂತ ಮಾಡಿದ ಪರಿಸ್ಥಿತಿಯ ಬಗೆಗೆ ಸದನಕ್ಕೆ ನಾನು ತಿಳಿಸುವ ಸಂಗತಿ.

ನಾನು ಪ್ರಾರಂಭದಲ್ಲಿಯೇ ಕಲ್ಲಿದ್ದಲಿನ ಪರಿಸ್ಥಿತಿ ಹೇಗಿತ್ತು ಎಂಬುದರ ಬಗ್ಗೆ ಹೇಳಲಿಚ್ಛಿಸುವೆ. ೧೯೪೧ರಲ್ಲಿ ಗಣಿಗಳಿಂದ ಎತ್ತಲಾದ ಕಲ್ಲಿದ್ದಲು ೨೯,೨೮೧,೦೦೦ ಟನ್ ಆಗಿತ್ತು. ಆದರೆ ೧೯೪೨ರಲ್ಲಿ ಅದು ೨೯,೨೨೦,೦೦೦ ಟನ್‌ಗೆ ಕುಸಿಯಿತು. ೧೯೪೩ರಲ್ಲಿ ನಾವು ಈ ಕಹಿ ನಿರ್ಣಯ ತೆಗೆದುಕೊಳ್ಳಲೇಬೇಕಾದ ವರ್ಷದಲ್ಲಿ ಕಲ್ಲಿದ್ದಲಿನ ಒಟ್ಟಾರೆ ಉತ್ಪಾದನೆಯು ೨೩,೦೫೩,೦೦೦ ಟನ್‌ಗೆ ಕುಸಿಯಿತು. ಸದನ ಗಮನಿಸಲೇಬೇಕಾದ ಸಂಗತಿ ಎಂದರೆ, ಕೇವಲ ಒಂದು ವರ್ಷದ ಅವಧಿಯಲ್ಲಿ ೬,೬೨೮,೦೦೦ ಟನ್ನುಗಳ ಕೊರತೆ ಹಾಗೂ ಕುಸಿತ. ಉದ್ದಿಮೆಗಳಲ್ಲಿ ಹಾಗೂ ಯುದ್ಧದಲ್ಲಿ ಕಲ್ಲಿದ್ದಲಿನ ಮಹತ್ವಪೂರ್ಣ ಪಾತ್ರ ಎಷ್ಟು ಅಗಾಧ ಹಾಗೂ ಅಪಾರ ಎಂಬುದನ್ನು ವಿವರಿಸಬೇಕಾಗಿಲ್ಲ. ಈ ಪರಿಸ್ಥಿತಿಯಲ್ಲಿ ಯಾವ ಸರ್ಕಾರವೇ ಆಗಲೀ ಮೂಕಪ್ರೇಕ್ಷಕನಂತೆ ಕೈಕಟ್ಟಿಕೊಂಡು ಕುಳಿತಿರಲು ಸಾಧ್ಯವೇ? ಅಂತಹ ಅನಿವಾರ್ಯ ವಸ್ತುವಾದ ಕಲ್ಲಿದ್ದಲಿನ ಉತ್ಪಾದನೆಯ ಬಗೆಗೆ ಯಾವುದಾದರೂ ಒಂದು ನಿರ್ಣಯ ತೆಗೆದುಕೊಳ್ಳಲೇಬೇಕಾದುದರಿಂದ, ಸರಕಾರ ಈ ಅಸಂತೋಷ ಕಾರ್ಯ ಕೈಗೆತ್ತಿಕೊಂಡಿತು.

ನಾನು ಸದನದ ಗಮನವನ್ನು ಸೆಳೆಯಬೇಕೆಂದಿರುವ ಮತ್ತೊಂದು ಸಂಗತಿ ಎಂದರೆ, ಈಚಿನ

ದಿನಗಳಲ್ಲಿ ತೆರೆಯಲಾದ ಗಣಿಗಳ ಸಂಖ್ಯೆ ಕುರಿತು. ೧೯೪೧ರಲ್ಲಿ ಕಾರ್ಯಾಚರಣೆಯಲ್ಲಿದ್ದ ಗಣಿಗಳ ಸಂಖ್ಯೆ ೪೪೦. ೧೯೪೨ರಲ್ಲಿ ಅವುಗಳ ಸಂಖ್ಯೆ ೬೭೦ಕ್ಕೆ ಏರಿದರೆ, ೧೯೪೩ರಲ್ಲಿ ೭೦೬ಕ್ಕೆ ಏರಿತ್ತು. ಸಾಮಾನ್ಯ ಪರಿಸ್ಥಿತಿಯಲ್ಲಿ ೧೯೪೩ರಲ್ಲಿ ಗಣಿಗಳ ಸಂಖ್ಯೆ ಏರಿಕೆಯನ್ನು ಗಮನಿಸಿದರೆ, ಉತ್ಪಾದನೆಯೂ ಹೆಚ್ಚಬೇಕು. ಸೋಜಿಗದ ಸಂಗತಿ ಎಂದರೆ ಒಂದು ಬದಿಯಲ್ಲಿ ೩೬೬ ಗಣಿಗಳು ಹೆಚ್ಚಿದ್ದರೆ ಮತ್ತೊಂದು ಬದಿಯಲ್ಲಿ ಕಲ್ಲಿದ್ದಲಿನ ಉತ್ಪಾದನೆಯು ೬,೬೨೮,೦೦೦ ಟನ್ನುಗಳಷ್ಟು ಕಡಿಮೆಯಾಗಿದೆ.

ಈಗ ಕಾರ್ಮಿಕರ ಸ್ಥಾನವನ್ನು ಪರಿಶೀಲಿಸೋಣ. ೧೯೪೧ರಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಕಾರ್ಯಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ ೨,೧೧,೬೦೧. ೧೯೪೨ರಲ್ಲಿ ೨,೦೮,೭೪೨, ೧೯೪೩ರಲ್ಲಿ ೨,೦೫,೮೨೨. ಈ ಕಾರ್ಮಿಕರ ಸಂಖ್ಯೆಯನ್ನು, ತೆರೆದಿರಬಹುದಾದ ಗಣಿಗಳ ಸಂಖ್ಯೆಗೆ ಹೋಲಿಸಿದಾಗ, ಗಣಿಗಳ ಸಂಖ್ಯೆ ಏರಿದರೂ ಕಾರ್ಮಿಕರ ಸಂಖ್ಯೆ ಕುಸಿಯುತ್ತಲೇ ಹೋಗಿರುವುದು ಆಶ್ಚರ್ಯಕರವಾಗಿದೆ. ಕಾರ್ಮಿಕರ ಸಂಖ್ಯೆ ಒಟ್ಟಾರೆ ೪,೮೭೯ ಕಡಿಮೆಯಾಗಿದೆ. ಕಥೆ ಇಲ್ಲಿಗೇ ಕೊನೆಗೊಳ್ಳುವುದಿಲ್ಲ. ಅನೇಕರಿಗೆ ಹೊಳೆಯಲಾರದ ಸಂಗತಿಗಳು ಇಲ್ಲಿ ಇವೆ. ಕಲ್ಲಿದ್ದಲು ಕತ್ತರಿಸುವವರ ಸಂಖ್ಯೆಯನ್ನು ಸದನ ಗಮನಿಸಿದಾಗ ಈ ಸಮಸ್ಯೆಯನ್ನು ಅರಿಯಲು ಸಾಧ್ಯ. ಕಲ್ಲಿದ್ದಲನ್ನು ಕಡಿಯುವವರ ಸಂಖ್ಯೆ ೫೫,೯೨ರಿಂದ ೫೧,೪೩೮ಕ್ಕೆ ೧೯೪೨ರಲ್ಲಿ ಇಳಿಯಿತು. ಆದರೆ ೧೯೪೩ರಲ್ಲಿ ೪೫,೩೦೬ಕ್ಕೆ ಕುಸಿದುಹೋಯಿತು. ಅಂದರೆ ಒಟ್ಟಾರೆ ೧೦,೩೮೫ ಎಂದಾಯಿತು. ಕಲ್ಲಿದ್ದಲು ಕಡಿಯುವವರು ಅತಿ ಅವಶ್ಯಕವಾಗಿ ಬೇಕಾದ ಕಾರ್ಮಿಕರು ಎಂದು ಸದನಕ್ಕೆ ತಿಳಿಸುವ ಆವಶ್ಯಕತೆ ಇಲ್ಲ. ಮೂಲವಾಗಿ ಈ ಉತ್ಪಾದನೆಗೆ ಅನಿವಾರ್ಯವಾಗಿ ಬೇಕಾದವರೆಂದರೆ ಕಲ್ಲಿದ್ದಲು ಕಡಿಯುವವರು, ಬೇರೆ ವಿಧವಾದ ಕಾರ್ಮಿಕರು ಎಷ್ಟೇ ಇದ್ದರೂ ಅದರಿಂದ ಪ್ರಯೋಜನವಿಲ್ಲ. ಇದು ಈ ಸಮಸ್ಯೆಯ ಮೂಲ ಸಾರಾಂಶ. ಏಕೆಂದರೆ ಅತಿ ಪ್ರಮುಖವಾದ ಕಾರ್ಮಿಕ ವರ್ಗದಲ್ಲಿಯೇ ೧೦,೩೮೫ಕ್ಕೆ ಕುಸಿದರೆ ಆಗುವ ಅಗಾಧ ಪರಿಣಾಮ ಕುರಿತು ಯೋಚಿಸಲೇಬೇಕು.

ಈ ವಿಧವಾಗಿ ಕಲ್ಲಿದ್ದಲು ಕಡಿಯುವವರ ಸಂಖ್ಯೆ ಕಡಿಮೆಯಾಗಲು ಅನೇಕ ಕಾರಣಗಳಿವೆ ಎಂಬುದನ್ನು ಸದನ ಗಮನಿಸಲೇಬೇಕು. ಈ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಗಣಿಗಳು ಹೆಚ್ಚಿದರೆ, ಇದೇ ಪ್ರದೇಶದಲ್ಲಿ ಇನ್ನೂ ಇತರ ಅನೇಕ ಉದ್ದಿಮೆಗಳು ತಲೆ ಎತ್ತಿವೆ, ಹಾಗೂ ಮಿಲಿಟರಿ ಕಾರ್ಯಾಚರಣೆಯಿಂದಾಗಿ ಹೆಚ್ಚಿನ ಕೂಲಿ ದೊರೆಯುವುದರಿಂದ ಸಹಜವಾಗಿ ಕಾರ್ಮಿಕರು ಈ ಪರಿಶ್ರಮ ಕಾರ್ಯ ತೊರೆದುಹೋಗಿದ್ದಾರೆ. ಮತ್ತೊಂದು ಪ್ರಬಲ ಕಾರಣವೆಂದರೆ, ಗಣಿಕಾರ್ಯ ಭೂಮಿ ಅಡಿಯಲ್ಲಾದರೆ, ಬೇರೆ ವಿಧವಾದ ಈ ಹೊಸ ಉದ್ದಿಮೆಗಳ ಕಾರ್ಯ ಭೂಮಿಯ ಮೇಲೆ ನಡೆಯುತ್ತವೆ, ಹಾಗೂ ಸುಲಭವಾದುದು. ಈ ಕಾರಣದಿಂದಾಗಿ ಕಾರ್ಮಿಕರು ನೂತನ ಉದ್ದಿಮೆಗಳಿಂದ ಆಕರ್ಷಿತರಾಗಿದ್ದಾರೆ. ಮತ್ತೊಂದು ಕಾರಣವೆಂದರೆ, ಕಲ್ಲಿದ್ದಲು ಕಡಿಯುವವರು, ಭೂಮಿಯ ಮೇಲೆಡೆಯಲ್ಲಿಯ ಕೆಲಸದಲ್ಲಿ ತಮ್ಮ ಹೆಂಗಸರನ್ನೂ ಕರೆದುಕೊಂಡು ಹೋಗಿ ಅವರನ್ನು ಕೂಲಿಗೆ ಹಚ್ಚುವುದರಿಂದ ಅವರ ಕುಟುಂಬದ ದುಡಿಮೆ ಹಾಗೂ ಆದಾಯ ಹೆಚ್ಚಾಗುತ್ತಿತ್ತು. ಆ ಕಾರಣದಿಂದಾಗಿ ಅವರು ಭೂಮಿಯ ಅಡಿಯಲ್ಲಿರುವ ಗಣಿಗಳಲ್ಲಿಯ ಕಾರ್ಯವನ್ನು ತೊರೆದು ಹೋದರು. ಈ ನಿಷೇಧಾಜ್ಞೆಯಿಂದಾಗಿ ಅವರು ತಮ್ಮ ಹೆಂಗಳೆಯರ ಆದಾಯವನ್ನು ಕಳೆದುಕೊಳ್ಳಬೇಕಾಗಿತ್ತು. ಈ ಒಂದು ಪರಿಸ್ಥಿತಿಯಲ್ಲಿ ಕಲ್ಲಿದ್ದಲು ಕಡಿಯುವ ಕೂಲಿಗಳು, ಬೇರೆ ಉದ್ದಿಮೆಗಳಿಂದ ಆಕರ್ಷಿತರಾದಲ್ಲಿ ಅಪರಾಧವೇನೂ ಇಲ್ಲ.

ಈಗ ನಮಗೆ ಉಳಿದಿರಬಹುದಾದ ಏಕೈಕ ಮಾರ್ಗ ಎಂದರೆ, ಭೂಮಿ ಅಡಿಯಲ್ಲಿ ಕಲ್ಲಿದ್ದಲನ್ನು ಕಡಿಯುವ ಕೂಲಿಕಾರರ ಹೆಂಡತಿಯರಿಗೆ ಅವಕಾಶ ನೀಡುವುದು. ನನಗೆ ತಿಳಿದಂತೆ ಬೇರೆ ಯಾವ

ಮಾರ್ಗದಿಂದಲೂ ನಾವು ಕೂಲಿಯವರನ್ನು ಮರಳಿ ಗಣಿ ಕೆಲಸಕ್ಕೆ ಆಕರ್ಷಿಸಲು ಸಾಧ್ಯವಿಲ್ಲದೇ ಹೋದುದರಿಂದ, ಈ ನಿಷೇಧಾಜ್ಞೆಯನ್ನು ತೆಗೆದು ಹಾಕಲೇಬೇಕಾಯಿತು. ಏಕೆಂದರೆ ಈ ಒಂದೇ ಮಾರ್ಗದಿಂದ ಅವರ ಕುಟುಂಬದ ಆದಾಯ ಹೆಚ್ಚುತ್ತದೆ. ಹಲವರ ಹೇಳಿಕೆಯಂತೆ ಕಲ್ಲಿದ್ದಲು ಕಡಿಯುವವರ ಕೂಲಿ ದರ ಹೆಚ್ಚಿಸುವುದರಿಂದ ಅವರನ್ನು ಆಕರ್ಷಿಸಬಹುದಾಗಿತ್ತು. ಆದರೆ ಇದು ಒಂದು ಇತಿಮಿತಿಯಲ್ಲಿ ಸರಿ ಎಂದು ತೋರಿದರೂ ಹಾನಿಕರವೆಂದು ಹೇಳಲೇಬೇಕಾಗಿದೆ. ನಿನ್ನೆಯ ದಿನ, ನನ್ನ ಮಿತ್ರರಾದ ಶ್ರೀ ಜೋಷಿ ಅವರು, ಇಂಗ್ಲೆಂಡಿನಲ್ಲಿ ಗಣಿ ಕೂಲಿಕಾರರಿಗೆ ಕೈತುಂಬಾ ಕೂಲಿಯನ್ನು ನೀಡಲಾಗುತ್ತದೆ ಎಂದು ಹೇಳಿದರು. ನಿಸ್ಸಂದೇಹವಾಗಿ ಅವರ ಹೇಳಿಕೆ ಸರಿಯಾಗಿದೆ, ಆದರೆ ಶ್ರೀ ಜೋಷಿಯವರಿಗೇ ತಿಳಿದಂತೆ, ಕೈ ತುಂಬಾ ಕೂಲಿ ನೀಡಿದಾಗ್ಯೂ, ಇಂಗ್ಲೆಂಡಿನ ಕಲ್ಲಿದ್ದಲಿನ ಗಣಿಗಳಲ್ಲಿ ಕೂಲಿಕಾರರ ಕೊರತೆ ಇದೆ. ಆದುದರಿಂದ, ಕೂಲಿಯ ದರದ ಏರಿಕೆ ಒಂದೇ ರಾಜೋಪಾಯವಾಗಲಾರದು.

ಆದುದರಿಂದ ನನ್ನ ತೀರ್ಮಾನದಲ್ಲಿ ಸರಿಯಾದ ಕ್ರಮವೆಂದರೆ ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ರದ್ದುಪಡಿಸುವುದು. ಅದನ್ನೇ ನಾವು ಮಾಡಿದೆವು.

ಸರ್ಕಾರದ ಈ ನಿರ್ಣಯದ ವಿರುದ್ಧ ಹೇಳಲಾದ ಮತ್ತೊಂದು ಅಂಶವೆಂದರೆ, ಇಂಗ್ಲೆಂಡಿನಲ್ಲಿ ಕಲ್ಲಿದ್ದಲ ಕೊರತೆ ಇದೆ. ಆದರೂ ಅಲ್ಲಿ ಮಹಿಳೆಯರನ್ನು ಭೂ ಅಡಿಯ ಗಣಿಗಳಲ್ಲಿ ಕಾರ್ಯ ಮಾಡದಂತೆ ನಿಷೇಧಾಜ್ಞೆ ಜಾರಿಯಲ್ಲಿದೆ. ಆದರೆ ಭಾರತದಲ್ಲಿ ಏಕೆ ಈ ನಿಷೇಧಾಜ್ಞೆಯನ್ನು ತೆಗೆದು ಹಾಕಲಾಯಿತು? ಇದು ತುಂಬಾ ಮಹತ್ವದ ಪ್ರಶ್ನೆಯಾದುದರಿಂದ, ನಾನು ಗಂಭೀರವಾಗಿ ಆಲೋಚಿಸಿಯೇ ಇದಕ್ಕೆ ಉತ್ತರ ನೀಡಬಯಸುತ್ತೇನೆ. ಮಾನ್ಯರೆ, ನನ್ನ ಉತ್ತರ ಎರಡು ಅಂಶಗಳಿಂದ ಕೂಡಿದೆ. ಮೊದಲನೆಯದಾಗಿ, ಇಂಗ್ಲೆಂಡಿನಂತೆ ವಿದೇಶಗಳಲ್ಲಿ, ಭೂ ಅಡಿಯ ಗಣಿಗಳಲ್ಲಿ ಮಹಿಳೆಯರಿಗೆ ಅವಕಾಶವಿಲ್ಲದೇ ಹೋದರೂ, ಬೇರೆ ಅನ್ಯ ಅಥವಾ ಪರ್ಯಾಯ ಮಾರ್ಗಗಳಿಂದ ಮಹಿಳೆಯರನ್ನು ಉದ್ಯೋಗದಲ್ಲಿ ತೊಡಗಿಸುವ ಅವಕಾಶಗಳಿವೆ. ಅಲ್ಲದೆ ಆ ದೇಶಗಳಲ್ಲಿ ಪುರುಷರನ್ನು ಒತ್ತಾಯಿಸಿ ಗಣಿಗಳಲ್ಲಿ ಕಾರ್ಯತೆಗೆದುಕೊಳ್ಳುತ್ತಾರೆ. ನಾನು ಕೆಲವೇ ದಿನಗಳ ಹಿಂದೆ ಓದಿದ ಒಂದು ವರದಿಯಂತೆ, ೧೯೪೧ರಲ್ಲಿ ಬೆಲ್ಜಿಯಂ ದೇಶದಲ್ಲಿ ಯುದ್ಧಕ್ಕೆಂದೇ ಆಯ್ಕೆ ಮಾಡಿಕೊಳ್ಳಲಾದ ದರ್ಜೆಯ ನೌಕರರನ್ನು ಯುದ್ಧಭೂಮಿಗೆ ಕಳಿಸದೇ ಕಲ್ಲಿದ್ದಲಿನ ಗಣಿಕಾರ್ಯಕ್ಕೆ ನೇಮಿಸಿದ್ದಾರೆ. ಈ ವಿಧವಾದ ಅಧಿಕಾರ ನಮ್ಮ ದೇಶದಲ್ಲಿ ನಮಗೆ ನೀಡಲಾಗಿಲ್ಲ ಎಂಬುದು ಸದನಕ್ಕೆ ತಿಳಿದ ವಿಷಯವೇ ಆಗಿದೆ. ಹೀಗಾಗಿ ನಾವು ಆ ಮಾರ್ಗವನ್ನು ಅನುಸರಿಸುವಂತಿಲ್ಲ.

ಮಾನ್ಯರೆ, ಈಗ ನಾನು ಇನ್ನೊಂದು ವಿಷಯದ ಬಗೆಗೆ ಹೇಳಬಯಸುತ್ತೇನೆ. ಇಂಗ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ದೇಶಗಳಲ್ಲಿ ಮಹಿಳೆಯರನ್ನು ಭೂ ಅಡಿಗಳಲ್ಲಿ ನೇಮಿಸುವ ಸಂಪ್ರದಾಯವಿಲ್ಲ. ಒಂದು ಸಮಯದಲ್ಲಿ ಅಂದರೆ ಸುಮಾರು ೬೦ ಅಥವಾ ೭೦ ವರ್ಷಗಳ ಹಿಂದೆ ಇರಬಹುದು. ಆದರೆ ಈಗ ಮಾತ್ರ ಇಲ್ಲ. ಹೀಗಾಗಿ ಸದನ ಈ ವಿಚಾರದಲ್ಲಿ ಒಂದು ವಾಸ್ತವಿಕ ನಿರ್ಣಯಕ್ಕೆ ಬರಬೇಕೆಂದು ಹಾರೈಸುತ್ತೇನೆ. ಏಕೆಂದರೆ ೧೯೩೭ರ ಅವಧಿಯವರೆಗೂ ನಮ್ಮ ಮಹಿಳೆಯರು ಭೂಮಿ ಅಡಿಯ ಗಣಿಗಳಲ್ಲಿ ಕಾರ್ಯ ಮಾಡುತ್ತಿರಲಿಲ್ಲವೇ? ಈಗ ಎಂಟು ವರ್ಷಗಳ ಹಿಂದೆ ನಮ್ಮ ಮಹಿಳೆಯರು ಗಣಿಗಳಲ್ಲಿ ಕಾರ್ಯಮಾಡುತ್ತಿರಲಿಲ್ಲವೇ? ಈ ದೇಶದಲ್ಲಿ ಯಾರಾದರೂ, ಇಂಗ್ಲೆಂಡಿನಂತೆ ನಮ್ಮ ಮಹಿಳೆಯರು ಅನೇಕ ಕಾಲದಿಂದ ಗಣಿಗಳಲ್ಲಿ ಕಾರ್ಯ ಮಾಡುತ್ತಿರಲಿಲ್ಲ ಎಂದು ಹೇಳಲು ಸಿದ್ಧರಿದ್ದಾರೆಯೆ? ಹೀಗಾಗಿ ನಾವು ನಮ್ಮ ಮಾರ್ಗದಿಂದ ಹಿಂದಕ್ಕೆ ಸರಿಯಬೇಕಾಯಿತು.

ಮಾನ್ಯ ಮಹಿಳಾ ಸದಸ್ಯೆಯು, ಈ ಖೋತಾ ನಿರ್ಣಯವನ್ನು ಮಂಡಿಸುವಾಗ ೧೯೪೩ರಲ್ಲಿಯ

ಮಹಿಳಾ ಸಭೆಯು ತೆಗೆದುಕೊಂಡ ನಿರ್ಣಯವನ್ನು ಸಂಪೂರ್ಣವಾಗಿ ಮರೆತಿರುವರೆಂದು ನನ್ನ ಅನಿಸಿಕೆ. ಈ ಸಂಗತಿಯನ್ನು ಸದನದ ಗಮನಕ್ಕಾಗಿ ವಿವರಿಸಬಯಸಿದ್ದೇನೆ. ೧೯೨೯ರಲ್ಲಿ ಭಾರತ ಸರ್ಕಾರವು, ಮಹಿಳೆಯರನ್ನು ಗಣಿಕಾರ್ಯದಿಂದ ನಿಷೇಧಿಸುವ ದಿಶೆಯಲ್ಲಿ ಹಲವಾರು ಕ್ರಮಗಳನ್ನು ಕೈಗೆತ್ತಿಕೊಂಡಿದ್ದನ್ನು ಈ ಸದನ ಜ್ಞಾಪಿಸಿಕೊಳ್ಳಬೇಕು. ಈ ಹಲವಾರು ಕ್ರಮಗಳಿಂದಾಗಿ ಸುಮಾರು ೧೯೩೭ರ ಹೊತ್ತಿಗೆ ಮಹಿಳೆಯರು ಗಣಿಕಾರ್ಯದಿಂದ ವಿಮುಕ್ತಿ ಹೊಂದುವಂತಾಯಿತು. ಈ ಸಂಗತಿಯು ಸಂಪ್ರದಾಯ ಕುರಿತು ಮಾತನಾಡಿದ ಮಹಿಳಾ ಸಭೆಗೆ ಬಹು ಮುಂಚಿತವಾಗಿಯೇ ಜಾರಿಗೊಳಿಸಲಾಗಿತ್ತು. ಈ ಕ್ರಮಕ್ಕೆ ಮಹಿಳಾ ಅಧಿವೇಶನವು ಕೈಕೊಂಡಿದ್ದ ನಿರ್ಣಯದ ಪ್ರತಿಕ್ರಿಯೆ ಏನು? ಈ ಸಂಗತಿಯ ಬಗೆಗೆ ೧೯೩೪ರ ಮಹಿಳಾ ಅಧಿವೇಶನವು ಕೈಗೊಂಡಿದ್ದ ನಿರ್ಣಯ ಪ್ರತಿ ನನ್ನ ಕೈಯಲ್ಲಿದೆ (ಶ್ರೀಮತಿ ರೇಣುಕಾ ರೇ ಅವರಿಂದ ಅಡ್ಡಿ). ದಯಮಾಡಿ ಗೊಂದಲಮಾಡಬೇಡಿ. ಅಖಿಲ ಭಾರತ ಮಹಿಳಾ ಅಧಿವೇಶನವು ಈ ವಿಷಯವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಿತು. ಆ ಸಮಿತಿಯ ವರದಿಯಲ್ಲಿಯ ಕೇವಲ ಎರಡೇ ವಾಕ್ಯಗಳನ್ನು ನಾನು ಉದ್ಧರಿಸಬಯಸುತ್ತೇನೆ. ೫೩ನೆಯ ಪುಟದಿಂದ ಈ ವರದಿ ಮೊದಲು ಅನುಕೂಲಗಳನ್ನು ನಂತರ ಅನಾನುಕೂಲಗಳನ್ನು ವಿವರಿಸಿದೆ. ಈ ಹಂತದಲ್ಲಿ ಒಂದು ವಿಷಯ ಸದನಕ್ಕೆ ಸಾದರ ಪಡಿಸುವುದೇನೆಂದರೆ, ಈಗ ಸದನದಲ್ಲಿ ಖೋತಾ ನಿರ್ಣಯ ಮಂಡಿಸಿದ ಮಹಿಳಾ ಸದಸ್ಯೆ ಈ ಉಪಸಮಿತಿಯ ಸದಸ್ಯರಾಗಿದ್ದರು. ಸಮಿತಿಯ ಹೇಳಿಕೆಯಲ್ಲಿಯ ವಾಕ್ಯ : "ಸದ್ಯ ಪರಿಸ್ಥಿತಿಗಳಲ್ಲಿ ಗಣಿಕೂಲಿಕಾರರ ಬಗೆಗೆ, ಅಂದರೆ ಮಹಿಳೆಯರನ್ನು ಕೂಲಿ ಕಾರ್ಯದಿಂದ ನಿಷೇಧಿಸುವ ಕ್ರಮ ಸರಿಯಾದುದಲ್ಲ ಎಂದು ನಮ್ಮ ಅನಿಸಿಕೆ". ಮಾನ್ಯರೆ, ಅವರು ಮುಕ್ತಾಯ ಹೇಳಿದ ವಾಕ್ಯ : "ಇಂದಿನ ಪರಿಸ್ಥಿತಿಯಲ್ಲಿ ಮಹಿಳಾ ಕೂಲಿಯವರನ್ನು ಭೂ ಅಡಿ ಗಣಿಗಳಲ್ಲಿ ಕಾರ್ಯ ಮಾಡದಂತೆ ನಿರ್ಬಂಧನೆಗಳನ್ನು ಹೇರಿದರೆ ಕೂಲಿಕಾರರ ಗೃಹ ಪರಿಸ್ಥಿತಿಯ ಮೇಲೆ ತುಂಬಾ ಕೆಟ್ಟ ಪರಿಣಾಮವಾಗಬಹುದು" ಎಂದಿದೆ.

"ಈ ದುಷ್ಪರಿಣಾಮ ಭೂ ಅಡಿ ಗಣಿಗಳ ಕಾರ್ಯದ ದುಷ್ಪರಿಣಾಮಗಳಿಗಿಂತ ಭೀಕರವಾದುದು."

(ಶೀಮತಿ ರೇಣುಕಾ ರೇ ಅವರಿಂದ ಅಡ್ಡಿ)

**ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್)** : ಮಾನ್ಯ ಸದಸ್ಯರು ಕಲಾಪಕ್ಕೆ ಅಡ್ಡಿ ತರಬಾರದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ೧೯೩೫ರಲ್ಲಿಯ ಮಹಿಳಾ ಅಧಿವೇಶನವು, ಅಂತರರಾಷ್ಟ್ರೀಯ ಸಮಾವೇಶದ ನಿರ್ಣಯವನ್ನು ತನ್ನ ಸಮ್ಮೇಳನದಲ್ಲಿ ಅಂಗೀಕರಿಸಿರುವುದು ಸತ್ಯಕ್ಕೆ ದೂರವಾದುದಲ್ಲ. ಆದರೆ ಭಾರತ ಸರಕಾರದ ಗಂಭೀರ ನಿರಾಕರಣೆಯನ್ನು ತಿಳಿದೂ ಈ ವಿಧವಾದ ನಿರ್ಣಯಕ್ಕೆ ಸಮ್ಮೇಳನ ಅನುಮೋದನೆ ನೀಡಿದ್ದು ಯೋಚಿಸಬೇಕಾದ ವಿಷಯ. ಮಾನ್ಯರೆ, ಈಗ ನಾನು ಹೇಳಬಯಸುವುದೇನೆಂದರೆ, ೧೯೩೫ರ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯ ೧೯೩೪ರ ಮಹಿಳಾ ಅಧಿವೇಶನದ ನಿರ್ಣಯಕ್ಕೆ ಭಿನ್ನವಾಗಿತ್ತು; ಬಹುಶಃ ೧೯೩೫ರ ಸಮಾವೇಶವು ಈ ನಿರ್ಣಯವನ್ನು ಸ್ವೀಕರಿಸದೇ ಹೋಗಿದ್ದರೆ, ಅಖಿಲ ಭಾರತ ಮಹಿಳಾ ಸಭೆಯು, ಭಾರತ ಸರ್ಕಾರವು ಮಹಿಳೆಯರನ್ನು ಕಾರ್ಯದಿಂದ ನಿಷೇಧಿಸಿದ ಕಾನೂನನ್ನೇ ಬಹಿಷ್ಕರಿಸುತ್ತಿತ್ತೋ ಎಂಬ ಸಂಶಯ ನನಗಿದೆ. ನಾನು ಅವರ ಉದ್ದೇಶಗಳ ಬಗೆಗೆ ದೂಷಣೆ ಮಾಡುತ್ತಿರುವೆ ಎಂದು ಇದರ ಅರ್ಥವಲ್ಲ. ಆದರೆ ಕೇವಲ ಹತ್ತು ವರ್ಷಗಳೊಳಗೆ ಈ ವಿಧವಾದ ರಾಜಕೀಯ ನಿರ್ಣಯ ಕೈಗೆತ್ತಿಕೊಳ್ಳಲು ಅವರ ಮನಸ್ಸಾಕ್ಷಿ ಹೇಗೆ ಒಪ್ಪಿಗೆ ನೀಡಿತು ಎಂದು ಆಶ್ಚರ್ಯವಾಗಿದೆ. ಅಲ್ಲದೇ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದ ಕೂಡಲೇ ಹಿಂದಿನ ಸ್ಥಿತಿಗೆ ಮರಳಲಾಗುವುದು ಎಂದು ಭಾರತ ಸರ್ಕಾರವು ಭರವಸೆ ನೀಡಿದರೂ, ಅದನ್ನು ವಿರೋಧಿಸುವ

ಇವರು, ಜನರಲ್ಲಿ ರಾಜಕೀಯ ಹಾಗೂ ನೈತಿಕ ಕ್ರಾಂತಿಕಾರಿ ಬದಲಾವಣೆಗಳ ಭರವಸೆ ಹೇಗೆ ಮೂಡಿಸಬಲ್ಲರು.?

ಮಾನ್ಯರೇ, ನನಗೆ ತಿಳಿದಂತೆ ಕೇವಲ, ೧೫,೦೦೦ ಮಹಿಳಾ ಕಾರ್ಮಿಕರು ಗಣಿಗಳಲ್ಲಿ ಕಾರ್ಯ ಮಾಡುತ್ತಿದ್ದಾರೆ. ಈ ೧೫,೦೦೦ ಮಹಿಳಾ ಕಾರ್ಮಿಕರನ್ನು ಭೂ ಅಡಿ ಗಣಿಗಳಲ್ಲಿ ಕಾರ್ಯ ಮಾಡುವಂತೆ, ಭಾರತ ಸರ್ಕಾರ ಏಕೆ ಒತ್ತಾಯ ಹೇರುತ್ತದೆ? ಉತ್ತರ ಸರಳ......

**ಶ್ರೀ ಸ್ವಾಮಿ ವೆಂಕಟಾಚಲ ಶೆಟ್ಟಿ :** ಸಾರ್ವಜನಿಕ ಅಭಿಪ್ರಾಯ ಏನೇ ಇರಲಿ, ಮಾನ್ಯ ಕಾರ್ಮಿಕ ಸದಸ್ಯರು, ಈ ದಿಶೆಯಲ್ಲಿ ಖಚಿತ ಹಾಗೂ ದೃಢ ಭರವಸೆಯನ್ನು ನೀಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸನ್ಮಾನ್ಯ ಮಿತ್ರರು ನನ್ನ ಬಗೆಗೆ ಈ ವಿಧವಾದ ದುರಭಿಪ್ರಾಯ ಹೊಂದಿದ್ದರೆ ನಾನು ಅಸಹಾಯಕ. ಆದರೂ ಅವರು ನನ್ನ ಬಗೆಗೆ ಬೇಕಾದ ಅಭಿಪ್ರಾಯವನ್ನು ಹೊಂದಿರಲು ಮುಕ್ತರಿದ್ದಾರೆ, ಅದರಂತೆಯೇ ನಾನು ಅವರ ಬಗೆಗೆ ನನ್ನದೇ ಆದ ಅಭಿಪ್ರಾಯ ಹೊಂದಿರುವೆ. ಆದರೆ ಈಗ ವಿಷಯ ಸದನದಲ್ಲಿ ಪ್ರಸ್ತಾಪಿಸುವುದು ಉಚಿತವಲ್ಲ.

ಈ ಮಹಿಳಾ ಕಾರ್ಮಿಕರನ್ನು ನೆಲದಡಿಯ ಗಣಿಗಳಲ್ಲಿಯೇ ಏಕೆ ಕಾರ್ಯಮಾಡುವಂತೆಒತ್ತಾಯಿಸಲಾಗಿದೆ ಎಂಬ ಪ್ರಶ್ನೆಗೆ ಮೂರು ಕಾರಣಗಳಿವೆ. ಮೊದಲನೆಯದಾಗಿ, ಪರಿಸ್ಥಿತಿಯನ್ನು ತಿಳಿದಲ್ಲಿ ಭೂಮಿ ಅಡಿಯ ಗಣಿಯಲ್ಲಿ ಕಾರ್ಯ ಮಾಡುವ ಮಹಿಳೆಯನ್ನು, ಏಕವ್ಯಕ್ತಿ ಎಂದು ಪರಿಗಣಿಸದೆ, ಅವಳು ಸಮರ್ಥ......

**ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್) :** ಮಾನ್ಯ ಸದಸ್ಯರ ಸಮಯ ಮುಗಿದಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು, ೨೦ ನಿಮಿಷಗಳ ಪೂರ್ಣ ಅವಧಿ ಇನ್ನೂ ಮಾತನಾಡಿಲ್ಲ.

ಅವಳು ಕಲ್ಲಿದ್ದಲು ಗಣಿಯ ಕೆಲಸವನ್ನು ಬಿಡುವ ಮೊದಲನೆಯ ಪರಿಣಾಮ ಎಂದರೆ, ಅವಳೊಡನೆ ಇರುವ ಕಲ್ಲಿದ್ದಲು ಕಡಿಯುವ ಕಾರ್ಮಿಕನೂ ಹೊರಗೆ ಬರುವುದರಿಂದ ಪರಿಸ್ಥಿತಿ ತೀರಾ ಹದಗೆಡುವುದು. ಎರಡನೆಯ ಪರಿಣಾಮವೆಂದರೆ, ಅವಳು ಹಾಗಿಲ್ಲದೇ ಹೋದಲ್ಲಿ ಗೈರುಹಾಜರಿಯು ಹೆಚ್ಚುವ ಅವಕಾಶವಿದೆ. ಮೂರನೆಯ ಪರಿಣಾಮವೆಂದರೆ, ಕಲ್ಲಿದ್ದಲು ಕಡಿಯುವವರಲ್ಲಿ ಕೆಲವರು ಕಲ್ಲಿದ್ದಲನ್ನು ಹೊರುವ ಕಾರ್ಯ ಮಾಡಬೇಕಾಗುವುದರಿಂದ, (ಈ ಕಾರ್ಯ ಹೆಂಗಳೆಯರದು) ಉತ್ಪಾದನೆಗೆ ಹಾನಿ ಉಂಟಾಗುತ್ತದೆ. ನಿಜ ಹೇಳಬಹುದಾದರೆ, ಮಹಿಳೆಯರು ಹೆಚ್ಚು ಉತ್ಪಾದನೆ ಮಾಡಲಾರರೆಂದು ಹೇಳುವುದು ಸರಿ ಅಲ್ಲ. ನಾನು ಸದನದ ಗಮನ ಸೆಳೆಯ ಬಯಸುವ ಸಂಗತಿ...

**ಅನೇಕ ಸದಸ್ಯರು :** ಮಾನ್ಯ ಸದಸ್ಯರ ಅವಧಿ ಮುಗಿದಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಈಗಾಗಲೇ ಹೇಳಿದಂತೆ, ನಾವು ಮಹಿಳಾ ಕಾರ್ಮಿಕರನ್ನು ಅವಶ್ಯಕತೆಗಿಂತ ಒಂದು ನಿಮಿಷವೂ ಹೆಚ್ಚು ನೆಲದಡಿಯ ಗಣಿಗಳಲ್ಲಿ ಉಳಿಸಿಕೊಳ್ಳುವುದಿಲ್ಲ. ಸದನಕ್ಕೆ ತಿಳಿದಿರುವಂತೆ ಗೋರಖಪುರದ ಕಾರ್ಮಿಕರನ್ನು ಕರೆಯಿಸಿಕೊಳ್ಳಲಾಗಿದೆ ಹಾಗೂ ಯಂತ್ರಗಳನ್ನು ಅಳವಡಿಸಲಾಗಿದೆ. ಅಲ್ಲದೆ ಅನೇಕ ಕ್ರಮಗಳನ್ನೂ ಕೈಗೆತ್ತಿಕೊಳ್ಳಲಾಗಿದೆ.

(೫ ಘಂಟೆಯಾಗಿದೆ)

**ಅಧ್ಯಕ್ಷರು (ಗೌರವಾನ್ವಿತ ಅಬ್ದುರ್ ರಹೀಮ್)** : ಈಗಿರುವ ಪ್ರಶ್ನೆ

"ಕಾರ್ಮಿಕ ಇಲಾಖೆಯ ಬೇಡಿಕೆಯಲ್ಲಿ ೧೦೦ ರೂಪಾಯಿ ಖೋತಾ ಮಾಡಲಾಗಿದೆ".

ನಿಲುವಳಿಯನ್ನು ಒಪ್ಪಲಾಯಿತು.

# ೪೪
# ಕಾರ್ಮಿಕ ಇಲಾಖೆ ಪೂರಕ ಬೇಡಿಕೆಗಳ ಮಂಜೂರಾತಿ *

**ಮಾನ್ಯ ಸರ್ ಜೆರೆಮಿ ರೈಸ್‌ಮ್ಯಾನ್** : ಮಾನ್ಯರೆ, ನಾನು ಕೋರಿಕೆಯನ್ನು ಮಂಡಿಸುವೆ :

"ಕಾರ್ಮಿಕ ಇಲಾಖೆ" ೩೧, ಮಾರ್ಚ್ ೧೯೪೫ರ ಅವಧಿಗೆ ಖರ್ಚಾಗಬಹುದಾದ ರೂ ೨,೪೦,೦೦೦ ಕ್ಕಿಂತ ಮಿಗಿಲಾಗದ ಹಣವನ್ನು ಗವರ್ನರ್ ಜನರಲ್ ಇವರಿಗೆ ಹೆಚ್ಚುವರಿ ಸಹಾಯಧನ ಮಂಜೂರು ಮಾಡಬೇಕೆಂಬ ಕೋರಿಕೆ"

**ಅಧ್ಯಕ್ಷರು : (ಸಯ್ಯದ್ ಗುಲಾಮ್ ಭಿಕ್ ನಾಯರಂಗ್)** : ಕೋರಿಕೆಯನ್ನು ಮಂಡಿಸಲಾಗಿದೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ) : ನನ್ನ ಮಿತ್ರರಾದ ಪ್ರೊ|| ರಂಗಾ ಅವರಿಗೆ ತಿಳಿದಿರುವಂತೆ ಕಳೆದ ವರ್ಷ ಭಾರತ ಸರ್ಕಾರವು, ಕಲ್ಲಿದ್ದಲ ಗಣಿ ಕಾರ್ಮಿಕರ ಕಲ್ಯಾಣ ಕಾರ್ಯದ ಹೆಸರಿನಲ್ಲಿ, ಒಂದು ಟನ್ ಉತ್ಪಾದಿತ ಕಲ್ಲಿದ್ದಲಿನ ಮೇಲೆ ೪ ಆಣೆ ಶುಲ್ಕವನ್ನು ವಿಧಿಸಿತ್ತು. ಈ ಕಲ್ಲಿದ್ದಲಿನ ಗಣಿಗಳ ಕಾರ್ಮಿಕರ ಕಲ್ಯಾಣಕ್ಕೆಂದು ವಸೂಲು ಮಾಡಿದ ಹಣದ ಉಸ್ತುವಾರಿಯ ಆಡಳಿತವನ್ನು ನಡೆಸಿಕೊಂಡು ಹೋಗಲೆಂದೇ ಒಬ್ಬ ಆಡಳಿತಾಧಿಕಾರಿಯನ್ನೂ ನೇಮಿಸಲಾಗಿತ್ತು. ಕಲ್ಲಿದ್ದಲ ಗಣಿಗಳ ಕಲ್ಯಾಣ ಕಾರ್ಯವನ್ನು ಒಂದು ಸಮಿತಿಗೆ ಒಪ್ಪಿಸಲಾಗಿತ್ತು. ಈ ಸಮಿತಿಯು ಆಡಳಿತ ವರ್ಗದ ಪ್ರತಿನಿಧಿಗಳು, ಕಾರ್ಮಿಕರ ಪ್ರತಿನಿಧಿಗಳು ಹಾಗೂ ಬಂಗಾಲ ಮತ್ತು ಬಿಹಾರ ಪ್ರಾಂತೀಯ ಸರ್ಕಾರದ ಪ್ರತಿನಿಧಿಗಳಿಂದ ಕೂಡಿದ್ದು ಅದರ ಅಧ್ಯಕ್ಷತೆಯನ್ನು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಅವರು ವಹಿಸಿದ್ದರು. ಸಮಿತಿ ಹೆಚ್ಚು ಕಡಿಮೆ ಸ್ವಾಯತ್ತತೆಯನ್ನು ಹೊಂದಿತ್ತು. ಕಲ್ಲಿದ್ದಲು ಆಯುಕ್ತರು ಈ ಸಮಿತಿಯ ಮುಂಗಡ ಪತ್ರವನ್ನು ತಯಾರಿಸುವರು ಹಾಗೂ ಅದನ್ನು ಸಮಿತಿಗೆ ಸಲ್ಲಿಸುವರು. ಇವರ ಖರ್ಚು ವೆಚ್ಚಗಳನ್ನೆಲ್ಲಾ ಕಲ್ಲಿದ್ದಲು ಗಣಿ ಕಲ್ಯಾಣ ಆಯುಕ್ತರೇ ನೋಡಿಕೊಳ್ಳುವರು. ಈ ದಿಶೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳಾದ, ಮಲೇರಿಯಾ, ನೀರು ಸರಬರಾಜು, ಔಷಧಿಗಳು ಮುಂತಾದ ವಿಷಯಗಳನ್ನು ಸಮಿತಿಯೇ ನೋಡಿಕೊಳ್ಳುತ್ತಿತ್ತು.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** : ನೀವೇನಾದರೂ ನಿಯಂತ್ರಣ ಹೊಂದಿರುವಿರಾ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** : ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳೇ ಅಧ್ಯಕ್ಷರಾಗಿರುವುದರಿಂದ, ನಾನು ನಿಯಂತ್ರಣ ಹೊಂದಿದ್ದೇನೆ. ಮುಂಗಡಪತ್ರವನ್ನು ನಮ್ಮ ಪರಿಶೀಲನೆಗಾಗಿ ಕಳಿಸಲಾಗುವುದು. ಹಾಗೆ ನಮಗೆ ಕಳುಹಿಸಿದ ಮುಂಗಡಪತ್ರವನ್ನು ಒಪ್ಪಿದ ಮೇಲೆಯೇ ಅದನ್ನು ಸಮಿತಿಯ ಮುಂದೆ ಹೆಚ್ಚಿನ ತಿದ್ದುಪಡಿಗಳಿಗೆಂದು ಮಂಡಿಸಲಾಗುವುದು.

ಕಾರ್ಮಿಕ ಆಯುಕ್ತರ ಬಗೆಗೆ ಹೇಳಬಹುದಾದರೆ, ನನ್ನ ಮಾನ್ಯ ಮಿತ್ರ ಪ್ರೊ|| ರಂಗಾ ಅವರಿಗೆ ತಿಳಿದಿರುವಂತೆ ಎಲ್ಲಾ ಪ್ರಾಂತೀಯ ಸರ್ಕಾರಗಳೂ ಕಾರ್ಮಿಕ ಆಯುಕ್ತರನ್ನು ನೇಮಿಸಿವೆ. ಅವರ ಅಧೀನದಲ್ಲಿ ಕಾರ್ಮಿಕರ ಕಲ್ಯಾಣವನ್ನು ನೋಡಿಕೊಂಡು ಹೋಗಲಿಕ್ಕೆಂದೇ ಹೊಂದಾಣಿಕೆ ಅಧಿಕಾರಿಗಳು ಹಾಗೂ ಮಿಕ್ಕ ಆಡಳಿತಗಾರರು ಕಾರ್ಯಮಾಡುತ್ತಾರೆ. ಈ ಮಾದರಿಯ ಆಡಳಿತ ವ್ಯವಸ್ಥೆಯನ್ನು ಭಾರತ ಸರ್ಕಾರದವರೂ ರಚಿಸಬೇಕೆಂದು ಸಲಹೆ ಮಾಡಲಾಗಿದೆ. ಏಕೆಂದರೆ ಭಾರತ ಸರ್ಕಾರವೂ ಅನೇಕ ಉದ್ದಿಮೆಗಳನ್ನು ವಹಿಸಿಕೊಂಡಿರುವುದರಿಂದ ಉದ್ದಿಮೆ ಕಾರ್ಮಿಕರ ಕಲ್ಯಾಣವನ್ನು ಸಮರ್ಥವಾಗಿ ನೋಡಿಕೊಂಡು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ೨೭ ಮಾರ್ಚ್, ೧೯೪೫, ಪು. ೨೧೩೮–೪೧.

ಹೋಗುವುದರಲ್ಲಿ ಈ ಮಾದರಿಯ ವ್ಯವಸ್ಥೆ ಸಹಕಾರಿಯಾಗಬಲ್ಲದು. ಇದನ್ನರಿತ ನಾವು ಈಚೆಗೆ ಈ ಮಾದರಿಯ ವ್ಯವಸ್ಥೆಯನ್ನು ಆರಂಭಿಸಿದ್ದೇವೆ. ಹೀಗಾಗಿ ಈ ವ್ಯವಸ್ಥೆಯ ಮುಂಚೂಣಿಯಲ್ಲಿ ಒಬ್ಬ ವಿಶೇಷ ಅಧಿಕಾರಿ, ಮುಖ್ಯ ಕಾರ್ಮಿಕ ಆಯುಕ್ತರನ್ನು ಭಾರತ ಸರಕಾರ ನೇಮಿಸಿದೆ.

ಈ ದಿಶೆಯಲ್ಲಿ ಭಾರತವನ್ನು ಮೂರು ಭಾಗಗಳಾಗಿ ವಿಂಗಡಿಸಿ, ಒಂದೊಂದು ಭಾಗವನ್ನು ಉಪಕಾರ್ಮಿಕ ಆಯುಕ್ತರ ಅಧೀನದಲ್ಲಿರಿಸಲಾಗಿದೆ. ಪ್ರೊ॥ ರಂಗಾ ಅವರು ನಾವು ಈ ವಿಧವಾದ ನೂತನ ವ್ಯವಸ್ಥೆಯನ್ನು, ಕೇಂದ್ರ ವಹಿಸಿಕೊಳ್ಳಬಹುದಾದ ಕಾರ್ಯಗಳನ್ನು, ರೈಲ್ವೆ ಸಮನ್ವಯ ಹಾಗೂ ರೈಲ್ವೆ ಮೇಲಧಿಕಾರಿ ವಿಭಾಗಗಳಂತೆ ಸಮನ್ವಯಗೊಳಿಸಬಹುದೇ ಎಂಬುದನ್ನು ತಿಳಿಯ ಬಯಸಿದ್ದಾರೆ. ಹೇಳಬೇಕೆಂದರೆ ಈ ಎಲ್ಲಾ ವ್ಯವಸ್ಥೆಯನ್ನು ಇಂದಿನ ಆಡಳಿತೆಯಲ್ಲಿ ಸಮನ್ವಯ ಹಾಗೂ ಕೇಂದ್ರೀಕರಿಸಲಾಗಿದೆ. ಈ ಮುಂಚಿನ ವ್ಯವಸ್ಥೆಯಲ್ಲಿ ಕಾರ್ಮಿಕ ಅಧಿಕಾರಿಗಳು ನೇರವಾಗಿ ಕೇಂದ್ರ ಸರ್ಕಾರಕ್ಕೆ ಹೊಣೆಗಾರರಾಗಿದ್ದರು. ಆದರೆ ಈ ನೂತನ ವ್ಯವಸ್ಥೆಯಲ್ಲಿ ಅವರು ತಮ್ಮ ಪ್ರಾಂತೀಯ ಉಪಕಾರ್ಮಿಕ ಆಯುಕ್ತರ ಅಧೀನದಲ್ಲಿ ಕಾರ್ಯ ಮಾಡಬೇಕಾಗುತ್ತದೆ. ಇದರಂತೆಯೇ ರೈಲ್ವೆ ಇನ್ಸ್‌ಪೆಕ್ಟರುಗಳು ರೈಲ್ವೆ ಸಮನ್ವಯ ಅಧಿಕಾರಿಗಳಿಗೆ ತಮ್ಮ ವರದಿಯನ್ನು ಸಲ್ಲಿಸುತ್ತಿದ್ದರು. ಕೂಲಿ ಬಟವಾಡೆಯ ಮಸೂದೆ, ನಿಗದಿತ ಅವಧಿಯ ಕಾರ್ಯ ಮುಂತಾದ ಅನೇಕ ಆಡಳಿತ ಸಮಸ್ಯೆಗಳನ್ನು ಇಂದು ಈ ನೂತನ ಯೋಜನೆಯ ಅಡಿಯಲ್ಲಿ ಸಮನ್ವಯಗೊಳಿಸಲಾಗಿದೆ.

ಕಾರ್ಮಿಕ ಪರಿಶೋಧನಾ ಸಮಿತಿಯ ಬಗೆಗೆ ಹೇಳುವುದಾದರೆ, ತಮಗೆ ಜ್ಞಾಪಕವಿರುವಂತೆ, ಕಳೆದ ವರ್ಷ ಅಥವಾ ೧೯೪೩ಕ್ಕಿಂತ ಒಂದು ವರ್ಷದ ಹಿಂದೆ ಎಂದು ತೋರುತ್ತದೆ, ತ್ರಿಪಕ್ಷ ಕಾರ್ಮಿಕ ಸಮಾವೇಶ (Tripartite Labour Conference) ಒಂದು ನಿರ್ಣಯದ ಮೂಲಕ, ಭಾರತ ಸರ್ಕಾರವು, ಬೆವರಿಡ್ಜ ವರದಿಯ (Bevaridge Report) ಮಾದರಿ ಮೇಲೆ, ಸಾಮಾಜಿಕ ಭದ್ರತೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕೆಂದು ಕೋರಿತು. ಈ ವಿಧವಾದ ಒಂದು ಯೋಜನೆಯ ಪೂರ್ವಭಾವಿಯಾಗಿ ಒಂದು ಸಮಿತಿಯನ್ನು ನೇಮಿಸಿ ತನ್ಮೂಲಕ ಈ ದಿಶೆಯಲ್ಲಿ ಉದ್ಭವಿಸಬಹುದಾದ ಬಹುಮುಖ ಸಮಸ್ಯೆಗಳಾದ, ಗೃಹನಿರ್ಮಾಣ, ಕೂಲಿ, ನೈರ್ಮಲ್ಯ, ಮುಂತಾದ ಕಾರ್ಮಿಕರ ಕಲ್ಯಾಣದ ಬಗೆಗೆ ವಿವರಗಳನ್ನು ಕೂಡಿಹಾಕಿದ ನಂತರ; ಭಾರತ ಸರ್ಕಾರ ಇನ್ನೊಂದು ಸಮಿತಿಯನ್ನು ನೇಮಿಸಿ, ಅದು ಸಾಮಾಜಿಕ ಭದ್ರತೆಯ ರೂಪರೇಷೆಗಳನ್ನು ತಯಾರಿಸಬೇಕೆಂದು ನಿರ್ಧರಿಸಲಾಯಿತು. ಆದುದರಿಂದ ಈಗ ಈ ಪರಿಶೋಧನಾ ಸಮಿತಿ ಕಳೆದ ೬ ಅಥವಾ ೭ ತಿಂಗಳಿಂದ ಕಾರ್ಯಮಾಡುತ್ತಲಿದ್ದು, ತನ್ನ ವರದಿಯನ್ನು ಬರುವ ಜೂನ್ ಅಥವಾ ಜುಲೈ ತಿಂಗಳ ಮುಂಚೆಯೇ ಸಲ್ಲಿಸಲಿದೆ. ಈ ವರದಿ ಕೈಸೇರಿದ ನಂತರ ತ್ರಿಪಕ್ಷೀಯ ಕಾರ್ಮಿಕ ಸಮಾವೇಶನವು ಸೂಚಿಸಿದ ಅಂಶವನ್ನು ಕುರಿತು ಜಾರಿಗೊಳಿಸಬೇಕಾದ ಸಾಮಾಜಿಕ ಭದ್ರತೆಯ ಬಗೆಗೆ ಸಮಿತಿಯನ್ನು ರಚಿಸಲಾಗುವುದು. ಈ ಪರಿಶೋಧನಾ ಸಮಿತಿಯ ಎರಡನೇ ಕಾರ್ಯವೆಂದರೆ ಮಾಲೀಕರು, ನೌಕರರು ಹಾಗೂ ಪ್ರಾಂತೀಯ ಸರಕಾರದ ಪ್ರತಿನಿಧಿಗಳನ್ನು ಒಂದೆಡೆ ಸಮಾವೇಶಗೊಳಿಸುವುದು.

ಮತ್ತೊಂದು ಪ್ರಶ್ನೆ ಎಂದರೆ, ಸಾಮಾನ್ಯ ಅಂದರೆ ಪರಿಣತರಲ್ಲದ ಕಾರ್ಮಿಕರಿಗೆ ಸಂಬಂಧಿಸಿದ್ದಾಗಿದೆ. ಅದರ ಪರಿಸ್ಥಿತಿ ಹೀಗಿದೆ. ನಮಗೆ ತಿಳಿದಂತೆ ಕಾರ್ಮಿಕರ ಸೇವೆಯನ್ನು ಪಡೆಯಲು, ಗುತ್ತಿಗೆದಾರರಲ್ಲಿ ನೇರ ಸ್ಪರ್ಧೆ ಏರ್ಪಟ್ಟು, ಕೂಲಿಕಾರರನ್ನು ಪಡೆಯಲು ಮಾಮೂಲು ಕೂಲಿಗಿಂತ ಹೆಚ್ಚಿನ ಕೂಲಿಯನ್ನು ನೀಡಲಾಗುತ್ತಿದೆ. ಈ ವಿಧವಾದ ಗುತ್ತಿಗೆದಾರರ ಪೈಪೋಟಿಯಿಂದ ಕಾರ್ಮಿಕರ ಅಭಾವ ಉಂಟಾಗಿದೆ. ಒಂದೆಡೆಯಲ್ಲಿ ಹೆಚ್ಚಿನ ಕಾರ್ಮಿಕರು ದೊರೆಯಬಹುದಾದರೆ, ಕಡಿಮೆ ಕೂಲಿ ನೀಡುವ ಗುತ್ತಿಗೆದಾರರಲ್ಲಿ ಕಾರ್ಮಿಕರ ಅಭಾವ ಎದ್ದುಕಾಣುತ್ತಿದೆ. ಈ ಪೈಪೋಟಿಯ ಪರಿಣಾಮದಿಂದ ಮಿಲಿಟರಿ ಕಾರ್ಯಗಳಿಗೆ

ಕಾರ್ಮಿಕರು ದೊರೆಯುತ್ತಿಲ್ಲ. ಆದುದರಿಂದ ಭಾರತ ಸರ್ಕಾರವು ಕಾರ್ಮಿಕರ ಪಡಿತರ ವ್ಯವಸ್ಥೆಯನ್ನು (ಮಾನವ ಶಕ್ತಿಯನ್ನು) ಹೇಗೆ ಜಾರಿಗೊಳಿಸಬೇಕೆಂದು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಿದೆ. ಈ ಸಮಿತಿಯ ಹೆಸರು ಪರಿಣತರಲ್ಲದ ಕಾರ್ಮಿಕರ ಸರಬರಾಜು ಎಂದಿದ್ದು, ಪ್ರತಿಯೊಬ್ಬ ಗುತ್ತಿಗೆದಾರನೂ, ತನಗೆ ಬೇಕಾಗಬಹುದಾದ ಕಾರ್ಮಿಕರನ್ನು ಬೇರೆ ಭಾಗದಿಂದ ಪಡೆಯಬೇಕಾದರೆ ಈ ಸಮಿತಿಗೆ ಮನವಿ ಸಲ್ಲಿಸಬೇಕು. ಸಮಿತಿಯು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಕಾರ್ಮಿಕರನ್ನು ಪಡೆಯಬಹುದು. ಈ ವಿಧವಾದ ಕಾರ್ಮಿಕರ ಡಿಪೋಗಳನ್ನು ವಿವಿಧ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದೆ. ಈ ವಿಧವಾದ ಡಿಪೋಗಳು ಓರ್ವ ಗುತ್ತಿಗೆದಾರನ ನೇತೃತ್ವದಲ್ಲಿ ಕಾರ್ಯಾಚರಣೆ ಮಾಡುತ್ತವೆ. ನಾನು ಮಿಕ್ಕ ವಿವರಗಳನ್ನು ನನ್ನ ಸ್ನೇಹಿತರಿಗೆ ಈಗಲೇ ನೀಡಲಾರೆ. ಅವರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕೆಂದಿದ್ದರೆ, ಒಂದು ನೋಟೀಸಿನ ಮೂಲಕ ನಿಲುವಳಿಯನ್ನು ಮಂಡಿಸಿದಲ್ಲಿ, ನಾನು ವಿವರಗಳನ್ನು ನೀಡಲು ಸಿದ್ಧನಿದ್ದೇನೆ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ (ಮಧುರಾ, ರಾಮನಾಡ್ ಹಾಗೂ ತಿನ್ನವೆಲ್ಲಿ** : ಮುಸ್ಲಿಮೇತರ ಪ್ರತಿನಿಧಿ) : ಮಾನ್ಯರೆ, ನಾನು ನನ್ನ ಮಿತ್ರರಿಗೆ ಆಭಾರಿಯಾಗಿದ್ದೇನೆ. ಅವರು ನಮಗೂ ಹಾಗೂ ಪ್ರೊ. ರಂಗಾ ಅವರಿಗೂ ತುಂಬಾ ಉಪಯುಕ್ತ ಮಾಹಿತಿಯನ್ನು ಒದಗಿಸಿದ್ದಾರೆ. ಆದರೆ ಅವರು ಒಂದು ಅತಿ ಪ್ರಮುಖ ಪ್ರಶ್ನೆಯನ್ನು ಪ್ರಸ್ತಾಪಿಸದೇ ಹೋಗಿದ್ದಾರೆ. ಅದೇನೆಂದರೆ ಕಲ್ಲಿದ್ದಲು ಆಯುಕ್ತರು, ಮಹಿಳೆಯರು ನೆಲದಡಿಯಲ್ಲಿಯ ಗಣಿಗಳಲ್ಲಿ ಕಾರ್ಯಮಾಡದಂತೆ ಇರುವ ನಿಷೇಧಾಜ್ಞೆಯನ್ನು ಪುನಃ ಜಾರಿಗೊಳಿಸುವರೋ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಖಂಡಿತ ಅದು ಅವರ ಕಾರ್ಯವಲ್ಲ.

**ಶ್ರೀಮತಿ ಕೆ. ರಾಧಾಬಾಯಿ ಸುಬ್ಬರಾಯನ್ :** ಈಗಿನ ಪರಿಸ್ಥಿತಿಯಲ್ಲಿ ಮಹಿಳೆಯರು ನೆಲದಡಿಯ ಗಣಿಗಳಲ್ಲಿ ಕಾರ್ಯ ಮಾಡುವ ಕ್ರಮವನ್ನು ಸಮಿತಿಯೇ ಆಗಲಿ ಅಥವಾ ಕಾರ್ಮಿಕ ಆಯುಕ್ತರೇ ಆಗಲಿ ಪರಿಶೀಲಿಸುವರೇ? ಅಲ್ಲದೆ ಹೀಗೆ ಗಣಿಗಳಲ್ಲಿ ಕಾರ್ಯ ಮಾಡುವುದರಿಂದ ಮಹಿಳೆಯರ ಆರೋಗ್ಯ ಹಾಳಾಗುವುದಿಲ್ಲವೇ? ಹೀಗಾಗಿ ಈ ಅನಿವಾರ್ಯ ಪರಿಸ್ಥಿತಿಯನ್ನು ನಿವಾರಿಸಲಾಗದೇ?

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಈ ವಿಷಯ ಅವರ ಪರಿಮಿತಿಗೆ ಸೇರಿದೆ.

**ಶ್ರೀ ಅಬ್ದುಲ್ ಖಯೂಮ್ :** ಹೀಗಿದ್ದಲ್ಲಿ ಈ ವ್ಯವಸ್ಥೆಯಿಂದ ಏನು ಲಾಭ?

**ಶ್ರೀ ಎನ್.ಎಮ್. ಜೋಷಿ :** ನನಗೆ ತಿಳಿದಂತೆ ಈ ಸಮಿತಿಯು ವಿವಿಧ ಮಾಹಿತಿಗಳನ್ನು ಸಂಗ್ರಹಿಸಲೆಂದೇ ನೇಮಕಗೊಂಡಿತ್ತು ಹಾಗೂ ಮಹಿಳೆಯರು ಗಣಿಗಳಲ್ಲಿ ಕಾರ್ಯಮಾಡುವ.....

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನನಗೆ ತಿಳಿದಂತೆ ಶ್ರೀಮತಿ ರಾಧಾಬಾಯಿ ಅವರು ಕಲ್ಲಿದ್ದಲು ಆಯುಕ್ತರ ಕಾರ್ಯದ ಬಗೆಗೆ ಹೇಳುತ್ತಿದ್ದರು.

**ಶ್ರೀಮತಿ ರಾಧಾಬಾಯಿ ಸುಬ್ಬರಾಯನ್ :** ಸಮಿತಿಯ ಬಗೆಗೆ ಕೂಡ ನನ್ನ ಮಿತ್ರರು ಪ್ರಸ್ತಾಪಿಸಿದಂತೆ,

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಬಹುಶಃ ಇರಬಹುದು.

**ಶ್ರೀ ಎನ್.ಎಮ್. ಜೋಷಿ :** ನಾನು ಅದೇ ವಿಚಾರ ಹೊಂದಿದ್ದು ಸಮಿತಿಯು ಈ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದು.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನಾನು, ಅವರು ಕೇವಲ ಆಯುಕ್ತರ ಕಾರ್ಯದ ಬಗೆಗೆ ಕೇಳಿದರೆಂದು ಭಾವಿಸಿದೆ.

**ಶ್ರೀ ಎನ್.ಎಮ್. ಜೋಷಿ :** ನಿಷೇಧಾಜ್ಞೆಯನ್ನು ಮುಂದುವರಿಸುವ, ಹಾಗೂ ಕಾರ್ಮಿಕ ರಂಗದಲ್ಲಿ, ಮಹಿಳೆಯರ ನೇಮಕದಿಂದ ಉಂಟಾಗಬಹುದಾದ ಎಲ್ಲಾ ಸಮಸ್ಯೆಗಳನ್ನು ಕುರಿತು. ಆದುದರಿಂದ ನಾವು

ಹಣಕ್ಕೆ ಮಂಜೂರಾತಿ ನೀಡಬಹುದು.

**ಅಧ್ಯಕ್ಷರು : (ಸಯ್ಯದ್ ಗುಲಾಮ್ ಭಿಕ್ ನಾಯರಂಗ್)** : ಪ್ರಶ್ನೆ ಎಂದರೆ,

"ಈ ಹೆಚ್ಚುವರಿ ಧನ ಸಹಾಯದ ಮೊತ್ತ ರೂ ೨,೪೦,೦೦೦ಕ್ಕೂ ಮೀರದಂತೆ ಗವರ್ನರ್ ಜನರಲ್‌ರವರ ಸಮಿತಿಗೆ ೩೧, ಮಾರ್ಚ್ ೧೯೪೫ರ ಅವಧಿಯವರೆಗೆ ಆಗಬಹುದಾದ ವೆಚ್ಚವನ್ನು ಭರಿಸಲು 'ಕಾರ್ಮಿಕ ಇಲಾಖೆಗೆ' ಮಂಜೂರಾತಿ ನೀಡಲಾಗಿದೆ."

ನಿರ್ಣಯವನ್ನು ಸ್ವೀಕರಿಸಲಾಯಿತು.

## ೪೫
## ಗಣಿಗಳು – ಹೆರಿಗೆ ಸೌಕರ್ಯ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ಮಸೂದೆಯನ್ನು ಮಂಡಿಸುವೆ.

"೧೯೪೧ರ ಗಣಿಗಳ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯಗಳ ಕಾನೂನನ್ನು ಹೆಚ್ಚುವರಿ ತಿದ್ದುಪಡಿಗಾಗಿ ಪರಿಶೀಲನಾ ಸಮಿತಿಗೆ ಸಲ್ಲಿಸತಕ್ಕದ್ದು. ಸರ್ವಶ್ರೀ ಎಂ. ಅನಂತಶಯನ ಅಯ್ಯಂಗಾರ್, ಪ್ರೊ॥ ಎನ್.ಜಿ. ರಂಗಾ, ಕೆ.ಬಿ. ಜಿನರಾಜ ಹೆಗಡೆ, ಮೌಲಾನ ಜಾಫರ್ ಆಲಿಖಾನ್, ಸರ್ ಸೈಯದ್ ರಜಾ ಆಲೀ, ಅಮರೇಂದ್ರನಾಥ ಚಟ್ಟೋಪಾಧ್ಯಾಯ, ಎನ್.ಎಮ್. ಜೋಷಿ, ರಾವ್ ಬಹದ್ದೂರ್, ಎನ್. ಶಿವರಾಜ್, ಎಚ್.ಜಿ. ಸ್ಟೋಕ್ಸ್, ಎಸ್.ಸಿ. ಜೋಷಿ ಹಾಗೂ ಈ ಮಸೂದೆಯನ್ನು ಮಂಡಿಸುವವರು ಒಡಗೂಡಿದ ಸಮಿತಿ. ಈ ಸಮಿತಿ ಸೋಮವಾರ ೨ನೇ ಏಪ್ರಿಲ್ ೧೯೪೫ರ ಒಳಗೆ ತನ್ನ ವರದಿ ನೀಡಬೇಕು. ಸಮಿತಿಯ ಕಾರ್ಯ ಕಲಾಪಕ್ಕೆ ಕನಿಷ್ಠ ೫ ಸದಸ್ಯರಾದರೂ ಇರಲೇಬೇಕು"

**ಶ್ರೀ ಬದರಿ ದತ್ತ ಪಾಂಡೆ (ರೋಹಿಲ ಖಂಡ ಹಾಗೂ ಕುಮಾಂವ್ ಪ್ರದೇಶಗಳ ಗ್ರಾಮೀಣ :** ಮುಸಲ್ಮಾನೇತರ ಸದಸ್ಯ) : ಏಕೆ, ಈ ಮಸೂದೆಯನ್ನು ಮಂಡಿಸಲು ಮಹಿಳೆಯರಿಲ್ಲವೇ?

**ಶ್ರೀ ಟಿ.ಎಸ್. ಅವಿನಾಶಲಿಂಗಂ ಚೆಟ್ಟಿಯಾರ್ (ಸೇಲಂ ಹಾಗೂ ಕೊಯಮತ್ತೂರು ಮತ್ತು ಉತ್ತರ ಆರ್ಕಾಟ್ ಗ್ರಾಮಿಣ** : ಮುಸಲ್ಮಾನೇತರ ಸದಸ್ಯ) :

ನಾನು ಶ್ರೀಮತಿ ಸುಬ್ಬರಾಯನ್ ಅವರನ್ನು ಸೂಚಿಸುವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸನ್ಮಾನ್ಯ ಸ್ನೇಹಿತರು ಅವಶ್ಯವಿದ್ದಲ್ಲಿ ನಿಲುವಳಿ ಮಂಡಿಸಲಿ, ಈಗ ನಾನು ಪ್ರಸ್ತಾಪವನ್ನು ಮುಂದುವರಿಸುತ್ತೇನೆ. ಸದನಕ್ಕೆ ಈಗಾಗಲೇ ತಿಳಿದಿರುವಂತೆ ನಾವು ಈಗಾಗಲೇ ೧೯೪೧ರ ಗಣಿಗಳ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಕಾನೂನನ್ನು ಅಂಗೀಕರಿಸಿದ್ದೇವೆ. ಈಗ ಸದನದ ಮುಂದಿರುವ ಮಸೂದೆ ಕೇವಲ ತಿದ್ದುಪಡಿಗಳಿಂದ ಕೂಡಿದೆ ಹಾಗೂ ಈಗ ಅದು ಅನಿವಾರ್ಯವಾದುದರಿಂದ ಅದರ ಬಗೆಗೆ ಅಲ್ಪಾವಧಿಯಲ್ಲಿ ಸಂಕ್ಷಿಪ್ತವಾಗಿ ಹೇಳುವೆ.

೧೯೪೧ರಲ್ಲಿ ಈ ಕಾನೂನನ್ನು ಜಾರಿಗೊಳಿಸಿದಾಗ ಅದು ಕೇವಲ ಭೂಮಿಯ ಮೇಲೆ ಕಾರ್ಯಮಾಡುವ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯಕ್ಕೆ ಮಾತ್ರ ಸೀಮಿತವಾಗಿತ್ತು. ಕಾರಣವೆಂದರೆ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ೨೯ ಮಾರ್ಚ್ ೧೯೪೫, ಪು. ೨೨೬೫–೬೬.

ಅಂದು ನಮಗೆ, ಭೂಮಿಯ ಆಳದ ಗಣಿಗಳಲ್ಲಿ ಕಾರ್ಯಮಾಡುವ ಮಹಿಳೆಯರ ಸಮಸ್ಯೆ ಇರಲಿಲ್ಲ. ಶೋಚನೀಯ ಅಥವಾ ವಿಷಾದನೀಯ ವಿಷಯವೆಂದರೆ ನಾನು ಈಗಾಗಲೇ ಅನೇಕ ಬಾರಿ ಸದನಕ್ಕೆ ತಿಳಿಸಿದಂತೆ, ನಾವು ಮಹಿಳೆಯರನ್ನು ಭೂತಳದ ಗಣಿಗಳಲ್ಲಿ ಕಾರ್ಯಮಾಡಲು ಅವಕಾಶ ನೀಡಬೇಕು. ಸರಕಾರವು ಪುನಃ ನಿಷೇಧಾಜ್ಞೆಯನ್ನು ಹಲವು ಕಾಲದ ನಂತರ ಹೇರುವುದೆಂದು ನಂಬಿದ್ದೇನೆ. ಈ ನಿಷೇಧಾಜ್ಞೆಯನ್ನು ತಾತ್ಕಾಲಿಕವಾಗಿ ರದ್ದುಮಾಡಿದ ಕಾರ್ಯವನ್ನು ಸದನದಲ್ಲಿ ಹಾಗೂ ಸದನದ ಹೊರಗಡೆ ಮಾಡಲಾದ ಟೀಕೆಗಳನ್ನು ಪರಿಶೀಲಿಸಿ ತಿದ್ದುಪಡಿಯನ್ನು ಮಂಡಿಸಲಾಗಿದೆ. ಈ ತಿದ್ದುಪಡಿಯಲ್ಲಿ ಗರ್ಭಿಣಿ ಸ್ತ್ರೀಯರಿಗೆ ನೆಲದಡಿಯ ಗಣಿಗಳಲ್ಲಿ ಕಾರ್ಯಕ್ಕೆ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ, ಹಾಗೂ ಮಹಿಳೆಯರಿಗೆ ಹಲವಾರು ಸವಲತ್ತುಗಳನ್ನು ನೀಡುವುದೇ ಈ ತಿದ್ದುಪಡಿ ಮಸೂದೆಯ ಗುರಿಯಾಗಿದೆ.

ಈ ಮಸೂದೆ ಎರಡು ಪ್ರಮುಖ ಅಂಶಗಳಿಂದ ಕೂಡಿದೆ. ಈಗಾಗಲೇ ಮಸೂದೆಯಲ್ಲಿ ಜಾರಿಯಲ್ಲಿರುವಂತೆ, ಹೆರಿಗೆಯ ನಂತರ ನಾಲ್ಕು ವಾರಗಳ ಅವಧಿಯವರೆಗೂ, ಮಹಿಳೆಯರು ಕಾರ್ಯಮಾಡುವಂತಿಲ್ಲ. ಈಗ ತಿದ್ದುಪಡಿಯಲ್ಲಿ ಹೆರಿಗೆಗೆ ಮುಂಚೆಯೇ ಮಹಿಳೆಯರು ಭೂತಳದ ಗಣಿಗಳಲ್ಲಿ ಕಾರ್ಯ ಮಾಡಬಾರದು ಎಂಬ ನೂತನ ಅಂಶವನ್ನು ಸೇರಿಸಲಾಗಿದೆ. ಇದರ ಅವಧಿ ಹೆರಿಗೆಯ ಮುಂಚಿನ ಹತ್ತು ವಾರಗಳದ್ದಾಗಿದೆ; ಹೀಗಾಗಿ ಯಾವ ಮಹಿಳೆಯೂ ಹೆರಿಗೆಗೆ ಮುಂಚಿನ ಹತ್ತು ವಾರಗಳ ಕಾಲ ಕಾರ್ಯ ಮಾಡುವಂತಿಲ್ಲ. ಈ ಅವಧಿಗೆ ನೀಡಬೇಕಾದ ಸೌಕರ್ಯಗಳನ್ನೂ ಮಸೂದೆಯಲ್ಲಿ ಹೇಳಿದೆ. ಈ ವಿಧವಾಗಿ ೯೦ ದಿನಗಳ ಉಚಿತ ಸೌಕರ್ಯದ ಲಾಭವನ್ನು ಪಡೆಯಲು, ಭೂತಳದಡಿಯಲ್ಲಿ ಕನಿಷ್ಠ ೬ ತಿಂಗಳ ಕೆಲಸ ನಿರ್ವಹಿಸಿರಬೇಕು. ಇವೇ ಈ ಮಸೂದೆಯ ಪ್ರಮುಖ ಅಂಶಗಳು.

ಮಾನ್ಯರೆ, ಈ ಮಸೂದೆಗೆ ಹಲವಾರು ತಿದ್ದುಪಡಿಗಳನ್ನು ಮಂಡಿಸಿರುವುದನ್ನು ನಾನು ಗಮನಿಸಿದ್ದೇನೆ, ಹಾಗೂ ನಾನೇ ಸರ್ಕಾರದ ಪರವಾಗಿ ಹಲವಾರು ತಿದ್ದುಪಡಿಗಳನ್ನು ತರಲು ಬಯಸಿದ್ದೇನೆ. ಆದರೆ ಸಮಯದ ಅಭಾವದಿಂದಾಗಿ, ಹಾಗೂ ಎಲ್ಲರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಕಾಲಹರಣಮಾಡದೇ ಈ ಮಸೂದೆಯನ್ನು ಶೀಘ್ರವಾಗಿ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಕಳಿಸಬೇಕೆಂದು ಕೋರುತ್ತೇನೆ. ನಾನು ಮಂಡಿಸಬೇಕೆಂದಿರುವ ತಿದ್ದುಪಡಿಗಳನ್ನು ಹಾಗೂ ಇತರರು ಮಂಡಿಸಬಹುದಾದ ತಿದ್ದುಪಡಿಗಳನ್ನು ಪರಸ್ಪರವಾಗಿ ಚರ್ಚಿಸಿಕೊಳ್ಳಬಹುದು. ಹೀಗಾಗಿ ನಾನು ಸದನದ ಸಮಯ ಹಾಳುಮಾಡದೆ ನನ್ನ ಮಾತುಗಳನ್ನು ಮುಕ್ತಾಯ ಮಾಡಿ ಈ ಮಸೂದೆಯನ್ನು ಮಂಡಿಸುವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಸದನದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಬಗೆಗೆ ನಾನು ಹೆಚ್ಚಿಗೆ ಏನೂ ಹೇಳಬೇಕಾದುದಿಲ್ಲ. ಆದರೆ ಒಂದು ಸಂಗತಿ ನಾನು ಹೇಳಬಯಸುವೆ. ಅದೇನೆಂದರೆ, ಭೂಮಿಯ ಆಳದಲ್ಲಿ ಗಣಿಯಲ್ಲಿ ಕಾರ್ಯಮಾಡುವ ಮಹಿಳೆಯರ ಪ್ರಶ್ನೆಯನ್ನು ಈ ತಿದ್ದುಪಡಿ ಮಸೂದೆಯ ಜೊತೆಗೆ ಕೂಡಿಸಬಾರದು. ನನಗೆ ಸಂತಸ ಎಂದರೆ ಈಗ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮಾನ್ಯ ಸದಸ್ಯರೂ ಈ ಎರಡರಲ್ಲಿಯ ವ್ಯತ್ಯಾಸವನ್ನು ಅರಿತೇ ಮಾತನಾಡಿದ್ದಾರೆ. ಸರಕಾರದ ಅಭಿಪ್ರಾಯವನ್ನು ವಿರೋಧಿಸಿದವರ ಬಗೆಗೆ ನನಗೆ ಯಾವ ವಿಧವಾದ ಕೋಪವಿಲ್ಲ. ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರಿಗೂ ಈ ತಿದ್ದುಪಡಿಯ ಆವಶ್ಯಕತೆಯ ಅರಿವಿದೆ. ಸದನದ ಸದಸ್ಯರು ಈ ವಿಧವಾಗಿ ತಮ್ಮ ಸಹಕಾರ ನೀಡಿದ್ದಕ್ಕೆ ನನಗೆ ಸಂತೋಷವಾಗಿದೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ಈಗ ಪ್ರಶ್ನೆ ಎಂದರೆ :

"ಗಣಿಗಳ–ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಮಸೂದೆ ೧೯೪೧ನ್ನು ತಿದ್ದುಪಡಿಗಾಗಿ

ಪರಿಶೀಲನಾ ಸಮಿತಿಗೆ ಕಳಿಸಬೇಕು. ಸಮಿತಿಯ ಸದಸ್ಯರೆಂದರೆ ಸರ್ವಶ್ರೀ ಎಂ. ಅನಂತಶಯನಂ ಅಯ್ಯಂಗಾರ್, ಪ್ರೊ॥ ಎನ್.ಜಿ. ರಂಗಾ, ಕೆ.ಬಿ. ಜಿನರಾಜ ಹೆಗಡೆ, ಮೌಲಾನ ಜಾಫರ್ ಆಲೀ ಖಾನ್, ಸರ್ ಸೈಯದ್ ರಜಾ ಆಲೀ, ಅಮರೇಂದ್ರನಾಥ ಚಟ್ಟೋಪಾಧ್ಯಾಯ, ಎನ್.ಎಂ. ಜೋಷಿ, ರಾವ್ ಬಹದ್ದೂರ್ ಎನ್. ಶಿವರಾಜ, ಎಚ್.ಜಿ. ಸ್ಟೋಕ್ಸ್, ಎಸ್.ಸಿ. ಜೋಷಿ ಹಾಗೂ ಈ ಮಸೂದೆಯನ್ನು ಮಂಡಿಸುವವರು. ಸಮಿತಿಯ ಕಾರ್ಯಕಲಾಪಕ್ಕೆ ಕನಿಷ್ಠ ೫ ಸದಸ್ಯರಿರಲೇಬೇಕು".

ನಿಲುವಳಿಯನ್ನು ಅಂಗೀಕರಿಸಲಾಯಿತು.

## ೪೬

## ಕಾರ್ಖಾನೆಗಳ (ಎರಡನೆ ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** (ಕಾರ್ಮಿಕ ಸದಸ್ಯ) : ಮಾನ್ಯರೆ, ನಾನು ಈ ಸೂಚನೆಯನ್ನು ಮಂಡಿಸುವೆ :

"೧೯೩೪ರ ಕಾರ್ಖಾನೆಯ ಮಸೂದೆ ಪರಿಶೀಲನಾ ಸಮಿತಿಯ ವರದಿಯಂತೆ ಹೆಚ್ಚುವರಿ ತಿದ್ದುಪಡಿಗೆಂದು ಮಂಡಿಸುವೆ"

ಮಾನ್ಯರೆ, ಸಮಿತಿಯ ವರದಿಯು ಸದನದ ಮುಂದೆ ಅನೇಕ ದಿನಗಳಿಂದಿದೆ. ನನಗೆ ತಿಳಿದಂತೆ, ಆಸಕ್ತಿ ಹೊಂದಿರುವ ಸದಸ್ಯರೆಲ್ಲರೂ ಈ ವರದಿಯನ್ನು ಕೂಲಂಕಷವಾಗಿ ಪರಾಂಬರಿಸಿದ್ದಾರೆಂದು ನಂಬಿದ್ದೇನೆ. ನಾನು ಹೆಚ್ಚಿಗೆ ಏನೂ ಹೇಳದೆ, ಸಮಿತಿಯು ನಾನು ಮಂಡಿಸಿದ ಮಸೂದೆಯಲ್ಲಿ ಮಾಡಿರಬಹುದಾದ ಬದಲಾವಣೆಯನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಮಾನ್ಯರೆ, ಸಮಿತಿಯು ಮೂಲವಾಗಿ ಐದು ಬದಲಾವಣೆಗಳನ್ನು ತಂದಿದೆ. ಮೊದಲನೆಯ ಬದಲಾವಣೆ ಎಂದರೆ, ಕಾರ್ಮಿಕರ ವೇತನಸಹಿತ ರಜೆಗಳ ಜಮಾವಣೆಯ ಹಕ್ಕನ್ನು ರಕ್ಷಿಸುವುದಾಗಿದೆ. ಮಸೂದೆಯ ಅಡಿಯಲ್ಲಿ, ಹಾಗೂ ಇತರ ಕಾನೂನುಗಳಂತೆ, ಅಥವಾ ಒಪ್ಪಂದದ ಮೇರೆಗೆ ದೊರೆಯಬಹುದಾದ ನಿಗದಿತ ರಜೆಗಳಲ್ಲದೆ, ವೇತನಸಹಿತ ರಜೆಗಳು ಬೇರೆಯಾಗಿವೆ. ಈ ಅಂಶವು ಮೂಲ ಮಸೂದೆಯಲ್ಲಿ ಇರಲಿಲ್ಲ, ಆದುದರಿಂದ ಇದನ್ನು ೪೯–ಎ ಖಂಡದ ೨ನೇ ಉಪಖಂಡದಲ್ಲಿ ಸೇರಿಸಲಾಗಿದೆ. ಎರಡನೆಯ ಬದಲಾವಣೆ ಎಂದರೆ, ವೇತನಸಹಿತ ರಜೆಯ ಸೌಲಭ್ಯವನ್ನು ಮಕ್ಕಳಿಗೂ ವಿಸ್ತರಿಸಿದೆ. ಈ ವಿಧವಾದ ಸೌಲಭ್ಯ ಸದನದಲ್ಲಿ ಮಂಡಿಸಿದ ಮುಂಚಿನ ಮಸೂದೆಯಲ್ಲಿ ಇರಲಿಲ್ಲ, ಆಯ್ಕೆ ಸಮಿತಿಯು, ಕೇವಲ ವೇತನಸಹಿತ ರಜೆಯ ಏರ್ಪಾಡನ್ನು ಮಾತ್ರವಲ್ಲದೆ ರಜೆಗಳನ್ನು ಹೆಚ್ಚಿಸಿ ವಿಸ್ತರಿಸಿದೆ. ಕಾರ್ಮಿಕರಿಗೆ ಕೇವಲ ಏಳು ದಿನಗಳ ರಜೆ ಮಾತ್ರ ಇದೆ. ಆದರೆ ಮಕ್ಕಳಿಗೆ ೧೪ ದಿನಗಳು. ಈ ಸಂಗತಿಯನ್ನು ಖಂಡ ೪೯–ಬಿಯಲ್ಲಿ ಸದಸ್ಯರು ಕಾಣಬಹುದಾಗಿದೆ. ಸದನದ ತಿಳಿವಳಿಕೆಯಂತೆ ಮಸೂದೆಯನ್ನು ಮಂಡಿಸಿದಾಗ ಕಾರ್ಮಿಕರು ಗಳಿಸಬೇಕಾದ ರಜೆಯ ಅವಧಿಯ ಮುಂಚೆ ಅವರನ್ನು ಕೆಲಸದಿಂದ ತೆಗೆದುಹಾಕಿದಾಗ ಅಥವಾ ರಾಜೀನಾಮೆ ನೀಡಿದಲ್ಲಿ ಅವರಿಗೆ ಯಾವ ಏರ್ಪಾಡನ್ನೂ ಕಲ್ಪಿಸಿರಲಿಲ್ಲ. ಆದರೆ ಆಯ್ಕೆ ಸಮಿತಿಯು ಈ ವಿಷಯದ ಮಹತ್ವವನ್ನು ಅರಿತು ನೂತನ ಏರ್ಪಾಡುಗಳನ್ನು ಮಾಡಿದೆ.

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೩, ೨೯ ಮಾರ್ಚ್ ೧೯೪೫, ಪು. ೨೨೭೦–೭೧

ಈ ತಿದ್ದುಪಡಿಯಲ್ಲಿ ಅಳವಡಿಸಿದ ಮತ್ತೊಂದು ನೂತನ ಸೂತ್ರವೆಂದರೆ, ಕಾರ್ಮಿಕನ ಪರವಾಗಿ ಇನ್ಸ್‌ಪೆಕ್ಟರ್‌ರಿಗೇ, ಅಧಿಕಾರವನ್ನು ನೀಡಿರುವುದು. ಕಾರ್ಮಿಕನು ತನಗೆ ವೇತನಸಹಿತ ರಜೆಯ ಸೌಲಭ್ಯಗಳಿಂದ ವಂಚಿತನಾದಾಗ ಮಾಲೀಕರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಅಧಿಕಾರಿಗೆ ನೀಡಲಾಗಿದೆ. ಈ ದಿಶೆಯಲ್ಲಿ ಆಯ್ಕೆ ಸಮಿತಿಯು, ಕಾರ್ಮಿಕನು ತನಗೆ ಆಗಿರಬಹುದಾದ ಅನ್ಯಾಯದ ವಿರುದ್ಧ ಹೋರಾಡಲು ಅಸಮರ್ಥ ಎಂದು ಅರಿತೇ ಈ ವಿಧವಾದ ನೂತನ ಸೂತ್ರವನ್ನು ಅಳವಡಿಸಿದೆ. ಆದುದರಿಂದ ಈಗ ರಾಜ್ಯಗಳು ಕಾರ್ಮಿಕನ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಆವಶ್ಯಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು. ಈಗ ಅಧಿಕಾರವನ್ನು ಇನ್ಸ್‌ಪೆಕ್ಟರ್‌ರಿಗೇ ನೀಡುವುದರಿಂದ ಇದು ಸಾಧ್ಯವಾಗಬಹುದು, ಏಕೆಂದರೆ ಕಾರ್ಮಿಕನ ಪರವಾಗಿ, ಮಾಲೀಕರ ವಿರುದ್ಧ ಅಧಿಕಾರಿಯೇ ಕ್ರಮ ತೆಗೆದುಕೊಳ್ಳಬಹುದಾಗಿದೆ.

ಆಯ್ಕೆ ಸಮಿತಿಯು ಮಾಡಿರಬಹುದಾದ ಮತ್ತೊಂದು ಪ್ರಮುಖ ಬದಲಾವಣೆ ಎಂದರೆ, ಕಾನೂನುಗಳನ್ನು ರಚಿಸುವ ಕ್ರಮಕ್ಕೆ ಸೇರಿದೆ. ಸದನದ ಸದಸ್ಯರಿಗೆ ನೆನಪಿರುವಂತೆ ಮೂಲ ಕಾಯ್ದೆಯಲ್ಲಿ ಕಾನೂನು ರಚಿಸುವ ಅಧಿಕಾರವನ್ನು ಪ್ರಾಂತೀಯ ಸರ್ಕಾರಗಳಿಗೆ ನೀಡಲಾಗಿತ್ತು. ಆಯ್ಕೆ ಸಮಿತಿಯ ದೃಷ್ಟಿಯಲ್ಲಿ ಈ ವಿಧವಾದ ಅಧಿಕಾರದಿಂದಾಗಿ ಬೇರೆ ಬೇರೆ ಪ್ರಾಂತಗಳು ಒಂದೇ ಕಾನೂನಿನ ಅಡಿಯಲ್ಲಿ ವಿವಿಧ ಕಾನೂನುಗಳನ್ನು ರಚಿಸಲು ಅವಕಾಶ ನೀಡಿದಂತಾಗುತ್ತದೆ. ಹೀಗಾಗಿ ಮೂಲ ಮಸೂದೆಯ ಉದ್ದೇಶ ಸಾಧಿಸದೆ ಹೋಗಲೂಬಹುದು. ನಿಸ್ಸಂದೇಹವಾಗಿ ಈ ವಿಧವಾದ ಅವಕಾಶವು ವಿವಿಧ ಉದ್ದಿಮೆಗಳ ಮೇಲೆ ವಿವಿಧ ಪ್ರಭಾವವನ್ನು ಬೀರಬಹುದು. ಏಕೆಂದರೆ ಒಂದು ಪ್ರಾಂತದಲ್ಲಿಯ ಒಂದು ಉದ್ದಿಮೆ ಒಂದು ವಿಧವಾದ ಕಾನೂನುಗಳಿಗೆ ಒಳಪಟ್ಟಿದ್ದರೆ, ಅದೇ ಉದ್ದಿಮೆ ಬೇರೆ ಪ್ರಾಂತದಲ್ಲಿ ವಿಭಿನ್ನ ಕಾನೂನುಗಳಿಗೆ ಒಳಪಡುವುದರಿಂದ ಅನಾವಶ್ಯಕ ಪೈಪೋಟಿಯಿಂದ ಉದ್ದಿಮೆಗಳ ಪ್ರಗತಿಗೆ ಮಾರಕವಾಗಬಹುದು. ಆದುದರಿಂದ ಆಯ್ಕೆ ಸಮಿತಿಯು ಭಾರತ ಸರಕಾರಕ್ಕೆ ಆದೇಶ ನೀಡಿ, ಭಾರತಾದ್ಯಂತ ಒಂದೇ ವಿಧವಾದ ಕಾನೂನು ಇರುವ ವಿಧಾನದಲ್ಲಿ ರಾಜ್ಯಗಳು ತಮ್ಮ ತಮ್ಮ ನಿಯಮಾವಳಿಗಳನ್ನು ರಚಿಸಬೇಕು, ಇದರಿಂದಾಗಿ ಭಾರತದ ಎಲ್ಲೆಡೆಯಲ್ಲಿಯೂ ಒಂದೇ ವಿಧವಾದ ನಿಯಮವಿರುತ್ತದೆ ಎಂದಿದೆ. ಆಯ್ಕೆ ಸಮಿತಿಯ ಸಲಹೆಯ ಮೇರೆಗೆ ಈ ಹಲವು ಪ್ರಮುಖ ಬದಲಾವಣೆಗಳನ್ನು ಮಸೂದೆಯಲ್ಲಿ ಸೇರ್ಪಡಿಸಲಾಗಿದೆ. ಮಿಕ್ಕ ವಿಷಯಗಳು ಮೂಲ ಮಸೂದೆಯಲ್ಲಿದ್ದಂತೇ ಇರುವುದರಿಂದ ನಾನು ಹೆಚ್ಚಿಗೆ ಏನೂ ಹೇಳದೆ ಮಸೂದೆಯನ್ನು ಮಂಡಿಸುವೆ.

**ಉಪಾಧ್ಯಕ್ಷರು (ಶ್ರೀ ಅಖಿಲ ಚಂದ್ರದತ್)** : ನಿಲುವಳಿ ಮಂಡಿಸಲಾಗಿದೆ

"೧೯೩೪ರ ಕಾರ್ಖಾನೆಗಳ ಮಸೂದೆಗೆ, ಆಯ್ಕೆ ಸಮಿತಿಯ ಸಲಹೆಗಳ ಮೇರೆಗೆ ತಿದ್ದುಪಡಿ ನಿಲುವಳಿಯನ್ನು ಪರಿಶೀಲನೆಗೆ ಮಂಡಿಸಲಾಗಿದೆ."

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗೆ ತೋರಿದಂತೆ ಮಾನ್ಯ ಸದಸ್ಯರ ಎಲ್ಲಾ ಬೇಡಿಕೆಗಳು ತಿದ್ದುಪಡಿಯಲ್ಲಿ ಅಡಕವಾಗಿರುವುದರಿಂದ ಈ ನಿಲುವಳಿಯ ಬಗೆಗೆ ಸದಸ್ಯರು ಎತ್ತಿರಬಹುದಾದ ವಿಷಯಗಳ ಬಗೆಗೆ ನಾನು ಮಾತನಾಡಿದಲ್ಲಿ ಪುನರನುಕರಣೆ ಮಾಡಿದಂತಾಗಿ ಸದನದ ಸಮಯ ನಷ್ಟವಾಗುತ್ತದೆ. ಆದುದರಿಂದ ಹೆಚ್ಚಿಗೆ ಮಾತನಾಡದೆ ಸೂಕ್ತ ಸಮಯದಲ್ಲಿ ನಿಲುವಳಿಗಳನ್ನು ಮಂಡಿಸಿದಲ್ಲಿ ಮಾತ್ರ ಮಾತನಾಡುವೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಸರ್ವಶ್ರೀ ಜೋಷಿ ಹಾಗೂ

ಪ್ರೊ॥ ರಂಗಾ ಅವರು ಸೂಚಿಸಿದ ತಿದ್ದುಪಡಿಗಳನ್ನು ನನಗೆ ಒಪ್ಪಿಕೊಳ್ಳಲಾಗದೇ ಇರುವುದಕ್ಕೆ ವಿಷಾದಿಸುತ್ತೇನೆ. ಒಬ್ಬ ಕಾರ್ಮಿಕನು, ಒಬ್ಬ ಅಥವಾ ಅನೇಕ ಮಾಲೀಕರ ಅಡಿಯಲ್ಲಿ ಕಾರ್ಯಮಾಡಿ, ತನಗೆ ದೊರೆಯಬೇಕಾದ ರಜೆಗಳನ್ನು ಪಡೆಯಲು ಆವಶ್ಯಕವಾದ ಸೇವಾ ಅವಧಿಯನ್ನು ಪೂರ್ಣಗೊಳಿಸಿರುವುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಈ ದಿಶೆಯಲ್ಲಿ ಎರಡು ಪ್ರಮುಖ ಅಂಶಗಳನ್ನು ಪರಿಶೀಲಿಸಬೇಕು. ಮೊದಲನೆಯ ಪ್ರಶ್ನೆ ಎಂದರೆ ಆಡಳಿತ ಸಾಧ್ಯತೆಗಳ ಕುರಿತಾಗಿದೆ. ನನಗೆ ಸಂತಸ ನೀಡಬಹುದಾದ ವ್ಯವಸ್ಥೆ ಎಂದರೆ ವಿಮಾ ಪದ್ಧತಿ. ಈ ವಿಧವಾದ ವಿಮಾ ಪದ್ಧತಿ ಜಾರಿಗೊಳಿಸಿದರೆ ಮಾಲೀಕರಿಂದ ನೀಡಲಾದ ಕಾಣಿಕೆಗಳನ್ನು ವ್ಯಕ್ತ್ಯೇತರ (Depersonalized) ಅಧಿಕಾರವನ್ನು ನಿಧಿಯ ಮೇಲೆ ಹೊಂದಲು ಸಾಧ್ಯ. ಈ ವಿಧವಾದ ವ್ಯವಸ್ಥೆ ಇರದೇ ಹೋದಲ್ಲಿ ಯಾವ ಏರ್ಪಾಡುಗಳನ್ನೂ ಮಾಡಲು ಸಾಧ್ಯವಾಗದೇ ಹೋಗಬಹುದು. ಒಂದು ವೇಳೆ ನಾನು ನನ್ನ ಮಿತ್ರರು ಸೂಚಿಸುವ ತಿದ್ದುಪಡಿಗಳನ್ನು ಒಪ್ಪಲೇ ಬೇಕಾದಲ್ಲಿ, ಉದಾಹರಣೆಗೆ ಆರೋಗ್ಯ ವಿಮಾ ಪದ್ಧತಿಯನ್ನು ತೆಗೆದುಕೊಂಡಲ್ಲಿ ಕಾರ್ಡುಗಳ, ಮುದ್ರೆ ಮುಂತಾದ ಪದ್ಧತಿಯ ಆಧಾರದ ಮೇಲೆ ಆಡಳಿತೆಯನ್ನು ನಡೆಸಿಕೊಂಡು ಹೋಗುವುದಾದರೆ ನಾನು ಅವರ ತಿದ್ದುಪಡಿಗಳನ್ನು ಒಪ್ಪಬಹುದಾಗಿದೆ. ಆದರೆ ಈ ವಿಧವಾದ ಆಡಳಿತ ವ್ಯವಸ್ಥೆ ಇಲ್ಲವಾದರೆ ನನ್ನ ಮಾನ್ಯ ಮಿತ್ರರು ಸೂಚಿಸಿದ ತಿದ್ದುಪಡಿಗಳನ್ನು ಒಪ್ಪಲಾರೆ.

ಮುಂದುವರಿದು, ನಾನು ಹೇಳಬಯಸುವುದೇನೆಂದರೆ, ಆಯ್ಕೆ ಸಮಿತಿ ಹಾಗೂ ಸದನದ ಅಪೇಕ್ಷೆಯಂತೆ ಈ ಕಾನೂನು ಜಾರಿಗೊಳಿಸಲು ಒಂದು ತೇದಿಯನ್ನು ನಿಗದಿಪಡಿಸಬೇಕೆಂಬುದಿತ್ತು. ನನ್ನ ಮಿತ್ರರಿಗೆ ಜ್ಞಾಪಕವಿರುವಂತೆ ಈ ದಿನಾಂಕವನ್ನು ನಿಗದಿಪಡಿಸುವ ಅಧಿಕಾರ ಪ್ರಾಂತೀಯ ಸರ್ಕಾರಗಳಿಗೆ, ಮೂಲ ಮಸೂದೆಯಲ್ಲಿ ಅವಕಾಶ ನೀಡಲಾಗಿತ್ತು. ಆದರೆ ನಾವು ಈಗ ಈ ವಿಧಾನವನ್ನು ಬದಲಾಯಿಸಿ, ಈ ಕಾನೂನೇ ಜಾರಿಗೊಳಿಸಬೇಕಾದ ದಿನಾಂಕವನ್ನು ನಿಗದಿಪಡಿಸಬೇಕೆಂಬ ನಿಲುವಿಗೆ ಬಂದಿದ್ದೇವೆ; ಹಾಗೂ ಮೊದಲನೇ ಜನವರಿ ೧೯೪೬ ಇದನ್ನು ಜಾರಿಗೊಳಿಸುವ ದಿನಾಂಕ ಎಂದೂ ಈಗ ನಿರ್ಧರಿಸಲಾಗಿದೆ. ಆದುದರಿಂದ ಈ ದಿಶೆಯಲ್ಲಿ ಜಾರಿಯಲ್ಲಿ ತರಬೇಕೆಂದಿರುವ ಆಡಳಿತ ವ್ಯವಸ್ಥೆಯ ಎಲ್ಲಾ ಏರ್ಪಾಡುಗಳನ್ನೂ ಜನವರಿ ೧೯೪೬ರ ಅವಧಿಯಲ್ಲಿಯೇ ಮಾಡುವುದು ಅನಿವಾರ್ಯ. ಆದರೆ ನನಗೆ ತಿಳಿದಂತೆ ಈ ನನ್ನ ಮಿತ್ರರು ಸೂಚಿಸಿದ ತಿದ್ದುಪಡಿಗಳನ್ನು ಜಾರಿಗೊಳಿಸಲು ಬೇಕಾದ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೇ ಆಗಲೀ ಅಥವಾ ಪ್ರಾಂತೀಯ ಸರ್ಕಾರಗಳಿಗೆ ಆಗಲಿ ಸಾಧ್ಯವಾಗದೇ ಹೋಗಬಹುದು. ಈಗಾಗಲೇ ನಾನು ತಿಳಿಸಿರುವಂತೆ ನನಗೆ ನನ್ನ ಮಿತ್ರರ ಬಗೆಗೆ ಅನುಕಂಪವಿದೆ, ಆದರೆ ಆಡಳಿತ ವ್ಯವಸ್ಥೆಗಳಿಂದ ಉಂಟಾಗಬಹುದಾದ ತೊಂದರೆಗಳಿಂದ ಅವರ ಸಲಹೆಗಳನ್ನು ಒಪ್ಪುವುದು ಅಸಾಧ್ಯವಾಗಿದೆ.

**ಪ್ರೊ॥ ಎನ್.ಜಿ. ರಂಗಾ :** ಸರಕಾರ ಒಪ್ಪಿದಲ್ಲಿ ನಾನು ಒಂದು ಸೂಚನೆ ಮಂಡಿಸಬಹುದೇ? ಮೊದಲನೆಯದಾಗಿ ನಾವು "ವಿವಿಧ ಆಡಳಿತಗಳ" ಎಂಬ ಪದಗಳನ್ನು ತೆಗೆದು ಅದರ ಬದಲಿಗೆ "ಒಂದೇ ಆಡಳಿತಕ್ಕೆ ಸೇರಿದ ಕಾರ್ಖಾನೆಗಳು" ಎಂದು ಸೇರಿಸಬಹುದಲ್ಲವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಎಲ್ಲಾ ಕ್ರಮಗಳಿಂದ ತೊಂದರೆ ಉಂಟಾಗುತ್ತದೆ ಎಂದೇ ನನ್ನ ಭಾವನೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಮಂಡಿಸಿದವರು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಬಗೆಗೆ ನನಗೆ ಭರವಸೆ ಸಾಲದು. ಏಕೆಂದರೆ ನಾವು ಸಾಮಾನ್ಯವಾಗಿ

ಅಂತಾರಾಷ್ಟ್ರೀಯ ಸಮ್ಮೇಳನವು ಕೈಗೊಂಡಿರುವ ನಿರ್ಣಯಗಳನ್ನೇ ಮಾನದಂಡವಾಗಿಸಿ ಮಾನ್ಯತೆ ನೀಡುತ್ತೇವೆ. ಸದನಕ್ಕೆ ನೆನಪಿರುವಂತೆ ೧೯೩೬ರ ಅಂತಾರಾಷ್ಟ್ರೀಯ ಕಾರ್ಮಿಕರ ಸಮ್ಮೇಳನವು ೬ ದಿನಗಳನ್ನೇ ರಜೆಗೆ ಪರಿಗಣಿಸಬೇಕೆಂದು ತೀರ್ಮಾನಿಸಿತ್ತು. ಆ ದೃಷ್ಟಿಯಿಂದ, ನಾನು ಈ ವಿಷಯವನ್ನು ನೋಡಿದಾಗ, ಸಭೆಯಲ್ಲಿ ಮಂಡಿಸಿದ ಮಸೂದೆಯು ಆ ಮಟ್ಟವನ್ನು ತಲುಪಿಲ್ಲ ಎಂದು ಯಾರಾದರೂ ಹೇಳಬಹುದು. ಅಲ್ಲದೆ, ನನ್ನ ದೃಷ್ಟಿಯಲ್ಲಿ ಮತ್ತೊಂದು ತೊಂದರೆ ಇದೆ. ಅದೇನೆಂದರೆ, ಕಾರ್ಮಿಕರ ವಿಷಯವು ಸಮವರ್ತಿ ಪಟ್ಟಿಯಲ್ಲಿದೆ. ಸಂವಿಧಾನದಂತೆ, ಈ ವಿಷಯದ ಆಡಳಿತ ಜವಾಬ್ದಾರಿ ಮತ್ತು ಆಡಳಿತಾಧಿಕಾರ ಪ್ರಾಂತೀಯ ಸರ್ಕಾರಕ್ಕೇ ಸೇರಿದೆ. ಹಾಗೂ ಈ ದಿಶೆಯಲ್ಲಿ ಜಾರಿಯಲ್ಲಿರುವ ಸಂಪ್ರದಾಯದಂತೆ, ಯಾವ ವಿಷಯವೇ ಆಗಲಿ ಈ ಪಟ್ಟಿಯಲ್ಲಿದ್ದು ಅದನ್ನು ಚರ್ಚಿಸುವಾಗ ರಾಜ್ಯಗಳ ಸಹಮತವನ್ನು ಪಡೆಯುವುದು ಗೌರವ ಸಂಪ್ರದಾಯ ಎಂದು ಹೇಳಬಯಸುವೆ. ನಾನು ಸದನಕ್ಕೆ ಜ್ಞಾಪಿಸುವುದೇನೆಂದರೆ ಈ ಮಸೂದೆಯನ್ನು ಜಾರಿಗೊಳಿಸುವ ದಿನಾಂಕವನ್ನು ಪ್ರಾಂತೀಯ ಸರ್ಕಾರಗಳೊಂದಿಗೆ ಸಮಾಲೋಚಿಸಿ. ಆದರೂ, ನಾನು ಈ ತಿದ್ದುಪಡಿಯನ್ನು ಒಪ್ಪಲು ಸಿದ್ಧನಿದ್ದೇನೆ. ಅದಕ್ಕೆ ಕಾರಣವೆಂದರೆ, ಭೌಗೋಲಿಕವಾಗಿ ಉದ್ದಿಮೆ ಕೇಂದ್ರಗಳು ಹಾಗೂ ಜನಸಂಖ್ಯಾ ಕೇಂದ್ರಗಳು ಅಧಿಕ ದೂರದಲ್ಲಿವೆ. ಅಂದರೆ ಉದ್ದಿಮೆಗಳು ಬೊಂಬಾಯಿಯಲ್ಲಿದ್ದರೆ, ಕಾರ್ಮಿಕರು ಸಂಯುಕ್ತ ಪ್ರಾಂತದಲ್ಲಿ ಇಲ್ಲವೇ ಮಧ್ಯಪ್ರಾಂತ್ಯಗಳಲ್ಲಿದ್ದು ತಾವು ಒಂದು ಉಪಯುಕ್ತ ಉದ್ಯೋಗ ಹೊಂದಬೇಕೆಂದರೆ ಅತಿದೂರ ಪ್ರಯಾಣ ಮಾಡಲೇ ಬೇಕಾಗುವುದು. ಈ ವಿಧವಾದ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡೇ ಈ ಮೂಲ ಮಸೂದೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗೆ ಅವಕಾಶ ನೀಡಲು ಸಿದ್ಧನಿದ್ದೇನೆ. ಈ ಒಂದು ಕಾರಣಕ್ಕೆ ನಾನು ತಿದ್ದುಪಡಿಗೆ ಒಪ್ಪುತ್ತೇನೆ. ಆದರೆ ಅದೇ ಸಮಯದಲ್ಲಿ ನಾನು ಒಂದು ಸಂಗತಿಯನ್ನು ಒತ್ತಾಯಿಸಲು ಬಯಸಿದ್ದೇನೆ. ಅದೇನೆಂದರೆ ಇನ್ನೊಂದು ತಿದ್ದುಪಡಿಯು ಪ್ರೊ॥ ರಂಗಾ ಹಾಗೂ ಶ್ರೀಮತಿ ಸುಬ್ಬರಾಯನ್ ಅವರ ಹೆಸರಿನಲ್ಲಿದೆ. ಹಾಗೂ ಅವರ ಹೇಳಿಕೆಯಂತೆ "ಕನಿಷ್ಠವಾಗಿ" (at least) ಎಂಬ ಪದವನ್ನು ಪುನಃ ಸೇರಿಸಬೇಕೆಂದಿದೆ. ಈ ಪದವನ್ನು ಆಯ್ಕೆ ಸಮಿತಿಯು ನಿರಾಕರಿಸಿತ್ತು. ಆದರೆ ಈಗ ಈ ಪದವನ್ನು ಸೇರಿಸಲೇಬೇಕೆಂದು ಒತ್ತಾಯಿಸಿದರೆ, ಈ ಮೂಲಭೂತ ವಿಷಯಗಳಲ್ಲಿರಬಹುದಾದ ಸಾಮರಸ್ಯಕ್ಕೆ ಧಕ್ಕೆ ತಗಲುವುದರಿಂದ ನಾನು ಅವುಗಳನ್ನು ಕೈಬಿಡಬೇಕೆಂದು ಕೇಳಿಕೊಳ್ಳುವೆ. ಅವರು ಈ ವಿಷಯಕ್ಕೆ ಸಮ್ಮತಿಸಿದಲ್ಲಿ ನಾನು ತಿದ್ದುಪಡಿಯನ್ನು ಅಂದರೆ "೧೦ ದಿನಗಳನ್ನು" ಒಪ್ಪಿಕೊಳ್ಳಲು ಸಿದ್ಧನಿದ್ದೇನೆ.

**ಪ್ರೊ॥ ಎನ್.ಜಿ. ರಂಗಾ : (ಗುಂಟೂರು ಹಾಗೂ ನೆಲ್ಲೂರು ಗ್ರಾಮಾಂತರ:** ಮುಸಲ್ಮಾನೇತರ): ನಾವು ತಿದ್ದುಪಡಿಯನ್ನು ಕೈಬಿಡಲು ಸದ್ಯ ಸಿದ್ಧರಿದ್ದೇವೆ.

**ಅಧ್ಯಕ್ಷರು : (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ತಾವು ನಿಲುವಳಿಗಾಗಿ ಒತ್ತಾಯಿಸುವುದಿಲ್ಲವೇ?

**ಪ್ರೊ॥ ಎನ್.ಜಿ. ರಂಗಾ :** ಮತ್ತೊಂದು ತಿದ್ದುಪಡಿಗೆ ಒತ್ತಾಯಿಸುವುದಿಲ್ಲ

**ಅಧ್ಯಕ್ಷರು : (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈಗ ಪ್ರಶ್ನೆ ಎಂದರೆ,

ಈ ಮಸೂದೆಯ ೩ನೇ ಕಲಮಿನ ಉಪಕಲಮಿನ (೧) ಮತ್ತು (೨)ರ ೪೯ಬಿಯಲ್ಲಿ ಇರಬಹುದಾದ "ಏಳು" ಪದದ ಬದಲಾಗಿ 'ಹತ್ತು' ಎಂಬ ಪದವನ್ನು ಸೇರಿಸಲಾಗಿದೆ"

ನಿಲುವಳಿಯನ್ನು ಒಪ್ಪಲಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಒಂದು ಆನುಷಂಗಿಕ ತಿದ್ದುಪಡಿ ಉಪಪ್ರಕರಣ (೨) ರಲ್ಲಿಯ ಪದ 'ಹತ್ತು' ಎಂಬುದನ್ನು 'ಏಳ'ರ ಜಾಗದಲ್ಲಿ ಸೇರಿಸಬೇಕು.

**ಅಧ್ಯಕ್ಷರು : (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ನನಗೆ ತಿಳಿದಂತೆ, ಮಾನ್ಯ ಸದಸ್ಯರು

ಈ ದಿಶೆಯಲ್ಲಿ ಒಂದು ತಿದ್ದುಪಡಿಯನ್ನು ನಂತರ ಮಂಡಿಸಬಹುದು. ಅದನ್ನು ನಂತರ ಕೈಗೆತ್ತಿಕೊಳ್ಳಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಉಪಕಲಮಿನ (೨)ರ ಕೊನೆಯ ಪಂಕ್ತಿಯಲ್ಲಿಯ ಪದ **"ಹತ್ತು"** ಎಂಬುದನ್ನು **"**ಏಳ**"**ರ ಬದಲಿಗೆ ಸೇರಿಸಬಹುದು.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ಸಾಮಾನ್ಯ ರೂಪದ ತಿದ್ದುಪಡಿ ಅನಿವಾರ್ಯ ಎಂದು ಹೇಳುವೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಶೋಚನೀಯ ಅಥವಾ ವಿಷಾದನೀಯ ವಿಷಯವೆಂದರೆ ನಾನು ಈ ತಿದ್ದುಪಡಿ ಮಸೂದೆಯನ್ನು ಒಪ್ಪಲಾರೆ. 'ಅನಾರೋಗ್ಯ'ದ ವ್ಯಾಖ್ಯೆಯನ್ನು ನೀಡಿಲ್ಲ ಎಂದು ನನ್ನ ಮಾನ್ಯ ಮಿತ್ರರಾದ ಗೌರವಾನ್ವಿತ ಇನ್‌ಸ್ಕಿಪ್ ಅವರು ಹೇಳಿದ್ದಾರೆ. ಹಾಗಾದರೆ ನಾವು ಅನಾರೋಗ್ಯದ ವ್ಯಾಖ್ಯೆಯನ್ನು ನಿರ್ಧರಿಸುವುದು ಉತ್ತಮ. ನಾನು ಈ ಪದದ ವ್ಯಾಖ್ಯೆಗಾಗಿ ಆರೋಗ್ಯ ವಿಮಾ ಕಾಯ್ದೆಯನ್ನು ಪರಿಶೀಲಿಸಿದೆ. ಆದರೆ ಅದರಲ್ಲಿ ಈ ಬಗೆಗೆ ಯಾವ ವ್ಯಾಖ್ಯೆಯೂ ಗೋಚರವಾಗಲಿಲ್ಲ. ಸರಳ ಕಾರಣ ಏನೆಂದರೆ ಅನಾರೋಗ್ಯವನ್ನು ವ್ಯಾಖ್ಯೆಯಲ್ಲಿ ಹೇಳಲು ಬಾರದಿರುವುದು. ಮುಂದುವರಿದು ತಿಳಿಯಬೇಕಾದುದೇನೆಂದರೆ ಯಾರೇ ವೈದ್ಯರು, ಪ್ರಮಾಣೀಕರಿಸಿದಲ್ಲಿ (Certification) ಅದನ್ನು ಎಲ್ಲರೂ ಒಪ್ಪಲೇಬೇಕು. ಹೀಗಾಗಿ ನನ್ನ ಮಿತ್ರರು ಪ್ರಮಾಣ ಪತ್ರದ ಬಗೆಗೆ ರೀತಿನೀತಿಗಳನ್ನು ತಿಳಿಸಿದ್ದರೆ ನಾನು ಖಂಡಿತಾ ಒಪ್ಪಿಕೊಳ್ಳುತ್ತಿದ್ದೆ. ಈ ದಿಶೆಯಲ್ಲಿ ಕೂಡ ಅವರು ಎತ್ತಬಹುದಾದ ತಿದ್ದುಪಡಿಗಳು ಅನಾವಶ್ಯಕ. ಏಕೆಂದರೆ ನಾವು ಮಸೂದೆಯಲ್ಲಿ ಯಾರು ಮತ್ತು ಹೇಗೆ ಈ ಪ್ರಮಾಣ ಪತ್ರವನ್ನು ನೀಡಬಹುದು ಎಂಬುದರ ಬಗೆಗೆ ವಿವರ ನಿಯಮಾವಳಿಯನ್ನು ರಚಿಸಲಿದ್ದೇವೆ. ಹಾಗೂ ಅವರಿಗೆ ಇರಬೇಕಾದ ಅರ್ಹತೆಯನ್ನೂ ನಿರ್ಧರಿಸಲಿದ್ದೇವೆ. ಆದುದರಿಂದ ನಿರುದ್ಯೋಗಿ ವೈದ್ಯರು, ಈ ವಿಧವಾದ ಪ್ರಮಾಣ ಪತ್ರಗಳನ್ನೇ ತಮ್ಮ ಬಂಡವಾಳ ಮಾಡಿಕೊಳ್ಳಲು ಅವಕಾಶವಿರದಂತೆ ಕೂಡಾ ನೋಡಿಕೊಳ್ಳಲಾಗುವುದು. ನಾನು ಈ ಮಸೂದೆಯನ್ನು ಒಪ್ಪದೇ ಇರುವುದಕ್ಕೆ ಇರಬಹುದಾದ ಕಾರಣವೇನೆಂದರೆ, ನನ್ನ ಮಿತ್ರರು ಕೇವಲ ವೈದ್ಯರ ಪ್ರಮಾಣ ಪತ್ರವೊಂದೇ 'ಅನಾರೋಗ್ಯ'ವನ್ನು ನಿರ್ಧರಿಸಲು ಸಾಲದು, ಈ ನಿರ್ಣಯ ತೆಗೆದುಕೊಳ್ಳುವಲ್ಲಿ ಮಾಲೀಕರ ಪಾತ್ರವೂ ಇರಬೇಕೆಂದಿದ್ದಾರೆ. ಅಂದರೆ ಪ್ರಮಾಣ ಪತ್ರವಿರದೇ ಹೋದರೂ ಅವರು ರಜೆಯನ್ನು ನೀಡಲು ಸಮರ್ಥರೇ. ಹೀಗಿದ್ದರೆ ಅಂತಹ ಪ್ರಕರಣಕ್ಕೆ ಸರ್ಕಾರವು ಮಧ್ಯಪ್ರವೇಸಲು ಸಿದ್ಧರಿಲ್ಲ. ನಾವು ವೈದ್ಯರಿಗೆ ಇರಬೇಕಾದ ಅರ್ಹತೆಗಳನ್ನು ಹೇಳಿದಾಗ ಕೂಡ ಅವರು ನೀಡಬಹುದಾದ ಅನಾರೋಗ್ಯ ಪ್ರಮಾಣ ಪತ್ರವನ್ನು ಸಂದೇಹಿಸುವ ಅವಕಾಶವನ್ನು ಮಾಲೀಕರಿಗೆ ನೀಡಲು ಸರ್ಕಾರ ಸಿದ್ಧವಿಲ್ಲ. ಈ ಕ್ರಮ ಮಾಲೀಕರಿಗೆ ವಿಶೇಷ ಅಧಿಕಾರ ನೀಡಿದಂತಾಗುತ್ತದೆ, ಹೀಗಾಗಿ ನಾನು ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಮತ್ತೊಂದು ವಿಷಯ, ನನ್ನ ಮಿತ್ರರು ಹೇಳಿದಂತೆ, ನಾವು ಮೂರು ವಿಧವಾದ ಅನಾರೋಗ್ಯಗಳಿಗಾಗಿ ೯೦ ದಿನಗಳ ರಜೆಯನ್ನು ನಿಗದಿಪಡಿಸಿದ್ದೇವೆ (ಅಪಘಾತ ಹಾಗೂ ಅಧಿಕೃತ ರಜೆಗಳು). ಆದುದರಿಂದ ಕಾರ್ಮಿಕರ ಬಗೆಗೆ ಅಸೂಯೆ ಪಡಬೇಕಾಗಿಲ್ಲ ಹಾಗೂ ಅದನ್ನು ದೀರ್ಘಾವಧಿಗೆ ಎಳೆಯಲೂ ಬಾರದು. ಏಕೆಂದರೆ ಮೂರು ವಿಧಗಳಿಗಾಗಿ ನಾವು ೯೦ ದಿನಗಳ ಏರ್ಪಾಡನ್ನು ಮಾಡಿದ್ದೇವೆ. ೯೦ ದಿನ ಅವಧಿಯನ್ನು ಮೀರಿದಲ್ಲಿ ಮಸೂದೆಯಲ್ಲಿ ಸಿಗಬಹುದಾದ ಸೌಕರ್ಯಗಳಿಂದ ಕಾರ್ಮಿಕರು ವಂಚಿತರಾಗುತ್ತಾರೆ. ಈ ಎಲ್ಲ ಅಂಶಗಳನ್ನು ಗಮನಿಸಿ ನಾನು ತಿದ್ದುಪಡಿಯನ್ನು ವಿರೋಧಿಸುವೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್)** : ಈಗಿನ ಪ್ರಶ್ನೆ.

"ಮಸೂದೆಯ ಮೂರನೇ ಪ್ರಕರಣದಲ್ಲಿ ವಿವರಿಸಲಾದ ಯೋಜಿತ ಪ್ರಕರಣ ೪೯ಬಿಯಲ್ಲಿಯ "ಅನಾರೋಗ್ಯ, ಅಪಘಾತ, ಅಥವಾ ಅಧಿಕೃತ ರಜೆಗಳು" ಈ ಪದಗಳ ಬದಲಾಗಿ "ಅಧಿಕೃತ ರಜೆಗಳು ಅನಾರೋಗ್ಯದ ಕಾರಣದಿಂದಾಗಿ, ಅಪಘಾತ, ಅಥವಾ ಅನುಕಂಪದ ಕಾರಣಗಳಿಗಾಗಿ ಎಂದು ಸೇರಿಸಲಾಗಿದೆ"

ನಿಲುವಳಿಯನ್ನು ನಿರಾಕರಿಸಲಾಗಿದೆ.

# ೪೭

# ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಮಸೂದೆ (ತಿದ್ದುಪಡಿ)*

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯ) : ನಾನು ಮಂಡಿಸುವೆ,

"೧೯೪೧ರ ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಮಸೂದೆ, ಪರಿಶೀಲನಾ ಸಮಿತಿಯ ವರದಿಯಂತೆ ಹೆಚ್ಚಿನ ತಿದ್ದುಪಡಿಗಾಗಿ."

ಮಾನ್ಯರೆ, ಆಯ್ಕೆ ಸಮಿತಿಯು ಈ ಮಸೂದೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿದೆ. ಆದುದರಿಂದ ನಾನು ಹೆಚ್ಚಿಗೆ ಏನೂ ಹೇಳದೆ, ಕೇವಲ ಆಯ್ಕೆ ಸಮಿತಿ ಮಾಡಿದ ಪ್ರಮುಖ ಬದಲಾವಣೆಗಳನ್ನು ಕುರಿತು ಹೇಳುವೆ.

(ಈ ಸಂದರ್ಭದಲ್ಲಿ **ಅಧ್ಯಕ್ಷ ಗೌರವಾನ್ವಿತ ಸರ್ ಅಬ್ದುರ್ ರಹೀಮ್** ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮೊದಲನೆಯ ಬದಲಾವಣೆ ಎಂದರೆ, ಗರ್ಭಿಣಿ ಸ್ತ್ರೀಯರು ಅಥವಾ ಭೂಮಿಯ ಆಳದ ಗಣಿಗಳಲ್ಲಿ ಕಾರ್ಯ ಮಾಡುವ ಮಹಿಳೆಯರು ಕೆಲಸಮಾಡುವುದನ್ನು ನಿರೋಧಿಸುವ ಬಗೆಗೆ. ಮೂಲ ಮಸೂದೆಯಲ್ಲಿ ಹೆರಿಗೆಗೆ ಮುನ್ನ ೧೦ ವಾರದ ಹಾಗೂ ಹೆರಿಗೆಯ ನಂತರ ೪ ವಾರ ಅವಧಿಗಾಗಿ ಗರ್ಭಿಣೀ ಸ್ತ್ರೀಯರು ಕೆಲಸಮಾಡುವುದನ್ನು ನಿರೋಧಿಸಲಾಗಿತ್ತು. ಆಯ್ಕೆ ಸಮಿತಿಯು ಹೆರಿಗೆ ಮುನ್ನ ೧೦ ವಾರಗಳ ಅವಧಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಆದರೆ ಹೆರಿಗೆಯ ನಂತರದ ಅವಧಿಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿದೆ.

ಮೊದಲನೆಯ ಬದಲಾವಣೆ ಎಂದರೆ, ೪ ವಾರದಿಂದ ಮೂವತ್ತಾರು ವಾರಗಳಿಗೆ ಅವಧಿಯನ್ನು ವಿಸ್ತರಿಸಿದೆ. ಈ ಮೂವತ್ತಾರು ವಾರಗಳ ಅವಧಿಯನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಒಂದು ಭಾಗ ಸಂಪೂರ್ಣವಾಗಿ ಗರ್ಭಿಣಿ ಸ್ತ್ರೀಯರು ಕಾರ್ಯಮಾಡುವುದನ್ನು ನಿರೋಧಿಸಿದರೆ, ಮತ್ತೊಂದು ಭಾಗ ಅರೆ ನಿರೋಧವನ್ನು ಸೂಚಿಸುತ್ತದೆ. ಪೂರ್ಣ ನಿರೋಧವನ್ನು ಆಯ್ಕೆ ಸಮಿತಿಯು ೪ ವಾರಗಳಿಂದ ೨೬ ವಾರಗಳಿಗೆ ವಿಸ್ತರಿಸಿದೆ. ಅರೆ ನಿರೋಧವನ್ನು ಮುಂದಿನ ೧೦ ವಾರಗಳಿಗೆ ವಿಸ್ತರಿಸಿದೆ. ಮುಂದುವರಿದು ಭಾಗಶಃ ನಿರೋಧವನ್ನು ಶಿಶುಪಾಲನೆ ಕೇಂದ್ರಗಳ ಸೌಲಭ್ಯದ ಮೇಲೆ ಆಧರಿಸಿ ಎರಡು ಭಾಗಗಳಾಗಿ ವಿಂಗಡಿಸಿದೆ. ಶಿಶುಪಾಲನೆ ಕೇಂದ್ರಗಳಿರದೇ ಹೋದಲ್ಲಿ ಭೂಮಿಯ ಆಳದ ಗಣಿಯಲ್ಲಿ ದಿನಕ್ಕೆ ೪ ತಾಸಿಗಿಂತ ಹೆಚ್ಚು ಅವಧಿ ಕಾರ್ಯಮಾಡುವಂತಿಲ್ಲ; ಮತ್ತು ಕೇಂದ್ರಗಳಿದ್ದಲ್ಲಿಯೂ ಮಹಿಳೆಯರು ಇದೇ ವಿಧವಾಗಿ ಕೇವಲ ೪ ಗಂಟೆಗಳ ಕಾಲ ಮಾತ್ರ ಕೆಲಸ ಮಾಡಬಹುದಾಗಿದೆ. ಈ ವಿಧವಾದ ಬದಲಾವಣೆಯನ್ನು

---

*ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ. ೪, ೨ ಏಪ್ರಿಲ್ ೧೯೪೫, ಪು. ೨೭೮೮–೮೯.

ಆಯ್ಕೆ ಸಮಿತಿ ಮಾಡಿದೆ.

ಭೂಮಿಯ ಆಳದ ಗಣಿಗಳಲ್ಲಿ ಕಾರ್ಯಮಾಡುವ ಮಹಿಳೆಯರ ಹೆರಿಗೆ ಸೌಕರ್ಯ ಕುರಿತಂತೆ ಆಯ್ಕೆ ಸಮಿತಿಯು ಮಾಡಿರಬಹುದಾದ ಬದಲಾವಣೆಗಳು ಈ ಕೆಳಕಂಡಂತಿವೆ: ಮೂಲ ಮಸೂದೆಯಲ್ಲಿ ಈ ವಿಧವಾದ ಹೆರಿಗೆ ಸೌಕರ್ಯವನ್ನು ಪಡೆಯಲು ಎರಡು ನಿಯಮಗಳಿದ್ದವು. ಅವುಗಳೆಂದರೆ ಒಬ್ಬ ಗರ್ಭಿಣಿ ಸ್ತ್ರೀ ಕನಿಷ್ಠ ೬ ತಿಂಗಳ ಅವಧಿಯವರೆಗಾದರೂ ಗಣಿಯಲ್ಲಿ ಕಾರ್ಯಮಾಡಿರಬೇಕು ಹಾಗೂ ಈ ೬ ತಿಂಗಳ ಅವಧಿಯಲ್ಲಿ ಕನಿಷ್ಠ ೯೦ ದಿನಗಳು ನೆಲದ ಆಳದಲ್ಲಿ ಕಾರ್ಯಮಾಡಿರಬೇಕು. ಆಯ್ಕೆ ಸಮಿತಿಯು ಮೊದಲನೆಯ ೬ ತಿಂಗಳ ಅವಧಿಯನ್ನು ತೆಗೆದುಹಾಕಿದೆ. ತಿದ್ದುಪಡಿಯಲ್ಲಿ ಸೂಚಿಸಿದಂತೆ ಹೆರಿಗೆ ಮುನ್ನ ೯೦ ದಿನಗಳಂದು ಗರ್ಭಿಣಿ ಸ್ತ್ರೀ ಭೂಮಿಯ ಆಳದಲ್ಲಿ ಕಾರ್ಯ ಮಾಡಿದ್ದರೆ ಅವಳಿಗೆ ಎಲ್ಲಾ ಸೌಕರ್ಯಗಳು ದೊರೆಯಬೇಕೆಂದಿದೆ.

ಆಯ್ಕೆ ಸಮಿತಿಯು ಸೌಕರ್ಯದ ಅವಧಿಯ ಬಗೆಗೆ ಹಲವು ಬದಲಾವಣೆಗಳನ್ನು ಮಾಡಿದೆ. ಮೂಲ ಮಸೂದೆಯಲ್ಲಿ ಹೆರಿಗೆಯ ಮುನ್ನ ೧೦ ವಾರಗಳ ಹಾಗೂ ಹೆರಿಗೆಯ ನಂತರ ೪ ವಾರಗಳದ್ದಾಗಿತ್ತು. ಆದರೆ ಆಯ್ಕೆ ಸಮಿತಿಯು ಹೆರಿಗೆಯ ನಂತರದ ಅವಧಿಯನ್ನು ೬ ವಾರಗಳಿಗೆ ವಿಸ್ತರಿಸಿದೆ. ಅಂತೆಯೇ ಹಣದ ಮೊತ್ತದಲ್ಲಿಯೂ ಬದಲಾವಣೆಯನ್ನು ಮಾಡಿದೆ. ಮೂಲ ಮಸೂದೆಯಲ್ಲಿ ದಿನಕ್ಕೆ ಎಂಟಾಣೆ ಎಂದಿದ್ದರೆ ಆಯ್ಕೆ ಸಮಿತಿಯು ವಾರ ಒಂದಕ್ಕೆ ೬ ರೂಪಾಯಿಗಳೆಂದು ಬದಲಾಯಿಸಿದೆ, ಅಂದರೆ, ದಿನಕ್ಕೆ ೧೪ ಅಣೆಗಳಿಗಿಂತ ಕೊಂಚ ಕಡಿಮೆ ಎಂದಂತಾಗಿದೆ. ಅಲ್ಲದೆ ಈ ಸಂಪೂರ್ಣ ಅವಧಿಯನ್ನು, ಅಧಿಕೃತ ರಜೆ ಎಂದು ಪರಿಗಣಿಸಲಾಗಿರುವುದರಿಂದ ಮಾಲೀಕರು ಮಹಿಳೆಯರನ್ನು ಈ ಅವಧಿಯಲ್ಲಿ ಕೆಲಸದಿಂದ ತೆಗೆದುಹಾಕಲು ಬಾರದು.

ಮತ್ತೊಂದು ಪ್ರಮುಖ ಬದಲಾವಣೆ ಎಂದರೆ, ಮಹಿಳೆಯರ ವೈದ್ಯಕೀಯ ತಪಾಸಣೆ ಕುರಿತಾಗಿದೆ. ಒಂದು ವೇಳೆ ಮಹಿಳಾ ವೈದ್ಯರೇ ಬೇಕೆಂದು ಕೋರಿದರೆ ಕೇವಲ ಮಹಿಳಾ ವೈದ್ಯರಲ್ಲಿಯೇ ತಪಾಸಣೆಗೆ ಅವಕಾಶ ನೀಡಬೇಕೆಂದಿದೆ. ಇದು ಮೂಲ ಮಸೂದೆಯಲ್ಲಿರಲಿಲ್ಲ. ಮತ್ತೊಂದು ವಿಷಯದ ಬಗೆಗೆ ಸದನದ ಗಮನ ಸೆಳೆಯಬೇಕೆಂದಿರುವೆ, ಈ ೩೬ ವಾರಗಳ ನಿರೋಧ ಅವಧಿಯಲ್ಲಿ ೩೨ ವಾರಗಳಂದು ಮಹಿಳೆಯರು ಭೂಮಿ ಆಳದ ಗಣಿಗಳನ್ನು ಹೊರತುಪಡಿಸಿ ಬೇರೆ ಎಲ್ಲಿಯಾದರೂ ಕಾರ್ಯಮಾಡಲೂ ಅವಕಾಶ ನೀಡಿದೆ. ಈ ವಿಧವಾದ ಅಧಿಕ ಆದಾಯ ಪಡೆಯುವ ಸೌಕರ್ಯ ಮೂಲ ಮಸೂದೆಯಲ್ಲಿ ಇರಲಿಲ್ಲ. ಈ ಅವಧಿಯ ಮೊದಲ ೪ ವಾರಗಳಿಂದ ಮಾತ್ರ ಅವಳು ಕೆಲಸಮಾಡಲು ಬರುವಂತಿಲ್ಲ. ಅದೆಂದರೆ ಹೆರಿಗೆಯ ನಂತರದ ೪ ವಾರಗಳು. ಹೀಗಾಗಿ ತಿದ್ದುಪಡಿಯ ಮಸೂದೆಯ ಅಡಿಯಲ್ಲಿ ೮ ಆಣೆ ದಿನಕೂಲಿಯಿಂದ ೧೨ ಆಣೆ ಪಡೆಯುವ ಅಂದರೆ ಶೇಕಡಾ ೫೦ ಹೆಚ್ಚಿನ ಆದಾಯ ಪಡೆಯಲು ಅವಕಾಶ ಕಲ್ಪಿಸಿದಂತೆ ಆಗಿದೆ. ಮೂಲ ಮಸೂದೆಯಲ್ಲಿ ಈ ಅವಕಾಶವಿರಲಿಲ್ಲ.

ಹೀಗೆ ಪ್ರಮುಖ ಬದಲಾವಣೆಗಳಿವೆ. ಆಯ್ಕೆ ಸಮಿತಿ ಸಾಕಷ್ಟು ಬದಲಾವಣೆಗಳನ್ನು ತಂದಿದ್ದರೂ ಕೂಡ ಸರ್ಕಾರ ಪರಿಸ್ಥಿತಿಯನ್ನು ಅರಿತಿರುವುದರಿಂದ ತಿದ್ದುಪಡಿಯನ್ನು ತಿರಸ್ಕರಿಸುವುದಿಲ್ಲ.

ಮಾನ್ಯರೆ, ಈ ಮಸೂದೆಯನ್ನು ನಾನು ಮಂಡಿಸುವೆ.

**ಅಧ್ಯಕ್ಷರು (ಗೌರವಾನ್ವಿತ ಸರ್ ಅಬ್ದುರ್ ರಹೀಮ್) :** ನಿಲುವಳಿ ಮಂಡಿಸಿದೆ "೧೯೪೧ರ ಗಣಿಗಳಲ್ಲಿನ ಮಹಿಳಾ ಕಾರ್ಮಿಕರ ಹೆರಿಗೆ ಸೌಕರ್ಯ ಮಸೂದೆಯನ್ನು ಆಯ್ಕೆ ಸಮಿತಿಯ ವರದಿಯೊಂದಿಗೆ ಮಂಡಿಸಲಾಗಿದೆ."

# ೪೮
# ಉದ್ದಿಮೆ ಕಾರ್ಮಿಕರ ಆರೋಗ್ಯವಿಮೆ *

**ಆಧಾರ್‌ಕರ್ ವರದಿಯ ಚರ್ಚೆ–ಸ್ಥಾಯಿ ಕಾರ್ಮಿಕ ಸಮಿತಿಯಿಂದ**

ದಿನಾಂಕ ಮಾರ್ಚ್ ೧೭ರಂದು, ನವದೆಹಲಿಯಲ್ಲಿ ಕರೆಯಲಾದ ಸ್ಥಾಯಿ ಸಮಿತಿಯ ಸಭೆಯಲ್ಲಿ ಪ್ರೊ॥ ಆಧಾರ್‌ಕರ್ ಅವರು, ಉದ್ದಿಮೆ ಕಾರ್ಮಿಕರ ವಿಮಾ ಯೋಜನೆ ಬಗೆಗೆ ಸಲ್ಲಿಸಿದ ವರದಿಯನ್ನು ಚರ್ಚಿಸಲಾಯಿತು. ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್, ಭಾರತ ಸರ್ಕಾರದ ಕಾರ್ಮಿಕ ಸದಸ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸ್ಟಾಕ್ ಹಾಗೂ ಐ.ಎಲ್.ಓ.ದ ಸದಸ್ಯರಾದ ಶ್ರೀ ರಾವ್ ಅವರು ಸಂದರ್ಶಕರಾಗಿ ಸಭೆಗೆ ಆಗಮಿಸಿದ್ದು, ಅವರು ಈ ಯೋಜನೆಯನ್ನು ಕುರಿತು ಮಾಡಿದ ಸೂಚನೆಗಳನ್ನು ಸದಸ್ಯರಿಗೆ ಸುತ್ತೋಲೆಯ ಮುಖಾಂತರ ತಿಳಿಸಲಾಯಿತು.

ಸಭೆಯಲ್ಲಿ ಹಾಜರಿದ್ದ, ಕಾರ್ಮಿಕರ ಹಾಗೂ ಮಾಲೀಕರ ಪ್ರತಿನಿಧಿಗಳು ಪ್ರೊ॥ ಆಧಾರ್‌ಕರ್ ಅವರ ವರದಿಯನ್ನು ಮೆಚ್ಚಿಕೊಂಡರು. ಅಲ್ಲದೆ ವೈದ್ಯಕೀಯ ಹಾಗೂ ನಗದು ರೂಪದಲ್ಲಿ ನೀಡುವ ಸವಲತ್ತುಗಳ ಬಗೆಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ವೈದ್ಯಕೀಯ ಸೌಲಭ್ಯಗಳು ಕುರಿತಂತೆ ಅರ್ಹತೆ ಹಾಗೂ ಕಾಲಾವಧಿ, ಉಪಚಾರದ ವಿಧಾನ, ಹಾಗೂ ವೈದ್ಯಕೀಯ ಸಂಸ್ಥೆಗಳ ಮತ್ತು ರಾಜ್ಯ ನೀಡಬೇಕಾದ ದೇಣಿಗೆಗಳನ್ನೂ ಗಮನಿಸಲಾಯಿತು. ಹಾಜರಿದ್ದ ಅನೇಕ ಪ್ರತಿನಿಧಿಗಳು ವರದಿಯನ್ನು ಶೀಘ್ರವೇ ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಈ ವರದಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿ ಈ ವರದಿಯ ಲಾಭ, ಎಲ್ಲಾ ಸಂಘಟಿತ ಉದ್ದಿಮೆ ಹಾಗೂ ಮೂಲ ಕಾರ್ಖಾನೆಗಳಿಗೂ ದೊರೆಯುವಂತೆ, ಅದರ ವ್ಯಾಪ್ತಿಯನ್ನು ವಿಸ್ತರಿಸಬೇಕೆಂದೂ ಆಗ್ರಹಿಸಿದರು.

**ಹೆರಿಗೆ ಸೌಕರ್ಯಗಳು :** ಕೇಂದ್ರಕ್ಕೆ ಸಾಧ್ಯವಿದ್ದಲ್ಲಿ, ಹೆರಿಗೆ ಹಾಗೂ ಕಾರ್ಮಿಕರ ಪರಿಹಾರ ಧನ ಈ ಎರಡನ್ನೂ ಈ ಮಸೂದೆಯಲ್ಲಿ ಮುಂದುವರಿಸಲು ಸರ್ವ ಸಮ್ಮತಿಯಿಂದ ಸೂಚಿಸಲಾಯಿತು. ಈ ವಿಧವಾದ ಯೋಜನೆಯನ್ನು ಕೇಂದ್ರ ಸಿದ್ಧಪಡಿಸಿ, ನಂತರ ಪ್ರಾಂತಗಳಲ್ಲಿನ ಮಾಲೀಕರ ಹಾಗೂ ಕಾರ್ಮಿಕ ಸಂಘಗಳ ಸಲಹೆ ಪಡೆದು, ಮಸೂದೆಯ ಮೂಲಕ ಶಾಸನ ಸಭೆಯಲ್ಲಿ ಮಂಡಿಸಬೇಕೆಂದೂ ತಿಳಿಸಲಾಯಿತು.

ಕಾರ್ಯಕ್ರಮದ ಪಟ್ಟಿಯಲ್ಲಿ ಇದ್ದ ಮತ್ತೊಂದು ವಿಷಯ ಎಂದರೆ ತ್ರಿಪಕ್ಷೀಯ ಕಾರ್ಮಿಕರ ಸಮಾವೇಶ ಹಾಗೂ ಕಾರ್ಮಿಕರ ಸ್ಥಾಯಿ ಸಮಿತಿಯ ಸಂವಿಧಾನ ಹಾಗೂ ಕಾರ್ಯಾಚರಣೆಗಳಲ್ಲಿ ಸೂಕ್ತ ಬದಲಾವಣೆಗಳನ್ನು ಎರಡು ವಿಧದಲ್ಲಿ ಜಾರಿಗೆ ತರುವುದು. ಮೊದಲನೆ ವರ್ಗದಲ್ಲಿ ಉದ್ಯೋಗದ ಸ್ಥಿತಿಗತಿಗಳು, ಕಾರ್ಮಿಕರ ಶಾಸನಗಳು, ಸಾಮಾಜಿಕ ಭದ್ರತೆ, ಮುಂತಾದ ವಿಷಯಗಳ ಬಗ್ಗೆ ಇದ್ದರೆ, ಎರಡನೆ ವರ್ಗದಲ್ಲಿ ಕಾರ್ಮಿಕರ ಕಲ್ಯಾಣ ಹಾಗೂ ಕಾರ್ಮಿಕರ ಕಾನೂನುಗಳ ಆಡಳಿತ ಬಗೆಗೆ ಬರುವ ಸಮಸ್ತ ಪ್ರಶ್ನೆಗಳ ಬಗೆಗಿನ ವಿಚಾರವಿದೆ.

ಸಮಿತಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಕಾರ್ಮಿಕರ ಕಲ್ಯಾಣ ಸಮಿತಿಯನ್ನು ರಚಿಸಿ ಪಟ್ಟಿಯ ಎರಡನೆಯ ವರ್ಗದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನೂ ಅದಕ್ಕೆ ಬಿಡಬೇಕೆಂದು ಕೋರಲಾಗಿದೆ. ಈ

---

* ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್ ೧೫, ೧೯೪೫. ಪು. ೫೦೫.

ಕೋರಿಕೆಯ ಮೂಲ ಉದ್ದೇಶವೆಂದರೆ ಈ ದಿಶೆಯಲ್ಲಿಯ ಎಲ್ಲಾ ಸಮಸ್ಯೆಗಳನ್ನು, ಸರ್ವ ಪ್ರತಿನಿಧಿಗಳ ಸಮಿತಿಯ ಮುಂದೆ ತರುವುದರಿಂದ ವಿವಿಧ ಉದ್ದಿಮೆಗಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗೆ ಪರಿಹಾರ ದೊರೆಯಬಹುದು. ಆಗ ಕಾರ್ಮಿಕರ ಸಮಾವೇಶ, ಹಾಗೂ ಸ್ಥಾಯಿ ಸಮಿತಿಗಳು ಕೇವಲ ಉದ್ಯೋಗದ ಸ್ಥಿತಿಗತಿ ಹಾಗೂ ಷರತ್ತುಗಳ ಮತ್ತು ಕಾರ್ಮಿಕ ಶಾಸನಗಳನ್ನು ಮಾತ್ರ ಪರಿಶೀಲಿಸಲು ಮತ್ತು ಸಾಮಾಜಿಕ ಭದ್ರತೆ ಬಗೆಗೆ ಮಾತ್ರ ಗಮನಹರಿಸಲು ಅನುಕೂಲವಾಗುತ್ತದೆ. ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಲು ಉಪಸಮಿತಿಯೊಂದನ್ನು ನೇಮಿಸಬೇಕೆಂದು ನಿರ್ಧರಿಸಲಾಯಿತು.

## ೪೯
## ಯುದ್ಧಕಾರ್ಯಗಳ ರಾಷ್ಟ್ರೀಯ ಸೇವಾ ಕಾರ್ಮಿಕ ನ್ಯಾಯಾಧಿಕರಣಗಳು *

### ಡಾ॥ ಬಿ.ಆರ್. ಅಂಬೇಡ್ಕರ್‌ರವರಿಂದ ಪ್ರಶಂಸೆ

“ಒಂದು ಸಮಯದಲ್ಲಿ ಯುದ್ಧದ ಕಾರ್ಯಾಚರಣೆ ಸಮಂಜಸವಾಗಿ ನಡೆಯದೇ, ಭಾರತವು ಆಕ್ರಮಣದ ಭೀತಿಗೆ ಒಳಪಟ್ಟಿತ್ತು. ಅಲ್ಲದೆ ಭಾರತವು ತಾಂತ್ರಿಕ ಪರಿಣತರ ಅಭಾವದ ಕಾರಣದಿಂದ ಯುದ್ಧರಂಗದಲ್ಲಿನ ಸೇವೆ, ಹಾಗೂ ಯುದ್ಧಕಾಲದ ಅಗತ್ಯ ಉದ್ದಿಮೆಗಳಲ್ಲಿ ತೀವ್ರ ಅಭಾವವನ್ನು ಎದುರಿಸಬೇಕಾಯಿತು. ಈ ಒಂದು ಒತ್ತಡದ ಪ್ರಭಾವಕ್ಕೆ ಸಿಲುಕಿ, ರಾಷ್ಟ್ರೀಯ ಕಾರ್ಮಿಕರ ಸೇವಾ ಮಂಡಳಿಗಳನ್ನು ರಚಿಸಬೇಕಾಗಿ ಬಂದಿತು. ತಾಂತ್ರಿಕ ಸಿಬ್ಬಂದಿಗಳ ಅಗತ್ಯದ ಬಗೆಗೆ ನಮಗೆ ಹೆಚ್ಚಿನ ಅನುಭವವಿಲ್ಲದೇ ಹೋದುದರಿಂದ ನಾವು ಅದನ್ನು ತ್ವರಿತಗೊಳಿಸಲಾಗಲಿಲ್ಲ. ಹೀಗಾಗಿ ನಮ್ಮ ಯೋಜನೆಗಳ ಗುರಿ ಮಸುಕಾಗತೊಡಗಿತು. ಆದರೆ ಈ ಕಾರ್ಯದಲ್ಲಿ ತಮ್ಮ ಪ್ರಶಂಸನೀಯ ಸೇವೆಯಿಂದಾಗಿ ತೊಂದರೆಗಳಿಂದ ಪಾರಾದೆವು.”

ಹೀಗೆಂದು ದಿನಾಂಕ ೧೯ ಏಪ್ರಿಲ್‌ರಂದು ಸಿಮ್ಲಾದಲ್ಲಿ ತಾಂತ್ರಿಕ ತರಬೇತಿ, ರಾಷ್ಟ್ರೀಯ ತಾಂತ್ರಿಕ ಪರಿಣತರ ಸೇವೆ, ವಿಶೇಷಾಜ್ಞೆ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳ ಕುರಿತು ಮಾಡಲಾದ ಭಾಷಣದಲ್ಲಿ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ॥ ಬಿ.ಆರ್. ಅಂಬೇಡ್ಕರರು ತಮ್ಮ ರಾಷ್ಟ್ರೀಯ ಕಾರ್ಮಿಕ ಸೇವಾ ಮಂಡಳಿ ಅಧ್ಯಕ್ಷ ಸ್ಥಾನದಿಂದ ಹೇಳಿದರು.

ಮುಂದುವರಿದು ಕಾರ್ಮಿಕ ಸದಸ್ಯರು ಹೇಳಿದ್ದೇನೆಂದರೆ :

“ಈ ನ್ಯಾಯಾಧಿಕರಣಗಳು ಸುಮಾರು ೧೫,೦೦೦ ತಂತ್ರಜ್ಞರನ್ನು ರಾಷ್ಟ್ರೀಯ ಸೇವೆಗೆ ನಿರ್ದೇಶಿಸಿವೆ. ಅಲ್ಲದೆ ತಾಂತ್ರಿಕ ಸೇವೆಯ ಮೇಲೆ ಪ್ರಭಾವಯುಕ್ತ ನಿಯಂತ್ರಣವನ್ನೂ ಹೊಂದಿವೆ. ಉದ್ಯೋಗವನ್ನು ಹುಡುಕಿಕೊಂಡು ತಮ್ಮ ಊರುಗಳಿಂದ ಬೇರೆ ಯಾವುದೋ ದೂರವಾದ ಸ್ಥಳಗಳಿಗೆ ಹೋಗುವ ಕಾರ್ಮಿಕರನ್ನು ತಡೆಹಿಡಿಯುವಲ್ಲಿ ಅವು ಸಹಕಾರಿಯಾಗಿವೆ. ಆದರೆ ಈ ವಿಧವಾದ ಅಂದರೆ ಸ್ವಂತ ಊರುಗಳಿಂದ ಉದ್ಯೋಗಕ್ಕಾಗಿ ದೂರ ಹೋಗುವ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸುವಲ್ಲಿ ಇಂಗ್ಲೆಂಡಿನಲ್ಲಿ ಕಾರ್ಮಿಕ ಮಂತ್ರಿ ಶಾಖೆ ಹಾಗೂ ರಾಷ್ಟ್ರೀಯ ಸೇವಾ ವಿಭಾಗಗಳು ಅನೇಕ ಕಲ್ಯಾಣ ಕೇಂದ್ರಗಳನ್ನು ಹಮ್ಮಿಕೊಂಡಿವೆ. ಅಲ್ಲದೇ ಆ ದೇಶದಲ್ಲಿ ಕಾರ್ಮಿಕರ ಉದ್ಯೋಗ ಸ್ಥಿತಿಯು ದೇಶಾದ್ಯಂತ

---

* ಇಂಡಿಯನ್ ಇನ್‌ಫರ್ಮೇಷನ್, ಮೇ ೧೫, ೧೯೪೫, ಪು. ೬೩೯–೪೦.

ಉತ್ತಮ ಮಟ್ಟದಲ್ಲಿರುವುದರಿಂದ, ನಮ್ಮಂತೆ ಪರಿಸ್ಥಿತಿ ವಿಕೋಪಕ್ಕೆ ಹೋಗಿಲ್ಲ. ಆದರೆ ಭಾರತದಲ್ಲಿಯ ಕಾರ್ಮಿಕ ನ್ಯಾಯಾಧಿಕರಣಗಳು ತಮ್ಮ ಕಾರ್ಯಾಚರಣೆಯನ್ನು ತುಂಬಾ ಸಂಯಮದಿಂದ ಹಾಗೂ ಚಾಣಾಕ್ಷತೆಯಿಂದ ನಡೆಸಿ ಯುದ್ಧದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನೂ ಕಾಪಾಡಿಕೊಂಡು ಬಂದಿವೆ.

"ಆದರೆ ಕೆಲವು ಮಾಲೀಕರು ಈ ನ್ಯಾಯಾಧಿಕರಣಗಳು ಕಾರ್ಮಿಕರ ಬಗೆಗೆ ಮೃದುವಾದ ಧೋರಣೆಯನ್ನು ಹೊಂದಿವೆ ಎಂದು ಆಪಾದಿಸಿದ್ದಾರೆ. ಅಂತೆಯೇ ತದ್ವಿರುದ್ಧವಾಗಿ ಈ ನ್ಯಾಯಾಧಿಕರಣಗಳು ಕಾರ್ಮಿಕರ ಬಗೆಗೆ ತೀರಾ ಕಠಿಣ ನಿಲುವನ್ನು ಹೊಂದಿವೆ ಎಂಬುದೂ ಕೇಳಿಬರುತ್ತಿದೆ. ನಾನು ಈ ವಿಧವಾದ ಪರ ಹಾಗೂ ವಿರೋಧ ನೀತಿಯನ್ನು ಎಂದೂ ಕಡೆಗಣಿಸಿಲ್ಲ, ಏಕೆಂದರೆ ಈ ವಿಧವಾದ ಟೀಕೆಗಳಿಂದ ಸರ್ಕಾರಕ್ಕೆ ತನ್ನ ಧೋರಣೆಗಳನ್ನು ತಿದ್ದಿಕೊಳ್ಳುವ ಅವಕಾಶ ದೊರೆಯುತ್ತದೆ. ಆದುದರಿಂದ ತಮಗೆ ಕಂಡುಬಂದಿರುವಂತೆ, ಕಾರ್ಮಿಕರ ವಲಸೆಯನ್ನು ತುಂಬಾ ಬಿಗುವಿನ ಧೋರಣೆಯಿಂದ ನಿಯಂತ್ರಿಸಲಾಗಿದೆ ಎಂದು ಕಲ್ಕತ್ತಾದಿಂದ ದೂರುಗಳು ಬಂದಿವೆ. ಅಂತೆಯೇ ನಾವು ನ್ಯಾಯಾಧಿಕರಣಗಳು ಕಾರ್ಮಿಕರ ಹಾಗೂ ಉದ್ಯೋಗವನ್ನು ಅಭಿವೃದ್ಧಿಗೊಳಿಸುವ ದಿಶೆಯಲ್ಲಿ ಹೆಚ್ಚಿನ ಗಮನ ನೀಡಬೇಕೆಂದೂ ಕೋರಿದ್ದೇವೆ.

**ನ್ಯಾಯಯುತ ನಿಯಂತ್ರಣ**

"ಮುಂದಿನ ಸಭೆಯಲ್ಲಿ ಬರಬಹುದಾದ ವಿಷಯಗಳನ್ನು ಕುರಿತು ನಾನು ಹೆಚ್ಚಿಗೆ ಹೇಳಲು ಬಯಸುವುದಿಲ್ಲ. ಆದರೆ ಯುದ್ಧವು ವಿಧಿಸಿರಬಹುದಾದ ಅಧಿಕ ಒತ್ತಡಗಳ ಪರಿಣಾಮ ಕಾರ್ಮಿಕರ ಮೇಲೆ ಯಾವ ವಿಧವಾದ ಪರಿಣಾಮವನ್ನು ಬೀರಿದೆ ಎಂಬುದನ್ನು ಮಾತ್ರ ಹೇಳಬಯಸುವೆ. ಹೀಗೆ ಇದನ್ನು ಮುಂದುವರಿಯಲು ಬಿಟ್ಟರೆ ಕಾರ್ಮಿಕರು ಹೆಚ್ಚಿನ ತ್ಯಾಗಕ್ಕೆ ಸಿದ್ಧರಾಗಬೇಕಾಗುತ್ತದೆ. ಯುದ್ಧದಿಂದಾಗಿ ಉಂಟಾಗಿರುವ ಈ ಒತ್ತಡವನ್ನು ನಾವು ಕಡಿಮೆಮಾಡದೇ ಹೋದರೆ, ಅವರ ಸ್ಥಿತಿಯು ದುರ್ಭರವಾಗಿ, ಕಾರ್ಮಿಕರ ಕಾರ್ಯಗೌರವಕ್ಕೆ ಚ್ಯುತಿ ಬರಬಹುದು.

"ಇಂಗ್ಲೆಂಡಿನಲ್ಲಿ ಕಾರ್ಮಿಕ ಮಂತ್ರಾಲಯ ಹಾಗೂ ರಾಷ್ಟ್ರೀಯ ಸೇವಾ ಇಲಾಖೆಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ಆದರೆ ಈ ವಿಧವಾದ ಅಧಿಕಾರವನ್ನು ಕಾರ್ಮಿಕರ ಹಾಗೂ ಮಾಲೀಕರ ವಿರುದ್ಧ ಎರಡೂ ದಿಕ್ಕಿನಲ್ಲಿ ಪ್ರಯೋಗಿಸಬಹುದಾಗಿದೆ. ಹೀಗಾಗಿ ಈ ಅಧಿಕಾರವು ಮಾಲೀಕರ ಮತ್ತು ಕಾರ್ಮಿಕರಲ್ಲಿ ಸೌಹಾರ್ದತೆ ಏರ್ಪಡಿಸುವಲ್ಲಿ ಪರಿಣಾಮಕಾರಿಯಾಗಿ ಪ್ರಯೋಗಿಸಲ್ಪಟ್ಟಿದೆ. ನಾನು ಈ ದಿಶೆಯಲ್ಲಿ ಬಯಸುವುದು ಸಹಕಾರ ಮನೋಭಾವನೆ. ಇಂತಹ ಸಹಕಾರ ಭಾವನೆಯಿಂದ ನಾವು ನ್ಯಾಯಯುತ ನಿಯಂತ್ರಣವನ್ನು ಸಾಧಿಸಬಹುದಾಗಿದೆ.

"ರಾಷ್ಟ್ರೀಯ ಕಾರ್ಮಿಕ ಸೇವಾ ನ್ಯಾಯಾಧಿಕರಣಗಳ ಮತ್ತೊಂದು ಸಂಗತಿ ನಮ್ಮ ಗಮನ ಸೆಳೆದಿದೆ. ಅದೇನೆಂದರೆ, ತರಬೇತಿ ಹಾಗೂ ನೇಮಕಾತಿ ಯೋಜನೆಗಳನ್ನು ಭಾರತ ಹಾಗೂ ಇಂಗ್ಲೆಂಡುಗಳಲ್ಲಿ, ಈ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ, ಆದುದರಿಂದ ನಮ್ಮ ತರಬೇತಿ ವ್ಯವಸ್ಥೆಯು ವಿಜಯ ಸಾಧಿಸಿದೆ. ಈ ವಿಷಯ ನನಗೆ ಹೆಮ್ಮೆಯನ್ನು ಉಂಟುಮಾಡಿದೆ.

"ನನಗೆ ತಿಳಿದಂತೆ, ಕಾರ್ಮಿಕ ಮಂತ್ರಾಲಯ ಹಾಗೂ ರಾಷ್ಟ್ರೀಯ ಸೇವಾ ಇಲಾಖೆಯು, ಬೆವಿನ್ ತರಬೇತಿ ಯೋಜನೆಗೆ ಕಳಿಸಲಾದ ತರಬೇತಿದಾರರ ಆಯ್ಕೆ ಹಾಗೂ ಅವರನ್ನು ಇಂಗ್ಲೆಂಡಿಗೆ ಕಳಿಸಿಕೊಟ್ಟ

ಸಂಗತಿ ಬಗ್ಗೆ ತುಂಬಾ ಪ್ರಭಾವವನ್ನು ಬೀರಿದೆ. ನಿಸ್ಸಂದೇಹವಾಗಿ ಬೆವಿನ್ ತರಬೇತಿ ಕೇಂದ್ರದಿಂದ ತರಬೇತಿ ಹೊಂದಿದವರನ್ನು ನಾವು ಅಭಿನಂದಿಸಬೇಕು. ಅವರಲ್ಲಿ ಹಲವರು ನಿಷ್ಪ್ರಯೋಜಕರಾಗಿರಬಹುದು. ಆದರೆ ಅವರ ಸಂಖ್ಯೆ ತುಂಬಾ ಕಡಿಮೆಯಿರುವುದರಿಂದ ನಾವು ಒಟ್ಟಾರೆ ಈ ತರಬೇತಿದಾರರ ಮೇಲೆ ಖರ್ಚು ಮಾಡಿದ ಹಣ ಅಪವ್ಯಯವಾಗಿಲ್ಲವೆಂದೇ ಭಾವಿಸಬೇಕು. ಈ ಬೆವಿನ್ ತರಬೇತಿ ಕೇಂದ್ರದಲ್ಲಿ ಶಿಕ್ಷಣ ಪಡೆದು ಬಂದವರು, ನಮ್ಮ ಕುಶಲ ಕಾರ್ಮಿಕರ ಗುಣಮಟ್ಟವನ್ನು ಅಭಿವೃದ್ಧಿಪಡಿಸುವಲ್ಲಿ ಸಹಕಾರಿಯಾಗುವುದಲ್ಲದೆ, ಅವರು ಭೀಕರ ಯುದ್ಧವನ್ನು ಎದುರಿಸಿದ ಒಂದು ರಾಷ್ಟ್ರದ ವಿಶಿಷ್ಟ ಅನುಭವಗಳನ್ನು ತಮ್ಮೊಂದಿಗೆ ತಂದಿದ್ದಾರೆ. ಈ ವಿಧವಾದ ಸಂಘಟನೆಯನ್ನು ಪಡೆದಿರುವ ರಾಷ್ಟ್ರ ಏನನ್ನು ತಾನೆ ಸಾಧಿಸಲಾರದು? ಹಾಗೂ ಅವರ ಸಾಧನೆಗಳು ಕೇವಲ ಯುದ್ಧ ಸಮಯಕ್ಕೆ ಮಾತ್ರ ಮೀಸಲಾಗಿರದು. ಏಕೆಂದರೆ ಅದನ್ನು ನಾವು ಶಾಂತಿ ಸಮಯದಲ್ಲೂ ಉಪಯೋಗಿಸಬಹುದಲ್ಲವೇ?

**ಪುನರ್‌ವಸತಿ ವ್ಯವಸ್ಥೆ**

"ಯುದ್ಧ ಸಮಯದ ವಿಷಯಗಳಿಗಿಂತ ಯುದ್ಧೋತ್ತರ ಸಮಯದ ವಿಷಯಗಳು ನಮ್ಮನ್ನು ಗಾಬರಿಗೊಳಿಸುತ್ತವೆ. ಈ ದಿಶೆಯಲ್ಲಿ ಮೊದಲಿಗೆ ನಮ್ಮನ್ನು ಗಾಬರಿಗೊಳಿಸುವ ಸಮಸ್ಯೆ ಎಂದರೆ ಪುನರ್‌ವಸತಿ ಕಾರ್ಯ. ಈ ಸಮಸ್ಯೆ ಕೇವಲ ಯುದ್ಧದಲ್ಲಿ ಹೋರಾಟ ಮಾಡಿದ ಸೈನಿಕರಿಗೆ ಮಾತ್ರ ಸೀಮಿತವಾಗಿರದೆ, ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಿದ್ದ ಕಾರ್ಖಾನೆಗಳಲ್ಲಿನ ಕಾರ್ಮಿಕರನ್ನೂ ಕೂಡಿಕೊಂಡಿದೆ. ಯಾವ ದೇಶವೇ ಆಗಲಿ ಈ ವಿಧವಾದ ಮಾಜಿ ಯೋಧರನ್ನು ಹಾಗೂ ಯುದ್ಧ ಉದ್ದಿಮೆ ಕಾರ್ಮಿಕರನ್ನು ಯುದ್ಧ ಹಾಗೂ ಶಾಂತಿ ಸಮಯದ ಪರ್ವಕಾಲದಲ್ಲಿ ಅವರನ್ನು ಅವರ ಪಾಡಿಗೇ ಎಂದೂ ಬಿಡಲಾರದು. ಈ ವಿಧವಾದ ಪುನರ್‌ವಸತಿ ಕಾರ್ಯ ಸರಕಾರಕ್ಕೆ ಸೇರಿದ್ದು, ಅದನ್ನು ಕಾರ್ಮಿಕ ಇಲಾಖೆಯು ಜವಾಬ್ದಾರಿಯಿಂದ ವಹಿಸಿಕೊಳ್ಳಬೇಕಾಗಿದೆ. ಹೀಗಾಗಿ ನಮ್ಮ ಪುನರ್‌ವಸತಿ ಯೋಜನೆಗಳನ್ನು ತಮ್ಮೊಂದಿಗೆ ಚರ್ಚಿಸಬಯಸುವೆ. ಈ ದಿಶೆಯಲ್ಲಿ ಅಧ್ಯಕ್ಷರು, ರಾಷ್ಟ್ರೀಯ ಕಾರ್ಮಿಕ ಸೇವಾ ನ್ಯಾಯಮಂಡಳಿ ಇವರು ಬಹುದೊಡ್ಡ ಪಾತ್ರವನ್ನು ವಹಿಸಬೇಕಾಗಿದೆ.

"ಪುನರ್‌ವಸತಿಯ ಸಮಸ್ಯೆಯನ್ನು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳೆರಡೂ ಕೂಡಿಕೊಂಡೇ ಸಹಕಾರದ ತಳಹದಿಯ ಮೇಲೆ ಸಾಧಿಸಬೇಕು. ಪ್ರಾಂತಗಳಲ್ಲಿ, ಅಧ್ಯಕ್ಷರೇ ಪ್ರಾಂತೀಯ ಸಂಘಟನೆಗಳ ಮುಖ್ಯಸ್ಥರಾಗಿರುತ್ತಾರೆ. ಕೇಂದ್ರದಲ್ಲಿ ಪ್ರಾಂತೀಯ ಸಂಘಟನೆಗಳೊಡನೆ ಸಂಬಂಧವಿರುವ ಇಲಾಖೆಗಳೊಡನೆ ಸಂಪರ್ಕವಿರಿಸಿಕೊಳ್ಳುವುದು ಅವರ ಕರ್ತವ್ಯವಾಗಿದೆ. ಅವರ ಕರ್ತವ್ಯ ತುಂಬಾ ಚಾಣಾಕ್ಷತೆ ಹಾಗೂ ಸಾಮರ್ಥ್ಯದಿಂದ ಕೂಡಿರಬೇಕಾಗಿರುತ್ತದೆ. ಈ ದಿಶೆಯಲ್ಲಿ ಅವರ ಸೇವೆ ಅತಿ ಮುಖ್ಯವಾದದ್ದು.

**ದಕ್ಷ ಉದ್ಯೋಗ ಸೇವೆ**

"ನಾನು ಪುನರ್‌ವಸತಿ ಸಂಘಟನೆಗಳ ವಿವರಗಳನ್ನು ಚರ್ಚಿಸದೇ, ಒಂದು ಸಂಗತಿಯನ್ನು ಖಂಡಿತವಾಗಿ ಹೇಳಬಯಸುವೆ. ಈ ದಿಶೆಯಲ್ಲಿ ನಮ್ಮ ಪ್ರಮುಖ ಉದ್ದೇಶವೆಂದರೆ, ಮಾಜಿ ಯೋಧರಿಗೆ ಹಾಗೂ ಇತರ ಉದ್ಯೋಗರಹಿತ ವ್ಯಕ್ತಿಗಳಿಗೆ, ದಕ್ಷ ಉದ್ಯೋಗ ಸೇವೆಯನ್ನು ಆವಶ್ಯಕವಾಗಿ ಒದಗಿಸುವುದೇ ಈ ಸಂಘಟನೆಗಳ ಉದ್ದೇಶ. ಈ ಪ್ರಮುಖ ಲಕ್ಷಣವನ್ನೇ ಹೊಂದಿರುವ ವ್ಯವಸ್ಥೆಯನ್ನು ಉದ್ಯೋಗ ವಿನಿಮಯ ಕೇಂದ್ರದೊಡನೆ ಸಮನ್ವಯ ಮಾಡಲಾಗುವುದು. ಈ ದಿಕ್ಕಿನಲ್ಲಿ ನಾವು ಈಗಾಗಲೇ ಹಲವಾರು ಉದ್ಯೋಗ ವಿನಿಮಯ

ಕೇಂದ್ರಗಳನ್ನು ರಚಿಸಿದ್ದು ಅವು ಉತ್ತಮ ಫಲಿತಾಂಶವನ್ನು ನೀಡಿವೆ. ಆದರೆ ಈ ವ್ಯವಸ್ಥೆಯನ್ನು ಇನ್ನೂ ಉತ್ತಮವಾದ ವಿಧಾನದಲ್ಲಿ ರಚಿಸಬೇಕೆಂಬುದೇ ನಮ್ಮ ಬಯಕೆ. ನಮಗೆ ಈ ಕಾರ್ಯವನ್ನು ಜರುಗಿಸಿಕೊಂಡು ಹೋಗಲು ಉತ್ತಮ ಹಾಗೂ ದಕ್ಷ ವ್ಯಕ್ತಿಗಳ ಮತ್ತು ಕಟ್ಟಡಗಳ ಕೊರತೆ ಇದೆ. ಈ ವಿಧವಾದ ಕೊರತೆ ಇದ್ದರೂ ನಾವು ಈಗ ಆರಂಭಿಸಿರುವ ಕೇಂದ್ರಗಳು ಕಾರ್ಯಾಚರಣೆಯಲ್ಲಿವೆ. ಸಿಬ್ಬಂದಿ ಸಮಸ್ಯೆಯನ್ನು ನಿವಾರಿಸಲು ನಾವು ವ್ಯವಸ್ಥಾಪಕರ ಹಾಗೂ ಉಪವ್ಯವಸ್ಥಾಪಕರ ತರಬೇತಿ ಕೇಂದ್ರಗಳನ್ನು ತೆರೆಯಲಿದ್ದೇವೆ. ಈ ಕಾರ್ಯದಿಂದ ಮುಂಬರುವ ಕೇಂದ್ರಗಳು ಸರಿಯಾದ ಮಾರ್ಗದಲ್ಲಿ ಕಾರ್ಯನಿರ್ವಹಿಸಬಲ್ಲವು.

"ಈ ವಿಧವಾದ ಪುನರ್‌ವಸತಿ ಸಂಘಟನೆಗಳು ಮತ್ತು ತರಬೇತಿ ಹಾಗೂ ನಿರುದ್ಯೋಗಿಗಳ ಪುನರ್‌ವಸತಿ ಕಾರ್ಯದೊಂದಿಗೆ, ಈ ವ್ಯಕ್ತಿಗಳು ತಮ್ಮ ನೂತನ ಹುದ್ದೆಗಳಲ್ಲಿ ಅಭಿರುಚಿ ಹೊಂದಿದ್ದಾರೋ ಇಲ್ಲವೋ ಎಂಬುದನ್ನೂ ಪರಿಶೀಲಿಸಬೇಕು. ಈ ವಿಧವಾದ ಸಂಘಟನೆಗಳ ಬಗೆಗೆ ಪ್ರಚಾರ ಮಾಡಲಾಗುವುದು ಹಾಗೂ ಅವುಗಳ ವಿವರಗಳನ್ನು ತಮ್ಮ ಅವಗಾಹನೆಗೆ ಮಂಡಿಸಲಾಗುವುದು. ಅಲ್ಲದೆ ಪ್ರಾಂತೀಯ ಸರಕಾರಗಳ ಅಭಿಪ್ರಾಯಗಳನ್ನೂ ಸಂಗ್ರಹಿಸಲಾಗುವುದು.

"ತಮ್ಮ ಅತಿ ಮುಖ್ಯವಾದ ಕಾರ್ಯವೆಂದರೆ, ತಾವು ತಮ್ಮ ಪ್ರಾಂತಗಳಿಗೆ ಮರಳಿದಾಗ, ಈ ಅತಿ ಮುಖ್ಯವಾದ ವಿಷಯವನ್ನು ಪ್ರಾಂತೀಯ ಪ್ರತಿನಿಧಿಗಳೊಂದಿಗೆ ಚರ್ಚಿಸಿ, ಈ ವಿಷಯದಲ್ಲಿ ಅವರು ಆಸಕ್ತಿ ಹೊಂದುವಂತೆ ಮಾಡಬೇಕು. ಇದರ ವ್ಯಾಪ್ತಿಯ ಬಗೆಗೆ ಇರಬಹುದಾದ ಸಂಶಯಗಳನ್ನು ದೂರ ಮಾಡುವುದು ಅನಿವಾರ್ಯ. ಈ ದಿಶೆಯಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ತಾವು ಪರಿಹರಿಸಲು ಸಾಧ್ಯವಾಗದೇ ಹೋದಲ್ಲಿ, ಆ ವಿಷಯವನ್ನು ತಮ್ಮ ಸಲಹೆಗಳೊಂದಿಗೆ ನಮಗೆ ತಿಳಿಸಿದಲ್ಲಿ ನಾವು ಸಮಸ್ಯೆ ನಿವಾರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುವೆವು. ಹೀಗಾಗಿ ತಾವೆಲ್ಲರೂ ನಾವು ಮಾಡುತ್ತಿರುವ ಗುರುತರ ಕಾರ್ಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅತಿ ಅವಶ್ಯ.

"ನಾನು ತಮ್ಮ ಸಮಯ ತೆಗೆದುಕೊಂಡಿರುವೆ. ತಮ್ಮ ಕಾರ್ಯಗಳಿಗೆ ತಾವು ತೆರಳುವುದಕ್ಕೆ ಮುಂಚೆ ತಮಗೆ ನನ್ನ ಶುಭಾಶಯಗಳು ಹಾಗೂ ತಮ್ಮ ಕಾರ್ಯದಲ್ಲಿ ತಮಗೆ ಜಯ ದೊರೆಯಲಿ ಎಂದು ಹಾರೈಸುವೆ."

* * *

## ಪ್ರಾಂತೀಯ ಕಾರ್ಮಿಕ ಆಯುಕ್ತರ ನೇಮಕ*

ಶ್ರೀ ಡಿ.ಜಿ. ಜಾಧವ, ಡಾ॥ ಸೇಠ್ ಹಾಗೂ ಅಬುಟಾಲಿಬ್ ಅವರು ಕ್ರಮವಾಗಿ ಕೇಂದ್ರದಿಂದ ಬೊಂಬಾಯಿ, ಕಲ್ಕತ್ತಾ ಹಾಗೂ ಲಾಹೋರುಗಳಲ್ಲಿ ಪ್ರಾಂತೀಯ ಆಯುಕ್ತರಾಗಿ ನೇಮಕಗೊಂಡಿದ್ದಾರೆ. ನೂತನ ವ್ಯವಸ್ಥೆಯಲ್ಲಿ ಕೇಂದ್ರಕ್ಕೆ ಸಂಬಂಧಿಸಿದಂತೆ ಎದುರಾಗಬಹುದಾದ ಔದ್ಯೋಗಿಕ ಸಮಸ್ಯೆಗಳನ್ನು ನಿರ್ವಹಿಸುವ ಹೊಣೆಗಾರಿಕೆ ಇವರ ಮೇಲಿದೆ. ಈ ನೂತನ ಸಂಘಟನೆ ಶ್ರೀ ಎಸ್.ಸಿ. ಜೋಷಿ, ಕೇಂದ್ರ ಮುಖ್ಯ ಕಾರ್ಮಿಕ ಆಯುಕ್ತರು, ಅವರ ಅಧೀನದಲ್ಲಿ ಕಾರ್ಯವನ್ನು ನಿರ್ವಹಿಸುತ್ತದೆ.

ಈ ನೂತನ ವ್ಯವಸ್ಥೆಯ ಅಡಿಯಲ್ಲಿ ಉಪ ಕಾರ್ಮಿಕ ಆಯುಕ್ತರ ಕಚೇರಿಯನ್ನು ದೆಹಲಿಯಲ್ಲಿಯೂ, ೯ ಸಂಪರ್ಕ ಅಧಿಕಾರಿಗಳು ಹಾಗೂ ೨೪ ಕೇಂದ್ರ ಕಾರ್ಮಿಕ ಇನ್ಸ್‌ಪೆಕ್ಟರರನ್ನು ದೇಶದ ವಿವಿಧ ಭಾಗಗಳಲ್ಲಿಯೂ ನೇಮಿಸಲಾಗುವುದು. ಕೇಂದ್ರ ಉದ್ದಿಮೆಗಳ ಉಪಾಹಾರ ಕೇಂದ್ರಗಳ ಇನ್ಸ್‌ಪೆಕ್ಟರನ್ನೂ ನೇಮಿಸಲಾಗುವುದು.

---

* ಇಂಡಿಯನ್ ಇನ್‌ಫರ್ಮೇಷನ್, ಅಕ್ಟೋಬರ್ ೧, ೧೯೪೫, ಪು. ೨೪೫–೪೯

ಕೇಂದ್ರದಡಿಯಲ್ಲಿ ಬರಬಹುದಾದ ಉದ್ದಿಮೆಗಳೆಂದರೆ :

೧) ಭಾರತ ಸರ್ಕಾರದ ಮಾಲೀಕತ್ವದಲ್ಲಿ ಇರುವ ಉದ್ದಿಮೆಗಳು,

೨) ರೈಲ್ವೆ,

೩) ಗಣಿಗಳು ಹಾಗೂ ತೈಲ ಸ್ಥಾವರಗಳು, ಮತ್ತು

೪) ಬೃಹತ್ ಬಂದರುಗಳು.

# ೫೦
# ದಾಮೋದರ ಕಣಿವೆ ವಿವಿಧೋದ್ದೇಶಗಳ ಯೋಜನೆ ಅಭಿವೃದ್ಧಿ *

### ಕಲ್ಕತ್ತಾದಲ್ಲಿ ಕಾರ್ಮಿಕ ಸದಸ್ಯರು ಮಾಡಿದ ಭಾಷಣ

"ದಾಮೋದರ ನದಿಯ ನೀರಿನ ಸದುಪಯೋಗ ಪಡೆಯುವಲ್ಲಿ ಈ ಯೋಜನೆಯನ್ನು ಭಾರತ ಸರ್ಕಾರವು ಸ್ವಾಗತಿಸುತ್ತದೆ. ಈ ಯೋಜನೆಯಿಂದಾಗಿ ನೆರೆ ಹಾವಳಿಯನ್ನು ನಿಯಂತ್ರಿಸಿ, ಹಸಿರು ಕ್ರಾಂತಿಗೆ ಆವಶ್ಯಕವಾಗಿರುವ ಭೂಸಾಗುವಳಿಯನ್ನು ಕೈಗೆತ್ತಿಕೊಳ್ಳುವುದರೊಟ್ಟಿಗೆ, ಬರಪರಿಹಾರಕ್ಕೆ ಒಂದು ಮಾರ್ಗವನ್ನೂ ಅನುಸರಿಸಿದಂತೆ ಆಗುವುದು. ಈ ಯೋಜನೆಯಿಂದ ಮೂಲ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವನ್ನೂ ಕೈಗೆತ್ತಿಕೊಳ್ಳಲಾಗುವುದು. ಕೇಂದ್ರ ಸರ್ಕಾರಕ್ಕಿಂತಲೂ ಹೆಚ್ಚಾಗಿ ಬಂಗಾಲ ಹಾಗೂ ಬಿಹಾರ ಸರ್ಕಾರಗಳು ಈ ಯೋಜನೆಯ ಮಹತ್ವವನ್ನು ಸ್ವಾಗತಿಸುತ್ತವೆ ಎಂದು ನನ್ನ ದೃಢ ನಂಬಿಕೆ. ಏಕೆಂದರೆ ಈ ವಿಧವಾದ ಯೋಜನೆಯು ಆ ಪ್ರಾಂತಗಳ ಪ್ರಜೆಗಳ ಏಳಿಗೆ ಹಾಗೂ ಸರ್ವತೋಮುಖ ಪ್ರಗತಿಗೆ ನಾಂದಿ ಆಗಬಲ್ಲದು"

ಆಗಸ್ಟ್ ೨೩ರಂದು ದಾಮೋದರ ಕಣಿವೆಯ ಅಭಿವೃದ್ಧಿ ಯೋಜನೆಯ ಬಗೆಗೆ ಕರೆಯಲಾದ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸುತ್ತಾ ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಡಾ॥ ಬಿ.ಆರ್. ಅಂಬೇಡ್ಕರರು ಮನವಿಪತ್ರವನ್ನು ಚರ್ಚಿಸಲೆಂದೇ ಆಹ್ವಾನಿತರಾದ ಬಂಗಾಲ ಹಾಗೂ ಬಿಹಾರ ಪ್ರತಿನಿಧಿಗಳನ್ನು ಕುರಿತು ಈ ರೀತಿ ಮಾತನಾಡಿದರು. ಅವರ ಭಾಷಣದ ಸಾರಾಂಶ : "ದಾಮೋದರ ನದಿಯ ನೀರನ್ನು ನಿಯಂತ್ರಿಸುವ ಯೋಜನೆಯ ಬಗೆಗೆ ಚರ್ಚಿಸಲು ನಾವು ಎರಡನೆಯ ಬಾರಿ, ಸಭೆ ಸೇರಿದ್ದೇವೆ. ತಮಗೆಲ್ಲಾ ನೆನಪಿರುವಂತೆ ನಾವು ಮೊದಲ ಬಾರಿ ಜನವರಿ ೩, ೧೯೪೫ರಲ್ಲಿ ಸಭೆ ಸೇರಿದ್ದೆವು. ಆಗ ನಾವು ಬಂಗಾಲ ಸರ್ಕಾರದಿಂದ ನೇಮಿಸಲಾದ ದಾಮೋದರ ನದಿಯ ಪ್ರವಾಹ ನಿಯಂತ್ರಣ, ಸಮಿತಿಯ ೧೯೪೪ರ ವರದಿಯನ್ನು ಪರಿಶೀಲಿಸಲು ಸಭೆ ಸೇರಿದ್ದೆವು.

"ಆಗ ನಮ್ಮ ಮುಂದೆ ಇದ್ದ ಉದ್ದೇಶವೆಂದರೆ, ಕೇವಲ ಪ್ರವಾಹ ನಿಯಂತ್ರಣಕ್ಕೆ ಮಾತ್ರ ದಾಮೋದರ ನದಿಗೆ ಅಣೆಕಟ್ಟನ್ನು ನಿರ್ಮಿಸಬೇಕೇ? ಅಥವಾ ಇತರ ಉದ್ದೇಶಗಳಾದ, ವಿದ್ಯುಚ್ಛಕ್ತಿ ಉತ್ಪಾದನೆ, ನೀರಾವರಿ ಹಾಗೂ ನೌಕಾಯಾನಗಳಿಂದ ಒಡಗೂಡಿದ ಯೋಜನೆ ಕೈಗೆತ್ತಿಕೊಳ್ಳಬೇಕೆ ಎಂದಾಗಿತ್ತು. ಆದರೆ ಬಹುಮತದ ಅಭಿಪ್ರಾಯದಂತೆ ಎರಡನೆಯ ಉದ್ದೇಶವನ್ನೇ ಕೈಗೆತ್ತಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

"ಅದರಂತೆಯೇ ಮುಂದಿನ ಕ್ರಮ ಕೈಗೊಳ್ಳಬೇಕೆಂದೂ ಹಾಗೂ ಆ ದಿಶೆಯಲ್ಲಿ ಆವಶ್ಯಕವಿರುವ

---

* ಇಂಡಿಯನ್ ಇನ್‌ಫರ್ಮೇಷನ್, ಆಗಸ್ಟ್ ೧೫, ೧೯೪೫, ಪು. ೧೫೨.

ಮಾಹಿತಿ ಸಂಗ್ರಹಣೆಗೆ ಅವಶ್ಯಕವಾದ ಒಂದು ಯೋಜನೆಯ ರೂಪರೇಷೆಗಳನ್ನು ಸಿದ್ಧಪಡಿಸಬೇಕೆಂದೂ ತೀರ್ಮಾನಿಸಲಾಯಿತು. ಭಾರತ ಸರ್ಕಾರದ ಪರವಾಗಿ ನಾನು ತಾಂತ್ರಿಕ ವಿಷಯಗಳ ಸಂಗ್ರಹಣೆಯಲ್ಲಿ ಸಂಪೂರ್ಣ ಸಹಕಾರ ನೀಡಿರುವೆ.

"ಪರಿಣತರು ಈ ದಿಶೆಯಲ್ಲಿ ಒಂದು ಮನವಿ ಪತ್ರದ ಕರಡನ್ನು ಬಂಗಾಲ ಸರ್ಕಾರದ ಇಂಜಿನಿಯರುಗಳ ಸಹಕಾರದಿಂದ ಸಿದ್ಧಪಡಿಸಿದ್ದಾರೆ, ಈ ದಾಮೋದರ ನದಿ ಕೊಳ್ಳದ ಅಭಿವೃದ್ಧಿ ಯೋಜನೆಯ ಕರಡಿನ ಪ್ರತಿಗಳನ್ನು ಬಂಗಾಲ ಹಾಗೂ ಬಿಹಾರ ಸರ್ಕಾರಗಳೂ ಪಡೆದಿವೆ.

"ಈ ಮನವಿ ಪತ್ರದ ಬಗೆಗೆ ನನ್ನ ಕರ್ತವ್ಯದ ದೃಷ್ಟಿಯಿಂದ, ಹಾಗೂ ನಿಮ್ಮ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತಾ ಹೇಳಬೇಕೆಂದರೆ, ನಾವೆಲ್ಲರೂ ಈ ಮನವಿ ಪತ್ರವನ್ನು ತಯಾರಿಸಿದ ಶ್ರೀ ವೂರಡಿನ್ ಅವರಿಗೆ ಕೃತಜ್ಞರಾಗಿದ್ದೇವೆ. ಹಾಗೂ ಆ ವರದಿಯನ್ನು ತಯಾರಿಸುವಲ್ಲಿ ಶ್ರೀ ವೂರಡಿನ್‌ರವರಿಗೆ ಸಕಲ ವಿಧವಾಗಿ ಸಹಕಾರ ನೀಡಿದ ಬಂಗಾಲ ಸರ್ಕಾರದ ಇಂಜಿನಿಯರ್‌ಗಳಿಗೂ ನಾವು ಕೃತಜ್ಞರಾಗಿರಬೇಕು. ಶ್ರೀ ಮ್ಯಾಥ್ಯೂಸ್, ಕೇಂದ್ರ ತಾಂತ್ರಿಕ ಶಕ್ತಿಯ ಮಂಡಳಿಯ ಅಧ್ಯಕ್ಷರು ನೀಡಿದ ಸಲಹೆ ಹಾಗೂ ನಂತರದ ಹಂತದಲ್ಲಿ ಶ್ರೀ ಕೋಸಲಾ, ಅಧ್ಯಕ್ಷರು ಜಲಯಾನ ಹಾಗೂ ನೌಕಾಮಂಡಳಿ, ಅವರಿಂದ ಖಚಿತವಾಗಿ ದೊರೆಯಬಹುದಾದ ಸಹಕಾರಕ್ಕೆ ವಂದನೆಗಳು.

"ಮುಂದಿನ ಕ್ರಮ ಕೈಗೆತ್ತಿಕೊಳ್ಳಲು ಅಗತ್ಯವಾಗಿ ಬೇಕಾದ ಮಹತ್ವದ ಹಾಗೂ ಸಂಪೂರ್ಣ ಮಾಹಿತಿಯ ಸಮಗ್ರ ವರದಿ ನಮ್ಮ ಮುಂದೆ ಇದೆ. ಹೀಗಾಗಿ ದಾಮೋದರ ನದಿ ಕೊಳ್ಳದ ಯೋಜನೆಯನ್ನು ಭರವಸೆಯಿಂದ ನಾವು ಕೈಗೆತ್ತಿಕೊಳ್ಳಬಹುದು.

"ಈ ದಿನ ಸೇರಿರುವ ಸಭೆಯ ಮುಖ್ಯ ಉದ್ದೇಶವೆಂದರೆ, ಈಗ ನಮ್ಮ ಮುಂದೆ ಇರುವ ವರದಿಯಿಂದ ಉದ್ಭವಿಸಬಹುದಾದ ಅಂಶಗಳನ್ನೇ ಇಂದಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಂದಿನ ಕಾರ್ಯಕ್ರಮವು ಈ ಮೂಲ ಮನವಿಯಲ್ಲಿ ಎತ್ತಲಾದ ಅಂಶಗಳ ಪಟ್ಟಿಯೇ ಆಗಿದೆ ಹಾಗೂ ಅದನ್ನೇ ನಾವು ಪ್ರಮುಖವಾಗಿ ಗಮನಿಸಬೇಕಾಗಿದೆ. ಈಗಾಗಲೇ ಈ ವರದಿಯನ್ನು ಬಂಗಾಲ ಹಾಗೂ ಬಿಹಾರ ಸರ್ಕಾರದ ಪ್ರತಿನಿಧಿಗಳಿಗೆ ನೀಡಿರುವುದರಿಂದ ನಾನು ಕೇವಲ ಎರಡು ಪ್ರಮುಖ ಅಂಶಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. (೧) ನೀತಿಯ ವಿಷಯ, ಮತ್ತು (೨) ವಿಧಾನ ಹಾಗೂ ತಂತ್ರಗಳ ಪ್ರಶ್ನೆ.

"ಆಹಾರ ನಿಯಂತ್ರಣ ನೀತಿಯ ವಿಷಯವಾಗಿದೆ. ಹೀಗಾಗಿ ದಾಮೋದರ ನದಿಯ ಪ್ರವಾಹ ನಿಯಂತ್ರಣದಿಂದ ಶೇಖರಿಸಿದ ನೀರಿನಿಂದಾಗಿ, ಮುಂದೆ ಬರಬಹುದಾದ ಯಾವುದೇ ಬರಗಾಲ ಪರಿಸ್ಥಿತಿಯನ್ನು, ಈ ನೀರಾವರಿ ಕಾರ್ಯದಿಂದ ಎದುರಿಸಬಹುದು. ನನಗೆ ಸಂತೋಷ ನೀಡಿದ ಸಂಗತಿ ಎಂದರೆ, ಈ ದಿಶೆಯಲ್ಲಿ ತಯಾರಿಸಿರಬಹುದಾದ ಮೊದಲನೆಯ ವರದಿಯು ಈ ಎಲ್ಲಾ ಅಂಶಗಳನ್ನೂ ಒಳಗೊಂಡಿರುವುದು.

"ನೀತಿಯ ಎರಡನೆಯ ವಿಷಯವೆಂದರೆ, ಈಗ ಇಲ್ಲಿ ಸೇರಿರುವ ಮೂರು ಸರ್ಕಾರಗಳ ಸಾಮೂಹಿಕ ಜವಾಬ್ದಾರಿ. ನನ್ನ ನಂಬಿಕೆಯಂತೆ, ಈ ಕಾರ್ಯಸಾಧನೆಯ ಬಗೆಗೆ ಈ ಮೂರು ಸರಕಾರಗಳು, ಈ ವರದಿಯಲ್ಲಿ ಹೇಳಲಾದಂತೆ ದಾಮೋದರ ನದಿಯ ಕೊಳ್ಳದ ಅಭಿವೃದ್ಧಿಯ ಕಾರ್ಯವನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳುತ್ತವೆ.

"ಈಗಾಗಲೇ ಹೇಳಿದಂತೆ ಈ ಯೋಜನೆಯು ಕೇಂದ್ರಕ್ಕೆ ಸ್ವಾಗತಾರ್ಹವಾದ ಸಂಗತಿಯಾಗಿದೆ. ಏಕೆಂದರೆ ನದಿಯ ಪ್ರವಾಹವನ್ನು ನಿಯಂತ್ರಿಸಿ, ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವುದರಿಂದ ಬರ ಪರಿಹರಿಸಬಹುದಾಗಿದೆ. ಖಚಿತವಾಗಿ ಹೇಳಬೇಕೆಂದರೆ ಕೇಂದ್ರಕ್ಕಿಂತಲೂ ಬಂಗಾಲ ಹಾಗೂ ಬಿಹಾರ

ಸರ್ಕಾರಗಳು ಈ ಯೋಜನೆಯ ಮಹತ್ವವನ್ನು ಹೆಚ್ಚು ಸ್ವಾಗತಿಸುತ್ತವೆ.

ಈ ಯೋಜನೆಯಿಂದ ದೊರೆಯುವ ಲಾಭಗಳೆಂದರೆ :

(೧) ೪,೭೦೦,೦೦೦ ಎಕರೆಗಳಿಗೆ, ಅಣೆಕಟ್ಟಿನಲ್ಲಿ ಸಂಗ್ರಹಿಸಲಾದ ನೀರಿನಿಂದ ನೀರಾವರಿ ಸೌಲಭ್ಯ.

(೨) ಮೂಲ ನೀರಾವರಿ ಯೋಜನೆಗೆ ನೀರು ಪೂರೈಕೆ ಹಾಗೂ ೭೬೦,೦೦೦ ಎಕರೆ ಸಾಗುವಳಿ ಹಾಗೂ ನೌಕಾಯಾನ ಸೌಕರ್ಯ.

(೩) ೩೦೦,೦೦೦ ಕಿ.ವಾ. ವಿದ್ಯುಚ್ಛಕ್ತಿ ಉತ್ಪಾದನೆ.

(೪) ನೇರವಾಗಿ ಐದು ಮಿಲಿಯನ್ ಜನರ ಕಲ್ಯಾಣ, ಹಾಗೂ ಅಪರೋಕ್ಷವಾಗಿ ಅನೇಕ ಮಿಲಿಯನ್ ಜನರ ಕಲ್ಯಾಣ.

ಈಗ ಕಾರ್ಯಾಚರಣೆ ಹಾಗೂ ವಿಧಾನಗಳ ಬಗೆಗೆ ಹೇಳಬಹುದಾದರೆ ನಾವು ಕೆಳಗಿನ ಅಂಶಗಳ ಬಗೆಗೆ ನಿರ್ಣಯಿಸಬೇಕಾದುದರಿಂದ ಅವನ್ನು ತಮ್ಮ ಮುಂದೆ ಅನುಕ್ರಮವಾಗಿ ಇರಿಸುತ್ತಿದ್ದೇನೆ.

೧) ಅಣೆಕಟ್ಟಿನ ನಿರ್ಮಾಣ ಸ್ಥಳಗಳ ಆಯ್ಕೆ.

೨) ಈಗಾಗಲೇ ಆಯ್ಕೆ ಮಾಡಿದ ಸ್ಥಳಗಳನ್ನು ಹೆಚ್ಚಿನ ಹಾಗೂ ವಿವರವಾದ ಪರೀಕ್ಷೆಗೆ ಗುರಿಪಡಿಸುವುದು.

೩) ಈ ವಿಧವಾದ ಪರೀಕ್ಷೆಯನ್ನು ಯಾರು ನಡೆಸಬೇಕು?

೪) ನಿರ್ಮಾಣ ಹಾಗೂ ನಕ್ಷೆ ನಿರ್ಮಿಸುವ ಏಜೆನ್ಸಿಯನ್ನು ಗೊತ್ತು ಮಾಡುವದು.

೫) ಸಮನ್ವಯದ ದೃಷ್ಟಿಯಿಂದ ತನಿಖೆಯ ಮತ್ತು ನಂತರದ ನಿರ್ಮಾಣ ಹಂತದಲ್ಲಿ ಮಾಡಬೇಕಾದ ಅಗಾಧವಾದ ತಾಂತ್ರಿಕ ಮತ್ತು ಆಡಳಿತಾತ್ಮಕ ಕೆಲಸವನ್ನು ಮುಂದುವರಿಸಿಕೊಂಡು ಉತ್ತಮ ದರ್ಜೆಯ ಆಡಳಿತ ವ್ಯವಸ್ಥೆಯನ್ನು ರಚಿಸಬೇಕು.

೬) ಅಭಿವೃದ್ಧಿ ಹೊಂದಿದ ಕ್ಷೇತ್ರಗಳಲ್ಲಿ ಅಂತಿಮವಾಗಿ ದೊರೆಯುವ ನೀರು ಮತ್ತು ವಿದ್ಯುಚ್ಛಕ್ತಿಯನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಹಾಗೆ ಹಲವಾರು ಸರ್ವೇಕ್ಷಣೆಗಳನ್ನು ನಡೆಸುವುದು.

"ನಾನು ಈ ಮೇಲೆ ತಿಳಿಸಲಾದ ಕಾರ್ಯ ಹಾಗೂ ವಿಧಾನಗಳ ಬಗೆಗೆ ಶೀಘ್ರ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಮೂಲತಃ ಅಣೆಕಟ್ಟನ್ನು ಕ್ಷೇಮ ಹಾಗೂ ಅಭಿವೃದ್ಧಿಗಾಗಿರುವ ವಿವಿಧ ನದೀಮುಖಜ ಭೂಮಿಗಳ ವಿವಿಧೋದ್ದೇಶ ಯೋಜನೆ ಎಂದೇ ಪರಿಗಣಿಸಲಾಗಿದೆ.

"ಆದರೆ ಒಂದು ವಿಷಯ ನಾವು ಮರೆಯಬಾರದು. ಅದೇನೆಂದರೆ ಈ ಯೋಜನೆ ಯುದ್ಧೋತ್ತರ ಕಾಲದಲ್ಲಿ ಉದ್ಯೋಗ ನೀಡುವಲ್ಲಿ ಸಹಕಾರಿಯಾಗುತ್ತದೆ; ಏಕೆಂದರೆ ಈಗ ಯುದ್ಧವು ಎಲ್ಲಾ ಕಡೆ ಸಂಪೂರ್ಣವಾಗಿ ನಿಂತಿರುವುದರಿಂದ ನಾವು ಈಗ ಉದ್ಭವಿಸಿರುವ ಸಮಸ್ಯೆಯನ್ನು ಶಾಂತಿಯಿಂದ ಎದುರಿಸಬೇಕಾಗಿದೆ. ಈ ದಿಶೆಯಲ್ಲಿ ಪ್ರಮುಖ ಸಮಸ್ಯೆ ಎಂದರೆ ನಿರುದ್ಯೋಗ ಹಾಗೂ ಅಧಿಕ ಖರ್ಚು ಮುಂತಾದವು ನಮ್ಮ ಆರ್ಥಿಕ ವ್ಯವಸ್ಥೆಗೆ ಸವಾಲಾಗಬಲ್ಲವು.

**ಕೇಂದ್ರ ಸರ್ಕಾರದ ಪಾತ್ರ**

"ಈ ದೃಷ್ಟಿಯಿಂದ ದಾಮೋದರ ಕೊಳ್ಳದ ಯೋಜನೆಯ ಬಗೆಗೆ ಶೀಘ್ರ ನಿರ್ಣಯ ತೆಗೆದುಕೊಳ್ಳದೇ ಹೋದರೆ ಮಹಾ ಅಪರಾಧವಾಗುತ್ತದೆ. ಏಕೆಂದರೆ ನಿರ್ಣಯ ತೆಗೆದುಕೊಳ್ಳದೇ ಕಾರ್ಯದಲ್ಲಿ

ಮುಂದುವರಿಯಲು ಬಾರದು. ಆದುದರಿಂದ ನಾವು ಈ ದಿನವೇ ನಮ್ಮ ನಿರ್ಣಯವನ್ನು ತಮ್ಮೆಲ್ಲರ ಸಹಕಾರದಿಂದ ನಿರ್ಣಯಿಸಬಹುದೆಂಬ ಆಶೆ ನನಗಿದೆ. ಈ ಚರ್ಚೆಯನ್ನು ಮುಗಿಸುವ ಮುನ್ನ ಭಾರತ ಸರ್ಕಾರ ಈ ಯೋಜನೆಯ ಬಗೆಗೆ ಆತುರವಾಗಿದೆ, ಹಾಗೂ ತನ್ನ ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಿಸಲೂ ಸಿದ್ಧವಿದೆ ಎಂದು ಹೇಳಬಯಸುವೆ.

೧) ಈಗಾಗಲೇ ಘೋಷಿಸಿರುವಂತೆ, ಭಾರತ ಸರ್ಕಾರವು ಈ ದಿಶೆಯಲ್ಲಿ ಕಾರ್ಯಾಚರಣೆಯನ್ನು ತ್ವರಿತಗೊಳಿಸುವಲ್ಲಿ ಎಲ್ಲ ಕ್ರಮಗಳನ್ನೂ ಕೈಕೊಳ್ಳುವುದು. ಈ ವಿಚಾರದಲ್ಲಿ ಅಧಿಕಾರದ ಕೇಂದ್ರದ ಬಗ್ಗೆ ಇನ್ನೂ ನಿರ್ಣಯಿಸದೇ ಹೋದರೂ, ಈ ಬಗ್ಗೆ ಒಂದು ಪ್ರಾಧಿಕಾರವನ್ನು ರಚಿಸಬೇಕೆಂದಿರುವ ಕೇಂದ್ರದ ನಿರ್ಣಯದಲ್ಲಿ ಯಾವ ಬದಲಾವಣೆಯೂ ಇಲ್ಲ.

೨) ಸರ್ಕಾರಗಳ ಯುದ್ಧೋತ್ತರ ಸಮಯದ ಅಭಾವಗಳನ್ನು ನಿವಾರಿಸಲು ಸಹಕಾರಿಯಾಗುವ ಈ ಯೋಜನೆಯ ಆವಶ್ಯಕತೆಗಳಿಗೆ ಬೇಕಾದ ಸರ್ವ ಕಾರ್ಯ, ಸಿಬ್ಬಂದಿ, ಹಾಗೂ ಸಂಘಟನೆಗಳನ್ನು ಪೂರೈಸುವ ಹೊಣೆಗಾರಿಕೆಯನ್ನು ಕೇಂದ್ರ ಹೊರಲು ಸಿದ್ಧ. ಇಂಜಿನಿಯರಿಂಗ್ ವ್ಯಕ್ತಿಗಳ ಅಭಾವವನ್ನು ಅರಿತಿರುವ ಕೇಂದ್ರ ಸರ್ಕಾರ, ಬಂಗಾಲಕ್ಕೆ ಈ ದಿಶೆಯಲ್ಲಿ ಅವಶ್ಯ ಸೇವಾ ಸೌಕರ್ಯವನ್ನು ಒದಗಿಸಲು ಸಿದ್ಧವಿದೆ. ಈ ಕಾರ್ಯಾಚರಣೆಗೆ ಮಿಲಿಟರಿ ಸೇವೆಯ ಆವಶ್ಯಕತೆಯನ್ನು ಮನಗಂಡ ಕೇಂದ್ರ ಅದನ್ನು ಪೂರೈಸಲು ಪ್ರಯತ್ನಿಸುವುದು. ಈ ವಿಧವಾದ ಕ್ರಮವು ಈಗಾಗಲೇ ಇಂಜಿನಿಯರಿಂಗ್ ವ್ಯಕ್ತಿಗಳ ಅಭಾವದಿಂದ ನರಳುತ್ತಿರುವ ಪ್ರಾಂತೀಯ ಸರ್ಕಾರಗಳಿಗೆ ವರದಾನ ಎನಿಸದೇ ಇರಲಾರದು.

೩) ಪ್ರಾರಂಭದಲ್ಲಿ, ತಾವು ಕೈಗೆತ್ತಿಕೊಂಡಿರುವ ಮುಖ್ಯ ಯೋಜನೆಗೆ ಬೇಕಾಗಿರುವ ಮುಂದಿನ ಪ್ರಾಥಮಿಕ ತನಿಖೆಗಳನ್ನು ಮಾಡುವುದಕ್ಕೆ ಆವಶ್ಯಕವಾದ ಹಣವನ್ನು, ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಇಂಥ ಪ್ರಾಥಮಿಕ ಖರ್ಚುಗಳನ್ನು ಯೋಜನೆಯ ಲೆಕ್ಕಕ್ಕೆ ಸೇರಿಸಲಾಗುವುದು. ಯೋಜನೆ ಮುಂದುವರೆಯದಿದ್ದರೆ ಖರ್ಚನ್ನು ಸಮವಾಗಿ ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು ಹಂಚಿಕೊಳ್ಳಬೇಕು.

"ಒಂದೇ ಒಂದು ವಿಷಯವನ್ನು ಪ್ರಾಂತೀಯ ಸರ್ಕಾರ ಮಾಡಬೇಕೆಂದು ಕೇಂದ್ರದ ಇಚ್ಛೆಯಾಗಿದೆ. ಅದೇನೆಂದರೆ ಯೋಜನೆ ಮುಗಿದ ನಂತರ ಈ ಯೋಜನೆಯ ಸೌಕರ್ಯ ಕೊನೆಯದಾಗಿ ಆಸುಪಾಸಿನ ಜನತೆಗೇ ದೊರೆತು ಅಭಿವೃದ್ಧಿಯಲ್ಲಿ ಎಲ್ಲರೂ ಸಹಭಾಗಿದಾರರು ಎಂಬುದನ್ನು ಪ್ರಾಂತೀಯ ಸರ್ಕಾರಗಳು ಅರಿಯಬೇಕು. ಇದು ನನ್ನ ದೃಷ್ಟಿಯಲ್ಲಿ ಅನಿವಾರ್ಯ. ಈ ಸಂಘಟನೆಯನ್ನು ನಡೆಸಿಕೊಂಡು ಹೋಗಲು ಒಂದು ಏಜೆನ್ಸಿಯನ್ನು ಬೇಗನೆ ರಚಿಸಲೇಬೇಕಾಗಿದೆ."

**ಸಮ್ಮೇಳನದ ಚರ್ಚೆಗಳು**

ಈ ಸಮ್ಮೇಳನವು ದಾಮೋದರ ಕೊಳ್ಳದ ವಿವಿಧ ಉದ್ದೇಶಗಳ ಯೋಜನೆಯನ್ನು ತ್ವರಿತಗೊಳಿಸಲು ಆವಶ್ಯಕವಾದ ಪರಿಶೀಲನಾ ಕಾರ್ಯಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ನಿರ್ಧರಿಸಿತು.

ಪ್ರಕೃತಿಯಿಂದ ಸಂಭವಿಸಬಹುದಾದ ಪ್ರವಾಹಗಳ ನಿಯಂತ್ರಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

ಮುಂದುವರಿದು ದಾಮೋದರ ನದಿಗೆ ಒಡ್ಡನ್ನು ನಿರ್ಮಿಸುವ ಪರೀಕ್ಷಾ ಕಾರ್ಯದಂತೆ ಮೈಥಾನ್, ಅಯ್ಯರ್, ಹಾಗೂ ಸೋನಲಾಪುರಗಳಲ್ಲಿ ಈ ಪರಿಶೀಲನೆ ಕಾರ್ಯ ಕೈಗೆತ್ತಿಕೊಳ್ಳಬೇಕು. ಸಮ್ಮೇಳನವು ಆದ್ಯತೆಯ ಆಧಾರದ ಮೇಲೆ ಪರೀಕ್ಷಣಾ ಕಾರ್ಯವನ್ನು ಮೊದಲು ಮೈಥಾನ್‌ನಲ್ಲಿ ಎರಡನೆಯದಾಗಿ ಅಯ್ಯರ್ ಹಾಗೂ ಮೂರನೆಯದಾಗಿ ಸೋನಲಾಪುರದಲ್ಲಿ ಕೈಗೆತ್ತಿಕೊಳ್ಳಬೇಕೆಂದು ನಿರ್ಧರಿಸಿತು. ಈ ವಿಧವಾದ ಆದ್ಯತೆಯನ್ನು ತಾಂತ್ರಿಕ ಆಧಾರಗಳಿಂದಲೇ ನಿರ್ಣಯಿಸಲಾಯಿತು. ಕೇಂದ್ರ ವಿದ್ಯುಚ್ಛಕ್ತಿ ಮಂಡಳಿಯು ಈ ಬಗ್ಗೆ ವರದಿಯನ್ನು ತಯಾರಿಸಬೇಕೆಂದು ನಿರ್ಧರಿಸಿತು. ಹೀಗೆ ವರದಿ ತಯಾರಿಸುವಾಗ ವಿಶೇಷತಃ ಸೋನಲಾಪುರದಲ್ಲಿ ಲಭ್ಯವಿರುವ ಕಲ್ಲಿದ್ದಲು ಗಣಿಗಳನ್ನೂ ಆವಶ್ಯಕವಾಗಿ ಪರಿಗಣಿಸಬೇಕೆಂದೂ ಸೂಚಿಸಲಾಯಿತು.

**ಆವಶ್ಯಕ ಸಿಬ್ಬಂದಿ**

ಕೇಂದ್ರ ಸರ್ಕಾರ ಸಾಧ್ಯವಾದಷ್ಟು ಬೇಗ ಇಂಥ ಯೋಜನಾ ವರದಿಗಳಿಗೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಲು ಪ್ರಯತ್ನಿಸುತ್ತದೆ. ಈ ಮಧ್ಯೆ ಈಗ ಲಭ್ಯವಿರುವ ಸಿಬ್ಬಂದಿಯಿಂದ ಪರಿಶೀಲನೆಗಳನ್ನು ಮುಂದುವರಿಸಲೇಬೇಕಾಗಿದೆ.

ಪ್ರಾಥಮಿಕ ಕಾರ್ಯದಲ್ಲಿ ಒಮ್ಮತ ಸಾಧಿಸಲು, ಸ್ಥಳ ಪರೀಕ್ಷೆಯ ಕಾರ್ಯವು ಕೇಂದ್ರ ವಿದ್ಯುಚ್ಛಕ್ತಿಯ ತಾಂತ್ರಿಕ ಮಂಡಳಿಯ ಮುಖಾಂತರ ನಡೆಯುವುದು ಸೂಕ್ತ ಎಂದು ಸಮ್ಮೇಳನವು ನಿರ್ಧರಿಸಿತು.

ಮುಂದುವರಿದು, ಅಮೆರಿಕಾದಿಂದ ಇಬ್ಬರು ಇಂಜಿನಿಯರುಗಳನ್ನು ಕರೆಸಿಕೊಂಡು, ಮೊದಲು ನಿರ್ಮಿಸುವ ಎರಡು ಅಣೆಕಟ್ಟುಗಳ ರಚನೆ ಹಾಗೂ ನಕ್ಷೆಯ ನಮೂನೆಗಳನ್ನು ಅವರಿಂದ ಪಡೆಯಬೇಕೆಂದೂ ನಿರ್ಧರಿಸಲಾಯಿತು. ಈ ಇಂಜಿನಿಯರುಗಳು ಒಂದು ಆಯೋಗದಂತೆ ಕಾರ್ಯ ಮಾಡಲು ಮುಂದಿನ ವರ್ಷದ ಆರಂಭದಲ್ಲಿಯೇ ಭಾರತಕ್ಕೆ ಅವರನ್ನು ಕರೆಸಬೇಕೆಂದು ನಿರ್ಣಯಿಸಲಾಯಿತು. ಅವರು ಬರುವುದಕ್ಕೆ ಮುಂಚೆಯೇ ಅವಶ್ಯವಿರುವ ಎಲ್ಲಾ ಮಾಹಿತಿಯನ್ನೂ ಸಂಗ್ರಹಿಸಬೇಕೆಂದೂ ನಿರ್ಧರಿಸಲಾಯಿತು.

ಆಡಳಿತಕ್ಕಾಗಿ ಕೊನೆಯಲ್ಲಿ ದಾಮೋದರ ಕೊಳ್ಳದ ಪ್ರಾಧಿಕಾರವನ್ನು ರಚಿಸಬೇಕು. ಆದರೆ ಮಧ್ಯಂತರವಾಗಿ ಕೇಂದ್ರ ಸರ್ಕಾರವು ಎಲ್ಲಾ ಕಾರ್ಯಗಳನ್ನು ನೋಡಿಕೊಂಡು ಹೋಗಲು ಓರ್ವ ಉನ್ನತ ದರ್ಜೆಯ ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದೂ ಅವರು ಎಲ್ಲಾ ಸಮನ್ವಯ ಕಾರ್ಯಗಳನ್ನು ನೋಡಿಕೊಂಡು ತ್ವರಿತವಾಗಿ ಕಾರ್ಯಾಚರಣೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

ಈ ಯೋಜನೆಯ ಇತರ ಕಾರ್ಯಗಳ ಬಗೆಗೂ ಪರಿಶೋಧನೆ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಈ ದಿಶೆಯಲ್ಲಿ ಬಂಗಾಲ ಹಾಗೂ ಬಿಹಾರದ ನೀರಾವರಿ ಇಲಾಖೆಗಳು, ಕೇಂದ್ರ ನೀರಾವರಿ, ಜಲಮಾರ್ಗ ಹಾಗೂ ನೌಕಾಯಾನ ಇಲಾಖೆಯೊಂದಿಗೆ ಸಮಾಲೋಚಿಸಿ, ದೊರೆಯಬಹುದಾದ ನೀರನ್ನು ನೀರಾವರಿ ಕಾರ್ಯಗಳಿಗೆ ಹೇಗೆ ಉಪಯೋಗಿಸಿಕೊಳ್ಳಬಹುದು ಎಂದು ಪರಿಶೀಲನೆ ಮಾಡಬೇಕು. ಪರಿಶೀಲನೆ ನಡೆಸಬೇಕಾದ ಇತರ ವಿಷಯಗಳೆಂದರೆ, ವಿದ್ಯುಚ್ಛಕ್ತಿ ಅಭಿವೃದ್ಧಿ ಹಾಗೂ ಬೇಡಿಕೆ, ಕೇಂದ್ರಗಳ ಸ್ಥಾಪನೆ, ಸವಳು ನಿರೋಧಕ ಕಾರ್ಯ, ನೌಕಾಯಾನ, ಭೂಗರ್ಭಶಾಸ್ತ್ರ,

ನೀರಿನ ಸರಬರಾಜು, ವಿದ್ಯುತ್ ವಾಹಕತಂತಿಗಳನ್ನು ಎಳೆಯುವ ಕಾರ್ಯ ಮುಂತಾದವು.

ಕೇಂದ್ರದ, ಹಾಗೂ ಬಂಗಾಲ ಮತ್ತು ಬಿಹಾರದ ಹಾಜರಿದ್ದ ಪ್ರತಿನಿಧಿಗಳು :

ಭಾರತ ಸರ್ಕಾರ : ಎಚ್.ಸಿ. ಪ್ರಯೋರ್, ಕಾರ್ಯದರ್ಶಿ ಕಾರ್ಮಿಕ ಇಲಾಖೆ; ಡಿ.ಎಲ್. ಮುಜುಮ್‌ದಾರ್, ಉಪಕಾರ್ಯದರ್ಶಿ, ಕಾರ್ಮಿಕ ಇಲಾಖೆ; ಎಂ. ಇಕ್ರಾಮುಲ್ಲಾ, ಜಂಟಿ ಕಾರ್ಯದರ್ಶಿ, ಸರಬರಾಜು ಇಲಾಖೆ; ಎಚ್.ಎಮ್. ಮ್ಯಾಥ್ಯೂಸ್, ಅಧ್ಯಕ್ಷ, ಕೇಂದ್ರ ವಿದ್ಯುಚ್ಛಕ್ತಿಯ ತಾಂತ್ರಿಕ ಶಕ್ತಿ ಮಂಡಳಿ; ಸಿ.ಡಬ್ಲ್ಯೂ. ಎಲ್. ವೂರಡಿನ್, ಜಲ–ವಿದ್ಯುತ್ ಸದಸ್ಯ, ಕೇಂದ್ರ ವಿದ್ಯುಚ್ಛಕ್ತಿಯ ತಾಂತ್ರಿಕ ಮಂಡಳಿ; ಸಿ. ಕೋಟ್ಸ್, ಉಪಕಾರ್ಯದರ್ಶಿ, ಸರಬರಾಜು ಇಲಾಖೆ; ಜೆ.ಆರ್. ಹ್ಯಾರಿಸನ್, ಉಪಆಯುಕ್ತರು, ಕಲ್ಲಿದ್ದಲು.

ಬಂಗಾಲ ಸರ್ಕಾರ : ಒ.ಎಮ್. ಮಾರ್ಟಿನ್, ಗವರ್ನರರ ಸಲಹೆಗಾರ, ಸಂಪರ್ಕ ಹಾಗೂ ಕಾಮಗಾರಿ ಇಲಾಖೆ; ಆರ್.ಎಲ್. ವಾಕರ್, ಗವರ್ನರರ ಸಲಹೆಗಾರ, ಹಣಕಾಸು, ವಾಣಿಜ್ಯ, ಕಾರ್ಮಿಕ ಹಾಗೂ ಉದ್ದಿಮೆ ಇಲಾಖೆ; ಬಿ.ಬಿ. ಸರಕಾರ್, ಕಾರ್ಯದರ್ಶಿ ಸಂಪರ್ಕ ಹಾಗೂ ಕಾಮಗಾರಿ ಇಲಾಖೆ; ರಾಯ್‌ಬಹದ್ದೂರ್ ಎಸ್.ಕೆ. ಗುಪ್ತಾ, ಮುಖ್ಯ ಇಂಜಿನಿಯರ್, ನೀರಾವರಿ; ಮಾನಸಿಂಗ್, ದಾಮೋದರ ಯೋಜನೆಯ ಸೂಪರಿಂಟೆಂಡೆಂಟ್ ಇಂಜಿನಿಯರ್; ಎಮ್. ಜಾಫರ್, ನಿರ್ದೇಶಕ, ಸಾರ್ವಜನಿಕ ಆರೋಗ್ಯ ಇಲಾಖೆ; ಅಜೀಜ್ ಅಹಮದ್, ಜಂಟಿ ಕಾರ್ಯದರ್ಶಿ, ಯುದ್ಧೋತ್ತರ ಪುನರ್ ವಸತಿ ಇಲಾಖೆ.

ಬಿಹಾರ ಸರ್ಕಾರ : ಎಸ್.ಎಮ್. ಧರ್, ಅಭಿವೃದ್ಧಿ ಆಯುಕ್ತರು; ಡಬ್ಲ್ಯು.ಜೆ. ಕೇನ್, ನೀರಾವರಿ ಹಾಗೂ ವಿದ್ಯುತ್‌ಚ್ಛಕ್ತಿ, ಮುಖ್ಯ ಇಂಜಿನಿಯರ್.

## ೫೧

## ಭಾರತದ ಕೈಗಾರಿಕಾ ಕಾರ್ಮಿಕರ ಗೃಹ ನಿರ್ಮಾಣ*

ನವದೆಹಲಿಯಲ್ಲಿ ಕರೆಯಲಾದ, ಏಳನೇ ಕಾರ್ಮಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ಭಾರತದ ಕೈಗಾರಿಕಾ ಕಾರ್ಮಿಕರ ಗೃಹ ನಿರ್ಮಾಣದ ಅಗತ್ಯವನ್ನು ಒತ್ತಿಹೇಳಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು, ಭಾರತ ಸರ್ಕಾರದ ಮಾನ್ಯ ಕಾರ್ಮಿಕ ಸದಸ್ಯರಾದ ಡಾ|| ಬಿ.ಆರ್. ಅಂಬೇಡ್ಕರರು ವಹಿಸಿದ್ದರು.

ಈ ಸಮಿತಿಯು, ಕಾರ್ಮಿಕರ ವಸತಿಯ ಸಮಸ್ಯೆಯ ಪರಿಶೀಲನೆಗೆ ಒಂದು ಉಪಸಮಿತಿಯನ್ನು ನೇಮಿಸಬೇಕೆಂದು ನಿರ್ಧರಿಸಿತು. ಈ ಕೆಳಕಂಡ ವಿಷಯಗಳನ್ನು ಪರಿಶೀಲಿಸಬೇಕೆಂದೂ ನಿರ್ಣಯಿಸಿತು.

೧) ಗೃಹ ನಿರ್ಮಾಣ ಕಾರ್ಯಕ್ಕೆಂದೇ ಒಂದು ನಿಧಿಯನ್ನು ರಚಿಸುವುದು ಅನಿವಾರ್ಯವೇ? ಅನಿವಾರ್ಯ ಎಂದಲ್ಲಿ ಈ ನಿಧಿಯನ್ನು ಹೇಗೆ ಸಂಗ್ರಹಿಸಬಹುದು? ಈಗಾಗಲೇ ವಸತಿ ಸೌಕರ್ಯ ಹೊಂದಿರುವ ಕಾರ್ಮಿಕರನ್ನು ಹೇಗೆ ಪರಿಗಣಿಸಬೇಕು?

೨) ಕಾರ್ಮಿಕರಿಂದ, ಯಾವ ಆಧಾರದ ಮೇಲೆ ಬಾಡಿಗೆಯನ್ನು ಪಡೆಯಬಹುದು?

೩) ಕಾರ್ಮಿಕರ ಮನೆಗಳ ಮಟ್ಟ ಯಾವುದಿರಬೇಕು?

---

* ಇಂಡಿಯನ್ ಇನ್‌ಫರ್ಮೇಷನ್, ಡಿಸೆಂಬರ್ ೧೫, ೧೯೪೫, ಪು. ೪೬೪.

೪) ಕಾರ್ಮಿಕರ ಗೃಹ ನಿರ್ಮಾಣಕ್ಕೆ ಅವಶ್ಯವಾದ ನಿಧಿಯನ್ನು ಸರ್ಕಾರದಿಂದಲೇ ಆಗಲಿ ಅಥವಾ ಮಾಲೀಕರಿಂದಲೇ ಆಗಲಿ ಮತ್ತು ನೌಕರರಿಂದಲೇ ಆಗಲಿ ಸಂಗ್ರಹಿಸಿ ಯಾವ ವಿಧದಲ್ಲಿ ಅದರ ಆಡಳಿತವನ್ನು ನಡೆಸಬೇಕು? ಮತ್ತು

೫) ಕಾರ್ಮಿಕರ ವಸತಿ ಸೌಕರ್ಯಕ್ಕೆ, ಪ್ರಾಂತ ಅಥವಾ ಸ್ಥಳೀಯ ಸರ್ಕಾರಗಳು ಯಾವ ರೀತಿಯಲ್ಲಿ ಸಹಾಯ ಧನದ ಸೌಲಭ್ಯವನ್ನು ನೀಡಬಹುದು?

ಈ ಉಪಸಮಿತಿಯಲ್ಲಿ ಕೇಂದ್ರದ ಇಬ್ಬರು ಪ್ರತಿನಿಧಿಗಳು, ಪ್ರಾಂತಗಳಿಂದ ಇಬ್ಬರು, ಭಾರತದ ರಾಜ್ಯಗಳಿಂದ ಇಬ್ಬರು, ಮಾಲೀಕರಿಂದ ಹಾಗೂ ನೌಕರರಿಂದ ತಲಾ ಮೂರು ಸದಸ್ಯರು, ನಗರ ಸಭೆ ಹಾಗೂ ನಗರ ಸಭೆಯ ಕಾರ್ಮಿಕರು ಸೇರಿದಂತೆ ಇರತಕ್ಕದೆಂದು ನಿರ್ಧರಿಸಲಾಯಿತು.

**ವೇತನಸಹಿತ ರಜೆ**

ಈ ಸ್ಥಾಯಿ ಸಮಿತಿ, ವೇತನಸಹಿತ ರಜೆಯನ್ನು ನೀಡುವ, ಭಾರತ ಸರ್ಕಾರದ ೧೯೪೫ರ ಮಸೂದೆ (ತಾತ್ಕಾಲಿಕ) ತಿದ್ದುಪಡಿಯ ಬಗೆಗೂ ಚರ್ಚಿಸಿತು. ಈ ದಿಶೆಯಲ್ಲಿ ಸರ್ವಸಮ್ಮತಿಯಿಂದ ತಿದ್ದುಪಡಿಯ ಆವಶ್ಯಕತೆಯನ್ನು ಒಪ್ಪಲಾಯಿತು. ಅಲ್ಲದೆ ಕಾರ್ಮಿಕರ ಮಸೂದೆಯಲ್ಲಿ ಕಾರ್ಮಿಕರ ವ್ಯಾಖ್ಯೆಯನ್ನು ಸೇರಿಸಬೇಕು ಹಾಗೂ ಈ ಮಸೂದೆಯನ್ನು ಮಾಹೆಯಾನ ರೂ. ೪೦೦ರ ವರೆಗೆ ವೇತನ ಪಡೆಯುವ ಕಾರ್ಮಿಕರಿಗೂ ಅನ್ವಯವಾಗುವಂತೆ ಜಾರಿಗೊಳಿಸಬೇಕು ಎಂದೂ ನಿರ್ಧರಿಸಲಾಯಿತು.

ಈ ಸಭೆಯಲ್ಲಿ ಕೇಂದ್ರ, ಪ್ರಾಂತ, ಭಾರತದ ರಾಜ್ಯಗಳ ಪ್ರತಿನಿಧಿಗಳು, ಅರಸರು, ಕಾರ್ಮಿಕ ಸಂಘಟನೆಯ ಒಡೆಯರು, ಭಾರತೀಯ ಸಂಯುಕ್ತ ಮಾಲೀಕರು, ಅಖಿಲ ಭಾರತ ಉದ್ದಿಮೆ ಕಾಂಗ್ರೆಸ್ ಯೂನಿಯನ್ ಹಾಗೂ ಭಾರತದ ಸಂಯುಕ್ತ ಮಜದೂರ ಸಂಘಗಳ ಪ್ರತಿನಿಧಿಗಳು ಹಾಗೂ ಇತರ ಕಾರ್ಮಿಕರು ಹಾಜರಿದ್ದರು.

## ೫೨
## ಕಾರ್ಮಿಕರ ಬಗೆಗೆ ರಾಜ್ಯದ ಬಾಧ್ಯತೆಗಳು*

ನವೆಂಬರ್ ೨೬ರಂದು ನವದೆಹಲಿಯಲ್ಲಿ ಕರೆಯಲಾಗಿದ್ದ ಕಾರ್ಮಿಕ ಸಮ್ಮೇಳನ– ಇನ್ನು ಮುಂದೆ ಭಾರತೀಯ ಕಾರ್ಮಿಕರ ಸಮ್ಮೇಳನ ಎಂದು ಕರೆಯಲಾಗುವ ಸಭೆಯ ಅಧ್ಯಕ್ಷತೆಯನ್ನು, ಭಾರತ ಸರ್ಕಾರದ ಕಾರ್ಮಿಕ ಸದಸ್ಯ ಡಾ॥ ಬಿ.ಆರ್. ಅಂಬೇಡ್ಕರರು ವಹಿಸಿದ್ದರು. ಮಾನ್ಯ ಅಧ್ಯಕ್ಷರು ಸರಕಾರವು ಕಾರ್ಮಿಕರ ಕಲ್ಯಾಣ ಕಾರ್ಯದಲ್ಲಿ ನೀಡಬೇಕಾದ ಸಹಕಾರ ಹಾಗೂ ಸಹಾನುಭೂತಿಯ ಬಗೆಗೆ ವಿವರಿಸಿ ಈ ದಿಶೆಯಲ್ಲಿ ಶಾಸನ ಜಾರಿಯಲ್ಲಿ ಬರಬೇಕೆಂದು ಆಗ್ರಹಪಡಿಸಿದರು. ಹಾಗೂ ಭಾರತೀಯ ಕಾರ್ಮಿಕರ ಸ್ಥಿತಿಗತಿಗಳು ಅಂತರ ರಾಷ್ಟ್ರೀಯ ಮಟ್ಟಕ್ಕೆ ತಲಪುವಂತೆ ಶ್ರಮಪಡಬೇಕೆಂದೂ ತಿಳಿಸಿದರು.

ಕಾರ್ಮಿಕರ ರಾಯಲ್ ಕಮೀಶನ್ ಹಾಗೂ ಅಂತರ ರಾಷ್ಟ್ರೀಯ ಕಾರ್ಮಿಕರ ಸಮ್ಮೇಳನಗಳು ಈ ದಿಶೆಯಲ್ಲಿ ಕೈಕೊಂಡ ಕಾರ್ಯಗಳನ್ನು, ವಿಧಾನಗಳನ್ನು ವಿಮರ್ಶಿಸಿದರು. ಡಾ. ಅಂಬೇಡ್ಕರರ ಹೇಳಿಕೆಯಂತೆ

* ಇಂಡಿಯನ್ ಇನ್‌ಫರ್ಮೇಷನ್, ಡಿಸೆಂಬರ್ ೧೯೪೫, ಪು. ೬೮೪–೮೮

ಕೇವಲ ೧೦ ನಿರ್ಣಯಗಳು ಇನ್ನೂ ಜಾರಿಗೊಳಿಸಬೇಕಾಗಿದ್ದು, ಭಾರತವು ೬೩ರಲ್ಲಿ ೧೯ ನಿರ್ಣಯಗಳಿಗೆ ಇನ್ನೂ ತನ್ನ ಸಹಮತ ನೀಡಿಲ್ಲವೆಂದೂ ತಿಳಿಸಿದರು. ಆದರೆ, ಈ ಕಾರ್ಯ ಕೇವಲ ಅಸಮ್ಮತಿಯಿಂದಾಗಿರದೆ, ಸಮ್ಮೇಳನದ ಸಂಪ್ರದಾಯಗಳಿಗೆ ಸಂಬಂಧಿಸಿದ್ದು, ಸಮ್ಮೇಳನದ ಎಲ್ಲಾ ನಿರ್ಣಯಗಳನ್ನೂ ಸಂಪೂರ್ಣವಾಗಿಯೇ ಒಪ್ಪಿಕೊಳ್ಳಬೇಕೇ ಹೊರತು ಭಾಗಶಃವಲ್ಲ. ಆದುದರಿಂದ ಈ ವಿಧವಾದ ಹಂತ ಹಂತದ ಸಮ್ಮತಿಗೆ ಅನುವು ಮಾಡಿಕೊಡುವ ಜವಾಬ್ದಾರಿ ಐ.ಎಲ್.ಓ.ಗೆ ಸೇರಿದೆ.

ನೆರೆದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಅಂಬೇಡ್ಕರರು ಹೀಗೆ ನುಡಿದರು. :

"ಶಾಂತಿ ಮರುಸ್ಥಾಪನೆಯಾಗಿದ್ದು ನಮಗೆಲ್ಲಾ ಸಂತೋಷದ ಸಂಗತಿಯಾಗಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಈ ಯುದ್ಧವು ನಮ್ಮ ಆರು ವರ್ಷದ ಅಮೂಲ್ಯ ಸಮಯದ ನಷ್ಟದೊಂದಿಗೆ ಜನ, ಧನ, ಆಸ್ತಿ ಪಾಸ್ತಿ ಹಾಳುಮಾಡಿ ವಿಪರೀತ ದುಃಖವನ್ನು ಉಂಟುಮಾಡಿದೆ. ವಿಜಯಸಾಧನೆಗೆ ನಾವು ಅನುಭವಿಸಿದ ಕಷ್ಟನಷ್ಟಗಳು ಅಪಾರವಾಗಿದ್ದವು. ಬಹುಶಃ ಇನ್ನು ಮುಂದೆ ಈ ವಿಧವಾದ ಯುದ್ಧಗಳಿಗೆ ಅವಕಾಶ ಇರದಿರುವ ಸಂಭವಗಳು ಹೆಚ್ಚಿವೆ. ಈ ವಿಧವಾದ ಯುದ್ಧಕ್ಕೆ ನಾವು ತೀವ್ರಗತಿಯಿಂದ ವಸ್ತುಗಳ ನಿರ್ಮಾಣ ಕೈಗೆತ್ತಿಕೊಳ್ಳುವ ಪ್ರಸಂಗವೂ ಮರಳಿಬರಲಾರದು ಎಂದು ಹಾರೈಸುವೆ. ದೇವರ ಕೃಪೆಯಿಂದ ನಮ್ಮ ಸಂಕಟದ ಪರಿಸ್ಥಿತಿ ಮರೆಯಾಗಿದೆ. ಆದರೆ ಶಾಂತಿ ಸಮಸ್ಯೆಗಳು ನಮ್ಮೆದುರಿಗೆ ಇದೆ ಎಂಬುದನ್ನು ತಾವು ಮರೆಯಬಾರದು. ಯುದ್ಧದ ಸಮಸ್ಯೆಗಳು ಪರಿಹಾರವಾಗಿದ್ದರೂ ಪುನರ್‌ವಸತಿಯಂತಹ ಶಾಂತಿ ಕಾಲದ ಸಮಸ್ಯೆಗಳನ್ನು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಈ ಸಮಸ್ಯೆಗಳು, ಪ್ರಪಂಚದ ವಿವಿಧ ದೇಶಗಳಂತೆ, ಭಾರತವನ್ನೂ ಬಾಧೆಗೆ ಗುರಿ ಮಾಡಿವೆ.

**ಸರಕಾರದ ಹೊಣೆ**

"ಇವುಗಳಲ್ಲಿ ಅನೇಕ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿದ್ದರೂ, ಈ ಸಮ್ಮೇಳನದಲ್ಲಿ ಪ್ರಮುಖ ಸಮಸ್ಯೆಯಾದ, 'ಬಂಡವಾಳ ಮತ್ತು ಕಾರ್ಮಿಕರು' ಎಂಬ ಕಾರ್ಮಿಕ ಕಲ್ಯಾಣ ಸಮಸ್ಯೆಯ ಬಗೆಗೆ ಚಿಂತನೆ ನಡೆಸಲಾಗುವುದು. ಹೀಗಾಗಿ ಈ ಸಮ್ಮೇಳನ ತನ್ನ ಗುರುತರ ಹೊಣೆಯನ್ನು ಅರಿಯಲು, ಈ ಕಾರ್ಯಕ್ಷೇತ್ರದಲ್ಲಿ ಆಗಿರಬಹುದಾದ ಹಾಗೂ ಆಗಬೇಕಾದ ಕಾರ್ಯಗಳೇನು ಎಂಬುದನ್ನು ತಿಳಿದುಕೊಂಡರೆ ಉತ್ತಮ.

"ಈ ವಿಧವಾದ ಪರಿಸ್ಥಿತಿಯ ವಿಮರ್ಶೆಯನ್ನು ಮಾಡುವ ಮೊದಲು ನಮ್ಮ ಹೊಣೆ ಏನು ಎಂಬುದನ್ನು ತಮಗೆ ವಿವರಿಸುವೆ. ನಮ್ಮ ಈ ವಿಧವಾದ ಹೊಣೆ ಎರಡು ಮೂಲಗಳಿಂದ ಉದ್ಭವಿಸಿದೆ. ಮೊದಲನೆಯದಾಗಿ ರಾಯಲ್ ಆಯೋಗದ ೧೯೩೦ರ ಶಿಫಾರಸ್ಸಿನಿಂದ, ಎರಡನೆಯದೆಂದರೆ, ಭಾರತದ ಸದಸ್ಯತ್ವವಿರುವ ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದ ಸಂಪ್ರದಾಯಗಳಿಂದ.

"ಕಾರ್ಮಿಕರ ರಾಯಲ್ ಆಯೋಗವು ಸುಮಾರು ೩೫೭ ವಿಷಯಗಳನ್ನು ಶಿಫಾರಸ್ಸು ಮಾಡಿದ್ದು, ಅವುಗಳಿಂದ ೧೯೨೯ರ ಹೊತ್ತಿಗೆ ಪ್ರಪಂಚದ ಇತರ ದೇಶಗಳೊಂದಿಗೆ ಹೋಲಿಸಿದಾಗ ಭಾರತೀಯ ಕಾರ್ಮಿಕರ ಪರಿಸ್ಥಿತಿಯು ಎಷ್ಟು ಹೀನಾವಸ್ಥೆಯಲ್ಲಿತ್ತು ಎಂಬ ಸಂಗತಿ ತಿಳಿದು ಬರುತ್ತದೆ. ಏಕೆಂದರೆ ಈ ೩೫೭ರಲ್ಲಿ ೧೩೩ರ ಬಗೆಗೆ ಇನ್ನೂ ಶಾಸನ ರಚಿಸಬೇಕಾಗಿತ್ತು. ಈ ೧೩೩ ವಿಷಯಗಳಲ್ಲಿ ೧೨೬ ವಿಷಯಗಳನ್ನು ಒಪ್ಪಲಾಗಿದ್ದು ೭ನ್ನು ನಿರಾಕರಿಸಲಾಗಿತ್ತು. ಈ ೧೨೬ರಲ್ಲಿ ೧೦೬ ವಿಷಯಗಳನ್ನು ಕಾರ್ಯಾಚರಣೆಗೆ ನೀಡಿದ್ದು ೨೦ ಬಾಕಿ ಉಳಿದಿದ್ದವು. ಈ ೨೦ರಲ್ಲಿ ೧೦ ಕಾರ್ಯಾಗಾರ ಶಾಸನಗಳಿಗೆ

ಸೇರಿದ್ದು ಈ ದಿಶೆಯಲ್ಲಿ ಅಧಿಕಾರವು ಕಾರ್ಖಾನೆಯ ಮಸೂದೆಯ ೫ನೆಯ ಪ್ರಕರಣದಡಿಯಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಸೇರಿತ್ತು. ಹೀಗಾಗಿ ಕೇವಲ ೧೦ ವಿಷಯಗಳು ಮಾತ್ರ ಮಿಕ್ಕಿರುವುದರಿಂದ, ಈ ದಿಶೆಯಲ್ಲಿ ನಮ್ಮ ಹೊಣೆ ಅಲ್ಪ ಎಂದೇ ಹೇಳುವೆ.

**ಅಂತಾರಾಷ್ಟ್ರೀಯ ಕಾರ್ಮಿಕ ಸಂಘದ ಸಮಾವೇಶ**

"ನಮ್ಮ ಹೊಣೆಯ ಎರಡನೆಯ ಮೂಲವಾದ ಐ.ಎಲ್.ಓ. ೧೯೧೯ರಿಂದ ೧೯೪೩ರ ವರೆಗಿನ ಅವಧಿಯಲ್ಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಒಟ್ಟಾರೆ ೬೩ ಒಪ್ಪಂದಗಳನ್ನು ಜಾರಿಮಾಡಿದೆ. ಆದರೆ ಭಾರತವು ಕೇವಲ ೧೪ ಒಪ್ಪಂದಗಳಿಗೆ ಸಹಮತ ನೀಡಿದ್ದು ೪೯ ಒಪ್ಪಂದಗಳನ್ನು ಇನ್ನೂ ಒಪ್ಪಬೇಕಾಗಿದೆ.

"ಈ ದಿಶೆಯಲ್ಲಿಯ ಲೆಕ್ಕಾಚಾರವನ್ನು ತಾವು ಗಮನಿಸಬೇಕು. ಈ ದಿಶೆಯಲ್ಲಿ ನಮ್ಮ ರಾಯಲ್ ಆಯೋಗವು ಐ.ಎಲ್.ಓ.ಕ್ಕಿಂತ ಉತ್ತಮವಾಗಿದೆ. ಏಕೆಂದರೆ ರಾಯಲ್ ಆಯೋಗದ ಶಿಫಾರಸುಗಳು ಭಾರತದ ಪರಿಸ್ಥಿತಿಗೆ ಅನುಗುಣವಾಗಿವೆ. ಆದರೆ ಐ.ಎಲ್.ಓ. ಒಪ್ಪಂದಗಳು ಸಾಮಾನ್ಯವಾಗಿದ್ದು ಅವು ನಮಗೆ ಪ್ರಸ್ತುತವೆನಿಸುವುದಿಲ್ಲ.

"ವಾಸ್ತವಿಕವಾಗಿ ಆಯೋಗದ ದೃಷ್ಟಿಯಲ್ಲಿ ನಮ್ಮ ಹೊಣೆ ಹೆಚ್ಚಿಗೆ ಏನೂ ಇಲ್ಲ. ಆದರೆ ಒಪ್ಪಂದದ ದಿಶೆಯಲ್ಲಿ ಈ ಹೊಣೆ ಅಧಿಕ ಮಹತ್ವದ್ದಾಗಿದೆ. ಒಪ್ಪಿಗೆ ನೀಡದೇ ಇರುವ ಹಲವಾರು ಒಪ್ಪಂದಗಳು ತುಂಬಾ ಮಹತ್ವಪೂರ್ಣವಾಗಿದ್ದು, ನಾವು ಅವನ್ನು ಪರಿಶೀಲಿಸಬೇಕು. ಇದರಲ್ಲಿ ಅತಿ ಮುಖ್ಯವಾದುದೆಂದರೆ ನಮ್ಮ ಕಾರ್ಮಿಕರ ಜೀವನಮಟ್ಟವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸುವುದು.

"ಈ ಸಂಕ್ಷಿಪ್ತ ಸರ್ವೇಕ್ಷಣದಿಂದ, ಶಾಸನ ರಚಿಸಬೇಕಾಗಿರುವ ವಿಷಯಗಳ ಅರಿವು ತಮಗೆ ಮೂಡಿರಬಹುದೆಂದು ನಾನು ಭಾವಿಸುತ್ತೇನೆ. ಈ ಋಣವನ್ನು ನಾವು ಹೇಗಾದರೂ ಮಾಡಿ ಪರಿಹರಿಸಿಕೊಳ್ಳಲೇಬೇಕು. ಹಾಗೂ ಇದರಿಂದ ನಾವು ಪಲಾಯನಗೈಯುವಂತೆಯೇ ಇಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಪ್ರಪಂಚದ ಸಾರ್ವಜನಿಕ ಅಭಿಪ್ರಾಯವು ನಮ್ಮನ್ನು ಬದ್ಧಗೊಳಿಸಿರುವುದರಿಂದ ನಾವು ಈ ಹೊಣೆಯಿಂದ ಪರಾರಿಯಾಗುವಂತೆಯೇ ಇಲ್ಲ ಎಂಬುದು ಸ್ಪಷ್ಟ.

"ನಾನು, ನಮ್ಮ ಹೊಣೆಯನ್ನು ಅರಿಯುವಂತೆ ಮಾಡಿದ್ದೇನೆ; ಏಕೆಂದರೆ ಭಾರತದಂತಹ ದೇಶದಲ್ಲಿ ಕಾರ್ಮಿಕ ಶಾಸನಗಳ ಕೊರತೆ ಇದೆ ಹಾಗೂ ಇದು ಸಂದೇಹ ಮತ್ತು ಟೀಕೆಗಳಿಗೆ ಆಸ್ಪದ ನೀಡಿದೆ. ಈ ವಿಷಯದಲ್ಲಿ ಬ್ರಿಟಿಷ್ ಸಂಪ್ರದಾಯಗಳನ್ನು ಅನುಸರಿಸುವಂತೆ ನಮ್ಮನ್ನು ಒತ್ತಾಯಿಸಲಾಗಿದೆ. ಆದರೆ ತಾವು ಗಮನಿಸಬೇಕಾದ ಸಂಗತಿ ಎಂದರೆ, ಇಂದಿನ ಕಾರ್ಮಿಕ ಕಾನೂನುಗಳನ್ನು ಜಾರಿಯಲ್ಲಿ ತರಲು ಬ್ರಿಟನ್ ದೇಶಕ್ಕೆ ಒಂದು ಶತಮಾನ ಬೇಕಾಯಿತು. ಬೇರೆ ಕೆಲವರ ಸಲಹೆಯಂತೆ ಕಾರ್ಮಿಕ ಶಾಸನಗಳ ಹೊಣೆಯನ್ನು ಅಥವಾ ಹೊರೆಯನ್ನು ಉದ್ದಿಮೆಗಳ ಮೇಲೆ ಹೇರಬಾರದು; ಏಕೆಂದರೆ ಅವು ಇನ್ನೂ ಶೈಶವಾವಸ್ಥೆಯಲ್ಲಿವೆ. ಈ ದಿಶೆಯಲ್ಲಿ ರಷ್ಯಾದಲ್ಲಿಯಂತೆ ಕಡಿಮೆ ಕೂಲಿ ತೆಗೆದುಕೊಂಡರೆ ಉದ್ದಿಮೆಗಳು ಬೆಳೆಯಲು ಸಹಕಾರಿಯಾಗಬಹುದು. ಇನ್ನೂ ಹಲವರ ಹೇಳಿಕೆಯಂತೆ, ಕಾರ್ಮಿಕ ಶಾಸನಗಳನ್ನು ಕಡ್ಡಾಯಗೊಳಿಸಬಹುದಾದ ಆಡಳಿತ ವ್ಯವಸ್ಥೆ ಜಾರಿಯಲ್ಲಿ ಇಲ್ಲ; ಆದುದರಿಂದ ಕಾರ್ಮಿಕ ಶಾಸನಗಳನ್ನು ಸೃಷ್ಟಿಸುವುದರಿಂದ ಉಪಯೋಗವಾಗಲಾರದು. ಈ ವಿಧದ ಕಾನೂನುಗಳು ಕೇವಲ ಪುಸ್ತಕಗಳಲ್ಲಿಯೇ ಕೊಳೆಯುವ ಸಂಭವವೇ ಅಧಿಕವಾಗಬಹುದು. ಮತ್ತೊಂದು ಹೇಳಿಕೆಯಂತೆ ಬಡದೇಶವಾದ ಭಾರತವು ಕಾರ್ಮಿಕರ ಉನ್ನತ ಮಟ್ಟದ ಜೀವನವೆಚ್ಚದ ವಿಲಾಸವನ್ನು ಭರಿಸುವ ಸಾಮರ್ಥ್ಯವನ್ನು ಹೊಂದಿಲ್ಲ.

**ಕಾರ್ಮಿಕ ಶಾಸನ**

“ನಮ್ಮ ಈ ಅಭಿಪ್ರಾಯಗಳನ್ನು ವಿಶ್ವದ ಜನಾಂಗ ಒಪ್ಪುವುದೇ? ಅಥವಾ ಕಾರ್ಮಿಕರ ಶಾಸನಗಳನ್ನು ತಡೆಹಿಡಿಯುವ ಉಪಾಯವೆಂದು ಪರಿಗಣಿಸುವುದೇ? ಒಟ್ಟಾರೆ ನಾವು ಈ ದಿಶೆಯಲ್ಲಿ ಮುಂದುವರಿದಿಲ್ಲ ಎಂಬುದು ಖಚಿತ. ಈ ನಮ್ಮ ಎಲ್ಲಾ ಹೇಳಿಕೆಗಳೂ ಬೂಟಾಟಿಕೆ.

“ಕಾರ್ಮಿಕರು ಮಾತ್ರ, ನಮ್ಮನ್ನು ಮನ್ನಿಸಲಾರರು, ಏಕೆಂದರೆ ಬ್ರಿಟನ್ ದೇಶವು ಕಾರ್ಮಿಕ ಶಾಸನಗಳನ್ನು ಜಾರಿಯಲ್ಲಿ ತರಲು ಒಂದು ಶತಮಾನ ತೆಗೆದುಕೊಂಡರೆ, ಭಾರತವೂ ಒಂದು ಶತಮಾನ ತೆಗೆದುಕೊಳ್ಳಬೇಕೆ? ಕೇವಲ ಪರದೇಶಗಳು ಮಾಡಿರಬಹುದಾದ ಅಪರಾಧಗಳನ್ನು ಮಾತ್ರ ಅನುಕರಣೆ ಮಾಡುವುದೇ ಚರಿತ್ರೆಯ ಅಧ್ಯಯನದ ಗುರಿಯಾಗಬಾರದು. ನಾವು ಚರಿತ್ರೆಯನ್ನು ಓದುವುದರಿಂದ ಆ ಜನಾಂಗ ಮಾಡಿರಬಹುದಾದ ಅಪರಾಧಗಳನ್ನು ಅರಿತು ಅವನ್ನು ನಾವು ನಿವಾರಿಸಿಕೊಂಡು ನಡೆಯಬೇಕು. ಚರಿತ್ರೆ ಯಾವಾಗಲೂ ಉದಾಹರಣೆಯಾಗುವುದಿಲ್ಲ, ಅನೇಕ ಬಾರಿ ಅದು ಒಂದು ಎಚ್ಚರಿಕೆ.

“ಕಾರ್ಮಿಕರು ರಷ್ಯಾದ ಮಾದರಿಯನ್ನು ಖಚಿತವಾಗಿ ಅಂಗೀಕರಿಸಲಾರರು. ಏಕೆಂದರೆ ಈ ದೇಶದಲ್ಲಿ ಉದ್ದಿಮೆಗಳು ಖಾಸಗಿ ರಂಗದಲ್ಲಿದ್ದು, ಲಾಭಗಳಿಕೆ ಖಾಸಗಿ ರಂಗಕ್ಕೆ ಸಲ್ಲುವುದರಿಂದ ದೇಶದ ಸರಕಾರಿ ಉದ್ದಿಮೆಗಳ ರಷ್ಯಾ ಅನುಕರಣೆಯ ಪ್ರಶ್ನೆಯೇ ಏಳಲಾರದು. ಉದ್ದಿಮೆಗಳ ಲಾಭಾಂಶ ಸಾರ್ವಜನಿಕ ಬೊಕ್ಕಸಕ್ಕೆ ಸಲ್ಲುವಂತಿದ್ದರೆ, ಅಲ್ಲಿಯ ಸಾರ್ವಜನಿಕರು ಯಾವ ತ್ಯಾಗವನ್ನಾದರೂ ಮಾಡಬಹುದು. ಏಕೆಂದರೆ ಈ ವಿಧವಾದ ತ್ಯಾಗ ರಾಜ್ಯಕ್ಕೆ ಸಲ್ಲುವುದರಿಂದ ಮುಂದೆ ಅದರಲ್ಲಿ ಪ್ರಜೆಗಳೂ ಪಾಲುದಾರರಾಗುವರು. ಆದುದರಿಂದ ನಾವು ಭಾರತದ ಕಾರ್ಮಿಕರನ್ನು ಈ ಬಗೆಗೆ ಒತ್ತಾಯಿಸುವಂತಿಲ್ಲ.”

**ಕಾರ್ಮಿಕರ ಕಲ್ಯಾಣ ನಿಧಿ**

“ಕಾರ್ಮಿಕರ ಕಾನೂನನ್ನು ಜಾರಿಗೊಳಿಸುವಲ್ಲಿ ಒಂದು ಆಡಳಿತ ವ್ಯವಸ್ಥೆಯಿಲ್ಲದೇ ಹೋದುದೇ ಒಂದು ಪ್ರಬಲ ಕಾರಣವಲ್ಲ. ಈ ವಾದವನ್ನು ಕಾರ್ಮಿಕರು ತಳ್ಳಿಹಾಕದೇ ಇರುವುದಕ್ಕೆ ಪ್ರಬಲ ಕಾರಣಗಳ ಕೊರತೆ ಇಲ್ಲ. ರಾಜ್ಯವು ಕಾನೂನು ವ್ಯವಸ್ಥೆಗೆ ಎಂದೇ ಪೊಲೀಸ್ ಪಡೆಯನ್ನು ನೇಮಿಸಿದೆ. ಕಂದಾಯ ವಸೂಲಿಗೆಂದು ದೊಡ್ಡ ಇಲಾಖೆಯನ್ನೇ ಹೊಂದಿದೆ. ಹೀಗಿದ್ದಲ್ಲಿ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ರಾಜ್ಯ ಒಂದು ಪಡೆಯನ್ನು ಏಕೆ ನಿರ್ಮಾಣ ಮಾಡಬಾರದು? ಎಂದು ಸಹಜವಾಗಿ ಕಾರ್ಮಿಕರು ಕೇಳಬಹುದಲ್ಲವೇ? ರಾಜ್ಯದ ಕರ್ತವ್ಯ ಕೇವಲ ಕರ ವಸೂಲಿ ಮಾಡುವುದು ಹಾಗೂ ಅಪರಾಧಿಗಳನ್ನು ಶಿಕ್ಷಿಸುವುದಕ್ಕೆ ಮಾತ್ರ ಸೀಮಿತವಾಗಿದೆಯೇ? ನಾಗರಿಕ ಜೀವನಕ್ಕೆ ಅನುಗುಣವಾಗಿ ಉದ್ಯೋಗ ಸ್ಥಿತಿಗತಿಗಳನ್ನು ರಕ್ಷಿಸುವುದು ಸರ್ಕಾರದ ಕಾರ್ಯವಲ್ಲವೇ? ಇದು ರಾಜ್ಯದ ಕರ್ತವ್ಯವೆಂದಾಗ ತನ್ನ ಕರ್ತವ್ಯ ಪಾಲನೆಗೆ ಆಡಳಿತ ಯಂತ್ರವನ್ನು ರಚಿಸುವುದು ಕರ್ತವ್ಯವಾಗಲಾರದೇ? ಆಡಳಿತ ವ್ಯವಸ್ಥೆ ಇಲ್ಲ ಎನ್ನುವುದು ಕೇವಲ ಢೋಂಗಿ ಮಾತಾದೀತು.

“ಕಾರ್ಮಿಕ ಶಾಸನದಿಂದ ಉಂಟಾಗುವ ಹಣದ ಹೊರೆಯ ಮಾತು ತುಂಬಾ ಗಂಭೀರವಾದ ಪ್ರಶ್ನೆ. ಅದನ್ನು ಕಾರ್ಮಿಕರು ಗಂಭೀರವಾಗಿಯೇ ಪರಿಗಣಿಸುತ್ತಾರೆ. ಹಣದ ಪ್ರಶ್ನೆ ಮುಖ್ಯವಾದುದಲ್ಲ. ಆದರೆ ಈ ವಾದದ ಹಿಂದೆ ಅಡಕವಾಗಿರುವ ತತ್ವ ತುಂಬಾ ಪ್ರಮುಖವಾದುದು. ಇದೊಂದು ಸಮಂಜಸ ಹಾಗೂ ಸರಿಯಾದ ವಾದವಲ್ಲವೇ? ಅಥವಾ ಕೇವಲ ಹೊಣೆಯಿಂದ ತಪ್ಪಿಸಿಕೊಳ್ಳಲು ಒಂದು ಮುಸುಕು ಮಾತ್ರವೇ? ಯುದ್ಧಕ್ಕೆ ಖರ್ಚು ಮಾಡಿದ ಹಣದೊಡನೆ ಹೋಲಿಸಿ ನೋಡಿದಾಗ ಕಾರ್ಮಿಕರು ಹೇಳುವಂತೆ ಈ

ಶಾಸನದಿಂದ ಖರ್ಚಾಗುವ ಹಣ ತುಂಬಾ ಗೌಣ ಹಾಗೂ ಗಮನಕ್ಕೆ ಬಾರದಷ್ಟು ಕಡಿಮೆ. ಯಾವ ಅಗಾಧ ಪ್ರಮಾಣದ ಯುದ್ಧಕ್ಕೆಂದೇ ಹಣ ಸಂಗ್ರಹಿಸಲಾಯಿತು ಮತ್ತು ಈ ಹಣವನ್ನು ಶ್ರೀಮಂತರು ಹೆಚ್ಚಿನ ಕರ ಕೊಡುವುದರ ಮೂಲಕ ಏನೆಲ್ಲಾ ಕಷ್ಟ ನಷ್ಟಗಳನ್ನು ಅನುಭವಿಸಿದರು ಎಂಬುದು ನಮಗೆ ತಿಳಿದೇ ಇದೆ.

"ಕಾರ್ಮಿಕರು ಹೇಳಲೂಬಹುದು. ಅದೇನೆಂದರೆ, ಯುದ್ಧಕ್ಕೆಂದೇ ಖರ್ಚುಮಾಡಿರಬಹುದಾದ ಹಣದಿಂದ, ವಸತಿಹೀನರಿಗೆ ವಸತಿ, ನಿರುದ್ಯೋಗಿಗಳಿಗೆ ಉದ್ಯೋಗ, ವಸ್ತ್ರಹೀನರಿಗೆ ಮೈ ತುಂಬಾ ಬಟ್ಟೆ, ಹಸಿದ ಹೊಟ್ಟೆಗೆ ಅನ್ನ, ದಾರಿದ್ರ್ಯ ನಿರ್ಮೂಲನ, ಅವಿದ್ಯಾವಂತರಿಗೆ ವಿದ್ಯೆ, ರೋಗಿಗಳಿಗೆ ಆಸ್ಪತ್ರೆ, ಶಾಲೆ, ಕಾಲೇಜು, ಆರೋಗ್ಯ ಮುಂತಾದ ಅನೇಕ ಸಾರ್ವಜನಿಕ ಕಲ್ಯಾಣ ಕಾರ್ಯಗಳಾಗುತ್ತಿರಲಿಲ್ಲವೇ? ಮುಂದುವರಿದು ಕಾರ್ಮಿಕರು ಶ್ರೀಮಂತರನ್ನು ಹೀಗೂ ಕೇಳಬಹುದು: 'ನೀವು ಯುದ್ಧಕ್ಕೆಂದೇ ಕರ ನೀಡಿರುವಾಗ ಕಾರ್ಮಿಕ ಕಲ್ಯಾಣಕ್ಕೆಂದು ವಿವಿಧ ಮೂಲಗಳಿಂದ ಸರಕಾರ ಹಣ ಸಂಗ್ರಹಿಸಿದರೆ ಅದನ್ನು ಏಕೆ ಹಾಗೂ ಹೇಗೆ ವಿರೋಧಿಸುವಿರಿ?' ನನಗೆ ತಿಳಿದಂತೆ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುವುದು ಅಷ್ಟೇನೂ ಸುಲಭವಲ್ಲ.

"ನಾನು ನಿಮಗೆ ಪ್ರಮುಖವಾಗಿರುವ ಕಾರ್ಮಿಕ ಶಾಸನದ ಬಗೆಗೆ ಹೇಳಿರುವೆ. ಹಾಗೂ ನಾವು ಇದರಿಂದ ಪಲಾಯನಮಾಡಲೂ ಸಾಧ್ಯವಿಲ್ಲ ಎಂದೂ ತಿಳಿಸಿರುವೆ. ಪರಿಸ್ಥಿತಿ ಹೀಗಿರುವಾಗ ತಮ್ಮ ಮುಂದೆ ಮಂಡಿಸಿದ ಉದ್ದವಾದ ಕಾರ್ಯಕ್ರಮದ ಪಟ್ಟಿಗೆ ನಾನು ವಿಷಾದ ವ್ಯಕ್ತಪಡಿಸಲಾರೆ. ಕಾರ್ಯಕ್ರಮ ಪಟ್ಟಿಯಲ್ಲಿ ಎಂಟು ವಿಷಯಗಳಿವೆ. ಅದರಲ್ಲಿ ಕೆಲವು ತುಂಬಾ ಪ್ರಮುಖವಾಗಿವೆ. ಅದರಲ್ಲಿಯೂ ಕಾರ್ಯಕ್ರಮದಲ್ಲಿ ಸೂಚಿಸಿದ ಎರಡನೆಯ ವಿಷಯ ತುಂಬಾ ಮುಖ್ಯವಾಗಿದ್ದು, ಪಟ್ಟಿಯ ಮೂರನೇ ವಿಷಯದಲ್ಲಿ ಹೇಳಲಾದ ಕೆಲಸದ ಅವಧಿಯನ್ನು ಕಡಿಮೆ ಮಾಡುವ ಬಗೆಗೆ ಇದ್ದು, ಕನಿಷ್ಠ ವೇತನದಂತಹ ವಿಷಯವಿದೆ. ಕಾರ್ಯಕ್ರಮದ ೮ನೇ ವಿಷಯವು ಕೂಲಿಕಾರ ಸಂಘಗಳಿಗೆ ಮಾನ್ಯತೆ ನೀಡುವ ಬಗೆಗೆ ಇದೆ.

**ಕುಸಿತ ನಿರೋಧ ಕ್ರಮಗಳು**

"ತಮಗೆ ತಿಳಿದಂತೆ ನಾನು ಒಂದೊಂದೇ ವಿಷಯ ಕುರಿತು ಹೇಳುತ್ತಾ ಬಂದಿರುವೆ. ಸಂತೋಷ, ಶಾಂತಿ ಅನೇಕ ವರ್ಷಗಳ ನಂತರ ನಮಗೆ ದೊರಕಿದೆ. ಆದರೆ ಶಾಂತಿಯೊಡನೆ ನೂರಾರು ಸಮಸ್ಯೆಗಳೂ ಉಂಟಾಗಿವೆ. ಅತಿ ಗಂಭೀರ ಹಾಗೂ ಭಯಾನಕ ಪ್ರಶ್ನೆ ಎಂದರೆ ನಿರುದ್ಯೋಗ ಸಮಸ್ಯೆ. ಇದನ್ನು ನಿವಾರಿಸಲು ಕೂಡಲೇ ಕ್ರಮ ತೆಗೆದುಕೊಳ್ಳದೇ ಹೋದರೆ ಕಾರ್ಮಿಕರ ಜೀವನಮಟ್ಟ ಕುಸಿದು ಬೀಳುವುದರಲ್ಲಿ ಸಂದೇಹವೇ ಇಲ್ಲ. ನನಗೆ ತಿಳಿದಂತೆ ಇದನ್ನು ಮೂರು ಕ್ರಮಗಳಿಂದ ನಿವಾರಿಸಬಹುದು :

೧) ಕಾರ್ಮಿಕರ ಕೆಲಸದ ವೇಳೆಯನ್ನು ಕಡಿಮೆ ಮಾಡುವುದರಿಂದ ಹೆಚ್ಚಿನ ಕಾರ್ಮಿಕರಿಗೆ ಉದ್ಯೋಗ ಅವಕಾಶ ನೀಡಬಹುದಾಗಿದೆ.

೨) ಎರಡನೆಯದಾಗಿ, ಕನಿಷ್ಠ ವೇತನವನ್ನು ಜಾರಿಗೊಳಿಸುವ ನಿಯಮಾವಳಿ ರಚನೆ. ಈ ವಿಧವಾದ ಆಡಳಿತ ವ್ಯವಸ್ಥೆಯನ್ನು ನಿರ್ಮಿಸದೇ ಹೋದಲ್ಲಿ ಕಾರ್ಮಿಕರ ಜೀವನಮಟ್ಟವು ಕುಸಿತದ ಆಘಾತಕ್ಕೆ ಒಳಗಾಗುವುದರಲ್ಲಿ ಸಂದೇಹವೇ ಇಲ್ಲ ಈ ಆಘಾತವನ್ನು ಸರ್ವ ಪ್ರಯತ್ನಗಳಿಂದ ಪರಿಹರಿಸಲೇಬೇಕು.

೩) ಮೂರನೆಯದಾಗಿ, ಮಾಲೀಕರು ಹಾಗೂ ಕಾರ್ಮಿಕರಿಗೆ ಒಂದು ಸಾಮೂಹಿಕ ಗುರಿ ಇರಬೇಕು. ಅದೇನೆಂದರೆ ಇಬ್ಬರೂ ಒಗ್ಗಟ್ಟಿನಿಂದ ಕಾರ್ಯಮಾಡುವುದು ಹಾಗೂ

ಸಾಮೂಹಿಕವಾಗಿ ಚರ್ಚಿಸುವುದರಿಂದ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸಫಲಗೊಳಿಸಲು ಇರುವ ಏಕೈಕ ಮಾರ್ಗವೆಂದರೆ ಕೂಲಿಕಾರ ಸಂಘಗಳಿಗೆ ಮನ್ನಣೆ ನೀಡುವುದು.

"ನಾನು ಕಾರ್ಮಿಕ ಇಲಾಖೆಯನ್ನು ತೆಗಳಲು ಬಯಸುವುದಿಲ್ಲ. ಆದರೆ ನಮ್ಮ ಧ್ಯೇಯ ಸಾಧನೆಗೆ ಆತಂಕ ಉಂಟುಮಾಡುವ ಸಂಗತಿ ಎಂದರೆ ಅದು ಐ.ಎಲ್.ಓ.ದ ಒಪ್ಪಂದಗಳಿಂದ. ನಾನು ಈಗಾಗಲೇ ಹೇಳಿರುವಂತೆ, ನಾವು ಐ.ಎಲ್.ಓ ದ ಹಲವು ಒಪ್ಪಂದಗಳಿಗೆ ಸಮ್ಮತಿ ನೀಡದಿರುವುದೇ ಒಂದು ಅಧಿಕ ಹೊಣೆಯಾಗಿದೆ. ಈಗಾಗಲೇ ನಾನು ತಿಳಿಸಿರುವಂತೆ ಕೇವಲ ಅಸಮ್ಮತಿಯೊಂದೇ ಕಾರಣವಾಗಿರದೆ ಒಪ್ಪಂದಗಳನ್ನು ಒಟ್ಟಾರೆ ಒಪ್ಪಿಕೊಳ್ಳಬೇಕೆಂಬ ಸಂಪ್ರದಾಯದಿಂದಾಗಿ ನಮ್ಮನ್ನು ಒಂದು ಸುಸ್ಥಿರ ನೀತಿಯನ್ನು ಅರಸುವಂತೆ ಮಾಡಿದೆ. ಅದೇನೆಂದರೆ ಎಲ್ಲಕ್ಕೂ ಒಪ್ಪಿಗೆ ಇಲ್ಲವೇ ತಿರಸ್ಕಾರ. ಇದು ಆಶಾದಾಯಕವಾದುದೇನೂ ಅಲ್ಲ, ಬದಲಿಗೆ, ಭಾರತದಂತಹ ಒಂದು ಹಿಂದುಳಿದ ದೇಶವು ಪ್ರಗತಿ ಹೊಂದಲು ಆತಂಕವಾಗಬಲ್ಲದು ಎಂದು ಹೇಳದೇ ಇರಲಾರೆ.

**ಹಂತ ಹಂತವಾದ ಅಭಿವೃದ್ಧಿ**

"ನಾನು ಈ ವಿಧವಾದ ಕಾನೂನಿಗೆ ಒಂದು ಚಿಕ್ಕ ಬದಲಾವಣೆ ತರಬೇಕೆಂದು ಬಯಸುವೆ. ಹೀಗೆ ಮಾಡದೇ ಹೋದಲ್ಲಿ ಏಷಿಯಾ ಖಂಡದ ದೇಶಗಳು ತಮ್ಮ ಬಹುದೂರದ ಪ್ರಗತಿಯನ್ನು ಕ್ರಮಿಸಲು ಸಾಧ್ಯವಾಗದೇ ಹೋಗಬಹುದೆಂಬ ಭಯ ಉಂಟಾಗಿದೆ. ಈಗಿರುವ ಐ.ಎಲ್.ಓ.ದ ಕಾನೂನುಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡುವುದು ಆ ಸಂಸ್ಥೆಗೆ ಸಮಸ್ಯೆ ಆಗಲಾರದು. ಈ ದಿಶೆಯಲ್ಲಿ ಹಂತ ಹಂತವಾಗಿ ಒಪ್ಪಿಗೆಗಾಗಿ ಒಂದು ಒಪ್ಪಂದವನ್ನು ರಚಿಸಿದರೆ ಉತ್ತಮವಾದೀತು. ಈ ದಿಶೆಯಲ್ಲಿ ಯಾವುದೇ ಐ.ಎಲ್.ಓ.ಗಳ ಒಪ್ಪಂದವನ್ನು ಹಂತ ಹಂತವಾಗಿ ಜಾರಿಗೊಳಿಸುವುದರಿಂದ ಯಾವ ಹಾನಿಯೂ ಸಂಭವಿಸುವುದಿಲ್ಲ. ಅವಶ್ಯವೆನಿಸಿದರೆ ಒಂದು ಕಾಲಮಿತಿಯನ್ನು ನಿರ್ಣಯಿಸಲೂಬಹುದು.

"ಈ ವಿಧವಾದ ಅವಕಾಶವನ್ನು ಕಲ್ಪಿಸುವುದರಿಂದ ನಿಷ್ಕ್ರಿಯವಾಗಿ ನರಳುತ್ತಿರುವ ಅನೇಕ ಅಂತಾರಾಷ್ಟ್ರೀಯ ಒಪ್ಪಂದಗಳಿಗೆ ಉಸಿರಾಡಲು ಅವಕಾಶ ದೊರೆಯುತ್ತದೆ.

"ಮತ್ತೊಂದು ವಿಷಯ ನಾನು ತಮಗೆ ತಿಳಿಸದೇ ಹೋದರೆ ತಾವು ನನ್ನನ್ನು ನಂಬದೇ ಹೋಗಬಹುದು, ತಮಗೆ ಜ್ಞಾಪಕವಿರುವಂತೆ, ಸಮ್ಮೇಳನವು ಒಂದು ಸಮಿತಿಯನ್ನು ರಚಿಸಿದ್ದು ಸಮ್ಮೇಳನದ ಸಂವಿಧಾನದಲ್ಲಿ ಸೂಕ್ತ ಬದಲಾವಣೆಗಳನು ಬಯಸಿದ್ದು ಈ ದಿಶೆಯಲ್ಲಿ ಸರ್ಕಾರ ವರದಿಯ ಬಗೆಗೆ ಕೈಗೊಂಡಿರುವ ಕ್ರಮಗಳನ್ನು ತಿಳಿಸುವೆ.

"ಸಮಿತಿಯ ಶಿಫಾರಸಿನಂತೆ, ಸರ್ಕಾರ ಸದ್ಯದಲ್ಲಿ ಸಂವಿಧಾನದಲ್ಲಿ ಯಾವ ಬದಲಾವಣೆಗಳನ್ನೂ ತರಲು ಬಯಸುವುದಿಲ್ಲ. ಸಮಿತಿಯೇ ಹೇಳಿರುವಂತೆ ಸಂಘಟನೆಯ ಹೆಸರನ್ನು ಮಾತ್ರ ಬದಲಾಯಿಸಲು ನಿರ್ಧರಿಸಿದೆ. ನಮಗೆಲ್ಲರಿಗೂ ತಿಳಿದಿರುವಂತೆ ಸಮ್ಮೇಳನವು ವಿವಿಧ ಹೆಸರುಗಳಿಂದ ಅಂದರೆ ಮಂತ್ರಿಗಳ, ತ್ರಿಪಕ್ಷ ಮುಂತಾದ ಹೆಸರುಗಳಿಂದ ಕರೆಯಲ್ಪಡದೆ ಇನ್ನು ಮುಂದೆ ಸಮಿತಿಯೇ ಸೂಚಿಸಿದಂತೆ 'ಕಾರ್ಮಿಕರ ಸಮ್ಮೇಳನ' ಎಂದು ಸಭೆ ಸೇರುವುದು ಎಲ್ಲರಿಗೂ ಸಂತೋಷದ ಸಂಗತಿ. ಮಹಾಕವಿ ಷೇಕ್ಸ್‌ಪಿಯರ್ ಏನೇ ಹೇಳಿರಲಿ 'ಹೆಸರಿನಲ್ಲಿ ಹೆಚ್ಚು ಅಡಕವಾಗಿದೆ', ಎಂಬಂತೆ ಕಾರ್ಮಿಕರ ಸಮ್ಮೇಳನ ಸರ್ವವಿಧದಿಂದಲೂ ಸಮರ್ಪಕವಾಗಿದೆ. ನಾನು ಈ ದಿಶೆಯಲ್ಲಿ ಒಂದು ಟೀಕೆ ಮಾಡಬಯಸುವೆ. ಕಾರ್ಮಿಕ ಎಂಬ ಒಂದೇ

ಹೆಸರಿನಲ್ಲಿ ಹೆಚ್ಚು ಆಕರ್ಷಣೆ ಇಲ್ಲದಿರುವುದರಿಂದ ತಮ್ಮೆಲ್ಲರ ಸಮ್ಮತಿಯಿಂದ ಅದನ್ನು 'ಭಾರತೀಯ ಕಾರ್ಮಿಕ ಸಮ್ಮೇಳನ' ಎಂದು ಬದಲಾಯಿಸುವೆ.

ಈ ಸಮ್ಮೇಳನದ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲೂ ಸರ್ಕಾರ ನಿರ್ಧರಿಸಿದೆ.

"ಕಳೆದ ಬಾರಿ ಪ್ಯಾರಿಸ್‌ನಗರದಲ್ಲಿ ನಡೆದ ಐ.ಎಲ್.ಓ. ಸಮ್ಮೇಳನದಲ್ಲಿ ಭಾಗವಹಿಸಿದ ಭಾರತದ ಪ್ರತಿನಿಧಿ ಸಮ್ಮೇಳನದಲ್ಲಿ ನಿರ್ಣಯಿಸಲಾದ ಎಲ್ಲಾ ಶಿಫಾರಸು ಹಾಗೂ ಒಪ್ಪಂದಗಳನ್ನು, ಈ ಸಭೆಯ ಮುಂದೆ ಚರ್ಚೆಗಾಗಿ ಮಂಡಿಸುವೆ ಎಂದು ಹೇಳಿದ್ದರು. ಅದನ್ನು ಭಾರತ ಸರ್ಕಾರವು ಗೌರವಿಸುತ್ತದೆ. ನಿಮ್ಮ ಅಧಿಕಾರ ಹಾಗೂ ಕಾರ್ಯವ್ಯಾಪ್ತಿ ಹೆಚ್ಚಿದ್ದಕ್ಕೆ ತಮಗೆ ಆನಂದವಾಗಬಹುದು. ಇದರಿಂದಾಗಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳು ಐ.ಎಲ್.ಓ.ದಲ್ಲಿ ಏನು ಜರುಗಿದೆ ಎಂಬುದನ್ನು ಅರಿಯಲು ಸಹಕಾರಿಯಾಗುತ್ತದೆ. ಅಲ್ಲದೆ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಅನುಕೂಲವಾಗುತ್ತದೆ."

**ಸಮ್ಮೇಳನದ ನಡಾವಳಿಗಳು**

ಭಾರತೀಯ ಕಾರ್ಮಿಕ ಸಮ್ಮೇಳನವು ಕೇಂದ್ರ, ಪ್ರಾಂತ ಹಾಗೂ ಪ್ರಮುಖ ರಾಜ್ಯಗಳ, ಮಾಲೀಕರ ಮತ್ತು ಕಾರ್ಮಿಕರ ಸಂಘಟನೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಸರ್ವಾನುಮತದಿಂದ, ತನ್ನ ನವೆಂಬರ್ ೨೭ರ ಸಭೆಯಲ್ಲಿ ವಾರಕ್ಕೆ ೪೮ ತಾಸುಗಳ ಕೆಲಸದ ಅವಧಿ ಸೂತ್ರವನ್ನು ಅಂಗೀಕರಿಸಿತು. ಭಾರತ ಸರ್ಕಾರವು ಸೂಚಿಸಿದ ಕಾರ್ಮಿಕ ಕ್ಯಾಂಟೀನ್ ಅಥವಾ ಉಪಾಹಾರ ಗೃಹಗಳ ರಚನೆ, ಹಾಗೂ ೧೯೩೪ರ ಕಾರ್ಮಿಕರ ಪರಿಹಾರ ಧನ ಮಸೂದೆಯಲ್ಲಿ ತಿದ್ದುಪಡಿಗಳ ಬಗೆಗೆ ಬಹುತೇಕ ಸಮ್ಮತಿಯನ್ನು ಸೂಚಿಸಲಾಯಿತು.

ಕಾರ್ಮಿಕ ಇಲಾಖೆಯ ಮನವಿಯಲ್ಲಿ ಕಾರ್ಮಿಕರ ಕೆಲಸದ ಕಾಲಾವಧಿಯನ್ನು ಕಡಿಮೆಗೊಳಿಸುವುದರಿಂದ ಅವರಿಗೆ ತಮ್ಮ ದೈಹಿಕ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಹಾಗೂ ಉತ್ತಮ ನಾಗರಿಕರಾಗಲು ಹೆಚ್ಚು ಅವಕಾಶ ಕಲ್ಪಿಸಿದಂತಾಯಿತು. ಹಾಗೂ ಯುದ್ಧದ ಸಮಯದಲ್ಲಿ ಹೆಚ್ಚು ದುಡಿದಿದ್ದ ಕಾರ್ಮಿಕರಿಗೆ ಈಗ ಅವಕಾಶ ನೀಡಿದ್ದು ಉತ್ತಮ ಎಂದೂ ಅಲ್ಲದೆ ಕಡಿಮೆ ಅವಧಿ ಕೆಲಸದಿಂದ ದಕ್ಷತೆ ಹೆಚ್ಚುತ್ತದೆ ಮತ್ತು ಹೆಚ್ಚು ಕಾರ್ಮಿಕರಿಗೆ ಉದ್ಯೋಗ ಅವಕಾಶ ನೀಡಿದಂತಾಗುತ್ತದೆ. ಕಾರ್ಯ ಅವಧಿ ಕಡಿಮೆ ಮಾಡಿದಂತೆ ಕೂಲಿಯಲ್ಲಿ ಆಗಲೀ ಅಥವಾ ತುಟ್ಟಿಭತ್ಯೆಯಲ್ಲಿ ಆಗಲಿ ಕಡಿತ ಮಾಡಬಾರದೆಂದು ಮನವಿಯಲ್ಲಿ ಹೇಳಲಾಗಿದೆ. ಬೆಲೆ ಸೂಚ್ಯಂಕವು ಇಳಿಮುಖ ತೋರಿದಲ್ಲಿ ಹಾಗೆ ಮಾಡಲೂಬಹುದು. ಆದರೆ ತುಂಡು ಕೆಲಸ ಮಾಡುವ ಕೆಲಸಗಾರರಿಗೆ ಪೂರ್ಣಾವಧಿ ಕಾರ್ಯದ ಆಧಾರದ ಮೇಲೆ ನೀಡಬೇಕು.

ಮಾಜಿ ಯೋಧರ ಹಾಗೂ ಯುದ್ಧದ ಇತರ ಸೇವೆಗಳಲ್ಲಿ ಕಾರ್ಯಮಾಡಿ ನಿವೃತ್ತರಾಗಿ ಸದ್ಯದಲ್ಲಿ ನಿರುದ್ಯೋಗಿಗಳಾಗಿರುವವರ ಪುನರ್‌ವಸತಿ ಕಾರ್ಯವನ್ನು, ಉದ್ಯೋಗ ವಿನಿಮಯ ಕೇಂದ್ರಗಳು ಯಾವ ವಿಧವಾಗಿ ಮಾಡುತ್ತಿವೆ ಎಂಬ ವಿಷಯವನ್ನೂ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಈ ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಮಿಕ ಇಲಾಖೆಯ ಅಧೀನದಲ್ಲಿವೆ.

ಒಂದು ಮನವಿಯಲ್ಲಿ ಉದ್ಯೋಗಾವಕಾಶಗಳ ಮಾಹಿತಿ ಈ ಕೇಂದ್ರಗಳಿಗೆ ದೊರೆತಾಗ ಮಾತ್ರ ಉದ್ಯೋಗ ವಿನಿಮಯ ಕೇಂದ್ರ ನಿರುದ್ಯೋಗಿಗಳಿಗೆ ಸಹಾಯ ಸಲ್ಲಿಸಬಹುದು ಎಂದು ತಿಳಿಸಲಾಗಿದೆ. ಹೀಗಾಗಿ ಈ ವಿನಿಮಯ ಕೇಂದ್ರಗಳನ್ನು ಮುಂದುವರಿಸಿಕೊಂಡು ಹೋದಲ್ಲಿ ಅದು ಮಾಲೀಕರಿಗೂ ಹಾಗೂ ಉದ್ಯೋಗಿಗಳಿಗೂ ಸಹಾಯ ಮಾಡಬಲ್ಲದು. ಅಲ್ಲದೆ ವಿವಿಧ ಉತ್ಪಾದನಾ ಶಾಖೆಗಳಿಗೆ ಮಾನವ

ಶಕ್ತಿಯನ್ನು ಸಮಾನವಾಗಿ ಹಂಚಲು ಅನುಕೂಲವಾಗುತ್ತದೆ, ಎಂದು ಅದು ತಿಳಿಸಿದೆ. ಅಲ್ಲದೆ, ವೃತ್ತಿಪರ ಕಾರ್ಮಿಕರನ್ನು ದೇಶದ ಬೇರೆ ಬೇರೆ ಪ್ರದೇಶ ಭಾಗಗಳಲ್ಲಿ ಒದಗಿಸುವಲ್ಲಿ ಸಹಕರಿಸಬಹುದಾಗಿದೆ. ಹೀಗೆ ಈ ವ್ಯವಸ್ಥೆಯಿಂದ ಆತಂಕಗಳನ್ನು ಪರಿಹರಿಸಿ ವಿವಿಧ ಮಾದರಿಯ ಕಾರ್ಮಿಕರನ್ನು ಒದಗಿಸಲು ಅನುಕೂಲವಾಗುತ್ತದೆ.

ಸಮ್ಮೇಳನವು, ಮುಷ್ಕರ ಹಾಗೂ ಕಾರ್ಖಾನೆಯನ್ನು ಮುಚ್ಚಿದಾಗ, ಉದ್ಭವಿಸುವ ನಿರುದ್ಯೋಗ ಸಮಯದಲ್ಲಿ ಕಾರ್ಮಿಕರಿಗೆ ನೀಡಬಹುದಾದ ಪರಿಹಾರ ಧನದ ಬಗೆಗೆ ಉದ್ಯೋಗ ವಿನಿಮಯ ಕೇಂದ್ರಗಳ ಪ್ರತಿಕ್ರಿಯೆ ಕುರಿತು ಚರ್ಚೆ ಮಾಡಿತು. ಸ್ವಯಂ ನಿರುದ್ಯೋಗದ ವಿಷಯವನ್ನು ನಾಳೆಗೆ ಚರ್ಚಿಸಬಹುದೆಂದು ಮುಂದೂಡಲಾಯಿತು. ಆದರೆ ಎರಡನೇ ಸಂಗತಿಯಾದ ಪರಿಹಾರ ಧನದ ಬಗೆಗೆ ಭಿನ್ನಾಭಿಪ್ರಾಯಗಳಿಂದಾಗಿ ಚರ್ಚೆ ಮುಂದುವರಿಯಲಿಲ್ಲ.

**ಕನಿಷ್ಠ ವೇತನ**

ತನ್ನ ಏಳನೇ ಅಧಿವೇಶನ ಮುಕ್ತಾಯಗೊಳಿಸಲು ಸಮ್ಮೇಳನವು ನವೆಂಬರ್ ೨೮ರಂದು ಸಭೆ ಸೇರಿದಾಗ ಡಾ॥ ಬಿ.ಆರ್. ಅಂಬೇಡ್ಕರರು, ೧೯೨೬ರ ಭಾರತೀಯ ಮಜದೂರ ಸಂಘಗಳ ಮಸೂದೆಗೆ ತಿದ್ದುಪಡಿ ತರುವ ಹಾಗೂ ಕನಿಷ್ಠ ವೇತನವನ್ನು ಸೂಚಿಸಲು ಒಂದು ಉಪಸಮಿತಿಯನ್ನು ರಚಿಸಲಾಗುವುದು ಎಂದು ಘೋಷಿಸಿದರು. ಈ ಸಮಿತಿಯಲ್ಲಿ ಇಬ್ಬರು ಕಾರ್ಮಿಕ ಸದಸ್ಯರು ಹಾಗೂ ಮಾಲೀಕರ ಇಬ್ಬರು ಪ್ರತಿನಿಧಿಗಳಿರುತ್ತಾರೆ ಎಂದೂ ಹೇಳಿದರು. ಈ ಎರಡೂ ಅಂಶಗಳ ಬಗೆಗೆ ಒಪ್ಪಿಗೆ ನೀಡಿದರೂ, ವಿವಿಧ ಅಭಿಪ್ರಾಯಗಳು ಈ ಸಮಯದಲ್ಲಿ ಮೂಡಿಬಂದವು. ಹೀಗಾಗಿ ಈ ಉಪಸಮಿತಿ ಈ ಎಲ್ಲಾ ಪ್ರಮುಖ ಅಂಶಗಳನ್ನು ಗಮನದಲ್ಲಿರಿಸಿಕೊಂಡು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕೆಂದೂ ಕೇಳಲಾಯಿತು.

ಮುಷ್ಕರ ಹಾಗೂ ಕಾರ್ಖಾನೆಗಳು ಬೀಗಮುದ್ರೆಹಾಕಿದಾಗ ತೆಗೆದುಕೊಳ್ಳಬೇಕಾದ ಕ್ರಮಗಳ ಬಗೆಗೆ ರಚಿಸಿರುವ ಸ್ಥಾಯೀ ಆಜ್ಞೆಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಮುಷ್ಕರ ಹಾಗೂ ಬೀಗಹಾಕಿದ ಅವಧಿಯಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ತಮ್ಮಲ್ಲಿರಬಹುದಾದ ಸೂಕ್ತ ಅರ್ಜಿದಾರರಿಗೆ ಖಾಲಿಯಾದ ಹುದ್ದೆಗಳ ಬಗೆಗೆ ಮಾಹಿತಿ ನೀಡುವ ಮುನ್ನ, ಕಾರ್ಮಿಕರ ಹೋರಾಟದ ವಿಷಯವನ್ನು ತಿಳಿಸಬೇಕೆಂಬ ಅಭಿಪ್ರಾಯವನ್ನು ನೀಡಿತು. ಕಾರ್ಮಿಕರನ್ನು ನೋಂದಾಯಿಸಿಕೊಂಡು ಬೇರೆ ಉದ್ಯೋಗಗಳಿಗೆ ಅವರನ್ನು ಪರಿಶೀಲಿಸಬಹುದು ಹಾಗೂ ಭಾವೀ ಮಾಲೀಕರಿಗೆ ಕಾರ್ಮಿಕರ ಹೋರಾಟದಿಂದಾಗಿ ಈ ಉದ್ಯೋಗಿಗಳು ನಿರುದ್ಯೋಗಿಗಳಾಗಿದ್ದಾರೆ ಎಂಬ ಸಂಗತಿಯನ್ನು ಮರೆಮಾಚದೆ ತಿಳಿಸಬೇಕು.

# ೫೩
# ಒರಿಸ್ಸಾದ ನದಿಗಳ ವಿವಿಧೋದ್ದೇಶ ಅಭಿವೃದ್ಧಿ ಯೋಜನೆ

## ಕಟಕ್‌ದಲ್ಲಿ ಡಾ॥ ಬಿ.ಆರ್. ಅಂಬೇಡ್ಕರರ ಭಾಷಣ

"ಪ್ರವಾಹದಿಂದ ಉಂಟಾಗುವ ಸಂಕಷ್ಟಗಳನ್ನು ದೂರಗೊಳಿಸಲು ಒರಿಸ್ಸಾ ಬಯಸಿದೆ. ಅಮೆರಿಕನ್ನರ ಭಾಷೆಯಲ್ಲಿ ಹೇಳಬೇಕೆಂದರೆ, ಒರಿಸ್ಸಾ ಕಡಿಮೆ ಆದಾಯದ ವರ್ಗದಲ್ಲಿ ಮಲೇರಿಯಾ ಕಾಯಿಲೆಗಳಿಂದ ಉಂಟಾದ ಅನಾರೋಗ್ಯದ ಅಶಕ್ತ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ಹಾರೈಸುತ್ತದೆ. ಓರಿಸ್ಸಾ ತನ್ನ ಜನತೆಯ ಜೀವನಮಟ್ಟವನ್ನು ನೀರಾವರಿ, ನೌಕಾಯಾನ, ಹಾಗೂ ಕಡಿಮೆ ದರದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಮೂಲಕ ಅಭಿವೃದ್ಧಿಗೊಳಿಸಬೇಕೆಂದಿದೆ. ಈ ಎಲ್ಲಾ ಸಮಸ್ಯೆಗಳಿಗೆ ಒಂದೇ ಒಂದು ಉತ್ತರ ಎಂದರೆ, ನದಿಗಳಲ್ಲಿ ಹರಿಯುತ್ತಿರುವ ನೀರನ್ನು ಒಡ್ಡುಗಳು ಅಥವಾ ಅಣೆಕಟ್ಟುಗಳನ್ನು ನಿರ್ಮಿಸಿ ಶೇಖರಿಸುವ ಮೂಲಕ ಸಾಧಿಸಬಹುದು."

ಕಟಕದಲ್ಲಿ ದಿನಾಂಕ ೮ ನವೆಂಬರ್‌ನಂದು ಕರೆಯಲಾದ, ಕೇಂದ್ರ, ಒರಿಸ್ಸಾ, ಮಧ್ಯಪ್ರಾಂತ್ಯ ಹಾಗೂ ಪೂರ್ವರಾಜ್ಯಗಳ ಪ್ರತಿನಿಧಿಗಳ ಸಭೆಯನ್ನು ಉದ್ಘಾಟಿಸುತ್ತಾ ಮೇಲಿನಂತೆ ಡಾ॥ ಅಂಬೇಡ್ಕರರು ಹೇಳಿದರು. ಈ ಸಭೆಯನ್ನು ಒರಿಸ್ಸಾ ನದಿಗಳ ಅಭಿವೃದ್ಧಿಗೆಂದೇ ಕರೆಯಲಾಗಿತ್ತು.

### ಒರಿಸ್ಸಾದ ಸಮಸ್ಯೆಗಳು

ಒರಿಸ್ಸಾದ ಸಮಸ್ಯೆಗಳನ್ನು ಕುರಿತು ಕಾರ್ಮಿಕ ಸದಸ್ಯರು ಹೀಗೆ ಹೇಳಿದರು. "ಕೇವಲ ಪ್ರವಾಹವೊಂದೇ ಇಲ್ಲಿನ ಸಮಸ್ಯೆ ಎಂದು ಹೇಳುವುದು ಸೂಕ್ತವಾಗಲಾರದು, ನಾನು ಈ ಸಮಸ್ಯೆಯನ್ನು ಬೇರೆ ದೃಷ್ಟಿಕೋನದಿಂದ ನೋಡುವೆ. ನಾನು ಒರಿಸ್ಸಾವನ್ನು ನೆನೆದುಕೊಂಡರೆ ನನ್ನ ಮುಂದೆ ಬರುವ ಚಿತ್ರ ಎಂದರೆ ವಿವಿಧ ಕಾರಣಗಳಿಂದ ಶೋಷಿತರಾದ ಒರಿಸ್ಸಾ ಜನತೆಯ ಚಿತ್ರ. ಒಂದು ವಿಧದ ಶೋಷಣೆ. ಅನೇಕರಿಗೆ ತಿಳಿದಿರುವುದೆಂದರೆ ಪ್ರವಾಹದಿಂದ ಉಂಟಾಗಬಹುದಾದ ಆಸ್ತಿಪಾಸ್ತಿ ಹಾಗೂ ಜೀವಹಾನಿ. ಈ ಕಾರಣದಿಂದಾಗಿ ಜನರ ಸುರಕ್ಷತೆಗೆ ಧಕ್ಕೆ ಉಂಟಾಗಿದೆ. ಜನರು ಕೇವಲ ಪ್ರವಾಹದಿಂದ ಮಾತ್ರವಲ್ಲದೆ, ಬರಗಾಲ ಹಾಗೂ ಕ್ಷಾಮಗಳಿಂದಲೂ ಪೀಡಿತರಾಗಿದ್ದಾರೆ. ಕ್ಷಾಮದಿಂದಾಗುವ ಹಾನಿ ಪ್ರವಾಹದ ಹಾನಿಗಿಂತ ಕಡಿಮೆಯೇನೂ ಅಲ್ಲ. ಒಂದು ವರದಿಯಂತೆ ೧೮೬೬ರಲ್ಲಿ ಸಂಭವಿಸಿದ ಬರದಿಂದಾಗಿ ಪುರಿ ಜಿಲ್ಲೆಯ ಶೇಕಡಾ ೪೦ ರಷ್ಟು ಜನ ಸಾವನ್ನು ಅಪ್ಪಬೇಕಾಯಿತು.

"ಒರಿಸ್ಸಾ ಜನತೆಯ ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ಮಲೇರಿಯಾ ಜ್ವರದಿಂದ ಉಂಟಾದ ಅನಾರೋಗ್ಯ ಹಾಗೂ ಮರಣ. ಒರಿಸ್ಸಾದ ಜನಸಂಖ್ಯೆ ೭೭$^{1}/_{3}$ ಲಕ್ಷ. ಆರೋಗ್ಯ ಇಲಾಖೆಯ ಒಂದು ವರದಿಯಂತೆ ೧೯೪೪ರಲ್ಲಿ ಸಂಭವಿಸಿದ ೨,೩೫,೨೮೧ ಮರಣಗಳಲ್ಲಿ ೧,೩೦,೦೦೦ ಮಂದಿ ಮಲೇರಿಯಾದಿಂದ ಹಾಗೂ ಉಳಿದವರು ಇತರ ಕಾಯಿಲೆಗಳಿಂದ ಮರಣ ಹೊಂದಿದ್ದಾರೆ. ಅಂದರೆ ೧೯೪೪ರಲ್ಲಿ ಮಡಿದ ಜನರ ಸಂಖ್ಯೆ ಶೇಕಡಾ ಮೂರು ಎಂದಂತಾಯಿತು. ಇವರಲ್ಲಿ ಅರ್ಧಭಾಗದ ಜನರು ಕೇವಲ ಮಲೇರಿಯಾದಿಂದ ಮರಣ ಹೊಂದಿದ್ದಾರೆ. ಇದು ಅಧಿಕವಾದ ಸಂಖ್ಯೆ. ೧೯೪೪ರ

---

*ಇಂಡಿಯನ್ ಇನ್‌ಫರ್ಮೇಷನ್, ಡಿಸೆಂಬರ್ ೧೫, ೧೯೪೫, ಪು. ೬೯೨–೯೫.

ಒಂದು ವರದಿಯಂತೆ ವಿದ್ಯಾರ್ಥಿ ಸಮುದಾಯದ ಶೇಕಡಾ ೧೯ರಷ್ಟು ಮಂದಿ ಪೌಷ್ಟಿಕ ಆಹಾರದ ಅಭಾವದಿಂದ ನರಳುತ್ತಿದ್ದರೆ ಶೇಕಡಾ ೮.೭ ರಷ್ಟು ಮಂದಿ ವಿಟಮಿನ್ ಕೊರತೆಗೆ ಈಡಾಗಿದ್ದರು ಎಂದು ತಿಳಿದುಬರುತ್ತದೆ.

"ಈ ವಿಷಯಗಳು ನಿಜವೇ ಆದಲ್ಲಿ ಒರಿಸ್ಸಾ ಬಡತನ ರೇಖೆಯ ಕೆಳಗಿದೆ ಎಂದೇ ಹೇಳಬೇಕು. ಒರಿಸ್ಸಾದ ಮೂರನೆಯ ಸಮಸ್ಯೆ ಎಂದರೆ ಒಳ ಓಡಾಟ ಸಂಪರ್ಕದ ಕೊರತೆ. ಒರಿಸ್ಸಾದ ಪೂರ್ವ ಕರಾವಳಿಯಲ್ಲಿಯ ರೈಲುಮಾರ್ಗವನ್ನು ಬಿಟ್ಟರೆ, ಒಳನಾಡಿನೊಂದಿಗೆ ಬೇರೆ ಯಾವ ಸಂಪರ್ಕ ಸಾರಿಗೆ ಸಾಧನಗಳೂ ಇಲ್ಲ. ಹೀಗಾಗಿ ಒರಿಸ್ಸಾ ಸಾರಿಗೆ ಸಾಧನಗಳಿಂದ ವಂಚಿತವಾದ ಪ್ರದೇಶವಾಗಿದೆ."

"ಒರಿಸ್ಸಾ ಹೀಗೆಯೇ ದುರವಸ್ಥೆಯಲ್ಲಿ ಮುಂದುವರಿಯಬೇಕೇ? ಖಂಡಿತವಾಗಿ ಇಲ್ಲ, ಏಕೆಂದರೆ ಅದರ ಪ್ರಾಕ್ರತಿಕ ಸಂಪತ್ತು ವಿಪುಲವಾಗಿದೆ. ಒರಿಸ್ಸಾ ಕಬ್ಬಿಣದ ಅದಿರು, ಕ್ರೋಮಿಯಂ, ಗ್ರಾಫೈಟ್‌ಗಣಿ, ಸುಣ್ಣ, ಬಾಕ್ಸೈಟ್, ಕಾಗೆಬಂಗಾರ ಮತ್ತು ಬಿದಿರಿನ ಅಪಾರ ಸಂಪನ್ಮೂಲಗಳಿಂದ ತುಂಬಿದೆ.

"ಒರಿಸ್ಸಾದ ಅಪಾರವಾದ ಮತ್ತೊಂದು ಸಂಪತ್ತು ಎಂದರೆ ನೀರು. ಒರಿಸ್ಸಾದ ನದಿಮುಖಜ ಭೂಮಿ ಕಟಕ, ಪುರಿ ಹಾಗೂ ಬಾಲಸೂರಿ ಜಿಲ್ಲೆಗಳಿಂದ ಕೂಡಿದ್ದು ವಿವಿಧ ಉಪನದಿಗಳ ಸಂಗಮ ಭೂಮಿಯಾಗಿದೆ. ೮,೦೦೦ ಚ.ಮೈಲಿನ ಈ ಪ್ರದೇಶವು ಮಹಾನದಿ, ಬ್ರಾಹ್ಮಣೀ, ಹಾಗೂ ವೈತರಣೀ ನದಿಗಳ ಹಾಗೂ ಅವುಗಳ ಉಪನದಿಗಳಿಂದ ಕೂಡಿದೆ.

"ಮತ್ತೆ ಎರಡು ನದಿಗಳು, ಹೆಚ್ಚು ಪ್ರಮುಖವಿಲ್ಲದೇ ಹೋದರೂ, ಬರಬಲಾಂಗ ಹಾಗೂ ಸುವರ್ಣಮುಖಿ ನದಿಗಳು ಡೆಲ್ಟಾ ಪ್ರದೇಶದಲ್ಲಿ ಹಾದುಹೋಗುತ್ತವೆ. ಈ ಮೇಲೆ ಹೇಳಲಾದ ಮೂರು ಮಹಾನದಿಗಳಿಂದ ೬೯,೦೦೦ ಚ.ಮೈಲಿಗೆ ನೀರು ಉಣಿಸಲಾಗಿದೆ. ಈ ಪ್ರದೇಶವು ಪೂರ್ವ ರಾಜ್ಯಗಳು, ಮಧ್ಯಪ್ರಾಂತ ಹಾಗೂ ಬಿಹಾರಿಕ್ಕೂ ಸೇರಿವೆ. ಈ ಮೂರರಲ್ಲಿ ಮಹಾನದಿಯೊಂದೇ ೫೧,೦೦೦ ಚ.ಮೈ.ಗೆ ನೀರನ್ನು ನೀಡುತ್ತದೆ. ಈ ನದಿಗಳು ಪ್ರತಿ ವರ್ಷ ೯೦ ಮಿಲಿಯನ್ ಎಕರೆ ಚದುರಡಿ ನೀರನ್ನು ಸಮುದ್ರಕ್ಕೆ ಬಿಡುಗಡೆ ಮಾಡುತ್ತವೆ."

**ಜಲಸಂಪತ್ತಿನ ಉಪಯೋಗ**

ಕಾರ್ಮಿಕ ಸದಸ್ಯರು ಮುಂದುವರಿದು ಹೇಳಿದ್ದೇನೆಂದರೆ "ಈ ವಿಧವಾದ ವಿಪುಲ ಸಂಪನ್ಮೂಲಗಳನ್ನು ಪಡೆದಿರುವ ಒರಿಸ್ಸಾದ ಹಿಂದುಳಿಯುವಿಕೆಗೆ ಕಾರಣವೇನು? ನಾನು ನೀಡಬಹುದಾದ ಒಂದೇ ಉತ್ತರ ಎಂದರೆ ಒರಿಸ್ಸಾ ತನ್ನ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ ಎನ್ನುವುದು. ಬಹುಶಃ ಬಹುತೇಕ ಸಮಯವನ್ನು ಕೇವಲ ಪ್ರವಾಹ ನಿಯಂತ್ರಣಕ್ಕೆ ಹಾಳುಮಾಡಲಾಗಿದೆ. ಸುಮಾರು ೧೮೭೨ರ ಹೊತ್ತಿಗೆ ಶ್ರೀ ರೆಹನಾನಂದ ಅವರು ವರದಿ ಮಾಡಿದ್ದರು, ಆದರೆ ಅವರ ವರದಿ ಏನಾಯಿತೋ ತಿಳಿಯದು. ಅಲ್ಲಿಂದ ೧೯೨೮ರ ವರೆಗೂ ಯಾವ ಪ್ರಯತ್ನವೂ ನಡೆದೇ ಇಲ್ಲ. ಅಲ್ಲಿಂದೀಚೆಗೆ ಅಂದರೆ ೧೯೪೫ರ ವರೆಗಿನ ಅವಧಿಯಲ್ಲಿ ಅನೇಕ ಸಮಿತಿಗಳನ್ನು ಈ ಸಮಸ್ಯೆಗೆ ಪರಿಹಾರ ಸೂಚಿಸಲು ನೇಮಿಸಲಾಯಿತು.

"೧೯೨೮ರ ಒರಿಸ್ಸಾ ಪ್ರವಾಹ ವಿಚಾರಣಾ ಸಮಿತಿಯ ಅಧ್ಯಕ್ಷತೆಯನ್ನು ಹೆಸರಾಂತ ಮುಖ್ಯ ಇಂಜಿನಿಯರ್‌ರಾದ ಶ್ರೀ ಆಡಂ ವಿಲಿಯಮ್ಸ್ ಅವರು ವಹಿಸಿದ್ದರು, ೧೯೩೭ರಲ್ಲಿ ವಿಚಾರಣೆಯನ್ನು ಶ್ರೀ ಎಂ. ವಿಶ್ವೇಶ್ವರಯ್ಯ ಅವರಿಗೆ ವಹಿಸಲಾಯಿತು. ಅವರು ಎರಡು ವರದಿಗಳನ್ನು ನೀಡಿದ್ದರು. ಒಂದನ್ನು ೧೯೩೭ರಲ್ಲಿ, ಮತ್ತೊಂದನ್ನು ೧೯೩೯ರಲ್ಲಿ ಸಲ್ಲಿಸಿದರು. ಅವರ ಕಾರ್ಯವನ್ನು ಒರಿಸ್ಸಾ ಪ್ರವಾಹ ಸಲಹಾ

ಸಮಿತಿಯ ಮುಖಾಂತರ ಮುಂದುವರಿಸಲಾಯಿತು. ೧೯೩೮ರಲ್ಲಿ ಈ ಸಮಿತಿ ತನ್ನ ಪ್ರಥಮ ವರದಿಯನ್ನು ಸಲ್ಲಿಸಿತು ಮತ್ತು ೧೯೪೨ರ ವರೆಗೂ ತನ್ನ ಕಾರ್ಯ ಮುಂದುವರಿಸಿತು. ಈ ಅವಧಿಯಲ್ಲಿ ಅದು ಮೂರು ಮಧ್ಯಂತರ ವರದಿಗಳನ್ನು ಸಲ್ಲಿಸಿತು. ಒರಿಸ್ಸಾ ಸರಕಾರದಿಂದ ಮಾರ್ಚ್ ೧೫, ೧೯೪೫ರಂದು ಕರೆಯಲಾದ ಪ್ರವಾಹ ಸಮ್ಮೇಳನವೇ ಈ ದಿಶೆಯಲ್ಲಿ ಕೈಕೊಂಡ ಈಚಿನ ಕಾರ್ಯಕ್ರಮವಾಗಿದೆ.

"ಎಲ್ಲಾ ಸದಸ್ಯರಿಗೂ ಗೌರವ ಸೂಚಿಸುತ್ತಾ ವಿಷಾದದಿಂದ ಹೇಳಲೇಬಾಕಾದ ಸಂಗತಿ ಎಂದರೆ ಈ ಸಮಸ್ಯೆಗೆ ಸರಿಯಾದ ಪರಿಹಾರ ಇಲ್ಲಿಯವರೆಗೆ ದೊರೆತೇ ಇಲ್ಲ. ಹೆಚ್ಚಿನ ನೀರು ಒಂದು ಶಾಪವೆಂದೇ ನಂಬಿದ ಇವರು ಇದನ್ನು ಸಮುದ್ರಕ್ಕೆ ಹರಿಯಲು ಬಿಡುವುದೇ ಒಂದು ಮಾರ್ಗ ಎಂದು ಭಾವಿಸಿದರು. ಆದರೆ ಇಂದು ಇವು ಮೂರ್ಖತನ ಹಾಗೂ ಅಪಾಯಕಾರಿ ಎಂಬ ಅರಿವು ಮೂಡಿದೆ.

**ನೀರಿನ ಶೇಖರಣೆ**

"ಅಧಿಕ ನೀರು ಒಂದು ಶಾಪ ಎಂದು ಯೋಚಿಸುವುದು ತಪ್ಪು. ನೀರೆಂದೂ ಅಧಿಕವಲ್ಲ ಹಾಗೂ ಶಾಪವಂತೂ ಅಲ್ಲವೇ ಅಲ್ಲ. ಏಕೆಂದರೆ ನೀರಿನ ಅಭಾವದಿಂದ ಮನುಷ್ಯರು ನರಳುತ್ತಾರೆ. ಆದರೆ ಅಧಿಕ ನೀರಿನಿಂದ ಅಲ್ಲ. ಪ್ರಕೃತಿಯು ನೀರನ್ನು ಸಮೃದ್ಧಿಯಾಗಿ ನೀಡುತ್ತದೆ. ಆದರೆ ಅದನ್ನು ಸರಿಯಾದ ವಿಧದಲ್ಲಿ, ಅಂದರೆ ಬರ ಹಾಗೂ ಬಿರುಗಾಳಿಗಳಿಗೆ ಆಸ್ಪದ ನೀಡದಂತೆ ಉಪಯೋಗಿಸಿಕೊಳ್ಳಬೇಕು. ಈ ವಿಧಾನ ನೀರಿನ ಆಸ್ತಿಯನ್ನು–ಅಂದರೆ ನೀರು ಜನರ ಆಸ್ತಿ–ಸರಿಯಾದ ವಿಧಾನದಲ್ಲಿ ಅಂದರೆ ಶೇಖರಣೆಯ ಮುಖಾಂತರ ಉಪಯೋಗಿಸಿದರೆ ಈ ವಿಧವಾದ ದೂರುಗಳಿಗೆ ಅವಕಾಶವೇ ಇರದು.

"ಸಾರ್ವಜನಿಕ ಹಿತದೃಷ್ಟಿಯಿಂದ ಜಲಸಂರಕ್ಷಣೆ ಅನಿವಾರ್ಯವೆಂದಾದರೆ, ಒಡ್ಡುಕಟ್ಟುವ ಯೋಜನೆಯಿಂದ ಏನೂ ಪ್ರಯೋಜನವಾಗಲಾರದು. ಜಲ ಸಂರಕ್ಷಣೆಗೆ ಇದು ತಕ್ಕ ಮಾರ್ಗವಲ್ಲವಾದ್ದರಿಂದ ಇದನ್ನು ಇಲ್ಲಿಗೇ ಕೈಬಿಡಬೇಕಾದದ್ದು ಅನಿವಾರ್ಯ. ಅಷ್ಟೊಂದು ಪ್ರಮಾಣದ ನೀರನ್ನು ಹೊಂದಿರುವುದು ಮತ್ತು ತನ್ಮೂಲಕ ಅಷ್ಟೇ ಪ್ರಮಾಣದ ತೊಂದರೆಗೆ ಕಾರಣವಾಗಿರುವುದು ಕೇವಲ ಒರಿಸ್ಸಾದ ನದೀಮುಖಜ ಭೂಮಿಯಷ್ಟೇ ಅಲ್ಲ–ಅಮೆರಿಕಾ ಸಂಯುಕ್ತ ಸಂಸ್ಥಾನವೂ ಕೂಡ ಈ ಬಗೆಯ ಸಮಸ್ಯೆಯನ್ನು ಎದುರಿಸಿತ್ತು. ಮಿಸ್ಸೂರಿ, ಮಿಯಾಮಿ ಮತ್ತು ಟೆನ್ನಿಸ್ಸೀ ನದಿಗಳು ಅಮೆರಿಕೆಯಲ್ಲಿ ತಾಪತ್ರಯ ತಂದೊಡ್ಡಿರುವುದು ನಿಜ.

"ಅಮೆರಿಕವು ತನ್ನ ನದೀ ನೀರಿನಿಂದೊದಗಿದ ಸಮಸ್ಯೆಯನ್ನು ಪರಿಹರಿಸಿಕೊಂಡ ರೀತಿಯಲ್ಲಿಯೇ ಒರಿಸ್ಸವೂ ಕೂಡ ಆ ಉಪಾಯಗಳನ್ನು ಅಳವಡಿಸಿಕೊಳ್ಳಬೇಕು. ಆ ವಿಧಾನವೇನೆಂದರೆ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟೆ ಕಟ್ಟಿ ಜಲಾಶಯಗಳಲ್ಲಿ ನೀರು ಶೇಖರವಾಗುವಂತೆ ಮಾಡುವುದು. ನೀರಾವರಿ ಜೊತೆಗೆ ಈ ಜಲಾಶಯಗಳಿಂದ ಇನ್ನಿತರೆ ಉಪಯೋಗಗಳೂ ಇವೆ. ಮಹಾನದಿ ಒಂದರಿಂದಲೇ ಹರಿದುಹೋಗುವ ನೀರನ್ನು ತಡೆದು ಶೇಖರಿಸುವುದಕ್ಕಾದರೆ ಸುಮಾರು ಒಂದು ದಶಲಕ್ಷ ಎಕರೆ ಜಮೀನಿಗೆ – ಆ ಪ್ರಮಾಣದ ಜಮೀನು ಲಭ್ಯವಾಗುವುದಾದರೆ – ನೀರಾವರಿ ಒದಗಿಸಲು ಸಾಧ್ಯವೆಂದು ನಾನು ಕೇಳಿ ತಿಳಿದಿದ್ದೇನೆ. ಜಲವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲೂ ಸಹ ಜಲಾಶಯಗಳಲ್ಲಿ ಶೇಖರವಾದ ನೀರನ್ನು ಉಪಯೋಗಿಸಿಕೊಳ್ಳಬಹುದು.

"ನಿಸರ್ಗ ಸಂಪನ್ಮೂಲಗಳು ಸಮೃದ್ಧಿಯಾಗಿದ್ದೂ ಸಹ ಒರಿಸ್ಸಾ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವಾಗಿದೆ ಎಂದ ಮೇಲೆ ಕಾರ್ಖಾನೆಗಳಲ್ಲಿ ಬಳಸಲು ಅಗ್ಗದಲ್ಲಿ ವಿದ್ಯುತ್ತು ದೊರಕದುದೇ ಕಾರಣವಾಗಿದೆ. ತಲೆತಲಾಂತರದವರೆಗೆ ಅಗತ್ಯವಾದಷ್ಟು ವಿದ್ಯುತ್ತನ್ನು ಒರಿಸ್ಸಾದಲ್ಲಿ ಉತ್ಪತ್ತಿ ಮಾಡಬಹುದಾಗಿದೆ. ಜಲಸಂಚಾರಕ್ಕೂ ಈ ನೀರನ್ನು ಬಳಸಬಹುದಾಗಿದೆ.

"ಭಾರತದಲ್ಲಿ ಜಲಸಂಚಾರದ ಕಥೆ ಬಹಳ ಸುತ್ತುಬಳಸಿನ ದಾರಿಯದಾಗಿದೆ. ಈಸ್ಟ್ ಇಂಡಿಯಾ ಕಂಪನಿಯವರ ಕಾಲದಲ್ಲಿ ಒಳನಾಡಿನ ಜಲಸಂಚಾರಕ್ಕಾಗಿ ಕಂಪನಿ ಸರ್ಕಾರ ತನ್ನ ಆಯವ್ಯಯದಲ್ಲಿ ಸಾಕಷ್ಟು ಪ್ರಮಾಣ ಹಣವನ್ನು ತೆಗೆದಿರಿಸುತ್ತಿತ್ತು. ಇಂದು ಭಾರತದಲ್ಲಿರುವ ಅನೇಕ ಜಲಸಂಚಾರದ ಕಾಲುವೆಗಳೂ – ಒರಿಸ್ಸಾದಲ್ಲಿ ಒಂದು ಮಾರ್ಗ ಇದೆ – ಕಂಪನಿ ಸರ್ಕರದ ಕಾನೂನಿನ ಫಲವಾಗಿ ನಿರ್ಮಾಣವಾದವು. ರೈಲು ಮಾರ್ಗದ ನಿರ್ಮಾಣ ತರುವಾಯದಲ್ಲಾಯಿತಾದರೂ ಜಲಸಂಚಾರ ಮತ್ತು ರೈಲುಮಾರ್ಗ ಒಟ್ಟಿಗೇ ಆಗಬೇಕೆಂದು ತೀರ್ಮಾನವಾಗಿದ್ದಿತು. ೧೮೭೫ರಷ್ಟೊತ್ತಿಗೆ ತಲೆಯೆತ್ತಿದ ರೈಲ್ವೆಮಾರ್ಗ ವಿವಾದ ಕಾಲುವೆಗಳ ನಿರ್ಮಾಣದ ಮಧ್ಯೆ ಬಹಳ ಕಲಹಕ್ಕೆ ಕಾರಣವಾಗಿದ್ದಿತು. ಸರ್ ಅರ್ಥರ್ ಕಾಟನ್ – ಭಾರಿ ಪ್ರಮಾಣದ ಯೋಜನೆಗಳನ್ನು ತಯಾರಿಸಿದ್ದ ಕೆಲವೇ ಇಂಜಿನಿಯರ್‌ಗಳಲ್ಲಿ ಒಬ್ಬರು. ಈತ – ಕಾಲುವೆಗಳ ಪರವಾಗಿ ಹೋರಾಟ ನಡೆಸಿದರು. ದುರದೃಷ್ಟವಶಾತ್ ರೈಲ್ವೆಯ ಬೆಂಬಲಿಗರು ವಿಜಯಿಗಳಾದರು.

"ರೈಲ್ವೆಯವರು ಜಲಸಂಚಾರದ ಕಾಲುವೆಗಳ ಮೇಲೆ ಸಾಧಿಸಿದಂತಹ ಈ ಜಯ ನನಗೆ ಸಂತೋಷ ತರಲಿಲ್ಲ. ಕಾಲುವೆಗಳು ಹಣ ತಂದುಕೊಡುವುದಿಲ್ಲ, ಹಾಗಾಗಿ ಅವುಗಳ ಗೊಡವೆಗೆ ಹೋಗದೆ ರೈಲ್ವೆಯನ್ನು ಅಭಿವೃದ್ಧಿಪಡಿಸಬೇಕೆಂದು ಮುನ್ನುಗ್ಗುತ್ತಿದ್ದ ಮಂದಿಗೆ ನಿಜವಾಗಿ ಪರಿಸ್ಥಿತಿಯ ಅರಿವಿರಲಿಲ್ಲ; ಕಾಲುವೆಗಳಿಂದ ಧನಪ್ರಾಪ್ತಿಯಾಗದೆಂದು ಅವರು ಭಾವಿಸಿದ್ದರಾದರೂ ಅದು ತಪ್ಪೆಂದು ಅವರು ತಿಳಿಯುವ ಅವಕಾಶವಿರಲಿಲ್ಲ; ಕಾಲುವೆಗಳು ಅಪೂರ್ಣವಾಗಿ ಉಳಿದದ್ದರಿಂದ ಅವುಗಳಿಂದ ಹಣ ಬರುವುದಿಲ್ಲವೆಂದು ಅವರಿಗೆ ಅರಿವಾಗುವಂತಿರಲಿಲ್ಲ. ಲಾಗಾಯ್ತಿನಿಂದ ನಾವು ಒಳನಾಡು ಜಲಸಂಚಾರವನ್ನು ಕಡೆಗಣಿಸಿಕೊಂಡು ಬಂದಿರುವ ರೀತಿಯನ್ನು ಇನ್ನು ಮುಂದೆಯೂ ಮಾಡಬಾರದು. ಜರ್ಮನಿ ಮತ್ತು ರಷ್ಯ ದೇಶಗಳವರ ಅನುಭವವನ್ನು ನಮ್ಮದಾಗಿಸಿಕೊಂಡು ಹಳೆಯ ಕಾಲುವೆಗಳನ್ನು ಪುನಾರಚಿಸುವುದರ ಜೊತೆಗೆ ಹೊಸ ಕಾಲುವೆಗಳನ್ನು ನಿರ್ಮಾಣ ಮಾಡಬೇಕಲ್ಲದೆ ರೈಲ್ವೆಯ ದಾಪುಗಾಲಿಗೆ ಅವುಗಳನ್ನು ಬಲಿಗೊಡಬಾರದು."

**ವಿಶೇಷ ಲಕ್ಷಣ**

ಒರಿಸ್ಸಾದ ನದಿಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಸದಸ್ಯರು ಒತ್ತಿ ಹೇಳಿದ ಅಂಶವೆಂದರೆ ಆ ರಾಜ್ಯದಲ್ಲಿ ಜಲಶೇಖರಣಾ ವಿಧಾನದಿಂದ ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಯಾಗುವುದರ ಜೊತೆಗೆ ಒಳನಾಡು ಜಲಮಾರ್ಗಕ್ಕೆ ದೀರ್ಘವಾದ ಸಂಚಾರಪಥ ದೊರೆಯುವುದೆಂದು. "(೧) ಬೆಟ್ಟಗಳಿಂದ ಬಯಲು ಸೇರುವ ಜಾಗ (ನಾರಜನಿಂದ ಏಳು ಮೈಲು ಎತ್ತರದಲ್ಲಿ), (೨) ಟಿಕ್ಕರ್‌ಪಾರ್ ಮತ್ತು (೩) ಸಂಬಾಳ್‌ಪುರದ ಮೇಲೆ ಮೂರು ಸ್ಥಳಗಳಲ್ಲಿ ಅಣೆಕಟ್ಟೆ ಕಟ್ಟುವುದರಿಂದ ಚಾಂದ್‌ಬಾಲಿ ಮತ್ತು ಸಂಬಾಳ್‌ಪುರವನ್ನು ಕೂಡಿಸುವಂಥ ಒಳನಾಡು ಜಲಸಂಚಾರವನ್ನು ಸಾಕಾರಗೊಳಿಸಬಹುದು ಎಂದು ಕೇಳಿ ತಿಳಿದಿದ್ದೇನೆ. ಈ ಯೋಜನೆ ಸಫಲವಾದಲ್ಲಿ ಸುಮಾರು ೩೫೦ ಮೈಲು ಉದ್ದದ ಒಳನಾಡು ಜಲಮಾರ್ಗ ದಕ್ಕುವುದಲ್ಲದೆ ವರ್ಷಪೂರ್ತಿ ಸುಗಮವಾದ ಮಾರ್ಗವಾಗಿ ಇದು ಪರಿಣಮಿಸುವುದರಿಂದ ಜನಸಂಚಾರಕ್ಕೆ ಮತ್ತು ಪದಾರ್ಥಗಳ ಸಾಗಣೆಗೆ ಸುಲಭವಾಗುವುದು. ತೀರಪ್ರದೇಶಗಳಲ್ಲಿನ ಕುಶಲವಸ್ತುಗಳು ಹಾಗೂ ಹಗುರವಾದ ದೋಣಿಗಳು ಕಟಕ್‌ನಿಂದ ಸಂಬಾಳ್‌ಪುರಕ್ಕೆ ಸಮುದ್ರದ ಮಾರ್ಗವಾಗಿ ಕಾಲುವೆಗಳಲ್ಲಿ ಹೋಗುವುದರಿಂದ ಆಗುವ ಅನುಕೂಲಗಳನ್ನು ಕಲ್ಪಿಸಿಕೊಳ್ಳಿ. ಕೆಡುಕಿನ ಬಲಗಳನ್ನು ಒಳ್ಳೆಯ ಶಕ್ತಿಯನ್ನಾಗಿ ಪರಿವರ್ತಿಸುವಂಥ ಯೋಜನೆಯಿದು.

"ಪ್ರವಾಹಗಳ ಹಾವಳಿಯನ್ನು ತಪ್ಪಿಸಲು ಒರಿಸ್ಸಾ ಪ್ರಯತ್ನಿಸುತ್ತದೆ. ಮಲೇರಿಯಾದಿಂದ

ಮುಕ್ತಿಹೊಂದಲೂ ಕೂಡ ಒರಿಸ್ಸಾ ಬಯಸುತ್ತದೆ. ಇದಲ್ಲದೆ ಅಮೆರಿಕನ್ನರು ಕರೆಯುವಂತೆ 'ಅಲ್ಪಾದಾಯ'ದಿಂದ ಸಂಭವಿಸುವ ರೋಗಗಳಿಂದ ತನ್ನ ಜನರು ಕೃಶವಾಗಿ ಬಳಲುವುದನ್ನು ತಪ್ಪಿಸಲೂ ಒರಿಸ್ಸಾ ಹೆಣಗುತ್ತಿದೆ. ತನ್ನ ಜನರ ಜೀವನಮಟ್ಟವನ್ನು ಉತ್ತಮಪಡಿಸಿ, ನೀರಾವರಿ, ಒಳನಾಡು ಜಲಸಂಚಾರ ಮತ್ತು ಅಗ್ಗದ ಬೆಲೆಯಲ್ಲಿ ವಿದ್ಯುತ್ ತಯಾರಿಸಲು ಒರಿಸ್ಸಾ ಲೆಕ್ಕ ಹಾಕುತ್ತಿದೆ. ಸುದೈವದಿಂದ ಈ ಎಲ್ಲ ಯೋಜನೆಗಳನ್ನೂ ಒಂದೇ ಒಂದು ಮಾರ್ಗದಿಂದ ಸಫಲಗೊಳಿಸಬಹುದು; ಅದೆಂದರೆ, ಆ ರಾಜ್ಯದ ನದಿಗಳಲ್ಲಿ ಹರಿಯುತ್ತಿರುವ ನೀರನ್ನು ಅಲ್ಲಲ್ಲಿ ಅಣೆಕಟ್ಟೆ ಕಟ್ಟಿ ನಿಲ್ಲಿಸುವುದರ ಮೂಲಕ.

**ವಿವಿಧೋದ್ದೇಶ ಜಲಾಶಯಗಳು**

"ಒರಿಸ್ಸಾ ಪ್ರವಾಹ ಸಂರಕ್ಷಣಾ ಸಮಿತಿ ೧೯೪೫ರಲ್ಲಿ ಸಭೆ ಸೇರಿ ಕೈಗೊಂಡ ತೀರ್ಮಾನದಿಂದ ನನಗೆ ತುಂಬಾ ಸಂತಸವಾಗಿದೆ. ಅದರ ಪ್ರಕಾರ ಒರಿಸ್ಸಾದ ಸಮಸ್ಯೆಗೆ ಪರಿಹಾರವೆಂದರೆ ಆ ನದಿಗಳಿಗೆ ವಿವಿಧೋದ್ದೇಶ ಜಲಾಶಯಗಳನ್ನು ನಿರ್ಮಾಣ ಮಾಡುವುದು. ಈ ವಿಷಯದಲ್ಲಿ ನನ್ನ ಅಭಿಪ್ರಾಯವೆಂದರೆ ಈ ಯೋಜನೆಯನ್ನು ಈ ಕೂಡಲೇ ಕೈಗೆತ್ತಿಕೊಳ್ಳುವುದು ಅತಿ ಮುಖ್ಯ. ಪ್ರತಿಯೊಬ್ಬರಿಗೂ ಈ ಯೋಜನೆಯ ಲಾಭದ ಅರಿವು ಸದ್ಯಕ್ಕೆ ಆಗದಿರಬಹುದು. ಆದರೆ ಈ ಯೋಜನೆ ನಿಜಕ್ಕೂ ಉತ್ತಮವಾದದ್ದು. ಈ ಯೋಜನೆಯ ಮಹತ್ವದ ಕೆಲವು ಮುಖಗಳನ್ನಾದರೂ ಒರಿಸ್ಸಾ ಸರ್ಕಾರಕ್ಕೆ, ಒರಿಸ್ಸಾ ಸರ್ಕಾರದ ಪ್ರತಿನಿಧಿಗಳಿಗೆ ಹಾಗೂ ಒರಿಸ್ಸಾದ ಪ್ರಜೆಗಳಿಗೆ ಪರಿಚಯ ಮಾಡಿಕೊಡುವುದು ಅಗತ್ಯ; ಅದರಿಂದ ಈ ಯೋಜನೆಯ ಬಗ್ಗೆ ಅವರು ಹೆಚ್ಚು ಆಸಕ್ತಿ ತೋರಿಸುವಂತಾಗಬೇಕು.

"ತೌಲನಿಕವಾದ ಪಟ್ಟಿಯೊಂದು ಇದರ ಮಹತ್ವವನ್ನು ತಿಳಿಸಲು ಸಹಾಯಕವಾಗಬಹುದು. ಅಮೆರಿಕದ ಬೌಲ್ಡರ್ ಡ್ಯಾಮ್‌ನ ಹತ್ತಿರ ನಿರ್ಮಾಣವಾದ ಒಂದು ಸರೋವರದ ಬಗ್ಗೆ ಜನ ಹೇಳುತ್ತಾರೆ. ಜಗತ್ತಿನಲ್ಲೇ ಇದು ಅತ್ಯಂತ ವಿಶಾಲವಾದ ಮಾನವನಿರ್ಮಿತ ಸರೋವರ. ಮದರಾಸಿನ ಮೆಟ್ಟೂರು ಅಣೆಕಟ್ಟು ಮತ್ತು ಹೈದರಾಬಾದಿನ ತುಂಗಭದ್ರ ಅಣೆಕಟ್ಟಿನ ಬಗ್ಗೆ ನಾವು ಇತ್ತಿತ್ತಲಾಗಿ ಹೆಚ್ಚು ಕೇಳುತ್ತಿದ್ದೇವೆ. ಈ ಯೋಜನೆಗಳು ಒರಿಸ್ಸಾ ಯೋಜನೆಗೆ ಹೋಲಿಕೆಯಾಗಬಲ್ಲವು. ಮೆಟ್ಟೂರು ಅಣೆಕಟ್ಟಿಗೆ ಹೋಲಿಸಿದರೆ ಒರಿಸ್ಸಾದ ನದಿಗಳಲ್ಲಿ ಒಂದು ವರ್ಷದಲ್ಲಿ ಹರಿದುಹೋಗುವ ನೀರಿನ ಪ್ರಮಾಣವು ಈಗಾಗಲೇ ಪ್ರಸ್ತಾಪಿಸಿದ ಸರೋವರವನ್ನು ಮೂರು ಬಾರಿ ತುಂಬಬಹುದಾಗಿದೆ. ಹೈದರಾಬಾದಿನಲ್ಲಿ ಯೋಜಿಸಿರುವ ತುಂಗಭದ್ರ ಅಣೆಕಟ್ಟು ಮತ್ತು ಮದರಾಸು ಪ್ರಾಂತ್ಯದ ಮೆಟ್ಟೂರು ಅಣೆಕಟ್ಟುಗಳಿಗೆ ಹೋಲಿಸಿದರೆ ಮಹಾನದಿ ಒಂದರಲ್ಲೇ ೬೫ ದಶಲಕ್ಷ ಎಕರೆ–ಅಡಿ ನೀರು ಹರಿದುಹೋಗುತ್ತದೆ; ಅಂದರೆ ಮೆಟ್ಟೂರು ಅಣೆಕಟ್ಟಿನಲ್ಲಿ ನಿಲ್ಲುವ ನೀರಿನ ಪ್ರಮಾಣಕ್ಕಿಂತ ಇದು ೩೦ ಪಟ್ಟು ಮತ್ತು ತುಂಗಭದ್ರ ಅಣೆಕಟ್ಟಿನಲ್ಲಿ ನಿಲ್ಲುವ ನೀರಿಗಿಂತ ೨೦ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೆ. ಈ ನೀರಿನ ಎಷ್ಟು ಪ್ರಮಾಣವನ್ನು ನಾವು ಪರಿಣಾಮಕಾರಿಯಾಗಿ ಮತ್ತು ಫಲಪ್ರದವಾಗಿ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಪರಿಶೀಲಿಸಬೇಕಾಗಿದೆ. ಆದ್ದರಿಂದ ಒರಿಸ್ಸಾ ಸರ್ಕಾರ, ಮತ್ತು ಒರಿಸ್ಸಾದ ಜನತೆ ತಾವು ಅದೃಷ್ಟಶಾಲಿಗಳು ಎಂಬುದನ್ನು ಅರಿಯ ಬೇಕಾಗಿದೆಯಲ್ಲದೆ, ಈ ಯೋಜನೆಯನ್ನು ಫಲಪ್ರದಗೊಳಿಸಲು ದೃಢ ನಿಶ್ಚಯದಿಂದ ಸರ್ವಪ್ರಯತ್ನವನ್ನು ಮಾಡಬೇಕಾಗಿದೆ."

ಗೌರವಾನ್ವಿತ ಡಾ॥ ಅಂಬೇಡ್ಕರ್ ಮುಂದುವರಿಸಿದರು: "ಸಭೆಗೆ ಸಿದ್ಧವಾಗಿರುವಂಥ ಕಾರ್ಯಸೂಚಿ ಬಹಳ ಚಿಕ್ಕದಾಗಿದೆ ಎನ್ನಬೇಕು. ಅದರಂತೆ (೧) ಏಕೀಕೃತವಾದ ಮತ್ತು ವಿವಿಧೋದ್ದೇಶದ ಅಭಿವೃದ್ಧಿಗಾಗಿ ಒರಿಸ್ಸಾದ ನದಿಗಳನ್ನು ಕುರಿತಾದ ಯೋಜನೆಗಳನ್ನು ಸಿದ್ಧಗೊಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವುದು;

(ಅ) ಪ್ರವಾಹ ನಿಯಂತ್ರಣ, (ಆ) ಜಲಸಂಚಾರ, (ಇ) ನೀರಾವರಿ ಮತ್ತು ಒಳಚರಂಡಿ, (ಈ) ಮಣ್ಣು ಸಂರಕ್ಷಣೆ, ಮತ್ತು (ಉ) ವಿದ್ಯುತ್ ಅಭಿವೃದ್ಧಿ; (೨) ಮಹಾನದಿಯ ನಿಯಂತ್ರಣ ಮತ್ತು ಅಭಿವೃದ್ಧಿಯನ್ನು ಗುರಿಯಾಗಿ ಇಟ್ಟುಕೊಂಡು ಸರ್ವೇಕ್ಷಣೆ ಮತ್ತು ತಪಾಸಣೆಯ ಆವಶ್ಯಕತೆಯನ್ನು ಪರಿಗಣಿಸುವುದು; (೩) ಕೇಂದ್ರ ಜಲಸಂಚಾರ, ನೀರಾವರಿ ಮತ್ತು ಜಲಸಂಚಾರ ಆಯೋಗದ ಮಾರ್ಗದರ್ಶನದಲ್ಲಿ ಪ್ರಾಂತೀಯ ಸರ್ಕಾರಗಳು ಕೈಕೊಂಡಿರುವ ಸರ್ವೇಕ್ಷಣೆ ಮತ್ತು ತಪಾಸಣೆಯ ಅಗತ್ಯತೆಯನ್ನು ಕುರಿತು ಪರಿಶೀಲಿಸುವುದು.

"ಈ ದಿನ ನಮ್ಮ ಮುಂದಿರುವ ಮುಖ್ಯವಾದ ಗುರಿಯೆಂದರೆ ಒಂದು ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳು ಮತ್ತು ಭೌತಿಕ ಲಕ್ಷಣಗಳ ಬಗ್ಗೆ ಸರ್ವೇಕ್ಷಣೆ ಮತ್ತು ತಪಾಸಣೆ ನಡೆಸುವುದರ ಬಗ್ಗೆ ಒಂದು ಒಪ್ಪಂದಕ್ಕೆ ಬರಲು ಸಾಧ್ಯವೇ ಎಂದು ನೋಡುವುದು. ಹಾಗೆ ತಪಾಸಣೆ ಮಾಡುವುದರ ಮೂಲಕ ಆ ಪ್ರಾಂತ್ಯದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಯೋಜನೆ ತಯಾರಿಸಲು ಸಾಧ್ಯವಾಗುವುದು. ಪರಿಸ್ಥಿತಿಯ ಸಮತೋಲದ ದೃಷ್ಟಿಯನ್ನು ಹೊಂದುವುದಕ್ಕಾಗಿ ಮುಖಜಭೂಮಿ ಹಾಗೂ ನೀರು ಬಸಿಯುವ ಪ್ರಾಂತ್ಯದ ವೈಶಾಲ್ಯವನ್ನು ಒಟ್ಟಾರೆಯಾಗಿ ಪರಿಗಣಿಸಿ ನೀರಾವರಿಗಾಗಿ, ಜಲಸಂಚಾರ ಮತ್ತು ವಿದ್ಯುತ್ ಅಭಿವೃದ್ಧಿಗಾಗಿ ಸಮಗ್ರವಾದ ಸರ್ವೇಕ್ಷಣ ಮತ್ತು ತಪಾಸಣೆಯನ್ನು ನಡೆಸಬೇಕಾದ ಆವಶ್ಯಕತೆ ಇರುವುದು. ಮಹಾನದಿಯ ಐದು ಉಪನದಿಗಳಾದ ಟೆಲ್ಕೋಮಾ, ಇಬ್ಕೋಮಾ, ಮಾಡ್ಕೋಮಾ, ಹಸ್ದ್ ಮತ್ತು ಜೊಂಕ್‌ಗಳಿಗೆ ಸಣ್ಣ ಜಲಾಶಯಗಳನ್ನು ಕಟ್ಟಬೇಕೆಂದು ೧೮೬೨ರಷ್ಟೊತ್ತಿಗೆ ಸ್ವಲ್ಪ ಪ್ರಮಾಣದ ಕೆಲಸವಾಗಿತ್ತಾದರೂ, ಇದುವರೆಗೆ ತಪಾಸಣಾ ಕಾರ್ಯ ಬಹುಪಾಲು ಮುಖಜಭೂಮಿಗೇ ಮೀಸಲಾಗಿದೆ.

"ಸಮರ್ಥ ನೀರಾವರಿ ಇಂಜಿನಿಯರ್‌ರವರಾದ ರಾಯ್‌ಬಹದ್ದೂರ್ ಖೋಸ್ಲಾ ಅವರ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರ ಪ್ರಾರಂಭಿಸಿರುವ ಕೇಂದ್ರ ಜಲಮಾರ್ಗ, ನೀರಾವರಿ ಮತ್ತು ಜಲಸಂಚಾರ ಆಯೋಗವು ಒರಿಸ್ಸಾದ ನದಿಗಳ ಕುರಿತು ಜಲಶಾಸ್ತ್ರ ಮತ್ತಿತರ ಅಂಶಗಳ ಬಗ್ಗೆ ಸರ್ವೇಕ್ಷಣೆ ಕೈಗೊಳ್ಳುವ ಸನ್ನಾಹದಲ್ಲಿದೆ. ಪ್ರಾಂತ್ಯಗಳು ಮತ್ತು ರಾಜ್ಯಗಳು ಈ ಆಯೋಗದ ಸಾಮಾನ್ಯ ನಿರ್ದೇಶನ ಮತ್ತು ಮಾರ್ಗದರ್ಶನದಲ್ಲಿ ಇದಕ್ಕೆ ಪೂರಕವಾದ ಸರ್ವೇಕ್ಷಣೆಗಳನ್ನು ಕೈಗೊಳ್ಳಬೇಕಾದ ಆವಶ್ಯಕತೆ ಇದೆ.

**ಕ್ಷೇತ್ರಗಳ ಮುಳುಗಡೆ**

"ಮುಕ್ತಾಯ ಮಾಡುವುದಕ್ಕೆ ಮೊದಲು" ಡಾ॥ ಅಂಬೇಡ್ಕರ್ ಹೀಗೆ ಹೇಳಿದರು : "ಈ ಸಮಾವೇಶದಲ್ಲಿ ಭಾಗವಹಿಸಿರುವವರ ಗಮನವನ್ನು ಎರಡು ಅಂಶಗಳತ್ತ ಸೆಳೆಯಲು ಅಪೇಕ್ಷಿಪಡುತ್ತೇನೆ. ಈ ಯೋಜನೆಯ ಯಶಸ್ಸಿನೊಡನೆ ಈ ಅಂಶಗಳು ಬಹಳ ಅನ್ಯೋನ್ಯವಾದ ಸಂಬಂಧವನ್ನು ಹೊಂದಿರುವುದರಿಂದ ಆದಷ್ಟು ಬೇಗ ಸಂಬಂಧಪಟ್ಟವರು ಈ ಕಡೆ ಗಮನ ಹರಿಸಬೇಕಾಗಿದೆ. ಜಮೀನು ಮುಳುಗಡೆಯಾಗುವುದರ ಬಗ್ಗೆ ಅವರು ಈಗಾಗಲೇ ಒಪ್ಪಿಕೊಂಡಿರುವುದು ಒಂದು ಅಂಶ. ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸುವುದರಿಂದ ಒರಿಸ್ಸಾದಲ್ಲಿ ಮತ್ತು ಪೂರ್ವ ರಾಜ್ಯಗಳಲ್ಲಿ ಬಹಳಷ್ಟು ವಲಯಗಳು ಮುಳುಗಡೆಯಾಗುತ್ತವೆ. ಒಂದು ವೇಳೆ ಈ ಅಣೆಕಟ್ಟುಗಳನ್ನು ನದಿಯ ಮೇಲ್ಭಾಗಕ್ಕೆ ಇನ್ನೂ ಒಂದು ಕೊಂಚ ದೂರ ಕಟ್ಟಿದರೆ ಅಥವಾ ಉಪನದಿಗಳಿಗೆ ಕಟ್ಟಿದರೆ ಕೇಂದ್ರೀಯ ಪ್ರಾಂತ್ಯದ ಕೆಲವು ಭಾಗಗಳು ಮುಳುಗಡೆಯಾಗುವುದರಲ್ಲಿ ಸಂಶಯವಿಲ್ಲ. ಸಮಗ್ರ ಯೋಜನೆಯಿಂದ ಆಗುವ ಲಾಭವೆಷ್ಟೆಂದು ಲೆಕ್ಕಹಾಕುವಾಗ ಈ ಪ್ರಶ್ನೆಯನ್ನು ಮತ್ತೆ ವಿವರವಾಗಿ ಚರ್ಚೆಗೆ ತೆಗೆದುಕೊಳ್ಳಬಹುದು.

"ವ್ಯರ್ಥವಾಗಿ ನದಿ ನೀರು ಹರಿದುಹೋಗಲು ಬಿಟ್ಟರೆ ಮಾರ್ಗದಲ್ಲಿ ಅದರಿಂದ ತಲೆದೋರುವ

ತೊಂದರೆಗಳು ಅಪಾರ; ಹಾಗಾಗಿ ಹರಿದುಹೋಗುವ ನೀರಿಗೆ ಅಣೆಕಟ್ಟು ಕಟ್ಟಿ ಜಲಶೇಖರಣೆ ಮಾಡಿ ಅನುಕೂಲ ಪಡೆದುಕೊಳ್ಳಲು ಯೋಜನೆ ತಯಾರಿಸುವಾಗ ಕೊಂಚ ಭೂಮಿ ಮುಳುಗಡೆಯಾಗುವುದು ಅನಿವಾರ್ಯ ಎಂಬುದನ್ನು ತಿಳಿಯಬೇಕು. ಸಮಗ್ರ ಮತ್ತು ವಿವಿಧೋದ್ದೇಶ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸುವಾಗ ಭೂಮಿ ಮುಳುಗಡೆಯಾಗುವುದರಿಂದ ಆಗುವ ನಷ್ಟಕ್ಕಿಂತ ಫಲಿತವಾಗುವ ಲಾಭವೇ ಯಾವಾಗಲೂ ಹೆಚ್ಚು ಇರುವುದನ್ನು ನಾವು ಗಮನಿಸಬೇಕು. ಪ್ರಾಂತೀಯ ಯೋಜನೆಯಾಗಿ ಇದನ್ನು ಪರಿಗಣಿಸಿದಾಗ ಮಾತ್ರ ಈ ಯೋಜನೆ ಯಶಸ್ವಿಯಾಗುವುದು. ಅದೇ ಕಾಲದಲ್ಲಿ ಇದು ಕೇವಲ ಸ್ಥಳೀಯ ಯೋಜನೆಯಾಗಿಯೂ ಸಹ ಫಲಪ್ರದವಾಗಲಾರದು. ಕೇವಲ ತನ್ನ ಎಲ್ಲೆಗಳಿಗೆ ಇದನ್ನು ಸೀಮಿತಗೊಳಿಸಿಕೊಂಡರೆ ಒರಿಸ್ಸಾ ಪ್ರಾಂತ್ಯ ಈ ಯೋಜನೆಯ ಯಶಸ್ಸು ಕಾಣಲಾರದು. ಒರಿಸ್ಸಾ ರಾಜ್ಯವು ಕೂಡ ಇಂಥ ಯೋಜನೆಯನ್ನು ತಾನಾಗಿ ಕೈಗೆತ್ತಿಕೊಂಡರೂ ಯಶಸ್ವಿಯಾಗಲಾರದು.

"ಮೂಲತಃ ಇದು ಕ್ಷೇತ್ರೀಯ ಯೋಜನೆಯಾಗಿರುವುದರಿಂದ ರಾಜ್ಯ ಮತ್ತು ಪ್ರಾಂತೀಯ ಸಾರ್ವಭೌಮತ್ವದ ವಿಲೀನತೆಯ ಪ್ರಶ್ನೆಯನ್ನು ಇದು ಸ್ವಲ್ಪಮಟ್ಟಿಗೆ ಹುಟ್ಟು ಹಾಕಬಹುದು. ನಾನು ಪ್ರಸ್ತಾಪ ಮಾಡಬೇಕೆಂದಿರುವ ಎರಡನೆಯ ಪ್ರಶ್ನೆಯೇ ಇದು. ಒರಿಸ್ಸಾ ರಾಜ್ಯ ಮತ್ತು ಪ್ರಾಂತ್ಯ ಒಟ್ಟಿಗೆ ಸೇರಿ ತಮ್ಮ ಸಾರ್ವಭೌಮತ್ವದ ಸ್ವಲ್ಪ ಭಾಗವನ್ನು ಬಿಟ್ಟುಕೊಡುವುದರ ಮೂಲಕ ತಮ್ಮ ಎಲ್ಲೆಯಲ್ಲಿ ಹರಿದುಹೋಗುವ ನೀರಿನ ಮೇಲೆ ನಿಯಂತ್ರಣ ಹೊಂದುವುದನ್ನು ಬಿಟ್ಟುಕೊಟ್ಟರೆ ಈ ಯೋಜನೆ ಸುಗಮವಾಗಿ ಕೈಗೂಡುವುದು. ಒರಿಸ್ಸಾ ಸರ್ಕಾರಕ್ಕಾಗಲೀ ಅಥವಾ ಈ ಯೋಜನೆಯಿಂದ ತೊಂದರೆಗೊಳಗಾಗುವ ಯಾವುದೇ ಭಾರತೀಯ ರಾಜ್ಯಗಳಿಗಾಗಲೀ ಸಾರ್ವಜನಿಕರಿಗಾಗುವ ಲಾಭವೇ ಮುಖ್ಯವಾಗಬೇಕು. ಅವರ ಸಾರ್ವಭೌಮತ್ವವು ಜನರ ಕಲ್ಯಾಣಕ್ಕಾಗಿ ಉಪಯೋಗವಾಗಬೇಕೇ ವಿನಾ ಅದಕ್ಕೆ ಅಡ್ಡಿ ಮಾಡಲು ಎಂದೂ ಅಲ್ಲ ಎಂಬುದನ್ನು ಅವರು ಮನಗಾಣಬೇಕು. ಕೇಂದ್ರ ಸರ್ಕಾರ ಮತ್ತು ಪ್ರಾಂತೀಯ ಹಾಗೂ ರಾಜ್ಯ ಸರ್ಕಾರಗಳು ಸಹಕಾರ ಮತ್ತು ಹೊಂದಾಣಿಕೆಗಳಿಂದ ವ್ಯರ್ಥವಾಗಿ ಹರಿದುಹೋಗುತ್ತಿರುವ ಒರಿಸ್ಸಾದ ನದೀ ನೀರನ್ನು ಜನರ ಕಲ್ಯಾಣಕ್ಕಾಗಿ ಉಪಯೋಗವಾಗುವಂತೆ ಮಾಡುವುದು ಅಸಾಧ್ಯವಾದ ಕೆಲಸವೇನಲ್ಲ. ಅತ್ಯಂತ ಸಮೃದ್ಧಿಯಾಗಿ ಲಭ್ಯವಾಗುತ್ತಿರುವ ಈ ನಿರಂತರ ಜಲರಾಶಿಯನ್ನು ಉಪಯೋಗಿಸಿಕೊಳ್ಳದೆ ಬಿಡುವುದರಿಂದ ಇದು ಹರಿದುಹೋಗುವ ಮಾರ್ಗದಲ್ಲಿ ಜನರ ಕಣ್ಣೀರಿನ ಕೋಡಿ ಹರಿಯುವುದೂ ಸರ್ವೇ ಸಾಮಾನ್ಯವಾಗಿದೆ. ಇದನ್ನೂ ಕೂಡ ಈ ಹೊಸ ಯೋಜನೆಯಿಂದ ನಿವಾರಿಸಿದ ಹಾಗೆ ಆಗುತ್ತದೆ."

**ಒರಿಸ್ಸಾ ನದಿಗಳ ಸರ್ವೇಕ್ಷಣೆ : ಸಮ್ಮೇಳನದ ತೀರ್ಮಾನಗಳು**

ಸಮಗ್ರ ಹಾಗೂ ವಿವಿಧೋದ್ದೇಶ ಅಭಿವೃದ್ಧಿಗಾಗಿ ಒರಿಸ್ಸಾದ ನದಿಗಳ ಪ್ರಾಥಮಿಕ ಸರ್ವೇಕ್ಷಣೆ ಮಾಡುವಂತೆ ಸಮ್ಮೇಳನ ತೀರ್ಮಾನಿಸಿತು. ಈ ಪ್ರಾಥಮಿಕ ಸರ್ವೇಕ್ಷಣದ ನಂತರ ಕೈಗೊಳ್ಳುವ ವಿವಿಧೋದ್ದೇಶ ಯೋಜನೆಗಳಲ್ಲಿ ಪ್ರವಾಹ ನಿಯಂತ್ರಣ, ಜಲಸಂಚಾರ ಹಾಗೂ ನೀರಾವರಿ ಮತ್ತು ನೀರ್ಗಾಲುವೆಗಳ ಏರ್ಪಾಟು, ಮಣ್ಣು ಸಂರಕ್ಷಣೆ ಮತ್ತು ಶಕ್ತಿ ಅಭಿವೃದ್ಧಿಯಂಥ ಕಾರ್ಯಕ್ರಮಗಳು ಸೇರ್ಪಡೆಯಾಗಿವೆ.

ಪ್ರಥಮವಾಗಿ ಮಹಾನದಿಯನ್ನು ನಿಯಂತ್ರಿಸಿ ಅಭಿವೃದ್ಧಿಗೊಳಿಸುವ ಸಾಧ್ಯತೆಗಳ ಬಗ್ಗೆ ಗಮನ ಹರಿಸಬೇಕೆಂದು ಸಮ್ಮೇಳನ ತೀರ್ಮಾನಿಸಿತು. ಹಾಗೆಯೇ ಕೇಂದ್ರೀಯ ಜಲಮಾರ್ಗ, ನೀರಾವರಿ ಮತ್ತು ಜಲಸಂಚಾರ ಆಯೋಗದ ಸಹಯೋಗ ಮತ್ತು ಮಾರ್ಗದರ್ಶನದಲ್ಲಿ ಸಂಬಂಧಪಟ್ಟ ಪ್ರಾಂತೀಯ ಸರ್ಕಾರಗಳೂ ಸರ್ವೇಕ್ಷಣೆ ಕೈಗೊಳ್ಳಬೇಕೆಂಬುದನ್ನು ಒಪ್ಪಲಾಯಿತು.

ಮಹಾನದಿಯ ಉದ್ದಕ್ಕೂ ಒಂದು ಪೂರ್ವಸರ್ವೇಕ್ಷಣವನ್ನು ಕೈಗೊಳ್ಳುವುದಾಗಿ ವಿಷದಪಡಿಸಲಾಯಿತು;

ಈ ಪೂರ್ವಸರ್ವೇಕ್ಷಣದ ಫಲವಾಗಿ ಒಂದು ವೇಳೆ ಜನರ ಅಭಿವೃದ್ಧಿಗಾಗಿ ಮಹಾನದಿಯ ನೀರಿನಬಳಕೆಯನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ ಎಂದು ಸ್ಥಾಪಿತವಾದರೆ, ತರುವಾಯದಲ್ಲಿ ವಿವರವಾದ ಸರ್ವೇಕ್ಷಣ ಮತ್ತು ತಪಾಸಣೆ ಕೈಗೊಳ್ಳಲಾಗುವುದೆಂದು ತೀರ್ಮಾನಿಸಲಾಯಿತು. ಈ ಘಟ್ಟದಲ್ಲಿ ಮಾತ್ರ ಆಡಳಿತಾತ್ಮಕ ಮತ್ತು ಹಣಕಾಸು ಸಂಸ್ಥೆಗಳ ಭಾಗವಹಿಸುವಿಕೆ ನಿರ್ಧಾರವಾಗುವುದು. ಅಲ್ಲಿಯತನಕ ಕೇಂದ್ರೀಯ ಜಲಮಾರ್ಗ, ನೀರಾವರಿ ಮತ್ತು ಜಲಸಂಚಾರ ಆಯೋಗವು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ಪ್ರಾಂತೀಯ ಸರ್ಕಾರದ ಒರಿಸ್ಸಾ ನದಿಗಳ ವಿಭಾಗದ ಜೊತೆಗೂಡಿ ಒಂದು ಪ್ರಾಥಮಿಕ ಪೂರ್ವಸರ್ವೇಕ್ಷಣ ನಡೆಸುವುದು. ಕೇಂದ್ರೀಯ ಪ್ರಾಂತೀಯ ಸರ್ಕಾರ ಮತ್ತು ಪೂರ್ವ ರಾಜ್ಯಗಳು ಕೇಂದ್ರೀಯ ಜಲಮಾರ್ಗ, ನೀರಾವರಿ ಮತ್ತು ಜಲಸಂಚಾರ ಆಯೋಗಕ್ಕೆ ತಮ್ಮಲ್ಲಿ ಲಭ್ಯವಿರುವ ಮಾಹಿತಿಯನ್ನು ಒದಗಿಸುವುದರ ಮೂಲಕ ಮಹಾನದಿ ನದಿ ನೀರಿನ ಸಂಪೂರ್ಣ ಬಳಕೆ ಮತ್ತು ಅದರ ಲಾಭ ಪಡೆಯಲು ಸಹಕಾರ ನೀಡಬೇಕಾಗಿದೆ.

**ಶ್ರೀ ಗೋಖಲೆಯವರ ಭಾಷಣ**

ಒರಿಸ್ಸಾ ಗವರ್ನರ್‌ರವರ ಸಲಹೆಗಾರರಾಗಿದ್ದ ಶ್ರೀ ಬಿ.ಕೆ. ಗೋಖಲೆಯವರು ಡಾ॥ ಅಂಬೇಡ್ಕರ್ ಅವರು ತಯಾರಿಸಿದ ಯೋಜನೆಯನ್ನು ಸ್ವಾಗತಿಸಿ ಹೀಗೆ ಹೇಳಿದರು : "ಪ್ರಾಯಶಃ ಭಾರತದಲ್ಲಿ ಒರಿಸ್ಸಾವೇ ಅತ್ಯಂತ ಹಿಂದುಳಿದ ಭಾಗವೆಂದರೆ ತಪ್ಪಾಗಲಾಗದು. ಆದಕಾರಣ ಈ ಭಾಗದ ಪುರೋಭಿವೃದ್ಧಿಗಾಗಿ ಸದ್ಯಕ್ಕೆ ಯೋಜಿತವಾಗಿರುವ ವಿವಿಧೋದ್ದೇಶ ಅಭಿವೃದ್ಧಿ ಯೋಜನೆಗಿಂತ ಉತ್ತಮವಾದ ಯೋಜನೆ ನಮಗೆ ಲಭ್ಯವಾಗುವುದಿಲ್ಲ". ಒರಿಸ್ಸಾದ ಇತಿಹಾಸವನ್ನು ಲಾಗಾಯ್ತಿನಿಂದ ಆಧುನಿಕ ಕಾಲದವರೆಗೆ ನೆನಪು ಮಾಡಿಕೊಡುತ್ತಾ ಯೋಜನೆ ಮತ್ತು ಕ್ಷೇತ್ರೀಯ ಅಭಿವೃದ್ಧಿಗಾಗಿ ಕೈಕೊಂಡಿರುವ ಕಾರ್ಯಕ್ರಮಗಳು ಈ ಪ್ರಾಂತ್ಯದ ಜನರ ಸುಖ ಸಮೃದ್ಧಿಯನ್ನು ಹೆಚ್ಚಿಸುವಲ್ಲಿ ಮಹತ್ತರ ಪಾತ್ರ ವಹಿಸುವುದೆಂದು ಅಭಿಪ್ರಾಯಪಟ್ಟರು.

**ಸಮರೋತ್ತರ ನೀರಾವರಿ ಮತ್ತು ಜಲ – ವಿದ್ಯುತ್ ಯೋಜನೆಗಳು**

"ನೀರಾವರಿ ಕ್ಷೇತ್ರದಲ್ಲಿ ಭಾರತವು ಜಗತ್ತಿನಲ್ಲೇ ಅತ್ಯಂತ ಮುಂದಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗೆಯೇ ಭಾರತಕ್ಕೆ ನೀರಾವರಿ ಅತ್ಯಂತ ಆವಶ್ಯಕವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಯ ಸಂದರ್ಭದಲ್ಲಿ ಜನರ ಕಲ್ಯಾಣವನ್ನು ಸಾಧಿಸಲು ನೀರಾವರಿಗಿಂತ ಪ್ರಮುಖವಾದ ಒಂದು ಸಾಧನ ಬೇರೊಂದಿರಲು ಸಾಧ್ಯವಿಲ್ಲ" ಹಾಗೆಂದು ಹೇಳಿದವರು ಘನತೆವೆತ್ತ ವೈಸರಾಯ್ ಅವರು. ನವೆಂಬರ್ ೨೬ ರಂದು ಸಮಾವೇಶಗೊಂಡಿದ್ದ ನೀರಾವರಿಯ ಕೇಂದ್ರೀಯ ಮಂಡಳಿ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು. ನವದೆಹಲಿಯ ವೈಸರಾಯ್ ಗೃಹದ ಕೌನ್ಸಿಲ್ ಕೊಠಡಿಯಲ್ಲಿ ಈ ಸಭೆ ಸೇರಿತ್ತು. ಭಾರತ ಸರ್ಕಾರದ ತಜ್ಞರು ಮತ್ತು ಪ್ರಾಂತ್ಯ ಹಾಗೂ ರಾಜ್ಯಗಳ ಮುಖ್ಯ ಇಂಜಿನಿಯರ್‌ಗಳ ಜೊತೆಗೆ ಕಾರ್ಮಿಕ ಸದಸ್ಯರಾದ ಮಾನ್ಯ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಹಾಗೂ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಎಚ್.ಸಿ. ಪ್ರಯರ್‌ರವರು ಈ ಸಭೆಯಲ್ಲಿ ಭಾಗವಹಿಸಿದ್ದರು.

**ವೈಸರಾಯ್ ಈ ರೀತಿ ಹೇಳಿದರು :**

"ನೀರಾವರಿ ಕೇಂದ್ರೀಯ ಮಂಡಳಿಯ ೧೬ನೆಯ ಸಭೆಯನ್ನು ಉದ್ಘಾಟಿಸಲು ನನಗೆ ಸಂತೋಷವಾಗುತ್ತದೆ. ನಿಮ್ಮ ಎಂಜಿನಿಯರಿಂಗ್ ವಿಭಾಗವು ಅತ್ಯಂತ ಹಳೆಯದು, ಮುಖ್ಯವಾದುದೂ

ಮತ್ತು ಗೌರವಾನ್ವಿತವಾದದ್ದೂ ಆಗಿದೆ. ನೀರಾವರಿ ಎಂಜಿನಿಯರ್‌ಗಳು ಜಗತ್ತಿನಲ್ಲೇ ಹಳಬರಾದ ತಜ್ಞರಾಗಿದ್ದಾರೆ. ಬೈಬಲ್‌ನ ಜೆನಿಸಿಸ್‌ನ ಎರಡನೇ ಅಧ್ಯಾಯ ನಮಗೆ ತಿಳಿಸುತ್ತದೆ: 'ಈಡನ್‌ನಿಂದ ಹೊರಗೆ ಹರಿದುಹೋದ ನದಿ ಉದ್ಯಾನಕ್ಕೆ ನೀರುಣಿಸಿತು' ಎಂದು. ಆದ್ದರಿಂದ ಇದು ಪ್ರಪ್ರಥಮವಾದ ನೀರಾವರಿಯ ಉದಾಹರಣೆಯಾಗಿದೆ. ಜಗತ್ತಿನಲ್ಲೇ ಪುರಾತನವಾದ ಈಜಿಪ್ಟ್ ಮತ್ತು ಮೆಸೊಪೊಟೇಮಿಯಾ ನಾಗರಿಕತೆಗಳು ನೀರಾವರಿಯ ಮೇಲೆಯೇ ಸ್ಥಾಪಿತವಾದುವು; ನಿಮ್ಮ ಕ್ಷೇತ್ರದಲ್ಲಿ ಪ್ರಮುಖರಾದವರು ಆ ರಾಷ್ಟ್ರಗಳಲ್ಲಿ ಅತ್ಯಂತ ಮರ್ಯಾದೆ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ.

"ಪುರಾತನ ಕಾಲದ ನೀರಾವರಿ ತಜ್ಞರಲ್ಲಿ ಮೋಸಸ್‌ರನ್ನು ನಾವು ಹೆಸರಿಸಬೇಕು, ಅವರ ಸಾಧನೆಯಲ್ಲಿ ಎರಡು ನೀರಾವರಿಗೆ ಸಂಬಂಧಿಸಿದವು ಎಂಬುದು ಎದ್ದುಕಾಣುತ್ತವೆ; ಮತ್ತೊಮ್ಮೆ ಅವರು ಮೌರಾದ ಬಳಿ ಕಹಿಜಲವನ್ನು ಸಿಹಿಗೊಳಿಸಿದ ಸಂದರ್ಭ; ಪ್ರಾಯಶಃ ಕಶ್ಮಲವಾದ ನೀರು ಸೇರದಂತೆ ಅಡ್ಡಗಟ್ಟೆ ಕಟ್ಟಿ ಮೋಸೆಸ್ ಹೀಗೆ ಮಾಡಿರಬಹುದೆಂದು ನಾವು ಊಹಿಸಬಹುದಾಗಿದೆ.

**ಭಾರತದ ಸಾಧನೆ**

"ಬೇರೆ ಎಂಜಿನಿಯರ್‌ಗಳು ನಮ್ಮ ಪ್ರಯಾಣಕ್ಕೆ ವೇಗವನ್ನು ಕೊಡಬಹುದು, ಅಥವಾ ನಾವು ವಾಸಮಾಡುವ ಜಾಗದಲ್ಲಿ ಆರಾಮವನ್ನು ಕಲ್ಪಿಸಿಕೊಡಬಹುದು; ನೀವು ಕೊಡುವ ಕೊಡುಗೆಯನ್ನು ಬದುಕಿಗೇ ಹೋಲಿಸಬಹುದು. ನಿಮ್ಮ ಶ್ರಮದ ಬಗ್ಗೆ ಏನಾದರೂ ನಿಮಗೆ ಸೂಕ್ತವಾದ ಹೋಲಿಕೆ ಬೇಕೆನ್ನಿಸಿದರೆ ನಾನು ಬೈಬಲ್‌ನ ಇಸಯನ ಪದ್ಯ ಉಲ್ಲೇಖಿಸಬಲ್ಲೆ : 'ಕಾಡ ಮಧ್ಯೆ ಜಲರಾಶಿಯನ್ನು ಕೊಡಬಲ್ಲೆ ಮತ್ತು ನನ್ನ ಜನರಿಗೆ ನೀರನ್ನು ಕೊಡಲು ಮರುಭೂಮಿಯ ಮಧ್ಯೆ ನದಿಗಳನ್ನು ನಿರ್ಮಿಸಬಲ್ಲೆ."

## ೫೪

## ವಜಾ ಆದ ರೈಲ್ವೆ ನೌಕರರ ಫೆಡರೇಷನ್ ಬೇಡಿಕೆಗಳ ತಿರಸ್ಕಾರ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯ ಅಧ್ಯಕ್ಷರೆ, ಈ ಬೆಳಿಗ್ಗೆ ನಿಲುವಳಿ ಸೂಚನೆಯು ಅಂಗೀಕಾರವಾದಾಗ ತನ್ನ ನಿಲುವು ಏನೆಂಬುದನ್ನು ತಿಳಿಸಲು ಕಾರ್ಮಿಕ ಇಲಾಖೆ ಈ ಚರ್ಚೆಯಲ್ಲಿ ಭಾಗವಹಿಸಬೇಕಾದ್ದು ಅನಿವಾರ್ಯವೆಂದು ನನಗನ್ನಿಸಲಿಲ್ಲ. ಆದರೆ ಚರ್ಚೆ ಪ್ರಾರಂಭವಾದ ನಂತರ ನಮ್ಮ ಗಮನಕ್ಕೆ ಬಂದಿರುವ ಅಂಶವೇನೆಂದರೆ ಇಬ್ಬರು ಭಾಷಣಕಾರರು – ಈ ಸೂಚನೆಗೆ ಬೆಂಬಲ ಸೂಚಿಸಿರುವಂಥವರು – ಕಾರ್ಮಿಕ ಇಲಾಖೆಯನ್ನು ಬಹಳ ಕಠಿಣವಾಗಿ ದೂಷಿಸಿದ್ದಾರೆ. ಈ ವಿವಾದವು ಬಹಳ ಕಾಲದಿಂದ ನಡೆದುಕೊಂಡು ಬರುತ್ತಿದೆಯಾದರೂ ಇದರ ಇತ್ಯರ್ಥದಲ್ಲಿ ಎಲ್ಲರೂ ನಿರೀಕ್ಷಿಸಿದ ರೀತಿಯಲ್ಲಿ ಕಾರ್ಮಿಕ ಇಲಾಖೆ ತನ್ನ ಕರ್ತವ್ಯವನ್ನು ಪರಿಪಾಲಿಸಿಲ್ಲ ಎಂಬುದು ಅವರ ಆಪಾದನೆಯಾಗಿದೆ. ಈ ವಿಷಯದಲ್ಲಿ ಕಾರ್ಮಿಕ ಇಲಾಖೆಯ ಜವಾಬ್ದಾರಿ ಇದ್ದೇ ಇರುವುದೆಂದು ನಾನು ನಂಬುತ್ತೇನೆ. ಕಾರ್ಮಿಕ ವರ್ಗದವರಿಗೇನಾದರೂ ಅನ್ಯಾಯವಾದರೆ ಅದನ್ನು

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ : ಸಂ. ೧, ಸಂಖ್ಯೆ–೨, ಜನವರಿ ೨೨, ೧೯೪೬, ಪು. ೧೦೬–೦೮.

ಸರಿಪಡಿಸುವುದಕ್ಕೋಸ್ಕರವಾಗಿಯೇ ಈ ಇಲಾಖೆಯು ಸ್ಥಾಪಿತವಾದದ್ದು; ತನ್ನ ಕರ್ತವ್ಯವನ್ನು ಈ ಇಲಾಖೆ ಸಮರ್ಪಕವಾದ ರೀತಿಯಲ್ಲಿ ಪರಿಪಾಲಿಸದಿದ್ದರೆ ಸೂಚನೆಯಂತೆ ಇದು ದೋಷಾರೋಪಣೆಗೆ ಒಳಗಾಗುವುದು ಸಹಜ. ಆದಾಗ್ಯೂ, ಮಾನ್ಯರೆ, ಗೌರವಾನ್ವಿತ ಗೆಳೆಯ ಸರ್ದಾರ್ ಮಂಗಳಸಿಂಗ್‌ರು ಕಾರ್ಮಿಕ ಇಲಾಖೆಯ ಜವಾಬ್ದಾರಿಯ ಬಗ್ಗೆ ಗಮನ ಸೆಳೆಯುತ್ತಾ ಸ್ವಲ್ಪ ತುಚ್ಛವಾಗಿ ಕಾಣುವ ರೀತಿಯಲ್ಲಿ ಕಾರ್ಮಿಕ ಸದಸ್ಯರು ನಿದ್ರಿಸುತ್ತಿರಬೇಕು ಇಲ್ಲವೇ ಪಿಟೀಲು ಬಾರಿಸುತ್ತಾರೇನೊ ಎಂದು ಹೇಳಿರುತ್ತಾರೆ. ನಿಜವಾಗಿ ಇವರು ಸಮಸ್ಯೆಯ ಪೂರ್ಣ ಪರಿಚಯವನ್ನು ಮಾಡಿಕೊಳ್ಳದೆ ಮಾತನಾಡಿದ್ದಾರೆ ಹಾಗೂ ಈ ವಿವಾದದ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ಯಾವ ಕ್ರಮ ಕೈಗೊಂಡಿದೆ ಎಂಬುದೂ ಸಹ ಇವರಿಗೆ ಗೊತ್ತಿಲ್ಲ. ಆದಕಾರಣ ಈ ಸಭೆಯ ಮುಂದೆ ನಾನು ಈ ವಿಚಾರವಾಗಿ ಕೆಲವು ಮುಖ್ಯವಾದ ಸಂಗತಿಗಳನ್ನು ಅಗತ್ಯವಾಗಿ ತರಬಯಸುತ್ತೇನೆ.

ರೈಲ್ವೆ ನೌಕರರ ಫೆಡರೇಷನ್ ಮತ್ತು ರೈಲ್ವೆ ಮಂಡಳಿಯ ನಡುವೆ ತಲೆದೋರಿರುವ ಈ ವಿವಾದವು ಕಾರ್ಮಿಕ ಇಲಾಖೆಯ ಗಮನಕ್ಕೆ ಮೊದಲ ಬಾರಿಗೆ ಬಂದದ್ದು ೧೯೪೫ರ ಅಕ್ಟೋಬರ್ ೫ರಂದು, – ಭಾರತೀಯ ರೈಲ್ವೆ ನೌಕರರ ಫೆಡರೇಷನ್ ಅಧಿಕಾರಿಯೊಬ್ಬರು ಕಳುಹಿಸಿದ ಒಂದು ಕಾಗದದ ಮೂಲಕವಾಗಿ. ಈ ಪತ್ರದಲ್ಲಿ ರೈಲ್ವೆ ನೌಕರರ ಫೆಡರೇಷನ್ ಅಧಿವೇಶನವೊಂದರಲ್ಲಿ ಕೈಗೊಂಡ ಅನೇಕ ಗೊತ್ತುವಳಿಗಳನ್ನು ದಾಖಲು ಮಾಡಲಾಗಿತ್ತು. ಈ ಪತ್ರದ ನಂತರ ೧೯೪೫ರ ಅಕ್ಟೋಬರ್ ೧೦ ರಂದು ಎರಡನೇ ಪತ್ರವು ಕಾರ್ಮಿಕ ಇಲಾಖೆಯನ್ನು ತಲಪಿತು. ಈ ಪತ್ರದಲ್ಲಿ ಗೊತ್ತುವಳಿಯಲ್ಲಿ ಉಲ್ಲೇಖವಾಗಿರುವ ರೀತ್ಯಾ ಉದ್ಭವವಾಗಿರುವ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಕಾರ್ಮಿಕ ಇಲಾಖೆಯ ಮುಖ್ಯ ಜವಾಬ್ದಾರಿಯೆಂದರೆ, ತೀರ್ಪುಗಾರರೊಬ್ಬರನ್ನು ನೇಮಿಸುವಂಥ ಅಂತಿಮ ಹಂತದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಎರಡೂ ಪಕ್ಷಗಳನ್ನು ಔಪಚಾರಿಕವಾಗಿ ಒಂದೆಡೆ ಸೇರುವಂತೆ ಮಾಡಿ ಆದಷ್ಟು ಮಟ್ಟಿಗೆ ಅವರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಕಳೆದುಕೊಳ್ಳಲು ಸಾಧ್ಯವೇ ಎಂದು ನೋಡಬೇಕು; ಪರಸ್ಪರರ ಬೇಡಿಕೆಗಳನ್ನು ತಾವೇ ಒಪ್ಪಿಕೊಳ್ಳಲು ಅವರ ಮನವೊಲಿಸಬೇಕು. ಈ ಕರ್ತವ್ಯವನ್ನು ಕಾರ್ಮಿಕ ಇಲಾಖೆ ಈಗಾಗಲೇ ನಿರ್ವಹಿಸಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಇಲಾಖೆಯ ಪ್ರಯತ್ನದ ಪರಿಣಾಮವಾಗಿ ರೈಲ್ವೆ ಇಲಾಖೆಯು ರೈಲ್ವೆ ನೌಕರರ ಫೆಡರೇಷನ್ನಿನ ಪ್ರತಿನಿಧಿಗಳನ್ನು ಭೇಟಿ ಮಾಡಿ ವಿವಾದಾತ್ಮಕವಾದ ಅಂಶಗಳ ಕುರಿತು ಚರ್ಚೆ ನಡೆಸುವಂತೆ ಮನವೊಲಿಸಿದೆ. ಗೌರವಾನ್ವಿತ ಸದಸ್ಯರುಗಳಿಗೆ ತಿಳಿದಿರಬಹುದು, ರೈಲ್ವೆ ಇಲಾಖೆ ಮತ್ತು ರೈಲ್ವೆ ನೌಕರರ ಫೆಡರೇಷನ್‌ನ ನಡುವೆ ಚರ್ಚೆ ನಡೆದು ಈ ಸಂಬಂಧವಾದ ಮಾಹಿತಿಯನ್ನು ರೈಲ್ವೆ ಇಲಾಖೆ ಈಗಾಗಲೇ ಹೊರಡಿಸಿ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ ಕೆಲವು ಅಂಶಗಳ ಬಗ್ಗೆ ನಾವು ಎರಡೂ ಪಕ್ಷದವರು ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ ಎಂದು ತಿಳಿಸಿದ್ದಾರೆ. ಈ ಪ್ರಕಟಣೆ ಹೊರಡಿಸಿದ್ದು ಇತ್ತೀಚೆಗೆ ಅಂದರೆ ಡಿಸೆಂಬರ್ ೫ನೇ ತಾರೀಖಿನಂದು. ಹಾಗಿರಲಾಗಿ, ೫ನೇ ಡಿಸೆಂಬರ್‌ನಿಂದ ಇಂದಿನತನಕ ಬಹಳ ವಿಳಂಬವಾಗಿದೆಯೆಂಬ ತೀರ್ಮಾನಕ್ಕೆ ಬರುವುದಾಗಲೀ, ೫ನೇ ಡಿಸೆಂಬರ್‌ನಿಂದ ಇಲ್ಲಿಯತನಕ ಕಾರ್ಮಿಕ ಇಲಾಖೆ ಬಹಳ ವಿಳಂಬ ನೀತಿಯನ್ನನುಸರಿಸಿ ಸಕಾಲದಲ್ಲಿ ತನ್ನ ಕರ್ತವ್ಯ ಪರಿಪಾಲನೆ ಮಾಡಲಿಲ್ಲ ಎಂಬ ಆಪಾದನೆಯನ್ನಾಗಲೀ ಮಾಡಲಾಗದು.

ಆದರೆ ಮತ್ತೊಂದು ವಿಚಾರವಿದೆ, ಅದರ ಕಡೆ ನಾನು ಸಭೆಯ ಗಮನ ಸೆಳೆಯಲು ಅಪೇಕ್ಷೆಪಡುತ್ತೇನೆ. ಮಾತುಕತೆಗಳು ಮುಕ್ತಾಯವಾಗಿವೆ ಎಂದು ಮಾತ್ರ ಹೇಳಲಾಗದು – ಶ್ರೀ ಗುರುಸ್ವಾಮಿಯವರಿಗೆ ಈ ವಿಷಯ ತಿಳಿದಿರಬೇಕು. ಮಾತುಕತೆಗಳು ಇನ್ನೂ ಮುಂದುವರಿಯುತ್ತಿವೆ ಮತ್ತು ನಾನು ಈ ಸಭೆಗೆ

ತಿಳಿಸಬಯಸುವುದೇನೆಂದರೆ, ರೈಲ್ವೆ ಇಲಾಖೆ ಮತ್ತು ರೈಲ್ವೆ ನೌಕರರ ಫೆಡರೇಷನ್‌ನವರು ಒಂದು ಒಪ್ಪಂದಕ್ಕೆ ಬಂದು ಪರಸ್ಪರರೊಡನೆ ಮಾತುಕತೆ ನಡೆಸಲು ಅನುಕೂಲವಾಗುವಂತೆ ಭಾರತೀಯ ರೈಲ್ವೆ ನೌಕರರ ಫೆಡರೇಷನ್‌ನ ಒಂದು ಪುಟ್ಟ ಸಮಿತಿಯನ್ನು ರಚಿಸಬೇಕೆಂದು ತೀರ್ಮಾನವಾಯಿತು. ಆ ಸಭೆ ಸೇರಲು ೧೯೪೬ರ ಜನವರಿ ಕೊನೆಯ ಭಾಗವನ್ನು ಗೊತ್ತುಮಾಡಲಾಗಿದೆ. ೧೯೪೬ರ ಜನವರಿ ಕೊನೆ ಇನ್ನೂ ಬಂದಿಲ್ಲವೆಂಬುದು ತಮಗೆ ಗೊತ್ತು. ಮಾತುಕತೆಗೆ ಇನ್ನೂ ಸಮಯವಿದೆ.

**ಶ್ರೀ ಪ್ರಕಾಶ :** 'ಕೊನೆಯ ಭಾಗವು' ಬಂದಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಆದರೆ ನಾನು ಆ ವಿಚಾರವನ್ನು ಒಪ್ಪಲಾರೆ.

**ದಿವಾನ್ ಚಮನ್ ಲಾಲ್ (ಪಶ್ಚಿಮ ಪಂಜಾಬ್ –** ಮಹಮ್ಮದೀಯರಲ್ಲದವರು) : ಗೌರವಾನ್ವಿತ ಸ್ನೇಹಿತರೆ, ಒಂದು ನಿಮಿಷ ನಾನು ಮಧ್ಯೆ ಪ್ರವೇಶಿಸಬಹುದೆ? ತೀರ್ಪುಗಾರರೊಬ್ಬರನ್ನು ನೇಮಿಸುವ ಸೂಚನೆಯನ್ನು ಸರ್ಕಾರ ತಳ್ಳಿಹಾಕಿರುವುದು ನಿಜವೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಆ ವಿಷಯಕ್ಕೆ ಬರುತ್ತಿದ್ದೇನೆ. ನಾನು ಹೇಳಲು ಪ್ರಯತ್ನಪಟ್ಟ ಅಂಶ ಇದು – ಏನೆಂದರೆ ಎರಡೂ ವರ್ಗಗಳ ಮಧ್ಯೆ ಒಂದು ಒಡಂಬಡಿಕೆಯನ್ನು ತರುವ ತನ್ನ ಪ್ರಯತ್ನ ವಿಫಲವಾಯಿತೆಂದು ಕಾರ್ಮಿಕ ಇಲಾಖೆಗೆ ಚೆನ್ನಾಗಿ ಸ್ಪಷ್ಟವಾದ ನಂತರವೇ ತೀರ್ಪುಗಾರರನ್ನು ನೇಮಕ ಮಾಡಲು ಸರ್ಕಾರ ಮುಂದಾಗಬೇಕೇ ಹೊರತು ಅನ್ಯಥಾ ಅಲ್ಲ. ನನ್ನ ಗೌರವಾನ್ವಿತ ಸ್ನೇಹಿತರಿಗೆ ನಾನು ಬಿನ್ನಹ ಮಾಡಿಕೊಳ್ಳುವುದಿಷ್ಟೇ : ಇನ್ನೂ ಒಂದು ಅವಕಾಶ ಕಲ್ಪಿಸಿಕೊಡಲಾಗಿದೆ, ರೈಲ್ವೆ ನೌಕರರ ಫೆಡರೇಷನ್‌ನವರು ತಾವು ಇಲಾಖೆಗೆ ಭೇಟಿ ಮಾಡಲು ಬರುವ ದಿನಾಂಕವನ್ನು ರೈಲ್ವೆ ಇಲಾಖೆಗೆ ತಿಳಿಸಬೇಕು.

**ದಿವಾನ್ ಚಮನ್ ಲಾಲ್ :** ನನ್ನ ಗೌರವಾನ್ವಿತ ಸ್ನೇಹಿತರನ್ನು ನಾನು ಒಂದು ಮಾತು ಕೇಳಲೆ? ತಾವು ಕೆಲಸದಿಂದ ತೆಗೆಯಬೇಕೆಂದಿರುವ ನೌಕರರ ಸಂಖ್ಯೆಯನ್ನು ರೈಲ್ವೆ ನೌಕರರ ಫೆಡರೇಷನ್‌ನವರಿಗೆ ತಿಳಿಸಲು ಸರ್ಕಾರ ನಿರಾಕರಿಸಿರುವುದು ನಿಜವೇ? ಹಾಗೂ ಎರಡನೆಯದಾಗಿ, ಅವರು ತೀರ್ಪುಗಾರರನ್ನು ನೇಮಕ ಮಾಡಲಾಗುವುದೆಂದು ಹೇಳಿದ್ದಾರೆಯೇ? ಮೂರನೆಯದಾಗಿ, ಇನ್ನೂ ನೌಕರರನ್ನು ಕೆಲಸದಿಂದ ತೆಗೆದುಹಾಕುವ ಯೋಜನೆಯನ್ನು ಮುಂದುವರಿಸುವರೆ? ಸರಿ ಸುಮಾರು ೧೦,೦೦೦ ಮಂದಿಯನ್ನು ಈಗಾಗಲೇ ಕೆಲಸದಿಂದ ವಜಾ ಮಾಡಿದ್ದಾರೆ. ಸರ್ಕಾರ ಈ ರೀತಿ ನಿಲವು ತಳೆದಿರುವಾಗ ಮಾತುಕತೆಯ ಪ್ರಶ್ನೆ ಉದ್ಭವಿಸುವುದೇ ಇಲ್ಲವಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಗೌರವಾನ್ವಿತ ಸ್ನೇಹಿತರು ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಮಾಡಿ ತೀರ್ಪುಗಾರರನ್ನು ನೇಮಕ ಮಾಡಿಕೊಳ್ಳುವ ವಿಷಯದ ಬಗ್ಗೆ ನಾವು ಮಿತಿಗೊಳಿಸಿಕೊಳ್ಳೋಣ ಎಂದು ಹೇಳಿದ ಸಂಗತಿಯನ್ನು ಮರೆತರು ಎಂದು ಕಾಣುತ್ತದೆ. ಇದರಾಚೆಗಿನ ವಿಷಯವಾದ ಎಷ್ಟು ವಜಾ ಆಗುತ್ತಾರೆ, ವಜಾ ಆಗುತ್ತಾರೋ ಇಲ್ಲವೋ, ವಜಾ ಆದರೆ ಯಾವ ರೀತಿ ಅದರ ಬಗ್ಗೆ ಚರ್ಚೆ ನಡೆಸುವುದು, ಇವೆಲ್ಲವುಗಳ ಬಗ್ಗೆ ನನ್ನ ಗೌರವಾನ್ವಿತ ಸಹೋದ್ಯೋಗಿ ಖಂಡಿತವಾಗಿಯೂ ನಾನು ಮಾತು ಮುಗಿಸಿದ ನಂತರ ಉತ್ತರ ಕೊಡುತ್ತಾರೆ. ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಜವಾಬ್ದಾರಿಯನ್ನು ಮಾತ್ರ ನಾನು ನಿರ್ವಹಿಸುತ್ತಿರುವುದು. ನಾನು ಹೇಳುತ್ತಿದ್ದ ಸಂಗತಿಯೆಂದರೆ ಪ್ರಥಮತಃ ಕಾರ್ಮಿಕ ಇಲಾಖೆಗೆ ಇನ್ನು ಮೇಲೆ ಈ ವಿಷಯದಲ್ಲಿ ಮಾತುಕತೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗದ ಹೊರತು "ನಾವೊಬ್ಬ ತೀರ್ಪುಗಾರರನ್ನು ನೇಮಿಸುತ್ತೇವೆ" ಎಂದು ಹೇಳುವುದು ಅತ್ಯಂತ ಅಸಮಂಜಸ, ಅಸಾಧ್ಯ ಮತ್ತು ಸ್ಥಾಪಿತ ನಿಯಮಾವಳಿಗಳ

ತೀರಾ ತದ್ವಿರುದ್ಧ. ನನ್ನ ಗೌರವಾನ್ವಿತ ಸ್ನೇಹಿತರು ಕಾರ್ಮಿಕ ಇಲಾಖೆ ಸರಿಯಾದ ಸಮಯದಲ್ಲಿ ಕಾರ್ಯೋನ್ಮುಖವಾಗಲಿಲ್ಲ ಎಂದು ಮಾಡಿದ ಆಪಾದನೆ ಖಂಡಿತವಾಗಿಯೂ ಪೂರ್ವಾಪರ ಆಲೋಚಿಸದೆ ಮಾಡಿದ ಆಪಾದನೆಯಾಗಿದೆ ಹಾಗೂ ನಾನೀಗಾಗಲೇ ಹೇಳಿರುವ ಅಂಶಗಳನ್ನು ಮನದಟ್ಟು ಮಾಡಿಕೊಂಡರೆ ತಾವೇ ತಾವಾಗಿ ಕಾರ್ಮಿಕ ಸದಸ್ಯರು ಪಿಟೀಲು ಬಾರಿಸುತ್ತಿದ್ದರೇನೋ ಎಂದು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ನಾನು ಖಂಡಿತಾ ಪಿಟೀಲು ಬಾರಿಸುತ್ತಿರಲಿಲ್ಲ.

ಈಗ ಪ್ರಶ್ನೆಯ ಇನ್ನೊಂದು ಮುಖವನ್ನು ಪರಿಶೀಲಿಸೋಣ. ಭಾರತೀಯ ರಕ್ಷಣಾ ಕಾಯಿದೆಯ ಪ್ರಕಾರ ನಿಯಮ ೮೧ಎ ಅಡಿಯಲ್ಲಿ ಮಧ್ಯಸ್ಥಗಾರರು ಒಬ್ಬರನ್ನು ನೇಮಿಸುವ ಅಧಿಕಾರವನ್ನು ಸರ್ಕಾರ ಹೊಂದಿದೆ. ಆದರೆ ಅದನ್ನು ಇಲ್ಲೇ ಉಲ್ಲೇಖಿಸುವುದು ಸೂಕ್ತವೆಂದು ತೋರುತ್ತದೆ, ಇದು ಒಂದು ತುರ್ತು ಶಾಸನವಾಗಿದ್ದಾಗ್ಯೂ ಸಹ, ನಿಯಮ ೮೧ಎ ಪ್ರಕಾರ ಅಧಿಕಾರ ಚಲಾಯಿಸುವಂಥ ಹಕ್ಕನ್ನು ಯಾವ ಕಾನೂನು ವಿಧಿವಿಧಾನವೂ ನಮ್ಮಿಂದ ಕಸಿದುಕೊಳ್ಳಲಾರದು. ಮಧ್ಯಸ್ಥಿಕೆಗೋಸ್ಕರವಾಗಿ ಒಂದು ವಿವಾದ ನಮ್ಮ ನಡುವೆ ಇರಬೇಕಾಗಿದೆ. ನಾನು ಮೊದಲೇ ತಿಳಿಸಿದಂತೆ, ಸದ್ಯದಲ್ಲಿ ನಮ್ಮ ಮುಂದೆ ಯಾವ ವಿವಾದವೂ ಇಲ್ಲ; ಈ ವಿಷಯ ನಮ್ಮ ಪರಿಗಣನೆಯಲ್ಲಿದೆ. ಎರಡನೆಯದಾಗಿ, ಯಾರೇ ತೀರ್ಪುಗಾರರನ್ನು ನೇಮಿಸುವ ಮೊದಲು ನೀವು ಸ್ಪಷ್ಟಪಡಿಸಿಕೊಳ್ಳಬೇಕಾದ ಅಂಶವೆಂದರೆ ವಿವಾದವು ಉದ್ಯೋಗಕ್ಕೆ ಸಂಬಂಧಿಸಿದ ನೀತಿ ನಿಯಮಗಳಿಗೆ ಬದ್ಧವಾಗಿದೆ ಎಂದು ತಿಳಿಯುವುದು – ಉದಾಹರಣೆಗೆ ವಿವಾದವು, ಕೆಲಸದ ಅವಧಿ, ಭತ್ಯೆ ಇತ್ಯಾದಿಗಳಿಗೆ ಸಂಬಂಧಪಟ್ಟಿರಬೇಕು. ರೈಲ್ವೆ ಇಲಾಖೆ ಮತ್ತು ರೈಲ್ವೆ ನೌಕರರ ಫೆಡರೇಷನ್‌ನವರ ನಡುವೆ ಎದ್ದಿರುವ ವಿವಾದದ ಮುಖ್ಯ ಅಂಶಗಳಾದರೂ ಏನು? ರೈಲ್ವೆ ನೌಕರರ ಫೆಡರೇಷನ್ ಈ ಮೊಕದ್ದಮೆಯನ್ನು ನಡೆಸಬೇಕಾದ ರೀತಿಯಲ್ಲಿ ನಡೆಸಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ತಮಗೆ ತಾವೇ ಅವರು ಕೆಡುಕು ಮಾಡಿಕೊಂಡಿದ್ದಾರೆ. ಈ ಸಂಬಂಧವಾಗಿ ನಾನು ಒಂದು ಅಂಶವನ್ನು ನೆನಪಿಸುತ್ತೇನೆ – ಅದೇನೆಂದರೆ, ರೈಲ್ವೆ ನೌಕರರ ಫೆಡರೇಷನ್ ಯಾವ ಒಂದು ವಿಷಯದತ್ತ ಒತ್ತುಕೊಡುತ್ತಾ ಬಂದಿದೆ? ಕೆಲಸದ ಗಂಟೆಗಳ ಬಗ್ಗೆ ಅವರು ಒತ್ತುಕೊಟ್ಟಿದ್ದಾರೆಯೇ? ಸಂಬಳದ ಮೇಲೆ ಅವರು ಒತ್ತುಕೊಡುತ್ತಿದ್ದಾರೆಯೇ? ಖಂಡಿತಾ ನಾನು ಹೇಳುತ್ತಿದ್ದೇನೆ ಈ ವಿವಾದ ಈ ಎರಡರಲ್ಲಿ ಯಾವ ಅಂಶದಿಂದಲೂ ಉದ್ಭವವಾಗಿಲ್ಲ. ರೈಲ್ವೆ ನೌಕರರ ಫೆಡರೇಷನ್ ಅನೇಕ ಗೊತ್ತುವಳಿಗಳನ್ನು ಮಂಡಿಸಿ ಕೆಲಸದ ಅವಧಿ ಮತ್ತು ನೌಕರಿಯ ಸ್ಥಿತಿಗತಿಗಳ ಬಗ್ಗೆ ಚರ್ಚಿಸಿದೆ ಎಂಬುದು ನಿಜ. ಆದರೆ ವಿವಾದದಲ್ಲಿ ಮೂಲಭೂತವಾದ ಅಂಶಗಳು ಯಾವುವು ಮತ್ತು ಪ್ರಾಸಂಗಿಕವಾಗಿ ಅಂಟಿಕೊಂಡ ಅಂಶಗಳು ಯಾವುವು ಎಂಬುದನ್ನು ನಾವು ಮನಗಾಣಬೇಕಾದ್ದು ಅಗತ್ಯ. ರೈಲ್ವೆ ನೌಕರರ ಫೆಡರೇಷನ್‌ನವರು ಹೊರಡಿಸಿರುವ ಗೊತ್ತುವಳಿಗಳನ್ನು ಪರೀಕ್ಷಿಸಿದವರಿಗೆ ಅವರ ದೂರಿನ ಪ್ರಧಾನ ಆಪಾದನೆಗಳೇನೆಂದು ಗೊತ್ತಾಗುತ್ತದೆ – ಯಾವ ಒಬ್ಬ ನೌಕರನನ್ನೂ ತೆಗೆಯಬಾರದು ಎಂಬುದು ಅವರ ಮುಖ್ಯ ಅಂಶ. ದುಡಿಮೆಯ ಅವಧಿ ಮತ್ತು ಭತ್ಯೆಗೆ ಸಂಬಂಧಪಟ್ಟ ಅಂಶಗಳು ಸುಮ್ಮನೆ ನಂತರ ಜೋಡಿಸಿದವುಗಳಾಗಿವೆ – ನಿಜವಾಗಿ ಅವು ಭಿನ್ನಾಭಿಪ್ರಾಯದ ಅಂಶಗಳಾಗಿಲ್ಲ. ನಾನು ಹೇಳುತ್ತಿರುವ ಅಂಶವನ್ನು ಮತ್ತಷ್ಟು ಪುಷ್ಟೀಕರಿಸಲು ಹೇಳುವುದಾದರೆ ರೈಲ್ವೆ ಇಲಾಖೆ ಮತ್ತು ರೈಲ್ವೆ ನೌಕರರ ಫೆಡರೇಷನ್‌ನವರಿಗೂ ಇರುವ ವಿವಾದದ ಮುಖ್ಯ ಸಂಗತಿಯು ನೌಕರರ ವಜಾಕ್ಕೆ ಸಂಬಂಧಿಸಿದ್ದಾಗಿದೆ. ಎಷ್ಟು ಜನರನ್ನು ಇಟ್ಟುಕೊಳ್ಳುತ್ತಾರೆ ಮತ್ತು ಎಷ್ಟು ಮಂದಿಯನ್ನು ತೆಗೆಯುತ್ತಾರೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ನಾನೀಗ ಇನ್ನೊಂದೆರಡು ಅಂಶಗಳತ್ತ ಗಮನ ಸೆಳೆಯುತ್ತೇನೆ.

ಮೊದಲನೆಯ ಅಂಶ ಇದು – ನಾನು ಮೊದಲೇ ತಿಳಿಸಿದಂತೆ ೧೯೪೫ರ ಅಕ್ಟೋಬರ್ ೫ರ ಅವರ ಪತ್ರದಲ್ಲಿ ಸುಮಾರು ಹದಿನೈದೋ ಅಥವಾ ಹದಿನಾಲ್ಕೋ ಬೇಡಿಕೆಗಳನ್ನು ಪಟ್ಟಿಮಾಡಿದ್ದಾರೆ. ಆಗ ಕಾರ್ಮಿಕ ಇಲಾಖೆ ಮತ್ತು ರೈಲ್ವೆ ನೌಕರರ ಫೆಡರೇಷನ್ ಅಧ್ಯಕ್ಷರಾದ ಶ್ರೀ ಗಿರಿಯವರೊಡನೆ ಒಂದು ಚರ್ಚೆ ನಡೆಯಿತು. ಫೆಡರೇಷನ್‌ನವರ ಪ್ರಕಾರ ಪ್ರಧಾನವಾಗಿ ಕಂಡಿದ್ದ ಅಂಶಗಳ ಕಡೆ ಗಮನ ಹರಿಸುವುದು ಈ ಚರ್ಚೆಯ ಉದ್ದೇಶವಾಗಿತ್ತು; ಈ ಸಭೆಯ ಗಮನಕ್ಕೆ ನಾನು ತರಬಯಸುವ ಮುಖ್ಯ ಸಂಗತಿಯೆಂದರೆ ಫೆಡರೇಷನ್‌ನ ಬೇಡಿಕೆಗಳಲ್ಲಿ ೧೫ ಅಂಶಗಳು ಸೇರ್ಪಡೆಯಾಗಿದ್ದರೂ, ಪರಿಗಣನೆಗಾಗಿ ಕಾರ್ಮಿಕ ಇಲಾಖೆಯ ಮುಂದೆ ಬಂದವು ಕೇವಲ ೨ ಅಂಶಗಳು ಮಾತ್ರ. ಉಳಿದ ಅಂಶಗಳನ್ನು ರೈಲ್ವೆ ನೌಕರರ ಫೆಡರೇಷನ್‌ನವರೇ ಅಮುಖ್ಯವಾದವೆಂದು ಕೈಬಿಟ್ಟುಬಿಟ್ಟರು. ತದನಂತರ ರೈಲ್ವೆ ನೌಕರರ ಫೆಡರೇಷನ್ ಮತ್ತು ರೈಲ್ವೆ ಇಲಾಖೆಯ ನಡುವೆ ಇನ್ನೊಂದು ಔಪಚಾರಿಕವಾದ ಭೇಟಿಯನ್ನು ಏರ್ಪಡಿಸಿದಾಗ ಕಾರ್ಮಿಕ ಇಲಾಖೆಯ ಮುಂದೆ ಮಂಡಿಸಿದ ಮೂರು ಬೇಡಿಕೆಗಳೂ ಬಿದ್ದುಹೋಗಿ ಕಡೆಗೆ ಉಳಿದದ್ದು ನೌಕರರ ವಜಾಕ್ಕೆ ಸಂಬಂಧಿಸಿದ ಒಂದೇ ಒಂದು ಅಂಶ. ಈಗ ಮಾತನಾಡಿದ ಮಹನೀಯರಿಗೆ ಮತ್ತು ರೈಲ್ವೆ ನೌಕರರ ಫೆಡರೇಷನ್‌ನ ಅಧ್ಯಕ್ಷರಿಗೆ ಪೂರ್ಣ ಗೌರವವನ್ನು ಸಲ್ಲಿಸುತ್ತಾ ನಾನು ಕೇಳುವ ಒಂದೇ ಒಂದು ಪ್ರಶ್ನೆಯೆಂದರೆ, ಒಂದು ಇಲಾಖೆ ತಾನು ಎಷ್ಟು ಜನ ನೌಕರರನ್ನು ಸೇರಿಸಿಕೊಳ್ಳಬೇಕು ಎಂಬ ವಿಚಾರವು ಎಂದಾದರೂ ನ್ಯಾಯಾಲಯಕ್ಕೆ ಒಳಪಡುವ ವಿವಾದವಾಗಲು ಸಾಧ್ಯವೇ? ಇದನ್ನು ಗಮನದಲ್ಲಿಟ್ಟುಕೊಂಡು ರೈಲ್ವೆ ನೌಕರರ ಫೆಡರೇಷನ್‌ನ ಅಧ್ಯಕ್ಷರು ರೈಲ್ವೆ ಇಲಾಖೆಯೊಡನೆ ಮಾತುಕತೆ ನಡೆಸಿ ನ್ಯಾಯಾಧಿಕಾರಕ್ಕೆ ಒಳಪಡುವಂಥ ಕೆಲವು ಅಂಶಗಳನ್ನು ಗಮನಕ್ಕೆ ತರುವರೆಂದು ಆಶಿಸುವೆ. ಇದರಿಂದ ಕಾರ್ಮಿಕ ಇಲಾಖೆಯು ತೀರ್ಪುಗಾರರ ನೇಮಕವು ಸೂಕ್ತವೆಂಬ ನಿರ್ಧಾರಕ್ಕೆ ಬರಲು ಅನುಕೂಲವಾಗುವುದು. ಮಾನ್ಯರೆ, ವಸ್ತುಸ್ಥಿತಿ ಹೀಗಿರಲಾಗಿ ದೋಷಾರೋಪಣೆಯ ಸೂಚನೆ ಸಾಧುವಲ್ಲವೆಂದು ನನ್ನ ಭಾವನೆ.

## ೫೫

# ದಾಮೋದರ್ ಯೋಜನೆಯ ಅನುಷ್ಠಾನದಲ್ಲಿ ಮುಳುಗಡೆಯಾಗಲಿರುವ ಗ್ರಾಮಗಳನ್ನು ಖಾಲಿಮಾಡಿಸಬೇಕೆಂದ ಪ್ರಸ್ತಾವ*

**ಅಧ್ಯಕ್ಷರು :** ದಾಮೋದರ್ ಯೋಜನೆಯ ಪ್ರಕಾರ ಬಿಹಾರಿನ ಹಜಾರಿಬಾಗ್, ಮನ್‌ಭೂಮ್ ಹಾಗೂ ಸೋಂಥಾಲ್‌ಪರ್ಗಣ ಜಿಲ್ಲೆಗಳ ನೂರಾರು ಗ್ರಾಮಗಳ ಸಹಸ್ರಾರು ಗ್ರಾಮಸ್ಥರು ತಮ್ಮ ಮನೆಮಠಗಳನ್ನು ಕಳೆದುಕೊಳ್ಳುತ್ತಾರೆ; ಅಸಂಖ್ಯಾತ ಜನರನ್ನು ಬಲವಂತವಾಗಿ ಎತ್ತಂಗಡಿ ಮಾಡಿರುವ ಈ ವಿಷಯವಾಗಿ ಶ್ರೀ ರಾಮ್‌ನಾರಾಯಣ್‌ಸಿಂಗ್ ಅವರ ಸೂಚನೆ ಇದೆ. ಗೌರವಾನ್ವಿತ ಸದಸ್ಯರು ಈ ಸೂಚನೆಯ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸಬೇಕು.

**ಬಾಬು ರಾಮ್‌ನಾರಾಯಣ್ ಸಿಂಗ್ : (ಛೋಟಾ ನಾಗಪುರ್ ವಿಭಾಗ** : ಮಹಮ್ಮದೀಯರಲ್ಲದವರು): ಮಾನ್ಯರೇ, ಕೆಲವು ಜಿಲ್ಲೆಗಳಲ್ಲಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ವಿಧಿವಿಧಾನಗಳೂ ನಡೆಯುತ್ತಿವೆ. ದಾಮೋದರ್ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಅನೇಕ ಗ್ರಾಮಗಳನ್ನು ತೆಗೆದುಕೊಳ್ಳಬೇಕಾಗಿದೆಯಾಗಿ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, ಸಂಪುಟ ೧, ಸಂ. ೭ನೇ ಫೆಬ್ರವರಿ ೧೯೪೬, ಪು. ೬೦೬೦

ಆ ಗ್ರಾಮಗಳಿಗೆ ಸೇರಿದ ಗ್ರಾಮಸ್ಥರು ಬೇರೆ ಸ್ಥಳಕ್ಕೆ ಹೋಗಬೇಕೆಂದು ಕೇಳಿಕೊಳ್ಳಲು ಸಿದ್ಧತೆ ನಡೆದಿದೆ.

**ಅಧ್ಯಕ್ಷರು :** ಈ ಯೋಜನೆ ಯಾವಾಗ ಪ್ರಾರಂಭವಾಯಿತು ಮತ್ತು ಈಗ ಯಾವ ಘಟ್ಟದಲ್ಲಿದೆ ಎಂದು ನಾನು ಕೇಳಬಹುದೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಈ ಘಟ್ಟದಲ್ಲಿ ನೀವು ಚರ್ಚಿಸಬೇಕಾದದ್ದು ಏನೇನೂ ಇಲ್ಲವೆಂದು ನಾನು ವಿನಂತಿಸಿಕೊಳ್ಳಬಯಸುತ್ತೇನೆ. ಬಿಹಾರ್ ಮತ್ತು ಬಂಗಾಳಗಳಲ್ಲಿ ಹರಿದುಹೋಗುವ ದಾಮೋದರ್ ನದಿಗೆ ಅಲ್ಲಲ್ಲಿ ಅಣೆಕಟ್ಟೆ ಕಟ್ಟಬೇಕೆಂದು ಸರ್ಕಾರ ಆಲೋಚಿಸುತ್ತಿರುವುದು ನಿಜ. ಆದರೆ ಈ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪವಾಗಿರುವ ಬಲವಂತದ ತೆರವಿಗೆ ಸಂಬಂಧಿಸಿದ ನಿಖರವಾದ ಪ್ರಶ್ನೆಗೆ ನಾನು ಉತ್ತರಕೊಡುವುದು ಹೀಗೆ : ನಾವು ಈಗ ಬಹಳ ಪ್ರಾಥಮಿಕ ಹಂತದಲ್ಲಿದ್ದೇವೆ ; ಜಲಾವೃತವಾದಾಗ ಎಷ್ಟು ಪ್ರಮಾಣದ ಭೂಮಿ ಮುಳುಗಡೆಯಾಗುತ್ತದೆ ಎಂಬುದರ ಬಗ್ಗೆ ನಾವು ಈಗ ಅಂದಾಜುಮಾಡುತ್ತಿದ್ದೇವೆ ; ಇದರಿಂದ ತೊಂದರೆಗೊಳಗಾಗುವ ಕ್ಷೇತ್ರದ ವಿಸ್ತೀರ್ಣ, ಎಷ್ಟು ಜನರಿಗೆ ಹಾನಿಯಾಗುತ್ತದೆ; ಮತ್ತೆ ಅವರು ಕಳೆದುಕೊಳ್ಳುವ ಭೂಮಿಯ ಅಂದಾಜು, ಹಾಗೂ ಅವರಿಗೆ ಇರುವ ಹಕ್ಕುಗಳು – ಇತ್ಯಾದಿಗಳ ಬಗ್ಗೆ ನಾವು ಲೆಕ್ಕಾಚಾರ ಹಾಕುತ್ತಿದ್ದೇವೆ. ವಾಸ್ತವವಾಗಿ ಇಲ್ಲಿ ವಿಶಿಷ್ಟವೆಂಬುದು ಏನೂ ಇಲ್ಲ; ಚರ್ಚೆಗೆ ವಸ್ತುವಾಗಬಲ್ಲಂಥ ಯಾವ ಸಂಗತಿಯ ಬಗ್ಗೆಯೂ ಈ ಘಟ್ಟದಲ್ಲಿ ಕ್ರಮ ಸರ್ಕಾರ ತೆಗೆದುಕೊಂಡಿಲ್ಲ; ಈಗ ನಾನು ಹೇಳಬೇಕೆಂದಿರುವುದು ಇಷ್ಟು : ಈ ವಿಷಯವಾಗಿ ಸರ್ಕಾರ ಒಂದು ತೀರ್ಮಾನವನ್ನು ಕೈಗೊಂಡ ಪಕ್ಷದಲ್ಲಿ ಸರ್ಕಾರದ ಆ ನಿರ್ಧಾರ ಏನು ಎಂಬುದನ್ನು ನಾನು ಈ ಸಭೆಗೆ ಸುತ್ತೋಲೆಯ ಮೂಲಕ ತಿಳಿಸಬಲ್ಲೆ.

**ಬಾಬು ರಾಮ್‌ನಾರಾಯಣ್ ಸಿಂಗ್ :** ನನ್ನ ಮಾಹಿತಿಯ ಪ್ರಕಾರ ಹಜಾರಿಬಾಗ್ ಜಿಲ್ಲೆಯಲ್ಲಿ ಈಗಾಗಲೇ ಭೂಸ್ವಾಧೀನ ಕಾರ್ಯ ಪ್ರಾರಂಭವಾಗಿದ್ದು ಜನರನ್ನು ನಿಕಾಳೆ ಮಾಡಿಸುತ್ತಿದ್ದಾರೆ.

**ಅಧ್ಯಕ್ಷರು :** ವಿಧಿವಿಧಾನಗಳು ಈ ಯೋಜನೆಯ ಅನುಷ್ಠಾನಕ್ಕಾಗಿಯೇ ನಡೆಯುತ್ತಿವೆಯೆಂದು ಮಾನ್ಯ ಸದಸ್ಯರು ತಿಳಿದಿದ್ದಾರೆಯೆ?

**ಬಾಬು ರಾಮ್‌ನಾರಾಯಣ್ ಸಿಂಗ್ :** ಹೌದು.

**ಅಧ್ಯಕ್ಷರು :** ಆದರೆ ಸರ್ಕಾರ ಇದುವರೆಗೆ ಏನೂ ಮಾಡಿದ ಹಾಗೆ ತೋರುವುದಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಂಚಾರಕ್ಕೆ ಅನುಕೂಲವಾಗುವಂತೆ ಕೆಲವು ರಸ್ತೆಗಳನ್ನು ಮಾಡಲು ಸೂಚನೆ ಕೊಟ್ಟಿದ್ದಾರೆ. ಆದರೆ ಜನರನ್ನು ಸ್ಥಳಾಂತರಿಸುವಂಥ ಯಾವ ಕಾರ್ಯಕ್ರಮವನ್ನೂ ಈ ಘಟ್ಟದಲ್ಲಿ ಕೈಕೊಂಡಿಲ್ಲ.

**ಅಧ್ಯಕ್ಷರು :** ಮಾಹಿತಿ ಸಂಗ್ರಹಣೆಗಾಗಿ ಭೂಸ್ವಾಧೀನ ಮಾಡಿಕೊಳ್ಳುತ್ತಿದ್ದಾರೆಯೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಘಟ್ಟದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ಸರ್ಕಾರ ದಾಮೋದರ ನದಿಗೆ ಕೆಲವು ಕಡೆ ಅಣೆಕಟ್ಟೆ ಕಟ್ಟಬೇಕೆಂದು ತೀರ್ಮಾನಿಸಿದರೆ ಸಂಚಾರಕ್ಕಾಗಿ ರಸ್ತೆಗಳನ್ನು ನಿರ್ಮಿಸಬೇಕಾದದ್ದೂ ಸಹಜ ತಾನೆ. ಆದ ಕಾರಣ ರಸ್ತೆ ನಿರ್ಮಾಣಕ್ಕೆ ಅನುಕೂಲವಾಗುವಂತೆ ಸ್ವಲ್ಪ ಜಾಗವನ್ನು ತೆಗೆದುಕೊಳ್ಳಬೇಕಾಗಿದೆಯಾಗಿ ಕೆಲವು ಜನರಿಗೆ ಈಗಾಗಲೇ ಸೂಚನೆ ಹೋಗಿರಬಹುದು. ನಿಲುವಳಿ ಸೂಚನೆಯಲ್ಲಿ ಎತ್ತಲಾದ ನಿಖರವಾದ ಪ್ರಶ್ನೆಗೆ ಸಂಬಂಧಿಸಿದಂತೆ ಹಜಾರಿಬಾಗ್ ಜಿಲ್ಲೆ ಹಾಗೂ ಮನಭೂಮ್ ಮತ್ತು ಸೋಂಥಾಲ್‌ಪರ್ಗಣಗಳಲ್ಲಿನ ನೂರಾರು ಗ್ರಾಮಗಳ ಸಹಸ್ರಾರು ಗ್ರಾಮಸ್ಥರನ್ನು ಬಲವಂತವಾಗಿ ನಿಕಾಳೆ ಮಾಡಿಸಲಾಗಿದೆ ಎಂಬ ಸುದ್ದಿ ಹರಡಬೇಕಾದ ಪ್ರಮೇಯವೇ ಇಲ್ಲ. ಮುಂದೆ

ಏನಾಗುತ್ತದೆಂದು ಹೇಳುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ನಿಜವಾಗಿ ಇದು ಪ್ರಾಥಮಿಕ ಹಂತದಲ್ಲಿದೆ.

**ಅಧ್ಯಕ್ಷರು :** ನನ್ನ ಮುಂದಿರುವ ಜಟಿಲವಾದ ಪ್ರಶ್ನೆಯೆಂದರೆ ಇದು, ಸರ್ಕಾರ ಈಗಾಗಲೇ ಸಂಚಾರದ ರಸ್ತೆಗಳ ನಿರ್ಮಾಣಕ್ಕಾಗಿ ಮೊದಲ ಹಂತದ ಕಾರ್ಯವನ್ನು ಕೈಗೊಂಡಿದೆ ಎಂದಮೇಲೆ ಎಷ್ಟು ಜನರು ಭೂಮಿ ಕಳೆದುಕೊಳ್ಳುತ್ತಾರೆ ಎಂಬ ಬಗ್ಗೆ ವಿವರಗಳ ಸಂಗ್ರಹಣೆ ಶುರುವಾಗಿಲ್ಲ ಎನ್ನುವುದು ನನಗೆ ಮುಖ್ಯವಾಗುವುದಿಲ್ಲ; ಅಣೆಕಟ್ಟೆ ಕಟ್ಟುವುದು ನಿಜವಾದ ಸಂಗತಿಯಿಂದಾಯಿತು ತಾನೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೇ, ಹಾಗಲ್ಲ; ಹೊರಗಿನ ತಜ್ಞರನ್ನು ನಾವು ಈಗ ಭೇಟಿ ಮಾಡುತ್ತಿದ್ದೇವೆ, ನಾವು ಅನುಸರಿಸಬೇಕಾದ ಸೂಕ್ತಮಾರ್ಗ ಯಾವುದು ಎಂಬುದರ ಬಗ್ಗೆ, ಅತ್ಯಂತ ಪ್ರಾಥಮಿಕ ಅವಸ್ಥೆಯಲ್ಲಿ ವಿಷಯವಿದೆ ಎಂಬುದನ್ನು ನಾನು ವಿನಂತಿಸಿಕೊಳ್ಳುತ್ತೇನೆ. ಸಭೆಗೆ ನಾನು ಯಾವುದೇ ವಿವರವನ್ನು ಕೊಡುವ ಸ್ಥಿತಿಯಲ್ಲಿಲ್ಲ.

**ಅಧ್ಯಕ್ಷರು :** ನಾನು ತಿಳಿಯಬಯಸುವುದೇನೆಂದರೆ ಅಣೆಕಟ್ಟೆಗಳನ್ನು ಕಟ್ಟಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನಿಸಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರ್ಕಾರದ ಯೋಜನೆ ಅದು ಎನ್ನುವುದು ನಿಜ – ಆದರೆ ಆ ಯೋಜನೆ ಇನ್ನೂ ಅಂತಿಮವಾಗಿಲ್ಲ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ (ಲಕ್ನೋ,** ಮಹಮದೀಯರಲ್ಲದವರು, ಗ್ರಾಮಾಂತರ) : ಸಭೆಯ ಮುಂದೆ ಅದು ಬರುತ್ತದೆಂದು ನಾನು ತಿಳಿಯಲೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದು ಪರಿಶೀಲನೆಯಲ್ಲಿದೆ. ಅಂತಿಮವಾದ ಮಂಜೂರಾತಿಯನ್ನು ನಾವಿನ್ನೂ ಪಡೆದಿಲ್ಲ.

## ೫೬
## ಕಾರ್ಮಿಕರ ಪರಿಹಾರ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ, ನಾನು ಈ ಸೂಚನೆಯನ್ನು ಮಂಡಿಸುತ್ತಿದ್ದೇನೆ.

"೧೯೪೩ರ ಕಾರ್ಮಿಕರ ಪರಿಹಾರ ಕಾಯಿದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣಿಸಬೇಕು."

ಸದ್ಯದಲ್ಲಿ ೩೦೦ ರೂಪಾಯಿಗಳು ವೇತನ ಪಡೆಯುತ್ತಿರುವ ಕಾರ್ಮಿಕನಿಗೆ ನ್ಯಾಯ ದೊರಕಿಸಿಕೊಡಲು ತಯಾರಾದಂಥ ಸರಳವಾದ ಮಸೂದೆ ಇದು. ಗೌರವಾನ್ವಿತ ಸದಸ್ಯರಿಗೆ ಇದು ಮನವರಿಕೆಯಾಗಿರಬಹುದು: ಕಾರ್ಮಿಕ ಪರಿಹಾರ ಕಾಯಿದೆಯಲ್ಲಿ ಉಲ್ಲೇಖವಾಗಿರುವಂತೆ 'ಕಾರ್ಮಿಕ'ನೆಂದರೆ ಯಾರು ಎಂದು ನಿರೂಪಿಸುತ್ತಾ ೩೦೦ ರೂಪಾಯಿ ವೇತನ ಪಡೆಯುತ್ತಿರುವ ಕಾರ್ಮಿಕರಿಗೆ ಮಾತ್ರ ಪರಿಹಾರ ಎಂದು ಸ್ಪಷ್ಟಪಡಿಸಿದೆ. ಯುದ್ಧಕ್ಕೆ ಮುನ್ನ ಈ ಕಾಯಿದೆಯ ಪ್ರಕಾರ ೩೦೦ ರೂ. ವೇತನ ಪಡೆಯುತ್ತಿದ್ದ ಪ್ರತಿಯೊಬ್ಬ ಕಾರ್ಮಿಕನೂ ಸಹ ಪರಿಹಾರ ಪಡೆಯುವ ಸೌಲಭ್ಯವಿದ್ದಿತು. ಸಮರ ಭತ್ಯಗಳು ಸೇರ್ಪಡೆಯಾದ ನಂತರ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂ : ೧–ಸಂಖ್ಯೆ ೧೨, ೮ನೇ ಫೆಬ್ರವರಿ ೧೯೪೬, ಪು. ೭೧೪

ಮತ್ತು ಉಳಿದ ಭತ್ಯಗಳಾದ ತುಟ್ಟಿಭತ್ಯೆ, ಬೋನಸ್ಸುಗಳು, ಸನ್ನಡತೆ ಸಂಬಳ ಇತ್ಯಾದಿಗಳಿಂದಾಗಿ ಹೆಚ್ಚಿನ ನೌಕರರು ೩೦೦ ರೂಪಾಯಿಗಳಿಗಿಂತ ಅಧಿಕವಾಗಿ ವೇತನ ಪಡೆಯುವುದರಿಂದ ಈ ಕಾಯಿದೆಯ ಪ್ರಕಾರ ತಮಗೆ ದಕ್ಕುತ್ತಿದ್ದ ಪರಿಹಾರದಿಂದ ವಂಚಿತರಾಗುತ್ತಿದ್ದಾರೆ. ಕಾರ್ಮಿಕರ ಪರಿಹಾರ ಕಾಯಿದೆಯಲ್ಲಿ ನಮೂದಾಗಿರುವಂತೆ 'ವೇತನ'ವೆಂದರೆ ಏನೆಂದು ವಿಷದಪಡಿಸುವಾಗ ಪರಿಹಾರವನ್ನು ಲೆಕ್ಕಾಚಾರ ಹಾಕಲು ಅನುಕೂಲವಾಗುವಂತೆ ಕಾರ್ಮಿಕನ ಎಲ್ಲಾ ಸಂಪಾದನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಇದರ ಫಲವಾಗಿ ಮೊದಲು ಪರಿಹಾರ ಪಡೆಯುತ್ತಿದ್ದ ಕಾರ್ಮಿಕ ಈಗ ಅದರಿಂದ ವಂಚಿತನಾಗುತ್ತಾನೆ. ಅಂಥ ಕಾರ್ಮಿಕನ ಹಕ್ಕನ್ನು ರಕ್ಷಿಸುವ ಸಲುವಾಗಿ ಅವನ ವೇತನ ಮಿತಿಯನ್ನು ೩೦೦ ರೂ.ಗಳಿಂದ ೪೦೦ ರೂ.ಗಳಿಗೆ ಹೆಚ್ಚಿಸಿದೆ. ಹಾಗಾಗಿ ಮಸೂದೆ ಎರಡು ಅಂಗಗಳನ್ನೊಳಗೊಂಡಿದೆ. ಒಂದು ಕಾರ್ಮಿಕ ಎಂದರೆ ಯಾರೆಂದು ಹೇಳುವಾಗ ಅವನ ವೇತನ ಮಿತಿಯನ್ನು ೩೦೦ಕ್ಕೆ ನಿಲ್ಲಿಸುವ ಬದಲು ೪೦೦ ರೂ. ಗಳಿಗೆ ಏರಿಸಿದೆ; ಮತ್ತು ಎರಡನೆಯದಾಗಿ, ಕಾಯಿದೆಯ ೪ನೇ ಅನುಸೂಚಿಯನ್ನು ತಿದ್ದುಪಡಿ ಮಾಡಿ ಕಾರ್ಮಿಕನ ಮರಣವಾದಲ್ಲಿ, ಶಾಶ್ವತವಾದ ಅಂಗವೈಕಲ್ಯ ಅಥವಾ ತಾತ್ಕಾಲಿಕ ಅಂಗವೈಕಲ್ಯವುಂಟಾದರೆ ಅವನಿಗೆ ಯಾವ ರೀತಿ ಪರಿಹಾರ ಕೊಡಬೇಕೆಂಬುದನ್ನು ಸೂಚಿಸುತ್ತದೆ.

ನಾನು ಮೊದಲೇ ತಿಳಿಸಿದಂತೆ, ಮಾನ್ಯರೆ, ಈ ಮಸೂದೆ ಬಹಳ ಸರಳವಾದದ್ದು. ಗ್ರೇಟ್ ಬ್ರಿಟನ್ನಿನಲ್ಲಿ ಈಗಾಗಲೇ ನಡೆದಿರುವುದನ್ನು ಇದು ಅನುಕರಣೆ ಮಾಡುತ್ತದೆ, ಅಷ್ಟೆ. ಅಲ್ಲಿಯೂ ಕೂಡ ಒಬ್ಬ ಕಾರ್ಮಿಕನ ಹಕ್ಕನ್ನು ಕಾಪಾಡುವ ಉದ್ದೇಶದಿಂದ ಕಾರ್ಮಿಕನ ವೇತನಮಿತಿಯನ್ನು ೩೫೦ ಪೌಂಡ್‌ಗಳಿಂದ ೪೨೫ ಪೌಂಡ್‌ಗಳಿಗೆ ಹೆಚ್ಚಿಸಿದೆ. ಈ ಮಸೂದೆ ಬಹಳ ಸರಳವಾದ ಕ್ರಿಯೆಯಷ್ಟೇ ಅಲ್ಲ, ಇದು ವಿವಾದಾತೀತವಾದ ಒಂದು ಹೆಜ್ಜೆಯೂ ಹೌದು. ಈ ಮಸೂದೆಯ ಸೂಚನೆಗಳ ಬಗ್ಗೆ ಪ್ರಾಂತೀಯ ಸರ್ಕಾರಗಳು ಈಗಾಗಲೇ ತಮ್ಮ ಒಪ್ಪಿಗೆ ಸೂಚಿಸಿದ್ದು ತಿದ್ದುಪಡಿಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿವೆ. ಈ ಸೂಚನೆಯನ್ನು ಸ್ಥಾಯಿ ಕಾರ್ಮಿಕ ಸಮಿತಿಯ ಮುಂದೆ ತಂದಾಗ, ಸರ್ವಾನುಮತದಿಂದ ಆ ಸಮಿತಿಯ ಸದಸ್ಯರು ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಆದಕಾರಣ ಮಾನ್ಯರೆ, ಮಸೂದೆಯ ಸೂಚನೆಗಳ ಬಗ್ಗೆ ನಾನು ವಿವರವಾಗಿ ಬಣ್ಣಿಸಬೇಕಾದ ಅಗತ್ಯವಿಲ್ಲವೆಂದು ಮನಗಂಡು ಈ ಸೂಚನೆಯನ್ನು ಮಂಡಿಸುತ್ತೇನೆ.

*ಅಧ್ಯಕ್ಷರು :** ಪ್ರಶ್ನೆ ಎಂದರೆ,

"೧೯೨೩ರ ಕಾರ್ಮಿಕರ ಪರಿಹಾರ ಕಾಯಿದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಗಣಿಸಬೇಕು".

ಸೂಚನೆಯನ್ನು ಅಂಗೀಕರಿಸಲಾಗಿದೆ.

ಕಲಮು ೨ ಮತ್ತು ೩ನ್ನು ಮಸೂದೆಗೆ ಸೇರಿಸಲಾಗಿದೆ.

ಕಲಮು ೨ನ್ನು ಮಸೂದೆಗೆ ಸೇರಿಸಲಾಗಿದೆ.

ಶೀರ್ಷಿಕೆ ಮತ್ತು ಪೀಠಿಕೆಯನ್ನು ಮಸೂದೆಗೆ ಸೇರಿಸಲಾಗಿದೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಸೂಚಿಸುತ್ತೇನೆ.

"ಮಸೂದೆಯನ್ನು ಅಂಗೀಕರಿಸಬಹುದು"

---

* ಲೆಜಿಸ್ಲೇಟಿವ್ ಡಿಬೇಟ್ಸ್ (ಕೇಂದ್ರ), ಸಂ. ೩, ಸಂಖ್ಯೆ ೧೨, ಫೆಬ್ರವರಿ ೮, ೧೯೪೬, ಪು. ೭೧೫

** ಅದೇ ಪು. ೭೧೬.

**ಅಧ್ಯಕ್ಷರು : "ಮಸೂದೆಯನ್ನು ಅಂಗೀಕರಿಸಬಹುದು"**

* * *

**ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಮೊದಲೇ ತಿಳಿಸಿದಂತೆ ತೊಂದರೆಗೀಡಾದ ಒಂದು ವರ್ಗದ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡುವ ಸಲುವಾಗಿ ಈ ಮಸೂದೆಯನ್ನು ತಂದಿರುವುದು. ಇದಕ್ಕಿಂತ ಹೆಚ್ಚಿನದನ್ನು ಎಸಗುವ ಉದ್ದೇಶವನ್ನು ಈ ಮಸೂದೆ ಹೊಂದಿಲ್ಲ. ಈ ಘಟ್ಟದಲ್ಲಿ ನಾನು ಹೇಳಬಹುದಾದದ್ದೇನೆಂದರೆ, ನನ್ನ ಗೌರವಾನ್ವಿತ ಸ್ನೇಹಿತರು ಪ್ರಸ್ತಾಪಿಸಿರುವ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಲು ಸಾಧ್ಯವೆ ಎಂದು ನೋಡುವುದು. ಈ ಸಭೆಗೆ ನಾನು ಮತ್ತೊಂದು ಮಸೂದೆಯ ಬಗ್ಗೆ ತಿಳಿಸಬಯಸುತ್ತೇನೆ; ಆ ವಿಷಯ ರಾಜ್ಯ ವಿಮೆಗೆ ಸಂಬಂಧಿಸಿದ್ದು; ಈ ವಿಮೆಯು ಅನಾರೋಗ್ಯ ವಿಮೆ, ಕಾರ್ಮಿಕರ ಪರಿಹಾರ, ಬಾಣಂತಿತನದ ಸಹಾಯ ಇವುಗಳನ್ನೊಳಗೊಂಡಿದ್ದು ಇದು ಹೆಚ್ಚು ಕಡಿಮೆ ಇಂಗ್ಲೆಂಡಿನಲ್ಲಿರುವ ಸಾಮಾಜಿಕ ಭದ್ರತಾ ಕ್ರಮಗಳನ್ನು ಹೋಲುತ್ತದೆ. ನನ್ನ ಸ್ನೇಹಿತರು ಈಗಾಗಲೇ ಗಮನಿಸಿರುವಂತೆ ಒಂದು ಇಡೀ ಗಂಟಿನಲ್ಲಿ ಕೊಡುವ ಹಣವನ್ನು ಕಂತಿನ ಪ್ರಕಾರ ಕೊಡುವುದರಲ್ಲಿ ಹೆಚ್ಚು ಕ್ಷೇಮವಿದೆ.

**ಅಧ್ಯಕ್ಷರು :** ಪ್ರಶ್ನೆಯೆಂದರೆ **"**ಮಸೂದೆಯನ್ನು ಅಂಗೀಕರಿಸಬಹುದು**"**.

ಸೂಚನೆಯನ್ನು ಅಂಗೀಕರಿಸಲಾಗಿದೆ.

## ೫೭
## ಭಾರತೀಯ ಗಣಿಗಳ (ತಿದ್ದುಪಡಿ) ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ ನಾನು ಹೀಗೆ ಸೂಚಿಸುತ್ತೇನೆ.

"೧೯೨೩ರ ಭಾರತೀಯ ಗಣಿಗಳ ಕಾಯಿದೆಯನ್ನು ತಿದ್ದುಪಡಿ ಮಾಡಲು ಮಸೂದೆಯನ್ನು ಅಂಗೀಕರಿಸುವುದು."

ಈ ಮಸೂದೆ ಬಹಳ ಸರಳವಾದ ಕ್ರಮವಾಗಿದೆ.

[ಈ ಹಂತದಲ್ಲಿ **ಅಧ್ಯಕ್ಷರು** ತೆರವು ಮಾಡಿದ ಪೀಠದಲ್ಲಿ **ಉಪಾಧ್ಯಕ್ಷರು (ಸರ್ ಮೊಹಮ್ಮದ್ ಯಾಮಿನ್ ಖಾನ್)** ಕುಳಿತುಕೊಂಡರು]

ಈ ಮಸೂದೆಯ ಮುಖ್ಯ ಉದ್ದೇಶವೆಂದರೆ ಗಣಿಮಾಲೀಕರು ಕಾರ್ಮಿಕರಿಗೆ ಗಣಿಗಳ ಸಮೀಪದಲ್ಲಿ ಸ್ನಾನಕ್ಕೆ ವ್ಯವಸ್ಥೆ ಮಾಡಿಕೊಡುವುದು. "ಈ ಸ್ನಾನದ ಮನೆಗಳಲ್ಲಿ ಗಂಡಸರಿಗೆ ಸಿಂಪರಣೆ ಸ್ನಾನದ ಶವರ್‌ಗಳಿರಬೇಕು ಹಾಗೂ ಮಹಿಳಾ ಕಾರ್ಮಿಕರಿಗೂ ಸಹ ಪ್ರತ್ಯೇಕವಾದ ಸ್ನಾನದ ಮನೆಗಳಿರಬೇಕು; ಅಂಥ ಸ್ಥಳಗಳ ಮತ್ತು ಕೊಠಡಿಗಳ ಗುಣಮಟ್ಟವನ್ನು ಯಾವುದೇ ಒಂದು ಗೊತ್ತಾದ ಗಣಿಯಲ್ಲಿ ಕೆಲಸಮಾಡುವ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, (ಕೇಂದ್ರ), ಸಂಪುಟ ೧ – ಸಂಖ್ಯೆ ೧೩, ೮ನೇ ಫೆಬ್ರವರಿ ೧೯೪೬, ಪು. ೭೧೬.

ಸ್ತ್ರೀಯರು ಮತ್ತು ಪುರುಷರಿಗೆ ಸಂಬಂಧಿಸಿದಂತೆ, ಕಾಪಾಡಿಕೊಳ್ಳಬೇಕು". ಗಣಿ ಪಕ್ಕದಲ್ಲಿ ಸ್ನಾನದ ಮನೆಗಳನ್ನು ನಿರ್ಮಿಸಬೇಕೆಂಬುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಗಣಿ ಕೆಲಸಗಾರನ ಆತ್ಮಗೌರವವನ್ನು ಇದು ಹೆಚ್ಚಿಸುತ್ತದೆ ಮತ್ತು ಸಾಧ್ಯವಾದಷ್ಟೂ ಮಟ್ಟಿಗೆ ಆತ ಶುಚಿಯಾಗಿ ಮನೆಗೆ ಮರಳಬೇಕು, ಶುಚಿಯಾದ ಬಟ್ಟೆ ತೊಡಬೇಕು. ಕಲ್ಲಿದ್ದಲು ಗಣಿ ಕಲ್ಯಾಣ ನಿಧಿಯನ್ನು ನೋಡಿಕೊಳ್ಳುವುದು ಕಲಿದ್ದಲು ಗಣಿ ಮಾಲೀಕರ ಜವಾಬ್ದಾರಿಯೆಂದು ಸರ್ಕಾರವು ಸರ್ವಾನುಮತದಿಂದ ತೀರ್ಮಾನಿಸಿದೆ. ಇದಕ್ಕೆ ಚಾಲನೆಯನ್ನು ಕೊಡುವ ಸಲುವಾಗಿ, ಭಾರತ ಸರ್ಕಾರದ ಗಣಿಗಳ ಕಾಯಿದೆ ಭಾಗ ೩೦ರಲ್ಲಿ ಕಾಣಿಸಿರುವಂತೆ ಮಸೂದೆ ಅವಕಾಶ ಮಾಡಿಕೊಡುತ್ತದೆ. ಈ ಮಸೂದೆಯ ಮುಖ್ಯ ಉದ್ದೇಶ ಇದೇ ಆಗಿದೆ.

೩೧ನೇ ವಿಭಾಗದಲ್ಲಿ ವಿಧಿಸಿರುವಂತೆ ಮಸೂದೆಯು ಕಲ್ಲಿದ್ದಲು ಗಣಿ ಕಾಯಿದೆಯ ಕಾನೂನುಗಳಿಂದ ಸರ್ಕಾರವನ್ನು ವಿನಾಯಿತಿಗೊಳಿಸುತ್ತದೆ. ೩೧ನೇ ವಿಭಾಗವು ಕಾಯಿದೆಯಡಿ ಮಾಡಲ್ಪಟ್ಟ ಯಾವುದೇ ಕಾನೂನು ಮೊದಲು ಪ್ರಕಟವಾಗಿ ನಂತರ ಅಂಗೀಕಾರವಾಗಬೇಕೆಂದು ತಿಳಿಸುತ್ತದೆ. ಮಸೂದೆಯ ನಿಬಂಧನೆಗಳಡಿಯಲ್ಲಿ ಮಾಡಲು ಉದ್ದೇಶಿಸಿರುವ ಕಾನೂನುಗಳನ್ನು ೩೧ನೇ ವಿಭಾಗದಲ್ಲಿ ಪ್ರಕಟವಾಗಿರುವ ನಿಬಂಧನೆಯ ರೀತ್ಯಾ ವಿನಾಯಿತಿಗೊಳಿಸಿದ್ದೇವೆ. ಈ ರೀತಿ ವಿನಾಯಿತಿಯನ್ನು ನಾವು ಕೊಟ್ಟಿರುವ ಕಾರಣವೆಂದರೆ ಈ ತೊಡಕನ್ನು ನಿವಾರಿಸುವುದು ಅತ್ಯಂತ ಜರೂರೆಂದು ನಾವು ತಿಳಿಯುವುದರ ಜೊತೆಗೆ, ಇದನ್ನು ವಿಳಂಬಮಾಡದೆ ತುರ್ತಾಗಿ ನೆರವೇರಿಸಬೇಕೆಂದೂ ಸಹ ನಾವು ತಿಳಿಯುತ್ತೇವೆ. ಗಣಿ ಸಮೀಪದಲ್ಲಿ ಸ್ನಾನದ ಮನೆಗಳನ್ನು ತೆರೆಯುವ ವಿಷಯದಲ್ಲಿ ಸರ್ಕಾರ ಎಷ್ಟು ಕಳಕಳಿ ಹೊಂದಿದೆಯೆಂದರೆ ಮುಂದಿನ ಹನ್ನೆರಡು ತಿಂಗಳುಗಳ ಒಳಗಾಗಿ ಸ್ನಾನದ ಮನೆಗಳನ್ನು ಗಣಿಗಳ ಸಮೀಪ ನಿರ್ಮಿಸುವೆವೆಂದು ಗಣಿ ಮಾಲೀಕರು ಮುಂದೆ ಬಂದದ್ದೇ ಆದರೆ ಇವುಗಳ ನಿರ್ಮಾಣಕ್ಕೆ ತಗಲುವ ಬಂಡವಾಳ ಖರ್ಚಿನ ಶೇಕಡ ೧೦ ರಷ್ಟನ್ನು ತಾನೇ ವಹಿಸಿಕೊಳ್ಳಲು ಸರ್ಕಾರ ತೀರ್ಮಾನಿಸಿದೆ. ಇದು ಸಾಧ್ಯವಾಗುವಂತೆ ನೋಡಿಕೊಳ್ಳಲು ೨೧ನೇ ವಿಭಾಗದಲ್ಲಿ ಕಾಣಿಸಿರುವ ನಿಬಂಧನೆಗೆ ಒಳಪಡದಂತೆ ಕಾರ್ಯಕ್ರಮ ರೂಪಿಸಲಾಗುವುದು. ಈ ಮಸೂದೆಯು ಎಷ್ಟು ಪ್ರಮುಖವೂ, ವಿವಾದಾತೀತವಾದುದೂ, ಸರಳವೂ ಆಗಿದೆಯೆಂದರೆ ಸಭೆಯು ಯಾವುದೇ ಸಮಸ್ಯೆಯಿಲ್ಲದೆ ಇದನ್ನು ಅಂಗೀಕರಿಸುವುದೆಂಬುದು ನಮ್ಮ ತಿಳಿವಳಿಕೆ – ಮಾನ್ಯರೆ, ನಾನು ಸೂಚಿಸುತ್ತೇನೆ.

**ಉಪಾಧ್ಯಕ್ಷರು :** ಸೂಚನೆ ಮಂಡಿಸಲಾಗಿದೆ.

"೧೯೨೩ರ ಭಾರತೀಯ ಗಣಿಗಳ ಕಾಯಿದೆ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಪರಿಗಣಿಸಬೇಕು."

* * *

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಗಣಿ ಮಾಲೀಕರೊಬ್ಬರು ಹನ್ನೆರಡು ತಿಂಗಳ ಒಳಗಾಗಿ ಸ್ನಾನದ ಮನೆಯನ್ನು ನಿರ್ಮಿಸಿದ ಪಕ್ಷದಲ್ಲಿ ನಾವು ಅವರಿಗೆ ಈ ಬಗೆಯಾಗಿ ಉತ್ತೇಜನ ಕೊಡುತ್ತಿದ್ದೇವೆ; ಈ ಪ್ರಕ್ರಿಯೆ ಅತ್ಯಂತ ಚುರುಕಾಗಿ ನಡೆಯಲಿ ಎಂಬುದೇ ನಮ್ಮ ಉದ್ದೇಶ. ಹಾಗೆ ಹನ್ನೆರಡು ತಿಂಗಳ ಒಳಗಾಗಿ ಕಟ್ಟದೆ ಹೋದ ಪಕ್ಷದಲ್ಲಿ ಮಾಲೀಕರು ಪೂರ್ತಿ ಖರ್ಚನ್ನು ತಾವೇ ಭರಿಸಿಕೊಳ್ಳಬೇಕಾಗುತ್ತದೆ, ಅವರಿಗೆ ಯಾವ ಸಹಾಯವೂ ಲಭಿಸುವುದಿಲ್ಲ.

**ಪಂಡಿತ್ ಗೋವಿಂದ್ ಮಾಳವೀಯ :** ಹನ್ನೆರಡು ತಿಂಗಳ ಒಳಗಾಗಿ ಗಣಿ ಮಾಲೀಕರು ಸ್ನಾನದ ಮನೆಗಳನ್ನು ನಿರ್ಮಿಸಬೇಕೆಂದು ಆದೇಶ ಹೊರಡಿಸಿದರೆ ಇದು ಸಾಧ್ಯವಾಗುವುದಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾವು ಸ್ವಲ್ಪ ಕಾಲಾವಕಾಶ ಕೊಡಬೇಕು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಸ್ನಾನದ ಮನೆ ನಿರ್ಮಾಣದ ವಿಷಯವಾಗಿ ನಮ್ಮ ಗೌರವಾನ್ವಿತ ಸ್ನೇಹಿತರಾದ ಸಿದ್ದಿಕಿಯವರು – ಸಭೆಯಲ್ಲಿ ಅವರು ಈಗ ಇಲ್ಲ – ಇಷ್ಟೊಂದು ಗಾಬರಿಯಾಗುವರೆಂದು ನಾನು ಭಾವಿಸಿರಲಿಲ್ಲ. ಸ್ನಾನದ ಮನೆಗಳು ಇರಬೇಕೆ ಬೇಡವೇ ಎಂಬ ಪ್ರಶ್ನೆ ಕೇವಲ ಸರ್ಕಾರಕ್ಕೆ ಸಂಬಂಧಿಸಿದ ವಿಲಕ್ಷಣವಾದ ಸಮಸ್ಯೆಯೇನೂ ಅಲ್ಲ. ನಾವೀಗಾಗಲೇ ಸಭೆಯ ಗಮನಕ್ಕೆ ತಂದಿರುವಂತೆ ಸಲಹಾ ಸಮಿತಿಯೊಂದನ್ನು ನಾವು ನೇಮಿಸಿದ್ದೇವೆ. ಇದರಲ್ಲಿ ಗಣಿ ಕೆಲಸಗಾರರು, ಗಣಿ ಮಾಲೀಕರು, ಬಂಗಾಳ ಮತ್ತು ಬಿಹಾರ ಸರ್ಕಾರಗಳ ಪ್ರತಿನಿಧಿಗಳು ಇರುತ್ತಾರೆ. ಗಣಿ ಕೆಲಸಗಾರರ ಕಲ್ಯಾಣ ನಿಧಿ ಎಂಬ ಸಂಸ್ಥೆಯ ಬಗ್ಗೆ ಸರ್ಕಾರಕ್ಕೆ ಇವರು ಸಲಹೆ ನೀಡುತ್ತಾರೆ. ಸ್ನಾನದ ಮನೆಗಳ ನಿರ್ಮಾಣದ ವಿಷಯವನ್ನು ಈ ಸಮಿತಿಯ ಮುಂದಿಡಲಾಯಿತು; ಈ ಸಭೆಗೆ ನಾನು ತಿಳಿಸಬಯಸುವುದೇನೆಂದರೆ ಈ ಸಮಿತಿಯಲ್ಲಿ ಕೇವಲ ಗಣಿ ಕೆಲಸಗಾರರ ಹೆಣ್ಣಾಳುಗಳು ಮತ್ತು ಗಂಡಾಳುಗಳು ಸೇರಿ – ಪ್ರತಿನಿಧಿಗಳಷ್ಟೆ ಇರುವುದಿಲ್ಲ, ಜೊತೆಗೆ ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಇರುತ್ತಾರೆ.

ನನಗನ್ನಿಸುವಂತೆ, ಗಣಿ ಕೆಲಸಗಾರರು ತಮ್ಮನ್ನು ಶುಚಿಗೊಳಿಸುವುದಕ್ಕೆ ಹೆಚ್ಚು ಅನುಕೂಲಕರವಾದದ್ದೆಂದರೆ 'ಶವರಬಾತ್' ಅಥವಾ ಸಿಂಪರಣೆ ಸ್ನಾನದ ಮನೆಗಳು; ನಲ್ಲಿ ಕೆಳಗೆ ಸ್ನಾನ ಮಾಡುವುದರಿಂದ ಅಥವಾ ತೊಟ್ಟಿ ನೀರಿನಲ್ಲಿ ಮುಳುಗುವುದರಿಂದ ಹೆಚ್ಚು ಪ್ರಯೋಜನವಾಗಲಾರದು. ಸರ್ಕಾರ ಈ ಸಿಂಪರಣೆ ಸ್ನಾನದ ಪೂರೈಕೆಯನ್ನು ಕೈಗೊಂಡದ್ದಕ್ಕೆ ಇನ್ನೊಂದು ಪ್ರೇರಣೆಯೂ ಇದೆ; ಅದೇನೆಂದರೆ, ದಿಗ್‌ಬಾಯ್‌ನ ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ ನಿಯಮಿತದ ಅನುಭವ. ಸಿಂಪರಣೆ ಸ್ನಾನದ ವ್ಯವಸ್ಥೆಯನ್ನು ಅಲ್ಲಿ ತುಂಬಾ ವರ್ಷಗಳ ಹಿಂದೆಯೇ ಮಾಡಿದ್ದಾರೆ; ನಮಗೆ ಸಮಾಧಾನ ತಂದ ವಿಷಯವೆಂದರೆ ಯಾವುದೇ ತಂಟೆ ತಕರಾರಿಲ್ಲದಿರುವುದು. ಇನ್ನು ಮೈಸಾಬೂನಿಗೆ ಸಂಬಂಧಿಸಿದ ವಿಷಯ; ಮೈಸಾಬೂನನ್ನು ಕೆಲಸಗಾರರಿಗೆ ಕೊಡಮಾಡಲು ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ, ಸಭೆಗೆ ಆ ಬಗ್ಗೆ ಯಾವುದೇ ಆತಂಕ ಇರಲಾರದು.

ಇದರಿಂದ ಗೌರವಾನ್ವಿತ ಸದಸ್ಯರಿಗೆ ಸಮಾಧಾನವಾಗುವುದೆಂದು ತಿಳಿಯುವೆ. ಗೌರವಾನ್ವಿತ ಸದಸ್ಯರೊಬ್ಬರು ಇದು ಕೇವಲ ಘೋಷಣೆ ಆದರೆ ಯಾವುದೇ ವಿಧವಾದ ದಂಡವಿರುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸದರಿ ಗೌರವಾನ್ವಿತ ಸದಸ್ಯರು ೩ನೇ ಖಂಡವನ್ನು ಗಮನಿಸಿದ್ದೇ ಆದರೆ ಅವರಿಗೆ ತಿಳಿಯುತ್ತದೆ ಅಲ್ಲಿ ದಂಡ ವಿಧಿಸುವುದಕ್ಕೆ ಅವಕಾಶವಿದೆಯೆಂದು.

**ಪ್ರೊ॥ ಎನ್.ಜಿ. ರಂಗಾ :** ಮಹಿಳೆಯರಿಗೆ ಸಂಬಂಧಿಸಿದಂತೆ ಒಂದು ಸಣ್ಣ ಸಮಸ್ಯೆ ಇದೆ. ಅವರು ತಮ್ಮ ತಲೆಯನ್ನು ಬರೀ ನೀರಿನಿಂದ ತೊಳೆಯಲು ಇಷ್ಟಪಡುವುದಿಲ್ಲ; ಅವರಿಗೆ ಏನಾದರೂ ಎಣ್ಣೆ ಬೇಕಾಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರಿಗೆ ಟೊಪ್ಪಿಗೆಗಳನ್ನು ಬೇಕಾದರೆ ನಾವು ಕೊಡಬಹುದು.

**ಉಪಾಧ್ಯಕ್ಷರು :** ಪ್ರಶ್ನೆಯೆಂದರೆ,

"೧೯೪೩ರ ಭಾರತೀಯ ಗಣಿಕಾಯಿದೆಯ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಈಗ ಪರಿಗಣಿಸಬಹುದು".

ಈ ಸೂಚನೆಯನ್ನು ಅಂಗೀಕರಿಸಲಾಯಿತು.

# ೫೮
# ಕಾರ್ಖಾನೆಗಳ (ತಿದ್ದುಪಡಿ) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯ ಅಧ್ಯಕ್ಷರೆ, ನಾನು ಹೀಗೆ ಸೂಚಿಸುತ್ತೇನೆ :

**"**೧೯೨೪ನೇ ಕಾರ್ಖಾನೆಗಳ ಕಾಯಿದೆಯ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಪರಿಗಣಿಸಬೇಕಾಗಿ ಸೂಚನೆ**"**.

ಒಟ್ಟಿಗೆ ಮಸೂದೆಯಲ್ಲಿ ಏಳು ಕಲಮುಗಳಿವೆ. ಆದರೆ ಈ ಏಳು ಕಲಮುಗಳಲ್ಲಿ ಪ್ರಧಾನವಾದುವುಗಳು ಎರಡು. ಅವೆಂದರೆ ಮಸೂದೆಯಲ್ಲಿರುವ ೨ನೆಯ ಮತ್ತು ೭ನೆಯವು. ಇವೆರಡೂ ಕಲಮುಗಳು ಎರಡು ಪ್ರತ್ಯೇಕವಾದ ಪ್ರಶ್ನೆಗಳನ್ನು ಎತ್ತುತ್ತವೆ. ಎರಡನೆಯ ಕಲಮು ಕೆಲಸದ ಕಡಿತದ ಬಗ್ಗೆ ಪ್ರಸ್ತಾಪಿಸಿದರೆ ಏಳನೆಯ ಕಲಮು ಹೆಚ್ಚುವರಿ ಕಾಲ(ಓವರ್‌ಟೈಮ್)ಕ್ಕೆ ಯಾವ ದರದಲ್ಲಿ ಹಣ ಕೊಡಬೇಕೆಂದು ಚರ್ಚಿಸುತ್ತದೆ.

ಮೊದಲು ಕೆಲಸದ ಕಾಲದ ಕಡಿತದ ಪ್ರಶ್ನೆಯನ್ನು ನಾವು ತೆಗೆದುಕೊಳ್ಳೋಣ. ಸದ್ಯದ ಪರಿಸ್ಥಿತಿಯ ಬಗ್ಗೆ ನಾನು ಸಭೆಯ ಗಮನ ಸೆಳೆಯಲಿಚ್ಛಿಸುತ್ತೇನೆ. ಕಾರ್ಖಾನೆಗಳ ಕಾಯಿದೆಯಲ್ಲಿ ೨೪ನೇ ಖಂಡದ ಪ್ರಕಾರ ನಿರಂತರವಲ್ಲದ ಅಥವಾ ಋತುಮಾನದ ಕಾರ್ಖಾನೆಗಳಲ್ಲಿ ವಾರಕ್ಕೆ ೬೦ ಘಂಟೆಗಳೆಂದೂ ನಿಗದಿಗೊಳಿಸಲಾಗಿದೆ. ಮಸೂದೆಯ ೨ನೇ ಕಲಮಿನ ಪ್ರಕಾರ ૩೪ನೇ ಖಂಡದಲ್ಲಿ ನಿಗದಿಯಾಗಿರುವಂತೆ ನಿರಂತರ ಕಾರ್ಖಾನೆಗಳಲ್ಲಿ ವಾರಕ್ಕೆ ೪೮ ಘಂಟೆಗಳೆಂತಲೂ, ಋತುಮಾನದಲ್ಲಿ ನಡೆಯುವ ಕಾರ್ಖಾನೆಗಳಲ್ಲಿ ವಾರಕ್ಕೆ ೫೪ ಘಂಟೆಗಳೆಂತಲೂ ತಿಳಿಸಿದೆ. ಸರ್ಕಾರ ಈ ತಿದ್ದುಪಡಿಯನ್ನು ತರಲು ಉದ್ದೇಶಿಸಿದ್ದು ಏಕೆ ಎಂಬುದನ್ನು ಈ ಸಭೆಗೆ ತಿಳಿಸಬೇಕಾಗಿದೆ.

ಈ ಸಭೆಯ ಕೆಲವು ಸದಸ್ಯರು ನೆನಪು ಮಾಡಿಕೊಳ್ಳಬಹುದಾದಂತೆ ಕಾರ್ಖಾನೆಗಳಲ್ಲಿ ಕೆಲಸದ ಕಾಲಕ್ಕೆ ಸಂಬಂಧಿಸಿದಂತೆ ೧೯೧೯ನೇ ಇಸವಿಯಲ್ಲಿ ವಾಷಿಂಗ್‌ಟನ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಮೊದಲ ಬಾರಿ ಪ್ರಸ್ತಾಪಿಸಲಾಯಿತು. ಕಾರ್ಖಾನೆ ದುಡಿಮೆಗೆ ವಾರಕ್ಕೆ ೪೦ ಘಂಟೆಗಳೆಂದು ನಿಗದಿಗೊಳಿಸಲಾಯಿತಾದರೂ ಭಾರತದಲ್ಲಿ ಪ್ರಚಲಿತವಿದ್ದ ವಿಶಿಷ್ಟ ಪರಿಸ್ಥಿತಿಯನ್ನು ಗಮನಿಸಿ ೬೦ ಘಂಟೆಗಳಿಗೆ ಏರಿಸಲಾಯಿತು. ತತ್ಪರಿಣಾಮವಾಗಿ ಭಾರತ ಸರ್ಕಾರವು ೬೦ ಘಂಟೆಗಳ ಅವಧಿಯನ್ನು ನಿಗದಿಗೊಳಿಸಿತು. ಈ ವಿಷಯವು ಮುಂದೆ 'ಕಾರ್ಮಿಕ ರಾಯಲ್ ಆಯೋಗ'ದ ಗಮನಕ್ಕೆ ಬಂದು ಭಾರತ ಸರ್ಕಾರ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ನಿಗದಿಪಡಿಸಿದ ಅವಧಿಯನ್ನು ಸಂಪೂರ್ಣವಾಗಿ ಸ್ವೀಕರಿಸಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟಿತು, ಆದಾಗ್ಯೂ ಕಾರ್ಮಿಕರ ದುಡಿಮೆಯನ್ನು ವಾರಕ್ಕೆ ೫೪ ಘಂಟೆಗಳಿಗೆ ನಿಗದಿಗೊಳಿಸಿತು. ಭಾರತ ಸರ್ಕಾರ ಆ ಶಿಫಾರಸನ್ನು ಒಪ್ಪಿಕೊಂಡಿತಲ್ಲದೆ ಸದ್ಯದ ૩೪ನೇ ಖಂಡದಲ್ಲಿ ನಮೂದಾಗಿರುವಂತೆ ೧೯೨೪ರಲ್ಲಿ ತಿದ್ದುಪಡಿ ಮಸೂದೆಯೊಂದನ್ನು ಹೊರಡಿಸಿ ಅಂಗೀಕರಿಸಲಾಯಿತು. ವಾಷಿಂಗ್‌ಟನ್ ಸಮ್ಮೇಳನದಲ್ಲಿ ಪ್ರಸ್ತಾಪವಾದಂತೆ ಕಾರ್ಮಿಕರಿಗೆ ಹೆಚ್ಚಿನ ವಿರಾಮವನ್ನು ಕೊಡುವುದು ಸೂಕ್ತವೆಂದು ಭಾರತ ಸರ್ಕಾರ ತಿಳಿಯುವುದರಿಂದ ಈ ಮಸೂದೆಯನ್ನು ಮುಂದೆ ತಂದಿದ್ದೇವೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೧–ಸಂಖ್ಯೆ ೭, ೨೧ನೇ ಫೆಬ್ರವರಿ ೧೯೪೬, ಪು. ೧૩೦೪–೬.

ಈ ವಿಷಯವನ್ನು ಸರ್ಕಾರ ತುರ್ತಾಗಿ ಪರಿಗಣಿಸಿದ ಕಾರಣವೇನೆಂದು ನಾನು ಪುನರುಚ್ಚರಿಸುವ ಅಗತ್ಯವಿಲ್ಲ. ಆದರೆ ಸರ್ಕಾರ ಈ ವಿಷಯವನ್ನು ಪ್ರಸ್ತಾಪಿಸುವ ಹಿನ್ನೆಲೆಯನ್ನು ಸ್ವಲ್ಪದರಲ್ಲಿ ತಿಳಿಸುವುದು ಸೂಕ್ತ. ನಮ್ಮ ದೇಶದ ಹವಾಮಾನ ಪರಿಸ್ಥಿತಿಯನ್ನು ಗಮನಿಸಿದವರಿಗೆ ಮನದಟ್ಟಾಗುವ ಅಂಶವೆಂದರೆ ಬೇರೆ ದೇಶಗಳಲ್ಲಿನ ಕಾರ್ಮಿಕರ ಕೆಲಸದ ಅವಧಿಗಿಂತ ಇಲ್ಲಿ ಕಾರ್ಮಿಕರಿಗೆ ಕಡಿಮೆ ಅವಧಿ ಇರಬೇಕಾದದ್ದು ಅಗತ್ಯ. ಇನ್ನೊಂದು ಕಾರಣವೂ ಕೂಡ ಇದೆ, ಅದೇನೆಂದರೆ, ಸುಗ್ರೀವಾಜ್ಞೆಯ ೮ನೇ ಖಂಡದಲ್ಲಿ ನಮೂದಾಗಿರುವಂತೆ ಕಾರ್ಖಾನೆ ಕಾಯಿದೆಯಲ್ಲಿ ಪ್ರಾಂತೀಯ ಸರ್ಕಾರಗಳು ಸೂಕ್ತವಾದ ರಿಯಾಯಿತಿ ಮಾಡಿಕೊಳ್ಳಬಹುದಾದ ಅವಕಾಶವನ್ನು ಕಲ್ಪಿಸಲಾಗಿದೆ; ಯುದ್ಧಕಾಲದಲ್ಲಿ ಹೆಚ್ಚುವರಿ ಕೆಲಸವಿರುವುದರಿಂದ ಕಾರ್ಮಿಕರಿಂದ ಹೆಚ್ಚು ಕಾಲಾವಧಿ ದುಡಿಮೆ ಮಾಡುವ ಅವಕಾಶವೂ ಸೇರಿದೆ; ಆದ್ದರಿಂದ ಕಾರ್ಮಿಕರಿಗೆ ಈಗ ಹೆಚ್ಚಿನ ವಿರಾಮ ಮತ್ತು ಸೌಲಭ್ಯ ಕಲ್ಪಿಸಿಕೊಡಬೇಕಾದ ಅಗತ್ಯವೂ ಕೂಡ ಇದೆ. ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿರುವ ಸಂದರ್ಭದಲ್ಲಿ ಮತ್ತೆ ಅವರನ್ನು ವಾಪಸ್ಸು ತೆಗೆದುಕೊಳ್ಳುವುದೂ ಸೇರಿದಂತೆ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಇದರಿಂದ ಸಾಧ್ಯವಾಗುವುದೆಂದು ತಿಳಿವಳಿಕೆ. ಪ್ರಸ್ತುತ ಮಸೂದೆಯಲ್ಲಿ ನಿಗದಿಗೊಳಿಸಿರುವಂತೆ ೪೮ ಘಂಟೆಗಳು ಅಥವಾ ೫೪ ಘಂಟೆಗಳು......

**ಸಾರ್ಜೆಂಟ್ ಎನ್.ವಿ. ಗಾಡ್ಗೀಳ್ (ಬೊಂಬಾಯಿ ಕೇಂದ್ರ ವಿಭಾಗ** : ಮಹಮದೀಯರಲ್ಲದವರು – ಗ್ರಾಮಾಂತರ) ೪೦ಕ್ಕೆ ನಿಗದಿಗೊಳಿಸಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** .............. ಇದು ಸರ್ವಸಮ್ಮತ ಅನುಷ್ಠಾನಕ್ಕೆ ತರುವುದು ಸಾಧ್ಯವಾದರೆ ಈಗ ನಾವು ನೇಮಿಸಿಕೊಂಡಿರುವ ಮಂದಿಗಿಂತ ಹೆಚ್ಚಿನ ಸಂಖ್ಯೆಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಸಮರೋತ್ತರದ ಸಮಸ್ಯೆಗಳನ್ನು ಸ್ವಲ್ಪಮಟ್ಟಿಗೆ ಪರಿಹರಿಸಿಕೊಳ್ಳುವಂತಾಗುತ್ತದೆ. ಮೂಲಭೂತ ಬದಲಾವಣೆಯ ಆಲೋಚನೆ ಇದೆಂದು ಕೆಲವು ಸದಸ್ಯರಿಗಾದರೂ ಭಾವನೆಯಾಗಬಹುದು. ಇಂಥ ಅಭಿಪ್ರಾಯವನ್ನು ಹೋಗಲಾಡಿಸುವುದು ನನ್ನ ಉದ್ದೇಶವಾಗಿದೆ. ಈಗ ಪ್ರಚಲಿತವಿರುವ ಪರಿಸ್ಥಿತಿಯಲ್ಲಿ ಸಂಪೂರ್ಣವಾದ ಬದಲಾವಣೆಗಳನ್ನು ತರಲು ಮಸೂದೆ ಪ್ರಯತ್ನಿಸುತ್ತಿಲ್ಲ; ಜೊತೆಗೆ ನಿರಂತರ ಕಾರ್ಖಾನೆಗಳಲ್ಲಿ ವಾರಕ್ಕೆ ೪೮ ಘಂಟೆಗಳು ಮತ್ತು ಕೆಲವು ಋತುಗಳಲ್ಲಿ ಮಾತ್ರ ನಡೆಯುವ ಫ್ಯಾಕ್ಟರಿಗಳಲ್ಲಿ ವಾರಕ್ಕೆ ೫೪ ಘಂಟೆಗಳು ಎಲ್ಲ ಕಡೆ ಸರ್ವೇಸಾಮಾನ್ಯವಾಗಿರುವುದನ್ನು ಗಮನಿಸಬೇಕು. ೧೯೩೯ನೆಯ ಇಸವಿಯಲ್ಲಿ ನನಗೆ ಲಭ್ಯವಾಗಿರುವ ಮಾಹಿತಿಯ ಪ್ರಕಾರ – ಇದು ನಿರಂತರ ಕಾರ್ಖಾನೆಗಳಿಗೆ ಸಂಬಂಧಿಸಿದ್ದು – ಇದ್ದ ಕಾರ್ಖಾನೆಗಳ ಸಂಖ್ಯೆ ೮,೬೪೪. ಇವುಗಳಲ್ಲಿ ಸುಮಾರು ೨,೩೧೫ ಫ್ಯಾಕ್ಟರಿಗಳು ವಾರಕ್ಕೆ ೪೮ ಘಂಟೆ ಕೆಲಸ ಮಾಡುತ್ತಿದ್ದವು; ಅಂದರೆ ಪ್ರತಿಶತ ೨೪ ಭಾಗ ಫ್ಯಾಕ್ಟರಿಗಳು ಎಂದಾಯಿತು. ೧೯೪೦ರಲ್ಲಿ ೮,೧೧೫ರಷ್ಟು ಫ್ಯಾಕ್ಟರಿಗಳಿದ್ದು, ಇವುಗಳಲ್ಲಿ ವಾರಕ್ಕೆ ೪೮ ಘಂಟೆಗಳು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗಳ ಸಂಖ್ಯೆ ೨,೫೨೫, ಅಂದರೆ ಪ್ರತಿಶತ ೨೮. ೧೯೪೧ರಲ್ಲಿ ಇದ್ದ ಒಟ್ಟು ಫ್ಯಾಕ್ಟರಿಗಳು ೧೦,೨೬೧. ಅವುಗಳಲ್ಲಿ ೪೮ ಘಂಟೆ ಕೆಲಸ ಮಾಡುತ್ತಿದ್ದವೆಂದರೆ ೨೯೨೧, ಅಂದರೆ ಸುಮಾರು ಪ್ರತಿಶತ ೨೯. ೧೯೪೨ರಲ್ಲಿ ಇದ್ದ ಫ್ಯಾಕ್ಟರಿಗಳು ೧೦,೪೮೭. ೪೮ ಘಂಟೆ ಕೆಲಸಮಾಡುತ್ತಿದ್ದವು ೨,೬೮೭, ಅಂದರೆ ಪ್ರತಿಶತ ೨೬. ೧೯೪೩ರಲ್ಲಿ ಇದ್ದ ಒಟ್ಟು ಫ್ಯಾಕ್ಟರಿಗಳು ೧೧,೨೩೯. ೪೮ ಘಂಟೆ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗಳು ೨,೭೬೧, ಅಂದರೆ ಪ್ರತಿಶತ ೨೫ ರಷ್ಟಾಯಿತು. ೧೯೪೪ರಲ್ಲಿದ್ದ ೧೧,೮೩೫ ಫ್ಯಾಕ್ಟರಿಗಳಲ್ಲಿ ೪೮ ಘಂಟೆ ಕೆಲಸ ಮಾಡಿದವು ೩,೧೯೧, ಅಂದರೆ ಪ್ರತಿಶತ ೨೭. ಕೆಲವು ಋತುಗಳಲ್ಲಿ ಮಾತ್ರ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗಳ ಕುರಿತು ಮಾಹಿತಿ ಈ ರೀತಿ ಇದೆ. ೧೯೩೧ರಲ್ಲಿ

೬,೨೫೨ ಫ್ಯಾಕ್ಟರಿಗಳಿದ್ದವು. ಅವುಗಳಲ್ಲಿ ೨,೪೮೯ ಫ್ಯಾಕ್ಟರಿಗಳು ೫೪ ಘಂಟೆಗಳ ಕಾಲ ಕೆಲಸ ಮಾಡುತ್ತಿದ್ದವು, ಅಂದರೆ ಪ್ರತಿಶತ ೩೯ ರಷ್ಟು ಫ್ಯಾಕ್ಟರಿಗಳು. ೧೯೪೧ರಲ್ಲಿದ್ದವು ೬,೨೬೫. ಅವುಗಳಲ್ಲಿ ೨,೪೩೯–೫೪ ಘಂಟೆ ಕೆಲಸ ಮಾಡುತ್ತಿದ್ದವು. ೨೨೫೮ ಅಂದರೆ ಪ್ರತಿಶತ ೪೦ರಷ್ಟು, ೧೯೪೩ರಲ್ಲಿ ಒಟ್ಟು ೬೨೫೫, ಅದರಲ್ಲಿ ೫೪ ಘಂಟೆಯ ಆಧಾರದ ಮೇಲೆ ಕೆಲಸ ಮಾಡುತಿದ್ದವು ೨,೩೩೮, ಅಂದರೆ ಮತ್ತೆ ಪ್ರತಿಶತ ೪೦ರ ಪ್ರಮಾಣ. ೧೯೪೪ರಲ್ಲಿ ಒಟ್ಟು ಫ್ಯಾಕ್ಟರಿಗಳು ೫,೯೫೦, ಅವುಗಳಲ್ಲಿ ೨,೩೬೮–೫೪ ಘಂಟೆಯಂತೆ ದುಡಿದವು, ಅಂದರೆ ಪ್ರತಿಶತ ೪೦ರಷ್ಟು ಫ್ಯಾಕ್ಟರಿಗಳು ಹೀಗೆ ಮಾಡಿವೆ.

(ಒಬ್ಬ ಗೌರವಾನ್ವಿತ ಸದಸ್ಯರು : "ಉಳಿದವು ೫೪ ಘಂಟೆಗಳಿಗಿಂತ ಜಾಸ್ತಿ ದುಡಿದಿವೆ"). ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚಿಲ್ಲ, ಆದರೆ ಮಸೂದೆಯಲ್ಲಿ ಈಗ ನಿಗದಿಯಾಗಿರುವ ಅವಧಿಗಿಂತ ಸ್ವಲ್ಪ ಜಾಸ್ತಿ.

**ಶ್ರೀ ಶ್ರೀಪ್ರಕಾಶ (ಬನಾರಸ್ ಮತ್ತು ಗೋರಖ್‌ಪುರ ವಿಭಾಗ** : ಮಹಮದೀಯರಲ್ಲ – ಗ್ರಾಮಾಂತರ) ಉದ್ಯೋಗಕ್ಕೆ ತೆಗೆದುಕೊಂಡ ಪುರುಷರ ಸಂಖ್ಯೆ ಎಷ್ಟು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಷಯಕ್ಕೆ ನಾನು ಬರುತ್ತಾ ಇದ್ದೇನೆ. ಎಷ್ಟು ಮಂದಿ ಕೆಲಸ ಮಾಡುತ್ತಿದ್ದಾರೆಂಬ ವಿಷಯವಾಗಿ, ದುರ್ದೈವದಿಂದ, ನಮ್ಮಲ್ಲಿ ಸ್ಪಷ್ಟ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಆದರೆ ಇತ್ತೀಚೆಗೆ ಭಾರತ ಸರ್ಕಾರ ನೇಮಿಸಿದ ಮಾಹಿತಿ ಸಂಗ್ರಹಣ ಸಮಿತಿಯವರು ಒದಗಿಸಿರುವ ವರದಿಯ ಪ್ರಕಾರ ಲಭ್ಯವಿರುವ ಅಂಕಿಅಂಶ ಈ ಕೆಳಕಂಡಂತಿದೆ. ಕೆಲವು ಋತುಗಳಲ್ಲಿ ಮಾತ್ರ ಮತ್ತು ಇದಕ್ಕೆ ಅತೀತವಾಗಿ ಕೆಲಸಮಾಡುವ ಎಲ್ಲ ಕಾರ್ಖಾನೆಗಳಲ್ಲಿ ಕೆಲಸಮಾಡುವ ಒಟ್ಟು ಉದ್ಯೋಗಿಗಳ ಸಂಖ್ಯೆ, ೨೫,೨೦,೨೫೧. ೧೯೪೫ರ ಈ ಸಂಖ್ಯೆ ಅತ್ಯಂತ ಇತ್ತೀಚಿನದು ಎನ್ನಬೇಕು. ೪೮ ರಿಂದ ೫೪ ಘಂಟೆಗಳವರೆಗೆ ಕೆಲಸ ಮಾಡುವ ಉದ್ಯೋಗಿಗಳ ಸಂಖ್ಯೆ ೯,೪೭,೦೦೦ ಅಂದರೆ ಒಟ್ಟು ಸಂಖ್ಯೆಯಲ್ಲಿ ಪ್ರತಿಶತ ೩೭. ಆದಕಾರಣ ನಿರಂತರ ಫ್ಯಾಕ್ಟರಿಗಳು ಮತ್ತು ಕೆಲವು ಋತುಗಳಲ್ಲಿ ಮಾತ್ರ ನಡೆಯುವ ಫ್ಯಾಕ್ಟರಿಗಳಲ್ಲಿ ಬಹುತೇಕ ಈಗಾಗಲೇ ಮಸೂದೆಯಲ್ಲಿ ನಿಗದಿಪಡಿಸಿರುವ ಗರಿಷ್ಠ ಕಾಲಾವಧಿಗೆ ತಕ್ಕಂತೆ ಕೆಲಸ ಮಾಡುತ್ತಿರುವುದರಿಂದ ಮಸೂದೆಯಿಂದ ಮೂಲಭೂತವಾದ ಬದಲಾವಣೆ ತರಲು ಯೋಚಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಮಸೂದೆಯನ್ನು ಟೀಕಿಸುವ ಗುಂಪಿನವರು ಇನ್ನೊಂದು ಪ್ರಶ್ನೆ ಎತ್ತಿದ್ದಾರೆ, ಅದಕ್ಕೆ ನಾನು ಉತ್ತರ ಕೊಡತ್ತಿದ್ದೇನೆ. ಈ ಮಸೂದೆಯಿಂದ ಉತ್ಪಾದನೆ ಮೇಲೆ ಅಡ್ಡ ಪರಿಣಾಮವಾಗುವುದೆಂದು ದಿಗಿಲುಗೊಂಡಿದ್ದಾರೆ. ತಮ್ಮ ದೃಷ್ಟಿಯಲ್ಲಿ ಮತ್ತು ಇಡೀ ದೇಶದ ಹಿತದೃಷ್ಟಿಯಿಂದ ಈ ಕ್ರಮ ನಿಜವಾಗಿಯೂ ಪ್ರಸ್ತುತವಾಗಲಾರದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿ ಇಂದು ಅಗಾಧ ಪ್ರಮಾಣದಲ್ಲಿ ಬಟ್ಟೆಯ ಕೊರತೆ ಇದೆ. ಒಂದರ್ಥ ಈವೊತ್ತು ರಾಷ್ಟ್ರದಲ್ಲಿ ವಸ್ತ್ರ ಬರ ಕಾಣಿಸಿಕೊಂಡಿದೆ. ಈ ವಸ್ತ್ರ ಬರದ ನಿವಾರಣೆಗಾಗಿ ಹತ್ತಿ ಗಿರಣಿಯವರಿಗೆ ಕಾರ್ಮಿಕರ ದುಡಿಮೆ ಅವಧಿಯ ವಿಷಯದಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುವುದು ಸೂಕ್ತವೆಂದು ನಂಬಿಕೆ. ಕೆಲಸದ ಸಮಯವನ್ನು ಕಡಿತಗೊಳಿಸುವುದರಿಂದ ಉತ್ಪಾದನೆಯ ಮೇಲೆ ಏನು ಪರಿಣಾಮವುಂಟಾಗುವುದೆಂಬುದನ್ನು ತಿಳಿಯಲು ನಾನು ಒಂದು ಪರೀಕ್ಷೆ ನಡೆಸಿದ್ದೇನೆ; ಈ ಪರೀಕ್ಷೆಯಿಂದ ಕೆಲವು ಕುತೂಹಲಕಾರಿಯಾದ ಅಂಶಗಳು ಹೊರಬಿದ್ದಿವೆ. ನನ್ನ ಬಳಿ ದಂಡಿಯಾಗಿ ಅಂಕಿಅಂಶ ಇವೆಯಾದರೂ, ಅಂಕಿಅಂಶಗಳನ್ನು ಸಭೆಯ ಮುಂದೆ ಅವೆಲ್ಲವನ್ನು ಹೇಳುತ್ತಾ ತ್ರಾಸವುಂಟುಮಾಡಲು ನನಗೆ ಇಷ್ಟವಿಲ್ಲದ ಕಾರಣ ಕೇವಲ ಉಪಯೋಗಿಸಿದ ಹತ್ತಿಯ ಪ್ರಮಾಣ, ಮಗ್ಗಗಳಲ್ಲಿ ಹೆಚ್ಚಳ, ಕದಿರುಗಳ ಹೆಚ್ಚಳ ಇತ್ಯಾದಿಗಳ ಬಗ್ಗೆ ತಿಳಿಸಿ, ಸಭೆಗೆ ವಸ್ತುಸ್ಥಿತಿಯ ಮನವರಿಕೆಯಾಗುವಂತೆ

ಪ್ರಯತ್ನಿಸುತ್ತೇನೆ. ನಾನೀಗ ೧೯೩೪ನೇ ಇಸವಿಯಿಂದ ಪ್ರಾರಂಭಿಸುತ್ತೇನೆ; ಆ ವರ್ಷವೇ ಕೆಲಸದ ಸಮಯದಲ್ಲಿ ಕಡಿತವುಂಟುಮಾಡಿದುದು. ೬೦ ಘಂಟೆಗಳಿಂದ ೫೪ ಘಂಟೆಗಳಿಗೆ ಇಳಿಸಲಾಯಿತು. ೧೯೩೪ರಲ್ಲಿ ಒಟ್ಟು ಗಿರಣಿಗಳ ಸಂಖ್ಯೆ ೩೫೨, ಕದಿರುಗಳು ೯,೬೧೩,೧೭೪, ಮಗ್ಗಗಳು ೧೯೪,೪೮೮, ಉದ್ಯೋಗಿಗಳ ಸಂಖ್ಯೆ ೩೮೪,೯೩೮ ಮತ್ತು ೨,೭೦೩,೧೭೪ ಬೇಲ್ ಹತ್ತಿಯನ್ನು ಉಪಯೋಗಿಸಲಾಯಿತು. ಈಗ ೧೯೩೫ನೇ ಇಸವಿಯನ್ನು ಪರಿಗಣಿಸೋಣ, ಈ ವರ್ಷವೇ ಕಾಯಿದೆಯ ನಿಬಂಧನೆಗಳು ಅನುಷ್ಠಾನಕ್ಕೆ ಬಂದದ್ದು. ಗಿರಣಿಗಳ ಸಂಖ್ಯೆ ೩೬೫ಕ್ಕೆ ಏರಿತ್ತು. ಕದಿರುಗಳ ಸಂಖ್ಯೆ ೯,೬೮೫,೧೭೫, ಮಗ್ಗಗಳ ಸಂಖ್ಯೆ ೧೯೮,೮೬೭ ಆಗಿತ್ತು. ಕಾರ್ಮಿಕರ ಸಂಖ್ಯೆ ೪,೧೪,೮೮೪ ಆಗಿತ್ತು. ಉಪಯೋಗಿಸಿದ ಹತ್ತಿಯ ಪ್ರಮಾಣ ೩,೧೨೩,೪೧೮ ಬೇಲ್‌ಗಳು. ಈಗ ನಮಗೆ ಲಭ್ಯವಿರುವ ಕಡೆಯ ವರ್ಷದ ಪ್ರಮಾಣವನ್ನು ಪರಿಶೀಲಿಸೋಣ: ಇಸವಿ ೧೯೩೮, ಒಟ್ಟು ಗಿರಣಿಗಳು ಈಗ ೩೮೦ ಆಗಿತ್ತು. ಕದಿರುಗಳ ಸಂಖ್ಯೆ ೧,೦೨೦,೨೭೫ಕ್ಕೆ ಏರಿತ್ತು.

**ಶ್ರೀ ಪ್ರಕಾಶ :** ದಯಮಾಡಿ ಗೌರವಾನ್ವಿತ ಸದಸ್ಯರು ಈ ಸಂಖ್ಯೆಯನ್ನು ಲಕ್ಷಗಳಲ್ಲಿ ಕೊಡುವರೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ದಶಲಕ್ಷದಲ್ಲಿ ಸಂಖ್ಯೆಗಳನ್ನು ಕೊಡಲಾಗಿದೆ. ಅತ್ತ ಕಡೆ ಇರುವ ಗೌರವಾನ್ವಿತ ಸದಸ್ಯರಿಗೆ ನಾನು ಉಪಯೋಗಿಸುತ್ತಿರುವ ಸಂಖ್ಯೆಗಳ ಪರಿಚಯವಾಗಿದೆ. ಅವರು ತಾವು ಹೇಳುತ್ತಿರುವ ಹಾಗೆ ಖಂಡಿತಾ ಮುಗ್ಧರಲ್ಲ ಈ ವಿಷಯದಲ್ಲಿ.

ಮಗ್ಗಗಳ ಸಂಖ್ಯೆ, ೨೦೦, ೨೮೬, ಉದ್ಯೋಗಸ್ಥರ ಸಂಖ್ಯೆ ೪೩೭,೬೯೦, ಉಪಯೋಗಿಸಿದ ಹತ್ತಿಯ ಪ್ರಮಾಣ ೨,೬೬೨,೬೪೮ ಬೇಲ್‌ಗಳು. ಆದ ಕಾರಣ ಹಿಂದಿನ ಅನುಭವ ಭವಿಷ್ಯತ್ತಿಗೆ ಮಾರ್ಗದರ್ಶನ ನೀಡಬೇಕೆಂದು ನಾವು ಭಾವಿಸುವುದಾದರೆ, ಖಂಡಿತವಾಗಿಯೂ ಯಾವುದೇ ಬಗೆಯ ಆತಂಕಕ್ಕೆ ಎಡೆಯಿಲ್ಲವೆಂದು ನಾನು ಈ ಮೂಲಕ ತಿಳಿಸುತ್ತಿದ್ದೇನೆ. ಭಾರತ ಸರ್ಕಾರ ವಸ್ತ್ರಗಳ ಬರವಿರುವ ಪರಿಸ್ಥಿತಿಯನ್ನು ಮನಗಂಡಿದೆ. ವಸ್ತ್ರಬರ ಎನ್ನುವುದಕ್ಕಿಂತ ಕೊಂಚ ಬಟ್ಟೆಯ ಕೊರತೆ ಎಂದರೆ ಹೆಚ್ಚು ಸೂಕ್ತ. ಅಗತ್ಯಬಿದ್ದರೆ ಗಿರಣಿಗಳು ಅಥವಾ ಬೇರೆ ಯಾವುದೇ ಸಂಸ್ಥೆಗಳು ಮಾಮೂಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಬೇಕಾದರೆ ಸರ್ಕಾರ ಇದಕ್ಕೆ ಅನುಮತಿ ಕೊಡುತ್ತದೆ. ತತ್ಸಂಬಂಧವಾಗಿ ಮಸೂದೆಯಲ್ಲಿ ೪೪ನೇ ವಿಭಾಗವನ್ನು ತಿದ್ದುಪಡಿ ಮಾಡುವಂಥ ೫ನೇ ಅಧಿನಿಯಮವನ್ನು ಸೇರ್ಪಡೆ ಮಾಡಲಾಗಿದೆ. ಅಧಿನಿಯಮದ ಒಕ್ಕಣೆಯಲ್ಲಿ ಪ್ರಕಟವಾಗಿರುವಂತೆ ಒಮ್ಮೆಗೆ ಆರು ತಿಂಗಳವರೆಗೆ ಕಾರ್ಯವನ್ನು ವಿಸ್ತರಿಸುವ ಅಧಿಕಾರವನ್ನು ಪ್ರಾಂತೀಯ ಸರ್ಕಾರಕ್ಕೆ ನೀಡಲಾಗಿದೆ. ಕಾರ್ಖಾನೆ ಕಾಯಿದೆಯನ್ನು ಅಮಾನತ್ತುಗೊಳಿಸಿ ತುರ್ತುಸಂದರ್ಭದಲ್ಲಿ ಸೂಕ್ತರೀತಿಯ ಮಾರ್ಪಾಡು ಮಾಡಿಕೊಳ್ಳಲು ಈಗಾಗಲೇ ಅಧಿಕಾರ ಕೊಡಲಾಗಿದೆ. ಬಟ್ಟೆಗಳ ಕೊರತೆ ಒಂದು ತುರ್ತುಪರಿಸ್ಥಿತಿಯೆಂದು ಪರಿಗಣಿತವಾಗದೇ ಇರುವುದರಿಂದ ಪ್ರಾಂತೀಯ ಸರ್ಕಾರಗಳಿಗೆ ಕಾಯಿದೆಯಲ್ಲಿ ಈಗಾಗಲೇ ಇರುವ ನಿಬಂಧನೆಗಳನ್ನು ಉಪಯೋಗಿಸುವ ಪ್ರಮೇಯವುಂಟಾಗಲಾರದು. ತತ್ಪರಿಣಾಮವಾಗಿ ಹೆಚ್ಚಿನ ಮುನ್ನೆಚ್ಚರಿಕೆಯನ್ನು ವಹಿಸುವ ದೃಷ್ಟಿಯಿಂದ ಸರ್ಕಾರವು ಮಸೂದೆಯಲ್ಲಿ ಒಂದು ಅಧಿನಿಯಮವನ್ನು ಸೇರಿಸಿದೆ. ಇದನ್ನೇ ನಾವು ಸಾರ್ವಜನಿಕ ಹಿತದೃಷ್ಟಿ ಎಂದು ಕರೆಯುವುದು. ಬಟ್ಟೆಯ ಉತ್ಪಾದನೆಗೆ ಸಂಬಂಧಿಸಿದಂತೆ ಹತ್ತಿ ಗಿರಣಿಗಳ ಮಾಲೀಕರೂ ಮಸೂದೆಯಿಂದ ಆತಂಕಗೊಂಡಿರುವುದನ್ನು ಈ ಅಧಿನಿಯಮವು ನಿವಾರಿಸುವುದೆಂದು ನಮ್ಮ ನಂಬಿಕೆ.

ಮಾನ್ಯರೆ, ಇತರೆ ಕಲಮುಗಳಾದ ೩, ೪ ಮತ್ತು ೭ ಆನುಷಂಗಿಕವಾಗಿವೆ. ೩ನೆಯ ಕಲಮು ನಿರಂತರ ಕಾರ್ಖಾನೆಗಳಲ್ಲಿ ದೈನಂದಿನ ಕೆಲಸವನ್ನು ೧೧ ರಿಂದ ೯ ಘಂಟೆಗೆ ಇಳಿಸಿದರೆ, ಋತುಮಾನದ ಕಾರ್ಖಾನೆಗಳ ವಿಚಾರದಲ್ಲಿ ಯೋಜಿಸಿದ ಬದಲಾವಣೆಗೆ ಪೂರಕವಾಗಿರುವ ವ್ಯವಸ್ಥೆಯಾಗಿದೆ.

೪ ಮತ್ತು ೬ನೇ ಕಲಮುಗಳು ೧೩ ಘಂಟೆಯಿಂದ ೧೨ ಘಂಟೆಗೆ ಇಳಿಸುವುದರಿಂದ ಅವುಗಳ ಬಗ್ಗೆ ನಾನು ಮತ್ತೆ ವಿವರವಾಗಿ ಹೇಳುವ ಅಗತ್ಯವಿಲ್ಲ. ಮಸೂದೆಯ ಎರಡನೆಯ ಮುಖ್ಯ ಉಪಬಂಧಕ್ಕೆ ಸಂಬಂಧಿಸಿದ ವಿಷಯವೆಂದರೆ ಹೆಚ್ಚುವರಿ ಕಾಲಕ್ಕೆ ಕೊಡಬೇಕಾದ ವೇತನದ್ದು. ಗೌರವಾನ್ವಿತ ಸದಸ್ಯರು ಗಮನಿಸಬೇಕು. ಈಗ ಪ್ರಚಲಿತವಿರುವ ಕಾರ್ಖಾನೆ ಕಾಯಿದೆಯು ಹೆಚ್ಚುವರಿ ಕಾಲಕ್ಕೆ ಸಂಬಂಧಿಸಿದಂತೆ ಒಂದೇ ಬಗೆಯ ನಿಯಮವನ್ನು ಹೊಂದಿಲ್ಲ. ವಾಸ್ತವವಾಗಿ ನಿರಂತರ ಫ್ಯಾಕ್ಟರಿಗಳು ಮತ್ತು ಕೆಲವು ಋತುಗಳಲ್ಲಿ ಮಾತ್ರ ನಡೆಯುವ ಫ್ಯಾಕ್ಟರಿಗಳಿಗೆ ಬೇರೆ ಬೇರೆ ರೀತಿಯ ಮಾನದಂಡಗಳಿವೆ. ಋತುಮಾನದ ಫ್ಯಾಕ್ಟರಿಗಳಲ್ಲಿ ಕೆಲಸದವಧಿ ವಾರಕ್ಕೆ ೬೦ ಘಂಟೆಗಳಿಗಿಂತ ಜಾಸ್ತಿ ಇದ್ದ ಪಕ್ಷದಲ್ಲಿ ಕಾರ್ಮಿಕನಿಗೆ ೧$^{೧}/_{೨}$ ಪ್ರಮಾಣ ಲಾಭ ಸಿಕ್ಕುತ್ತದೆ : ನಿರಂತರ ಕಾರ್ಖಾನೆಗಳಲ್ಲೇ ಎರಡು ಬಗೆಯ ಕಾಲವುಂಟು. ೬೦ ಘಂಟೆಗಳಾಗಿದ್ದರೆ ಹೆಚ್ಚುವರಿ ಕಾಲ ೧$^{೧}/_{೪}$ ರಷ್ಟು, ೬೦ ಘಂಟೆಗಿಂತ ಜಾಸ್ತಿ ಇದ್ದರೆ ೧$^{೧}/_{೨}$ ಪ್ರಮಾಣ. ಈ ರೀತಿಯಾದ ಹೆಚ್ಚುವರಿ ಕಾಲದ ವರ್ಗೀಕರಣ ನ್ಯಾಯಸಮ್ಮತವಾದದ್ದಲ್ಲ ಎಂದು ಸರ್ಕಾರಕ್ಕೆ ಅನ್ನಿಸಿರುವುದರಿಂದ ಕಾರ್ಖಾನೆಯ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳದೆ ಹೆಚ್ಚುವರಿ ಕಾಲ ಒಂದೇ ಸಮನಾಗಿರಬೇಕು. ತತ್ಪರಿಣಾಮವಾಗಿ ಮಸೂದೆಯಲ್ಲಿ ಮಾಡಿರುವ ತಿದ್ದುಪಡಿಯಂತೆ ಹೆಚ್ಚುವರಿ ಕಾಲಕ್ಕೆ ದಕ್ಕುವ ಲಾಭ ೧$^{೧}/_{೨}$ ಪ್ರಮಾಣದ್ದಾಗಿರುತ್ತದೆ. ಈ ಕ್ರಮವನ್ನು ಸರಳಕ್ರಮವೆಂದು ಈ ಸಭೆಯು ತಿಳಿಯುವುದಾಗಿ ನಾನು ಭಾವಿಸುತ್ತೇನೆ. ಹಾಗೂ ಬಹಳ ಹಿಂದೆಯೇ ಈ ನ್ಯೂನತೆಯನ್ನು ಸರಿಪಡಿಸಬೇಕಾಗಿತ್ತೆಂದು ಮನಗಂಡು ಭಾರತೀಯ ಶಾಸನವನ್ನು ಅಂತಾರಾಷ್ಟ್ರೀಯ ಸಂಪ್ರದಾಯಕ್ಕೆ ಹೊಂದಾಣಿಕೆಯಾಗುವಂತೆ ಅನುವುಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯರೆ, ಸೂಚನೆ ಮಂಡಿಸುತ್ತೇನೆ.

## ಕಾರ್ಖಾನೆಗಳ (ತಿದ್ದುಪಡಿ) ಮಸೂದೆ

***ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ಮಸೂದೆಯನ್ನು ಮಂಡಿಸಿದವರು ಮಸೂದೆಯುಡಿ ತಿದ್ದುಪಡಿಯನ್ನು ಬೆಂಬಲಿಸಿ ಮಾತನಾಡಿದುದನ್ನು ನಾನು ಆಲಿಸಿದ್ದೇನೆ; ಈ ಮಸೂದೆಯ ತಿದ್ದುಪಡಿಯನ್ನು ಬೆಂಬಲಿಸಿ ಒಂದು ವೇಳೆ ಇವರೊಬ್ಬರೇ ಮಂಡಿಸಿದ್ದರೆ ನಾನು ತಿದ್ದುಪಡಿಗೆ ತಡೆಯೊಡ್ಡುತ್ತಿದ್ದೆ, ಏಕೆಂದರೆ ತಮ್ಮ ಭಾಷಣದಲ್ಲಿ ಈ ಮಸೂದೆಗೆ ತಿದ್ದುಪಡಿಯನ್ನು ಸೂಚಿಸಿದ ಮಹನೀಯರು ಭಾರತ ಸರ್ಕಾರ ಎಲ್ಲ ಪಕ್ಷದವರನ್ನು ಕೇಳಿ ಈ ಕ್ರಮ ಕೈಗೊಂಡಿದೆಯೇ ಎಂಬುದರ ಬಗ್ಗೆ ನಾನು ವಿಶದವಾಗಿ ತಿಳಿಸಲಿಲ್ಲ ಎಂಬ ತಗಾದೆ ತೆಗೆದಿದ್ದಾರೆ. ನನ್ನ ಭಾಷಣದಲ್ಲಿ ನಾನು ಆ ಬಗ್ಗೆ ವಿವರ ನೀಡಲಿಲ್ಲವೆಂಬುದು ನಿಜ; ಗೌರವಾನ್ವಿತ ಸದಸ್ಯರು ಬಹಳ ವರ್ಷಗಳಿಂದ ಚಾಲ್ತಿಯಲ್ಲಿರುವ ಕಾರ್ಮಿಕ ಸಮ್ಮೇಳನದ ಬಗ್ಗೆ ತಿಳಿದಿರುವರೆಂದು ನಾನು ಭಾವಿಸಿದ್ದೇ ಇದಕ್ಕೆ ಕಾರಣವಿರಬೇಕು; ಹಾಗೂ ಈ ಕಾರ್ಮಿಕ ಸಮ್ಮೇಳನ ವರ್ಷಕ್ಕೊಮ್ಮೆ ಸಮಾವೇಶಗೊಳ್ಳುತ್ತದೆ ಮತ್ತು ಸ್ಥಾಯಿ ಸಮಿತಿ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಇದರಲ್ಲಿ ಕಾರ್ಮಿಕರ ಪ್ರತಿನಿಧಿಗಳು, ಮಾಲೀಕರ ಮತ್ತು ಪ್ರಾಂತೀಯ ಸರ್ಕಾರಗಳ ಪ್ರತಿನಿಧಿಗಳಿರುತ್ತಾರೆ. ಭಾರತ ಸರ್ಕಾರವು ಯಾವಾಗಲೂ ಇಂತಹ ಸಮ್ಮೇಳನದಲ್ಲಿ ತನ್ನ ಶಾಸನ ಕ್ರಮಗಳನ್ನು ಮಂಡಿಸಿ ಬೇರೆ ಬೇರೆ ಪಕ್ಷಗಳು ಯಾವ ರೀತಿ ಈ ಕ್ರಮಗಳನ್ನು ನೋಡುತ್ತವೆಯೆಂದು ತಿಳಿಯುತ್ತಾ ಬಂದಿದೆ. ಈ ಕ್ರಮದ ಬಗ್ಗೆಯೂ ಅದೇ ಸಂಪ್ರದಾಯವನ್ನನುಸರಿಸಿದ್ದೇವೆ. ಈ ಕ್ರಮವು ಎಷ್ಟು ಬಾರಿ ಸ್ಥಾಯಿ ಸಮಿತಿಯ ಮುಂದೆ ಅಥವಾ ಕಾರ್ಮಿಕ ಸಮ್ಮೇಳನದಲ್ಲಿ ಪ್ರಸ್ತಾಪವಾಗಿದೆ ಎಂಬುದರ ಬಗ್ಗೆ

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, (ಕೇಂದ್ರ), ಸಂಪುಟ ೧ – ಸಂಖ್ಯೆ ೭, ೨೧ನೇ ಫೆಬ್ರವರಿ ೧೯೪೬, ಪು. ೧೨೧೨–೧೩.

ನನ್ನಲ್ಲಿ ಸದ್ಯದಲ್ಲಿ ಸರಿಯಾದ ಮಾಹಿತಿ ಇಲ್ಲ; ಆದರೆ ಇವೆರಡರಲ್ಲಿ ಯಾವುದಾದರೊಂದು ಸಮಿತಿಯ ಮುಂದೆಯಾದರು ಇದು ಚರ್ಚಿತವಾಗಿದೆ ಎಂಬುದು ಸಂಶಯಾತೀತವಾದುದು. ಹತ್ತಿ ಗಿರಣಿಗಳ ಮಾಲೀಕರು ಕೆಲವು ಸಮಸ್ಯೆ ಮತ್ತು ತೊಡಕುಗಳಿಂದ ಬಾಧಿತರಾಗಿದ್ದರು ಎಂಬ ವಿಷಯವು ನಮ್ಮ ಗಮನಕ್ಕೆ ಬಂದ ಪ್ರಯುಕ್ತ ಅದರ ನಿವಾರಣೆಗಾಗಿಯೇ ನಾವು ಈ ಕ್ರಮ ಕೈಕೊಂಡಿರುವುದು. ಈ ರೀತಿ ಇರಲಾಗಿ ಈ ತಿದ್ದುಪಡಿಯನ್ನು ಸೂಚಿಸಿದವರು ಹೇಳಿದ ಮಾತಿನಲ್ಲಿ ಕಿಂಚಿತ್ತೂ ಹುರುಳಿಲ್ಲವಾಗಿದೆ. ನಾನು ಮೊದಲೇ ಹೇಳಿದಂತೆ ತಿದ್ದುಪಡಿ ಬೆಂಬಲಕ್ಕೆ ಅದೇ ಪ್ರಧಾನ ಕಾರಣವಾಗಿದ್ದ ಪಕ್ಷದಲ್ಲಿ ನಾನು ಖಂಡಿತಾ ತಡೆಯೊಡ್ಡುತ್ತಿದ್ದೆ, ಆದರೆ ಮಾನ್ಯರೆ, ಚರ್ಚೆ ಬೆಳೆದ ರೀತಿಯನ್ನು ಗಮನಿಸಿದರೆ ಈಗ ಇದು ಕುತೂಹಲಕರವಾದ ತಿರುವನ್ನು ಪಡೆದುಕೊಂಡಿದೆ.

**ಪ್ರೊ॥ ಎನ್.ಜಿ. ರಂಗಾ (ಗುಂಟೂರ್ ಮತ್ತು ನೆಲ್ಲೂರ್** : ಮುಸ್ಲಿಮೇತರ–ಗ್ರಾಮಾಂತರ) : ಸ್ವಾಗತಾರ್ಹವಾದ ತಿರುವು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಾಯಶಃ ಇದು ಸ್ವಾಗತಾರ್ಹವಾದ ತಿರುವು ಇರಬಹುದು. ಈ ಸದನದ ಬೇರೆ ಬೇರೆ ಮೂಲೆಗಳಿಂದ ಕೇಳಿಬರುತ್ತಿರುವ ಅಭಿಪ್ರಾಯಗಳನ್ನು ಗಮನಿಸಿದರೆ ಕಾರ್ಮಿಕರ ಬಗ್ಗೆ ಪ್ರೀತಿಯ ಪೈಪೋಟಿ ನಡೆಯುತ್ತಿರುವಂತಿದೆ. ಒಂದು ಭಾಗದಿಂದ ಒಂದು ರೀತಿಯ ಮಾತುಗಳು ಕೇಳಿಬಂದರೆ ಮತ್ತೊಂದು ಮೂಲೆಯಿಂದ ಅವರನ್ನೂ ಮೀರಿಸುವಂಥ ರೀತಿಯ ಹೊಗಳಿಕೆ ಬರುತ್ತಿದೆ; ಇನ್ನೊಂದು ಕಡೆಯಿಂದ ಇವರಿಬ್ಬರನ್ನೂ ಮೀರಿಸುವ ತರಹ.

**ಗೌರವಾನ್ವಿತ ಸದಸ್ಯರೊಬ್ಬರು :** ನೀವು ಇನ್ನೂ ಹೆಚ್ಚು ಹರಾಜು ಕೂಗಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಚರ್ಚೆಯಲ್ಲಿ ಭಾಗವಹಿಸಿದ್ದ ಕೆಲವರು 'ರಾಯಲ್ ಕಮಿಷನ್'ನಲ್ಲಿ ಇದ್ದವರು. ಈ ವಿಷಯವಾಗಿ ಅವರಾದರೂ ಹೆಚ್ಚಿನ ಆಸಕ್ತಿ ವಹಿಸಬೇಕಾಗಿತ್ತು. ಸರ್ಕಾರದ ಪರವಾಗಿಯಲ್ಲದಿದ್ದರೂ, ಅಧಿಕಾರೇತರರ ಪರವಾಗಿ ಮಾತನಾಡಿ ನಮ್ಮ ನಿಲುವನ್ನು ಬಲಪಡಿಸಬೇಕಾಗಿತ್ತು. ನಾನು ಸಂಪ್ರದಾಯಸ್ಥನೆಂದು ಹಣೆಪಟ್ಟಿ ಹಚ್ಚಿಬಿಟ್ಟಿದ್ದಾರೆ. ಖಂಡಿತಾ ನಾನು ಈ ಆಪಾದನೆಯನ್ನು ಅಲ್ಲಗಳೆಯುತ್ತೇನೆ. ಈಗ ನಾನು ಬಯಸುವುದೇನೆಂದರೆ, ಈ ಮಸೂದೆಯು ಪರಿಶೀಲನಾ ಸಮಿತಿಯ ಮುಂದೆ ಹೋಗಿ ಚರ್ಚಿತವಾಗಿರುವ ಎಲ್ಲಾ ದೃಷ್ಟಿಕೋನಗಳನ್ನೂ, ಪ್ರಸ್ತಾಪಮಾಡಿರುವ ಹೇಳಿಕೆಗಳನ್ನೂ ಮತಕ್ಕೆ ಹಾಕಬೇಕು ಮತ್ತು ಇಲ್ಲಿನ ವಿಚಾರಗಳು ಕೇವಲ ಭಾವನೆಗಳೋ ಅಥವಾ ದೃಢವಾದ ನಂಬಿಕೆಯಿಂದ ಸಿದ್ಧವಾದವೋ ಎಂಬುದನ್ನು ಪರೀಕ್ಷಿಸಬೇಕು. ನಾನು ಹಾಗೆ ಮಾಡದೆ ಹೋದರೆ ವಿರೋಧ ಪಕ್ಷದವರು ನಾನು ಸಂಪ್ರದಾಯಸ್ಥನೆಂದು ಒತ್ತಿ ಹೇಳುತ್ತಾರಲ್ಲದೆ ಅದನ್ನೆ ದೊಡ್ಡದು ಮಾಡಿ ಆಪಾದಿಸುತ್ತಾರೆ. ಆದಕಾರಣ ಈ ಮಂಡನೆಯನ್ನು ನಾನು ಅಂಗೀಕರಿಸುತ್ತೇನೆ(ಈ ಘಟ್ಟದಲ್ಲಿ ಸದಸ್ಯರೆಲ್ಲರೂ ತಮ್ಮ ಜಾಗದಲ್ಲೇ ಎದ್ದು ನಿಂತರು).

* * *

*__ಶ್ರೀ ಆರ್. ವೆಂಕಟಸುಬ್ಬ ರೆಡ್ಡಿಯರ್ :__ ಪರಿಶೀಲನಾ ಸಮಿತಿಯ ಸಂಬಂಧವಾಗಿ ನಾನು ಈಗಾಗಲೇ ಸೂಚಿಸಿ ಸಲ್ಲಿಸಿರುವ ಹೆಸರುಗಳ ಜೊತೆಗೆ ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್ ಮತ್ತು ರಾಯ್‌ಬಹಾದೂರ ಭಟ್ಟಾಚಾರ್ಯ ಅವರ ಹೆಸರುಗಳನ್ನು ಸೂಚಿಸಬಯಸುತ್ತೇನೆ.

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೧ – ಸಂಖ್ಯೆ, ೭, ೨೧ನೇ ಫೆಬ್ರವರಿ ೧೯೪೬, ಪು. ೧೩೧೮.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಅವುಗಳನ್ನು ಸ್ವೀಕರಿಸುತ್ತೇನೆ.

**ಉಪಾಧ್ಯಕ್ಷರು :** ಪ್ರಶ್ನೆ ಎಂದರೆ :

**"**ಮಸೂದೆಯನ್ನು ಈ ಕೆಳಗೆ ಸೂಚಿಸಿರುವ ಮಹನೀಯರನ್ನೊಳಗೊಂಡ ಆಯ್ಕೆ ಸಮಿತಿಗೆ ಒಪ್ಪಿಸುವುದು : ಗೌರವಾನ್ವಿತ ಸರ್ ಅಶೋಕ್ ರಾಯ್, ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಪ್ರೊ॥ ಎನ್.ಜಿ. ರಂಗಾ, ಸಾರ್ಜೆಂಟ್ ಎನ್.ವಿ. ಗಾಡ್ಗೀಳ್, ಶ್ರೀ ವಡಿಲಾಲ್ ಲಲ್ಲೂಬಾಯ್, ದಿವಾನ್ ಚಮನ್‌ಲಾಲ್, ಪಂಡಿತ ಬಾಲಕೃಷ್ಣಶರ್ಮ, ಶ್ರೀ ಮಹಮ್ಮದ್ ನೌಮಾನ್, ಶ್ರೀ ಮಹಮ್ಮದ್ ಎಂ. ಕಿಲ್ಲೇದಾರ್, ಸರ್ ಹಸನ್ ಅಹ್ರಾವರ್ಡಿ, ಶ್ರೀ ಎಸ್.ಸಿ. ಜೋಷಿ, ಶ್ರೀ ಎ.ಸಿ. ಇನ್ಸ್‌ಕಿಪ್, ಕುಮಾರಿ ಮಣಿಬೆನ್ ಕರಾ, ಶ್ರೀ ಎಸ್. ಗುರುಸ್ವಾಮಿ, ಚೌಧುರಿ ಶ್ರೀಚಂದ್, ಶ್ರೀ ಬಿ.ಎ. ರಾಮಲಿಂಗಮ್ ಚೆಟ್ಟಿಯಾರ್, ರಾಯಬಹಾದ್ದೂರ್ ಡಿ.ಎಂ. ಭಟ್ಟಾಚಾರ್ಯ ಹಾಗೂ ಈ ತಿದ್ದುಪಡಿ ಸೂಚಿಸಿದವರು. ಸಮಿತಿಯ ಸಭೆಯನ್ನು ಕರೆಯಲು ಕನಿಷ್ಠ ಪಕ್ಷ ಐದು ಮಂದಿಯಾದರೂ ಸೇರಬೇಕಾದುದು ಆವಶ್ಯಕವಾಗಿದೆ. ಇವರೆಲ್ಲ ೭ನೇ ಮಾರ್ಚಿ ೧೯೪೬ರಂದು ಅಥವಾ ಅದರ ಒಳಗೆ ಸೇರಬೇಕೆಂದು ಸೂಚನೆ ಕಳಿಸುವುದು.**"**

ಈ ಮಂಡನೆಯನ್ನು ಒಪ್ಪಿಕೊಳ್ಳಲಾಯಿತು.

## ೫೯
## ಪುನರ್ವಸತಿ ಯೋಜನೆಗಳು *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯ ಅಧ್ಯಕ್ಷರೆ, ಯುರೋಪಿನ ದೇಶಗಳ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿರುವಂತೆ ಕೈಕೊಂಡಿರುವ ಯುದ್ಧ ಸನ್ನದ್ಧತೆಯ ವಿಸರ್ಜನೆಗೆ ಅನುಗುಣವಾಗಿ ಪುನರ್ವಸತಿಯ ಕಾರ್ಯ ನೆರವೇರುತ್ತಿಲ್ಲ. ಮಾನ್ಯರೆ, ಈ ವಿಷಯವಾಗಿ ಸದನಕ್ಕೆ ಹೆಚ್ಚಿನ ಮಾಹಿತಿಯನ್ನು ಕೊಡುವ ಸಲುವಾಗಿಯೇ ನಾನು ತಮ್ಮ ಮುಂದೆ ನಿಂತಿದ್ದೇನೆ. ಪುನರ್ವಸತಿಯ ವಿಷಯವನ್ನು ಭಾಗಗಳಾಗಿ ವಿಂಗಡಿಸಿದೆ : ಜಮೀನನ್ನು ಕೊಟ್ಟು ಪುನರ್ವಸತಿಯನ್ನು ಕಲ್ಪಿಸುವುದು ಹಾಗೂ ಕೈಗಾರಿಕೆಯ ಮೂಲಕ ಮಾಡುವ ಪುನರ್ವಸತಿ. ಜಮೀನು ಕೊಟ್ಟು ಪುನರ್ವಸತಿಯನ್ನು ಕಲ್ಪಿಸುವ ವಿಚಾರವನ್ನು ಪ್ರಾಂತೀಯ ಸರ್ಕಾರಗಳಿಗೆ ಬಿಡಲಾಗಿದೆ. ಈ ವಿಷಯವನ್ನು ಪ್ರಾಂತೀಯ ಸರ್ಕಾರಗಳಿಗೇ ಯಾಕೆ ವಹಿಸಿದ್ದೇವೆ ಎಂಬುದು ಸದನಕ್ಕೆ ಚೆನ್ನಾಗಿ ತಿಳಿದಿರುವ ವಿಚಾರ. ಸಂವಿಧಾನಾತ್ಮಕ ಕಾನೂನಿನ ಪ್ರಕಾರ ಕೇಂದ್ರ ಸರ್ಕಾರದ ಅಧೀನದಲ್ಲಿ ಬರತಕ್ಕದ್ದೆಂದು ಎಷ್ಟು ವಿಧವಾಗಿ ಚರ್ಚಿತವಾದರೂ ಇದಕ್ಕೆ ವಿರುದ್ಧವಾದ ಭೂಮಿಯು ಪ್ರಾಂತೀಯ ಸಕಾರದ ಅಧೀನದಲ್ಲಿ ಬರುತ್ತದೆಂಬ ವಿರುದ್ಧವಾದ ಚರ್ಚೆಯನ್ನು ಯಾವ ರೀತಿಯಿಂದಲೂ ತಳ್ಳಿಹಾಕಲಾಗುವುದಿಲ್ಲ. ಆದ್ದರಿಂದ ಭಾರತ ಸರ್ಕಾರ ಕೈಗಾರಿಕಾ ವಲಯದಲ್ಲಿ ಪುನರ್ವಸತಿ ಕಲ್ಪಿಸುವ ವಿಷಯವನ್ನು ಮಾತ್ರ ಕೈಗೆತ್ತಿಕೊಳ್ಳುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಸದನಕ್ಕೆ ಸ್ವಲ್ಪ ಮಾಹಿತಿ ಕೊಡಬಯಸುತ್ತೇನೆ.

ಪುನರ್ವಸತಿ ವಿಷಯವನ್ನು ಪುನರ್ವಸತಿ ಮತ್ತು ಉದ್ಯೋಗದ ಮಹಾನಿರ್ದೇಶನಾಲಯಕ್ಕೆ ವಹಿಸಲಾಗಿದೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೩ – ಸಂಖ್ಯೆ ೪, ೫ನೇ ಮಾರ್ಚ್ ೧೯೪೬, ಪು. ೧೮೯೮–೧೯೦೦.

ಈ ಇಲಾಖೆ ಅಥವಾ ಅದರ ಶಾಖೆಯನ್ನು ಏಳು ವಿವಿಧ ಗುಂಪುಗಳಾಗಿ ವಿಂಗಡಿಸಲಾಗಿದೆ: (೧) ಉದ್ಯೋಗ ವಿನಿಮಯ, (೨) ತಾಂತ್ರಿಕ ತರಬೇತಿ, (೩) ಔದ್ಯೋಗಿಕ ತರಬೇತಿ, (೪) ಗಾಯಗೊಂಡ ಸೈನಿಕರ ಪುನರ್ವಸತಿ, (೫) ಗಾಯಗೊಂಡ ಮತ್ತು ನಿವೃತ್ತ ಸೈನಿಕರ ಉದ್ಯೋಗ ಪರಿಶೀಲನೆ, (೬) ಸೇವೆಯ ಮುಂದುವರಿಕೆ ಮತ್ತು (೭) ಗಾಯಗೊಂಡ ಹಾಗೂ ನಿವೃತ್ತ ಯೋಧರ ಉದ್ಯೋಗ ಕುರಿತು ಪರಿಶೀಲನೆ ಮತ್ತು ಅದರ ನಂತರದ ಕಾರ್ಯಕ್ರಮವಾದ 'ಮುಂದುವರಿಕಾ ಸೇವೆ', ಇದರ ಬಗ್ಗೆ ಅಂಕಿ ಅಂಶಗಳ ಸಂಗ್ರಹಣೆ. ಇವು ಎಷ್ಟು ಮುಖ್ಯವಾದ ವಿಷಯಗಳೆಂದರೆ ಅವುಗಳ ಪ್ರಾಮುಖ್ಯತೆಯನ್ನು ಮತ್ತೊಮ್ಮೆ ಒತ್ತಿಹೇಳುವ ಆವಶ್ಯಕತೆ ಇಲ್ಲ. ಆದುದರಿಂದ ಭಾರತ ಸರ್ಕಾರದವರು ಕಾರ್ಮಿಕ ಇಲಾಖೆಯ ಮೂಲಕ ಪ್ರಕಾಶಪಡಿಸಿರುವ ಈ ಗ್ರಂಥದಲ್ಲಿ ಎಲ್ಲ ವಿಚಾರಗಳನ್ನು ವಿವರವಾಗಿ ಕೊಟ್ಟಿರುವುದರಿಂದ ಗೌರವಾನ್ವಿತ ಸದಸ್ಯರು ಓದಿ ತಿಳಿಯಬೇಕೆಂದು ವಿನಂತಿಸುತ್ತೇನೆ. ಗ್ರಂಥಾಲಯದಲ್ಲಿ ಇದರ ಒಂದು ಪ್ರತಿ ಇದೆ; ಗೌರವಾನ್ವಿತ ಸದಸ್ಯರಲ್ಲಿ ಯಾರಾದರೂ ಈ ಮಾಹಿತಿಯನ್ನು ತಿಳಿಯಬೇಕೆನ್ನಿಸಿದರೆ ಅದನ್ನು ಅವರಿಗೆ ಒದಗಿಸಲು ನನಗೆ ಸಂತೋಷವಾಗುತ್ತದೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಅದರ ಶೀರ್ಷಿಕೆ ಏನು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅದರ ಶೀರ್ಷಿಕೆ 'ಡೈರೆಕ್ಟೋರೇಟ್ ಜನರಲ್ ಆಫ್ ರೀಸೆಟ್ಲ್‌ಮೆಂಟ್ ಅಂಡ್ ಎಂಪ್ಲಾಯ್‌ಮೆಂಟ್.'

**ಬಾಬು ರಾಮ್ ನಾರಾಯಣ್ ಸಿಂಗ್ :** ದಯವಿಟ್ಟು ಅದನ್ನು ಸರ್ಕ್ಯುಲೇಟ್ ಮಾಡಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಾರ್ಮಿಕ ಸಲಹಾ ಸಮಿತಿ ಕಳೆದ ಬಾರಿ ಸಭೆ ಸೇರಿದ ಸಂದರ್ಭದಲ್ಲಿ ಅದಕ್ಕೊಂದು ಪ್ರತಿಯನ್ನು ಒದಗಿಸಲಾಗಿತ್ತು. ಉದ್ಯೋಗ ವಿನಿಮಯಗಳು, ತಾಂತ್ರಿಕ ತರಬೇತಿ, ಔದ್ಯೋಗಿಕ ತರಬೇತಿ ಮತ್ತು ಪುನರ್ವಸತಿಯ ಬಗ್ಗೆ ಮಾತ್ರ ವಿವರವಾಗಿ ತಿಳಿಸಬೇಕಾದ ಅವಶ್ಯಕತೆ ಇದೆ. ಕ್ರಮವಾಗಿ ನಾನು ಒಂದೊಂದು ವಿಷಯವನ್ನು ತೆಗೆದುಕೊಳ್ಳುತ್ತೇನೆ.

ತಾಂತ್ರಿಕ ತರಬೇತಿ ಬಗ್ಗೆ ವಿಷಯ ಹೀಗಿವೆ. ತಾಂತ್ರಿಕ ತರಬೇತಿಗಾಗಿ ಭಾರತ ಸರ್ಕಾರ ಕೆಲವು ತಾಂತ್ರಿಕ ಕೇಂದ್ರಗಳನ್ನು ತೆರೆದಿದೆ. ವಿಸರ್ಜಿತ ಸಿಬ್ಬಂದಿಗಾಗಿ ಆ ಕೇಂದ್ರಗಳಲ್ಲಿ ಈಗ ೧೪,೦೦೦ ಅವಕಾಶಗಳನ್ನು ಕಾಯ್ದಿರಿಸಲಾಗಿದೆ. ತರಬೇತಿ ಅವಧಿ ಗರಿಷ್ಠ ಒಂದು ವರ್ಷವಾಗಿರುತ್ತದೆ ಮತ್ತು ಈ ಕೇಂದ್ರಗಳಲ್ಲಿ ಸುಮಾರು ೪೮ ಕಸುಬುಗಳನ್ನು ಕಲಿಸಲಾಗುತ್ತದೆ. ಈ ಪುಸ್ತಿಕೆಯ ಅನುಬಂಧ ೧೧ ಮತ್ತು ಪುಟ ೫೫ರಲ್ಲಿ ಈ ಬಗ್ಗೆ ವಿವರವಾದ ಯಾದಿಯನ್ನು ಕೊಡಲಾಗಿದೆ. ಮಾನ್ಯರೆ, ಇನ್ನು ಔದ್ಯೋಗಿಕ ತರಬೇತಿಯ ಬಗ್ಗೆ ಹೇಳುವುದಾದರೆ, ಇದರಲ್ಲಿ ಕೃಷಿಗೆ ಸಂಬಂಧಪಟ್ಟ ತರಬೇತಿ, ಪಶುಸಂಗೋಪನೆ, ಗುಡಿ ಕೈಗಾರಿಕೆ, ಗುಮಾಸ್ತಿಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ತರಬೇತಿ ನೀಡಲಾಗುವುದು. ಈಗಾಗಲೇ ಪ್ರಾಂತೀಯ ಸರ್ಕಾರಗಳ ಒಪ್ಪಿಗೆಗಾಗಿ ನಾವು ಯೋಜನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಈ ಔದ್ಯೋಗಿಕ ತರಬೇತಿ ಕೇಂದ್ರಗಳಲ್ಲಿ ಕೃಷಿಗೆ ಸಂಬಂಧಪಟ್ಟ ಉದ್ಯೋಗಗಳಲ್ಲಿ ೨೦,೦೦೦ ಸ್ಥಾನಗಳನ್ನು ಮತ್ತು ಇತರೆ ವಲಯಗಳಲ್ಲಿ ೫೦,೦೦೦ ಸ್ಥಾನಗಳನ್ನು ಕಾಯ್ದಿಟ್ಟಿದ್ದೇವೆ.

ಪುನರ್ವಸತಿ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ರಕ್ಷಣಾ ಇಲಾಖೆ ಮತ್ತು ಕಾರ್ಮಿಕ ಇಲಾಖೆಯವರು ಈ ವಿಷಯವನ್ನು ಸಂಯುಕ್ತವಾಗಿ ಚರ್ಚಿಸುತ್ತಾರೆ. ಇದಕ್ಕೆ ಕಾರಣ ಸ್ಪಷ್ಟವಾಗೇ ಇದೆ. ಯುದ್ಧದಲ್ಲಿ ಗಾಯಗೊಂಡಂಥ ಯೋಧನ ಪುನರ್ವಸತಿಯು ಎರಡು ಹಂತಗಳಲ್ಲಿ ಆಗಬೇಕಾಗುತ್ತದೆ. ಮೊದಲನೆಯ ಹಂತದಲ್ಲಿ ವೈದ್ಯಕೀಯವಾದ ವಿಷಯವಿದ್ದು ಯೋಧನ ಗಾಯಗಳನ್ನು ಗುಣಪಡಿಸಿದ ನಂತರದ ಪುನರ್ವಸತಿ

ಪ್ರಾಥಮಿಕವಾದದ್ದಾಗಿದೆ. ಸೈನಿಕನು ರಕ್ಷಣಾ ಇಲಾಖೆಗೆ ಸೇರಿದವನಾದ್ದರಿಂದ ರಕ್ಷಣಾ ಇಲಾಖೆ ಅವನ ಕಡೆ ಗಮನ ಹರಿಸುತ್ತದೆ. ಚಿಕಿತ್ಸೆಯದು ಮೊದಲನೇ ಹಂತ – ಇದಾದ ಬಳಿಕ ಅವನು ಕಾರ್ಮಿಕ ಇಲಾಖೆಗೆ ಒಳಪಡುತ್ತಾನೆ. ಸೈನಿಕರ ಪುನರ್ವಸತಿಗಾಗಿ ಕಾರ್ಮಿಕ ಇಲಾಖೆ ದೇಶದಲ್ಲಿ ಎರಡು ಕೇಂದ್ರಗಳನ್ನು ತೆಗೆದಿದೆ. ಒಂದನ್ನು ಮೂಲಕೇಂದ್ರವೆಂದು ಕರೆಯುತ್ತಾರೆ. ಸುಮಾರು ೫,೦೦೦ ಮಂದಿಗೆ ಇಲ್ಲಿ ಅವಕಾಶವಿರುತ್ತದೆ. ಎರಡನೆಯದು, ವಿಶೇಷ ತರಬೇತಿ ಕೇಂದ್ರವಾಗಿರುತ್ತದೆ. ಇಲ್ಲಿ ಸುಮಾರು ೩,೦೦೦ ಮಂದಿಗೆ ಸ್ಥಳಾವಕಾಶ ಒದಗಿಸಲಾಗುತ್ತದೆ. ಅವನ ಅಭಿರುಚಿಯಾದರೂ ಏನಿರುತ್ತದೆ? ಆ ವ್ಯಕ್ತಿಗಾಗಿರುವ ಊನವನ್ನು ಗಮನದಲ್ಲಿರಿಸಿಕೊಂಡು ಯಾವ ವಿಧವಾದ ಉದ್ಯೋಗವು ಅವನಿಗೆ ಅತ್ಯಂತ ಸೂಕ್ತವಾಗಿರುತ್ತದೆಯೆಂದು ವಿಶೇಷ ತರಬೇತಿ ಕೇಂದ್ರದಲ್ಲಿ ತಿಳಿದುಕೊಳ್ಳಲಾಗುತ್ತದೆ. ಕಾರ್ಮಿಕ ಇಲಾಖೆಯು ಯೋಧರ ಪುನರ್ವಸತಿಗಾಗಿ ಒಟ್ಟು ಆರು ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಈಗಾಗಲೇ ಬೆಂಗಳೂರು ಸಮೀಪದ ಜಾಲಹಳ್ಳಿಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿದೆ ಮತ್ತು ಪೂನಾದ ಹತ್ತಿರದ ಔಂದ್‌ನಲ್ಲಿ ಇನ್ನೊಂದು ಕೇಂದ್ರವನ್ನು ತೆಗೆಯುವ ಉದ್ದೇಶವಿದೆ.

ಈಗ ನಾನು ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ ತಿಳಿಸುತ್ತೇನೆ. ಪುನರ್ವಸತಿ ಯೋಜನೆಯಲ್ಲಿ ಈ ಅಂಗವು ಬಹಳ ಮುಖ್ಯವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಪ್ರಾರಂಭದಲ್ಲಿ ೭೧ ಕೇಂದ್ರಗಳನ್ನು ತೆರೆಯುವುದು ಸೂಕ್ತವೆಂದು ಕಾರ್ಮಿಕ ಇಲಾಖೆ ತೀರ್ಮಾನಿಸಿದೆ. ಈಗಾಗಲೇ ೩೮ ಕೇಂದ್ರಗಳ ಸ್ಥಾಪನೆಯಾಗಿದ್ದು, ಇಷ್ಟರಲ್ಲೇ ತನ್ನ ಯೋಜನೆಯಲ್ಲಿ ಉದ್ದೇಶಿಸಿರುವಂತೆ ಗರಿಷ್ಠ ಸಂಖ್ಯೆಯ ಕೇಂದ್ರಗಳನ್ನು ತೆರೆಯುವ ಉದ್ದೇಶವಿದೆ.

ಮಾನ್ಯರೆ, ಈ ಸದನದ ಸದಸ್ಯರು ಮತ್ತು ಸಾರ್ವಜನಿಕರೂ ಸೇರಿದಂತೆ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ನಿರೀಕ್ಷಿತ ರೀತಿಯಲ್ಲಿ ಚುರುಕಾಗಿ ಕೆಲಸ ಮುಂದುವರಿಯುತ್ತಿಲ್ಲವೆಂಬ ಟೀಕೆ ಬಂದಿದೆ; ಕಾರ್ಮಿಕ ಇಲಾಖೆ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯುವಲ್ಲಿ ತೀವ್ರವಾದ ಆತುರದಿಂದ ಏಕೆ ಮುಂದುವರಿಯಲಾಗದು ಎಂಬ ಟೀಕೆಗೆ ನಾನು ಉತ್ತರ ಕೊಡಬಯಸುತ್ತೇನೆ. ಎಲ್ಲಿಯವರೆಗೆ ತರಬೇತಿ ಹೊಂದಿರುವ ವ್ಯಕ್ತಿ ಉದ್ಯೋಗ ವಿನಿಮಯ ಕೇಂದ್ರವನ್ನು ನಡೆಸುವುದಿಲ್ಲವೋ ಅಲ್ಲಿಯವರೆಗೆ ಈ ಕೇಂದ್ರ ಫಲಪ್ರದವಾಗಿ ಕೆಲಸ ಮಾಡಲಾರದು ಎಂಬುದು ಖಚಿತ. ಉದ್ಯೋಗ ವಿನಿಮಯ ಕೇಂದ್ರಗಳು ಬಹಳ ವಿಶಿಷ್ಟವಾದ ಕಾರ್ಯಕ್ಷೇತ್ರಗಳೆಂಬುದನ್ನು ನಾವು ಮರೆಯುವಂತಿಲ್ಲ. ಈ ಕೆಲಸದಲ್ಲಿ ತರಬೇತು ಹೊಂದದ ವ್ಯಕ್ತಿಯ ಕೈಯಲ್ಲಿ ಈ ಕೇಂದ್ರವನ್ನು ನಡೆಸುವಂಥ ಜವಾಬ್ದಾರಿಯನ್ನು ನಾವು ಕೊಟ್ಟಿದ್ದೇ ಆದರೆ ಅದು ಖಂಡಿತವಾಗಿ ಊರ್ಜಿತವಾಗುವುದಿಲ್ಲ. ಆದಕಾರಣ ಉದ್ಯೋಗ ವಿನಿಮಯ ಕೇಂದ್ರವನ್ನು ನೋಡಿಕೊಳ್ಳಬೇಕಾಗಿರುವ ಆ ವ್ಯಕ್ತಿಗೆ ಮೊದಲು ಸ್ವಲ್ಪ ತರಬೇತಿ ನೀಡಬೇಕಾದುದು ಅತ್ಯಂತ ಆವಶ್ಯಕವಾಗಿದೆ. ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳನ್ನು ಆತುರಾತುರವಾಗಿ ಸ್ಥಾಪಿಸುವಲ್ಲಿ ಮುಖ್ಯವಾಗಿರುವುದು ಈ ತೊಡಕು.

**ಶ್ರೀ ಪಿ.ಜೆ. ಗ್ರಿಫಿತ್ಸ್ :** ತರಬೇತಿ ನಡೆಯುವುದಾದರೂ ಎಲ್ಲಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ವಿಷಯಕ್ಕೇ ನಾನು ಬರುತ್ತಿದ್ದೇನೆ. ಆದ್ದರಿಂದ ದೆಹಲಿಯಲ್ಲಿ ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಿದ್ದೇವೆ. ಇಂಗ್ಲೆಂಡಿನ ಕಾರ್ಮಿಕ ಇಲಾಖೆಗೆ ಸೇರಿದ ಶ್ರೀ ಜೋನ್ಸ್ ಅವರು ನಡೆಸುತ್ತಿರುವ ತರಬೇತಿ ಶಾಲೆ ಇದು. ಅವರು ಈ ಕೇಂದ್ರವನ್ನು ನಡೆಸುತ್ತಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರಕ್ಕೆ ಸಂಬಂಧಪಟ್ಟ ಎಲ್ಲಾ ವಿಧವಾದ ಉದ್ಯೋಗದ ವಿಚಾರವನ್ನು ಅಲ್ಲಿ

ತಿಳಿಸಿಕೊಡಲಾಗುತ್ತದೆ.

**ಪ್ರೊ॥ ಎನ್.ಜಿ. ರಂಗಾ :** ಒಮ್ಮೆ ಎಷ್ಟು ಮಂದಿಗೆ ನೀವು ತರಬೇತಿ ಕೊಡುತ್ತೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ಷಮಿಸಿ, ಇದರ ಬಗ್ಗೆ ನನ್ನ ಬಳಿ ಸರಿಯಾದ ಮಾಹಿತಿ ಇಲ್ಲ. ಈ ಪುಸ್ತಕಗಳಲ್ಲಿ ನಿಮಗೆ ಅದು ತಿಳಿಯುತ್ತದೆ. ಒಂದು ಬಾರಿಗೆ ೩೫ ಮಂದಿಗೆ ತರಬೇತು ಕೊಡಬಹುದೆಂದು ನನ್ನ ಭಾವನೆ.

**ಪ್ರೊ॥ ಎನ್.ಜಿ. ರಂಗಾ :** ಅವರ ನೇಮಕಕ್ಕೆ ಎಷ್ಟು ಸಮಯ ತೆಗೆದುಕೊಳ್ಳುವಿರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಮಸ್ಯೆಯೇನೆಂದರೆ ಈ ಹುದ್ದೆಗಳನ್ನು ಭರ್ತಿಮಾಡುವಾಗ ಫೆಡರಲ್ ಸಾರ್ವಜನಿಕ ಸೇವಾ ಆಯೋಗದ ನಿರ್ದೇಶನದ ಆಧಾರದ ಮೇಲೆ ಆಗುವುದರಿಂದ ಸದರಿ ಆಯೋಗವು ಕನಿಷ್ಠ ಪಕ್ಷ ಮೂರು ತಿಂಗಳನ್ನಾದರೂ ತೆಗೆದುಕೊಳ್ಳುತ್ತದೆ. ಫೆಡರಲ್ ಸಾರ್ವಜನಿಕ ಸೇವಾ ಆಯೋಗ ತೆಗೆದುಕೊಳ್ಳುವ ಈ ಮೂರು ತಿಂಗಳ ಸಮಯ ತೀರಾ ಹೆಚ್ಚೆಂದು ನಾನು ತಿಳಿಯುವುದಿಲ್ಲ. (ಪ್ರೊ॥ ರಂಗಾ ಅವರ ಮಧ್ಯಪ್ರವೇಶಿಕೆ) ಜಾಗ್ರತೆಯಾಗಿ ಇದನ್ನು ಕೈಗೊಳ್ಳಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದನ್ನಷ್ಟೇ ನಾನು ನಿಮಗೆ ತಿಳಿಸುತ್ತಿದ್ದೇನೆ. ಮೊದಲನೇ ಜಟಿಲತೆ ಎಂದರೆ, ಒಬ್ಬ ವ್ಯಕ್ತಿಯನ್ನು ಫೆಡರಲ್ ಸಾರ್ವಜನಿಕ ಸೇವಾ ಆಯೋಗದ ಮೂಲಕ ನೇಮಕ ಮಾಡುವ ಕೆಲಸ ಸ್ವಲ್ಪ ವಿಳಂಬಗತಿಯದೇ ಆಗಿದೆ. ಎರಡನೆಯದಾಗಿ, ಆತನನ್ನು ನಾವು ನೇಮಕ ಮಾಡಿಕೊಂಡ ನಂತರ ಆತನಿಗೆ ತರಬೇತು ಕೊಡಬೇಕು. ಇದೆಲ್ಲ ಸಮಯ ಹಿಡಿಯುವ ಪ್ರಕ್ರಿಯೆ, ಹಾಗಾಗಿ ಇದರಿಂದ ಸಮಯ ಪೋಲಾಗುತ್ತದೆಯೆಂದು ನಾನು ಭಾವಿಸುವುದಿಲ್ಲ.

ವಿನಿಮಯ ಕೇಂದ್ರಗಳನ್ನು ಕಾರ್ಮಿಕ ಇಲಾಖೆ ತೆರೆದಿಲ್ಲ ಎಂದು ಟೀಕೆ ಮಾಡುವ ಮಂದಿ ಎತ್ತುವ ಇನ್ನೊಂದು ಪ್ರಶ್ನೆಯೆಂದರೆ ಇದು. ಕಾರ್ಮಿಕ ಇಲಾಖೆ ಎಲ್ಲ ವಿನಿಮಯ ಕೇಂದ್ರಗಳನ್ನು ತಕ್ಷಣದಲ್ಲಿ ಸಿದ್ಧಗೊಳಿಸಿಲ್ಲ ಎಂಬುದು. ಹಾಗೆಂದ ಮಾತ್ರಕ್ಕೆ ಈ ವಿಷಯವಾಗಿ ನಮ್ಮ ಬಳಿ ಮೂಲ ವ್ಯವಸ್ಥೆ ಇಲ್ಲವೆಂದು ತಿಳಿಯಲಾಗದು. ಸದ್ಯದಲ್ಲಿ ರಕ್ಷಣಾ ಇಲಾಖೆಯಲ್ಲಿನ ಉದ್ಯೋಗ ಬ್ಯೂರೋ ನೇಮಕಾತಿ ಕೆಲಸವನ್ನು ಮಾಡುತ್ತಿದೆ ಮತ್ತು ವರ್ತಮಾನದಲ್ಲಿ ರಕ್ಷಣಾ ವಿಭಾಗದವರು ನಿರ್ವಹಿಸುತ್ತಿರುವ ಈ ಕೆಲಸವನ್ನು ಕಾಲಕ್ರಮದಲ್ಲಿ ಕಾರ್ಮಿಕ ಇಲಾಖೆಯವರೇ ನೋಡಿಕೊಳ್ಳಬೇಕೆಂಬುದು ಸರ್ಕಾರದ ನೀತಿ. ತನ್ನ ವಿನಿಮಯ ಕೇಂದ್ರಗಳನ್ನು ಹೆಚ್ಚಿಸಿಕೊಂಡು ಮುಂದುವರಿದಂತೆಲ್ಲಾ ಕಾರ್ಮಿಕ ಇಲಾಖೆಯು ಸದ್ಯದಲ್ಲಿ ರಕ್ಷಣಾ ಇಲಾಖೆ ನಿರ್ವಹಿಸುತ್ತಿರುವ ಜವಾಬ್ದಾರಿಗಳನ್ನು ಹೊತ್ತುಕೊಳ್ಳುವುದು. ತತ್ಪರಿಣಾಮವಾಗಿ, ಈಗ ಕಾರ್ಮಿಕ ಇಲಾಖೆ ಮತ್ತು ರಕ್ಷಣಾ ಇಲಾಖೆಗಳು ಸಂಪೂರ್ಣ ಸಹಕಾರದಿಂದ ಈ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಿವೆ. ನೇಮಕಾತಿ ಸಂಸ್ಥೆಯವರು ಇಂದು ನಡೆಸುತ್ತಿರುವ ಕೆಲಸವನ್ನು ಪುನರ್ವಸತಿ ವಿಷಯವಾಗಿ ಇನ್ನು ಮುಂದೆ ವಿನಿಮಯ ಕೇಂದ್ರಗಳೇ ಸ್ವತಂತ್ರವಾಗಿ ನಡೆಸುವಂತೆ ಮುಂದುವರಿಸಲಾಗುವುದು.

ಮಾನ್ಯರೆ, ಸದ್ಯದ ಪರಿಸ್ಥಿತಿಯಲ್ಲಿ ಕಾರ್ಮಿಕ ಇಲಾಖೆಯು ಕಾರ್ಯನಿರ್ವಹಿಸುತ್ತಿರುವ ರೀತಿಯಿಂದ ಸದನವು ತೃಪ್ತಿಗೊಂಡಿದೆಯೆಂದು ನನ್ನ ಭಾವನೆ. ಒಂದು ಮಾತು ಹೇಳಲು ನಾನು ಇಚ್ಛೆಪಡುತ್ತೇನೆ. ನಮ್ಮ ನಿರೀಕ್ಷೆಗಿಂತ ಮೊದಲೇ ಯುದ್ಧ ನಿಲುಗಡೆಯಾದ ಪ್ರಯುಕ್ತ ಈ ಪುನರ್ವಸತಿ ವಿಚಾರವು ನಮ್ಮೆದುರಿಗೆ ಬಂದಿದೆಯೆಂಬುದನ್ನು ಎಲ್ಲರೂ ಅರಿತಿದ್ದಾರೆ. ಆದಾಗ್ಯೂ ವಿಸರ್ಜಿತ ಸೈನಿಕರು ಆದಷ್ಟು ಶೀಘ್ರವಾಗಿ ನಾಗರಿಕ ಉದ್ಯೋಗವನ್ನು ಪಡೆಯುವಂತೆ ಕಾರ್ಮಿಕ ಇಲಾಖೆಯು ತನ್ನ ಶಕ್ತಿಮೀರಿ ಪ್ರಯತ್ನಿಸುವುದೆಂದು ನಾನು ತಮ್ಮೆಲ್ಲರಿಗೆ ಭರವಸೆ ನೀಡಬಯಸುತ್ತೇನೆ.

# ೬೦
# ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : "ಮಾನ್ಯರೆ, ಈ ಖೋತಾ ನಿರ್ಣಯದ ಉದ್ದೇಶವು ಗೌರವಾನ್ವಿತ ಸದಸ್ಯರು ಕೊಟ್ಟ ಸೂಚನೆಯಿಂದ ಸ್ಪಷ್ಟವಾಗಿದೆ. ತಾವು ಸೂಚಿಸುವ ಮೂರು ವಿಷಯಗಳಲ್ಲಿ ನಿರುದ್ಯೋಗ ಭತ್ಯೆ, ಸಪ್ರಮಾಣದ ತುಟ್ಟಿಭತ್ಯೆ ಮತ್ತು ಸಾಮಾಜಿಕ ಭದ್ರತೆಯ ಅನುಕೂಲತೆಗಳು – ಕಾರ್ಯಕಾರಿ ಮಂಡಳಿ ವಿಫಲವಾಗಿರುವುದರಿಂದ ಅವುಗಳನ್ನು ಚರ್ಚಿಸಬೇಕೆಂದು ಮಾನ್ಯ ಸದಸ್ಯರು ತಿಳಿಸಿರುತ್ತಾರೆ. ಈ ಖೋತಾ ನಿರ್ಣಯದ ಬಗ್ಗೆ ನಾನು ಮಾಡಬಯಸುವ ಮೊದಲನೆ ಪ್ರಸ್ತಾಪವೆಂದರೆ, ಇದು ಸಾಮಾನ್ಯ ಖೋತಾ ನಿರ್ಣಯ ಆಗಿದ್ದ ಪಕ್ಷದಲ್ಲಿ ಬೇರೆ ರೀತಿಯಲ್ಲೇ ಚರ್ಚಿತವಾಗುತ್ತಿತ್ತು, ಆದರೆ ಸದನವು ಈಗಾಗಲೇ ಗಮನಿಸಿರುವಂತೆ, ಈ ಖೋತಾ ನಿರ್ಣಯವನ್ನು ಕೇಂದ್ರ ಸರ್ಕಾರದ ನೌಕರರಿಗೆ ಮಿತಿಗೊಳಿಸಲಾಗಿದೆ. ನನ್ನ ಅಭಿಪ್ರಾಯದಲ್ಲಿ ಇದು ಈ ಸೂಚನೆಯಲ್ಲಿರುವ ಪ್ರಧಾನ ದೋಷವಾಗಿದೆ. ಈ ಖೋತಾ ಸೂಚನೆಯನ್ನು ಮಂಡಿಸಿದ ಮಾನ್ಯ ಸದಸ್ಯರ ಇಚ್ಛೆ ಅಥವಾ ಒಲವು ಕಾರ್ಮಿಕ ವರ್ಗದಲ್ಲಿ ಕೆಲವರನ್ನು ಮಾತ್ರ ಅತಿ ಪ್ರತಿಷ್ಠಿತರನ್ನಾಗಿ ಮಾಡುವ ಕಡೆಗಿದೆಯೋ ಏನೋ ಗೊತ್ತಿಲ್ಲ. ಕೇಂದ್ರ ಸರ್ಕಾರದ ನೌಕರರು ಆ ಪ್ರತಿಷ್ಠಿತ ವರ್ಗಕ್ಕೆ ಸೇರಿರುವುದು ಸದ್ಯದ ಪರಿಸ್ಥಿತಿಯಾಗಿದೆ.

ಈ ದೇಶದಲ್ಲಿ ಕಾರ್ಮಿಕರನ್ನು ನೇಮಕ ಮಾಡಿಕೊಂಡಿರುವುದು ಕೇವಲ ಸರ್ಕಾರ ಮಾತ್ರವಲ್ಲ. ಖಾಸಗಿ ಮಾಲೀಕರೂ ಸಹ ಅಸಂಖ್ಯಾತ ಮಂದಿಯನ್ನು ನೇಮಕ ಮಾಡಿಕೊಂಡಿದ್ದಾರೆ. ಭಾರತ ಸರ್ಕಾರ ಕಾರ್ಮಿಕರ ಏಳಿಗೆಗಾಗಿ ನೀತಿಯನ್ನು ರೂಪಿಸುವಾಗ ಒಂದು ವರ್ಗವನ್ನು ಪ್ರತಿಷ್ಠಿತ ವರ್ಗವನ್ನಾಗಿಸಿ ಮತ್ತೊಂದು ವರ್ಗವನ್ನು ಅಪ್ರತಿಷ್ಠಿತ ವರ್ಗವನ್ನಾಗಿ ಮಾಡಬಾರದೆಂದು ಈ ಸದನದಲ್ಲಿರುವರೆಲ್ಲರೂ ಒಪ್ಪುತ್ತಾರೆಂದು ತಿಳಿಯುವೆ. ಭಾರತ ಸರ್ಕಾರ ಕೇವಲ ಕಾರ್ಮಿಕರನ್ನು ನೇಮಿಸಿಕೊಳ್ಳುವ ಯಜಮಾನನಲ್ಲ. ಅದು ಪ್ರಭುತ್ವವೂ ಕೂಡ. ಅದು ಸರ್ಕಾರವಾದ್ದರಿಂದ ಸರ್ಕಾರಿ ನೌಕರರ ಬಗೆಗಿನ ಹೊಣೆ ಹೊರುವುದರ ಜೊತೆಗೆ ರಾಷ್ಟ್ರದ ಎಲ್ಲ ಕಾರ್ಮಿಕರ ಜವಾಬ್ದಾರಿಯನ್ನು ಹೊರಬೇಕಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಮಂಡಿಸಿದ ಸೂಚನೆಯನ್ನು ಪರಿಗಣಿಸುತ್ತಾ ಭಾರತ ಸರ್ಕಾರವು ತನ್ನ ಕಾರ್ಮಿಕ ನೀತಿಯನ್ನು ರೂಪಿಸುವಾಗ ಕೇವಲ ಒಂದು ವರ್ಗದ ಕಾರ್ಮಿಕರ ಹಿತರಕ್ಷಣೆಯ ಕಡೆ ಪೂರ್ತಿ ಓಲದೆ ರಾಷ್ಟ್ರದ ಎಲ್ಲ ಕಾರ್ಮಿಕರ ಹಿತ ಕಾಪಾಡುವ ಕಡೆ ಯೋಚಿಸಬೇಕಾದುದು ಅಗತ್ಯ.

ಮಾನ್ಯರೆ, ನನ್ನ ಗೌರವಾನ್ವಿತ ಗೆಳೆಯರು ಪ್ರಸ್ತಾಪಿಸುವಂತೆ ಭಾರತ ಸರ್ಕಾರವು ತನ್ನ ನೌಕರರ ವಿಷಯದಲ್ಲಿ ಬೇರೆ ಬೇರೆ ವರ್ಗದ ಕಾರ್ಮಿಕರಿಗೆ ಬೇರೆ ಬೇರೆ ತರಹದ ಭತ್ಯೆ ಮತ್ತು ವೇತನವನ್ನು ಗೊತ್ತುಪಡಿಸಿದೆ. ಈ ವಿಷಯ ನನಗೆ ಚೆನ್ನಾಗಿ ಅರಿವಿದೆ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ; ಆದರೆ ನಾನು ಕೇಳುವ ಒಂದು ಪ್ರಶ್ನೆಯೆಂದರೆ, ಭಾರತ ಸರ್ಕಾರದ ನೌಕರರು ಇಂದು ಮೂಲವೇತನದಲ್ಲಾಗಲೀ, ತುಟ್ಟಿಭತ್ಯೆಯಲ್ಲಾಗಲೀ ಅಥವಾ ಗ್ರಾಚ್ಯುಟಿ ಅಥವಾ ಇನ್ನಾವುದೇ ಅನುಕೂಲಗಳಲ್ಲಾಗಲೀ ತಾರತಮ್ಯ ಕಾಣುತ್ತಿರುವುದಕ್ಕೆ ಯಾರು ಹೊಣೆಗಾರರು? ಇದಕ್ಕೆ ಸಂಪೂರ್ಣವಾಗಿ ಕಾರ್ಮಿಕ ನಾಯಕರೇ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ ೩ – ಸಂಖ್ಯೆ ೭, ೧೧ನೇ ಮಾರ್ಚ್ ೧೯೪೬, ಪು. ೨೧೩೮–೪೦.

ಹೊಣೆಯಾಗಿದ್ದಾರೆಂದು ನಾನು ನಿಸ್ಸಂದೇಹವಾಗಿ ಹೇಳುತ್ತೇನೆ. ನಮ್ಮ ಹತ್ತಿರ ಈಗ ರೈಲ್ವೆ ನೌಕರರ ಫೆಡರಷನ್ ಇದೆ. ರೈಲ್ವೆ ನೌಕರರ ಫೆಡರೇಷನ್‌ನ ನೀತಿ ನಿರೂಪಣೆಯನ್ನು ಓದಿದ ಯಾರಿಗೇ ಆಗಲಿ ಗೊತ್ತಾಗುತ್ತದೆ, ಇವರು ತಮ್ಮ ಹಿತ ಕಾಪಾಡುವಲ್ಲಿಯೂ ಸ್ವಾರ್ಥತೆಯನ್ನು ಪ್ರಕಟಿಸಿರುವರೆಂದು. ಇಡೀ ಸಮುದಾಯದ ಬದುಕು ಅವಲಂಬಿತವಾಗಿರುವ ಒಂದು ಅತ್ಯಂತ ಪ್ರಮುಖವಾಗಿರುವ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ರೈಲ್ವೆ ನೌಕರರು ತಮ್ಮ ಸ್ಥಾನದ ಅನಿವಾರ್ಯತೆಯನ್ನು ಅರ್ಥಮಾಡಿಕೊಂಡು ಕೆಲವು ಸವಲತ್ತುಗಳನ್ನು ಪಡೆಯಲೆಂದೇ ರೈಲ್ವೆ ಇಲಾಖೆಗೆ ಎಡತಾಕುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೆಲವು ಶಾಸನಸಭೆಯ ಸದಸ್ಯರನ್ನು ಮನವೊಲಿಸಿ ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡುವಂತೆ ಪುಸಲಾಯಿಸುತ್ತಾರೆ. ಇದರಿಂದ ಈ ಸದಸ್ಯರು ಕೇವಲ ರೈಲ್ವೆ ನೌಕರರಿಗೆ ಮಾತ್ರ ಕೆಲವು ವಿಶೇಷ ಸೌಲಭ್ಯಗಳನ್ನು ದೊರಕಿಸಿಕೊಡುವಷ್ಟಕ್ಕೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ, ತತ್ಪರಿಣಾಮವಾಗಿ ಪಕ್ಷಪಾತವುಂಟಾಗುತ್ತದೆ. ಬಹಿರಂಗವಾಗಿ ಹಾಗೆ ಹೇಳಿಕೊಳ್ಳದಿದ್ದರೂ ಕೇಂದ್ರ ಸರ್ಕಾರದ ಬೇರೆ ಇಲಾಖೆಯ ನೌಕರರಿಗಿಂತ ನಾವು ಯಾವಾಗಲೂ ಮುಂದಿರಬೇಕೆಂಬುದು ರೈಲ್ವೆ ನೌಕರರ ಇಂಗಿತವಾಗಿರುವುದು ಸರ್ವವೇದ್ಯವಾಗಿದೆ. ಅಂಚೆ ಇಲಾಖೆಯವರಿಗೆ ರೈಲ್ವೆ ಇಲಾಖೆಯವರ ವೇತನದ ಸಮಪ್ರಮಾಣವನ್ನು ನೀಡಿದರೆ ಕೂಡಲೇ ರೈಲ್ವೆ ನೌಕರರು ವೇತನ ವಿಷಯದಲ್ಲಿ ಲಾಗಾಯ್ತಿನಿಂದ ತಾವು ಕಾಪಾಡಿಕೊಂಡು ಬಂದ ಮುಂಚೂಣಿ ಸ್ಥಾನವನ್ನು ಮತ್ತೆ ಪುನಃ ಸ್ಥಾಪಿಸಬೇಕೆಂದು ಸರ್ಕಾರದ ಮೇಲೆ ಒತ್ತಾಯ ತರುತ್ತಾರೆ.. ಈ ಬಗೆಯ ರೀತಿ–ರಿವಾಜು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಇದರಿಂದ ಕಾರ್ಮಿಕ ಇಲಾಖೆಯ ಸ್ಥಿತಿ ಬಹಳ ಜಟಿಲವಾಗಿದೆ. ನನ್ನ ಗೌರವಾನ್ವಿತ ಸದಸ್ಯರು ತಿಳಿಸಿದುದು, ಇಲ್ಲವೆ ಸೂಕ್ಷ್ಮವಾಗಿ ಸಲಹೆ ಮಾಡಿದುದೇನೆಂದರೆ ಕಾರ್ಮಿಕ ಇಲಾಖೆ ನ್ಯಾಯಮಂಡಳಿಗಳನ್ನು ನೇಮಿಸುತ್ತಿಲ್ಲ ಎಂದು; ಆದರೆ ಪ್ರತ್ಯೇಕವಾದ ಮೊಕದ್ದಮೆಗಳಿಗೆ ಬೇರೆ ಬೇರೆ ಮಂಡಳಿಗಳನ್ನು ರಚಿಸುವುದರಲ್ಲಿ ಏನು ಅರ್ಥವಿದೆ? ಇದರ ಪರಿಣಾಮವಾಗಿ ತತ್ಕಾಲೀನ ಮಂಡಳಿಗಳ ಸ್ಥಾಪನೆಯಾಗುತ್ತದೆ, ತತ್ಕಾಲೀನ ವರದಿಗಳು, ತತ್ಕಾಲೀನ ತೀರ್ಮಾನಗಳು ಮತ್ತು ಇವುಗಳನ್ನು ತತ್ಕಾಲೀನವಾಗಿ ನಿರ್ವಹಿಸಬೇಕಾಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಇವೆಲ್ಲದರ ಒಟ್ಟು ಫಲಿತಾಂಶವೆಂದರೆ ತಾರತಮ್ಯ. ಆದ್ದರಿಂದ ಈ ದಿನ ನಮ್ಮ ಮುಂದೆ ಉದ್ಭವವಾಗಿರುವ ಸಮಸ್ಯೆಗೆ ನಮ್ಮಲ್ಲಿನ ದೋಷಪೂರಿತ ವ್ಯವಸ್ಥೆಯೇ ಮೂಲ ಕಾರಣ – ಅಂದರೆ ಭಾರತ ಸರ್ಕಾರ ನೇಮಕ ಮಾಡಿಕೊಂಡಿರುವ ನೌಕರ ವರ್ಗವೇ ಕಾರಣವಾಗಿದೆ. ಭಾರತ ಸರ್ಕಾರ ಇತ್ತೀಚೆಗೆ ವೇತನ ಆಯೋಗವೊಂದನ್ನು ನೇಮಕ ಮಾಡಲು ತೀರ್ಮಾನಿಸಿರುವುದನ್ನು ಈ ಸದನವು ಸ್ವಾಗತಿಸುವುದೆಂದು ನನ್ನ ಭಾವನೆ. ಏಕೆಂದರೆ, ಭಾರತ ಸರ್ಕಾರವು ತನ್ನ ನೌಕರರಿಗೆ ನೀಡುವ ವೇತನಶ್ರೇಣಿ ಮತ್ತು ಅದೇ ಬಗೆಯ ನೌಕರರಿಗೆ ಖಾಸಗಿ ವಲಯದವರು ನೀಡುವ ವೇತನಶ್ರೇಣಿಯನ್ನು ಪರಿಶೀಲಿಸಲು ಆಯೋಗಕ್ಕೆ ಸಾಧ್ಯವಾಗುವುದು. ಈ ಆಯೋಗವು ಮಾಡುವ ಕೆಲವು ಶಿಫಾರಸುಗಳ ಆಧಾರದ ಮೇಲೆ ನಮ್ಮ ದೇಶದಲ್ಲಿ ವೇತನ ವ್ಯವಸ್ಥೆಯಲ್ಲಿ ಒಂದು ಬಗೆಯ ಏಕರೂಪತೆಯನ್ನು ತರಲು ಸಾಧ್ಯವಾಗಿ ಪ್ರತಿಯೊಬ್ಬರಿಗೂ ಯಾವ ತತ್ವದ ಆಧಾರದ ಮೇಲೆ ವೇತನಗಳ ನಿಗದಿಯಾಗಿವೆ ಎಂಬುದು ಮನವರಿಕೆಯಾಗುವುದೆಂದು ಆಶಿಸಬಹುದು.

ನನಗೆ ಕಾಣುವ ಎರಡನೆಯ ಜಟಿಲತೆಯೆಂದರೆ, ನೇರವಾಗಿ ಆದಾಯವನ್ನು ಗಳಿಸುವ ಭಾರತ ಸರ್ಕಾರದ ಕೆಲವು ಇಲಾಖೆಗಳು ಗಳಿಸಿದ ಹಣದಲ್ಲಿ ಮೊದಲು ತಮಗೆ ಪಾಲು ದೊರೆಯಬೇಕೆಂದು ತಿಳಿದಿರುವಂತಿದೆ. ರೈಲ್ವೆ ಇಲಾಖೆ ಸ್ವಲ್ಪ ಲಾಭ ಗಳಿಸುತ್ತಿದೆ; ಹಾಗಾಗಿ ಗಳಿಕೆಯಲ್ಲಿನ ಸ್ವಲ್ಪ ಭಾಗ ತಮಗೆ ದಕ್ಕಬೇಕೆಂದು ರೈಲ್ವೆ ನೌಕರರು ತಿಳಿದಿದ್ದಾರೆ. ಅದರಂತೆಯೇ ಅಂಚೆ ಇಲಾಖೆಯವರು ಸ್ವಲ್ಪ ಲಾಭವನ್ನು

ಗಳಿಸಿದರೆ, ತಮ್ಮ ಜೀವನಮಟ್ಟದಲ್ಲಿ ಉತ್ತಮಿಕೆ ಸಾಧಿಸಿಕೊಳ್ಳಲು ಆ ಲಾಭದ ಕೊಂಚ ಭಾಗ ತಮಗೆ ದಕ್ಕಬೇಕೆಂದು ಅವರು ತಿಳಿಯುತ್ತಾರೆ. ಮಾನ್ಯರೆ, ನನಗೆ ಸಂಬಂಧಿಸಿದಂತೆ ಹೇಳುವುದಾದರೆ ನಾನು ಈ ಇಲಾಖೆಯವರ ಧೋರಣೆಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತೇನೆ. ಭಾರತ ಸರ್ಕಾರದ ಆದಾಯವು – ಅದು ತೆರಿಗೆ ಹೆಚ್ಚಿಸುವುದರಿಂದ ಲಭ್ಯವಾಗಿರಲಿ ಅಥವಾ ಬೇರೆ ವಾಣಿಜ್ಯ ವ್ಯವಹಾರದ ಮೂಲಕ ಗಳಿಸಿದುದಾಗಿರಲಿ – ಭಾರತ ಸರ್ಕಾರಕ್ಕೆ ಸೇರಿದುದು. ಯಾವುದೇ ಒಂದು ಇಲಾಖೆಯ ಜನರಿಗೆ ಈ ಧನಸಂಪತ್ತು ಸೇರ್ಪಡೆಯಾಗುವುದಿಲ್ಲ. ಈ ಧನಸಂಪತ್ತು ಭಾರತ ಸರ್ಕಾರದ್ದಾಗಿರುವುದರಿಂದ ಇಡೀ ದೇಶದ ಜನರಿಗೆ ಇದು ಸಲ್ಲಬೇಕಾಗಿದೆ ಮತ್ತು ತಾವು ಆದಾಯವನ್ನು ಗಳಿಸುವ ಇಲಾಖೆಯಾಗಿರುವ ಕಾರಣದಿಂದ ಗಳಿಸಿದ ಹಣದಲ್ಲಿ ಮೊದಲು ತಮಗೆ ಸ್ವಲ್ಪ ಭಾಗ ದಕ್ಕಬೇಕೆಂದು ಯಾವ ಇಲಾಖೆಯಾದರೂ ಹಟಹಿಡಿದರೆ ನಾನು ಆ ಮಾರ್ಗವನ್ನು ಖಂಡಿಸುತ್ತೇನೆ. ಇದರಿಂದ ಅರಾಜಕತೆ ಉಂಟಾಗುತ್ತದೆ, ನಾನು ಮಾತ್ರ ಆ ರೀತಿಯಾಗುವುದಕ್ಕೆ ಆಸ್ಪದ ಕೊಡುವುದಿಲ್ಲ.

ಮಾನ್ಯರೆ, ನನ್ನ ಗೆಳೆಯರು ಇನ್ನು ತಮ್ಮ ಖೋತಾ ಸೂಚನೆಯಲ್ಲಿ ನಿರುದ್ಯೋಗದ ಸಮಸ್ಯೆಯನ್ನು ಪ್ರಸ್ತಾಪಿಸಿದ್ದಾರೆ. ಅವರು ಎತ್ತಿರುವ ಎಲ್ಲ ಪ್ರಶ್ನೆಗಳಿಗೂ ವಿವರವಾಗಿ ನಾನು ಉತ್ತರ ಕೊಡಹೋಗುವುದಿಲ್ಲ; ನಿರುದ್ಯೋಗದ ಭತ್ಯೆಯ ಬಗ್ಗೆ ಮಾತ್ರ ಹೇಳುವುದಾದರೆ ಇದು ಕೂಡ ಖಂಡಿತವಾಗಿ ಅತ್ಯಂತ ದೋಷಪೂರಿತವಾದ ವಾದವಾಗಿದೆ. ನಿರುದ್ಯೋಗವನ್ನು ಉದ್ಯೋಗದಿಂದ ಬಗೆಹರಿಸಬೇಕೇ ಹೊರತು ಬೇರೆ ಯಾವ ಪರಿಹಾರದ ಮಾರ್ಗವಾಗಿಯೂ ಅಲ್ಲ. ಪರಿಹಾರದ ಮೂಲಕ ನಿರುದ್ಯೋಗವನ್ನು ಶಮನಮಾಡಲು ಸಾಧ್ಯವಾಗುವುದು ನಿರುದ್ಯೋಗ ಸಮಸ್ಯೆ ತೀರಾ ಗೌಣವಾಗಿದ್ದಾಗ. ಅದು ಬಾಲದ ರೂಪದಲ್ಲಿದ್ದಾಗ ಮಾತ್ರವಲ್ಲದೆ ಭಾರಿ ಶರೀರದಂತಿದ್ದರೆ ಅಲ್ಲ. ಎಲ್ಲರಿಗೂ ತಿಳಿದಿರುವಂತೆ ನಮ್ಮ ದೇಶದಲ್ಲಿ ಶೇಕಡಾ ೫೦ ರಿಂದ ೬೦ ಭಾಗದ ಜನಕ್ಕೆ ಉದ್ಯೋಗವಿಲ್ಲ ಮತ್ತು ಅವರಿಗೆಲ್ಲರಿಗೂ ಉದ್ಯೋಗಾವಕಾಶ ಕಲ್ಪಿಸಬೇಕಾದ ಅಗತ್ಯವಿದೆ. ಈ ಶೇಕಡಾ ೫೦ ರಿಂದ ೬೦ ಭಾಗದ ಮಂದಿಗೆ ಪರಿಹಾರದ ಮೂಲಕವಾಗಿಯೇ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಯಾರಾದರೂ ಪಟ್ಟು ಹಿಡಿದರೆ ಮತ್ತು ಅದನ್ನೇನಾದರೂ ಅನುಷ್ಠಾನಕ್ಕೆ ತಂದರೆ ನಿಸ್ಸಂದೇಹವಾಗಿ ಈ ದೇಶ ದಿವಾಳಿ ಏಳುತ್ತದೆ. ಹಾಗಾಗಿ ನಿರುದ್ಯೋಗವನ್ನು ಪರಿಹರಿಸುವ ಏಕೈಕ ಮಾರ್ಗವೆಂದರೆ ಹೆಚ್ಚಿನ ಪ್ರಮಾಣದ ಕೈಗಾರಿಕೀಕರಣ ಎಂಬುದನ್ನು ನನ್ನ ಸ್ನೇಹಿತರು ನಂಬಬೇಕು. ಆದಕಾರಣ ಹೆಚ್ಚಿನ ಪ್ರಮಾಣದ ಮತ್ತು ತ್ವರಿತಗತಿಯ ಕೈಗಾರಿಕೀಕರಣದಿಂದ ಮಾತ್ರ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗುವುದರಿಂದ ಈ ಸದನಕ್ಕೆ ಈಗಾಗಲೇ ತಿಳಿದಿರುವಂತೆ ಭಾರತ ಸರ್ಕಾರ ಈ ದಿಶೆಯಲ್ಲಿ ಯೋಜನೆ ತಯಾರಿಸಿ ಕಾರ್ಯರೂಪಕ್ಕೆ ತರುವ ಹಂತದಲ್ಲಿದೆ. ಈ ನಿಟ್ಟಿನಲ್ಲಿ ನಾನು ಸುದೀರ್ಘವಾಗಿ ಚರ್ಚಿಸುವ ಉದ್ದೇಶ ಹೊಂದಿಲ್ಲದಿದ್ದರೂ, ಈ ಸದನಕ್ಕೆ ಒಂದು ವಿಷಯವನ್ನು ಹೇಳಲು ಬಯಸುತ್ತೇನೆ, ಅದೇನೆಂದರೆ, ಸರ್ವರ ಜೀವನಮಟ್ಟ ಉತ್ತಮವಾಗಲು ಮತ್ತು ಕಾರ್ಮಿಕರ ಸಾಮಾಜಿಕ ಭದ್ರತೆ ಅಧಿಕವಾಗುವ ದಾರಿಯಲ್ಲಿ ಭಾರತ ಸರ್ಕಾರ ಏನು ಕಾರ್ಯಕ್ರಮ ಕೈಕೊಂಡಿದೆ ಎಂಬುದರ ಬಗ್ಗೆ ತಿಳಿಸುವುದು.

ಗೌರವಾನ್ವಿತ ಸದನದ ಗಮನಕ್ಕೆ ಬಂದಿರುವಂತೆ ಭಾರತ ಸರ್ಕಾರವು ಕಾರ್ಮಿಕರನ್ನು ಕುರಿತಾಗಿ ಈಗಾಗಲೇ ತನ್ನ ನೀತಿಯನ್ನು ಪ್ರಕಟಿಸಿದೆ. ಅದರ ವಿಷಯವಾಗಿ ವಿವರಿಸುವಂಥ ಭಾಗಗಳನ್ನು ಓದಿ ತಿಳಿಸಲು ನನಗೆ ಈಗ ಸಮಯವಿಲ್ಲ. ಮಂಡಳಿಯ ಪುನರ್ನಿರ್ಮಾಣ ಸಮಿತಿಯ ಎರಡನೆಯ ಭಾಗದಲ್ಲಿ ಶೀರ್ಷಿಕೆ XXVರ ಕೆಳಗೆ ಪುಟಗಳು ೫೫ ಮತ್ತು ೫೬ರಲ್ಲಿ ಈ ಬಗ್ಗೆ ಮಾಹಿತಿ ಕೊಡಲಾಗಿದೆ. ಆದ್ದರಿಂದ

ಸರ್ಕಾರಕ್ಕೆ ಈ ವಿಷಯವಾಗಿ ಏನೂ ಕಾಳಜಿ ಇಲ್ಲ ಎಂದು ಯಾರೂ ಆಪಾದಿಸುವಂತಿಲ್ಲ. ನಮಗೆ ಇದರ ಬಗ್ಗೆ ಗಮನ ಇದೆ ಮತ್ತು ನಾವು ಇದನ್ನು ಗಮನಿಸಿಯೇ ಇದ್ದೇವೆ. ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಭಾರತ ಸರ್ಕಾರಕ್ಕೆ ಗುರಿ ಮತ್ತು ಉದ್ದೇಶ ಇದೆ, ಅಷ್ಟೇ ಅಲ್ಲ ಅದು ತನ್ನ ಗುರಿಸಾಧನೆಗಾಗಿ ಕ್ರಿಯಾಯೋಜನೆಯೊಂದನ್ನು ತಯಾರಿಸಿದೆ. ಕ್ರಿಯಾಯೋಜನೆಯ ಬಗ್ಗೆ ಹೇಳುವುದಾದರೆ ಭಾರತ ಸರ್ಕಾರವು ಎರಡು ವರ್ಷಗಳ ಹಿಂದೆಯೇ ಒಂದು ಮಾಹಿತಿ ಸಂಗ್ರಹಣಾ ಸಮಿತಿಯನ್ನು ರಚಿಸಿ ಕಾರ್ಮಿಕರ ಸ್ಥಿತಿಗತಿ ಹೇಗಿದೆ ಎಂದು ತಿಳಿಯಲು ದೇಶದಾದ್ಯಂತ ಸರ್ವೇಕ್ಷಣ ನಡೆಸಲು ಆದೇಶ ನೀಡಿತ್ತು. ಇದುವರೆಗೆ ೩೪ ಬೇರೆ ಬೇರೆ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ೩೪ ಬೇರೆ ಬೇರೆ ಸಾಮಾನ್ಯ ವರದಿಗಳನ್ನು ಈ ಸಮಿತಿ ಕೊಟ್ಟಿದೆ ಮತ್ತು ಎಲ್ಲಾ ವರದಿಗಳ ಬಗ್ಗೆ ಒಂದು ವಿಹಂಗಮ ವರದಿಯನ್ನು ನೀಡಿದೆ. ಈ ವರದಿಗಳಲ್ಲಿ ೧೮ ವರದಿಗಳು ಈಗಾಗಲೇ ಅಚ್ಚಾಗಿವೆ, ಉಳಿದವು ಅಚ್ಚಿನಲ್ಲಿವೆ. ಕಾರ್ಮಿಕರ ಕೈಗಾರಿಕಾ ಸ್ಥಿತಿಗತಿಯ ಬಗ್ಗೆ ಈ ರೀತಿಯ ಸಾಮಾನ್ಯ ವರದಿಗಳನ್ನು ಸಿದ್ಧಪಡಿಸಿಕೊಂಡಿರುವುದರ ಜೊತೆಗೆ ಭಾರತ ಸರ್ಕಾರವು ಪ್ರೊ॥ ಆಧಾರ್‌ಕರ್‌ರವರನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಿಸಿ ಈ ದೇಶದ ಕಾರ್ಮಿಕರ ಆರೋಗ್ಯ ವಿಮೆಯ ಬಗ್ಗೆ ಒಂದು ವರದಿ ತಯಾರಿಸಲು ಕೇಳಿದೆ. ನಾನು ತಿಳಿಸಿದಂತೆ, ನಮಗೊಂದು ಉದ್ದೇಶವಿದೆ ಮತ್ತು ಅದನ್ನು ಸಾಫಲ್ಯಗೊಳಿಸುವಂಥ ಕ್ರಿಯಾಯೋಜನೆಯೂ ಇದೆ; ಅಷ್ಟೇ ಅಲ್ಲದೆ, ನಮ್ಮ ಬಳಿ ಈಗ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಯಾವುದೇ ಸಾಮಾಜಿಕ ಭದ್ರತಾ ಯೋಜನೆಯನ್ನು ತಯಾರಿಸಲು ಶಕ್ಯವಿದೆ. ಭಾರತ ಸರ್ಕಾರದ ಮುಂದಿನ ಹೆಜ್ಜೆಯೆಂದರೆ ಈ ಸಾಮಾಜಿಕ ಭದ್ರತೆಯನ್ನು ಹೇಗೆ ರೂಪಿಸಬೇಕೆಂಬುದು. ಸದನಕ್ಕೆ ತಿಳಿದಿರುವಂತೆ ಸದ್ಯದಲ್ಲಿ ಈಗ ಎರಡು ದೃಷ್ಟಿಕೋನಗಳಿವೆ. ಉಳಿದೆಲ್ಲಾ ಕೈಗಾರಿಕಾ ರಾಷ್ಟ್ರಗಳು ಮುಂದುವರಿದಿರುವಂತೆ ಹಂತಹಂತವಾಗಿ ಮುಂದುವರಿಯುವುದು – ಹಾಗೆ ಮಾಡುವಾಗ ಪ್ರತಿಯೊಂದು ಅಭದ್ರವಾದ ಅಂಶವನ್ನು ಪ್ರತ್ಯೇಕವಾಗಿ ಗಮನಿಸುತ್ತಾ ಆ ಅಭದ್ರತೆಯ ವಿಷಯವಾಗಿ ಪರಿಹಾರ ಕಂಡುಕೊಳ್ಳಲು ಆಡಳಿತಾತ್ಮಕ ಯಂತ್ರವನ್ನು ನಿರ್ಮಿಸುವುದು, ಇನ್ನೊಂದು, ಹೆಚ್ಚು ಕಡಿಮೆ ಬೆವರಿಡ್ಜ್ ಯೋಜನೆಯನ್ನು ಹೋಲುವಂಥದು; ಇದರ ಪ್ರಕಾರ ಯೋಜನೆಯನ್ನು ಅನುಸರಿಸಿದರೆ ಒಳ್ಳೆಯದು ಎಂದು ನಾನು ಈಗಲೇ ಯಾವ ತೀರ್ಮಾನವನ್ನು ಕೊಡುವುದಿಲ್ಲ. ಭಾರತ ಸರ್ಕಾರ ಈ ವಿಷಯವಾಗಿ ಕೂಲಂಕಷ ವರದಿಯೊಂದನ್ನು ತಯಾರಿಸುವಂತೆ ಒಂದು ಸಮಿತಿಯನ್ನು ನೇಮಕ ಮಾಡುತ್ತದೆ; ಆ ಸಮಿತಿಯು ಹಂತಹಂತವಾಗಿ ಮುಂದುವರಿಯುವ ಮಾರ್ಗ ಹಿತವೋ, ಅಥವಾ ಬೆವರಿಡ್ಜ್ ಯೋಜನೆಯನ್ನು ಹೋಲುವಂಥ ಮಾದರಿ ಕ್ಷೇಮವೋ ಎಂಬುದರ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವುದು. ಸಮಾಯಾಭಾವದಿಂದ ಸುದೀರ್ಘವಾಗಿ ತಿಳಿಸಲು ಸಾಧ್ಯವಾಗದುದರಿಂದ ಈ ಸಂಕ್ಷಿಪ್ತವಾದ ಸರ್ವೇಕ್ಷಣೆಯನ್ನೇ ಸದನದ ಮುಂದಿಟ್ಟಿದ್ದೇನೆ; ಇದರ ಬೆಳಕಿನಲ್ಲಿ ಸದನವು ಗೌರವಾನ್ವಿತ ಸದಸ್ಯರು ಮಂಡಿಸಿದ ಖೋತಾ ಸೂಚನೆಯಲ್ಲಿ ಆಪಾದಿಸಿರುವಂತೆ ಕಾರ್ಯಕಾರಿ ಮಂಡಳಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಒದಗಿಸುವಲ್ಲಿ ನಿರ್ಲಕ್ಷ್ಯ ತಾಳಿದೆ ಎಂಬುದರಲ್ಲಿ ಹುರುಳಿಲ್ಲವೆಂದು ತಿಳಿಯಬೇಕು; ಆದಕಾರಣ ಅವರು ಮಂಡಿಸಿರುವ ಸೂಚನೆಯನ್ನು ಸದನವು ಅಂಗೀಕರಿಸುವುದಿಲ್ಲವಾಗಿ ನಾನು ಭಾವಿಸುವೆ.”

# ೬೧
# ಕಾರ್ಮಿಕ ಇಲಾಖೆಯಲ್ಲಿ ಮುಸಲ್ಮಾನರ ಸ್ಥಿತಿಗತಿ ಉತ್ತಮವಾಗಿದೆ*

**ಅಧ್ಯಕ್ಷರು :** ಶ್ರೀ ಜಾಫರ್ ಅವರ ಖೋತಾ ಸೂಚನೆಯ ಮೇಲೆ ಈಗ ಚರ್ಚೆ ಪುನರಾರಂಭವಾಗುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯ ಅಧ್ಯಕ್ಷರೆ, ಈ ಸದನದ ಅನೇಕ ಸದಸ್ಯರ ನೆನಪಿನಲ್ಲಿರುವಂತೆ ಕಾರ್ಮಿಕ ಇಲಾಖೆಯ ಮೇಲೆ ಅನೇಕರು ಕಲ್ಲೆಸೆದಿದ್ದಾರೆ.

**ನವಾಬ್‌ಜಾದಾ ಲಿಯಾಕತ್ ಅಲಿಖಾನ್ (ಮೀರತ್ ವಿಭಾಗ**–ಮುಸಲ್ಮಾನರು–ಗ್ರಾಮಾಂತರ):– ಇಟ್ಟಿಗೆಗಳನ್ನು, ಕಲ್ಲುಗಳನ್ನಲ್ಲ .......

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಖೋತಾ ಸೂಚನೆಗೂ ಮೊದಲು ಎಸೆಯಲ್ಪಟ್ಟ ಇಟ್ಟಿಗೆಗಳೂ ಅನ್ನಿ. ನನ್ನ ಇಲಾಖೆಯಲ್ಲಿ ಮುಸಲ್ಮಾನರ ಸ್ಥಾನಮಾನಗಳೇನೆಂದು ನಾನು ತಿಳಿಸಲು ಈಗ ಎದ್ದುನಿಂತಿದ್ದೇನೆ. ನಿನ್ನೆಯ ದಿನ ಈ ಖೋತಾ ಸೂಚನೆಯ ಮೇಲೆ ಮಾತನಾಡಿದ ಇಬ್ಬರು ಭಾಷಣಕಾರರು ಭಾರತ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಮುಸ್ಲಿಮರ ಪ್ರಮಾಣ ಎಷ್ಟು ಎಂಬುದರ ಬಗ್ಗೆ ಒಂದು ರೀತಿಯ ವೀಕ್ಷಕ ವಿವರಣೆಯನ್ನು ನೀಡಿದ್ದಾರೆ. ಈ ವಿವರಣೆಯನ್ನು ನಾನು ಕೇಳಿಸಿಕೊಳ್ಳುತ್ತಿದ್ದರಂತೆಯೇ ನನಗೆ ಹೆಮ್ಮೆ ಎನಿಸಿತು; ಏಕೆಂದರೆ ಭಾರತ ಸರ್ಕಾರದ ಬೇರೆ ಇಲಾಖೆಗಳಿಗೆ ಹೋಲಿಸಿದರೆ ಕಾರ್ಮಿಕ ಇಲಾಖೆ ಮುಸ್ಲಿಮರ ವಿಷಯದಲ್ಲಿ ಹೆಮ್ಮೆತರುವಂತೆ ನಡೆದುಕೊಂಡಿದೆ. ಇದು ಬರಿ ಜಂಭಕ್ಕಾಗಿ ಹೇಳುವ ಮಾತಾಗಿರದೆ ನನ್ನ ಮುಂದಿರುವ ಮಾಹಿತಿಯ ಆಧಾರದ ಮೇಲೆ ನಾನು ಮುಂದಿನ ಕೆಲವು ನಿಮಿಷಗಳ ಕಾಲ ಮಾತನಾಡಲು ಎದ್ದುನಿಂತಿದ್ದೇನೆ. ಬಹಳ ಪ್ರಯಾಸದಿಂದಲೇ ನಾನು ಈ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ ಭಾರತ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿರುವ ಮುಸ್ಲಿಮರ ಪ್ರಮಾಣ ಹೆಚ್ಚೆಂದು ತಿಳಿದಿದ್ದೇನೆ. ಕಾರ್ಮಿಕ ವಿಭಾಗದ ಕಾರ್ಮಿಕರ ಜೊತೆಗೆ ಲೋಕೋಪಯೋಗಿ ಇಲಾಖೆ ಮತ್ತು ಇದಕ್ಕೆ ಸಂಬಂಧಿಸಿದ ಕಚೇರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಸ್ಲಿಂ ಕೋಮು ಮತ್ತು ಇತರ ಅಲ್ಪಸಂಖ್ಯಾತರ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೇನೆ. ಆದರೆ ಇವತ್ತು ನನ್ನ ಬಳಿ ಇರುವ ಅಲ್ಪ ಸಮಯದಲ್ಲಿ ಸಂಬಂಧಪಟ್ಟ ಎಲ್ಲ ಅಲ್ಪಸಂಖ್ಯಾತರ ಬಗ್ಗೆ ಹೇಳಲು ಅಡ್ಡಿಯಿಲ್ಲ – ಒಟ್ಟು ಸಂಖ್ಯೆಯನ್ನಷ್ಟೇ ಕೊಟ್ಟು ತೃಪ್ತನಾಗದೆ ಶೇಕಡಾವಾರು ಗಣತಿಯನ್ನು ಕೊಡುವುದರಿಂದ ಮುಸ್ಲಿಂ ಲೀಗ್ ಪಕ್ಷದ ಸದಸ್ಯರು ವಸ್ತುಸ್ಥಿತಿಯೇನೆಂದು ತಿಳಿದುಕೊಳ್ಳಲು ಅನುಕೂಲವಾಗುವುದು.

ಕಾರ್ಮಿಕ ಇಲಾಖೆಯ ಕಚೇರಿಯಿಂದಲೇ ಪ್ರಾರಂಭಿಸಿ ನಾನು ಮುಂದುವರಿಯುತ್ತೇನೆ; ಹಾಗೆ ಮಾಡುವಾಗ ಕೋಮುವಾರು ಸಂಯೋಜನೆಯ ಸದ್ಯದ ಸಂಖ್ಯೆಯನ್ನಷ್ಟೇ ಕೊಡದೆ ತೌಲನಿಕ ಆಧಾರ ಒದಗಿಸಿಕೊಡುತ್ತೇನೆ. ಈ ರೀತಿ ತುಲನಾತ್ಮಕ ಪಟ್ಟಿ ಕೊಡುವುದು ಅತ್ಯಂತ ಆವಶ್ಯಕ ಎಂದು ನನ್ನ ಭಾವನೆ. ಈ ಮಾರ್ಗದಲ್ಲಿ ನಾವು ಕಂಡುಕೊಂಡಿರುವ ಯಶಸ್ಸನ್ನು ಪರಿಗಣಿಸಿ ಹೇಳುವುದಾದರೆ ಇದನ್ನು ಒಂದು ಗುರಿಹಲಗೆಗೆ ಹೋಲಿಸಬಹುದು. ಒಂದು ಗುರಿಹಲಗೆ ನಡುಮಧ್ಯೆ ವೃಷಭಾಕ್ಷಿ ಇರುತ್ತದೆ, ಸುತ್ತಲೂ ವರ್ತುಲಗಳಿರುತ್ತವೆ – ಒಳವರ್ತುಲ ಮತ್ತು ಹೊರವರ್ತುಲ. ಈಗ ನಾವು ಹೆಚ್ಚಿನ ಪ್ರಮಾಣದಲ್ಲಿ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, (ಕೇಂದ್ರ), ಸಂಪುಟ ೩ – ಸಂಖ್ಯೆ ೧೦, ೧೪ನೇ ಮಾರ್ಚ್ ೧೯೪೬, ಪು. ೨೪೦೬.

ವೃಷಭಾಕ್ಷಿಯನ್ನೇ ಭೇದಿಸಿದ್ದೇವೆ ಎನ್ನಬೇಕು. ಆದರೆ ನನಗನ್ನಿಸುವಂತೆ ಭಾರತ ಸರ್ಕಾರದ ಯಾವನೇ ಒಬ್ಬ ಅಧಿಕಾರಿ, ಆತನ ಇಚ್ಛೆಗಳೇನೇ ಇರಲಿ, ಯಾವಾಗಲೂ ತನ್ನ ಗುರಿಯನ್ನು ಶೇ.೧೦೦ರಷ್ಟು ಸಾಧಿಸುತ್ತೇನೆ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ನಾನು ವಿನಮ್ರವಾಗಿ ವಿನಂತಿಸಿಕೊಳ್ಳುವುದೇನೆಂದರೆ ಯಾವುದನ್ನು ನಾವು ಕೇಂದ್ರ ಎಂದು ಕರೆಯುತ್ತೇವೆಯೊ, ಆ ಬಿಂದುವಿನಿಂದ ಒಂದು ಸಮುದಾಯದ ಯಾವೊಬ್ಬ ಸದಸ್ಯನನ್ನೂ ದೂರ ತಳ್ಳದಂತೆ ನೋಡಿಕೊಳ್ಳುವುದು; ಯಾವೊಂದು ಇಲಾಖೆಯ ಸಾಧನೆಯನ್ನು ನಾವು ಲೆಕ್ಕಾಚಾರ ಮಾಡುವಾಗ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈ ಇಲಾಖೆಯ ಯಾವುದಾದರೊಂದು ವರ್ಗದ ಉದ್ಯೋಗಿಗಳ ಸ್ಥಿತಿಗತಿ ಉತ್ತಮವಾಗಿದೆಯೇ ಅಥವಾ ಹೀನವಾಗಿದೆಯೇ ಎಂದು. ಇದನ್ನು ಸಮರ್ಪಕವಾಗಿ ತಿಳಿಯಲು ನನ್ನ ಪ್ರಕಾರ ತುಲನಾತ್ಮಕ ವಿಧಾನವೇ ಸರಿಯಾದ ಮಾರ್ಗ.

೧೯೩೯ ಮತ್ತು ೧೯೪೦ ಮಾರ್ಚ್ ತಿಂಗಳ ತನಕ ನನ್ನ ಬಳಿ ಅಂಕಿಅಂಶ ಇದೆ. ಮೊದಲು ನಾನು ಕಾರ್ಮಿಕ ಇಲಾಖೆಯ ಕಚೇರಿಯಿಂದಲೇ ಪ್ರಾರಂಭಿಸುವುದಾಗಿ ತಿಳಿಸಿದೆನಷ್ಟೆ. ೧೯೩೯ರಲ್ಲಿ ಇದ್ದ ಗೆಜೆಟೆಡ್ ಹುದ್ದೆಗಳು ೧೨ ಮತ್ತು ಇದರಲ್ಲಿ ಮುಸ್ಲಿಂ ಹುದ್ದೆಗಳು ಶೇಕಡಾವಾರು ೮. ೧೯೪೬ರಲ್ಲಿ ಒಟ್ಟು ಗೆಜೆಟೆಡ್ ಹುದ್ದೆಗಳು ೮೦ ಮತ್ತು ಅದರಲ್ಲಿ ಮುಸ್ಲಿಂ ಹುದ್ದೆಗಳು ಪ್ರತಿಶತ ೨೦. ನಾನ್–ಗೆಜೆಟೆಡ್ ಹುದ್ದೆಗಳ ವಿವರ ಕೊಡುತ್ತೇನೆ. ೧೯೩೯ರಲ್ಲಿ ಆ ರೀತಿಯ ಒಟ್ಟು ಹುದ್ದೆಗಳ ಸಂಖ್ಯೆ ೭೫ ಮತ್ತು ಮುಸ್ಲಿಮರ ಪಾಲು ಶೇಕಡಾವಾರು ಹುದ್ದೆಗಳು ೨೩. ೧೯೪೬ರಲ್ಲಿ ಆ ಬಗೆಯ ಹುದ್ದೆಗಳ ಸಂಖ್ಯೆ ೪೫೭ ಮತ್ತು ಮುಸ್ಲಿಂರ ಶೇಕಡಾವಾರು ೨೪.

ಈಗ ಬಹಳ ಪ್ರಚಾರಕ್ಕೊಳಗಾಗಿರುವ ಕೇಂದ್ರ ಲೋಕೋಪಯೋಗಿ ಇಲಾಖೆಗೆ ಬರುತ್ತೇನೆ. ಮೊದಲು ಗೆಜೆಟೆಡ್ ಹುದ್ದೆಗಳ ಬಗ್ಗೆ ವಿವರ ಕೊಡುತ್ತೇನೆ. ೧೯೩೯ರಲ್ಲಿ ಒಟ್ಟು ಇದ್ದಂಥ ಗೆಜೆಟೆಡ್ ಹುದ್ದೆಗಳ ಸಂಖ್ಯೆ ೪೩, ಅದರಲ್ಲಿ ಮುಸ್ಲಿಮರಿಗೆ ೨೧ ಪ್ರತಿಶತ. ೧೯೪೬ರಲ್ಲಿದ್ದ ಒಟ್ಟು ಹುದ್ದೆಗಳು ೧೮೧. ಗೃಹ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಸಮರಕಾಲದ ತುರ್ತುಪರಿಸ್ಥಿತಿ ಇದ್ದಾಗ್ಯೂ ಮುಸ್ಲಿಮರಿಗೆ ಪ್ರತಿಶತ ೨೧.೧ ಭಾಗ ಮೀಸಲಿತ್ತು. ಈ ಸೂಚನೆ ಮಂಡಿಸಿದ ಸದಸ್ಯರಿಗೆ ಪ್ರಾಯಶಃ ಇದರಿಂದಲೂ ತೃಪ್ತಿಯಾಗದಿದ್ದ ಪಕ್ಷದಲ್ಲಿ ಈ ಸದನದ ಕಾಲವನ್ನು ಇನ್ನಷ್ಟು ಉಪಯೋಗಿಸಿಕೊಂಡು ೧೯೪೬ರಲ್ಲಿ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿದ್ದ ಗೆಜೆಟೆಡ್ ಹುದ್ದೆಗಳ ಸಂಯೋಜನೆಯನ್ನು ವಿಶ್ಲೇಷಣೆ ಮಾಡುತ್ತೇನೆ. ಪ್ರತಿಶತ ಎಷ್ಟೆಂದು ತಿಳಿಯಲು ಬೇರೆ ಬೇರೆ ಗ್ರೇಡುಗಳನ್ನೂ ಪರಿಗಣಿಸುತ್ತೇನೆ. ಒಟ್ಟು ಇದ್ದ ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಸಂಖ್ಯೆ ೧೮, ಇದರಲ್ಲಿ ಒಬ್ಬರು ಮುಸ್ಲಿಮ್ಮರು, ಅಂದರೆ ಪ್ರತಿಶತ ೭ ಆದ ಹಾಗಾಯಿತು. ಕಾರ್ಯಪಾಲಕ ಇಂಜಿನಿಯರ್‌ಗಳ ಸಂಖ್ಯೆ ೬೪ ಹಾಗೂ ಮುಸ್ಲಿಂ ಪ್ರತಿಶತ ೧೮, ಎಲೆಕ್ಟ್ರಿಕಲ್ ಇಂಜಿನಿಯರ್‌ಗಳು ೧೨ ಮತ್ತು ಮುಸ್ಲಿಂ ಪ್ರತಿಶತ ೬ ೨/೩, ತಾತ್ಕಾಲಿಕ ಇಂಜಿನಿಯರ್‌ಗಳು ಒಟ್ಟು ೭೨ ಅದರಲ್ಲಿ ಮುಸ್ಲಿಂ ಪ್ರತಿಶತ ೩೨. ಸಿ.ಪಿ.ಡಬ್ಲ್ಯೂ.ಡಿ. ಬಗ್ಗೆ ಚರ್ಚೆ ಮಾಡುತ್ತಿರುವಾಗ ನಮ್ಮ ಗೌರವಾನ್ವಿತ ಸ್ನೇಹಿತರೊಬ್ಬರು, ಯಾರು ಎಂದು ಮರೆತಿದ್ದೇನೆ, ಲೋಡಿ ರಸ್ತೆಯ ಕಂಟ್ರಾಕ್ಟುಗಳ ಬಗ್ಗೆ ಪ್ರಸ್ತಾಪ ಮಾಡಿದರು.....

**ಶ್ರೀ ಮಹ್ಮದ್ ಇ.ಎಚ್. ಜಾಫರ್ (ಬೊಂಬಾಯಿ ದಕ್ಷಿಣ ಕ್ಷೇತ್ರ**–ಮಹಮದೀಯ–ಗ್ರಾಮಾಂತರ) ನಾನೇ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನೀವೇ ಅಂತ ತೋರುತ್ತೆ. ಗೌರವಾನ್ವಿತ ಸದಸ್ಯರಿಂದ ಉಲ್ಲೇಖವಾದ ಸಂಖ್ಯೆ ನನಗೆ ಮರೆತುಹೋಗಿದೆ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ೫ ಕೋಟಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಲೋಡಿ ರಸ್ತೆ ಕೆಲಸದಲ್ಲಿ ಮುಸ್ಲಿಂ ಕಂಟ್ರಾಕ್ಟರುಗಳು ಪಡೆದ ಕೆಲಸದ ಪ್ರಮಾಣ ಬಹಳ ಕಡಿಮೆಯದೆಂದು ಮಾನ್ಯ ಸದಸ್ಯರ ಆಕ್ಷೇಪ. ಇದರ ನಿಖರವಾದ ಅಂಕಿ ಅಂಶವೂ ನನಗೆ ಮರೆತುಹೋಗಿದೆ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಲೋಡಿ ರಸ್ತೆ ಕಾಲೋನಿಯ ಬಗ್ಗೆ ನಾನು ಪ್ರಸ್ತಾಪಿಸಿದೆನಾದರೂ ಇನ್ನೂ ಬೇಕಾದಷ್ಟು ಕ್ಷೇತ್ರಗಳಿವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ದಿನದ ಕೊನೆಯ ವೇಳೆಗೆ ಮಾತನಾಡಿದ್ದರಿಂದ ಅಂಕಿಅಂಶಗಳನ್ನು ಕೊಡಲು ನನ್ನಿಂದಾಗಲಿಲ್ಲ. ಆದರೆ ಈಗ ಅವು ಲಭ್ಯವಿವೆ.

**ಡಾ॥ ಸರ್ ಜಿಯಾ ಉದ್ದಿನ್ ಅಹ್ಮದ್ (ಸಂಯುಕ್ತ ಪ್ರಾಂತ್ಯ, ದಕ್ಷಿಣ ವಿಭಾಗ**–ಮಹಮದೀಯ–ಗ್ರಾಮಾಂತರ) : ಈ ಹಂತದಲ್ಲಿ ನೀವು ಮಧ್ಯ ಪ್ರವೇಶೀಸಬೇಕಾದ ಆವಶ್ಯಕತೆ ಇರಲಿಲ್ಲ. ಸ್ವಲ್ಪ ಹೊತ್ತು ನೀವು ಕಾಯಬಹುದಾಗಿತ್ತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಗೌರವಾನ್ವಿತ ಸದಸ್ಯರ ಸಲಹೆಗಾಗಿ ಕೃತಜ್ಞನಾಗಿದ್ದೇನೆ. ಆದರೆ ಮುಸ್ಲಿಂ ಲೀಗ್‌ಗೆ ಇನ್ನಿತರೆ ಖೋತಾ ಸೂಚನೆಗಳಿಗಾಗಿ ಸಾಕಷ್ಟು ಸಮಯ ಕೊಡಬೇಕೆಂದು ನನಗನ್ನಿಸಿತು. ಆದಕಾರಣ ನಾನು ಮಧ್ಯಪ್ರವೇಶಿಸಿದೆ. ಇಲ್ಲದಿದ್ದರೆ ಅದು ಕೇವಲ ಒಂದು ಸಾಮಾನ್ಯ ಸೂಚನೆ. ಮಧ್ಯಪ್ರವೇಶಿಸುವ ಮನಸ್ಸು ನನಗೆ ಇರಲೇ ಇಲ್ಲ, ಅದರ ಆವಶ್ಯಕತೆಯೂ ಇರಲಿಲ್ಲ. ಕಾರ್ಮಿಕ ಇಲಾಖೆಯ ಬಗ್ಗೆ ಕೆಲವು ಸದಸ್ಯರಲ್ಲಿರುವ ದಿಗಿಲನ್ನು ನಿವಾರಿಸುವ ಸಲುವಾಗಿ ನಾನು ಎದ್ದುನಿಂತುಕೊಂಡಿದ್ದೇನೆ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ನಿಮಗೆ ಧನ್ಯವಾದಗಳು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಲೋಡಿ ರಸ್ತೆಗೆ ಸಂಬಂಧಿಸಿದ ಕೆಲಸದ ವಿಷಯವಾಗಿ ವಸ್ತುಸ್ಥಿತಿ ಹೀಗಿತ್ತು. ಮುಖ್ಯ ಇಂಜಿನಿಯರ್‌ರವರು ಒದಗಿಸಿದ ಮಾಹಿತಿಯ ಪ್ರಕಾರ ಮುಸ್ಲಿಮರಿಗೆ ನೀಡಿದ ಕಾಂಟ್ರಾಕ್ಟಿನ ಹಣದ ಮೊತ್ತ ೧೦.೫ ಲಕ್ಷ ರೂಪಾಯಿಗಳು. ನಮ್ಮ ಗೌರವಾನ್ವಿತ ಸದಸ್ಯರು ತಿಳಿಸಿದ ಮೊತ್ತಕ್ಕಿಂತ ಇದು ಬಹಳ ಪಟ್ಟು ಹೆಚ್ಚಾಗಿರುವುದು ನಾವು ಗಮನಿಸಬೇಕಾದ ಸಂಗತಿ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಇದು ಎಷ್ಟರಲ್ಲಿ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮೂರು ಕೋಟಿಯಲ್ಲಿ. ನನ್ನ ಗೌರವಾನ್ವಿತ ಗೆಳೆಯರು ನೆನಪಿನಲ್ಲಿಡಬೇಕಾದ ಅಂಶವೆಂದರೆ ಈ ಕೆಲಸಗಳನ್ನು ವಿತರಿಸಿದ ಕಾರ್ಯಪಾಲಕ ಇಂಜಿನಿಯರ್‌ರವರು ಕೂಡ ಒಬ್ಬ ಮುಸ್ಲಿಮರು.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಮುಸ್ಲಿಮರಿಗೆ ಗುತ್ತಿಗೆ ಕೊಡಬಾರದು ಎಂದು ಅಧಿಕಾರಿಗಳು ಅವರ ಮೇಲೆ ತಂದ ಒತ್ತಡದ ಬಗ್ಗೆ ಏನನ್ನುತ್ತೀರಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಸೇಹಿತರು ಎಲ್ಲಾ ತರಹದ ಆಪಾದನೆಯನ್ನು ಮಾಡುತ್ತಿದ್ದಾರೆ. ಅವುಗಳ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳು ಅವರ ಬಳಿ ಇರುವುದೆಂದು ಭಾವಿಸುವೆ. ನನ್ನ ಗಮನವನ್ನು ಯಾರೂ ಆ ಕಡೆ ಸೆಳೆದಿಲ್ಲ. ನನ್ನ ಸ್ನೇಹಿತರು ಮಾಹಿತಿ ಒದಗಿಸಿದರೆ ಖಂಡಿತಾ ವಿಚಾರಿಸುತ್ತೇನೆ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಸದನದಲ್ಲೇ ನಾನವುಗಳನ್ನು ತಮಗೆ ಒದಗಿಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಕೆಲಸಗಳನ್ನು ನೋಡಿಕೊಳ್ಳುತ್ತಿರುವವರು ಒಬ್ಬ ಮುಸ್ಲಿಂ ಕಾರ್ಯಪಾಲಕ ಇಂಜಿನಿಯರ್‌ರವರು, ಎರಡನೆಯ ಅಂಶವೆಂದರೆ, ಕೆಲಸಗಳನ್ನು ನೋಡಿಕೊಳ್ಳುವಂಥ

ಅಧಿಕಾರಿಯೊಬ್ಬರು ಕೇಂದ್ರ ಲೋಕೋಪಯೋಗಿ ಇಲಾಖೆಗೆ ಸೇರಿದವರು – ಅವರು ಮುಸಲ್ಮಾನರಾಗಿರಲಿ ಅಥವಾ ಹಿಂದುವಾಗಿರಲಿ ಕೇಂದ್ರ ಲೋಕೋಪಯೋಗಿ ಇಲಾಖೆಯ ಕೇಂದ್ರ ಲೋಕೋಪಯೋಗಿ ಇಲಾಖೆಯ ನಿಯಮ ತಿಳಿಸುವಂತೆ ಯಾರ ಟೆಂಡರು ಅತ್ಯಂತ ಕಡಿಮೆ ಇರುವುದೋ ಅವರಿಗೇ ಕೆಲಸವನ್ನು ವಹಿಸಬೇಕು. ನಾನು ತುರ್ತಾಗಿ ಮುಖ್ಯ ಇಂಜಿನಿಯರ್‌ರವರ ಜೊತೆ ಮಾತನಾಡಿ ತಿಳಿದುಕೊಂಡಿರುವಂತೆ ಯಾವ ಮಹಮದೀಯರೂ ಅತ್ಯಂತ ಕಡಿಮೆ ಟೆಂಡರು ಕಳಿಸಿ ಕೆಲಸ ಪಡೆಯಲು ವಿಫಲವಾಗಿದ್ದಾರೆ ಎಂದು ಸಾಬೀತಾಗಿಲ್ಲ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ನಾನು ಕ್ರಿಯಾಲೋಪ ಎತ್ತಬಯಸುತ್ತೇನೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನಾನು ಸೋಲೊಪ್ಪಿಕೊಳ್ಳುತ್ತಿಲ್ಲ. ನನಗೆ ಸಮಯವಿಲ್ಲ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಸನ್ಮಾನ್ಯ ಸದಸ್ಯರು ಮುಂದುವರಿಸಲಿ.

**ಮಾನ್ಯ ಅಧ್ಯಕ್ಷರು :** ಸನ್ಮಾನ್ಯ ಸದಸ್ಯರು ಮುಂದುವರಿಸಲಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೇಂದ್ರ ಲೋಕೋಪಯೋಗಿ ಕಾನೂನಿನ ಪ್ರಕಾರ ಕೆಲಸಗಳಿಗೆ ಸಂಬಂಧಪಟ್ಟ ಟೆಂಡರುಗಳನ್ನು ಎರಡು ಬೇರೆ ಬೇರೆ ಮೂಲಗಳಿಂದ ಪರಿಶೀಲನೆ ನಡೆಸಲಾಗುತ್ತದೆ. ಒಬ್ಬರು ಆಡಿಟರ್ ಜನರಲ್, ಇನ್ನೊಬ್ಬರು ಸಾರ್ವಜನಿಕ ಲೆಕ್ಕಪತ್ರ ಸಮಿತಿ. ತಮ್ಮ ಇಲಾಖೆಯಲ್ಲಿ ಈ ನಿಯಮವನ್ನು ಉಲ್ಲಂಘಿಸಿದ ಅಧಿಕಾರಿಯನ್ನು ಅವರು ವಿಚಾರಣೆಗೆ ಗುರಿಪಡಿಸುತ್ತಾರೆ.

**ಸೈಯದ್ ಗುಲಾಮ್ ಬಿಕ್ ನಾಯ್‌ರಂಗ್ :** ಅದು ಬರಿ ಮರಣೋತ್ತರ ಪರೀಕ್ಷೆಯಾಗುತ್ತೆ, ಅಷ್ಟೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಪ್ರಶ್ನೆಯೇನೆಂದರೆ ನಿಯಮಗಳನ್ನು ಪರಿಪಾಲಿಸಿದ್ದಾರೆಯೇ ಇಲ್ಲವೇ ಎಂಬುದು.

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ನಿಯಮಗಳನ್ನು ಬದಲಾಯಿಸಿರಬಹುದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಸದಸ್ಯರು ಇದರ ಬಗ್ಗೆ ಹೆಚ್ಚಿಗೆ ತಿಳಿದಿದ್ದಾರೆ. ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಅವರು ಹೆಚ್ಚು ಕೆಲಸವನ್ನು ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆ ಬಗ್ಗೆ ಮತ್ತು ಇಂಥಾ ಕೆಲಸಗಳ ಬಗ್ಗೆ ಅವರಿಗೆ ಗೊತ್ತಿರಲೇಬೇಕು. ಅದರ ವಿಷಯವಾಗಿ ನಾನು ಹೆಚ್ಚು ಹೇಳುವುದಿಲ್ಲ.

ಎಸ್ಟೇಟ್ ಕಚೇರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಎಸ್ಟೇಟ್ ಕಚೇರಿಯಲ್ಲಿ ಒಟ್ಟು ೮ ಗೆಜೆಟೆಡ್ ಹುದ್ದೆಗಳಿವೆ. ಅವುಗಳಲ್ಲಿ ಒಂದು ಹುದ್ದೆ ಖಾಲಿ ಇದೆ. ಅಲ್ಲಿರುವ ಪರಿಸ್ಥಿತಿಯೆಂದರೆ ೬ ಜನ ಹಿಂದುಗಳು ಮತ್ತು ಒಬ್ಬ ಪರಿಶಿಷ್ಟ ಜಾತಿಯವರಿದ್ದಾರೆ. ಅವರಲ್ಲಿ ಮುಸ್ಲಿಮರೊಬ್ಬರಿದ್ದರು. ಅವರನ್ನು ಅವರ ಸ್ವಂತ ಪ್ರಾಂತ್ಯಕ್ಕೆ ವಾಪಸ್ಸು ಕಳುಹಿಸಲಾಯಿತು. ಇನ್ನು ನಾನ್–ಗೆಜೆಟೆಡ್ ಹುದ್ದೆಗಳ ಸಂಖ್ಯೆ ೨೩೫. ಇವುಗಳಲ್ಲಿ ಮುಸ್ಲಿಮ್ಮರು ೧೮.೨ ಪ್ರತಿಶತ ಇದ್ದಾರೆ.

ಸೇರ್ಪಡೆಯಾದ ಕಚೇರಿಗಳ ವಿಷಯವಾಗಿ ನಾನು ಒಟ್ಟು ಸಂಖ್ಯೆಯನ್ನು ಕೊಡಬಲ್ಲೆನೇ ಹೊರತು ಇದು ಬಹಳ ಸಮಯ ಹಿಡಿಯುವುದರಿಂದ ಅಂಶ ಅಂಶವಾಗಿ ಪರಿಗಣಿಸಲಾರೆ. ೧೯೩೯ರಲ್ಲಿ ಸ್ಥಿತಿಗತಿ ಹೀಗಿತ್ತು: ಒಟ್ಟು ಇದ್ದ ಹುದ್ದೆಗಳು ೬೪. ಮುಸ್ಲಿಮರಿಗೆ ಇದ್ದ ಸ್ಥಾನಗಳು ಪ್ರತಿಶತ ೧.೫ ಮಾತ್ರ. ೧೯೪೬ರಲ್ಲಿ ಇದ್ದ ಒಟ್ಟು ಸ್ಥಾನಗಳು ೧೫೫ – ಇದರಲ್ಲಿ ಮುಸ್ಲಿಮ್ಮರು ಪ್ರತಿಶತ ೧೧.೫ ಸ್ಥಾನಗಳನ್ನು ಪಡೆದಿದ್ದರು. ಸೇರ್ಪಡೆಯಾದ ಅಥವಾ ಹೊಂದಿಕೊಂಡ ಕಚೇರಿಗಳಲ್ಲಿ ಇದ್ದ ಗೆಜೆಟೇತರ ಹುದ್ದೆಗಳ ಒಟ್ಟು ಸಂಖ್ಯೆ ೧೯೩೯ ರಲ್ಲಿ ೨,೨೩೮. ಮುಸ್ಲಿಮರಿಗೆ ೩೪ ಪ್ರತಿಶತ ಇತ್ತು. ೧೯೪೬ರಲ್ಲಿ ಇದ್ದ ಒಟ್ಟು ನಾನ್–ಗೆಜೆಟೆಡ್

ಹುದ್ದೆಗಳ ಸಂಖ್ಯೆ ೩,೯೨೯, ಇದರಲ್ಲಿ ಮುಸ್ಲಿಮರ ಪಾಲು ಪ್ರತಿಶತ ೩೦.

ಮಾನ್ಯರೆ, ಈಗ ನಾನು ಭೂಗರ್ಭ ಸರ್ವೇಕ್ಷಣ ಇಲಾಖೆಯ ಕಡೆ ಗಮನ ಹರಿಸುತ್ತೇನೆ. ಸದನದಲ್ಲಿ ಪ್ರತಿಯೊಬ್ಬರಿಗೂ ತಿಳಿದಿರುವಂತೆ ಸದ್ಯದಲ್ಲಿ ಭೂಗರ್ಭ ಸರ್ವೇಕ್ಷಣ ಇಲಾಖೆಯು ಕಡಿಮೆ ಹುದ್ದೆಗಳನ್ನೊಳಗೊಂಡಿರುತ್ತದೆ. ಭಾರತ ಸರ್ಕಾರ ಸಮರೋತ್ತರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಹೊಸ ಯೋಜನೆಗಳನ್ನು ಹಮ್ಮಿಕೊಂಡಿರುವುದರಿಂದ ನಾವು ಭೂಗರ್ಭ ಸರ್ವೇಕ್ಷಣ ಇಲಾಖೆಯನ್ನು ವಿಸ್ತರಿಸಲು ಪ್ರಯತ್ನ ನಡೆಸಿದ್ದೇವೆ. ಉಪಭೂಗರ್ಭ ಶಾಸ್ತ್ರಜ್ಞರ ಹುದ್ದೆಗಳಿಗೆ ೧೩ ಮಂದಿಯನ್ನು ನೇಮಕ ಮಾಡುವುದರ ಮೂಲಕ ನಾವು ವಿಸ್ತರಣೆ ಕಾರ್ಯ ಆರಂಭ ಮಾಡಿದ್ದೇವೆ. ಈ ಹುದ್ದೆಗಳಿಗೆ ಸಂಬಂಧಿಸಿದಂತೆ ನಿಜವಾದ ವಸ್ತುಸ್ಥಿತಿ ಏನು ಎಂಬುದರ ಬಗ್ಗೆ ನಾನು ನನ್ನ ಗೌರವಾನ್ವಿತ ಸ್ನೇಹಿತರ ಗಮನ ಸೆಳೆಯಲು ಇಚ್ಛಿಸುತ್ತೇನೆ. ಸಹಜವಾಗಿಯೇ ನಾವು ಫೆಡರಲ್ ಸಾರ್ವಜನಿಕ ಸೇವಾ ಆಯೋಗದ ಮೂಲಕವಾಗಿಯೇ ಈ ಹುದ್ದೆಗಳನ್ನು ಭರ್ತಿ ಮಾಡಬೇಕು. ಆಯೋಗವು ಪ್ರತಿಭೆಯ ಆಧಾರದ ಮೇಲೆ ೪೦ ಹೆಸರುಗಳನ್ನು ಶಿಫಾರಸು ಮಾಡಿತ್ತು. ಇದರಲ್ಲಿ ನಾವು ೧೩ ಮಂದಿಯನ್ನು ಮಾತ್ರ ಆರಿಸಬೇಕಾಗಿತ್ತು. ೧೩ ಮಂದಿಯಲ್ಲಿ ಇದ್ದ ಒಬ್ಬ ಮುಸ್ಲಿಂ ಅಭ್ಯರ್ಥಿಯನ್ನು ನಾವು ಆಯ್ಕೆ ಮಾಡಿದೆವು.

**ನವಾನ್‌ಜಾದಾ ಲಿಯಾಕತ್ ಆಲಿ ಖಾನ್ :** ೪೦ ಹೆಸರುಗಳಲ್ಲಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು. ಪ್ರತಿಭೆಯ ಆಧಾರದ ಮೇಲೆ ಹೆಸರುಗಳನ್ನು ಕೊಟ್ಟಿದ್ದರು. ನಮ್ಮಲ್ಲಿದ್ದುವು ೧೩ ಹುದ್ದೆಗಳು ಮಾತ್ರ. ಸಹಜವಾಗಿಯೇ ನಾವು ೧೩ಕ್ಕೆ ಮಿತಿಗೊಳಿಸಿಕೊಳ್ಳಬೇಕಾಗಿತ್ತು. ೧೩ ಹುದ್ದೆಗಳಿಗೆ ನಾವು ನಿಲ್ಲಬೇಕಾದಾಗ ಆ ೧೩ರಲ್ಲಿ ಇದ್ದವರು ಒಬ್ಬರೇ ಮುಸ್ಲಿಮರು. ನಾನು ಮೊದಲೇ ತಿಳಿಸಿದಂತೆ ಈ ಹುದ್ದೆಗಳು ಬಹಳ ತಾಂತ್ರಿಕವಾದ ಹುದ್ದೆಗಳಾದ್ದರಿಂದ ವಿದ್ಯಾರ್ಹತೆಯ ಬಗ್ಗೆ ನಾವು ಖಚಿತಪಡಿಸಿಕೊಳ್ಳಬೇಕಾದ ಆವಶ್ಯಕತೆ ಇತ್ತು. ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ಶಿಫಾರಸು ಮಾಡಿದಂತೆ ಕೇವಲ ಪ್ರತಿಭೆಯ ಆಧಾರದ ಮೇಲೆ ಮಾತ್ರ ಈ ಹುದ್ದೆಗಳನ್ನು ಭರ್ತಿಮಾಡಬೇಕೆಂಬ ತಮ್ಮ ಮೊದಲಿನ ನಿಯಮದಂತೆ ಕಾರ್ಮಿಕ ಇಲಾಖೆಯವರು ಹೊರಟಿದ್ದರೆ ಖಂಡಿತವಾಗಿಯೂ ಪ್ರತಿಭೆಯ ಆಧಾರದ ಮೇಲೆ ಆಯ್ಕೆಯಾದ ೧೩ ಮಂದಿಯಲ್ಲಿ ಸಿಕ್ಕಿದವರು ಕೇವಲ ಒಬ್ಬರೇ ಒಬ್ಬರು ಮುಸ್ಲಿಮ್ ಅಭ್ಯರ್ಥಿ. ಆದರೆ ಈ ನಿಯಮಕ್ಕೆ ಅಂಟಿಕೊಳ್ಳದೆ ಯಾದಿಯಲ್ಲಿ ಬಹಳ ಕೆಳಗೆ ಹೋಗಿ ಇನ್ನೂ ೩ ಮಂದಿ ಮುಸ್ಲಿಮ್‌ರನ್ನು ಆರಿಸಿಕೊಂಡದ್ದರಿಂದ ಒಟ್ಟು ಮುಸ್ಲಿಂ ಅಭ್ಯರ್ಥಿಗಳ ಸಂಖ್ಯೆ ೪ ಆಯಿತು. ನಾವು ಮಾಡಿರುವ ಇನ್ನೊಂದು ಕೆಲಸವೆಂದರೆ – ಇದು ಅನೇಕರ ದೃಷ್ಟಿಯಲ್ಲಿ ಅನುಚಿತವಾಗಿ ತೋರಬಹುದಾದರೂ ಸಹ–ಭೂಗರ್ಭ ಸರ್ವೇಕ್ಷಣೆಯ ಮಹಾನಿರ್ದೇಶಕರ ಕಚೇರಿಯಲ್ಲಿ ಮುಸ್ಲಿಂ ಅಧಿಕಾರಿಗಳೇ ಇಲ್ಲದಿರುವುದು ನಮ್ಮ ಗಮನಕ್ಕೆ ಬಂದಿತು; ಹಾಗಾಗಿ ನಮ್ಮ ಗೌರವಾನ್ವಿತ ಗೆಳೆಯರಾದ ಸರ್ ಜಿಯಾ ಉದ್ದೀನ್ ಅಹ್ಮದ್‌ರವರು ಪ್ರತಿನಿಧಿಸುವ ವಿಶ್ವವಿದ್ಯಾನಿಲಯದಿಂದ ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳನ್ನು ಆರಿಸಿಕೊಂಡೆವು.....

**ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್ :** ಇದರ ಕೀರ್ತಿ ನಿಮಗೆ ದೊರೆಯಲಾರದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ತರಬೇತಿಯಲ್ಲೇನೂ ಅವರು ಭೂಗರ್ಭಶಾಸ್ತ್ರಜ್ಞರೇನೂ ಆಗಿರಲಿಲ್ಲ. ಕೇವಲ ಭೂಗೋಳಶಾಸ್ತ್ರದಲ್ಲಿ ಮಾತ್ರ ಅವರು ವಿದ್ಯಾರ್ಹತೆ ಗಳಿಸಿದ್ದರು, ಆದಾಗ್ಯೂ ಅವರನ್ನು ನಾವು ಆರಿಸಿದೆವು. ಅವರಿಗೆ ತರಬೇತು ಕೊಟ್ಟೆವು, ತರುವಾಯದಲ್ಲಾದರೂ ಅವರು ಭೂಗರ್ಭ ಸರ್ವೇಕ್ಷಣ ಇಲಾಖೆಯಲ್ಲಿ ಹುದ್ದೆ ಗಳಿಸಿಕೊಳ್ಳಲಿ ಎಂಬ ದೃಷ್ಟಿಯಿಂದ.

ಮಾನ್ಯರೇ, ಈಗ ನಾನು ಗಣಿ ಶಾಲೆಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಕಳೆದ ಸಭೆಯಲ್ಲಿ ಅದರ ಬಗ್ಗೆ ಕೆಲವು ಪ್ರಶ್ನೆಗಳಿದ್ದವು.

ಮಾನ್ಯರೆ, ನನಗೆ ಸಮಯ ಎಷ್ಟಿದೆ ಎಂದು ನಾನು ತಿಳಿಯಬಹುದೆ?

**ಮಾನ್ಯ ಅಧ್ಯಕ್ಷರು :** ಮಾನ್ಯ ಸದಸ್ಯರು ೨೦ ನಿಮಿಷಗಳನ್ನು ತೆಗೆದುಕೊಳ್ಳಬಹುದು. ಅಗತ್ಯಬಿದ್ದರೆ ಇನ್ನೂ ಹೆಚ್ಚು ಸಮಯವನ್ನು ಕೊಡಲು ನಾನು ಸಿದ್ಧ. ೧.೧೫ ಘಂಟೆಯತನಕ ಅವರು ಮಾತನಾಡಬಹುದು.

**ಶ್ರೀ ಪ್ರಕಾಶ್ (ಬನಾರಸ್ ಮತ್ತು ಗೋರಖ್‌ಪುರ್ ವಿಭಾಗ –** ಮುಸ್ಲಿಮೇತರ ಗ್ರಾಮಾಂತರ): ಸಮಯದಲ್ಲಿ ನೀವು ಶೇಕಡಾ ೨೫ ಭಾಗವನ್ನು ತೆಗೆದುಕೊಳ್ಳಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ವಿಷಯವಾಗಿ ನನ್ನ ಗೆಳೆಯರು ಮಾಡಿರುವಂತೆ ನಾನು ಅರ್ಧ ಸಮಾಜ ಸೇವಕನ ತರಹ ಅರ್ಧ ಬೇಜವಾಬ್ದಾರಿ ಮನುಷ್ಯನ ತರಹ ಮಾತಾಡಲಾರೆ

**ಶ್ರೀ ಪ್ರಕಾಶ :** ನಾನು ಖಂಡಿತವಾಗಿಯೂ ಬೇಜವಾಬ್ದಾರಿಯಿಂದ ಮಾತಾಡಲಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಗಣಿ ಶಾಲೆಗೆ ಸಂಬಂಧಿಸಿದಂತೆ ವಸ್ತುಸ್ಥಿತಿ ಹೀಗಿದೆ. ೧೯೩೭ರಿಂದೀಚೆಗೆ ಗಣಿ ಶಾಲೆಗೆ ನಾವು ಪ್ರವೇಶವನ್ನು ೨೪ಕ್ಕೆ ಮಿತಿಗೊಳಿಸಿದ್ದೇವೆ; ಅದಕ್ಕೆ ಮೊದಲು ೫೦ಕ್ಕೆ ಅವಕಾಶವಿದ್ದಿತು. ಅಷ್ಟು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಇಲ್ಲವೆಂದು ನಮ್ಮ ಗಮನಕ್ಕೆ ಬಂದದ್ದರಿಂದ ಸಂಖ್ಯೆಯನ್ನು ೨೪ಕ್ಕೆ ಮಿತಿಗೊಳಿಸಿಕೊಳ್ಳಬೇಕಾಯಿತು. ಈಗ ಕಾಲೇಜಿಗೆ ಅವಕಾಶ ದೊರಕಿಸಿಕೊಡುವಾಗ ಪ್ರಾಂತ್ಯವನ್ನು ಪರಿಗಣಿಸುತ್ತಾರೆಯೇ ಹೊರತು ಜಾತಿ, ಕೋಮು ಲೆಕ್ಕಕ್ಕೆ ಬರುವುದಿಲ್ಲ. ೧೬ ಸೀಟುಗಳನ್ನು ಪ್ರಾಂತ್ಯಗಳಿಗೂ ಎರಡು ಸ್ಥಾನಗಳನ್ನು ಭಾರತೀಯ ರಾಜ್ಯಗಳಿಗೂ ವಿತರಿಸಲಾಗುತ್ತದೆ. ೧೯೩೭ನೇ ಇಸವಿಯ ತನಕ ನಾನು ಪರಿಶೀಲಿಸಿರುವೆನಾಗಿ ಯಾವ ಒಂದು ವರ್ಷದಲ್ಲೂ ಇಬ್ಬರಿಗಿಂತ ಕಡಿಮೆ ಮುಸ್ಲಿಮ್ಮರ ವಿದ್ಯಾರ್ಥಿಗಳು ಈ ಕಾಲೇಜಿಗೆ ಸೇರಿದ ಉದಾಹರಣೆ ಇಲ್ಲ. ಆದಕಾರಣ ಗಣಿ ಶಾಲೆಗೆ ಪ್ರವೇಶ ಪಡೆಯಲು ಬಯಸುವ ಮುಸ್ಲಿಮ್ ವಿದ್ಯಾರ್ಥಿಗಳ ಹಿತ ಕಾಪಾಡಲು ವಿಶೇಷವಾದ ಮೀಸಲಾತಿ ಏರ್ಪಡಿಸಬೇಕಾದ ಆವಶ್ಯಕತೆ ಇದೆ ಎಂದು ನನಗನ್ನಿಸುವುದಿಲ್ಲ. ಆದಾಗ್ಯೂ ಕಳೆದ ಶಾಸನ ಸಭೆಯಲ್ಲಿ ಕೆಲವು ಮುಸ್ಲಿಂ ಲೀಗ್‌ನ ಸದಸ್ಯರು ಈ ವಿಷಯವಾಗಿ ಪ್ರಶ್ನೆ ಮಾಡಿದಾಗ ಭಾರತೀಯ ಗಣಿ ಶಾಲೆಯಲ್ಲಿ ಕಡೆಯ ಪಕ್ಷ ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳಿಗೆ ಸ್ಥಾನವನ್ನು ಮೀಸಲಿಡಬೇಕೆಂದು ನಾನು ಆದೇಶ ಹೊರಡಿಸಿದೆ.

**ಸರ್ ಮೊಹಮ್ಮದ್ ಯಾಮಿನ್ ಖಾನ್ :** ಎಷ್ಟು ಮಂದಿಯಲ್ಲಿ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ೨೪ ಮಂದಿಯಲ್ಲಿ. ಇದೇ ಸಂದರ್ಭದಲ್ಲಿ, ಮಾನ್ಯರೆ, ನಾನು ಸದನದ ಸದಸ್ಯರ ಗಮನ ಸೆಳೆಯಲಿಚ್ಛಿಸುತ್ತೇನೆ. ಮುಸ್ಲಿಮರು ತಮ್ಮ ಪೂರ್ತಿ ಕೋಟಾವನ್ನು ಪಡೆಯಲನುಕೂಲವಾಗುವಂತೆ ಕಾರ್ಮಿಕ ಇಲಾಖೆಯು ಏನು ಕ್ರಮ ಕೈಗೊಂಡಿದೆಯೆಂದು ತಿಳಿಸಲು ನಾನು ತಮಗೆ ಈ ವರ್ಷದ ಅಂಕಿಅಂಶಗಳನ್ನು ತಿಳಿಸುತ್ತೇನೆ. ಆಡಳಿತ ಮಂಡಳಿಯವರ ಶಿಫಾರಸಿನ ಮೇಲೆ ನಾವು ಈ ಬಾರಿ ೪೮ ಮಂದಿಯನ್ನು ಸೇರಿಸಿಕೊಂಡಿದ್ದೇವೆ. ಈ ೪೮ ಮಂದಿಯಲ್ಲಿ ಒಬ್ಬರೇ ಒಬ್ಬ ಮುಸ್ಲಿಂ ವಿದ್ಯಾರ್ಥಿ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

**ಶ್ರೀ ಮಹಮ್ಮದ್ ನೌಮನ್ (ಪಟ್ನಾ ಮತ್ತು ಛೋಟಾ ನಾಗ್‌ಪುರ್ ಮತ್ತು ಒರಿಸ್ಸಾ,** ಮಹಮದೀಯ): ನಾನು ತಮಗೆ ಹೇಳಿದ್ದು ಅದೇ ವಿಷಯವೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮೀಸಲಾತಿಯ ಪ್ರಕಾರ ಕಲ್ಪಿಸಿಕೊಟ್ಟು ಅವಕಾಶದ

ಪೂರ್ಣ ಪ್ರಮಾಣದ ಪ್ರಯೋಜನ ಪಡೆಯುವ ಉದ್ದೇಶದಿಂದ ಯಾದಿಯಲ್ಲಿದ್ದ ಉಳಿದ ೧೧ ವಿದ್ಯಾರ್ಥಿಗಳನ್ನು ಕಡೆಗಣಿಸಿ ೫೯ನೇ ಸ್ಥಾನದಲ್ಲಿದ್ದ ಇನ್ನೊಬ್ಬ ಮುಸ್ಲಿಂ ವಿದ್ಯಾರ್ಥಿಗೆ ಸ್ಥಾನ ಕೊಡಬೇಕೆಂದು ತಿಳಿಸಲಾಗಿತ್ತು.

ಮಾನ್ಯರೆ, ಈಗ ನಾನು ಕಾರ್ಮಿಕ ಇಲಾಖೆ ಕೈಕೊಂಡಿರುವ ಬೇರೆ ಬೇರೆ ತರಬೇತು ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ – ಕೆಲವು ದೇಶದ ಹೊರಗೆ ಕೈಕೊಂಡಿರುವಂಥವು – ಇಲ್ಲೂ ಕೂಡ ಕಾರ್ಮಿಕ ಇಲಾಖೆ ತೆಗೆದುಕೊಂಡಿರುವ ಕ್ರಮ ಸಮರ್ಪಕವಾಗಿಲ್ಲ ಅಷ್ಟೇ ಅಲ್ಲ, ಪಕ್ಷಪಾತಾತೀತವಾಗಿಲ್ಲ ಕೂಡ. ಭೂಗರ್ಭ ಸರ್ವೇಕ್ಷಣ ಇಲಾಖೆಯ ಪುನರ್ವ್ಯವಸ್ಥೀಕರಣದ ಅಂಗವಾಗಿ ಕಾರ್ಮಿಕ ಇಲಾಖೆ ತರಬೇತಿಗಾಗಿ ಉಪಭೂಗರ್ಭ ಶಾಸ್ತ್ರಜ್ಞರನ್ನು ಆಸ್ಟ್ರೇಲಿಯಾದ ಮೆಲ್‌ಬರ್ನ್ ವಿಶ್ವವಿದ್ಯಾನಿಲಯಕ್ಕೆ ಕಾರ್ಮಿಕ ಇಲಾಖೆಯವರು ಪ್ರಾಯೋಜಿಸುವಾಗಲೂ ಅಷ್ಟೇ ತಾರತಮ್ಯ ತೋರಿದ್ದಾರೆ. ಇದು ಆದದ್ದು ೧೯೪೬ರಲ್ಲಿ. ಒಟ್ಟು ಆಯ್ಕೆಯಾದವರ ಸಂಖ್ಯೆ ೯. ಅವರ ಪೈಕಿ ೫ ಜನ ಹಿಂದುಗಳು, ೩ ಮಂದಿ ಮುಸ್ಲಿಮರು ಮತ್ತು ಒಬ್ಬರು ಇತರೆ ಅಲ್ಪ ಸಂಖ್ಯಾತರು. ಈ ಆಯ್ಕೆಯಲ್ಲಿ ತಿಳಿದು ಬರುವಂತೆ ಮುಸ್ಲಿಮರ ಪಾಲಿಗೆ ೨೨% ರಷ್ಟು ದಕ್ಕಿದೆ.

ಕಾರ್ಮಿಕ ಇಲಾಖೆಯು ಪ್ರಾಯೋಜಿಸಿದ ಎರಡನೆಯ ಕಾರ್ಯಕ್ರಮವೆಂದರೆ, ವಿದ್ಯುಚ್ಛಕ್ತಿ ವಲಯದ ವಾಣಿಜ್ಯ ಮತ್ತು ಆಡಳಿತಾತ್ಮಕ ಅಂಗವನ್ನು ಸಮರ್ಪಕವಾಗಿ ನೋಡಿಕೊಳ್ಳುವಂತೆ ಜನರಿಗೆ ತರಬೇತು ಕೊಡುವುದು. ಭಾರತದ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ವಿದ್ಯುಚ್ಛಕ್ತಿ ಬಹಳ ಪ್ರಮುಖವಾದ ಪಾತ್ರ ವಹಿಸುವುದರಲ್ಲಿ ಸಂಶಯವಿಲ್ಲ. ಆದಕಾರಣ ವಾಣಿಜ್ಯ ಮತ್ತು ಆಡಳಿತಾತ್ಮಕ ವಲಯಗಳಲ್ಲಿ ತರಬೇತು ಹೊಂದಿದ ವ್ಯಕ್ತಿಗಳು ಇರಲೇಬೇಕಾದದ್ದು ಆವಶ್ಯಕವಾದ್ದರಿಂದ ನಾವು ಕೆಲವರಿಗೆ ತರಬೇತಿ ಕೊಡಲು ನಿರ್ಧರಿಸಿದೆವು. ಈ ತರಹದ ತರಬೇತಿಗಾಗಿ ನೇರವಾಗಿ ವಿಶ್ವವಿದ್ಯಾನಿಲಯಗಳಿಂದ ಅನನುಭವಿ ಯುವಕರನ್ನು ಆಯ್ದುಕೊಳ್ಳಲು ಬರುವುದಿಲ್ಲ. ಈ ವಿಷಯದಲ್ಲಿ ಸ್ವಲ್ಪವಾದರೂ ಅನುಭವ ಹೊಂದಿರುವವರನ್ನೇ ನಾವು ಆಯ್ದುಕೊಳ್ಳಬೇಕಾಗಿದೆ. ಹಾಗಾಗಿ ಪ್ರಾಂತೀಯ ಸರ್ಕಾರಗಳಿಗೆ ನಾವು ಬರೆದು ನಿಮ್ಮಲ್ಲಿನ ವಿದ್ಯುಚ್ಛಕ್ತಿ ಇಲಾಖೆಯ ಕೆಲವು ಉದ್ಯೋಗಿಗಳ ಹೆಸರು ಸೂಚಿಸಿದರೆ ಹೊರದೇಶದಲ್ಲಿ ತರಬೇತಿಗಾಗಿ ಕಳುಹಿಸಿಕೊಡಬಹುದು ಎಂದು ಕೇಳಿಕೊಂಡೆವು. ಭಾರತ ಸರ್ಕಾರ ಅಥವಾ ಕಾರ್ಮಿಕ ಇಲಾಖೆ ಮಾತ್ರ ಈ ಆಯ್ಕೆಯಲ್ಲಿ ನಿರತವಾಗಿರಲಿಲ್ಲ. ಪ್ರಾಂತೀಯ ಸರ್ಕಾರಗಳೇ ಈ ಆಯ್ಕೆ ಕಾರ್ಯವನ್ನು ಪೂರ್ಣವಾಗಿ ನೆರವೇರಿಸಬೇಕಾಗಿದ್ದಿತು. ಒಟ್ಟು ೧೦ ಮಂದಿಯನ್ನು ಆರಿಸಲಾಯಿತು. ಅವರಲ್ಲಿ ಒಬ್ಬರು ಮುಸ್ಲಿಮರು. ಹೈದರಾಬಾದ್ ರಾಜ್ಯದಿಂದ ಅವರು ಆರಿಸಲ್ಪಟ್ಟಿದ್ದರು. ಉಳಿದ ಯಾವುದೇ ಪ್ರಾಂತ್ಯದವರು ಮುಸ್ಲಿಮ್ ಅಭ್ಯರ್ಥಿಗಳನ್ನು ಹೆಸರಿಸಲಿಲ್ಲ. ಏಕೆಂದು ನನಗೆ ತಿಳಿಯದು. ಪ್ರಾಯಶಃ ಅವರ ವಿದ್ಯುಚ್ಛಕ್ತಿ ಇಲಾಖೆಗಳಲ್ಲಿ ಮುಸ್ಲಿಮ್ ಉದ್ಯೋಗಿಗಳಾರೂ ಇರಲಿಲ್ಲವೆಂದು ತೋರುತ್ತದೆ.

**ಖಾನ್ ಅಬ್ದುಲ್ ಘನೀಖಾನ್ (ಉತ್ತರ–ಪಶ್ಚಿಮ ಗಡಿ ಪ್ರಾಂತ್ಯ**–ಸಾಮಾನ್ಯ): ಗಡಿ ಪ್ರಾಂತ್ಯದಲ್ಲಿ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸುಮಾರು ಪ್ರತಿಶತ ೯೦ ಭಾಗ ಮುಸಲ್ಮಾನರಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕ್ಷಮಿಸಿ, ನಿಮ್ಮ ಪ್ರಾಂತ್ಯದಿಂದ ಯಾವ ಮುಸ್ಲಿಮ್ ಅಭ್ಯರ್ಥಿಯನ್ನು ಸೂಚಿಸಲಿಲ್ಲ. ಗಡಿ ಪ್ರಾಂತ್ಯದ ಶಾಸನಸಭೆಯಲ್ಲಿ ದಯಮಾಡಿ ಆ ಬಗ್ಗೆ ನೀವು ಪ್ರಶ್ನೆ ಮಾಡಿ.

ಕಾರ್ಮಿಕ ಇಲಾಖೆ ಪ್ರಾಯೋಜಿಸಿ ಹೊರದೇಶಕ್ಕೆ ಅಭ್ಯರ್ಥಿಗಳನ್ನು ತರಬೇತಿಗೆ ಕಳುಹಿಸುವ ಯೋಜನೆಗೆ ಸಂಬಂಧಿಸಿದಂತೆ ಮೂರು ಅಂಶಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅದರಲ್ಲೊಂದು ಬೆವಿನ್

ತರಬೇತು ಯೋಜನೆ. ಅದರಂತೆ ಒಟ್ಟು ಹೊರದೇಶಕ್ಕೆ ಹೋದವರ ಸಂಖ್ಯೆ ೭೮೭. ಅವರ ಪೈಕಿ ಮುಸ್ಲಿಮರು ೧೫೪ ಜನ ಅಥವಾ ಪ್ರತಿಶತ ೧೯. ಕಲ್ಯಾಣಕಾರ್ಯಗಳಿಗಾಗಿ ಕಾರ್ಮಿಕ ಇಲಾಖೆ ಆರಿಸುವುದಿಲ್ಲ; ಬೇರೆ ಬೇರೆ ಇಲಾಖೆಗಳು ಆರಿಸುತ್ತವೆ. ಇದರಲ್ಲಿ ವಸ್ತುಸ್ಥಿತಿ ಹೀಗಿದೆ. ಇದುವರೆಗೆ ಒಟ್ಟು ೨೫ ಜನರನ್ನು ಕಳುಹಿಸಿದ್ದೇವೆ. ಈ ೨೫ರಲ್ಲಿ ೧೮ ಜನ ಮುಸ್ಲಿಮರು ಅಂದರೆ ಪ್ರತಿಶತ ೭೮ ಭಾಗ ಎಂದಂತಾಯಿತು. ಮಾನ್ಯರೆ, ಆಮೇಲೆ ಖಾಸಗಿ ಉದ್ಯೋಗಿಗಳಿಗೆ ತಾಂತ್ರಿಕ ತರಬೇತು ಕೊಡುವ ಮತ್ತೊಂದು ಯೋಜನೆಯನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಭಾರತ ಸರ್ಕಾರ ಖಾಸಗಿ ಮಾಲೀಕರ ಗಮನ ಸೆಳೆದು ಖಾಸಗಿಯವರು ತಮ್ಮ ಉದ್ಯೋಗಿಗಳಿಗೆ ಹೊರಗಡೆ ತರಬೇತು ಕೊಡಿಸಬೇಕೆಂದು ತೀರ್ಮಾನಿಸಿದ ಪಕ್ಷದಲ್ಲಿ ಭಾರತ ಸರ್ಕಾರ ಕಾರ್ಮಿಕ ಇಲಾಖೆಯ ಮೂಲಕ ಅದಕ್ಕೆ ಅವಕಾಶ ಕಲ್ಪಿಸಿಕೊಡುವುದೆಂದು ತಿಳಿಸಿತು. ಈ ಸಂಬಂಧವಾಗಿ ಇದುವರೆಗೆ ೬ ಮಂದಿಯನ್ನು ಕಳುಹಿಸಿಕೊಟ್ಟಿದ್ದೇವೆ. ದುರದೃಷ್ಟವಶಾತ್ ಇವರ ಪೈಕಿ ಯಾರೂ ಮುಸ್ಲಿಮರು ಇರಲಿಲ್ಲ; ಆದರೆ ಇದು ಖಂಡಿತವಾಗಿ ಕಾರ್ಮಿಕ ಇಲಾಖೆಯಿಂದಾದ ಪ್ರಮಾದವಲ್ಲ.

ಇನ್ನೊಂದು ಪ್ರಶ್ನೆ, ಮಾನ್ಯರೆ, ಯೋಜನಾಧಿಕಾರಿಗಳು ಮತ್ತು ಯುಟಿಲೈಸೇಷನ್ ಅಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದ್ದು. ಈ ಹುದ್ದೆಗಳನ್ನೂ ಸಹ ಫೆಡರಲ್ ಸಾರ್ವಜನಿಕ ಸೇವಾ ಆಯೋಗದ ಮೂಲಕವೇ ಭರ್ತಿಮಾಡಬೇಕು. ದುರದೃಷ್ಟವೆಂದರೆ ಇಲ್ಲಿಯೂ ಸಹ ಈ ಒಂಬತ್ತು ಹುದ್ದೆಗಳಿಗಾಗಿ ಯಾವ ಮುಸ್ಲಿಮ್ ಅಭ್ಯರ್ಥಿಯೂ ಇದ್ದಿಲ್ಲ. ಈ ಸಂಬಂಧವಾಗಿ ಕಾರ್ಮಿಕ ಇಲಾಖೆ ಮತ್ತು ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್‌ನ ನಡುವೆ ನಡೆದಿರುವ ಪತ್ರ ವ್ಯವಹಾರವನ್ನು ಖೋತಾ ಸೂಚನೆಯನ್ನು ಮಂಡಿಸಿದವರ ಗಮನಕ್ಕೆ ತರಬಯಸುತ್ತೇನೆ. ಆಯ್ಕೆಯಾದ ಸ್ವಲ್ಪ ಸಮಯದಲ್ಲಿಯೇ ಮುಸ್ಲಿಮ್ ಅಭ್ಯರ್ಥಿ ಯಾರೂ ಇಲ್ಲದ್ದನ್ನು ಗಮನಿಸಿ ನಾವು ಆ ಬಗ್ಗೆ ಪ್ರಶ್ನೆ ಮಾಡಿದೆವು. ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಬರೆದು ಆಯ್ಕೆಯಾದ ಅಭ್ಯರ್ಥಿಗಳ ಪೈಕಿ ಒಬ್ಬರೂ ಮುಸ್ಲಿಮರಿಲ್ಲವೆಂದು ತಿಳಿಸಿರಿ ಎಂದು ನಾನು ನನ್ನ ಇಲಾಖೆಗೆ ತಿಳಿಸಿದೆ. ಇದಕ್ಕೆ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್‌ನವರಿಂದ ಬಂದ ಉತ್ತರ ಇದು. ಇದು ಬಹಳ ಕುತೂಹಲಕರವಾಗಿದೆ, ಏಕೆಂದರೆ ಈ ವಿಷಯವಾಗಿ ಇದು ಮತ್ತಷ್ಟು ಬೆಳಕು ಚೆಲ್ಲುತ್ತದೆ. ತಮ್ಮ ಜಾಹಿರಾತಿಗೆ ಉತ್ತರವಾಗಿ ತಾವು ೨೪೦ ಅರ್ಜಿಗಳನ್ನು ಸ್ವೀಕರಿಸಿರುವುದಾಗಿ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್ ತಿಳಿಸಿದೆ. ಈ ೨೪೦ ಮಂದಿಯ ಪೈಕಿ ೮ ಜನ ಮುಸ್ಲಿಂ ಅಭ್ಯರ್ಥಿಗಳು – ಇವರಲ್ಲಿ ನಾವು ೩ ಮಂದಿಯನ್ನು ಸಂದರ್ಶನಕ್ಕೆ ಕರೆದೆವು. ಈ ಮೂರು ಜನಗಳ ಪೈಕಿ ಒಬ್ಬರೂ ಸಹ ಈ ಉದ್ಯೋಗಕ್ಕೆ ಸೂಕ್ತವಾಗಿ ಕಂಡುಬರಲಿಲ್ಲ. ಮಾನ್ಯರೆ, ಕೋಮುವಾರು ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆ ಒದಗಿಸಬಹುದಾದ ಮಾಹಿತಿ ಇಷ್ಟು. ನಾನು ತಮಗೆ ತಿಳಿಸುವುದೇನೆಂದರೆ ನಾನು ಈ ಜಾಗಕ್ಕೆ ಬಂದ ನಂತರದ ಅವಧಿಯಲ್ಲಿ ಮೊದಲಿಗಿಂತ ಮುಸ್ಲಿಮ್ಮರ ಪ್ರಾತಿನಿಧ್ಯ ಉತ್ತಮವಾಗಿದೆಯೇ ಹೊರತು ಕಡಿಮೆಯಾಗಿಲ್ಲ ಎಂಬುದು ನಿಸ್ಸಂಶಯ. ನಾನು ಅಧಿಕಾರ ವಹಿಸಿಕೊಂಡಿರುವ ಇಲಾಖೆಗೆ ವಿಶೇಷವಾದ ಮನ್ನಣೆಯನ್ನೇನೂ ನಾನು ಬಯಸುತ್ತಿಲ್ಲ. ಎರಡೇ ಎರಡು ಅಂಶಗಳತ್ತ ತಮ್ಮ ಗಮನ ಸೆಳೆದು ನನ್ನ ಮಾತು ಮುಗಿಸುತ್ತೇನೆ. ಈ ಕೋಮುವಾರು ಆಧಾರದ ವಿತರಣೆಯಲ್ಲಿ ನಾನು ವಹಿಸಿರುವ ಪಾತ್ರದ ಬಗ್ಗೆ ಎಷ್ಟು ಮಂದಿ ಮುಸ್ಲಿಂ ಲೀಗ್ ಪಕ್ಷದ ಸದಸ್ಯರು ಮಾಹಿತಿ ಪಡೆದುಕೊಂಡಿರುವರೋ ಇಲ್ಲವೋ ನನಗೆ ತಿಳಿಯದು. ಲಂಡನ್‌ನ ದುಂಡುಮೇಜಿನ ಪರಿಷತ್ತಿನಲ್ಲಿ ಅಲ್ಪಸಂಖ್ಯಾತ ಕೋಮುಗಳಿಗೆ ಈ ಬಗೆಯ ಸವಲತ್ತುಗಳ ಬಗ್ಗೆ ಚರ್ಚೆಯಾದಾಗ ನಾನು ವಹಿಸಿದ

ಪಾತ್ರ ಎಂಥದು ಎಂಬುದರ ಬಗ್ಗೆ ನನಗೆ ಹೆಮ್ಮೆ ಇದೆ. ಆ ಪರಿಷತ್ತಿನಲ್ಲಿ ಹಾಜರಿದ್ದ ಮುಸ್ಲಿಂ ಲೀಗ್ ಪಕ್ಷದ ಸದಸ್ಯರಿಗೆ ಇದು ವೇದ್ಯವಾಗಿರುವ ಸಂಗತಿಯೇ ಆಗಿದೆ. ಆದ್ದರಿಂದ ಮುಸ್ಲಿಮರಾಗಲೀ ಅಥವಾ ಇನ್ನಾವುದೇ ಅಲ್ಪಸಂಖ್ಯಾತ ಕೋಮಿನವರಾಗಲೀ ಅವರ ಆಶಯಗಳಿಗೆ ನಾನು ವಿರುದ್ಧವಾಗಿದ್ದೇನೆ ಎಂದು ಯಾರೂ ಆಪಾದಿಸಲಾರರು. ಇದಕ್ಕೋಸ್ಕರವಾಗಿಯೇ ನಾನು ಹಿಂದೆ ಹೋರಾಟ ನಡೆಸಿರುವುದು, ಇಂದು ಹೋರಾಡುತ್ತಿರುವುದು ಹಾಗೂ ಮುಂದೆಯೂ ಹೋರಾಡುವುದು.

ಗೌರವಾನ್ವಿತ ಗೃಹ ಸದಸ್ಯರು ಅಪ್ಪಣೆ ಕೊಟ್ಟಲ್ಲಿ ನಾನು ಮಾಡಬೇಕೆಂದಿರುವ ಎರಡನೆಯ ಸೂಚನೆಯೆಂದರೆ ಇದು : ಭಾರತ ಸರ್ಕಾರ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ತಾರತಮ್ಯ ತೋರಿದರೆ ಅದನ್ನು ಸರಿಪಡಿಸಲು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುವುದೆಂದು ಸದರಿ ಸದಸ್ಯರು ವಾಗ್ದಾನ ಮಾಡಿರುತ್ತಾರೆ; ವಾಸ್ತವವಾಗಿ ಪತ್ರ ಬರೆದು ಇದು ಅತ್ಯಂತ ತುರ್ತು ವಿಷಯ, ಈ ಕಡೆ ಅವಶ್ಯವಾಗಿ ಗಮನ ಹರಿಸಿರಿ ಎಂದು ಅವರ ಗಮನ ಸೆಳೆದವನು ನಾನೇ. ಆದ್ದರಿಂದ ಇದರ ಕೀರ್ತಿ ನನಗೆ ಸಲ್ಲಬೇಕು. ಇನ್ನು ಹೆಚ್ಚೇನೂ ನಾನು ಹೇಳಲು ಬಯಸುವುದಿಲ್ಲ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಮಾನ್ಯರೆ, ಕೇವಲ ಮಾಹಿತಿಗೋಸ್ಕರ ನಾನು ಕೇಳುತ್ತಿದ್ದೇನೆ; ಅವರು ಈಗ ತಾನೇ ಶ್ರುತಪಡಿಸಿದ ಅಂಕಿಅಂಶದಲ್ಲಿ ಪುನರ್ವಸತಿ ಉದ್ಯೋಗವೂ ಸೇರ್ಪಡೆಯಾಗಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಹೌದು, ಅದು ಕಾರ್ಮಿಕ ಇಲಾಖೆಯ ಅವಿಭಾಜ್ಯ ವಿಭಾಗವಾಗಿದೆ.

**ಶ್ರೀ ಮಹ್ಮದ್ ಇ.ಎಚ್. ಜಾಫರ್ :** ಪುನರ್ವಸತಿಯೂ ಸೇರಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಬಳಿ ಹೇರಳವಾದ ಅಂಕಿಅಂಶವಿದೆ. ಅವು ಎಷ್ಟು ಆಕರ್ಷಕವಾಗಿವೆಯೆಂದರೆ ನನ್ನ ಸ್ನೇಹಿತರು ಅವುಗಳನ್ನು ನೋಡಬೇಕೆಂದು ಬಯಸಿದರೆ ಹೆಚ್ಚಿನ ಮಾಹಿತಿಗಾಗಿ ಖಂಡಿತಾ ಅವುಗಳನ್ನು ಅವರಿಗೆ ಕೊಡಲು ಸಿದ್ಧ.

## ೬೨
## ಭಾರತೀಯ ಹಣಕಾಸು ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯ ಅಧ್ಯಕ್ಷರೆ, ಹಣಕಾಸಿನ ಮಸೂದೆಗೆ ಸಂಬಂಧಿಸಿದಂತೆ ನಾನು ಚರ್ಚೆಯಲ್ಲಿ ಮಧ್ಯಪ್ರವೇಶಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಥಮತಃ ತಮಗೆ ಆಭಾರಿಯಾಗಿದ್ದೇನೆ. ಮಾನ್ಯರೆ, ಹಾಗೆ ನಾನು ಹೇಳುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ನಾನು ಪ್ರಸ್ತಾಪ ಮಾಡುತ್ತಿರುವ ಅಂಶಗಳು ನೇರವಾಗಿ ನನ್ನ ಇಲಾಖೆಯಾದ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟವಾಗಿಲ್ಲ. ವಾಸ್ತವವಾಗಿ ಹಣಕಾಸು ಮಸೂದೆಗೆ ಸಂಬಂಧಿಸಿದ ಇದುವರೆಗಿನ ಚರ್ಚೆಯಲ್ಲಿ ಆ ಇಲಾಖೆಯ ವಿರುದ್ಧ ಗಂಭೀರವಾದ ಯಾವ ಆಪಾದನೆಯೂ ಆಗಿಲ್ಲ ಎಂಬುದು ಸಂತೋಷಪಡಬೇಕಾದ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್, (ಕೇಂದ್ರ), ಸಂಪುಟ–೪, ಸಂ : ೭, ೨೬ನೇ ಮಾರ್ಚ್ ೧೯೪೬, ಪು. ೨೯೨೬–೩೧.

ವಿಷಯ. ನಿನ್ನೆಯ ದಿನ ಹಣಕಾಸು ಮಸೂದೆಯ ಬಗ್ಗೆ ಮಾತನಾಡುತ್ತಾ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಪಂಡಿತ್ ಗೋವಿಂದ್ ಮಾಳವೀಯ ಅವರು ಪರಿಶಿಷ್ಟ ಜಾತಿಯವರಿಗೆ ತೆರೆಯಲುದ್ದೇಶಿಸಿರುವ ಕಾಲೇಜನ್ನು ಕುರಿತು ಪ್ರಸ್ತಾಪ ಮಾಡಿದರು; ಈ ವಿಷಯವಾಗಿ ಮಾತನಾಡಲು ನಾನು ಎದ್ದುನಿಂತಿದ್ದೇನೆ. ಮಾನ್ಯರೆ, ವಾಸ್ತವವಾಗಿ ಆ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ಕೊಡಲು ಶಿಕ್ಷಣ ಇಲಾಖೆಯವರು ಜವಾಬ್ದಾರಿ ವಹಿಸಬೇಕಾಗಿತ್ತು, ಏಕೆಂದರೆ ಈ ಯೋಜನೆಯನ್ನು ಪರಿಶೀಲಿಸಿದವರು ಅವರು ಮತ್ತು ಹಣಕಾಸು ಮಂಜೂರು ಮಾಡಿದವರು ಹಣಕಾಸು ಇಲಾಖೆಯವರು. ನಾನು ವಹಿಸಿದ ಪಾತ್ರವೆಂದರೆ ಈ ಕ್ರಮವನ್ನು ನಾನು ಚಾಲನೆಗೊಳಿಸಿದ್ದು. ಶಿಕ್ಷಣ ಇಲಾಖೆಯ ಪ್ರತಿನಿಧಿಯೊಬ್ಬರೇ ಈ ಕ್ರಮದ ಬಗ್ಗೆ ಸಮರ್ಥಿಸಿಕೊಳ್ಳಲಿ ಎಂದು ನಾನು ಸುಮ್ಮನೆ ಕೂರಲು ನನಗೆ ಮನಸ್ಸಾಗುತ್ತಿಲ್ಲ. ಏಕೆಂದರೆ ನನ್ನ ಗೆಳೆಯರು ಈ ಯೋಜನೆಯ ವಿರುದ್ಧ ಮಾತನಾಡಿ ಇದಕ್ಕೊಂದು ರಾಜಕೀಯ ಬಣ್ಣ ಕೊಡಲು ಹವಣಿಸುತ್ತಿದ್ದಾರೆ. ಆದಕಾರಣ ಅವರು ಮಾಡಿದ ಆಪಾದನೆಗಳಿಗೆ ಉತ್ತರ ಕೊಡಲು ನಾನು ಇಂದು ಎದ್ದುನಿಂತಿದ್ದೇನೆ.

ನನ್ನ ಗೌರವಾನ್ವಿತ ಗೆಳೆಯರು ಈ ಯೋಜನೆಯಿಂದ ದಿಗ್ಭ್ರಾಂತರಾಗಿರುವುದಾಗಿ ತಿಳಿಸಿರುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಪಕ್ಷಪಾತವಾಗುವ ರೀತಿ–ರಿವಾಜನ್ನು ಈ ಯೋಜನೆಯು ಹುಟ್ಟುಹಾಕುವುದರಿಂದ ತಮಗೆ ದಿಗಿಲಾಗಿದೆ ಎಂದು ಶ್ರೀಯುತರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಮಾನ್ಯರೆ, ಗಾಜಿನ ಮನೆಯಲ್ಲಿರುವ ವ್ಯಕ್ತಿ ಕಲ್ಲು ಎಸೆಯಬಾರದು ಎಂಬ ತುಂಬಾ ಪ್ರಸಿದ್ಧವಾದ ಒಂದು ಗಾದೆಯಿದೆ. ನನ್ನ ಗೌರವಾನ್ವಿತ ಗೆಳೆಯರಾದ ಪಂಡಿತ್ ಮಾಳವೀಯರು ಅದರ ಸತ್ಯಾಂಶವನ್ನು ಮನಗಂಡಿರುವರೋ ಇಲ್ಲವೋ ಎಂದು ನನಗೆ ಅನುಮಾನವುಂಟಾಗಿದೆ. (– ಶ್ರೀ ಮಾಳವೀಯರು ಎದ್ದುನಿಂತು–ನನಗಾಗಲೀ ಅಥವಾ ಇನ್ನಾವುದೇ ಸದಸ್ಯರಿಗಾಗಲೀ ರಾಷ್ಟ್ರೀಕರಣದ ಬಗ್ಗೆ ಉಪದೇಶ ಮಾಡುವ ಉತ್ಸಾಹವನ್ನು ಕಂಡು ನನಗೆ ಆಶ್ಚರ್ಯವಾಗಿದೆ – ಅತ್ಯಾಶ್ಚರ್ಯವಾಗಿದೆ.) ಅವರ ವೈಯಕ್ತಿಕ ಅಭ್ಯಾಸಗಳನ್ನು ಬಲ್ಲವರಿಗೆ ಇದೇನೂ ಹೊಸ ವಿಷಯವೇನಲ್ಲ. ಒಬ್ಬ ಸಾಮಾನ್ಯ ಹಿಂದುವಿನಿಂದ ಅಷ್ಟೇ ಏಕೆ ಬೇರೆ ಗೋತ್ರಕ್ಕೆ ಸೇರಿದ ಇನ್ನೊಬ್ಬ ಬ್ರಾಹ್ಮಣನಿಂದಲೂ ಸಹ ಮಾಳವೀಯರು ನೀರು ಮುಟ್ಟುವುದಿಲ್ಲ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ (ಮದರಾಸು ಮತ್ತು ಚಿತ್ತೂರು** : ಮುಸ್ಲಿಮೇತರ ಗ್ರಾಮಾಂತರ) : ಅವರು ಸರ್ವರಿಗೂ ಸಮಾನ ನ್ಯಾಯ ಮಾಡುತ್ತಾರೆ !

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅವರ ಮಡಿವಂತಿಕೆ ಒಂದು ಇಲಿಯ ಮಡಿವಂತಿಕೆಯನ್ನು ಹೋಲುವಂಥದು; ಈ ಇಲಿ ತಾನು ಹೊರಗೆ ಬಂದುದಾದರೆ ಬೇರೆಯವರನ್ನು ಮುಟ್ಟಿಸಿಕೊಂಡು ಮೈಲಿಗೆಯಾಗಬಹುದೆಂದು ಅಂಜಿ ತನ್ನ ಬಿಲದ ಒಳಗೇ ಅಡಗಿ ಕುಳಿತುಕೊಳ್ಳುತ್ತದಂತೆ. ಆ ಭಾವನೆಯುಳ್ಳ ವ್ಯಕ್ತಿ ಪಂಥಾಭಿಮಾನದ ಬಗ್ಗೆಯಾಗಲೀ ಅಥವಾ ಈ ರಾಷ್ಟ್ರದ ಅಭಿಮಾನದ ಬಗ್ಗೆಯಾಗಲೀ ಮಾತನಾಡುವುದಕ್ಕೆ ಮೊದಲು ಎರಡು ಬಾರಿ ಆಲೋಚಿಸಬೇಕು. ಬನಾರಸ್ ಹಿಂದೂ ವಿಶ್ವವಿದ್ಯಾಲಯ ಎಂಬ ಸಂಸ್ಥೆಯ ಬಗ್ಗೆ ಅವರು ಅಭಿಮಾನವುಳ್ಳವರು ಎಂಬ ವಿಷಯವನ್ನು ಅವರು ತಿಳಿಯಬೇಕಿತ್ತು, ನಮ್ಮೆಲ್ಲರಿಗೂ ತಿಳಿದಿರುವಂತೆ ಅದು ಪಂಥಾಭಿಮಾನದ ಪ್ರತೀಕವಾದ ಸಂಸ್ಥೆಯಲ್ಲವೆಂದರೆ ಇನ್ನಾವುದು ಅಂಥ ಸಂಸ್ಥೆ? ಮಾನ್ಯರೆ, ನನಗೆ ತಿಳಿದಿದೆ ಈ ವಿಶ್ವವಿದ್ಯಾನಿಲಯ ಎಂತಹದು ಎಂದು. ನನ್ನ ಗೌರವಾನ್ವಿತ ಗೆಳೆಯರನ್ನು ನಾನು ಕೇಳಬಯಸುತ್ತೇನೆ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಅಧ್ಯಾಪಕರಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣೇತರನಿದ್ದಾನೆಯೇ ಎಂದು?

**ಗೌರವಾನ್ವಿತ ಸದಸ್ಯರು :** ಇದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವು ೧೯೧೬ರಲ್ಲಿ ಅನುಮೋದಿಸಿದ ಸ್ಥಾಯಿ ನಿರ್ಣಯದಲ್ಲಿ ಹಿಂದೂ ಧರ್ಮದ ಪ್ರಾಧ್ಯಾಪಕನಾಗಿ ಬ್ರಾಹ್ಮಣೇತರರನ್ನು ಆತ ಹಿಂದೂ ಧರ್ಮದಲ್ಲಿ ಎಷ್ಟೇ ಪಾರಂಗತವಾಗಿದ್ದಾಗ್ಯೂ ಸಹ–ನೇಮಕ ಮಾಡಲಾಗದೆಂದು ತಿಳಿಸಿಲ್ಲವೆ? ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ದೇವತಾಶಾಸ್ತ್ರ ವಿಭಾಗದಲ್ಲಿ ಸ್ಥಳಾವಕಾಶ ದೊರೆಯದ ಕಾರಣ ಒಬ್ಬ ಕಾಯಸ್ಥ ಹುಡುಗಿ ಕೆಲವು ತಿಂಗಳುಗಳ ಹಿಂದೆ ಉಪವಾಸ ವ್ರತ ಕೈಗೊಂಡ ಸಂಗತಿಯನ್ನು ಮಾನ್ಯ ಸ್ನೇಹಿತರು ಅಷ್ಟು ಬೇಗ ಮರೆತಿರುವರೇನು? ಅದು ಪಂಥಾಭಿಮಾನದ ಪರಮಾವಧಿಯಲ್ಲವೆಂದರೆ, ಬೇರೆ ಯಾವುದನ್ನು ಪಂಥಾಭಿಮಾನವೆಂದು ಕರೆಯುವುದು?

ನಿನ್ನೆ ನಡೆದ ಚರ್ಚೆಯ ನಡವಳಿಗಳನ್ನು ನಾನು ಓದುತ್ತಿದ್ದೆ, ನನ್ನ ಗೌರವಾನ್ವಿತ ಗೆಳೆಯರಾದ ಶ್ರೀ ಅಯ್ಯಂಗಾರರು ಅಧಿಕೃತ ವರದಿಯಲ್ಲಿ ದಾಖಲಾಗಿರುವಂತೆ ಪರಿಶಿಷ್ಟ ಜಾತಿಗಳವರಿಗೆ ಒಂದು ಪ್ರತ್ಯೇಕವಾದ ಕಾಲೇಜು ತೆರೆಯುವ ವಿಷಯದ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಸೇಲಮ್ ಪಟ್ಟಣದಲ್ಲಿ ಇತ್ತೀಚೆಗೆ ನಡೆದ ಘಟನೆಯ ಬಗ್ಗೆ ಅವರಿಗೆ ತಿಳಿದಿದೆಯೊ ಏನೋ ಗೊತ್ತಿಲ್ಲ. ಪ್ರಾಯಶಃ ಅವರಿಗೆ ಮರೆವು ಎಂದು ತೋರುತ್ತೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ನನಗದು ತಿಳಿಯದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಅಥವಾ ಅವರು ರಾಜಕಾರಣದಲ್ಲಿ ತುಂಬಾ ಮುಳುಗಿ ಹೋಗಿರುವುದರಿಂದ ಪ್ರಾಯಶಃ ಅವರಿಗೆ ತಮ್ಮ ಜಾತಿಯ ಜನರು ಏನು ಮಾಡುತ್ತಿದ್ದಾರೆ ಎಂಬುದರ ಅರಿವಿಲ್ಲ. ದಯಮಾಡಿ ಅವರು ಈ ತಿಂಗಳ ೧೨ನೇ ತಾರೀಖಿನ 'ಹಿಂದೂ' ಪತ್ರಿಕೆಯನ್ನು ಓದಲಿ. ಸೇಲಮ್‌ನ ಬ್ರಾಹ್ಮಣರು ಒಂದು ಕಡೆ ಸೇರಿ ಬ್ರಾಹ್ಮಣರ ಹಿತ ಕಾಪಾಡುವುದಕ್ಕೋಸ್ಕರ ಒಂದು ಬ್ರಾಹ್ಮಣ ಸಂಘವನ್ನು ಸ್ಥಾಪಿಸುವ ಬಗ್ಗೆ ಚರ್ಚೆ ನಡೆಸಿದ ವಿಷಯ ಅವರಿಗೆ ತಿಳಿಯುತ್ತದೆ – ಬ್ರಾಹ್ಮಣರಿಗೋಸ್ಕರ ಒಂದು ಕಾಲೇಜು ಮತ್ತು ಬ್ರಾಹ್ಮಣರಿಗೋಸ್ಕರ ಕೈಗಾರಿಕೋದ್ಯಮ ಸ್ಥಾಪಿಸುವುದು ಕೂಡ ಇವರ ಕಾರ್ಯಕ್ರಮವಾಗಿದೆ. ಮತ್ತು ಆ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ತಾನೆ ಯಾರು? ದೊಡ್ಡ ಮನುಷ್ಯರಾದ ಸಚಿವೋತ್ತಮ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್‌ರವರು.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ನಿಮ್ಮ ಮಾಜಿ ಸಹೋದ್ಯೋಗಿ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನಗದು ತಿಳಿಯದು. ಈ ದೇಶದಲ್ಲಿ ಪ್ರತಿಯೊಬ್ಬರೂ ರಾಷ್ಟ್ರೀಯತೆಯ ಬಗ್ಗೆ ಮಾತನಾಡುತ್ತಲೇ ಪಂಥಾಭಿಮಾನದ ಪ್ರವರ್ತಕರಾಗುತ್ತಿದ್ದಾರೆ.....

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಅದಕ್ಕಾಗಿ ನನಗೆ ವ್ಯಥೆ ಆಗಿದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್......**

ಪ್ರಪ್ರಥಮ ಬಾರಿಗೆ ತಮ್ಮ ಕುಂದುಕೊರತೆಗಳನ್ನು ಅರಿತುಕೊಂಡು ಉನ್ನತ ಶಿಕ್ಷಣ ಪಡೆದುಕೊಳ್ಳುವತ್ತ ಆರಂಭಿಕ ಹೆಜ್ಜೆ ಇಡಲು ಹೋರಾಟ ಮಾಡುವ ವಿಷಯವನ್ನು ಕುರಿತು ಸದನದಲ್ಲಿ ಸದಸ್ಯರು ದೂರು ನೀಡುವಂಥ ಧಾಟಿಯಲ್ಲಿ ಮಾತನಾಡುವುದು ನನಗಂತೂ ಉಚಿತವೆಂದು ತೋರುತ್ತಿಲ್ಲ. ಈ ಸದನದ ಗಮನಕ್ಕೆ ನಾನು ತರಲಿಚ್ಛಿಸುವುದೇನೆಂದರೆ ಈ ಶೈಕ್ಷಣಿಕ ಸಂಸ್ಥೆಯನ್ನು ಪರಿಶಿಷ್ಟ ಜಾತಿಯ ಕಾಲೇಜೆಂದು ಹಣೆಪಟ್ಟಿ ಹಚ್ಚುವುದು ದೋಷನಾಮವೆಂದೇ ನನ್ನ ಭಾವನೆ. ಬೇರೆಲ್ಲ ಕಾಲೇಜುಗಳಂತೆ ಎಲ್ಲ ಜಾತಿಯ ಜನರಿಗೂ ಇದು ತೆರೆದಿರುವಂಥಾ ಕಾಲೇಜು. ಇಲ್ಲಿ ಯಾರ ಪಾಲಿಗೂ ಬಾಗಿಲು ಮುಚ್ಚಿಲ್ಲ.

**ಪಂಡಿತ್ ಗೋವಿಂದ್ ಮಾಳವಿಯ (ಅಲಹಾಬಾದ್ ಮತ್ತು ಝಾನ್ಸಿ ವಿಭಾಗಗಳು :** ಮುಸ್ಲಿಮೇತರ

ಗ್ರಾಮಾಂತರ) : ಬಜೆಟ್ ಪತ್ರದಲ್ಲಿ ಏನು ತಿಳಿಸಲ್ಪಟ್ಟಿದೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬಜೆಟ್ ಪತ್ರ ಸರಿಸುಮಾರು ಒಂದು ತಿಂಗಳು ಕಾಲ ನಿಮ್ಮ ಮುಂದಿತ್ತು ; ಆ ಸಮಯದಲ್ಲಿ ನೀವು ಇದರ ಬಗ್ಗೆ ವಿವರವಾಗಿ ಮಾಹಿತಿ ಕೊಡಬೇಕೆಂದು ಕೇಳುವ ಬದಲು ಈಗ ಎದ್ದುನಿಂತು ಅದನ್ನು ವಿರೋಧಿಸುತ್ತಿದ್ದೀರಿ. ನಾನೀಗಾಗಲೇ ತಿಳಿಸಿದಂತೆ, ಈ ಸಂಸ್ಥೆಯು ಎಲ್ಲರಿಗೂ ತೆರೆದಿದೆ. ಕಾಲೇಜು ಎಲ್ಲರಿಗೂ ತೆರೆದಿದೆ ಅಷ್ಟೇ ಅಲ್ಲ, ಇಲ್ಲಿ ಸೇವೆಯಲ್ಲಿರುವ ಅಧ್ಯಾಪಕ ವರ್ಗದವರೂ ಸಹ ವಿಶಾಲ ದೃಷ್ಟಿಯುಳ್ಳವರು. ಹಿಂದೂಗಳಿದ್ದಾರೆ, ಬ್ರಾಹ್ಮಣರಿದ್ದಾರೆ, ಬ್ರಾಹ್ಮಣೇತರರಿದ್ದಾರೆ, ಪಾರಸಿಗಳಿದ್ದಾರೆ, ಕ್ರಿಶ್ಚಿಯನ್ನರಿದ್ದಾರೆ, ಮುಸ್ಲಿಂ ಜನಾಂಗದವರೂ ಕೂಡ ಇದ್ದಾರೆ. ನಾನು ಈ ಸದನಕ್ಕೆ ಈ ವಿಷಯವನ್ನು ತಿಳಿಸಲು ಸಂತೋಷವಾಗುತ್ತದೆ; ಬೊಂಬಾಯಿ ವಿಶ್ವವಿದ್ಯಾನಿಲಯ ಮಾನ್ಯತೆಗಾಗಿ ಕಾಲೇಜಿನಿಂದ ಅರ್ಜಿ ಬಂದಾಗ ಈ ಕಾಲೇಜಿಗೆ ಮಾನ್ಯತೆ ಕೊಡಲು ಅವರು ಎಳ್ಳಷ್ಟೂ ತಡಮಾಡಲಿಲ್ಲ. ಬೊಂಬಾಯಿ ವಿಶ್ವವಿದ್ಯಾನಿಲಯದ ಚರಿತ್ರೆಯಲ್ಲೇ ಇಷ್ಟು ಸಮರ್ಪಕವಾದ ರೀತಿಯಲ್ಲಿ ಯೋಜನೆಯನ್ನು ಯಾವ ಒಂದು ಸಂಸ್ಥೆಯೂ ತಯಾರಿಸಿ ಮುಂದಿರಿಸಿರಲಿಲ್ಲವೆಂದು ಹೇಳಿದುದನ್ನು ನಾನು ಸ್ಮರಿಸುತ್ತೇನೆ. ಪ್ರಥಮ ಬಾರಿಗೆ ಒಂದು ಹೊಸ ಕಾಲೇಜನ್ನು ಪೂರ್ಣಪ್ರಮಾಣದಲ್ಲಿ ಪ್ರಾರಂಭದಲ್ಲೇ ಸ್ಥಾಪಿಸಲು ಅನುಮತಿ ನೀಡಿರುವುದು ಬೊಂಬಾಯಿ ಇತಿಹಾಸದಲ್ಲೇ ಇದು ಮೊದಲು. ಇದಕ್ಕೆ ಮುಖ್ಯ ಕಾರಣ ಇಲ್ಲಿನ ವ್ಯವಸ್ಥೆ, ಅಧ್ಯಾಪಕ ವರ್ಗ ಮತ್ತು ಇತರೆ ಉಪಕರಣಗಳು ಅಷ್ಟು ಸಮರ್ಪಕವಾಗಿರುವುದೇ ಆಗಿದೆ. ಈ ದೃಷ್ಟಿಯಿಂದ ಈ ಕಾಲೇಜನ್ನು ಪರಿಶಿಷ್ಟರ ಕಾಲೇಜೆಂದು ಮಾತ್ರ ಬಣ್ಣಿಸಲಾಗದು. ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳ ವಿಷಯದಲ್ಲಿ ಕಾಲೇಜಿನವರು ತೋರುವ ಪ್ರಾಶಸ್ತ್ಯವೆಂದರೆ ಅವರಿಗೆ ಪ್ರವೇಶದಲ್ಲಿ ಮತ್ತು ವಿದ್ಯಾರ್ಥಿ ನಿಲಯದಲ್ಲಿ ಅವಕಾಶ ಕಲ್ಪಿಸಿಕೊಡುವಲ್ಲಿ ಆದ್ಯತೆ ಕೊಡುತ್ತಾರೆ, ಅದೊಂದು ವಿಶೇಷವೆನ್ನಬಹುದು. ಈ ಕಾಲೇಜನ್ನು ಸ್ಥಾಪಿಸುವ ಅಗತ್ಯವುಂಟಾದದ್ದು ಏಕೆ ಎಂದು ನಾನು ಸದನಕ್ಕೆ ಮನವರಿಕೆ ಮಾಡಿಕೊಡಲಿಚ್ಛಿಸುತ್ತೇನೆ. ಗೌರವಾನ್ವಿತ ಸದಸ್ಯರು ಪ್ರಾಯಶಃ ತಿಳಿದಿರಲಾರರು. ಸದ್ಯದಲ್ಲಿ ಬೊಂಬಾಯಿ ಪ್ರಾಂತ್ಯದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಮಿತಿಮೀರಿಹೋಗಿರುವ ವಿಷಯ ನನ್ನ ಎದುರುಗಡೆ ಕುಳಿತಿರುವ ನನ್ನ ಸ್ನೇಹಿತರಾದ ಶ್ರೀ ಗಾಡ್ಗೀಳ್ ಅವರಿಗೆ ಗೊತ್ತು. ಕಳೆದ ವರ್ಷ ೧೯ ಹೊಸ ಕಾಲೇಜುಗಳನ್ನು ತೆರೆಯಲು ಬೊಂಬಾಯಿ ವಿಶ್ವವಿದ್ಯಾನಿಲಯ ಅನುಮತಿ ನೀಡಿದೆ. ಹುಡುಗರು ಪ್ರವೇಶ ಪಡೆಯಲು ಎಷ್ಟು ಪರದಾಡಬೇಕಾಗಿದೆಯೆಂದು ಇದರಿಂದ ತಿಳಿದುಬರುತ್ತದೆ. ಈ ಸಂಖ್ಯಾಬಾಹುಳ್ಯದಿಂದ ಹೆಚ್ಚು ಕಷ್ಟಕ್ಕೀಡಾದವರು ಪರಿಶಿಷ್ಟ ಜಾತಿಯ ಹುಡುಗರು. ಏಕೆಂದರೆ ಇವರೆಲ್ಲ ಮೆಟ್ರಿಕ್ಯುಲೇಶನ್ ಪಾಸುಮಾಡಿದ ನಂತರ ಮುಂದಿನ ವಿದ್ಯಾಭ್ಯಾಸಕ್ಕೆ ಕಾಲೇಜುಗಳಲ್ಲಿ ಪ್ರವೇಶಕ್ಕೆ ಪ್ರಯತ್ನಿಸಿದಾಗ ಯಾವ ಕಾಲೇಜಿನಲ್ಲೂ ಇವರಿಗೆ ಸ್ಥಳ ಸಿಕ್ಕಲಿಲ್ಲ. ಹಾಗಾಗಿ ನಾನು ಭಾರತ ಸರ್ಕಾರದ ಗಮನ ಸೆಳೆದು ಈ ರೀತಿಯಾಗಿ ಅತಂತ್ರರಾದ ವಿದ್ಯಾರ್ಥಿಗಳಿಗೆ ಆದ್ಯತೆಯ ಆಧಾರದ ಮೇಲೆ ಪ್ರವೇಶ ಕೊಡುವಂಥ ಕಾಲೇಜುಗಳನ್ನು ತೆರೆಯಬೇಕಾದದ್ದು ಅನಿವಾರ್ಯವೆಂದು ತಿಳಿಸಿದೆ. ಆದಕಾರಣ ಈ ಯೋಜನೆಯಲ್ಲಿ ಪಂಥಾಭಿಮಾನದ ಅಥವಾ ಜಾತಿವಾದದ ಕಳಂಕವೇನೂ ಇಲ್ಲವೆಂದು ತಿಳಸಬಯಸುತ್ತೇನೆ.

ಮಾನ್ಯರೆ, ಮತ್ತೊಂದು ವಿಷಯವನ್ನು ಸಹ ನನ್ನ ಗೌರವಾನ್ವಿತ ಸ್ನೇಹಿತರು ಪ್ರಸ್ತಾಪ ಮಾಡಿದರು, ಈ ವಿಷಯವನ್ನು ಅವರು ಏಕೆ ಪ್ರಸ್ತಾಪಿಸಿದರೋ ನನಗೆ ಗೊತ್ತಾಗುತ್ತಿಲ್ಲ. ರಾಜಕಾರಣವನ್ನು ಎಳೆತಂದು, ಚುನಾವಣೆಯ ವಿಷಯದಲ್ಲಿ ನಾನು ಸಂಪೂರ್ಣವಾಗಿ ಶೂನ್ಯವೆಂದು ಘೋಷಿಸಿಬಿಟ್ಟಿದ್ದಾರೆ. ವಾಸ್ತವವಾಗಿ ಅವರು ಇದರಿಂದ ಏನು ಹೇಳಬಯಸಿರುವರೋ ಗೊತ್ತಿಲ್ಲ. ಪ್ರಾಯಶಃ ಭಾರತ ಸರ್ಕಾರ ನನ್ನ ಹೆಸರನ್ನು

ಪಟ್ಟಿಯಲ್ಲಿ ಸೇರಿಸಕೊಳ್ಳಬಾರದಿತ್ತು ಎನ್ನುವುದನ್ನು ಸೂಚಿಸುವುದಕ್ಕೆ ಅವರು ಹಾಗೆ ಮಾಡಿರಬಹುದು ಎಂದು ನನ್ನ ಊಹೆ.

**ಪಂಡಿತ್ ಗೋವಿಂದ್ ಮಾಳವೀಯ :** ನಿಮಗೆ ಖಂಡಿತಾ ಗೊತ್ತಿಲ್ಲವೆ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಚುನಾವಣೆಯಲ್ಲಿ ಏನಾಯಿತೆಂಬುದನ್ನು ಗಣನೆಗೆ ತೆಗೆದುಕೊಂಡರಂತೂ ನಾನೊಂದು ಒಣಗಿಹೋದ ಗಿಡವೇ ಸರಿ. ಆದರೆ ಎದುರಿಗೆ ಕುಳಿತ ನನ್ನ ಗೌರವಾನ್ವಿತ ಗೆಳೆಯರಿಗೆ ನಾನು ಹೇಳಬಯಸುವುದು ಏನೆಂದರೆ ನಾನು ಬುಡದಲ್ಲಿ ಮಾತ್ರ ಇನ್ನೂ ಒಣಗಿಲ್ಲ. ನನ್ನ ಗೌರವಾನ್ವಿತ ಸ್ನೇಹಿತರು ಚುನಾವಣೆ ಫಲಿತಾಂಶದ ಪ್ರಸ್ತಾಪ ಮಾಡಿದರು. ಕಾಂಗ್ರೆಸ್ಸಿನವರು ಪರಿಶಿಷ್ಟ ಜಾತಿಯ ಸ್ಥಾನಗಳನ್ನು ಗೆದ್ದುಕೊಂಡಿದ್ದಾರೆ ಎಂದು ಅವರು ತಿಳಿಸಿದರು. ಹೌದು, ಗೆದ್ದ ಸ್ಥಾನಗಳು ಪರಿಶಿಷ್ಟ ಜಾತಿಯವೇ. ಆದರೆ ನನ್ನ ಗೌರವಾನ್ವಿತ ಗೆಳೆಯರನ್ನು ನಾನು ಕೇಳುವ ಒಂದು ಪ್ರಶ್ನೆಯೆಂದರೆ, ಕಾಂಗ್ರೆಸ್ಸಿನವರು ಈ ಸ್ಥಾನಗಳನ್ನು ಸರಿಯಾದ ಮಾರ್ಗದಲ್ಲಿ ಗೆದ್ದರೆ ಎಂಬುದು?

**ಪ್ರೊ॥ ಎನ್.ಜಿ. ರಂಗಾ :** ಅದರ ಪರಿಶೀಲನೆಗೆ ನಾವು ಸಿದ್ಧ!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದರಲ್ಲಿ ಯಾವ ಮಾರ್ಗ ಅನುಸರಿಸಲಾಯಿತು ಎಂಬುದರ ಬಗ್ಗೆ ಬೇಕಾದರೆ ನಮ್ಮ ಸ್ನೇಹಿತರಿಗೆ ನಾನು ವಿವರಿಸುತ್ತೇನೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಮಾಮೂಲಿ ಆಪಾದನೆ!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇದೇನು ಮಾಮೂಲಿ ಆಪಾದನೆ ಅಲ್ಲ. ಬೇಕಾದರೆ ನೀವು ಪುರಾವೆಗಳನ್ನ ಪರೀಕ್ಷೆಗೆ ಒಳಪಡಿಸಬಹುದು.

**ಪ್ರೊ॥ ಎನ್.ಜಿ. ರಂಗಾ :** ಅಸ್ಪಷ್ಟವಾಗಿರುವ ಕಡೆ ಹೆಜ್ಜೆ ಹಾಕಬೇಡಿ!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಗೌರವಾನ್ವಿತ ಗೆಳೆಯರು ತಿಳಿಯಬೇಕು. ಎಷ್ಟೋ ಕಡೆಗಳಲ್ಲಿ ಅಸ್ಪೃಶ್ಯ ಮತದಾರರು ಮತಗಟ್ಟೆಗಳಿಗೆ ಹೋಗುವುದಕ್ಕೂ ಸಾಧ್ಯವಾಗಿಲ್ಲ. ಸತಾರಾ ಜಿಲ್ಲೆಯಲ್ಲಿ ನಡೆದ ರೀತಿರಿವಾಜನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ, ಏಕೆಂದರೆ ಇಲ್ಲಿನ ಅನೇಕ ಸದಸ್ಯರಿಗೆ ನೆನಪಿರುವಂತೆ ಆ ಜಿಲ್ಲೆಯಲ್ಲಿ ಸಮಾನಾಂತರ ಸರ್ಕಾರವೆಂಬುದು ಅಸ್ತಿತ್ವದಲ್ಲಿತ್ತು. ೩೬೦ ಗ್ರಾಮಗಳ ಪರಿಶಿಷ್ಟ ಜಾತಿಯ ಮತದಾರರನ್ನು ಹಿಂದೂ ಕೋಮಿನವರು ಗ್ರಾಮ ಕಚೇರಿಗಳಿಗೆ ಕೊಂಡೊಯ್ದರು. ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತಹಾಕುತ್ತೀರೋ ಇಲ್ಲವೋ ಎಂದು ಅವರನ್ನು ಪ್ರಶ್ನಿಸಲಾಯಿತು. ಅವರು ಇಲ್ಲವೆಂದು ತಲೆಯಾಡಿಸಿದಾಗ ಕಚೇರಿಗಳಲ್ಲೇ ಅವರನ್ನು ಕೂಡಿಹಾಕಿ ಅವರ ಕಾವಲಿಗೆ ಜನರನ್ನು ನೇಮಿಸಲಾಯಿತು. ಅವರನ್ನು ಅತ್ತಿತ್ತ ಅಲ್ಲಾಡಲೂ ಬಿಡಲಿಲ್ಲ. ಇಂಥ ಬೇರೆ ಬೇರೆ ಪ್ರಸಂಗಗಳ ವಿವರಗಳನ್ನು ನಾನು ಕೊಡಬಲ್ಲೆ.

**ಪಂಡಿತ್ ಗೋವಿಂದ್ ಮಾಳವೀಯ :** ಹೌದೇ? ಕೊಡಿ ನೋಡೋಣ!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಾಂಗ್ರೆಸ್ಸಿಗೆ ವಿರುದ್ಧವಾಗಿ ನಿಂತ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಮೇಲೂ ಹಲ್ಲೆ ಮಾಡಲಾಗಿದೆ. ಆಗ್ರಾದಲ್ಲಿ ಇತ್ತೀಚೆಗಷ್ಟೇ ಅಂಥದೊಂದು ಘಟನೆ ನಡೆದಿರುವುದರಿಂದ ಅದನ್ನೇ ಗಮನಿಸಿ. ಚುನಾವಣೆಯ ದಿನ ಪರಿಶಿಷ್ಟ ಜನಾಂಗಕ್ಕೆ ಸೇರಿದವರ ಐವತ್ತು ಮನೆಗಳನ್ನು ಸುಡಲಾಯಿತು. ಮಂದಿ ಮತಗಟ್ಟೆಗೆ ಮತ ಹಾಕಲು ಹೋಗಿದ್ದ ಸಮಯದಲ್ಲಿ ಸುಮಾರು ಇಪ್ಪತ್ತು ಮನೆಗಳಿಗೆ ನುಗ್ಗಿ ಲೂಟಿ ಮಾಡಲಾಯಿತು. ಕಾನ್‌ಪುರದಲ್ಲಿ ಏಳು ಜನರ ಕೊಲೆಯಾಯಿತು.

**ದಿವಾನ್ ಚಮನ್‌ಲಾಲ್ (ಪಶ್ಚಿಮ ಪಂಜಾಬ್** : ಮುಸ್ಲಿಮೇತರ) : ಲೂಟಿ ಮಾಡಿದವರು ಯಾರು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಚುನಾವಣೆಗಳನ್ನು ಲಾಗಾಯ್ತಿನಿಂದ ಗೆಲ್ಲುತ್ತಾ ಬಂದಿರುವ ಕ್ರಮವೇ ಹೀಗೆ. (ಮಧ್ಯಪ್ರವೇಶಿಕೆಗಳು). ನನ್ನ ಗೌರವಾನ್ವಿತ ಗೆಳೆಯರಿಗೆ ನಾನು ಹೇಳಬಯಸುವುದೇನೆಂದರೆ, ಈ ಸ್ಥಾನಗಳನ್ನು ನಿಜವಾಗಿ ಕಾಂಗ್ರೆಸ್ಸು ಗೆದ್ದಿದೆಯೋ ಅಥವಾ ನಾನು ಪ್ರತಿನಿಧಿಸುವಂಥ ಪರಿಶಿಷ್ಟ ಜಾತಿಗಳ ಫೆಡರೇಷನ್ ಗೆದ್ದಿದೆಯೋ ಎಂಬುದನ್ನು ಅಂತಿಮ ಚುನಾವಣೆಯ ನಂತರವೇ ತೀರ್ಮಾನಿಸಲು ಸಾಧ್ಯವಾಗುವುದು. ಅಂತಿಮ ಚುನಾವಣೆಯಲ್ಲಿ ಕೆಲವು ವೇಳೆ ಪರಿಶಿಷ್ಟ ಜಾತಿಯವರು ಅತ್ಯಂತ ಕನಿಷ್ಠ ಪ್ರಮಾಣವಾದ ೫ ಪ್ರತಿಶತವಿದ್ದರೆ ಉಳಿದ ಹಿಂದೂಗಳು ಪ್ರತಿಶತ ೬೫ ಭಾಗವಿರುತ್ತಾರೆ. ಹಾಗಾಗಿ ಅಂತಿಮ ಚುನಾವಣೆಯಲ್ಲಿ ಯಾರು ಯಾರನ್ನು ಪ್ರತಿನಿಧಿಸುತ್ತಾರೆ ಎಂದು ಕೇಳುವುದು ಮೂರ್ಖತನದ ಪ್ರಶ್ನೆಯಾಗುತ್ತದೆ. ನಿಜವಾದ ಪರೀಕ್ಷೆಯೆಂದರೆ ಪ್ರಾಥಮಿಕ ಚುನಾವಣೆಗಳ ಪರೀಕ್ಷೆ. ಏಕೆಂದರೆ ಪ್ರಾಥಮಿಕ ಚುನಾವಣೆಯಲ್ಲಿ ಪರಿಶಿಷ್ಟ ವರ್ಗದವರೇ ತಮ್ಮ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಚುನಾಯಿಸುವ ಅವಕಾಶವಿರುತ್ತದೆ. ಈ ಪ್ರಾಥಮಿಕ ಚುನಾವಣೆಗಳಲ್ಲಿ ಆದದ್ದಾದರೂ ಏನು. ನನ್ನ ಎದುರಿನ ಸ್ನೇಹಿತರಿಗೆ ಈ ಪ್ರಾಥಮಿಕ ಚುನಾವಣೆಗಳ ಫಲಿತಾಂಶದ ಬಗ್ಗೆ ಒಂದಿಷ್ಟು ಮಾಹಿತಿ ಕೊಡುತ್ತೇನೆ. ಪಂಜಾಬಿನಲ್ಲಿ ಪ್ರಾಥಮಿಕ ಚುನಾವಣೆಗಳು ನಡೆದದ್ದು ಮೂರು ಕ್ಷೇತ್ರಗಳಲ್ಲಿ. ಬೊಂಬಾಯಿನಲ್ಲೂ ಸಹ ಮೂರು ಕ್ಷೇತ್ರಗಳಲ್ಲಿ ಪ್ರಾಥಮಿಕ ಚುನಾವಣೆಗಳು ನಡೆದುವು.

**ಶ್ರೀ ಮೋಹನ್ ಲಾಲ್ ಸಕ್ಸೇನಾ :** ಎಷ್ಟರಲ್ಲಿ ಮೂರು ನಡೆದದ್ದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕೇಂದ್ರೀಯ ಪ್ರಾಂತ್ಯಗಳಲ್ಲಿ ನಾಲ್ಕು ಕ್ಷೇತ್ರಗಳಿದ್ದವು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಹತ್ತು ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಎರಡು. (ಮಧ್ಯಪ್ರವೇಶಿಕೆ). ವಸ್ತುಸ್ಥಿತಿಯ ಬಗ್ಗೆ ನನ್ನ ಗೌರವಾನ್ವಿತ ಗೆಳೆಯರು ತಿಳಿಯಬಯಸಿದರೆ ಪ್ರಾಥಮಿಕ ಚುನಾವಣೆ ಕಡ್ಡಾಯವಲ್ಲ ಎಂಬ ವಿಷಯ ಅವರಿಗೆ ತಿಳಿದಿರಲಿ. ಐದು ಮಂದಿ ಸ್ಪರ್ಧೆಯಲ್ಲಿರದ ಹೊರತು ಪ್ರಾಥಮಿಕ ಚುನಾವಣೆ ನಡೆಸಲು ಸಾಧ್ಯವಿಲ್ಲ ಹಾಗೂ ಯಾವ ಪರಿಶಿಷ್ಟ ಜಾತಿಯ ಅಭ್ಯರ್ಥಿಯೂ ಸಹ ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟಪಡುವುದಿಲ್ಲ. ಕಾರಣವೆಂದರೆ, ಈ ಬಗೆಯ ಚುನಾವಣೆಗೆ ಅಪಾರವಾದ ಹಣ ಬೇಕಾಗುತ್ತದೆ ಮತ್ತು ಇದಕ್ಕೆ ಹಣವೊದಗಿಸುವುದಕ್ಕೆ ನಮ್ಮಲ್ಲಿ ಕಾಳಸಂತೆಯ ಹಣವಿಲ್ಲ. (ಮಧ್ಯಪ್ರವೇಶಿಕೆ). ಒಟ್ಟಿಗೆ ೨೨ ಪ್ರಾಥಮಿಕ ಚುನಾವಣೆಗಳಿವೆ. ಇವಿಷ್ಟಕ್ಕೂ ಕಾಂಗ್ರೆಸ್ಸು ಸ್ಪರ್ಧಿಸಿತ್ತು. ಸದನದ ಗಮನಕ್ಕೆ ತರಲು ನಾನು ಇಷ್ಟಪಡುವುದೆಂದರೆ ಈ ೨೨ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಒಕ್ಕೂಟ ೧೯ ಸ್ಥಾನಗಳನ್ನು ಗೆದ್ದುಕೊಂಡಿದೆ.

**ದಿವಾನ್ ಚಮನ್‌ಲಾಲ್ :** ಪಂಜಾಬಿನಲ್ಲಿ ಎಷ್ಟು ಸ್ಥಾನಗಳು ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಒಂದು ನಿಮಿಷ ತಾಳಿ. ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿ – ನಾನು ವಿವರವಾಗಿ ಅಂಕಿಅಂಶ ಕೊಡಲಾರೆ. ಏಕೆಂದರೆ ನನ್ನ ಬಳಿ ಸಾಕಷ್ಟು ಸಮಯ ಇಲ್ಲ.

**ಪಂಡಿತ್ ಗೋವಿಂದ್ ಮಾಳವೀಯ :** ಅದು ನಿಮಗೇ ತಿರುಮಂತ್ರವಾಗಬಹುದು!

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೊಂಬಾಯಿ ನಗರದಲ್ಲೇ ಪ್ರಾಥಮಿಕ ಚುನಾವಣೆಯನ್ನು ಎರಡು ಕ್ಷೇತ್ರಗಳಲ್ಲಿ ನಡೆಸಲಾಯಿತು. ಒಂದು ಬೈಕುಲಾ ಕ್ಷೇತ್ರ. ಇದರಲ್ಲಿ ಪರಿಶಿಷ್ಟ ಜಾತಿ ಒಕ್ಕೂಟದ ಅಭ್ಯರ್ಥಿ ೧೧,೩೩೪ ಮತಗಳನ್ನು ಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ೨,೯೪ ಮತಗಳನ್ನು ಗಳಿಸಿದರು. ಮತ್ತೆ ಬೊಂಬಾಯಿನ ಉಪನಗರ ಚುನಾವಣಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಭ್ಯರ್ಥಿ ೧೨,೮೯ ಮತಗಳನ್ನು ಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ೨,೦೮೮ ಮತಗಳನ್ನು ಗಳಿಸಿದ್ದಾರೆ. ಕೇಂದ್ರೀಯ ಪ್ರಾಂತ್ಯಗಳಲ್ಲಿ ಮತ್ತೆ ನಾನು ಉದಾಹರಣಾರ್ಥವಾಗಿ ಎರಡು ಕ್ಷೇತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್ :** ಕಾಳಸಂತೆ ಊರ್ಜಿತವಾಗಲಿಲ್ಲ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ನಾಗಪುರ ಚುನಾವಣಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಭ್ಯರ್ಥಿ ೧,೯೩೩ ಮತ ಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ೨೭೦ ಮತ ಗಳಿಸಿದರು. ಭಾಂದ್ರಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಭ್ಯರ್ಥಿ ೩,೧೮೭ ಮತ ಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಮತ್ತು ಪಕ್ಷೇತರ ಅಭ್ಯರ್ಥಿಗಳು ಎಲ್ಲರೂ ಸೇರಿ ಒಟ್ಟು ೯೭೬ ಮತಗಳನ್ನು ಗಳಿಸಿದರು. ಆಗ್ರಾ ಚುನಾವಣಾ ಕ್ಷೇತ್ರದ ಸಂಯುಕ್ತ ಪ್ರಾಂತ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಭ್ಯರ್ಥಿ ೨,೨೪೮ ಮತಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಮತ್ತು ಉಳಿದವರೆಲ್ಲರೂ ಸೇರಿ ಒಟ್ಟು ೮೪೦ ಮತಗಳನ್ನು ಮಾತ್ರ ಗಳಿಸಿದರು. ಪಂಜಾಬಿನ ಲೂಧಿಯಾನ ಕ್ಷೇತ್ರದಲ್ಲಿ ಉದಾಹರಣಾರ್ಥವಾಗಿ ಫಿರೋಜ್‌ಪುರ ಕ್ಷೇತ್ರವನ್ನು ತೆಗೆದುಕೊಳ್ಳುತ್ತಿದ್ದೇನೆ– ಪರಿಶಿಷ್ಟ ಜಾತಿಗಳ ಒಕ್ಕೂಟ ೧,೯೦೦ ಮತ ಗಳಿಸಿದರೆ ಕಾಂಗ್ರೆಸ್ ಕೇವಲ ೫೦೦ ಮತಗಳನ್ನು ಗಳಿಸಿತು.

**ದಿವಾನ್ ಚಮನ್‌ಲಾಲ್ :** ಪಂಜಾಬಿನಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿ ಯಾರೂ ಇಲ್ಲ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ದಯಮಾಡಿ ನನ್ನ ಸ್ನೇಹಿತರು ನನಗೆ ಮುಂದುವರಿಯಲು ಅವಕಾಶ ಮಾಡಿಕೊಡಬೇಕು. ಈ ವಿಷಯವಾಗಿ ಪ್ರಾಯಶಃ ಅವರಿಗಿಂತ ನನಗೆ ಹೆಚ್ಚು ತಿಳಿದಿದೆ ಎಂದುಕೊಂಡಿದ್ದೇನೆ.

**ದಿವಾನ್ ಚಮನ್‌ಲಾಲ್ :** ನನ್ನ ಗೌರವಾನ್ವಿತ ಗೆಳೆಯರಿಗೆ ತಿಳಿದಿದೆ. ಅಲ್ಲಿ ಒಬ್ಬನೇ ಒಬ್ಬ ಪರಿಶಿಷ್ಟ ಜಾತಿಯ ಅಭ್ಯರ್ಥಿಯೂ ಇಲ್ಲ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಪರಿಶಿಷ್ಟ ಜಾತಿಗಳ ಒಕ್ಕೂಟ.

**ದಿವಾನ್ ಚಮನ್ ಲಾಲ್ :** ಅದು ಸುಳ್ಳುಗಳ ಕಂತೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ದಯಮಾಡಿ ನನ್ನ ಗೌರವಾನ್ವಿತ ಗೆಳೆಯರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯರೆ, ಅಧ್ಯಕ್ಷರು ನನಗೆ ರಕ್ಷಣೆ ಕೊಡಬೇಕೆಂದು ಕೇಳುವೆ.

**ದಿವಾನ್ ಚಮನ್ ಲಾಲ್ :** ಪಂಜಾಬಿನಲ್ಲಿ ಒಕ್ಕೂಟದಿಂದ ಒಬ್ಬನೇ ಒಬ್ಬ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ, ಇದು ನಿಜ ಸಂಗತಿ; ನನ್ನ ಗೌರವಾನ್ವಿತ ಸ್ನೇಹಿತರು ಇದನ್ನು ನಿರಾಕರಿಸಲಿ ನೋಡೋಣ.

**ಅಧ್ಯಕ್ಷರು :** ಆರ್ಡರ್. ಆರ್ಡರ್. ಗೌರವಾನ್ವಿತ ಸದಸ್ಯರು ಮಾಹಿತಿ ಒದಗಿಸುತ್ತಿರುವಾಗ ಸದನದಲ್ಲಿ ಬಿಸಿಯೇರಿಸಿಕೊಳ್ಳುವುದು ಸೂಕ್ತ ಮಾರ್ಗವಲ್ಲ. ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಪ್ರತಿಕ್ರಿಯೆಯನ್ನು ಸ್ವಾಗತಿಸಿದ್ದಾರೆ, ಅದಕ್ಕೆ ಅವರು ಏನುಹೇಳುತ್ತಾರೋ ಅದನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವುದು ಉಚಿತ. ಅವರು ಹೇಳಿರುವುದು ನಿಜವೋ ಸುಳ್ಳೋ ಎಂಬುದು ನನಗೆ ಪ್ರಸ್ತುತವಾಗುವುದಿಲ್ಲ, ಆದರೆ ಯಾವ ಸದಸ್ಯರೇ ಆಗಲಿ ಇನ್ನೊಬ್ಬ ಸದಸ್ಯರು ಹೇಳಿದುದನ್ನು 'ಬರೀ ಸುಳ್ಳಿನ ಕಂತೆ' ಎಂದು ಅಲ್ಲಗಳೆಯುವುದು ಖಂಡಿತಾ ಒಪ್ಪತಕ್ಕದಲ್ಲ.

**ದಿವಾನ್ ಚಮನ್ ಲಾಲ್ :** ಮಾನ್ಯರೆ, ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಅದರ ಸ್ಥಾನದಲ್ಲಿ "ಅಸಮಪರ್ಕವಾದ ಪಾರಿಭಾಷಿಕ ಪದಗಳೆಂದು" ಸೇರಿಸುತ್ತೇನೆ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮದರಾಸಿನ ಅಮಲಾಪುರಂ ಕ್ಷೇತ್ರದ ಉದಾಹರಣೆಯನ್ನು ಕೊಡುತ್ತೇನೆ. ಒಕ್ಕೂಟದ ಅಭ್ಯರ್ಥಿ ೧೦,೫೪೦ ಮತಗಳನ್ನು ಗಳಿಸಿದರೆ ಕಾಂಗ್ರೆಸ್ ಅಭ್ಯರ್ಥಿ ಕೇವಲ ೨,೬೮೩ ಮತಗಳನ್ನು ಗಳಿಸಿದರು. ಅದು ಪ್ರಾಥಮಿಕ ಚುನಾವಣೆಯ ಪರೀಕ್ಷೆ, ಆ ಕಾರಣದಿಂದ ಯಾರಿಗಾದರೂ

ಪ್ರಾಮಾಣಿಕ ಪರೀಕ್ಷೆಯನ್ನು ಒಡ್ಡುವಂತೆ ಮನಸ್ಸಾದರೆ ಅವರು ಖಂಡಿತವಾಗಿ ಪ್ರಾಥಮಿಕ ಚುನಾವಣೆಯ ಪರೀಕ್ಷೆಯನ್ನೇ ಒಡ್ಡಬೇಕು. ಎದುರಿಗೆ ಇರುವ ನನ್ನ ಗೌರವಾನ್ವಿತ ಸ್ನೇಹಿತರಿಗೆ ನಾನು ಹೇಳಬಯಸುವುದೇನೆಂದರೆ ಈ ಚುನಾವಣೆಯಲ್ಲಿ ಅವರಿಗೇನಾದರೂ ಪ್ರಯೋಜನವಾಗಿದ್ದರೆ ನಾನು ಯಾವುದರ ವಿರುದ್ಧ ಹೋರಾಡುತ್ತಾ ಬಂದಿದ್ದೇನೆಯೋ ಅದು ಮತ್ತಷ್ಟು ಢಾಳಾಗಿ ಎದ್ದುಕಾಣುವಂತಾಗಿದೆ; ಅದೇನೆಂದರೆ ಪರಿಶಿಷ್ಟ ಜಾತಿಗಳು ಪ್ರತ್ಯೇಕವಾದ ಚುನಾವಣಾ ವ್ಯವಸ್ಥೆ ಹೊಂದುವುದು.

ನನ್ನ ಗೌರವಾನ್ವಿತ ಸ್ನೇಹಿತರಾದ ಪಂಡಿತ್ ಮಾಳವೀಯರು ಇನ್ನೊಂದು ಅಂಶದತ್ತ ಗಮನ ಸೆಳೆಯಲು ಪ್ರಯತ್ನಿಸಿದರು. ಹಿಂದೂ ಕೋಮು ಪರಿಶಿಷ್ಟ ಜಾತಿಯವರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುತ್ತಿದೆ ಎಂದು ಅವರು ಹೇಳಿದರು. ಪರಿಶಿಷ್ಟ ಜಾತಿಯವರ ನೈತಿಕ ಮತ್ತು ಐಹಿಕ ಅಭಿವೃದ್ಧಿಯತ್ತ ಸಾಕಷ್ಟು ಹಣ ಖರ್ಚುಮಾಡುತ್ತಿರುವುದಾಗಿಯೂ ಅವರು ತಿಳಿಸಿದ್ದಾರೆ. ಮಾನ್ಯರೆ, ನನಗೆ ಮಾತ್ರ ಇದರ ಬಗ್ಗೆ......

**ಪಂಡಿತ್ ಗೋವಿಂದ್ ಮಾಳವೀಯ :** ನಾನು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ಮಾನ್ಯರೆ, ಈ ಸದನದ ಒಬ್ಬ ಸದಸ್ಯರು ಈಗಾಗಲೇ ಮಾತನಾಡಿರುವ ಸದಸ್ಯರ ಮಾತುಗಳನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಾ ಗುರಿತಪ್ಪಿಸುವುದನ್ನು ಎಷ್ಟು ಸಮಯದ ತನಕ ಕೇಳಿಕೊಳ್ಳಬೇಕು; ಜೊತೆಗೆ ಯಾವ ಸದಸ್ಯರ ಮಾತುಗಳ ಹೇಳಿಕೆಗಳನ್ನು ತಪ್ಪಾಗಿ ವ್ಯಾಖ್ಯಾನ ಮಾಡಲಾಗುತ್ತದೆಯೋ ಅವರು ತಮ್ಮ ಹೇಳಿಕೆಗಳ ಇಂಗಿತವನ್ನು ವಿವರವಾಗಿ ತಿಳಿಸಲು ಮತ್ತೊಮ್ಮೆ ಅವಕಾಶ ಪಡೆಯಲಾರದಂಥ ಪರಿಸ್ಥಿತಿ ಇರುವುದರಿಂದ ಈ ಸಂದಿಗ್ಧವನ್ನು ಯಾವ ರೀತಿಯಲ್ಲಿ ತಾವು ಬಗೆಹರಿಸುತ್ತೀರಿ ದಯಮಾಡಿ ತಿಳಿಸಿ.

**ಅಧ್ಯಕ್ಷರು :** ಈ ಪ್ರಶ್ನೆ ಊಹಾಪೋಹವಾಗಿರುವುದರಿಂದ ಇದನ್ನು ಉತ್ತರಿಸುವ ತೊಂದರೆಯನ್ನು ನಾನು ತೆಗೆದುಕೊಳ್ಳಲಾರೆ. ಆದರೆ ಸದಸ್ಯರು ವಸ್ತುಸ್ಥಿತಿಯನ್ನು ಮಂಡಿಸಿದ ರೀತಿ ಒಂದಾಗಿದೆ ಮತ್ತು ಅದರ ವ್ಯಾಖ್ಯಾನ ಬೇರೆಯಾಗಿದೆ, ಆದ್ದರಿಂದ ಮಾನ್ಯ ಸದಸ್ಯರು ವ್ಯಾಖ್ಯಾನಗಳನ್ನು ವಸ್ತುಸ್ಥಿತಿಯೆಂದು ಭಾವಿಸಬಾರದಾಗಿ ವಿನಂತಿ.

**ಗೌರವಾನ್ವಿತ ಡಾ|| ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನನ್ನ ಗೌರವಾನ್ವಿತ ಗೆಳೆಯರು ತಮ್ಮ ಭಾಷಣದಲ್ಲಿ ಪರಿಶಿಷ್ಟ ಜಾತಿಯವರ ನೈತಿಕ ಮತ್ತು ಐಹಿಕ ಪುರೋಭಿವೃದ್ಧಿಗಾಗಿ ಹಿಂದೂ ಸಮುದಾಯ ಗಮನ ಹರಿಸಿದೆ ಎಂದು ಹೇಳಿದ ಅಂಶವನ್ನು ತೆಗೆದುಕೊಂಡು ನಾನು ಮಾತನಾಡಲು ಪ್ರಯತ್ನಿಸಿದೆ. ಈ ಸದನದ ನಾಲ್ಕೂ ಮೂಲೆಯಲ್ಲಿ ಏನು ನಡೆಯುತ್ತಿದೆ ಎಂಬ ವಿಚಾರವನ್ನು ಗಮನಿಸಿದಾಗ ನನ್ನ ಗೌರವಾನ್ವಿತ ಗೆಳೆಯರು ಹೇಳಿದ ಮಾತುಗಳಲ್ಲಿ ಎಷ್ಟು ನಿಜಾಂಶವಿದೆ ಎಂಬುದು ತಿಳಿದುಬರುತ್ತದೆ. ಮಾನ್ಯ ಸ್ನೇಹಿತರ ಹೇಳಿಕೆಯನ್ನು ಒಪ್ಪುವುದು ಎಷ್ಟು ಕಠಿಣವಾದದ್ದೆಂದು ಎಲ್ಲರಿಗೂ ಮನವರಿಕೆಯಾಗುತ್ತದೆ.

ನಾನು ಈ ಸದನದಲ್ಲಿ ಇತ್ತೀಚೆಗೆ ಸೇರ್ಪಡೆಯಾಗಿರುವ ಸದಸ್ಯನೆಂಬುದನ್ನು ಒಪ್ಪಿಕೊಳ್ಳುವೆನಾದರೂ ಇದುವರೆಗೆ ಈ ಸದನದಲ್ಲಿ ನಡೆದಿರಬಹುದಾದ ಮಹತ್ತರವಾದ ನಡಾವಳಿಗಳನ್ನೆಲ್ಲಾ ನಾನು ಓದಿದ್ದೇನೆ. ನನ್ನ ಓದಿನ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ಸದನದಲ್ಲಿ ಇದುವರೆಗೆ ಯಾವನೇ ಒಬ್ಬ ಸದಸ್ಯ – ವಿರೋಧಪಕ್ಷದ ಸದಸ್ಯ – ಸರ್ಕಾರದ ಸದಸ್ಯರನ್ನು ಕುರಿತು ಪ್ರತಿಯೊಂದು ಗ್ರಾಮದಲ್ಲೂ ಪರಿಶಿಷ್ಟ ಜನಾಂಗದವರ ಮೇಲೆ ನಡೆಯುತ್ತಿರುವ ಹಲ್ಲೆ, ಹಿಂಸಾಚಾರ, ಶೋಷಣೆಗಳ ಬಗ್ಗೆ ಒಂದೇ ಒಂದು ಪ್ರಶ್ನೆಯನ್ನೂ ಕೇಳಿಲ್ಲ. ಇಲ್ಲಿನ ನಡಾವಳಿಯಲ್ಲಂತೂ ನಾನು ಕಾಣಲಿಲ್ಲ, ಯಾವ ಗೌರವಾನ್ವಿತ ಸದಸ್ಯನೂ ಇದರ ಬಗ್ಗೆ ಒಂದೇ ಒಂದು ಠರಾವನ್ನು ಮಂಡಿಸಿಲ್ಲ......

**ಶ್ರೀ ಅನಂತಶಯನಮ್ ಅಯ್ಯಂಗಾರ್ :** ಅದು ಪ್ರಾಂತೀಯ ವಿಷಯವೆಂದು ನೀವು ಹೇಳಬಹುದು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** .......... ಈ ಜನಸಮುದಾಯದ ಏಳ್ಗೆಗಾಗಿ ಏನಾದರೊಂದು ಕಾರ್ಯವನ್ನು ಮಾಡಬೇಕೆಂದು ಪ್ರಸ್ತಾಪಿಸಿಲ್ಲ. ಎದುರಿಗಿರುವ ಗೌರವಾನ್ವಿತ ಗೆಳೆಯರು ಒಮ್ಮೆ ಮಾತ್ರ, ಅಸ್ಪೃಶ್ಯತೆಯನ್ನು ಅಳಿಸಿಹಾಕಬೇಕೆಂದು ಹೇಳುವಾಗ, ಒಕ್ಕೊರಲಿನಲ್ಲಿ ಅಭಿಪ್ರಾಯ ಸೂಚಿಸಿದ್ದರು. ೧೯೩೨ ಅಥವಾ ೧೯೩೪ ಯಾವ ಇಸವಿಯೆಂದು ಸರಿಯಾಗಿ ನೆನಪಿಲ್ಲ... ಆಗ ಮಾತ್ರ ಕಳಕಳಿ ವ್ಯಕ್ತಪಡಿಸಿದರು....

**ಗೌರವಾನ್ವಿತ ಸದಸ್ಯರೊಬ್ಬರು :** ೧೯೩೩.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ... ದೇವಾಲಯ ಪ್ರವೇಶ ಕುರಿತು ಒಂದು ಮಸೂದೆ ಮಂಡಿಸಿದಾಗ, ವೈಸರಾಯ್ ಅವರು ಅದನ್ನು ಮಂಜೂರು ಮಾಡದೆ ತಿರಸ್ಕರಿಸಿದಾಗ ಎಷ್ಟೊಂದು ಕೋಲಾಹಲವೆದ್ದಿತು. ಅನೇಕ ಮಂದಿ ಉಪವಾಸ ಕುಳಿತರು, ಆ ಮಸೂದೆಯನ್ನು ಸೇರ್ಪಡೆ ಮಾಡಲು ಅನುಮತಿ ಕೊಡದಿದ್ದ ಪಕ್ಷದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಅನೇಕರು ಪ್ರತಿಜ್ಞೆ ಮಾಡಿದರು. ಅನುಮತಿ ಕೊಟ್ಟಾಗ ಆದದ್ದಾದರೂ ಏನು? ಏನಾಯಿತೆಂದರೆ ಈ ಮಹಾನುಭಾವರು ಆ ಮಸೂದೆಯನ್ನು ಒಗೆದುಬಿಟ್ಟರು. ಅದನ್ನು ತಿರಸ್ಕರಿಸಿದರು. ಶ್ರೀರಂಗ ಅಯ್ಯರ್ ಅವರ ಮಸೂದೆಯನ್ನು ಅವರೊಂದಿಗೇ ಬಿಟ್ಟು ಉಳಿದವರು ಪಲಾಯನವಾದರು. ಈ ಪ್ರಶ್ನೆ ಉದ್ಭವವಾದ ಎರಡು ಸಂದರ್ಭಗಳು ನನಗೆ ನೆನಪಿದೆ..........

**ಗೌರವಾನ್ವಿತ ಸದಸ್ಯರು :** ಚರ್ಚೆಗಳನ್ನು ನೀವು ಓದಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸದನದಲ್ಲಿ ಏನಾಯಿತೆಂಬುದರ ಬಗ್ಗೆ ನಾನು ಕೂಲಂಕಷವಾಗಿ ಓದಿದ್ದೇನೆ. ಪರಿಶಿಷ್ಟ ಜಾತಿಯವರ ವಿಷಯವಾಗಿ ಈ ಸದನದಲ್ಲಿ ಎರಡೇ ಎರಡು ಬಾರಿ ಚರ್ಚೆಯಾಗಿರುವುದು. ಮೊದಲನೆಯ ಸಲ ೧೯೧೬ರಲ್ಲಿ ಶ್ರೀ ಮನೇಕ್‌ಜಿ ದಾದಾಭಾಯ್ ಅವರು, ಈಗ ಇನ್ನೊಂದು ಸದನದ ಅಧ್ಯಕ್ಷರಾಗಿದ್ದಾರೆ, ಸರ್ಕಾರವು ಪರಿಶಿಷ್ಟ ವರ್ಗದವರ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಪರಿಶೀಲನೆ ನಡೆಸಲು ಒಂದು ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿದಾಗ ಈ ಚರ್ಚೆಯನ್ನು ಹುಟ್ಟುಹಾಕಿದ ಗೌರವಾನ್ವಿತ ಸ್ನೇಹಿತರ ತಂದೆಯವರೇ ಆಗ ಇದನ್ನು ಬಹಳ ಆಕ್ರೋಶದಿಂದ ತಳ್ಳಿಹಾಕಿದ್ದನ್ನು ನಾವು ನೆನಪು ಮಾಡಿಕೊಳ್ಳಬೇಕು. ಎರಡನೆಯ ಬಾರಿ ೧೯೨೭ರಲ್ಲಿ ಲಾರ್ಡ್ ಬಿರ್ಕನ್‌ಹೆಡ್‌ರವರು ಸಂವಿಧಾನದಲ್ಲಿ ರಕ್ಷಣೆ ಒದಗಿಸಬೇಕಾದಂಥ ಅಲ್ಪಸಂಖ್ಯಾತರು ಎಂದರೆ ಪರಿಶಿಷ್ಟ ಜಾತಿಯವರು ಎಂದು ತಿಳಿಸಿದರು. ಎದುರುಗಡೆಯ ನನ್ನ ಗೆಳೆಯರು ನನ್ನ ಬದುಕನ್ನು ರಾಜಕೀಯಗೊಳಿಸಿದಾಗ ಮಾತ್ರ ನನ್ನ ಬಗ್ಗೆ ವಿಶೇಷ ಅಭಿಮಾನ ಪ್ರಕಟಿಸುತ್ತಾರೆ. ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕೇಳಿದಾಗ, ಸೇವೆಯಲ್ಲಿ ಮೀಸಲಾತಿಗಾಗಿ ಒತ್ತಾಯಿಸಿದಾಗ, ಶಿಕ್ಷಣಕ್ಕಾಗಿ ಹಣಕಾಸಿನ ಸಹಾಯ ಕೇಳಿದಾಗ ಮಾತ್ರ ನಾನು ಅವರ ಪಾಲಿಗೆ ಬದುಕಿರುತ್ತೇನೆ. ಇಲ್ಲದಿದ್ದರೆ ನಾನು ಅವರ ಪಾಲಿಗೆ ಸತ್ತಂತಿರುತ್ತೇನೆ......

**ಗೌರವಾನ್ವಿತ ಸದಸ್ಯರೊಬ್ಬರು :** ಹಾಗೇನೂ ಇಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ...... ಅವರು ನನ್ನನ್ನು ಹಿಂದೂ ಎಂದು ಕರೆಯುವುದರಿಂದ ನನಗೆ ಸಲ್ಲಬೇಕಾದ ಎಲ್ಲ ಸಾಮಾಜಿಕ ರಾಜಕೀಯ ಸವಲತ್ತುಗಳೂ ಇಲ್ಲವಾಗುತ್ತವೆ. ಭ್ರಾತೃತ್ವವೆಂದಾಗ ಇದರ ವೆಚ್ಚವನ್ನು ಭರಿಸುವಂತಾದರೆ ನಾನು ಅವರ ಬಂಧುವೆಂದು ಹೇಳುವೆನಾದರೂ ಸೋದರನೆನ್ನಲಾರೆ.

ಇನ್ನೊಂದು ವಿಷಯವನ್ನು ನಾನು ಹೇಳಬೇಕು, ಬಹಳ ನಕಾರಾತ್ಮಕವಾಗಿಯೇ ಹೇಳುತ್ತೇನೆ. ನನ್ನ ಹಿಂದೂ ಗೆಳೆಯರಿಗೆ ನಾನು ತಿಳಿಸುವುದೇನೆಂದರೆ ಅವರು ಕೊಟ್ಟ ದಾನದಿಂದ ನಾನು ಬದುಕುವುದಿಲ್ಲ. ನಾನು ಈ ರಾಷ್ಟ್ರದ ಪ್ರಜೆ. ಬೇರೆ ಜಾತಿಯವರು ಸರ್ಕಾರದ ಬೊಕ್ಕಸದಿಂದ ಏನೇನು ಪಡೆಯುತ್ತಿದ್ದಾರೆಯೋ ಆ ಎಲ್ಲ ಸವಲತ್ತುಗಳನ್ನು ನಾನು ಪಡೆಯುವ ಹಕ್ಕನ್ನು ಹೊಂದಿದ್ದೇನೆ. ನನಗೆ ದಾನ ಬೇಕಾಗಿಲ್ಲ; ದಾನ

ಧರ್ಮವೆಂಬುದು ನನ್ನನ್ನು, ನನ್ನ ಜನರನ್ನು ಗುಲಾಮಗಿರಿಗೆ ನೂಕುವ ಹುನ್ನಾರ ಅಷ್ಟೆ, ಪರಿಶಿಷ್ಟ ಜಾತಿಯವರು ಅವರ ಹಕ್ಕಿಗಾಗಿ ನಿಲ್ಲುತ್ತಾರೆ ಮತ್ತು ಅವರ ಈ ಹಕ್ಕಿಗೆ ವಿರೋಧ ವ್ಯಕ್ತಪಡಿಸಿದರೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಅವರು ತಮ್ಮ ರಕ್ತಚೆಲ್ಲುವುದಕ್ಕೂ ಸಿದ್ಧವಿದ್ದಾರೆ ಎಂದು ಈ ಸದನದಲ್ಲಿ ನಾನು ಸಾರಿ ಹೇಳುತ್ತೇನೆ.

## ೬೩
## ಕಲ್ಕತ್ತೆಯ ಭಾರತ ಸರ್ಕಾರದ ಮುದ್ರಣಾಲಯದ ನೌಕರರಿಂದ ಮುಷ್ಕರ*

**ಅಧ್ಯಕ್ಷರು :** ಶ್ರೀ ಸತ್ಯಪ್ರಿಯ ಬ್ಯಾನರ್ಜಿಯವರು ತುರ್ತಾದ ಸಾರ್ವಜನಿಕರ ಹಿತಾಸಕ್ತಿಯ ಪ್ರಶ್ನೆಯಿರುವುದರಿಂದ ಅದರ ಅಂಗವಾಗಿ ಶಾಸನಸಭೆಯ ನಡಾವಳಿಗಳನ್ನು ಈ ಕೂಡಲೇ ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಅವರ ಸೂಚನೆಯ ಹಿನ್ನೆಲೆ ಮುಷ್ಕರಕ್ಕೆ ಸಂಬಂಧಿಸಿದ್ದು.

"ಭಾರತ ಸರ್ಕಾರವು ತಮ್ಮ ಬೇಡಿಕೆಗಳನ್ನು ಈಡೇರಿಸದ ಕಾರಣ ಕಲ್ಕತ್ತೆಯ ಭಾರತ ಸರ್ಕಾರ ಮುದ್ರಣಾಲಯದ ನೌಕರರು ಮುಷ್ಕರ ಹೂಡುತ್ತಿದ್ದಾರೆ".

ಗೌರವಾನ್ವಿತ ಸದಸ್ಯರು ಎರಡು ಮೂರು ದಿನಗಳ ಹಿಂದೆ ತುರ್ತು ಗಮನ ಸೆಳೆಯುವ ಪ್ರಶ್ನೆಯ ರೂಪದಲ್ಲಿ ಈ ಸಮಸ್ಯೆಯನ್ನು ಎತ್ತಿದ್ದರು. ಆದರೆ ಗೌರವಾನ್ವಿತ ಕಾರ್ಮಿಕ ಸದಸ್ಯರು ತುರ್ತು ಗಮನ ಸೆಳೆಯದ ಪ್ರಶ್ನೆಯಾಗಿ ಇದನ್ನು ಸ್ವೀಕರಿಸಲು ಒಪ್ಪಲಿಲ್ಲ. ಆ ಸಂದರ್ಭದಲ್ಲಿ ಯಾವ ಮುಷ್ಕರವೂ ನಡೆದಿರಲಿಲ್ಲ. ಈಗಿನ ಸೂಚನೆಯಲ್ಲಿ ಮುಷ್ಕರದ ಪ್ರಸ್ತಾಪವಿದೆ. ಅದರಲ್ಲಿ ಯಾವಾಗಲಾದರೂ ಪ್ರಾರಂಭವಾಗಬಹುದಾದ ಮುಷ್ಕರದ ಸೂಚನೆಯಿತ್ತು. ವಾಸ್ತವವಾಗಿ ಮುಷ್ಕರವಿದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಇದರ ಬಗ್ಗೆ ನನಗೆ ಮಾಹಿತಿ ಇಲ್ಲ.

**ಶ್ರೀ ಸತ್ಯಪ್ರಿಯ ಬ್ಯಾನರ್ಜಿ (ಚಿತ್ತಗಾಂಗ್ ಮತ್ತು ರಾಜ್‌ಶಾಹಿ ವಿಭಾಗ** : ಮುಸ್ಲಿಮೇತರ ಗ್ರಾಮಾಂತರ): ಮುಷ್ಕರ ನಡೆಯುತ್ತಿರುವ ಬಗ್ಗೆ ನನಗಾಗಲೇ ತಿಳಿದು ಬಂದಿದೆ. ಮತ್ತು ಫ್ರೀ ಪ್ರೆಸ್ ಜರ್ನಲ್ ಕೂಡ ಆ ಬಗ್ಗೆ ಸುದ್ದಿ ಪ್ರಕಟಿಸಿದೆ.

**ಅಧ್ಯಕ್ಷರು :** ಈ ಸುದ್ದಿಯ ಮೂಲ ಫ್ರೀ ಪ್ರೆಸ್ ಜರ್ನಲ್ಲೆ?

**ಶ್ರೀ ಸತ್ಯಪ್ರಿಯ ಬ್ಯಾನರ್ಜಿ :** ವಿರೋಧ ಪಕ್ಷದ ನಾಯಕರು ಕೂಡ ತಂತಿ ಸಂದೇಶ ಪಡೆದಿದ್ದಾರೆ.

**ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು ಮುಷ್ಕರ ಯಾವ ಬಗೆಯದು ಎಂದು ತಿಳಿಸುತ್ತಾರೆಯೇ? ಎಲ್ಲ ಮುದ್ರಣಾಲಯದ ಮುಷ್ಕರ ಉದ್ಯೋಗಿಗಳೂ ಹೂಡಿರುವುದೆ?

**ಶ್ರೀ ಸತ್ಯಪ್ರಿಯ ಬ್ಯಾನರ್ಜಿ :** ಹೌದು ಸರ್, ಸುಮಾರು ೧,೨೦೦ ಮಂದಿ ನೌಕರರು ಇದರಲ್ಲಿ ಭಾಗವಹಿಸಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ವಸ್ತುಸ್ಥಿತಿ ಹೀಗಿದೆ. ಕಲ್ಕತ್ತೆಯ ಮುದ್ರಣಾಲಯದ

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ – ೫, ಸಂ : ೪, ೪ನೇ ಏಪ್ರಿಲ್ ೧೯೪೬ ಪು. ೩೫೨೨–೨೪

ನೌಕರರು ತಮ್ಮ ಮುಷ್ಕರದ ಬಗ್ಗೆ ಮಾರ್ಚ್ ೧೩ನೇ ತಾರೀಖಿನಂದು ಸೂಚನಾ ಪತ್ರವನ್ನು ಕೊಟ್ಟರು. ಭಾರತ ಸರ್ಕಾರಕ್ಕೆ ಸೇರಿದ ಬೇರೆ ಬೇರೆ ಕಡೆಯಿರುವ ಉಳಿದ ಮುದ್ರಣಾಲಯದ ನೌಕರರು ಅದೇ ಬಗೆಯ ಸೂಚನಾ ಪತ್ರಗಳನ್ನು ಕೊಟ್ಟಿದ್ದಾರೆ. ಕಲ್ಕತ್ತೆಯ ಮುದ್ರಣಾಲಯದ ನೌಕರರು ೧೩ ಬೇಡಿಕೆಗಳ ಯಾದಿಯನ್ನು ಸಲ್ಲಿಸಿದ್ದಾರೆ. ಸರ್ಕಾರ ಇಷ್ಟೂ ಬೇಡಿಕೆಗಳನ್ನು ಪರಿಗಣಿಸುವುದಾಗಿ ತಿಳಿಸಿ ಈ ಕೆಳಕಂಡಂತೆ ಮುದ್ರಣಾಲಯದ ನೌಕರರಿಗೆ ರಿಯಾಯಿತಿಯನ್ನು ನೀಡಿದೆ. ಗೆಜೆಟೆಡ್ ರಜಾದಿನಗಳಲ್ಲಿ ಮುದ್ರಣಾಲಯ ಮುಚ್ಚಲ್ಪಟ್ಟಿದ್ದಲ್ಲಿ ಅದಕ್ಕೆ ಪರಿಹಾರ ರಜಾ ಕೊಡಬೇಕು; ಸಣ್ಣಪುಟ್ಟ ಕೆಲಸ ಮಾಡುವವರು ಉನ್ನತವರ್ಗಕ್ಕೆ ಹೋಗುವ ಪ್ರಕ್ರಿಯೆಯನ್ನು ಚುರುಕುಗೊಳಿಸುವುದು; ೧ನೇ ಜನವರಿ ೧೯೪೫ಕ್ಕೆ ಬದಲಾಗಿ ೧ನೇ ಜುಲೈ ೧೯೪೪ರಿಂದಲೇ ಪೂರ್ವಾನ್ವಯವಾಗಿ ಹೆಚ್ಚಿದ ತುಟ್ಟಿಭತ್ಯೆ ಪಡೆಯುವ ಸೌಲಭ್ಯ ಕಲ್ಪಿಸುವುದು; ತುಟ್ಟಿಭತ್ಯೆಯ ಅರ್ಧಭಾಗವನ್ನು ಪಿಂಚಣಿಗಾಗಿ ಪಡೆಯುವ ಮಿತಿಯನ್ನು ನಿಗದಿಗೊಳಿಸುವುದು; ಮುಷ್ಕರದ ಪೂರ್ಣಾವಧಿಯನ್ನು ಸರಾಸರಿ ಸಂಬಳದ ಕಾಲದ ರಜವೆಂದು ಪರಿಗಣಿಸಿ, ಅನಿಶ್ಚಿತ ಪರಿಸ್ಥಿತಿಯಿಂದಾದ ರಜೆಯ ಲೆಕ್ಕಕ್ಕೆ ಸೇರಿಸುವುದು; ಮುದ್ರಣಾಲಯದ ಕೆಲಸಗಾರರ ಸೇವೆ ಮತ್ತು ಸಂಬಳದ ಬಗೆಗಿನ ಏರುಪೇರುಗಳ ಬಗ್ಗೆ ವರದಿ ಮಾಡಲು ಒಬ್ಬ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವುದು; ಹಗಲು ಪಾಳೆಯದ ಕೇಲಸಗಾರರ ಕೆಲಸದ ಸಮಯವನ್ನು ೪೮ ರಿಂದ ೪೪ ಗಂಟೆಗಳಿಗೂ, ರಾತ್ರಿ ಪಾಳೆಯದವರ ಕೆಲಸದ ಸಮಯವನ್ನು ೪೪ ರಿಂದ ೩೮ ಗಂಟೆಗಳಿಗೂ ಕಡಿಮೆ ಮಾಡುವುದು; ಸಂಬಳ ಕೆಲಸಗಾರರಿಗೆ ಸಮನಾದ ರೀತಿಯಲ್ಲಿ 'ಪೀಸ್ ವರ್ಕರ್'ಗಳಿಗೆ ೨೩ ದಿನಗಳ ರಜವನ್ನು ಸಂಬಳ ಸಹಿತ ನೀಡಲಾಗಿದೆ.

ವೇತನ ಪರಿಷ್ಕರಣ ಮತ್ತು ಸಬ್ಸಿಡಿ ದರಗಳನ್ನು ಹೆಚ್ಚಿಸುವ ವಿಷಯವಾಗಿ ವೇತನ ಆಯೋಗದ ವರದಿ ಬರುವ ತನಕ ಮುಂದುವರಿಯಲಾಗದೆಂದು ಸರ್ಕಾರ ತಿಳಿಸಿರುವುದರಿಂದ ಇವುಗಳ ಬಗ್ಗೆ ಸದನದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ.

ದೆಹಲಿ ಮುದ್ರಣಾಲಯದ ಮುಷ್ಕರಕ್ಕೆ ಸಂಬಂಧಿಸಿದಂತೆ ನಾನು ಈ ಸದನಕ್ಕೆ ತಿಳಿಸುವುದಾದರೆ ಸರ್ಕಾರ ಸೂಚಿಸಿರುವ ಪರಿಹಾರಗಳನ್ನು ನೌಕರರು ಒಪ್ಪಿಕೊಂಡು ಈಗಾಗಲೇ ಕೆಲಸಕ್ಕೆ ಹಾಜರಾಗುತ್ತಿದ್ದಾರೆ. ಕಲ್ಕತ್ತೆಯ ಮುದ್ರಣಾಲಯದ ನೌಕರರೂ ಸಹ ಇದೇ ಬಗೆಯಾಗಿ ಏಕೆ ಸಮ್ಮತಿ ಸೂಚಿಸುತ್ತಿಲ್ಲ ಎಂದು ನನಗೆ ತಿಳಿಯದಾಗಿದೆ. ಈಗ ತಾನೆ ನನಗೆ ಕಚೇರಿಯಿಂದ ತಿಳಿದು ಬಂದ ವಿಷಯವೆಂದರೆ ನೌಕರರು ೪೪ ಗಂಟೆಗಳಿಂದ ೪೦ ಗಂಟೆಗಳಿಗೆ ಕೆಲಸದ ಅವಧಿಯನ್ನು ಇಳಿಸಿ ಎಂದು ಕೇಳುತ್ತಿದ್ದಾರೆ. ತಕ್ಷಣದಲ್ಲಿ ಇದರ ಬಗ್ಗೆ ನಾನು ಏನೂ ಹೇಳುವ ಸ್ಥಿತಿಯಲ್ಲಿಲ್ಲ. ಆದರೂ ಇದನ್ನು ಪರಿಗಣಿಸಲು ನಾನು ಸಿದ್ಧನಿದ್ದೇನೆ. ಈ ವಿಷಯವನ್ನು ನಿಲುವಳಿ ಸೂಚನೆ ಎಂದು ಚರ್ಚಿಸುವುದರಿಂದ ಏನೂ ಉಪಯೋಗವಾಗುವುದಿಲ್ಲ.

**ಶ್ರೀ ಸತ್ಯಪ್ರಿಯ ಬ್ಯಾನರ್ಜಿ :** ಮಾನ್ಯರೆ, ಗೌರವಾನ್ವಿತ ಸದಸ್ಯರ ನೆನಪಿನಲ್ಲಿರಬಹುದಾದ ವಿಷಯ ಇದು, ಅವರ ಇಲಾಖೆಯ ಕ್ಷೇತ್ರೀಯ ಆಯುಕ್ತರು ೪೨ ಗಂಟೆಗಳಿಗೆ ಶಿಫಾರಸು ಮಾಡಿದರಾದರೂ ಇವರು ೪೪ ಗಂಟೆಗಳಿಗೇ ಜೋತು ಬಿದ್ದು ಆಯುಕ್ತರ ಸಲಹೆಯನ್ನು ತಳ್ಳಿಹಾಕಿದ್ದಾರೆ. ಜೊತೆಗೆ ಬಂಗಾಳ ಸರ್ಕಾರ ಮುದ್ರಣಾಲಯದ ಕೆಲಸಗಾರರು ವಾರಕ್ಕೆ ೪೦ ಗಂಟೆ ಮಾತ್ರ ಕೆಲಸ ಮಾಡುತ್ತಾರೆ.

**ಅಧ್ಯಕ್ಷರು :** ಸದ್ಯದಲ್ಲಿ ನಾನು ತಿಳಿಯಬಯಸುವುದೇನೆಂದರೆ, ಗೌರವಾನ್ವಿತ ಕಾರ್ಮಿಕ ಸದಸ್ಯರಿಂದ ಗೊತ್ತಾದ ಸಂಗತಿಯ ಹಿನ್ನೆಲೆಯಲ್ಲಿ ಈ ವಿಷಯವು ಯಾವ ಬಗೆಯಲ್ಲಿ ಸಾರ್ವಜನಿಕ ದೃಷ್ಟಿಯಲ್ಲಿ ತುರ್ತಾದ ಪ್ರಮುಖ ಸಂಗತಿಯಾಗಿದೆ.

**ಶ್ರೀ ಸತ್ಯಪ್ರಿಯ ಬ್ಯಾನರ್ಜಿ :** ಮಾನ್ಯರೆ, ಇಷ್ಟೊಂದು ಮಂದಿ ನೌಕರರು ಇದರಲ್ಲಿ ಒಳಗೊಂಡಿದ್ದಾರೆ. ಬಹಳ ಮಂದಿ ನೌಕರರೂ ಮತ್ತವರ ಅವಲಂಬಿತರು ಉಪವಾಸ ಬೀಳುವಂಥ ಪ್ರಸಂಗವೇರ್ಪಟ್ಟಿದೆ; ಮಾನ್ಯರೆ, ಇದು ತುರ್ತಾದ ಸಾರ್ವಜನಿಕ ಪ್ರಾಮುಖ್ಯದ ವಿಷಯವಲ್ಲವೆಂದರೆ ಯಾವುದು ಅಂತಹ ವಿಷಯವಾಗಬಲ್ಲದು ಎಂದು ನನಗೆ ಅರ್ಥವಾಗುತ್ತಿಲ್ಲ.

**ಪ್ರೊ॥ ಎನ್.ಜಿ. ರಂಗಾ : (ಗುಂಟೂರ್ ಮತ್ತು ನೆಲ್ಲೂರು** : ಮುಸ್ಲಿಮೇತರರು ಗ್ರಾಮಾಂತರ): ಮಾನ್ಯರೆ, ಒಂದು ಬಿನ್ನಹ ಮಾಡಿಕೊಳ್ಳಲು ಇಷ್ಟಪಡುತ್ತೇನೆ. ಇಲಾಖೆಯವರು ಒಬ್ಬ ವಿಶೇಷ ಅಧಿಕಾರಿಯನ್ನು ಕಳುಹಿಸಿ ತಮ್ಮ ವತಿಯಿಂದ ನೌಕರರಿಗೆ ತಾವು ತೋರಿಸುವ ರಿಯಾಯಿತಿಯ ಬಗ್ಗೆ ಮನದಟ್ಟು ಮಾಡಿಕೊಡಲು ಸಾಧ್ಯವಾದರೆ ನೌಕರರು ತಮ್ಮ ಮುಷ್ಕರವನ್ನು ನಿಲ್ಲಿಸಲು ಸಾಧ್ಯವಾಗಬಹುದು. ಏನೇ ಆಗಲಿ ೧,೩೦೦ ಜನ ಕೆಲಸಗಾರರು ಕೆಲಸ ನಿಲ್ಲಿಸುವುದೆಂದರೆ ಸರ್ಕಾರಕ್ಕೆ ನಷ್ಟವು ಗಣನೀಯವಾದದ್ದೆ ಎಂದು ಬೇರೆ ಹೇಳಬೇಕಾಗಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಕಲ್ಕತ್ತೆಯಲ್ಲಿ ಒಬ್ಬ ಕ್ಷೇತ್ರೀಯ ಕಾರ್ಮಿಕ ಆಯುಕ್ತರಿದ್ದಾರೆ; ಅವರು ನೌಕರರೊಂದಿಗೆ ಸಂಪರ್ಕ ಬೆಳೆಸಬೇಕೆಂದು ಆದೇಶ ನೀಡಿದ್ದೇವೆ, ಬೇರೇನು ಸಾಧ್ಯವೊ ನೋಡೋಣ.

**ಸೇಠ್ ಗೋವಿಂದ್‌ದಾಸ್ (ಕೇಂದ್ರೀಯ ಪ್ರಾಂತ್ಯಗಳು ಹಿಂದಿ ವಿಭಾಗಗಳು ಮುಸ್ಲಿಮೇತರ)**: ಬೇರೆ ಬೇರೆ ಮುದ್ರಣಾಲಯಗಳಲ್ಲಿ ಮುಷ್ಕರದ ಬಗ್ಗೆ ಸೂಚನಾ ಪತ್ರಗಳು ತಲಪಿವೆ ಎಂದು ಗೌರವಾನ್ವಿತ ಸದಸ್ಯರು ಹೇಳಿದರು. ಕಲ್ಕತ್ತೆಯನ್ನು ಬಿಟ್ಟು ಬೇರೆಲ್ಲಿಯಾದರೂ ಮುಷ್ಕರದ ಸುದ್ದಿ ಕೇಳಿ ಬಂದಿದೆಯೇ?

**ಅಧ್ಯಕ್ಷರು :** ಸದ್ಯದ ಸಂಗತಿಗೆ ಅದು ಔಚಿತ್ಯಪೂರ್ಣವಾದದ್ದೆಂದು ಅನ್ನಿಸುವುದಿಲ್ಲ. ಕಾರ್ಮಿಕ ಸದಸ್ಯರು ಹೇಳಿದ ವಿಷಯದ ಹಿನ್ನೆಲೆಯಲ್ಲಿ ಈ ನಿಲುವಳಿ ಸೂಚನೆಗೆ ಸಮ್ಮತಿ ಕೊಡಬೇಕೆಂದು ನನಗನ್ನಿಸುತ್ತಿಲ್ಲ.

## ೬೪
## ಕಾರ್ಖಾನೆಗಳ (ತಿದ್ದುಪಡಿ) ಮಸೂದೆ*

**ಅಧ್ಯಕ್ಷರು :** ಸದನವು ಈಗ ಕಾರ್ಖಾನೆಗಳ ಮಸೂದೆಯನ್ನು ಪರಿಗಣಿಸಲು ಮುಂದುವರಿಯುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆ ಅಂಶದ ಬಗ್ಗೆ ಮಾತನಾಡಲು ನಾನು ಇಚ್ಛಿಸುತ್ತೇನೆ. ನನ್ನ ಗೌರವಾನ್ವಿತ ಸ್ನೇಹಿತರು ಆ ಬಗ್ಗೆ ಮಾತನಾಡಲು ನನ್ನನ್ನು ಕೇಳಿದ್ದಾರೆ. ಈಗ ನಾನು ಅದರ ಬಗ್ಗೆ ಮಾತನಾಡಲು ಸಮರ್ಥನೆಂದುಕೊಂಡಿದ್ದೇನೆ. ಏಕೆಂದರೆ ಸರ್ಕಾರದ ಪ್ರತಿಯೊಬ್ಬ ಸದಸ್ಯನೂ ಕೂಡ ಸರ್ಕಾರದ ಪರವಾಗಿ ಮಾತನಾಡಲು ಸಮರ್ಥರಾಗಿದ್ದಾರೆ.

**ದಿವಾನ್ ಚಮನ್‌ಲಾಲ್ (ಪಶ್ಚಿಮ ಪಂಜಾಬ್** : ಮುಸ್ಲಿಮೇತರ) : ಮಾನ್ಯರೆ, ಈ ವಿಷಯವಾಗಿ ನಾನು ಮಾತನಾಡಬೇಕಾಗಿದೆ, ಗೌರವಾನ್ವಿತ ಸದಸ್ಯರು ನಂತರ ಮಾತನಾಡಲು ಒಪ್ಪಿದರೆ.

**ಅಧ್ಯಕ್ಷರು :** ಅವರು ಒಪ್ಪಿದರೂ ಸಹ ಕಾನೂನಿನ ಪ್ರಕಾರ ಗೌರವಾನ್ವಿತ ಸದಸ್ಯರು ಚರ್ಚೆಗೆ ಉತ್ತರಿಸಿದ ನಂತರ ಮಾತನಾಡಲು ನಾನು ಒಪ್ಪಿಗೆ ಸೂಚಿಸಲಾರೆ.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ – ೫ ಸಂ : ೪, ೪ನೇ ಏಪ್ರಿಲ್ ೧೯೪೬, ಪು. ೩೫೨೬–೨೭.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಇದರ ಬಗ್ಗೆ ಈಗಾಗಲೇ ಸಾಕಷ್ಟು ಮಾತನಾಡಿರುವುದರಿಂದ ಮತ್ತೆ ನಾನು ಮಾತು ಮುಂದುವರಿಸಲಾರೆ.

ಮಾನ್ಯ ಅಧ್ಯಕ್ಷರೆ, ಇದುವರೆಗೆ ನಡೆದಿರುವ ಚರ್ಚೆಯನ್ನು ಗಮನಿಸಿದರೆ ಹೊಸದಾಗಿ ನಾನು ಹೇಳಬಹುದಾದಂಥದು ಏನೂ ಇಲ್ಲ. ಏಕೆಂದರೆ, ಮಸೂದೆಯ ವಿರುದ್ಧ ಒಂದು ಭಾಗದವರು ಪರಿಣಾಮಕಾರಿಯಾಗಿ ಮಾತನಾಡಿದರೆ ಅದಕ್ಕೆ ಸಮರ್ಪಕವಾದ ರೀತಿಯಲ್ಲಿ ಇನ್ನೊಂದು ಕಡೆಯವರು ಉತ್ತರ ಕೊಟ್ಟಿದ್ದಾರೆ, ಹಾಗಾಗಿ ನಾನು ಹೊಸದಾಗಿ ಹೇಳುವುದು ಏನೂ ಇಲ್ಲ. ನಾನು ಎದ್ದುನಿಲ್ಲುವುದೇಕೆಂದರೆ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ವಾಡಿಲಾಲ್ ಲಲ್ಲುಬಾಯ್ ಅವರ ಟೀಕೆಗೆ ಉತ್ತರ ಕೊಡಲು ಅಷ್ಟೆ. ಅವರ ಭಾಷಣವನ್ನು ನಾನು ಕೇಳಿದ್ದೇನೆ ಮತ್ತು ಈ ಮಸೂದೆಯ ವಿಷಯವಾಗಿ ಅವರ ತಕರಾರು ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬಟ್ಟೆಯ ಬರಕ್ಕೆ ಸಂಬಂಧಿಸಿದಂತೆ ನನಗೆ ಗೊತ್ತಿದೆ ಮತ್ತು ಉಳಿದವರಿಗೆ ಗೊತ್ತಿದೆ; ಹಾಗಾಗಿ ಇಂದು ನಾವು ಕಾರ್ಖಾನೆ ಕಾಯಿದೆಯ ವಿಷಯವಾಗಿ ಏನಾದರೂ ತಿದ್ದುಪಡಿ ತಂದರೆ ಅದರಿಂದ ಪರಿಸ್ಥಿತಿ ಇನ್ನೂ ಕೆಟ್ಟುಹೋಗದಂತೆ ಎಚ್ಚರಿಕೆ ವಹಿಸಬೇಕೆಂದು ನಾನು ಎಲ್ಲರಿಗೂ ತಿಳಸಬಯಸುತ್ತೇನೆ. ನನ್ನ ಸ್ನೇಹಿತರು ಎತ್ತಿರುವ ತಗಾದೆಗೆ ನನ್ನ ಉತ್ತರವೆಂದರೆ ನಾವು ಬಟ್ಟೆಯ ಬರವನ್ನಷ್ಟೇ ಗಮನಿಸುತ್ತಿಲ್ಲ, ಇತರ ಬಳಕೆ ವಸ್ತುಗಳ ವಿಷಯವಾಗಿ ಯಾವ ಸಂದರ್ಭ ಉದ್ಭವವಾಗಬಹುದು ಎಂಬುದನ್ನೂ ನಾವು ಪರಿಗಣಿಸುತ್ತಿದ್ದೇವೆ. ಹಾಗೂ ಭಾರತ ಸರ್ಕಾರ ಕೇವಲ ಹತ್ತಿ ಕೈಗಾರಿಕೆಗೆ ಮಾತ್ರ ಪರಿಹಾರ ಒದಗಿಸುತ್ತಿಲ್ಲ, ಗ್ರಾಹಕ ವಸ್ತುಗಳನ್ನು ತಯಾರಿಸಲು ತೊಡಗಿರುವ ಇತರೆ ಕೈಗಾರಿಕೆಗಳಿಗೂ ಅನುಕೂಲವಾಗುವಂತೆ ಕಾನೂನನ್ನು ವಿಸ್ತರಿಸಲಾಗಿದೆ. ಅವರ ಟೀಕೆಯ ಅಂತರಾರ್ಥವನ್ನು ಅರಿಯಲು ನನಗಿನ್ನೂ ಸಾಧ್ಯವಾಗಿಲ್ಲ.

ಅವರು ಇನ್ನೆರಡು ಪ್ರಶ್ನೆಗಳನ್ನೆತ್ತಿದ್ದಾರೆ, ಅವಕ್ಕೂ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯವಾಗಿದೆ. ಅವರು ಮಾಡಿದ ಒಂದು ಮಂಡನೆಯೆಂದರೆ – ಅವರ ಭಾಷಣದ ಪ್ರತಿ ನನ್ನ ಮುಂದಿದೆ. ........ ಈ ರಿಯಾಯಿತಿಗಳನ್ನು ಪ್ರಾಂತೀಯ ಸರ್ಕಾರಗಳು ಕೊಡುವುದಕ್ಕೆ ಬದಲಾಗಿ ನೇರವಾಗಿ ಭಾರತ ಸರ್ಕಾರವೇ ಕೊಡಬೇಕು. ಈ ಟೀಕೆಗೆ ನಾನು ಕೊಡುವ ಉತ್ತರದಲ್ಲಿ ಎರಡು ಅಂಶಗಳಿವೆ : ನಾನು ಗೌರವಾನ್ವಿತ ಗೆಳೆಯರು ತಿಳಿದಿರುವಂತೆ ಕಾನೂನಿನ ದೃಷ್ಟಿಯಲ್ಲಿ, ರಿಯಾಯಿತಿಯನ್ನು ಕೊಡುವುದೆಂದರೆ ಅದೊಂದು ಕಾರ್ಯಕಾರಿ ಅಧಿಕಾರ – ಇದು ಸಂವಿಧಾನಾತ್ಮಕವಾಗಿದೆ ಮತ್ತು ಈಗ ಚಾಲ್ತಿಯಲ್ಲಿದೆ. ಸಮವರ್ತಿ ವಿಷಯಗಳ ಪಟ್ಟಿಯಲ್ಲಿ ಕಾರ್ಮಿಕರ ವಿಷಯ ಇದೆಯಾದರೂ ಇದರಿಂದ ಭಾರತ ಸರ್ಕಾರಕ್ಕೆ ಕಾನೂನು ಮಾಡಲು ಅಧಿಕಾರ ದೊರಕುವುದು. ಈ ಕಾನೂನನ್ನು ಅನುಷ್ಠಾನಕ್ಕೆ ತರುವಂಥ ಅಧಿಕಾರ ಮಾತ್ರ ಭಾರತ ಸರ್ಕಾರಕ್ಕಿರುವುದಿಲ್ಲ. ಪ್ರಾಂತೀಯ ಸರ್ಕಾರದ ಕೈಯಲ್ಲೇ ಇದನ್ನು ಅನುಷ್ಠಾನಗೊಳಿಸುವ ಅಧಿಕಾರವಿರುವುದರಿಂದ ಹಾಗೂ ಕೇಂದ್ರೀಯ ಶಾಸನಸಭೆಯ ಅಧಿಕಾರದ ಪರಿಧಿಯ ಆಚೆ ಇರುವುದರ ಪ್ರಯುಕ್ತ ನಾವು ನೇರವಾಗಿ ರಿಯಾಯಿತಿ ಕೊಡಲು ಅಸಮರ್ಥರಾಗಿದ್ದೇವೆ. ಮಾನ್ಯ ಸದಸ್ಯರು ಮಾಡಿರುವ ಇನ್ನೊಂದು ಬೇಡಿಕೆಗೆ ನಾನು ಎದುರಿಸುತ್ತಿರುವ ಎರಡನೇ ಸಮಸ್ಯೆಯೆಂದರೆ ಇದು: ಭಾರತ ಸರ್ಕಾರವು ಯಾವುದೇ ಒಂದು ಪ್ರತ್ಯೇಕವಾದ ಕೈಗಾರಿಕೆಗೆ ರಿಯಾಯಿತಿ ಕೊಡಲು ಬರುವುದಿಲ್ಲ; ಹಾಗೇನಾದರೂ ರಿಯಾಯಿತಿ ಕೊಡುವ ಉದ್ದೇಶವಿದ್ದರೆ ರಿಯಾಯಿತಿ ಬೇಡುವಂಥ ಎಲ್ಲ ಕೈಗಾರಿಕೆಗಳ ಯಾದಿಯನ್ನು ತರಿಸಿಕೊಳ್ಳಬೇಕಾದುದು ಆವಶ್ಯಕ. ಕಾರ್ಮಿಕ ಇಲಾಖೆಯವರಿಗೆ ಈ ರೀತಿಯಾಗಿ ಯಾವ ಯಾವ ಕೈಗಾರಿಕೆಗಳಿಗೆ ರಿಯಾಯ್ತಿ ಬೇಕು ಎಂಬುದನ್ನು ಅಂದಾಜು ಮಾಡಲು ಕಷ್ಟವಾಗುತ್ತದೆ. ಪ್ರಾಂತೀಯ

ಸರ್ಕಾರಗಳು ಸುಲಭವಾಗಿ ರಿಯಾಯಿತಿ ತೋರಿಸಬಹುದಾದಂಥ ಅಧಿಕಾರ ಹೊಂದಿರುವುದಾದರೂ ಹಾಗೆ ಮಾಡಲು ಹಿಂದೇಟು ಹೊಡೆಯಬಹುದೆಂಬ ದಿಗಿಲನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅವರು ಹೇಳಿದ ವಿಷಯವನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ, ಪ್ರಾಂತೀಯ ಸರ್ಕಾರಗಳು ನೀಡುವ ರಿಯಾಯಿತಿಗೆ ಕಾರ್ಮಿಕರೇ ಅಡ್ಡಿಯುಂಟುಮಾಡುತ್ತಾರೆ ಎಂದು ತಿಳಿಸಿದರು. ಪ್ರಾಂತೀಯ ಸರ್ಕಾರಗಳು ಕಾರ್ಮಿಕರ ಅಹವಾಲುಗಳನ್ನು ಕೇಳುತ್ತವೆಯಾದರೂ ಸಾರ್ವಜನಿಕ ಅಗತ್ಯಗಳಿಗೆ ಸ್ಪಂದಿಸುವುದರಿಂದ ಆಯಾ ಸಂದರ್ಭಕ್ಕನುಗುಣವಾಗಿ ಸಮರ್ಪಕವಾದ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಾರೆ. ಆದ್ದರಿಂದ ಅವರ ಮೊದಲನೆಯ ಸಮಸ್ಯೆಯನ್ನು ಕುರಿತು ಹೇಳುವುದಾದರೆ, ಅವರ ಬೇಡಿಕೆಯನ್ನು ಅನುಷ್ಠಾನಗೊಳಿಸುವಲ್ಲಿ ಕಾನೂನು ನನ್ನ ಕೈಕಟ್ಟಿದೆ. ಎರಡನೆಯದಾಗಿ, ಪ್ರಾಂತೀಯ ಸರ್ಕಾರಗಳು ಅನಗತ್ಯವಾಗಿ ಅಡ್ಡಿಯುಂಟುಮಾಡುತ್ತವೆಯೆಂಬುದನ್ನು ನಾನು ಒಪ್ಪಲು ತಯಾರಿಲ್ಲ, ಕಾರಣ ಸಾರ್ವಜನಿಕ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡ ಯಾವುದೇ ಸರ್ಕಾರ ಆ ರೀತಿ ಮಾಡಲು ಸಾಧ್ಯವಿಲ್ಲ.

ಅವರು ಎತ್ತಿದ ಇನ್ನೊಂದು ಪ್ರಶ್ನೆಯೆಂದರೆ, ಕೈಗಾರಿಕೆ ಅಥವಾ ನಾಗರಿಕ ಸರಬರಾಜು ಇಲಾಖೆ ಈ ಕ್ರಮವನ್ನು ಕೈಗೊಳ್ಳಲು ಜವಾಬ್ದಾರಿ ಹೊರುತ್ತವೆಯೇ ಎಂಬುದು. ಭಾರತ ಸರ್ಕಾರ ಕೆಲಸಮಾಡುವ ಕ್ರಮವನ್ನು ಇವರು ಅರಿತಿದ್ದರೆ ಪ್ರಾಯಶಃ ಇವರು ಈ ಬಗೆಯಾಗಿ ಪ್ರಶ್ನೆ ಎತ್ತುತ್ತಲೇ ಇರಲಿಲ್ಲ, ಏಕೆಂದರೆ ನಾಗರಿಕ ಸರಬರಾಜು ಮತ್ತು ಕೈಗಾರಿಕೆಗಳಿಗೆ ಸಂಬಂಧಪಟ್ಟ ಸದಸ್ಯರನ್ನು ಒಳಗೊಂಡ ಕಾರ್ಯಕಾರಿ ಮಂಡಳಿಯ ಗಮನಕ್ಕೆ ಬರುವುದಕ್ಕೆ ಮೊದಲು ಯಾವುದೇ ಕ್ರಮವು ಈ ಸದನದ ಮುಂದೆ ಬರಲು ಸಾಧ್ಯವಿಲ್ಲ. ಕಾರ್ಮಿಕ ಇಲಾಖೆಯು ಈ ವಿಷಯದಲ್ಲಿ ನಾಗರಿಕ ಸರಬರಾಜು ಮತ್ತು ಕೈಗಾರಿಕಾ ಇಲಾಖೆಗಳ ಜೊತೆ ಕೂಲಂಕಷವಾಗಿ ಚರ್ಚಿಸಿದೆ ಹಾಗೂ ಅವರ ಸಲಹೆಯ ಮೇರೆಗೆ ಮಸೂದೆಯಲ್ಲಿ ೫ನೇ ನಿಬಂಧನೆಯನ್ನು ಅಳವಡಿಸಲಾಗಿದೆ. ಕೆಲಸದ ಅವಧಿಗೆ ಸಂಬಂಧಿಸಿದಂತೆ ವಿಧಿಸಿರುವ ಮಿತಿಗಳ ಬಗ್ಗೆ ಅವರು ವ್ಯಕ್ತಪಡಿಸಿರುವ ದಿಗಿಲನ್ನು ಮಾನ್ಯ ಮಾಡಬಹುದಾದರೂ, ಈ ಮಸೂದೆಯನ್ನು ಮುಂದಿಡುವಾಗ ನಾಗರಿಕ ಸರಬರಾಜು ಇಲಾಖೆ ಮತ್ತು ಕೈಗಾರಿಕಾ ಇಲಾಖೆಯನ್ನು ನಾವು ಕಡೆಗಣಿಸಿಲ್ಲ, ಅವರ ಪೂರ್ಣ ಪ್ರಮಾಣದ ಬೆಂಬಲದಿಂದಲೇ ಇದು ಸಾಧ್ಯವಾಗಿರುವುದು. ಮಾನ್ಯರೇ, ನಾನು ಇದನ್ನು ಸೂಚಿಸುತ್ತೇನೆ.

**ಅಧ್ಯಕ್ಷರು :** ಪ್ರಶ್ನೆ ಇದು :

"ಆಯ್ಕೆ ಸಮಿತಿಯವರು ವರದಿ ಮಾಡಿರುವಂತೆ ೧೯೩೪ರ ಕಾರ್ಖಾನೆ ಕಾಯಿದೆಗಳಿಗೆ ಸಂಬಂಧಿಸಿದಂತೆ ಮಸೂದೆಯಲ್ಲಿ ಸೂಚಿತವಾಗಿರುವ ತಿದ್ದುಪಡಿಯನ್ನು ಪರಿಗಣಿಸಬಹುದಾಗಿದೆ."

ಈ ಸೂಚನೆಯನ್ನು ಅಂಗೀಕರಿಸಲಾಯಿತು.

**ಅಧ್ಯಕ್ಷರು :** ಮೊದಲು ನಿಬಂಧನೆ ೨ನ್ನು ನಂತರ ನಿಬಂಧನೆ ೧ನ್ನು ತೆಗೆದುಕೊಳ್ಳುತ್ತೇನೆ. ಶ್ರೀಯುತರಾದ ವಾಡಿಲಾಲ್ ಲಲ್ಲುಭಾಯ್ ಮತ್ತು ರಾಮಲಿಂಗಂ ಚೆಟ್ಟಿಯಾರ್‌ರವರು ಇದಕ್ಕೊಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ.

**ಶ್ರೀ ವಾಡಿಲಾಲ್ ಲಲ್ಲುಭಾಯ್ :** ನಾನು ಕೆಲವು ವಿಷಯಗಳ ಬಗ್ಗೆ ಮಾತನಾಡಬಯಸುತ್ತೇನೆ. ಕಾನೂನಿನ ಪ್ರಕಾರ ರಿಯಾಯಿತಿ ಕೊಡಲು ಅವಕಾಶವಿಲ್ಲವೆಂಬುದಾಗಿ ಡಾ॥ ಅಂಬೇಡ್ಕರ್‌ರವರು ತಿಳಿಸಿರುತ್ತಾರೆ, ಆದರೆ ತಿದ್ದುಪಡಿಯ ಒಕ್ಕಣಿಕೆಯ ಪ್ರಕಾರ ಕಾನೂನಿನ ಒಳಗಡೆಯೇ ಅದು ಬರುತ್ತದೆ. ನಿಬಂಧನೆ ಎರಡರ ತಿದ್ದುಪಡಿಯನ್ನು ನಾನು ಸೂಚಿಸಿರುವುದು ಕೂಡ ಕಾನೂನಿನ ಒಳಗೆ ಬರುತ್ತದೆಯೇ ಎಂದು ನಾನು ತಿಳಿಯಬಯಸುತ್ತೇನೆ.

**ಅಧ್ಯಕ್ಷರು :** ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ವಾಡಿಲಾಲ್ ಲಲ್ಲುಭಾಯ್ :** ಗೌರವಾನ್ವಿತ ಸದಸ್ಯರು ಹೇಳಿದರು, ಕಾನೂನಿನ ಪ್ರಕಾರ ರಿಯಾಯಿತಿ ಕೊಡಲಾಗುವುದಿಲ್ಲವೆಂದು. ನಿಬಂಧನೆ ೨ಕ್ಕೆ ನಾನು ಸೂಚಿಸಿರುವ ತಿದ್ದುಪಡಿಯನ್ನು ಅವರು ಓದಿದರೆ ಕಾನೂನಿನ ಅಡೆತಡೆಯೇನೂ ಇಲ್ಲ ಎಂದು ಅವರಿಗೆ ತಿಳಿಯುತ್ತದೆ. ಕಾನೂನಿನ ದೆಸೆಯಿಂದ ಅಡ್ಡಿಯಿದೆ ಎಂದು ಮಾನ್ಯ ಸದಸ್ಯರು ನನ್ನ ತಿದ್ದುಪಡಿಯನ್ನು ಪರಿಗಣಿಸದೆ ಇದ್ದಾರೆಯೇ ಅಥವಾ ಬೇರೆ ಕಾರಣಗಳಿವೆಯೊ ಎಂದು ನಾನು ತಿಳಿಯಬೇಕಿದೆ.

**ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು ವಸ್ತುಸ್ಥಿತಿಯನ್ನು ತಮ್ಮ ಭಾಷಣದಲ್ಲಿ ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದಾರೆ ಎಂದು ನನ್ನ ಭಾವನೆ. ಈ ಪ್ರಶ್ನೆ ಕುರಿತು ಬೇರೇನೂ ಸಂದೇಹಗಳು ಇರಲು ಸಾಧ್ಯವಿಲ್ಲ. ಕಾನೂನು ತಡೆ ಒಂದು ಪ್ರಮುಖವಾದದ್ದೆಂದು ಅವರು ಹೇಳಿದ್ದಾರೆ. ಇನ್ನೊಂದು, ತಮ್ಮ ಸ್ಥಾನದಲ್ಲಿ ಸರ್ಕಾರಕ್ಕೆ ಏನೇನು ಸಾಧ್ಯವೋ ಅದೆಲ್ಲವನ್ನೂ ಮಾಡುವುದಾಗಿ ಅವರು ತಿಳಿಸಿದ್ದಾರೆ. ನನ್ನ ಅನಿಸಿಕೆ ಸರಿಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸರಿಯಾಗಿದೆ, ಮಾನ್ಯರೆ.

* * *

*ಅಧ್ಯಕ್ಷರು : ತಿದ್ದುಪಡಿ ಸೂಚಿತವಾಗಿದೆ :

"ಮಸೂದೆಯ ೪ನೇ ನಿಬಂಧನೆಯಲ್ಲಿ 'ಹತ್ತುವರೆ ಘಂಟೆ ಅಥವಾ ಕಾರ್ಖಾನೆ ಋತುಮಾನಕ್ಕನುಗುಣವಾಗಿ ನಡೆಯುವಂತಿದ್ದರೆ ಹನ್ನೊಂದುವರೆ' ಎಂಬ ಪದಗಳಿಗೆ ಬದಲು 'ಹನ್ನೆರಡು' ಎಂಬ ಪದವನ್ನು ಹಾಕಬೇಕು".

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಇದರಲ್ಲಿ ಎರಡು ತಕರಾರುಗಳು ನನಗೆ ಕಾಣಿಸುತ್ತಿವೆ. ಒಂದು ಸಾಮಾನ್ಯವಾದುದು. ಯಾರೇ ಯಜಮಾನರು ತಮ್ಮ ಕಾರ್ಖಾನೆಗಳಲ್ಲಿನ ನೌಕರರನ್ನು ಒಂದು ವಿಶಿಷ್ಟವಾದ ರೀತಿಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ ಎಂಬ ಅಭಿಪ್ರಾಯವನ್ನು ಹೊಂದಿರುವಂತೆ ಈ ತಿದ್ದುಪಡಿಯನ್ನು ಸೂಚಿಸಿರುವ ಗೌರವಾನ್ವಿತ ಸದಸ್ಯರು ಕಾಣುತ್ತಾರೆ. ಹಾಗಾದರೆ ಪ್ರಚಲಿತವಿರುವ ಮಾದರಿಗೆ ಸರಿಹೊಂದುವಂತೆ ಕಾನೂನು ಮಾಡಬೇಕೆಂದು ಸೂಚಿತವಾಗುತ್ತದೆ. ಈ ನಿಲವನ್ನು ನಾನಂತೂ ಖಂಡಿತಾ ಒಪ್ಪುವುದಿಲ್ಲ. ಯಜಮಾನರು ತಮಗೆ ಸರಿಹೊಂದುವಂಥ ರೀತಿಯಲ್ಲಿ ಯೋಜನೆಯನ್ನು ತಯಾರಿಸಕೊಳ್ಳಬಹುದು, ಆದರೆ ಸರ್ಕಾರ ಆ ಮಾದರಿಯನ್ನು ಹಾಗೆ ಮಂಜೂರು ಮಾಡುವುದು ಸರಿಯಾಗಿ ತೋರುವುದಿಲ್ಲ, ಅಷ್ಟೇ ಅಲ್ಲ, ಆ ಮಾರ್ಗ ತಪ್ಪಾಗಿದ್ದರೆ ಅದನ್ನು ತಪ್ಪು ಎಂದು ಕರೆಯಬೇಕು. ನಾನು ಈ ತಿದ್ದುಪಡಿಯನ್ನು ಒಪ್ಪದಿರುವುದಕ್ಕೆ ನನ್ನ ಮೊದಲ ವಾದ ಇದು.

ಈ ವಿಷಯವನ್ನು ನೇರವಾಗಿ ಪರಿಗಣಿಸುವುದರಿಂದ ಈ ತಿದ್ದುಪಡಿಯನ್ನು ನಾನು ಎರಡನೇ ವಾದದಿಂದ ವಿರೋಧಿಸುತ್ತೇನೆ. ನನ್ನ ಗೌರವಾನ್ವಿತ ಗೆಳೆಯರ ವಾದವನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಪಕ್ಷದಲ್ಲಿ ಈ ರೀತಿಯಾಗಿ ಅದನ್ನು ವಿವರಿಸಬಹುದು ಎಂದು ತೋರುತ್ತದೆ: ಅವರ ಬಳಿ ಎರಡು ತುಕಡಿ ಕೆಲಸಗಾರರಿದ್ದರೆ ಅನುಕೂಲಕ್ಕೋಸ್ಕರ ಆ ಗುಂಪುಗಳನ್ನು ಪ್ರಾಯಶಃ ಈ ರೀತಿಯಾಗಿ ದುಡಿಸಿಕೊಳ್ಳುತ್ತಾರೆ. 'ಅ' ಗುಂಪು ಬೆಳಗ್ಗಿನ ೮ ಗಂಟೆಯಿಂದ ಅಪರಾಹ್ನ ೪ ಗಂಟೆಯ ತನಕ ಕೆಲಸ ಮಾಡುತ್ತದೆ. 'ಅ' ಗುಂಪನ್ನು ಬಿಡುಗಡೆ ಮಾಡಿದರೆ ಮತ್ತೆ 'ಆ' ಗುಂಪನ್ನು ಕರೆತಂದು ಮಧ್ಯರಾತ್ರಿ ೧೨ರ

ತನಕ ದುಡಿಮೆ ಮಾಡಿಸಲಾಗುತ್ತದೆ. ನಾನು ಅವರ ವಿಧಾನವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದ ಪಕ್ಷದಲ್ಲಿ ಈ ರೀತಿಯಾಗಿ ಅವರು ತಮ್ಮ ನೌಕರರಿಂದ ಕೆಲಸ ತೆಗೆದುಕೊಳ್ಳುತ್ತಾರೆ......

**ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್ :** ಅದು ಸರಿಯೇ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈಗ ನನಗೆ ತಿಳಿಯುವಂತೆ ಈ ವಿಧಾನವನ್ನು ವಿಸ್ತರಿಸಿ ಕೆಲಸ ಮಾಡಿಸುವ ತತ್ವಕ್ಕೆ ವಿರೋಧವಾಗಿದೆ. ವಿಸ್ತರಣೆಯ ತತ್ವವಾದರೂ ಏನು? ಕಾನೂನಿನ ಪ್ರಕಾರ ಒಬ್ಬ ಕೆಲಸಗಾರ ಕಾರ್ಖಾನೆಯ ಆವರಣದಲ್ಲಿ ಎಷ್ಟು ಗಂಟೆಯ ಕಾಲ ಕೆಲಸ ಮಾಡಬೇಕೋ ಅದಕ್ಕಿಂತ ಹೆಚ್ಚು ಸಮಯವನ್ನು ಅವನು ಅಲ್ಲಿ ಕಳೆಯುವಂತಾಗಬಾರದು. ಈ ಮಸೂದೆಯಲ್ಲಿ ಗರಿಷ್ಠ ಕಾಲಮಿತಿಯನ್ನು ನಾವು ೯ ಗಂಟೆಗಳೆಂದು ಸೂಚಿಸಿದ್ದೇವೆ. ತಿದ್ದುಪಡಿಯನ್ನೇನಾದರೂ ಒಪ್ಪಿಕೊಂಡ ಪಕ್ಷದಲ್ಲಿ ನೌಕರನು ಇನ್ನೂ ೩ ಗಂಟೆ ಹೆಚ್ಚು ಕಾಲ ಕಾರ್ಖಾನೆಯಲ್ಲಿ ಇರಬೇಕಾಗುತ್ತದೆ, ಇದು ವಿಸ್ತರಣಾ ತತ್ವಕ್ಕೆ ವಿರೋಧವಾದುದಾಗಿದೆ. ಕಾರ್ಖಾನೆಯೆಂದರೆ, ಅದೇನೂ ಉದ್ಯಾನವನವಲ್ಲ, ಅಷ್ಟೇ ಅಲ್ಲದೆ, ಇಂದು ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಅಗತ್ಯವಾಗಿ ಲಭ್ಯವಾಗಿರಬೇಕಾದಂಥ ವಾತಾವರಣ ಲಭ್ಯವಾಗುತ್ತಿಲ್ಲ. ಹಾಗೆಯೇ ಕಾರ್ಮಿಕನೊಬ್ಬ ಕಾರ್ಖಾನೆಯ ತನ್ನ ಕರ್ತವ್ಯವನ್ನು ನಿರ್ವಹಿಸಿದ ನಂತರ ತನ್ನ ಮನೆಮಠ ಸೇರಿಕೊಂಡು ವಿರಾಮದ ವೇಳೆಯನ್ನು ತನ್ನ ಮನೆಯ ಪರಿಸರದಲ್ಲಿ ಸ್ವಚ್ಛಂದವಾಗಿ ಕಳೆಯಲು ಅನುವು ಮಾಡಿಕೊಡಬೇಕು. ಈ ಕಾರಣಗಳಿಂದಾಗಿ ಈ ತಿದ್ದುಪಡಿ ಸರಿಯಾದ ತಿದ್ದುಪಡಿ ಅಲ್ಲ, ಹಾಗಾಗಿ ನಾನು ಇದನ್ನು ಸ್ವೀಕರಿಸಲು ಸಿದ್ಧನಿಲ್ಲ.......

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಕ್ರಮವನ್ನು ಈ ಸದನವೂ ಸೇರಿದಂತೆ ಪರಿಶೀಲನಾ ಸಮಿತಿಯ ಸದಸ್ಯರು ಒಪ್ಪಿರುವುದರಿಂದ ಅವರೆಲ್ಲರಿಗೆ ನನ್ನ ಕೃತಜ್ಞತೆಯನ್ನು ಸೂಚಿಸುವುದನ್ನು ಬಿಟ್ಟು ಈ ಘಟ್ಟದಲ್ಲಿ ನಾನು ಬೇರೇನನ್ನೂ ಹೇಳಲು ಬಯಸುವುದಿಲ್ಲ. ಬೇರೆ ಬೇರೆ ಸದಸ್ಯರು ಈ ಸೂಚನೆಯ ಬಗ್ಗೆ ಬೇರೆ ಬೇರೆ ರೀತಿಯಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೆ: ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಮಾನ್ಯ ಸದಸ್ಯರು ಕೊಟ್ಟಿರುವ ಈ ಸೂಚನೆಗಳನ್ನು ಆ ಸರ್ಕಾರ ಮಾನ್ಯ ಮಾಡಲೇಬೇಕು. ನನ್ನ ಗೌರವಾನ್ವಿತ ಸ್ನೇಹಿತರಾದ ದಿವಾನ್ ಚಮನ್‌ಲಾಲರು ಹೇಳಿದಂತೆ ಕಾರ್ಖಾನೆ ಆಯೋಗವು ವರದಿ ನೀಡಿದ ಕಾಲದಲ್ಲಿ ನಾವೀಗ ಬದುಕುತ್ತಿಲ್ಲ. ಕಾಲ ಮುಂದೆ ಸಾಗಿದೆ. ಜಗತ್ತು ಮುಂದೆ ಸಾಗಿದೆ ಮತ್ತು ಇತರೆ ಆಧುನಿಕ ರಾಷ್ಟ್ರಗಳಂತೆಯೇ ನಾವೂ ಕೂಡ ನಮ್ಮ ಕೈಗಾರಿಕಾ ಸಂಬಂಧಗಳು ನೈತಿಕ ತಳಹದಿಯ ಮೇಲೆಯೇ ನಿರ್ಮಾಣವಾಗಬೇಕೆಂದು ತಿಳಿಯಬೇಕು; ಹಾಗಾಗಿ ಅವರು ಹೇಳಿರುವುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳುತ್ತೇವೆ ಮತ್ತು ಅವರ ಸಲಹೆಗಳಿಗೆ ಮನ್ನಣೆ ನೀಡುತ್ತೇವೆ.

ಮಾನ್ಯರೆ, ಸದನವು ನನಗೆ ತೋರಿದ ಸಜ್ಜನಿಕೆಗಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

**ಅಧ್ಯಕ್ಷರು :** ಪ್ರಶ್ನೆ ಇದು :

"ತಿದ್ದುಪಡಿ ಮಾಡಿ ಮಸೂದೆಯನ್ನು ಅಂಗೀಕರಿಸುವುದು"

ಸೂಚನೆ ಸ್ವೀಕೃತವಾಯಿತು.

# ೬೫
# ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ ನಾನು ಸೂಚಿಸುವುದೇನೆಂದರೆ:

"ಅಭ್ರಕದ ಗಣಿ ಕೈಗಾರಿಕೆಯಲ್ಲಿ ಉದ್ಯೋಗಸ್ಥರಾದ ಕಾರ್ಮಿಕರ ಕಲ್ಯಾಣಕ್ಕಾಗಿ ತೆರೆದಿರುವ ನಿಧಿಯನ್ನು ಪ್ರೋತ್ಸಾಹಿಸಿ ಮುಂದುವರಿಸುವುದಕ್ಕಾಗಿ ಈ ಮಸೂದೆಯನ್ನು ಪರಿಗಣಿಸಬೇಕು."

ಮಸೂದೆಯ ೩ನೇ ನಿಬಂಧನೆಯಲ್ಲಿ ಮುಖ್ಯವಾದ ಪ್ರಸ್ತಾವನೆ ಮಾಡಿ, ಅದರಲ್ಲಿ ನಿರ್ಯಾತವಾಗುವ ಅಭ್ರಕದ ಮೇಲೆ ಸ್ವಲ್ಪ ಲೆವಿಯನ್ನು ಹಾಕಿ ಆ ಹಣವನ್ನು ಅಭ್ರಕದ ಗಣಿ ಕೆಲಸಗಾರರ ಕಲ್ಯಾಣಕ್ಕಾಗಿ ವಿನಿಯೋಗಿಸುವುದು. ಈ ನಿಧಿಯು ಕೈಗೊಳ್ಳುವ ಕಲ್ಯಾಣ ಕಾರ್ಯಗಳ ರೀತಿಯ ಬಗ್ಗೆ ಈ ಮಸೂದೆಯ ೨ನೆಯ ನಿಬಂಧನೆಯಲ್ಲಿ ತಿಳಿಸಲಾಗಿದೆ. ಈ ನಿಬಂಧನೆಗಳನ್ನು ವಿವರವಾಗಿ ಸದನದಲ್ಲಿ ಓದುವ ಆವಶ್ಯಕತೆ ನನಗೆ ಕಂಡುಬಂದಿಲ್ಲ. ನಾನು ಮುಂದುವರಿಯುವುದಕ್ಕೆ ಮೊದಲು ಭಾರತ ಸರ್ಕಾರವು ಈ ರೀತಿಯಾದ ನಿಧಿಯೊಂದನ್ನು ಸ್ಥಾಪಿಸುವ ಆವಶ್ಯಕತೆಯನ್ನು ಕಂಡುಕೊಂಡದ್ದು ಏಕೆ ಎಂಬುದನ್ನು ನಾನು ತಿಳಿಸಬೇಕು. ಇದರ ಬಗ್ಗೆ ನಿಬಂಧನೆ ೩ರಲ್ಲಿ ವಿವರವಾಗಿ ತಿಳಿಸಿದೆ. ಅಭ್ರಕದ ಗಣಿಗಳಲ್ಲಿನ ಕೆಲಸಗಾರರ ಸ್ಥಿತಿಗತಿಗಳ ಬಗ್ಗೆ ಕೂಲಂಕಷವಾಗಿ ತಿಳಿಯಲು ಒಂದು ಸಮಿತಿಯನ್ನು ಸ್ಥಾಪಿಸಲಾಗಿದ್ದು, ಆ ಸಮಿತಿಯ ವಿವರವನ್ನು ಈಗಾಗಲೇ ನೀಡಿದೆ. ಆ ವರದಿಯ ಕೆಲವು ಭಾಗಗಳನ್ನು ತಮ್ಮ ಮುಂದೆ ಓದಿದರೆ ವಸ್ತುಸ್ಥಿತಿಯ ಅರಿವಾಗುವುದೆಂದು ಭಾವಿಸುವೆ. ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವು ನೇಮಕ ಮಾಡಿದ ಮಾಹಿತಿ ಸಂಗ್ರಹಣಾ ಸಮಿತಿಯ ಸದಸ್ಯರಾಗಿದ್ದ ಪ್ರೊ॥ ಆದಾರ್‌ಕರ್‌ರವರು ಈ ವರದಿಯನ್ನು ತಯಾರಿಸಿದ್ದಾರೆ. ಮಾನ್ಯರೆ, ತಮ್ಮ ಅಪ್ಪಣೆ ಪಡೆದು ನಾನು ಈ ವರದಿಯಿಂದ ಕೆಲವು ಭಾಗಗಳನ್ನು ಓದಲು ಬಯಸುತ್ತೇನೆ.

ಈ ವರದಿಯ ೨೭ನೇ ಪುಟದಲ್ಲಿ ಪ್ರೊ॥ ಆಧಾರ್‌ಕರ್ ಬರೆಯುತ್ತಾರೆ :

"ಯಾವುದೇ ಗಣಿಯಲ್ಲಿ ಮೂತ್ರವಿಸರ್ಜನೆಗೆ ಅಥವಾ ಕಕ್ಕಸ್ಸಿಗೆ ವ್ಯವಸ್ಥೆ ಇದ್ದದ್ದು ನಮ್ಮ ಗಮನಕ್ಕೆ ಬರಲಿಲ್ಲ. ಈ ಮೂಲಕ ಗಣಿಗಳ ಕಾಯಿದೆಯ ಉಲ್ಲಂಘನೆಯಾಗಿರುವುದನ್ನು ಈಗಾಗಲೇ ಪ್ರಸ್ತಾಪಿಸಿದ್ದೇವೆ. ಭೂಮಿಯಲ್ಲಿ ೫೦೦ ಅಡಿಗಳ ಆಳದಲ್ಲಿ ಕೆಲಸಮಾಡುವ ಸಂದರ್ಭದಲ್ಲಿ ಒಂದು ವೇಳೆ ಗಣಿ ಕೆಲಸಗಾರರು ಪ್ರಕೃತಿಯ ಕರೆಗೆ ಓಗೊಡಬೇಕಾಗಿ ಬಂದರೆ ಏನು ಮಾಡುತ್ತಾರೆ? ಮೈಕಾ ಗಣಿ ಕೈಗಾರಿಕೆಯ ಮತ್ತೊಂದು ದೋಷವೆಂದರೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸದೆ ಇರುವುದು. ಕೆಲಸಗಾರರಿಗೆ ಸರಬರಾಜು ಮಾಡುವ ನೀರಿನಲ್ಲಿ ಕೆಲವು ಅಪಾಯಕಾರಿ ಖನಿಜಗಳು ಇರುವುದರಿಂದ ಅಜೀರ್ಣ, ಕರುಳುಬೇನೆ ಇತ್ಯಾದಿ ರೋಗಗಳು ತಲೆದೋರುವುದಾಗಿ ವೈದ್ಯರು ನಮಗೆ ತಿಳಿಸಿರುತ್ತಾರೆ. ನಾನು ಮೊದಲೇ ತಿಳಿಸಿದಂತೆ ಕೆಲವು ದೊಡ್ಡ ಕೈಗಾರಿಕೆಗಳು ಲಾರಿಗಳಿಂದ ಗಣಿಗಳಿರುವ ಸ್ಥಳಗಳಿಗೆ ನೀರು ತರಿಸುತ್ತಾರೆ, ಆದರೆ ಸಾಮಾನ್ಯವಾಗಿ ಹೆಂಗಸರು ಕೊಳಕು ಕೆರೆಗಳಿಂದ ಅರಿವೆಗಳಿಂದ ನೀರು ತೆಗೆದು ಐದಾರು ಮೈಲು ದೂರದಿಂದ ಹೊತ್ತು ತರುತ್ತಾರೆ. ಅಶುಚಿಯಾದ ಮಣ್ಣಿನ ಮಡಿಕೆಗಳಲ್ಲಿ ಈ ನೀರನ್ನು ಸಂಗ್ರಹಿಸಿಡುತ್ತಾರೆ. ಇಂಥ ಕೊಳಕು ನೀರೂ ಕೂಡ ಸಾಕಷ್ಟು ಸರಬರಾಜಾಗುವುದಿಲ್ಲ. ಕೈಕಾಲು ತೊಳೆಯುವುದಕ್ಕಂತೂ ನೀರು ಸಿಕ್ಕುವುದೇ ಇಲ್ಲ. ಈ ಸಮಸ್ಯೆ ಗಂಭೀರವಾಗಿರುವುದರಿಂದ ತಡಮಾಡದಂತೆ ಕ್ರಮ ಕೈಗೊಳ್ಳಬೇಕಾಗಿದೆ."

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ) ಸಂಪುಟ – ೭, ೬–೪–೧೯೪೬, ಪು. ೩೭೪೫–೪೭.

ವಸತಿಯ ಬಗ್ಗೆ ಪ್ರಸ್ತಾಪ ಮಾಡುತ್ತಾ ವರದಿ ಹೀಗೆ ಹೇಳುತ್ತದೆ :

"ಕೆಲಸಗಾರರು ವಾಸಮಾಡುವ ಸ್ಥಳಗಳನ್ನು 'ಮನೆಗಳೆಂದು' ಖಂಡಿತಾ ವರ್ಣಿಸಲು ಆಗುವುದಿಲ್ಲ. ಅವುಗಳಲ್ಲಿ ಕೆಲವಂತೂ ಎಲೆಗಳಿಂದ ಕವುಚಿದಂತೆ ಕಾಣುತ್ತವೆ. ಇನ್ನು ಪಕ್ಕಾ ಮನೆಗಳೆಂದು ಕರೆಸಿಕೊಳ್ಳುವ ನಿವಾಸಗಳನ್ನೇ ಎರಡು ಗುಂಪುಗಳಾಗಿ ವಿಂಗಡಿಸಬಹುದು :–

೧. *ಬೊಂಬು ಮತ್ತು ಹುಲ್ಲಿನಿಂದಾದ ಮನೆಗಳು :* ಒಬ್ಬ ಗಣಿ ಮಾಲೀಕನು ತನ್ನ ಕೆಲಸಗಾರರಿಗೆಂದು ಕಟ್ಟಿದ ಒಂದು ಮನೆಯನ್ನು ಗಮನಿಸಿದರೆ ಈ ರೀತಿಯ ಉಳಿದ ಮನೆಗಳ ಕಲ್ಪನೆಯಾಗುವುದು. ಬರೀ ಹಸಿರು ಎಲೆಗಳನ್ನು ಛಾವಣಿಗೆ ಹೊದಿಸಿದ್ದರು. ನೋಡಿದರೆ ದನದ ಕೊಟ್ಟಿಗೆಗಿಂತಲೂ ನಿಕೃಷ್ಟವಾಗಿತ್ತು. ಎಲ್ಲ ಕಡೆ ಗಾಳಿ ನುಗ್ಗುತ್ತಿದ್ದುದರಿಂದ ಕಿಟಕಿ ಮತ್ತು ಬಾಗಿಲುಗಳ ಆವಶ್ಯಕತೆಯೇ ಇದ್ದಿಲ್ಲ. ಇಂಥ ಒಂದು ಶೆಡ್ಡಿನೊಳಗೆ ಒಬ್ಬ ಕೆಲಸಗಾರ ಮತ್ತವನ ಹೆಂಡತಿ, ಇಬ್ಬರು ಮಕ್ಕಳಿದ್ದರು–ಇವರ ಜೊತೆಗೆ ಇನ್ನು ೧೦ ಮಂದಿ ಕೆಲಸಗಾರರಿಗೆ ಇದು ಆಶ್ರಯವಾಗಿತ್ತು. ಕುಟುಂಬಕ್ಕೆ ಯಾವುದೇ ವಿಧವಾದ ಏಕಾಂತವಿರಲಿಲ್ಲ. ಅಡುಗೆ ಒಲೆಗಳು ಮಾತ್ರ ಪ್ರತ್ಯೇಕವಾಗಿದ್ದವು. ನೆಲದ ಮೇಲೆ ಹುಲ್ಲು ಹರಡಿದ್ದರು, ಕೆಲಸಗಾರರು ರಾತ್ರಿವೇಳೆ ಅದರ ಮೇಲೆ ಮಲಗುವರು. ಈ ಮನೆಗೆ ಬಾಡಿಗೆ ಏನೂ ವಿಧಿಸುತ್ತಿರಲಿಲ್ಲ. ಈ ಗುಡಿಸಲಿಗೆ ಇನ್ನೊಂದು ೮–೧೦ ಕೆಲಸಗಾರರನ್ನು ಯಜಮಾನ ತಂದು ಕೂಡುತ್ತಿದ್ದ. ಈ ಕೆಲಸದವನು ಯಾವುದೇ ವಿಧವಾದ ಬಾಡಿಗೆಯನ್ನು ಕೊಡುತ್ತಿರಲಿಲ್ಲವಾಗಿ ಅವನಿಗೆ ಗೊಣಗಲು ಅವಕಾಶವಿರಲಿಲ್ಲ.

೨. *ಸ್ವಲ್ಪ ಉತ್ತಮವಾದ ಮನೆಗಳು :* ಇಂಥ ಮನೆಗಳು ಬಹಳ ಇರಲಿಲ್ಲ; ಇವು ಸಾಮಾನ್ಯವಾಗಿ ಭಾರಹೊರುವವರು, ಮೇಸ್ತ್ರಿಗಳು, ಮರಗೆಲಸದವರಿಗೆ ದೊರಕುತ್ತಿದ್ದವು. ಒಂದೇ ಕೊಠಡಿಯ ವಸತಿಗಳನ್ನು ಸಾಲಾಗಿ ಕಟ್ಟಿದ್ದರು ಮತ್ತು ಇವುಗಳಿಗೂ ಸಹ ಬಾಡಿಗೆ ಇರಲಿಲ್ಲ. ಸಾಮಾನ್ಯವಾಗಿ ಗೋಡೆಗಳನ್ನು ಇಟ್ಟಿಗೆಯಿಂದಲೇ ಕಟ್ಟಿರುತ್ತಿದ್ದರು ಮತ್ತು ಛಾವಣಿಗೆ ಮರದ ತೊಲೆಗಳನ್ನು ಹಾಕುತ್ತಿದ್ದರು. ಈ ಕೊಠಡಿಗಳ ಬಾಗಿಲುಗಳನ್ನು ಮುಚ್ಚಿಬಿಡುತ್ತಿದ್ದರು; ಗಾಳಿ ಬೆಳಕಿಗೆ ಅಷ್ಟಾಗಿ ಅವಕಾಶವಿರಲಿಲ್ಲ. ಒಂದು ವಿಷಯವನ್ನು ಒತ್ತಿ ಹೇಳಬೇಕು – ಈ ಮನೆಗಳನ್ನು ಸಾಮಾನ್ಯ ಕೆಲಸಗಾರರಿಗೆ ಕೊಡುತ್ತಿರಲಿಲ್ಲ, ಕುಶಲಕರ್ಮಿಗಳಿಗೆ ಮೀಸಲಾಗಿಡುತ್ತಿದ್ದರು. ಇಂಥ ಕೆಲಸಗಾರರಿಗೂ ಸಹ ಮೂತ್ರವಿಸರ್ಜನೆ ಮತ್ತು ಪಾಯಿಖಾನೆಗೆ ಅವಕಾಶ ಕಲ್ಪಿಸಿಕೊಡುತ್ತಿರಲಿಲ್ಲವಾಗಿ ಅವರು ತಮ್ಮ ದೇಹಭಾದೆಯನ್ನು ತೀರಿಸಿಕೊಳ್ಳಲು ಬಯಲಿಗೆ ಹೋಗಬೇಕಾಗಿತ್ತು. ಆದಕಾರಣ ಇವರು ರಕ್ತಹೀನತೆ ಮತ್ತು ankylostomiasis ಮುಂತಾದ ರೋಗಗಳಿಗೆ ತುತ್ತಾಗುತ್ತಾರೆ, ಯಜಮಾನರು ಎಷ್ಟೇ ಪ್ರಯತ್ನಪಟ್ಟರೂ ಕೆಲಸಗಾರರು ಇಂಥ ವಸತಿಗಳಲ್ಲಿ ವಾಸಮಾಡುತ್ತಿರಲಿಲ್ಲ. ದಿನವೂ ೪ ರಿಂದ ೬ ಮೈಲುಗಳು ನಡೆದು ಗಣಿಗಳಿಗೆ ಹೋಗುತ್ತಾರಾದರೂ ಮಾಲೀಕರ ಒತ್ತಾಯಕ್ಕೆ ಸೊಪ್ಪು ಹಾಕುತ್ತಿರಲಿಲ್ಲ. ಜೊತೆಗೆ ಇವರೇ ಕೈಯಾರೆ ಕಟ್ಟಿದ ಗುಡಿಸಿಲುಗಳು ಮಾಲೀಕರು ಕಟ್ಟಿದ ವಸತಿಗಳಿಗಿಂತ ಬಹುಪಾಲು ಉತ್ತಮವಾಗಿದ್ದವು."

ಅಭ್ರಕದ ಗಣಿಗಳಲ್ಲಿ ಪ್ರಚಲಿತವಿರುವ ಔದ್ಯೋಗಿಕ ರೋಗಗಳ ಬಗ್ಗೆ ಗಮನ ಸೆಳೆಯುವಂಥ ಭಾಗವನ್ನು ನಿಮ್ಮ ಮುಂದೆ ಓದಲು ಅಪೇಕ್ಷಿಸುತ್ತೇನೆ. ವರದಿ ಹೀಗೆ ಹೇಳುತ್ತದೆ :

"ಮೈಕಾ ಕೆಲಸಗಾರರು ತುತ್ತಾಗುವ ರೋಗಗಳನ್ನು ಈ ರೀತಿ ವಿಂಗಡಿಸಬಹುದು :

ಅ. ಗಣಿ ಕೆಲಸದಿಂದ ಮತ್ತು ಕೆಲಸದ ಸ್ಥಿತಿಯಿಂದ ನೇರವಾಗಿ ಉಂಟಾಗುವ ರೋಗಗಳು ಮತ್ತು

ಆ. ಗಣಿ ವಲಯದ ಗಿಡಮರಗಳು ಇತ್ಯಾದಿ ಬದಲಾವಣೆಗಳಿಂದ ತಲೆದೋರುವ ಜಾಡ್ಯಗಳು.

ಈ ದಿಶೆಯಲ್ಲಿ ನಾವು ಬಿಹಾರ ಪ್ರದೇಶದಿಂದ ಸ್ವಲ್ಪ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಯಿತು, ಹಾಗಾಗಿ ಈ ಕೆಳಗಿನ ವಿಶ್ಲೇಷಣೆಯು ಆ ಮಾಹಿತಿಯನ್ನು ಆಧರಿಸಿದ್ದಾಗಿದೆ.

**ಅ. ಮೊದಲನೆಯ ಪಂಗಡಕ್ಕೆ ಈ ಕೆಳಗಿನ ರೋಗಗಳು ಸೇರುತ್ತವೆ :**

೧. ಸಿಲಿಕ ರೋಗ (ಸಿಲಿಕೋಸಿಸ್) : ಇದು ಗಂಟಲಿಗೆ ಬರುವಂಥ ಖಾಯಿಲೆ; ಸ್ಫಟಿಕ (ಕ್ವಾರ್ಟ್ಸ್) ಶಿಲೆಯನ್ನು ಯಂತ್ರಗಳು ಕೊರೆಯುವುದರಿಂದ ಈ ಖಾಯಿಲೆ ಬರುತ್ತದೆ. ಕೊರೆಯುವ ಯಂತ್ರಕ್ಕೆ ಅಷ್ಟಮುಖದ ತುದಿಯಿರುತ್ತದೆ. ಇದರ ನಡುಮಧ್ಯೆಯೇ ಬೈರಿಗೆ ಇಳಿಯುತ್ತದೆ. ಕೊರೆಯುವ ಸಾಧನವನ್ನು ಯಂತ್ರವು ತಿರುಗಿಸುವಾಗ ಈ ಕೊರೆತದಿಂದ ರಭಸವಾಗಿ ಹೊರಗೆ ಬರುವ ಸ್ಫಟಿಕದ ಧೂಳು ಕೊರೆಯುವವನಿಗೇ ಬಡಿಯುತ್ತದೆ. ಕೆಲವೇ ನಿಮಿಷಗಳಲ್ಲಿ ಕೊರೆಯುವವ ಧೂಳಿನ ಮೋಡದಿಂದ ಕವಿಯಲ್ಪಡುತ್ತಾನೆ; ಅವನು ಈ ಧೂಳನ್ನೇ ಉಸಿರಾಡಬೇಕಾಗುತ್ತದೆ. ಸಣ್ಣಪುಟ್ಟ ಸ್ಫಟಿಕದ ತುಣುಕುಗಳು ಅವನೊಳಗೆ ಸೇರಿಕೊಂಡು ಅವನ ಗಂಟಲಿಗೆ ರೋಗವನ್ನು ತರುತ್ತದೆ. ಸಿಲಿಕ ರೋಗದ ಮೊದಲ ಲಕ್ಷಣವೆಂದರೆ ಬ್ರಾಂಕೈಟೀಸ್ (ಶ್ವಾಸ ನಾಳದ ಊತ), ತರುವಾಯದಲ್ಲಿ ಸಿಲಿಕ ರೋಗವೇ ಢಾಳಾಗಿ ಕಾಣಿಸಿಕೊಳ್ಳುತ್ತದೆ. ಈ ರೋಗವು ಹೆಚ್ಚಿನ ಪ್ರಮಾಣದಲ್ಲೇ ಕಾಣಿಸಿಕೊಳ್ಳುವುದಾದರೂ ಕೆಲಸಗಾರರ ಸಂಖ್ಯೆಯೂ ಜಾಸ್ತಿ ಇರುವುದರಿಂದ ಇದು ಒಡೆದು ಕಾಣುವುದಿಲ್ಲ. ಅಕಾಲಿಕ ಮರಣದಿಂದ ಈ ಕೆಲಸಗಾರರು ಪಾರಾಗುವುದು ಹೇಗೆ ಸಾಧ್ಯವಾಗಿದೆಯೆಂದರೆ ಇವರು ಆಗಾಗ್ಗೆ ಕೃಷಿ ಕೆಲಸಕ್ಕೆ ಹೋಗುವುದರಿಂದ. ಒಂದು ವರ್ಷ ಕಾಲ ಸತತವಾಗಿ ಒಬ್ಬ ಡ್ರಿಲ್ಲರ್ ಕೆಲಸ ಮಾಡಿದನೆಂದರೆ ಸಾಕು ಆತ ಈ ರೋಗವನ್ನು ಅಂಟಿಸಿಕೊಂಡು ಐದು ವರ್ಷಗಳಲ್ಲಿ ಸಾವನ್ನಪ್ಪುತ್ತಾನೆ. ಕಳೆದ ಐದು ವರ್ಷಗಳಲ್ಲಿ ತನ್ನ ೧೬ ಮಂದಿ ಒಳ್ಳೆಯ ಡ್ರಿಲ್ಲರ್‌ಗಳು ತೀರಿಕೊಂಡರೆಂದು ಒಬ್ಬ ಮಾಲೀಕ ತಿಳಿಸಿದ. ಸುಮಾರು ಎಲ್ಲ ಡ್ರಿಲ್ಲರ್‌ಗಳ ಪಾಲಿಗೂ ಸಿಂಹಸ್ವಪ್ನವಾಗಿರುವ ಈ ರೋಗದಿಂದ ಅವರನ್ನು ಪಾರು ಮಾಡಬಹುದಾದ ಒಂದೇ ವಿಧಾನವೆಂದರೆ ಭಾರತೀಯ ಗಣಿಗಳ ಕಾಯಿದೆಯ ಮೂಲಕ ಒಣ ಯಂತ್ರ ಕೊರೆತವನ್ನು ನಿಷೇಧಿಸುವುದು. ಕ್ರಿಶ್ಚಿಯನ್ ಮೈನಿಂಗ್ ಕಂಪನಿಯವರು ಮಾತ್ರ ತಾವಾಗಿಯೇ ತಮ್ಮ ಕೆಲವು ಗಣಿಗಳಲ್ಲಿ ತೇವದ ಕೊರೆತವನ್ನು ಪ್ರಾರಂಭಿಸಿದ್ದಾರೆ. ವರ್ತಮಾನದ ಯುದ್ಧದ ಸಂದರ್ಭದಲ್ಲಿ ಇವರನ್ನು ಅನುಕರಿಸುವಂಥ ಸೂಚನೆಯನ್ನು ಸರ್ಕಾರದ ಬೇರೆ ಯಾವ ಕಂಪನಿಯವರೂ ಪ್ರಕಟಿಸಿಲ್ಲ. ಆದಾಗ್ಯೂ ಎಲ್ಲ ಗಣಿ ಮಾಲೀಕರೂ ಸರ್ಕಾರದ ಆಜ್ಞೆಯ ಮೂಲಕ ಶುಷ್ಕ ಕೊರೆತವನ್ನು ನಿಷೇಧಿಸುವುದಕ್ಕೆ ತಮ್ಮ ಬೆಂಬಲ ಸೂಚಿಸಿರುವುದು ಸಂತಸದ ಸಂಗತಿ".

ಅಜೀರ್ಣರೋಗ, ಶ್ವಾಸನಾಳದ ರೋಗ, ಸಂಧಿವಾತ, ಮಲೇರಿಯಾ ಮುಂತಾದ ರೋಗಗಳು ಪ್ರಚಲಿತವಿರುವುದರ ವರ್ಣನೆಯೂ ಸಹ ವರದಿಯಲ್ಲಿದೆ. ಆ ಯಾದಿಯನ್ನು ಪೂರ್ಣವಾಗಿ ನಾನು ಓದುವ ಆವಶ್ಯಕತೆಯಿಲ್ಲ. ಆದರೆ ವರದಿಯಲ್ಲಿನ ಈ ಕೆಳಕಂಡ ಪ್ಯಾರಾಕ್ಕೆ ಸದನದ ಗಮನವನ್ನು ಸೆಳೆಯಲು ನಾನು ಇಚ್ಛೆಪಡುತ್ತೇನೆ :

"ಕಲ್ಯಾಣ ಕಾರ್ಯಕ್ರಮಗಳು ಸಂಪೂರ್ಣವಾಗಿ ನಾಪತ್ತೆಯಾಗಿವೆ. ಕ್ಯಾಂಟೀನುಗಳು, ಬಾಲವಾಡಿಗಳು, ಮನರಂಜನೆ, ಬಟ್ಟೆ ತೊಳೆಯುವಿಕೆ ಇತ್ಯಾದಿ ಸೌಲಭ್ಯಗಳು ಅಭ್ರಕದ ಗಣಿ ವಲಯದಲ್ಲಿ ಎಲ್ಲೂ ಕಂಡುಬರುವುದಿಲ್ಲ. ದೊಡ್ಡ ಕಂಪನಿಗಳಾದ ಕ್ರಿಶ್ಚಿಯನ್ ಮೈನಿಂಗ್ ಕಂಪನಿ, ಚತ್ತುರಾಮ್ ಹೊರಿಲ್ರಾಮ್ ಕಂಪನಿ ಮತ್ತು ಭಾರತೀಯ ಅಭ್ರಕದ ಸರಬರಾಜು ಕಂಪನಿ ವೈದ್ಯಕೀಯ ಸೌಲಭ್ಯಕ್ಕಾಗಿ ಸ್ವಲ್ಪ ಏರ್ಪಾಟು ಮಾಡಿವೆ."

ಅನಂತರ ಅವರು ಈ ವಿವರವನ್ನು ಕೊಡುತ್ತಾರೆ :

"ಎಲ್ಲೆಲ್ಲಿ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡುತ್ತಾರೊ ಅಲ್ಲಿ ಅದನ್ನು ಮುಫತ್ತಾಗಿ ಒದಗಿಸುತ್ತಾರೆ. ಆದರೆ ಮಕ್ಕಳ ಅಥವಾ ವಯಸ್ಕರ ಶಿಕ್ಷಣಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ".

ಮಾನ್ಯರೆ, ಅಭ್ರಕದ ಗಣಿ ಕೆಲಸಗಾರರ ಸ್ಥಿತಿಗತಿಗಳನ್ನು ತಿಳಿಸುವುದಕ್ಕಾಗಿ ಈ ವರದಿಯಿಂದ ಅನೇಕ ಭಾಗಗಳನ್ನು ನಾನು ಹೀಗೆಯೇ ಉಲ್ಲೇಖ ಮಾಡುತ್ತಾ ಹೋಗಬಹುದು. ಒಂದಂತೂ ನಿಜ, ಸರ್ಕಾರದವರು ಮಧ್ಯೆ ಪ್ರವೇಶಿಸಿ ಅಭ್ರಕದ ಗಣಿ ಕೆಲಸಗಾರರ ಅಭ್ರಕದ ಸ್ಥಿತಿಯನ್ನು ಸರಿಪಡಿಸಲು ಈಗಲಾದರೂ ಪ್ರಯತ್ನಿಸುವುದು ಅಗತ್ಯ ಮತ್ತು ಅನಿವಾರ್ಯ.

ಮಾನ್ಯರೆ, ಮುಂದಿನ ಪ್ರಶ್ನೆಯು ಈ ಸಮಸ್ಯೆಯನ್ನು ಪರಿಹರಿಸುವಂಥ ಉತ್ತಮ ಮಾರ್ಗ ಯಾವುದು ಎಂಬುದನ್ನು ಕುರಿತದ್ದು. ಈ ಪ್ರಶ್ನೆಯನ್ನು ಕುರಿತಾಗಿ ವಾಸ್ತವವಾಗಿ ಎರಡು ಮಾರ್ಗಗಳನ್ನು ನಾವು ಯೋಚಿಸಬಹುದಾಗಿದೆ. ಮೊದಲನೆಯ ಮಾರ್ಗವೆಂದರೆ, ಕಾರ್ಮಿಕರ ಕಲ್ಯಾಣ ಕಾರ್ಯಕ್ರಮವು ಗಣಿ ಮಾಲೀಕರ ಜವಾಬ್ದಾರಿ ಎಂದು ನಿಗದಿಪಡಿಸುವುದು, ಹಾಗೂ ಈ ಕಾರ್ಯಕ್ರಮಗಳು ಸಮರ್ಪಕವಾಗಿ ಜಾರಿಯಲ್ಲಿವೆಯೇ ಇಲ್ಲವೇ ಎಂಬುದನ್ನು ಸರ್ಕಾರವು ಆಗಿಂದಾಗ್ಯೆ ಪರೀಕ್ಷಿಸಬೇಕು. ಎರಡನೆಯ ಮಾರ್ಗವೆಂದರೆ, ನೇರವಾಗಿ ಸರ್ಕಾರವೇ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದು, ತಗಲುವ ಖರ್ಚನ್ನು ಸಂಬಂಧಪಟ್ಟ ಮಾಲೀಕರಿಂದ ವಸೂಲು ಮಾಡುವುದು. ಮೊದಲನೆಯ ವಿಧಾನ, ನನ್ನ ಪ್ರಕಾರ, ಅಸಮರ್ಪಕವಾದದ್ದು; ಹಾಗೆನ್ನುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಬೇರೆ ಬೇರೆ ಮಾಲೀಕರಿಗೆ ಕಾರ್ಮಿಕರ ಕಲ್ಯಾಣದ ಭಾರ ಹೊರುವ ಸಾಮರ್ಥ್ಯ ಬೇರೆ ಬೇರೆಯಾಗಿಯೇ ಇರುತ್ತದೆ. ಹಾಗಿರುವುದರಿಂದ ಸಣ್ಣಪುಟ್ಟ ಮಾಲೀಕರು ಕಾಯಿದೆಯಿಂದ ನಿಗದಿಯಾದಂಥ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರಲು ಸಮರ್ಥರಾಗಿಲ್ಲದಿರಬಹುದು. ಎರಡನೆಯದಾಗಿ, ಎಲ್ಲ ಗಣಿಗಳಿಗೆ ಭೇಟಿಕೊಟ್ಟು ಸಮರ್ಪಕವಾದ ರೀತಿಯಲ್ಲಿ ಕಲ್ಯಾಣ ಕಾರ್ಯಕ್ರಮ ನಡೆಯುತ್ತಿದೆಯೇ ಎಂಬುದನ್ನು ಪರೀಕ್ಷಿಸಲು ಅಗಾಧವಾದ ಪ್ರಮಾಣದಲ್ಲಿ ವೀಕ್ಷಕರನ್ನು ನೇಮಿಸಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಮಾಲೀಕರೇ ಸ್ವತಃ ಜವಾಬ್ದಾರಿ ಹೊತ್ತುಕೊಂಡು ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ತಗಲುವ ಖರ್ಚನ್ನು ಭರಿಸುವಂತೆ ಸರ್ಕಾರ ವೀಕ್ಷಣೆ ಮಾಡುವುದು ಉತ್ತಮ ಮಾರ್ಗವೆಂದು ತೀರ್ಮಾನವಾಗಿದೆ. ಮಾನ್ಯರೆ, ಅಭ್ರಕದ ಗಣಿ ಕೆಲಸಗಾರರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ಈ ಮಸೂದೆಯು ಈ ತತ್ವದ ಆಧಾರದ ಮೇಲಿದೆ. ನನ್ನ ಅನುಭವಕ್ಕೆ ಬಂದಿರುವಂತೆ ಭಾರತ ಸರ್ಕಾರದವರು ಈ ಕ್ರಮವನ್ನು ಕೈಗೊಂಡಿರುವುದು ಇದೇ ಪ್ರಥಮವಲ್ಲ. ಈ ಸದನವು ಚೆನ್ನಾಗಿ ತಿಳಿದಿರುವಂತೆ ಭಾರತ ಸರ್ಕಾರ ಕಲ್ಲಿದ್ದಲು ಗಣಿ ಕೆಲಸದಲ್ಲಿ ನಿರತರಾಗಿರುವ ಕೆಲಸಗಾರರ ಕ್ಷೇಮಾಭಿವೃದ್ಧಿಗೋಸ್ಕರವಾಗಿ ಒಂದು ಸುಗ್ರೀವಾಜ್ಞೆಯನ್ನೇ ಹೊರಡಿಸಿತ್ತು. ಸುಗ್ರೀವಾಜ್ಞೆಯಿಂದ ಇದು ನೆರವೇರಿತು. ಆದರೆ ವರ್ತಮಾನದಲ್ಲಿ ನಾವು ಕೈಕೊಂಡಿರುವ ಕ್ರಮವೂ ಕೂಡ ಅಂದಿನ ಸುಗ್ರೀವಾಜ್ಞೆ ಅನುಸರಿಸಿದ ಕ್ರಮವನ್ನೇ ಆಧಾರವಾಗಿ ಹೊಂದಿದೆ. ಆದುದರಿಂದ ಈ ಕ್ರಮವು

ಯಾವ ತತ್ವದ ಆಧಾರದ ಮೇಲೆ ರೂಪುಗೊಂಡಿದೆ ಎಂಬುದರ ಬಗ್ಗೆ ನಾನು ದೀರ್ಘವಾಗಿ ವಿವರಿಸಬೇಕಾದ ಅಗತ್ಯವೂ ಇಲ್ಲ, ಅನಿವಾರ್ಯತೆಯೂ ಇಲ್ಲ.

ಮಾನ್ಯರೆ, ನಾನು ಉಲ್ಲೇಖ ಮಾಡಬೇಕಾದಂಥ ಇನ್ನೊಂದು ವಿಷಯವಿದೆ. ಗೌರವಾನ್ವಿತ ಸದಸ್ಯರು ತಿಳಿಯುವಂತೆ, ಈ ಮಸೂದೆಯಡಿಯಲ್ಲಿ ಎರಡು ಸಮಿತಿಗಳನ್ನು ರಚಿಸಿ, ಈ ಸಮಿತಿಗಳು ಈ ನಿಧಿಯನ್ನು ಯಾವ ಬಗೆಯಾಗಿ ಖರ್ಚುಮಾಡಬೇಕೆಂದು ಆಡಳಿತ ವರ್ಗದವರಿಗೆ ಸಲಹೆ ಕೊಡಬೇಕಾಗುತ್ತದೆ. ಒಂದು ಸಲಹಾ ಸಮಿತಿ ಮದರಾಸು ಪ್ರಾಂತ್ಯಕ್ಕೆ, ಇನ್ನೊಂದು ಬಿಹಾರ ಪ್ರಾಂತ್ಯಕ್ಕೆ. ಅಭ್ರಕದ ಉತ್ಪತ್ತಿ ಮಾಡುವ ಇನ್ನೊಂದು ವಲಯವಾದ ರಜಪುಟಾಣದ ಬಗ್ಗೆ ಭಾರತ ಸರ್ಕಾರ ಈ ರೀತಿಯ ನಿರ್ಬಂಧಗಳನ್ನು ಹಾಕಿಲ್ಲ – ಇದಕ್ಕೆ ಕಾರಣವೇನೆಂದು ಯಾರಾದರೂ ಸದಸ್ಯರು ಕೇಳುವ ಸಾಧ್ಯತೆ ಇದೆ. ರಜಪುಟಾಣ ವಲಯಕ್ಕೆ ಮೂರನೆಯ ಸಮಿತಿಯನ್ನು ರಚಿಸುವ ಆವಶ್ಯಕತೆ ಬೀಳಲಿಲ್ಲ ಏಕೆ ಎಂಬುದನ್ನು ಕುರಿತು ನಾನು ಸದನಕ್ಕೆ ವಿವರಿಸುತ್ತೇನೆ. ಅಭ್ರಕದ ಕೈಗಾರಿಕೆಯ ವಿಷಯದಲ್ಲಿ, ಸದ್ಯಕ್ಕೆ ರಜಪುಟಾಣ ಬಹಳ ಪುಟ್ಟ ಪಾತ್ರ ವಹಿಸುತ್ತಿದೆ. ಬೇಕಾದರೆ ನಾನು ಅದಕ್ಕೆ ಸಂಬಂಧಿಸಿದ ಅಂಕಿ ಅಂಶ ಒದಗಿಸಬಲ್ಲೆ. ಇಡೀ ಭಾರತದಲ್ಲಿರುವ ಅಭ್ರಕದ ಗಣಿಗಳನ್ನು ತೆಗೆದುಕೊಳ್ಳಿ. ೧೯೪೧ನೆಯ ಇಸವಿಗೆ ಸಂಬಂಧಿಸಿದಂತೆ ನನ್ನ ಬಳಿ ಅಂಕಿ ಅಂಶವಿದೆ. ೧೯೪೧ರಲ್ಲಿ ಬಿಹಾರದಲ್ಲಿದ್ದ ಒಟ್ಟು ಗಣಿಗಳು ೬೨೩. ಅವುಗಳಲ್ಲಿ ವರ್ಷವಿಡೀ ಕೆಲಸ ಮಾಡಿದವು ೨೯೭. ಮದರಾಸಿನಲ್ಲಿ ಒಟ್ಟು ಇದ್ದ ಗಣಿಗಳು ೧೦೮, ಹಾಗೂ ವರ್ಷವಿಡೀ ಕೆಲಸ ಮಾಡಿದವು ೪೭; ರಜಪುಟಾಣದಲ್ಲಿದ್ದ ಒಟ್ಟು ಗಣಿಗಳು ೬೨ ಮತ್ತು ವರ್ಷವಿಡೀ ಕೆಲಸ ಮಾಡಿದವು ೮. ಒಟ್ಟು ಕೆಲಸಗಾರರ ಕುರಿತಾಗಿ ನನ್ನ ಬಳಿ ೧೯೪೩ಕ್ಕೆ ಸಂಬಂಧಿಸಿದ ಹಾಗೆ ಅಂಕಿ ಅಂಶಗಳಿವೆ. ಅಂಕಿಅಂಶ ಈ ಕೆಳಕಂಡಂತಿದೆ. ಬಿಹಾರದ ಮೈಕಾ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಒಟ್ಟು ಸಂಖ್ಯೆ ೮೧,೪೩೧; ಮದರಾಸಿನಲ್ಲಿ ೧೮,೩೭೯; ರಜಪುಟಾಣದಲ್ಲಿ ೧೫,೦೦೦. ಆದಕಾರಣದಿಂದ ರಜಪುಟಾಣಕ್ಕೆ ಪ್ರತ್ಯೇಕವಾಗಿ ಸಮಿತಿಯೊಂದನ್ನು ರಚಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಲಾಯಿತು. ಈ ತೀರ್ಮಾನಕ್ಕೆ ಕಾರಣ ಸ್ಪಷ್ಟವಾಗಿದೆ. ಈ ಸಲಹಾ ಸಮಿತಿಗಳ ಆಡಳಿತಾತ್ಮಕ ವೆಚ್ಚ ಬಹಳ ಹೆಚ್ಚಾಗಿ ಬೆಳೆಯುತ್ತಿದೆ ಹಾಗೂ ಈ ನಿಧಿಯ ಬಹುಪಾಲು ಹಣ ಆಡಳಿತಾತ್ಮಕ ವಿಷಯಗಳಿಗೇ ವ್ಯಯವಾಗುವುದು ನನಗೆ ಇಷ್ಟವಾಗುವ ಸಂಗತಿಯಾಗಿರಲಿಲ್ಲ. ಆದ್ದರಿಂದ ಹೊಸದಾಗಿ ಬೇರೊಂದು ಸಮಿತಿಯನ್ನು ನೇಮಕ ಮಾಡುವ ಪ್ರಮೇಯವನ್ನು ತಪ್ಪಿಸುವ ಉದ್ದೇಶ ನನ್ನದಾಗಿತ್ತು; ಸಾಧ್ಯವಾದರೆ ಈ ಜವಾಬ್ದಾರಿಯನ್ನು ಅನ್ಯಮಾರ್ಗದಲ್ಲಿ ನಿರ್ವಹಿಸುವ ಉಪಾಯಗಳನ್ನು ನೋಡಬೇಕೆಂಬುದಾಗಿತ್ತು. ಮಾನ್ಯರೆ, ಮಸೂದೆಯು ಬೇರೆ ಇನ್ನು ಯಾವ ನಿರ್ದಿಷ್ಟವಾದ ಅಂಶಗಳ ಬಗ್ಗೆ ಹೆಚ್ಚಿನ ವಿವರವನ್ನು ಅಪೇಕ್ಷಿಸುತ್ತದೆ ಎಂದು ನನಗೆ ಗೊತ್ತಿಲ್ಲ. ವಿಷಯವು ಬಹಳ ತುರ್ತಾಗಿರುವುದರಿಂದ ಈ ಮಸೂದೆಯನ್ನು ಆದಷ್ಟು ಶೀಘ್ರವಾಗಿ ಶಾಸನಗಳ ಹೊತ್ತಿಗೆಯಲ್ಲಿ ನೋಡುವುದು ನನ್ನ ಬಯಕೆಯಾಗಿದೆ.

ಗೌರವಾನ್ವಿತ ಸದಸ್ಯರ ಹೆಸರಿನಲ್ಲಿ ಒಂದು ತಿದ್ದುಪಡಿಯಿರುವುದು ನನ್ನ ಗಮನಕ್ಕೆ ಬಂದಿದೆ, ಅದರ ಪ್ರಕಾರ ಈ ಮಸೂದೆಯನ್ನು ಒಂದು ಪರಿಶೀಲನಾ ಸಮಿತಿಯ ಮುಂದೆ ಇಡಬೇಕೆಂಬುದು. ಯಾವ ಸಮಿತಿಯ ಮುಂದೆಯೂ ಈ ಮಸೂದೆ ಹೋಗುವ ಆವಶ್ಯಕತೆಯಿಲ್ಲ ಮತ್ತು ನಾನು ಆ ಕ್ರಮವನ್ನು ವಿರೋಧಿಸುತ್ತೇನೆ; ಕಾರಣವೆಂದರೆ, ಈ ಮಸೂದೆಯು ಯಾವ ಬಗೆಯಲ್ಲೂ ವಿವಾದಾತ್ಮಕವಾಗಿಲ್ಲ ಅಥವಾ ಜಟಿಲವಾಗಿಲ್ಲ; ಪ್ರಯುಕ್ತ ಇದು ಪರಿಶೀಲನಾ ಸಮಿತಿಯೊಂದರ ಸಮಯವನ್ನು ವೃಥಾ ಪೋಲುಮಾಡಬೇಕಾದ ಆವಶ್ಯಕತೆ ಇಲ್ಲ. ಆದಾಗ್ಯೂ, ಸದನದ ಸದಸ್ಯರು ಈ ಮಸೂದೆಯನ್ನು ಪರಿಶೀಲನಾ

ಸಮಿತಿಯ ಮುಂದೆ ಇಡಲು ಯಾವ ಅಡ್ಡಿಯೂ ಇಲ್ಲ ಎಂದು ಒಪ್ಪಿಗೆ ಕೊಡುವುದಾದರೆ ಮತ್ತು ಈ ಅಧಿವೇಶನ ಮುಗಿಯುವುದರೊಳಗಾಗಿ ಮಸೂದೆ ಮರಳಿ ಬರುತ್ತದೆಂಬ ಭರವಸೆ ಕೊಡುವುದಾದರೆ ನಾನು ಮಸೂದೆಯ ಎರಡನೆ ಒಕ್ಕಣೆಯನ್ನು ಸೂಚಿಸುವುದಲ್ಲದೆ, ಆ ತಿದ್ದುಪಡಿಗೆ ನನ್ನ ಅಭ್ಯಂತರವೇನೂ ಇಲ್ಲ. ಮಾನ್ಯರೇ, ನಾನು ಮಂಡನೆಗೆ ಸೂಚಿಸುತ್ತೇನೆ.

**ಅಧ್ಯಕ್ಷರು :** ಸೂಚನೆ ಮಂಡನೆಯಾಗಿದೆ :

"ಅಂಕಿಅಂಶಗಳಿವೆ, ಗಣಿ ಕೈಗಾರಿಕೆಯಲ್ಲಿ ನಿರತರಾಗಿರುವ ಕೆಲಸಗಾರರ ಕಲ್ಯಾಣ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಒಂದು ದತ್ತಿಯನ್ನು ಸ್ಥಾಪಿಸುವ ಸಲುವಾಗಿ ವಿಷಯವನ್ನು ಪರಿಗಣಿಸಬೇಕಾಗಿದೆ".

**ಶ್ರೀ ಮಹ್ಮದ್ ಇ.ಎಚ್. ಜಾಫರ್ (ಬೊಂಬಾಯಿ ದಕ್ಷಿಣ ವಿಭಾಗ :** ಮಹಮದೀಯರು ಗ್ರಾಮಾಂತರ): ಮಾನ್ಯರೆ, ನಾನು ಹೀಗೆ ಸೂಚಿಸುತ್ತೇನೆ :

"ಈ ಮಸೂದೆಯನ್ನು ಈ ಕೆಳಕಂಡ ಮಹನೀಯರನ್ನೊಳಗೊಂಡ ಪರಿಶೀಲನಾ ಸಮಿತಿಯ ಮುಂದೆ ತರುವುದು : ಗೌರವಾನ್ವಿತ ಸರ್ ಅಶೋಕ್ ರಾಯ್, ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕುಮಾರಿ ಮಣಿಬೆನ್ ಕರಾ, ಶ್ರೀ ಎಸ್.ಸಿ. ಜೋಷಿ, ಬಾಬು ರಾಮ್‌ನಾರಾಯಣ್ ಸಿಂಗ್, ಶ್ರೀ ಆರ್. ವೆಂಕಟಸುಬ್ಬ ರೆಡ್ಡಿಯಾರ್, ಶ್ರೀ ಗೌರಿಶಂಕರ್ ಕರಣ್ ಸಿಂಗ್, ಶ್ರೀ ಎ. ಕರುಣಾಕರ ಮೆನನ್, ಪ್ರೊ॥ ಎನ್.ಜಿ. ರಂಗಾ, ಶ್ರೀ ಜಾಫ್ರಿ ಡಬ್ಲ್ಯೂ. ಟೈಸನ್, ಶ್ರೀ ಮದನ್‌ಧಾರಿ ಸಿಂಗ್, ಡಾ॥ ಸರ್ ಜಿಯಾ ಉದ್ದೀನ್ ಅಹ್ಮದ್, ಶ್ರೀ ಖಾನ್ ಬಹದ್ದೂರ್ ಹಾಫಿಜ, ಶ್ರೀ ಎಂ. ಘಜನ್‌ಫರುಲ್ಲಾ, ಶ್ರೀ ಮುಹಮ್ಮದ್ ನೌಮಾನ್ ಮತ್ತು ಸೂಚಕರು; ಹಾಗೂ ೧೫ನೇ ಏಪ್ರಿಲ್ ೧೯೪೬ರಂದು ಸಭೆ ಸೇರುವಂತೆ ಸೂಚನೆ ಕೊಡುವುದು. ಸಮಿತಿಯ ಸಭೆಯನ್ನು ನಡೆಸಲು ಕನಿಷ್ಠ ಪಕ್ಷ ೫ ಮಂದಿ ಸದಸ್ಯರಾದರೂ ಸೇರಬೇಕಾಗಿರುವುದು."

**ಅಧ್ಯಕ್ಷರು :** ೧೬ನೇ ತಾರೀಖು ಆಗಬಹುದು ತಾನೆ ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಲ್ಲ, ಆ ದಿನಾಂಕವಾದರೆ ಬಹಳ ತಡವಾಗುತ್ತದೆ.

* * *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ರಜಪುಟಾಣ ವಲಯವನ್ನು ಬಿಟ್ಟುಬಿಡುತ್ತೇನೆಂದು ನಾನು ಹೇಳಲಿಲ್ಲ. ಅದಕ್ಕೋಸ್ಕರ ಪ್ರತ್ಯೇಕವಾದ ಬೇರೊಂದು ಸಮಿತಿಯನ್ನು ನಾನು ನೇಮಿಸುತ್ತೇನೆ.

**ದಿವಾನ್ ಚಮನ್ ಲಾಲ್ :** ನನ್ನ ಗೌರವಾನ್ವಿತ ಸ್ನೇಹಿತರು ಇದಕ್ಕಾಗಿ ಪ್ರತ್ಯೇಕವಾದ ಸಮಿತಿಯೊಂದನ್ನು ರಚಿಸಬೇಕೆಂದು ಹೇಳಿದುದು ನನಗೆ ಕೇಳಲಿಲ್ಲ. "ಬೇರೊಂದು ವಿಧಾನದಿಂದ" ಎಂಬ ಮಾತು ಕೇಳಿತು. "ಬೇರೊಂದು ಪ್ರತ್ಯೇಕ ಸಮಿತಿ" ಎಂದು ಅವರು ಹೇಳಿದುದು ನನಗೆ ಸಂತೋಷವನ್ನುಂಟುಮಾಡಿದೆ. ಈ ಕ್ರಮವನ್ನು ಗಮನಿಸಿದರೂ ಸಹ ರಜಪುಟಾಣವನ್ನು ಕೈಬಿಟ್ಟಿರುವುದು ಕಾಣುತ್ತದೆ.

***ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ನಿಧಿಯ ಮುಖಾಂತರ ಅಲ್ಲಿ ಕಲ್ಯಾಣ ಕಾರ್ಯಗಳನ್ನು ನಡೆಸಲು ಪ್ರಯತ್ನಿಸಲಾಗಿದೆ.

**ದಿವಾನ್ ಚಮನ್ ಲಾಲ್ :** ಮದರಾಸು ಮತ್ತು ಬಿಹಾರಕ್ಕೆ ಕೊಡುವ ಹಣವನ್ನು ರಜಪುಟಾಣಕ್ಕೆ ವರ್ಗಾಯಿಸುವಿರೇನು?

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ – ೫, ಸಂಖ್ಯೆ : ೭, ೯ನೇ ಏಪ್ರಿಲ್ ೧೯೪೬, ಪು. ೩೭೫೬–೫೯.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಬೇರೊಂದು ಏಜೆನ್ಸಿಯನ್ನೊ ಅಥವಾ ಸಂಸ್ಥೆಯನ್ನೊ ಬಳಸಿಕೊಂಡು ನಾನು ಕೆಲಸಗಾರರ ಕ್ಷೇಮಾಭಿವೃದ್ಧಿಗಾಗಿ ಯೋಜಿಸಬಹುದು. ಈ ನಿಧಿಯಿಂದ ಖರ್ಚು ಭರಿಸಲು ಬರುತ್ತದೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಈ ಮಸೂದೆಯ ವಿರುದ್ಧ ಮಾಡಿರುವ ಟೀಕೆಗಳಿಗೆ ಉತ್ತರವನ್ನು ಕೊಡಲು ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮೂರೂ ಜನ ಭಾಷಣಕಾರರು ಎತ್ತಿದ ಪ್ರಶ್ನೆಗಳಿಗೆ ನಾನು ತುಂಬಾ ಸಂಕ್ಷೇಪವಾಗಿ ಉತ್ತರ ಕೊಡಬಯಸುತ್ತೇನೆ. ಮೊದಲು ನನ್ನ ಗೆಳೆಯರಾದ ಶ್ರೀ ಟೈಸನ್‌ರವರು ಎತ್ತಿದ ಸಂಗತಿಯನ್ನು ತೆಗೆದುಕೊಳ್ಳುತ್ತೇನೆ. ನನ್ನ ಸೂಚನೆಯನ್ನು ಬೆಂಬಲಿಸಿ ನಾನು ಮಾಡಿದ ಭಾಷಣದಲ್ಲಿ ಅಭ್ರಕದ ಹೆಚ್ಚುವರಿ ದಾಸ್ತಾನಿನ ಬಗ್ಗೆಯಾಗಲೀ ಅಥವಾ ಹೆಚ್ಚುವರಿ ಮೇಲು ತೆರಿಗೆ ಹಾಕುವ ಅಗತ್ಯದ ಬಗ್ಗೆಯಾಗಲೀ ಅಥವಾ ನ್ಯಾಯಮೂರ್ತಿ ಶ್ರೀ ರೂಬೆನ್‌ರವರ ವರದಿ ಬಗ್ಗೆಯಾಗಲೀ ನಾನು ಪ್ರಸ್ತಾಪ ಮಾಡಲಿಲ್ಲ. ಮಾನ್ಯರೆ, ಪ್ರಜ್ಞಾಪೂರ್ವಕವಾಗಿಯೇ ನಾನು ಈ ಅಂಶಗಳನ್ನು ಎತ್ತಲಿಲ್ಲ, ಅದಕ್ಕೆ ಕಾರಣ ಹೇಗೂ ನನ್ನ ಸ್ನೇಹಿತರಾದ ಶ್ರೀ ಟೈಸನ್‌ರು ಇದರ ಬಗ್ಗೆ ಪ್ರಶ್ನೆ ಕೇಳಿಯೇಕೇಳುತ್ತಾರೆ, ಆಗ ಉತ್ತರ ರೂಪದಲ್ಲಿ ಪ್ರಸ್ತಾಪಿಸೋಣವೆಂದು ಲೆಕ್ಕಾಹಾಕಿದ್ದೆ. ನಾನೇ ಮೊದಲು ಪ್ರಸ್ತಾಪ ಮಾಡಲಿಲ್ಲವೇಕೆಂದರೆ ಈ ಸದನದ ಸಮಯವನ್ನು ಉಳಿಸುವ ಮನಸ್ಸು ಕೂಡ ನನಗಿತ್ತು.

ಮಾನ್ಯರೆ, ವಸ್ತುಸ್ಥಿತಿ ಹೀಗಿದೆ : ಪ್ರೊ॥ ಆಧಾರ್‌ಕರ್‌ರವರ ಆಧಾರದ ಮೇಲೆ ಕಾರ್ಮಿಕ ಇಲಾಖೆ ಮತ್ತು ಭಾರತ ಸರ್ಕಾರ ಸಾಮಾಜಿಕ ಕಲ್ಯಾಣ ಕಾರ್ಯಗಳ ಬಗ್ಗೆ ಕ್ರಮ ಕೈಗೊಳ್ಳುವುದೆಂದು ನಿರ್ಧಾರವಾಗಿದ್ದರೂ ಸಹ, ಪ್ರೊ॥ ಆಧಾರ್‌ಕರ್‌ರವರ ವರದಿ ಬರುವುದಕ್ಕೆ ಬಹಳ ಮೊದಲೇ ಕಾರ್ಮಿಕ ಇಲಾಖೆ ಈ ಬಗ್ಗೆ ತೀರ್ಮಾನ ಮಾಡಿತ್ತು. ಕಾರ್ಮಿಕ ಇಲಾಖೆ ತೆಗೆದುಕೊಂಡ ನಿರ್ಧಾರಗಳನ್ನು ನ್ಯಾಯಮೂರ್ತಿ ರೂಬೆನ್‌ರವರು ಅಭ್ರಕದ ಕೈಗಾರಿಕೋದ್ಯಮದ ಬಗ್ಗೆ ತಯಾರಿಸಿರುವ ತಮ್ಮ ವರದಿಯಲ್ಲಿ ಸಂಪೂರ್ಣವಾಗಿ ಬೆಂಬಲಿಸಿರುವುದು ನನಗೆ ತುಂಬಾ ಸಂತಸ ತಂದಿದೆ.

ವಾಸ್ತವವಾಗಿ ರೂಬೆನ್‌ರವರು ಆ ವರದಿಯಲ್ಲಿ ತಯಾರಾದ ಅಥವಾ ರಫ್ತಾದ ಅಭ್ರಕದ ಮೇಲೆ ಸಾಮಾನ್ಯ ತೆರಿಗೆಯನ್ನು ಹಾಕಬೇಕು ಮತ್ತು ಈ ಸಾಮಾನ್ಯ ಮೇಲು ತೆರಿಗೆಯಿಂದ ವಸೂಲಾದ ಹಣದ ೫/೧೦ ಭಾಗವನ್ನು ಅಭ್ರಕದ ಗಣಿ ಕೆಲಸಗಾರರ ಕಲ್ಯಾಣ ಕಾರ್ಯಗಳಿಗಾಗಿ ಬಳಸಬೇಕೆಂದು ಶಿಫಾರಸು ಮಾಡಿರುತ್ತಾರೆ. ಹಾಗಾಗಿ ಈ ಕ್ರಮಗಳನ್ನು ನಾವು ಕೈಗೊಳ್ಳುವುದರ ಮೂಲಕ ಯಾವ ವಿಧದಲ್ಲೂ ನ್ಯಾಯಮೂರ್ತಿ ರೂಬೆನ್‌ರವರ ವರದಿಗೆ ವಿರುದ್ಧವಾಗಿ ಹೋಗುತ್ತಿಲ್ಲ. ಆದರೆ ಒಂದು ಬದಲಾವಣೆಯನ್ನು ನಾವು ಮಾಡಿಕೊಂಡಿದ್ದೇವೆ. ರೂಬೆನ್‌ರವರು ತಮ್ಮ ವರದಿಯಲ್ಲಿ ಸಲಹೆ ನೀಡಿರುವಂತೆ ಎಲ್ಲ ಕೆಲಸಗಳಿಗೂ ಒಂದೇ ಒಂದು ಮೇಲು ತೆರಿಗೆಯನ್ನು ವಿಧಿಸುವ ಬದಲು ಎರಡು ನಿಧಿಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ; ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ಒಂದು ಪ್ರತ್ಯೇಕವಾದ ನಿಧಿ, ಇನ್ನೊಂದು ನಿಧಿ ಕೈಗಾರಿಕೆಗೆ ಅಗತ್ಯ ಬೀಳಬಹುದಾದಂಥ ಆಡಳಿತಾತ್ಮಕ ಕ್ರಮಗಳನ್ನು ಜಾರಿಗೊಳಿಸಲು. ನಾವು ಈ ರೀತಿ ಎರಡು ಪ್ರತ್ಯೇಕವಾದ ನಿಧಿಗಳನ್ನು ಗೊತ್ತುಮಾಡಿರುವುದಕ್ಕೆ ಕಾರಣ, ಕಲ್ಯಾಣ ಕಾರ್ಯಗಳನ್ನು ನೋಡಿಕೊಳ್ಳಲು ಪ್ರತ್ಯೇಕವಾದ ಒಂದು ಏಜೆನ್ಸಿ ಇರುತ್ತದೆ, ಹಾಗೆಯೇ ಇನ್ನಿತರೆ ಕ್ರಮಗಳನ್ನು ಜಾರಿಗೊಳಿಸಿ ನೋಡಿಕೊಳ್ಳಲು ಅದಕ್ಕೂ ಪ್ರತ್ಯೇಕವಾದ ಏಜೆನ್ಸಿ ಇರುತ್ತದೆ. ಅಲ್ಲಿ ನನ್ನ ಗೌರವಾನ್ವಿತ ಮಿತ್ರ ಶ್ರೀ ಟೈಸನ್‌ರವರು ಗಮನಿಸಬಹುದಾದಂತೆ ಭಾರತ ಸರ್ಕಾರವು ಶ್ರೀ ರೂಬೆನ್‌ರ ವರದಿಗೆ ಸಂಪೂರ್ಣವಾಗಿ ಬದ್ಧವಾಗಿದೆ.

ಹೆಚ್ಚುವರಿ ಮೇಲು ತೆರಿಗೆಗೆ ಸಂಬಂಧಿಸಿದಂತೆ, ನನ್ನ ಸ್ನೇಹಿತರಿಗೆ ಇದು ವೇದ್ಯವಾಗುವಂತೆ, ನಾವು

ಮೊದಲು ನಿಗದಿಮಾಡಿದ್ದ ಪ್ರಮಾಣ ಬಹಳ ಕಡಿಮೆ ಇದ್ದಿತು. ರೂಬೆನ್ ವರದಿಯಲ್ಲಿ ಗೊತ್ತುಮಾಡಿದ್ದು ಪ್ರತಿಶತ ೬ ಎಂದು........

**ಶ್ರೀ ಜಾಫ್ರಿ ಡಬ್ಲ್ಯೂ ಟೈಸನ್ :** ಕಾರ್ಮಿಕರಿಗಾಗಿಯೋ ಅಥವ ಸಾಮಾನ್ಯವೋ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸಾಮಾನ್ಯ. ಮುಂದಿನ ಘಟ್ಟದಲ್ಲಿ ಕೂಲಂಕಷವಾಗಿ ಚರ್ಚಿಸಬೇಕಾದಂಥ ವಿಷಯ ಇದು. ಚರ್ಚೆ ಮಾಡಿ ಯಾವ ಪ್ರಮಾಣದ ಮೇಲು ತೆರಿಗೆಯನ್ನು ಹಾಕಿದರೆ ಕಲ್ಯಾಣ ಕಾರ್ಯಕ್ರಮಗಳು ಮತ್ತು ಇತರೆ ಕಾರ್ಯಗಳಿಗೆ ಸಾಕಾಗುತ್ತದೆ ಎಂದು ತೀರ್ಮಾನಿಸಬೇಕು.

**ದಿವಾನ್ ಚಮನ್‌ಲಾಲ್ :** ನನ್ನ ಗೌರವಾನ್ವಿತ ಗೆಳೆಯರು ಎಷ್ಟು ಮೊತ್ತವನ್ನು ನಿರೀಕ್ಷಿಸುತ್ತಿದ್ದಾರೆ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಸ್ವಲ್ಪ ತಾಳಿ, ನಾನು ಆ ವಿಷಯಕ್ಕೂ ಬರುತ್ತಿದ್ದೇನೆ. ಅಭ್ರಕದ ಹೆಚ್ಚುವರಿ ದಾಸ್ತಾನಿಗೆ ಸಂಬಂಧಿಸಿದ ಪ್ರಶ್ನೆಯನ್ನು ಕುರಿತು ಹೇಳುವುದಾದರೆ, ಈ ಸದನಕ್ಕೆ ನಾನು ತಿಳಿಸಬಯಸುವುದೇನೆಂದರೆ ಭಾರತ ಸರ್ಕಾರ ಮತ್ತು ಮಹಾಪ್ರಭುಗಳವರ ಘನ ಸರ್ಕಾರಗಳ ನಡುವೆ ಸದರಿ ಸರ್ಕಾರ ಮತ್ತು ಸಂಯುಕ್ತ ಸಂಸ್ಥಾನಗಳು ಹೊಂದಿರುವ ಅಭ್ರಕದ ಹೆಚ್ಚುವರಿ ದಾಸ್ತಾನನ್ನು ವಿಲೇವಾರಿ ಮಾಡುವ ಬಗ್ಗೆ ದೀರ್ಘಕಾಲದ ಮಾತುಕತೆ ನಡೆಯುತ್ತಿದೆ. ಈಗ ನಾವು ಒಂದು ಒಪ್ಪಂದಕ್ಕೆ ಬಂದಿದ್ದು ಅದರ ಪ್ರಕಾರ ಹೆಚ್ಚುವರಿ ಅಭ್ರಕದ ದಾಸ್ತಾನನ್ನು ವಿಲೇವಾರಿ ಮಾಡಿದರೆ ಅಭ್ರಕದ ಕೈಗಾರಿಕೆಗೆ ಯಾವ ಬಗೆಯ ತೊಂದರೆಯೂ ಆಗುವುದಿಲ್ಲವೆಂದು ನಾನು ತಿಳಿಸಲು ಹರ್ಷಿಸುತ್ತೇನೆ: ಮಾತುಕತೆ ಅಂತಿಮ ಘಟ್ಟವನ್ನು ಮುಟ್ಟಿದ್ದು ಇನ್ನೊಂದು ಸ್ವಲ್ಪ ದಿನಗಳಲ್ಲಿ ಪತ್ರಿಕಾ ಪ್ರಕಟಣೆಯ ಮೂಲಕ ಭಾರತ ಸರ್ಕಾರ ಮತ್ತು ಮಹಾಪ್ರಭುಗಳ ಘನ ಸರ್ಕಾರಗಳ ನಡುವೆ ಆಗಿರುವ ಏರ್ಪಾಟಿನ ಬಗ್ಗೆ ಈ ಉದ್ಯಮಕ್ಕೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗುವುದು. ನಾನು ಹೇಳುವುದೆಂದರೆ ಈ ಏರ್ಪಾಟಿಗೆ ಅಭ್ರಕದ ಉದ್ದಿಮೆಯ ಸಂಪೂರ್ಣವಾದ ಬೆಂಬಲವಿದೆ.

ಈ ಸದನಕ್ಕೆ ತಿಳಿಸುವುದೇನೆಂದರೆ, ಉದ್ಯಮದ ಸಂಪೂರ್ಣ ಒಪ್ಪಿಗೆ ಪಡೆದೇ ಈ ಕ್ರಮವನ್ನು ಕೈಗೊಂಡಿದ್ದೇವೆ. ೨೯ನೇ ಏಪ್ರಿಲ್, ೧೯೪೪ರಂದು ನಡೆದ ಒಂದು ಸಮ್ಮೇಳನದಲ್ಲಿ ನಾನು ಈ ವಿಷಯವನ್ನು ಮೊದಲು ಪ್ರಸ್ತಾಪ ಮಾಡಿದೆ. ಈ ಸಮಾರಂಭದ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆ ಮತ್ತು ಅಭ್ರಕದ ಉದ್ಯಮದ ಪ್ರತಿನಿಧಿಗಳೂ ಸಹ ಅಲ್ಲಿದ್ದರು. ಕಲ್ಯಾಣ ನಿಧಿಯೊಂದರ ಸ್ಥಾಪನೆಯಾಗುತ್ತದೆ ಎಂದು ತಿಳಿದು ಇಡೀ ಉದ್ಯಮವೇ ಈ ಕ್ರಮವನ್ನು ಸ್ವಾಗತಿಸಿತು ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಧನ್‌ಬಾದ್‌ನಲ್ಲಿ ಕಲ್ಲಿದ್ದಲು ಗಣಿ ಕಲ್ಯಾಣ ಆಯುಕ್ತರವರ ಅಧ್ಯಕ್ಷತೆಯಲ್ಲಿ ೯ನೇ ನವೆಂಬರ್, ೧೯೪೫ರಲ್ಲಿ ನಡೆದ ಸಮ್ಮೇಳನದಲ್ಲಿ ಈ ವಿಷಯ ಪುನಃ ಪ್ರಸ್ತಾಪವಾಯಿತು. ಅಲ್ಲಿಯೂ ಕೂಡ ಅಭ್ರಕದ ಉತ್ಪಾದಕರು ಈ ಸಲಹೆಯನ್ನು ಒಪ್ಪಿಕೊಂಡರು. ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ೧೯ನೇ ಡಿಸೆಂಬರ್, ೧೯೪೫ರಂದು ಧನ್‌ಬಾದ್‌ನಲ್ಲೇ ಮೂರನೆ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಸರ್ಕಾರ ಮತ್ತು ಅಭ್ರಕದ ಗಣಿ ಮಾಲೀಕರುಗಳ ನಡುವೆ ಒಂದು ಅಂತಿಮವಾದ ಒಪ್ಪಂದಕ್ಕೆ ಬರಲಾಯಿತು. ಅಭ್ರಕದ ಉದ್ಯಮದ ಮೇಲೆ ನಾವು ಮೇಲು ತೆರಿಗೆ ವಿಧಿಸುವ ಸಮಾಚಾರ ತಿಳಿದ ನಂತರವೂ ಸಹ ಕಳೆದ ಕೆಲವು ತಿಂಗಳುಗಳಿಂದೀಚೆಗೆ ಮೂರು ಹೊಸ ಕಂಪನಿಗಳು ಅಭ್ರಕ ತೆಗೆಯಲು ಮುಂದೆ ಬಂದಿವೆ. ಮದ್ರಾಸ್‌ನ ಮೈಕಾಂಟಿಕ್ ಮತ್ತು ಅಭ್ರಕದ ಉತ್ಪತ್ತಿ ಕಂಪನಿ ನಿಯಮಿತ, ೫ ಲಕ್ಷ ರೂಪಾಯಿಗಳ ಅಧಿಕೃತ ಬಂಡವಾಳದೊಂದಿಗೆ ಮುಂದೆ ಬಂದಿದೆ. ಹಾಗೆಯೇ ಮತ್ತೆ ೫ ಲಕ್ಷ ರೂಪಾಯಿಗಳ ಅಧಿಕೃತ ಬಂಡವಾಳದೊಂದಿಗೆ ಕಲ್ಕತ್ತೆಯ ಸರಸ್ವತಿ ಅಭ್ರಕದ ಉದ್ಯಮ ನಿಯಮಿತ

ಮುಂದೆ ಬಂದಿದೆ. ಇನ್ನು ಕ್ರಿಶ್ಚಿಯನ್ ಗಣಿ ಉದ್ಯಮ ನಿಯಮಿತದವರು ಮೈಕಾ ಗಣಿಗಾರಿಕೆಗೆ ಮತ್ತು ಒಂದು ಮೈಕಾನೈಟ್ ಕಾರ್ಖಾನೆ ತೆರೆಯಲು ಬಂಡವಾಳಕ್ಕಾಗಿ ನಿರೀಕ್ಷಿಸುತ್ತಿದ್ದಾರೆ. ಇದೆಲ್ಲದರಿಂದ ಗೊತ್ತಾಗುವ ಅಂಶವೆಂದರೆ ಹೊಸದಾಗಿ ವಿಧಿಸುವ ಮೇಲು ತೆರಿಗೆಯಿಂದ ಮಾಲೀಕರು ಅಧೀರರಾಗಿಲ್ಲ, ಅಷ್ಟೇ ಅಲ್ಲ, ಕಲ್ಯಾಣ ನಿಧಿಗಾಗಿ ಈ ತೆರಿಗೆಯನ್ನು ಕೊಡಬೇಕಾಗಿರುವುದರಿಂದ ಅವರು ಇದಕ್ಕೆ ಹಿಂದೇಟು ಹೊಡೆಯುತ್ತಿಲ್ಲ.

ನಮ್ಮ ಮಿತ್ರರಾದ ದಿವಾನ್ ಚಮನ್ ಲಾಲ್ ಅವರ ವಿಷಯಕ್ಕೆ ಬರುವುದಾದರೆ ಈ ವರದಿಯ ಪ್ರತಿಯೊಂದನ್ನು ಅವರು ಈಗಾಗಲೇ ಕೇಳಿದ್ದಾರೆ, ಆದರೆ ಈ ಘಟ್ಟದಲ್ಲಿ ನಾನು ಅದನ್ನು ಒದಗಿಸಲಾಗದ್ದಕ್ಕೆ ಅವರ ಕ್ಷಮೆ ಕೋರುತ್ತೇನೆ. ಅದು ಪೂರ್ತಿ ಮರೆತೇ ಹೋಯಿತೆಂದು ನಾನು ಹೇಳಬೇಕು. ಆದರೆ ಒಂದು ವಿಷಯವೆಂದರೆ ಅವರು ತಮ್ಮ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವಾಗ ಎಲ್ಲಿಯೂ ತಪ್ಪಲಿಲ್ಲ, ಸಮರ್ಪಕವಾಗಿಯೇ ಮಂಡಿಸಿದ್ದಾರೆ. ಒಂದು ವೇಳೆ ವರದಿ ಅವರ ಮುಂದಿದ್ದ ಪಕ್ಷದಲ್ಲಿ ಪ್ರಾಯಶಃ ಅವರು ಈಗ ಮಾಡಿದ ಭಾಷಣಕ್ಕಿಂತ ದೀರ್ಘವಾದ ಭಾಷಣವನ್ನು ಮಾಡುತ್ತಿದ್ದರು.

ಈ ಮೇಲು ತೆರಿಗೆಯಿಂದ ಸಂಗ್ರಹವಾಗಬಹುದಾದ ಹಣವೆಷ್ಟೆಂದು ಅವರು ಕೇಳಿದ ಪ್ರಶ್ನೆಗೆ ನಾನು ಸದನಕ್ಕೆ ಸಮಂಜಸವಾದ ಉತ್ತರ ಕೊಡಲಾರೆ, ಏಕೆಂದರೆ ಆ ಅಂಶ ನಮಗೇ ಇನ್ನೂ ಸ್ಪಷ್ಟವಾಗಿಲ್ಲ. ಮೈಕಾ ಉತ್ಪಾದನೆ ಒಂದೇ ಸಮನೆ ಆಗುತ್ತಿದೆ ಎನ್ನುವುದು ನಿಜ. ಉದಾಹರಣೆಗೆ ನನ್ನ ಬಳಿ ಈಗ ೧೯೩೪ ರಿಂದ ೧೯೪೪ರ ವರೆಗಿನ ಅಂಕಿಅಂಶ ಇದೆ. ೧೯೩೪ರಲ್ಲಿ ಉತ್ಪಾದನೆಯಾದ ಅಭ್ರಕದ ಬೆಲೆ ೬,೩೦,೫೨೫ ರೂಪಾಯಿಗಳು ಮತ್ತು ೧೯೪೪ರಲ್ಲಿ ಉತ್ಪಾದನೆಯಾದ ಅಭ್ರಕದ ಬೆಲೆ ೨,೭೩,೦೧,೪೫೮ ಹಾಗೂ ಇವೆರಡರ ನಡುವಿನ ಕಾಲದಲ್ಲಿ ಬೇರೆ ಬೇರೆ ಪ್ರಮಾಣದ ಅಭ್ರಕದ ಉತ್ಪಾದನೆಯಾಗಿದೆ. ಆದ್ದರಿಂದ ಸದನಕ್ಕೆ ಯಾವುದೇ ಒಂದು ನಿಗದಿತ ಅಂಕಿಅಂಶ ಕೊಡುವುದು ಉಚಿತವೆನಿಸಲಾರದು. ಸಮರೋತ್ತರ ಕಾಲದಲ್ಲಿ ಉದ್ಯಮವು ಸದೃಢವಾಗುವಂತೆ ನಾವು ಸಮಯಾವಕಾಶವನ್ನು ಕೊಡಬೇಕಾದುದು ಅಗತ್ಯ. ಆದರೆ ೧೯೪೪ನೇ ಇಸವಿಯನ್ನು ಗಮನದಲ್ಲಿರಿಸಿಕೊಂಡು ಲೆಕ್ಕಹಾಕಿ ಹೇಳುವುದಾದರೆ ಸಂಗ್ರಹವಾಗಬಹುದಾದ ಮೇಲು ತೆರಿಗೆ ಮೊತ್ತ ಸುಮಾರು ೫ ಲಕ್ಷ ರೂಪಾಯಿಗಳಾಗಬಹುದು. ಇದೇನು ಅಗಾಧವಾದ ಮೊತ್ತವಲ್ಲವೆಂದು ನನಗೆ ಗೊತ್ತು. ವೈಯಕ್ತಿಕವಾಗಿ ನಾನು ಹೋರಾಟ ಮಾಡುತ್ತಿರುವುದು ಒಂದು ತತ್ವಕ್ಕಾಗಿ. ಕಾಲಾನಂತರದಲ್ಲಿ ಈ ತೆರಿಗೆ ಸಾಲದು ಎಂದು ಕಂಡುಬಂದರೆ ಈ ಸ್ಥಾನದಲ್ಲಿ ಇರುವ ಸರ್ಕಾರಿ ಸದಸ್ಯರು ಬೇಕಾದರೆ ತೆರಿಗೆ ಪ್ರಮಾಣವನ್ನು ಹೆಚ್ಚಿಸಿ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಯೋಜನೆಯನ್ನು ರೂಪಿಸಿಕೊಳ್ಳಬಹುದು.

ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ ಅಭ್ರಕದ ಕೊಳ್ಳುವ ಯೋಜನೆಯ ಬಗ್ಗೆ ನಾನು ಹೇಳುವುದೇನೆಂದರೆ ನಾವು ಚರ್ಚಿಸುತ್ತಿರುವ ಮಸೂದೆಗೆ ಅದು ನೇರವಾಗಿ ಸಂಬಂಧಪಡದಿರುವುದರಿಂದ ಅದರ ವಿವರ ಸದ್ಯಕ್ಕೆ ಅಪ್ರಸ್ತುತ. ಆದರೆ ನನ್ನ ಸ್ನೇಹಿತರಿಗೆ ನಾನು ಇಷ್ಟು ಮಾತ್ರ ಹೇಳಬಲ್ಲೆ : ಅದೇನೆಂದರೆ ನಮ್ಮ ದೇಶದಲ್ಲಿ ಅಭ್ರಕದ ಉತ್ಪಾದನೆಯಲ್ಲಿ ತೊಡಗಿರುವ ಉದ್ಯಮಿಗಳು ಇದುವರೆಗೆ ಯಾವ ನಷ್ಟವನ್ನೂ ಅನುಭವಿಸಿಲ್ಲ. ಅಷ್ಟೇ ಅಲ್ಲ, ಅಷ್ಟಿಷ್ಟು ಲಾಭವನ್ನೂ ಗಳಿಸಿದ್ದಾರೆ.

ನನ್ನ ಸ್ನೇಹಿತರಾದ ದಿವಾನ್ ಚಮನ್ ಲಾಲ್‌ರು ಗಣಿಗಳ ಕಾಯಿದೆಯ ಆಡಳಿತವನ್ನು ಕುರಿತು ತಮ್ಮ ಭಾಷಣದ ಬಹುಭಾಗವನ್ನು ವಿನಿಯೋಗಿಸಿದರು. ಅವರು ಬಾಲಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರ ವಿಷಯವಾಗಿಯೂ ಮಾತನಾಡಿದರು. ನಾನು ಮೊದಲೇ ಹೇಳಿದ ಹಾಗೆ ನನಗೆ ಈ ಸಮಸ್ಯೆಗಳೆಲ್ಲದರ ಅರಿವಿದೆ. ಶ್ರೀ ಆಧಾರ್‌ಕರ್‌ರವರು ಅಭ್ರಕದ ಗಣಿ ಕೆಲಸಗಾರರ ಸ್ಥಿತಿಗತಿಗಳ ಬಗ್ಗೆ

ಬರೆದಿರುವ ವರದಿಯಲ್ಲಿ ಯಾವ ಯಾವ ದೋಷಗಳನ್ನು ಗುರುತು ಹಾಕಿರುವರೋ ಅವುಗಳನ್ನು ನಿವಾರಣೆ ಮಾಡಲು ಕಾರ್ಮಿಕ ಇಲಾಖೆ ಶಾಸನವನ್ನು ರೂಪಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಸರ್ಕಾರದ ಬಳಿ ಸಾಕಷ್ಟು ಸಮಯವಿದ್ದ ಪಕ್ಷದಲ್ಲಿ ಈ ಅಧಿವೇಶನದಲ್ಲೇ ಈ ದೋಷಗಳನ್ನು ನಿವಾರಿಸುವಂಥ ಮಸೂದೆಯನ್ನು ಹೊರಡಿಸುತ್ತಿತ್ತು. ವಿಳಂಬ ಮಾಡದೆ ನಾವು ಈ ಸಮಸ್ಯೆಗೆ ಉತ್ತರ ಕಂಡುಕೊಳ್ಳುವೆವೆಂಬ ಭರವಸೆ ನನಗೆ ಖಂಡಿತಾ ಇದೆ.

ನನ್ನ ಸ್ನೇಹಿತರಾದ ಶ್ರೀ ರಾಮ್‌ನಾರಾಯಣ್ ಸಿಂಗ್ ಅವರು ಎತ್ತಿದ ಅಂಶಗಳಿಗೆ ಬರುವುದಾದರೆ, ಅವರು ಒಳ್ಳೆ ಪ್ರಶ್ನೆಯನ್ನೇ ಎತ್ತಿದ್ದಾರೆ – ಅದೇಂದರೆ ಈ ಕ್ರಮ ತಡವಾಗಿ ಜಾರಿಯಾಗುತ್ತಿರುವ ಕ್ರಮ ಎಂದು. ಅವರಂದರು–ಅಭ್ರಕದ ಉದ್ಯಮ ಮೊದಲಿನಿಂದಲೂ ಇದೆ, ಉದ್ಯಮದಲ್ಲಿ ದೋಷಗಳೂ ಲಾಗಾಯ್ತಿನಿಂದ ಇವೆ, ಆದರೆ ಸರ್ಕಾರ ಮಾತ್ರ ಏನೂ ಮಾಡಿಲ್ಲ. ನಾನವರಿಗೆ ಹೇಳಬಯಸುತ್ತೇನೆ, ಒಂದು ವಿಷಯವನ್ನು ಹೇಳುವುದನ್ನು ಅವರು ಮರೆತಿದ್ದಾರೆ, ಅದೇಂದರೆ, ಅವರೂ ಕೂಡ ಲಾಗಾಯ್ತಿನಿಂದ ಇಲ್ಲಿ ಇದ್ದಾರೆ. ಈ ಮೊದಲೇ ಅವರು ಒಮ್ಮೆಯಾದರೂ ಈ ವಿಷಯವನ್ನು ಪ್ರಸ್ತಾಪ ಮಾಡಿ ಸರ್ಕಾರ ಮತ್ತು ಉದ್ಯಮಿಗಳ ಆತ್ಮಸಾಕ್ಷಿಯನ್ನು ಎಚ್ಚರಿಸಿದ್ದರೆ, ಅವರು ಇಂದು ಎತ್ತಿರುವ ಪ್ರಶ್ನೆಗೆ ಅವಕಾಶವೇ ಇರುತ್ತಿರಲಿಲ್ಲ. ಆದರೆ ಮಾಡದೇ ಇರುವುದಕ್ಕಿಂತ ವಿಳಂಬವಾಗಿಯಾದರೂ ಮಾಡುವುದು ಉತ್ತಮ ಎಂಬ ತತ್ವ ಅವರಿಗೂ ಗೊತ್ತು.

ಈ ನಿಧಿಯ ಉಸ್ತುವಾರಿ ನೋಡಿಕೊಳ್ಳುವ ವಿಷಯದಲ್ಲಿ ಅವರು ಇದನ್ನು ಪ್ರಾಂತೀಯ ಸರ್ಕಾರಗಳಿಗೇ ಬಿಡುವುದು ಸೂಕ್ತವೆಂದು ತಿಳಿಸಿದ್ದಾರೆ. ಆ ತತ್ವವನ್ನು ನಾನು ಸ್ವೀಕರಿಸಲಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಶಾಸನ ಕೇಂದ್ರೀಯ ಶಾಸನ. ಈ ಶಾಸನಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ. ನಿಧಿ ಸಂಗ್ರಹವಾಗಿರುವುದು ಕೇಂದ್ರೀಯ ಕಾನೂನಿನಿಂದ. ನಿಧಿ ಸಂಗ್ರಹವಾಗಿರುವುದು ಒಂದು ನಿಗದಿಯಾದ ಉದ್ದೇಶಕ್ಕಾಗಿ. ಈ ಹಿನ್ನೆಲೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ ತಿಳಿಯುತ್ತದೆ ಈ ನಿಧಿಯನ್ನು ಇಡಿಯಾಗಿ ಪ್ರಾಂತೀಯ ಸರ್ಕಾರದ ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡಲು ಕೊಡುವುದು ಉಚಿತವಲ್ಲ ಎಂಬುದು. ಕಾರಣವೆಂದರೆ, ಅವರು ಈ ನಿಧಿಯನ್ನು ಸಾಮಾನ್ಯ ಸಂಪತ್ತಿನಲ್ಲಿ ವಿಲೀನಗೊಳಿಸಿ ವಿನಿಯೋಗಮಾಡುವ ಸಾಧ್ಯತೆ ಇದೆ. ಇದು ಸಲ್ಲದು. ಈ ನಿಧಿಯ ಜವಾಬ್ದಾರಿ ಕೇಂದ್ರ ಸರ್ಕಾರದ್ದು, ಈ ನಿಧಿ ಒಂದು ಗೊತ್ತಾದ ಉದ್ದೇಶಕ್ಕೆ ವಿನಿಯೋಗವಾಗಬೇಕಾಗಿರುವುದಿರಿಂದ ಈ ಟ್ರಸ್ಟನ್ನು ನಿರ್ವಹಿಸಬೇಕಾದದ್ದು ಭಾರತ ಸರ್ಕಾರದ ಕರ್ತವ್ಯ. ಆದ ಕಾರಣ, ಕೇಂದ್ರ ಸರ್ಕಾರವು ಆರಂಭದಿಂದ ಕೊನೆಯತನಕ ಈ ನಿಧಿಯ ಮೇಲೆ ನಿಗಾ ಇಡಬೇಕಾದದ್ದು ಅಪೇಕ್ಷಣೀಯವಷ್ಟೇ ಅಲ್ಲ, ಅತ್ಯಾವಶ್ಯಕವೂ ಹೌದು. ವಸ್ತುಸ್ಥಿತಿ ಹೀಗಿರಲಾಗಿ, ನನ್ನ ಗೌರವಾನ್ವಿತ ಗೆಳೆಯರು ಪ್ರಾಯಶಃ ಕಲ್ಲಿದ್ದಲು ಗಣಿಗಳ ಕಾರ್ಮಿಕ ಕಲ್ಯಾಣ ನಿಧಿ ಉಸ್ತುವಾರಿ ಹೇಗೆ ಎಂಬುದನ್ನು ಕೂಲಂಕಷವಾಗಿ ಅಧ್ಯಯನ ಮಾಡಿಲ್ಲವೆಂದು ತಿಳಿಯುತ್ತೇನೆ. ಆದುದರಿಂದ ಅದರ ಬಗ್ಗೆ ನಾನು ಸ್ವಲ್ಪ ವಿವರಿಸಿ ಹೇಳಬೇಕು, ಏಕೆಂದರೆ ಈ ನಿಧಿಯು ಕಲ್ಲಿದ್ದಲು ಗಣಿಗಳ ಕಾರ್ಮಿಕ ಕಲ್ಯಾಣ ನಿಧಿಯ ಆಡಳಿತದ ಮಾದರಿಯಲ್ಲೇ ಸ್ಥಾಪಿತವಾಗಿರುವಂಥದು. ಕಲ್ಲಿದ್ದಲು ಗಣಿಗಳ ಕಲ್ಯಾಣ ನಿಧಿಯ ಬಗ್ಗೆಯಾದರೆ ಅದರ ಆಡಳಿತವನ್ನು ನೋಡಿಕೊಳ್ಳುವವರು ಪ್ರಾಂತೀಯ ಸರ್ಕಾರದಿಂದ ನೇಮಕವಾಗುವ ಒಬ್ಬ ಆಯುಕ್ತರು. ವಸ್ತುಸ್ಥಿತಿಯನ್ನು ಅವರಿಗೆ ತಿಳಿಸಬೇಕೆಂದರೆ ಸದ್ಯದಲ್ಲಿ ಕಲ್ಲಿದ್ದಲು ಗಣಿಗಳ ಕಲ್ಯಾಣ ನಿಧಿಯನ್ನು ನೋಡಿಕೊಳ್ಳುತ್ತಿರುವವರು ಬಿಹಾರ ಸರ್ಕಾರದಿಂದ ನೇಮಿತರಾದ ಒಬ್ಬ ಅಧಿಕಾರಿ. ಹಾಗೆಯೇ ಅಭ್ರಕದ ನಿಧಿಯನ್ನು ನೋಡಿಕೊಳ್ಳಲೂ ಸಹ ಒಬ್ಬ ಅಧಿಕಾರಿಯನ್ನು ನೇಮಿಸುವಂತೆ ನಾವು ಬಿಹಾರ

ಸರ್ಕಾರವನ್ನು ಕೇಳಿಕೊಳ್ಳುತ್ತೇವೆ. ಮಸೂದೆಯಲ್ಲಿ ನಮೂದಾಗಿರುವಂತೆ ಸ್ಥಳೀಯ ಪರಿಸ್ಥಿತಿಯನ್ನು ಚೆನ್ನಾಗಿ ಅರಿತಿರುವ ಅಭ್ರಕದ ಉದ್ಯಮದ ಬಿಹಾರ ಮತ್ತು ಮದರಾಸು ಪ್ರತಿನಿಧಿಗಳನ್ನು ಈ ನಮ್ಮ ಸಮಿತಿಯಲ್ಲಿಯೂ ಸೇರಿಸುತ್ತೇವೆ. ಮುಂದುವರಿದು ಕಲ್ಲಿದ್ದಲು ಗಣಿಗಳ ಕ್ಷೇಮನಿಧಿಯ ಸಂವಿಧಾನದ ಪ್ರಕಾರ ಪ್ರಾಂತೀಯ ಸರ್ಕಾರಗಳು ಸಲಹಾ ಸಮಿತಿಯಲ್ಲಿರಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಬಹುದೆಂದು ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗುವುದು. ಈ ಸಮಿತಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತವೆ, ಕಾರ್ಯಸೂಚಿಯನ್ನು ತಯಾರಿಸಿ ಸಮಿತಿಯ ಸಲಹೆಯನ್ನು ಬೇಡಲಾಗುವುದು. ಉತ್ಪಾದಕರು, ಮಾಲೀಕರು, ಕಾರ್ಮಿಕರು ಮತ್ತು ಪ್ರಾಂತೀಯ ಸರ್ಕಾರಗಳಿಂದಲೂ ಜನರನ್ನು ಆಹ್ವಾನಿಸಲಾಗುವುದು. ಸಲಹಾ ಸಮಿತಿಯ ಮುಂದೆ ವಾರ್ಷಿಕ ಅಂದಾಜನ್ನು ಮಂಡಿಸಲಾಗುವುದು. ಈ ವಿಷಯದಲ್ಲೂ ಸಹ ಅವರ ಸಲಹೆ ಪಡೆಯಲಾಗುತ್ತದೆ. ಅವರ ಸಲಹೆಯನ್ನು ಪಡೆದ ನಂತರ ಆ ಪ್ರಕಾರವಾಗಿ ಬೇರೆ ಬೇರೆ ಉದ್ದೇಶಗಳಿಗಾಗಿ ಮುಡಿಪಾದ ಹಣವನ್ನು ಬಳಸಲು ಪ್ರಾರಂಭಮಾಡಲಾಗುವುದು.

ಹೀಗಿರುವುದರಿಂದ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಏಕಪಕ್ಷೀಯವಾದ ಆಡಳಿತ ನಡೆಯುವುದಿಲ್ಲವೆಂದು ನನ್ನ ಸ್ನೇಹಿತರಾದ ಶ್ರೀ ರಾಮ್‌ನಾರಾಯಣ್ ಸಿಂಗ್ ಅವರು ಮನಗಾಣುವರೆಂದು ಭಾವಿಸುವೆ. ಇಲ್ಲಿ ನಿಜವಾಗಿ ವಿಕೇಂದ್ರೀಕರಣವಾಗಿದೆ, ಈ ನಿಧಿಯ ಉಸ್ತುವಾರಿಯಲ್ಲಿ ಉತ್ಪಾದಕರು, ಕಾರ್ಮಿಕರು ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ನಿಜವಾದ ಸಹಕಾರವಿರುವುದನ್ನು ತಿಳಿಯಬಹುದು. ಮಾನ್ಯರೆ, ಈ ಮಸೂದೆಗೆ ಸಂಬಂಧಿಸಿದಂತೆ ನಾನು ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿರುವುದರಿಂದ ಇನ್ನು ಇದರ ಬಗ್ಗೆ ಹೆಚ್ಚು ಲಂಬಿಸುವ ಆವಶ್ಯಕತೆಯಿಲ್ಲವೆಂದು ಭಾವಿಸುತ್ತೇನೆ.

**ಅಧ್ಯಕ್ಷರು :** ಪ್ರಶ್ನೆ ಇದು :

"ಈ ಮಸೂದೆಯನ್ನು ಈ ಕೆಳಕಂಡಂಥ ಮಹನೀಯರನ್ನೊಳಗೊಂಡ ಒಂದು ಪರಿಶೀಲನಾ ಸಮಿತಿಯ ಮುಂದೆ ತರುವುದು; ಆ ಮಹನೀಯರುಗಳೆಂದರೆ, ಗೌರವಾನ್ವಿತ ಸರ್ ಅಶೋಕ್ ರಾಯ್, ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕುಮಾರಿ ಮಣಿಬೆನ್ ಕರಾ, ಶ್ರೀ ಎಸ್.ಸಿ. ಜೋಶಿ, ಬಾಬು ರಾಮ್‌ನಾರಾಯಣ್ ಸಿಂಗ್, ಶ್ರೀ ಆರ್. ವೆಂಕಟಸುಬ್ಬ ರೆಡ್ಡಿಯಾರ್, ಶ್ರೀ ಗೌರಿಶಂಕರ್ ಕರಣ್ ಸಿಂಗ್, ಶ್ರೀ ಎ. ಕರುಣಾಕರ ಮೆನನ್, ಪ್ರೊ॥ ಎನ್.ಜಿ. ರಂಗಾ, ಶ್ರೀ ಜಾಫ್ರಿ ಡಬ್ಲ್ಯೂ. ಡೈಸನ್, ಶ್ರೀ ಮದನ್‌ಧಾರಿ ಸಿಂಗ್, ಡಾ॥ ಸರ್ ಜಿಯಾವುದ್ದೀನ್ ಅಹ್ಮದ್, ಶ್ರೀ ಖಾನ್ ಬಹದ್ದೂರ್ ಹಾಫಿಜ, ಶ್ರೀ ಎಂ. ಫಜನ್‌ಫರುಲ್ಲಾ, ಶ್ರೀ ಮುಹಮ್ಮದ್ ನೌಮಾನ್ ಮತ್ತು ಈ ಮಸೂದೆಯ ಸೂಚಕರು. ೧೨ನೇ ಏಪ್ರಿಲ್, ೧೯೪೬ರ ಹೊತ್ತಿಗೆ ವರದಿ ಕಳಿಸುವಂತೆ ಸೂಚನೆ ನೀಡಿ ಸಮಿತಿಯ ಸಭೆ ಸೇರಲು ಕನಿಷ್ಠ ಪಕ್ಷ ೫ ಮಂದಿ ಸದಸ್ಯರಾದರೂ ಇರಬೇಕೆಂದು ತಿಳಿಸುವುದು."

ಈ ಸೂಚನೆಯನ್ನು ಅಂಗೀಕರಿಸಲಾಯಿತು.

# ೬೬
# ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಮಸೂದೆ *

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) :

ಮಾನ್ಯ ಅಧ್ಯಕ್ಷರೆ,

**"**ಕೈಗಾರಿಕಾ ವಲಯದಲ್ಲಿರುವ ಯಜಮಾನರು ತಮ್ಮ ಉದ್ಯೋಗದ ಸ್ಥಿತಿಯನ್ನು ನಿರೂಪಿಸುವ ಬಗೆಗಿನ ಈ ಮಸೂದೆಯನ್ನು ಪರಿಗಣಿಸಬೇಕೆಂದು**"** ಸೂಚಿಸುತ್ತೇನೆ.

ಮಾನ್ಯರೆ, ಇದು ಸರಳವಾದ ಕ್ರಮವಾಗಿದೆ, ಹಾಗೂ ನನಗೆ ತಿಳಿದಿರುವಂತೆ ವಿವಾದಾತೀತವಾದ ಕ್ರಮವೂ ಆಗಿದೆ. ಈ ಮಸೂದೆಯ ಉದ್ದೇಶವೆಂದರೆ ಯಾವುದೇ ಒಂದು ಸಂಸ್ಥೆಯು ತನ್ನ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಯಾವ ಷರತ್ತು ಮತ್ತು ನಿಬಂಧನೆಗಳ ಆಧಾರದ ಮೇಲೆ ನಡೆಯುತ್ತಿದೆಯೆಂಬುದನ್ನು ತಿಳಿಯುವುದು. ಇದಕ್ಕಾಗಿಯೇ ನೇಮಿತರಾದ ಒಬ್ಬ ಅಧಿಕೃತ ಅಧಿಕಾರಿಯಿಂದ ಸಂಬಂಧಪಟ್ಟ ಸಂಸ್ಥೆ ದೃಢೀಕರಣ ಪತ್ರ ಪಡೆದಿರಬೇಕು. ಷರತ್ತು ಮತ್ತು ನಿಬಂಧನೆಗಳು ಒಂದು ಭಾಗವಾದರೆ ಅವು ಸಂಸ್ಥೆಯಲ್ಲಿ ಕಾರ್ಯರೂಪಕ್ಕೆ ಬಂದಿವೆಯೇ ಎಂಬುನ್ನು ಖಚಿತಪಡಿಸಿಕೊಳ್ಳುವುದು ಇನ್ನೊಂದು ಭಾಗ. ಇವೆರಡರ ವ್ಯತ್ಯಾಸವನ್ನು ತಿಳಿಯುವುದೇ ಈ ಮಸೂದೆಯ ಉದ್ದೇಶವಾಗಿದೆ. ಪ್ರತಿಯೊಬ್ಬ ಉದ್ಯಮಿಯು ತನ್ನ ಉದ್ಯಮಕ್ಕೆ ಸಂಬಂಧಿಸಿದಂತೆ ತನ್ನ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸುವ ಅಧಿಕಾರವುಳ್ಳವನಾಗಿರುತ್ತಾನೆ ಎಂದು ಈ ಮಸೂದೆ ಒಪ್ಪಿಕೊಳ್ಳುತ್ತದೆ. ಈ ಮಸೂದೆಯಲ್ಲಿ ತಿಳಿಸಿರುವುದೇನೆಂದರೆ, ಯಾವನೇ ಒಬ್ಬ ಉದ್ಯಮಿ ತನ್ನ ಉದ್ಯೋಗಿಗಳಿಗೆ ಒಡ್ಡುವ ಷರತ್ತು ಮತ್ತು ನಿಬಂಧನೆಗಳನ್ನು ಒಂದು ದಾಖಲಾತಿ ಪುಸ್ತಕದಲ್ಲಿ ದಾಖಲುಮಾಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿ ಈ ಷರತ್ತುಗಳ ಅನುಷ್ಠಾನವನ್ನು ಅರಿಯಲು ಈ ದಾಖಲೆಯೇ ಮೂಲಾಧಾರವಾಗಬೇಕು. ಇದೇ ವಿಷಯವನ್ನು ನಾನು ಇನ್ನೊಂದು ರೀತಿ ಹೇಳಬಹುದಾದರೆ, ಪುರಾವೆಯ ಕಾನೂನು ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಅದನ್ನು ಈ ಮಸೂದೆ ಮಂಡಿಸುತ್ತದೆ. ಇದರ ಪ್ರಕಾರ ಯಾವನೇ ಒಬ್ಬ ಉದ್ಯಮಿ ತನ್ನ ಉದ್ಯೋಗಿಗಳಿಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ನಿರ್ಧಾರ ತಾಳಲು ಅಧಿಕೃತ ಅಧಿಕಾರಿಯಿಂದ ಪಡೆದ ಲಿಖಿತ ದಾಖಲೆಯೇ ಪುರಾವೆ. ಇದನ್ನು ಮಾತ್ರ ಕಾನೂನು ಅಂಗೀಕರಿಸುತ್ತದೆಯೇ ಹೊರತು ಮೌಖಿಕವಾದ ಪುರಾವೆಯನ್ನು ಅಲ್ಲ. ಈ ಮಸೂದೆಯ ೧೨ನೇ ನಿಬಂಧನೆಯ ಕಡೆ ಈ ಸದನವು ಗಮನಹರಿಸಿದರೆ ಈ ಅಂಶ ಸ್ಪಷ್ಟವಾಗಿ ನಿರೂಪಿತವಾಗಿರುವುದು ವೇದ್ಯವಾಗುತ್ತದೆ. ಅದರ ಪ್ರಕಾರ :

**"**ಈ ಕಾಯಿದೆಯಲ್ಲಿ ಕಾಣಿಸಿರುವ ಸ್ಥಾಯಿ ಆದೇಶಗಳನ್ನು ವಿರೋಧಿಸುವಂಥ ಅಥವಾ ಅದಕ್ಕೆ ಹೊಸದಾಗಿ ಸೇರಿಸುವಂಥ ಇಲ್ಲವೇ ಬದಲಾಯಿಸುವಂಥ ಯಾವುದೇ ಮೌಖಿಕ ಪುರಾವೆಯನ್ನು ನ್ಯಾಯಾಲಯದಲ್ಲಿ ಸ್ವೀಕರಿಸಲಾಗುವುದಿಲ್ಲ**"**.

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ – ೫, ಸಂಖ್ಯೆ : ೯, ೧೨ನೇ ಏಪ್ರಿಲ್ ೧೯೪೬, ಪು. ೩೯೦೪.

ಈ ಮಸೂದೆಯ ಮುಖ್ಯ ಅರ್ಥವೇ ಇದು. ನಾನು ಈಗಾಗಲೇ ತಿಳಿಸಿದಂತೆ ಅದರಲ್ಲಿ ಯಾವ ಹೊಸ ತತ್ವವನ್ನೂ ಅಳವಡಿಸಿಲ್ಲ. ಬೊಂಬಾಯಿ ಪ್ರಾಂತ್ಯದಲ್ಲಿ ಈಗಾಗಲೇ ಅಂಥ ಒಂದು ಕಾಯಿದೆ ಜಾರಿಯಲ್ಲಿದೆ, ಇದನ್ನು ಭಾರತದ ಇತರೆ ಪ್ರಾಂತ್ಯಗಳಿಗೂ ವಿಸ್ತರಿಸುವಂತೆ ಮಾಡುವುದೇ ಈ ಮಸೂದೆಯ ಉದ್ದೇಶವಾಗಿದೆ.

ಉದ್ಯಮಿಯಿಂದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಪಟ್ಟಂತೆ ಒಕ್ಕಣೆಯನ್ನು ಪಡೆದ ನಂತರ ಪ್ರಮಾಣ ಪತ್ರ ನೀಡುವಂಥ ಅಧಿಕಾರಿ ಈ ವಿಷಯದಲ್ಲಿ ಮುಂದುವರಿಯುತ್ತಾರೆ – ಈ ಬಗೆಯ ನಡಾವಳಿಗೆ ಸಂಬಂಧಿಸಿದ ನಿಬಂಧನೆಗಳು ಮಸೂದೆಯಲ್ಲಿವೆ. ಆ ಸಂಸ್ಥೆಯಲ್ಲಿ ಉದ್ಯೋಗದಲ್ಲಿರುವ ಕೆಲಸಗಾರರನ್ನು ಅವರು ಮೊದಲು ಭೇಟಿಯಾಗಿ ಅವರ ಜೊತೆ ಮಾತುಕತೆ ನಡೆಸಿದ ನಂತರ ಪ್ರಮಾಣ ಪತ್ರ ಕೊಡಬೇಕು. ಈ ಕಾಯಿದೆಗನುಗುಣವಾಗಿ ತಾನು ಪ್ರಸ್ತಾಪಿಸಿರುವ ಷರತ್ತು ಮತ್ತು ನಿಬಂಧನೆಗಳು ಇದ್ದು ಒಂದು ವೇಳೆ ಪ್ರಮಾಣಿಸಬೇಕಾದ ಅಧಿಕಾರಿ ಪ್ರಮಾಣ ಪತ್ರ ಕೊಡದ ಪಕ್ಷದಲ್ಲಿ ಉದ್ಯಮಿಯು ಮೇಲ್ಮನವಿಯ ಮೊರೆಹೋಗಿ ಪ್ರಮಾಣೀಕರಣದ ಅಧಿಕಾರಿಯ ತೀರ್ಮಾನವನ್ನು ಬದಲಾಯಿಸಿಕೊಳ್ಳಬಹುದು.

ಈ ಸದನದ ಸಮಯವನ್ನು ನಾನು ಹೆಚ್ಚು ತೆಗೆದುಕೊಂಡು ಈ ಮಸೂದೆಯ ಬೇರೆ ಬೇರೆ ನಿಬಂಧನೆಗಳ ಬಗ್ಗೆ ಲಂಬಿಸಲು ಇಚ್ಛಿಸುವುದಿಲ್ಲ. ಆದರೆ ಸರ್ಕಾರ ಈ ಮಸೂದೆಯು ಅತ್ಯಾವಶ್ಯಕವಷ್ಟೇ ಅಲ್ಲ ಬಹಳ ತುರ್ತಾದುದೆಂದು ಏಕೆ ಪರಿಗಣಿಸುತ್ತಿದೆ ಎಂಬುದನ್ನು ನಾನು ತಿಳಿಸಲೇಬೇಕು. ಈ ಮಸೂದೆಯು ಇನ್ನೊಂದು ಬಹಳ ಮುಖ್ಯವಾದ ಆರೋಗ್ಯ ವಿಮೆಯ ಜೊತೆ ಸಂಬಂಧ ಹೊಂದಿರುವುದರಿಂದ – ಮುಂದಿನ ಅಧಿವೇಶನದಲ್ಲಿ ಆರೋಗ್ಯ ವಿಮೆಯನ್ನು ಪ್ರಸ್ತಾಪಿಸಲು ಸರ್ಕಾರ ಈಗಾಗಲೇ ಯೋಚಿಸುತ್ತಿದೆ – ಈ ಮಸೂದೆ ಬಹಳ ತುರ್ತಾದುದಾಗಿದೆ. ಆರೋಗ್ಯ ವಿಮೆಯ ಮಸೂದೆಯಿಂದ ನೌಕರನಿಗೆ ಕೆಲವು ಅನುಕೂಲಗಳಿವೆ. ಆರೋಗ್ಯ ವಿಮಾ ನಿಧಿಗಾಗಿ ಅವರು ಸ್ವಲ್ಪ ಹಣವನ್ನು ತಪ್ಪದೇ ಕಟ್ಟುವಂತೆ ಅವರ ಮನವೊಲಿಸಲಾಗುವುದು. ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳ ವೇತನದ ಆಧಾರದ ಮೇಲೆ ಅವರು ಈ ವಿಮೆಗೆ ತೆರಬೇಕಾದ ಮೊತ್ತವನ್ನು ನಿಗದಿಗೊಳಿಸಲಾಗುವುದು. ಒಬ್ಬ ನೌಕರ ಎಷ್ಟು ಹಣವನ್ನು ನಿಧಿಗೆ ಕೊಡಬೇಕಾಗಬಹುದು ಎಂಬುದರ ಬಗ್ಗೆ ವಿವಾದ ಉಂಟಾಗಬಹುದು. ಅಂತಿಮವಾಗಿ ಇಂಥ ವಿವಾದವನ್ನು ಬಗೆಹರಿಸಲು ಅನುಕೂಲವಾಗುವಂತೆ ನೌಕರರ ಉದ್ಯೋಗಕ್ಕೆ ಸಂಬಂಧಿಸಿದಂಥ ಷರತ್ತುಗಳನ್ನು ದಾಖಲುಮಾಡಿ ಒಂದು ಕಡೆ ಇಡುವುದು ಕ್ಷೇಮವೆಂದು ಸರ್ಕಾರ ಭಾವಿಸುತ್ತದೆ. ಹಾಗೆ ಮಾಡುವುದರಿಂದ ಸಮಸ್ಯೆ ಉದ್ಭವವಾದ ತಕ್ಷಣವೇ ನೌಕರನ ಉದ್ಯೋಗದ ಷರತ್ತು ಮತ್ತು ನಿಬಂಧನೆಗಳನ್ನು ನೋಡಿ ವಿವಾದವನ್ನು ಬಗೆಹರಿಸಲು ಸಹಾಯಕವಾಗುತ್ತದೆ. ಕೈಗಾರಿಕಾ ವಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರ ಕೆಲವು ಸಂಶಯಗಳು, ವಿವಾದಗಳನ್ನು ನಾವು ನಿಸ್ಸಂದಿಗ್ಧವಾಗಿ ಪರಿಹರಿಸದ ಹೊರತು ಆರೋಗ್ಯ ವಿಮಾ ನಿಧಿಯನ್ನು ನೋಡಿಕೊಳ್ಳುವುದು ಅತ್ಯಂತ ದುಸ್ತರವಾದ ಕೆಲಸವೆಂದು ಭಾವಿಸಲಾಗಿದೆ.

ಈ ಅಭಿಪ್ರಾಯಗಳನ್ನು ಮಂಡಿಸುತ್ತಾ ನಾನು ಈ ಮಸೂದೆಯನ್ನು ಪರಿಗಣಿಸಬೇಕೆಂದು ಸೂಚಿಸುತ್ತೇನೆ.

* * *

***ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯ ಅಧ್ಯಕ್ಷರೆ, ಮಸೂದೆಯು ಅಂಗೀಕಾರವಾಗಲೆಂದು

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ–೫, ಸಂಖ್ಯೆ೯, ೧೨ನೇ ಏಪ್ರಿಲ್ ೧೯೪೬, ಪು. ೩೯೨೬.

ನಾನು ಸೂಚಿಸಿದಾಗ ಈಗ ನಾವು ಗಮನಿಸಿದಂಥ ರೀತಿಯ ಚರ್ಚೆ ನಡೆಯುವುದೆಂದು ಎಣಿಸಿರಲಿಲ್ಲ. ನನಗೆ ನನ್ನ ಗೌರವಾನ್ವಿತ ಮಿತ್ರ ಡಾ. ಸರ್ ಜಿಯಾ ಉದ್ದೀನ್ ಅಹ್ಮದ್ ಅವರ ಭಾಷಣದಿಂದ ತುಂಬಾ ಆಶ್ಚರ್ಯವುಂಟಾಗಿದೆಯೆಂದು ತಿಳಿಸಲೇಬೇಕಾಗಿದೆ. ಅವರು ಮಧ್ಯಾಹ್ನದ ಊಟದಲ್ಲಿ ಅರಗಲಾರದ ಏನೋ ಪದಾರ್ಥಗಳನ್ನು ಸೇವಿಸಿದ್ದರಿಂದಲೇ ಈ ರೀತಿ ಮಾತನಾಡಿರುವರೆಂದು ನನಗೆ ಅನುಮಾನ ಶುರುವಾಗಿದೆ. ಕಾರಣ ಕಾರ್ಮಿಕ ಶಾಸನವನ್ನು ಅತ್ಯಂತ ತುರ್ತಾಗಿ ಮತ್ತು ಇನ್ನೂ ವ್ಯಾಪಕವಾದ ರೀತಿಯಲ್ಲಿ ತರಬೇಕೆಂದು ಅವರು ಇದೇ ಸದನದಲ್ಲಿ ಒಂದು ಬಾರಿ ಅಲ್ಲ ಅನೇಕ ಬಾರಿ ನನ್ನ ಮೇಲೆ ಒತ್ತಾಯ ತಂದಿದ್ದಾರೆ. ಇಂದು ಇದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಭಾಷಣ ಮಾಡಿದ್ದಾರೆ. ಆದರೆ ಅವರು ಎತ್ತಿದ ವಿಷಯವಾಗಿ ನನ್ನ ಸ್ನೇಹಿತರಾದ ಶ್ರೀ ಸಿದ್ದಿಕಿಯವರು ಚೆನ್ನಾಗಿ ಉತ್ತರಕೊಟ್ಟಿರುವುದರಿಂದ ನಾನು ಮತ್ತೆ ಅವರ ಬಗ್ಗೆ ಮಾತನಾಡಿದರೆ ವೃಥಾ ಸದನದ ಸಮಯವನ್ನು ಹಾಳು ಮಾಡಿದ ಹಾಗೆ ಆಗುತ್ತದೆ.

ಅವರು ಹೇಳಿದ ಒಂದು ಅಂಶಕ್ಕೆ ನಾನು ಉತ್ತರ ಕೊಡಬೇಕು ಅಷ್ಟೇ. ಈ ಮಸೂದೆಯ ಬಗ್ಗೆ ತಮಗೆ ಮುನ್ಸೂಚನೆಯೇ ಕೊಟ್ಟಿರಲಿಲ್ಲವೆಂದು ಅವರು ಹೇಳಿದ್ದಾರೆ. ಅದರ ಬಗ್ಗೆ ನಾವು ಕೊಡುವ ಉತ್ತರ ಹೀಗಿದೆ. ಈ ಮಸೂದೆ ಇದ್ದ ಕಾರ್ಯಸೂಚಿಯನ್ನು ಶುಕ್ರವಾರ, ೬ನೇ ತಾರೀಖೇ ಎಲ್ಲ ಗೌರವಾನ್ವಿತ ಸದಸ್ಯರುಗಳಿಗೆ ತಲುಪಿಸಿದ್ದೇವೆ. ಶಾಸನಸಭೆಯ ನಡಾವಳಿಯಲ್ಲಿ ಮೊದಲನೆಯ ಅಂಶವಾಗಿ ಆ ಕಾರ್ಯಸೂಚಿಯಲ್ಲಿ ಇದನ್ನು ತಿಳಿಸಲಾಗಿತ್ತು; ಅಷ್ಟೇ ಅಲ್ಲ ಒಂದು ಟಿಪ್ಪಣಿಯಲ್ಲಿ ೧೨ನೇ ಏಪ್ರಿಲ್, ೧೯೪೬ರಂದು ಇದು ಕಾನೂನು ರಚನಾ ಕಾರ್ಯದಡಿಯಲ್ಲಿ ಚರ್ಚೆಗೆ ಖಂಡಿತವಾಗಿ ಬರುತ್ತದೆಯೆಂದು ತಿಳಿಸಿತ್ತು. ಆರು ದಿನಗಳ ಮುನ್ಸೂಚನೆ ಸಾಕಾಗುವುದೊ ಇಲ್ಲವೊ ಏನೊ ನನಗೆ ಗೊತ್ತಿಲ್ಲ.

ಇನ್ನು ಮಸೂದೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಕೇವಲ ಕಾಲುಗಂಟೆಯಲ್ಲಿ ನಾನು ಈ ಮಸೂದೆಯನ್ನು ಅಂಗೀಕಾರ ಮಾಡಿಸುವೆನೆಂದುಕೊಂಡಿದ್ದೆ; ಆದರೆ ಈಗ ಇದರ ಬಗ್ಗೆ ನಾವು ಒಂದು ಗಂಟೆ ಐದು ನಿಮಿಷಗಳನ್ನು ಕಳೆದಿದ್ದೇವೆ. ಆದಕಾರಣ ನಾವು ಅವಸರದಲ್ಲಿ ಮಸೂದೆಯನ್ನು ಮುಂದೆ ತಳ್ಳುತ್ತಿದ್ದೇವೆಂದು ಆಪಾದಿಸಲು ಯಾರಿಗಾದರೂ ಹೇಗೆ ಮನಸ್ಸು ಬರುತ್ತದೋ ತಿಳಿಯದು.

ಇನ್ನು ನನ್ನ ಸ್ನೇಹಿತ ಶ್ರೀ ಇನ್ಸ್‌ಕಿಫ್ ಅವರು ಎತ್ತಿದ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ತಮ್ಮ ಕಕ್ಷಿದಾರರನ್ನು ಸಂಪರ್ಕಿಸಲು ಸಾಕಷ್ಟು ಸಮಯ ದೊರಕಲಿಲ್ಲವೆಂದು ಅವರು ಹೇಳಿದ್ದಾರೆ. ಪ್ರಾಯಶಃ ಅವರು ಮುಂಚಿನ ವಿವರಗಳನ್ನು ತಪ್ಪಾಗಿ ಭಾವಿಸಿದ್ದಾರೆ. ಅಥವಾ ಈ ಮಸೂದೆಯ ಮುಂಚಿನ ವೃತ್ತಾಂತವನ್ನು ಮರೆತಿದ್ದಾರೆ. ಈ ಮಸೂದೆಯನ್ನು ೧೯೪೪ರಲ್ಲಿ ಸ್ಥಾಯಿ ಕಾರ್ಮಿಕ ಸಮಿತಿಯ ಮುಂದೆ ಇಡಲಾಗಿತ್ತು. ಈ ಸಮಿತಿಯು ಮಸೂದೆ ತುಂಬಾ ಆವಶ್ಯಕವಾಗಿದೆ ಮತ್ತು ವಿವಾದಾತೀತವಾಗಿದೆ, ಹಾಗಾಗಿ ಇದನ್ನು ಒಂದು ಸುಗ್ರೀವಾಜ್ಞೆಯ ರೂಪದಲ್ಲೇ ಸರ್ಕಾರ ಪಾಸು ಮಾಡಬೇಕೆಂದು ಸಲಹೆ ನೀಡಿತಾದರೂ ನಾವು ಹಾಗೆ ಮಾಡಲಿಲ್ಲ. ಅದರ ತರುವಾಯ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿಯೂ ಈ ವಿಷಯ ಚರ್ಚೆಯಾಯಿತು.

ಕಾರ್ಮಿಕ ಸಮ್ಮೇಳನದಲ್ಲಿ ನಾವು ಮಂಡಿಸಿದ ಮಸೂದೆಗೂ ಇಂದು ಸದನದಲ್ಲಿ ನಾವು ಮಂಡಿಸಿದ ಮಸೂದೆಗೂ ವ್ಯಾತ್ಯಾಸವಿದೆ – ಇವೆರಡೂ ಒಂದೇ ತೆರನಾಗಿಲ್ಲ ಎಂದು ಕೂಡ ಅವರು ಪ್ರಶ್ನೆ ಎತ್ತಿದ್ದಾರೆ. ಈ ಅಭಿಪ್ರಾಯ ಸಂಪೂರ್ಣವಾಗಿ ತಪ್ಪು ಎಂದು ನಾನವರಿಗೆ ತಿಳಿಸಬಯಸುತ್ತೇನೆ. ತ್ರಿಪಕ್ಷೀಯ ಸಮ್ಮೇಳನದಲ್ಲಿ ಯಾವ ಮಸೂದೆಯನ್ನು ಸರ್ಕಾರ ಮಂಡಿಸಿತ್ತೋ ಅದೇ ಮಸೂದೆಯೇ ಇಲ್ಲಿಯೂ ಮಂಡಿತವಾಗಿರುವುದೆಂದು ತಿಳಿಸಬಯಸುತ್ತೇನೆ.

ಸಣ್ಣ ಕಾರ್ಖಾನೆಗಳಿಗೆ ಈ ಮಸೂದೆ ಯಾವ ರೀತಿ ಅನ್ವಯವಾಗುತ್ತದೆ ಎಂದು ನನ್ನ ಸ್ನೇಹಿತರಾದ ರಂಗಾ ಅವರು ಪ್ರಶ್ನೆ ಎತ್ತಿದ್ದಾರೆ. ಹಾಗೆಯೇ ಸ್ನೇಹಿತರಾದ ಗ್ವಿಲ್ಟ್ ಅವರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿ ನಾನು ಉತ್ತರಿಸಬೇಕೆಂದು ತಿಳಿಸಿರುತ್ತಾರೆ. ೧ನೇ ನಿಬಂಧನೆಯ (೩)ನೇ ಉಪನಿಬಂಧನೆಯನ್ನು ಓದಿದ ಯಾರಿಗಾದರೂ ಈ ಮಸೂದೆ ಕೇವಲ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಮಾತ್ರ ಅನ್ವಯವಾಗುವುದಿಲ್ಲ ಎಂಬುದು ತಿಳಿಯುತ್ತದೆ. ಆ ನಿಬಂಧನೆಯೇ ಸೂಚಿಸುವಂತೆ ಈ ಮಸೂದೆಯನ್ನು ಸರ್ಕಾರ "ಇನ್ನಿತರೆ ಕೈಗಾರಿಕಾ ಸಂಸ್ಥೆಗಳಿಗೆ – ಅಧಿಕೃತ ಗೆಜೆಟ್‌ನಲ್ಲಿ ಜಾಹೀರುಪಡಿಸುವುದರ ಮೂಲಕ – ವಿಸ್ತರಿಸುವ ಅಧಿಕಾರವನ್ನು ಪಡೆದಿದೆ." ಹಾಗಾಗಿ ಒಂದು ನೂರಕ್ಕಿಂತಲೂ ಕಡಿಮೆ ನೌಕರರಿರುವ ಕೈಗಾರಿಕಾ ಸಂಸ್ಥೆಗಳಿಗೂ ಈ ಮಸೂದೆಯನ್ನು ವಿಸ್ತರಿಸುವ ಅಧಿಕಾರವನ್ನು ಸರ್ಕಾರ ತನ್ನ ಬಳಿಯೇ ಇಟ್ಟುಕೊಂಡಿದೆ. ಆದುದರಿಂದ ಈ ಮಸೂದೆ ನೂರು ಅಥವಾ ಅದಕ್ಕಿಂತ ಹೆಚ್ಚು ಮಂದಿ ಕಾರ್ಮಿಕರನ್ನೊಳಗೊಂಡ ದೊಡ್ಡ ಕೈಗಾರಿಕಾ ಸಂಸ್ಥೆಗಳಿಗೆ ಮಾತ್ರ ಅನುಕೂಲಕರವಾಗಿತ್ತು, ಅದಕ್ಕಿಂತ ಕಡಿಮೆ ಪ್ರಮಾಣದ ನೌಕರರನ್ನೊಳಗೊಂಡ ಕೈಗಾರಿಕಾ ಸಂಸ್ಥೆಗಳನ್ನು ಪರಿಗಣಿಸುವುದಿಲ್ಲ ಎಂಬ ತಿಳಿವಳಿಕೆ ನಿರಾಧಾರವಾದುದೆಂದು ನಾನು ಸ್ಪಷ್ಟಪಡಿಸಬಯಸುತ್ತೇನೆ.

**ದಿವಾನ್ ಚಮನ್ ಲಾಲ್ :** ಒಂದು ನಿಮಿಷ ನಾನು ಮಧ್ಯ ಪ್ರವೇಶಿಸಲೆ? ಪುಟ ೨ ನಿಬಂಧನೆ ೨(ಈ) (ii)ರಲ್ಲಿ ಕೈಗಾರಿಕಾ ಸಂಸ್ಥೆಯ ಬಗ್ಗೆ ನಿರೂಪಣೆ ಕೊಡುತ್ತಾ ಹೀಗೆ ಹೇಳಿದೆ, "ಕಾರ್ಖಾನೆಗಳ ಕಾಯಿದೆಯ ನಿಬಂಧನೆಯ ಪ್ರಕರಣ ೨ ರಲ್ಲಿನ ಕಂಡಿಕೆ (i)ರಲ್ಲಿ ವಿವರಿಸುವಂತೆ ಇದು (ಕೈಗಾರಿಕೆ ಸಂಸ್ಥೆ) ಇರುತ್ತದೆ. ಕಾರ್ಖಾನೆಯೆಂದರೆ ಏನೆಂಬುದನ್ನು ಕಾರ್ಖಾನೆಗಳ ಕಾಯಿದೆಯಲ್ಲಿ ವಿವರಿಸಿದ್ದಾರೆ. ಆದರೆ ಇಪ್ಪತ್ತು ಜನರು ಕೆಲಸಮಾಡುವ ಕಾರ್ಖಾನೆಯನ್ನು "ಕೈಗಾರಿಕಾ ಸಂಸ್ಥೆ"ಯೆಂದು ವಿವರಿಸಲಾಗುವುದಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಆದರೆ ಸರ್ಕಾರ ಕೇವಲ ಇಪ್ಪತ್ತು ಜನರಿರುವ ಒಂದು ಕಾರ್ಖಾನೆಗೂ ಇದನ್ನು ಅನ್ವಯಿಸಬಹುದು.

**ದಿವಾನ್ ಚಮನ್ ಲಾಲ್ :** ಹಾಗೆ ಮಾಡಬಹುದು; ಆದರೆ ಹಾಗೆ ಅನ್ವಯಿಸಲೇಬೇಕೆಂಬ ನಿಬಂಧನೆಯಿಲ್ಲ.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಒಂದು ನೂರು ಜನರನ್ನೊಳಗೊಂಡ ಕಾರ್ಖಾನೆಗಳಿಂದ ಪ್ರಾರಂಭಿಸುತ್ತಿದ್ದೇವೆ.

**ಶ್ರೀ ಲೆಸ್ಲಿ ಗ್ವಿಲ್ಟ್ :** ಇನ್ನೂ ಕಡಿಮೆ ಜನರಿರುವ ಕಾರ್ಖಾನೆಯಿಂದ ಯಾಕೆ ಪ್ರಾರಂಭಿಸಬಾರದು?

**ದಿವಾನ್ ಚಮನ್ ಲಾಲ್ :** ಕೇವಲ ಇಪ್ಪತ್ತು ಜನ ನೌಕರರಿರುವ ಕಾರ್ಖಾನೆಗೆ ಭಾರತೀಯ ಕಾರ್ಖಾನೆಗಳ ಕಾಯಿದೆ ಅನ್ವಯವಾಗುವುದಾದರೆ, ಈ ಮಸೂದೆಯಲ್ಲಿ ಕೈಗಾರಿಕಾ ಸಂಸ್ಥೆಗೂ ಕೂಡ ಏಕೆ ಅನ್ವಯವಾಗಬಾರದು?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಇಪ್ಪತ್ತು ಜನರನ್ನು ಹೊಂದಿರುವ ಕಾರ್ಖಾನೆಗಳಿಗೂ ಇದನ್ನು ಅನ್ವಯಗೊಳಿಸಲು ಅಡ್ಡಿಯಿಲ್ಲ. ಆದರೆ ನಾವು ಒಂದು ಕಡೆ ಪ್ರಾರಂಭ ಮಾಡೋಣವೆಂದು ಹೊರಟಿದ್ದೇವೆ. ಜೊತೆಗೆ, ಪ್ರತಿಯೊಂದು ಕಾರ್ಖಾನೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾ ಹೋದರೆ ಆಡಳಿತ ವ್ಯವಸ್ಥೆ ಭಾರಿಯಾಗಬೇಕಾಗುತ್ತದೆ. ಮತ್ತೆ ಇದರಿಂದ ಪ್ರಮಾಣೀಕರಣ ಅಧಿಕಾರಿಗಳು, ಮೇಲ್ಮನವಿ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತಾರೆ – ಈ ಪ್ರಮಾಣವನ್ನು ಪೂರೈಸಲು ಯಾವ ಪ್ರಾಂತೀಯ ಸರ್ಕಾರಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಮೊದಲು ಸಣ್ಣ ಸಣ್ಣ ಪ್ರಮಾಣದಲ್ಲಿ ಪ್ರಾರಂಭಮಾಡುವುದು ವಿಹಿತವೆನಿಸಿತು

– ಅಗತ್ಯ ಬಿದ್ದಾಗ ಈ ಅನುಕೂಲತೆಯನ್ನು ಇತರೆ ಸಂಸ್ಥೆಗಳಿಗೂ ವಿಸ್ತರಿಸುವ ಅಧಿಕಾರ ಇದ್ದೇ ಇದೆ.

ಈ ಸೂಚನೆಗೆ ಸಂಬಂಧಿಸಿದಂತೆ ಬೇರೆ ಯಾವ ಅಂಶಗಳೂ ಪ್ರಸ್ತಾಪವಾಗದಿರುವುದರಿಂದ ಹೆಚ್ಚಿನ ವಿವರದ ಅಗತ್ಯವಿಲ್ಲವೆಂದು ತೋರುತ್ತದೆ.

ಮಾನ್ಯರೆ, ನಾನು ಸೂಚಿಸುತ್ತೇನೆ

**ಅಧ್ಯಕ್ಷರು :** ಪ್ರಶ್ನೆ ಇದು :

"ತಿದ್ದುಪಡಿ ಮಾಡಿದ ಮಸೂದೆಯನ್ನು ಅಂಗೀಕರಿಸುವುದು".

ಸೂಚನೆ ಅಂಗೀಕೃತವಾಯಿತು.

## ೬೭
## ಅಭ್ರಕದ ಗಣಿ ಕಾರ್ಮಿಕರ ಕಲ್ಯಾಣ ನಿಧಿ ಮಸೂದೆ*

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್** (ಕಾರ್ಮಿಕ ಸದಸ್ಯರು) : ಮಾನ್ಯರೆ, ನಾನು ಸೂಚಿಸುತ್ತೇನೆ.

"ಅಭ್ರಕದ ಗಣಿಗಾರಿಕೆ ಉದ್ಯಮದಲ್ಲಿ ನಿರತರಾಗಿರುವ ಉದ್ಯೋಗಿಗಳ ಕ್ಷೇಮಾಭಿವೃದ್ಧಿಯ ಕಾರ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿ ಪರಿಶೀಲನಾ ಸಮಿತಿ ವರದಿ ಮಾಡಿರುವಂತೆ ಆರ್ಥಿಕ ಸಹಾಯವನ್ನು ನೀಡುವಂಥ ಮಸೂದೆಯನ್ನು ಪರಿಗಣಿಸುವುದು".

ಪರಿಶೀಲನಾ ಸಮಿತಿಯವರು ನೀಡಿದ ಪ್ರಕಾರವೇ ಮಸೂದೆ ಇದ್ದು, ಮಾಡಿರುವಂಥ ಬದಲಾವಣೆಗಳು ತೀರಾ ಗೌಣವಾದ್ದರಿಂದ ನಾನು ಸದನದ ಸಮಯವನ್ನು ಪೋಲು ಮಾಡಲು ಇಷ್ಟಪಡುವುದಿಲ್ಲ. ಆದ್ದರಿಂದ ನಾನು ನೇರವಾಗಿ ಸೂಚನೆಯನ್ನು ಮಂಡಿಸುತ್ತೇನೆ.

**ಉಪಾಧ್ಯಕ್ಷರು :** ಪ್ರಶ್ನೆ ಇದು :

"ಅಭ್ರಕದ ಗಣಿಗಾರಿಕೆ ಉದ್ಯಮದಲ್ಲಿ ತೊಡಗಿರುವ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಕಾರ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿ ಪರಿಶೀಲನಾ ಸಮಿತಿ ವರದಿ ಮಾಡಿರುವಂತೆ ಆರ್ಥಿಕ ಸಹಾಯವನ್ನು ನೀಡುವಂಥ ಮಸೂದೆಯನ್ನು ಪರಿಗಣಿಸುವುದು".

ಸೂಚನೆ ಅಂಗೀಕೃತವಾಯಿತು.

**ಉಪಾಧ್ಯಕ್ಷರು :** ಪ್ರಶ್ನೆ ಇದು :

"ನಿಬಂಧನೆ ೨ ಮಸೂದೆಯ ಭಾಗವಾಗಿರುತ್ತದೆ"

ಸೂಚನೆ ಅಂಗೀಕೃತವಾಯಿತು.

ನಿಬಂಧನೆ ೨ನ್ನು ಮಸೂದೆಗೆ ಸೇರಿಸಲಾಯಿತು.

**ಉಪಾಧ್ಯಕ್ಷರು :** ನಿಬಂಧನೆ ೩.

**ಪಂಡಿತ್ ಮುಕುಟ್ ಬಿಹಾರಿ ಲಾಲ್ ಭಾರ್ಗವ (ಅಜ್ಮೀರ್–ಮೇರವಾರಾ** : ಸಾಮಾನ್ಯ) : ಮಾನ್ಯರೆ ಸೂಚನೆ ಮಂಡಿಸಲು ಅನುಮತಿ ಬೇಡುತ್ತೇನೆ :

---

* ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ (ಕೇಂದ್ರ), ಸಂಪುಟ–೩, ಸಂಖ್ಯೆ : ೪, ಏಪ್ರಿಲ್ ೧೩, ೧೯೪೬, ಪುಟ ೪೦೨೪.

"ಮಸೂದೆಯ ನಿಬಂಧನೆ ೫ರ ಉಪನಿಬಂಧನೆ ೩(ಅ)ದಲ್ಲಿ 'ನಿಧಿ' ಎಂಬ ಪದದ ನಂತರ ಹಾಗೂ 'ಮತ್ತು' ಎಂಬ ಪದಕ್ಕೆ ಮೊದಲು ಈ ಕೆಳಕಂಡ ವಾಕ್ಯವನ್ನು ಅಡಕಮಾಡಬೇಕು :–

"ಸೂರ್ಯಾಸ್ತದಿಂದ ಹಿಡಿದು ಸೂರ್ಯೋದಯವಾಗುವ ತನಕ ಅಂಥ ಖಾಸಗಿ ನಿವಾಸಗಳಲ್ಲಿ ಹೆಣ್ಣು ಮಕ್ಕಳಿದ್ದ ಪಕ್ಷದಲ್ಲಿ ಯಾವ ಅಧಿಕಾರಿಯೂ ಪ್ರವೇಶಿಸುವಂತಿಲ್ಲ, ಪ್ರವೇಶಿಸುವಂಥ ಪ್ರಮೇಯವಿದ್ದಲ್ಲಿ, ತಮ್ಮ ಪ್ರವೇಶದ ವಿಷಯವನ್ನು ಪೂರ್ವಭಾವಿಯಾಗಿ ಅವರ ಗಮನಕ್ಕೆ ತರಬೇಕಾದುದು ಆವಶ್ಯಕ".

**ಉಪಾಧ್ಯಕ್ಷರು :** ಗೌರವಾನ್ವಿತ ಸದಸ್ಯರು ಈ ತಿದ್ದುಪಡಿಯ ಬಗ್ಗೆ ಈಗತಾನೆ ಗಮನ ಸೆಳೆದಿದ್ದಾರೆ. ಸದಸ್ಯರಿಗೆ ಇದನ್ನು ಇನ್ನೂ ಕಳುಹಿಸಲಾಗಿಲ್ಲ

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಇದಕ್ಕೆ ನನ್ನ ಆಕ್ಷೇಪವಿದೆ.

**ಉಪಾಧ್ಯಕ್ಷರು :** ಈ ತಿದ್ದುಪಡಿ ಬಹಳ ತಡವಾಗಿ ಸೂಚಿತವಾಗುತ್ತಿರುವುದರಿಂದ ಇದನ್ನು ನಾವು ಈ ಘಟ್ಟದಲ್ಲಿ ಸ್ವೀಕರಿಸಲಾಗುವುದಿಲ್ಲ.

**ಪ್ರೊ॥ ಎನ್.ಜಿ. ರಂಗಾ : (ಗುಂಟೂರ್ ಮತ್ತು ನೆಲ್ಲೂರು** : ಮುಸ್ಲಿಮೇತರರು ಗ್ರಾಮಾಂತರ): ಅದಕ್ಕೆ ನಿಮ್ಮ ತಕರಾರೇನಾದರೂ ಇದೆಯೇ?

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ನನ್ನ ಆಕ್ಷೇಪ ಬಹಳವಿದೆ.

**ಉಪಾಧ್ಯಕ್ಷರು :** ನಿಬಂಧನೆ ೫ರ ಬಗ್ಗೆ ಗೌರವಾನ್ವಿತ ಸದಸ್ಯರು ಏನಾದರೂ ಹೇಳುವುದಿದೆಯೇ

**ಪಂಡಿತ್ ಮುಕುಟ್ ಬಿಹಾರಿ ಲಾಲ್ ಭಾರ್ಗವ :** ಮಾನ್ಯರೇ ಇಲ್ಲ.

**ಉಪಾಧ್ಯಕ್ಷರು :** ಪ್ರಶ್ನೆ ಇದು :

"ನಿಬಂಧನೆ ೫ ಮತ್ತು ೬ ಈ ಮಸೂದೆಯ ಭಾಗವಾಗಿರುತ್ತವೆ".

ಸೂಚನೆ ಅಂಗೀಕೃತವಾಯಿತು.

ನಿಬಂಧನೆ ೫ ಮತ್ತು ೬ನ್ನು ಮಸೂದೆಗೆ ಸೇರಿಸಿಕೊಳ್ಳಲಾಯಿತು.

ನಿಬಂಧನೆ ೧ನ್ನು ಕೂಡ ಮಸೂದೆಗೆ ಸೇರಿಸಲಾಯಿತು.

ಶೀರ್ಷಿಕೆ ಮತ್ತು ಪೀಠಿಕೆಯನ್ನು ಕೂಡ ಮಸೂದೆಗೆ ಸೇರಿಸಲಾಯಿತು.

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ನಾನು ಸೂಚಿಸುತ್ತೇನೆ :

"ತಿದ್ದುಪಡಿ ಮಾಡಿದ ರೀತಿಯಲ್ಲಿ ಮಸೂದೆಯನ್ನು ಅಂಗೀಕರಿಸುವುದು."

**ಉಪಾಧ್ಯಕ್ಷರು :** ಸೂಚನೆ ಮಂಡಿಸಲಾಗಿದೆ.

"ತಿದ್ದುಪಡಿ ಮಾಡಿದ ರೀತಿಯಲ್ಲಿ ಮಸೂದೆಯನ್ನು ಅಂಗೀಕರಿಸುವುದು".

# ೬೮
# ಇತರೆ ವಿಷಯಗಳು

## ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ*

ಪರಿಶಿಷ್ಟ ಜಾತಿಗಳಿಗೆ ಸೇರಿದವರ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವ ದೃಷ್ಟಿಯಿಂದ ಭಾರತ ಸರ್ಕಾರ ೧೯೪೬–೪೭ನೇ ಸಾಲಿಗೆ ವಿದ್ಯಾರ್ಥಿವೇತನ ಕೊಡಲು ತೀರ್ಮಾನಿಸಿದೆ; ಮೆಟ್ರಿಕ್ಯುಲೇಶನ್ ಹಂತ ಮುಗಿಸಿದ್ದು ವೈಜ್ಞಾನಿಕ ಅಥವಾ ತಂತ್ರಜ್ಞಾನದ ವಿಷಯಗಳನ್ನು ಓದಲು ಅಪೇಕ್ಷಿಸುವ ಬ್ರಿಟಿಷ್ ಭಾರತದಲ್ಲಿರುವ ಈ ಜಾತಿಗಳ ವಿದ್ಯಾರ್ಥಿಗಳಿಗೆ ಈ ಸೌಲಭ್ಯವಿರುತ್ತದೆ. ಈ ವಿದ್ಯಾರ್ಥಿವೇತನಗಳು ಭಾರತದಲ್ಲಿ ಮಾತ್ರ ಅನ್ವಯವಾಗುವಂಥವು. ಈ ವರ್ಷ ಹೊರದೇಶದಲ್ಲಿ ವ್ಯಾಸಂಗ ಮಾಡಬಯಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲು ತೀರ್ಮಾನಿಸಿಲ್ಲ.

ಇದಕ್ಕೆ ಕೊಡಲಾಗುವ ಮೊತ್ತವು ಶಿಕ್ಷಣಕ್ಕೆ ತಗಲುವ ಶುಲ್ಕ ಮತ್ತು ಇತರೆ ಖರ್ಚುಗಳನ್ನೆಲ್ಲ ಒಳಗೊಳ್ಳುವುದು. ಬೆರಳಚ್ಚು ಮತ್ತು ಶೀಘ್ರಲಿಪಿ ಕಲಿಯುವವರಿಗೆ ಸ್ವಲ್ಪ ಕಾಲದವರೆಗೆ ತಿಂಗಳಿಗೆ ೨೦ ರೂಪಾಯಿಗಳಂತೆ ಸ್ಟೈಪೆಂಡ್ ಕೊಡಲಾಗುವುದು.

ವಿದ್ಯಾರ್ಥಿವೇತನವನ್ನು ಈ ಕೆಳಗಿನ ಕೋರ್ಸುಗಳಿಗೆ ಕೊಡಲಾಗುವುದು:

(೧) ವಿಜ್ಞಾನದಲ್ಲಿ ಇಂಟರ್‌ಮೀಡಿಯೇಟ್, (೨) ಬಿ.ಎಸ್ಸಿ. (ಪಾಸು ಅಥವಾ ಆನರ್ಸ್), (೩) ಎಂ.ಎಸ್ಸಿ., (೪) ಇಂಜಿನಿಯರಿಂಗ್, (೫) ತಂತ್ರಜ್ಞಾನ, (೬) ವೈದ್ಯಕೀಯ ಶಾಸ್ತ್ರ, (೭) ಕೃಷಿ, (೮) ಶಿಕ್ಷಕ ತರಬೇತಿ, ಮತ್ತು (೯) ಶೀಘ್ರಲಿಪಿ ಮತ್ತು ಬೆರಳಚ್ಚು.

ಇಂಟರ್‌ಮೀಡಿಯೇಟ್ ಮತ್ತು ಪದವಿ ತರಗತಿಗಳಲ್ಲಿ ಕಲಾ ವಿಷಯಗಳನ್ನು ತೆಗೆದುಕೊಂಡು ಓದುವ ಮಹಿಳಾ ವಿದ್ಯಾರ್ಥಿಗಳು ತಮ್ಮ ಪದವಿ ಅಧ್ಯಯನ ಮುಗಿದ ನಂತರ ಶಿಕ್ಷಕ ತರಬೇತಿ ಮಾಡುವುದಾಗಿ ಲಿಖಿತದಲ್ಲಿ ಒಪ್ಪಿಗೆ ಸೂಚಿಸಿದ ಪಕ್ಷದಲ್ಲಿ ಅವರೂ ಕೂಡ ವಿದ್ಯಾರ್ಥಿವೇತನಕ್ಕೆ ಅರ್ಹರಾಗುತ್ತಾರೆ. ಈ ಷರತ್ತನ್ನು ಅವರು ಪೂರೈಸದಿದ್ದರೆ ಅವರು ಪಡೆದ ವಿದ್ಯಾರ್ಥಿವೇತನವನ್ನು ವಾಪಸ್ಸು ಮಾಡಬೇಕಾಗಬಹುದು.

## ದಾಮೋದರ್ ಕಣಿವೆ ಯೋಜನೆ ಬಗ್ಗೆ ಸಲಹೆ ಕೊಡಲು ಟೆನ್ನಿಸ್ಸಿ ಕಣಿವೆ ಪ್ರಾಧಿಕಾರದ (ಟಿ.ವಿ.ಎ.) ತಜ್ಞರು**

ಟೆನ್ನಿಸ್ಸಿ ಕಣಿವೆ ಪ್ರಾಧಿಕಾರದ ತಜ್ಞ ಇಂಜಿನಿಯರುಗಳಾದ ಶ್ರೀ ರಾಸ್ ಎಂ. ರೀಗೆಲ್ ಮತ್ತು ಶ್ರೀ ಫ್ರೆಡ್ ಸಿ. ಶ್ಲೆಮ್ಮರ್‌ರವರು ಮೈಥಾನ್, ಅಳ್ಸಾರ್ ಮತ್ತು ಪ್ಯಾಂಚೆಟ್ ಹಿಲ್ ಯೋಜನೆಗಳ ಕುರಿತಾಗಿ ಕೇಂದ್ರ ತಾಂತ್ರಿಕ ವಿದ್ಯುಚ್ಛಕ್ತಿ ಮಂಡಳಿಯವರು ತಯಾರಿಸಿರುವ ಯೋಜನೆಯ ಬಗ್ಗೆ ಸಲಹೆ ಕೊಡಲು ಭಾರತಕ್ಕೆ ಬಂದಿದ್ದಾರೆ. ದಾಮೋದರ್ ಯೋಜನೆಯಲ್ಲಿ ಮೈಥಾನ್, ಅಳ್ಸಾರ್ ಮತ್ತು ಪ್ಯಾಂಚೆಟ್ ಹಿಲ್ ಇವು ಮುಖ್ಯವಾದ ಮೂರು ಅಣೆಕಟ್ಟು ಸ್ಥಳಗಳಾಗಿದ್ದು ಇವುಗಳಿಗೆ ಸದ್ಯದಲ್ಲಿ ವಿವರವಾದ ಸ್ಥೂಲ ನಕಾಶೆ

* ಇಂಡಿಯನ್ ಇನ್‌ಫರ್ಮೇಷನ್, ಮಾರ್ಚಿ ೧೫, ೧೯೪೬, ಪು. ೩೧೦.

** ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್, ೧೯೪೬, ಪು. ೪೦೩.

ತಯಾರಾಗುತ್ತಿದೆ. ಮೈಥಾನ್ ಯೋಜನೆಗೆ ತಯಾರಾಗಿರುವ ವಿನ್ಯಾಸ ಬಹಳ ಮುಂದುವರಿದ ಹಂತದಲ್ಲಿದೆ. ಉಳಿದ ಎರಡು ಯೋಜನೆಗಳ ವಿಷಯವಾಗಿ ಸ್ಥಳ, ಸನ್ನಿವೇಶಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಸಂಗ್ರಹವಾಗುತ್ತಿದೆ.

**ನಾಲ್ಕು ವರದಿಗಳು**

ಟೆನ್ನಿಸ್ಸಿ ಕಣಿವೆ ಪ್ರಾಧಿಕಾರದವರು ವಾಷಿಂಗ್‌ಟನ್ ಸರ್ಕಾರಿ ಇಲಾಖೆಯವರ ಅನುಮತಿ ಮೇರೆಗೆ ಶ್ರೀ ರೀಗೆಲ್ ಮತ್ತು ಶ್ರೀ ಶ್ಲೆಮ್ಮರ್‌ರವರ ಸೇವೆಯನ್ನು ಭಾರತ ಸರ್ಕಾರಕ್ಕೆ ಸುಮಾರು ಎಂಟು ವಾರಗಳವರೆಗೆ ಮಾತ್ರ ದೊರಕಿಸಿಕೊಟ್ಟಿದ್ದಾರೆ. ಭಾರತದ ಇಬ್ಬರು ಪ್ರಮುಖ ಸಿವಿಲ್ ಇಂಜಿನಿಯರುಗಳ ಸಹಾಯವನ್ನು ಈ ಆಂದೋಳನಕ್ಕೆ ಪಡೆಯುವ ಯೋಚನೆಯೂ ಇದೆ. ಆದರೆ 'ಹೆಚ್ಚು ಆಹಾರ ಬೆಳೆಯಿರಿ ಚಳವಳಿ' ಯಲ್ಲಿ ನೀರಾವರಿ ಯೋಜನೆಯನ್ನು ತೀವ್ರಗತಿಯಲ್ಲಿ ಬಳಸಿಕೊಳ್ಳಬೇಕಾದ ಪ್ರಮೇಯವಿರುವುದರಿಂದ ತತ್‌ಕ್ಷಣದಲ್ಲಿ ಈ ಇಂಜಿನಿಯರ್‌ಗಳು ಇಲ್ಲಿ ಸೇರಿಕೊಳ್ಳಲು ಆಗುವುದಿಲ್ಲವೇನೊ.

ಈ ಆಂದೋಳನದಲ್ಲಿ ನಾಲ್ಕು ವರದಿಗಳನ್ನು ತಯಾರಿಸಲಾಗುವುದು. ಎರಡು ವರದಿಗಳನ್ನು ಕೇಂದ್ರ ತಾಂತ್ರಿಕ ವಿದ್ಯುಚ್ಛಕ್ತಿ ಮಂಡಳಿಗೆ ಸಲ್ಲಿಸಬೇಕು. ಅಳವಡಿಸಿಕೊಳ್ಳಬೇಕಾದ ವಿನ್ಯಾಸ ಮತ್ತು ಅಣೆಕಟ್ಟು ನಿವೇಶನಗಳಲ್ಲಿ ನಿರ್ಮಾಣ ವೇಳಾಪಟ್ಟಿಯ ಬಗ್ಗೆ ಮಂಡಳಿ ಮಾಡಿರುವ ಪ್ರಸ್ತಾವನೆಗಳ ಬಗ್ಗೆ ಈ ವರದಿಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಬೇಕು. ಉಳಿದೆರಡು ವರದಿಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಬೇಕಾಗಿರುವುದು – ವಿವರವಾದ ವಿನ್ಯಾಸಗಳನ್ನು ಮತ್ತು ನಿರ್ಮಾಣಕಾರ್ಯವನ್ನು ಮುಂದುವರಿಸುವ ಕ್ರಮದ ಬಗ್ಗೆ ಆ ವರದಿಗಳಲ್ಲಿ ಶಿಫಾರಸುಗಳಿರುವುವು.

**ಕಾರ್ಮಿಕರ ಕಲ್ಯಾಣ ವಿಶ್ವಸ್ಥ ನಿಧಿಗಳು** *

೧೫ ಮತ್ತು ೧೬ನೇ ಮಾರ್ಚಿಯಲ್ಲಿ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್, ಕಾರ್ಮಿಕ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿ ಸ್ಥಾಯಿ ಕಾರ್ಮಿಕ ಸಮಿತಿಯ ಎರಡನೇ ಅಧಿವೇಶನವು ಕಾರ್ಮಿಕರ ಕಲ್ಯಾಣ ವಿಶ್ವಸ್ಥ ನಿಧಿಯನ್ನು ಸ್ಥಾಪಿಸುವುದರ ಬಗ್ಗೆ ಚರ್ಚಿಸಲಾಯಿತು. ತಮ್ಮ ಲಾಭದ ಪ್ರಮಾಣದಲ್ಲಿ ಒಂದು ಭಾಗವನ್ನು ಮಾಲೀಕರು ಇದಕ್ಕಾಗಿ ಒದಗಿಸಿ ನಿಧಿಯನ್ನು ಸ್ಥಾಪಿಸುವುದು ಹಾಗೂ ಮಾಲೀಕರು ಮತ್ತು ಕಾರ್ಮಿಕರ ಪ್ರತಿನಿಧಿಗಳನ್ನು ಈ ನಿಧಿಯ ಉಸ್ತುವಾರಿಗೆ ನೇಮಿಸುವುದು ಎಂಬ ಪ್ರಸ್ತಾಪ ಮುಂದಿಡಲಾಗಿದೆ. ಕಾನೂನು ರೀತ್ಯ ಎಲ್ಲಾ ವರ್ಗದ ಉದ್ಯಮಿಗಳೂ ಕೂಡ ಕಲ್ಯಾಣ ಯೋಜನೆಗೆ ಬದ್ಧರಾಗಿರುವಂತೆ ಮಾಡುವ ಬಗ್ಗೆಯೂ ಕೂಡ ಚರ್ಚಿಸಲಾಯಿತು. ಸಮಿತಿಯು ಚರ್ಚಿಸಿದ ಇತರೆ ವಿಷಯಗಳೆಂದರೆ, ಅನಿಯಂತ್ರಿತ ಕಾರ್ಖಾನೆಗಳ ಬಗ್ಗೆ ಕೇಂದ್ರೀಯ ಶಾಸನ ತರುವುದು, ವ್ಯಾಪಾರ ವಿವಾದದ ಕಾಯಿದೆಗೆ ತಿದ್ದುಪಡಿ, ಮುಷ್ಕರ ಮತ್ತು ಲಾಕ್-ಔಟ್ ಸಂದರ್ಭಗಳಲ್ಲಿ ಕೈಗಾರಿಕೆಗಳಲ್ಲಿ ಉದ್ಭವವಾಗುವ ನಿರುದ್ಯೋಗ ಪ್ರಮಾಣ ಮತ್ತು ಉದ್ಯೋಗ ವಿನಿಮಯ ಧೋರಣೆ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮುಂದಿಟ್ಟಿರುವ ಗಣಿ ಕೆಲಸಗಾರರ ಬೇಡಿಕೆಗಳು, ಇತ್ಯಾದಿ.

ಈ ಸಭೆಯಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳ ಪ್ರತಿನಿಧಿಗಳು, ಭಾರತೀಯ ರಾಜ್ಯಗಳು,

* ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್ ೧೫, ೧೯೪೬, ಪು. ೪೪೨.

ಮಾಲೀಕರು ಮತ್ತು ನೌಕರರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಲಾಲಾ ಕೃಪಾ ನಾರಾಯಣ್, ಶ್ರೀ ಶಾಂತಿಲಾಲ್ ಮಂಗಳ್ ದಾಸ್, ಶ್ರೀ ಭಗವಾನ್‌ದಾಸ್. ಸಿ. ಮೆಹ್ತಾ, ಗೌರವಾನ್ವಿತ ಶ್ರೀ ಎಚ್.ಡಿ. ಟಾನೆಂಡ್ ಹಾಗೂ ರಾಯ್ ಬಹಾದ್ದೂರ್ ಶ್ಯಾಮ್‌ನಂದನ್ ಸಹಾಯ್ ಇವರು ಮಾಲೀಕರ ಪರವಾಗಿ ಪ್ರತಿನಿಧಿಸಿದ್ದರು; ಅಲ್ಲದೆ ಶ್ರೀಯುತರಾದ ಎನ್.ಎಂ. ಜೋಶಿ, ಎನ್.ವಿ ಪದ್ಕೆ, ವಿ.ಎಸ್. ಕರ್ಣಿಕ್, ಎ.ಕೆ. ಮುಖರ್ಜಿ ಮತ್ತು ಆರ್.ಆರ್. ಬೋಲೆ ಕಾರ್ಮಿಕರನ್ನು ಪ್ರತಿನಿಧಿಸಿದ್ದರು.

## ಕಾರ್ಮಿಕರಿಗೆ ಸಾಮಾಜಿಕ ಭದ್ರತೆ**

### ರೇಗೆ ಸಮಿತಿ ವರದಿಗಳು

ಭಾರತ ಸರ್ಕಾರವು ೧೨ನೇ ಫೆಬ್ರವರಿ, ೧೯೪೪ರಂದು ನೇಮಕ ಮಾಡಿದ ಕಾರ್ಮಿಕ ತಪಾಸಣಾ ಸಮಿತಿಯಲ್ಲಿ ಶ್ರೀ ಡಿ.ವಿ. ರೇಗೆ, ಐ.ಸಿ.ಎಸ್. ಅಧ್ಯಕ್ಷರಾಗಿದ್ದರು. ಹಾಗೂ ಶ್ರೀ ಎಸ್. ಆರ್. ದೇಶಪಾಂಡೆ, ಡಾ॥ ಅಹ್ಮದ್ ಮುಕ್ತಾರ್ ಮತ್ತು ಪ್ರೊ॥ ಬಿ.ಸಿ. ಆಘಾರ್‌ಕರ್ ಸದಸ್ಯರಾಗಿದ್ದರು. ಈ ಸಮಿತಿಯು ತಯಾರಿಸಿದ ೩೫ ವರದಿಗಳಲ್ಲಿ ಸುಮಾರು ಇಪ್ಪತ್ತು ಲಕ್ಷ ಪದಗಳಿದ್ದು ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಸುದೀರ್ಘವಾದ ಮಾಹಿತಿ ಇರುತ್ತದೆ. ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಏಪ್ರಿಲ್, ೯ ರಂದು ಕೇಂದ್ರೀಯ ಶಾಸನಸಭೆಯ ಮುಂದೆ ಇಪ್ಪತ್ತು ವರದಿಗಳನ್ನು ಇಟ್ಟರು.

ಸಮಿತಿ ಸಂಗ್ರಹಿಸಿರುವ ಮಾಹಿತಿಯಲ್ಲಿ ೩೮ ಆಯ್ದ ಉದ್ದಿಮೆಗಳ ಕಾರ್ಮಿಕರ ವೇತನ, ಸಂಪಾದನೆ, ಉದ್ಯೋಗ, ವಸತಿ ಮತ್ತು ಸಾಮಾಜಿಕ ಸ್ಥಿತಿಯ ಬಗ್ಗೆ ವರದಿಯಿದೆ; ಉದಾ: ಮ್ಯಾಂಗನೀಸ್, ಚಿನ್ನ, ಅಭ್ರಕ, ಕಬ್ಬಿಣದ ಅದಿರು ಮತ್ತು ಉಪ್ಪು; ಪ್ಲ್ಯಾಂಟೇಶನ್–ಟೀ, ಕಾಫಿ ಮತ್ತು ರಬ್ಬರು; ಕಾರ್ಖಾನೆಗಳು – ಹತ್ತಿ, ಸೆಣಬು, ರೇಷ್ಮೆ, ಉಣ್ಣೆ, ಖನಿಜ ತೈಲ, ಹಡಗು ನಿರ್ಮಾಣ, ಇಂಜಿನಿಯರಿಂಗ್, ಸಿಮೆಂಟು, ಬೆಂಕಿಕಡ್ಡಿ ತಯಾರಿಕೆ, ಕಾಗದ, ರತ್ನಗಂಬಳಿ ನೇಯುವುದು, ಮುದ್ರಣಾಲಯಗಳು, ಗಾಜು ಮತ್ತು ಔಷಧಿ ತಯಾರಿಕೆ, ಅರಗಿಗೆ ಮೆರಗು ಹಾಕುವುದು, ಬೀಡಿ ತಯಾರಿಕೆ, ಅಭ್ರಕವನ್ನು ಒಡೆಯುವುದು, ಸಕ್ಕರೆ, ಹತ್ತಿ, ಹತ್ತಿಯಿಂದ ಬೀಜ ತೆಗೆಯುವುದು, ಬೇಲು ಮಾಡುವುದು ಮತ್ತು ಅಕ್ಕಿ ಗಿರಣಿಗಳು; ಸಾರಿಗೆ – ಟ್ರ್ಯಾಮ್‌ಗಳು ಮತ್ತು ಬಸ್ಸುಗಳು ಮತ್ತು ಗೆಜೆಟೆಡ್ ಅಲ್ಲದ ರೈಲ್ವೆ ನೌಕರರು; ಮತ್ತು ಇತರೆ ಉದ್ಯೋಗಗಳು – ಬಂದರು ಕೆಲಸಗಾರರು, ಪುರಸಭಾ ಕಾರ್ಮಿಕರು, ಕೇಂದ್ರೀಯ ಲೋಕೋಪಯೋಗಿ ಇಲಾಖೆ, ಮತ್ತು ರಿಕ್ಷಾ ಎಳೆಯುವವರು. ಸರ್ಕಾರವು ಮುಂದೆ ನೌಕರರಿಗೆ ಸಾಮಾಜಿಕ ಭದ್ರತೆಯನ್ನೊದಗಿಸಲು ಶಾಸನ ಮಾಡುವಾಗ ಇದು ಸಹಾಯಕವಾಗಬಹುದೆಂದು ನಿರೀಕ್ಷಿಸಲಾಗಿದೆ.

### ಮಾದರಿ ನೋಡುವ ವಿಧಾನ

ಕಾರ್ಮಿಕ ಸಮಸ್ಯೆಗಳು ಪ್ರಾಂತೀಯ ಸಮಸ್ಯೆಯಾಗಿರುವ ಬದಲು ಉದ್ಯಮ–ಕೇಂದ್ರಿತ ಸಮಸ್ಯೆಯಾಗಿರುವುದರಿಂದ ಭಾರತದಾದ್ಯಂತ ಬೇರೆ ಬೇರೆ ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಕಂಡುಹಿಡಿಯುವ ಮಾದರಿ ವಿಧಾನವನ್ನು ಸಮಿತಿಯು ಶಿಫಾರಸು ಮಾಡಿತು. ಎರಡು ವರ್ಷಗಳ

---

** ಇಂಡಿಯನ್ ಇನ್‌ಫರ್ಮೇಷನ್, ಏಪ್ರಿಲ್ ೧೫, ೧೯೪೬, ಪು. ೫೬೮.

ತಮ್ಮ ಕಾರ್ಯಾವಧಿಯಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಬಿಡಿಬಿಡಿಯಾಗಿ ಭಾರತದಾದ್ಯಂತ ಸುಮಾರು ೬೫ ಉದ್ಯಮಗಳಿಗೆ ಭೇಟಿ ನೀಡಿ – ಶ್ರೀನಗರದಿಂದ ತಿರುಚನಾಪಳ್ಳಿಯವರೆಗೆ, ಕ್ವೆಟ್ಟಾದಿಂದ ಶಿಲ್ಲಾಂಗ್‌ವರೆಗೆ ೫೨೮ ಕೇಂದ್ರಗಳಲ್ಲಿ ತಪಾಸಣೆ ನಡೆಸಿದರು. ಇವುಗಳಲ್ಲಿ ಪ್ಲ್ಯಾಂಟೇಷನ್ ಎಸ್ಟೇಟುಗಳು ಮತ್ತು ಗಣಿಗಳೂ ಸೇರಿವೆ. ಬೇರೆ ಬೇರೆ ಉದ್ಯಮಗಳಿಗೆ ಸೇರಿದ ೧,೬೩೧ ಸಂಸ್ಥೆಗಳಲ್ಲಿ ತಪಾಸಣೆ ನಡೆಸಲಾಯಿತು. ನೂರಾರು ಪ್ರಶ್ನೆಗಳನ್ನೊಳಗೊಂಡ ಪ್ರಶ್ನಾವಳಿಯನ್ನು ಬೇರೆ ಬೇರೆ ಉದ್ಯಮ ಸಂಸ್ಥೆಗಳಿಗೆ, ಪ್ರಾಂತೀಯ ಮತ್ತು ರಾಜ್ಯ ಸರ್ಕಾರಗಳಿಗೆ, ಅಧಿಕಾರಿಗಳಿಗೆ, ಮಾಲೀಕರಿಗೆ ಮತ್ತು ನೌಕರರ ಸಂಘಗಳಿಗೆ ಕಳುಹಿಸಿಕೊಡಲಾಯಿತು. ವೇತನಗಣತಿಯ ಬಗ್ಗೆಯೇ ೩೪,೦೦೦ ಮಾದರಿಗಳನ್ನು ಪಡೆಯಲಾಯಿತು; ಈ ಒಂದು ಉದಾಹರಣೆಯಿಂದಲೇ ಸಮಿತಿ ವಿಶ್ಲೇಷಣೆ ಮಾಡಿದ ದತ್ತಾಂಶದ ಮೊತ್ತವನ್ನು ತಿಳಿಯಬಹುದಾಗಿದೆ.

ತಾತ್ಕಾಲಿಕ ಸರ್ವೇಕ್ಷಣ ನಡೆಸಲು ಸಮಿತಿಯು ಕ್ಷೇತ್ರ ಸಿಬ್ಬಂದಿಗಳನ್ನು ನೇಮಿಸಿಕೊಂಡಿತು. ಇದರಲ್ಲಿ ೧೬ ಮಂದಿ ಮೇಲ್ವಿಚಾರಕರು ಮತ್ತು ೪೫ ಮಂದಿ ತಪಾಸಣಾಗಾರರು ಇದ್ದರು. ಸ್ಥಳಕ್ಕೆ ಹೋಗಿ ಬೇರೆ ಬೇರೆ ಕೇಂದ್ರಗಳಲ್ಲಿ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ ಈ ಸಿಬ್ಬಂದಿ ವರ್ಗ ಬೇರೆ ಮೂಲಗಳಿಂದಲೂ ಮಾಹಿತಿಯನ್ನು ಕಲೆಹಾಕಿತು. ತಮ್ಮ ತಪಾಸಣಾ ಅವಧಿಯಲ್ಲಿ ಅವರು ಮಾಲೀಕರನ್ನು, ಕಾರ್ಮಿಕರು ಮತ್ತು ಅಧಿಕಾರಿಗಳನ್ನು ವ್ಯಕ್ತಿಶಃ ಭೇಟಿ ಮಾಡಿದರು.

ಬೇರೆ ಬೇರೆ ಕ್ಷೇತ್ರಗಳಲ್ಲಿ ಒಂದೇ ಉದ್ಯಮವನ್ನು ಆರಿಸಿಕೊಂಡು ಅಲ್ಲಿ ಕಾರ್ಮಿಕರಿಗೆ ಇರಬಹುದಾದ ಸಮಸ್ಯೆಗಳ ಮಾದರಿಯನ್ನು ತಿಳಿದುಕೊಳ್ಳಲಾಯಿತು. ಅದರ ಪ್ರಾಮುಖ್ಯ, ಗಾತ್ರ ಇತ್ಯಾದಿ, ಅಂಶಗಳನ್ನು ಗಮನಿಸಿ ಆ ಉದ್ಯಮ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ಅದನ್ನು ಆರಿಸಿಕೊಳ್ಳಲಾಯಿತು. ಪ್ರಚಲಿತವಿರುವ ಕಾರ್ಮಿಕ ಶಾಸನ, ಕಾರ್ಮಿಕರ ವೇತನ ಮತ್ತು ಗಳಿಕೆ, ಕೆಲಸ ಮಾಡುವ ಸ್ಥಿತಿ, ಋಣ, ವಯಸ್ಸು, ಮರಣಸಂಬಂಧೀ ಅಂಕಿಅಂಶ, ಕಲ್ಯಾಣ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ಭದ್ರತಾಕ್ರಮಗಳ ಬಗ್ಗೆ ಪ್ರಶ್ನಿಸಲಾಯಿತು.

ಪ್ರಾಂತೀಯ ಹಾಗೂ ರಾಜ್ಯ ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು, ಬಂದರು ಪ್ರಾಧಿಕಾರಗಳು ಹಾಗೂ ಮಾಲೀಕರು ಮತ್ತು ನೌಕರರ ಸಂಘಗಳು ಸಮಿತಿಯ ಕೆಲಸದಲ್ಲಿ ಭಾಗಿಯಾದವು.

## ವರ್ಕ್ಸ್, ಗಣಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖೆ

ಕಾರ್ಮಿಕ ಇಲಾಖೆಯನ್ನು ವರ್ಕ್ಸ್ ಇಲಾಖೆ, ಗಣಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖೆಗಳೆಂದು ವಿಭಾಗ ಮಾಡಿದುದು ಏಪ್ರಿಲ್ ೮ ರಿಂದ ಜಾರಿಗೆ ಬಂದಿತು.

ವರ್ಕ್ಸ್, ಗಣಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖೆಯು ಈ ಕೆಳಗಿನ ವಿಷಯಗಳ ಬಗ್ಗೆ ಕಾರ್ಯಪ್ರವೃತ್ತವಾಗುವುವು : ಕೇಂದ್ರೀಯ ಲೋಕೋಪಯೋಗಿ ಇಲಾಖೆ ಮತ್ತು ಕೇಂದ್ರೀಯ ವರ್ಕ್ಸ್ ಪ್ರೊಜೆಕ್ಟರ್ಸ್, ಸಿವಿಲ್ ಇಂಜಿನಿಯರಿಂಗ್, ಗಣಿಗಳು ಮತ್ತು ಖನಿಜಗಳು, ಭಾರತೀಯ ಭೂಗರ್ಭ ಸರ್ವೇಕ್ಷಣ, ಭಾರಿ ನೀರಾವರಿ ಯೋಜನೆಗಳು – ಇದರಲ್ಲಿ ಕೇಂದ್ರೀಯ ಜಲಮಾರ್ಗಗಳು, ನೀರಾವರಿ ಮತ್ತು ಜಲಸಂಚಾರ ಆಯೋಗ, ವಿದ್ಯುಚ್ಛಕ್ತಿ ಮತ್ತು ಲೇಖನ ಸಾಮಗ್ರಿ ಹಾಗೂ ಮುದ್ರಣ ಸೇರುತ್ತವೆ.

ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಓ), ಕಾರ್ಮಿಕ ಕಲ್ಯಾಣ, ಕಾರ್ಮಿಕ ಸಂಬಂಧಗಳು, ಭದ್ರತಾ ಕ್ರಮಗಳು, ಕಾರ್ಮಿಕ ಕಾನೂನು ಮತ್ತು ಶಾಸನವನ್ನು ಜಾರಿಗೊಳಿಸುವುದು, ಸುರಕ್ಷತಾ ಕ್ರಮಗಳು,

ನಿವೃತ್ತ ಸೈನಿಕರು ಮತ್ತು ಸ್ತ್ರೀಯರ ಪುನರ್ವ್ಯವಸ್ಥೆ, ತಾಂತ್ರಿಕ ಮತ್ತು ವೃತ್ತಿ ಪ್ರಶಿಕ್ಷಣ ಯೋಜನೆಗಳು, ಕಾರ್ಮಿಕ ಕಾನೂನು ಮತ್ತು ಅಂಕಿಅಂಶಗಳು, ಸಂಶೋಧನೆ ಮತ್ತು ತಪಾಸಣೆ – ಈ ಮುಂತಾದ ವಿಷಯಗಳನ್ನು ಕಾರ್ಮಿಕ ಇಲಾಖೆ ಇನ್ನು ಮುಂದೆಯೂ ನೋಡಿಕೊಳ್ಳುವುದು.

ಎರಡೂ ಇಲಾಖೆಯನ್ನು ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್‌ರವರು, ಕಾರ್ಮಿಕ ಸದಸ್ಯರು, ನೋಡಿಕೊಳ್ಳುವರು. ತಾತ್ಕಾಲಿಕವಾಗಿ ಕಲ್ಲಿದ್ದಲು ಉತ್ಪಾದನೆ ಮಾತ್ರ ಕೈಗಾರಿಕೆ ಮತ್ತು ಸರಬರಾಜು ಸದಸ್ಯರ ಅಧೀನದಲ್ಲಿ ಇರುವುದು.

**ದಾಮೋದರ್ ಯೋಜನೆ ***

ಭಾರತ ಸರ್ಕಾರದ ಕಾರ್ಮಿಕ ಸದಸ್ಯರಾದ ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ, ಬಂಗಾಳ ಮತ್ತು ಬಿಹಾರ ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡಂತೆ ನವದೆಹಲಿಯಲ್ಲಿ ಏಪ್ರಿಲ್ ೨೩ ಮತ್ತು ೨೪ ಈ ದಿನಗಳೆಂದು ಒಂದು ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ೫೫ ಕೋಟಿ ರೂಪಾಯಿಗಳ ದಾಮೋದರ ನದಿ ಯೋಜನೆಯ ಮೊದಲನೆಯ ಅಣೆಕಟ್ಟನ್ನು (ತಿಲಾಯಿ ಬಳಿ) ಶೀಘ್ರವಾಗಿ ಕಟ್ಟುವ ಸಾಧ್ಯತೆಗಳನ್ನು ಪರಿಶೀಲಿಸಲಾಯಿತು.

ದಾಮೋದರ ನದಿ ಮತ್ತು ಅದರ ಉಪನದಿಗಳಿಂದಾಗುವ ಪ್ರವಾಹವನ್ನು ನಿಯಂತ್ರಿಸುವುದು ಈ ವಿವಿಧೋದ್ದೇಶ ಯೋಜನೆಯ ಗುರಿಯಾಗಿದೆ. ಹಾಗೂ ಕಣಿವೆಯಲ್ಲಿ ವಾಸಿಸುತ್ತಿರುವ ಸುಮಾರು ೪,೦೦೦,೦೦೦ ಜನರಿಗೆ ನಿರಂತರವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸುವುದು ಮತ್ತು ಜಲಸಂಚಾರಕ್ಕೆ ಅನುಕೂಲ ಮಾಡಿಕೊಡುವುದೂ ಸಹ ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯು ಮುಗಿಯುವ ವೇಳೆಗೆ ಪೂರ್ಣಗೊಳ್ಳುವ ಎಂಟು ಅಣೆಕಟ್ಟುಗಳಲ್ಲಿ ಸುಮಾರು ೪,೭೦೦,೦೦೦ ಎಕರೆ ಅಡಿ ನೀರು ನಿಲ್ಲುವುದಲ್ಲದೆ ಸುಮಾರು ೮೦೦,೦೦೦ ಎಕರೆ ಭೂಮಿಗೆ ನೀರಾವರಿ ಆಗುವುದು ಮತ್ತು ೩೫೦,೦೦೦ ಕಿಲೊವಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುವುದು.

**ಮೈಥಾನ್ ಅಣೆಕಟ್ಟು**

ಟೆನ್ನಿಸ್ಸಿ ಕಣಿವೆ ಪ್ರಾಧಿಕಾರ ಎಂಜಿನಿಯರುಗಳಾದ ಸರ್ವಶ್ರೀ ರಾಸ್ ರೀಗೆಲ್ ಮತ್ತು ಫ್ರೆಡ್ ಸಿ. ಶ್ಲೆಮ್ಮರ್‌ರವರು ಅವರ ಸಹಾಯಕರಾದ ರಾಯ್ ಬಹಾದ್ದೂರ್ ಎ.ಎನ್. ಖೋಸ್ಲಾ ಮತ್ತು ಮೈಸೂರು ರಾಜ್ಯದ ಮುಖ್ಯ ಇಂಜಿನಿಯರ್‌ರವರಾದ ಶ್ರೀ ಎಂ. ನರಸಿಂಹಯ್ಯ ಇವರುಗಳು ಕೊಟ್ಟ ಸಲಹೆ ಮತ್ತು ಕೇಂದ್ರ ತಾಂತ್ರಿಕ ವಿದ್ಯುಚ್ಛಕ್ತಿ ಮಂಡಳಿ ಸಲ್ಲಿಸಿರುವ ವರದಿಯಲ್ಲಿ ಸ್ಪಷ್ಟವಾಗಿರುವಂತೆ ಈ ಯೋಜನೆಯನ್ನು ಆದಷ್ಟೂ ಜಾಗ್ರತೆ ಅನುಷ್ಠಾನಕ್ಕೆ ತರಬೇಕೆಂದು ಅಭಿಪ್ರಾಯಪಡಲಾಗಿದೆ. ದಾಮೋದರ್ ನದಿಯ ಉಪನದಿಯಾದ ಬರಾಕರ್‌ಗೆ ಅಡ್ಡಲಾಗಿ ತಿಲೈಯ (ಕೊಡರ್ಮ ಹತ್ತಿರ) ಮತ್ತು ಮೈಥಾನ್‌ಗಳ ಬಳಿ ಅಂದರೆ ದಾಮೋದರ್ ನದಿ ಮತ್ತದರ ಉಪನದಿಯ ಸಂಗಮದಿಂದ ಕೊಂಚ ಮೇಲ್ಭಾಗಕ್ಕೆ ಅಣೆಕಟ್ಟುಗಳನ್ನು ಕಟ್ಟಬಹುದೆಂಬ ಪ್ರಸ್ತಾಪವನ್ನು ಸಮ್ಮೇಳನ ಒಪ್ಪಿಕೊಂಡಿದೆ.

ಬಿಹಾರ ಮತ್ತು ಬಂಗಾಳ ಸರ್ಕಾರಗಳು ಒಪ್ಪಿಗೆ ಸೂಚಿಸುವುದಕ್ಕೆ ಸಾಕಷ್ಟು ಸಮಯ ಬೇಕೆಂದು

---

* ಇಂಡಿಯನ್ ಇನ್‌ಫರ್ಮೇಷನ್, ಜೂನ್ ೧, ೧೯೪೬, ಪು. ೬೮೨.

ಕೋರಿರುವುದರಿಂದ ಅಕ್ಟೋಬರ್ ೧೯೪೭ರ ತನಕ ಬೃಹತ್ ಮೈಥಾನ್ ಅಣೆಕಟ್ಟು ಕಟ್ಟುವುದನ್ನು ಮುಂದಕ್ಕೆ ಹಾಕಲು ಸಮ್ಮೇಳನ ಅಭಿಪ್ರಾಯಪಟ್ಟಿತು. ಅಕ್ಟೋಬರ್ ೧೯೪೬ರ ವೇಳೆಗೆ ಇದು ಪ್ರಾರಂಭವಾಗಬೇಕೆಂದು ನಿಗದಿಪಡಿಸಿದರೆ, ಕಂಟ್ರಾಕ್ಟರುಗಳು ಮತ್ತು ಇಂಜಿನಿಯರುಗಳಿಗೆ ಸಾಕಷ್ಟು ಸಮಯ ಸಿಕ್ಕದೇ ಹೋಗುತ್ತದೆ. ಮಧ್ಯ–ಬರಾಕರ್ ವಲಯದಲ್ಲಿ ಎರಡನೆಯ ಜಲಾಶಯವನ್ನು ಕಟ್ಟುವ ಬದಲು ಮೈಥಾನ್ ಬಳಿ ಕಟ್ಟುವ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವುದು ಸೂಕ್ತವಾಗಿರುವುದರಿಂದ ಆ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸಲು ಈ ಮುಂದೂಡಿಕೆಯಿಂದ ಅನುಕೂಲವಾಗುವುದು.

ತಿಲೈಯ ಅಣೆಕಟ್ಟನ್ನು ಪ್ರಾರಂಭಿಸುವ ವಿಷಯದಲ್ಲಿ ಹೆಚ್ಚಿನ ಸಮಸ್ಯೆ ಇಲ್ಲವೆಂಬುದು ಗಮನಕ್ಕೆ ಬಂದಿತು. ಆದಷ್ಟೂ ಶೀಘ್ರವಾಗಿ ಇದರ ನಿರ್ಮಾಣ ಕಾರ್ಯ ಮುಗಿಸುವುದರಿಂದ ನೀರಾವರಿಗೆ ಅನುಕೂಲವಾಗುವುದಲ್ಲದೆ ಪುನರ್ವ್ಯವಸ್ಥೆಯ ಕೆಲಸ ಸಲೀಸಾಗುವುದು; ಎಲ್ಲಕ್ಕಿಂತ ಮಿಗಿಲಾಗಿ ಮೈಥಾನ್ ಅಣೆಕಟ್ಟಿನ ನಿರ್ಮಾಣಕ್ಕೆ ಅಗತ್ಯವಾದ ವಿದ್ಯುಚ್ಛಕ್ತಿ ಇದರಿಂದ ಲಭ್ಯವಾಗುವುದು. ಆದ್ದರಿಂದ ಉಳಿದ ಯೋಜನೆಗಳಿಗಿಂತ ಮೊದಲು ತಿಲೈಯ ಅಣೆಕಟ್ಟಿನ ಕೆಲಸವನ್ನು ಕೈಗೆತ್ತಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲು ಶೀಘ್ರ ತಪಾಸಣೆ ನಡೆಸಬೇಕೆಂದು ಸಮ್ಮೇಳನ ಸಲಹೆ ನೀಡಿತು.

ಬಂಗಾಳ ಮತ್ತು ಬಿಹಾರ ಸರ್ಕಾರಗಳು ಕೇವಲ ತಮ್ಮಿಂದ ಈ ಯೋಜನೆಯ ಉಸ್ತುವಾರಿ ಸಾಧ್ಯವಾಗುವುದಿಲ್ಲವೆಂದು ಹೇಳಿ ಈ ಕೆಲಸಕ್ಕಾಗಿ ಒಂದು ಪ್ರಾಧಿಕಾರವನ್ನು ನೇಮಿಸಬೇಕೆಂದು ಕೇಳಿಕೊಂಡವು. ದಾಮೋದರ ಕಣಿವೆ ಪ್ರಾಧಿಕಾರಕ್ಕೆ ಆರು ತಿಂಗಳುಗಳೊಳಗಾಗಿ ಒಂದು ಯೋಜನೆ ತಯಾರು ಮಾಡಿಕೊಡುವಂತೆ ಒರಿಸ್ಸಾ ರಾಜ್ಯಪಾಲರಿಗೆ ಒಮ್ಮೆ ಸಲಹೆಗಾರರಾಗಿದ್ದ ಶ್ರೀ ಜಿ.ಕೆ. ಗೋಖಲೆಯವರನ್ನು ಭಾರತ ಸರ್ಕಾರ ನೇಮಕ ಮಾಡಿತು.

**ಸುಪರ್ದಿಗೆ ತೆಗೆದುಕೊಂಡ ಭೂಮಿಗೆ ಪರಿಹಾರ**

ಜಲಾಶಯಗಳ ನಿರ್ಮಾಣಕ್ಕಾಗಿ ಸ್ವಾಧೀನಕ್ಕೆ ತೆಗೆದುಕೊಂಡ ಭೂಮಿಗೆ ಪೂರ್ಣವಾದ ಹಾಗೂ ಸಮರ್ಪಕವಾದ ರೀತಿಯಲ್ಲಿ ಪರಿಹಾರ ನೀಡುವಾಗ ಹಣವನ್ನು ನೀಡುವ ಬದಲು ಆದಷ್ಟೂ ಭೂಮಿಗೆ ಬದಲಾಗಿ ಭೂಮಿಯನ್ನೇ ನೀಡಬೇಕೆಂದು ತೀರ್ಮಾನಿಸಲಾಯಿತು. ಈ ಸಂಬಂಧವಾಗಿ ನೇಮಿಕ ಹೊಂದಿದ ಆಡಳಿತಾಧಿಕಾರಿ ಒಂದು ಸವಿವರವಾದ ಯೋಜನೆಯನ್ನು ತಯಾರುಮಾಡಿ ಭೂಮಿ ಕಳೆದುಕೊಂಡವರಿಗೆ ಪುನರ್‌ವ್ಯವಸ್ಥೆ ಕಲ್ಪಿಸುವಾಗ ಅವರು ಕಳೆದುಕೊಂಡ ಭೂಮಿಯಿಂದ ಅವರು ಜೀವನೋಪಾಯಕ್ಕೆ ಪಡೆಯುತ್ತಿದ್ದಷ್ಟನ್ನೇ ಹೊಸ ಭೂಮಿಯಿಂದಲೂ ಪಡೆಯಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು.

ತಪಾಸಣೆ ಮತ್ತು ಸರ್ವೇಕ್ಷಣ ಕಾರ್ಯಕ್ಕೆ ತಗಲುವ ಖರ್ಚನ್ನು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಹಂಚಿಕೊಳ್ಳಬೇಕೆಂದೂ, ಸಾಮಾನ್ಯ ಮೇಲ್ವಿಚಾರಣೆಯು ಕೇಂದ್ರೀಯ ತಾಂತ್ರಿಕ ವಿದ್ಯುಚ್ಛಕ್ತಿ ಮಂಡಳಿಯ ಉಸ್ತುವಾರಿಯೆಂದೂ, ನೀರಾವರಿ ಮತ್ತು ಜಲಸಂಚಾರದ ವಿಷಯಗಳು ಕೇಂದ್ರೀಯ ಜಲಮಾರ್ಗಗಳು, ನೀರಾವರಿ ಮತ್ತು ಜಲಸಂಚಾರ ಆಯೋಗದ ಜವಾಬ್ದಾರಿಯೆಂದೂ ಸಮ್ಮೇಳನ ಅಭಿಪ್ರಾಯಪಟ್ಟಿತು.

---

* ಇಂಡಿಯನ್ ಇನ್‌ಫರ್ಮೇಷನ್, ಜುಲೈ ೧೫, ೧೯೪೬, ಪು. ೩೪.

## ಪರಿಶಿಷ್ಟ ಜಾತಿಗಳು ಮತ್ತು ಕೇಂದ್ರೀಯ ಸೇವೆಗಳು*

ಜುಲೈ ೧೫, ೧೯೪೬ರಂದು ಭಾರತೀಯ ರಾಜ್ಯಪತ್ರದಲ್ಲಿ ಪ್ರಕಟವಾಗಿರುವ ನಿರ್ಣಯದಂತೆ ಭಾರತ ಸರ್ಕಾರವು ನೇರ ನೇಮಕಾತಿ ಆಧಾರದ ಮೇಲೆ ಕೇಂದ್ರೀಯ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳವರ ಮೀಸಲಾತಿಯನ್ನು ಜನಸಂಖ್ಯಾ ಪ್ರಮಾಣದ ರೀತ್ಯಾ ಪ್ರತಿಶತ ೮ ೧/೩ ರಿಂದ ೧೨ ೧/೨ಕ್ಕೆ ಏರಿಸಿದೆ.

ಆಗಸ್ಟ್ ೧೧, ೧೯೪೩ರ ನಿರ್ಣಯದಲ್ಲಿನ ೪ನೇ ಪ್ಯಾರಾದ (೧) ಮತ್ತು (೨) ನಿಯಮಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ :

(೧) "ಅಖಿಲ ಭಾರತ ಮಟ್ಟದಲ್ಲಿ ಕೇಂದ್ರೀಯ ಸೇವೆಗಳಿಗೆ ನೇರ ನೇಮಕಾತಿ ಆಧಾರದ ಮೇಲೆ ಖಾಲಿ ಹುದ್ದೆಗಳಿಗೆ ಭರ್ತಿ ಮಾಡುವಾಗ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಿಗೆ ೧೨.೫ ಪ್ರತಿಶತವನ್ನು ಮೀಸಲಿಟ್ಟಿದೆ".

(೨) "ನೇಮಕಾತಿ ಅಖಿಲ ಭಾರತ ಮಟ್ಟದ್ದಾಗಿರದೆ ಸ್ಥಳೀಯ ವಲಯಗಳು ಮತ್ತು ವೃತ್ತಗಳ ಮಟ್ಟದಲ್ಲಿ (ಅಂದರೆ, ರೈಲ್ವೆ ಇಲಾಖೆಯಲ್ಲಿ ಸಿಬ್ಬಂದಿ ಹುದ್ದೆಗಳು, ಅಂಚೆ ಮತ್ತು ತಂತಿ ಇಲಾಖೆಗಳು, ಸುಂಕದ ಇಲಾಖೆ, ಮತ್ತು ಆದಾಯ ತೆರಿಗೆ ಇಲಾಖೆ ಇತ್ಯಾದಿ) ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯವರಿಗೆ ಖಾಲಿ ಹುದ್ದೆಗಳಲ್ಲಿ ೧೨.೫ ಪ್ರತಿಶತ ಮೀಸಲು ಇಡಬೇಕಾಗುವುದು. ಆ ಸಂದರ್ಭದಲ್ಲಿ ಸಂಬಂಧಪಟ್ಟ ಸ್ಥಳೀಯ ವಲಯ ಅಥವಾ ವೃತ್ತದಲ್ಲಿ ಇರುವ ಪರಿಶಿಷ್ಟ ಜಾತಿಗಳವರ ಜನಸಂಖ್ಯಾ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ಪ್ರತಿಶತ ಗೊತ್ತುಪಡಿಸಬೇಕು. ಸಂಬಂಧಪಟ್ಟ ಪ್ರಾಂತೀಯ ಸರ್ಕಾರ ನಿಗದಿಪಡಿಸುವ ನೇರ ನೇಮಕಾತಿ ನಿಯಮಗಳಿಗೆ ಅನುಗುಣವಾಗಿ ಈ ಸವಲತ್ತನ್ನು ನೀಡಬೇಕಾಗಿದೆ.

♦

ಆಗಸ್ಟ್ ೨೪, ೧೯೪೬ರಂದು ವೈಸ್‌ರಾಯ್‌ರವರ ಭವನದಿಂದ ನೀಡಲಾದ ಅಧಿಕೃತ ಪ್ರಕಟಣೆಯಲ್ಲಿ, ಘನತೆವೆತ್ತ ಮಹಾಪ್ರಭುಗಳು ಗವರ್ನರ್ ಜನರಲ್‌ರವರ ಕಾರ್ಯಕಾರಿ ಪರಿಷತ್ತಿನ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ತಿಳಿಸಲಾಯಿತು. ಹೊಸ ಮಂತ್ರಿಮಂಡಲದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಹೆಸರನ್ನು ಸೇರಿಸಲಾಗಿಲ್ಲ.

# ಭಾಗ – ೨

## ೧೯೪೨ರಿಂದ ೧೯೪೬ರ ವರೆಗಿನ ಅವಧಿಯಲ್ಲಿನ
## ಮುಖ್ಯ ಪತ್ರವ್ಯವಹಾರ,
## ಮನವಿಗಳು, ಹೇಳಿಕೆಗಳು ಇತ್ಯಾದಿ

## ವಿಭಾಗ – ೧
## ಮನವಿ

ಗೋಪ್ಯ
ಪ್ರಸರಣಕ್ಕಾಗಿ ಅಲ್ಲ

# ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು

**ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್**
ಎಂ.ಎ., ಪಿಎಚ್.ಡಿ., ಡಿ.ಎಸ್‌ಸಿ., ಬ್ಯಾರಿಸ್ಟರ್–ಅಟ್–ಲಾ
ಗವರ್ನರ್ ಜನರಲ್ ಅವರ ಕಾರ್ಯಕಾರಿ ಮಂಡಲಿಯ ಸದಸ್ಯರು

**ಘನತೆವೆತ್ತ ಗವರ್ನರ್ ಜನರಲ್ ಅವರಿಗೆ
೧೯೪೨ರ ಅಕ್ಟೋಬರ್ ೨೯ರಂದು
ಸಲ್ಲಿಸಿದ ಮನವಿ**

೨೨, ಪೃಥ್ವಿರಾಜ ರಸ್ತೆ, ನವದೆಹಲಿ

(ಲೇಖಕರು ಪ್ರಕಟಿಸಿದ ಪುಸ್ತಿಕೆಯಿಂದ ಪುನರ್ಮುದ್ರಿತ)

# ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು

## ಪೀಠಿಕೆ

ಈ ಮನವಿ ಬ್ರಿಟಿಷ್ ಭಾರತದ ಪರಿಶಿಷ್ಟ ಜಾತಿಗಳ ಕುಂದುಕೊರತೆಗಳನ್ನು ಪ್ರತಿಪಾದಿಸುತ್ತದೆ ಮತ್ತು ಅವುಗಳನ್ನು ಪರಿಹರಿಸಲು ಅಗತ್ಯವಾದ ಕ್ರಮಗಳನ್ನು ಸೂಚಿಸುತ್ತದೆ. ಕುಂದುಕೊರತೆಗಳನ್ನು ಪಟ್ಟಿ ಮಾಡುವಾಗ ಕೇವಲ ಕೇಂದ್ರ ಸರ್ಕಾರ ಸರಿಪಡಿಸಬಹುದಾದವುಗಳನ್ನು ಮಾತ್ರ ನಾನು ಗಮನಿಸಿದ್ದೇನೆ.

ಈ ಮನವಿಯಲ್ಲಿ ಪಟ್ಟಿ ಮಾಡಿರುವ ಕುಂದುಕೊರತೆಗಳನ್ನು ೧) ರಾಜಕೀಯ, ೨) ಶೈಕ್ಷಣಿಕ ಮತ್ತು ೩) ಇತರ ಎಂಬ ಮೂರು ಭಾಗಗಳಲ್ಲಿ ವರ್ಗೀಕರಿಸಲಾಗಿದೆ. ಮತ್ತು ಅವುಗಳನ್ನು ಬೇರೆ ಬೇರೆಯಾಗಿ ಚರ್ಚಿಸಲಾಗಿದೆ. ರಾಜಕೀಯ ಕುಂದುಕೊರತೆಗಳನ್ನು ಕುರಿತದ್ದು ಮೊದಲ ಭಾಗ, ಶೈಕ್ಷಣಿಕ ಕುಂದುಕೊರತೆಗಳನ್ನು ಕುರಿತದ್ದು ಎರಡನೆಯ ಭಾಗ ಹಾಗೂ ಇತರ ಕುಂದುಕೊರತೆಗಳನ್ನು ಕುರಿತದ್ದು ಮೂರನೆಯ ಭಾಗ. ನಿರಂತರ ಯಾತನೆಯ ಜೀವನವನ್ನು ನಡೆಸುತ್ತಿರುವವರನ್ನು ಕುರಿತು ಪ್ರತಿಯೊಂದು ಸರ್ಕಾರ ಕೈಗೊಳ್ಳಬೇಕಾದ ಕರ್ತವ್ಯವನ್ನು ಹೇಳುವಂತಹ ಸಾಹಸದಲ್ಲಿ ನಾನು ತೊಡಗಿರುವ ನಾಲ್ಕನೆಯ ಭಾಗವನ್ನು, ಭಾರತ ಸರ್ಕಾರವು ಇದನ್ನು ಮನಗಾಣುತ್ತದೆ ಮತ್ತು ಪರಿಶಿಷ್ಟ ಜಾತಿಗಳಿಗೆ ತಾನು ಮಾಡಬೇಕಾದ್ದನ್ನು ಮಾಡುತ್ತದೆ ಎಂಬ ನಿರೀಕ್ಷೆಯಿಂದ, ಇದಕ್ಕೆ ಸೇರಿಸಿದ್ದೇನೆ.

ವರ್ಗೀಕೃತ ಪಟ್ಟಿಯೊಂದನ್ನು ಈ ಕೆಳಗೆ ಕೊಡುವುದು ಸೂಕ್ತ ಎಂದು ನನ್ನ ಭಾವನೆ. ಈ ಪಟ್ಟಿ ಎರಡು ಉದ್ದೇಶಗಳನ್ನು ನೆರವೇರಿಸುವುದನ್ನು ಕಾಣಬಹುದು. ಅದು ಪ್ರಾರಂಭದಲ್ಲಿ ಈ ಮನವಿಯ ಮುಖ್ಯಾಂಶಗಳನ್ನು ನೀಡುತ್ತದೆ ಮತ್ತು ಎರಡನೆಯದಾಗಿ ಈ ಕುಂದುಕೊರತೆಗಳು ಪ್ರಥಮತಃ ಏನೆಂಬುದರ ಸಾಮಾನ್ಯ ಕಲ್ಪನೆಯನ್ನು ವಿಶದಪಡಿಸಲು ಅದು ಸಹಾಯ ಮಾಡುತ್ತದೆ.

### ಭಾಗ – ೧ ರಾಜಕೀಯ ಕುಂದುಕೊರತೆಗಳು

೧) ಕೇಂದ್ರ ಶಾಸಕಾಂಗದಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವುದು

೨) ಕೇಂದ್ರ ಕಾರ್ಯಾಂಗದಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವುದು

೩) ಸಾರ್ವಜನಿಕ ಸೇವೆಗಳಲ್ಲಿ ಪ್ರಾತಿನಿಧ್ಯ ಇಲ್ಲದಿರುವುದು

೪) ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪ್ರಾತಿನಿಧ್ಯ ಇಲ್ಲದಿರುವುದು

### ಭಾಗ – ೨ ಶೈಕ್ಷಣಿಕ ಕುಂದುಕೊರತೆಗಳು

೫) ವಿಶ್ವವಿದ್ಯಾನಿಲಯ ಮತ್ತು ಉನ್ನತ ಶಿಕ್ಷಣಗಳಿಗೆ ಸಹಾಯದ ಕೊರತೆ

೬) ತಾಂತ್ರಿಕ ತರಬೇತಿಗೆ ಸೌಕರ್ಯಗಳ ಕೊರತೆ

**ಭಾಗ – ೩ ಇತರ ಕುಂದುಕೊರತೆಗಳು**

೭) ಅಸ್ಪೃಶ್ಯರು ಮತ್ತು ಸರ್ಕಾರದ ಪ್ರಚಾರ

೮) ಅಸ್ಪೃಶ್ಯರು ಮತ್ತು ಸರ್ಕಾರಿ ಒಪ್ಪಂದಗಳು

**ಭಾಗ – ೪ ಯಾತನೆಗೊಳಗಾದ ಜನರಿಗಾಗಿ ಸರ್ಕಾರದ ಕರ್ತವ್ಯ**

# ಉಪವಿಭಾಗ – ೧

## ರಾಜಕೀಯ ಕುಂದುಕೊರತೆಗಳು

**೧. ಕೇಂದ್ರ ಶಾಸಕಾಂಗದಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಇಲ್ಲದಿರುವುದು**

೧. ಸದ್ಯದಲ್ಲಿ ರೂಪುಗೊಂಡಿರುವಂತೆ ಕೇಂದ್ರ ಶಾಸನಸಭೆಯಲ್ಲಿ ನೂರನಲವತ್ತೊಂದು ಜನ ಸದಸ್ಯರಿದ್ದಾರೆ. ಇವರಲ್ಲಿ ನೂರಎರಡು ಜನ ಚುನಾಯಿತ ಸದಸ್ಯರು ಹಾಗೂ ಮೂವತ್ತೊಂಬತ್ತು ಜನ ನಾಮಕರಣಗೊಂಡವರು. ನಾಮಕರಣಗೊಂಡವರಲ್ಲಿ ಹತ್ತೊಂಬತ್ತು ಜನ ಅಧಿಕಾರೇತರರು ಮತ್ತು ಇಪ್ಪತ್ತು ಜನ ಅಧಿಕಾರಿಗಳು. ಈ ಒಟ್ಟು ನೂರ ನಲವತ್ತೊಂದು ಜನರಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದವರು ಇಬ್ಬರಿದ್ದಾರೆ. ಪರಿಶಿಷ್ಟ ಜಾತಿಗಳ ಜನಸಂಖ್ಯೆಯೊಡನೆ ಇದನ್ನು ಗಮನಿಸಿ. ಭಾರತದಲ್ಲಿ ಜನಗಣತಿ ಎಂದರೆ ಒಂದು ರಾಜಕೀಯ ಸಂಗತಿ ಆಗಿದೆ ಮತ್ತು ಹಿಂದೂಗಳು, ಮುಸ್ಲಿಮರು ಹಾಗೂ ಸಿಖ್ಖರು ತಮ್ಮ ಸಂಖ್ಯೆ ಹೆಚ್ಚಿರುವಂತೆ ತೋರುವ ಜನಗಣತಿಯನ್ನು ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಇದು ಬಹುಮಟ್ಟಿಗೆ ಅಸ್ಪೃಶ್ಯರಿಗೆ ಹಾನಿಯಾಗುವ ರೀತಿಯಲ್ಲಿ ನಡೆದಿದೆ. ಆದ್ದರಿಂದ ಅವರ ಜನಸಂಖ್ಯೆಯ ಸರಿಯಾದ ಅಂಕಿಅಂಶಗಳನ್ನು ಪಡೆಯುವುದು ಕಷ್ಟ. ಜನಗಣತಿ ಏನೇ ಅಂದಾಜನ್ನು ನೀಡಿದ್ದರೂ, ಅದು ಕಡಿಮೆ ಅಂದಾಜೇ ಆಗಿರುತ್ತದೆ. ಏನೇ ಆದರೂ, ೧೯೪೦ರಲ್ಲಿ ಜನಗಣತಿ ನೀಡಿದ ಅಂಕಿಅಂಶಗಳ ಪ್ರಕಾರವಾಗಿ ಇದು ನಾಲ್ಕು ಕೋಟಿ ಎಂಬುದನ್ನು ಗಮನದಲ್ಲಿಟ್ಟುಕೊಂಡರೆ, ಕೇಂದ್ರ ಶಾಸಕಾಂಗದಲ್ಲಿನ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯ ಹಾಸ್ಯಾಸ್ಪದ ರೀತಿಯಲ್ಲಿ ಕಡಿಮೆ ಎಂಬುದರಲ್ಲಿ ಸಂದೇಹವಿರಲು ಸಾಧ್ಯವಿಲ್ಲ.

೨. ಪರಿಸ್ಥಿತಿಯನ್ನು ಸ್ಪಷ್ಟಗೊಳಿಸುವ ಉದ್ದೇಶದಿಂದ ಈ ಪ್ರಶ್ನೆಯನ್ನು ಅಂತರ್ಗತವಾಗಿಸಿಕೊಂಡ ಎರಡು ಪಟ್ಟಿಗಳನ್ನು ಕೆಳಗೆ ನೀಡಿದ್ದೇನೆ.

೩. ಪ್ರಸ್ತುತ, ಬೇರೆ ಬೇರೆ ಕೋಮುಗಳು ಕೇಂದ್ರ ಶಾಸಕಾಂಗದಲ್ಲಿ ಹೊಂದಿರುವ ಪ್ರಾತಿನಿಧ್ಯದ ಮೇಲೆ ಈ ಪಟ್ಟಿ ಬೆಳಕನ್ನು ಚೆಲ್ಲುತ್ತದೆ. ಐದನೆಯ ಕಾಲಮ್ಮಿನಲ್ಲಿರುವ ಸಂಖ್ಯೆಗಳು, ಕೆಲವು ಕೋಮುಗಳ ಶೇಕಡ ಪ್ರಮಾಣದೊಂದಿಗೆ, ಪ್ರತಿ ಕೋಮು ಹೊಂದಿರುವ ಒಟ್ಟು ಪ್ರಾತಿನಿಧ್ಯವನ್ನು ತಿಳಿಸುತ್ತವೆ. ಏನೇ ಇರಲಿ, ನಾನು ಅವುಗಳಿಗೆ ಒತ್ತುಕೊಡಲು ಬಯಸುವುದಿಲ್ಲ. ನಾಮಕರಣಗೊಂಡ ಅಧಿಕಾರಿಗಳ ಸಂಖ್ಯೆಯನ್ನು ಅವು ಒಳಗೊಂಡಿವೆ. ಅವರುಗಳ ಪ್ರಮುಖ ಉದ್ದೇಶ ಸರ್ಕಾರವನ್ನು ಪ್ರತಿನಿಧಿಸುವುದೇ ಹೊರತು ತಮ್ಮ ಕೋಮನ್ನು ಅಲ್ಲ. ಎರಡನೆಯದಾಗಿ, ನಾಮಕರಣಗೊಂಡ ಸರ್ಕಾರಿ ಘಟಕದ ಕೋಮುವಾರು ರಚನೆ ಬದಲಾವಣೆಗೆ ಒಳಪಡುವಂಥದ್ದು, ಸ್ಥಿರವಾದದ್ದಲ್ಲ. ಆದರೆ ಇತರ ಕಾಲಮ್ಮುಗಳಲ್ಲಿನ ಸಂಖ್ಯೆಗಳನ್ನು ಕುರಿತಂತೆ ಗಮನವನ್ನು ಸೆಳೆಯಲು ನಾನು ಖಂಡಿತವಾಗಿಯೂ ಇಚ್ಛಿಸುತ್ತೇನೆ. ಆರನೆಯ ಕಾಲಮ್ಮಿನಿಂದ ನಾನು ಆರಂಭಿಸುತ್ತೇನೆ. ಬೇರೆ ಬೇರೆ ಕೋಮುಗಳು ಚುನಾವಣೆ ಹಾಗೂ ನಾಮಕರಣಗಳ ಮೂಲಕ ಗಳಿಸಿಕೊಂಡ ಪ್ರಾತಿನಿಧ್ಯದ ಒಟ್ಟು ವ್ಯಾಪ್ತಿಯನ್ನು ಅದು ನೀಡುತ್ತದೆ. ಮೂರನೆಯ ಕಾಲಮ್ಮಿನ ಸಂಖ್ಯೆಗಳು ಇನ್ನೂ ಹೆಚ್ಚು ಗಮನಾರ್ಹವಾಗಿವೆ ಎಂಬುದನ್ನು ಅದು ಸೂಚಿಸುತ್ತದೆ. ಇದರ ಜೊತೆಗೆ ನಾಮಕರಣಕ್ಕೆ ಮೀಸಲಾದ ಸ್ಥಳಗಳಲ್ಲಿ ಶೇಕಡ ೨೧ರಷ್ಟು ಪಾಲನ್ನು ಅವರು ಪಡೆದಿದ್ದಾರೆ. ಮುಸ್ಲಿಮರು ಶೇಕಡ ೩೩.೫

## ಪಟ್ಟಿ – ೧

## ಬ್ರಿಟಿಷ್ ಭಾರತದ ಜನಸಂಖ್ಯೆ

| ಕೋಮುಗಳು | ೧೯೪೧ರಲ್ಲಿನ ಪ್ರತಿ ಕೋಮಿನ ಒಟ್ಟು ಸಂಖ್ಯೆ | ಜನಸಂಖ್ಯೆಯ ಪ್ರಮಾಣದ ಪ್ರಕಾರ ಕೋಮಿನ ಸ್ಥಾನ | ಒಟ್ಟು ಜನಸಂಖ್ಯೆಯ ಶೇಕಡಾವಾರು |
|---|---|---|---|
| ೧ | ೨ | ೩ | ೪ |
| **ಒಟ್ಟು** | **೨೯೫,೮೦೮,೭೨೨** | – | – |
| ಹಿಂದೂಗಳು | ೧೫೦,೮೯೦,೧೪೬ | ೧ | ೫೧.೦ |
| ಮುಸ್ಲಿಮರು | ೭೯,೩೯೮,೫೦೩ | ೨ | ೨೩.೬ |
| ಪರಿಶಿಷ್ಟ ಜಾತಿಗಳು | ೩೯,೯೨೦,೮೦೭ | ೩ | ೧೩.೫ |
| ಬುಡಕಟ್ಟು ಜನಾಂಗದವರು | ೧೬,೭೧೩,೨೫೬ | ೪ | ೫.೭ |
| ಸಿಖ್ಖರು | ೪,೧೬೫,೦೯೭ | ೫ | ೧.೩ |
| ಭಾರತೀಯ ಕ್ರಿಶ್ಚಿಯನ್ನರು | ೩,೨೪೫,೭೦೬ | ೬ | ೧.೦ |
| ಯೂರೋಪಿಯನ್ನರು | ೧೨೨,೭೮೮ | ೭ | |
| ಆಂಗ್ಲೋ ಇಂಡಿಯನ್ನರು | ೧೧೩,೯೩೬ | ೮ | |
| ಪಾರ್ಸಿಗಳು | ೧೦೧,೯೬೮ | ೯ | |

ಟಿಪ್ಪಣಿ : ಈ ಪಟ್ಟಿಯಲ್ಲಿ ಈ ಮನವಿಯ ಉದ್ದೇಶಕ್ಕೆ ಸುಸಂಗತವೆನ್ನಿಸುವ ಸ್ಥಿತಿಯುಳ್ಳ ಕೋಮುಗಳ ಜನಸಂಖ್ಯೆಯನ್ನು ಮಾತ್ರ ನೀಡಲಾಗಿದೆ.

## ಪಟ್ಟಿ - ೨

## ಕೇಂದ್ರ ಶಾಸನಸಭೆಯ ಜಾತಿವಾರು ರಚನೆ

| ಕೋಮು | ಚುನಾಯಿತ ಸದಸ್ಯರು | | ನಾಮಕರಣಗೊಂಡ ಅಧಿಕಾರೇತರ ಸದಸ್ಯರು | | ನಾಮಕರಣಗೊಂಡ ಅಧಿಕಾರಿ ಸದಸ್ಯರು | | ಅಧಿಕಾರಿ ಸದಸ್ಯರನ್ನು ಒಳಗೊಂಡಂತೆ ಒಟ್ಟು ಸಂಖ್ಯೆ | | ಅಧಿಕಾರಿ ಸದಸ್ಯರನ್ನು ಬಿಟ್ಟು ಸಂಖ್ಯೆ | |
|---|---|---|---|---|---|---|---|---|---|---|
| | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಒಟ್ಟು | ಶೇಕಡ | ಒಟ್ಟು | ಶೇಕಡ |
| ೧ | ೨ | | ೩ | | ೪ | | ೫ | | ೬ | |
| ಹಿಂದೂಗಳು | ೫೬ | ೫೪.೯ | ೪ | ೨೧ | ೮ | ೪೦.೦ | ೬೮ | ೪೮.೫ | ೬೦ | ೪೯.೫ |
| ಮುಸ್ಲಿಮರು | ೩೪ | ೩೩.೫ | ೭ | ೩೭ | ೩ | ೧೫.೦೦ | ೪೪ | ೩೧ | ೪೧ | ೩೩.೮ |
| ಸಿಖ್ಖರು | ೨ | ೧.೯ | ೨ | ೧೦.೫ | …. | | ೪ | ೨.೮ | ೪ | ೩.೩ |
| ಪಾರ್ಸಿಗಳು | ೧ | ೧.೦ | ೨ | ೧೦.೫ | ೧ | ೫.೦ | ೪ | ೨.೮ | ೩ | ೨.೪ |
| ಯೂರೋಪಿಯನ್ನರು | ೮ | ೭.೮ | ೧ | | ೭ | ೩೫.೦ | ೧೬ | ೧೧.೩ | ೯ | ೭.೪ |
| ಭಾರತೀಯ ಕ್ರಿಶ್ಚಿಯನ್ನರು | | | ೧ | ೫.೩ | | | ೧ | | ೧ | |
| ಆಂಗ್ಲೋ ಇಂಡಿಯನ್ನರು | | | ೧ | ೫.೩ | | | ೧ | | ೧ | |
| ಪರಿಶಿಷ್ಟ ಜಾತಿಗಳು | | | ೧ | ೫.೩ | ೧ | ೫.೦ | ೨ | ೧.೪ | ೧ | |
| ಖಾಲಿ | ೧ | | | | | | ೧ | | ೧ | |
| **ಒಟ್ಟು** | ೧೦೨ | | ೧೯ | | ೨೦ | | ೧೪೧ | | ೧೨೧ | |

ರಷ್ಟನ್ನು ಚುನಾವಣೆಯ ಮೂಲಕ ಪಡೆದಿದ್ದಾರೆ. ಅವರ ಜನಸಂಖ್ಯೆಯ ಆಧಾರದ ಮೇಲೆ ಅವರಿಗೆ ಅರ್ಹತೆ ಇರುವುದಕ್ಕಿಂತ ಇದು ಬಹಳ ಹೆಚ್ಚು. ಇದರೊಂದಿಗೆ ಕಾದಿರಿಸಿದ ನಾಮಕರಣ ಸ್ಥಾನಗಳ ಶೇಕಡ ೩೭ರಷ್ಟು ಪಾಲಿನ ಲಾಭವನ್ನು ಅವರು ಪಡೆದಿದ್ದಾರೆ. ಸಿಖ್ಖರು ಮತ್ತು ಪಾರ್ಸಿಗಳ ವಿಷಯದಲ್ಲೂ ಇದೇ ರೀತಿ. ಇಬ್ಬರೂ ಚುನಾವಣೆಯ ಮೂಲಕ ತಮ್ಮ ಜನಸಂಖ್ಯೆಗೆ ಸಮಂಜಸವಾದದ್ದಕ್ಕಿಂತ ಹೆಚ್ಚಾಗಿ ಪ್ರಾತಿನಿಧ್ಯ ಪಡೆದಿದ್ದಾರೆ. ಆದರೂ ನಾಮಕರಣ ಸ್ಥಾನಗಳ ೧೦.೫ರಷ್ಟು ಪಾಲನ್ನು ಪಡೆಯುವ ಲಾಭ ಈ ಇಬ್ಬರಿಗೂ ದಕ್ಕಿದೆ. ಇದಕ್ಕೆ ವಿರುದ್ಧವಾಗಿ ಸಂಖ್ಯೆಯಲ್ಲಿ ನಾಲ್ಕು ಕೋಟಿ ಇರುವ ಮತ್ತು ಭಾರತದಲ್ಲಿ ಮೂರನೆಯ ಪ್ರಮುಖ ಕೋಮು ಆಗಿರುವ ಪರಿಶಿಷ್ಟ ಜಾತಿಗಳು ಚುನಾವಣೆಯ ಮೂಲಕ ಒಂದು ಸ್ಥಾನವನ್ನೂ ಪಡೆದಿಲ್ಲ ಮತ್ತು ನಾಮಕರಣದ ಮೂಲಕ ಪಡೆದಿರುವ ಸ್ಥಾನ ಕೇವಲ ಒಂದು ಎಂಬುದು ನಗ್ನಸತ್ಯ.

೪. ಈ ಸತ್ಯಾಂಶಗಳಿಂದ ಎರಡು ಆಕ್ಷೇಪಣೆಗಳು ಸರ್ವಥಾ ಸ್ಪಷ್ಟವಾಗಿವೆ. ಮೊದಲನೆಯದೆಂದರೆ ಶಾಸಕಾಂಗ ನಿಶ್ಚಯವಾಗಿಯೂ ಸಮತೋಲನವಿಲ್ಲದ ಸಂಸ್ಥೆ. ಕೆಲವು ಕೋಮುಗಳ ಹೆಚ್ಚಿನ ಪ್ರಾತಿನಿಧ್ಯ ಹಾಗೂ ಇತರ ಕೋಮುಗಳ ಕಡಿಮೆ ಪ್ರಾತಿನಿಧ್ಯಗಳ ಎರಡು ಕೆಡುಕುಗಳಿಂದಲೂ ಅದು ನರಳುತ್ತಿದೆ. ಈ ತಾರತಮ್ಯವು ಅತ್ಯಂತ ತೀವ್ರವಾದ ರೂಪದಲ್ಲಿದೆ. ಏಕೆಂದರೆ ಬಲಶಾಲಿ ಹಾಗೂ ಶಕ್ತಿಯುತವಾದ ಕೋಮುಗಳಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆತಿದೆ ಮತ್ತು ಕಡಿಮೆ ಪ್ರಾತಿನಿಧ್ಯ ಹೊಂದಿರುವವು ನಿಶ್ಶಕ್ತ ಹಾಗೂ ಬಡ ಕೋಮುಗಳು. ಎರಡನೆಯ ಆಕ್ಷೇಪಣೆ ನಾಮಕರಣ ಮಾಡುವ ಅಧಿಕಾರದ ತಪ್ಪು ಬಳಕೆಗೆ ಸಂಬಂಧಿಸಿದೆ. ಸಂವಿಧಾನದಲ್ಲಿ ನಾಮಕರಣ ಮಾಡುವ ಅಧಿಕಾರ ಪ್ರಾತಿನಿಧ್ಯದಲ್ಲಿರುವ ಅಸಮಾನತೆಯನ್ನು ನಿವಾರಿಸಲೆಂದು ಕಾದಿರಿಸಲ್ಪಟ್ಟದ್ದು. ಬೇರೆ ರೀತಿ ಹೇಳಬೇಕೆಂದರೆ, ಚುನಾವಣೆಯ ಮೂಲಕ ತಕ್ಕ ಪ್ರಾತಿನಿಧ್ಯವನ್ನು ಗಳಿಸದ ಕೋಮುಗಳಿಗೆ ನಾಮಕರಣದ ಮೂಲಕ ಸಾಕಷ್ಟು ಪ್ರಾತಿನಿಧ್ಯವನ್ನು ದೊರಕಿಸಲು ಈ ಅಧಿಕಾರ ಉದ್ದೇಶಿತವಾದದ್ದು.

ಕೇಂದ್ರ ಶಾಸಕಾಂಗದ ರಚನೆಗೆ ಸಂಬಂಧಿಸಿದಂತೆ ಚುನಾವಣೆಯನ್ನಾಗಲೀ ಅಥವಾ ನಾಮಕರಣವನ್ನಾಗಲೀ ಹತೋಟಿಯಲ್ಲಿಡುವ ಯಾವುದೇ ನಿಯಮ ಇದ್ದಂತಿಲ್ಲ. ಯಾವುದಾದರೂ ನಿಯಮ ಇದ್ದ ಪಕ್ಷದಲ್ಲಿ ಅದು ಕಾಳನಿಗಿಂತ ಸುಬ್ಬನಿಗೆ ಹೆಚ್ಚು ಕೊಡಲು ಮತ್ತು ಅನಂತರದಲ್ಲಿ ಏನೂ ಇಲ್ಲದ ಕಾಳನನ್ನು ದೋಚಿ ಹೆಚ್ಚು ಕಡಿಮೆ ಎಲ್ಲವನ್ನೂ ಪಡೆದಿರುವ ಸುಬ್ಬನನ್ನು ಇನ್ನಷ್ಟು ಪುಷ್ಟಿಗೊಳಿಸಲು ಇರುವಂತಿದೆ.

೫. ಪ್ರಾತಿನಿಧ್ಯದ ವಿಷಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಇಂಥ ತೀವ್ರ ಅನ್ಯಾಯ ಆಗಿರುವುದು ಸಕಾರಣವಾಗಿಲ್ಲ. ಮುಸ್ಲಿಮರೂ ಹಿಂದೂಗಳೂ ಹಕ್ಕು ಮತ್ತು ಅಧಿಕಾರಗಳಿಗಾಗಿ ಪರಸ್ಪರ ಹೋರಾಟ ಮಾಡುತ್ತಿರುವ ಮತ್ತು ಪರಿಶಿಷ್ಟ ಜಾತಿಗಳಂತಹ ಮೂರನೆಯ ಪಕ್ಷಕ್ಕೆ ಏನೊಂದೂ ದಕ್ಕದಂತೆ ಇಬ್ಬರೂ ಜಾಗರೂಕರಾಗಿರುವ ನೂರನಲವತ್ತೊಂದು ಜನ ಸದಸ್ಯರಿರುವ ಶಾಸಕಾಂಗದಲ್ಲಿ ಪರಿಶಿಷ್ಟ ಜಾತಿಯ ಏಕಾಂಗಿ ಪ್ರತಿನಿಧಿಯೊಬ್ಬ ತನ್ನ ಕೋಮಿನ ಹಕ್ಕುಗಳಿಗಾಗಿ ಏನು ಬೆಂಬಲವನ್ನು ತಾನೇ ಪಡೆಯಬಲ್ಲ? ನಾಮಕರಣಗೊಂಡ ಅಧಿಕಾರಿಗಳು ತಮ್ಮ ಮನಸ್ಸಿನಲ್ಲಿ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ಇರಿಸಿಕೊಳ್ಳುತ್ತಾರೆಂದು ನಿರೀಕ್ಷಿಸಬಹುದು ಎಂಬುದು ಕೇಂದ್ರ ಶಾಸಕಾಂಗದ ಸದ್ಯದ ರಚನೆಯನ್ನು ಶಿಫಾರಸ್ ಮಾಡಿ ಬೆಳೆಸಿದ ಸೌತ್‌ಬರೋ ಸಮಿತಿಯ ದೃಷ್ಟಿಯಾಗಿತ್ತು. ಆಗಿನ ಭಾರತ ಸರ್ಕಾರ ಈ ದೃಷ್ಟಿಯನ್ನು ಒಪ್ಪಿಕೊಳ್ಳಲು ನಿರಾಕರಿಸಿತು ಎಂಬುದು ಸ್ವಲ್ಪ ಪರ್ಯಾಲೋಚನೆಗೆ ಒಳಪಡಬೇಕಾದ ಆಸಕ್ತಿಯುತವಾದ ವಿಷಯ. ಸೌತ್‌ಬರೋ ಸಮಿತಿಯ ವರದಿಯನ್ನು ರವಾನಿಸುವಾಗ ಭಾರತ ಸರ್ಕಾರ ಹೀಗೆಂದು ಹೇಳಿತು:

"ಆದರೆ ಈ ಒಪ್ಪಂದದ ಗುರಿ, ನಮ್ಮ ಅಭಿಪ್ರಾಯದಲ್ಲಿ, ಸುಧಾರಣೆಯನ್ನು ಕುರಿತದ್ದಲ್ಲ (ಮಾಂಟೆಗ್ಯು–

ಚೆಮ್ಸ್‌ಫೋರ್ಡ್ ವರದಿ). ಅಸ್ಪೃಶ್ಯರು ಸಹ ಸ್ವಯಂರಕ್ಷಣೆಯ ಪಾಠವನ್ನು ಕಲಿಯಬೇಕು ಎಂದು ಲೇಖಕರು ಸ್ಪಷ್ಟಪಡಿಸುತ್ತಾರೆ. ಅರವತ್ತರಿಂದ ತೊಂಬತ್ತರವರೆಗಿನ ಸಂಖ್ಯೆಯ ಸವರ್ಣೀಯರು ಇರುವ ಸಭೆಯಲ್ಲಿ ಈ ಕೋಮಿನ ಏಕಾಂಗಿ ಪ್ರತಿನಿಧಿಯನ್ನು ಸೇರಿಸಿಕೊಂಡು ಇಂಥ ಫಲಿತಾಂಶವನ್ನು ನಿರೀಕ್ಷಿಸಬೇಕು ಎಂದು ಆಶಿಸುವುದು ನಿಶ್ಚಯವಾಗಿ ಭ್ರಾಂತಿ. ಈ ವರದಿಯ ೧೫೧, ೧೫೨ ಮತ್ತು ೧೫೫ನೆಯ ಪ್ಯಾರಾಗಳಲ್ಲಿನ ನಿಯಮಗಳನ್ನು ಸರಿಪಡಿಸಬೇಕಾದರೆ ಅಸ್ಪೃಶ್ಯರನ್ನು ನಾವು ಹೆಚ್ಚು ಔದಾರ್ಯದಿಂದ ಕಾಣಬೇಕು......."

ದುರದೃಷ್ಟವಶಾತ್ ಕೇಂದ್ರ ಶಾಸಕಾಂಗ ಸಭೆಯ ರಚನೆಯ ಯೋಜನೆಯನ್ನು ಮಾಡುವಾಗ ಭಾರತ ಸರ್ಕಾರವು ಪರಿಶಿಷ್ಟ ಜಾತಿಗಳಿಗೆ ಯಾವ ಔದಾರ್ಯವನ್ನೂ ತೋರಲಿಲ್ಲ. ಅದು ಅವರಿಗೆ ನಾಮಕರಣದ ಮೂಲಕ ಕೇವಲ ಒಂದೇ ಸ್ಥಾನವನ್ನು ನೀಡಿದೆ ಮತ್ತು ೧೯೨೧ರಿಂದಲೂ ಇದುವರೆಗೆ ಈ ಒಂದು ಸ್ಥಾನವೇ ಮುಂದುವರೆದುಕೊಂಡು ಬಂದಿದೆ.

೬. ಈ ಅತ್ಯಲ್ಪ ಪ್ರಾತಿನಿಧ್ಯದ ಪರಿಣಾಮವು ತೀರ ಶೋಚನೀಯವಾಗಿದೆ. ನೂರನಲವತ್ತೊಂದು ಜನರ ಸಭೆಯಲ್ಲಿ ಪರಿಶಿಷ್ಟ ಜಾತಿಗಳ ಒಂಟಿ ಪ್ರತಿನಿಧಿ ತನ್ನ ಸ್ಥಾನದ ಕೇವಲ ಅಸಹಾಯಕತೆಯನ್ನು ಅನುಭವಿಸಲು ಮಾತ್ರ ಸಾಧ್ಯ. ಸಭೆಯ ಹಿಂದೂ ದಿಕ್ಕಿನಿಂದ ಕೇಳಿಬರುವ ಪರಿಶಿಷ್ಟ ಜಾತಿ ವಿರೋಧಿಯಾದ ಭಾರಿ ಪೂರ್ವಾಗ್ರಹವನ್ನು ಎದುರಿಸಲು ಆತ ಹೆಣಗಾಡಬೇಕಾಗುತ್ತದೆ. ತಮ್ಮ ಹಿತಾಸಕ್ತಿಗಳನ್ನು ಮುಂದುವರಿಸಲು ಹೋರಾಟ ಮಾಡುತ್ತಿರುವ ಮುಸ್ಲಿಮ್ ಘಟಕದ ಬೆಂಬಲವನ್ನೂ ಆತ ನೆಚ್ಚಿಕೊಳ್ಳಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿಗಳ ನ್ಯಾಯಬದ್ಧ ಹಿತಾಸಕ್ತಿಗಳನ್ನು ಬೆಂಬಲಿಸುವುದಕ್ಕಿಂತ ಬಹುಸಂಖ್ಯಾತ ಹಿಂದೂ ಮತ್ತು ಮುಸ್ಲಿಮ್ ಘಟಕಗಳೊಡನೆ ತನ್ನ ಸಂಬಂಧವನ್ನು ತೃಪ್ತಿಕರವಾಗಿ ಕಾಯ್ದುಕೊಳ್ಳುವುದರಲ್ಲಿ ಹೆಚ್ಚು ಜಾಗರೂಕವಾಗಿರುವ ಅಧಿಕಾರಿ ವರ್ಗದ ಮೇಲೂ ಭರವಸೆಯಿಡಲು ಆತನಿಗೆ ಸಾಧ್ಯವಿಲ್ಲ. ಶಾಸನಸಭೆಯಲ್ಲಿ ಏಕಾಕಿಯೂ, ಅಸಹಾಯಕನೂ ಆದ ಪರಿಶಿಷ್ಟ ಜಾತಿಗಳ ಪ್ರತಿನಿಧಿಗೆ ತನ್ನ ಕೋಮಿನ ಕುಂದುಕೊರತೆಗಳನ್ನು ಪ್ರಕಟಪಡಿಸುವುದು ಸಹ ಸಾಧ್ಯವಿಲ್ಲ. ಶಾಸನಸಭೆಯ ಅಧ್ಯಕ್ಷರು ಮಾಡಿರುವ ನಿಯಮದಂತೆ ಮಾನ್ಯತೆ ಪಡೆದ ಪಕ್ಷಕ್ಕೆ ಸೇರಿದ ಗೌರವಾರ್ಹ ಸದಸ್ಯರಿಗೆ ಮಾತನಾಡುವ ಮೊದಲ ಅವಕಾಶವನ್ನು ಅಧ್ಯಕ್ಷರು ನೀಡುತ್ತಾರೆಂಬುದು ನನಗೆ ತಿಳಿದಿದೆ. ಹತ್ತು ಜನ ಸದಸ್ಯರ ಕನಿಷ್ಠಬಲವಿಲ್ಲದ ಹೊರತು ಅಧ್ಯಕ್ಷರು ಯಾವುದೇ ಪಕ್ಷಕ್ಕೂ ಮಾನ್ಯತೆ ನೀಡುವುದಿಲ್ಲ ಎಂದೂ ಅರಿತಿದ್ದೇನೆ. ಅಂದರೆ, ಸಾಮಾನ್ಯ ಪರಿಸ್ಥಿತಿಯಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಗೆ ಆತ ಪಕ್ಷವೊಂದನ್ನು ಸೇರಲು ನಿರ್ಣಯಿಸದ ಹೊರತು, ಶಾಸನಸಭೆಯಲ್ಲಿ ಮಾತನಾಡುವ ಅವಕಾಶವಿಲ್ಲ ಎಂದು ಅರ್ಥ. ಪರಿಶಿಷ್ಟ ಜಾತಿಗಳ ಪ್ರತಿನಿಧಿಯೊಬ್ಬನಿಗೆ ಇಂಥ ಪರಿಸ್ಥಿತಿಯನ್ನು ಧೈರ್ಯವಾಗಿ ನಿರ್ವಹಿಸುವುದು ಬಹಳ ಸುಲಭದ ಸಂಗತಿಯೇನೂ ಅಲ್ಲ. ಆತನಿಗೆ ಬೇರೆ ಪಕ್ಷವೊಂದಕ್ಕೆ ಸೇರುವುದು ಎಂದರೆ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ಆ ಪಕ್ಷದ ಹಿತಾಸಕ್ತಿಗಳಿಗೆ ಅಧೀನವಾಗಿಸುವುದು ಮತ್ತು ಆ ಪಕ್ಷದ ನಿಯಮ ಹಿತಾಸಕ್ತಿಗಳು ಪರಿಶಿಷ್ಟ ಜಾತಿಗಳ ನಿಯಮ, ಹಿತಾಸಕ್ತಿಗಳೊಡನೆ ತೀರ ಹೊಂದಿಕೆಯಾಗದೆಯೇ ಹೋಗಬಹುದು. ಬದಲಿಗೆ ಇನ್ನೊಂದು ಪಕ್ಷವನ್ನು ಸೇರದಿದ್ದರೆ ಮಾತನಾಡುವ ಹಕ್ಕು ಸಂಪೂರ್ಣವಾಗಿ ಕಳೆದುಹೋದಂತೆ. ಶಾಸನಸಭೆಯ ಅಧಿವೇಶನದಲ್ಲಿ (ಸೆಪ್ಟಂಬರ್ ೧೯೪೨) ನಡೆದದ್ದನ್ನು ಪರಾಮರ್ಶಿಸುವುದಾದರೆ ಭಾರತದ ವರ್ತಮಾನದ ರಾಜಕೀಯ ಪರಿಸ್ಥಿತಿಯನ್ನು ಕುರಿತು ನಡೆದ ಚರ್ಚೆಯಲ್ಲಿ ಐದಾರು ಜನ ಮುಸ್ಲಿಮ್ ಸದಸ್ಯರಿಗೆ ತಮ್ಮ ಕೋಮಿನವರಿಗಾಗಿ ಮಾತನಾಡಲು ಸುಲಭಸಾಧ್ಯವಾದರೂ ಕೇಂದ್ರ ಶಾಸನಸಭೆಯ ಪರಿಶಿಷ್ಟ ಜಾತಿಗಳ ಪ್ರತಿನಿಧಿಯಾದ ಗೌರವಾನ್ವಿತ ರಾವ್ ಬಹದ್ದೂರ್ ಎನ್. ಶಿವರಾಜ್ ಅವರಿಗೆ ತಮ್ಮ ಕೋಮಿನ ಪರವಾಗಿ ಮಾತನಾಡಲು ಅವಕಾಶಪಡೆಯುವುದು ಕಷ್ಟವಾಯಿತು.

೭. ಆದ್ದರಿಂದ ಶಾಸನಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಹೆಚ್ಚಿಸುವುದು ಬಹಳ ಅಗತ್ಯವಾಗಿದೆ. ನಾಮಕರಣಗೊಂಡ ಅಧಿಕಾರೇತರ ಸ್ಥಾನಗಳು ಖಾಲಿಯಾದಾಗ ಮಾತ್ರ ಹೀಗೆ ಮಾಡಲು ಸಾಧ್ಯ ಎನ್ನುವುದು ಸರಿಯೇ. ಆ ಸ್ಥಾನಗಳು ಖಾಲಿಯಾದಾಗ ಅವುಗಳನ್ನು ಶಾಸನಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಹೆಚ್ಚಿಸಲು ಉಪಯೋಗಿಸಬೇಕಾದ್ದು ಸಮಂಜಸವಾಗಿದೆ.

**೨. ಕೇಂದ್ರ ಕಾರ್ಯಾಂಗದಲ್ಲಿ ತಕ್ಕಷ್ಟು ಪ್ರಾತಿನಿಧ್ಯ ಇಲ್ಲದಿರುವುದು**

೮. ಕೇಂದ್ರ ಕಾರ್ಯಾಂಗದಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದ ಹಕ್ಕನ್ನು ಗುರುತಿಸುವುದರಲ್ಲಿ ಭಾರತ ಸರ್ಕಾರವು ವಿಪರೀತ ನಿಧಾನಗತಿಯನ್ನು ಹೊಂದಿದೆ. ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಇದೊಂದು ಖಾತರಿಯಾದ ಅಂಶ. ಏಕೆಂದರೆ, ಹಿಂದೆ ತಮ್ಮ ರಾಜಕೀಯ ಸ್ಥಾನಮಾನ ಏನೇ ಇದ್ದಿರಲಿ, ದುಂಡುಮೇಜಿನ ಪರಿಷತ್ತಿನ ನಂತರ ತಮ್ಮ ರಾಜಕೀಯ ಸ್ಥಾನಮಾನ ಮುಸ್ಲಿಮರ ರಾಜಕೀಯ ಸ್ಥಾನಮಾನಗಳಿಗೆ ಸರಿಸಮಾನವಾಗಿದೆ ಮತ್ತು ಮುಸ್ಲಿಮರಿಗೆ ಕೇಂದ್ರ ಕಾರ್ಯಾಂಗದಲ್ಲಿ ಪ್ರಾತಿನಿಧ್ಯದ ಹಕ್ಕಿರುವುದರಲ್ಲಿ ಪರಿಶಿಷ್ಟ ಜಾತಿಗಳಿಗೂ ಹಕ್ಕಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಅವರ ಹೋರಾಟ ಸಾಧಾರವಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ದುಂಡುಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಪರಿಶಿಷ್ಟ ಜಾತಿಗಳಿಗೆ ತಕ್ಕ ಪ್ರಾತಿನಿಧ್ಯದ ಅವಕಾಶ ಕಾನೂನಿನ ಮೂಲಕ ದೊರೆಯುವಂತಾಗಬೇಕು ಎಂಬುದು ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯವೂ ಆಗಿತ್ತು, ಕೇವಲ ಮುಸ್ಲಿಮರದು ಮಾತ್ರವಲ್ಲ, ಹಿಂದೂ ದೃಷ್ಟಿಕೋನವೂ ಈ ಹಕ್ಕೊತ್ತಾಯಕ್ಕೆ ವಿರೋಧಿಯಾಗಿರಲಿಲ್ಲ. ಹಿಂದೂಗಳು ಹೇಳಿದ್ದೆಲ್ಲ ವಿಧ್ಯುಕ್ತಸಭೆಯ ನಿರ್ಣಯಕ್ಕೆ ಇದನ್ನು ಬಿಟ್ಟುಬಿಡೋಣ ಎಂದು ಮಾತ್ರ. ಪ್ರಾಂತ್ಯಗಳ ಗವರ್ನರರಿಗೆ ಮತ್ತು ಭಾರತದ ಗವರ್ನರ್ ಜನರಲ್ಲರಿಗೆ ನೀಡುವ ಮಾಹಿತಿ ಪತ್ರದಲ್ಲಿ ಪ್ರಮುಖ ಅಲ್ಪಸಂಖ್ಯಾತ ಕೋಮುಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲು ಯತ್ನಿಸುವಂತೆ ನಿರ್ಬಂಧಿಸಿ ಅವರ ಮೇಲೆ ಪ್ರಭಾವ ಬೀರುವ ನಿರ್ದಿಷ್ಟ ಷರತ್ತು ಇರಬೇಕು ಎಂದು ಅಂತಿಮವಾಗಿ ತೀರ್ಮಾನಗೊಂಡು ಅಂಗೀಕೃತವಾಯಿತು. ಕೋಮುಗಳನ್ನು ಸ್ಪಷ್ಟವಾಗಿ ನಿರ್ದೇಶಿಸಿಲ್ಲದಿದ್ದರೂ 'ಪ್ರಮುಖ ಅಲ್ಪಸಂಖ್ಯಾತರು' ಎಂಬ ಅಡಕನುಡಿ ಪರಿಶಿಷ್ಟ ಜಾತಿಗಳನ್ನು ಒಳಗೊಂಡಿರಬೇಕೆಂದು ಉದ್ದೇಶಿಸಿರುವುದರಲ್ಲಿ ಯಾವ ಸಂದೇಹವೂ ಇರಲು ಸಾಧ್ಯವಿಲ್ಲ. ಕೊನೆಗೂ ಭಾರತ ಸರ್ಕಾರವು ಸಂಪುಟದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಈ ನಿರ್ಬಂಧವನ್ನು ಗುರುತಿಸಿದೆ.

೯. ಏನೇ ಇರಲಿ, ಅವರ ಹಕ್ಕುಗಳನ್ನು ಗುರುತಿಸುವುದರಲ್ಲಿ ಆಗಿರುವ ಈ ವಿಳಂಬದಿಂದ ಬಹಳಷ್ಟು ಪ್ರಭಾವ ನಷ್ಟವಾಗಿ ಹೋಗಿದೆ ಮತ್ತು ಈ ಅಸಮಾಧಾನ ದೂರವಾಗಿಲ್ಲ ಎಂದು ಹೇಳಬೇಕು. ಏಕೆಂದರೆ ಪರಿಶಿಷ್ಟ ಜಾತಿಗಳು ಸಂಪುಟದಲ್ಲಿ ತಮ್ಮ ಪ್ರಾತಿನಿಧ್ಯ ಬಹಳ ಕಡಿಮೆ ಎಂದು ಭಾವಿಸಿವೆ. ಹದಿನೈದು ಜನರಿರುವ ಸಂಪುಟದಲ್ಲಿ, ಮುಸ್ಲಿಮರು ಮೂವರು ಸದಸ್ಯರನ್ನು ಹೊಂದಿರುವಾಗ ಪರಿಶಿಷ್ಟ ಜಾತಿಗಳ ಏಕೈಕ ಸದಸ್ಯನಿದ್ದಾನೆ. ಬೇರೆ ಬೇರೆ ಕೋಮುಗಳಿಗೆ ನೀಡಿರುವ ಪ್ರಾತಿನಿಧ್ಯ ಹಾಗೂ ಅವುಗಳ ಅಗತ್ಯ ಮತ್ತು ಸಂಖ್ಯೆಗಳ ನಡುವಣ ಅಗಾಧ ವ್ಯತ್ಯಾಸದಿಂದ ಸಕಾರಣವಾಗಿ ಅಸಮಾಧಾನ ಮೂಡುತ್ತದೆ. ಜನಸಂಖ್ಯೆಯೊಂದೇ ಮಾನದಂಡವಾಗಿದ್ದರೆ ಆ ವಿಷಯದಲ್ಲಿ ಪರಿಶಿಷ್ಟ ಜಾತಿಗಳು ಮುಸ್ಲಿಮರಿಗೆ ಬಹಳ ಸಮೀಪ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ಹದಿನೈದು ಜನರ ಸಂಪುಟದಲ್ಲಿ ಮುಸ್ಲಿಮರು ಮೂವರು ಸದಸ್ಯರನ್ನು ಹೊಂದಿದ್ದಲ್ಲಿ, ಪರಿಶಿಷ್ಟ ಜಾತಿಗಳು ಕಡೆಯ ಪಕ್ಷ ಇಬ್ಬರನ್ನಾದರೂ ಪಡೆದಿರಬೇಕೆಂದು ಹೇಳುವುದು ಕೇವಲ ನ್ಯಾಯಯುತ. ವಿಷಯ ಹೀಗಿರುವಲ್ಲಿ ಸಂಪುಟದ ಕೋಮುವಾರು

ರಚನೆಗೆ ಯಾವ ನಿಯಮವೂ ಅನ್ವಯಿಸುವಂತೆ ತೋರುತ್ತಿಲ್ಲ. ಕೇವಲ ಕೋಟಿಸಂಖ್ಯೆಯ ಸಿಖ್ಖರೂ ನಾಲ್ಕು ಕೋಟಿ ಸಂಖ್ಯೆಯ ಅಸ್ಪೃಶ್ಯರೂ ಸಮಾನ ನೆಲೆಯಲ್ಲಿ ಇದ್ದಾರೆ.

೧೦. ಭಾರತದ ರಾಜಕೀಯದಲ್ಲಿ ಪರಿಶಿಷ್ಟ ಜಾತಿಗಳ ಸ್ಥಾನಕ್ಕೆ ಭದ್ರತೆಯ ಅಗತ್ಯ ಬಹಳವಾಗಿದೆ ಮತ್ತು ಈ ಭದ್ರತೆಯನ್ನು ಒದಗಿಸುವ ಪರಿಣಾಮಕಾರಿಯಾದ ಏಕೈಕ ಪರಿಹಾರ ಎಂದರೆ ಸಂಪುಟದಲ್ಲಿ ಅವರ ಸಂಖ್ಯೆ ಮತ್ತು ಅಗತ್ಯಗಳು ಹಕ್ಕೊತ್ತಾಯ ಮಾಡುವ ಪ್ರಾತಿನಿಧ್ಯವನ್ನು ಅವರಿಗೆ ನೀಡುವುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸರ್ ಸ್ಟ್ಯಾಫರ್ಡ್ ಕ್ರಿಪ್ಸ್‌ರವರು ಭಾರತಕ್ಕೆ ಬಂದಾಗ ನನಗೂ ಅವರಿಗೂ ನಡೆದ ಸಂದರ್ಶನದ ನಡುವೆ ಪರಿಶಿಷ್ಟ ಜಾತಿಗಳನ್ನು ಈ ನಡುವಣ ಕಾಲದಲ್ಲಿ ರೂಪುಗೊಳ್ಳಬೇಕಿದ್ದ ಕೇಂದ್ರ ಕಾರ್ಯಾಂಗದಲ್ಲಿ ಸೇರಿಸಿಕೊಳ್ಳುವುದರ ಮೂಲಕ ಅವರ ಸ್ಥಾನವನ್ನು ಭದ್ರಪಡಿಸುವುದು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಅತಿಮುಖ್ಯ ಗುರಿಗಳಲ್ಲಿ ಒಂದು ಎಂದು ಕ್ರಿಪ್ಸ್ ಹೇಳಿದರು. ಕ್ರಿಪ್ಸ್‌ರವರ ಪ್ರಸ್ತಾಪದಂತೆ ವಿವಾದಕ್ಕೆ ಆಸ್ಪದವಿಲ್ಲದಂತೆ ಪರಿಶಿಷ್ಟ ಜಾತಿಗಳ ಸ್ಥಾನಗಳನ್ನು ಸ್ಥಿರಗೊಳಿಸುವ ಹೊಸ ಶಾಸನದ ಕರಡನ್ನು ತಯಾರಿಸಲು ಸಂವಿಧಾನಬದ್ಧ ಸಭೆ ಸೇರಬೇಕಿತ್ತೆಂದು ನಾನು ಹೇಳಿದರೆ ಯಾವುದೇ ರಹಸ್ಯವನ್ನು ಹೊರಗೆಡವಿದಂತೆ ಅಲ್ಲ ಎಂದು ನಾನು ನಂಬುತ್ತೇನೆ. ಕಾರ್ಯಕಾರಿ ಮಂಡಲಿಯು ಭಾರತೀಯ ಸ್ವರೂಪವನ್ನು ಪಡೆಯುವ ದಿಕ್ಕಿನಲ್ಲಿ ಮುಂದಿನ ಹೆಜ್ಜೆಯಿಡುವಾಗ ಈ ಕಾರ್ಯನೀತಿಯನ್ನು ಆಚರಣೆಗೆ ತರಬೇಕು ಎಂದು ನಾನು ಬೇಡಿಕೊಳ್ಳುತ್ತೇನೆ.

**೩. ಸಾರ್ವಜನಿಕ ಸೇವೆಗಳಲ್ಲಿ ಪ್ರಾತಿನಿಧ್ಯ ಇಲ್ಲದಿರುವುದು**

೧೧. ಪರಿಶಿಷ್ಟ ಜಾತಿಗಳಿಗೆ ಸಾರ್ವಜನಿಕ ಸೇವೆಗಳಲ್ಲಿನ ಉದ್ಯೋಗದ ವಿಷಯದಲ್ಲಿ ಬೇರೆಡೆಗಳಿಗಿಂತ ಹೆಚ್ಚಿನ ಅನ್ಯಾಯ ನಡೆದಿದೆ. ಈ ಮನವಿಯ ವ್ಯಾಪ್ತಿಯ ಬಗ್ಗೆ ಹೇಳಬೇಕೆಂದರೆ ಕೇಂದ್ರ ಸರ್ಕಾರವು ವಿಶೇಷ ಸಂಬಂಧವನ್ನು ಪಡೆದಿರುವ ಸೇವೆಗಳನ್ನು ಕುರಿತು ಮಾತ್ರ ನಾನು ವಿಚಾರ ಮಾಡಬಲ್ಲೆ. ಅವುಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು.

(ಅ) ಐ.ಪಿ.ಎಸ್.

(ಆ) ಕೇಂದ್ರ ಸೇವೆಗಳು

(೧) ಅಖಿಲ ಭಾರತ ವ್ಯಾಪ್ತಿಯಲ್ಲಿನ ಉದ್ಯೋಗಗಳಿಗೆ ಸೇರುವವರು

(೨) ಸ್ಥಳೀಯ ಉದ್ಯೋಗಗಳಿಗೆ ಸೇರುವವರು.

೧೨. ಈ ಸೇವೆಗಳ ಕೋಮುವಾರು ರಚನೆಯನ್ನು ಪರಿಶೀಲನೆ ಮಾಡುವ ಯಾರಿಗೇ ಆಗಲಿ ಈ ಎರಡು ಸೇವೆಗಳಿಂದಲೂ ಪರಿಶಿಷ್ಟ ಜಾತಿಗಳನ್ನು ನಿರ್ದಯವಾಗಿ ಹೊರಗಿರಿಸಿದ್ದಾರೆ ಎಂಬುದರಲ್ಲಿ ಯಾವ ಬಗೆಯ ಸಂದೇಹವೂ ಇರಲು ಸಾಧ್ಯವಿಲ್ಲ. ಈ ಸೇವೆಗಳಿಂದ ಪರಿಶಿಷ್ಟ ಜಾತಿಗಳನ್ನು ನಿರ್ದಯವಾಗಿ ಹೊರಗಿರಿಸಿರುವುದರ ಬಗ್ಗೆ ಒಂದು ಚಿತ್ರವನ್ನು ಕೊಡುವ ಸಲುವಾಗಿ ಈ ಮುಂದಿನ ವಾಸ್ತವಾಂಶಗಳನ್ನು ನೀಡಲು ನಾನು ಬಯಸುತ್ತೇನೆ. ಐ.ಪಿ.ಎಸ್.ನ ಕೋಮುವಾರು ರಚನೆ ವರ್ತಮಾನದಲ್ಲಿ (೧೯೪೨) ಈ ಮುಂದಿನಂತೆ ಇದೆ.

**ಐ.ಪಿ.ಎಸ್.ನಲ್ಲಿನ ಕೋಮುವಾರು ರಚನೆ**

| ಕೋಮು | ಐ.ಪಿ.ಎಸ್. ನಲ್ಲಿನ ಸಂಖ್ಯೆ |
|---|---|
| ೧. ಯೂರೋಪಿಯನ್ನರು | ೪೮೮ |
| ೨. ಹಿಂದೂಗಳು | ೩೬೩ |
| ೩. ಮುಸ್ಲಿಮರು | ೧೦೯ |
| ೪. ಭಾರತೀಯ ಕ್ರಿಶ್ಚಿಯನ್ನರು | ೨೩ |
| ೫. ಆಂಗ್ಲೋ ಇಂಡಿಯನ್ನರು | ೯ |
| ೬. ಪಾರ್ಸಿಗಳು | ೯ |
| ೭. ಸಿಖ್ಖರು | ೧೧ |
| ೮. ಪರಿಶಿಷ್ಟ ಜಾತಿಗಳು | ೧ |
| ೯. ಇತರರು | ೪೩ |
| **ಒಟ್ಟು** | **೧,೦೫೬** |

ಐ.ಪಿ.ಎಸ್.ನ ಸಾವಿರದ ಐವತ್ತಾರು ಜನಗಳಲ್ಲಿ ಒಬ್ಬ ಮಾತ್ರ ಪರಿಶಿಷ್ಟ ಜಾತಿಯವನು, ಐ.ಪಿಎಸ್.ಗೆ ಸಂಬಂಧಿಸಿದ ಪರಿಸ್ಥಿತಿ ಇದು.

ಕೇಂದ್ರಸೇವೆಯ ಉದ್ಯೋಗಗಳ ವಿಷಯದಲ್ಲಿ ಸಹ ಪರಿಶಿಷ್ಟ ಜಾತಿಗಳ ಪರಿಸ್ಥಿತಿ ಇಷ್ಟೇ ಕೆಟ್ಟದಾಗಿದೆ. ಯಾವುದೇ ಅಂಕಿಅಂಶಗಳನ್ನು ಉದ್ಧರಿಸುವುದು ನನ್ನ ಉದ್ದೇಶವಲ್ಲ. ಈ ಮನವಿಯಲ್ಲಿ ಸತ್ಯಾಂಶಗಳನ್ನು ಅತಿಯಾಗಿ ಹೇರುವುದು ಅನಗತ್ಯ. ಏಕೆಂದರೆ ಈ ಪ್ರಶ್ನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಗೃಹಖಾತೆಯ ಸ್ಪಷ್ಟ ಒಪ್ಪಿಗೆಯಿದೆ. ಬೇರೆ ಬೇರೆ ಕೋಮುಗಳಿಗೆ ಹೊಸದಾಗಿ ಉದ್ಯೋಗಕ್ಕೆ ಸೇರಲು ಇರುವ ಅವಕಾಶವನ್ನು ಕುರಿತು ಗೃಹಖಾತೆಯವರು ತಮ್ಮ ಕಚೇರಿಯ ಮನವಿಯೊಂದರಲ್ಲಿ ಹೇಳುತ್ತಾರೆ :

"ತುಳಿತಕ್ಕೊಳಗಾದ ಜನಾಂಗದ ಸದಸ್ಯರ ಉದ್ಯೋಗದಲ್ಲಿನ ಪ್ರಗತಿಯು ಈ ವಿಚಾರದಲ್ಲಿ ಹೆಚ್ಚು ಕಡಿಮೆ ಶೂನ್ಯವಾಗಿದೆ ಎಂಬುದನ್ನು ಸಾಧ್ಯವಿರುವಷ್ಟು ಮಾಹಿತಿಯಿಂದ ಕಂಡುಕೊಂಡ ಈ ಇಲಾಖೆಗೆ ಈ ವಿಷಯದಲ್ಲಿ ಬಹಳವಾದ ಕಾಳಜಿಯಿದೆ."

ದಿನಾಂಕ ೧/೬/೧೯೪೫ರ ೪/೫/೩೮ ಇ.ಎಸ್.ಟಿ.ಎಸ್[ಎಸ್] ಸಂಖ್ಯೆಯ ಮನವಿಯು ಮೇಲಿನ ಹೇಳಿಕೆಯನ್ನು ಮತ್ತು ಸದ್ಯದ ಸ್ಥಿತಿಯನ್ನು ದಾಖಲಿಸುತ್ತದೆ.

೧೩. ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಸೇವೆಗಳಲ್ಲಿ ಇತರ ಕೋಮುಗಳು ಸ್ಥಾನ ಸಂಪಾದಿಸಿದ್ದು ಹೇಗೆ, ಕೋಮುವಾರು ಪ್ರಾತಿನಿಧ್ಯವನ್ನು ಗಳಿಸಿಕೊಳ್ಳುವಾಗ ನಮ್ಮ ದೇಶದ ಪರಿಶಿಷ್ಟ ಜಾತಿಗಳನ್ನು ಮತ್ತು ಇತರ ಅಲ್ಪಸಂಖ್ಯಾತ ಕೋಮುಗಳನ್ನು ಕುರಿತು ಭಾರತ ಸರ್ಕಾರವು ಅನುಸರಿಸಿರುವ ನಿಯಮ ಯಾವುದು ಮತ್ತು ಈ ವಿಧಾನಗಳಲ್ಲಿನ ವ್ಯತ್ಯಾಸದ ಕಾರಣಗಳು ಯಾವುವು, ಎಂಬವನ್ನು ಪರಿಶೀಲಿಸಬೇಕಿದೆ.

೧೪. ಶ್ರೀ ನಾಯರ್ ಅವರ ಠರಾವನ್ನು ೧೯೨೫ರಲ್ಲಿ ಭಾರತ ಸರ್ಕಾರವು ಒಪ್ಪಿಕೊಂಡಾಗ ಕೇಂದ್ರದ ನಿಯಂತ್ರಣದಲ್ಲಿರುವ ಸೇವೆಗಳಲ್ಲಿನ ಕೋಮುವಾರು ಪ್ರಾತಿನಿಧ್ಯದ ನಿಯಮ ಜಾರಿಗೆ ಬಂದಿತು. ಸಾರ್ವಜನಿಕ ಸೇವೆಗಳಲ್ಲಿನ ಕೋಮುವಾರು ಪ್ರಾತಿನಿಧ್ಯದ ಅಗತ್ಯದ ರೀತ್ಯಾ ಕೇಂದ್ರ ಸಭೆಯಲ್ಲಿ ೧೦/೩/೧೯೨೩ರಂದು ಈ ಠರಾವು ಸೂಚನೆಗೆ ಬಂದಿತ್ತು. ಶ್ರೀ ನಾಯರ್ ಅವರು, ಹಿಂದೂಗಳು ಅದರಲ್ಲಿಯೂ

ವಿಶೇಷವಾಗಿ ಬ್ರಾಹ್ಮಣರು ಸಾರ್ವಜನಿಕ ಸೇವೆಗಳನ್ನು ಪೂರ್ಣವಾಗಿ ಏಕಸ್ವಾಮ್ಯದಲ್ಲಿರಿಸಿಕೊಂಡಿದ್ದಾರೆಂದೂ ಇತರ ಕೋಮುಗಳಿಗೆ ಒಂದು ನೆಲೆಯನ್ನು ಕಂಡುಕೊಳ್ಳಲು ತೀರ ಕಷ್ಟಕರ ಎಂದೂ ಆ ಠರಾವಿನಲ್ಲಿ ದೂರಿದ್ದರು. ಈ ಠರಾವಿನ ನಿರ್ವಹಣೆಯಲ್ಲಿ ಭಾರತ ಸರ್ಕಾರವು ಅನುಸರಿಸಿದ ವಿಧಾನ ಎಂದರೆ ಖಾಲಿಯಿರುವ ಒಟ್ಟು ಖಾಯಂ ಉದ್ಯೋಗಗಳಲ್ಲಿ ಮೂರನೆಯ ಒಂದು ಭಾಗವನ್ನು ಮೀಸಲಾಗಿರಿಸಿ ಕೋಮು ಅಸಮಾನತೆಯನ್ನು ಸರಿಪಡಿಸುವ ಸಲುವಾಗಿ ನೇರ ನೇಮಕಗಳನ್ನು ಮಾಡುವುದು.

೧೫. ಸಾರ್ವಜನಿಕ ಸೇವೆಗಳಲ್ಲಿ ಕೋಮು ಪ್ರಾತಿನಿಧ್ಯದ ಕಾರ್ಯನೀತಿಯನ್ನು ಜಾರಿಗೆ ತರುವ ಈ ವಿಧಾನ ಹಿಂದೂಗಳಲ್ಲದ ಕೋಮುಗಳನ್ನು ತೃಪ್ತಿಗೊಳಿಸಲಿಲ್ಲ. ದುಂಡುಮೇಜಿನ ಪರಿಷತ್ತಿನಲ್ಲಿ ಈ ವಿಷಯ ಚರ್ಚೆಗೆ ಬಂದಿತು ಮತ್ತು ಗುರಿಯನ್ನು ತಲಪಲು ಹೆಚ್ಚು ಪರಿಣಾಮಕಾರಿಯಾದ ವಿಧಾನವನ್ನು ಯೋಜಿಸುವ ಹಕ್ಕೊತ್ತಾಯವನ್ನು ಮಂಡಿಸಲಾಯಿತು. ಈ ಹಕ್ಕೊತ್ತಾಯವು ವಿದೇಶಾಂಗ ಕಾರ್ಯದರ್ಶಿಯವರಿಂದ ಮತ್ತು ಭಾರತ ಸರ್ಕಾರದಿಂದ ಸ್ವೀಕೃತವಾಯಿತು. ಹಾಗೂ ಗೃಹಖಾತೆಯ ಸಂ. ಎಫ್. ೧೪–೧೭–೮–೩೩ ಮತ್ತು ದಿನಾಂಕ ೪/೭/೧೯೩೪ರ ಠರಾವಿನ ಮೂಲಕ ಜಾರಿಗೆ ಬಂದಿತು.

೧೬. ಈಗ ಜಾರಿಯಲ್ಲಿರುವುದು ಮತ್ತು ದೇಶದ ಸಾರ್ವಜನಿಕ ಸೇವೆಗಳಲ್ಲಿ ಎಲ್ಲ ಕೋಮುಗಳಿಗೆ ನ್ಯಾಯ ದೊರಕಿಸುವ ಮಹಾಶಾಸನವನ್ನು ರಚಿಸಿರುವುದು ಈ ನಿರ್ಣಯವೇ. ಈ ನಿರ್ಣಯದ ಪೂರ್ವಸಿದ್ಧತೆಗಳಿಗಾಗಿ ಪರಾಮರ್ಶೆ ನಡೆಸುವುದು ಅತ್ಯಗತ್ಯವಾಗಿದೆ. ಸಾರ್ವಜನಿಕ ಸೇವೆಗಳಲ್ಲಿ ಇತರ ಅಲ್ಪಸಂಖ್ಯಾತ ಕೋಮುಗಳು ಏಕೆ ಸರಿಯಾದ ಪ್ರಾತಿನಿಧ್ಯವನ್ನು ಪಡೆದಿವೆ ಎಂಬುದನ್ನೂ ಪರಿಶಿಷ್ಟ ಜಾತಿಗಳು ಪ್ರಾತಿನಿಧ್ಯವನ್ನು ಏಕೆ ಗಳಿಸಿಯೇ ಇಲ್ಲ ಎಂಬುದನ್ನೂ ಅದು ತೋರುತ್ತದೆ. ಈ ಠರಾವಿನಲ್ಲಿ ಎರಡು ಮೂಲಭೂತ ಷರತ್ತುಗಳಿವೆ ಮತ್ತು ೧೯೨೩ರ ಹಳೆಯ ಠರಾವಿನೊಂದಿಗೆ ಹೋಲಿಸಿದಾಗ ಈ ಷರತ್ತುಗಳು ಪೂರ್ಣ ಹೊಸದಾಗಿವೆ:

೧. ಸಾರ್ವಜನಿಕ ಸೇವೆಗಳಲ್ಲಿನ ನೇಮಕಗಳಿಗೆ ಸಂಬಂಧಿಸಿದಂತೆ ಯಾವ ಯಾವ ಕೋಮುಗಳನ್ನು ಅಲ್ಪಸಂಖ್ಯಾತ ಎಂದು ಪರಿಗಣಿಸಬೇಕಿದೆ ಎಂಬುದನ್ನು ಅದು ಘೋಷಿಸುತ್ತದೆ.

೨. ಅಲ್ಪಸಂಖ್ಯಾತ ಎಂದು ಘೋಷಿಸ್ಪಟ್ಟ ಕೋಮುಗಳಿಗೆ ಹಂಚಬೇಕಾದ ವಾರ್ಷಿಕ ಹುದ್ದೆಗಳ ಗೊತ್ತಾದ ಪ್ರಮಾಣವನ್ನು ಅದು ಖಚಿತಗೊಳಿಸುತ್ತದೆ.

೧೭. ಬೇರೆ ಬೇರೆ ಕೋಮುಗಳಿಗೆ ಪ್ರಾತಿನಿಧ್ಯವನ್ನು ಗಳಿಸಿಕೊಡಲು ೧೯೩೪ರ ಠರಾವಿನಲ್ಲಿ ನಿಗದಿಪಡಿಸಿದ್ದ ಷರತ್ತುಗಳು ಇವು. ವಿವರಗಳನ್ನು ಪರಿಶೀಲಿಸಿದಾಗ ಮೊದಲನೆಯದಾಗಿ ಈ ಠರಾವು ಈ ಮುಂದಿನವುಗಳನ್ನು ಅಲ್ಪಸಂಖ್ಯಾತ ಕೋಮುಗಳೆಂದು ಎಂದು ನಿರ್ಣಯಿಸುತ್ತದೆ : (೧) ಮುಸ್ಲಿಮರು, (೨) ಆಂಗ್ಲೋ ಇಂಡಿಯನ್ನರು, (೩) ಭಾರತೀಯ ಕ್ರಿಶ್ಚಿಯನ್ನರು (೪) ಸಿಖ್ಖರು ಮತ್ತು (೫) ಪಾರ್ಸಿಗಳು. ಎರಡನೆಯದಾಗಿ, ಈ ಮುಂದಿನ ಪ್ರಮಾಣದ ವಾರ್ಷಿಕ ಹುದ್ದೆಗಳಿಗೆ ಮೇಲೆ ಹೇಳಿದ ಅಲ್ಪಸಂಖ್ಯಾತರಾದ ಸದಸ್ಯರನ್ನು ನೇಮಿಸಬೇಕು ಎಂದು ಈ ಠರಾವು ನಿಗದಿಪಡಿಸುತ್ತದೆ.

೧೮. ಪರಿಶಿಷ್ಟ ಜಾತಿಗಳ ಸ್ಥಾನವನ್ನು ಕಾಪಾಡಲು ಈ ಠರಾವು ಯಾವ ಅವಕಾಶವನ್ನು ನೀಡಿದೆ? ಠರಾವಿನ, ಪ್ರಕೃತಕ್ಕೆ ಬೇಕಾದ, ಎರಡು ಷರತ್ತುಗಳನ್ನು ಕೆಳಗೆ ಕೊಡುತ್ತಿದ್ದೇನೆ. ೩ನೇ ಪ್ಯಾರಾದಲ್ಲಿ ಠರಾವು ಹೇಳುತ್ತದೆ :

"ಹಿಂದೂಗಳಿಗಾಗಿ ಇರುವ ಒಟ್ಟು ಸಂಖ್ಯೆಯ ಉದ್ಯೋಗಾವಕಾಶಗಳಲ್ಲಿ ಒಂದು ಖಚಿತ ಪ್ರಮಾಣವನ್ನು ಅವರಿಗಾಗಿ (ತುಳಿತಕೊಳ್ಳಗಾದ ವರ್ಗಕ್ಕಾಗಿ) ಮೀಸಲಾಗಿರಿಸುವುದರಿಂದ ಯಾವ ಉದ್ದೇಶವೂ

## ೪–೭–೧೯೩೪ರ ಠರಾವಿನ ಮೂಲಕ ನಿಗದಿಯಾಗಿರುವ ಪ್ರಮಾಣ

| | ಸೇವೆಗಳು | | | |
|---|---|---|---|---|
| ಅಲ್ಪಸಂಖ್ಯಾತರು | ಅಖಿಲ ಭಾರತೀಯ ವ್ಯಾಪ್ತಿಯಲ್ಲಿನ ಕೇಂದ್ರದ ಐ.ಪಿ.ಎಸ್. ಮತ್ತು ಅಧೀನ ಸೇವೆಗಳಲ್ಲಿ ಉದ್ಯೋಗಗಳಿಗೆ ಸೇರುವವರು | ರೈಲ್ವೆ ಮತ್ತು ಸುಂಕದ ಖಾತೆ | ಅಂಚೆ ಮತ್ತು ತಂತಿ | ಬೆಲೆ ನಿಗದಿ ಮಾಡುವ ಇಲಾಖೆ ಮತ್ತು ಸಮುದ್ರ ತೀರದ ಕಾವಲು ಇಲಾಖೆ ಸೇವೆಗಳು |
| ಮುಸ್ಲಿಮರು | ೨೫% | ೨೫% | ೨೫% | ಈ ಸೇವಾ ನಿರ್ವಹಣೆಗೆ ವಿಶೇಷ |
| ಆಂಗ್ಲೋ ಇಂಡಿಯನ್ನರು | – | ೮% | ೫% | ಅರ್ಹತೆಗಳಿರಬೇಕೆಂಬ ಕಾರಣದಿಂದ |
| ಭಾರತೀಯ ಕ್ರಿಶ್ಚಿಯನ್ನರು | *೮.೩೩% | ೬% | ೩.೫% | ಮಾತ್ರ ಈ ಉದ್ಯೋಗಗಳನ್ನು |
| ಸಿಖ್ಖರು | – | – | – | ಆಂಗ್ಲೋ ಇಂಡಿಯನ್ನರಿಗೆಂದು |
| ಪಾರ್ಸಿಗಳು | – | – | – | ಮೀಸಲಾಗಿ ಇರಿಸಿರುವುದರಿಂದ ಠರಾವಿನ ವ್ಯಾಪ್ತಿಯಲ್ಲಿ ಈ ಸೇವೆ ಬರುವುದಿಲ್ಲ ಎಂಬುದು ಸುವ್ಯಕ್ತವಾಗಿದೆ. |

* ಟಿಪ್ಪಣಿ : ಈ ಕೋಮುಗಳಿಗೆ ಮೀಸಲಾಗಿರಿಸಿರುವ ಪ್ರಮಾಣಕ್ಕಿಂತ ಕಡಿಮೆ ಅಭ್ಯರ್ಥಿಗಳು ದೊರಕಿದರೆ ಮತ್ತು ಸೂಕ್ತ ಅರ್ಹತೆಯಿರುವ ಅಭ್ಯರ್ಥಿಗಳು ಇಲ್ಲದಿದ್ದರೆ ಉಳಿದ ೮.೩೩% ರಷ್ಟು ಉದ್ಯೋಗಗಳು ಮುಸ್ಲಿಮರಿಗೆ ಲಭ್ಯವಾಗುತ್ತವೆ ಎಂದು ಮೇಲೆ ಹೇಳಿದ ನಿರ್ಣಯದ ೭(೩)ನೇ ಪ್ಯಾರಾ ತಿಳಿಸುತ್ತದೆ.

ಸಾಧ್ಯವಾಗುವುದಿಲ್ಲವಾದರೂ ಈ ವರ್ಗದ ಸೂಕ್ತ ಅರ್ಹತೆಯಿರುವ ಅಭ್ಯರ್ಥಿಗಳ ಹುದ್ದೆಗಳ ಸದವಕಾಶಗಳನ್ನು ಕಿತ್ತುಕೊಳ್ಳುವುದಿಲ್ಲ ಎಂಬ ಭರವಸೆ ಪಡೆಯಲು ಅವರು ಆಶಿಸುತ್ತಾರೆ".

ಪರಿಶಿಷ್ಟ ಜಾತಿಗಳಿಗೆ ಸಾರ್ವಜನಿಕ ಸೇವೆಗಳಲ್ಲಿ ಪ್ರಾತಿನಿಧ್ಯವನ್ನು ಕುರಿತು ನ್ಯಾಯವಾದ ಅವರ ಪಾಲಿನ ಭರವಸೆಯನ್ನು ನೀಡಿದ ಸರ್ಕಾರವು ಆಶಿಸಿದ ರೀತಿ, ಠರಾವಿನ ೭(೧) (೬)ನೇ ಪ್ಯಾರಾದಲ್ಲಿನ ಈ ಮುಂದಿನ ಭಾಗದಲ್ಲಿ ಸ್ಪಷ್ಟವಾಗಿದೆ:

"ತುಳಿತಕ್ಕೊಳಗಾದ ವರ್ಗಕ್ಕೆ ನ್ಯಾಯವಾದ ಪ್ರಾತಿನಿಧ್ಯವನ್ನು ಗಳಿಸಿಕೊಡುವ ಸಲುವಾಗಿ ಸೂಕ್ತ ಅರ್ಹತೆಯಿರುವ ಈ ವರ್ಗದ ಜನರನ್ನು ಸಾರ್ವಜನಿಕ ಸೇವೆಯೊಂದರ ಉದ್ಯೋಗಾವಕಾಶ ಇರುವ ಸಂದರ್ಭದಲ್ಲಿಯೂ ಸ್ಪರ್ಧೆಯ ಮೂಲಕ ಆ ಸೇವೆಗೆ ನಾಮಕರಣ ಮಾಡಬಹುದು".

ಈ ಪ್ರಸ್ತಾಪಗಳನ್ನು ಮನಗಂಡಾಗ ಎರಡು ಸಂಗತಿಗಳು ಗಮನಕ್ಕೆ ಬರುತ್ತವೆ :

(ಅ) ಈ ಠರಾವು ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರೆಂದು ಘೋಷಿಸುವುದಿಲ್ಲ.

(ಆ) ಈ ಠರಾವು ಪರಿಶಿಷ್ಟ ಜಾತಿಗಳಿಗೆ ಯಾವುದೇ ಖಚಿತ ಪ್ರಮಾಣದ ವಾರ್ಷಿಕ ಉದ್ಯೋಗಾವಕಾಶಗಳನ್ನು ನೀಡುವುದಿಲ್ಲ.

ಸಾರ್ವಜನಿಕ ಉದ್ಯೋಗಗಳನ್ನು ಗಳಿಸಿಕೊಳ್ಳಲು ಪರಿಶಿಷ್ಟ ಜಾತಿಗಳಿಗೆ ಮತ್ತು ಇತರ ಅಲ್ಪಸಂಖ್ಯಾತ ಕೋಮುಗಳಿಗೆ ಭಾರತ ಸರ್ಕಾರ ಮಾಡಿಕೊಟ್ಟಿರುವ ಅವಕಾಶಗಳ ನಡುವೆ ಎದ್ದುಕಾಣುವ ವ್ಯತ್ಯಾಸವಿದೆ ಎಂಬುದನ್ನು ಹೇಳಬೇಕಾಗಿಲ್ಲ. ಈ ವ್ಯತ್ಯಾಸವನ್ನು ಒಂದು ವಾಕ್ಯದಲ್ಲಿ ವ್ಯಕ್ತಪಡಿಸಬಹುದು. ಇತರ ಕೋಮುಗಳ ಉದ್ಯೋಗಾವಕಾಶಗಳು ಠರಾವಿಗೆ ಋಣಿಯಾಗಿವೆ, ವಿವೇಚನೆಗೆ ಬಿಟ್ಟ ವಿಷಯವಾಗಿಲ್ಲ. ಅದನ್ನು ಆವಶ್ಯಕ ಕರ್ತವ್ಯದ ವಿಷಯವನ್ನಾಗಿ ಮಾಡಲಾಗಿದೆ. ಖಾಲಿ ಇರುವ ಹುದ್ದೆಗಳು ಯಾರಿಗಾಗಿ ಮೀಸಲಾಗಿದೆಯೋ ಆ ಕೋಮಿನ ಜನರಿಗೆ ಉದ್ಯೋಗ ನೀಡಿ ನೇಮಕದ ಅಧಿಕಾರಿಗಳು ಆಯಾ ಹುದ್ದೆಗಳನ್ನು ತುಂಬಿಸಬೇಕು. ಆದರೆ ಪರಿಶಿಷ್ಟ ಜಾತಿಗಳ ಉದ್ಯೋಗಾವಕಾಶಗಳು ಕೇವಲ ವಿವೇಚನೆಗೆ ಒಳಪಟ್ಟ ವಿಷಯಗಳಾಗಿಬಿಟ್ಟಿವೆ. ಮೀಸಲಾಗಿಲ್ಲದ ಉದ್ಯೋಗಕ್ಕೆ ಪರಿಶಿಷ್ಟ ಜಾತಿಗೆ ಸೇರಿದವನೊಬ್ಬನನ್ನು ನೇಮಿಸುವುದರ ಮೂಲಕ ಆ ಹುದ್ದೆಯನ್ನು ನೇಮಕದ ಅಧಿಕಾರಿ ತುಂಬಿಸಬಹುದು.

೧೯. 'ಬೇಕು' ಮತ್ತು ಬಹುದುಗಳ ನಡುವಿನ ಈ ವ್ಯತ್ಯಾಸದ ಕಾರಣದಿಂದ ಮುಸ್ಲಿಮರು ಮತ್ತು ಇತರ ಕೋಮುಗಳು ಸಾರ್ವಜನಿಕ ಸೇವೆಗಳಲ್ಲಿ ಅಷ್ಟು ಒಳ್ಳೆಯ ಪ್ರಾತಿನಿಧ್ಯವನ್ನು ಹೊಂದಿವೆ ಮತ್ತು ಪರಿಶಿಷ್ಟ ಜಾತಿಗಳು ಪೂರ್ಣವಾಗಿ ಹೊರಗುಳಿದಿವೆ.

ಭಾರತ ಸರ್ಕಾರವು ಸಾರ್ವಜನಿಕ ಸೇವೆಗಳಲ್ಲಿನ ಪರಿಶಿಷ್ಟ ಜಾತಿಗಳ ಉದ್ಯೋಗಾವಕಾಶಗಳ ವಿಷಯವನ್ನು ನೇಮಕಾಧಿಕಾರಿಗಳ ವಿವೇಚನೆ ಹಾಗೂ ಕೃಪೆಗೆ ಬಿಟ್ಟಿರುವವರೆಗೂ ಇದಕ್ಕಿಂತ ಮಿಗಿಲಾದ ಫಲಿತಾಂಶ ಅಸಾಧ್ಯ. ಈ ಅಧಿಕಾರಿಗಳು ಯುರೋಪಿಯನ್ನರು ಅಥವಾ ಹಿಂದೂಗಳು ಅಥವಾ ಮುಸ್ಲಿಮರು. ಯುರೋಪಿಯನ್ ಅಧಿಕಾರಿ ಪರಿಶಿಷ್ಟ ಜಾತಿಗಳನ್ನು ಕುರಿತ ಅಜ್ಞಾನದಲ್ಲಿ ಪರಮಸುಖವನ್ನು ಪಡೆದವನು ಹಾಗೂ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳ ರಕ್ಷಣೆಯನ್ನು ಆತ ಎಂದೂ ತನ್ನ ವಿಶೇಷ ಕಾಳಜಿಯನ್ನಾಗಿಸಿಕೊಳ್ಳಲಿಲ್ಲ. ಆತನ ಸಾರ್ವತ್ರಿಕ ಪ್ರಭುಶಕ್ತಿ ಉಳಿದುಕೊಂಡು ಬರುವವರೆಗೂ ತನ್ನ ಕೈಕೆಳಗಿನ ಹಿಂದೂ ಅಥವಾ ಮುಸ್ಲಿಮ್ ಅಧಿಕಾರಿಗಳ ಉಪದೇಶವನ್ನು ಕೇಳಲು ಆತ ಸಿದ್ಧ. ಮುಸ್ಲಿಮರು ಸಹಜವಾಗಿ ತಮ್ಮದೇ ಸ್ವಂತ ಪರಿಸ್ಥಿತಿಯನ್ನು ಬಲಪಡಿಸಿಕೊಳ್ಳಲು ಹೆಣಗುತ್ತಿದ್ದಾರೆ. ಏನೇ ಆದರೂ ಮುಸ್ಲಿಮರಿಗೆ ಮೀಸಲಾಗಿರುವ ಎಲ್ಲ ಉದ್ಯೋಗಾವಕಾಶಗಳೂ ಮತ್ತು ಎಷ್ಟು ಸಾಧ್ಯವೋ ಅಷ್ಟು ಉದ್ಯೋಗವಕಾಶಗಳೂ

ಮುಸ್ಲಿಮರಿಗೆ ದಕ್ಕುವುದನ್ನು ಕಾಣುವತ್ತಲೇ ಅವರ ಆಸಕ್ತಿ. ಸಾರ್ವಜನಿಕ ಸೇವೆಗಳಲ್ಲಿ ಈ ವರೆಗೆ ಏಕಸ್ವಾಮ್ಯವನ್ನು ಪಡೆದಿರುವ ಮತ್ತು ಜೀವನದ ಒಳ್ಳೆಯ ವಸ್ತುಗಳನ್ನು ಇತರರೊಂದಿಗೆ ಹೇಗೆ ಹಂಚಿಕೊಳ್ಳಬೇಕೆಂದು ಎಂದೂ ತಿಳಿಯದ ಹಿಂದೂಗಳೂ ಉಳಿದದ್ದನ್ನು ತಾವೇ ಇರಿಸಿಕೊಳ್ಳಲು ಬಯಸುತ್ತಾರೆ. ಪರಿಶಿಷ್ಟ ಜಾತಿಗಳ ವಿರುದ್ಧ ಅನಾದಿಕಾಲದಿಂದ ಬಂದ ಪೂರ್ವಾಗ್ರಹದೊಡನೆ ಬೆರೆತಿರುವ ಸ್ವಹಿತಾಸಕ್ತಿಯಿಂದ ಹಿಂದೂಗಳು ಎಂದಿಗೂ ಅವರೊಂದಿಗೆ ನ್ಯಾಯವಾಗಿ ವರ್ತಿಸುವುದಿಲ್ಲ. ಪರಿಶಿಷ್ಟ ಜಾತಿಗಳ ಉದ್ಯೋಗಾವಕಾಶದ ಪ್ರಶ್ನೆಯನ್ನು ಅಂಥ ಅಧಿಕಾರಿಗಳ ವಿವೇಚನೆಗೆ ಬಿಟ್ಟಿರುವುದರ ಫಲವಾಗಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದಲ್ಲಿ ನ್ಯಾಯವಾದ ಪಾಲನ್ನು ಗಳಿಸಿಕೊಳ್ಳುತ್ತಾರೆಂದು ಆಶಿಸುವುದು ಕೇವಲ ಭ್ರಮೆ.

೨೦. ಸಾರ್ವಜನಿಕ ಸೇವೆಗಳಲ್ಲಿ ಪ್ರವೇಶ ಪಡೆಯುವ ಪ್ರಶ್ನೆ ಎಲ್ಲ ಅಲ್ಪ ಸಂಖ್ಯಾತ ಕೋಮುಗಳಿಗೂ ಮುಖ್ಯವಾದ ಪ್ರಶ್ನೆ. ಆದರೆ ಪರಿಶಿಷ್ಟ ಜಾತಿಗಳಿಗೆ ಅದೊಂದು ಅತ್ಯಾವಶ್ಯಕವಾದ ಪ್ರಶ್ನೆ, ಜೀವನ್ಮರಣದ ಪ್ರಶ್ನೆ. ಇದು ಹೀಗೇಕೆ ಇರಬೇಕು ಎಂಬುದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಪರಿಶಿಷ್ಟ ಜಾತಿಗಳ ಯುವಕರ ಪುರೋಭಿವೃದ್ಧಿಗೆ ತೆರೆದುಕೊಳ್ಳುವ ಪ್ರಶ್ನೆ ಅದು. ಪರಿಶಿಷ್ಟ ಜಾತಿಗಳು ಮತ್ತು ಭಾರತ ಸರ್ಕಾರ ಕೂಡ ಅಲಕ್ಷಿಸಲಾಗದ ಪ್ರಶ್ನೆಯ ಸ್ಥಿತಿ ಇದು. ಅಭಿವೃದ್ಧಿ ವಿಸ್ತಾರದ ಅವಕಾಶಗಳಾದ ವಾಣಿಜ್ಯ ಮತ್ತು ಕೈಗಾರಿಕೆಗಳು ಪರಿಶಿಷ್ಟ ಜಾತಿಗಳ ತರುಣರಿಗೆ ಪೂರ್ಣವಾಗಿ ಮುಚ್ಚಲ್ಪಟ್ಟಿವೆ. ಸರ್ಕಾರದ ಸೇವೆಯಲ್ಲಿ ಮಾತ್ರ ಅವರು ಪ್ರಗತಿಯನ್ನು ಕಾಣಬಹುದು. ಈ ಪ್ರಶ್ನೆಯನ್ನು ಅಷ್ಟೊಂದು ಅತ್ಯಾವಶ್ಯಕವನ್ನಾಗಿಸುವ ಈ ವಿಷಯವು ಒಂದು ಮುಖ್ಯ ಸಂಗತಿಯಾದರೂ ಇದೊಂದೇ ಸಂಗತಿ ಅಲ್ಲ. ಏಕೆಂದರೆ ಬಹಳವಾದ ಪ್ರಾಮುಖ್ಯ ನೀಡಿ ಉದ್ದೇಶಪೂರ್ವಕವಾಗಿ ತೊಡಗುವಂತೆ ಮಾಡಿರುವ ಇನ್ನೊಂದು ಸಂಗತಿ ಇದೆ. ಒಂದು ಕೋಮಿನ ವಿದ್ಯಾಪ್ರಸಾರಕ್ಕೆ ಉತ್ತೇಜನ ನೀಡುವುದರಲ್ಲಿ ಸರ್ಕಾರಿ ಪೋಷಣೆಯು ಪರಿಣಾಮಕ್ಕೆ ಆ ಸಂಗತಿ ಸಂಬಂಧಿಸಿದೆ. ಹಿಂದೂ ಕೋಮು ಸಾಧಿಸಿರುವ ತೀವ್ರ ಪ್ರಗತಿ ಬಹಳ ಗಮನಾರ್ಹವಾದದ್ದು ಎಂಬುದು ನಿಜವೇ. ಆದರೆ ವಿದ್ಯಾಭ್ಯಾಸದಿಂದ ಸರ್ಕಾರಿ ಸೇವೆಗಳಲ್ಲಿ ಪ್ರವೇಶ ಪಡೆಯುವುದರ ಮೂಲಕ ಪುರೋವೃದ್ಧಿಯ ಅವಕಾಶ ತೆರೆದುಕೊಳ್ಳುತ್ತದೆ ಎಂಬ ಪೂರ್ಣ ಭರವಸೆಯ ಕಾರಣದಿಂದ ಹಿಂದೂ ಸಮಾಜದಲ್ಲಿ ವಿದ್ಯಾಭ್ಯಾಸ ಅಷ್ಟು ಆಳವಾಗಿ ಬೇರು ಬಿಟ್ಟಿದೆ ಎಂದು ಗ್ರಹಿಸಲಾಗುತ್ತದೆ. ವಿದ್ಯಾಭ್ಯಾಸದಲ್ಲಿ ಬಹಳವಾಗಿ ಹಿಂದುಳಿದವರ ಪರಿಶಿಷ್ಟ ಜಾತಿಗಳ ವಿಷಯದಲ್ಲಿ ಪುರೋವೃದ್ಧಿಯ ಅಂಥ ಭರವಸೆ ಪರಮ ಅಗತ್ಯವಾಗಿದೆ. ಮೇಲೆ ಹೇಳಿದ ಎರಡು ವಾದಗಳಿಗಿಂತ ಹೆಚ್ಚು ತೂಕವಾಗಿರುವ ಮೂರನೆಯ ವಾದವೂ ಇದೆ. ಪರಿಶಿಷ್ಟ ಜಾತಿಯ ಜನರಲ್ಲಿ ಸಾಮಾನ್ಯರ ಹಾಗೂ ವಿದ್ಯಾವಂತವರ್ಗದ ಹಿತಾಸಕ್ತಿಗಳು ಪರಸ್ಪರ ಭಿನ್ನವಾಗಿರುವ ವಿಚಾರಕ್ಕೆ ಅದು ಸಂಬಂಧಿಸಿದೆ. ಸಾರ್ವಜನಿಕ ಕ್ಷೇಮದ ದೃಷ್ಟಿಯಿಂದ ಸಾರ್ವಜನಿಕ ಆಡಳಿತ ಎಷ್ಟು ಮುಖ್ಯವಾದುದು ಎಂಬುದನ್ನು ತಿಳಿದುಕೊಂಡಾಗ ಇದು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ, ಆಡಳಿತಾಧಿಕಾರವು, ಈ ದಿನಗಳಲ್ಲಿ ಶಾಸನಾಧಿಕಾರವನ್ನೂ ಒಳಗೊಂಡಿದೆ. ಈಚಿನ ದಿನಗಳಲ್ಲಿ ಯಾವ ಲಿಖಿತ ಶಾಸನವೂ ಸಂಪೂರ್ಣವಾಗಿಲ್ಲ, ಸಮಗ್ರವಾಗಿಲ್ಲ. ಕಾಯಿದೆಯ ಉದ್ದೇಶವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನಿಯಮಗಳನ್ನು ರಚಿಸಲೆಂದು ಹೆಚ್ಚಿನವರು ಆಡಳಿತಕ್ಕೆ ಶಾಸನಾಧಿಕಾರದ ಅವಕಾಶವನ್ನು ನೀಡುತ್ತಾರೆ. ಎರಡನೆಯದಾಗಿ, ಕಾನೂನು ಲಾಭದಾಯಕವೋ ಅಲ್ಲವೋ ಎಂಬುದು ಎಷ್ಟು ಪರಿಣಾಮಕಾರಿಯಾಗಿ ಮತ್ತು ಎಷ್ಟು ನಿಷ್ಪಕ್ಷಪಾತವಾಗಿ ಅದನ್ನು ಪಾಲಿಸಲಾಗಿದೆ ಎಂಬುದನ್ನು ಅವಲಂಬಿಸುತ್ತದೆ. ಆದ್ದರಿಂದಲೇ ಒಳ್ಳೆಯ ಆಡಳಿತ, ಒಳ್ಳೆಯ ಕಾನೂನಿಗಿಂತಲೂ ಬಹಳ ಮುಖ್ಯ. ಆಡಳಿತ ಕೆಟ್ಟದಾಗಿದ್ದರೆ ಒಳ್ಳೆಯ ಕಾನೂನಿಗಿಂತ ಒಳ್ಳೆಯ ಆಡಳಿತದಲ್ಲಿ ಆಸಕ್ತಿಯನ್ನು ಇರಿಸಿಕೊಂಡಿರುವ ಪರಿಶಿಷ್ಟ ಜಾತಿಗಳಿಗೆ,

ಆಡಳಿತವು ಬಹುಮುಖ್ಯವಾದ ಪ್ರಶ್ನೆಯಾಗಿರುವುದು ಇದೇ ಕಾರಣದಿಂದ. ಈಗಿನ ಆಡಳಿತ ಒಳ್ಳೆಯ ಆಡಳಿತವೇ? ಈ ದಿನಗಳ ಆಡಳಿತದ ಬಗ್ಗೆ ಪರಿಶಿಷ್ಟ. ಜಾತಿಗಳ ಅನಿಸಿಕೆಯೇನು? ಭಾರತಾದ್ಯಂತ ಪರಿಶಿಷ್ಟ ಜಾತಿಗಳನ್ನು ಕುರಿತ ತನ್ನ ಮನೋಭಾವದಲ್ಲಿ ಇಡೀ ಆಡಳಿತ ಪ್ರತಿಕೂಲವಾಗಿದೆ, ಪಕ್ಷಪಾತದ್ದಾಗಿದೆ, ವಕ್ರಮಾರ್ಗದ್ದಾಗಿದೆ ಎಂಬ ಸಾರ್ವತ್ರಿಕ ಅಭಿಪ್ರಾಯದಲ್ಲಿ ಯಾವ ಸಂದೇಹವೂ ಇರಲಾರದು. ನಿಜದಲ್ಲಿ ಸರಕಾರದ ನೌಕರರಲ್ಲಿನ ಶಾಸನಬದ್ಧವಾದ ವಿವೇಚನೆ, ಹೆಚ್ಚು ಕಡಿಮೆ ಎಲ್ಲ ಬಾರಿಯೂ ಪರಿಶಿಷ್ಟ ಜಾತಿಗಳ ಹಿತಕ್ಕೆ ವಿರುದ್ಧವಾಗಿ ಮತ್ತು ಅವರನ್ನು ಕೆಳಗೆ ಇರಿಸುವ ಉದ್ದೇಶದಿಂದ ಚಲಾವಣೆಯಾಗುತ್ತದೆ. ಇದರಿಂದ ಪರಿಶಿಷ್ಟ ಜಾತಿಗಳ ಜನಸಾಮಾನ್ಯರ ಯಾತನೆ ಮತ್ತು ಕಿರುಕುಳಗಳ ಅಧಿಕ ಭಾಗವು, ಹುಟ್ಟುತ್ತದೆ. ಪರಿಶಿಷ್ಟ. ಜಾತಿಗಳನ್ನು ಕುರಿತಂತೆ ಹಿಂದೂ ಮತ್ತು ಮುಸ್ಲಿಮ್ ಅಧಿಕಾರಿಗಳ ಮನೋಭಾವನೆಗೆ ಇದು ಸಂಬಂಧಿಸಿದೆ. ಪರಿಶಿಷ್ಟ ಜಾತಿಗಳಿಗೆ ವಿರುದ್ಧವಾಗಿರುವ ಮತ್ತು ಅವರನ್ನು ನಿಗ್ರಹಿಸಬೇಕೆಂದು ನಂಬುವ ವರ್ಗಗಳಿಗೆ ಸೇರಿದ ಉದ್ಯೋಗಿಗಳಿಂದ ಆಡಳಿತ ನಿರ್ವಹಣೆಯನ್ನು ಹಿಂದಕ್ಕೆ ಪಡೆಯುವವರೆಗೂ ಇದು ಹೀಗೆಯೇ ಮುಂದುವರೆಯುತ್ತದೆ. ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರವೇಶವನ್ನು ಅತ್ಯಗತ್ಯವಾದ ವಿಚಾರ ಎಂದು ಪರಿಗಣಿಸಬೇಕು ಎಂಬುದನ್ನು ಮನಗಾಣಿಸಲು ಪರಿಶಿಷ್ಟ ಜಾತಿಗಳ ಜನಸಾಮಾನ್ಯರ ಸೌಕರ್ಯ ಮತ್ತು ನೆಮ್ಮದಿಗಿಂತಲೂ ಹೆಚ್ಚು ಶಕ್ತಿಯುತವಾಗಿರುವ ವಾದ ಇರಲು ಸಾಧ್ಯವಿಲ್ಲ.

೨೧. ಕೆಲವು ವಿಷಯಗಳಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಹಾನಿಯ ಮೂಲ ಸುಸ್ಪಷ್ಟವಾಗಿದೆ. ಪರಿಶಿಷ್ಟ ಜಾತಿಗಳ ಸೇವಾಸಕ್ತಿ ಎಷ್ಟು ಮುಖ್ಯವಾದುದು ಎಂಬುದು ಸಹ ಸುವ್ಯಕ್ತವಾಗಿದೆ. ಇತರ ಕೋಮುಗಳೊಡನೆ ಹೋಲಿಸಿದಾಗ, ಪರಿಶಿಷ್ಟ ಜಾತಿಗಳ ವಿರುದ್ಧ ಮಾಡಿರುವ ೪–೭–೧೯೩೪ರ ತನ್ನ ಠರಾವಿನಲ್ಲಿ ಸರ್ಕಾರ ತೋರುವ ತಾರತಮ್ಯದಿಂದ ಈ ಅತ್ಯಗತ್ಯವಾದ ಹಿತಾಸಕ್ತಿಗೆ ಬಗೆದಿರುವ ಕೇಡು ಎಷ್ಟು ಗಂಭೀರ ಸ್ವರೂಪದ್ದು ಎಂಬುದನ್ನು ಯಾರೂ ಅಲಗಳೆಯಾರರು. ಇದರ ಪರಿಣಾಮವು ಪರಿಶಿಷ್ಟ ಜಾತಿಗಳಿಗೆ ಎಷ್ಟು ಅನರ್ಥಕಾರಿಯಾಗಿದೆ ಎಂಬುದು ಐ.ಸಿ.ಎಸ್.ನಲ್ಲಿ ಕೋಮುವಾರು ರಚನೆಗೆ ಸಂಬಂಧಿಸಿದಂತೆ, ಮುಂದೆ ಕೊಟ್ಟಿರುವ ಪಟ್ಟಿಯ ಸಂಖ್ಯೆಗಳಿಂದ, ಪ್ರತ್ಯಕ್ಷವಾಗಿಯೇ ಇದೆ :

೨೨. ಈ ಪಟ್ಟಿಗಳಿಂದ ನಿರ್ವಿವಾದವಾದ ಸತ್ಯಾಂಶಗಳಾಗಿ ಮುಂದಿನ ನಿರ್ಣಯಗಳು ಎದ್ದು ಕಾಣುತ್ತವೆ. (ಪಟ್ಟಿ ಮುಂದಿನ ಪುಟದಲ್ಲಿ)

೧. ಐ.ಸಿ.ಎಸ್.ನಲ್ಲಿ ತಮ್ಮ ಪಾಲಿನ ಪ್ರಾತಿನಿಧ್ಯವನ್ನು ಪಡೆಯುವುದರಲ್ಲಿ ನ್ಯಾಯವಾದ ಪ್ರಮಾಣದ ಪ್ರಗತಿಯನ್ನು ಎಲ್ಲ ಕೋಮುಗಳೂ ಸಾಧಿಸಿವೆ. ಏಕೈಕ ಅಪವಾದ ಎಂದರೆ ಯಾವ ಪ್ರಗತಿಯನ್ನೂ ಸಾಧಿಸದೇ ಇರುವ ಪರಿಶಿಷ್ಟ ಜಾತಿಗಳ ದುರದೃಷ್ಟ ಕೋಮು ಮಾತ್ರ.

೨. ಕೆಲವು ಕೋಮುಗಳು ತಮ್ಮ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ಪ್ರಾತಿನಿಧ್ಯವನ್ನು ಐ.ಸಿ.ಎಸ್.ನಲ್ಲಿ ಪಡೆದಿವೆ. ಹಿಂದೂಗಳ ವಿಚಾರದಲ್ಲಿ ಇದು ಗಮನಾರ್ಹವಾಗಿದೆ. ಶೇಕಡ ೫೦ರಷ್ಟು ಇರುವ ಮತ್ತು ಭಾರತೀಯ ಪರಸ್ಪರ ಸ್ಥಾನವನ್ನು ಹೋಲಿಸುವುದಕ್ಕಾಗಿ ನೀಡಲೇಬೇಕಾದ ಯುರೋಪಿಯನ್ನನ್ನು ಬಿಟ್ಟುಬಿಟ್ಟರೆ, ಒಟ್ಟು ಜನಸಂಖ್ಯಾ ಪ್ರಮಾಣದಲ್ಲಿ ಶೇಕಡ ೫೦ ರಷ್ಟು ಮಾತ್ರ ಇರುವ ಹಿಂದೂಗಳು, ಐ.ಸಿ.ಎಸ್. ಹುದ್ದೆಗಳಲ್ಲಿನ ಶೇಕಡ ೬೩ರಷ್ಟು ಭಾಗವನ್ನು ಹೊಂದಿದ್ದಾರೆ. ಶೇಕಡ ೧೩ರಷ್ಟು ಹೆಚ್ಚಿನ ಪ್ರಮಾಣವನ್ನು ಅವರು ಅನುಭೋಗಿಸುತ್ತಿದ್ದಾರೆ.

೩. ಸ್ಪರ್ಧೆಯಲ್ಲಿನ ಅಸಮಾನತೆಯನ್ನು ಸರಿಪಡಿಸುವುದು ಮಾತ್ರವೇ ನಾಮಕರಣದ ಉದ್ದೇಶವಾಗಿತ್ತು.

ಆದರೂ, ನಾಮಕರಣದ ಲಾಭದ ಅಗತ್ಯವಿಲ್ಲದ ಹಾಗೂ ಹಕ್ಕಿಲ್ಲದ ಮತ್ತು ಬಹುಪಾಲು ಐ.ಸಿ.ಎಸ್. ಹುದ್ದೆಗಳನ್ನು ಸ್ಪರ್ಧೆಯ ಮೂಲಕ ಗಳಿಸಿಕೊಳ್ಳಲು ಶಕ್ತವಾಗಿರುವ ಕೆಲವು ಕೋಮುಗಳಿಗೆ ನಾಮಕರಣದ ಲಾಭವನ್ನು ನೀಡಲಾಗಿದೆ. ಹಿಂದೂಗಳ ವಿಚಾರದಲ್ಲಿ ಇದು ನಿಸ್ಸಂದೇಹವಾದದ್ದು. ೧೯೨೦–೪೨ ರ ಅವಧಿಯಲ್ಲಿ ಸ್ಪರ್ಧೆಯ ಮೂಲಕ ಭಾರತೀಯರಿಂದ ತುಂಬಲಾದ ಒಟ್ಟು ೪೩೫ ಸ್ಥಾನಗಳಲ್ಲಿ ಹಿಂದೂಗಳು ೩೩೨ ಸ್ಥಾನಗಳನ್ನು ಗಳಿಸಿಕೊಳ್ಳಲು

## ಪಟ್ಟಿ – ೩

## ೧೯೪೨ರಲ್ಲಿ ಐ.ಸಿ.ಎಸ್.ನಲ್ಲಿನ ಕೋಮುವಾರು ಪ್ರಮಾಣ

| ಕೋಮು | ಒಟ್ಟು | ಯುರೋಪಿಯನ್ನರು ಸೇರಿದಂತೆ ಒಟ್ಟು ೧೦೫೬ ಜನರ ಶೇಕಡಾವಾರು | ಯುರೋಪಿಯನ್ನರನ್ನು ಬಿಟ್ಟು ಒಟ್ಟು ೫೬೮ ಜನರ ಶೇಕಡಾವಾರು |
|---|---|---|---|
| ೧. ಯುರೋಪಿಯನ್ನರು | ೪೮೮ | ೪೨.೪ | – – |
| ೨. ಹಿಂದೂಗಳು | ೩೬೩ | ೩೪.೪ | ೬೩.೨ |
| ೩. ಮುಸ್ಲಿಮರು | ೧೧೯ | ೧೦.೩ | ೧೯.೨ |
| ೪. ಭಾರತೀಯ ಕ್ರಿಶ್ಚಿಯನ್ನರು | ೨೩ | ೨.೨ | ೪.೦ |
| ೫. ಆಂಗ್ಲೋ ಇಂಡಿಯನ್ನರು | ೯ | ೦.೯ | ೧.೫ |
| ೬. ಪಾರ್ಸಿಗಳು | ೯ | ೦.೯ | ೧.೫ |
| ೭. ಸಿಖ್ಖರು | ೧೧ | ೧.೦ | ೨.೦ |
| ೮. ಪರಿಶಿಷ್ಟ ಜಾತಿಗಳು | ೧ | ಇಲ್ಲ | ಇಲ್ಲ |
| ೯. ಇತರರು | ೪೩ | ೩.೯ | ೮.೦ |
| ಒಟ್ಟು | ೧,೦೫೬ | | |

ಶಕ್ತರಾದರು. ಆದರೂ ಅವರಿಗೆ ನಾಮಕರಣದ ಮೂಲಕ ೩೧ ಸ್ಥಾನಗಳನ್ನು ನೀಡಲಾಯಿತು. ಈ ಅವಧಿಯಲ್ಲಿ ಸ್ಪರ್ಧೆಯ ಮೂಲಕ ಕೇವಲ ೩೫ ಐ.ಸಿ.ಎಸ್. ನೌಕರಿಗಳನ್ನು ಮುಸ್ಲಿಮರು ಪಡೆದರು. ಆದರೆ ಅವರು ನಾಮಕರಣದ ಮೂಲಕ ೭೪ ಸ್ಥಾನಗಳನ್ನು ಗಳಿಸಿದ್ದಾರೆ. ಸಿಖ್ಖರು ಸ್ಪರ್ಧೆಯ ಮೂಲಕ ಕೇವಲ ೫ ಸ್ಥಾನಗಳನ್ನು ಗಳಿಸಿದ್ದಾರೆ. ಆದರೆ ನಾಮಕರಣದ ಮೂಲಕ ೬ ಸ್ಥಾನಗಳನ್ನು ಅವರು ಹೊಂದಿದ್ದಾರೆ. ಸ್ಪರ್ಧೆಯ ಮೂಲಕ ಒಂದು ಸ್ಥಾನವನ್ನೂ ಪಡೆಯದ ಪರಿಶಿಷ್ಟ ಜಾತಿಗಳಿಗೆ ನಾಮಕರಣದ ಮೂಲಕ ಕೇವಲ ಒಂದೇ ಒಂದು ಸ್ಥಾನ ದೊರೆತಿದೆ. ಪರಿಶಿಷ್ಟ ಜಾತಿಗಳ ಪರಿಸ್ಥಿತಿ ಹೇಗೆ ಶೋಚನೀಯವಾಗಿಯೇ ಉಳಿದಿದೆ ಎಂಬುದನ್ನು ಮತ್ತು ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ ಸಹ ಮಾಡದ ಮೂಲಕ, ಇತರ ಕೋಮುಗಳಿಗೆ ದಾಕ್ಷಿಣ್ಯಪರವಾಗಿರಲು ಹೆಣಗುತ್ತಿರುವ ಸರ್ಕಾರ ಈ ಫಲಿತಾಂಶಗಳಿಗೆ ಹೇಗೆ ಹೊಣೆಯಾಗಿದೆ ಎಂಬುದನ್ನೂ ಇವೆಲ್ಲ ತೋರುತ್ತವೆ.

## ಪಟ್ಟಿ –೪

## ಸ್ಪರ್ಧೆ ಮತ್ತು ನಾಮಕರಣಗಳ ಮೂಲಕ ಐ.ಸಿ.ಎಸ್.

| | ಕೋಮು | ಸ್ಪರ್ಧೆಯ ಮೂಲಕ | ನಾಮಕರಣದ ಮೂಲಕ | ಒಟ್ಟು |
|---|---|---|---|---|
| ೧. | ಯೂರೋಪಿಯನ್ನರು | ೩೩೬ | ೧೫೨ | ೪೮೮ |
| ೨. | ಹಿಂದೂಗಳು | ೩೩೨ | ೩೧ | ೩೬೩ |
| ೩. | ಮುಸ್ಲಿಮರು | ೩೫ | ೭೪ | ೧೦೯ |
| ೪. | ಭಾರತೀಯ ಕ್ರಿಶ್ಚಿಯನ್ನರು | ೧೯ | ೪ | ೨೩ |
| ೫. | ಆಂಗ್ಲೋ ಇಂಡಿಯನ್ನರು | ೮ | ೧ | ೯ |
| ೬. | ಪಾರ್ಸಿಗಳು | ೮ | ೧ | ೯ |
| ೭. | ಸಿಖ್ಖರು | ೫ | ೬ | ೧೧ |
| ೮. | ಪರಿಶಿಷ್ಟ ಜಾತಿಗಳು | .... | ೧ | ೧ |
| ೯. | ಇತರರು | ೨೮ | ೧೫ | ೪೩ |
| | **ಒಟ್ಟು** | **೭೭೧** | **೨೮೫** | **೧,೦೫೬** |

೨೩. ಪರಿಶಿಷ್ಟ ಜಾತಿಗಳ ಪರಿಸ್ಥಿತಿ ಶೋಚನೀಯ ಮಾತ್ರವಲ್ಲ, ಅಸಹನೀಯವೂ ಆಗಿದೆ. ಇದು, ಸಾರ್ವಜನಿಕ ಸೇವೆಗಳಲ್ಲಿ ಹೊಸದಾಗಿ ನೌಕರಿಗೆ ಸೇರುವ ಪರಿಶಿಷ್ಟ ಜಾತಿಗಳ ನಿರ್ದಿಷ್ಟ ಪ್ರಮಾಣ ಇತರ ಅಲ್ಪಸಂಖ್ಯಾತ ಕೋಮುಗಳಲ್ಲಿರುವಂತೆ ನಿಯಮಾವಳಿಗೆ ಒಳಪಡದೆ ನೇಮಕಾಧಿಕಾರವನ್ನು ಉಳ್ಳವರ ವಿವೇಚನೆಗೆ ಬಿಟ್ಟಿರುವ ಭಾರತ ಸರ್ಕಾರದ ಸದ್ಯದ ಕಾರ್ಯನೀತಿಯ ಫಲವಾಗಿದೆ. ನೇಮಕಾಧಿಕಾರವನ್ನು ಹೊಂದಿರುವವರು ಬಹುಮಟ್ಟಿಗೆ ಮೇಲ್ವರ್ಗದ ಹಿಂದೂಗಳು ಮತ್ತು ಈ ವಿವೇಚನೆಯ ಲಾಭವನ್ನು ಪರಿಶಿಷ್ಟ ಜಾತಿಗಳಿಗೆ ಅವರು ನೀಡುತ್ತಾರೆಂದು ನಿರೀಕ್ಷಿಸುವುದು ಅಸಾಧ್ಯ. ಸದ್ಯದ ವ್ಯವಸ್ಥೆ ಇರುವವರೆಗೆ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ಕಡೆಗಣಿಸುವುದನ್ನು ಮುಂದುವರಿಸುವುದು ಮತ್ತು ಇತರ ಕೋಮುಗಳ ಹಿತಾಸಕ್ತಿಗಳ ಸೇವೆಗಾಗಿ ಬಲಿಯಾಗಿಸುವುದು. ಇದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಭಾರತ ಸರ್ಕಾರವು ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು, ಇನ್ನಷ್ಟು ತಡಮಾಡದೆ, ಉತ್ತಮ ಪಡಿಸಬೇಕು ಮತ್ತು –

೧. ಸಾರ್ವಜನಿಕ ಸೇವೆಗಳ ಉದ್ದೇಶಕ್ಕಾಗಿ ಇತರ ಕೋಮುಗಳಂತಯೇ ಅವರನ್ನೂ ಅಲ್ಪಸಂಖ್ಯಾತರೆಂದು ಘೋಷಿಸಬೇಕು.

೨. ಐ.ಸಿ.ಎಸ್.ನಲ್ಲಿ ಪ್ರತಿವರ್ಷ ಖಾಲಿಯಾಗುವ ಸ್ಥಾನಗಳಲ್ಲಿ ಮತ್ತು ಅಖಿಲ ಭಾರತ ವ್ಯಾಪ್ತಿಯ ಕೇಂದ್ರಸೇವೆ ಹಾಗೂ ಸ್ಥಳೀಯ ನೌಕರಿಯ ಅವಕಾಶಗಳಲ್ಲಿ ಶೇಕಡ ೧೩.೫ರಷ್ಟು ಪ್ರಮಾಣವನ್ನು ಪರಿಶಿಷ್ಟ ಜಾತಿಗಳ ಪಾಲು ಎಂಬುದಾಗಿಯೂ ಧರ್ಮಸಮ್ಮತವಾದ ಮತ್ತು ನ್ಯಾಯವಾದ ರೀತಿಯಲ್ಲಿ ಅವರಿಗೆ ಮೀಸಲು ಎಂಬುದಾಗಿಯೂ ನಿಗದಿಗೊಳಿಸಬೇಕು. ಇಷ್ಟನ್ನು ನೆರವೇರಿಸದಿದ್ದರೆ ಪರಿಶಿಷ್ಟ ಜಾತಿಗಳು ಸಾರ್ವಜನಿಕ ಸೇವೆಗಳಲ್ಲಿ ತಮಗೆ ಸಂದಾಯವಾಗಬೇಕಾದ ಪಾಲನ್ನು ಎಂದೂ ಪಡೆಯಲಾರವು.

೨೪. ತೊಂದರೆ ಇರುವುದು ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರೆಂದು ಘೋಷಿಸದೇ ಇರುವುದರಲ್ಲಿ. ಅವರ ಹಾದಿಯಲ್ಲಿರುವ ಈ ಅಡ್ಡಿಯನ್ನು ನಿವಾರಿಸುವುದು ಅಗತ್ಯವಾಗಿದೆ. ೪–೭–೧೯೩೪ರ ಗೊತ್ತುವಳಿಯ ಪ್ರಕಾರ ಒಂದು ಕೋಮು ಅಲ್ಪಸಂಖ್ಯಾತವೆಂದು ಘೋಷಿತವಾದಾಗ ಮಾತ್ರ ಸಾರ್ವಜನಿಕ ಸೇವೆಗಳಲ್ಲಿ ಮೀಸಲಾತಿಯ ಲಾಭವನ್ನು ಪಡೆಯಲು ಅರ್ಹವಾಗುತ್ತದೆ ಎಂಬುದೇ ಇದಕ್ಕೆ ಕಾರಣ. ಮಿಕ್ಕಂತೆ ಯಾವ ಕೋಮು ಸಹ ಅಂತಹ ಲಾಭವನ್ನು ಪಡೆಯಲಾಗದು. ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತ ಕೋಮು ಎಂದು ಘೋಷಿಸುವುದರಲ್ಲಿ ಯಾವ ಆಕ್ಷೇಪಣೆ ಇದ್ದೀತೆಂದು ತಿಳಿಯುವುದು ಕಷ್ಟ. ಅಲ್ಪಸಂಖ್ಯಾತ ಎಂಬುದು ಒಂದು ರಾಜಕೀಯ ಪದ ಮತ್ತು ಅದರ ಕಾನೂನುಬದ್ಧ ಸ್ವರೂಪ ಏನೇ ಇರಲಿ ಅದರ ವಾಸ್ತವ ಸ್ವರೂಪದಲ್ಲಿ ಯಾವ ಸಂದೇಹವೂ ಇರಲಾರದು. ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಕೋಮುವಾರು ನ್ಯಾಯನಿರ್ಣಯದ ವ್ಯಾಪ್ತಿಯಲ್ಲಿ ಬರುವ ಯಾವುದೇ ಕೋಮು ಅಲ್ಪಸಂಖ್ಯಾತ ಎಂದಾಗಬೇಕು ಎಂದು ಇದೇ ನ್ಯಾಯನಿರ್ಣಯದ ಪ್ರಕಾರ ಈ ವಿಷಯವನ್ನು ತೀರ್ಮಾನಿಸಲಾಗಿದೆ. ವಾಸ್ತವವಾಗಿ ಈ ಆಧಾರದ ಮೇಲೆಯೇ ಭಾರತ ಸರ್ಕಾರವು ಮುಸ್ಲಿಮರನ್ನು, ಸಿಖ್ಖರನ್ನು, ಭಾರತೀಯ ಕ್ರಿಶ್ಚಿಯನ್ನರನ್ನು ಹಾಗೂ ಆಂಗ್ಲೋ ಇಂಡಿಯನ್ನರನ್ನು ಅಲ್ಪಸಂಖ್ಯಾತರೆಂದು ಘೋಷಿಸಬಲ್ಲದ್ದಾಗಿದೆ. ಈ ಕೋಮುಗಳು ಅಲ್ಪಸಂಖ್ಯಾತ ಎಂದಾದರೆ – ಅವು ಕೋಮುವಾರು ನ್ಯಾಯನಿರ್ಣಯದ ಪ್ರಕಾರ ಅಲ್ಪಸಂಖ್ಯಾತ ಎಂದಾಗಿವೆ – ತಾವೂ ಅಲ್ಪಸಂಖ್ಯಾತ ಎಂದು ಘೋಷಿತವಾಗಬೇಕು ಎಂಬ ಪರಿಶಿಷ್ಟ ಜಾತಿಗಳ ಹಕ್ಕನ್ನು ನಿರಾಕರಿಸಿದ್ದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಏಕೆಂದರೆ ಅವರೂ ಸಹ ಅದೇ ನ್ಯಾಯನಿರ್ಣಯದ ವ್ಯಾಪ್ತಿಯಲ್ಲೇ ಇದ್ದಾರೆ. ಎರಡನೆಯದಾಗಿ ಸರ್ಕಾರವು ಅವರನ್ನು ಅಲ್ಪಸಂಖ್ಯಾತರೆಂದು ನಿಸ್ಸಂಶಯವಾಗಿ

## ಪಟ್ಟಿ – ೫

## ಐ.ಸಿ.ಎಸ್. ನಲ್ಲಿನ ಪ್ರಮಾಣದೊಂದಿಗೆ ಜನಸಂಖ್ಯಾ ಪ್ರಮಾಣದ ಹೋಲಿಕೆ

| | ಕೋಮು | ಯುರೋಪಿಯನ್ನರನ್ನು ಬಿಟ್ಟು ಐ.ಸಿ.ಎಸ್.ನಲ್ಲಿರುವ ಯಥಾರ್ಥ ಪ್ರಮಾಣ | ಜನಸಂಖ್ಯಾ ಪ್ರಮಾಣ | ಜನಸಂಖ್ಯಾ ಪ್ರಮಾಣದೊಂದಿಗೆ ಹೋಲಿಸಿದಾಗ ಸೇವಾ ಪ್ರಮಾಣದ ಆಧಿಕ್ಯ + ಕೊರತೆ – |
|---|---|---|---|---|
| ೧. | ಹಿಂದೂಗಳು | ೬೩.೨ | ೫೦.೦ | +೧೩.೨ |
| ೨. | ಮುಸ್ಲಿಮರು | ೧೯.೨ | ೨೩.೬ | –೪.೪ |
| ೩. | ಭಾರತೀಯ ಕ್ರಿಶ್ಚಿಯನ್ನರು | ೪.೦ | ೧.೦ | +೩.೦ |
| ೪. | ಆಂಗ್ಲೋ ಇಂಡಿಯನ್ನರು | ೧.೫ | ೦.೦೩ | –೧.೪೭ |
| ೫. | ಪಾರ್ಸಿಗಳು | ೧.೫ | ೦.೦೩ | +೧.೪೭ |
| ೬. | ಸಿಖ್ಖರು | ೨.೦ | ೧.೩ | +೦.೭ |
| ೭. | ಪರಿಶಿಷ್ಟ ಜಾತಿಗಳು | – | ೧೩.೫ | –೧೩.೫ |
| ೮. | ಇತರರು | ೮.೦ | – | +೮.೦ |

ಘೋಷಿಸುವುದಾದಲ್ಲಿ, ಸಾರ್ವಜನಿಕ ಸೇವೆಗಳಲ್ಲಿನ ಅವರ ಪಾಲನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ನಿಷ್ಕೃಷ್ಟವಾಗಿ ತಿಳಿಸಬೇಕಾದ್ದು ಮತ್ತು ಇತರೆ ಕೋಮುಗಳಿಗೆ ಅವರವರ ಪಾಲು ದಕ್ಕುವಂತೆ ಮಾಡಲಾಗಿರುವ ಸಾಧನ ಮತ್ತು ವಿಧಾನಗಳಿಂದಲೇ ಪರಿಶಿಷ್ಟ ಜಾತಿಗಳಿಗೂ ದೊರಕುವಂತೆ ಮಾಡಬೇಕಾದ್ದು ಸರ್ಕಾರದ ಕಾರ್ಯನೀತಿಯ ತೀರ ಸಹಜ ಕರ್ತವ್ಯವಾಗಿರುತ್ತದೆ. ನ್ಯಾಯಸಮ್ಮತವಾಗಿ ಪರಿಶಿಷ್ಟ ಜಾತಿಗಳಿಗಿರುವ ಹಕ್ಕಿನ ನಿರ್ದಿಷ್ಟ ಪ್ರಮಾಣದ ಪಾಲನ್ನು ಯಾರೂ ವಿರೋಧಿಸಲು ಸಾಧ್ಯವಿಲ್ಲ. ಬ್ರಿಟಿಷ್ ಭಾರತದಲ್ಲಿ ಪರಿಶಿಷ್ಟ ಜಾತಿಗಳ ಜನಸಂಖ್ಯೆ ಶೇಕಡ ೧೩.೬ ಎಂದು ಕಾಣಿಸಲಾಗಿದೆ ಮತ್ತು ಸಾರ್ವಜನಿಕ ಸೇವೆಗಳಲ್ಲಿನ ಶೇಕಡ ೧೩.೬ರ ಪಾಲಿಗಿಂತ ಹೆಚ್ಚಿನದೇನನ್ನೂ ಅವರಿಗಾಗಿ ಕೇಳುತ್ತಿಲ್ಲ. ಹಿಂದೂಗಳಿಗೆ ಇದು ಹಾನಿಕಾರಕವಲ್ಲ. ಏಕೆಂದರೆ ಅವರ ಜನಸಂಖ್ಯೆ ಶೇಕಡ ೫೦ ಹಾಗೂ ಅವರಿಗೆ ದೊರಕುತ್ತಿರುವುದು ಶೇಕಡ ೬೩. ಅಂದರೆ ಅವರಿಗೆ ದಕ್ಕಿರುವುದಕ್ಕಿಂತ ಶೇಕಡ ೧೩ರಷ್ಟು ಹೆಚ್ಚು.

೨೫. ಪರಿಶಿಷ್ಟ ಜಾತಿಗಳ ಈ ಹಕ್ಕಿಗೆ ತೀರ ವಿಲಕ್ಷಣ ಹಾಗೂ ಅನಿರೀಕ್ಷಿತವಾದ ದಿಕ್ಕಿನಿಂದ ವಿರೋಧ ಬಂದಿದೆ. ಅದು ಹಿಂದೂಗಳಿಂದ ಬರಬೇಕಿತ್ತು. ಆದರೆ ಅದು ಅಸಾಧ್ಯ. ೧೯೩೨ರಲ್ಲಿ ಪುಣೆಯಲ್ಲಿ ನಡೆದ ಒಪ್ಪಂದದಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಹಿಂದೂಗಳ ಪರಸ್ಪರ ಹಕ್ಕುಗಳೂ ಕರಾರುವಕ್ಕಾಗಿ ಹೇಳಲ್ಪಟ್ಟಿವೆ. ಪರಿಶಿಷ್ಟ ಜಾತಿಗಳು ಅಲ್ಪಸಂಖ್ಯಾತರೆಂದೂ ದೇಶದ ಸಾರ್ವಜನಿಕ ಸೇವೆಗಳಲ್ಲಿ ಯಥೋಚಿತವಾದ ಪಾಲನ್ನು ಪಡೆಯಲು ಅವರಿಗೆ ಹಕ್ಕಿದೆಯೆಂದೂ ಹಿಂದೂಗಳು ಒಪ್ಪಿಗೆ ನೀಡಿದ್ದ ಬಡಂಬಡಿಕೆ ಅದು. 'ಯಥೋಚಿತ' ಎಂಬ ಪದಕ್ಕೆ ಸ್ಪಷ್ಟ ಪರಿಮಾಣದ ಅಭಿವ್ಯಕ್ತಿಯನ್ನು ನಿರ್ದೇಶಿಸಲಿಲ್ಲ ಎಂಬುದು ನಿಜ. ಮೃತ್ಯುವಿನ ಹಸ್ತಗಳಿಂದ ಶ್ರೀ ಗಾಂಧಿಯವರನ್ನು ಕಾಪಾಡಲು ಈ ಒಪ್ಪಂದವನ್ನು ಅವಸರದಲ್ಲಿ ರಚಿಸಲಾಗಿದ್ದೇ ಇದಕ್ಕೆ ಕಾರಣ. ಆದರೆ 'ಯಥೋಚಿತ' ಎನ್ನುವ ಜನಸಂಖ್ಯಾ ಪ್ರಮಾಣಕ್ಕಿಂತ ಕಡಿಮೆಯಿರುವ ಯಾವುದೋ ಒಂದು ಪ್ರಮಾಣ ಎಂದು ಎಂದಿಗೂ ಉದ್ದೇಶಿಸಿರಲಿಲ್ಲ ಎಂಬುದರಲ್ಲಿ ಯಾವ ಸಂದೇಹವೂ ಇರಲಾರದು. ಆದ್ದರಿಂದ ಹಿಂದೂಗಳು ಪರಿಶಿಷ್ಟ ಜಾತಿಗಳ ಹಕ್ಕನ್ನು ವಿರೋಧಿಸಲಾರರು ಮತ್ತು ನಿಜದಲ್ಲಿ ವಿರೋಧಿಸುವುದಿಲ್ಲ. ಪರಿಶಿಷ್ಟ ಜಾತಿಗಳ ಹಕ್ಕನ್ನು ವಿರೋಧಿಸುತ್ತಿರುವ ಕಕ್ಷಿ ಎಂದರೆ ಭಾರತ ಸರ್ಕಾರವೇ ಹೊರತು ಬೇರೆ ಯಾರೂ ಇಲ್ಲ. ೧೯೪೨ರ ಮಾರ್ಚಿಯಲ್ಲಿ ಕೇಂದ್ರ ಶಾಸನಸಭೆಯಲ್ಲಿ ಖೋತಾ ಸೂಚನೆಯೊಂದಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಕುರಿತು ಎಂ.ಎಲ್.ಎ. ರಾವ್ ಬಹದ್ದೂರ್ ಎಸ್. ಶಿವರಾಜ್ ನಡೆಸಿದ ಚರ್ಚೆಯಲ್ಲಿ, ಅಲ್ಪಸಂಖ್ಯಾತರೆಂದು ಘೋಷಿಸಲ್ಪಟ್ಟಿರುವ ಪರಿಶಿಷ್ಟ ಜಾತಿಗಳ ಹಕ್ಕು ಮತ್ತು ಸಾರ್ವಜನಿಕ ಸೇವೆಗಳಲ್ಲಿನ ಅವರ ಪಾಲನ್ನು ಖಚಿತಪಡಿಸಿರುವುದು – ಈ ಎರಡೂ ಸೂಚನೆಯ ವಿಷಯಗಳಾಗಿದ್ದು ಅದನ್ನು ಬೆಂಬಲಿಸಿದವರು ಮುಸ್ಲಿಮರು, ಯುರೋಪಿಯನ್ನರು, ಆಂಗ್ಲೋ ಇಂಡಿಯನ್ನರು ಮತ್ತು ಸಿಖ್ಖರು. ಏಕಾಕಿ ವ್ಯಕ್ತಿಯೊಬ್ಬನನ್ನು ಬಿಟ್ಟರೆ ಹಿಂದೂಗಳೂ ಅದನ್ನು ವಿರೋಧಿಸಲಿಲ್ಲ. ಹಾಗಿದ್ದರೂ ಭಾರತ ಸರ್ಕಾರದ ಪ್ರತಿನಿಧಿಗಳಿಂದ ಅದು ವಿರೋಧಿಸಲ್ಪಟ್ಟಿತು. ಇದು ಕಥೆಯ ಅತ್ಯಂತ ದಾರುಣವಾದ ಭಾಗ. ತಾವುಗಳು ಪರಿಶಿಷ್ಟ ಜಾತಿಗಳ ಕ್ಷೇಮಾಭಿವೃದ್ಧಿಯ ಧರ್ಮದರ್ಶಿಗಳೆಂದು ಭಾರತ ಸರ್ಕಾರದ ಪ್ರತಿನಿಧಿಗಳು ಹೇಳಿದ್ದರು. ಧರ್ಮದರ್ಶಿಗಳಾಗಿ ಅವರು, ಇತರ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಪಾಡುವುದಕ್ಕಿಂತಲೂ ಹೆಚ್ಚಾಗಿ ಪರಿಶಿಷ್ಟ ಜಾತಿಗಳ ಹಕ್ಕುಗಳನ್ನು ಮುಂಜಾಗರೂಕತೆಯಿಂದ ರಕ್ಷಿಸಲು ಸಿದ್ಧವಿರಬೇಕಿತ್ತು. ಸಾರ್ವಜನಿಕ ಸೇವೆಗಳಲ್ಲಿ ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಗಳಿಗೆ ಅವರ ಹಕ್ಕನ್ನು ನೀಡಲು ಹಿಂಜರಿಯುತ್ತಿರುವ ಭಾರತ ಸರ್ಕಾರಕ್ಕೆ, ಹಿಂದೂಗಳಿಂದ ಯಾವುದಾದರೂ ಅಡಚಣೆ ಮಧ್ಯದಲ್ಲಿ ಒದಗಿದ್ದರೆ, ಏನೋ ಒಂದು ನೆಪವಿರುವ ಸಾಧ್ಯತೆಯಿರಬಹುದಿತ್ತು. ಆದರೆ ಅಂತಹ

ನೆಪ ಯಾವುದೂ ಇಲ್ಲ. ಪರಿಶಿಷ್ಟ ಜಾತಿಗಳ ಶತ್ರುಗಳು ಹಿಂದೂಗಳಲ್ಲ ಎಂದೂ ಅವರ ನಿಜವಾದ ಶತ್ರು ಭಾರತ ಸರ್ಕಾರವೇ ಎಂದೂ ಹೇಳಿದರೆ ತಪ್ಪಾಗುತ್ತದೆಯೇ?

೨೬. ಪರಿಶಿಷ್ಟ ಜಾತಿಗಳ ಹಕ್ಕನ್ನು ವಿರೋಧಿಸಲು ಭಾರತ ಸರ್ಕಾರ ಕೊಡುವ ಕಾರಣವೇನು? ಗೌರವಾನ್ವಿತ ರಾವ್ ಬಹದ್ದೂರ್ ಎಸ್. ಶಿವರಾಜ್, ಎಂ.ಎಲ್.ಎ. ಅವರು ಮಂಡಿಸಿದ ಸೂಚನೆಯನ್ನು ಕುರಿತು ಗೌರವಾನ್ವಿತ ಒಳಾಡಳಿತ ಸದಸ್ಯರು ಮಾಡಿದ ಭಾಷಣ ಸೂಚಿಸುವ ಮಟ್ಟಿಗೆ, ಪರಿಶಿಷ್ಟ ಜಾತಿಗಳಲ್ಲಿ ವಿದ್ಯಾವಂತರು ತಕ್ಕಷ್ಟಿಲ್ಲ ಎಂಬುದು ಕಾರಣ. ಇದು ಯಾವ ರೀತಿಯಲ್ಲೂ ಒಪ್ಪುವಂತಹ ಕಾರಣವಲ್ಲ ಎಂದು ಹೇಳಬೇಕಾಗಿದೆ. ಮೊದಲನೆಯದಾಗಿ, ೧೯೩೪ರಲ್ಲಿ ಗೊತ್ತುವಳಿಯ ೩ನೇ ಪ್ಯಾರಾದಲ್ಲಿ ಕೊಟ್ಟ ಹಳೆಯ ಕಾರಣವೇ ಇದು. ಕಳೆದ ಎಂಟು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಇದು ಪರಿಗಣಿಸುವುದಿಲ್ಲ. ಎರಡನೆಯದಾಗಿ, ೧೯೩೪ಕ್ಕೆ ಸಂಬಂಧಿಸಿದಂತೆಯೂ ಈ ಹೇಳಿಕೆ ನಿಜವಾದದ್ದಲ್ಲ. ೧೯೪೨ರ ವಿಚಾರವಾಗಿಯಂತೂ ಅದೊಂದು ಮಹತ್ತರವಾದ ತಪ್ಪು ಹೇಳಿಕೆ. ವಾಸ್ತವವಾಗಿ ಸುಮಾರು ೧೯೩೯–೪೦ರಲ್ಲಿ ಪರಿಶಿಷ್ಟ ಜಾತಿಗಳ ಕಾಲೇಜು ವಿದ್ಯಾರ್ಥಿಗಳ ಗಣತಿಯನ್ನು ಖಾಸಗಿಯಾಗಿ ನಡೆಸಲಾಯಿತು ಮತ್ತು ಈ ಗುಂಪಿನ ಪದವೀಧರರ ಒಟ್ಟು ಸಂಖ್ಯೆ ಸುಮಾರು ೪೦೦–೫೦೦ ಎಂದು ತಿಳಿದು ಬಂದಿತು. ಮೂರನೆಯದಾಗಿ, ಈ ವಿಷಯ ನಿಜವಾಗಿದ್ದರೂ ಸಹ, ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರು ಎಂದು ಘೋಷಿಸುವಲ್ಲಿ ಮತ್ತು ಅವರ ಪ್ರಮಾಣವನ್ನು ನಿಗದಿ ಪಡಿಸುವುದರಲ್ಲಿ ಅದು ತೊಡಕಾಗಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಒಂದು ವರ್ಷದಲ್ಲಿ ಕನಿಷ್ಠ ಅರ್ಹತೆಗಳಿರುವ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಅವರಿಗಾಗಿ ಮೀಸಲಿರುವ ವಾರ್ಷಿಕ ಪ್ರಮಾಣದ ಖಾಲಿಯಿರುವ ಹುದ್ದೆಗಳಿಗಿಂತ ಕಡಿಮೆಯಾದಲ್ಲಿ, ಖಾಲಿ ಉಳಿದ ಈ ಹುದ್ದೆಗಳು ಹಿಂದೂಗಳಿಗೆ ದಕ್ಕುತ್ತವೆಯಾದ್ದರಿಂದ, ಯಾರಿಗೂ ಸಂಕಟವಾಗುವುದಿಲ್ಲ, ಒಳಾಡಳಿತ ಸದಸ್ಯರು ನಿರೀಕ್ಷಿಸಿದ ಈ ಸಮಸ್ಯೆ ಕೇವಲ ಪರಿಶಿಷ್ಟ ಜಾತಿಗಳ ವಿಚಾರದಲ್ಲಿ ಮಾತ್ರ ಹುಟ್ಟುವಂಥದ್ದು ಎಂದು ಹೇಳಲಾಗುವುದಿಲ್ಲ. ಸಮಸ್ಯೆ ಅದೇ ಉದಯಿಸುವ ಪರಿಸ್ಥಿತಿಯಿಂದ ಇತರರನ್ನು ಅಲ್ಪಸಂಖ್ಯಾತರೆಂದು ಘೋಷಿಸುವುದನ್ನು ಮತ್ತು ಅವರ ಪ್ರಮಾಣವನ್ನು ನಿಗದಿಪಡಿಸುವುದನ್ನು ಇದು ತಡೆಯಲಿಲ್ಲ. ಸರ್ಕಾರ ಅವರನ್ನು ಅಲ್ಪಸಂಖ್ಯಾತರೆಂದು ಘೋಷಿಸಿಯೇ ಬಿಟ್ಟಿತು ಮತ್ತು ಅವರ ಪ್ರಮಾಣವನ್ನು ಸಹ ನಿಗದಿಮಾಡಿತು ಮತ್ತು ಯಾವುದೇ ಒಂದು ವರ್ಷದಲ್ಲಿ ಮೀಸಲಿರುವ ಸ್ಥಾನಗಳಿಗಿಂತ ತಕ್ಕ ಅರ್ಹತೆಯಿರುವ ಅಭ್ಯರ್ಥಿಗಳು ಕಡಿಮೆ ಇದ್ದಾಗ, ನಿರ್ಣಯದ ೭(೧) (೩)ನೇ ಪ್ಯಾರಾದಲ್ಲಿರುವಂತೆ ಮಿಕ್ಕ ಖಾಲಿ ಸ್ಥಳಗಳು ಮುಸ್ಲಿಮರಿಗೆ ದೊರಕುವಂತೆ ಸರ್ಕಾರ ಏರ್ಪಾಡನ್ನು ಮಾಡಿತು.

೨೭. ಇತರ ಅಲ್ಪಸಂಖ್ಯಾತರ ವಿಷಯದಲ್ಲಿ ಯಶಸ್ವಿಯಾಗಿ ನಿವಾರಣೆಯಾಗಿದ್ದ ತೊಂದರೆಗಳು ಖಂಡಿತವಾಗಿಯೂ ಪರಿಶಿಷ್ಟ ಜಾತಿಗಳ ದಾರಿಯಲ್ಲಿ ಮಾತ್ರ ಹಾಗೇ ನಿಂತು ಬಿಡಲು ಸಾಧ್ಯವಿಲ್ಲ. ಸರ್ಕಾರ ಹಾಗೆ ಮಾಡಿದರೆ ಪರಿಶಿಷ್ಟ ಜಾತಿಗಳ ನ್ಯಾಯವಾದ ಹಕ್ಕನ್ನು ಅನ್ಯಾಯವಾಗಿ ರದ್ದು ಮಾಡಿದ ಕಳಂಕಕ್ಕೆ ಅದು ಒಳಗಾಗುತ್ತದೆ. ಕಾರಣಗಳಲ್ಲದ ಕೇವಲ ನೆಪಗಳಾಗಿರುವ ಇವುಗಳನ್ನು ಆಧಾರವಾಗಿ ಬಳಸಿಕೊಂಡು ಪರಿಶಿಷ್ಟ ಜಾತಿಗಳ ಹಕ್ಕುಗಳನ್ನು ವಿರೋಧಿಸಿದ ಆಪಾದನೆಯನ್ನು ಸರ್ಕಾರ ಹೊರಬೇಕಾಗುತ್ತದೆ.

೨೮. ಮೇಲೆ ಸೂಚಿಸಿದ ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರೆಂದು ಘೋಷಿಸವುದು ಮತ್ತು ವಾರ್ಷಿಕವಾಗಿ ಖಾಲಿಯಿರುವ ಹುದ್ದೆಗಳಲ್ಲಿ ಅವರ ಪ್ರಮಾಣವನ್ನು ನಿಗದಿಗೊಳಿಸುವುದು ಈ ಎರಡು ಸೂಚಿಸಿದ ಪರಿಹಾರಗಳಲ್ಲದೆ, ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳವರು ತಮ್ಮ ನ್ಯಾಯವಾದ ಪಾಲನ್ನು ಪಡೆಯಲು ಅವರಿಗೆ ಇತರ ಪರಿಹಾರಗಳನ್ನು ಮಂಜೂರು ಮಾಡುವುದೂ ಅಗತ್ಯವಾಗಿದೆ.

ಅವುಗಳು :

೧) ವಯೋಮಿತಿಯ ಹೆಚ್ಚಳ

೨) ಪರೀಕ್ಷಾ ಶುಲ್ಕದಲ್ಲಿ ಕಡಿತ ಮತ್ತು

೩) ಈ ವಿಷಯವಾಗಿ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳಿಗಾಗಿ ಮಾಡಿರುವ ಅವಕಾಶಗಳು ಸಂಬಂಧಪಟ್ಟ ಎಲ್ಲ ಇಲಾಖೆಗಳಲ್ಲೂ ಜಾರಿಗೆ ಬಂದಿವೆಯೇ ಎಂಬುದನ್ನು ಪರಿಶೀಲಿಸಲು ಪರಿಶಿಷ್ಟ ಜಾತಿಯ ಒಬ್ಬ ಅಧಿಕಾರಿಯ ನೇಮಕ.

## (೧) ವಯೋಮಿತಿಯ ಹೆಚ್ಚಳ

೨೯. ಐ.ಸಿ.ಎಸ್. ಮತ್ತು ಕೇಂದ್ರೀಯ ಸೇವೆಗಳ ಸದ್ಯದ ನಿಯಮಗಳ ಪ್ರಕಾರ ಗರಿಷ್ಠ ವಯೋಮಿತಿ ಇಪ್ಪತ್ನಾಲ್ಕು ವರ್ಷಗಳು. ಸಾಮಾನ್ಯವಾಗಿ ಈ ಗರಿಷ್ಠ ವಯೋಮಿತಿ ಪರಿಶಿಷ್ಟ ಜಾತಿಗಳಿಗೆ ಬಲವಾದ ಪೆಟ್ಟನ್ನು ಕೊಡುತ್ತದೆ. ಉನ್ನತ ಮತ್ತು ಶ್ರೀಮಂತ ವರ್ಗದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ತನ್ನನ್ನು ಸಮರ್ಥನನ್ನಾಗಿಸುವ ಆ ಹಂತದ ವಿದ್ಯಾಭ್ಯಾಸವನ್ನು ಈ ವಯೋಮಿತಿಯ ಒಳಗೆ ಮುಗಿಸುವುದು ತನ್ನ ವಿಪರೀತ ಬಡತನದ ಕಾರಣದಿಂದ ಪರಿಶಿಷ್ಟ ಜಾತಿಯ ಯುವಕನಿಗೆ ಸಾಧ್ಯವಾಗುವುದಿಲ್ಲ. ತಮ್ಮ ಶೈಕ್ಷಣಿಕ ಪುರೋವೃದ್ಧಿಯಲ್ಲಿ ಪರಿಶಿಷ್ಟ ಜಾತಿಯ ಮಕ್ಕಳು ಹಲವು ಅಡೆತಡೆಗಳಿಂದ ಕಷ್ಟಪಡಬೇಕು ಮತ್ತು ಮನೆಪಾಠ ಹೇಳಿಸಿಕೊಳ್ಳುವುದು ಇರಲಿ, ವ್ಯಾಸಂಗಕ್ಕೆ ಸಹ ಅವರ ಮನೆಗಳಲ್ಲಿ ಯಾವ ಅನುಕೂಲಗಳೂ ಇಲ್ಲ. ಉನ್ನತ ಮತ್ತು ಶ್ರೀಮಂತ ವರ್ಗದ ಮಕ್ಕಳಿಗಾದರೋ ಶೀಘ್ರ ಹಾಗೂ ನಿರಂತರ ಪ್ರಗತಿಗೆ ಅಗತ್ಯವಿರುವ ಎಲ್ಲ ಅನುಕೂಲಗಳೂ ಇವೆ. ಪರಿಣಾಮವಾಗಿ ಪರಿಶಿಷ್ಟ ಜಾತಿಯ ಮಕ್ಕಳು ತಮ್ಮ ವಿದ್ಯಾಭ್ಯಾಸದ ಅಂತಿಮ ಹಂತವನ್ನು ತಲಪುವ ಮತ್ತು ಸ್ಪರ್ಧಿಸಲರ್ಹವಾದ ಸ್ಥಿತಿಗೆ ಬರುವ ವೇಳೆಗೆ ವಯಸ್ಸಿನ ಕಾರಣದಿಂದ ಸಾರ್ವಜನಿಕ ಸೇವೆಗಳಲ್ಲಿನ ಉದ್ಯೋಗಾವಕಾಶಗಳಿಗೆ ಅನರ್ಹರಾಗಿ ಬಿಡುತ್ತಾರೆ. ಆದ್ದರಿಂದ ಕಡೆಯ ಪಕ್ಷ ಮೂರು ವರ್ಷಗಳಷ್ಟಾದರೂ ವಯೋಮಿತಿಯನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಈ ಹಕ್ಕೊತ್ತಾಯದಲ್ಲಿ ಅಸಮಂಜಸವಾದದ್ದು ಏನೂ ಇಲ್ಲ ಮತ್ತು ಈ ಕೊಡುಗೆಗೆ ಭಾರತ ಸರ್ಕಾರ ಒಪ್ಪಿದಲ್ಲಿ ಅಸಾಮಾನ್ಯವಾದದ್ದೇನೂ ಅದು ಮಾಡುವುದಿಲ್ಲ. ಸಾರ್ವಜನಿಕ ಸೇವೆಗಳಲ್ಲಿನ ಪ್ರಮಾಣವನ್ನು ಮೀಸಲಾಗಿರಿಸಿರುವ ಹೆಚ್ಚು ಕಡಿಮೆ ಎಲ್ಲ ಪ್ರಾಂತೀಯ ಸರ್ಕಾರಗಳಲ್ಲಿ ಈ ರಿಯಾಯಿತಿಯನ್ನು ನೀಡಲಾಗಿದೆ ಮತ್ತು ಪರಿಶಿಷ್ಟ ಜಾತಿಗಳ ವಯೋಮಿತಿಯನ್ನು ಇತರರಿಗೆ ನಿಶ್ಚಯಿಸಿರುವ ವಯೋಮಿತಿಗಿಂತ ಹೆಚ್ಚು ಎಂದು ನಿರ್ಧರಿಸಲಾಗಿದೆ. ಕೆಲವು ಪ್ರಾಂತಗಳಲ್ಲಿ ಅದು ಮೂರು ವರ್ಷಗಳಷ್ಟು ಇದೆ. ಭಾರತ ಸಕಾರ ಈ ರಿಯಾಯಿತಿಯನ್ನು ನೀಡಲು ಅಂಗೀಕರಿಸಿದಲ್ಲಿ ಈಗಾಗಲೇ ರೂಢಿಯಲ್ಲಿರುವ ಸಂಪ್ರದಾಯವೊಂದನ್ನು ಅನುಸರಿಸಿದಂತಾಗುತ್ತದೆ.

## (೨) ಪರೀಕ್ಷಾ ಶುಲ್ಕದಲ್ಲಿ ಕಡಿತ

೩೦. ಐ.ಪಿ.ಎಸ್. ಪರೀಕ್ಷೆಯ ಶುಲ್ಕ ನೂರು ರೂಪಾಯಿಗಳು ; ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಶಾಸ್ತ್ರದ್ದು ಎಂಬತ್ತೆರಡೂವರೆ ರೂಪಾಯಿಗಳು ಹಾಗೂ ಆಡಳಿತದ ಇತರ ನೌಕರಿಗಳಿಗೆ ಸಂಬಂಧಿಸಿದ (ಸಹಾಯಕ ದರ್ಜೆಯವು) ಪರೀಕ್ಷೆಗಳ ಶುಲ್ಕ ಮೂವತ್ತು ರೂಪಾಯಿಗಳು. ಈ ಶುಲ್ಕಗಳು ಪರಿಶಿಷ್ಟ ಜಾತಿಗಳಿಗೆ ಬಹಳ ಹೆಚ್ಚು. ಪ್ರಮಾಣವಾಗಿ ಮತ್ತು ಯಥಾರ್ಥವಾಗಿ

ಈ ಪರೀಕ್ಷಾ ಶುಲ್ಕಗಳು ತುಂಬ ಕಷ್ಟಕರವಾದ ಅಡ್ಡಿಗಳು. ಅನೇಕ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಇಂಥದೊಂದು ಪರೀಕ್ಷೆಗೆ ಅರ್ಹರಾಗಬೇಕೆಂದು ತಮ್ಮ ಕಾಲ ಮತ್ತು ಶಕ್ತಿಗಳನ್ನು ವ್ಯಯಿಸಿದ ಮೇಲೆ ಪರೀಕ್ಷೆಗೆ ಕುಳಿತುಕೊಳ್ಳುವುದೇ ಕಷ್ಟ. ಏಕೆಂದರೆ ಪರೀಕ್ಷಾ ಶುಲ್ಕ ಅವರ ಹೆತ್ತವರ ಆದಾಯಕ್ಕೆ ಎಟುಕುವಂಥದ್ದಲ್ಲ. ಈ ಅಡ್ಡಿಯನ್ನು ನಿವಾರಿಸಬೇಕಾಗಿದೆ. ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ಈ ಪರೀಕ್ಷೆಗಳಿಗೆ ನಿಗದಿ ಪಡಿಸಿರುವುದರಲ್ಲಿ ನಾಲ್ಕನೆಯ ಒಂದು ಭಾಗಕ್ಕಿಂತ ಹೆಚ್ಚು ಶುಲ್ಕವನ್ನು ತೆರಬೇಕಿಲ್ಲ ಎಂಬ ರಿಯಾಯಿತಿಗೆ ಒತ್ತಾಯಿಸಲಾಗಿದೆ.

### (೩) ಪರಿಶಿಷ್ಟ ಜಾತಿಯ ಅಧಿಕಾರಿ

೩೧. ಅವಕಾಶ ದೊರೆತರೆ ಈ ಎರಡು ರಿಯಾಯಿತಿಗಳಿಂದಲೂ ಪರಿಶಿಷ್ಟ ಜಾತಿಗಳ ಸಮುದಾಯವು ತನ್ನ ಪ್ರತಿಸ್ಪರ್ಧಿಗಳೊಡನೆ ಹೆಚ್ಚು ಸಮಾನವಾದ ಷರತ್ತುಗಳ ಮೂಲಕ ಸ್ಪರ್ಧಿಸಲು ತುಂಬ ಸಹಾಯವಾಗುತ್ತದೆ. ಆದರೆ ಈ ಕ್ರಮಗಳಿಂದ ದೊರಕುವ ಸಹಾಯವಷ್ಟೇ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ. ಭಾರತ ಸರ್ಕಾರದ ಗೃಹ ಇಲಾಖೆ ಅಥವಾ ಕಾರ್ಮಿಕ ಇಲಾಖೆಯಲ್ಲಿ ಒಬ್ಬ ಪರಿಶಿಷ್ಟ ಜಾತಿಯ ಅಧಿಕಾರಿಯನ್ನು ನೇಮಿಸಿ, ಸಾರ್ವಜನಿಕ ಸೇವೆಗಳಲ್ಲಿ ಈ ಸಮುದಾಯದ ಪ್ರವೇಶವನ್ನು ಕುರಿತಂತೆ ಅವರ ಹಕ್ಕುಗಳಿಗೆ ನ್ಯಾಯ ದೊರಕಿದೆಯೇ ಎಂಬುದನ್ನು ಪರಿಶೀಲಿಸುವಂತೆ ಮಾಡಬೇಕು. ಸಾರ್ವಜನಿಕ ಸೇವೆಗಳಲ್ಲಿ ಕೋಮುವಾರು ಪ್ರಾತಿನಿಧ್ಯದ ವಿಷಯವಾಗಿ ಸರ್ಕಾರ ರಚಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಹಿಂದೊಮ್ಮೆ ಅಂಥ ಅಧಿಕಾರಿಗಳು ಭಾರತ ಸರ್ಕಾರದಿಂದ ನೇಮಕಗೊಂಡಿದ್ದರು ಎಂದು ತಿಳಿದುಬಂದಿದೆ. ಆದರೆ, ವಿಷಯ ಹಾಗಿಲ್ಲದಿದ್ದರೂ ಪರಿಶಿಷ್ಟ ಜಾತಿಗಳ ಸೇವಾಹಕ್ಕುಗಳನ್ನು ರಕ್ಷಿಸಲು ಪರಿಶಿಷ್ಟ ಜಾತಿಯ ಅಧಿಕಾರಿಯನ್ನು ನೇಮಿಸುವ ಅಗತ್ಯ ಮತ್ತು ತುರ್ತುಗಳು ಪ್ರಶ್ನಾತೀತವಾಗಿವೆ. ಈ ಬಗೆಯ ಪರಿಸ್ಥಿತಿಗಳನ್ನು ನಿಭಾಯಿಸಲೆಂದೇ ಒಬ್ಬ ಅಧಿಕಾರಿಯನ್ನು ನಿಯೋಜಿಸದಿದ್ದರೆ ಪರಿಶಿಷ್ಟ ಜಾತಿಗಳಿಗೆ ವಿರೋಧಿಯಾಗಿರುವ ಪೂರ್ವಗ್ರಹಗಳ ಫಲವಾಗಿ ಇಂತಹ ನಿಯಮಗಳೂ ನಿಷ್ಪ್ರಯೋಜಕವಾಗಿಬಿಡುವ ಮಹತ್ತರವಾದ ಅಪಾಯವಿದೆ. ಏಕೈಕ ಪರಿಹಾರ ಎಂದರೆ ನಿಯಮಗಳು ಪಾಲನೆಯಾಗುವಂತೆ ಪರಿಶೀಲನೆ ಮಾಡಲು ಸ್ವತಂತ್ರ ಅಧಿಕಾರಿಯೊಬ್ಬನನ್ನು ಈ ಕೆಲಸಕ್ಕೆ ನಿಯೋಜಿಸುವುದು.

## ೪. ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪ್ರಾತಿನಿಧ್ಯ ಇಲ್ಲದಿರುವುದು

೩೨. ಸಂಯುಕ್ತ ಲೋಕಸೇವಾ ಆಯೋಗವು ಸದ್ಯದಲ್ಲಿ ನಾಲ್ಕು ಜನ ಸದಸ್ಯರನ್ನು ಹೊಂದಿದೆ. ಇವರುಗಳಲ್ಲಿ ಇಬ್ಬರು ಯುರೋಪಿಯನ್ನರು, ಒಬ್ಬರು ಹಿಂದೂ, ಇನ್ನೊಬ್ಬರು ಮುಸ್ಲಿಮರು. ಸಂಯುಕ್ತ ಲೋಕಸೇವಾ ಆಯೋಗದ ರಚನೆಯನ್ನು ರೂಪಿಸುವಾಗ ಪರಿಶಿಷ್ಟ ಜಾತಿಗಳನ್ನು ಬಿಟ್ಟುಬಿಡಲಾಗಿದೆ. ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಅವರುಗಳಿಗೆ ಪ್ರಾತಿನಿಧ್ಯವನ್ನು ಏಕೆ ನಿರಾಕರಿಸಬೇಕು ಎಂಬುದಕ್ಕೆ ಆಧಾರವಿಲ್ಲ. ಭಾರತದ ಜನರಲ್ಲಿ ಮೂರು ಮುಖ್ಯ ಪಂಗಡಗಳಿವೆ. ಇವುಗಳಲ್ಲಿ ಪರಿಶಿಷ್ಟ ಜಾತಿಗಳದು ಮೂರನೆಯ ಮುಖ್ಯ ಪಂಗಡ. ಈ ಪಂಗಡದ ಜನಸಂಖ್ಯೆ ಕೋಟಿಗಳಲ್ಲಿ ಗಣನೆಯಾಗುತ್ತದೆ. ನೌಕರಿಯ ಪ್ರಶ್ನೆಯಲ್ಲಿ ಇನ್ನೆರಡು ಮುಖ್ಯ ಜನಸಂಖ್ಯಾ ಪಂಗಡಗಳ ಹಿತಾಸಕ್ತಿಗಳಷ್ಟೇ ಇವರ ಹಿತಾಸಕ್ತಿಗಳೂ ಮುಖ್ಯ. ಇವರುಗಳ ಹಿತಾಸಕ್ತಿಗಳಿಗೆ ಇರುವ ಅಪಾಯ ಇತರ ಎರಡು ಪಂಗಡಗಳ ಹಿತಾಸಕ್ತಿಗಳಿಗೆ ಇರುವ ಅಪಾಯಕ್ಕಿಂತ ಕಡಿಮೆಯದಲ್ಲ. ಆ ಅಪಾಯವನ್ನು ನಿವಾರಿಸಿಕೊಳ್ಳುವ ಅಗತ್ಯ ಪರಿಶಿಷ್ಟ ಜಾತಿಗಳ ವಿಚಾರದಲ್ಲಿ

ಇನ್ನೆರಡು ಪಂಗಡಗಳ ವಿಚಾರದಲ್ಲಿ ಇರುವುದಕ್ಕಿಂತಲೂ ಹೆಚ್ಚು. ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ ಕೊಡಲು ನಿರಾಕರಿಸುವುದನ್ನು ಸಮರ್ಥನೆ ಮಾಡುವುದು, ಯಾವುದೇ ಪರೀಕ್ಷೆಯಿಂದ ತೀರ್ಮಾನಿಸಿದರೂ ಕಷ್ಟ. ಸಂಯುಕ್ತ ಲೋಕಸೇವಾ ಆಯೋಗಕ್ಕೆ ಖಂಡಿತವಾಗಿಯೂ ಕೋಮು ಲಕ್ಷಣವನ್ನು ನೀಡಲಾಗಿದೆ. ಹೀಗೆ ಮಾಡಲು ಕೇವಲ ಎರಡು ಸಂಭಾವ್ಯ ಕಾರಣಗಳು ಇರಲು ಸಾಧ್ಯ. ಮೊದಲನೆಯದಾಗಿ ಆಯೋಗದಲ್ಲಿ ದೊಡ್ಡ ಪಂಗಡಗಳ ಜನರ ಪ್ರತಿನಿಧಿಗಳನ್ನು ಹೊಂದಿರುವುದು ಅಪೇಕ್ಷಣೀಯವಾದ್ದಾಗಿರಬಹುದು. ಆಯೋಗದ ಕೋಮುರಚನೆಗೆ ಯಾರಾದರೂ ಅರ್ಥೈಸಿಕೊಳ್ಳಬಹುದಾದ ಎರಡನೆಯ ಕಾರಣ ಎಂದರೆ ಒಂದು ಕೋಮಿನ ಪೂರ್ವಗ್ರಹವನ್ನು ಎದ್ದುಕಾಣುವಂತೆ ಮಾಡುವುದು. ಯಾವ ರೀತಿಯಿಂದ ಇದನ್ನು ವೀಕ್ಷಿಸಿದರೂ ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯವನ್ನು ಕೊಡದೇ ಇರುವುದು ಕೇವಲ ಅನ್ಯಾಯ. ಎಲ್ಲ ಹೂರಣವನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಳ್ಳಲು ತಮ್ಮ ನಡುವಿನ ಎಲ್ಲ ಜಗಳಗಳೊಂದಿಗೂ ಬಹು ಸುಲಭವಾಗಿ ಒಂದಾಗುವ ಮತ್ತು ಪರಿಶಿಷ್ಟ ಜಾತಿಗಳನ್ನು ಅವರಿಗೆ ಹಕ್ಕಿರುವ ಪಾಲಿನಿಂದ ಹೊರಗಿರಿಸುವ ಹಿಂದೂಗಳ ಮತ್ತು ಮುಸ್ಲಿಮರ ದೃಷ್ಟಿಕೋನಗಳಿಂದ ಕಲುಷಿತಗೊಂಡ ಲೋಕಸೇವಾ ಆಯೋಗವೊಂದರಲ್ಲಿ ಪರಿಶಿಷ್ಟ ಜಾತಿಗಳಿಗೆ ಏನಾದರೂ ನಂಬಿಕೆ ಇರುವುದು ಅಸಾಧ್ಯ. ಈವರೆಗೆ ಆಯೋಗದಿಂದ ಪರಿಶಿಷ್ಟ ಜಾತಿಯ ಒಬ್ಬನೇ ಒಬ್ಬ ಅಭ್ಯರ್ಥಿಯನ್ನೂ ಅರ್ಹನೆಂದು ದೃಢೀಕರಿಸಲ್ಪಟ್ಟಿಲ್ಲ ಎಂಬುದು ಸತ್ಯಸಂಗತಿಯಾದರೂ ಆಯೋಗವು ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡಿದೆ ಎಂದು ಸಾಬೀತು ಮಾಡುವುದು ಕಷ್ಟ. ಏಕೆಂದರೆ ಯಾವ ಆಯೋಗದ ಮೇಲೂ ಪಕ್ಷಪಾತದ ತಪ್ಪನ್ನು ಹೊರಿಸಲಾಗದು. 'ಅನರ್ಹ' ಎಂಬ ಅತ್ಯಂತ ಜಾರಿಕೆಯ ಸ್ವಭಾವದ ಪದಕ್ಕೆ ಅಡಿಯಲ್ಲಿ ಆಶ್ರಯ ಪಡೆಯಲು ಪ್ರತಿ ಆಯೋಗಕ್ಕೂ ಮುಕ್ತ ಅವಕಾಶವಿದೆ. ಈ ಪದದ ಸಮಜಾಯಿಷಿ ಕೊಡುವುದು ಇರಲಿ, ಬಹುಸಂಖ್ಯೆಯ ತಪ್ಪುಗಳನ್ನು ಮುಚ್ಚಿಹಾಕುವ ಉದ್ದೇಶವನ್ನು ಈ ವ್ಯವಸ್ಥೆ ಇರಿಸಿಕೊಂಡಿದೆ. ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪರಿಶಿಷ್ಟ ಜಾತಿಗಳು ತಮ್ಮ ಹಕ್ಕಿನ ಪ್ರಾತಿನಿಧ್ಯವನ್ನು ಪಡೆಯಬೇಕು ಎಂಬುದು ನ್ಯಾಯ.

♦

## ಉಪವಿಭಾಗ – ೨

## ಶೈಕ್ಷಣಿಕ ಕುಂದುಕೊರತೆಗಳು

**(೫) ಉನ್ನತ ಶಿಕ್ಷಣದಲ್ಲಿ ಸಹಾಯದ ಕೊರತೆ**

೩೩. ಪರಿಶಿಷ್ಟ ಜಾತಿಯ ಯುವಕರು ಪಡೆಯುತ್ತಿರುವ ಉನ್ನತ ಶಿಕ್ಷಣದ ಬೆಳವಣಿಗೆಯನ್ನು ಅವಲೋಕಿಸಿದಾಗ ಮುಂದಿನ ತರ್ಕಬದ್ಧ ನಿರ್ಣಯಗಳನ್ನು ಊಹಿಸಬಹುದು.

೧. ಕಲೆ ಮತ್ತು ಕಾನೂನುಗಳಿಗೆ ಸಂಬಂಧಿಸಿದ ಶಿಕ್ಷಣ ತೃಪ್ತಿಕರವಾಗಿ ಮುಂದುವರಿಯುತ್ತಿದೆ.

೨. ವಿಜ್ಞಾನ ಮತ್ತು ಇಂಜನಿಯರಿಂಗ್ ಕ್ಷೇತ್ರಗಳ ಶಿಕ್ಷಣದಲ್ಲಿ ಯಾವ ಪ್ರಗತಿಯನ್ನೂ ಸಾಧಿಸಲಾಗಿಲ್ಲ.

೩. ವಿದೇಶೀ ವಿಶ್ವವಿದ್ಯಾನಿಲಯಗಳಲ್ಲಿನ ಉನ್ನತ ಶಿಕ್ಷಣವಂತೂ ಬಹುದೂರದ ಸಂಗತಿ.

೩೪. ಈ ದುಃಖಕರ ಪರಿಸ್ಥಿತಿಯನ್ನು ಸಮಂಜಸ ರೀತಿಯಲ್ಲಿ ಗ್ರಹಿಸಬೇಕಾಗಿದೆ. ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರವೇಶದ ಪ್ರಶ್ನೆಯನ್ನು ಚರ್ಚಿಸುವಾಗ ಹೇಳಿದಂತೆ ಪರಿಶಿಷ್ಟ ಜಾತಿಗಳ ಕ್ಷೇಮ, ಸಹಾನುಭೂತಿಯಿರುವ ಸಾರ್ವಜನಿಕ ಸೇವಾ ಆಯೋಗದ ಮೇಲೆ ಸಂಪೂರ್ಣವಾಗಿ ಅವಲಂಬಿಸಿದೆ ಮತ್ತು ಈ ಸಾರ್ವಜನಿಕ ಸೇವಾ ಆಯೋಗಕ್ಕೆ ಸಹಾನುಭೂತಿ ಇರಬೇಕಾದರೆ ಅದು ದೇಶದ ರಾಷ್ಟ್ರೀಯ ಜೀವನದ ಬೇರೆ ಬೇರೆ ಜನರ ಮತ್ತು ಮುಖ್ಯವಾಗಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಯಾಗಿರಬೇಕು. ಅಧಿಕಾರ ವಹಿಸಲು ಅನುಮತಿ ದೊರಕುವ ನೌಕರಿಗಳ ಸಂಖ್ಯೆ ಎಷ್ಟೇ ಹೆಚ್ಚಿನದಾಗಿರಲಿ, ಅದು ಗುಮಾಸ್ತಿಕೆಯ ನೌಕರಿಗಳಿಗೆ ಮಾತ್ರ ಸೀಮಿತಗೊಂಡಿದ್ದರೆ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದ ಪರಿಣಾಮ ಏನೇನೂ ಇರದು ಎಂಬುದನ್ನೂ ಇಲ್ಲಿ ಸೇರಿಸಬೇಕು, ವಿದ್ಯಾವಂತ ಯುವಕರಿಗೆ ಜೀವನೋಪಾಯವನ್ನು ಒದಗಿಸುವ ದೃಷ್ಟಿಕೋನದಿಂದ ಇದು ಒಳ್ಳೆಯದಿರಬಹುದು. ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಕುರಿತಂತೆ ಅದು ಪರಿಣಾಮಕಾರಿಯಾಗುವುದು ಅಸಾಧ್ಯ. ಗುಮಾಸ್ತಿಕೆಯ ನೌಕರಿಗಳಿಗಿಂತ ಭಿನ್ನವಾದ ಕಾರ್ಯನಿರ್ವಾಹಕ ಹುದ್ದೆಗಳು, ಆಯಕಟ್ಟಿನ ಹುದ್ದೆಗಳು, ರಾಜ್ಯದ ವ್ಯವಹಾರಗಳಿಗೆ ಒಂದು ಹೊಸ ದಿಕ್ಕನ್ನು ನೀಡಬಲ್ಲ ಹುದ್ದೆಗಳು. ಕಾರ್ಯನಿರ್ವಾಹಕ ಹುದ್ದೆಯನ್ನು ಪಡೆಯಲು ಉನ್ನತ ದರ್ಜೆಯ ಶಿಕ್ಷಣ ಆವಶ್ಯಕವೆಂಬುದು ಸುಸ್ಪಷ್ಟವಾಗಿದೆ. ಅಂತಹ ಹುದ್ದೆಗಳು ಉನ್ನತ ವಿದ್ಯಾಭ್ಯಾಸವನ್ನು ಪಡೆದವರಿಗೆ ಹೊರತು ಇತರರಿಗೆ ಮುಕ್ತವಲ್ಲ.

೩೫. ಕಲೆ ಮತ್ತು ಕಾನೂನು ಕ್ಷೇತ್ರಗಳ ಶಿಕ್ಷಣ ಪರಿಶಿಷ್ಟ ಜಾತಿಗಳ ಪದವೀಧರರಿಗೇ ಆಗಲಿ ಸಾರ್ವಜನಿಕರಿಗೇ ಆಗಲಿ ಹೆಚ್ಚು ಬೆಲೆಯುಳ್ಳದ್ದು ಆಗಲು ಸಾಧ್ಯವಿಲ್ಲ. ಹಿಂದೂಗಳಿಗೆ ಸಹ ಅದು ಬಹು ಹೆಚ್ಚಿನ ಬೆಲೆಯುಳ್ಳದ್ದೇನೂ ಆಗಿಲ್ಲ. ವಿಜ್ಞಾನ ಮತ್ತು ತಂತ್ರಶಾಸ್ತ್ರಗಳಲ್ಲಿನ ಉನ್ನತ ಶಿಕ್ಷಣ ಪರಿಶಿಷ್ಟ ಜಾತಿಗಳಿಗೆ ಸಹಾಯ ಮಾಡುವಂಥದು. ಆದರೆ ಇದು ಪರಿಶಿಷ್ಟ ಜಾತಿಗಳ ಸಂಪಾದನೆಗೆ ಎಟಕುವಂಥದ್ದಲ್ಲ ಎಂಬುದು ಸುವ್ಯಕ್ತವಾಗಿದೆ. ಅವರುಗಳಲ್ಲಿ ಬಹಳಷ್ಟು ಮಂದಿ ತಮ್ಮ ಮಕ್ಕಳನ್ನು ಕಲೆ ಮತ್ತು ಕಾನೂನುಗಳಿಗೆ ಸಂಬಂಧಿಸಿದ ಪಠ್ಯಕ್ರಮಗಳನ್ನು ವ್ಯಾಸಂಗ ಮಾಡಲೆಂದು ಕಳಿಸಲು ಇದೇ ಕಾರಣ. ಸರ್ಕಾರದ ಸಹಾಯವಿಲ್ಲದಿದ್ದರೆ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಉನ್ನತ ಶಿಕ್ಷಣ ಕ್ಷೇತ್ರ ಪರಿಶಿಷ್ಟ ಜಾತಿಗಳಿಗೆ ಎಂದಿಗೂ ಮುಕ್ತಗೊಳ್ಳುವುದಿಲ್ಲ

ಮತ್ತು ಈ ವಿಷಯವಾಗಿ ಅವರುಗಳಿಗೆ ನೆರವು ನೀಡಲು ಕೇಂದ್ರ ಸರ್ಕಾರ ಮುಂದೆ ಬರಬೇಕಾದದ್ದು ಕೇವಲ ನ್ಯಾಯ ಹಾಗೂ ಉಚಿತವಾಗಿದೆ.

೩೬. ಭಾರತ ಸರ್ಕಾರವು ಈ ಮುಂದಿನ ಸೂಚನೆಗಳನ್ನು ಒಪ್ಪಿಕೊಂಡಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ.

೧. ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಅಥವಾ ಇತರ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ತರಬೇತಿ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳನ್ನು ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯುವಂತೆ ಎರಡು ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನ.

೨. ಇಂಗ್ಲೆಂಡು, ಡೊಮಿನಿಯನ್ ರಾಜ್ಯಗಳು, ಯುರೋಪು ಮತ್ತು ಅಮೆರಿಕಾ ಮುಂತಾದ ವಿದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳನ್ನು ಅಭ್ಯಸಿಸುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಗಳಿಗಾಗಿ ವೆಚ್ಚ ಮಾಡಲು ಒಂದು ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನ.

೩೭. ಭಾರತ ಸರ್ಕಾರವು ಈ ಹೊಣೆಯನ್ನು ವಹಿಸಿಕೊಳ್ಳಲು ಯಾವ ಅಡ್ಡಿಯೂ ಇಲ್ಲ. ವಿದ್ಯಾಭ್ಯಾಸವು ಶಾಸನರಚನೆಯ ಉದ್ದೇಶಗಳಲ್ಲಿನ ಕೇಂದ್ರ ವಸ್ತು ಅಲ್ಲ ಎಂಬುದು ನಿಜ. ಆದರೂ ಭಾರತ ಸರ್ಕಾರದ ಅಧಿನಿಯಮದ ಸೆಕ್ಷನ್ ೧೫೦ (೨)ರ ಪ್ರಕಾರ ಕೇಂದ್ರ ಸರ್ಕಾರ ಯಾವುದೇ ಉದ್ದೇಶಕ್ಕಾಗಿ ಅನುದಾನಗಳನ್ನು ನೀಡಬಹುದು ಮತ್ತು ಆ ಸಂಬಂಧದಲ್ಲಿ ಕೇಂದ್ರೀಯ ವಿಧಾನಮಂಡಲವು ಮಾಡಬಹುದಾದ ಕಾನೂನಿನಲ್ಲಿ ಈ ಉದ್ದೇಶವೂ ಒಂದಾಗಿದ್ದರೆ ವಿರೋಧ ಸೂಚಿಸುವುದಿಲ್ಲ. ವಿದ್ಯಾಸಂಸ್ಥೆಗಳಿಗೆ ಸಹಾಯ ಮಾಡಲು ಭಾರತ ಸರ್ಕಾರವು ಈ ಶಕ್ತಿಯನ್ನು ಬಳಸಿಕೊಂಡಿದೆ. ಕೇಂದ್ರಾಡಳಿತಕ್ಕೆ ಹೊರತಾದ ಪ್ರದೇಶಗಳಲ್ಲಿದ್ದು, ಕೇಂದ್ರ ಹುಟ್ಟುವಳಿಗಳಿಂದ ಸಹಾಯಧನವನ್ನು ಸ್ವೀಕರಿಸುವ ವಿದ್ಯಾಸಂಸ್ಥೆಗಳ ಒಂದು ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

| ೧. ವಿದ್ಯಾ ಸಂಸ್ಥೆಗಳು | | ವಾರ್ಷಿಕ ಮೊತ್ತ (ರೂ.ಗಳಲ್ಲಿ) |
|---|---|---|
| ೧. | ಭಾರತೀಯ ಮಹಿಳಾ ವಿಶ್ವವಿದ್ಯಾನಿಲಯ, ಬೊಂಬಾಯಿ | ಈ ವಿದ್ಯಾಸಂಸ್ಥೆಗೆ ೧೯೩೭–೩೮ರಲ್ಲಿ ಮತ್ತು ೧೯೪೧–೪೨ರಲ್ಲಿ ೫೦,೦೦೦/– ರೂಪಾಯಿಗಳ ಪುನರಾವರ್ತನೆಯಾಗದ ಎರಡು ಸಹಾಯಧನಗಳನ್ನು ನೀಡಲಾಯಿತು. |
| ೨. | ವಿಶ್ವಭಾರತಿ, ಶಾಂತಿನಿಕೇತನ | ೨೫,೦೦೦ |
| ೩. | ಅಂತರ ವಿಶ್ವವಿದ್ಯಾನಿಲಯ ಮಂಡಳಿ, ಭಾರತ | ೧,೦೦೦ |
| ೪. | ಆಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್ ವಿದ್ಯಾಭ್ಯಾಸದ ಅಂತರ ಪ್ರಾಂತೀಯ ಮಂಡಳಿ | ೩,೬೦೦ |

| ೨. ವೈಜ್ಞಾನಿಕ ಸಂಘಗಳು | | |
|---|---|---|
| ೧. | ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್, ಕಲ್ಕತ್ತ | ೧೮,೦೦೦/– |
| ೨. | ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ | ೨,೫೦೦/– |
| ೩. | ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್ಸ್‌ಟಿಟ್ಯೂಟ್, ಕಲ್ಕತ್ತ | ೩೭,೦೦೦/– |
| ೪. | ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಆಫ್ ಇಂಡಿಯ, ಕಲ್ಕತ್ತ | ೬,೦೦೦/– |
| ೫. | ವಿಶ್ವೇಶ್ವರಾನಂದ್ ವೇದಿಕ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಸಿಮ್ಲಾ | ೨,೫೦೦/– |
| ೬. | ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು | ೧,೫೦,೦೦೦/– |
| ೭. | ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಪುಣೆ | ೪,೦೦೦/– |
| ೮. | ಬೋಸ್ ರಿಸರ್ಚ್ ಇನ್ಸ್‌ಟಿಟ್ಯೂಟ್, ಕಲ್ಕತ್ತ | ೪೫,೦೦೦/– |
| ೩. | **ಇತರೆ** | |
| ೧. | ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್ | ೨,೦೦೦/– |
| ೨. | ಗರ್ಲ್ ಗೈಡ್ಸ್ ಅಸೋಸಿಯೇಷನ್, ಭಾರತ | ೨,೫೦೦/– |
| | ಒಟ್ಟು ವಾರ್ಷಿಕ ಪುನರಾವರ್ತಕ ಸಹಾಯ ಧನ | ೨,೯೯,೧೦೦/– |

೩೮. ಭಾರತ ಸರ್ಕಾರ ಪ್ರತಿವರ್ಷವೂ ಆಲಿಘರ್‌ನ ಮುಸ್ಲಿಮ್ ವಿಶ್ವವಿದ್ಯಾನಿಲಯಕ್ಕೆ ಕೊಡುವ ಮೂರು ಲಕ್ಷಗಳ ಮತ್ತು ವಾರಣಾಸಿಯ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಕೊಡುವ ಮೂರು ಲಕ್ಷಗಳ ವಾರ್ಷಿಕ ಆರ್ಥಿಕ ಸಹಾಯ ಇದರಲ್ಲಿ ಸೇರಿಲ್ಲ. ಈ ಎರಡು ವಿಶ್ವವಿದ್ಯಾನಿಲಯಗಳಿಗೆ ಕೇಂದ್ರ ಸರ್ಕಾರವು ನೀಡುವ ಆರ್ಥಿಕ ಸಹಾಯದಿಂದ ಭಾರತ ಮತ್ತು ವಿದೇಶಗಳಲ್ಲಿನ ಉನ್ನತ ಶಿಕ್ಷಣದ ವಿಷಯದಲ್ಲಿ ಸಹಾಯಕ್ಕಾಗಿ ಪರಿಶಿಷ್ಟ ಜಾತಿಗಳ ಸಲುವಾಗಿ ಮಾಡಿರುವ ಹಕ್ಕೊತ್ತಾಯ ಹೆಚ್ಚಿನ ಬೆಂಬಲವನ್ನು ಪಡೆಯುತ್ತದೆ. ಈ ವಿಶ್ವವಿದ್ಯಾನಿಲಯಗಳಿಗೆ ನೀಡುವ ಸಹಾಯಧನ ವಾಸ್ತವದಲ್ಲಿ ಹಿಂದೂ ಮತ್ತು ಮುಸ್ಲಿಮ್ ಕೋಮುಗಳಲ್ಲಿನ ಉನ್ನತ ಶಿಕ್ಷಣಕ್ಕೆ ನೆರವು ನೀಡಲೆಂದು ಕೊಡುವ ಸಹಾಯಧನ. ಹೀಗಿರುವಲ್ಲಿ, ಪರಿಶಿಷ್ಟ ಜಾತಿಗಳಿಗೆ ಉನ್ನತ ಶಿಕ್ಷಣಕ್ಕೆ ಉತ್ತೇಜನ ಕೊಡಲು ವಾರ್ಷಿಕವಾಗಿ ಮೂರು ಲಕ್ಷ ರೂಪಾಯಿಗಳ ಅಂಥದೇ ಸಹಾಯಧನ ನೀಡಲು ಕೇಂದ್ರ ಸರ್ಕಾರವು ಆರಂಭಿಸದಿರಲು ಯಾವ ಕಾರಣವೂ ಇಲ್ಲ. ಪರಿಶಿಷ್ಟ ಜಾತಿಗಳ ಅಂತಸ್ತನ್ನು ಏರಿಸುವುದು ತಮ್ಮ ಕರ್ತವ್ಯ ಎಂದು ಪದೇ ಪದೇ ಘೋಷಿಸಿಸುವ ಸರ್ಕಾರಕ್ಕೆ ಹಾಗೆ ಮಾಡಲು ಆಸಕ್ತಿಯಿದ್ದರೆ ಕೇಂದ್ರ ಸರ್ಕಾರದ ಶಿಕ್ಷಣದ ಮುಂಗಡ ಪತ್ರದಲ್ಲಿ ಅಂಥದೇ ಅವಕಾಶವನ್ನು ಅವರಿಗಾಗಿ ಮಾಡಲು ಇನ್ನೂ ಕಾಲ ಮಿಂಚಿಲ್ಲ.

೩೯. ಈ ಕಾರ್ಯಯೋಜನೆಯನ್ನು ಜಾರಿಗೆ ತಂದರೆ ಪರಿಶಿಷ್ಟ ಜಾತಿಗಳ ಪರಿಸ್ಥಿತಿ ಮತ್ತು ಅಂತಸ್ತುಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳುಂಟಾಗುತ್ತವೆ. ಪರಿಶಿಷ್ಟ ಜಾತಿಗಳಿಗೆ ಇದು ಬಹಳ ಅಮೂಲ್ಯವಾದ ಅವಕಾಶ. ಈ ಕಾರ್ಯಯೋಜನೆಯನ್ನು ಸಹಾಯಧನ ವ್ಯವಸ್ಥೆಯ ಬದಲಾಗಿ ಸಾಲ ಯೋಜನೆಯನ್ನಾಗಿಸಲೂ ಅವರು ಸಿದ್ಧರಾಗಿದ್ದಾರೆ. ಈ ವಿದ್ಯಾರ್ಥಿವೇತನವನ್ನು ಪಡೆಯುವ ಪರಿಶಿಷ್ಟ ಜಾತಿಯ ಯುವಕರು ಅವರಿಗೆ ನೌಕರಿ ದೊರೆತಾಗ ಅಥವಾ ಒಂದು ಕಾಲಾವಧಿಯಲ್ಲಿ ಕಡಿಮೆ ಶ್ರೇಣಿಯ ಸಂಬಳ ಪಡೆದು ಸರ್ಕಾರಕ್ಕೆ ಸೇವೆ ಸಲ್ಲಿಸುವ ಅವಕಾಶ ದೊರೆತಾಗ, ತಾವು ಸ್ವೀಕರಿಸಿದ ಮೊತ್ತವನ್ನು ಹಿಂದಿರುಗಿಸಬೇಕಾಗಿ ಬಂದರೂ ಅದರ ಸೌಲಭ್ಯವನ್ನು ಪಡೆಯುವುದರಿಂದ ಸಂತೋಷಗೊಳ್ಳುತ್ತಾರೆ. ಸರ್ಕಾರವು ಈ ಸೂಚನೆಗಳನ್ನು ಸ್ವೀಕರಿಸುವುದರಲ್ಲಿ ಯಾವ ಆಕ್ಷೇಪಣೆಯೂ ಇರಲು ಸಾಧ್ಯವಿಲ್ಲ.

೪೦. ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ನಾನು ಇನ್ನೆರಡು ಸೂಚನೆಗಳನ್ನು ನೀಡುತ್ತೇನೆ. ಮೊದಲನೆಯದು:

(೩) ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಗಣಿಶಾಲೆಗಳಲ್ಲಿ ಅವಕಾಶ ಮಾಡಿಕೊಡುವುದು.

ಧನಬಾದ್‌ನಲ್ಲಿರುವ ಭಾರತೀಯ ಗಣಿಶಾಲೆ ಭಾರತ ಸರ್ಕಾರದ ನಿಯಂತ್ರಣದಲ್ಲಿದೆ. ಈ ಶಾಲೆಯಲ್ಲಿ ಗಣಿ ಇಂಜಿನಿಯರಿಗ್ ಮತ್ತು ಭೂವಿಜ್ಞಾನಗಳಿಗೆ ಸಂಬಂಧಿಸಿದಂತೆ ಉನ್ನತ ದರ್ಜೆಯ ಬೋಧನೆ ಲಭಿಸುತ್ತದೆ. ಈ ಭಾರತೀಯ ಗಣಿಶಾಲೆಯಲ್ಲಿ ದೊರಕುವ ತರಬೇತಿಯಿಂದ, ನಮ್ಮ ದೇಶದ ಕಲ್ಲಿದ್ದಲು ಗಣಿ ಉದ್ಯಮ ಮತ್ತು ಇತರ ಖನಿಜ ಉದ್ಯಮಗಳಲ್ಲಿ ಸೇವೆ ಸಲ್ಲಿಸಲು ಯುವಕರಿಗೆ ಸಿದ್ಧತೆ ಸಿಗುವುದೆಂದು ಎಣಿಸಲಾಗಿದೆ. ಈ ಶಾಲೆಯಲ್ಲಿ ಸದ್ಯದಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ತೊಂಬತ್ತೇಳು. ಇಲ್ಲಿ ಭಾರತದ ಎಲ್ಲೆಡೆಗಳಿಂದ ವಿದ್ಯಾರ್ಥಿಗಳಿಗೆ ಮುಕ್ತ ಪ್ರವೇಶವಿದೆ. ಈ ತೊಂಬತ್ತೇಳು ಜನರಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಒಬ್ಬ ವಿದ್ಯಾರ್ಥಿಯೂ ಇಲ್ಲ ಎಂದು ವಿಚಾರಣೆಯಿಂದ ತಿಳಿದುಬಂದಿದೆ. ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು ಭಾರತೀಯ ಗಣಿಶಾಲೆಯ ಸೌಲಭ್ಯವನ್ನು ಹೊಂದಲು ಸಾಧ್ಯವಾಗುವ ವಿಷಯವನ್ನು ಪರಿಶೀಲಿಸಲು ಭಾರತ ಸರ್ಕಾರವು ಕೆಲವು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕಾದ್ದು ತೀರ ಅಗತ್ಯ. ಈ ಗುರಿಯನ್ನು ಸಾಧ್ಯವಾಗಿಸಿಕೊಳ್ಳಲು ಅಗತ್ಯವಾದವುಗಳು :

(ಅ) ಪ್ರವೇಶ ಪಡೆಯಲು ಅಗತ್ಯವಿರುವ ಕನಿಷ್ಠ ಮಟ್ಟದ ವಿದ್ಯೆಯನ್ನು ಹೊಂದಿರುವ ಪರಿಶಿಷ್ಟ ಜಾತಿಯ ಯುವಕರಿಗಾಗಿ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ಮೀಸಲಿರಿಸುವುದು,

(ಆ) ಶುಲ್ಕ ವಿನಾಯಿತಿಯ ಅನುದಾನ,

(ಇ) ವಿದ್ಯಾರ್ಥಿ ವೇತನದ ಅನುದಾನ,

ಪ್ರವೇಶಾವಕಾಶಗಳ ಒಟ್ಟು ಸಂಖ್ಯೆಯ ಹತ್ತನೇ ಒಂದು ಭಾಗವನ್ನು ಪರಿಶಿಷ್ಟ ಜಾತಿಗಳಿಗೆ ಮೀಸಲಿಡಬೇಕು ಎಂಬ ಹಕ್ಕೊತ್ತಾಯ ಬಹಳ ಹೆಚ್ಚೇನದೇನಲ್ಲ. ಈ ವಿಷಯ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂಥದು. ಆದರೆ ಶುಲ್ಕ ವಿನಾಯಿತಿ ಮತ್ತು ವಿದ್ಯಾರ್ಥಿವೇತನಗಳಿಂದ ರಾಜ್ಯದ ಉತ್ಪತ್ತಿಗೆ ನಷ್ಟವಾಗುವುದರಿಂದ ಇದು ಹಣಕಾಸು ಇಲಾಖೆಗೂ ಸಂಬಂಧಿಸಿದ ಪ್ರಶ್ನೆಯಾಗಿದೆ. ಆದರೆ ಈ ಕ್ರಮಗಳಿಂದ ಉಂಟಾಗುವ ವೆಚ್ಚ ಬಹಳವೇನಿಲ್ಲ. ವಾರ್ಷಿಕ ಶುಲ್ಕದ ಸರಾಸರಿಯನ್ನು ಪರಿಗಣಿಸಿದರೆ ಗಣಿಶಾಲೆಯಲ್ಲಿ ಒಬ್ಬ ವಿದ್ಯಾರ್ಥಿ ತಿಂಗಳಿಗೆ ಸುಮಾರು ಅರುವತ್ತು ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ ಎಂಬುದರಿಂದ ಒಬ್ಬ ವಿದ್ಯಾರ್ಥಿಯ ತಿಂಗಳ ಖರ್ಚು ಅರುವತ್ತು ರೂಪಾಯಿಗಳು ಎಂದು ಅರ್ಥವಾಗುತ್ತದೆ.

೪೧. ನಾನು ನೀಡಬಯಸುವ ಇನ್ನೊಂದು ಸೂಚನೆ :

(೪) ಕೇಂದ್ರೀಯ ಶಿಕ್ಷಣ ಸಲಹಾ ಸಮಿತಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಾತಿನಿಧ್ಯ ಕೊಡುವುದು.

೪೨. ಸಮಿತಿಯ ರಚನೆಯಲ್ಲಿ ಇರಬೇಕಾದವರು ಎಂದರೆ :

(೧) ಶಿಕ್ಷಣ, ಆರೋಗ್ಯ ಮತ್ತು ಭೂ ಇಲಾಖೆಗಳ ಅಧಿಕಾರಿಗಳಾಗಿರುವ ಗೌರವಾನ್ವಿತ ಸದಸ್ಯರು (ಅಧ್ಯಕ್ಷರು)

(೨) ಭಾರತ ಸರ್ಕಾರದ ಶಿಕ್ಷಣ ಆಯುಕ್ತರು

(೩) ಭಾರತ ಸರ್ಕಾರದಿಂದ ಹತ್ತು ಜನ ನಾಮಕರಣಗೊಂಡವರು, ಇವರುಗಳಲ್ಲಿ ಒಬ್ಬರಾದರೂ ಮಹಿಳೆ ಇರಬೇಕು.

(೪) ರಾಜ್ಯಸಭೆಯಿಂದ ಚುನಾಯಿತನಾದ ಒಬ್ಬ ರಾಜ್ಯಸಭೆಯ ಸದಸ್ಯ

(೫) ವಿಧಾನಸಭೆಯಿಂದ ಚುನಾಯಿತರಾದ ಇಬ್ಬರು ವಿಧಾನಸಭೆಯ ಸದಸ್ಯರು

(೬) ಭಾರತದ ಅಂತರ ವಿಶ್ವವಿದ್ಯಾನಿಲಯದ ಸಮಿತಿಯಿಂದ ನಾಮಕರಣಗೊಂಡ ಮೂವರು ಭಾರತದ ಅಂತರ ವಿಶ್ವವಿದ್ಯಾನಿಲಯದ ಸಮಿತಿಯ ಸದಸ್ಯರು

(೭) ಶಿಕ್ಷಣ ಇಲಾಖೆಯ ಮಂತ್ರಿ (ಅಥವಾ ಉಪಮಂತ್ರಿ) ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ಅಥವಾ ಉಪನಿರ್ದೇಶಕರು) ಅಥವಾ ಈ ವಿಚಾರದಲ್ಲಿ ಪ್ರಾಂತೀಯ ಸರ್ಕಾರ ನಾಮಕರಣ ಮಾಡುವ ಯಾರಾದರೊಬ್ಬ ವ್ಯಕ್ತಿ ಅಥವಾ ಪ್ರತಿಯೊಂದು ಸ್ಥಳೀಯ ಸರ್ಕಾರದ ಒಬ್ಬ ಪ್ರತಿನಿಧಿ

೪೩. ಸಮಿತಿಯ ಕಾರ್ಯಗಳು ಯಾವುವೆಂದರೆ :

(ಅ) ಭಾರತ ಸರ್ಕಾರ ಅಥವಾ ಸ್ಥಳೀಯ ಸರ್ಕಾರ ಕೊಡಬಹುದಾದ, ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ಕುರಿತು ಸಲಹೆ ಕೊಡುವುದು.

(ಆ) ಭಾರತಕ್ಕೆ ಮಹತ್ವದ್ದಾಗಿರುವ ವಿಶೇಷ ಆಸಕ್ತಿಯ ಶೈಕ್ಷಣಿಕ ಬೆಳವಣಿಗೆಯನ್ನು ಕುರಿತಂತೆ ಮಾಹಿತಿ ಮತ್ತು ಸಲಹೆಗಳನ್ನು ಆಹ್ವಾನಿಸುವುದು; ಈ ಮಾಹಿತಿಯನ್ನು ಪರೀಕ್ಷಿಸುವುದು ಮತ್ತು ಆ ವಿಷಯಕವಾದ ಸುತ್ತೋಲೆಯನ್ನು ಶಿಫಾರಸು ಮಾಡಿ ಭಾರತ ಸರ್ಕಾರ ಹಾಗೂ ಸ್ಥಳೀಯ ಸರ್ಕಾರಗಳಿಗೆ ಕಳಿಸುವುದು.

೪೪. ಸಮಿತಿಯ ಈ ಕಾರ್ಯಗಳಿಂದ, ಅದು ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಸಮಸ್ಯೆಗಳನ್ನು ವಿಶೇಷ ಆಸಕ್ತಿಯಿಂದ ಅಧ್ಯಯನ ಮಾಡಬಲ್ಲುದು ಮತ್ತು ಶಿಫಾರಸುಗಳನ್ನು ರೂಪಿಸಬಹುದು ಮತ್ತು ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಈ ವಿಚಾರವಾಗಿ ಸಲಹೆ ನೀಡಬಹುದು ಎಂಬುದು ಸುಸ್ಪಷ್ಟ. ಪರಿಶಿಷ್ಟ ಜಾತಿಗಳ ಉನ್ನತ ಶಿಕ್ಷಣದ ವ್ಯಾಪ್ತಿಗೆ ಸಂಬಂಧಿಸಿದಂತೆ ಸರ್ಕಾರಗಳ ಹಾಗೂ ವಿಶ್ವವಿದ್ಯಾನಿಲಯಗಳ ಗಮನವನ್ನು ಕೇಂದ್ರ ಬಿಂದುವಿಗೆ ಹರಿಸುವಂಥ ವಿಚಾರ ಅತ್ಯಂತ ಮಹತ್ವದ್ದಾಗಿರಬಲ್ಲುದು.

೪೫. ಅದೇನೇ ಇರಲಿ, ಮೊದಲನೆಯದಾಗಿ ಪರಿಶಿಷ್ಟ ಜಾತಿಗಳಂತಹ ವಿಶೇಷ ವರ್ಗಗಳ ಶೈಕ್ಷಣಿಕ ಸಮಸ್ಯೆಯಲ್ಲಿ ಸಮಿತಿಗೆ ಆಸಕ್ತಿಯನ್ನುಂಟು ಮಾಡುವುದು ಅಗತ್ಯವಾಗಿದೆ. ಪರಿಶಿಷ್ಟ ಜಾತಿಗಳ ಸದಸ್ಯರಿಗೆ ಸಮಿತಿಯಲ್ಲಿ ಪ್ರಾತಿನಿಧ್ಯ ಕೊಡುವುದರ ಮೂಲಕ ಮಾತ್ರ ಇದನ್ನು ಸಾಧಿಸಬಹುದು. ಆದ್ದರಿಂದ ಪರಿಶಿಷ್ಟ ಜಾತಿಗಳ ಇಬ್ಬರು ಪ್ರತಿನಿಧಿಗಳನ್ನು ನಾಮಕರಣದ ಮುಖಾಂತರ ಸಮಿತಿಯ ಸದಸ್ಯರನ್ನಾಗಿಸಬೇಕೆಂದು ಸೂಚಿಸಲಾಗಿದೆ.

**೬. ತಾಂತ್ರಿಕ ಶಿಕ್ಷಣ ಹಾಗೂ ತಾಂತ್ರಿಕ ತರಬೇತಿಗಳಲ್ಲಿ ಸೌಲಭ್ಯಗಳ ಕೊರತೆ**

೪೬. ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಸಾಹಿತ್ಯಕ ಶಿಕ್ಷಣಕ್ಕಿಂತ ತಾಂತ್ರಿಕ ಶಿಕ್ಷಣ ಪರಿಶಿಷ್ಟ ಜಾತಿಗಳಿಗೆ ಹೆಚ್ಚು ಮುಖ್ಯ. ಆದರೆ ತಾಂತ್ರಿಕ ಶಿಕ್ಷಣ ಸಹ ಬಹಳ ದುಬಾರಿ. ಇದರಿಂದ ಪರಿಶಿಷ್ಟ ಜಾತಿಗಳ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಪಡೆಯಲು ಸಾಧ್ಯವಿಲ್ಲವಾಗಿದೆ. ತಾಂತ್ರಿಕ ಶಿಕ್ಷಣವಿಲ್ಲದೆ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಿಲ್ಲ. ಹಿಂದೂಗಳ ಸಾಮಾಜಿಕ ವ್ಯವಸ್ಥೆಯ ಕಾರಣವಾಗಿ, ಭಾರತೀಯ ಸಮಾಜದ ವ್ಯವಹಾರ, ಬದುಕು ಬಾಳುಗಳ ನಿರ್ವಹಣದಲ್ಲಿ ಪರಿಶಿಷ್ಟ ಜಾತಿಗಳವರು ಆರ್ಥಿಕವಾಗಿ ಬಹಳ ಕೆಳಗಿನ ಸ್ಥಾನದಲ್ಲಿದ್ದಾರೆ. ಉಚ್ಛ್ರಾಯ ಕಾಲದಲ್ಲಿ ನೌಕರಿಯ ಅವಕಾಶ ಪರಿಶಿಷ್ಟ ಜಾತಿಯವನಿಗೆ ಕಟ್ಟಕಡೆಯದು ಹಾಗೂ ಕುಸಿತದ ಕಾಲದಲ್ಲಿ ಆತನನ್ನು ಮಾತ್ರ ಮೊದಲಿಗೆ ವಜಾ ಮಾಡಲಾಗುತ್ತದೆ. ಆತನ ವಿರುದ್ಧವಾಗಿ ಕೆಲಸ ಮಾಡುವ ಹಿಂದೂಗಳ ಸಾಮಾಜಿಕ ಪೂರ್ವಗ್ರಹಗಳ ಫಲಿತಾಂಶ ಇದು ಎಂಬುದು ನಿಸ್ಸಂದೇಹ, ಆದರೆ ಆತನ ಹಾದಿಯಲ್ಲಿ ಮುಳ್ಳಾಗಿರುವ ಇನ್ನೊಂದು ಕಷ್ಟವೂ ಇದೆ. ಅದು ಸಾಮಾನ್ಯವಾಗಿ ಆತ ತಾಂತ್ರಿಕ ಜ್ಞಾನವಿಲ್ಲದ, ನಿಪುಣನಲ್ಲದ ಕೂಲಿಕಾರನಾಗಿರುವುದು.

೪೭. ಪರಿಶಿಷ್ಟ ಜಾತಿಯ ಯುವಕನಿಗೆ ಈಗ ಇಲ್ಲದಿರುವ ತಾಂತ್ರಿಕ ನೈಪುಣ್ಯವನ್ನು ಪಡೆದುಕೊಳ್ಳಲು ಆತನಿಗೆ ಸಾಮರ್ಥ್ಯವನ್ನು ನೀಡುವ ಮೂಲಕ ಆತನ ಸ್ಥಿತಿಯನ್ನು ಸುಧಾರಿಸಲು ಭಾರತ ಸರ್ಕಾರವು ಬಹಳಷ್ಟನ್ನು ಮಾಡಬಲ್ಲುದು ಎಂಬುದು ನನ್ನ ಭಾವನೆ. ಅಂಥ ತಾಂತ್ರಿಕ ತರಬೇತಿಯನ್ನು ನೀಡುವ ಸಾಧ್ಯತೆಗಳು ಇರುವ ಭಾರತ ಸರ್ಕಾರದ ಅಥವಾ ಅದರ ನಿಯಂತ್ರಣದಲ್ಲಿರುವ ಉದ್ಯಮಗಲ್ಲಿ ಪರಿಶಿಷ್ಟ ಜಾತಿಗಳ ಯುವಕರಿಗೆ ಅಭ್ಯಾಸಾವಧಿಯ ಒಂದು ವ್ಯವಸ್ಥೆಯನ್ನು ಆಚರಣೆಗೆ ತರುವ ಮೂಲಕ ಇದನ್ನು ಸುಲಭವಾಗಿ ಸಾಧಿಸಬಹುದು.

ಇವುಗಳ ಪೈಕಿ ನಾನು ಕೇವಲ ಎರಡರ ವಿಚಾರವಾಗಿ ಉಲ್ಲೇಖಿಸುತ್ತಿದ್ದೇನೆ :

(೧) ಸರ್ಕಾರದ ಮುದ್ರಣಾಲಯಗಳಲ್ಲಿನ ಅಭ್ಯಾಸಾವಧಿ:

ಅನೇಕ ಮುದ್ರಣಾಲಯಗಳನ್ನು ಭಾರತ ಸರ್ಕಾರವು ನಿರ್ವಹಿಸುತ್ತಲಿದೆ. ಮುದ್ರಣಾಲಯದಲ್ಲಿ ತರಬೇತಿ ಪಡೆದ ವ್ಯಕ್ತಿಗಳಿಗೆ – ಮೊಳೆ ಜೋಡಿಸುವವರು, ಮುದ್ರಕರು, ಪುಸ್ತಕಕ್ಕೆ ರಟ್ಟು ಹಾಕುವವರು ಮೊದಲಾದವರಿಗೆ – ದೊರೆಯುವ ಅನೇಕ ನೈಪುಣ್ಯದ ವೃತ್ತಿಗಳಿವೆ. ಪರಿಶಿಷ್ಟ ಜಾತಿಗಳ ಅರ್ಹರಾದ ಯುವಕರು ಮುದ್ರಣ ಉದ್ಯಮಕ್ಕೆ ಸಂಬಂಧಿಸಿದ ಅನೇಕ ವೃತ್ತಿಗಳನ್ನು ಕಲಿಯಲು ಅನುವಾಗುವಂತೆ ಅವರನ್ನು ಅಭ್ಯಾಸಿಗಳನ್ನಾಗಿಸುವ ಒಂದು ಯೋಜನೆಯನ್ನು ಭಾರತ ಸರ್ಕಾರವು ಏಕೆ ಇರಿಸಿಕೊಳ್ಳಬಾರದು ಎಂಬುದಕ್ಕೆ ಯಾವ ಕಾರಣವೂ ಇಲ್ಲ.

(೨) ರೇಲ್ವೇ ಕಾರ್ಯಾಗಾರಗಳ ಅಭ್ಯಾಸಾವಧಿ:

ಭಾರತದ ರೈಲುಗಳು ಬಹುಮಟ್ಟಿಗೆ ಸರ್ಕಾರದ ಸ್ವಾಮ್ಯದಲ್ಲೇ ಇವೆ. ಈ ಇಲಾಖೆಯಲ್ಲಿ ಫಿಟ್ಟರ್‌ಗಳು, ಬಡಗಿಗಳು ಮತ್ತು ಇತರ ತಂತ್ರಜ್ಞರಿಗೆ ನೌಕರಿಯ ಅವಕಾಶವಿರುವ ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ. ಅಭ್ಯಾಸಿಗಳಿಗೆ ತರಬೇತಿ ನೀಡಿ ತಂತ್ರಜ್ಞರನ್ನಾಗಿಸಿ ತದನಂತರ ಅದೇ ಇಲಾಖೆಯಲ್ಲಿ ನೌಕರಿ ಪಡೆಯುವಂತೆ ಮಾಡುವ ಯೋಜನೆಗಳು ರೇಲ್ವೇ ಇಲಾಖೆಯಲ್ಲಿ ಇವೆಯೇ ಎಂಬುದು ನನಗೆ ತಿಳಿಯದು. ಆದರೆ ಅಂಥದೊಂದು ಯೋಜನೆ ಅಸ್ತಿತ್ವದಲ್ಲಿ ಇಲ್ಲವಾದರೂ ಪರಿಶಿಷ್ಟ ಜಾತಿಗಳ ಹಿತಕ್ಕಾಗಿ ಅದನ್ನು ಪ್ರಾರಂಭಿಸುವುದು ಅಗತ್ಯವಾಗಿದೆ.

೪೮. ಆದ್ದರಿಂದ ಮುದ್ರಣ ಉದ್ಯಮ ಮತ್ತು ರೇಲ್ವೇ ಕಾರ್ಯಾಗಾರಗಳಲ್ಲಿ ಪ್ರತಿವರ್ಷ ಪರಿಶಿಷ್ಟ ಜಾತಿಗಳ ತಕ್ಕಮಟ್ಟಿನ ಸಂಖ್ಯೆಯ ಯುವಕರು ತರಬೇತಿ ಪಡೆಯಲು ಅನುವಾಗುವಂತೆ ಅಭ್ಯಾಸಾವಧಿಯ ಯೋಜನೆಯನ್ನು ಪ್ರಾರಂಭಿಸಬೇಕೆಂದು ನಾನು ಸೂಚಿಸುತ್ತೇನೆ. ಇದರ ಖರ್ಚು ಬಹಳವೇನೂ ಆಗಲಾರದು.

♦

## ಉಪವಿಭಾಗ – ೩

## ಇತರ ಕುಂದುಕೊರತೆಗಳು

**೭. ಪ್ರಚಾರದ ವಿಷಯದಲ್ಲಿ ಅಲಕ್ಷ್ಯ**

೪೯. ಭಾರತದಲ್ಲಿ ಕಾರ್ಯನಿರ್ವಹಣೆ ಮಾಡುವ ಮುಖ್ಯ ಶಕ್ತಿಗಳನ್ನು ಪ್ರತಿನಿಧಿಸುವ ಬೇರೆ ಬೇರೆ ವ್ಯಕ್ತಿ ಮತ್ತು ಪಕ್ಷಗಳ ಮಾತು ಕೃತಿಗಳಿಗೆ ಬಹುವಾಗಿ ಪ್ರಚಾರ ನೀಡುವುದರಲ್ಲಿ ಭಾರತ ಸರ್ಕಾರವು ತೊಡಗುತ್ತದೆ ಎಂಬುದು ಚೆನ್ನಾಗಿ ತಿಳಿದಿರುವ ವಿಷಯ. ಈ ವಿಚಾರದಲ್ಲಿ ಉದಾಹರಣೆಯಾಗಿ, ಭಾರತ ಸರ್ಕಾರದ ಸಾರ್ವಜನಿಕ ಸಮಾಚಾರ ವಿಭಾಗವು ಹೊರತಂದಿರುವ 'ಭಾರತ ಮತ್ತು ಆಕ್ರಮಣಕಾರ'* (೧೯೩೫ – ೪೦ರ ನಡುವಿನ ಅವಧಿಯ ಭಾರತೀಯ ಅಭಿಪ್ರಾಯಗಳ ಧೋರಣೆ) ಎಂಬ ಗ್ರಂಥದ ಆಧಾರವನ್ನು ನೀಡುತ್ತೇನೆ. ಈ ಗ್ರಂಥದ ಹೆಸರು ವಿಪರೀತವಾಗಿ ದಾರಿತಪ್ಪಿಸುತ್ತದೆ. ಆಕ್ರಮಣಕಾರನಿಗೂ ಈ ಗ್ರಂಥಕ್ಕೂ ಯಾವ ಸಂಬಂಧವೂ ಇಲ್ಲ. ದೇಶದ ರಾಜಕೀಯ ಪಕ್ಷಗಳ ಹಾಗೂ ರಾಜಕಾರಣಿಗಳ ಮಾತು ಮತ್ತು ಕೃತಿಗಳ ಸಂಕಲನ ಗ್ರಂಥ ಅದು. ಈ ಸಂಪುಟದಲ್ಲಿ ಭಾರತದ ಬಹುಸಂಖ್ಯಾತರ ಹಾಗೂ ಅಲ್ಪಸಂಖ್ಯಾತರ ಅಭಿಪ್ರಾಯಗಳ ಒಟ್ಟು ಸಾರಾಂಶವನ್ನು ನೀಡಲಾಗಿದೆ.

೫೦. ಈ ಸಂಪುಟದ ಅತ್ಯಂತ ಜುಗುಪ್ಸೆ ಹುಟ್ಟಿಸುವ ವಿಚಾರ ಎಂದರೆ ಇದರಲ್ಲಿ ಪರಿಶಿಷ್ಟ ಜಾತಿಗಳ ಮಾತು ಮತ್ತು ಕೃತಿಗಳನ್ನು ಸಂಪೂರ್ಣವಾಗಿ ಅಲಕ್ಷಿಸಿರುವುದು. ಒಟ್ಟು ೯೪೦ ಪುಟಗಳಲ್ಲಿ ೧೫೮ ಪುಟಗಳು ಕಾಂಗ್ರೆಸ್ಸಿಗೆ ಮೀಸಲಾಗಿವೆ, ೮೫ ಪುಟಗಳನ್ನು ಮುಸ್ಲಿಮರಿಗೆ ನೀಡಲಾಗಿದೆ. ಹಿಂದೂ ಮಹಾಸಭಾ ಹಾಗೂ ಹಿಂದೂ ಲೀಗ್‌ಗಳು ೧೦ ಪುಟಗಳನ್ನು ಪಡೆದುಕೊಂಡಿದ್ದಾರೆ. ಪರಿಶಿಷ್ಟ ಜಾತಿಗಳನ್ನು ಸುಮಾರು ಮೂರು ಪುಟಗಳಲ್ಲಿ ಮುಗಿಸಿ ಕೈತೊಳೆದುಕೊಳ್ಳಲಾಗಿದೆ. ಅಚ್ಚರಿಯ ವಿಷಯವೆಂದರೆ ಪರಿಶಿಷ್ಟ ಜಾತಿಗೆ ಮೀಸಲಾದ ಈ ಮೂರು ಪುಟಗಳಲ್ಲಿ ಅಡಕವಾದ ವಿಚಾರಗಳು ಕೇವಲ ಕ್ಷುದ್ರವಾಗಿವೆ. ಈ ಕಾಲಾವಧಿಯಲ್ಲಿ ಸಂಭವಿಸಿದ ಕೆಲವು ಅತಿಮುಖ್ಯ ಘಟನೆಗಳನ್ನು ಮತ್ತು ಪರಿಶಿಷ್ಟ ಜಾತಿಗಳ ನೇತಾರರು ಮಾಡಿರುವ ಮುಖ್ಯ ಘೋಷಣೆಗಳನ್ನು ಗಮನದಲ್ಲಿ ಇರಿಸಿಕೊಂಡಿಲ್ಲ. ಮತಾಂತರ ಚಳುವಳಿಯಂಥ ಒಂದೇ ಒಂದು ಸಂಗತಿಯನ್ನು ನಾನು ಹೇಳಬಹುದೇನೋ. ಆ ಚಳುವಳಿ ಹಿಂದೂ ಸಮಾಜವನ್ನು ಅದರ ಅಡಿಪಾಯದ ಸಮೇತ ಅಲುಗಾಡಿಸಿತೆಂಬುದು ಇಡೀ ಜಗತ್ತಿನ ಗಮನವನ್ನು ಸೆಳೆಯಿತೆಂಬುದೂ ಪ್ರಶ್ನಾತೀತ. ಈ ಸಂಪುಟದಲ್ಲಿ ಕುರ್ಸಾಂಗ್‌ನ ಸೇಂಟ್ ಮೇರಿ ಕಾಲೇಜು ಪರಿಶಿಷ್ಟ ಜಾತಿಗಳಿಗೋಸ್ಕರ ಪ್ರಚಾರ ನೀಡಲು ಒಮ್ಮೆ ತೊಡಗಿತು ಎಂದು ಹೇಳಿದರೆ ಸಾಕು. ಅಲ್ಲದೆ ಅದರ ಫಲಿತಾಂಶವಾಗಿ ಇದೇ ಅವಧಿಯಲ್ಲಿನ ಸಂಗತಿಗಳನ್ನು ೫೦೭ ಪುಟಗಳ ಸಂಪುಟದಲ್ಲಿ ಪ್ರಕಟಿಸಿತು. ೧೯೩೫–೪೦ರ ಈ ಅವಧಿಯಲ್ಲಿ ಪರಿಶಿಷ್ಟ ಜಾತಿಗಳಿಂದ ಹುಟ್ಟಿ ಬಂದ ಮತ್ತು ಪ್ರಭಾವ ಬೀರಿದ ಶಕ್ತಿಗಳು ಮತ್ತು ಚಳುವಳಿಗಳು ಇಷ್ಟು ದೊಡ್ಡ ವ್ಯಾಪ್ತಿಯವು. ನನ್ನ ಬಗೆಯೇ ಹೇಳಬೇಕೆಂದರೆ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ನಾನು ಅನೇಕ

---

* ಇಂಡಿಯಾ ಅಂಡ್ ದಿ ಅಗ್ರೆಸರ್

ಘೋಷಣೆಗಳನ್ನು ಮಾಡಿದ್ದೇನೆ. ಏನೇ ಇರಲಿ, ಅವುಗಳಲ್ಲಿ ಒಂದಾದರೂ ಈ ಸಂಪುಟದಲ್ಲಿ ಸ್ಥಳ ಪಡೆದಿಲ್ಲ.

೫೧. ಈ ಸಂಪುಟ ಅಧಿಕಾರಿಗಳ ಬಳಕೆಗಾಗಿ ಮಾತ್ರ ಉದ್ದೇಶಿತ ಎಂಬುದು ನಿಜ. ಆದರೆ ಈ ಸಂಕಲನ ಗ್ರಂಥ ಖಂಡಿತಕ್ಕೂ ಹೊಂದಿರಬೇಕಾದ ಮಹತ್ತಾದ ಮೌಲ್ಯವನ್ನು ಈ ವಿಚಾರ ಬದಲಾಯಿಸುವುದಿಲ್ಲ ಎಂದು ನನ್ನ ಅಭಿಪ್ರಾಯ. ರಾಜ್ಯದ ವಿಚಾರಗಳು ಹೊರಳುವ ದಿಕ್ಕನ್ನು ನಿರ್ಧರಿಸುವ ಹೊಣೆ ಬಹಳ ಮಟ್ಟಿಗೆ ಈ ಅಧಿಕಾರಿಯ ಮನಸ್ಸಿನದು ಎಂದು ಹೇಳಬೇಕಾದ ಆವಶ್ಯಕತೆಯೇನೂ ಇಲ್ಲ. ಕೋಮು ಹಿತಾಸಕ್ತಿಗಳು ತೊಡಗಿಕೊಂಡಿರುವ ಸಂಗತಿಗಳಿಗೆ ಆತ ಕೊಡಬೇಕಾದ ಬೆಲೆಯನ್ನು ಅದು ನಿರ್ಧರಿಸುತ್ತದೆ. ಇಂಥದೊಂದು ಸಂಪುಟದಿಂದ ಅಧಿಕಾರಿಯಾದವನು ಪಡೆಯುವ ಸಾಮಗ್ರಿ ಮತ್ತು ಮಾಹಿತಿಗಳ ಅವಲಂಬನೆಯಿಂದ ಆತನ ಧೋರಣೆ, ಮನಸ್ಸುಗಳು ತೀರ್ಮಾನಕ್ಕೆ ಬರುತ್ತವೆ ಎಂಬುದನ್ನು ಸಹ ಮತ್ತೆ ಹೇಳಬೇಕಾಗಿಲ್ಲ. ಜೊತೆಗೆ ಸರ್ಕಾರ ತನ್ನ ಪ್ರಕಟಣೆಯೊಂದರಲ್ಲಿ ಒಂದು ಉದ್ದೇಶಕ್ಕಾಗಿ ನೀಡಿದ ಪ್ರಚಾರದ ಪ್ರಮಾಣದಿಂದ ಸರ್ಕಾರವೇ ಅದಕ್ಕೆ ಮಹತ್ವ ನೀಡಿದೆ ಎಂದೂ ವಿವಿಧ ಕೋಮುಗಳ ಅಗತ್ಯ ಮತ್ತು ಹಕ್ಕುಗಳ ಮೌಲ್ಯನಿರ್ಣಯ ಮಾಡಲು ಆತನಿಗಾಗಿ ದಿಕ್ಕು ತೋರಿದೆ ಎಂದೂ ಆತ ಭಾವಿಸಬಹುದು. ಈ ದೃಷ್ಟಿಕೋನದಿಂದ ನೋಡಿದಾಗ ಕೇಂದ್ರ ಸಚಿವಾಲಯ ಹಾಗೂ ಪ್ರಾಂತೀಯ ಸರ್ಕಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೇ ಅಲ್ಲದೆ ವಿದೇಶಾಂಗ ಕಾರ್ಯದರ್ಶಿಯವರಿಗೂ ಕೂಡ ಭಾರತ ಸರ್ಕಾರವು ಪರಿಶಿಷ್ಟ ಜಾತಿಗಳನ್ನು ಪರಿಗಣಿಸಬೇಕಿಲ್ಲದ, ಕಡೆಗಣಿಸಬಹುದಾದ ಶಕ್ತಿ ಎಂದು ಭಾವಿಸುತ್ತದೆ ಎಂಬ ಅಭಿಪ್ರಾಯವನ್ನು ಈ ಸಂಪುಟ ನೀಡುತ್ತದೆ ಎಂಬುದು ಖಂಡಿತ. ಮುಸ್ಲಿಮರನ್ನು ಕುರಿತಂತೆ ಪ್ರಾಶಸ್ತ್ಯ ನೀಡುವಂಥವೂ ರಚನಾತ್ಮಕವೂ ಆಗಿರುವ ಉಲ್ಲೇಖಗಳಿಂದಲೂ, ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಸಂಬಂಧವೇ ಇಲ್ಲದೆ ನಡುವೆ ಬಂದು ಸೇರಿಕೊಂಡಂತಿರುವ ಉಲ್ಲೇಖಗಳಿಂದಲೂ ಕೂಡಿರುವ, ವಿದೇಶಾಂಗ ಕಾರ್ಯದರ್ಶಿಯವರು ಸಂಸತ್ತಿನಲ್ಲಿ ಮಾಡಿದ ಭಾಷಣದಿಂದ ಈ ಪುಸ್ತಕ ಬೀರಿದ ಪರಿಣಾಮ ಸ್ಪಷ್ಟವಾಗಿದೆ. ಪರಿಶಿಷ್ಟ ಜಾತಿಗಳ ಪ್ರಕರಣದಲ್ಲಿ ಸಮತೋಲನವಿಲ್ಲದ ಇಂತಹ ಪ್ರತಿಪಾದನೆಯ ಕಾರಣದಿಂದ ಹೋರಾಟದ ಅತ್ಯಂತ ವಿಷಮ ಕಾಲದಲ್ಲಿ ಪರಿಶಿಷ್ಟ ಜಾತಿಗಳ ಹಿತಕ್ಕೆ ಹಿನ್ನಡೆ ಬಂದೊದಗಿದಂತೆ ಮಾಡಿದ್ದು ಸರ್ಕಾರ ಈ ಕೋಮಿಗೆ ಬಗೆದ ಘೋರ ಅನ್ಯಾಯ. ತಾನು ಹೊರತಂದಿರುವ ಸಂಪುಟಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಗಳು ಮಾಡಿರುವ ಚಳುವಳಿಗಳಿಗೆ ಹಾಗೂ ಅವರ ನೇತಾರರು ಮಾಡಿರುವ ಘೋಷಣೆಗಳಿಗೆ ಪೂರ್ಣಸ್ಥಾನ ನೀಡುವ ಅನುಬಂಧವೊಂದನ್ನು ತಯಾರಿಸಲು, ಸಾರ್ವಜನಿಕ ಸಂಪರ್ಕ ವಿಭಾಗವನ್ನು ಕೇಳಬೇಕೆಂದು ನಾನು ಒತ್ತಾಯಿಸುತ್ತೇನೆ.

೫೨. ಪಕ್ಷಗಳಿಗೂ ಕೋಮುಗಳಿಗೂ ಪ್ರಚಾರಕಾರ್ಯ ಮಾಡಲು ತಾನು ಬದ್ಧವಾಗಿಲ್ಲ ಎಂದೂ ಪಕ್ಷ ಮತ್ತು ಕೋಮುಗಳು ತಮ್ಮ ತಮ್ಮ ಪ್ರಚಾರಕಾರ್ಯವನ್ನು ತಾವೇ ಕೈಗೊಳ್ಳಬಹುದು ಎಂದೂ ಸರ್ಕಾರ ಹೇಳಬಹುದು ಎಂಬುದೇನೋ ನಿಜ. ಆದರೆ ಇದು ಅಂತಹ ಪ್ರಕರಣ ಅಲ್ಲ. ಭಾರತ ಸರ್ಕಾರ, ನಾನು ತೋರಿಸಿರುವಂತೆ, ಬಹಳವಾಗಿ ತನ್ನನ್ನು ಈ ಪ್ರಚಾರಕಾರ್ಯದಲ್ಲಿ ತೊಡಗಿಸಿಕೊಂಡದ್ದು ಖಂಡಿತಕ್ಕೂ ನಿಜ. ಒಂದು ಸರ್ಕಾರ ಪ್ರಚಾರದಲ್ಲಿ ತೊಡಗಿದಾಗ, ಎಲ್ಲ ಪಕ್ಷಗಳನ್ನು ಸಮಾನಸ್ಥಾನದಲ್ಲಿ ಪರಿಗಣಿಸಲೂ ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಳುವಳಿಗಳ ಮತ್ತು ಶಕ್ತಿಗಳ ಸರಿಯಾದ ಮತ್ತು ಸತ್ಯವಾದ ಚಿತ್ರವನ್ನು ಕೊಡಲು ಅದು ಬದ್ಧವಾಗಿರುತ್ತದೆ.

**೮. ಸರ್ಕಾರಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಮುಚ್ಚಿದ ಬಾಗಿಲು**

೫೩. ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರಿ ಅಗತ್ಯಗಳ ತಕ್ಕಷ್ಟು ಭಾಗ ಇಲಾಖೆಗಳ ಮೂಲಕ ಅಲ್ಲದೆ ಗುತ್ತಿಗೆಗಳ ಮುಖಾಂತರ ಮಾಡಿಸಲಾಗುತ್ತದೆ. ಈ ಪರಿಸ್ಥಿತಿ ಮಾಮೂಲು ದಿನಗಳಲ್ಲಿನದು. ಯುದ್ಧಕಾಲದಲ್ಲಿ ಗುತ್ತಿಗೆ ವ್ಯವಸ್ಥೆಯಿಂದ ಸರ್ಕಾರಕ್ಕಾಗಿ ಮಾಡಿದ ಕೆಲಸ ಹಲವು ನೂರು ಪಟ್ಟುಗಳಷ್ಟು ಹೆಚ್ಚಾಗುತ್ತದೆ. ಕೇಂದ್ರ ಕಾಮಗಾರಿ ಇಲಾಖೆಯ ವಿಚಾರವಾಗಿ ಮಾತ್ರ ನಾನು ಮಾತನಾಡಬಲ್ಲೆ. ಕೇಂದ್ರ ಕಾಮಗಾರಿ ಇಲಾಖೆಯ ಪ್ರಕಾರ ಅನುಮೋದನೆ ಪಡೆದಿರುವ ಗುತ್ತಿಗೆದಾರರ ಪಟ್ಟಿಯಲ್ಲಿ ಸಾವಿರದ ನೂರ ಎಪ್ಪತ್ತೊಂದು ಜನರು ಇದ್ದಾರೆ. ಇವರುಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದಂತೆ ಒಬ್ಬನೇ ಒಬ್ಬ ಗುತ್ತಿಗೆದಾರ ಇದ್ದಾನೆಂದು ನನಗೆ ತಿಳಿದುಬಂದಿದೆ. ಮಿಕ್ಕವರೆಲ್ಲ ಹಿಂದೂಗಳು, ಸಿಖ್ಖರು ಮತ್ತು ಮುಸ್ಲಿಮರು. ಸರ್ಕಾರದ ಗುತ್ತಿಗೆ ವ್ಯವಸ್ಥೆಯಲ್ಲಿ ಎಲ್ಲ ಕೋಮಿನವರಿಗೂ ಮುಕ್ತದ್ವಾರವಿದ್ದು ಲಾಭ ಪಡೆಯಲು ಅನುವಾಗುವ ರೀತಿಯಲ್ಲಿ ಈ ವಿಚಾರಗಳನ್ನು ನಿಯೋಜಿಸಲು ಸಾಧ್ಯವಾಗಬೇಕು. ಸರ್ಕಾರಿ ಗುತ್ತಿಗೆಗಳನ್ನು ನಿಭಾಯಿಸಬಲ್ಲರೆಂದು ನಂಬಬಹುದಾದ, ಪರಿಶಿಷ್ಟ ಜಾತಿಗಳಿಗೆ ಸೇರಿದ ಅನೇಕ ಜನರಿದ್ದಾರೆ. ಈಗಾಗಲೇ ಪರಿಶಿಷ್ಟ ಜಾತಿಗಳಿಗೆ ಸೇರಿದ ಅನೇಕರು ಹಿಂದೂ, ಮುಸ್ಲಿಮ್ ಹಾಗೂ ಸಿಖ್ಖ್ ಗುತ್ತಿಗೆದಾರರ ಕೈಕೆಳಗೆ ದುಡಿಯುತ್ತಿದ್ದಾರೆ. ಫಲಿತಾಂಶವೇನೆಂದರೆ ಹಿಂದೂ, ಮುಸ್ಲಿಮ್ ಅಥವಾ ಸಿಖ್ಖ್ ಗುತ್ತಿಗೆದಾರರು ಲಾಭ ಪಡೆಯುತ್ತಿದ್ದಾರೆ, ಪರಿಶಿಷ್ಟ ಜಾತಿಗಳವರು ಕೇವಲ ಕೂಲಿಗಾಗಿ ಕೆಲಸ ಮಾಡುತ್ತಿದ್ದಾರೆ.

೫೪. ಪರಿಶಿಷ್ಟ ಜಾತಿಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಜನರನ್ನು ಅನುಮೋದನೆ ಪಡೆದ ಗುತ್ತಿಗೆದಾರರ ಪಟ್ಟಿಯಲ್ಲಿ ಸೇರಿಸುವುದು ಹೆಚ್ಚೇನೂ ಕಷ್ಟವಿಲ್ಲ. ಆದರೆ, ಅವರಿಗೆ ಗುತ್ತಿಗೆ ದೊರೆಯುವಂತೆ ಮಾಡುವುದು ಮುಖ್ಯ. ಸರ್ಕಾರಿ ಗುತ್ತಿಗೆಗಳ ವಿಚಾರದಲ್ಲಿ ಎರಡು ನಿಯಮಗಳಿವೆ.

(೧) ಯಾವ ಗುತ್ತಿಗೆದಾರರು ಅತ್ಯಂತ ಕಡಿಮೆಯ ಟೆಂಡರು ಕರೆಯುತ್ತಾರೋ ಅವರಿಗೆ ಗುತ್ತಿಗೆಯನ್ನು ನೀಡುವುದು ಸಾಮಾನ್ಯ

(೨) ಅತ್ಯಂತ ಕಡಿಮೆಯ ಟೆಂಡರನ್ನು ಒಪ್ಪಿಕೊಳ್ಳಲು ಸರ್ಕಾರ ಬದ್ಧವಾಗಿಲ್ಲ.

೫೫. ಆದ್ದರಿಂದ ಒಬ್ಬ ನಿರ್ದಿಷ್ಟ ಗುತ್ತಿಗೆದಾರನಿಗೆ ಗುತ್ತಿಗೆ ದೊರಕುತ್ತದೋ ಇಲ್ಲವೋ ಎಂಬುದು ಈ ವಿಷಯವನ್ನು ಜಾರಿಗೆ ತರುವ ಅಧಿಕಾರಿಯ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಈ ವಿವೇಚನೆ ಪರಿಶಿಷ್ಟ ಜಾತಿಯ ಗುತ್ತಿಗೆದಾರನ ಪರವಾಗಿ ಕೆಲಸ ಮಾಡುವ ಸಂಭವ ಇಲ್ಲ. ಪರಿಶಿಷ್ಟ ಜಾತಿಯ ಗುತ್ತಿಗೆದಾರ ಕರೆಯುವ ಟೆಂಡರ್ ಅತ್ಯಂತ ಕಡಮೆ ವೆಚ್ಚದ್ದೇ ಆಗಿದ್ದರೂ ಕೋಮು ಪೂರ್ವಗ್ರಹದ ಕಾರಣದಿಂದ ಅದನ್ನು ಅಧಿಕಾರಿಯು ಒಪ್ಪದಿರಬಹುದು ಮತ್ತು 'ಅತ್ಯಂತ ಕಡಿಮೆ ವೆಚ್ಚದ ಟೆಂಡರನ್ನು ಒಪ್ಪಲು ಆತ ಬದ್ಧನಲ್ಲ' ಎಂಬ ಎರಡನೆಯ ನಿಯಮವನ್ನು ನೆಚ್ಚಬಹುದು. ಆತನ ಟೆಂಡರ್ ಅತ್ಯಂತ ಕಡಿಮೆ ವೆಚ್ಚದ ಟೆಂಡರಿಗಿಂತ ತುಸು ಹೆಚ್ಚು ವೆಚ್ಚದ್ದಾಗಿದ್ದರೆ, ಅಧಿಕಾರಿಗೆ ಒಪ್ಪುವ ಸ್ವಾತಂತ್ರ್ಯವಿದ್ದರೂ ಆತ ಅದನ್ನು ಒಪ್ಪುವುದಿಲ್ಲ. ಆಗ ಆತ ಎರಡು ನಿಯಮಗಳಲ್ಲಿ ಮೊದಲನೆಯದನ್ನು ನೆಚ್ಚುತ್ತಾನೆ. ಎರಡೂ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿಯ ಗುತ್ತಿಗೆದಾರರ ಟೆಂಡರನ್ನು ನಿರಾಕರಿಸಲು ಆತ ತನ್ನದೇ ಆದ ಸಮರ್ಥನೆಯನ್ನು ಹೊಂದಿರುತ್ತಾನೆ.

೫೬. ಕೋಮು ಪಕ್ಷಪಾತಕ್ಕೆ ಮದ್ದಿಲ್ಲ ಎಂಬುದೇನೋ ನಿಜ. ನನಗೆ ಹೊಳೆಯುವ ಮತ್ತು ನಾವು ಮಾಡಬಹುದಾದ ಏಕೈಕ ಉಪಾಯ ಎಂದರೆ ಪರಿಶಿಷ್ಟ ಜಾತಿಯ ಗುತ್ತಿಗೆದಾರನ ಟೆಂಡರನ್ನು, ಅದು ಅತ್ಯಂತ ಕಡಿಮೆ ವೆಚ್ಚದ್ದಕ್ಕಿಂತ ಶೇಕಡ ೫ರಷ್ಟಕ್ಕಿಂತ ಹೆಚ್ಚಾಗಿಲ್ಲದೇ ಇದ್ದಾಗ, ಕನಿಷ್ಠ ಎಂದು ಪರಿಗಣಿಸಬೇಕು

ಎಂದು ಹೇಳುವುದರ ಮೂಲಕ ನಿಯಮವನ್ನು ತಿದ್ದುವುದು. ಈ ಯೋಜನೆ ಆರ್ಥಿಕವಾಗಿ ನಷ್ಟವನ್ನುಂಟು ಮಾಡುತ್ತದೆ ಎನ್ನುವುದು ನಿಜ. ಜೊತೆಗೆ ಹಣಕಾಸು ಇಲಾಖೆ ಅದಕ್ಕೆ ಒಪ್ಪಿಗೆ ನೀಡಬೇಕಾಗಿದೆ. ಅಂಥ ರಿಯಾಯಿತಿಯ ಬೆಲೆ ಎಷ್ಟಾಗಬಹುದೆಂಬ ಯಾವುದೇ ಅಂದಾಜನ್ನು ನಾನು ನೀಡಲಾರೆ. ಅದೇನೂ ಬೆನ್ನು ಮುರಿಯುವಂತಹ ಹೊರೆ ಆಗದು ಎಂಬ ನಂಬಿಕೆ ನನಗಿದೆ.

♦

## ಉಪವಿಭಾಗ – ೪

## ಯಾತನೆಗೊಳಗಾದ ಜನರ ಬಗ್ಗೆ ಸರ್ಕಾರದ ಕರ್ತವ್ಯ

೫೭. ಪರಿಶಿಷ್ಟ ಜಾತಿಗಳ ಪರವಾಗಿ ಈ ಮನವಿಯಲ್ಲಿ ಸಲ್ಲಿಸಿರುವ ಕೆಲವು ಸಲಹೆಗಳು, ಅದರಲ್ಲೂ ರಾಜಕೀಯ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ಮಂಡಿಸಿರುವಂಥವು, ಸಾರ್ವಜನಿಕ ಖಜಾನೆಗೆ ಯಾವ ಆರ್ಥಿಕ ಹೊರೆಯನ್ನೂ ಹೇರುವುದಿಲ್ಲ. ಅವು ರಾಜಕೀಯ ಹಕ್ಕೊತ್ತಾಯಗಳೂ ಆಗಿರುವಷ್ಟು ನಿಜವಾಗಿ ಸಲಹೆಗಳಾಗಿಲ್ಲ. ಅವುಗಳಲ್ಲಿನ ತರ್ಕ ಮತ್ತು ನ್ಯಾಯಗಳ ಕಾರಣದಿಂದ ಸರ್ಕಾರ ಅವುಗಳನ್ನು ಮಂಜೂರು ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ಆದಾಯದ ಮೇಲೆ ಆರ್ಥಿಕ ಹೊರೆಯನ್ನುಂಟುಮಾಡುವ ಸಲಹೆಗಳನ್ನು ಸ್ವೀಕರಿಸುವಾಗ ಮಾತ್ರ ಕಷ್ಟ ಉಂಟಾಗುತ್ತದೆ. ಅಲ್ಲಿ ಆರ್ಥಿಕವಾಗಿ ಭಾರ ಬೀಳುತ್ತದೆ. ಆದರೆ ಕೇವಲ ಆ ಕಾರಣಕ್ಕಾಗಿ ಅವುಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಏಕೆಂದರೆ, ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಕರ್ತವ್ಯವೂ ಇದೆ ಎಂಬುದರಲ್ಲಿ ಯಾವ ಸಂದೇಹವೂ ಇರಲು ಸಾಧ್ಯವಿಲ್ಲ. ಈ ವಿಚಾರವಾಗಿ ತನ್ನ ಕರ್ತವ್ಯವನ್ನು ಸರ್ಕಾರ ಒಪ್ಪಿದಲ್ಲಿ, ಸಾರ್ವಜನಿಕ ಹಣದ ಮೇಲೆ ನಿರ್ದಿಷ್ಟ ಮೊತ್ತದ ಆರ್ಥಿಕ ಹೊರೆ ಬಿದ್ದರೂ ಸಹ ತನ್ನ ಕರ್ತವ್ಯವನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಬದ್ಧವಾಗಿರುತ್ತದೆ.

೫೮. ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಬ್ರಿಟಿಷ್ ಸರ್ಕಾರದ ಧೋರಣೆ ಪೂರ್ಣವಾಗಿ ಮತ್ತು ನಿರಂತರವಾಗಿ ಅಲಕ್ಷ್ಯದಿಂದ ಕೂಡಿದ್ದು ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸುವುದು ಮಾತ್ರವೇ ತನ್ನ ಕರ್ತವ್ಯ ಅಲ್ಲ ಎಂದು ಬ್ರಿಟಿಷ್ ಸರ್ಕಾರ ಅರಿತುಕೊಂಡು ಜನರಿಗೆ ಶಿಕ್ಷಣ ನೀಡಲು ಹಾಗೂ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಲು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿದಾಗಲೇ ಪ್ರಾರಂಭದಿಂದಲೂ ಈ ಧೋರಣೆ ಶುರುವಾಯಿತು. ಬೊಂಬಾಯಿ ಪ್ರಾಂತದ ೧೮೫೦ – ೫೧ನೆಯ ವರ್ಷದ ಶಿಕ್ಷಣ ಸಮಿತಿಯ ವರದಿಯ ಈ ಮುಂದಿನ ಉದ್ಧೃತ ಭಾಗಗಳಿಂದ ಈ ವಿಷಯ ಸ್ಪಷ್ಟವಾಗಿದೆ.

**ಭಾರತದ ಉಚ್ಚವರ್ಗಗಳಿಗೆ ಸಂಬಂಧಿಸಿದ ಪರಿಶೀಲನೆ**

"೧೬ನೇ ಪ್ಯಾರಾ – ಭಾರತದಲ್ಲಿ ಸರ್ಕಾರಿ ಶಿಕ್ಷಣದ ಪ್ರಭಾವಕ್ಕೆ ಒಳಪಡಿಸಬಹುದಾದ ಜನಸಂಖ್ಯೆ ಎಂದರೆ ಒಂದು ಸಣ್ಣ ಗುಂಪು ಮಾತ್ರ ಎಂಬುದು ಪ್ರತಿಪಾದಿಸಲ್ಪಟ್ಟಿರುವಾಗ ಹಾಗೂ ಘನತೆವೆತ್ತ ನ್ಯಾಯಾಸ್ಥಾನವು ಈ ಗುಂಪಿನಲ್ಲಿ 'ಉಚ್ಚವರ್ಗಗಳು' ಇರಬೇಕೆಂದು ಅಂತಿಮವಾಗಿ ತೀರ್ಮಾನಿಸಿರುವಾಗ ಈ ಎರಡನೆಯವರು ಯಾರು ಎಂಬುದನ್ನು ಕಂಡುಹಿಡಿಯುವುದು ಅಗತ್ಯವಾಗಿದೆ".

**ಭಾರತದ ಉಚ್ಚವರ್ಗಗಳು**

"೧೭ ನೇ ಪ್ಯಾರಾ – ಪ್ರಭಾವಿ ಎಂದು ಪರಿಗಣಿಸಬಹುದಾದ ವರ್ಗಗಳನ್ನು – ಭಾರತದ ಉಚ್ಚವರ್ಗಗಳನ್ನು – ಈ ಮುಂದಿನಂತೆ ವರ್ಗೀಕರಿಸಬಹುದಾಗಿದೆ.

೧. ಭೂಮಾಲೀಕರು ಮತ್ತು ಜಹಗೀರುದಾರರು, ಮುಂಚಿನ ಸಾಮಂತರ ಪ್ರತಿನಿಧಿಗಳು, ಸ್ವದೇಶೀ ಶಕ್ತಿಗಳಲ್ಲಿ ಅಧಿಕಾರವುಳ್ಳ ವ್ಯಕ್ತಿಗಳು ಮತ್ತು ಸೈನಿಕ ವರ್ಗ ಎಂದು ಕರೆಯಬಹುದಾದವರು.

೨. ವ್ಯಾಪಾರ ಅಥವಾ ವಾಣಿಜ್ಯ ಕ್ಷೇತ್ರದಲ್ಲಿ ಹಣ ಸಂಪಾದಿಸಿರುವವರು ಅಥವಾ ವರ್ತಕ ವರ್ಗ.
೩. ಸರ್ಕಾರದ ಉನ್ನತ ಅಧಿಕಾರಿಗಳು.
೪. ಬ್ರಾಹ್ಮಣರು ಮತ್ತು ನಿಡಿದಾದ ಅಂತರವಿದ್ದರೂ ಅವರೊಡನೆ ಸೇರಿಸಬಹುದಾದ ಲೇಖನಿಯ ಮೂಲಕ ಜೀವನ ನಡೆಸುವ ಸವರ್ಣೀಯ ಬರಹಗಾರರು, ಜ್ಞಾನಾರ್ಜನೆಯಲ್ಲಿ ಅಥವಾ ತಮ್ಮ ನೆಲೆಯಲ್ಲಿ ಸ್ಥಾನ ಪಡೆದಿರುವ ಮುಂಬಯಿಯ ಪರ್ಬು, ಶೆಣ್ವೈ ಮುಂತಾದವರು ಮತ್ತು ಬಂಗಾಳದ ಕಾಯಸ್ಥರು".

**ಅತ್ಯಂತ ಪ್ರಭಾವಿ ಬ್ರಾಹ್ಮಣರು**

"೧೮ನೇ ಪ್ಯಾರಾ – ಈ ನಾಲ್ಕು ವರ್ಗಗಳಲ್ಲಿ ಎಣೆಯೇ ಇಲ್ಲದ, ಅತ್ಯಂತ ಪ್ರಭಾವಿಗಳಾದ, ಸಂಖ್ಯೆಯಲ್ಲಿ ಹೆಚ್ಚಿರುವ ಮತ್ತು ಒಟ್ಟಿನಲ್ಲಿ ಸರ್ಕಾರ ಅತಿ ಸುಲಭವಾಗಿ ಪ್ರಭಾವ ಬೀರಬಹುದಾದವರು ಎಂದರೆ ಈ ಎರಡನೆಯವರು. ಇಡೀ ಭಾರತದಲ್ಲಿ ಪ್ರಾಚೀನ ಜಹಗೀರುದಾರರು ಅಥವಾ ಸೈನಿಕರು ನಮ್ಮ ನಿಬಂಧನೆಗಳ ಅಡಿಯಲ್ಲಿ ದಿನದಿನಕ್ಕೂ ಕ್ಷೀಣಿಸುತ್ತಿದ್ದಾರೆ ಎಂಬುದು ಅನುಭವಕ್ಕೆ ಬಂದ ಚೆನ್ನಾಗಿ ಪರಿಗಣಿತವಾದ ವಿಷಯ * * * * ಕೆಲವು ಅಪವಾದಗಳನ್ನು ಬಿಟ್ಟರೆ ವರ್ತಕ ವರ್ಗದಲ್ಲಿಯೂ ಇಲ್ಲ ಎಂಬುದು ಅವರಿಗೆ ಉನ್ನತ ಶಿಕ್ಷಣದಲ್ಲಿ ಪ್ರಭಾವ ಬೀರಲು ಇನ್ನೂ ಹೆಚ್ಚಿನ ಅವಕಾಶಗಳನ್ನು ಒದಗಿಸುವಂಥದು * * * * ಕಡೆಯದಾಗಿ ಸರ್ಕಾರದ ಸಂಪರ್ಕವನ್ನು ಪಡೆಯುವ ದೊಡ್ಡ ಸಂಖ್ಯೆಯ ಜನರ ಮೇಲೆ ಹೆಚ್ಚಿನ ಪ್ರಭಾವವನ್ನು ಪಡೆದಿರುವ ರಾಜ್ಯದ ನೌಕರರು ಸರ್ಕಾರವನ್ನು ಅವಲಂಬಿಸಿದ ಇನ್ನೂ ಹೆಚ್ಚಿನ ಸಂಖ್ಯೆಯ ಜನರ ಮೇಲೆ ಯಾವುದೇ ಪ್ರಭಾವವನ್ನು ಹೊಂದಿಲ್ಲ".

**ಬ್ರಾಹ್ಮಣರ ಬಡತನ**

"೧೯ನೇ ಪ್ಯಾರಾ. ಮೇಲಿನ ವಿಶ್ಲೇಷಣೆ ದೀರ್ಘವಾಗಿದೆ ಎಂದು ಅನ್ನಿಸಿದರೂ ಕೆಲವು ಮುಖ್ಯ ನಿರ್ಣಯಗಳನ್ನು ಸಕಾರಣವಾಗಿ ಊಹಿಸಬಹುದಾದ್ದರಿಂದ ಅದನ್ನು ಕಣಿಗಣಿಸಲಾಗದು. ಮೊದಲನೆಯದಾಗಿ ಸರ್ಕಾರವು ಶಿಕ್ಷಣದ ಬೀಜಗಳನ್ನು ಪ್ರಸಾರ ಮಾಡಲೆಂದು ತೊಡಗಿಸಲು ಸಾಧ್ಯವಾಗುವ ಪ್ರಭಾವಶಾಲಿ ವರ್ಗವು ಬ್ರಾಹ್ಮಣರು ಮತ್ತು ಅವರಿಗೆ ತೀರ ಸಮೀಪ ಇರುವ ಇತರ ಸವರ್ಣೀಯರು ಎಂಬುದನ್ನು ಅದು ಪ್ರತಿಪಾದಿಸುತ್ತದೆ."

**ಕೆಳಜಾತಿಗಳವರನ್ನು ವಿದ್ಯಾವಂತರನ್ನಾಗಿಸುವ ಪ್ರಶ್ನೆಗೆ ಸಂಬಂಧಿಸಿದಂತೆ**

"೨೧ನೇ ಪ್ಯಾರಾ. ಹಲವು ವರ್ಷಗಳ ಅನುಭವವು ನಮ್ಮ ಗಮನಕ್ಕೆ ಬಲವಂತವಾಗಿ ತಂದಿರುವ ಈ ವಿಚಾರಗಳಿಂದ ನಿರ್ಣಯಿಸಬಹುದಾದ, ಕಾರ್ಯರೂಪಕ್ಕೆ ಬರುವ ತೀರ್ಮಾನ ಎಂದರೆ ನಮ್ಮಿಂದ ಶಿಕ್ಷಣ ಪಡೆಯಲು ಇಚ್ಛಿಸುವ ಬಡ ಸವರ್ಣೀಯ ಮಕ್ಕಳಿಗೆ ಧಾರಾಳವಾಗಿ ಬಾಗಿಲನ್ನು ತೆರೆಯಬೇಕು. ಆದರೆ ಇಲ್ಲಿ ಕೂಡ ಗಮನಕ್ಕೆ ತಂದುಕೊಳ್ಳಬೇಕಾದ್ದು ಸರಿಯೆನ್ನಿಸುವ ಇನ್ನೊಂದು ಮುಜುಗರದ ಪ್ರಶ್ನೆ ಉದ್ಭವಿಸುತ್ತದೆ. ಬಡವರ ಮಕ್ಕಳನ್ನು ಸರ್ಕಾರಿ ಸಂಸ್ಥೆಗಳಿಗೆ ಮುಕ್ತವಾಗಿ ಸೇರಿಸಿಕೊಳ್ಳಬಹುದಾದರೆ ಅದೇ ಪರಿಸ್ಥಿತಿಯಲ್ಲಿ ಹೆಣಗುತ್ತಿರುವ ಧೇಡರು, ಮಹಾರರು ಮುಂತಾದ ಎಲ್ಲ ನಿರ್ಲಕ್ಷಿತ ಜಾತಿಗಳನ್ನು ತಡೆಯುವಂಥದ್ದು ಯಾವುದು?"

**ಹಿಂದೂಗಳ ಸಾಮಾಜಿಕ ಪೂರ್ವಗ್ರಹಗಳು**

"೨೨ನೇ ಪ್ಯಾರಾ. ಈ ಎರಡನೆಯವರ ಒಂದು ವರ್ಗವನ್ನು ಮುಂಬಯಿಯಲ್ಲಿ ಸಿದ್ಧಪಡಿಸುವುದಾದಲ್ಲಿ ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಪ್ರಾಧ್ಯಾಪಕರ ಮತ್ತು ಗುರುಗಳ ಮಾರ್ಗದರ್ಶಕ ಪ್ರಭಾವದಿಂದ ಸಮುದಾಯದ ಯಾರನ್ನೇ ಆದರೂ ಮೀರಿಸುವಂತಹ ಬಹಳ ಬುದ್ಧಿವಂತ ಮನುಷ್ಯರಾಗಿ ಅವರು ತರಬೇತಿ ಪಡೆಯಬಹುದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆಗ ಅವರಿಗೆ ದೊರಕುವಂತಹ ವಿದ್ಯಾರ್ಹತೆಗಳಿಂದ, ಸ್ವದೇಶದ ಮೇಧಾಶಕ್ತಿಗೆ ಸಾಧ್ಯವಿರುವ ನ್ಯಾಯಾಧಿಕಾರಿ, ಮುಖ್ಯ ಜ್ಯೂರಿ, ಗೌರವಾನ್ವಿತ ಮಹಾರಾಣಿಯವರ ಶಾಂತಿಪಾಲನೆಯ ಕಮಿಷನರ್ ಮೊದಲಾದ ಅತಿ ಪ್ರಮುಖ ಪದವಿಗಳಿಗೆ ಏರುವ ಅವರ ಆಕಾಂಕ್ಷೆಯನ್ನು ತಡೆಯುವಂಥದು ಯಾವುದೂ ಇಲ್ಲ. ಹಿಂದೂ ಸಮುದಾಯದಲ್ಲಿ ಅಂಥ ಪದವಿಗಳನ್ನೇ ಜುಗುಪ್ಸೆಗೆ ಪಕ್ಕಾಗಿಸುವ, ಪೂರ್ವಗ್ರಹಗಳಿಗೆ ತುತ್ತಾಗುವಂಥದ್ದು ಬ್ರಿಟಿಷ್ ಸರ್ಕಾರದಲ್ಲಿನ ಸಂಕುಚಿತತೆ ಮತ್ತು ಅಶಕ್ತತೆಯ ಪರಮಾವಧಿ ಎಂದು ಅನೇಕ ಧರ್ಮಾತ್ಮರು ಭಾವಿಸುತ್ತಾರೆ ಮತ್ತು ಜಾತಿ ಪ್ರತಿಬಂಧಕಗಳ ಮೇಲೆ ನೇರ ಧಾಳಿ ಆಗಬೇಕಿದೆ".

**ಗೌರವಾರ್ಹ ಮೌಂಟ್ ಸ್ಟುವರ್ಟ್ ಎಲ್ಫಿನ್ ಸ್ಟೋನ್ ಅವರ ವಿವೇಕಯುತ ಪರಿಶೀಲನೆಯ ಪ್ರಸ್ತಾಪ**

"೨೩ನೇ ಪ್ಯಾರಾ – ಆದರೆ ಇದರೊಡನೆ, ಭಾರತದ ಈ ಭಾಗದಲ್ಲಿ ಕಾಣಿಸಿಕೊಂಡಿರುವ ಅತ್ಯಂತ ಉದಾರ ಮತ್ತು ವಿಶಾಲ ಬುದ್ಧಿಯ ಆಡಳಿತಗಾರರಾದ ಶ್ರೀ ಎಲ್ಫಿನ್ ಸ್ಟೋನ್ ಅವರ ವಿವೇಕಪೂರ್ಣ ವಿಚಾರಗಳು ಕಾರ್ಯದ ನಿಜವಾದ ನಿಯಮವನ್ನು ಎತ್ತಿತೋರಿಸುತ್ತವೆ. ಅತ್ಯಂತ ಕೆಳಗಿನ ಜಾತಿಯಲ್ಲಿ ಶ್ರೇಷ್ಠ ವಿದ್ಯಾರ್ಥಿಗಳಿದ್ದಾರೆ; ಆದರೆ ಆ ಬಗೆಯ ಜನಗಳಿಗೆ ಯಾವುದೇ ವಿಶೇಷ ಪ್ರೋತ್ಸಾಹವನ್ನು ಹೇಗೆ ನೀಡಬೇಕೆಂಬುದರ ಬಗ್ಗೆ ನಾವು ಎಚ್ಚರಿಕೆಯಿಂದ ಪರಿಶೀಲಿಸಬೇಕು; ಅವರು ಅತ್ಯಂತ ನಿರ್ಲಕ್ಷಿತರು ಮಾತ್ರವಲ್ಲ, ಸಮಾಜದ ಮಹತ್ತಾದ ವಿಭಜನೆಯಲ್ಲಿ ಅತ್ಯಂತ ಕೆಳಗಿನವರು ಮತ್ತು ನಮ್ಮ ವಿದ್ಯಾವ್ಯವಸ್ಥೆಯು ಮೊದಲು ಅವರಲ್ಲಿ ಬೇರುಬಿಟ್ಟರೆ ಅದು ಮುಂದೆ ಹೋಗಲು ಸಾಧ್ಯವೇ ಇಲ್ಲ. ಹೀಗಾದರೆ, ಇಲ್ಲಿಯವರೆಗೂ ದ್ವೇಷಿಸಲ್ಪಡುತ್ತಿದ್ದ ಮತ್ತು ತಿರಸ್ಕಾರಕ್ಕೆ ಒಳಗಾಗಿದ್ದ ವರ್ಗದ ಜನರು ಇತರ ವರ್ಗದ ಜನಗಳಿಗಿಂತ ಮೇಲೆ ಬರುವ ಅವಕಾಶವಾಗಿ, ನಾವು ಅವರನ್ನೇ ಆಯ್ದುಕೊಳ್ಳಬೇಕಾಗುತ್ತದೆ. ನಾವು ಸೇರಿಬಿಡಬಹುದು ಎಂಬ ಭಯಪಡಬೇಕಿದೆ ಎಂದು ಮಿಷನರಿಗಳು ಕಂಡುಹಿಡಿದಿರುವುದನ್ನು ಗಮನಿಸಲಾಗಿದೆ ಎಂದು ಅವರು ಹೇಳುತ್ತಾರೆ. ನಮ್ಮ ಶಕ್ತಿಯನ್ನು ನಮ್ಮ ಸೈನ್ಯದಲ್ಲಿ ಇರಿಸುವುದರಲ್ಲಿ ಅಥವಾ ಜನಸಂಖ್ಯೆಯ ಒಂದು ಭಾಗದಲ್ಲಿ ಜೋಡಿಸುವುದರಲ್ಲಿ ನಾವು ತೃಪ್ತರಾಗಿದ್ದು ಆದರೆ ಇನ್ನೂ ವಿಸ್ತೃತವಾದ ಆಧಾರದ ಮೇಲೆ ಅದನ್ನು ಅವಲಂಬಿಸಲು ಪ್ರತಿಪ್ರಯತ್ನದಲ್ಲೂ ನಾವು ಪೂರ್ವಾಪರ ವಿರುದ್ಧವಾಗಿ ನಡೆದುಕೊಂಡರೆ, ಸಂಗತಿಗಳು ಇಂಥ ಪರಿಸ್ಥಿತಿಯಲ್ಲಿ ಇರುವುದು ಅಪೇಕ್ಷಣೀಯ!"

೫೯. ಭಾರತೀಯರಿಗೆ ಶಿಕ್ಷಣ ನೀಡುವ ಸರ್ಕಾರದ ಕಾರ್ಯನೀತಿ ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಇಂಥ ವೈರದೊಡನೆ ಪ್ರಾರಂಭವಾಗಿದೆ. ಈ ಕಾರ್ಯನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆ. ಧಾರವಾಡ ಜಿಲ್ಲೆಯ ಸರ್ಕಾರಿ ಶಾಲೆಯೊಂದಕ್ಕೆ ಸೇರಿಸಿಕೊಳ್ಳಿ ಎಂದು ೧೮೫೬ರಲ್ಲಿ ಭಾರತ ಸರ್ಕಾರಕ್ಕೆ ಅರ್ಜಿ ಹಾಕಿದ ಒಬ್ಬ ಮಹಾರ (ಅಸ್ಪೃಶ್ಯ) ಬಾಲಕನ ಘಟನೆ ದಾಖಲೆಗೊಂಡಿದೆ. ಸರ್ಕಾರ ನೀಡಿದ ನಿರ್ಣಯದ ಪಾಠ ಈ ಮುಂದಿನಂತಿದೆ.

"ಪತ್ರ ವ್ಯವಹಾರದಲ್ಲಿ ಚರ್ಚಿತವಾಗಿರುವ ಪ್ರಶ್ನೆ ಕಾರ್ಯತಃ ಎದುರಾಗುವ ಬಹಳ ದೊಡ್ಡ ಕಷ್ಟ.

೧. ಮಹಾರ ಅರ್ಜಿದಾರನು ತನ್ನ ಪರವಾಗಿ ಅಮೂರ್ತ ನ್ಯಾಯವನ್ನು ಹೊಂದಿದ್ದಾರೆ ಎಂಬುದರಲ್ಲಿ ಯಾವ ಸಂದೇಹವೂ ಇರಲು ಸಾಧ್ಯವಿಲ್ಲ; ಮತ್ತು ಧಾರವಾಡದಲ್ಲಿ ಜಾರಿಯಲ್ಲಿರುವ ಶಿಕ್ಷಣ ಸಾಧನವನ್ನು ಆತ ಪಡೆಯುವುದಕ್ಕೆ ಅಡ್ಡಿಯಾಗಿರುವ ಸದ್ಯದ ಪೂರ್ವಗ್ರಹಗಳು ಆದಷ್ಟು ಬೇಗ ತೆಗೆದು ಹಾಕಲ್ಪಡಬಹುದು ಎಂಬುದು ಸರ್ಕಾರದ ನಂಬಿಕೆ.

೨. ಆದರೆ, ಒಬ್ಬ ಅಥವಾ ಕೆಲವೇ ವಿದ್ಯಾರ್ಥಿಗಳಿಗೋಸ್ಕರ ಬಹಳ ಹಿಂದಿನಿಂದ ಬಂದ ಪೂರ್ವಗ್ರಹಗಳಲ್ಲಿ ಮಧ್ಯ ಪ್ರವೇಶಿಸಿದರೆ ಶಿಕ್ಷಣದ ಉದ್ದೇಶಕ್ಕೇ ಬಹುಶಃ ಅತಿಯಾದ ಭಂಗ ಉಂಟಾಗುತ್ತದೆ ಎಂಬುದನ್ನು ಮನಗಾಣಲು ಸರ್ಕಾರ ಬದ್ಧವಾಗಿದೆ. ಅರ್ಜಿದಾರನಿಗೆ ತೊಂದರೆಯನ್ನು ಉಂಟುಮಾಡುತ್ತಿರುವ ಈ ಅನನುಕೂಲ ಈ ಸರ್ಕಾರದೊಡನೆ ಉದ್ಭವಿಸಿದ್ದಲ್ಲ ಮತ್ತು ಅದು ಸರ್ಕಾರ ಕ್ರೂರ ರೀತಿಯಲ್ಲಿ ಮಧ್ಯ ಪ್ರವೇಶಿಸಿ, ಆತ ಪ್ರಾರ್ಥಿಸಿದ ಪ್ರಕಾರ ಆತನ ಪರವಾಗಿ ನಿವಾರಿಸುವಂಥದ್ದೂ ಅಲ್ಲ."

೬೦. ೧೮೮೨ರಲ್ಲಿ ಭಾರತ ಸರ್ಕಾರವು ಶಿಕ್ಷಣದ ಕಾರ್ಯನೀತಿಯನ್ನು ಪರಿಶೀಲಿಸಲು ಹಂಟರ್ ಸಮಿತಿಯನ್ನು ನೇಮಿಸಿತು. ಮುಸ್ಲಿಮರಲ್ಲಿ ವಿದ್ಯಾಪ್ರಸಾರಕ್ಕಾಗಿ ಅನೇಕ ಮುಖ್ಯ ಪ್ರಸ್ತಾಪಗಳನ್ನು ಈ ಸಮಿತಿ ಮಾಡಿತು. ಅಸ್ಪೃಶ್ಯರನ್ನು ಕುರಿತಂತೆ ಅದು ಏನೂ ಮಾಡಲಿಲ್ಲ. ಅದು ಮಾಡಿದ್ದೆಲ್ಲ ಸರ್ಕಾರಿ ಕಾಲೇಜು ಅಥವಾ ಶಾಲೆಗಳಲ್ಲಿ ಕೇವಲ ಜಾತಿಯ ಆಧಾರದಿಂದ ಯಾರಿಗೂ ಪ್ರವೇಶವನ್ನು ನಿರಾಕರಿಸಲಾಗದು ಎಂಬ ತತ್ವವನ್ನು ಸರ್ಕಾರ ಒಪ್ಪಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ತಕ್ಕ ಎಚ್ಚರಿಕೆಯಿಂದ ಅನ್ವಯಿಸಬೇಕು ಎಂದು ಹೇಳುವುದರ ಮೂಲಕ ಅದರ ಬಲವನ್ನು ಕುಗ್ಗಿಸಿತು.

೬೧. ಈ ವೈರ ಮಾಯವಾದಾಗ ಆ ಸ್ಥಳದಲ್ಲಿ ಅಲಕ್ಷ್ಯ ಮತ್ತು ಔದಾಸೀನ್ಯಗಳು ನೆಲೆಸಿವೆ. ಈ ಅಲಕ್ಷ್ಯ ಔದಾಸೀನ್ಯಗಳೂ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವೇ ಅಲ್ಲದೆ ಇತರ ರಂಗಗಳಲ್ಲಿ, ಮುಖ್ಯವಾಗಿ ಸೈನ್ಯದಲ್ಲಿ, ಕಾಣಿಸಿಕೊಂಡಿವೆ. ಈಸ್ಟ್ ಇಂಡಿಯಾ ಕಂಪೆನಿಯ ಇಡೀ ಸೈನ್ಯದಲ್ಲಿ ಅಸ್ಪೃಶ್ಯರು ತುಂಬಿದ್ದರು. ನಿಜದಲ್ಲಿ ಈ ಅಸ್ಪೃಶ್ಯ ಸೈನ್ಯ ಇಲ್ಲದಿದ್ದಲ್ಲಿ ಬ್ರಿಟಿಷರು ಭಾರತವನ್ನು ಗೆಲ್ಲಲು ಸಾಧ್ಯವೇ ಇರಲಿಲ್ಲ. ೧೮೯೨ರವರೆಗೆ ಅಸ್ಪೃಶ್ಯರು ಸೈನ್ಯದಲ್ಲಿ ಸೇರ್ಪಡೆಯಾಗುತ್ತಿದ್ದರು. ೧೮೯೨ರಲ್ಲಿ ಸೈನ್ಯದಲ್ಲಿನ ಅವರ ಉದ್ಯೋಗಾವಕಾಶಗಳು ಇದ್ದಕ್ಕಿದ್ದ ಹಾಗೆ ನಿಂತುಹೋದವು. ವಿದ್ಯೆಯಿಲ್ಲದೆ, ಗೌರವಾರ್ಹ ಬದುಕಿಗಾಗಿ ಇತರ ವಿಧಾನಗಳನ್ನು ಅವಲಂಬಿಸಲು ಯಾವ ಸಾಧನವೂ ಇಲ್ಲದೆ ತೀವ್ರ ಸಂಕಷ್ಟದೊಂದಿಗೆ ಅವರು ಬೀದಿಗೆ ಬಿದ್ದರು

೬೨. ಈಗ ನಿಕೃಷ್ಟ ಸ್ಥಿತಿಯಲ್ಲಿ ಹೊರಳಾಡುತ್ತ ಸಂಕಷ್ಟಕ್ಕೊಳಗಾಗಿರುವ ಪರಿಶಿಷ್ಟ ಜಾತಿಗಳನ್ನು ಮೇಲೆತ್ತ ಬಲ್ಲವರು ಯಾರು? ಕೇವಲ ತಮ್ಮ ಸ್ವಂತ ಪ್ರಯತ್ನದಿಂದ ಅವರು ಮೇಲೇಳಲಾರರು ಎಂಬುದು ನಿಶ್ಚಯ. ತಾವೇ ಸ್ವತಃ ಮೇಲೇರುವ ಸಾಧನಗಳನ್ನು ಹವಣಿಸಿಕೊಳ್ಳಲು ಅವರಲ್ಲಿ ಇರುವ ಸಂಪನ್ಮೂಲಗಳು ತೀರ ಅಲ್ಪ. ಹಿಂದೂಗಳ ಭಿಕ್ಷೆಯನ್ನು ಅವರು ಅವಲಂಬಿಸಲಾರರು. ಹಿಂದೂಗಳ ದಾನದ ಆಶಯ ಕೋಮುವಾದಿಯಾದದ್ದು ಮತ್ತು ಅದರ ಲಾಭ ದಾನಿಯ ಕೋಮಿಗೆ ಸೇರಿದವರಿಗೆ ಮಾತ್ರ ದೊರಕುವಂಥದ್ದು ಎಂಬುದು ಪ್ರಶ್ನಾತೀತ ವಿಚಾರವಾಗಿದೆ. ಹಿಂದೂ ದಾನಿಗಳು ವ್ಯಾಪಾರಿಗಳು ಅಥವಾ ಉನ್ನತ ಸ್ಥಾನಗಳಲ್ಲಿರುವ ಅಧಿಕಾರಿಗಳು. ದುರಂತ ಎಂದರೆ ಅವರು ತಮ್ಮ ಹಣವನ್ನು ಎಲ್ಲಾ ಸಾರ್ವಜನಿಕರ ಮೂಲಕ ಸಂಪಾದಿಸುತ್ತಾರೆ. ಆದರೆ ದಾನ ನೀಡುವ ಪ್ರಶ್ನೆ ಉದಯಿಸಿದಾಗ ಸಾರ್ವಜನಿಕರನ್ನು ಅವರು ಮರೆಯುತ್ತಾರೆ ಮತ್ತು ತಮ್ಮ ಸ್ವಂತ ಜಾತಿ ಮತ್ತು ಕೋಮುಗಳನ್ನು ನೆನಪಿಟ್ಟುಕೊಳ್ಳುತ್ತಾರೆ. ಪರಿಶಿಷ್ಟ ಜಾತಿಗಳಿಗೆ ಈ ಎರಡು ಆಧಾರಗಳಿಂದಲೂ ಏನೂ ದೊರಕುವುದಿಲ್ಲ ಮತ್ತು ಈ ಆಧಾರಗಳ ದಾನದತ್ತಿಗಳಿಂದ ಅವರು ನಿರ್ದಯವಾಗಿ

ಹೊರತಾಗಿದ್ದಾರೆ. ಆದ್ದರಿಂದ ಅವರು ನೆಚ್ಚಬಹುದಾದ ಏಕೈಕ ಆಧಾರ ಎಂದರೆ ಸರ್ಕಾರದ ಧನಸಹಾಯ ಮಾತ್ರ. ಪರಿಶಿಷ್ಟ ಜಾತಿಗಳ ವಿಚಾರದಲ್ಲಿರುವ ಹಾಗೆ, ತಮ್ಮದೇನೂ ತಪ್ಪಿಲ್ಲದೆ ಪ್ರಯತ್ನಿಸುವುದು ಅಪಾಯದಲ್ಲಿ ಸಿಕ್ಕಿಬಿದ್ದಿರುವ ಜನರ ವಿಮೋಚನೆಗಾಗಿ ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ ಎಂದು ಹೇಳುವ ಸಾಹಸವನ್ನು ನಾನು ಮಾಡುತ್ತಿದ್ದೇನೆ. ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಸಹಾಯ ಮಾಡಲೆಂದು ಅವರ ನ್ಯಾಯಬದ್ಧ ಹಕ್ಕುಗಳನ್ನು ಅಂಗೀಕರಿಸಲು ಮತ್ತು ಅವರು ತಮ್ಮ ಪ್ರತಿಸ್ಪರ್ಧಿಗಳೊಂದಿಗೆ ಇನ್ನೂ ಹೆಚ್ಚಿನ ಸಮಾನವಾದ ನಿಬಂಧನೆಗಳೊಡನೆ ಸ್ಪರ್ಧಿಸಲು ಅನುಕೂಲವಾಗುವಂತೆ ಸೂಕ್ತಕ್ರಮವನ್ನು ಕೈಗೊಳ್ಳುವುದು ನಿಸ್ಸಂಶಯ. ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಉತ್ತಮಗೊಳಿಸಲು ವಿಶೇಷ ಲಕ್ಷ್ಯವನ್ನು ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳುವುದರಲ್ಲಿ ಹೆಚ್ಚುಗಾರಿಕೆಯೇನೂ ಇಲ್ಲ. ಹೆಚ್ಚುಗಾರಿಕೆ ಇದೆ ಎಂದು ಭಾವಿಸುವವರು ಆಂಗ್ಲೋ–ಇಂಡಿಯನ್ ಕೋಮಿನವರ ಕ್ಷೇಮಸಾಧನೆಗಾಗಿ ಭಾರತ ಸರ್ಕಾರವು ಅನುಸರಿಸಿರುವ ಕ್ರಮಗಳನ್ನು ಪರಿಗಣಿಸಲಿ. ಕೆಲವನ್ನು ಮಾತ್ರ ನಾನು ಹೆಸರಿಸುತ್ತೇನೆ.

**(೧) ಹೆಚ್ಚಿನ ಸಂಬಳ**

ಭಾರತೀಯರಿಗಿಂತ ಆಂಗ್ಲೋ–ಇಂಡಿಯನ್ನರು ಹೆಚ್ಚು ಸಂಬಳ ಪಡೆಯುತ್ತಿದ್ದ ಕಾಲವೊಂದಿತ್ತು. ಈ ಉದಾಹರಣೆಗಾಗಿ ಯಾದೃಚ್ಛಿಕವಾಗಿ ಆಯ್ಕೆ ಮಾಡಿರುವ ಮೂರು ರೈಲ್ವೆಗಳ ಕೆಲವು ಹುದ್ದೆಗಳ ಸಂಬಳದ ಅಂಕಿಅಂಶಗಳನ್ನು ಕೊಡುವ ಈ ಮುಂದಿನ ಪಟ್ಟಿಯಿಂದ ಆಂಗ್ಲೋ ಇಂಡಿಯನ್ನರ ಮತ್ತು ಭಾರತೀಯ ಸಂಬಳಗಳಲ್ಲಿ ಇದ್ದ ವ್ಯತ್ಯಾಸ ಸ್ಪಷ್ಟವಾಗುತ್ತದೆ:

| ಹುದ್ದೆ | ಆಂಗ್ಲೋ ಇಂಡಿಯನ್ನರು | ಭಾರತೀಯರು |
|---|---|---|
| ವಾಯುವ್ಯ ರೈಲ್ವೆ | | |
| ಕಾಯಂ ಆಗಿರುವ | | |
| ಮಾರ್ಗ ತಪಾಸಣಾಧಿಕಾರಿ | ೬೨೫ – ೨೫ – ೬೭೫ | ४೭೫ – ೨೫ – ೫೦೦ |
| | ೫೫೦ – ೨೫ – ೬೦೦ | ४೦೦ – ೨೫ – ४೫೦ |
| ಚಾಲಕರು | ೨೬೦ – ೧೦ – ೨೮೦ | ಒಂದು ದಿನಕ್ಕೆ ೧ ರೂಪಾಯಿಯಿಂದ ೧ ರೂಪಾಯಿ ೧४ ಅಣೆಗಳವರೆಗೆ ವಿಶೇಷ ದರ ಒಂದು ದಿನಕ್ಕೆ ೨ ರೂಪಾಯಿಗಳಂತೆ |
| ಇ.ಐ. ರೈಲ್ವೇ | | |
| ರೈಲು ಪರೀಕ್ಷಕರು | ೩೦೦ – ೨೫ – ४೦೦ | ೧೨೦–೧೫–೧೮೦ |
| | ೨೦೦ – ೨೦ – ೨೮೦ | |
| ಜಿ.ಪಿ.ಐ. ರೈಲ್ವೇ | | |
| ಮುಖ್ಯ ರೈಲು ಪರೀಕ್ಷಕರು | ೨೭೫ | ೧೨೫ – ೨೭೫ |
| | ೩೧೫ | |
| | ೩೬೫ | |
| ಶುದ್ಧೀಕರಣ ಮೇಲ್ವಿಚಾರಕರು | ೧४೫ | ೧೧೫ |

ಸಂಬಳದಲ್ಲಿನ ಈ ವ್ಯತ್ಯಾಸ ೧೯೨೦ರ ವರೆಗೂ ಮುಂದುವರೆಯಿತು. ಅನಂತರ ಆ ವ್ಯತ್ಯಾಸವನ್ನು ರದ್ದು ಮಾಡಲಾಯಿತು. ಒಂದು ವ್ಯತ್ಯಾಸ ಮಾತ್ರ ಇನ್ನೂ ಉಳಿದಿದೆ. ಅದೆಂದರೆ ಆಂಗ್ಲೋ ಇಂಡಿಯನ್ ಕೆಲಸಗಾರನಿಗೆ ಮಾಹೆಯಾನ ೫೫ ರೂ.ಗಳ ಮೂಲವೇತನ ದೊರಕುತ್ತದೆ. ರಾಜ್ಯದ ರೈಲ್ವೇ ಇಲಾಖೆಯಲ್ಲಿ ಆತ ಒಬ್ಬ ಜವಾನನಾಗಿ ಕೆಲಸ ಮಾಡುತ್ತಿದ್ದರೂ ಆತ ಈ ಮೊತ್ತದ ಮೂಲವೇತನವನ್ನೇ ಪಡೆಯುತ್ತಾನೆ. ಆದರೆ ಒಬ್ಬ ಭಾರತೀಯ ಜವಾನ ೧೩ ರೂ.ಗಳಿಂದ ೧೫ ರೂ.ಗಳ ವರೆಗೆ ಮಾತ್ರ ಪಡೆಯುತ್ತಾನೆ. ಆಂಗ್ಲೋ ಇಂಡಿಯನ್ನರಿಗೆ ತೋರಿಸಲಾಗುತ್ತಿರುವ ಮತ್ತು ಭಾರತೀಯ ಬೊಕ್ಕಸವು ವಾರ್ಷಿಕವಾಗಿ ಭರಿಸಬೇಕಿರುವ ಈ ಪಕ್ಷಪಾತದ ವರ್ತನೆಯ ಬೆಲೆ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ೧೦,೦೦೦ ರೂ.ಗಳು ಕಂಪನಿ ಸುಪರ್ದಿನಲ್ಲಿರುವ ರೈಲ್ವೆ ಇಲಾಖೆಯಲ್ಲಿ ೭೫,೦೦೦ ರೂ.ಗಳೂ, ರಾಜ್ಯದ ಸುಪರ್ದಿನಲ್ಲಿರುವ ರೈಲ್ವೇ ಇಲಾಖೆಯಲ್ಲಿ ೭೫,೦೦೦ ರೂ.ಗಳು, ಒಟ್ಟು ರೈಲ್ವೇ ಇಲಾಖೆಯಲ್ಲಿ ೧,೫೦,೦೦೦ ರೂ.ಗಳು.

೨) ತಂತಿ ಇಲಾಖೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಗಳಿಸುವ ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಶೇಕಡ ೫೦ರಿಂದ ಶೇಕಡ ೪೦ಕ್ಕೆ ಮತ್ತು ಒಟ್ಟಾಗಿ ಶೇಕಡ ೬೬ ರಿಂದ ಶೇಕಡ ೬೦ಕ್ಕೆ ಆಗಿರುವ ಇಳಿತದಿಂದ ಆಂಗ್ಲೋ ಇಂಡಿಯನ್ನರಿಗೆ ಸ್ಪರ್ಧೆಗಳಲ್ಲಿ ವಿಜಯಿಗಳಾಗಲು ವಿಶೇಷ ರೀತಿಯಲ್ಲಿ ಸಾಧ್ಯವಾಗಿದೆ.

೬೩. ಆಂಗ್ಲೋ ಇಂಡಿಯನ್ನರಿಗೆ ಭಾರತೀಯರಿಗಿಂತಲೂ ಹೆಚ್ಚಾಗಿ ವಿಶೇಷ ಸೌಕರ್ಯಗಳನ್ನು ನೀಡುವಂತೆ ಸ್ಟ್ಯುವರ್ಟ್ ಸಮಿತಿಯು ಮಾಡಿರುವ ಇನ್ನೂ ಅನೇಕ ಶಿಫಾರಸುಗಳಿವೆ. ಆದರೆ ಅವುಗಳ ಭಾರವನ್ನು ಈ ಮನವಿಪತ್ರದಲ್ಲಿ ಹೊರಿಸಲು ನಾನು ಇಚ್ಛಿಸುವುದಿಲ್ಲ. ಆಂಗ್ಲೋ ಇಂಡಿಯನ್ನರಿಗೂ ಪರಿಶಿಷ್ಟ ಜಾತಿಗಳಿಗೂ ದಯಪಾಲಿಸಲಾಗಿರುವ ವರ್ತನೆಯಲ್ಲಿರುವ ಸ್ಪಷ್ಟ ವ್ಯತ್ಯಾಸವನ್ನು ತೋರಿಸುವುದರಲ್ಲಿ ಮಾತ್ರ ನಾನು ಆಸಕ್ತಿಯುಳ್ಳವನಾಗಿದ್ದೇನೆ. ಮೊದಲನೆಯವರ ಬಗ್ಗೆ ಇರುವ ಕಾಳಜಿ, ಎರಡನೆಯವರಿಗೆ ತೋರಿರುವ ಅಲಕ್ಷ್ಯ ಸ್ಪಷ್ಟ ವ್ಯತ್ಯಾಸದೊಂದಿಗೆ ಎದ್ದುಕಾಣುತ್ತದೆ. ಈ ವ್ಯತ್ಯಾಸವನ್ನು ಸಮರ್ಥಿಸಬಹುದಾದ ಕಾರಣ ಯಾವುದು? ನನ್ನ ಅಭಿಪ್ರಾಯದಲ್ಲಿ ಯಾವುದೂ ಇಲ್ಲ. ಕೇಂದ್ರ ಸರ್ಕಾರವು ಎಷ್ಟು ಬೇಗ ಪರಿಶಿಷ್ಟ ಜಾತಿಗಳಿಗೆ ಸಹಾಯ ಮಾಡಲು ಕಾರ್ಯೋನ್ಮುಖವಾಗುತ್ತದೋ ಅಷ್ಟು ಬೇಗ ಈ ಸರ್ಕಾರಕ್ಕೆ ನ್ಯಾಯಾಧಾರಿತ ಸರ್ಕಾರ ಎಂಬ ಹೆಗ್ಗಳಿಕೆ ದೊರಕುತ್ತದೆ. ಆಂಗ್ಲೋ ಇಂಡಿಯನ್ನರ ಉದ್ಧಾರಕ್ಕಾಗಿ ಪ್ರತಿವರ್ಷ ೧,೫೦,೦೦೦ ರೂ.ಗಳ ವೆಚ್ಚವನ್ನು ಸಂತೋಷವಾಗಿ ಭರಿಸುವ ಸರ್ಕಾರ, ಮನಸ್ಸು ಮಾಡಿದರೆ ಪರಿಶಿಷ್ಟ ಜಾತಿಗಳಿಗೋಸ್ಕರ ಕೆಲವು ಲಕ್ಷಗಳನ್ನು ವ್ಯಯಿಸಬಲ್ಲದು.

♦

# ವಿಭಾಗ – ೨
# ಅಧಿಕಾರದ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಮುಖ್ಯ ಪತ್ರ ವ್ಯವಹಾರ

೧

# ಸರ್ ಎಸ್. ಕ್ರಿಪ್ಸ್ ಅವರ ಟಿಪ್ಪಣಿ *

ಎಲ್/ಪಿ ಮತ್ತು ಜೆ/೧೦/೪ : ಎಫ್‌ಎಫ್ ೫೧-೨

## ನಿಮ್ನ ವರ್ಗಗಳನ್ನು ಪ್ರತಿನಿಧಿಸುವ ಡಾ॥ ಅಂಬೇಡ್ಕರ್ ಮತ್ತು ಶ್ರೀ ರಾಜಾ ಅವರೊಡನೆ ಸಂದರ್ಶನ

೩೦ನೇ ಮಾರ್ಚ್, ೧೯೪೨

ನಿಮ್ನ ವರ್ಗಗಳ ಪರಿಸ್ಥಿತಿಯನ್ನು, ಮುಖ್ಯವಾಗಿ ಮದರಾಸು, ಬೊಂಬಾಯಿಗಳಲ್ಲಿನ ವಿಚಾರವಾಗಿ ನನಗೆ ಹೇಳಿದ ಮೇಲೆ ಚುನಾವಣಾ ವ್ಯವಸ್ಥೆಯಲ್ಲಿ ಸಂವಿಧಾನ ಸಭೆಯಲ್ಲಿನ ಅವರ ಪ್ರಾತಿನಿಧ್ಯ ತೀರ ಕಿರಿದಾದದ್ದು ಎಂದೂ ಅವರ ಪ್ರತಿನಿಧಿಗಳೆಂದು ಹೇಳಲಾದ ಬಹಳ ಜನರು ಕಾಂಗ್ರೆಸ್ಸಿಗರು ಆಗಿರುವುದರಿಂದ ಅವರ ಸ್ಥಾನ ಬಹು ಅಶಕ್ತ ಎಂದೂ ಅವರುಗಳು ಸೂಚಿಸಿದರು. ಅವರು ತಮ್ಮ ಹಕ್ಕೊತ್ತಾಯಗಳ ಸಾರಾಂಶವನ್ನು ತಿಳಿಸಿ, ಸಂವಿಧಾನ ಸಭೆಗೆ ಅವರು ಬರಲಿದ್ದಾರೆ ಎಂದು ತಿಳಿಸಿ ಅನಂತರ ನಾವು ಅವರನ್ನು ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಪರಿಗಣಿಸುತ್ತೇವೆಯೇ ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಹೌದೆಂದು ಉತ್ತರಿಸಿದೆ. ಅವರ ರಕ್ಷಣೆಗಾಗಿ ಒಪ್ಪಂದದಲ್ಲಿ ಕಾಣಿಸಿಕೊಳ್ಳಬಹುದಾದ ಷರತ್ತುಗಳು ಎಂಥವು ಎಂದೂ ಅವರು ಕೇಳಿದರು. ಇವು ಬಹುಶಃ ಲೀಗ್ ಆಫ್ ನೇಷನ್ಸ್‌ನ ಅಲ್ಪಸಂಖ್ಯಾತರ ಒಪ್ಪಂದಗಳಲ್ಲಿ ಇರುವಂತೆ ಇರಬಹುದು ಎಂದು ನಾನು ತಿಳಿಸಿದೆ. ಈಗಾಗಲೇ ಸಂವಿಧಾನದಲ್ಲಿ ವಿಶೇಷ ಷರತ್ತುಗಳು ಇದ್ದಲ್ಲಿ ಅವುಗಳನ್ನು ಬಹುಶಃ ಒಪ್ಪಂದದಲ್ಲಿ ಪುನರಾವರ್ತಿಸಲಾಗುತ್ತದೆ ಮತ್ತು ವಿವಾದಗಳು ಉಂಟಾದ ಸಂದರ್ಭದಲ್ಲಿ ಹೊರಗಿನ ಅಧಿಕಾರಸ್ಥರಿಗೆ ವಿಷಯವನ್ನು ಒಪ್ಪಿಸಬಹುದು ಎಂಬ ಕರಾರು ಇರುತ್ತದೆ. ಅಲ್ಲಿನ ತೀರ್ಮಾನವನ್ನು ಭಾರತ ಸರ್ಕಾರ ಅನುಸರಿಸಬೇಕಾಗುತ್ತದೆ ಮತ್ತು ಹಾಗೆ ಮಾಡದಿದ್ದಲ್ಲಿ ಒಪ್ಪಂದಕ್ಕೆ ದ್ರೋಹ ಬಗೆದಂತೆ ಗಣಿಸಲಾಗುತ್ತದೆ. ಆ ನಿರ್ದಿಷ್ಟ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ವಿವೇಕಯುತ ಎಂದು ತಾನು ಪರಿಗಣಿಸುವ ಕ್ರಮವನ್ನು ಕೈಗೊಳ್ಳಬಹುದು. ಈ ರೀತಿಯ ರಕ್ಷಣೆ ಸಾಕಾಗದು ಎಂದು ಅವರಿಗೆ ನಿಸ್ಸಂದೇಹವಾಗಿ ಅನ್ನಿಸಬಹುದಾದರೂ ಸ್ವಯಂ ಸರ್ಕಾರ ಮತ್ತು ಸ್ವಯಂ ನಿರ್ಧಾರಗಳ ವಿಚಾರವನ್ನು ಭಾರತಕ್ಕೆ ಮಂಜೂರು ಮಾಡಿದ ನಂತರ ಭಾರತದ ಯಾವುದೇ ಅಲ್ಪಸಂಖ್ಯಾತರನ್ನು ರಕ್ಷಿಸಲೆಂದು ನಾವು ಮತ್ತೆ ನಡುವೆ ಪ್ರವೇಶಿಸುವ ಯಾವ ಸಾಧ್ಯತೆಯೂ ಇಲ್ಲ ಎಂದು ನಾನು ಹೇಳಿದೆ. ತುಳಿತಕ್ಕೊಳಗಾದ ವರ್ಗಗಳ ಯಾರಾದರೂ ಪ್ರತಿನಿಧಿಯನ್ನು ಕೇಂದ್ರದ ಕಾರ್ಯಕಾರಿ ಮಂಡಳಿಯಲ್ಲಿ ಸೇವೆ ಸಲ್ಲಿಸಬೇಕೆಂದು ಕೇಳುವ ಸಂಭವ ಇದೆ ಎಂದು ನಾನು ಮಧ್ಯಂತರ ಅವಧಿಯನ್ನು ಕುರಿತಂತೆ ಸೂಚಿಸಿದೆ. ಪ್ರಾಂತೀಯ ಸರ್ಕಾರಗಳನ್ನು ಮುಂದುವರೆಸುವ ವಿಚಾರವಾಗಿ ಕೆಲವು ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡುವುದು ಆ ಸಭೆಯ ಪ್ರಾರಂಭದ ಕಾರ್ಯಭಾರಗಳಲ್ಲಿ ಒಂದು ಎಂಬುದು ನಿಸ್ಸಂದೇಹ.

---

* ದಿ ಟ್ರಾನ್ಸ್‌ಫರ್ ಆಫ್ ಪವರ್ ; ನಿಕೋಲಾಸ್ ಮನ್‌ಸೆರ್ಗ್, ಪ್ರಧಾನ ಸಂಪಾದಕರು; ಪ್ರಕಾಶನ : ಘನತೆವೆತ್ತ ಮಹಾಪ್ರಭುಗಳ ಸಾಮಗ್ರಿಗಳ ಕಾರ್ಯಾಲಯ, ಲಂಡನ್; ೧೯೭೦; ಸಂಪುಟ ೧, ಸಂಚಿಕೆ ೪೪೨, ಪು. ೫೫೨-೫೩.

ಪರಿಶಿಷ್ಟರ ಜನಾಂಗದ ಪ್ರಮುಖರಲ್ಲಿ ಒಬ್ಬರಾಗಿ ತಮ್ಮನ್ನು ಕಾಣಬೇಕೆಂದೂ ವೈಸ್‌ರಾಯರು ಹೊಸ ಕಾರ್ಯಕಾರಿ ಸಮಿತಿಯನ್ನು ರೂಪಿಸುವಾಗ ಪರ್ಯಾಲೋಚನೆಯಲ್ಲಿ ತಾವು ಭಾಗವಹಿಸಲು ಅವಕಾಶ ಕೊಡಿಸಬೇಕೆಂದೂ ಹಕ್ಕೊತ್ತಾಯವನ್ನು ಮಾಡುವ ತಮ್ಮ ವಿಚಾರವನ್ನು ಶ್ರೀ ಅಂಬೇಡ್ಕರರು ವ್ಯಕ್ತಪಡಿಸಿದರು. ನನಗೂ ಇದಕ್ಕೂ ಸಂಬಂಧ ಇಲ್ಲ ಎಂದು ನಾನು ತಿಳಿಸಿದೆ; ಈ ವಿಷಯವಾಗಿ ಯಾರ ಸಲಹೆಯನ್ನು ಪಡೆಯಬೇಕು ಎಂಬುದನ್ನು ಕುರಿತಂತೆ ವೈಸ್‌ರಾಯರು ತಮ್ಮದೇ ತೀರ್ಮಾನವನ್ನು ಚಲಾಯಿಸುತ್ತಾರೆ.

ಇಡೀ ಸನ್ನಿವೇಶವನ್ನು ಕುರಿತಂತೆ ಸಹಜವಾಗಿ ಅವರು ಅಷ್ಟೇನೂ ಸಂತೋಷಗೊಳ್ಳಲಿಲ್ಲ. ಆದರೆ ಅವರು ಈ ಯೋಜನೆಯನ್ನು ವಿರೋಧಿಸುತ್ತಾರೆ ಎಂದೇನೂ ನಾನು ಅಂದುಕೊಳ್ಳಲಿಲ್ಲ. ಏಕೆಂದರೆ ಇದಕ್ಕೂ ಹೆಚ್ಚಿನ ಪ್ರಮಾಣದ ರಕ್ಷಣೆಯನ್ನು ಅವರಿಗೆ ನೀಡಬಹುದಾಗಿದ್ದ ಬೇರೆ ಯಾವ ಪರ್ಯಾಯ ವ್ಯವಸ್ಥೆಯೂ ಇರಲಿಲ್ಲ.

## ೨
## ಡಾ॥ ಅಂಬೇಡ್ಕರರು ಮತ್ತು ಶ್ರೀ ರಾಜಾ ಅವರು ಸರ್ ಎಸ್. ಕ್ರಿಪ್ಸ್* ಅವರಿಗೆ

ಸಿಎಮ್‌ಡಿ. ೬೩೫೦**

೧ನೇ ಏಪ್ರಿಲ್, ೧೯೪೨

ಭಾರತದ ಸಂವಿಧಾನದ ಬೆಳವಣಿಗೆಗೆ ಸಂಬಂಧಿಸಿದಂತೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳನ್ನು, ೩೦ನೇ ಮಾರ್ಚ್‌ರಂದು*** ನಿಮ್ಮನ್ನು ಸಂಧಿಸಿದಾಗ, ನಾವು ನಿಮ್ಮ ಮುಂದಿಟ್ಟ ಕಾರಣಗಳಿಗಾಗಿ, ತುಳಿತಕ್ಕೆ ಒಳಗಾದ ವರ್ಗಗಳು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಸಂದರ್ಶನದಲ್ಲಿ ನಾವು ನಿಮಗೆ ಹೇಳಿದೆವು. ಆಗಿನಿಂದಲೂ ಬೇರೆ ಬೇರೆ ಪ್ರಾಂತೀಯ ಮತ್ತು ಕೇಂದ್ರೀಯ ವಿಧಾನಮಂಡಲಗಳ, ಅನೇಕ ತುಳಿತಕ್ಕೆ ಒಳಗಾದ ವರ್ಗಗಳ ಪ್ರತಿನಿಧಿಗಳೊಂದಿಗೆ ನಾವು ಪರ್ಯಾಲೋಚಿಸಿದ್ದೇವೆ. ಸಲಹೆಗಳನ್ನು ಕುರಿತಂತೆ ನಾವು ನಿಮ್ಮ ಮುಂದಿಟ್ಟ ಅಭಿಪ್ರಾಯವನ್ನು ಅವರೆಲ್ಲರೂ ಸರ್ವಾನುಮತದಿಂದ ಬೆಂಬಲಿಸಿದರು.

ಅಸ್ಪೃಶ್ಯರಿಗೆ ಅತ್ಯಂತ ಹೆಚ್ಚಿನ ಅಪಾಯವನ್ನು ಮಾಡಲೆಂದು ಈ ಸಲಹೆಗಳನ್ನು ಉದ್ದೇಶಪೂರ್ವಕವಾಗಿ ಯೋಜಿಸಲಾಗಿದೆ ಎಂದು ನಮ್ಮೆಲ್ಲರಿಗೂ ಸಂಪೂರ್ಣವಾಗಿ ಮನವರಿಕೆಯಾಗಿದೆ. ಈ ಸಲಹೆಗಳು ಅಸ್ಪೃಶ್ಯರನ್ನು ಹಿಂದೂ ನಿಬಂಧನೆಗಳ ಪಕ್ಕಾ ವ್ಯವಸ್ಥೆಯ ಕೆಳಗೆ ಇರಿಸುವುದಂತೂ ಶತಸ್ಸಿದ್ದ. ಪ್ರಾಚೀನ ಭೂತಕಾಲದ ಕಪ್ಪು ದಿನಗಳಿಗೆ ನಮ್ಮನ್ನು ಕೊಂಡೊಯ್ಯುವ ಅಂಥ ಯಾವುದೇ ಪರಿಣಾಮವನ್ನು ನಾವು ಎಂದಿಗೂ ಸಹಿಸುವುದಿಲ್ಲ. ನಮ್ಮ ಜನರಿಗೆ ಅಂಥ ಯಾವುದೇ ಅನಾಹುತ ಉಂಟಾಗುವುದನ್ನು ನಮ್ಮ ಅಧೀನದಲ್ಲಿರುವ ಎಲ್ಲ ಸಾಧನಗಳ ಮೂಲಕ ಪ್ರತಿಭಟಿಸಲು ನಾವೆಲ್ಲರೂ ನಿರ್ಧರಿಸಿದ್ದೇವೆ.

---

* ಈ ಪತ್ರದ ಪೂರ್ಣ ಪಾಠವನ್ನು ಲಾರ್ಡ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ ಟೆಲಿಗ್ರಾಂ (೨೦೭ ಎಸ್.ಸಿ., ೧೮ನೇ ಏಪ್ರಿಲ್ ಎಂ.ಎಸ್.ಎಸ್., ಇ ಯು ಆರ್., ಎಫ್. ೧೨೫/೨೨) ಮೂಲಕ ರವಾನಿಸಲಾಗಿದೆ.

** ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೧, ಸಂಚಿಕೆ ೪೮೭, ಪು. ೬೦೩.

*** ಸಂಖ್ಯೆ ೪೪೨

ಘನತೆವೆತ್ತ ಮಹಾಪ್ರಭುಗಳ ಸರ್ಕಾರಕ್ಕೆ ಪರಿಶಿಷ್ಟ ಜಾತಿಗಳ ಭವಿಷ್ಯವನ್ನು ಕುರಿತಂತೆ ನಮ್ಮ ತೀವ್ರವಾದ ಆತಂಕವನ್ನು ತಲಪಿಸಬೇಕೆಂದು ನಿಮ್ಮನ್ನು ಬೇಡುತ್ತೇವೆ. ಪರಿಶಿಷ್ಟ ಜಾತಿಗಳು ತಮ್ಮ ಮುಕ್ತ ಮತ್ತು ಇಚ್ಛಾಪೂರ್ಣ ಒಪ್ಪಿಗೆಯನ್ನು ನೀಡದ ಮತ್ತು ತಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಅಗತ್ಯವಾದ ಪೂರ್ವಸಿದ್ಧತೆಯನ್ನು ತನ್ನಲ್ಲಿ ಅಂತರ್ಗತ ಮಾಡಿಕೊಳ್ಳದ ಸಂವಿಧಾನವನ್ನು ಅವರುಗಳ ಮೇಲೆ ಒತ್ತಾಯದಿಂದ ಹೇರಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವೇನಾದರೂ ತೀರ್ಮಾನಿಸಿದರೆ ಅದು ವಿಶ್ವಾಸಘಾತ ಮಾಡಿದಂತೆ ಎಂದು ತಿಳಿಯಬೇಕಾಗುತ್ತದೆ ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಕಡೆಯದಾಗಿ, ನಮ್ಮ ಪ್ರಾತಿನಿಧ್ಯವನ್ನು ಪರಿಗಣಿಸಿ ನಮಗೆ ಕರೆಕಳಿಸಿದ್ದಕ್ಕಾಗಿ ನಿಮಗೆ ವಂದನೆಗಳನ್ನು ಅರ್ಪಿಸಲು ನಾವು ಇಚ್ಛಿಸುತ್ತೇವೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅಸ್ಪೃಶ್ಯರನ್ನು ಅಲ್ಪಸಂಖ್ಯಾತ ವರ್ಗ ಎಂದು ಪರಿಗಣಿಸದೇ ಇದ್ದುದರಿಂದ ನಮ್ಮ ಮನಸ್ಸಿನಲ್ಲಿ ಯಾವುದೋ ಶಂಕೆ ಉದಿಸಿದ್ದು ಆ ವಿಷಯವಾಗಿ ನಮ್ಮ ಸ್ಥಾನದ ಸರಿಯಾದ ಸ್ವರೂಪದ ಬಗ್ಗೆ ನಿಮ್ಮನ್ನು ಕೇಳಿದೆವು.

## ೩
## ಸರ್ ಆರ್. ಲೂಮ್ಲೀ (ಬೊಂಬಾಯಿ) ಅವರಿಂದ ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಗೆ (ಉದ್ಧೃತ ಭಾಗ)*

ಎಂಎಸ್‌ಎಸ್. ಇಯುಆರ್. ಎಫ್. ೧೨೫/೫೬

ಗೋಪ್ಯ

ಸರ್ಕಾರಿ ಭವನ, ಬೊಂಬಾಯಿ
೨೪ನೇ ಏಪ್ರಿಲ್, ೧೯೪೨

ವರದಿ ಸಂಖ್ಯೆ – ೧೦೪

**೧. ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರ ನಿಯೋಗದ ಫಲಶ್ರುತಿಗೆ ಪ್ರತಿಕ್ರಿಯೆಗಳು**

ಇಲ್ಲಿ ಯಾವಾಗಲೂ ಇರುವಂತೆ, ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರು ನಡೆಸಿದ ಸಮಾಲೋಚನೆ ಭಂಗಗೊಂಡಿರುವುದಕ್ಕೆ ದೊರೆತ ಸಾರ್ವಜನಿಕ ಪ್ರತಿಕ್ರಿಯೆಯನ್ನು ಕರಾರುವಾಕ್ಕಾಗಿ ನಿಗದಿ ಮಾಡುವುದು ಸುಲಭವಲ್ಲ. ಏನೇ ಇರಲಿ, ಮುಂದೆ ನಾನು ಹೇಳಲಿರುವ ಅಪವಾದವನ್ನು ಬಿಟ್ಟರೆ, ಯಾವುದೇ ಕೆಟ್ಟದ್ದನ್ನಾಗಲೀ ಯಾವುದೇ ಕಹಿಯನ್ನಾಗಲೀ ಕಾಣಲಿಲ್ಲ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ನಿಜದಲ್ಲಿ ನಮ್ಮ ಸಲಹೆಗಳು ವಿಫಲವಾಗಿದ್ದರೂ ಅವು ಒಂದು ನಿವ್ವಳ ಲಾಭವನ್ನು ನೀಡಿವೆ, ಅದರಲ್ಲೂ ಮೊದಲಿಗೆ ನಮ್ಮ ಶಾಶ್ವತ ಎದುರಾಳಿಗಳು ಇದ್ದ ಜಾಗಗಳಲ್ಲಿ. ಈ ವಿಚಾರವಾಗಿ ನಾನು ಅಂದುಕೊಂಡಿದ್ದಂತೆ ಯೋಚಿಸಲು ಮನಸ್ಸಾಗುತ್ತಿದೆ. ನಂಬಲರ್ಹ ಎಂದು ನಾನು ಸಾಮಾನ್ಯವಾಗಿ ಭಾವಿಸಿರುವ ಮಾಹಿತಿಗಾರನೊಬ್ಬನಿಂದ ನಮ್ಮ ಮೂಲ ಉದ್ದೇಶಗಳನ್ನು ಕುರಿತಂತೆ ಸಂದೇಹಗಳನ್ನು ತೋರ್ಪಡಿಸಿದವರಲ್ಲಿ ಮೊದಲಿಗಿಂತ ಬಹು ಒಳ್ಳೆಯದಾದ ಭಾವನೆ ಕಾಣಿಸಿಕೊಂಡಿದೆ ಎಂದು ನನಗೆ ತಿಳಿದುಬಂದಿದೆ. ಆ ವಿಷಯವಾಗಿ ಅವರಲ್ಲಿ

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೧, ಸಂಚಿಕೆ ೬೮೪. ಪು. ೮೪೬–೪೭.

ಬಹುಜನರಿಗೆ ಕರಡು ಘೋಷಣೆ ತೃಪ್ತಿ ನೀಡಿದೆ. ಸ್ಥಳೀಯ ಮಾಹಿತಿ ಪಡೆದ ಕಾಂಗ್ರೆಸ್ ಅಭಿಪ್ರಾಯದ ಪ್ರಕಾರ ಅಸ್ವೀಕಾರದ ಅವಕಾಶವನ್ನು ಒಪ್ಪಿಕೊಳ್ಳಲು ಅದು ತಕ್ಕಮಟ್ಟಿಗೆ ಸಿದ್ಧವಾಗಿತ್ತು ಎಂದೂ ಭವಿಷ್ಯದ ಸಂವಿಧಾನದ ಬಗ್ಗೆ ಚರ್ಚಿಸಲೆಂದು ಮುಸ್ಲಿಮ್ ಒಪ್ಪಿಗೆಯನ್ನು ಪಡೆಯಲು, ಯಶಸ್ಸಿನ ನಿರೀಕ್ಷೆಯಿಂದ, ಸಾಧ್ಯವಿದ್ದ ಏಕೈಕ ವಿಧಾನ ಎಂಬುದಾಗಿ ಅದನ್ನು ಪರಿಗಣಿಸಿತ್ತು ಎಂದೂ ಕೇಳಿದ್ದೇನೆ. ಈ ದೃಷ್ಟಿಕೋನ ಸ್ಥಳೀಯ ಕಾಂಗ್ರೆಸ್ಸಿಗರ ಆಧಾರವನ್ನು ಪಡೆದುಕೊಳ್ಳುತ್ತದೆಂದು, ಹಾಗೆಂದು ಮುಕ್ತವಾಗಿ ಘೋಷಣೆಗೊಳ್ಳದಿದ್ದರೂ, ಹೇಳಲಾಗಿದೆ ಮತ್ತು ಎಲ್ಲಾ ರಾಷ್ಟ್ರೀಯವಾದಿ ವಾರ್ತಾ ಪತ್ರಿಕೆಗಳೂ ಈ ಸಲಹೆಗಳನ್ನು, ಮುಖ್ಯವಾಗಿ ಅವು ಭಾರತವನ್ನು ಛಿದ್ರಗೊಳಿಸುತ್ತವೆ ಎಂಬ ಕಾರಣದಿಂದ ನಿಂದಿಸುತ್ತವೆ.

ಇಲ್ಲಿ ಮುಸ್ಲಿಮರಿಂದ ಸಾರ್ವಜನಿಕ ಘೋಷಣೆಗಳು ಯಾವುವೂ ಇಲ್ಲ. ಆದರೆ ಹೆಚ್ಚಿನ ಮುಸ್ಲಿಮ್ ಪತ್ರಿಕೆಗಳು ಸಮಾಲೋಚನೆಯ ಫಲಿತಾಂಶದ ಎರಡು ಕಾರಣಗಳಿಂದ ಬಹುವಾಗಿ ತೃಪ್ತಿಗೊಂಡಂತೆ ಕಾಣುತ್ತವೆ. ಮೊದಲನೆಯದಾಗಿ, ಅವರು ಹೆದರಿದ್ದಂತೆ ಅವರಿಗೆ ಆಶಾಭಂಗವಾಗಿಲ್ಲ ಎಂಬುದರಿಂದ; ಎರಡನೆಯದಾಗಿ, ನಿಜವಾದ ತೊಡಕು ಎಂದರೆ ಕಾಂಗ್ರೆಸ್ಸಿನ ಹಠಮಾರಿತನ ಎಂಬ ಸತ್ಯವನ್ನು ಕಾಣಲೆಂದು ಬ್ರಿಟಿಷ್ ಸಕಾರದ ಕಣ್ಣು ತೆರೆಸಲು ವಿಫಲವಾಗಲು ಸಾಧ್ಯವಿರಲಿಲ್ಲ ಎಂಬುದರಿಂದ. ಸದ್ಯಕ್ಕೆ ಹೇಗೇ ಆದರೂ, ಕಾಂಗ್ರೆಸ್ಸಿಗೆ ಮತ್ತೆ ಅಧಿಕಾರ ಬರುವುದಿಲ್ಲ ಎಂಬ ಕಾರಣದಿಂದ ಸಾಮಾನ್ಯವಾಗಿ ಪಾರ್ಸಿಗಳು ನೆಮ್ಮದಿಯಿಂದಿದ್ದಾರೆ ಎಂದು ಕೇಳಿದ್ದೇನೆ.

ನಾನು ಉಲ್ಲೇಖಿಸಿದ ಅಪವಾದ ಎಂದರೆ ಅಂಬೇಡ್ಕರ್ ಅವರು. ನ್ಯಾಷನಲ್ ವಾರ್ ಫ್ರಂಟ್‌ನ ಸ್ಥಾಪನೆಯನ್ನು ಚರ್ಚಿಸಲೆಂದು ಅವರು ನನ್ನಲ್ಲಿಗೆ ಬಂದರು. ಕರಡು ಘೋಷಣೆಗೆ ಸ್ವಲ್ಪ ಮಟ್ಟಿಗೆ ಬೆಂಬಲ ನೀಡಲು, ಯಾವುದೇ ಉತ್ಸಾಹವಿಲ್ಲದೆ, ಅವರು ಒಪ್ಪಿದ್ದರೂ ಆ ವಿಚಾರವಾಗಿ ಕಹಿಯಾದ ತಮ್ಮ ಭಾವೋದ್ರೇಕವನ್ನು ನನ್ನಲ್ಲಿ ತೋಡಿಕೊಳ್ಳುವ ಅವಕಾಶವನ್ನು ಉಪಯೋಗಿಸಿಕೊಂಡರು. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳು ಮಾತ್ರ ಪರಿಗಣಿಸಲ್ಪಡಬೇಕಾದವು ಎಂದೂ ಅವರಿಬ್ಬರೂ ಸಲಹೆಗಳನ್ನು ಒಪ್ಪಿದ ಪಕ್ಷದಲ್ಲಿ ಅಂಬೇಡ್ಕರರಾಗಲೀ ನಿಮ್ನ ವರ್ಗಗಳಾಗಲೀ ಸಲಹೆಗಳನ್ನು ಕುರಿತು ಏನೆಂದುಕೊಳ್ಳುತ್ತಾರೆ ಎಂಬುದನ್ನು ಗಣಿಸಬೇಕಾದ್ದಿಲ್ಲ ಎಂದೂ ತಮಗೆ ಹೇಳಿಬಿಡಬಹುದಾಗಿದೆ ಎಂಬುದಾಗಿ ಅವರು ಹೇಳಿದರು. ತಮಗೆ ಬಹಳವಾಗಿ ಭ್ರಮನಿರಸನವಾಗಿದೆ ಎಂದೂ ಅಪಮಾನವಾಗಿದೆ ಎಂದೂ ಅವರು ಮುಚ್ಚುಮರೆಯಿಲ್ಲದೆ ಹೇಳಿದರು. ಆಗಸ್ಟ್ ಘೋಷಣೆಯ ಸಲಹೆಗಳನ್ನು ಹಿಂದಕ್ಕೆ ಪಡೆಯಲಾಯಿತು ಎಂದೂ ಐರಿಷ್ ಒಪ್ಪಂದದ ಉದಾಹರಣೆ ಅವರ ಎದುರಿಗಿರುವಾಗ, ಅಲ್ಪಸಂಖ್ಯಾತರು ಒಂದು ಒಪ್ಪಂದದ ಮುಖಾಂತರ ಸುರಕ್ಷಿತವಾಗಿರಬಲ್ಲರು ಎಂಬ ಸೂಚನೆ ಕೇವಲ ತಮಾಷೆ ಎಂದೂ ಅವರು ಹೇಳಿದರು. ಈ ರೀತಿ ಅವರಿಗೆ ಆಶಾಭಂಗವುಂಟಾದ ಪಕ್ಷದಲ್ಲಿ ಅವರೂ ಅವರ ಸ್ನೇಹಿತರೂ ಸರ್ಕಾರಕ್ಕೆ ತಮ್ಮ ಬೆಂಬಲ ನೀಡುವುದನ್ನು ಮುಂದುವರಿಸುತ್ತಾರೆಂದು ಹೇಗೆ ನಿರೀಕ್ಷಿಸಲಾಗುತ್ತದೆ ಎಂಬುದಾಗಿ ಅವರು ಪ್ರಶ್ನಿಸಿದರು. ರಾಷ್ಟ್ರೀಯ ರಕ್ಷಣಾ ಮಂಡಲಿಗೆ ಅವರು ರಾಜೀನಾಮೆ ನೀಡಲು ಯೋಚಿಸಿದ್ದರೆಂದೂ ಅನಂತರ ಸದ್ಯಕ್ಕೆ ಮುಂದುವರಿಯೋಣ ಎಂದು ತೀರ್ಮಾನಿಸಿದರೆಂದೂ ಆದರೆ ಸರ್ಕಾರಕ್ಕೆ ಬೆಂಬಲ ನೀಡುವಲ್ಲಿ ಯಾವುದೇ ಉತ್ಸಾಹವನ್ನು ಅವರಿಂದ ನಿರೀಕ್ಷಿಸಬಾರದೆಂದೂ ಹೇಳಿದರು. ನನಗೆ ಸಾಧ್ಯವಾದ ಮಟ್ಟಿಗೂ ನಾನು ಅವರೊಡನೆ ವಾದಿಸಿದೆ. ಆದರೆ ಅವರ ಮೇಲೆ ಯಾವ ಪ್ರಭಾವವನ್ನೂ ಬೀರಲಾಗಲಿಲ್ಲ. ಅಂಬೇಡ್ಕರರಲ್ಲಿ ಈ ಅಸಂತುಷ್ಟ ಮನೋಭಾವ ಬಹಳ ಕಾಲದಿಂದ – ಖಂಡಿತವಾಗಿಯೂ ನಿಮ್ಮ ಕಾರ್ಯಕಾರಿ ಸಭೆಯನ್ನು ವಿಸ್ತರಿಸದಾಗ ಅಂಬೇಡ್ಕರರು ಆಶಿಸಿದ್ದಂತೆ ಅವರನ್ನು ಸೇರಿಸಿಕೊಳ್ಳದೆ ಹೋದಾಗಿನಿಂದಲೂ ಕಾಣುತ್ತಿದೆ.

ಈ ಪ್ರಾಂತದ ಅವರ ಹಿಂಬಾಲಕರಿಂದ ಅವರ ದೃಷ್ಟಿಕೋನಕ್ಕೆ ಬೆಂಬಲವನ್ನು ಪಡೆಯುವಲ್ಲಿ ಅಂಬೇಡ್ಕರರು ಯಶಸ್ವಿಯಾಗುತ್ತಾರೆ ಎಂದು ನನ್ನ ನಿರೀಕ್ಷೆ. ಏಕೆಂದರೆ ಅವರುಗಳ ನಡುವೆ ಇರುವ ಮತ್ತು ಅವರುಗಳಿಗೋಸ್ಕರ ಯೋಚಿಸಬಲ್ಲ ವ್ಯಕ್ತಿ ಅಂಬೇಡ್ಕರರು ಮಾತ್ರವೇ. ಅಷ್ಟಾದರೂ ಈ ಅಸಂತುಷ್ಟತೆ ಬಹಳ ಮಟ್ಟಿಗೆ ವೈಯಕ್ತಿಕ ವಿಷಯ ಎಂಬುದರಲ್ಲಿ ನನಗೆ ಪೂರಾ ನಂಬಿಕೆಯಿದೆ. ನಿಮಗೆ ತಿಳಿದಂತೆ ಅವರ ಸ್ವಂತ ಆರ್ಥಿಕ ಪರಿಸ್ಥಿತಿ ಕೆಲಕಾಲದಿಂದ ಅವರನ್ನು ಬಾಧಿಸುತ್ತಿದೆ. ಹಿಂದೆ ತಮಗೆ ಸಹಾಯ ಮಾಡಿದ ಕೆಲವು ನಿರ್ದಿಷ್ಟ ವ್ಯಕ್ತಿಗಳಿಗೆ ಅಂಬೇಡ್ಕರರು ಹಣ ಕೊಡಬೇಕಾಗಿದೆ. ಅದರಲ್ಲಿ ಸ್ವಲ್ಪ ಭಾಗವನ್ನಾದರೂ ಹಿಂದಕ್ಕೆ ಕೊಡಲು ಅವರು ಶಕ್ತರಾಗಿಲ್ಲ. ಸಹಾಯ ಮಾಡಿದವರು ಆ ವಿಷಯವನ್ನು ಪ್ರಸ್ತಾಪಿಸಿದರೆ ಅಂಬೇಡ್ಕರರು ಕೊಂಚ ಒರಟಾಗಿಯೂ ವರ್ತಿಸುತ್ತಾರೆ ಎಂಬ ನನ್ನ ನಂಬಿಕೆ ಸಕಾರಣವಾಗಿದೆ. ನಿಮಗೂ ತಿಳಿದಿರುವಂತೆ ಕೆಲಕಾಲದಿಂದ ಹೈಕೋರ್ಟಿನಲ್ಲಿ ಅಥವಾ ತಮ್ಮ ಭವಿಷ್ಯಕ್ಕೆ ಬೇಕಾದ್ದನ್ನು ಒದಗಿಸಿಕೊಳ್ಳಲು ಅಗತ್ಯವಾದ ಅವಕಾಶ ಸಿಗಬಲ್ಲ ಬೇರೆಲ್ಲಿಯಾದರೂ ಸ್ಥಾನ ಗಳಿಸಿಕೊಳ್ಳಲು ಅವರು ಕಾತರರಾಗಿದ್ದಾರೆ. ತನ್ನ ಹಿಂಬಾಲಕರಿಗಾಗಿ ತಾನು ಮಾಡುತ್ತಿರುವ ಕಾರ್ಯದಲ್ಲಿ ನಿಜವಾಗಿ ಇನ್ನೇನೂ ಆಸಕ್ತಿ ಉಳಿದಿರದ ಹಾಗೂ ಬೇರೊಂದು ವಲಯವನ್ನು ತಲಪಲು ಕಾತರನಾಗಿರುವ ವ್ಯಕ್ತಿಯೊಬ್ಬನ ಭಾವನೆಯನ್ನು ಸ್ವಲ್ಪಕಾಲದಿಂದ ಅವರು ನನಗೆ ನೀಡಿದ್ದಾರೆ. ತಾವು ತುಳಿತಕ್ಕೊಳಗಾದ ವರ್ಗಕ್ಕೆ ಸೇರಿರುವುದರಿಂದ ಮತ್ತು ಆ ಕಾರಣದಿಮದ ತಮ್ಮ ಬಗ್ಗೆ ನಾವು ಕಾಳಜಿ ವಹಿಸುತ್ತಿಲ್ಲ ಹಾಗೂ ಪರಿಶಿಷ್ಟ ಜಾತಿಗಳ ಬೆಂಬಲವನ್ನು ಗಳಿಸುವುದನ್ನು ಅಗತ್ಯವೆಂದು ನಾವು ಯೋಚಿಸುತ್ತಿಲ್ಲ ಎಂಬ ಭಾವನೆ ಅವರ ಮನಸ್ಸಿನಲ್ಲಿ ದುರದೃಷ್ಟವಶಾತ್ ಮೂಡಿರುವುದರಿಂದ, ತಮ್ಮ ಸ್ವಂತ ಪರಿಸ್ಥಿತಿಯ ಕಷ್ಟಗಳನ್ನು, ಅವುಗಳ ಕಾರಣವನ್ನು ಅವರ ವಿರುದ್ಧವಾಗಿ ಕೆಲಸಮಾಡುತ್ತಿವೆ ಎಂದು ಅವರು ಭಾವಿಸುವ ಪ್ರಭಾವಗಳ ಮೇಲೆ ಆರೋಪಿಸುತ್ತಾರೆ. ನಿಮ್ಮ ಸಭೆಯು ಮತ್ತೂ ವಿಸ್ತಾರವಾಗುವ ಸಾಧ್ಯತೆ ಈಗ ಇದ್ದಲ್ಲಿ ಅವರನ್ನು ಸೇರಿಸಿಕೊಳ್ಳಬೇಕೆಂದು ನಾನು ಆಶಿಸುತ್ತೇನೆ, ವೈಯಕ್ತಿಕ ಕಾರಣದಿಂದ ಮಾತ್ರವೇ ಅಲ್ಲ, ತುಳಿತಕ್ಕೊಳಗಾದ ವರ್ಗಗಳ ಹಿತಾಸಕ್ತಿಗಳನ್ನು ನಮ್ಮ ಬಳಿ ಉಳಿಸಿಕೊಳ್ಳುವುದಕ್ಕೂ ಕೂಡ. ಅವರು ಮಹಾರರ ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ಅಸಹಕಾರಿಯಾಗಿದ್ದಾರೆ ಮತ್ತು ಮಹಾರರನ್ನು ಸೈನಿಕ ಘಟಕಗಳಲ್ಲಿ ಸೇರಿಸಿಕೊಳ್ಳಬೇಕೆಂದು ಬಹುಕಾಲದಿಂದ ವರಾತ ಮಾಡಿರುವುದಾದರೂ ಅದಕ್ಕಾಗಿ ತಮ್ಮ ಶಕ್ತಿಯನ್ನು ವ್ಯಯಿಸುವುದಿಲ್ಲ. ಅಷ್ಟಾದರೂ ಮಹಾರರು ಕೆಲಸಕ್ಕೆ ಸೇರುವುದು ಮುಂದುವರಿಯುತ್ತಿದೆ, ಆದರೆ ಅಂಬೇಡ್ಕರರು ನಿಜವಾಗಿ ಸಹಾಯ ಮಾಡಲು ಉತ್ಸುಕರಾಗಿದ್ದಲ್ಲಿ ಇರಬಹುದಾಗಿದ್ದಷ್ಟು ಚೆನ್ನಾಗಿ ಅಲ್ಲ.

ಅಂಬೇಡ್ಕರರು ವ್ಯಕ್ತಪಡಿಸಿದ ಕಹಿಯ ಹೊರತಾಗಿ ಕ್ರಿಪ್ಸ್ ಅವರ ಸಮಾಲೋಚನೆಯ ವೈಫಲ್ಯ ನಮ್ಮನ್ನು ಇನ್ನೂ ಹೆಚ್ಚು ಕೀಳಾದ ಪರಿಸ್ಥಿತಿಯಲ್ಲೇನೂ ಇರಿಸಿಲ್ಲ ಮತ್ತು ನಿವ್ವಳ ಫಲಿತಾಂಶ ಬಹುಶಃ ಸ್ವಲ್ಪ ಲಾಭದ್ದೇ ಎಂದು ನನ್ನ ಭಾವನೆ.

# ೪
# ಕ್ರಿಪ್ಸ್ ಪ್ರಸ್ತಾವಗಳು

## ಸಂವಿಧಾನಾತ್ಮಕ ಸಲಹೆಗಳ ಪತ್ರ
## ರೈಟ್ ಆನರಬಲ್ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರು ಸಿದ್ಧಪಡಿಸಿದ್ದು*

ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಈ ದೇಶದಲ್ಲೂ ಭಾರತದಲ್ಲೂ ವ್ಯಕ್ತವಾದ ಕಾತರವನ್ನು ಪರಿಗಣಿಸಿ ಭಾರತದ ಭವಿಷ್ಯಕ್ಕೆ ಸಂಬಂಧಿಸಿದಂತೆ ನೀಡಿದ ವಾಗ್ದಾನಗಳನ್ನು ಪೂರೈಸಲೆಂದು ಭಾರತದ ಸ್ವಯಂ ಸರ್ಕಾರದ ಶೀಘ್ರಸಾಧ್ಯತೆಯ ಯಥಾರ್ಥತೆಗಾಗಿ ಕರಾರುವಾಕ್ಕಾದ ಮತ್ತು ಸ್ಪಷ್ಟವಾದ ನಿಬಂಧನೆಗಳ ಮೂಲಕ ಕ್ರಮ ಕೈಗೊಳ್ಳಲು ತೀರ್ಮಾನಿಸಿದ್ದಾರೆ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸ್ವಾತಂತ್ರ್ಯ ಪಡೆದ ಒಳರಾಷ್ಟ್ರವಾಗಿ ಸಾಮಂತರಾದ ಬ್ರಿಟಿಷ್ ಚಕ್ರಾಧಿಪತ್ಯ ಮತ್ತು ಇತರ ರಾಜ್ಯಗಳ ಜೊತೆ ಸೇರಿ ಪ್ರಭುತ್ವಕ್ಕೆ ಸಮಾನ ನಿಷ್ಠೆಯನ್ನು ತೋರುವ, ಎಲ್ಲ ವಿಚಾರಗಳಲ್ಲಿ ಅದಕ್ಕೆ ಸಮಾನವಾಗಿರುವ ಮತ್ತು ಒಳನಾಡಿನ ಅಥವಾ ವಿದೇಶದ ವ್ಯವಹಾರಗಳ ಯಾವುದೇ ಪರಿಸ್ಥಿತಿಯಲ್ಲೂ ಯಾವುದೇ ರೀತಿಯಲ್ಲೂ ಅಧೀನವಾಗಿಲ್ಲದ ನವಭಾರತದ ಒಕ್ಕೂಟದ ನಿರ್ಮಾಣ ಇದರ ಉದ್ದೇಶ.

ಆದ್ದರಿಂದ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಈ ಮುಂದಿನ ಘೋಷಣೆಗಳನ್ನು ಮಾಡುತ್ತದೆ:

ಅ. ಭಾರತದಲ್ಲಿ ದ್ವೇಷವನ್ನು ಕೊನೆಗಾಣಿಸುವುದಕ್ಕಾಗಿ ಕೂಡಲೇ ಈ ಮುಂದೆ ವಿವರಿಸಿರುವಂತೆ ಹೊಸ ಸಂವಿಧಾನವನ್ನು ರಚಿಸುವ ಕಾರ್ಯಭಾರವನ್ನು ವಹಿಸಿಕೊಳ್ಳುವ ಚುನಾಯಿತ ಮಂಡಳಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು.

ಆ. ಭಾರತದ ರಾಜ್ಯಗಳು ಸಂವಿಧಾನವನ್ನು ರಚಿಸುವ ಮಂಡಲಿಯಲ್ಲಿ ಭಾಗವಹಿಸುವಂತೆ ಕೆಳಗೆ ಸೂಚಿಸಿರುವ ರೀತಿಗಳಲ್ಲಿ ಅವಕಾಶ ಮಾಡಲಾಗುತ್ತದೆ.

ಇ. ಈ ಮುಂದಿನ ಷರತ್ತುಗಳಿಗೆ ಬದ್ಧವಾಗಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಹಾಗೆ ರಚಿಸಿದ ಸಂವಿಧಾನವನ್ನು ಸಾವಕಾಶ ಮಾಡದೆ ಒಪ್ಪಿ ನೆರವೇರಿಸುವ ಭರವಸೆಯನ್ನು ನೀಡುತ್ತದೆ.

(೧) ಬ್ರಿಟಿಷ್ ಭಾರತದ ಯಾವುದೇ ಪ್ರಾಂತ ಹೊಸ ಸಂವಿಧಾನವನ್ನು ಒಪ್ಪಲು ಸಿದ್ಧವಾಗಿಲ್ಲದೆ ಇದ್ದಲ್ಲಿ ಮತ್ತು ಅದರ ಈಗಿನ ಸಾಂವಿಧಾನಿಕ ಪರಿಸ್ಥಿತಿಯನ್ನು ಉಳಿಸಿಕೊಳ್ಳಲು ಇಚ್ಛಿಸಿದಲ್ಲಿ, ಅಂಥ ಸೇರ್ಪಡೆಯಾಗದ ಪ್ರಾಂತಗಳೊಡನೆ ಮುಂದೆ ಬಯಸಿದಲ್ಲಿ ಸೇರಿಕೊಳ್ಳುವ ಅವಕಾಶ ಪಡೆದಿರುವ ಹಕ್ಕು. ಅವರು ಹಾಗೆ ಆಶಿಸಿದಲ್ಲಿ, ಕ್ರಮಬದ್ಧವಾಗಿ ರೂಪುಗೊಂಡ ಹಾಗೂ ಕೆಳಗಿನ ವಿಚಾರಗಳಿಗೆ ಸದೃಶವಾಗಿರುವಂತೆ ಭಾರತದ ಒಕ್ಕೂಟ ಎಂದು ಹೊಸ ಸಂವಿಧಾನವನ್ನು ಒಪ್ಪಲು ಮತ್ತು ಅವರುಗಳಿಗೆ ಅದೇ ಬಗೆಯ ಪೂರ್ಣ ಸ್ಥಾನಮಾನಗಳನ್ನು ಕೊಡಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಸಿದ್ಧವಾಗಿರುತ್ತದೆ.

(೨) ಒಪ್ಪಂದಕ್ಕೆ ಸಹಿ ಹಾಕಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಮತ್ತು ಸಂವಿಧಾನವನ್ನು

* ನಿಮ್ನ ವರ್ಗಗಳ ಸಮ್ಮೇಳನಗಳ ವರದಿ (ಡಿಪ್ರೆಸ್ಡ್ ಕ್ಲಾಸಸ್ ಕಾನ್‌ಫರೆನ್ಸ್ ರಿಪೋರ್ಟ್); ನಾಗಪುರ ಅಧಿವೇಶನ, ಜುಲೈ ೧೮, ೧೯ ಮತ್ತು ೨೦, ೧೯೪೨, ಈ ದಿನಗಳಂದು ನಡೆದದ್ದು, ಪು. ೯೮–೯೯.

ರೂಪಿಸುವ ಮಂಡಳಿಗಳು ಸಮಾಲೋಚನೆ ಮಾಡುತ್ತವೆ. ಈ ಒಪ್ಪಂದವು ಬ್ರಿಟಿಷ್ ಭಾರತದ ಪ್ರಜೆಗಳಿಗೆ ಜವಾಬ್ದಾರಿಯನ್ನು ಪೂರ್ಣವಾಗಿ ವರ್ಗಾವಣೆ ಮಾಡುವುದರಿಂದ ಹುಟ್ಟುವ ಎಲ್ಲ ಅಗತ್ಯ ವಿಚಾರಗಳನ್ನೂ ಒಳಗೊಳ್ಳುತ್ತದೆ; ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆಗಾಗಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ನೀಡಿರುವ ಭರವಸೆಗಳೊಡನೆ ಸಮಂಜಸವಾಗಿರುವಂತೆ ಅದು ಅವಕಾಶ ಮಾಡಿಕೊಡುತ್ತದೆ. ಆದರೆ ಬ್ರಿಟಿಷ್ ಕಾಮನ್‌ವೆಲ್ತ್‌ನ ಮಿಕ್ಕ ಸದಸ್ಯರಾಜ್ಯಗಳೊಡನೆ ಭವಿಷ್ಯದಲ್ಲಿನ ಅದರ ಸಂಬಂಧವನ್ನು ತೀರ್ಮಾನಿಸುವಲ್ಲಿ ಭಾರತ ಒಕ್ಕೂಟದ ಅಧಿಕಾರದ ಮೇಲೆ ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ. ಭಾರತದ ರಾಜ್ಯವೊಂದು ಸಂವಿಧಾನವನ್ನು ನೆಚ್ಚಿಕೊಂಡಿರಲು ಚುನಾವಣೆ ನಡೆಸಲಿ, ಬಿಡಲಿ ಹೊಸ ಸನ್ನಿವೇಶದಲ್ಲಿ ಹೊಂದಾಣಿಕೆ ಅವಶ್ಯವಾಗಿದ್ದರೆ ಆ ಒಪ್ಪಂದವನ್ನು ಪರಿಷ್ಕರಿಸಲು ಸಮಾಲೋಚನೆ ಅಗತ್ಯವಾಗುತ್ತದೆ.

ಈ. ಭಾರತೀಯ ಅಭಿಪ್ರಾಯದಲ್ಲಿ ಪ್ರಮುಖ ಕೋಮುಗಳ ಮುಖ್ಯಸ್ಥರು ಬೇರೊಂದು ಸ್ವರೂಪವನ್ನು ವೈರತ್ವ ಕೊನೆಗಾಣುವ ಮೊದಲು ಒಪ್ಪದಿದ್ದಲ್ಲಿ, ಸಂವಿಧಾನವನ್ನು ರಚಿಸುವ ಮಂಡಲಿಯು ಈ ಮುಂದಿನಂತೆ ರೂಪುಗೊಳ್ಳುತ್ತದೆ. ದ್ವೇಷ ಕೊನೆಗೊಳ್ಳುತ್ತಿದ್ದ ಹಾಗೆಯೇ ಮತ್ತು ಅಗತ್ಯವಾಗಿರುವ ಪ್ರಾಂತೀಯ ಚುನಾವಣೆಗಳ ಫಲಿತಾಂಶ ತಿಳಿಯುತ್ತಿದ್ದಂತೆಯೇ ಪ್ರಾಂತೀಯ ವಿಧಾನ ಮಂಡಲದ ವಿಧಾನಸಭೆಗಳ ಇಡೀ ಸದಸ್ಯತ್ವ ಏಕಮತದಾನದ ಸಂಸ್ಥೆಯಾಗಿ ಪ್ರಮಾಣಾನುಗುಣವಾದ ಪ್ರಾತಿನಿಧ್ಯದ ವ್ಯವಸ್ಥೆಯ ಪ್ರಕಾರ ಸಂವಿಧಾನವನ್ನು ರಚಿಸುವ ಮಂಡಲಿಗೆ ಚುನಾವಣೆಗಾಗಿ ಮುಂದುವರಿಯುತ್ತದೆ. ಎಲ್ಲಾ ಮತದಾನ ಸಂಸ್ಥೆಗಳ ಹತ್ತನೇ ಒಂದು ಭಾಗದಷ್ಟು ಸದಸ್ಯರ ಸಂಖ್ಯೆಯನ್ನು ಹೊಸ ಮಂಡಲ ಹೊಂದಿರುತ್ತದೆ. ಒಟ್ಟಿನಲ್ಲಿ ಬ್ರಿಟಿಷ್ ಭಾರತದ ಪ್ರತಿನಿಧಿಗಳ ವಿಚಾರದಲ್ಲಿಯಂತೆ ಮತ್ತು ಬ್ರಿಟಿಷ್ ಭಾರತದ ಸದಸ್ಯರಿಗೆ ಇರುವ ಅಧಿಕಾರದಂತೆ ಭಾರತದ ರಾಜ್ಯಗಳು ಅವರ ಒಟ್ಟು ಸಂಖ್ಯೆಗೆ ಹೋಲಿಸಿದಲ್ಲಿ ಅದೇ ಪ್ರಮಾಣದಲ್ಲಿ ಪ್ರತಿನಿಧಿಗಳನ್ನು ನೇಮಿಸಲು ಅವಕಾಶವನ್ನು ಪಡೆಯುತ್ತವೆ.

ಉ. ಭಾರತ ಈಗ ಎದುರಿಸುತ್ತಿರುವ ಸಂದಿಗ್ಧ ಸಮಯದಲ್ಲಿ ಹೊಸ ಸಂವಿಧಾನವು ರೂಪುಗೊಳ್ಳುವವರೆಗೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅನಿವಾರ್ಯವಾಗಿ ಭಾರತದ ಹೊಣೆಯನ್ನು ಹೊರಬೇಕಾಗಿದೆ ಮತ್ತು ಜಾಗತಿಕ ಯುದ್ಧದ ಪ್ರಯತ್ನದ ಭಾಗವಾಗಿ ಹತೋಟಿ ಮತ್ತು ಮಾರ್ಗದರ್ಶನಗಳನ್ನು ಸಾಧಿಸಬೇಕಾಗಿದೆ. ಆದರೆ ಭಾರತದ ಇಡೀ ಸೇನೆ, ನೀತಿ ಮತ್ತು ಸರಕು ಸಂಪನ್ಮೂಲಗಳ ಕಾರ್ಯಭಾರವನ್ನು ಸಂಘಟಿಸುವುದು ಭಾರತೀಯರ ಸಹಕಾರದಿಂದ ಮಾಡಬೇಕಾದ ಭಾರತ ಸರ್ಕಾರದ ಕರ್ತವ್ಯವಾಗಿದೆ. ಭಾರತ ದೇಶದ, ಕಾಮನ್‌ವೆಲ್ತ್ ಮತ್ತು ಯುನೈಟೆಡ್ ರಾಷ್ಟ್ರಗಳ ಮಂತ್ರಾಲೋಚನೆಯಲ್ಲಿ ಭಾರತೀಯರ ಪ್ರಮುಖ ವರ್ಗಗಳ ಮುಖಂಡರು ತಕ್ಷಣವೇ ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಆಶಿಸುತ್ತದೆ ಮತ್ತು ಆಹ್ವಾನಿಸುತ್ತದೆ. ಭಾರತದ ಭವಿಷ್ಯದ ಸ್ವಾತಂತ್ರ್ಯಕ್ಕಾಗಿ ಅಗತ್ಯವಿರುವ ಚೈತನ್ಯಪೂರ್ಣವಾದ ಕಾರ್ಯಭಾರವನ್ನು ವಹಿಸಿಕೊಳ್ಳುವುದಕ್ಕಾಗಿ ತಮ್ಮ ಸಕ್ರಿಯ ಹಾಗೂ ರಚನಾತ್ಮಕ ಸಹಾಯವನ್ನು ನೀಡಲು ಈ ವಿಧದಲ್ಲಿ ಅವರು ಶಕ್ತರಾಗುತ್ತಾರೆ.

ঔ

# ಕ್ರಿಪ್ಸ್ ಅವರ ಪ್ರಸ್ತಾವಗಳನ್ನು ಕುರಿತು* ಡಾ॥ ಅಂಬೇಡ್ಕರ್ ಅವರ ಹೇಳಿಕೆ

ವಿಧಾನಸಭಾ ಸದಸ್ಯರೂ ನಿಮ್ನ ವರ್ಗಗಳ ಮುಖಂಡರೂ ಆದ ಡಾ॥ ಬಿ.ಆರ್. ಅಂಬೇಡ್ಕರರು ವೃತ್ತಪತ್ರಿಕೆಗಳಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದು :

"ಯುದ್ಧಕಾಲದ ಮಂತ್ರಿಮಂಡಲದ ಸಲಹೆಗಳು ಘನತೆವೆತ್ತ ಮಹಾಪ್ರಭುಗಳ ಸರ್ಕಾರದಲ್ಲಿ ಉಂಟಾದ ಅನಿರೀಕ್ಷಿತ ತಿರುಗುಮುರುಗನ್ನು ತೋರುತ್ತವೆ. ಅಲ್ಪಸಂಖ್ಯಾತರ ಹಕ್ಕುಗಳ ಆಕ್ರಮಣ ಎಂಬುದಾಗಿ ತಾವೇ ನಿರಾಕರಿಸಿದ್ದ ಈ ಸಲಹೆಗಳನ್ನು ಮಂಡಿಸಿರುವುದು ಅವರು ಬಲವನ್ನು ಪಡೆಯಬೇಕೆಂದು ಯುಕ್ತವಾದದ್ದನ್ನು ಪೂರ್ಣವಾಗಿ ಬಿಟ್ಟು ಕೊಟ್ಟ ಲಕ್ಷಣವಾಗಿದೆ. ಇದು ಮ್ಯೂನಿಚ್ ಮನೋವೃತ್ತಿ. ಅಂದರೆ ಸ್ವರಕ್ಷಣೆಗಾಗಿ ಪರರನ್ನು ತ್ಯಾಗಕ್ಕೆ ಒಳಪಡಿಸುವುದು. ಈ ಮನೋವೃತ್ತಿ ಈ ಸಲಹೆಗಳ ಮೇಲೆ ದೊಡ್ಡದಾಗಿ ಬರೆಯಲ್ಪಟ್ಟಿದೆ. ಭಾರತದ ಸಾಂವಿಧಾನಿಕ ಮುನ್ನಡೆಗೆ ಸಂಬಂಧಿಸಿದಂತೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳನ್ನು ಸ್ವಾಗತಿಸಿಲ್ಲ ಎಂದೂ ಮತ್ತು ಆ ಮೂಲಕ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರ ನಿಯೋಗ ವಿಫಲಗೊಳ್ಳಲು ಕಾರಣ ಎಂದೂ ಅಮೆರಿಕದ ಮತ್ತು ಇಂಗ್ಲೆಂಡಿನ ಜನತೆ ಭಾರತೀಯರ ಮೇಲೆ ಕೋಪಿಸಿಕೊಂಡಿರುವುದಾಗಿ ವರದಿಯಾಗಿದೆ. ಅಮೆರಿಕನ್ನರ ಮನೋಭಾವವನ್ನು ಕ್ಷಮಿಸಬಹುದು. ಆದರೆ ಇಂಗ್ಲೆಂಡಿನ ಜನತೆ ಮತ್ತು ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರಿಗೆ ನಿಶ್ಚಯವಾಗಿ ಇನ್ನೂ ಹೆಚ್ಚಿನ ತಿಳಿವಳಿಕೆಯಿರಬೇಕಿತ್ತು. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅತ್ಯಂತ ಶ್ರೇಷ್ಠ ಎಂಬುದಾಗಿ ಈಗ ಮಂಡಿಸಿರುವ ಸಲಹೆಗಳನ್ನು ಇದೇ ಸರ್ಕಾರವೇ ಕೆಲವೇ ತಿಂಗಳ ಮೊದಲು ಅತ್ಯಂತ ನಿಕೃಷ್ಟ ಎಂದು ನಿರಾಕರಿಸಿದ ಮತ್ತು ಖಂಡಿಸಿದ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಅದನ್ನು ಅರ್ಥಮಾಡಿಕೊಂಡವರು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಈಗ ಕಾರ್ಯೋನ್ಮುಖವಾಗಲು ಧಾವಿಸುತ್ತಿರುವ ಸಂವಿಧಾನಾತ್ಮಕ ಬೆಳವಣಿಗೆಯ ಇಡೀ ವ್ಯವಹಾರದ ಅತ್ಯಂತ ಅವಲಕ್ಷಣವಾದ ಅಂಶ ಇದು ಎಂದು ಹೇಳದಿರಲು ಸಾಧ್ಯವಿಲ್ಲ.

**ಸಲಹೆಗಳನ್ನು ಮೂರು ಭಾಗಗಳನ್ನಾಗಿ ಮಾಡಬಹುದು :**

(೧) ಭಾರತದ ಸಂವಿಧಾನವನ್ನು ರೂಪಿಸುವ ಹಕ್ಕು ಹೊಂದಿರುವ ಸಂವಿಧಾನ ರಚನಾ ಸಭೆಯೊಂದಿರಬೇಕು. ಬಹುಮತದಿಂದ ಆಯ್ಕೆ ಮಾಡಿ ತೀರ್ಮಾನಿಸಲಾಗುವಂತಹ ಸಂವಿಧಾನವನ್ನು ರೂಪಿಸಲು ಈ ಸಭೆಗೆ ಸಂಪೂರ್ಣ ಅಧಿಕಾರ ಬೇಕು.

(೨) ಈ ಹೊಸ ಸಂವಿಧಾನದಲ್ಲಿ ಕೇವಲ ಅದಕ್ಕೆ ಅಧೀನವಾಗಿರಲು ಇಚ್ಛಿಸುವ ಪ್ರಾಂತಗಳು ಮಾತ್ರವೇ ಹೊರತು ಭಾರತದ ಈಗಿನ ಎಲ್ಲ ಪ್ರಾಂತಗಳು ಇರಬಾರದು. ಇದಕ್ಕಾಗಿ ಹೊಸ ಸಂವಿಧಾನವನ್ನು ಸೇರಿಕೊಳ್ಳಬೇಕೇ ಅಥವಾ ಅದರಿಂದ ಹೊರಗುಳಿಯಬೇಕೇ ಎಂದು ನಿರ್ಣಯಿಸುವ ಹಕ್ಕನ್ನು ಪ್ರಾಂತಗಳಿಗೆ ಕೊಡಲಾಗಿದೆ. ಇದನ್ನು ಜನಮತದಿಂದ

---

* ನಿಮ್ನ ವರ್ಗಗಳ ಸಮ್ಮೇಳನಗಳ (ಡಿಪ್ರೆಸ್ಡ್ ಕ್ಲಾಸಸ್ ಕಾನ್ಫರೆನ್ಸ್) ವರದಿ; ಜುಲೈ ೧೮, ೧೯ ಮತ್ತು ೨೦, ೧೯೪೨, ಈ ದಿನಗಳಂದು ನಡೆದದ್ದು, ನಾಗಪುರ ಅಧಿವೇಶನ; ಪು. ೧೦೦ – ೧೦೬.

ನಿರ್ಧರಿಸಬೇಕಾಗಿದೆ. ಈ ಶಾಸನದಲ್ಲಿ ಕೇವಲ ಬಹುಮತವೊಂದೇ ಈ ವಿವಾದಾಂಶವನ್ನು ತೀರ್ಮಾನಿಸಲು ಸಾಕೆಂದು ಘೋಷಿಸಲಾಗಿದೆ.

(೩) ಬ್ರಿಟಿಷ್ ಸರ್ಕಾರದೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಸಂವಿಧಾನ ಸಭೆಯನ್ನು ಕೋರಲಾಗುತ್ತದೆ. ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಭದ್ರತೆ ಮತ್ತು ರಕ್ಷಣೆಗಳಿಗಾಗಿ ಈ ಒಪ್ಪಂದದಲ್ಲಿ ಅವಕಾಶವಿರಬೇಕು. ಅಂಥ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಬ್ರಿಟಿಷ್ ಸರ್ಕಾರವು ತನ್ನ ಪರಮಾಧಿಕಾರವನ್ನು ಹಿಂತೆಗೆದುಕೊಳ್ಳಬೇಕಾಗುತ್ತದೆ ಮತ್ತು ಸಂವಿಧಾನ ಸಭೆಯು ರೂಪಿಸಿದ ಸಂವಿಧಾನವು ಜಾರಿಗೆ ಬರುತ್ತದೆ.

ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಯೋಜನೆಯ ಸ್ಥೂಲ ರೂಪರೇಖೆ ಇದು. ಸಂವಿಧಾನ ಸಭೆಯನ್ನು ಕುರಿತ ಈ ಸಲಹೆ ಹೊಸ ಸಲಹೆಯೇನೂ ಅಲ್ಲ. ಯುದ್ಧ ಪ್ರಾರಂಭವಾದಾಗ ಕಾಂಗ್ರೆಸ್ ಈ ಸಲಹೆಯನ್ನು ಮಂಡಿಸಿತ್ತು. ಮುಖ್ಯವಾದ ವಿಷಯವೆಂದರೆ ಕಾಂಗ್ರೆಸ್‌ನ ಈ ಸಲಹೆಯನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರ ನಿರಾಕರಿಸಿತು. ಸಂವಿಧಾನ ಸಭೆಯನ್ನು ಕುರಿತು ಪ್ರಜಾ ಪ್ರತಿನಿಧಿ ಸಭೆಯಲ್ಲಿ ೧೯೪೦ರ ಆಗಸ್ಟ್ ೧೪ರಂದು ಶ್ರೀ ಅಮೆರಿ ಅವರು ಹೇಳಿದ್ದು ಇದು :

"..............ಭಾರತದ ಅತ್ಯಂತ ಸಮರ್ಥವಾದ ರಾಜಕೀಯ ಆಡಳಿತ ವ್ಯವಸ್ಥೆಯಾಗಿರುವ ಅಸಾಧಾರಣ ಸಂಸ್ಥೆಯೊಂದನ್ನು .......... ಕಾಂಗ್ರೆಸ್ ಮುಖಂಡರು ಕಟ್ಟಿದ್ದಾರೆ. ಅವರು ಯಶಸ್ವಿಗಳೇನಾದರೂ ಆಗಿದ್ದಿದ್ದರೆ, ಕಾಂಗ್ರೆಸ್ಸಿಗೆ ಅದು ಸಾಧ್ಯವಾಗಿದ್ದಿದ್ದರೆ, ತಾನು ಹೇಳುವುದನ್ನು ನಿಜವಾಗಿಯೂ ಒತ್ತಿಹೇಳಬಹುದಾಗಿದ್ದಿದ್ದರೆ, ಭಾರತದ ರಾಜಕೀಯ ಜೀವನದ ಮುಖ್ಯ ವ್ಯಕ್ತಿಗಳ ಹಕ್ಕೊತ್ತಾಯಗಳು ಆಗ ಎಷ್ಟೇ ಹೆಚ್ಚೆನಿಸಿದ್ದರೂ ನಮ್ಮ ಸಮಸ್ಯೆ ಇಂದಿನ ಸ್ಥಿತಿಗಿಂತ ಅನೇಕ ವಿಧಗಳಲ್ಲಿ ಸುಲಭವಾಗಿರುತ್ತಿತ್ತು. ಬ್ರಿಟಿಷ್ ಭಾರತದಲ್ಲಿ ಅವರದು ಸಂಖ್ಯಾದೃಷ್ಟಿಯಿಂದ ಅತ್ಯಂತ ದೊಡ್ಡದಾದ ಏಕೈಕ ಪಕ್ಷ ಎಂಬುದು ನಿಜ. ಆದರೆ ಭಾರತಕ್ಕಾಗಿ ಮಾತಾಡುವ ಅವರ ಹಕ್ಕು ಭಾರತದ ಸಂಕೀರ್ಣ ರಾಜಕೀಯ ಜೀವನದ ಬಹು ಮುಖ್ಯ ವ್ಯಕ್ತಿಗಳಿಂದ ನೇರವಾಗಿ ನಿರಾಕರಿಸಲ್ಪಟ್ಟಿದೆ ಎಂಬುದು ವಾಸ್ತವ. ಮಿಕ್ಕ ಇತರರು ತಾವು ಕೇವಲ ಸಂಖ್ಯಾದೃಷ್ಟಿಯ ಅಲ್ಪಸಂಖ್ಯಾತರಲ್ಲವೆಂಬ ಆದರೆ ಭವಿಷ್ಯದ ಯಾವುದೇ ಭಾರತೀಯ ಕಾರ್ಯನೀತಿಯಲ್ಲಿ ಸಂವಿಧಾನದ ಬೇರೆಯೇ ಘಟಕಗಳೆಂಬ ತಮ್ಮ ಹಕ್ಕನ್ನು ಪರಿಗಣಿಸಬೇಕೆಂದು ಕಂಠೋಕ್ತವಾಗಿ ಹೇಳುತ್ತಾರೆ. ಇಂಥವರಲ್ಲಿ ಅತಿ ಮುಖ್ಯರು ಮಹತ್ತ್ವದ ಮುಸ್ಲಿಮ್ ಕೋಮಿನಲ್ಲಿದ್ದಾರೆ. ಭೌಗೋಳಿಕವಾದ ಚುನಾವಣಾ ಕ್ಷೇತ್ರಗಳಲ್ಲಿ ಬಹುಮತದ ಓಟುಗಳಿಂದ ಚುನಾಯಿತವಾದ ಸಂವಿಧಾನ ಸಭೆ ರೂಪಿಸಿದ ಸಂವಿಧಾನದಿಂದ ಅವರಿಗೆ ಆಗಬೇಕಾದದ್ದೇನೂ ಇಲ್ಲ. ಯಾವುದೇ ಸಾಂವಿಧಾನಿಕ ಚರ್ಚೆಗಳಲ್ಲಿ ತಮ್ಮ ಅಸ್ತಿತ್ವವು ಪರಿಗಣಿತವಾಗಬೇಕೆಂದು ತಮ್ಮ ಹಕ್ಕಿಗಾಗಿ ಅವರು ಹೋರಾಡುತ್ತಿದ್ದಾರೆ ಮತ್ತು ಕೇವಲ ಸಂಖ್ಯಾದೃಷ್ಟಿಯ ಬಹುಸಂಖ್ಯಾತರೆಂಬುದಕ್ಕೆ ಬದಲು ತಮ್ಮ ಪರಿಸ್ಥಿತಿಯನ್ನು ಪ್ರತ್ಯೇಕ ಅಸ್ತಿತ್ವವುಳ್ಳದ್ದು ಎಂದು ನಿಜದಲ್ಲಿ ಯಾವ ಸಂವಿಧಾನದ ಸ್ವರೂಪದಿಂದ ಗಳಿಸಿಕೊಳ್ಳಬಹುದೋ ಅಂಥ ಸಂವಿಧಾನವನ್ನು ಮಾತ್ರ ಒಪ್ಪಿಕೊಳ್ಳಲು ಅವರು ನಿಶ್ಚಯಿಸಿದ್ದಾರೆ. ಪರಿಶಿಷ್ಟ ಜಾತಿಗಳೆಂದು ಹೆಸರಾಗಿರುವ ಮಹತ್ತ್ವದ ಸಮುದಾಯಕ್ಕೂ ಇದೇ ವಿಚಾರ ಅನ್ವಯವಾಗುತ್ತದೆ. ಶ್ರೀ ಗಾಂಧಿಯವರು ತಮಗಾಗಿ ಮನಃಪೂರ್ವಕ ಪ್ರಯತ್ನವನ್ನು ಮಾಡಿದ್ದಾಗ್ಯೂ "ತಮ್ಮ ಕೋಮು, ಕಾಂಗ್ರೆಸ್ ಪ್ರತಿನಿಧಿಸುವ ಹಿಂದೂ ಕೋಮಿನ ಮುಖ್ಯ ಸಮುದಾಯದಿಂದ ಹೊರಗಿದೆ ಎಂದು ಅವರು ಭಾವಿಸುತ್ತಾರೆ". ೧೯೪೦ ಆಗಸ್ಟ್ ೮ರಂದು, ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಪರವಾಗಿ ಈ ಮುಂದಿನ ವಾಗ್ದಾನವನ್ನು ಅಲ್ಪಸಂಖ್ಯಾತರಿಗೆ ನೀಡಿದ ವೈಸ್‌ರಾಯ್‌ರವರ ಪ್ರಕಟಣೆಯನ್ನು ಶ್ರೀ ಅಮೆರಿಯವರು ವಿಶದಪಡಿಸಿದರು.

ವೈಸ್‌ರಾಯ್‌ರವರು ಹೀಗೆ ನುಡಿದರು, "ಎರಡು ಮುಖ್ಯ ಅಂಶಗಳು ಇಲ್ಲಿ ಹೊರಹೊಮ್ಮಿವೆ. ಈಗ ನಾನು ಈ ಎರಡು ಅಂಶಗಳನ್ನು ಕುರಿತು ಅವುಗಳ ಪರಿಸ್ಥಿತಿಯನ್ನು ಸ್ಫುಟವಾಗಿಸಬೇಕೆಂದು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಆಶಿಸುತ್ತದೆ. ಭವಿಷ್ಯದಲ್ಲಿನ ಯಾವುದೇ ಸಂವಿಧಾನಾತ್ಮಕ ಕ್ರಮಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಪರಿಸ್ಥಿತಿಯನ್ನು ಕುರಿತದ್ದು ಮೊದಲನೆಯದು...........ಅವರು (ಘನತೆವೆತ್ತ ಮಹಾಪ್ರಭುಗಳ ಸರ್ಕಾರವು) ಭಾರತದ ಶಾಂತಿ ಮತ್ತು ಕ್ಷೇಮಕ್ಕಾಗಿ ತಮ್ಮ ಸದ್ಯದ ಹೊಣೆಗಳ ವರ್ಗಾವಣೆಯನ್ನು ಭಾರತದ ರಾಜಕೀಯ ಜೀವನದ ಯಾವುದೇ ವ್ಯವಸ್ಥೆಯ ಅಧಿಕಾರಕ್ಕೆ ನೀಡುವುದನ್ನು ಅವಲೋಕಿಸಲು ಆಗಲಿಲ್ಲ ಎಂಬುದನ್ನೇನೂ ಹೇಳಬೇಕಿಲ್ಲ. ಇವರುಗಳಿಗೆ ಅಂಥ ವ್ಯಕ್ತಿಗಳ ಬಲಾತ್ಕಾರದ ಪರವಾಗಿಯೂ ಇರಲಾಗಿಲ್ಲ ಮತ್ತು ಅಂಥ ಸರ್ಕಾರಕ್ಕೆ ಶರಣಾಗುವುದೂ ಸಾಧ್ಯವಾಗಿಲ್ಲ" ಶ್ರೀ ಅಮೆರಿಯವರು ೧೯೪೧ರ ಏಪ್ರಿಲ್ ೨೨ರಂದು ಪುನಃ ಸಂವಿಧಾನ ಸಭೆಯ ಹಕ್ಕೊತ್ತಾಯವನ್ನು ಉಲ್ಲೇಖಿಸಿದರು ಮತ್ತು ಈ ಮುಂದಿನ ಮಾತುಗಳಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು, "ಭಾರತದ ಭವಿಷ್ಯದ ಸಂವಿಧಾನವು ಭಾರತೀಯರಿಂದಲೇ ತಮಗೋಸ್ಕರವಾಗಿಯೇ ಯೋಜಿಸಲ್ಪಡಬೇಕೇ ಹೊರತು ಬ್ರಿಟಿಷ್ ಸರ್ಕಾರದಿಂದಲ್ಲ. ಭಾರತದ ಭವಿಷ್ಯದ ಸಂವಿಧಾನ ಭಾರತದ ವಿದ್ಯಮಾನ ಮತ್ತು ಭಾರತದ ಆವಶ್ಯಕತೆಗಳಿಗೆ ತಕ್ಕಂತೆ ಭಾರತದ ಭಾವನೆಗಳೊಡನೆ ಸಾಮರಸ್ಯದಿಂದ ರೂಪಿಸಲ್ಪಟ್ಟ ಭಾರತೀಯ ಸಂವಿಧಾನವಾಗಿರಬೇಕಾದ್ದು ಅಗತ್ಯ, ಏಕೈಕ ಅಗತ್ಯ ನಿಯಮ ಎಂದರೆ ಸಂವಿಧಾನವೂ ಮತ್ತು ಅದನ್ನು ರೂಪಿಸುವ ಮಂಡಲಿಯೂ ಭಾರತದ ರಾಜಕೀಯ ಜೀವನದ ಮುಖ್ಯ ವ್ಯಕ್ತಿಗಳ ಒಪ್ಪಿಗೆಯ ಫಲವಾಗಿರಬೇಕು".

ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಈಗ ಬಿಟ್ಟುಕೊಟ್ಟಿರುವ ಸಂವಿಧಾನ ಸಭೆಯನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳು ಮತ್ತು ಕೊಟ್ಟ ವಾಗ್ದಾನಗಳು ಇಂಥವು. ಪಾಕಿಸ್ತಾನಕ್ಕಾಗಿ ಬೇಡಿಕೆಯನ್ನು ಕುರಿತು ಹೇಳಿದ್ದೆಂದರೆ ಅದು ಮುಸ್ಲಿಮ್ ಲೀಗ್ ಮುಂದಿರಿಸಿದ ಬೇಡಿಕೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರದಿಂದ ಈ ಬೇಡಿಕೆಯೂ ನಿರಾಕರಿಸಲ್ಪಟ್ಟಿತು. ಈ ವಿಷಯವಾಗಿ ಶ್ರೀ ಅಮೆರಿಯವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಹಾಗೆಂದು ಹೇಳಿದ್ದು ೧೯೪೦ರ ಆಗಸ್ಟ್ ೧ರಂದು.

"ಕಾಂಗ್ರೆಸ್ ರಾಜ್ ಅಥವಾ ಹಿಂದೂ ರಾಜ್ ಎಂದು ಕರೆಯಲ್ಪಡುತ್ತಿರುವ ಅಪಾಯಗಳಿಗೆ ವಿರುದ್ಧವಾಗಿ ಈ ಪ್ರತಿಕ್ರಿಯೆ ಭಾರತವನ್ನು ಪೂರ್ಣವಾಗಿ ಒಡೆದು ಹಿಂದೂ ಮತ್ತು ಮುಸ್ಲಿಮ್ ರಾಜ್ಯಗಳಾಗಿ ಬೇರೆ ಬೇರೆಯಾಗಿಸಬೇಕೆಂದು ಮುಸ್ಲಿಮ್ ಪ್ರದೇಶಗಳಿಂದ ಬೆಳೆಯುತ್ತಿರುವ ಬೇಡಿಕೆ ಮಿತಿಮೀರಿ ಬೆಳೆದಿದೆ. ಈಗ ವಿಷಯದ ವಿವಿಧ ಪದರಗಳ ವಿಚಾರವಾಗಿ ನಾನು ಏನೂ ಹೇಳಬೇಕಿಲ್ಲ. ಏನೇ ಆಗಲಿ, ಇಂಥದೊಂದು ಕ್ರಮದ ಬಗ್ಗೆ, ಈಗಿರುವ ಅದರ ಅತ್ಯಂತ ತೀವ್ರಸ್ಥಿತಿಯಲ್ಲಿ ಪರಿಹರಿಸಲಾಗದ ಆಕ್ಷೇಪಣೆಗಳನ್ನು ಮಾಡಬಹುದೆಂದರೆ, ನನ್ನ ಮನಸಿಗೆ ಅದು ಶಾಶ್ವತವಾಗಿ ಅಲ್ಪಸಂಖ್ಯಾತರ ಸಮಸ್ಯೆಯನ್ನು ಪರಿಹರಿಸದೆ ಕೇವಲ ಬೇರೆಡೆಗೆ, ಕೊಂಚ ಮಟ್ಟಿಗೆ ಚಿಕ್ಕವಲಯಕ್ಕೆ, ವರ್ಗಾಯಿಸಿದಂತೆ ಎಂದು ಮಾತ್ರ ಅನ್ನಿಸುತ್ತದೆ."

೧೯೪೧ರ ಏಪ್ರಿಲ್ ೨೨ರಂದು ಪುನಃ ಅವರು ಈ ವಿಚಾರವನ್ನು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು ಮತ್ತು ಈ ಮುಂದಿನ ಮಾತುಗಳನ್ನು ಹೇಳಿದರು :

"ಪಾಕಿಸ್ತಾನದ ಯೋಜನೆ ಎಂದು ಹೇಳಲಾದ ಯೋಜನೆಯ ಜಾರಿಯಲ್ಲಿ ಕಾಣಿಸಿಕೊಳ್ಳುವ ಅಪರಿಮಿತವಾದ ತೊಂದರೆಗಳನ್ನು ಇಲ್ಲಿ ಚರ್ಚಿಸುವುದು ನನಗೆ ಸಂಬಂಧಿಸಿದ್ದಲ್ಲ ಅಥವಾ ೧೮ನೇ ಶತಮಾನದ ಭಾರತದ ಚರಿತ್ರೆಯ ನಿರುತ್ಸಾಹಗೊಳಿಸುವ ದಾಖಲೆಗಳ ಬಳಿಗೆ ಹಿಂದಕ್ಕೆ ಹೋಗಬೇಕಾಗಿಯೂ ಇಲ್ಲ ಅಥವಾ ಭಾರತಕ್ಕೆ ಅಗತ್ಯವಾದ ಏಕತೆಯನ್ನು ಯಾವುದೇ ರೀತಿ ಒಡೆಯುವಲ್ಲಿ ಅಂತರ್ಗತವಾಗಿರುವ

ದಿಗಿಲು ಹುಟ್ಟಿಸುವ ಅಪಾಯಗಳನ್ನು ಒತ್ತಿ ಹೇಳುವ ಸಲುವಾಗಿ, ಹೊರಗಿನ ಪ್ರಪಂಚದೊಡನೆ ಅದರ ಸಂಬಂಧದಲ್ಲಿ ಈ ದಿನ ನಮ್ಮ ಮುಂದಿರುವ ಬಾಲ್ಕನ್ ದೇಶಗಳ ವಿಪತ್ಪರಂಪರೆಗಳ ಅನುಭವಕ್ಕೆ ಹೋಗಬೇಕಾಗಿಯೂ ಇಲ್ಲ. ಎಷ್ಟಾದರೂ ಭಾರತದ ಏಕತೆಗಿಂತಲೂ ನಾವು ಹೆಮ್ಮೆಪಡಬಹುದಾದ ಬ್ರಿಟಿಷ್ ಸಾಧನೆ ಎನ್ನುವ ಇನ್ನಾವ ಅಂಶವೂ ಇಲ್ಲ".

ಕೇವಲ ಒಂದು ವರ್ಷದ ಹಿಂದೆ ಸಂವಿಧಾನ ಸಭೆ ಹಾಗೂ ಪಾಕಿಸ್ತಾನವನ್ನು ಕುರಿತು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಅಭಿಪ್ರಾಯಗಳು ಹೀಗಿದ್ದವು.

ಕಾಂಗ್ರೆಸ್ಸನ್ನು ಗೆಲ್ಲುವ ಉದ್ದೇಶದಿಂದ ಸಂವಿಧಾನ ಸಭೆಯ ಸಲಹೆಯನ್ನು ಮಾಡಲಾಗಿದೆ ಎಂಬುದು ಸುಸ್ಪಷ್ಟವಾಗಿದೆ. ಅದೇ ರೀತಿ ಮುಸ್ಲಿಮ್ ಲೀಗನ್ನು ಗೆಲ್ಲಬೇಕೆಂದು ಪಾಕಿಸ್ತಾನದ ಸಲಹೆ ಕಾಣಿಸಿಕೊಂಡಿದೆ. ನಿಮ್ಮ ವರ್ಗಗಳೊಡನೆ ಈ ಸಲಹೆಗಳ ಸಂಬಂಧ ಎಂಥದ್ದು? ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವರ ಕೈಕಾಲುಗಳನ್ನು ಕಟ್ಟಿಹಾಕಿ ಸವರ್ಣೀಯರ ಕೈಗೆ ಒಪ್ಪಿಸಲಾಗಿದೆ. ಸವರ್ಣೀಯರು ಪರಿಶಿಷ್ಟ ಜಾತಿಗಳವರಿಗೆ ಏನನ್ನೂ ನೀಡರು. ಅನ್ನ ನೀಡುವ ಬದಲು ಕಲ್ಲಿನಲ್ಲಿ ಹೊಡೆಯುತ್ತಾರೆ. ಏಕೆಂದರೆ ಸಂವಿಧಾನ ಸಭೆ ಎಂಬುದು ನಿಮ್ಮ ವರ್ಗಗಳಿಗೆ ಮಾಡಿದ ವಿಶ್ವಾಸದ್ರೋಹವಲ್ಲದೆ ಬೇರೇನೂ ಅಲ್ಲ. ಸಂವಿಧಾನ ಸಭೆಯಲ್ಲಿ ನಿಮ್ಮ ವರ್ಗಗಳ ಪರಿಸ್ಥಿತಿ ಹೇಗಿರುತ್ತದೆ ಎಂಬುದರ ಬಗ್ಗೆ ಆಗಲೀ, ಸಂವಿಧಾನ ಸಭೆಯ ರಾಜಕೀಯ ಕಾರ್ಯಕ್ರಮವನ್ನು ಕುರಿತಂತೆ ಆಗಲೀ ಯಾವ ಸಂದೇಹವೂ ಇರಲು ಸಾಧ್ಯವಿಲ್ಲ. ಈ ಸಲಹೆಗಳೂ ಕೋಮುವಾರು ಪ್ರಮಾಣವನ್ನೇನೂ ನಿಗದಿ ಮಾಡಿಲ್ಲವಾದ್ದರಿಂದ ಸಂವಿಧಾನ ಸಭೆಯಲ್ಲಿ ನಿಮ್ಮ ವರ್ಗಗಳ ಪ್ರತಿನಿಧಿಗಳೇ ಇಲ್ಲದಿರಬಹುದು. ಅವರು ಅಲ್ಲಿ ಇದ್ದ ಪಕ್ಷದಲ್ಲಿ ಅವರು ಮುಕ್ತ, ಸ್ವತಂತ್ರ ಮತ್ತು ನಿರ್ಣಾಯಕ ಮತವನ್ನು ಹೊಂದಿರಲು ಸಾಧ್ಯವಿಲ್ಲ. ಮೊದಲನೆಯದಾಗಿ, ನಿಮ್ಮ ವರ್ಗಗಳ ಪ್ರತಿನಿಧಿಗಳು ಹತಾಶೆಯಿಂದ ಕೂಡಿದ ಅಲ್ಪಸಂಖ್ಯಾತರಾಗಿರುತ್ತಾರೆ. ಎರಡನೆಯದಾಗಿ, ಸಂವಿಧಾನಸಭೆಯ ಎಲ್ಲ ನಿರ್ಣಯಗಳೂ ಸರ್ವಾನುಮತವನ್ನು ಪಡೆದಿರಲೇಬೇಕೆಂದಿಲ್ಲ. ಯಾವುದೇ ಪ್ರಶ್ನೆಯನ್ನು, ಅದರ ಸಂವಿಧಾನಾತ್ಮಕ ಪ್ರಾಮುಖ್ಯ ಏನೇ ಇದ್ದರೂ, ಅದನ್ನು ನಿರ್ಣಯಿಸಲು ಬಹುಮತ ಸಾಕು. ಸಂವಿಧಾನ ಸಭೆಯಲ್ಲಿನ ಈ ವ್ಯವಸ್ಥೆಯಲ್ಲಿ ನಿಮ್ಮ ವರ್ಗಗಳ ಧ್ವನಿ ಗಣನೆಗೆ ಬರುವುಲ್ಲ ಎಂಬುದು ಸ್ಪಷ್ಟವಾಗಿದೆ. ಮೂರನೆಯದಾಗಿ, ಪ್ರಮಾಣಾನುಸಾರ ಪ್ರಾತಿನಿಧ್ಯದ ಸದ್ಯದ ವ್ಯವಸ್ಥೆಯಲ್ಲಿ ಸಂವಿಧಾನ ಸಭೆಯಲ್ಲಿನ ಸದಸ್ಯರು ಚುನಾಯಿತರಾಗಬೇಕಾದರೆ ಘನತೆವೆತ್ತ ಮಹಾಪ್ರಭುಗಳ ಸಲಹೆಗಳಲ್ಲಿನ ಷರತ್ತುಗಳ ಪ್ರಕಾರವೇ. ಇದರ ಫಲಿತಾಂಶವೆಂದರೆ ನಿಮ್ಮ ವರ್ಗಗಳ ಪ್ರತಿನಿಧಿಗಳನ್ನು ಸಂವಿಧಾನ ಸಭೆಗೆ ನಾಮಕರಣ ಮಡುವ ಹಕ್ಕನ್ನು ಪೂರ್ಣವಾಗಿ ಸವರ್ಣೀಯರು ಪಡೆಯುತ್ತಾರೆ. ನಿಮ್ಮ ವರ್ಗಗಳ ಅಂಥ ಪ್ರತಿನಿಧಿಗಳು ಸವರ್ಣೀಯರ ಕೈಗೊಂಬೆಗಳಾಗುತ್ತಾರೆ. ನಾಲ್ಕನೆಯದಾಗಿ, ಸಂವಿಧಾನ ಸಭೆಯಲ್ಲಿ ಪ್ರಬಲ ಬಹುಮತದ ಪಕ್ಷವಾಗಿ ರೂಪುಗೊಳ್ಳುವ ಮತ್ತು ತಮ್ಮ ಸ್ವಂತ ಕಾರ್ಯಕ್ರಮಗಳನ್ನು ನೆರವೇರಿಸಿಕೊಳ್ಳಲು ಶಕ್ತರಾಗಿರುವ ಕಾಂಗ್ರೆಸ್ಸಿಗರು ತುಂಬಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿಗಳ ಸಾಮಾಜಿಕ ಉದ್ಧಾರದ ವಿಷಯದಲ್ಲಿ ಶ್ರೀ ಗಾಂಧೀಯವರ ಪ್ರಯತ್ನಗಳ ಬಗ್ಗೆ ಏನೇ ಹೇಳಿದರೂ, ಭಾರತದ ರಾಜಕೀಯ ಜೀವನದಲ್ಲಿ ಪರಿಶಿಷ್ಟ ಜಾತಿಗಳವರಿಗೆ ಪ್ರತ್ಯೇಕ ಮತ್ತು ವಿಶಿಷ್ಟವಾದ ವ್ಯಕ್ತಿಗಳಾಗಿ ಸಂವಿಧಾನದಲ್ಲಿ ರಾಜಕೀಯ ಮಾನ್ಯತೆಯನ್ನು ನೀಡಲು ಪೂರ್ಣ ವಿರುದ್ಧವಾಗಿದ್ದಾರೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ವಿಷಯ ಹೀಗಿರುವಾಗ ಈಗಿನ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳಿಗೆ ಈಗಾಗಲೇ ಮಂಜೂರಾಗಿರುವ ರಾಜಕೀಯ ರಕ್ಷಣೋಪಾಯಗಳನ್ನು ಒರೆಸಿಹಾಕುವುದು ಸಂವಿಧಾನ ಸಭೆಯಲ್ಲಿನ ಬಹುಮತವಿರುವ ಪಕ್ಷದ ಕಾರ್ಯಕ್ರಮವಾಗಿರುತ್ತದೆ.

ಸಂವಿಧಾನ ಸಭೆಯಲ್ಲಿ ಧ್ವನಿತವಾಗುವುದನ್ನು ತಿಳಿದುಕೊಳ್ಳುವ ಯಾರೇ ಆದರೂ ಇವರುಗಳ ಸಲಹೆಗಳಿಂದ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಪರಿಶಿಷ್ಟ ಜಾತಿಗಳನ್ನು ಅಕ್ಷರಶಃ ತೋಳಗಳ ಬಾಯಿಗೆ ಹಾಕಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿಗಳ ಸಂವಿಧಾನಾತ್ಮಕ ರಕ್ಷಣೋಪಾಯಗಳನ್ನು ನಿರಾಕರಿಸಬಹುದಾದ ಸಂವಿಧಾನ ಸಭೆಯಿರುವಂತೆ, ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶವಿರುವ ಸಂವಿಧಾನ ಸಭೆಯೊಡನೆ ಮಾಡಿಕೊಳ್ಳುವ ಒಪ್ಪಂದದ ಅವಕಾಶಗಳಲ್ಲಿ ತಮ್ಮ ಸಲಹೆಗಳನ್ನು ಜಾಗ್ರತೆಯಿಂದ ಸೇರಿಸಲು ಸಿದ್ಧವಿರುತ್ತದೆ ಎಂದು ಹೇಳಬಹುದು. ಐರಿಶ್ ವಿವಾದವನ್ನು ಬಗೆಹರಿಸಲೆಂದು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅಂಗೀಕರಿಸಿರುವ ಏರ್ಪಾಡಿನಿಂದ ಈ ಒಪ್ಪಂದದ ಸಲಹೆಯನ್ನು ಎರವಲು ಪಡೆಯಲಾಗಿದೆ ಎಂಬುದು ಸ್ಪಷ್ಟವಾಗಿದೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಯಾವ ರಕ್ಷಣೋಪಾಯಗಳನ್ನು ಒಪ್ಪಂದದಲ್ಲಿ ಸೇರಿಸಲು ತೀರ್ಮಾನಿಸಿದೆ ಎಂಬುದನ್ನು ಒಪ್ಪಂದಕ್ಕೆ ಸಂಬಂಧಿಸಿದ ಸಲಹೆ ಹೇಳುವುದಿಲ್ಲ. ಇದೊಂದು ಮುಖ್ಯ ಅಂಶ. ಏಕೆಂದರೆ ಹೊಸ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಾಗಬಹುದಾದ ರಾಜಕೀಯ ರಕ್ಷಣೋಪಾಯಗಳ ಸ್ವರೂಪ, ಸಂಖ್ಯೆ ಮತ್ತು ರೀತಿಗಳ ಬಗ್ಗೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಹಾಗೂ ಪರಿಶಿಷ್ಟ ಜಾತಿಗಳ ನಡುವೆ ಅಭಿಪ್ರಾಯ ಭೇದವಿರಬಹುದು.

ಒಪ್ಪಂದದ ಬಗೆಗಿನ ಎರಡನೆಯ ಮತ್ತು ಅಷ್ಟೇ ಮುಖ್ಯವಾದ ಪ್ರಶ್ನೆ ಎಂದರೆ, ಒಪ್ಪಂದದ ಹಿಂದೆ ಇರುವ ಶಾಸನ ಎಂಥದ್ದು ಎಂಬುದು. ಒಪ್ಪಂದದೊಡನೆ ಸಾಂಗತ್ಯವಿಲ್ಲದ, ಸಂವಿಧಾನದಲ್ಲಿನ ಯಾವುದೇ ನಿಬಂಧನೆ ಊರ್ಜಿತವಾಗದಂತೆ, ಸಂವಿಧಾನ ಸಭೆಯು ರೂಪಿಸುವ ಸಂವಿಧಾನದ ಭಾಗವಾಗಿ, ಈ ಒಪ್ಪಂದ ಇರುತ್ತದೆಯೇ ಅಥವಾ ಈ ಒಪ್ಪಂದ ಯಾವುದೇ ವಾಣಿಜ್ಯ ಒಪ್ಪಂದದಂತೆ ಭಾರತದ ರಾಷ್ಟ್ರೀಯ ಸರ್ಕಾರ ಹಾಗೂ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಈ ಎರಡು ಸರ್ಕಾರಗಳ ನಡುವಿನ ಕೇವಲ ಒಂದು ಒಪ್ಪಂದವಾಗಿರುತ್ತದೆಯೇ? ಈ ಒಪ್ಪಂದ ಮೊದಲನೆಯ ಬಗೆಯದಾಗಿದ್ದಲ್ಲಿ ಅದು ದೇಶದ ಶಾಸನವಾಗಿರುತ್ತದೆ ಮತ್ತು ಭಾರತ ಸರ್ಕಾರದ ನ್ಯಾಯಶಾಸ್ತ್ರದ ನಿಯಮಗಳು ಅದರ ಬೆಂಬಲಕ್ಕೆ ಇರುತ್ತವೆ. ಆದರೆ ಒಪ್ಪಂದವು ಎರಡನೆಯ ಬಗೆಯದಾಗಿದ್ದಲ್ಲಿ ಅದು ದೇಶದ ಶಾಸನವಲ್ಲ ಮತ್ತು ಅದರ ಹಿಂದೆ ಯಾವ ನ್ಯಾಯಶಾಸ್ತ್ರದ ನಿಯಮವೂ ಇರುವುದಿಲ್ಲ ಎಂಬುದು ಸ್ಪಷ್ಟ. ಅದರ ಮಾನ್ಯತೆ ಒಂದು ರಾಜಕೀಯ ಮಾನ್ಯತೆ. ಈಗ ಒಂದು ಒಪ್ಪಂದ, ರಾಷ್ಟ್ರೀಯ ಸರ್ಕಾರ ರೂಪಿಸಿದ ಸಂವಿಧಾನವನ್ನು ತಿರಸ್ಕರಿಸಿದಲ್ಲಿ, ಐರಿಶ್ ಮುಕ್ತ ರಾಜ್ಯದ ವಿಷಯದಲ್ಲಿ ಆದಂತೆ ಡೊಮಿನಿಯನ್ ಸ್ಥಾನಮಾನಗಳೊಡನೆ ಸುಸಂಗತವಾಗದು ಎಂಬ ಸ್ಪಷ್ಟ ಕಾರಣಕ್ಕಾಗಿ ಮಾಡಲಾಗುವುದಿಲ್ಲ. ಅಂಥ ಒಪ್ಪಂದದ ಹಿಂದಿನ ಏಕೈಕ ಮಾನ್ಯತೆ ಎಂದರೆ ರಾಜಕೀಯ ಮಾನ್ಯತೆ. ಅಂಥ ಮಾನ್ಯತೆಯ ಬಳಕೆ ಸರ್ಕಾರದ ಬಣ್ಣ ಹಾಗೂ ಸಾರ್ವಜನಿಕ ಅಭಿಪ್ರಾಯದ ಸ್ಥಿತಿಗಳ ಮೇಲೆ ಅವಲಂಬಿಸಿರಬೇಕಾಗುತ್ತದೆ ಎಂಬುದು ಸ್ಪಷ್ಟ.

ಇಷ್ಟು ವಿಷಯ ತಿಳಿದ ಮೇಲೆ ಎರಡು ಪ್ರಶ್ನೆಗಳು ಹುಟ್ಟುತ್ತವೆ :

(೧) ಒಪ್ಪಂದದ ಕರಾರುಗಳನ್ನು ಜಾರಿಗೆ ತರಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ವ್ಯವಸ್ಥೆ ಮಾಡುವ ಸಾಧನಗಳು ಯಾವುವು?

(೨) ಎರಡನೆಯದಾಗಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಭಾರತದ ರಾಷ್ಟ್ರೀಯ ಸರ್ಕಾರವನ್ನು ಈ ಒಪ್ಪಂದದ ನಿಬಂಧನೆಗಳನ್ನು ಪಾಲಿಸುವಂತೆ ಈ ಸಾಧನಗಳನ್ನು ಬಳಸಿ ಒತ್ತಾಯ ಮಾಡಲು ಸಿದ್ಧವಾಗಿರುತ್ತದೆಯೇ?

ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಒಪ್ಪಂದವನ್ನು ಜಾರಿಗೆ ತರುವ ಸಾಧನಗಳು ಸೇನೆಯ ಬಳಕೆ ಮತ್ತು ವಾಣಿಜ್ಯ ಯುದ್ಧ ಎಂಬ ಎರಡು ಬಗೆಯವು ಎಂಬುದು ಸ್ಪಷ್ಟವಾಗಿದೆ. ಸೈನಿಕ ದಳದ ವಿಷಯವಾಗಿ ಹೇಳಬೇಕೆಂದರೆ ಭಾರತೀಯ ಫೌಜು ಎನ್ನುವುದೇ ಇರುವುದಿಲ್ಲ. ಅದು ಪೂರ್ಣವಾಗಿ ನವಭಾರತದ ರಾಷ್ಟ್ರೀಯ ಸರ್ಕಾರದ ಹತೋಟಿಗೆ ವರ್ಗಾವಣೆಯಾಗುತ್ತದೆ. ಆದ್ದರಿಂದ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಒಪ್ಪಂದವನ್ನು ಈ ಮೂಲಕ ಜಾರಿಗೆ ತರುವ ಸಾಧನವನ್ನು ಕಳೆದುಕೊಂಡಿರುತ್ತದೆ. ಒಪ್ಪಂದಕ್ಕೆ ವಿಧೇಯವಾಗಿರಬೇಕೆಂದು ರಾಷ್ಟ್ರೀಯ ಸರ್ಕಾರವನ್ನು ಬಲಾತ್ಕರಿಸಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತನ್ನದೇ ಸ್ವಂತ ಸೈನ್ಯವನ್ನು ಕಳಿಸುತ್ತದೆ ಎಂಬುದನ್ನು ನಂಬುವುದು ಅಸಾಧ್ಯ. ವಾಣಿಜ್ಯ ಯುದ್ಧವೂ ಸಾಧ್ಯವಿಲ್ಲ. ಇದೊಂದು ಆತ್ಮಘಾತಕ ಕಾರ್ಯನೀತಿ. ಭೂಕೇವಣಿಗಳನ್ನು ಮತ್ತೆ ಸ್ವಾಧೀನಕ್ಕೆ ಪಡೆಯಲು ಐರಿಶ್ ಮುಕ್ತ ರಾಜ್ಯದೊಂದಿಗೆ ಮಾಡಿದ ಐರಿಷ್ ಯುದ್ಧದ ಅನುಭವವು ಇಂಗ್ಲಿಷ್ ಜನಾಂಗ ತಮ್ಮದೇ ಹಿತಾಸಕ್ತಿ ಮತ್ತು ಗೌರವಗಳಿಗೋಸ್ಕರವೂ ಅದನ್ನು ಮಂಜೂರು ಮಾಡುವುದಿಲ್ಲ ಎಂಬುದನ್ನು ತೋರಿಸುತ್ತದೆ.

ಆದ್ದರಿಂದ ಈ ಒಪ್ಪಂದವು ಪರಿಶಿಷ್ಟ ಜಾತಿಗಳನ್ನು ಕುರಿತಂತೆ ಒಂದು ಕ್ರೂರ ವ್ಯಂಗ್ಯವಲ್ಲವಾದರೆ ಒಂದು ಟೊಳ್ಳು ಸೂತ್ರ ಮಾತ್ರ ಆಗುತ್ತದೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಭಾರತೀಯರು ಸ್ವಾಗತಿಸಲೆಂದು ಈ ಸಲಹೆಗಳನ್ನು ಕಳಿಸಿಕೊಟ್ಟಿದೆ. ಆದರೆ ಕೆಲವೇ ತಿಂಗಳ ಮೊದಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಇರಿಯುವ ಮಾತುಗಳಲ್ಲಿ ನಿಂದಿಸಿದ ಸಲಹೆಗಳನ್ನೇ ಭಾರತೀಯರಿಗೆ ಏಕೆ ಕೊಡುತ್ತಿದ್ದಾರೆ ಎಂಬುದಕ್ಕೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರವಾಗಲೀ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರಾಗಲೀ ಯಾವುದೇ ವಿವರಣೆಯನ್ನು ನೀಡಿಲ್ಲ. ಒಂದು ವರ್ಷದ ಮೊದಲು, ಘನತೆವೆತ್ತ ಮಹಾಪ್ರಭುಗಳ ಸರ್ಕಾರವು, ಸಂವಿಧಾನ ಸಭೆಯು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆಯಾಗುವ ಕಾರಣದಿಂದ ಅದನ್ನು ಮಂಜೂರು ಮಾಡುವುದಿಲ್ಲ ಎಂದು ಹೇಳಿತು. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು, ಸಂವಿಧಾನ ಸಭೆಯನ್ನು ಮಂಜೂರು ಮಾಡಲು ಮತ್ತು ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಲು ಈಗ ಸಿದ್ಧವಾಗಿದೆ. ಒಂದು ವರ್ಷದ ಮೊದಲು, ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಪಾಕಿಸ್ತಾನಕ್ಕೆ ಆಸ್ಪದ ಕೊಟ್ಟಲ್ಲಿ ಅದು ಭಾರತವನ್ನು ವಿರೋಧಿ ರಾಜ್ಯಗಳನ್ನಾಗಿಸಿ ಒಡೆದಂತೆ ಆಗುವ ಕಾರಣದಿಂದ ಹಾಗೆ ಮಾಡುವುದಿಲ್ಲ ಎಂದು ಹೇಳಿತು. ಈ ದಿನ ಅವರು ಭಾರತದ ವಿಭಜನೆಗೆ ಅನುಮತಿ ನೀಡಲು ಸಿದ್ಧರಾಗಿದ್ದಾರೆ. ಒಂದು ದೊಡ್ಡ ಸಾಮ್ರಾಜ್ಯದ ಸರ್ಕಾರ ಎಲ್ಲ ನಿಯಮಗಳ ವಿವೇಕವನ್ನು ಹೀಗೆ ಹೇಗೆ ಕಳೆದುಕೊಳ್ಳುತ್ತದೆ? ಒಂದೇ ವಿವರಣೆಯೆಂದರೆ ಘನತೆವೆತ್ತ ಮಹಾಪ್ರಭುಗಳ ಸಕಾರವು ಯುದ್ಧದ ಗತಿಯ ಫಲವಾಗಿ ತೀವ್ರ ಭಯಕ್ಕೆ ಒಳಗಾಗಿದೆ. ಈ ಸಲಹೆಗಳೂ ಎದೆಗುಂದಿರುವುದರ ಪರಿಣಾಮ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳು ಮಾಡಿದ ಹಕ್ಕೊತ್ತಾಯಗಳನ್ನು ಮತ್ತು ಈ ಸಲಹೆಗಳಿಂದ ಅವರುಗಳಿಗೆ ನೀಡಿದ ರಿಯಾಯಿತಿಯನ್ನು ಯಾರಾದರೂ ಹೋಲಿಸಿದರೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರವನ್ನು ಆವರಿಸಿರುವ ಈ ಭಯ ಎಷ್ಟು ಹೆಚ್ಚಾಗಿದೆ ಎಂಬುದನ್ನು ಸುಲಭವಾಗಿ ತಿಳಿಯಬಹುದು. ಸಂವಿಧಾನ ಸಭೆಯು ಸಂವಿಧಾನವನ್ನು ರೂಪಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿತು. ಆದರೆ ಅಲ್ಪಸಂಖ್ಯಾತರ ರಕ್ಷಣೋಪಾಯಗಳ ಪ್ರಶ್ನೆ ಸಂವಿಧಾನ ಸಭೆಯ ಕೇವಲ ಬಹುಮತದಿಂದ ತೀರ್ಮಾನಿಸಲ್ಪಡಬೇಕು ಎಂದು ಒತ್ತಾಯಿಸಲಿಲ್ಲ. ಇಷ್ಟೇ ಸಾಲದೆ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ಸಿನ ಬೇಡಿಕೆಯಲ್ಲಿ ಅಡಕವಾಗಿದ್ದ ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆಯ ಪರವಾಗಿರುವುದಿಲ್ಲ ಎಂದು ವೈಸ್‌ರಾಯ್‌ರು ಪ್ರಕಟಪಡಿಸಿದಾಗ

೧೯೪೦ರ ಆಗಸ್ಟ್ ೨೨ ರಂದು ವಾರ್ಧಾದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಈ ಮುಂದಿನ ನಿರ್ಣಯವನ್ನು ಅಂಗೀಕರಿಸಿತು.

"ಕಾಂಗ್ರೆಸ್ ಯಾವ ಅಲ್ಪಸಂಖ್ಯಾತರ ಮೇಲೂ ದಬ್ಬಾಳಿಕೆ ನಡೆಸಲು ಎಂದೂ ಯೋಚಿಸಿಲ್ಲವಾದರೂ, ಬ್ರಿಟಿಷ್ ಸರ್ಕಾರವನ್ನು ಹಾಗೆ ಮಾಡಲು ಕೇಳಿದ್ದಂತೂ ಇಲ್ಲವೇ ಇಲ್ಲ ಎಂದಿದ್ದರೂ ಯಥಾಯೋಗ್ಯವಾಗಿ ಚುನಾಯಿತರಾದ ಪ್ರತಿನಿಧಿಗಳಿರುವ ಸಂವಿಧಾನ ಸಭೆಯ ಮೂಲಕವೇ ಸಂವಿಧಾನವನ್ನು ವ್ಯವಸ್ಥೆಗೊಳಿಸಬೇಕೆಂದಿದ್ದರೂ ಈ ಬೇಡಿಕೆಯನ್ನು ದಬ್ಬಾಳಿಕೆ ಎಂದು ತಪ್ಪಾಗಿ ಅರ್ಥೈಸಲಾಗಿದೆ ಮತ್ತು ಅಲ್ಪಸಂಖ್ಯಾತರ ವಿಷಯವನ್ನು ಭಾರತೀಯರ ಪ್ರಗತಿಗೆ ದಾಟಲಾಗದ ಅಡಚಣೆ ಎಂಬಂತೆ ಮಾಡಲಾಗಿದೆ ಎಂಬುದಕ್ಕಾಗಿ ಸಭೆ ವಿಷಾದಿಸುತ್ತದೆ." ಕಾರ್ಯಕಾರಿ ಸಮಿತಿ ಮತ್ತೂ ಸೇರಿಸಿತು: "ಸಂಬಂಧಪಟ್ಟ ಅಲ್ಪಸಂಖ್ಯಾತರ ಚುನಾಯಿತ ಪ್ರತಿನಿಧಿಗಳೊಡನೆ ಹೊಂದಾಣಿಕೆಯಿಂದ ಅಲ್ಪಸಂಖ್ಯಾತರ ಹಕ್ಕುಗಳನ್ನು ಚೆನ್ನಾಗಿ ಕಾಪಾಡಬೇಕು ಎಂದು ಕಾಂಗ್ರೆಸ್ ಪ್ರಸ್ತಾಪಿಸಿತ್ತು."

ಕಾಂಗ್ರೆಸ್ ಕೂಡ ಅಲ್ಪಸಂಖ್ಯಾತರ ಹಕ್ಕುಗಳ ನಿರ್ಣಯವನ್ನು ಸಂವಿಧಾನ ಸಭೆಯ ವ್ಯಾಪ್ತಿಯಲ್ಲಿ ಸೇರಿಸಬೇಕು ಎಂದು ಒತ್ತಾಯಿಸಲಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಕಾಂಗ್ರೆಸ್ಸಿಗೆ ಅದು ಕೇಳದೇ ಇರುವುದನ್ನೂ ಕೊಟ್ಟಿರುವುದಲ್ಲದೆ ಕೇವಲ ಬಹುಮತದ ಓಟಿನಿಂದ ಅಲ್ಪಸಂಖ್ಯಾತರ ಹಕ್ಕುಗಳ ವಿಷಯವನ್ನು ನಿರ್ಣಯಿಸುವ ಇನ್ನೊಂದು ಅಧಿಕವಾದ ಹಕ್ಕನ್ನೂ ನೀಡಿದೆ. ಪಾಕಿಸ್ತಾನದ ಪ್ರಶ್ನೆಯನ್ನು ಕುರಿತಂತೆ ಸಹ ಇದೇ ಮನೋಭಾವ ಕಾಣುತ್ತದೆ. ಪಾಕಿಸ್ತಾನವನ್ನೂ ತತ್‌ಕ್ಷಣವೇ ಒಪ್ಪಿಕೊಳ್ಳಬೇಕೆಂದು ಮುಸ್ಲಿಮ್ ಲೀಗ್ ಒತ್ತಾಯಿಸಲಿಲ್ಲ. ಮುಸ್ಲಿಮ್ ಲೀಗ್ ಕೇಳಿದ್ದೆಲ್ಲ ಸಂವಿಧಾನದ ಮುಂದಿನ ಸುಧಾರಣೆಯಲ್ಲಿ ಪಾಕಿಸ್ತಾನದ ಪ್ರಶ್ನೆಯನ್ನು ಎತ್ತುವಾಗ ಮುಸಲ್ಮಾನರನ್ನು ತಡೆಯಬಾರದು ಎಂದು ಮಾತ್ರ. ಸದ್ಯದ ಸಲಹೆಗಳೂ ಒಂದು ಹೆಜ್ಜೆ ಮುಂದೆ ಹೋಗಿವೆ ಮತ್ತು ಮುಸ್ಲಿಮ್ ಲೀಗ್‌ಗೆ ಪಾಕಿಸ್ತಾನವನ್ನು ಸೃಷ್ಟಿಸುವ ಹಕ್ಕನ್ನು ನಿಶ್ಚಿತವಾಗಿ ನೀಡಿವೆ. ಇವು ಸಂವಿಧಾನಾತ್ಮಕ ಸಲಹೆಗಳು. ಪೂರ್ಣಯುದ್ಧ ನಡೆಸಲು ಭಾರತಕ್ಕೆ ದಾರಿ ತೋರುವುದು ಅವುಗಳ ಉದ್ದೇಶ. ಇದರಲ್ಲಿ ಹಿಂದೂಗಳು, ಮುಸ್ಲಿಮರು, ಪರಿಶಿಷ್ಟ ಜಾತಿಗಳು ಮತ್ತು ಸಿಖ್ಖರನ್ನು ಭಾಗವಹಿಸಲೆಂದು ಮನಃಪೂರ್ತಿಯಾಗಿ ಬೇಡಿಕೊಳ್ಳಲಾಗಿದೆ. ಆದರೂ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಒಪ್ಪಿಗೆಯೊಡನೆ ಅಥವಾ ಒಪ್ಪಿಗೆಯಿಲ್ಲದೆ ಬಹುಸಂಖ್ಯಾತ ಪಕ್ಷಗಳ ಮತ್ತು ಅಲ್ಪಸಂಖ್ಯಾತ ಪಕ್ಷಗಳ ನಡುವೆ ಭೇದ ಮಾಡುತ್ತಿದ್ದಾರೆ. ಯಾರ ಒಪ್ಪಿಗೆ ಅಗತ್ಯವೋ ಅವರು ಬಹುಸಂಖ್ಯಾತ ಪಕ್ಷಗಳಿಗೆ ಸೇರಿದವರು. ಯಾರೊಡನೆ ಪರ್ಯಾಲೋಚನೆಯೊಂದೇ ಸಾಕು ಎಂಬ ನಂಬಿಕೆಯಿದೆಯೋ ಅವರು ಅಲ್ಪಸಂಖ್ಯಾತ ಪಕ್ಷಗಳಿಗೆ ಸೇರಿದವರು. ಇದೊಂದು ಹೊಸ ಭೇದ ಗಣನೆ, ಘನತೆವೆತ್ತ ಮಹಾಪ್ರಭುಗಳ ಸರ್ಕಾರವಾಗಲೀ ಅಥವಾ ವೈಸ್‌ರಾಯ್‌ರವರಾಗಲೀ ಈ ಮೊದಲ ಘೋಷಣೆಗಳಲ್ಲಿ ನಿಶ್ಚಯವಾಗಿ ಹಾಗೆ ಮಾಡಿರಲಿಲ್ಲ. 'ಭಾರತದ ರಾಜಕೀಯ ಜೀವನದ ಮುಖ್ಯವ್ಯಕ್ತಿಗಳ ಒಪ್ಪಿಗೆ' ಎಂದು ಘೋಷಣೆ ವ್ಯಕ್ತಪಡಿಸಿತ್ತು.

ಪರಿಶಿಷ್ಟ ಜಾತಿಗಳ ಸ್ಥಾನವನ್ನು ಮುಸಲ್ಮಾನರ ಸ್ಥಾನಕ್ಕಿಂತ ಕೆಳಗಿನದಾಗಿ ಮಾಡಿರುವ, ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದ ಯಾವ ಘೋಷಣೆಯನ್ನೂ ನಾನು ಬಲ್ಲವನಲ್ಲ. ಪರಿಶಿಷ್ಟ ಜಾತಿಗಳನ್ನು ಮುಸಲ್ಮಾನರೊಂದಿಗೆ ಜೊತೆಗೂಡಿಸಿರುವುದನ್ನು ತಿಳಿಯಪಡಿಸುವ, ೧೯೪೧ರ ಜನವರಿ ೧೦ರಂದು ಬೊಂಬಾಯಿಯಲ್ಲಿ ವೈಸ್‌ರಾಯ್‌ರು ಮಾಡಿದ ಭಾಷಣದಿಂದ ಈ ಮುಂದಿನ ಮಾತುಗಳನ್ನು ಉದ್ಧರಿಸುತ್ತೇನೆ.

"ಅಲ್ಪಸಂಖ್ಯಾತರು ಪಟ್ಟುಹಿಡಿದಿರುವ ಹಕ್ಕುಗಳು ಇಲ್ಲಿವೆ. ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ

ಉಲ್ಲೇಖಿಸುತ್ತೇನೆ, ಮಹಾನ್ ಮುಸ್ಲಿಮ್ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿಗಳು. ಈ ಹಿಂದೆ ಅಲ್ಪಸಂಖ್ಯಾತರಿಗೆ ಈ ಭರವಸೆಗಳನ್ನು ಕೊಡಲಾಗಿದೆ. ಈ ಭರವಸೆಗಳನ್ನು ಗೌರವಿಸಿ ಅವರ ಸ್ಥಿತಿಯನ್ನು ರಕ್ಷಿಸಬೇಕು.

ಪ್ರಯತ್ನಪಟ್ಟು ಮಾಡಿದ ಈ ರೋಷ ಹುಟ್ಟಿಸುವ ಭೇದಗಣನೆ, ಈ ಪಕ್ಷಪಾತದಿಂದ ತಮ್ಮ ಸ್ಥಾನ ಕೆಳಗಿಳಿಸಲ್ಪಟ್ಟ ಅಲ್ಪಸಂಖ್ಯಾತರೊಡನೆ ಮಾಡಿದ ನಂಬಿಕೆ ದ್ರೋಹ. ಸಂವಿಧಾನಾತ್ಮಕ ದೃಷ್ಟಿಕೋನದಿಂದ ಇದೊಂದು ಅನಿಷ್ಟದ ಭೇದಗಣನೆ. ಪೂರ್ಣಯುದ್ಧದ ದೃಷ್ಟಿಯಿಂದ ಇದು ಬಹಳವಾದ ರಾಜಕೀಯ ಅವಿಶ್ವಾಸವನ್ನೂ, ದ್ವೇಷವನ್ನೂ ನಾಡಿನಲ್ಲಿ ಉಂಟುಮಾಡುವುದು ಸಾಧ್ಯ. ಈ ಪ್ರಯತ್ನದಲ್ಲಿ ಬಹುಶಃ ಈಗಾಗಲೇ ಬೇರೆ ಸ್ನೇಹಿತರನ್ನು ಆಯ್ಕೆ ಮಾಡಲು ತೀರ್ಮಾನಿಸಿರುವವರ ಸ್ನೇಹವನ್ನು ಗೆಲ್ಲಬೇಕೇ ಅಥವಾ ತಮ್ಮ ನಿಜವಾದ ಸ್ನೇಹಿತರನ್ನು ಕಳೆದುಕೊಳ್ಳಬೇಕೇ ಎಂಬುದನ್ನು ಬ್ರಿಟಿಷರು ಪರಿಗಣಿಸಬೇಕು. ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಮಟ್ಟಿಗೆ ಸಲಹೆಗಳೂ ಅನಿರೀಕ್ಷಿತ ತಿರುಗುಮುರುಗನ್ನು ತೋರುತ್ತವೆ. ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ಧಾಳಿ ಎಂದು ತಾವೇ ದೂಷಿಸಿದ್ದ ಈ ಸಲಹೆಗಳನ್ನು ಈಗ ಮುಂದಿಡುವುದು ಋಜುತ್ವವನ್ನು ಬಲದ ಮುಂದೆ ಒಪ್ಪಿಸುವ ಅವರ ಸಂಪೂರ್ಣ ಶರಣಾಗತಿಯ ಲಕ್ಷಣವಾಗಿದೆ. ಇದು ಮ್ಯೂನಿಕ್ ಮನೋವೃತ್ತಿ. ಇದರ ಸಾರವೆಂದರೆ ಸ್ವರಕ್ಷಣೆಗಾಗಿ ಇತರರನ್ನು ಬಲಿ ಕೊಡುವುದು. ಆ ಸಲಹೆಗಳ ಮೇಲೆ ಈ ಮನೋಭಾವವನ್ನು ಸ್ಪಷ್ಟವಾಗಿ ಬರೆಯಲಾಗಿದೆ. ಈ ಸಲಹೆಗಳನ್ನು ಹಿಂದಕ್ಕೆ ಪಡೆಯಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ನಾನು ಸೂಚಿಸುತ್ತೇನೆ. ಋಜುತ್ವ, ನ್ಯಾಯ ಹಾಗೂ ತಾವೇ ನೀಡಿದ ವಾಗ್ದಾನಕ್ಕಾಗಿ ಹೋರಾಡಲು ಅವರಿಗೆ ಸಾಧ್ಯವಿಲ್ಲದಿದ್ದಲ್ಲಿ ಅವರು ಶಾಂತಿಸಂಧಾನ ಮಾಡಿಕೊಳ್ಳುವುದು ಲೇಸು. ಅದರ ಮೂಲಕ ತಮ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕಾದರೂ ಅವರಿಗೆ ಸಾಧ್ಯವಾಗುತ್ತದೆ."

## ೬
## ಮಾರ್ಕ್ವೆಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ ಟೆಲಿಗ್ರಾಂ*

ಎಮ್ಎಸ್ಎಸ್. ಇಯುಆರ್. ಎಫ್. ೧೨೫/೨೩

ಅತ್ಯಂತ ತುರ್ತಿನದು ೧ನೇ ಜುಲೈ ೧೯೪೨

ಖಾಸಗಿ ಮತ್ತು ವೈಯಕ್ತಿಕ

ಸಂ. ೧೯೬೮-ಎಸ್. ನಿಮ್ಮ ಖಾಸಗಿ ಮತ್ತು ವೈಯಕ್ತಿಕ ಟೆಲಿಗ್ರಾಮ್ ಸಂ. ೭೯** ಜುಲೈ ೧ರದು. ನನ್ನ ಆಯ್ಕೆ ಹೀಗಿದೆ: (ಅ) ೪ನೇ ಪ್ಯಾರಾದಲ್ಲಿರುವ ಘೋಷಣೆಯನ್ನು ಸ್ವತಂತ್ರ ಘೋಷಣೆಯನ್ನಾಗಿಸುವುದು ಮತ್ತು ಅದರೊಂದಿಗೆ ಈ ಮುಂದಿನ ಪದಗಳಲ್ಲಿ ಸೇರಿಸಬೇಕಾದ (ಆ) ಅಧಿಕಾರಯುತ ಪ್ರಕಟಣೆ.

ಪ್ರಾರಂಭ. ಭಾರತದ ಗವರ್ನರ್ ಜನರಲ್ಲರ ಕಾರ್ಯಕಾರಿ ಮಂಡಲಿಗೆ ಸರ್ ಸಿ.ಪಿ. ರಾಮಸ್ವಾಮಿ

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೨, ಸಂಚಿಕೆ ೨೧೧, ಪು.೩೦೧

** ಸಂಖ್ಯೆ ೨೦೬

ಅಯ್ಯರ್, ಡಾ॥ ಬಿ.ಆರ್. ಅಂಬೇಡ್ಕರ್, ಸರ್ ಇ.ಸಿ. ಬೆಂಥಾಲ್, ಸರ್ ಜೋಗೇಂದ್ರಸಿಂಗ್, ಸರ್ ಜೆ.ಪಿ. ಶ್ರೀವಾಸ್ತವ ಮತ್ತು ಸರ್ ಮೊಹಮ್ಮದ್ ಉಸ್ಮಾನ್ ಅವರುಗಳ ನೇಮಕಕ್ಕೆ ಅನುಮತಿ ನೀಡಲು ಘನತೆವೆತ್ತ ಮಹಾಪ್ರಭುಗಳು ಸಂತೋಷಿಸುತ್ತಾರೆ.

ಗವರ್ನರ್ ಜನರಲ್ಲರಿಂದ ಇಲಾಖೆಗಳಿಗೆ ಈ ಮುಂದಿನ ನೇಮಕಗಳನ್ನು ಮಾಡಲಾಗಿದೆ. ದಿವಂಗತ ರೈಟ್ ಆನರಬಲ್ ಸರ್ ಅಕ್ಬರ್ ಹೈದರಿ ಅವರ ಉತ್ತರಾಧಿಕಾರಿಯಾಗಿ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರನ್ನು 'ಸಮಾಚಾರ'ಕ್ಕೆ ಸಂಬಂಧಿಸಿದಂತೆ ಅಧಿಕಾರದಲ್ಲಿರುವ ಸದಸ್ಯರನ್ನಾಗಿ;

ದಿವಂಗತ ಡಾ॥ ರಾಘವೇಂದ್ರರಾವ್ ಅವರ ಉತ್ತರಾಧಿಕಾರಿಯಾಗಿ ಸರ್ ಜೆ.ಪಿ. ಶ್ರೀ ವಾಸ್ತವ ಅವರನ್ನು 'ಪ್ರಜಾರಕ್ಷಣೆ'ಗೆ ಸಂಬಂಧಿಸಿದಂತೆ ಅಧಿಕಾರದಲ್ಲಿರುವ ಸದಸ್ಯರನ್ನಾಗಿ;

'ಸಂಪರ್ಕ'ಕ್ಕೆ ಸಂಬಂಧಿಸಿದಂತೆ ಅಧಿಕಾರದಲ್ಲಿರುವ ಸದಸ್ಯರಾಗಿದ್ದ ಸರ್ ಆಂಡ್ರ್ಯೂ ಕ್ಲೌ ಅವರನ್ನು ಅಸ್ಸಾಂನ ಗವರ್ನರ್ ಆಗಿ ನೇಮಿಸಿದ್ದ ಪರಿಣಾಮವಾಗಿ 'ಯುದ್ಧ ಸಾಗಣಿಕೆ' ಹಾಗೂ 'ಅಂಚೆ ಮತ್ತು ವಿಮಾನಯಾನ' ಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಸರ್ ಇ.ಸಿ. ಬೆಂಥಾಲ್ ಮತ್ತು ಸರ್ ಮಹಮ್ಮದ್ ಉಸ್ಮಾನ್ ಅವರನ್ನು ಸದಸ್ಯರನ್ನಾಗಿ;

ಸರ್ ಫಿರೋಜ್ ಖಾನ್ ನೂನ್ ಅವರನ್ನು 'ರಕ್ಷಣೆ'ಗೆ ಸಂಬಂಧಿಸಿದಂತೆ ಸದಸ್ಯರನ್ನಾಗಿ;

ಸರ್ ರಾಮಸ್ವಾಮಿ ಮೊದಲಿಯಾರ್ ಅವರನ್ನು ಯುದ್ಧ ಮಂತ್ರಿಮಂಡಲದಲ್ಲಿ ಭಾರತದ ಪ್ರತಿನಿಧಿಯಾಗಿ ನೇಮಿಸಿದ್ದರಿಂದ ಅವರ ಉತ್ತರಾಧಿಕಾರಿಯಾಗಿ ಅವರ ಮೊದಲಿನ 'ವಾಣಿಜ್ಯ ಸದಸ್ಯ' ಹುದ್ದೆಯಲ್ಲಿ ಶ್ರೀ ಎನ್.ಆರ್. ಸರ್ಕಾರ್ ಅವರನ್ನು ನೇಮಕ ಮಾಡಿದೆ.

ಶ್ರೀ ಸರ್ಕಾರ್ ಅವರ ಉತ್ತರಾಧಿಕಾರಿಯಾಗಿ ಸರ್ ಜೋಗೇಂದ್ರಸಿಂಗ್ ಅವರನ್ನು ವಿದ್ಯಾ ಇಲಾಖೆ, ಆರೋಗ್ಯ ಇಲಾಖೆ ಮತ್ತು ಭೂ ಇಲಾಖೆಗಳಿಗೆ ಅಧಿಕಾರದಲ್ಲಿರುವ ಸದಸ್ಯರನ್ನಾಗಿ;

ಘನತೆವೆತ್ತ ಮಹದಂಡನಾಯಕರವರ ಇಲಾಖೆ ಇನ್ನು ಮುಂದೆ 'ಯುದ್ಧ ಇಲಾಖೆ' ಎಂದು ಸೂಚಿತವಾಗುತ್ತದೆ.

ರಕ್ಷಣಾ ಸಹಕಾರ ಇಲಾಖೆ ನಿರ್ವಹಿಸುತ್ತಿರುವ ವರ್ತಮಾನದ ಕೆಲಸಗಳ ಜೊತೆಗೆ ಯುದ್ಧ ಮತ್ತು ಪ್ರಜಾರಕ್ಷಣೆಗಳ ಇಲಾಖೆಗಳಲ್ಲಿ ಸೇರದ, ಭಾರತದ ರಕ್ಷಣೆಗೆ ಸಂಬಂಧಿಸಿದ ಅಂಥ ಇತರ ವಿಷಯಗಳಿಗೂ ಹೊಸ ರಕ್ಷಣಾ ಸದಸ್ಯರು ಹೊಣೆಯಾಗುತ್ತಾರೆ.

# ೭
# ಯುದ್ಧ ಮಂತ್ರಿಮಂಡಲ ಕಾಗದ ಪತ್ರಗಳು

ಡಬ್ಲ್ಯೂ ಪಿ. (೪೨) ೨೮೩

ಎಲ್/ಪಿ ಮತ್ತು ಜೆ/೮/೫೧೦ : ಎಫ್‌ಎಫ್ ೪೦೭–೧೬

## ಭಾರತಕ್ಕೆ ಬಂದ ನಿಯೋಗದ ವರದಿ
## ಲಾರ್ಡ್ ಪ್ರೀವಿ ಸೀಲ್ ಅವರ ಮನವಿ*

ಇತ್ತೀಚೆಗೆ ಭಾರತಕ್ಕೆ ನಾನು ಕೊಟ್ಟ ಭೇಟಿಯಲ್ಲಿ, ಭಾರತೀಯ ಮುಂದಾಳುಗಳೊಡನೆ ನಾನು ನಡೆಸಿದ ಚರ್ಚೆಗಳ ವಿವರವಾದ ಹೇಳಿಕೆಯನ್ನು ಒದಗಿಸಬೇಕಾದ್ದು, ಉದ್ಯೋಗದ ದಾಖಲೆಗಳಿಗಾಗಿ ಮತ್ತು ಭವಿಷ್ಯದಲ್ಲಿ ಭಾರತಕ್ಕೆ ಬರುವ ಯಾವದಾದರೂ ಇಂಥದೇ ನಿಯೋಗದ ಸಹಾಯಕ್ಕಾಗಿ ಅಪೇಕ್ಷಣೀಯ ಎಂದು ನನ್ನ ಭಾವನೆ.

* * *

** **(ಎಫ್) ಪರಿಶಿಷ್ಟ ಜಾತಿಗಳು**

ಮಾರ್ಚ್ ೩೦ರಂದು ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳಾದ ಡಾ॥ ಅಂಬೇಡ್ಕರ್ ಮತ್ತು ಶ್ರೀ ರಾಜಾ ಅವರನ್ನು ನಾನು ಸ್ವಾಗತಿಸಿದೆ. ಪುಣೆಯ ಒಪ್ಪಂದ***ಪ್ರಕಾರ ಪ್ರಾಂತೀಯ ವಿಧಾನಮಂಡಲಗಳಿಗೆ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳ ಚುನಾವಣೆಯ ಸದ್ಯದ ವ್ಯವಸ್ಥೆಯಲ್ಲಿ, ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಗಳೆಂದು ಕರೆಯಬಹುದಾದವರಲ್ಲಿ ಹೆಚ್ಚಿನವರು ಕಾಂಗ್ರೆಸ್ಸಿಗರಾದುದರಿಂದ ಪರಿಶಿಷ್ಟ ಜಾತಿಗಳಿಗೆ ಬಹಳ ಕಡಿಮೆ ಪ್ರಾತಿನಿಧ್ಯ ದೊರೆಯುವುದರ ಬಗ್ಗೆ ಅವರು ಗಮನ ಸೆಳೆದರು. ಪರಿಶಿಷ್ಟ ಜಾತಿಗಳನ್ನು

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೨, ಸಂಚಿಕೆ ೨೨೭, ಪು. ೩೩೬–೩೩೭

** ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೨, ಸಂಚಿಕೆ ೨೨೭, ಪು. ೩೩೬–೩೩೭, ಡಾ॥ ಅಂಬೇಡ್ಕರರನ್ನು ಕುರಿತ ಭಾಗವನ್ನು ಮಾತ್ರ ನಿರೂಪಿಸಿದೆ. – (ಸಂ.)

*** ಹಿಂದೂ ಮತ್ತು ಪರಿಶಿಷ್ಟ ಜಾತಿಗಳ ಮುಂದಾಳುಗಳ ನಡುವಿನ ಪುಣೆಯ ಒಪ್ಪಂದವು ೧೯೩೨ರ ಆಗಸ್ಟ್ ೪ರ ಕೋಮು ನಿರ್ಣಯವನ್ನು ಮಾರ್ಪಡಿಸಿದೆ (೨ನೇ ಟಿಪ್ಪಣಿ ನೋಡಿ). ಅದರ ಮುಖ್ಯ ಷರತ್ತುಗಳು ಈ ಮುಂದಿನಂತಿವೆ. ಪರಿಶಿಷ್ಟ ಜಾತಿಗಳಿಗೆ ಎಪ್ಪತ್ತೊಂದು ಸ್ಥಾನಗಳಿಗೆ ಬದಲಾಗಿ ನೂರ ನಲವತ್ತೆಂಟು ಸ್ಥಾನಗಳನ್ನು ಮೀಸಲಿರಿಸಬೇಕು. ಆದರೆ ಅವರ ಪ್ರತಿನಿಧಿಗಳು ಸವರ್ಣೀಯ ಮತ್ತು ಪರಿಶಿಷ್ಟ ಜಾತಿಗಳ ಮತದಾರರಿಂದ ಒಟ್ಟಾಗಿ ಚುನಾಯಿತರಾಗಬೇಕು; ಹೇಗೇ ಆಗಲಿ ಜೋಡಿ ಮತದಾರರ ಸಮುದಾಯದ ಈ ಆಯ್ಕೆ ನಾಲ್ವರು ಸ್ಪರ್ಧಿಗಳ ಮಿತಿಯಲ್ಲಿರಬೇಕು ಮತ್ತು ಪರಿಶಿಷ್ಟ ಜಾತಿಗಳ ಮತದಾರರು ಮಾತ್ರ ಭಾಗವಹಿಸಲಾಗುವ ಪ್ರಾಥಮಿಕ ಚುನಾವಣೆಯಲ್ಲಿ ಈ ನಾಲ್ವರು ಆರಿಸಲ್ಪಡಬೇಕು. (ಆಗ ಪುಣೆಯ ಜೇಲಿನಲ್ಲಿದ್ದ) ಗಾಂಧಿಯವರ ಒತ್ತಡದಿಂದ ಈ ಒಪ್ಪಂದವು ಸಾಧ್ಯವಾಯಿತು. ಗಾಂಧಿಯವರು ಪರಿಶಿಷ್ಟ ಜಾತಿಗಳನ್ನು ಹಿಂದೂ ಕೋಮಿನ ಸದಸ್ಯರೆಂದು ಪರಿಗಣಿಸುತ್ತಾರೆ ಮತ್ತು ಅವರಿಗಾಗಿ ಬೇರೆ ಮತದಾರ ಸಮುದಾಯವನ್ನು ವಿರೋಧಿಸುತ್ತಾರೆ. ಅವರ ಆಕ್ಷೇಪಣೆಗಳಿಗೆ ತಕ್ಕಂತೆ ಕೋಮು ನಿರ್ಣಯ ಬದಲಾಗದಿದ್ದರೆ (ಸೆಪ್ಟೆಂಬರ್ ೨೦ರಂದು ಪ್ರಾರಂಭವಾದ) ಆಮರಣಾಂತ ಉಪವಾಸವನ್ನು ಮುಂದುವರೆಸುವುದಾಗಿ ಬೆದರಿಸಿದ್ದಾರೆ. ಸೆಪ್ಟೆಂಬರ್ ೨೪ರಂದು ಒಪ್ಪಂದವನ್ನು ಅನುಮೋದಿಸಲಾಯಿತು ಮತ್ತು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಮೌನಸಮ್ಮತಿಯನ್ನು ೧೯೩೨ರ ಸೆಪ್ಟೆಂಬರ್ ೨೬ರಂದು ಪ್ರಕಟಿಸಲಾಯಿತು.

ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಒಬ್ಬರೆಂದು ನಾವು ಪರಿಗಣಿಸಿದ್ದೇವೆಯೇ ಎಂದು ನನ್ನನ್ನು ಕೇಳಿದರು. ಹೌದೆಂದು ನಾನು ಉತ್ತರಿಸಿದೆ. ಆಗ, ಅವರು ಒಪ್ಪಂದದಲ್ಲಿ ತಮ್ಮ ರಕ್ಷಣೆಗಾಗಿ ಎಂತಹ ಸಂಭವನೀಯ ಷರತ್ತುಗಳನ್ನು ಹಾಕಲಾಗುತ್ತದೆ ಎಂದು ಕೇಳಿದರು. ಲೀಗ್ ಆಫ್ ನೇಷನ್ಸ್‌ನ ಅಲ್ಪಸಂಖ್ಯಾತರ ಒಪ್ಪಂದದ ರೀತಿಯಲ್ಲಿ ಇದೂ ಇರುತ್ತದೆ ಎಂದು ನಾನು ಹೇಳಿದೆ. ಸಂವಿಧಾನದಲ್ಲಿ ವಿಶೇಷ ಷರತ್ತುಗಳೇನಾದರೂ ಇದ್ದ ಪಕ್ಷದಲ್ಲಿ ಒಪ್ಪಂದದಲ್ಲಿ ಪುನರಾವರ್ತನೆಗೊಳ್ಳುತ್ತವೆ ಮತ್ತು ವಿವಾದದ ಸಂದರ್ಭಗಳಲ್ಲಿ ವಿಷಯವನ್ನು ಹೊರಗಿನ ಯಾವುದಾದರೂ ಅಧಿಕಾರಕ್ಕೆ ಒಪ್ಪಿಸಬೇಕೆಂಬ ನಿರ್ಬಂಧವೂ ಇರುತ್ತದೆ. ಹಾಗೆ ಕೊಟ್ಟ ನಿರ್ಣಯವನ್ನು ಭಾರತ ಸರ್ಕಾರ ಒಪ್ಪುವ ಭರವಸೆಯನ್ನು ನೀಡಬೇಕಾಗುತ್ತದೆ. ಭಾರತ ಸರ್ಕಾರವು ಹಾಗೆ ಮಾಡಲು ವಿಫಲವಾದರೆ ಒಪ್ಪಂದಕ್ಕೆ ದ್ರೋಹ ಬಗೆದಂತೆ ಆಗುತ್ತದೆ ಮತ್ತು ಬ್ರಿಟಿಷ್ ಸರ್ಕಾರವು ಅಂಥ ನಿರ್ದಿಷ್ಟ ಸನ್ನಿವೇಶಗಳಲ್ಲಿ ತನಗೆ ವಿವೇಕಯುತ ಎನ್ನಿಸಿದ ಕ್ರಮವನ್ನು ಕೈಗೊಳ್ಳಬಹುದು. ಇಂಥ ರೀತಿಯ ರಕ್ಷಣೆ ಅವರಿಗೆ ಸಾಲದು ಎನ್ನಿಸಿದರೂ ಸ್ವಯಂನಿರ್ಧಾರದ ನಿಯಮವನ್ನು ಭಾರತಕ್ಕೆ ನೀಡಿದ ಮೇಲೆ ಸಾಧ್ಯವಾದದ್ದು ಅದೊಂದೇ ಎಂದು ನಾನು ಹೇಳಿದೆ.

ಮರುದಿನ ಡಾ॥ ಅಂಬೇಡ್ಕರ್ ಮತ್ತು ಶ್ರೀ ರಾಜಾ ಅವರುಗಳು ಪರಿಶಿಷ್ಟ ಜಾತಿಗಳಿಗೆ ಈ ಸಲಹೆಗಳು ಸ್ವೀಕಾರಾರ್ಹವಾಗಿಲ್ಲ ಎಂದು ನನಗೆ ಬರೆದರು. ಈ ಸಲಹೆಗಳು ಅವರನ್ನು ಹಿಂದೂ ಆಳ್ವಿಕೆಯ ಪಕ್ಕಾ ವ್ಯವಸ್ಥೆಯ ಕೈಗೆ ಕೊಡುತ್ತವೆಯಾದ್ದರಿಂದ ತಮ್ಮಿಂದ ಸಾಧ್ಯವಾಗುವ ಎಲ್ಲ ರೀತಿಗಳಿಂದ ಅವರು ಅದನ್ನು ತಡೆಯುತ್ತಾರೆ ಎಂದೂ ತಿಳಿಸಿದ್ದಾರೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರಕ್ಕೆ ತಮ್ಮ ಆತಂಕವನ್ನು ತಲಪಿಸಲು ಅವರು ನನ್ನನ್ನು ಬೇಡಿದ್ದಾರೆ. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಅಗತ್ಯವಾದ ಷರತ್ತುಗಳನ್ನು ತನ್ನಲ್ಲಿ ಅಂತರ್ಗತವಾಗಿಸಿಕೊಳ್ಳದ, ತಾವು ಮುಕ್ತ ಹಾಗೂ ಸ್ವಇಚ್ಛೆಯ ಒಪ್ಪಿಗೆಯನ್ನು ನೀಡದ ಸಂವಿಧಾನವನ್ನು ತಮ್ಮ ಮೇಲೆ ಹೇರುವುದಾದಲ್ಲಿ ಪರಿಶಿಷ್ಟ ಜಾತಿಗಳು ಅದನ್ನು ವಿಶ್ವಾಸದ್ರೋಹ ಎಂದು ಪರಿಗಣಿಸುವುದಾಗಿ ಸರ್ಕಾರಕ್ಕೆ ಮನದಟ್ಟು ಮಾಡಲು ಕೋರಿದ್ದಾರೆ.

# ೮
# ಮಾರ್ಕ್ವೆಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ

(ಟೆಲಿಗ್ರಾಂ ಎಂಎಸ್‌ಎಸ್. ಇಯುಆರ್. ಎಫ್ ೧೨೫/೨೩)*

ತುರ್ತು

ನವದೆಹಲಿ, ೨೩ನೇ ಜುಲೈ, ೧೯೪೨
೫.೩೦ ಅಪರಾಹ್ನ
ಸ್ವೀಕರಿಸಿದ್ದು : ೨೩ನೇ ಜುಲೈ
೫.೩೫ ಅಪರಾಹ್ನ

ಸಂ. ೨೧೬೯ – ಎಸ್. ಲೂಮ್ಲೀ ಅವರಿಂದ ಮುಂದುವರೆದಿದ್ದು,
ಜುಲೈ ೨೨ನೇ ದಿನಾಂಕ

ಪ್ರಾರಂಭ : ಕಳೆದ ರಾತ್ರಿ ಅಂಬೇಡ್ಕರರು ಬಹು ತೀವ್ರವಾದ ಭಾಷಣವನ್ನು ಮಾಡಿ. ಈಗ ನಾಗರಿಕ ಅಸಹಕಾರ ಚಳುವಳಿಯನ್ನು ಘೋಷಿಸಿರುವುದನ್ನು 'ಭಾರತಕ್ಕೆ ಎಸಗುತ್ತಿರುವ ದ್ರೋಹ' ಮತ್ತು 'ಭಾರತದ ಶತ್ರುಗಳು ಆಡುವ ಆಟ' ಎಂದು ಹೇಳಿದರು. ಮುಂದುವರಿದು, 'ಕಾಂಗ್ರೆಸ್ ಪಕ್ಷವು ನಾಗರಿಕ ಅಸಹಕಾರ ಚಳವಳಿಯನ್ನು ಘೋಷಿಸಿರುವುದನ್ನು ತಮ್ಮೆಲ್ಲಾ ಶಕ್ತಿಯನ್ನೂ ಉಪಯೋಗಿಸಿ ತಡೆಯುವುದು ಎಲ್ಲಾ ರಾಷ್ಟ್ರಪ್ರೇಮಿ ಭಾರತೀಯರ ಕರ್ತವ್ಯ' ಎಂದು ಸಾರಿದರು.

೨. ದೆಹಲಿಗೆ ತಾವು ತೆರಳುವ ಮುನ್ನ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಮತ್ತು ಇತರ ಸಂಬಂಧಪಟ್ಟ ಸಂಸ್ಥೆಗಳು ಅನುಸರಿಸಬೇಕಾದ ಕಾರ್ಯನೀತಿಯ ರೂಪುರೇಷೆಯನ್ನು ವಿವರಿಸುವ ಒಂದು ಹೇಳಿಕೆಯನ್ನು ನೀಡುವುದಾಗಿ ಅವರು ಪ್ರಕಟಿಸಿದರು. ಆ ಹೇಳಿಕೆಯನ್ನು ವಿವರವಾಗಿ ಪರಿಶೀಲಿಸಬೇಕೆಂದು ಮತ್ತು ಅದರಲ್ಲಿರುವ ವಿಚಾರಗಳನ್ನು ಸಂಪೂರ್ಣವಾಗಿ ಪಾಲಿಸಬೇಕೆಂದು ಅವರು ತಮ್ಮ ಶ್ರೋತೃಗಳನ್ನು (ಹಿಂಬಾಲಕರನ್ನು) ಕೋರಿದರು. (ಮುಕ್ತಾಯ)

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೨, ಸಂಚಿಕೆ ೩೧೦, ಪು. ೪೩೬.

# ೬
# ಮಾರ್ಕ್ವಿಸ್ ಆಫ್ ಲಿನ್‌ಲಿತ್‌ಗೋ ಅವರಿಂದ ಶ್ರೀ ಅಮೆರಿ ಅವರಿಗೆ

(ಟೆಲಿಗ್ರಾಂ ಎಂಎಸ್‌ಎಸ್. ಇಯುಆರ್. ಎಫ್ ೧೨೫/೨೩)*

ತುರ್ತು ೨೪ನೇ ಅಕ್ಟೋಬರ್, ೧೯೪೨

ಸಂ. ೪೭–ಕ್ಯೂ.ಸಿ. ನನ್ನ ಟೆಲಿಗ್ರಾಂ ಸಂ. ೪೬–ಕ್ಯೂ.ಸಿ.

(ಅ) ಈ ಮುಂದಿನದು ಮಂಡಲಿಯ ಸದಸ್ಯರು ಕಳಿಸಿದ ಟೆಲಿಗ್ರಾಂ

ಪ್ರಾರಂಭ : ಪ್ರಜಾಪ್ರತಿನಿಧಿ ಸಭೆಯಲ್ಲಿ ವಿದೇಶಾಂಗ ಕಾರ್ಯದರ್ಶಿಯವರು ನೀಡಿದರೆಂದು ಹೇಳಲಾದ "ಸದ್ಯದ ಯುರೋಪಿಯನ್ ಸದಸ್ಯರನ್ನು ಬದಲಾಯಿಸದೆ ಇರುವುದು ಆ ಹುದ್ದೆಗಳಿಗೆ ಸೂಕ್ತರಾದ ಭಾರತೀಯರನ್ನು ಕಂಡುಕೊಳ್ಳುವುದರಲ್ಲಿ ಇರುವ ಕಷ್ಟದಿಂದ ಮಾತ್ರ" ಎಂಬ ಹೇಳಿಕೆಯನ್ನು** ಓದಿ ನಮಗೆ ಆಶ್ಚರ್ಯವಾಗಿದೆ. ವಿದೇಶಾಂಗ ಕಾರ್ಯದರ್ಶಿಯವರ ಮಾತುಗಳು ಸರಿಯಾಗಿ ವರದಿಯಾಗಿದ್ದ ಪಕ್ಷದಲ್ಲಿ, ಅವರು ಹೊಂದಿರುವ ಅಭಿಪ್ರಾಯದಲ್ಲಿ ನಾವು ಸ್ವಲ್ಪವೂ ಸಹಭಾಗಿಗಳಾಗದಿರಲು ಅಪ್ಪಣೆ ತೆಗೆದುಕೊಳ್ಳುತ್ತೇವೆ. ನಾವು ಪರಿಗಣಿಸಿರುವ ಅಭಿಪ್ರಾಯದಲ್ಲಿ ಭಾರತ ಸರ್ಕಾರದ ಯಾವುದೇ ಹುದ್ದೆಗೆ ಸೂಕ್ತ ಭಾರತೀಯರನ್ನು ಕಂಡುಕೊಳ್ಳುವುದರಲ್ಲಿ ಯಾವ ಕಷ್ಟವೂ ನಿಶ್ಚಯವಾಗಿ ಇಲ್ಲ. ಕ್ರಿಪ್ಸ್ ಅವರ ಸಲಹೆಗಳನ್ನು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಒಪ್ಪಿದಲ್ಲಿ, ಇಂದು ಕೇಂದ್ರದಲ್ಲಿ ಪೂರ್ಣವಾಗಿ ಭಾರತೀಯ ಸರ್ಕಾರವೇ ಬಹಳ ಹೆಚ್ಚಿನ ಅಧಿಕಾರದೊಂದಿಗೆ ಇರುತ್ತಿತ್ತು ಎಂಬುದನ್ನು ವಿದೇಶಾಂಗ ಕಾರ್ಯದರ್ಶಿಯವರಿಗೆ ನೆನಪಿಸಬೇಕಾಗಿದೆ. ಪ್ರಶ್ನಾರ್ಹವಾದ ಈ ಹೇಳಿಕೆ ಪೂರ್ಣವಾಗಿ ವಾಸ್ತವಾಂಶದಿಂದ ಭಿನ್ನವಾಗಿದೆ ಮತ್ತು ಭಾರತೀಯರಿಗೆ ಮುಖಭಂಗವನ್ನು ಉಂಟುಮಾಡುತ್ತದೆ ಎಂದೂ ನಾವು ಹೇಳಬಯಸುತ್ತೇವೆ. ನಮ್ಮ ಈ ವಿಚಾರಗಳನ್ನು ವಿದೇಶಾಂಗ ಕಾರ್ಯದರ್ಶಿಯವರಿಗೆ ನಿವೇದಿಸಲು ಮಹಾಪ್ರಭುಗಳನ್ನು ನಾವು ಬೇಡಿಕೊಳ್ಳುತ್ತೇವೆ. ಈ ವಿಷಯದಲ್ಲಿ ವಿದೇಶಾಂಗ ಕಾರ್ಯದರ್ಶಿಯವರ ಘೋಷಣೆಯನ್ನು ಕುರಿತು, ಸದ್ಯದ ಸನ್ನಿವೇಶದಲ್ಲಿ ಕಾಂಗ್ರೆಸ್ ಮುಖಂಡರಿಗೆ ಸಂದರ್ಶನವನ್ನು ನೀಡಲು ಮತ್ತು ಈ ಕಾರ್ಯನೀತಿಯಲ್ಲಿ ಭಾರತ ಸರ್ಕಾರದ ಸದಸ್ಯರ ಸ್ಥಾನವೇನು ಮತ್ತು ಈ ವಿಷಯದಲ್ಲಿ ಅವರ ಅಭಿಮತವೇನು ಎಂಬುದನ್ನು ವಿಚಾರಿಸಲು ಅವರು ಸಿದ್ಧವಾಗಿರಲಿಲ್ಲ ಎಂಬುದರ ಬಗ್ಗೆ ಗಮನ ಸೆಳೆಯಲೂ ಆಶಿಸುತ್ತೇವೆ.

ಈ ಸಂಬಂಧದಲ್ಲಿ ಸರ್ಕಾರದ ಸದಸ್ಯರನ್ನು ಸಲಹೆಗಾರರು ಎಂದು ವರ್ಣಿಸಿರುವ ಲಾರ್ಡ್ ಸೈಮನ್ ಅವರ ಹೇಳಿಕೆ ಗಮನಾರ್ಹವಾಗಿದೆ.*** ಮಹಾಪ್ರಭುಗಳು ಪ್ರವಾಸದಲ್ಲಿರುವಾಗ ಈ ಸಮಾಚಾರದ ಮೂಲಕ ನಾವು ತೊಂದರೆ ಕೊಡುತ್ತಿರಲಿಲ್ಲ. ಆದರೆ ಇಂಥ ಘೋಷಣೆಯಿಂದ ನಮ್ಮ ಪರಿಸ್ಥಿತಿಯನ್ನು ಬಹಳ ಇಕ್ಕಟ್ಟಿನಲ್ಲಿರುವಂತೆ ರೀತಿಯಲ್ಲಿ ನಿರೂಪಿಸಲಾಗಿದೆ ಎಂದು ನಾವು ಬಹಳ ತೀವ್ರವಾಗಿ ಭಾವಿಸುತ್ತೇವೆ. (ಮುಕ್ತಾಯ).

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೩, ಸಂಚಿಕೆ ೧೧೬. ಪು. ೧೫೩

** ಈ ಟೆಲಿಗ್ರಾಂನಲ್ಲಿ ಉಲ್ಲೇಖಿಸಿರುವ ಶ್ರೀ ಅಮೆರಿ ಮತ್ತು ಲಾರ್ಡ್ ಸೈಮನ್ ಅವರುಗಳ ಹೇಳಿಕೆಗಳ ಪಠ್ಯಕ್ಕಾಗಿ ಸಂ. ೧೧೯ನ್ನು ನೋಡಿ.

*** 'ಗಮನಾರ್ಹ' ಎಂಬುದನ್ನು ವಿಶೇಷ ಗಮನವನ್ನು (ಪಡೆಯುವಂಥದು?) ಎಂದು ಅರ್ಥೈಸಲಾಗಿದೆ.

ಈ ಮೇಲಿನ ಟೆಲಿಗ್ರಾಂ ಮೋದಿ, ಸುಲ್ತಾನ್ ಅಹಮದ್, ಆಣೆ ಸರ್ಕಾರ್, ಅಂಬೇಡ್ಕರ್, ಶ್ರೀವಾಸ್ತವ ಮತ್ತು ಜೋಗೇಂದ್ರ ಸಿಂಗ್ ಅವರುಗಳದು.

## ೧೦
## ಡಾ|| ಅಂಬೇಡ್ಕರ್‌ರವರಿಂದ ಮಾರ್ಕ್ವೆಸ್ ಆಫ್ ಲಿನ್‌ಲಿತ್‌ಗೋ ಅವರಿಗೆ

ಎಂಎಸ್‌ಎಸ್. ಇಯುಆರ್. ಎಫ್ ೧೨೫/೧೨೪*

ನವದೆಹಲಿ, ೨೯ನೇ ಅಕ್ಟೋಬರ್, ೧೯೪೨

ನನ್ನ ಪ್ರೀತಿಯ ಲಾರ್ಡ್ ಲಿನ್‌ಲಿತ್‌ಗೋ,

ಪರಿಶಿಷ್ಟ ಜಾತಿಗಳ ಪರಿಸ್ಥಿತಿ ಬಹಳ ಅತೃಪ್ತಿಕರವಾಗಿತ್ತು ಎಂದೂ ಅವರುಗಳ ಏಳಿಗೆಗಾಗಿ ಕೇಂದ್ರ ಸರ್ಕಾರವು ಏನು ಮಾಡುತ್ತದೆಂದು ನಾನು ಯೋಚಿಸಿದ್ದೆನೋ ಅದನ್ನು ಮಾಡಿರಲಿಲ್ಲ ಎಂದೂ ನನ್ನ ಎರಡನೆಯ ವಾರದ ಸಂದರ್ಶನದ ಹೊತ್ತಿನಲ್ಲಿ ನಿಮ್ಮೊಡನೆ ಹೇಳಿದ್ದೆ. ಆ ವಿಷಯವಾಗಿ ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು ಮತ್ತು ಅವುಗಳನ್ನು ತೊಡೆದುಹಾಕಲು ಬೇಕಾದ ಪರಿಹಾರಗಳನ್ನು ಒಳಗೊಂಡಿರುವ ಮನವಿಯನ್ನು ನಿಮ್ಮ ಅವಗಾಹನೆಗಾಗಿ ಸಿದ್ಧಪಡಿಸಲು ಬಹು ಕನಿಕರದಿಂದ, ನೀವು ನನಗೆ ಹೇಳಿದಿರಿ. ನಿಶ್ಚಯವಾಗಿ ಇದೆಲ್ಲವೂ ನಿಮ್ಮ ನೆನಪಿನಲ್ಲಿರಬೇಕು. ನಿಜದಲ್ಲಿ ಆಗಿನಿಂದಲೂ, ಅನೇಕ ಬಾರಿ ಮನವಿ ಸಿದ್ಧವಾಯಿತೇ ಎಂದು ನನಗೆ ನೀವೇ ನೆನಪಿಸುತ್ತಿದ್ದಿರಿ. ದುರದೃಷ್ಟವಶಾತ್, ಅಧಿಕಾರಕ್ಕೆ ಬಂದಾಗಿನಿಂದ ನನ್ನ ಮೇಲೆ ಬಿದ್ದ ಕಾರ್ಯಭಾರಗಳ ವಿಪರೀತ ಒತ್ತಡದ ಕಾರಣದಿಂದ ಮನವಿಯನ್ನು ಸಿದ್ಧಗೊಳಿಸುವ ಕಾರ್ಯಕ್ಕೆ ನಾನು ಕೊಡಲು ಬಯಸಿದ್ದ ಪ್ರಾಮುಖ್ಯತೆಯನ್ನು ಕೊಡಲಾಗಲಿಲ್ಲ. ಏನೇ ಆಗಲಿ, ನಿಮ್ಮ ಪರಿಶೀಲನೆಗಾಗಿ ಅದನ್ನು ಒಪ್ಪಿಸಲು ಕಡೆಗೂ ಸಾಧ್ಯವಾಗಿದ್ದಕ್ಕೆ ನನಗೆ ಸಂತೋಷವೆನಿಸುತ್ತಿದೆ.

೨. ದುರದೃಷ್ಟವಶಾತ್ ಈ ಮನವಿ** ಬಹಳ ದೀರ್ಘವಾದ ದಸ್ತಾವೇಜು ಆಗಿಬಿಟ್ಟಿದೆ. ಕುಂದುಕೊರತೆಗಳನ್ನು ಮತ್ತು ಅವುಗಳನ್ನು ಪರಿಹರಿಸಲು ಬೇಕಾದ ಸಲಹೆಗಳನ್ನು ಒಳಗೊಂಡ ಕೇವಲ ಹೇಳಿಕೆಯನ್ನು ಒಳಗೊಂಡ ಚಿಕ್ಕ ಮನವಿ ಅಥವಾ ಬರಿಯ ಕುಂದುಕೊರತೆಗಳೂ ಅವುಗಳ ಪರಿಹಾರಗಳೇ ಅಲ್ಲದೆ, ಸೂಚಿಸಲ್ಪಟ್ಟ ಪರಿಹಾರಗಳಿಗೆ ಬೆಂಬಲ ನೀಡುವ ತರ್ಕವನ್ನೂ ಒಳಗೊಂಡ ತಲಸ್ಪರ್ಶಿಯಾದ ಮನವಿ ಈ ಎರಡರಲ್ಲಿ ಒಂದನ್ನು ನಾನು ಆಯ್ಕೆ ಮಾಡಿಕೊಳ್ಳಬೇಕಿತ್ತು. ನಾನು ಎರಡನೆಯದನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಹಾಗೆ ಮಾಡುವಲ್ಲಿ, ಮನವಿಯಲ್ಲಿ ಕಾಣಿಸಿದ ಕುಂದುಕೊರತೆಗಳು ಮತ್ತು ಅವುಗಳನ್ನು ನಿವಾರಿಸಲು ಸೂಚಿಸಿದ ಪರಿಹಾರಗಳು ಸಂಬಂಧಿಸಿದವರ ಅಭಿಪ್ರಾಯ ಪಡೆಯಲು ಬೇರೆ ಬೇರೆ ಇಲಾಖೆಗಳಿಗೆ ತಲುಪುತ್ತವೆ ಮತ್ತು ಮನವಿಯಲ್ಲಿ ಕಾರಣಗಳನ್ನು ಕಾಣಿಸದಿದ್ದರೆ ಪರಿಹಾರಗಳನ್ನು ಒಪ್ಪಿಕೊಳ್ಳುವ ಅವಕಾಶ ತೀರ ಅಲ್ಪವಾಗಿರುತ್ತದೆ ಎಂಬ ಸಂಗತಿ ನನ್ನ ಮನಸ್ಸಿನಲ್ಲಿತ್ತು.

೩. ಅನುಕೂಲಕ್ಕಾಗಿ ನಾನು ಅದರೊಂದಿಗಿರುವ ಮನವಿಯಲ್ಲಿ ಸೇರಿಸಿರುವ ಕುಂದುಕೊರತೆಗಳನ್ನು ಮತ್ತು ಪರಿಹಾರಗಳನ್ನು ಕೇವಲ ಸಂಕ್ಷಿಪ್ತವಾಗಿ ಕೆಳಗೆ ನೀಡುತ್ತಿದ್ದೇನೆ.

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೩, ಸಂಚಿಕೆ ೧೨೫, ಪು. ೧೬೫–೧೬೮

** ಈ ಸಂಪುಟದ ಎರಡನೆಯ ಭಾಗದ ಮೊದಲ ಪರಿಚ್ಛೇದದಲ್ಲಿ ಮನವಿಯನ್ನು ಸೇರಿಸಿದೆ (ಸಂ.)

| | | |
|---|---|---|
| I | ರಾಜಕೀಯ ಕುಂದುಕೊರತೆಗಳು | ಪುಟಗಳು |
| | ೧. ಕೇಂದ್ರ ವಿಧಾನಮಂಡಲದಲ್ಲಿ ಹೆಚ್ಚು ಪ್ರಾತಿನಿಧ್ಯ | ೫ – ೯ |
| | ೨. ಕೇಂದ್ರ ಕಾರ್ಯಾಂಗದಲ್ಲಿ ಹೆಚ್ಚು ಪ್ರಾತಿನಿಧ್ಯ | ೯–೧೦ |
| | ೩. ಸಾರ್ವಜನಿಕ ಸೇವೆಗಳಲ್ಲಿ ನ್ಯಾಯಯುತವಾದ ಪ್ರಾತಿನಿಧ್ಯದ ಭರವಸೆ | |
| | (ಅ) ಪರಿಶಿಷ್ಟ ಜಾತಿಗಳನ್ನು ಅಲ್ಪಸಂಖ್ಯಾತರೆಂದು ಘೋಷಿಸುವುದು ಮತ್ತು ಅವರಿಗಾಗಿ ವಾರ್ಷಿಕ ಉದ್ಯೋಗಾವಕಾಶಗಳಲ್ಲಿ ಶೇಕಡ ೧೩.೫ರಷ್ಟು ಮೀಸಲಿರಿಸುವುದು. | ೧೦–೨೧ |
| | (ಆ) ವಯೋಮಿತಿಯನ್ನು ಹೆಚ್ಚಿಸುವುದು | ೨೧ |
| | (ಇ) ಪರೀಕ್ಷಾ ಶುಲ್ಕದಲ್ಲಿ ಕಡಿತ | ೨೧ |
| | (ಈ) ಪರಿಶಿಷ್ಟ ಜಾತಿಗಳ ಸೇವಾ ಹಕ್ಕುಗಳನ್ನು ರಕ್ಷಿಸಲು ಪರಿಶಿಷ್ಟ ಜಾತಿಗಳ ಅಧಿಕಾರಿಗಳ ನೇಮಕ | ೨೧ – ೨೨ |
| | ೪. ಸಂಯುಕ್ತ ಲೋಕಸೇವಾ ಆಯೋಗದಲ್ಲಿ ಪ್ರಾತಿನಿಧ್ಯ | ೨೨ |
| II | ಶೈಕ್ಷಣಿಕ ಕುಂದುಕೊರತೆಗಳು | ಪುಟಗಳು |
| | ೧. ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದ ವಿಷಯಗಳನ್ನು ಅಭ್ಯಸಿಸುತ್ತಿರುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಗಳಿಗಾಗಿ ವಾರ್ಷಿಕವಾಗಿ ಪುನರಾವರ್ತನೆಯಾಗುವ ೨ ಲಕ್ಷ ರೂ.ಗಳ ಅನುದಾನ | ೨೩–೨೫ |
| | ೨. ವಿದೇಶಗಳಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೋಸ್ಕರ ಪರಿಶಿಷ್ಟ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ೧ ಲಕ್ಷ ರೂ.ಗಳ ವಾರ್ಷಿಕ ಅನುದಾನ | ೨೩–೨೫ |
| | ೩. ಕೇಂದ್ರ ಸರ್ಕಾರವು ನಡೆಸುವ ಭಾರತೀಯ ಗಣಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿಗಳ ಯುವಕರಿಗೆ ವಿದ್ಯಾರ್ಥಿ ವೇತನಗಳು ಮತ್ತು ಶುಲ್ಕ ಮಾಫಿ ಸೌಲಭ್ಯಗಳು | ೨೫–೨೬ |
| | ೪. ಭಾರತ ಸರ್ಕಾರವು ಸ್ಥಾಪಿಸಿದ ಕೇಂದ್ರ ಶಿಕ್ಷಣ ಮಂಡಲಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಇಬ್ಬರು ಪ್ರತಿನಿಧಿಗಳ ನೇಮಕ | ೨೬–೨೭ |
| | ೫. (ಅ) ಸರ್ಕಾರದ ಮುದ್ರಣಾಲಯಗಳಲ್ಲಿ ಅಭ್ಯಾಸಾವಧಿಯ ಅವಕಾಶ ಮತ್ತು | ೨೭ |
| | (ಆ) ಸರ್ಕಾರದ ರೈಲ್ವೆ ಕಾರ್ಯಾಗಾರಗಳಲ್ಲಿ | ೨೭–೨೮ |

ಅಭ್ಯಾಸಾವಧಿಯ ಅವಕಾಶಗಳಲ್ಲಿ ಮೀಸಲಾತಿಯ
ಮೂಲಕ ತಾಂತ್ರಿಕ ತರಬೇತಿಯ ಸೌಲಭ್ಯಗಳು

| | | |
|---|---|---|
| III | ಇತರ ಕುಂದುಕೊರತೆಗಳು | ಪುಟಗಳು |
| ೧. | ಪರಿಶಿಷ್ಟ ಜಾತಿಗಳ ಸಾಮಾಜಿಕ ಮತ್ತು ರಾಜಕೀಯ ಕುಂದುಕೊರತೆಗಳ ಸೂಕ್ತ ಪ್ರಚಾರಕ್ಕಾಗಿ ಅವಕಾಶ | ೨೯–೩೦ |
| ೨. | ಲೋಕೋಪಯೋಗಿ ಇಲಾಖೆಯ ಸರ್ಕಾರಿ ಗುತ್ತಿಗೆ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿಗಳ ಸದಸ್ಯರಿಗೆ ಆಸ್ಪದ ನೀಡಲು ವಿಶೇಷ ಅವಕಾಶ. | ೩೦–೩೧ |

೪. ಇಡೀ ಮನವಿಯನ್ನು ಓದಲು ಅಗತ್ಯವಾದಷ್ಟು ಪುರುಸೊತ್ತು ಮಾಡಿಕೊಳ್ಳಲು ನಿಮಗೆ ಸಾಧ್ಯವಿಲ್ಲ ಎಂಬುದು ನನಗೆ ಚೆನ್ನಾಗಿ ಗೊತ್ತಿರುವುದರಿಂದ ಈ ಸಾರಾಂಶವನ್ನು ನಾನು ಕೊಡುತ್ತಿದ್ದೇನೆ ಮತ್ತು ಇಡೀ ಮನವಿಯನ್ನು ಓದಲು ನಿಮಗೆ ಸಮಯ ಸಿಗಲಿ ಎಂದು ಕೋರುತ್ತೇನೆ. ಆದರೆ ನಿಮಗೆ ಪೂರಾ ಓದಲಾಗದಿದ್ದಲ್ಲಿ ಕಡೆಯ ಪಕ್ಷ ಈ ಮನವಿಯ ನಾಲ್ಕನೇ ಭಾಗವನ್ನಾದರೂ (ಪು. ೨೩–೨೬) ಓದಲೆಂದು ನಿಮ್ಮನ್ನು ಬೇಡುವೆ. ಮನವಿಯ ಆ ಭಾಗದಲ್ಲಿ, ಪರಿಶಿಷ್ಟ ಜಾತಿಗಳ ಹಾಗೂ ಆಂಗ್ಲೋ ಇಂಡಿಯನ್ನರ ಪರಿಸ್ಥಿತಿಗಳನ್ನು ಹೋಲಿಸಿದ್ದೇನೆ ಮತ್ತು ಆಂಗ್ಲೋ ಇಂಡಿಯನ್ನರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮಾಡಿರುವ ಪ್ರಯತ್ನಗಳನ್ನೂ ತೋರಿಸಿದ್ದೇನೆ. ಅದರ ಸೂಕ್ಷ್ಮ ಪರೀಕ್ಷೆಯಿಂದ ನಾನು ಮಂಡಿಸಿರುವ ಹಕ್ಕೊತ್ತಾಯಗಳು ಎಷ್ಟು ನ್ಯಾಯವಾದುವು ಮತ್ತು ಕೇವಲ ಮಿತವಾದುವು ಎಂಬುದನ್ನೂ ಪರಿಶಿಷ್ಟ ಜಾತಿಗಳಿಗಿಂತ ಹೆಚ್ಚು ದುರದೃಷ್ಟಶಾಲಿಗಳಲ್ಲದ ವರ್ಗವನ್ನು ಮೇಲೆತ್ತಲು ಭಾರತ ಸರ್ಕಾರವು ಮಾಡಿರುವುದನ್ನೂ ನೀವು ಮನಗಾಣುತ್ತೀರಿ ಎಂಬ ನಂಬಿಕೆ ನನಗಿರುವುದರಿಂದ ಅದನ್ನು ಓದಲು ನಿಮ್ಮನ್ನು ಕೋರುತ್ತೇನೆ.

೫. ನೀವು ನಿರ್ಗಮಿಸುವಷ್ಟರಲ್ಲಿ ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು ಪರಿಹಾರವಾಗಲಿ ಎಂದು ನಾನು ಬಯಸುತ್ತೇನೆ ಎಂಬುದನ್ನು ನಾನು ಹೇಳಬೇಕಿಲ್ಲ. ಮುಂದಿನ ಏಪ್ರಿಲ್‌ನಲ್ಲಿ ನೀವು ಅಧಿಕಾರದಿಂದ ನಿರ್ಗಮಿಸುವಿರೆಂಬ ವಾರ್ತೆಯನ್ನು ನಾನು ನಿಜವಾದ ದುಃಖದಿಂದ ಓದಿದೆ, ನನ್ನನ್ನು ನಂಬಿ. ನಿಮ್ಮ ನಂತರ ನಿಮ್ಮ ಸ್ಥಾನಕ್ಕೆ ಯಾರು ಬರುವರು ಎಂಬ ವಿಚಾರವಾಗಿ ಮತ್ತು ಪರಿಶಿಷ್ಟ ಜಾತಿಗಳನ್ನು ಕುರಿತು ಯಾವ ಮನೋಭಾವನೆಯನ್ನು ಅವರು ಹೊಂದುತ್ತಾರೆ ಎಂಬ ವಿಷಯದಲ್ಲಿ ನನಗೆ ಏನೂ ತಿಳಿಯದು. ನೀವು ಪರಿಶಿಷ್ಟ ಜಾತಿಗಳ ಆಶ್ರಯದಾತರು ಎಂದು ನಾನು ಬಲವಾಗಿ ನಂಬಿದ್ದೇನೆ. ನಿಮ್ಮ ಕಾರ್ಯಕಾರಿ ಮಂಡಲಿಯಲ್ಲಿ ಅವರಿಗೆ ಸ್ಥಳ ನೀಡುವುದರ ಮೂಲಕ ನೀವು ಅವರಿಗಾಗಿ ಬಹು ಪ್ರಶಸ್ತವಾದ ಕಾರ್ಯ ಮಾಡಿದ್ದೀರಿ. ಭಾರತದ ಚರಿತ್ರೆಯಲ್ಲಿ ಅದೊಂದು ಕ್ರಾಂತಿಕಾರಿ ಕೃತ್ಯ ಮತ್ತು ಬೇರೆ ಯಾವುದೂ ಅದಕ್ಕೆ ಸಾಟಿಯಾದದ್ದು ಇರಲಾರದು. ಪರಿಶಿಷ್ಟ ಜಾತಿಗಳ ಕುಂದುಕೊರತೆಗಳು ನಿಮಗೆ ತಿಳಿದಲ್ಲಿ ಅವುಗಳನ್ನು ಪರಿಹರಿಸಲು ನೀವು ಹಿಂಜರಿಯುವವರಲ್ಲ ಎಂಬ ವಿಚಾರವಾಗಿ ನನಗಾಗಲೀ ಪರಿಶಿಷ್ಟ ಜಾತಿಯ ಯಾವ ಸದಸ್ಯರಿಗೇ ಆಗಲಿ ಯಾವ ಸಂದೇಹವೂ ಇಲ್ಲ. ನನ್ನ ಜನರಿಗೆ ನ್ಯಾಯ ಸಿಗಬೇಕಿದೆ ಎಂಬುದನ್ನು ಬಲ್ಲವರಿಂದ, ನನ್ನ ಜನರಿಗಾಗಿ ನ್ಯಾಯ ಕೋರಲು ನನಗೆ ಸಂತೋಷವೆನಿಸಿದೆ ಎಂದು ನಾನು ಈ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ಕಾರ್ಯವನ್ನು ಮಾಡುವ ಸಂಕಲ್ಪ ನಿಮಗಿದೆ ಎಂದೂ ನೀವು ಮಾಡಲಿಚ್ಛಿಸುವ ಮತ್ತು ಮಾಡಬಲ್ಲ ಕಾರ್ಯವನ್ನು ನಿಮ್ಮ ಮುಂದಿನವರಿಗೆ ಬಿಡಲು ನಿಮಗೆ ಮನಸ್ಸಿಲ್ಲ ಎಂಬುದನ್ನೂ

ನಾನು ಬಲ್ಲೆ. ಈ ನ್ಯಾಯಯುತವಾದ ಕಾರ್ಯಕ್ಕಾಗಿ ನಾನೂ, ಪರಿಶಿಷ್ಟ ಜಾತಿಯ ಐದು ಕೋಟಿ ಜನರೂ ನಿಮಗೆ ಎಂದೆಂದಿಗೂ ಕೃತಜ್ಞರಾಗಿರುತ್ತೇವೆ ಎಂಬುದನ್ನು ನಾನು ಹೇಳಬೇಕಾಗಿಯೇ ಇಲ್ಲ.*

ನಿಮ್ಮ ನಂಬುಗೆಯ
**ಬಿ.ಆರ್. ಅಂಬೇಡ್ಕರ್**

# ೧೧
# ವೈಸ್‌ರಾಯ್‌ರವರ ಕಾರ್ಯಕಾರಿ ಪರಿಷತ್ತಿನಲ್ಲಿ ನಡೆದ ಚರ್ಚೆಗಳ ಸಾರಾಂಶ*

ಸಂ. ೨೯೮ರ ಅಡಕ ಡಿಸೆಂಬರ್, ೧೯೪೨

ಈಗಿರುವ ಸಂವಿಧಾನಾತ್ಮಕ ಏರ್ಪಾಡುಗಳ ವಿಚಾರವಾಗಿ ಪೂರ್ವಗ್ರಹವಿಲ್ಲದೆ ಅನೌಪಚಾರಿಕ ವಿಧಾನದಲ್ಲಿ ಚರ್ಚೆ ಅಗತ್ಯವಾಗಿದೆ ಎಂದು ಪ್ರಾರಂಭದಲ್ಲಿ ವೈಸ್‌ರಾಯ್‌ರವರು ವಿವರಿಸಿದರು. ಅನಂತರ ತಮ್ಮ ಈ ವಿಚಾರಗಳಿಗೆ ಒಪ್ಪಿಗೆಯಿದೆ ಎಂದು ಮುಂದಾಗಿ ಅರ್ಥಮಾಡಿಕೊಂಡು ಮೂರು ಕಾರ್ಯಗಳನ್ನು ಸಂಕ್ಷಿಪ್ತವಾಗಿ ಮತ್ತು ವಸ್ತುನಿಷ್ಠವಾಗಿ ಪರಿಶೀಲಿಸಿದರು.

(ಅ) ತಮ್ಮ ಮಂಡಲಿಯನ್ನು ಪೂರ್ಣವಾಗಿ ಭಾರತೀಯವನ್ನಾಗಿಸುವುದು.

(ಆ) ಆಡಳಿತದಲ್ಲಿರುವ ನಿಯಂತ್ರಣವನ್ನು ಮತ್ತು ಅದರಲ್ಲಿ ಮಧ್ಯಪ್ರವೇಶಿಸುವ ವಿದೇಶಾಂಗ ಕಾರ್ಯದರ್ಶಿಯವರ ಹಕ್ಕನ್ನು ಮೊಟಕು ಮಾಡುವುದು ಅಥವಾ ಸಂಪೂರ್ಣವಾಗಿ ತೆಗೆದುಹಾಕುವುದು; ಮತ್ತು

(ಇ) ಸೆಕ್ಷನ್ ೯೩ರ ಪ್ರಾಂತಗಳಲ್ಲಿನ ಆಡಳಿತದಲ್ಲಿರುವ ಬರಿಯ ಅಧಿಕಾರದ ಮನೋಭಾವವನ್ನು ಕಡಿಮೆ ಮಾಡುವುದು.

ಸರ್ವಸಾಮಾನ್ಯವಾದ ಚರ್ಚೆ ಅನಂತರ ಆರಂಭವಾಯಿತು.

* * *

(ಕಾರ್ಮಿಕ ಸದಸ್ಯರಾದ) ಡಾ॥ ಅಂಬೇಡ್ಕರರು (ಮುಖ್ಯ ಅಲ್ಪಸಂಖ್ಯಾತರೊಡನೆ ಸಮಾಲೋಚನೆಗೆ ಅವಕಾಶ ನೀಡುವ) ೧೯೪೦ರ ಆಗಸ್ಟ್‌ನ ಘೋಷಣೆಯೊಂದಿಗೆ ಸಾಮರಸ್ಯವಿಲ್ಲದ ಯಾವುದೇ

---

* ೧೯೪೩ರ ಜನವರಿ ೮ರಂದು ಡಾ॥ ಅಂಬೇಡ್ಕರರು ಲಿನ್‌ಲಿತ್‌ಗೋ ಅವರಿಗೆ ಪತ್ರರೂಪದ ಇನ್ನೊಂದು ಮನವಿಯನ್ನು ಸಲ್ಲಿಸಿದರು. ಪರಿಶಿಷ್ಟ ಜಾತಿಗಳ ದೃಷ್ಟಿಕೋನದಿಂದ ಈ ಮನವಿ ಸಂವಿಧಾನ ಸಭೆಯ ವಿರುದ್ಧವಾದ ಕೆಲವು ವಿಚಾರಗಳನ್ನು ಮಂಡಿಸುತ್ತದೆ ಮತ್ತು ಮನವಿ ಕೇಳುವ ಕೆಲವು ಪ್ರಶ್ನೆಗಳ ವಿಚಾರವಾಗಿ ವಿದೇಶಾಂಗ ಕಾರ್ಯದರ್ಶಿಯವರಿಂದ ಭರವಸೆಯನ್ನು ಪಡೆಯಲು ಲಾರ್ಡ್ ಲಿನ್‌ಲಿತ್‌ಗೋ ಅವರನ್ನು ಪರಿಶಿಷ್ಟ ಜಾತಿಗಳು ಕೋರುತ್ತವೆ ಎಂದು ಅಂಬೇಡ್ಕರರು ಹೇಳಿದರು. ಎಂಎಸ್‌ಎಸ್. ಇಯುಆರ್. ಎಫ್.೧೨೪/೧೨೫. ಸಂಖ್ಯೆ ೩೩೬, ಪ್ಯಾರಾ ೯ನ್ನು ನೋಡಿ.

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೩, (ಸಂ. ೨೯೮ರ ಅಡಕ) ಪು. ೪೨೬ (ಡಾ॥ ಅಂಬೇಡ್ಕರರನ್ನು ಕುರಿತ ಉದ್ಧೃತ ಭಾಗಗಳನ್ನು ಮಾತ್ರ ಇಲ್ಲಿ ನಿರೂಪಿಸಲಾಗಿದೆ. ಮಿಕ್ಕ ಚರ್ಚೆಗಳನ್ನು ಕೈಬಿಡಲಾಗಿದೆ. ಸಂ.)

ಬದಲಾವಣೆಯನ್ನು ವಿರೋಧಿಸಿದರು. ಅದಕ್ಕೆ ಬದ್ಧವಾಗಿ ಶಕ್ತಿಯುತವಾದ ಸರ್ಕಾರ ಅಂದರೆ ಸಾರ್ವಜನಿಕ ಅಭಿಪ್ರಾಯವನ್ನು ಬೆನ್ನಿಗಿರಿಸಕೊಂಡಂತಹದು ಬೇಕಾಗಿರುವುದರಿಂದ ಅವರು ಬದಲಾವಣೆಯ ಪರವಾಗಿದ್ದರು. ಪ್ರಾಂತಗಳಲ್ಲಿ ಕೇವಲ ಅಲ್ಪಸಂಖ್ಯಾತ ಮಂತ್ರಿಮಂಡಲವೇ ಆಗಿದ್ದರೂ ಸರಿಯೇ, ಮಂತ್ರಿವರ್ಗದ ಸರ್ಕಾರವೇ ಅತ್ಯುತ್ತಮ, ಕಾರ್ಯಕಾರಿ ಮಂಡಲಿ ಸಲಹೆಗಾರರಿಗಿಂತ ವಾಸಿ. ಕೇಂದ್ರಕ್ಕೆ ಸಂಬಂಧಿಸಿದಂತೆ ಭಾರತೀಯವಾಗಿಸುವುದೊಂದೇ ಕಾಂಗ್ರೆಸ್ಸನ್ನು ಸಂತೈಸಲಾರದು, ಜೊತೆಗೆ ಕಿರಿಕಿರಿಯನ್ನೂ ಉಂಟುಮಾಡಬಹುದು; ಕಾಂಗ್ರೆಸ್ಸಿಗರಲ್ಲದ ವ್ಯಕ್ತಿಗಳು ಸಾಂತ್ವನಕ್ಕೆ ಅರ್ಹರೇ? ಈ ಭಾರತೀಯವಾಗಿಸುವ ಕಾರ್ಯ ನೆರವೇರುವ ಮೊದಲು ಮಂಡಲಿಯ ಕೋಮುವಾರು ರಚನೆ ನಿರ್ಧಾರಗೊಳ್ಳಬೇಕು, ಅದೂ ಭಾರತೀಯರಿಂದಲೇ ಸಾಧ್ಯವಾಗಬೇಕು. ಕಾಂಗ್ರೆಸ್ ಈ ಸಮಸ್ಯೆಯನ್ನು ಕೈಬಿಟ್ಟಿತ್ತು. ಅವರಿಗೆ ಅದನ್ನು ಬಿಡಿಸುವ ಇಚ್ಛೆಯಿರಲಿಲ್ಲ. ಕ್ರಿಪ್ಸ್ ಅವರ ಸಲಹೆಗಳನ್ನು ಅಡಿಪಾಯವಾಗಿರಿಸಿಕೊಂಡು, ಕಾಂಗ್ರೆಸ್, ಮುಸ್ಲಿಮ್ ಲೀಗ್, ಪರಿಶಿಷ್ಟ ಜಾತಿಗಳು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಸಂಯೋಜನೆಗೊಂಡಿರುವ ರಾಷ್ಟ್ರೀಯ ಸರ್ಕಾರಕ್ಕೆ ಪ್ರಯತ್ನಿಸುವುದು ಅವರ ಸೂಚನೆಯಾಗಿತ್ತು. ಮಂಡಲಿಯ ಭಾರತೀಯ ಸದಸ್ಯರು ಹಾಜರಿದ್ದು ಕೋಮುವಾರು ಪ್ರಾತಿನಿಧ್ಯದ ಹಂಚಿಕೆಯನ್ನು ತಯಾರಿಸಬೇಕು. ದೂರದಲ್ಲಿರುವ ವಿದೇಶಾಂಗ ಕಾರ್ಯದರ್ಶಿಯವರಿಗಿಂತಲೂ ನಿರಂಕುಶರಾದ ವೈಸ್‌ರಾಯ್‌ರನ್ನು ಅವರು ಹೆಚ್ಚು ಇಷ್ಟಪಟ್ಟರೂ ವಿದೇಶಾಂಗ ಕಾರ್ಯದರ್ಶಿಯವರ ಅಧಿಕಾರದಲ್ಲಿ ತಲೆ ಹಾಕಲು ಅವರು ಒತ್ತಾಯಿಸುವುದಿಲ್ಲ.

## ೧೨
## ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರು ಶ್ರೀ ಅಮೆರಿ ಅವರಿಗೆ *

ಟೆಲಿಗ್ರಾಂ : ಎಲ್/ಪಿ ಮತ್ತು ಜೆ/೮/೫೨೨ ; ಎಫ್ ೧೯೮

ತುರ್ತು

ನವದೆಹಲಿ, ೭ ಜೂನ್, ೧೯೪೫
ರಾತ್ರಿ ೭.೫೦ ಗಂಟೆ
ಸ್ವೀಕರಿಸಿದ್ದು : ೭ ಜೂನ್, ರಾತ್ರಿ ೧೦ ಗಂಟೆ.

೯೭೦ – ಎಸ್. ಮೇಲ್ವಿಚಾರಕ ಮಾಲೆ. ಅಂಬೇಡ್ಕರ್, ಶ್ರೀ ವಾಸ್ತವ ಮತ್ತು ಖರೆಯವರು ಈ ದಿನ ಬೆಳಿಗ್ಗೆ ಸವರ್ಣೀಯರಿಗೂ ಮತ್ತು ಮುಸ್ಲಿಮರಿಗೂ ನಡುವಿನ ಸೂಚಿತ ಸಮಾನತೆಯನ್ನು ವಿರೋಧಿಸಿ ಮತ್ತು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಒಪ್ಪಿರುವ ಸಲಹೆಗಳು ಹಿಂದೂಗಳಿಗೂ ಹಾಗೂ ಪರಿಶಿಷ್ಟ ಜಾತಿಗಳಿಗೂ ಅನ್ಯಾಯ ಎಂದು ಪ್ರತಿಪಾದಿಸಿ ಸಂಯುಕ್ತ ಟಿಪ್ಪಣಿ** ಯನ್ನು ಸಲ್ಲಿಸಿದ್ದಾರೆ. ಸವರ್ಣೀಯರು ಮುಸ್ಲಿಮರಿಗಿಂತ ಹೆಚ್ಚಿನ ಮತವನ್ನು ಹೊಂದಿರಬೇಕೆಂದೂ ಪರಿಶಿಷ್ಟ ಜಾತಿಗಳು ಒಬ್ಬರಿಗಿಂತ ಹೆಚ್ಚು ಸದಸ್ಯರನ್ನು ಪಡೆದಿರಬೇಕೆಂದೂ ಅವರು ಪ್ರತಿಪಾದಿಸುತ್ತಾರೆ. ಘನತೆವೆತ್ತ ಮಹಾಪ್ರಭುಗಳು ಸರ್ಕಾರಕ್ಕೆ ತಮ್ಮ ಅಭಿಪ್ರಾಯಗಳನ್ನು ತಲಪಿಸಬೇಕೆಂದು ಅವರು ಕೋರಿದ್ದಾರೆ.

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೫, ಸಂಚಿಕೆ ೪೮೨, ಪು. ೧೧೯೪

** ಈ ಟಿಪ್ಪಣಿ ವೇವೆಲ್ ಪೇಪರ್ಸ್, ಪೊಲಿಟಿಕಲ್ ಸೀರಿಸ್ (ಏಪ್ರಿಲ್ ೧೯೪೪ – ಜುಲೈ ೧೯೪೫, ಭಾಗ ೧, ಪು. ೨೦೯ – ೨೧೦) ನಲ್ಲಿ ಮುದ್ರಣಗೊಂಡಿದೆ.

೨. ಘನತೆವೆತ್ತ ಮಹಾಪ್ರಭುಗಳು ಒಪ್ಪಿರುವ ಸಲಹೆಗಳು ಮಧ್ಯಂತರ ಅವಧಿಗೆ ಮಾತ್ರ ಎಂಬುದೇ ಕಿರು ಉತ್ತರ. ಈಗಿನ ಮುಖ್ಯ ವಿಚಾರ ಎಂದರೆ ಪಕ್ಷಗಳನ್ನು ಒಟ್ಟಾಗಿಸಿ ಕೆಲಸದಲ್ಲಿ ತೊಡಗಿಸುವುದು. ನನ್ನ ಅಧಿಕೃತ ಟೆಲಿಗ್ರಾಂಗಳಲ್ಲಿ ಈಗಾಗಲೇ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ಪರಿಷ್ಕರಿಸಲು ನನ್ನ ಮಟ್ಟಿಗೆ ಯಾವ ಕಾರಣವೂ ಇಲ್ಲ.

## ೧೩
## ಡಾ॥ ಅಂಬೇಡ್ಕರ್ ಅವರಿಂದ ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಗೆ*

ವೇವೆಲ್ ಪೇಪರ್ಸ್, ಪೊಲಿಟಿಕಲ್ ಸೀರೀಸ್,
ಏಪ್ರಿಲ್ ೧೯೪೪, ಜುಲೈ ೧೯೪೫
ಭಾಗ ೧, ಪು. ೨೦೭–೨೦೯

ನವದೆಹಲಿ ೭, ಜೂನ್ ೧೯೪೫

ಪ್ರಿಯ ಲಾರ್ಡ್ ವೇವೆಲ್,

ಕಾರ್ಯಕಾರಿ ಮಂಡಲಿಯನ್ನು ಭಾರತೀಯವಾಗಿಸುವ ನಿಮ್ಮ ಸಲಹೆಯ ಮುಂದುವರಿಕೆಗಾಗಿ ನಡೆಸಲು ಉದ್ದೇಶಿಸಿರುವ ಸಮ್ಮೇಳನದಲ್ಲಿ ಪರಿಶಿಷ್ಟ ಜಾತಿಗಳ ಮುಖಂಡನಾದ ನನ್ನನ್ನು ಸದಸ್ಯನಾಗಿರಲು ಕೋರಿರುವುದಕ್ಕಾಗಿ ನಾನು ನಿಮಗೆ ಕೃತಜ್ಞ. ಇಲ್ಲಿ, ಪುನರಾವರ್ತಿಸಬೇಕಿಲ್ಲದ ಕಾರಣಗಳಿಗಾಗಿ ನಾನು ನಿಮ್ಮ ಪ್ರಸ್ತಾಪವನ್ನು ಒಪ್ಪಿಕೊಳ್ಳಲು ಅಶಕ್ತನಾಗಿದ್ದೇನೆ ಎಂದು ತಿಳಿಸಿದ್ದೆ. ಅದಾದ ಮೇಲೆ ಬದಲಿಯೊಬ್ಬರನ್ನು ನಾನು ಹೆಸರಿಸಬೇಕೆಂದು ನೀವು ಇಚ್ಛಿಸಿದಿರಿ. ನಿಮ್ಮ ಸಲಹೆಗಳಿಗೆ ನನ್ನ ಅಸಮ್ಮತಿಯನ್ನು ನಾನು ವ್ಯಕ್ತಪಡಿಸಿದ್ದರೂ ನಿಮ್ಮ ಸಮ್ಮೇಳನದಲ್ಲಿ ಪರಿಶಿಷ್ಟ ಜಾತಿಗಳ ಪ್ರತಿನಿಧಿಯೊಬ್ಬರ ಉಪಸ್ಥಿತಿಯಿಂದ ನೀವು ಪಡೆಯಬಹುದಾದಂತಹ ಸಹಾಯವನ್ನು ನಿರಾಕರಿಸಲು ನನಗಿಷ್ಟವಿಲ್ಲ. ಆದ್ದರಿಂದ ಬದಲಿಯೊಬ್ಬರನ್ನು ಸೂಚಿಸಲು ನಾನು ಸಿದ್ಧ. ನನಗೆ ಹೊಳೆಯುವ ಅನೇಕ ಹೆಸರುಗಳಲ್ಲಿ ಅರ್ಹತೆಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಂಡಾಗ ರಾವ್‌ಬಹದ್ದೂರ್ ಎನ್. ಶಿವರಾಜ್, ಬಿ.ಎ., ಬಿ.ಎಲ್ ಅವರ ಹೆಸರನ್ನಲ್ಲದೆ ಬೇರೆ ಯಾರ ಹೆಸರನ್ನೂ ನಾನು ಯೋಚಿಸಲಾರೆ. ಅವರು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಅಧ್ಯಕ್ಷರು ಮತ್ತು ಕೇಂದ್ರ ಶಾಸನಸಭೆ ಹಾಗೂ ರಾಷ್ಟ್ರೀಯ ರಕ್ಷಣಾ ಮಂಡಲಿಗಳ ಸದಸ್ಯರೂ ಹೌದು. ನೀವು ಬಯಸಿದಲ್ಲಿ ಅವರನ್ನು ಪರಿಶಿಷ್ಟ ಜಾತಿಗಳ ಪ್ರತಿನಿಧಿಯಾಗಿ ಸಮ್ಮೇಳನಕ್ಕೆ ಆಹ್ವಾನಿಸಬಹುದು.

೨. ಈ ಕೂಡಲೇ ನಿಮ್ಮ ಗಮನವನ್ನು ಸೆಳೆಯಬೇಕೆಂದು ನಾನು ಅಂದುಕೊಳ್ಳುವ ಇನ್ನೊಂದು ವಿಷಯವಿದೆ. ಕಾರ್ಯಕಾರಿ ಮಂಡಲಿಯ ಪುನಾರಚನೆಯನ್ನು ಕುರಿತ ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ನೀಡಿರುವ ಪ್ರಾತಿನಿಧ್ಯ ತೀರಾ ಕಡಿಮೆಯಾಗಿದೆ ಎಂಬ ವಿಷಯಕ್ಕೆ ಅದು ಸಂಬಂಧಿಸಿದೆ. ಒಂಬತ್ತು ಕೋಟಿ ಮುಸ್ಲಿಮರಿಗೆ ಐದು ಸ್ಥಾನಗಳು, ಐದು ಕೋಟಿ ಅಸ್ಪೃಶ್ಯರಿಗೆ ಒಂದು

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೫, ಸಂಚಿಕೆ ೪೮೩, ಪು. ೧೯೦೪–೧೯೦೭

ಸ್ಥಾನ, ಆರು ದಶಲಕ್ಷ ಸಿಖ್ಖರಿಗೆ ಒಂದು ಸ್ಥಾನ ಎಂಬುದು, ನ್ಯಾಯ ಮತ್ತು ಸಾಮಾನ್ಯ ಜ್ಞಾನಗಳನ್ನು ಕುರಿತ ನನ್ನ ಭಾವನೆಗೆ ವಿಮುಖವಾಗಿರುವ ವಿಲಕ್ಷಣ ಹಾಗೂ ಕುಟಿಲ ರೀತಿಯ ರಾಜಕೀಯ ಗಣಿತ. ನಾನು ಇದರಲ್ಲಿ ಸಹಭಾಗಿ ಆಗಲಾರೆ. ಅಸ್ಪೃಶ್ಯರ ಅಗತ್ಯಗಳ ಅಳತೆಯ ಪ್ರಕಾರ, ಅವರಿಗೆ ಮುಸ್ಲಿಮರಿಗಿಂತಲೂ ಹೆಚ್ಚು ಪ್ರಾತಿನಿಧ್ಯ ಇಲ್ಲವಾದರೆ, ಮುಸ್ಲಿಮರಷ್ಟೇ ಪ್ರಾತಿನಿಧ್ಯವನ್ನು ಪಡೆಯಬೇಕು. ಅಗತ್ಯಗಳನ್ನು ಪಕ್ಕಕ್ಕಿಟ್ಟು ಸಂಖ್ಯೆಯನ್ನು ಮಾತ್ರ ಪರಿಗಣಿಸಿದಲ್ಲಿ ಅಸ್ಪೃಶ್ಯರು ಕಡೆಯ ಪಕ್ಷ ಮೂರು ಸ್ಥಾನಗಳನ್ನಾದರೂ ಪಡೆಯಬೇಕು. ಬದಲಾಗಿ ಹದಿನೈದು ಜನ ಇರುವ ಮಂಡಲಿಯಲ್ಲಿ ಅವರಿಗೆ ಕೇವಲ ಒಂದು ಸ್ಥಾನವನ್ನು ನೀಡಲಾಗಿದೆ. ಇದು ಅಸಹನೀಯವಾದ ಪರಿಸ್ಥಿತಿ.

ಜೂನ್ ೫ರಂದು ಸೇರಿದ್ದ ಕಾರ್ಯಕಾರಿ ಮಂಡಲಿಯ ಸಭೆಯಲ್ಲಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳನ್ನು ನೀವು ಮಂಡಲಿಗೆ ವಿವರಿಸಿದಾಗ ನಿಮ್ಮ ಗಮನಕ್ಕೆ ನಾನು ಈ ವಿಷಯವನ್ನು ತಂದೆ. ಹಿಂದಿನ ಸಂಜೆ ಸಲಹೆಗಳ ಯುಕ್ತತೆಯನ್ನು ಕುರಿತು ಮಂಡಲಿಯ ಸದಸ್ಯರು ಮಾಡಿದ ಟೀಕೆಗಳಿಗೆ ಜೂನ್ ೬ರ ಬೆಳಗಿನ ಸಭೆಯಲ್ಲಿ ನೀವು ಉತ್ತರಿಸಿದಿರಿ. ನಾನು ಮುಂದಿಟ್ಟ ಅಂಶವನ್ನು ಕುರಿತು ಸಹ ನೀವು ಪ್ರವೃತ್ತರಾಗುವಿರಿ ಎಂದು ಸಹಜವಾಗಿ ನಾನು ನಿರೀಕ್ಷಿಸಿದೆ. ಆದರೆ ನನಗೆ ಅತ್ಯಂತ ಅಚ್ಚರಿಯಾಗುವಂತೆ ಆ ವಿಷಯವನ್ನು ನೀವು ಪೂರ್ಣವಾಗಿ ಉದಾಸೀನ ಮಾಡಿದಿರಿ ಮತ್ತು ಅದರ ಬಗ್ಗೆ ಯಾವುದೇ ರೀತಿಯಲ್ಲಿ ಉಲ್ಲೇಖಿಸಲಿಲ್ಲ. ನಾನು ತಕ್ಕಷ್ಟು ಒತ್ತಿ ಹೇಳಲಿಲ್ಲ ಎಂದೇನೂ ಇರಲಾರದು. ಏಕೆಂದರೆ ನಾನು ಬಹಳವಾಗಿಯೇ ಒತ್ತಿ ಹೇಳಿದ್ದೆ. ಆ ಅಂಶದ ಉಲ್ಲೇಖನವನ್ನು ನೀವು ಬಿಟ್ಟುಬಿಟ್ಟಿರುವುದರಿಂದ ನಾನು ತೀರ್ಮಾನಿಸುವುದೆಂದರೆ ಆ ವಿಷಯ ನಿಮ್ಮ ಗಮನವನ್ನು ಸೆಳೆಯುವಷ್ಟು ಮುಖ್ಯ ಎಂದು ನೀವು ಯೋಚಿಸಲಿಲ್ಲ ಅಥವಾ ಪ್ರತಿಭಟನೆಯನ್ನು ವ್ಯಕ್ತಪಡಿಸುವುದಕ್ಕಿಂತ ಹೆಚ್ಚಿನದು ನನ್ನ ಇಂಗಿತವಾಗಿರಲಿಲ್ಲ ಎಂದು ನೀವು ಭಾವಿಸಿದಿರಿ. ಈ ಭಾವನೆಯನ್ನು ತೊಡೆದುಹಾಕಲು ಮತ್ತು ತಪ್ಪು ತಿಳಿಯಲು ಸಾಧ್ಯವೇ ಇಲ್ಲದ ಮಾತುಗಳಲ್ಲಿ ನಿಮಗೆ ತಿಳಿಸಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತಪ್ಪನ್ನು ಸರಿಪಡಿಸಲು ವಿಫಲರಾದಲ್ಲಿ ಈ ಪತ್ರ ಬರೆಯಲು ನಾನು ಅಗತ್ಯ ಎಂದು ಯೋಚಿಸಿದ ಖಚಿತವಾದ ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಅಂಥ ಸಲಹೆ ಕಾಂಗ್ರೆಸ್ ಅಥವಾ ಹಿಂದೂ ಮಹಾ ಸಭಾದಿಂದ ಬಂದಿದ್ದರೆ ನನಗೆ ಈಗ ಆಗಿರುವಷ್ಟು ನೋವು ಆಗುತ್ತಿರಲಿಲ್ಲ. ಆದರೆ ಅದು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ತೀರ್ಮಾನ. ಸಾಮಾನ್ಯವಾಗಿ ಹಿಂದುಗಳ ಅಭಿಪ್ರಾಯ ಸಹ ವಿಧಾನಮಂಡಲ ಹಾಗೂ ಕಾರ್ಯಾಂಗಗಳೆರಡಲ್ಲೂ ಪರಿಶಿಷ್ಟ ಜಾತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡುವ ಪರವಾಗಿದೆ. ಸಪ್ರು ಸಮಿತಿಯ ಸಲಹೆಗಳನ್ನು ಸರ್ವಸಾಮಾನ್ಯ ಹಿಂದೂ ಅಭಿಪ್ರಾಯದ ಗುರುತು ಎಂದಿಟ್ಟುಕೊಂಡರೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆ ಇಳಿಮುಖ ಹೊಂದಿದ್ದು ಎಂದು ಒಪ್ಪಬೇಕಾಗುತ್ತದೆ. ಏಕೆಂದರೆ ಸಪ್ರು ಸಮಿತಿ ಹೇಳಿದ್ದು ಇದು :

"ಭಾರತ ಸರ್ಕಾರದ ಅಧಿನಿಯಮದಲ್ಲಿ ಸಿಖ್ಖರಿಗೆ ಮತ್ತು ಪರಿಶಿಷ್ಟ ಜಾತಿಗಳಿಗೆ ಕೊಟ್ಟ ಪ್ರಾತಿನಿಧ್ಯ ಕಣ್ಣಿಗೆ ರಾಚುವಷ್ಟು ತೀರಾ ಕಡಿಮೆ ಎಂಬುದು ಸ್ಪಷ್ಟವಾಗಿದೆ. ಇದು ನ್ಯಾಯವಾಗಿಲ್ಲ. ಗಣನೀಯ ಪ್ರಮಾಣಕ್ಕೆ ಈ ಪ್ರಾತಿನಿಧ್ಯವನ್ನು ಏರಿಸಬೇಕು. ಅವರಿಗೆ ನೀಡಬೇಕಾದ ಹೆಚ್ಚಿನ ಪ್ರಾತಿನಿಧ್ಯದ ಪ್ರಮಾಣವನ್ನು ಸಂವಿಧಾನವನ್ನು ರೂಪಿಸುವ ಸಭೆಗೆ ಬಿಡಬೇಕು.

ಖಂಡ (ಅ)ಕ್ಕೆ ಒಳಪಟ್ಟಂತೆ ಒಕ್ಕೂಟದ ಕಾರ್ಯಾಂಗವು ಮಿಶ್ರಮಂತ್ರಿಮಂಡಲವಾಗಿರುತ್ತದೆ. ಅಂದರೆ ಈ ಮುಂದಿನ ಕೋಮುಗಳು ಅದರಲ್ಲಿ ಪ್ರತಿನಿಧಿಸಲ್ಪಡುತ್ತವೆ.

(೧) ಹಿಂದೂಗಳು – ಪರಿಶಿಷ್ಟ ಜಾತಿಗಳನ್ನು ಬಿಟ್ಟು
(೨) ಮುಸ್ಲಿಮರು
(೩) ಪರಿಶಿಷ್ಟ ಜಾತಿಗಳು
(೪) ಸಿಖ್ಖರು
(೫) ಭಾರತೀಯ ಕ್ರಿಶ್ಚಿಯನ್ನರು
(೬) ಆಂಗ್ಲೋ ಇಂಡಿಯನ್ನರು

(ಆ) ಕಾರ್ಯಾಂಗದಲ್ಲಿನ ಈ ಕೋಮುಗಳ ಪ್ರಾತಿನಿಧ್ಯ ಸಾಧ್ಯವಾದಷ್ಟು ಮಟ್ಟಿಗೆ ವಿಧಾನಮಂಡಲದಲ್ಲಿನ ಅವರ ಸಂಖ್ಯೆಗೆ ಅನುಗುಣವಾಗಿರುತ್ತದೆ"

ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ನೀಡಿದ ಪ್ರಾತಿನಿಧ್ಯ ತೀರಾ ಕಡಿಮೆ ಮತ್ತು ನ್ಯಾಯವಾಗಿಲ್ಲ ಎಂದು, ಕಾರ್ಯಕಾರಿ ಮಂಡಲಿಯಲ್ಲಿನ ನನ್ನ ಇಬ್ಬರು ಹಿಂದೂ ಸಹೋದ್ಯೋಗಿಗಳು ಈ ಬೆಳಿಗ್ಗೆ* ನಿಮಗೆ ಸಲ್ಲಿಸಿದ ಮನವಿಯಲ್ಲಿ ವ್ಯಕ್ತಪಡಿಸಿದ್ದಾರೆ ಎಂಬುದನ್ನು ನಾನು ಹೇಳಬಹುದು. ನನಗೆ ತಲ್ಲಣವುಂಟುಮಾಡಿದ್ದು ಎಂದರೆ, ಆಡಳಿತಗಾರರಾಗಿದ್ದು ವೃತ್ತಿ ನಿರ್ವಹಣೆ ಮಾಡಿದ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತಾವು ಪದೇ ಪದೇ ಮಾಡುತ್ತಿದ್ದ ಘೋಷಣೆಗಳಿಗೆ ವಿರುದ್ಧವಾಗಿ ತಮ್ಮ ಆಶ್ರಿತ ಜನರನ್ನು ಅಂತಹ ಅನಾದರವಾದ, ಪಕ್ಷಪಾತದ ಮತ್ತು ಅನ್ಯಾಯದ ರೀತಿಯಲ್ಲಿ ಹಾಗೂ ಜ್ಞಾನಿಗಳಾದ ಹಿಂದೂ ಅಭಿಪ್ರಾಯವು ಮಾಡಬಹುದಾದ್ದಕ್ಕಿಂತಲೂ ಹೆಚ್ಚು ಕೀಳಾಗಿ ಪರಿಶಿಷ್ಟ ಜಾತಿಯವರನ್ನು ನಡೆಸಿಕೊಂಡಿದ್ದಾರೆ ಎಂಬ ಸಂಗತಿ. ಆದ್ದರಿಂದ ನನ್ನ ಕೈಯಲ್ಲಿರುವ ಎಲ್ಲ ವಿಧಗಳಿಂದಲೂ ಈ ಸಲಹೆಯನ್ನು ವಿರೋಧಿಸುವುದು ನನ್ನ ಅವಶ್ಯ ಮತ್ತು ಪವಿತ್ರ ಕರ್ತವ್ಯವಾಗಿದೆ ಎಂದು ನನಗೆ ಅನ್ನಿಸುತ್ತದೆ. ಈ ಸಲಹೆ ಪರಿಶಿಷ್ಟ ಜಾತಿಗಳಿಗೆ ಮರಣದ ಘಂಟಾನಾದ ಮಾತ್ರವೇ ಅಲ್ಲ, ಅವರ ವಿಮೋಚನೆಗಾಗಿ ಕಳೆದ ಐವತ್ತು ವರ್ಷಗಳಿಂದ ನಡೆದ ಅವರ ಪ್ರಯತ್ನವನ್ನು ಮುಗಿಸಿಬಿಡುವ ಪರಿಣಾಮದ್ದು. ಆ ಸಲಹೆಯ ಬಗ್ಗೆ ಇರುವ ಅನೇಕ ಅಭಿಪ್ರಾಯಗಳನ್ನು ವಿರೋಧಿಸದೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅಸ್ಪೃಶ್ಯರ ಅದೃಷ್ಟವನ್ನು ಹಿಂದೂ ಮುಸ್ಲಿಮ್ ಸಂಯುಕ್ತದ ನಾಜೂಕು ಕರುಣೆಗೆ ಒಪ್ಪಿಸಲು ಇಚ್ಛಿಸಿದಲ್ಲಿ ಒಪ್ಪಿಸಿಕೊಳ್ಳಲಿ. ಆದರೆ ನನ್ನ ಜನರ ದಮನಕಾರ್ಯದಲ್ಲಿ ನಾನು ಸಹಭಾಗಿಯಾಗಲಾರೆ. ನಾನು ತಲಪಿರುವ ತೀರ್ಮಾನವೆಂದರೆ, ಆದ ತಪ್ಪನ್ನು ಸರಿಪಡಿಸಿಕೊಳ್ಳಬೇಕೆಂದೂ ಅಸ್ಪೃಶ್ಯರಿಗೆ ಹೊಸ ಕಾರ್ಯಕಾರಿ ಮಂಡಲಿಯಲ್ಲಿ ಕಡೆಯ ಪಕ್ಷ ಮೂರು ಸ್ಥಾನಗಳನ್ನು ನೀಡಬೇಕೆಂದೂ ಘನತೆವೆತ್ತ ಮಹಾಪ್ರಭುಗಳ ಸರ್ಕಾರವನ್ನು ಕೇಳಿಕೊಳ್ಳುವುದು. ಇದನ್ನು ಮಂಜೂರು ಮಾಡಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಸಿದ್ಧವಾಗಿಲ್ಲದಿದ್ದರೆ, ಹೊಸದಾಗಿ ರಚಿಸಿದ ಕಾರ್ಯಾಂಗ ಮಂಡಲಿಯಲ್ಲಿ, ನನಗೆ ಸ್ಥಾನವನ್ನು ನೀಡಿದ್ದರೂ ನಾನು ಅದರ ಸದಸ್ಯನಾಗಲಾರೆ ಎಂದು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತಿಳಿದುಕೊಳ್ಳಬೇಕು. ಅಸ್ಪೃಶ್ಯರು ಕೆಲಕಾಲದಿಂದ ಅವರ ರಾಜಕೀಯ ಹಕ್ಕುಗಳನ್ನು ಪೂರ್ಣವಾಗಿ ಮಾನ್ಯ ಮಾಡುತ್ತಾರೆಂದು ಎದುರು ನೋಡುತ್ತಿದ್ದಾರೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ತೀರ್ಮಾನದಿಂದ ಅವರು ದಿಗ್ಭ್ರಮೆಗೊಳ್ಳುವುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಇಡೀ ಪರಿಶಿಷ್ಟ ಜಾತಿಗಳ ಸಮುದಾಯವು ಪ್ರತಿಭಟನೆಯ ಕುರುಹಾಗಿ ಹೊಸ ಸರ್ಕಾರದೊಂದಿಗೆ ಯಾವ ರೀತಿಯಲ್ಲೂ ಪ್ರತಿಕ್ರಿಯಿಸಬಾರದೆಂದು ತೀರ್ಮಾನಿಸಿದಲ್ಲಿ ನನಗೆ ಅಚ್ಚರಿಯೆನಿಸುವುದಿಲ್ಲ. ಅವರ

---

* ೪೮೨ನೇ ಸಂಖ್ಯೆಯನ್ನು ನೋಡಿ (ದಿ ಟ್ರಾನ್ಸ್‌ಫರ್ ಆಫ್ ಪವರ್)

ಭ್ರಮನಿರಸನದಿಂದ ದಾರಿಗಳು ಬೇರೆಯಾಗುವುದು ನನಗೆ ಖಚಿತವಾಗಿದೆ. ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಸಲಹೆಗಳನ್ನು ಪರಿಷ್ಕರಿಸದಿದ್ದರೆ ನಾನು ನಿರೀಕ್ಷಿಸುವ ಫಲಿತಾಂಶ ಇದೇ. ನನ್ನ ಮಟ್ಟಿಗೆ ಹೇಳುವುದಾದಲ್ಲಿ ನಾನು ತೀರ್ಮಾನ ಕೈಗೊಂಡಾಗಿದೆ. ಆ ವಿಷಯವಾಗಿ ಇದು ಅಂತಿಮ ರೂಪವಲ್ಲ ಎಂದೂ ಇದು ಕೇವಲ ಮಧ್ಯಂತರ ಏರ್ಪಾಡು ಎಂದೂ ನನಗೆ ಹೇಳಬಹುದು. ರಿಯಾಯಿತಿಗಳನ್ನೂ ಹೊಂದಾಣಿಕೆಗಳನ್ನೂ ಒಮ್ಮೆ ಜಾರಿಗೆ ತಂದ ಮೇಲೆ ಅವು ಪಟ್ಟಭದ್ರ ಹಕ್ಕುಗಳಾಗಿ ಬೆಳೆಯುತ್ತವೆ ಮತ್ತು ತಪ್ಪು ತೀರ್ಮಾನಗಳನ್ನು ಒಮ್ಮೆ ಒಪ್ಪಿದಲ್ಲಿ ಅವು ಭವಿಷ್ಯದ ತೀರ್ಮಾನದ ಹೊತ್ತಿನಲ್ಲಿ ಪೂರ್ವನಿದರ್ಶನಗಳಾಗುತ್ತವೆ ಎಂದು ತಿಳಿಯಲು ಸಾಧ್ಯವಾಗುವಷ್ಟು ದೀರ್ಘಕಾಲದಿಂದ ನಾನು ರಾಜಕಾರಣದಲ್ಲಿದ್ದೇನೆ. ಆದ್ದರಿಂದ ಹೆಜ್ಜೆಯಿಡುವಾಗ ನಾನು ಎಚ್ಚರವಾಗಿರುತ್ತೇನೆ. ಸರಿಯಾಗಿ ತೀರ್ಮಾನಿಸುವ ಶಕ್ತಿ ನನಗೆ ಇದ್ದಲ್ಲಿ ಸ್ಥಾನಗಳ ಹಂಚಿಕೆ ತಾತ್ಕಾಲಿಕ ಏರ್ಪಾಡು ಎಂಬಂತೆ ಪ್ರಾರಂಭವಾದರೂ ಕಾಯಂ ಆಗಿ ಮುಕ್ತಾಯವಾಗುತ್ತದೆ ಎಂಬುದು ನನ್ನ ಕಣ್ಣಿಗೆ ಗೋಚರಿಸುತ್ತದೆ. ಅಂತ್ಯದಲ್ಲಿ ವಿಷಾದಿಸುವ ಬದಲು, ತೀರ ಪ್ರಾರಂಭದಲ್ಲೇ ಅದರ ವಿರುದ್ಧ ನನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕೆಂದು ನನಗೆ ಅನ್ನಿಸುತ್ತದೆ.

ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ನನ್ನ ನಿರ್ಗಮನವನ್ನು ಲಕ್ಷಿಸದಿರಬಹುದು ಮತ್ತು ಭವಿಷ್ಯದಲ್ಲಿ ಭಾರತ ಸರ್ಕಾರದಿಂದ ಪರಿಶಿಷ್ಟ ಜಾತಿಗಳ ನಿರ್ಗಮನವನ್ನು ಸಹ ಪರಿಗಣಿಸದಿರಬಹುದು. ಪರಿಣಾಮವಾಗಿ ಈ ದೇಶದಲ್ಲಿರುವ ಬ್ರಿಟಿಷ್ ಸರ್ಕಾರದ ಮತ್ತು ಪರಿಶಿಷ್ಟ ಜಾತಿಗಳ ಹಾದಿಗಳು ಬೇರೆಯಾಗುವುದರಿಂದ ವಿಷಾದಿಸದೆಯೂ ಇರಬಹುದು. ಆದರೆ ಆ ವಿಷಯವಾಗಿ ನಾನು ಹೇಳಬೇಕಾದ್ದನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತಿಳಿದುಕೊಳ್ಳಬೇಕಾದ್ದು ಕೇವಲ ನ್ಯಾಯ ಎಂದು ನಂಬುತ್ತೇನೆ. ಆದ್ದರಿಂದ, ಕಾರ್ಯಾಂಗ ಮಂಡಲಿಯಲ್ಲಿ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವನ್ನು ಹೆಚ್ಚಿಸುವ ನನ್ನ ಸೂಚನೆಯನ್ನು ಮತ್ತು ನನ್ನ ಸೂಚನೆ ಅವರಿಂದ ತಿರಸ್ಕೃತವಾದಲ್ಲಿ ನಾನು ಕೈಕೊಳ್ಳಬೇಕೆಂದಿರುವ ಕ್ರಮವನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರಕ್ಕೆ ತಲಪಿಸಲು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ಇಂತು,<br>
ನಿಮ್ಮ ನಂಬುಗೆಯ<br>
ಬಿ.ಆರ್. ಅಂಬೇಡ್ಕರ್

# ೧೪
# ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಂದ ಲಾರ್ಡ್ ಪೆಥಿಕ್ ಲಾರೆನ್ಸ್‌ರಿಗೆ *

ಎಲ್/ಪಿಓ/೧೦/೨೨ ವೈಸ್‌ರಾಯ್ ಭವನ, ನವದೆಹಲಿ
ಖಾಸಗಿ ಮತ್ತು ರಹಸ್ಯ ಸಂ. ೪೫

* * *

೧೪, ೧೯೪೬ರ ಮುಂಗಡಪತ್ರದ ಅಧಿವೇಶನದ ಕಾರ್ಮಿಕ ಶಾಸನರಚನೆಗಾಗಿ ತಮ್ಮ ಸಲಹೆಗಳನ್ನು ಅಂಬೇಡ್ಕರರು ಇತ್ತೀಚೆಗೆ ಮಂಡಲಿಗೆ ಸಲ್ಲಿಸಿದ್ದಾರೆ. ಕಾರ್ಖಾನೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡಿ ಕೆಲಸದ ಅವಧಿಯನ್ನು ವಾರಕ್ಕೆ ಐವತ್ತಾರು ಗಂಟೆಗಳಿಂದ ಐವತ್ತು ಗಂಟೆಗಳಿಗೆ ಇಳಿಸಬೇಕೆಂಬ ಮಸೂದೆ ಒಂದು. ಪ್ರಾಂತೀಯ ಸರ್ಕಾರಗಳ ಟೀಕೆಗಳನ್ನು ಸ್ವೀಕರಿಸುವಾಗ ಕಾರ್ಯಾಂಗವು ಇದನ್ನು ಮತ್ತೆ ಪರಿಗಣಿಸಬೇಕಾಗಿದೆ. ಎರಡನೆಯ ಸೂಚನೆ, ಕನಿಷ್ಠ ಮಜೂರಿಯನ್ನು ನಿಗದಿಪಡಿಸುವ ಮಸೂದೆಯನ್ನು ಮಂಡಿಸುವುದು. ಈ ವಿಚಾರದಲ್ಲಿ ಎಲ್ಲ ಪ್ರಾಂತೀಯ ಸರ್ಕಾರಗಳ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ. ಆದರೆ, ಹಲವಾರು ಕೈಗಾರಿಕೆಗಳಿಗೆ ಕನಿಷ್ಠ ಮಜೂರಿಯನ್ನು ನಿಗದಿಪಡಿಸುವ ಪ್ರಯತ್ನ ಮಾಡುವಲ್ಲಿ ಈ ಮಸೂದೆ ನಿಸ್ಸಂಶಯವಾಗಿ ಬಹಳ ಮಹತ್ವಾಕಾಂಕ್ಷೆಯಿಂದ ಕೂಡಿದೆ. ಸೂಚಿತ ಪಟ್ಟಿಯಲ್ಲಿ ಕೃಷಿಯೂ ಸೇರಿದೆ. ಆಡಳಿತ ಯಂತ್ರದ ಮೂಲಕ ಒತ್ತಾಯ ಹೇರಿದರೂ ಭಾರತದ ಎಲ್ಲ ೬,೫೦,೦೦೦ ಹಳ್ಳಿಗಳಲ್ಲಿ ಕನಿಷ್ಠ ಮಜೂರಿಯನ್ನು ಒದಗಿಸುವುದು ನಿಶ್ಚಯವಾಗಿಯೂ ಅಸಾಧ್ಯದ ಮಾತು. ಹೇಗೇ ಆಗಲಿ, ಬೆವರು ಬಸಿಯುವ ಚಾಕರಿಯ ಬಳಕೆ ಇದೆ ಎಂದು ನಂಬಲಾಗಿರುವ ಕೈಗಾರಿಕೆಗಳನ್ನು ಎಷ್ಟೇ ಕಷ್ಟವಾದರೂ ಹತೋಟಿಯಲ್ಲಿ ಇರಿಸಿಕೊಳ್ಳುವ ಮಸೂದೆಯನ್ನು ಮಂಡಿಸುವ ಸಲಹೆಗೆ ಮಂಡಲಿಯಲ್ಲಿ ಯಥೇಚ್ಛ ಸಹಾನುಭೂತಿ ಕಂಡುಬಂದಿತು. ಪ್ರಾಂತೀಯ ಸರ್ಕಾರಗಳ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ. ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮವನ್ನು ತಿದ್ದುಪಡಿ ಮಾಡುವ ಚರ್ಚಾಸ್ಪದವಲ್ಲದ ಮಸೂದೆಯನ್ನು ಮಂಡಲಿ ಒಪ್ಪಿಕೊಂಡಿದೆ. ಜೊತೆಗೆ ಹಿರಿಯ ಔದ್ಯಮಿಕ ಸ್ಥಾಪನೆಗಳಲ್ಲಿರುವ ಕೆಲಸಗಾರರು ತಮ್ಮ ಸೇವಾನಿಯಮಗಳ ಬಗ್ಗೆ ತಿಳಿಯಲೆಂದು ರೂಪಿಸಿರುವ ಉದ್ಯೋಗ (ಸ್ಥಾಯಿ ಆದೇಶ) ಮಸೂದೆ ಎಂಬ ಇನ್ನೊಂದನ್ನು ಸಹ ಒಪ್ಪಿದೆ. ಕಾರ್ಮಿಕ ಸಂಘದ ಅಧಿನಿಯಮವನ್ನು ತಿದ್ದುಪಡಿ ಮಾಡಲೆಂದು ಮಸೂದೆಯನ್ನು ಮಂಡಿಸುವ ಸಲಹೆಯನ್ನು ಮಂಡಲಿ ಅಂತಿಮವಾಗಿ ಒಪ್ಪಿತು ಮತ್ತು ಅದನ್ನು ಆಯ್ಕೆ ಸಮಿತಿಗೆ ಒಪ್ಪಿಸಲು ನಿಶ್ಚಯಿಸಿತು. ಕಾರ್ಮಿಕ ಸಂಘಗಳಿಗೆ ಕಡ್ಡಾಯವಾಗಿ ಮಾನ್ಯತೆ ನೀಡಬೇಕೆಂದು ಉದ್ಯೋಗದಾತರುಗಳಿಗೆ ಮಸೂದೆ ನಿರ್ದೇಶಿಸಿದೆ.

೧೫. ಅನಂತರದ ಸಭೆಯೊಂದರಲ್ಲಿ ಔದ್ಯಮಿಕ ಕೆಲಸಗಾರರಿಗೆಂದು ಉದ್ದೇಶಿಸಿದ ವಿಮೆ ಮತ್ತು

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೬, ಸಂಚಿಕೆ ೨೬೮, ಪು. ೬೦೫, ಡಾ॥ ಅಂಬೇಡ್ಕರರನ್ನು ಕುರಿತ ೧೪ನೇ ಪ್ಯಾರಾ ಮಾತ್ರ ಇಲ್ಲಿ ನಿರೂಪಿತವಾಗಿದೆ. ಮಿಕ್ಕ ಪ್ಯಾರಾಗಳನ್ನು ಕೈಬಿಡಲಾಗಿದೆ. (ಸಂ.)

ಸಾಮಾಜಿಕ ರಕ್ಷಣೆಗಳ, ಒಗ್ಗೂಡಿಸಿದ ಕಾರ್ಯ ಯೋಜನೆಯೊಂದನ್ನು ಅಂಬೇಡ್ಕರರು ಸ್ವಲ್ಪ ಆತುರದಿಂದ ಪರಿಚಯಿಸಿದರು. ಅಂಥ ಕಾರ್ಯಯೋಜನೆಗಳನ್ನು ಜಾರಿಗೆ ತರುವ ಅಂಬೇಡ್ಕರರ ಕೋರಿಕೆಯ ಬಗ್ಗೆ ನನಗೆ ಪೂರ್ಣ ಸಹಾನುಭೂತಿ ಇದೆ. ಆದರೆ ಈ ನಿರ್ದಿಷ್ಟ ವಿಚಾರದಲ್ಲಿ ಅವರು ವಿವಿಧ ಇಲಾಖೆಗಳ ಒಪ್ಪಂದಕ್ಕೆ ಸಂಬಂಧಿಸಿದ ಅಗತ್ಯ ಕ್ರಮಗಳನ್ನು ಪೂರೈಸಿರಲಿಲ್ಲ ಮತ್ತು ಎಲ್ಲ ಪ್ರಾಂತಗಳಿಗೂ ಈ ಯೋಜನೆಯ ವೈದ್ಯಕೀಯ ಭಾಗವನ್ನು ಅನುಷ್ಠಾನಕ್ಕೆ ತರಲೆಂದು ಆಡಳಿತದ ಏರ್ಪಾಡುಗಳನ್ನು ಮಾಡುವ ಶಕ್ತಿಯಿದೆಯೇ ಎಂಬುದು ಖಚಿತ ಮಾಡಿಕೊಂಡಿರಲಿಲ್ಲ. ಏನೇ ಇರಲಿ, ಉಳಿದ ಪೂರ್ವಭಾವಿ ಕಾರ್ಯವನ್ನು ಸಮಯಕ್ಕೆ ಸರಿಯಾಗಿ ಮುಗಿಸಿ, ಮುಂಗಡಪತ್ರದ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲೆಂದು ಗೊತ್ತುವಳಿಯನ್ನು ಮಾಡಿ, ಅದಕ್ಕೆ ಪ್ರಚಾರ ನೀಡಿ, ಸಾರ್ವಜನಿಕ ಅಭಿಪ್ರಾಯವನ್ನು ಪಡೆದುಕೊಳ್ಳಲೆಂದು ನಾವು ಆಶಿಸುತ್ತೇವೆ.

## ೧೫

# ಸಚಿವ ಸಂಪುಟದ ನಿಯೋಗ, ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಮತ್ತು ಡಾ॥ ಬಿ.ಆರ್. ಅಂಬೇಡ್ಕರರು ಪಾಲ್ಗೊಂಡ ಗೋಷ್ಠಿಯ ಬಗ್ಗೆ ಟಿಪ್ಪಣಿ *

೧೯೪೬ರ ಏಪ್ರಿಲ್ ೫ರಂದು ಶುಕ್ರವಾರ ಮಧ್ಯಾಹ್ನ ೧೨ ಗಂಟೆ
(ಎಲ್/ಪಿ ಮತ್ತು ಜೆ/೫/೩೩೭ : ಪಿಪಿ. ೮೩–೫)

ರಹಸ್ಯ

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಏಪ್ರಿಲ್ ೨ ರಂದು ಸೇರಿದ್ದ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಪಠ್ಯವನ್ನು ಒಳಗೊಂಡಿರುವ ಮನವಿಯ** ಪ್ರತಿಗಳನ್ನು ನಿಯೋಗದ ಸದಸ್ಯರಿಗೆ ವಿತರಿಸಲಾಗಿದೆ ಎಂದೂ, ಮನವಿಗೆ ಬೇರೇನೂ ಸೇರಿಸಬೇಕಾದ್ದಿಲ್ಲ ಎಂದೂ ಡಾ॥ ಅಂಬೇಡ್ಕರರು ಹೇಳಿದರು. ಈ ಮನವಿಯ ೫ನೇ ಪ್ಯಾರಾದಲ್ಲಿ ರಕ್ಷಣೋಪಾಯಗಳ ಪಟ್ಟಿ ಇದೆ. ಆ ಪಟ್ಟಿಯನ್ನು ಪರಿಶಿಷ್ಟ ಜಾತಿಗಳಿಗೆ ಸರ್ಕಾರದಲ್ಲಿ ಮತ್ತು ಸಾರ್ವಜನಿಕ ಸೇವಾ ಇಲಾಖೆಗಳಲ್ಲಿ ತಕ್ಕಷ್ಟು ಪ್ರಾತಿನಿಧ್ಯವನ್ನು ಗಳಿಸಿಕೊಡುವ ಉದ್ದೇಶದಿಂದ ವ್ಯಾಪಕವಾಗಿ ರೂಪಿಸಿದೆ. ಇವುಗಳು ಸೇರಿಲ್ಲದ ಯಾವುದೇ ಸಂವಿಧಾನವನ್ನು ಒಕ್ಕೂಟವು ಒಪ್ಪಿಕೊಳ್ಳುವುದಿಲ್ಲ.

ಪಾಕಿಸ್ತಾನವನ್ನು ಕುರಿತ ಪ್ರಶ್ನೆಗೆ ಈ ಹೊಸ ರಾಜ್ಯದಿಂದ ಮುಸ್ಲಿಮರು ಒಂದು ಸಮುದಾಯವಾಗಿ ಲಾಭ ಪಡೆಯಬಹುದೇ ಎಂದು ಡಾ॥ ಅಂಬೇಡ್ಕರರು ಸಂದೇಹ ವ್ಯಕ್ತಪಡಿಸಿದರು. ಅವರಲ್ಲಿ ಅನೇಕರು ಹಿಂದೂಸ್ಥಾನದಲ್ಲೇ ಉಳಿಯಬೇಕಾಗುತ್ತದೆ. ಅವರುಗಳು ವಲಸೆ ಹೋಗಲು ಇಚ್ಛಿಸುವುದಿಲ್ಲ ಅಥವಾ ಸಾಧ್ಯವಾಗುವುದಿಲ್ಲ.

ಮುಸ್ಲಿಮರ ದೃಷ್ಟಿಯಲ್ಲಿ ಪಾಕಿಸ್ತಾನವು ಕಾಯಂ ಆಗುತ್ತದೆಯೇ ಅಥವಾ ಕ್ಷಣಿಕವಾದ ಮನೋಭಾವನೆಯೇ ಎಂಬ ವಿಷಯದಲ್ಲಿ ಅವರಿಗೆ ಕುತೂಹಲವಿತ್ತು. ಬಹುಶಃ ಅದು ಕ್ಷಣಿಕವಾದದ್ದು.

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೭, ಸಂಚಿಕೆ ೫೮, ಪು. ೧೪೪–೧೪೭

** ಎಲ್/ಪಿ ಮತ್ತು ಜೆ/೧೦/೫೦.

ಆದರೆ ಕಾದು ನೋಡುವುದು ಅಸಾಧ್ಯ. ಜೊತೆಗೆ ಮುಸ್ಲಿಮ್ ಬೇಡಿಕೆ ಎಷ್ಟು ಹೆಚ್ಚಾಗಿದೆ ಎಂದರೆ ಅದನ್ನು ಹೇಗಾದರೂ ನೆರವೇರಿಸುವುದು ಅಗತ್ಯವಾಗಿದೆ. ಈ ವಿಷಯವಾಗಿ* ಅವರ ಪುಸ್ತಕದಲ್ಲಿ ಶ್ರೀ ಆಸ್‌ಕ್ವಿತ್‌ರವರು ೧೯೨೦ರಲ್ಲಿ ಐರಿಷ್ ಸಮಸ್ಯೆಗೆ ಸೂಚಿಸಿ, ಬಗೆಹರಿಸಿದ ರೀತಿಯನ್ನು ಇಲ್ಲಿಗೆ ತಕ್ಕಂತೆ ಮಾರ್ಪಡಿಸಿ ಈ ಉಭಯ ಸಂಕಟವನ್ನು ಪರಿಹರಿಸಿಕೊಳ್ಳಬೇಕು ಎಂದು ಅವರು ಸಲಹೆ ಮಾಡಿದ್ದಾರೆ. ಐರ್ಲೆಂಡಿನ ಮಿಕ್ಕ ಭಾಗದಿಂದ ಆರು ವರ್ಷಗಳ ಕಾಲ ಉಲ್‌ಸ್ಟರ್ ಬೇರ್ಪಡಬೇಕು ಎಂದು ಆಸ್‌ಕ್ವಿತ್‌ರವರು ಸಲಹೆ ಮಾಡಿದ್ದರು. ಈ ಅವಧಿಯಲ್ಲಿ ದೇಶದ ಎರಡೂ ಭಾಗಗಳ ಪ್ರತಿನಿಧಿಗಳಿರುವ ಮಂಡಲಿಯನ್ನು ಸ್ಥಾಪಿಸಿ ಎರಡೂ ಕಡೆಯ ಸರ್ವಸಾಮಾನ್ಯ ವಿಚಾರಗಳನ್ನು ನೋಡಿಕೊಳ್ಳಬೇಕು. ಆರು ವರ್ಷಗಳ ನಂತರ ಬೇರೆಯಾಗಿರಬೇಕೇ ಅಥವಾ ದಕ್ಷಿಣ ಐರ್ಲೆಂಡಿನೊಂದಿಗೆ ಪುನಃ ಒಂದಾಗಬೇಕೇ ಎಂಬ ವಿಷಯದಲ್ಲಿ ಉಲ್‌ಸ್ಟರ್ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ಪಾಕಿಸ್ತಾನಕ್ಕೆ ಹತ್ತು ವರ್ಷಗಳ ಕಾಲ ಸ್ವತಂತ್ರವನ್ನು ಕೊಡಬೇಕು, ಆ ಅವಧಿಯ ನಂತರ ಆರ್ಥಿಕವಾಗಿ ಈ ಪ್ರಸ್ತಾಪ ಸರಿಯೇ ಎಂಬುದು ತಿಳಿಯುತ್ತದೆ ಎಂದು ಡಾ॥ ಅಂಬೇಡ್ಕರರು ಸೂಚಿಸಿದ್ದರು. ಪಾಕಿಸ್ತಾನದ ಜನರು ಹಿಂದೂಸ್ಥಾನದೊಂದಿಗೆ ಸೇರಲು ಬಯಸಿದಲ್ಲಿ ಸಂಧಾನ ನಡೆಸುವಾಗ ಅವರ ಪರಿಸ್ಥಿತಿ ದುರ್ಬಲವಾಗಿರುತ್ತದೆ ಮತ್ತು ಚೌಕಾಸಿ ಮಾಡುವ ಎಲ್ಲ ಸಾಧ್ಯತೆಗಳೂ ಇನ್ನೊಂದು ಪಕ್ಷದಲ್ಲಿರುತ್ತದೆ ಎಂದು ಅವರು ಒಪ್ಪಿಕೊಂಡರು. ಹತ್ತು ವರ್ಷಗಳ ಅವಧಿಯಲ್ಲಿ, ಇಬ್ಬರಿಗೂ ಸೇರಿದ ಮಂಡಲಿ ಇರಬಹುದು, ಆದರೆ ಅದು ಪೂರ್ತಿಯಾಗಿ ಸಲಹೆ ನೀಡುವ ಅಧಿಕಾರವನ್ನು ಮಾತ್ರ ಹೊಂದಿರುವಂಥದು, ಅದಕ್ಕೆ ಕಾರ್ಯಾಂಗದ ಅಧಿಕಾರವೇನೂ ಇರುವುದಿಲ್ಲ. ಮುಸ್ಲಿಮರ ಈಗಿನ ಮನೋಭಾವನೆಯಲ್ಲಿ ಅವರನ್ನು ಕರೆತಂದು ಒಪ್ಪಿಸಬಹುದಾದ ಯಾವುದೇ ಅಖಿಲ ಭಾರತ ಕೇಂದ್ರ ಸರ್ಕಾರ ಪ್ರಯೋಜನವಿಲ್ಲ ಎನ್ನಬಹುದಾದಷ್ಟು ಅಶಕ್ತವಾಗಿದೆ. ಪಾಕಿಸ್ತಾನಕ್ಕಾಗಿ ಮುಸ್ಲಿಮ್ ಬೇಡಿಕೆ, ಬಿರಿದು ಬೇರೆಯಾಗುವ ಮಿಕ್ಕ ಇತರ ಪ್ರವೃತ್ತಿಗಳೂ ಇದ್ದವು. ಅರ್ಹವಾದ ಕೇಂದ್ರ ಸರ್ಕಾರವೆಂದರೆ ದೇಶವನ್ನು ಒಟ್ಟಾಗಿರಿಸಿಕೊಳ್ಳಲು ಶಕ್ತವಾಗಿರುವಂಥದ್ದು.

ಸಂವಿಧಾನ ಸಭೆಯಲ್ಲಿನ ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದ ಕ್ರಮವನ್ನು ಕುರಿತ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಡಾ॥ ಅಂಬೇಡ್ಕರರು ಸಂವಿಧಾನ ಸಭೆ ತಮಗೆ ಬೇಕೇ ಇಲ್ಲ ಎಂದು ಹೇಳಿದರು. ಅಲ್ಲಿರುವಂಥದು ಸವರ್ಣೀಯರ ಪ್ರಾಬಲ್ಯ. ಪರಿಶಿಷ್ಟ ಜಾತಿಗಳ ಸದಸ್ಯರು ಚಿಕ್ಕದೊಂದು ಅಲ್ಪಸಂಖ್ಯಾತ ಕೋಮಿಗಿಂತ ಹೆಚ್ಚಾಗಿರುವುದಿಲ್ಲ. ಸಭೆಯ ತೀರ್ಮಾನಗಳಿಗೆ ಮುಕ್ಕಾಲು ಭಾಗ ಅಥವಾ ಮೂರನೇ ಎರಡರಷ್ಟು ಬಹುಮತ ಬೇಕೆಂದಿದ್ದರೂ ಪರಿಶಿಷ್ಟ ಜಾತಿಗಳ ಸದಸ್ಯರ ಮತಗಳನ್ನು ಮೀರಿಸಿಬಿಡಬಹುದು. ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಅಲ್ಪಸಂಖ್ಯಾತರ ರಕ್ಷಣೆಗಾಗಿ ನೀಡಿರುವ ಎಲ್ಲ ಭರವಸೆಗಳೂ ಮಂಡಲಿಯಿಂದ ತೀರ್ಮಾನಗೊಳ್ಳುತ್ತವೆ. ಅದೂ ಅಲ್ಲದೆ ಸಭೆಯಲ್ಲಿ ಅತೀವ ಪ್ರಮಾಣದ ಭ್ರಷ್ಟಾಚಾರ ಇರುತ್ತದೆ. ತಮ್ಮ ಕೋಮಿನ ಹಿತಾಸಕ್ತಿಗಳ ವಿರುದ್ಧವಾಗಿ ಮತ ಹಾಕುವಂತೆ ಸದಸ್ಯರನ್ನು ಕೊಳ್ಳಲಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸಂವಿಧಾನ ಸಭೆಗೆಂದು ರೂಪಿಸಲಾಗಿರುವ ಕಾರ್ಯಭಾರವನ್ನು ಎರಡು ವರ್ಗಗಳನ್ನಾಗಿಸಬೇಕು ಎಂಬುದು ಅವರದೇ ಸಲಹೆ.

---

* ಬಿ.ಆರ್. ಅಂಬೇಡ್ಕರ್, 'ಪಾಕಿಸ್ತಾನ್ ಆರ್ ದಿ ಪಾರ್ಟಿಷನ್ ಆಫ್ ಇಂಡಿಯಾ' (ಥ್ಯಾಕರ್ ಅಂಡ್ ಕಂಪೆನಿ, ಬೊಂಬಾಯಿ; ೧೯೪೬).

(ಅ) ಸರಿಯಾದ ಅರ್ಥದಲ್ಲಿ ಸಂವಿಧಾನಾತ್ಮಕ ಪ್ರಶ್ನೆಗಳು ಎಂದು ಕರೆಯಲಾಗುವಂಥವು. ಉದಾಹರಣೆಗೆ ಶಾಸಕಾಂಗ ಮತ್ತು ಕಾರ್ಯಾಂಗಗಳು ಹಾಗೂ ಅವುಗಳ ರಚನೆ ಮತ್ತು ಕಾರ್ಯಗಳ ನಡುವಿನ ಸಂಬಂಧ. ಈ ವಿಷಯಗಳನ್ನು ಕುರಿತು ಭಾವನೆಗಳನ್ನು ಉದ್ರೇಕಿಸದೇ ಇದ್ದ ಯಾವ ದೊಡ್ಡ ವಿವಾದವೂ ಇರಲಿಲ್ಲ. ಅವುಗಳನ್ನು ನಿಭಾಯಿಸುವುದು ಪ್ರಾಂತೀಯ ಸಭೆಗಳು ಕಳಿಸಬೇಕೆಂದಿರಬಹುದಾದ ವ್ಯಕ್ತಿಯ ಮಾನಸಿಕ ಸಾಮರ್ಥ್ಯಕ್ಕೆ ಮೀರಿದ್ದು. ಅದು ತಜ್ಞರ ಕಾರ್ಯ.

(ಆ) ಕೋಮು ಸಂಬಂಧದ ಪ್ರಶ್ನೆಗಳು :

ಈ ಶೀರ್ಷಿಕೆಗಳಲ್ಲಿ ಮೊದಲನೆಯದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಗ್ರೇಟ್ ಬ್ರಿಟನ್ನಿನ ಅಥವಾ ಅಮೆರಿಕದ ಪ್ರಖ್ಯಾತ ಸಂವಿಧಾನ ತಜ್ಞ ವಕೀಲರೊಬ್ಬರು ಅಧ್ಯಕ್ಷರಾಗಿರುವ ಆಯೋಗವೊಂದಕ್ಕೆ ವಹಿಸಬೇಕು. ಮಿಕ್ಕ ಸದಸ್ಯರಲ್ಲಿ ಇಬ್ಬರು ಭಾರತೀಯ ತಜ್ಞರು ಮತ್ತು ಹಿಂದೂ ಹಾಗೂ ಮುಸ್ಲಿಮ್ ಕೋಮುಗಳಿಂದ ಒಬ್ಬೊಬ್ಬ ಪ್ರತಿನಿಧಿಗಳೂ ಇರಬೇಕು. ಆಯೋಗದಲ್ಲಿನ ಉಲ್ಲೇಖದ ವಿಷಯಗಳೂ ೧೯೨೫ರ ಭಾರತ ಸರ್ಕಾರದ ಅಧಿನಿಯಮವು ಆಗಿರಬೇಕು ಮತ್ತು ಅವುಗಳು ಅಧಿನಿಯಮದಲ್ಲಿ ಇರುವಂತೆ ಮಾಡಬೇಕಾದ ಬದಲಾವಣೆಗಳನ್ನು ಶಿಫಾರಸು ಮಾಡಬೇಕು.

ಕೋಮು ಸಂಬಂಧದ ಪ್ರಶ್ನೆಗಳನ್ನು ವಿವಿಧ ಕೋಮುಗಳ ಮುಖಂಡರ ಸಮಾಲೋಚನೆಗೆ ವಹಿಸಬೇಕು. ಸಮಾಲೋಚನೆ ಒಮ್ಮತದ ಪರಿಹಾರವನ್ನು ಕಂಡುಕೊಳ್ಳಲು ವಿಫಲವಾದಲ್ಲಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ತೀರ್ಪು ಕೊಡಬೇಕಾಗುತ್ತದೆ. ಈ ತೀರ್ಪು ನ್ಯಾಯವಾಗಿದ್ದರೆ ಒಪ್ಪಿತವಾಗುವುದರಲ್ಲಿ ಸಂದೇಹವಿಲ್ಲ.

ಅನಂತರ ಡಾ॥ ಅಂಬೇಡ್ಕರರು ಪರಿಶಿಷ್ಟ ಜಾತಿಗಳ ಇಂದಿನ ಪರಿಸ್ಥಿತಿಯನ್ನು ವಿವರಿಸಿದರು. ಅವರ ಸಂಖ್ಯೆ ಆರು ಕೋಟಿ ಎಂದು ಅಂದಾಜು ಮಾಡಲಾಯಿತು. ಈ ಸಂಖ್ಯೆ ಬಹುಶಃ ನಿಖರವಾದುದಲ್ಲ. ಏಕೆಂದರೆ ಮೊದಲನೆಯದಾಗಿ, ರಾಜ್ಯಗಳಲ್ಲಿ ನಂಬಲರ್ಹವಾದ ಅಂಕಿಅಂಶಗಳಿಲ್ಲ. ಎರಡನೆಯದಾಗಿ, ಜನಗಣತಿ ರಾಜಕೀಯದೊಂದಿಗೆ ಬೆರೆತುಹೋಗಿದೆ. ಈ ಎಲ್ಲ ಜನರೂ ಬಹಳ ತೀವ್ರವಾದ ನ್ಯೂನತೆಗಳಿಗೆ ಪಕ್ಕಾಗಿದ್ದಾರೆ. ಹಳ್ಳಿಗಳಲ್ಲಿ ಅವರಿಗೆ ಭೂಮಿಯಿಲ್ಲ. ವಾಸ್ತವವಾಗಿ ಅವರು ಸವರ್ಣೀಯರ ಗುಲಾಮರಾಗಿದ್ದಾರೆ. ಕೆಲವರು ಅಸ್ಪೃಶ್ಯರು ಮಿಲಿಟರಿ ಅಧಿಕಾರಿಗಳಲ್ಲಿ ಒಳ್ಳೆಯ ಆದಾಯವಿರುವ ಕೆಲಸವನ್ನು ಮಾಡಲೆಂದು ತಮ್ಮ ಹಳ್ಳಿಗಳಿಂದ ತಪ್ಪಿಸಿಕೊಂಡು ಹೋದಾಗ ಸವರ್ಣೀಯರು ಅವರನ್ನು ತಮ್ಮ ಕೈಕೆಳಗೆ ಕೆಲಸ ಮಾಡಬೇಕೆಂದು ಬಲವಂತದಿಂದ ಹಿಂದಕ್ಕೆ ಕರೆತಂದರು ಎಂಬುದನ್ನು, ಹಿಂದೂಗಳ ದಬ್ಬಾಳಿಕೆಗೆ ಉದಾಹರಣೆಯಾಗಿ ಅಂಬೇಡ್ಕರರು ಹೇಳಿದರು. ಅಧೀನ ದರ್ಜೆಯ ಪೊಲೀಸರು ಮತ್ತು ಕಂದಾಯ ಇಲಾಖೆಗಳಲ್ಲಿನ ಸವರ್ಣೀಯರ ಪ್ರಾಧಾನ್ಯದ ಕಾರಣದಿಂದ ಅಸ್ಪೃಶ್ಯರ ದೃಷ್ಟಿಯಲ್ಲಿ ಸರ್ಕಾರ ಈಗಾಗಲೇ ಬ್ರಿಟಿಷ್ ಆಳ್ವಿಕೆಯಾಗಿಲ್ಲ, ಬದಲಿಗೆ ಹಿಂದೂ ಆಳ್ವಿಕೆ ಆಗಿಬಿಟ್ಟಿದೆ. ಶ್ರೀ ಗಾಂಧಿಯವರತ್ತ ಕಲ್ಲು ಬೀರಿದರೆಂದು ಇತ್ತೀಚೆಗೆ ಮುಂಬಯಿಯಲ್ಲಿ ನೂರು ಜನ ಯುವಕರನ್ನು ಸೆರೆಹಿಡಿದಾಗ ನಗರದಲ್ಲಿನ ಪರಿಶಿಷ್ಟ ಜಾತಿಗಳ ವಾಸಸ್ಥಳಕ್ಕೆ ತಕ್ಕಮಟ್ಟಿನ ಹಾನಿ ಮಾಡಲು ಪೊಲೀಸರು ಸಹ ಅವಕಾಶವನ್ನು ಉಪಯೋಗಿಸಿಕೊಂಡಿದ್ದು ಒಂದು ಉದಾಹರಣೆ.

ರಾಜಕೀಯವಾಗಿ ಇತರ ಕೋಮುಗಳಂತೆ ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತದಾರ ಸಮುದಾಯ ೧೯೩೨ರಲ್ಲಿ ಮಂಜೂರಾಗಿದ್ದರೂ ವಾಸ್ತವದಲ್ಲಿ ಅದನ್ನು ಅವರಿಂದ ಪುಣೆಯ ಒಪ್ಪಂದ*ದ ಮೂಲಕ

* ೩ನೇ ಅಪ್ಪಣೆಯ ೪೫ನೇ ಸಂಖ್ಯೆಯನ್ನು ನೋಡಿ.

ಅಪಹರಿಸಲಾಗಿದೆ. ಬದಲಾಗಿ ಜೋಡಿ ಚುನಾವಣೆಯ ವ್ಯವಸ್ಥೆಯನ್ನು ಅವರು ಪಡೆದಿದ್ದಾರೆ. ಕೇವಲ ಅಸ್ಪೃಶ್ಯರು ಮತದಾರರಾಗಿದ್ದ ಮೊದಲನೆಯ ಚುನಾವಣೆಯ ಫಲಿತಾಂಶವನ್ನು ಸವರ್ಣೀಯರು ಎರಡನೆಯ ಚುನಾವಣೆಯಲ್ಲಿ ಎಲ್ಲ ಹಿಂದೂಗಳು ಮತದಾನ ಮಾಡಿದಾಗ ಅನೂರ್ಜಿತಗೊಳಿಸಬಹುದು. ಏಪ್ರಿಲ್ ೨ ರಂದು ನಡೆದ ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಅನುಬಂಧವಾಗಿದ್ದ ಅಂಕಿಅಂಶಗಳನ್ನು ಅವರು ಉಲ್ಲೇಖಿಸಿದರು. ಮೊದಲನೆಯದಾಗಿ, ಹಲವು ಬಾರಿ ಕಾಂಗ್ರೆಸ್ಸಿನ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು, ಪ್ರಾಥಮಿಕ ಚುನಾವಣೆಗಳಲ್ಲಿ ಒಕ್ಕೂಟದ ಅಭ್ಯರ್ಥಿಗಳಿಂದ ಮೀರಿಸಲ್ಪಟ್ಟಿದ್ದರೂ, ಅಂತಿಮ ಚುನಾವಣೆಗಳಲ್ಲಿ ಅವರನ್ನು ಸೋಲಿಸಿದ್ದು. ಎರಡನೆಯದಾಗಿ ಸರ್ವಸಾಮಾನ್ಯ ಮತದಾರರ ಒಟ್ಟು ಸಂಖ್ಯೆಯೊಡನೆ ಹೋಲಿಸಿದಾಗ ಪರಿಶಿಷ್ಟ ಜಾತಿಗಳ ಮತದಾರರ ಸಂಖ್ಯೆ ಎಷ್ಟು ಚಿಕ್ಕದು ಎಂಬುದು. ಹಾಗಿದ್ದೂ, ಕಾಂಗ್ರೆಸ್ಸಿನವರು ತಮ್ಮ ಅಭ್ಯರ್ಥಿಗಳ ಗೆಲುವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕೊಳ್ಳೆ ಹೊಡೆಯುವ ಮತ್ತು ಬೆಂಕಿ ಹಾಕುವ ಉಪಾಯಗಳನ್ನು ಕೈಗೊಂಡರು, ಅವರು ಮಾಡಿದ್ದೇನು ಎಂದು ತೋರಿಸುವ ಸಲುವಾಗಿ ಅಂಬೇಡ್ಕರರು ಚಿತ್ರಗಳ ಒಂದು ಕಟ್ಟನ್ನು ಮುಂದಿಟ್ಟರು.

ಕೇಂದ್ರ ವಿಧಾನಮಂಡಲವು ೧೯೧೯ರಿಂದ ಅಸ್ತಿತ್ವದಲ್ಲಿದೆ. ಆದರೂ, ಪರಿಶಿಷ್ಟ ಜಾತಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಎಂದೂ ಯಾರೂ ಯಾವ ಪ್ರಶ್ನೆಯನ್ನೂ ಕೇಳಿಲ್ಲ, ಯಾವ ನಿರ್ಣಯವನ್ನೂ ಮಂಡಿಸಿಲ್ಲ ಅಥವಾ ಬೇರೆ ಏನನ್ನೂ ಮಾಡಿಲ್ಲ.

ಭಾರತೀಯ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಪರಿಸ್ಥಿತಿ ತುಂಬ ಕೆಟ್ಟದಾಗಿದೆ. ಕೆಲವು ಆಹಾರ ಪದಾರ್ಥಗಳನ್ನು ತಿನ್ನಲು ಅವರಿಗೆ ಅವಕಾಶವಿಲ್ಲ. ಕೆಲವು ರಾಜ್ಯಗಳಲ್ಲಿನ, ಈಗ ಸ್ಥಾಪನೆಯಾಗುತ್ತಿರುವ ಪ್ರತಿನಿಧಿಗಳ ಸಂಸ್ಥೆಗಳಲ್ಲಿ ಮುಸ್ಲಿಮರ ಹೊರತಾಗಿ ಯಾವ ಕೋಮಿಗೂ ಪ್ರತ್ಯೇಕ ಮತದಾರ ಸಮುದಾಯವನ್ನು ನೀಡಿಲ್ಲ. ರಾಜಕೀಯ ಇಲಾಖೆ ಇಂಥ ಸಂವಿಧಾನಾತ್ಮಕ ಪ್ರಯೋಗಗಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಿತ್ತು ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತದಾರ ಸಮುದಾಯವನ್ನು ಕೊಡಿಸುವ ಪ್ರಯತ್ನವನ್ನು ಮಾಡಬೇಕಿತ್ತು. ಅಖಿಲ ಭಾರತ ಪರಿಶಿಷ್ಟ ಜಾತಿಗಳ ರಾಜ್ಯ ಸಮ್ಮೇಳನಾಧ್ಯಕ್ಷರನ್ನು ನಿಯೋಗವು ಭೇಟಿಯಾಗಬೇಕು.

ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯದ ಮೊತ್ತ ಮೊದಲಿನ ಮಾನವಶಕ್ತಿಯ ಆಕರ ಎಂದರೆ ಪರಿಶಿಷ್ಟ ಜಾತಿಗಳು. ಆದ್ದರಿಂದ ಪರಿಶಿಷ್ಟ ಜಾತಿಗಳ ಸಹಾಯದಿಂದ ಬ್ರಿಟಿಷರು ಭಾರತವನ್ನು ಗೆದ್ದರು. ಆಗಿನಿಂದಲೂ ಅವರು ಮತ್ತು ಬ್ರಿಟಿಷರು ಸ್ನೇಹಿತರು. ಆದರೂ ಬ್ರಿಟಿಷರು ಕರ್ತವ್ಯಪ್ರಜ್ಞೆಯಿಂದ ಆಗಲೀ ಉದ್ದೇಶಪೂರ್ವಕವಾಗಿ ಆಗಲೀ ಅವರಿಗೆ ಎಂದೂ ಸಹಾಯ ಮಾಡಿಲ್ಲ. ಆದರೆ ೧೮೯೨ರಿಂದ ಈಚೆಗೆ ಮುಸ್ಲಿಮರಿಗೆ ಮಾತ್ರ ಅಪರಿಮಿತವಾದ ಸಹಾಯ ನೀಡಿದ್ದಾರೆ.

ಭಾರತ ಸ್ವತಂತ್ರವಾದಲ್ಲಿ ಅತ್ಯಂತ ದೊಡ್ಡ ಅನರ್ಥ ಸಂಭವಿಸಿದಂತೆ ಎಂದು ಅಂಬೇಡ್ಕರರ ಅನಿಸಿಕೆ. ಹೊಸ ಸಂವಿಧಾನವು ಪರಿಶಿಷ್ಟ ಜಾತಿಗಳಿಗೆ ಜೀವ, ನೈಜ ಸ್ವಾತಂತ್ರ್ಯ ಮತ್ತು ಸಂತೋಷವನ್ನು ಗುರಿಯಾಗಿಸಿಕೊಳ್ಳುವ ಮೂಲಭೂತ ಮಾನವ ಹಕ್ಕುಗಳನ್ನು ನೀಡಲು ಹೊಣೆಯಾಗಬೇಕು ಮತ್ತು ಪರಿಶಿಷ್ಟ ಜಾತಿಗಳ ಪ್ರತ್ಯೇಕ ಮತದಾರ ಸಮುದಾಯದ ಹಕ್ಕನ್ನು ಸ್ಥಾಪಿಸಬೇಕು ಹಾಗೂ ಅವರು ಬೇಡುವ ಇತರ ರಕ್ಷಣೋಪಾಯಗಳನ್ನು ನೀಡಬೇಕು ಎಂಬ ಭರವಸೆಗಳನ್ನು ತಾವು ಹೊರಡುವ ಮೊದಲು ಬ್ರಿಟಿಷರು ಕೊಡಬೇಕಾಗಿದೆ. ಸದ್ಯದಲ್ಲಿ ಭ್ರಮನಿರಸನವು ತಮ್ಮ ಹಿಂಬಾಲಕರನ್ನು ಭಯೋತ್ಪಾದನೆ ಮತ್ತು ಕಮ್ಯುನಿಸಂಗಳ ಕಡೆಗೆ ನೂಕುತ್ತಿರುವುದಾಗಿಯೂ ಸಾಂವಿಧಾನಿಕ ಕ್ರಮಗಳ ಪರಿಣಾಮಗಳನ್ನು ಕುರಿತ

ಪ್ರಯೋಗದಲ್ಲಿ ತಾವು ತಮ್ಮ ಹಿಂಬಾಲಕರೊಡನೆ ತೊಡಗಿರುವುದಾಗಿಯೂ ಅಂಬೇಡ್ಕರರು ಹೇಳಿದರು.

ಭಾರತದ ರಾಜಕಾರಣದಲ್ಲಿ ಈವರೆಗೆ ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದು ಮತ್ತು ಹಿಂದೂ ಮುಸ್ಲಿಮರ ಸಮಸ್ಯೆ ಎಂಬ ಎರಡು ವಿಷಯಗಳು ಪ್ರಧಾನವಾಗಿವೆ ಎಂದು ಲಾರ್ಡ್ ಪೆಥಿಕ್–ಲಾರೆನ್ಸ್ ಹೇಳಿದರು. ನಮ್ಮ ಪಥದಿಂದ ಇವು ದೂರವಾದ ಕೂಡಲೇ ಪಕ್ಷವಿಭಜನೆಗಳು ಬಹುಶಃ ಆರ್ಥಿಕ ವಿಷಯಗಳನ್ನು ಕುರಿತು ನಡೆಯುತ್ತವೆ. ಅಧಿಕಾರವನ್ನು ಒಪ್ಪಿಸಲಿರುವ ಬ್ರಿಟಿಷರ ಮೇಲೆ ಅವಲಂಬಿಸುವ ಬದಲು ಎಡಪಂಥದೊಡನೆ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ತಮ್ಮ ಹಕ್ಕುಗಳನ್ನು ಪಡೆಯಲು ಪರಿಶಿಷ್ಟ ಜಾತಿಗಳಿಗೆ ಇನ್ನೂ ಒಳ್ಳೆಯ ಅವಕಾಶ ಇದೆ ಎಂಬುದು ನಿಶ್ಚಯ. ಡಾ॥ ಅಂಬೇಡ್ಕರರು ಉತ್ತರವಾಗಿ ಮೊದಲು ಹೇಳಿದ್ದನ್ನೇ ಪುನರುಚ್ಚರಿಸಿ ಜೋಡಿ ಮತದಾರ ಸಮುದಾಯಗಳು ಇರುವವರೆಗೂ ಪರಿಶಿಷ್ಟ ಜಾತಿಗಳ ಮತದಾರರ ಸಂಖ್ಯೆ ಎಷ್ಟು ಕಡಿಮೆ ಇರುತ್ತದೆ ಎಂದರೆ ಹಿಂದೂ ಅಭ್ಯರ್ಥಿಗಳು ಸುಲಭವಾಗಿ ಅವರ ಆಶೋತ್ತರಗಳನ್ನು ಕಡೆಗಣಿಸಬಹುದು ಎಂದು ಹೇಳಿದರು. ಸವರ್ಣೀಯರು ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಎಂದಿಗೂ ಬೆಂಬಲಿಸುವುದಿಲ್ಲ. ಸದ್ಯದ ವ್ಯವಸ್ಥೆಯಲ್ಲಿ ಒಪ್ಪಿಕೊಂಡಿರುವಂತೆ ಅವರು ಅಸ್ಪೃಶ್ಯರಿಗೆ ಅಂತಿಮ ಚುನಾವಣೆಯಲ್ಲಿ ಮತ ನೀಡಬೇಕಾಗುತ್ತದೆ; ಆದರೆ ಹಾಗೆ ಮಾಡುವಲ್ಲಿನ ಅವರ ಉದ್ದೇಶ, ಎಂದಿಗೂ, ತಮ್ಮದೇ ಆಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವುದು ಆಗಿರಲಿಲ್ಲ; ಬದಲಿಗೆ ಅಂಬೇಡ್ಕರರ ಒಕ್ಕೂಟದಿಂದ ನಿಲ್ಲಿಸಲ್ಪಟ್ಟ ಅಭ್ಯರ್ಥಿಯನ್ನು ಸೋಲಿಸುವುದು ಮಾತ್ರ ಆಗಿತ್ತು. ಪ್ರತ್ಯೇಕ ಮತದಾರ ಸಮುದಾಯಗಳು ಮೂಲಭೂತವಾದುವುಗಳು. ಏಕೆಂದರೆ ಅವುಗಳಿಲ್ಲದೆ ಪರಿಶಿಷ್ಟ ಜಾತಿಗಳು ತಮ್ಮವರೇ ಆದ ಪ್ರತಿನಿಧಿಗಳನ್ನು ಎಂದಿಗೂ ಹೊಂದಲಾಗುವುದಿಲ್ಲ.

## ೧೬
## ಡಾ॥ ಅಂಬೇಡ್ಕರ್‌ರವರಿಂದ ಲಾರ್ಡ್ ವೇವೆಲ್ ಅವರಿಗೆ*

ಭೀಮ್‌ರಾವ್ ಆರ್. ಅಂಬೇಡ್ಕರ್
ಎಂ.ಎ., ಪಿ.ಎಚ್.ಡಿ., ಡಿ.ಎಸ್.ಸಿ.,
ಬ್ಯಾರಿಸ್ಟರ್–ಅಟ್–ಲಾ
ಗವರ್ನರ್ ಜನರಲ್ಲರ ಕಾರ್ಯಕಾರಿ
ಮಂಡಲಿಯ ಸದಸ್ಯರು

೨೨, ಪೃಥ್ವೀರಾಜ್ ರಸ್ತೆ,
ನವದೆಹಲಿ
೩ ಮೇ, ೧೯೪೬

ಪ್ರಿಯ ಲಾರ್ಡ್ ವೇವೆಲ್,

ಮಂತ್ರಿಮಂಡಲದ ನಿಯೋಗವು ಸಿಮ್ಲಾದಲ್ಲಿ ನಡೆಯಲಿರುವ ತಮ್ಮ ಸಮ್ಮೇಳನಕ್ಕೆ ಪರಿಶಿಷ್ಟ ಜಾತಿಗಳ ಪ್ರತಿನಿಧಿಯೊಬ್ಬನನ್ನು ಆಹ್ವಾನಿಸದೇ ಇರುವುದು, ಪರಿಶಿಷ್ಟ ಜಾತಿಗಳವರ ಮನಸ್ಸಿನಲ್ಲಿ, ಈ ಮಂತ್ರಿ ಮಂಡಲದ ನಿಯೋಗವು ಸಾಂವಿಧಾನಿಕ ರಕ್ಷಣೋಪಾಯಗಳ ತಮ್ಮ ಹಕ್ಕೊತ್ತಾಯವನ್ನು ವ್ಯವಸ್ಥೆ ಮಾಡುವುದಕ್ಕೆ ಪ್ರಸ್ತಾಪಿಸುವ ಬಗೆ ಹೇಗೆ ಎಂಬ ಬಗ್ಗೆ ಅನೇಕ ಶಂಕೆಗಳನ್ನು ಹುಟ್ಟಿಸಿದೆ. ಸನ್ನಿವೇಶವು ಗಂಭೀರವಾಗಿರುವುದರಿಂದ

---

* ಆಕರ : ಡಾ॥ ಅಂಬೇಡ್ಕರ್ ಅವರಿಂದ ಖಾಸಗಿಯಾಗಿ ಮುದ್ರಣಗೊಂಡ ಹಸ್ತಪತ್ರಿಕೆ–ಸಂ.

ಈ ವಿಚಾರವಾಗಿ ಪರಿಶಿಷ್ಟ ಜಾತಿಗಳ ಪ್ರತಿಕ್ರಿಯೆಗಳನ್ನು ನಿಮಗೆ ಪರಿಚಯಿಸಲು ನಾನು ಇಚ್ಛಿಸುತ್ತೇನೆ.

ಸಿಮ್ಲಾ ಸಮ್ಮೇಳನಕ್ಕೆ ಪರಿಶಿಷ್ಟ ಜಾತಿಗಳ ಪ್ರತಿನಿಧಿಯನ್ನು ಆಹ್ವಾನಿಸದೇ ಇರಲು ಹಲವು ವಿವರಣೆಗಳನ್ನು ನೀಡಬಹುದು. ನನಗೆ ತೋರುವ, ಹೊರನೋಟಕ್ಕೆ ನ್ಯಾಯಸಮ್ಮತ ಎನ್ನಿಸುವ, ಒಂದು ವಿವರಣೆ ಎಂದರೆ ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯಗಳ ಈಡೇರಿಕೆಗೆ ಇತರ ಪಕ್ಷಗಳ ಒಪ್ಪಿಗೆ ಬೇಕಿಲ್ಲ. ಏಕೆಂದರೆ ಇತರರ ನ್ಯಾಯಸಮ್ಮತ ಹಕ್ಕುಗಳನ್ನು ಅವರು ಆಕ್ರಮಿಸುವುದಿಲ್ಲ. ಕಡೆಯ ಪಕ್ಷ ಅವರ ಮೂರು ಹಕ್ಕೊತ್ತಾಯಗಳನ್ನು ಕುರಿತು ಈ ಮಾತು ನಿಜ. ಅವುಗಳು (೧) ಪ್ರತ್ಯೇಕ ಮತದಾರರ ಸಮುದಾಯ, (೨) ಕೇಂದ್ರ ಕಾರ್ಯಾಂಗದಲ್ಲಿ ಸೂಕ್ತ ಪ್ರಾತಿನಿಧ್ಯ ಮತ್ತು (೩) ಮಧ್ಯಂತರ ಸರ್ಕಾರದ ಪೂರ್ವ ನಿದರ್ಶನವಾಗಿ, ಭವಿಷ್ಯದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಕೆಲವು ನಿರ್ದಿಷ್ಟ ನಿಯಮಗಳನ್ನು ಒಪ್ಪಿಕೊಳ್ಳಬೇಕೆಂದು ಪಕ್ಷಗಳಿಂದ ವಾಗ್ದಾನ ಪಡೆಯಬೇಕೆಂಬ ಷರತ್ತು.

೧೯೪೬ರ ಏಪ್ರಿಲ್ ೫ರಂದು ನನ್ನ ಸಂದರ್ಶನದ ವೇಳೆಯಲ್ಲಿ ನಿಯೋಗದ ಬಳಿ ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯಗಳ ಈಡೇರಿಕೆಗೆ ಇತರ ಪಕ್ಷಗಳ ಒಪ್ಪಿಗೆ ಬೇಕಿಲ್ಲ ಎಂಬ ದೃಷ್ಟಿಯನ್ನು ನಾನು ಬಹಳ ಬಲವಾಗಿ ಪ್ರತಿಪಾದಿಸಿದ್ದೆ.

ಪಂಜಾಬ್, ವಾಯುವ್ಯ ಗಡಿನಾಡಿನ ಪ್ರಾಂತ, ಸಿಂಧ್ ಮತ್ತು ಬಂಗಾಳಗಳಲ್ಲಿರುವ ಬಹುಸಂಖ್ಯಾತ ಕೋಮಿನ ಮುಸ್ಲಿಮರ ವಿಷಯದಲ್ಲಿ ಪ್ರತ್ಯೇಕ ಮತದಾರ ಸಮುದಾಯದ ಬೇಡಿಕೆ, ಪರಿಶಿಷ್ಟ ಜಾತಿಗಳಂತಹ ಅಲ್ಪಸಂಖ್ಯಾತ ಕೋಮಿನ ಪ್ರತ್ಯೇಕ ಮತದಾರ ಸಮುದಾಯಕ್ಕಾಗಿ ಇರುವ ಬೇಡಿಕೆಗಿಂತ ಬೇರೆಯೇ ಆಗಿರುವಂಥದು. ಬಹುಸಂಖ್ಯಾತ ಕೋಮಿನ ಪ್ರತ್ಯೇಕ ಮತದಾರ ಸಮುದಾಯದ ಬೇಡಿಕೆಗೆ ಅಲ್ಪಸಂಖ್ಯಾತ ಕೋಮಿನ ಒಪ್ಪಿಗೆ ಅಗತ್ಯವಾಗಿ ಬೇಕು. ಆದರೆ ಅಲ್ಪಸಂಖ್ಯಾತ ಕೋಮಿನ ಪ್ರತ್ಯೇಕ ಮತದಾರ ಸಮುದಾಯದ ಬೇಡಿಕೆಯನ್ನು ಬಹುಸಂಖ್ಯಾತ ಕೋಮಿನ ಇಚ್ಛೆಯ ಮೇಲೆ ಅವಲಂಬಿಸುವಂತೆ ಮಾಡಬಾರದು. ಮತದಾರ ಸಮುದಾಯ ಎಂದರೆ ಪ್ರಾಥಮಿಕವಾಗಿ, ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರಿಂದ ರಕ್ಷಿಸಲೆಂದು ರಚಿಸಿದ ಒಂದು ಸಾಧನಕೌಶಲ. ವಿಷಯ ಹೀಗಿರುವಲ್ಲಿ ತನ್ನದೇ ಹಿತಾಸಕ್ತಿಗಳಿಗಾಗಿ ಯಾವುದು ಅತ್ಯಂತ ಉತ್ತಮ ಎಂಬುದು ಅಲ್ಪಸಂಖ್ಯಾತರಿಗೆ ತಿಳಿದಿದೆ ಎಂಬ ನಂಬಿಕೆಯಿಂದ ಮತದಾರ ಸಮುದಾಯ ಪ್ರತ್ಯೇಕವಾಗಿರಬೇಕೇ ಒಟ್ಟಾಗಿರಬೇಕೇ ಎನ್ನುವುದನ್ನು ಪೂರ್ಣವಾಗಿ ಅಲ್ಪಸಂಖ್ಯಾತರಿಗೆ ಬಿಡಬೇಕು. ಬಹುಸಂಖ್ಯಾತರು ಈ ವಿಷಯದಲ್ಲಿ ಮಾತಾಡುವಂತೆಯೇ ಇಲ್ಲ, ಅಲ್ಪಸಂಖ್ಯಾತರ ನಿರ್ಣಯವನ್ನು ಅವರು ಸುಮ್ಮನೆ ಒಪ್ಪಿಕೊಳ್ಳಬೇಕು. ಇದನ್ನು ಅನುಸರಿಸಿ, ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತದಾರ ಸಮುದಾಯ ಇರಬೇಕೇ ಬೇಡವೇ ಎಂಬ ವಿಷಯವಾಗಿ ಹಿಂದೂಗಳು ಏನೂ ಹೇಳುವಂತಿಲ್ಲ.

ಪ್ರತ್ಯೇಕ ಮತದಾರ ಸಮುದಾಯಕ್ಕಾಗಿ ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯದಿಂದ, ಹಿಂದೂಗಳಿಗಾಗಲೀ ಬೇರೆ ಯಾವುದೇ ಕೋಮಿನವರಿಗಾಗಲೀ ಪ್ರತಿಕೂಲ ಪರಿಣಾಮ ಆಗುವುದಿಲ್ಲ. ಆದ್ದರಿಂದಲೇ ಈ ಹಕ್ಕೊತ್ತಾಯವನ್ನು ಬೇರೆ ಎಲ್ಲ ಕೋಮಿನವರೂ ಒಪ್ಪಿದ್ದಾರೆ. ಪರಿಶಿಷ್ಟ ಜಾತಿಗಳವರು ಕೂಡ ಹಿಂದೂಗಳೇ ಎಂದೂ ಆದ್ದರಿಂದ ಪ್ರತ್ಯೇಕ ಮತದಾರ ಸಮುದಾಯ ಬೇಕಿಲ್ಲ ಎಂದೂ ಹೇಳುವ ಹಿಂದೂಗಳ ವಾದ ಕೇವಲ ಪೊಳ್ಳು. ಪ್ರತ್ಯೇಕ ಮತದಾರ ಸಮುದಾಯವು ಅಲ್ಪಸಂಖ್ಯಾತರ ರಕ್ಷಣೆಗಾಗಿ ಇರುವ ಒಂದು ಸಾಧನ ಕೌಶಲ ಮತ್ತು ಧರ್ಮಕ್ಕೂ ಅದಕ್ಕೂ ಸಂಬಂಧವಿಲ್ಲ ಎಂಬ ಸಾರವತ್ತಾದ ಅಂಶವನ್ನು ಅದು ಗ್ರಹಿಸಿಲ್ಲ. ಇದಕ್ಕಾಗಿ ರುಜುವಾತೇನಾದರೂ ಅಗತ್ಯವಿದ್ದರೆ, ಯುರೋಪಿಯನ್ನರು, ಆಂಗ್ಲೋ ಇಂಡಿಯನ್ನರು ಮತ್ತು ಭಾರತೀಯ ಕ್ರಿಶ್ಚಿಯನ್ನರುಗಳ ವಿಷಯವನ್ನು ಪರಿಶೀಲಿಸಬಹುದು. ಧಾರ್ಮಿಕವಾಗಿ ಇವರೆಲ್ಲರೂ

ಒಂದೇ ಆದರೂ ಪ್ರತ್ಯೇಕ ಮತದಾರ ಸಮುದಾಯವನ್ನು ಇವರಲ್ಲಿ ಪ್ರತಿಯೊಬ್ಬರೂ ಹೊಂದಿದ್ದಾರೆ.

ಮಂತ್ರಿಮಂಡಲದ ನಿಯೋಗವು ಈ ವಾಸ್ತವಾಂಶಗಳನ್ನೂ ಪರಿಶಿಷ್ಟವರ್ಗದವರ ವಾದಗಳನ್ನೂ ಪರಿಗಣಿಸಿದಲ್ಲಿ, ಇದಕ್ಕೆ ಹಿಂದೂಗಳ ಒಪ್ಪಿಗೆ ಅಗತ್ಯವಿಲ್ಲ ಹಾಗೂ, ಸಂಯುಕ್ತ ಮತದಾರ ಸಮುದಾಯವು ಪರಿಶಿಷ್ಟ ವರ್ಗದವರ ಪ್ರಾತಿನಿಧ್ಯವನ್ನು ಹಾಸ್ಯಾಸ್ಪದ ಸ್ಥಿತಿಗೆ ತಂದಿರುವುದರಿಂದ, ಮಂತ್ರಿಮಂಡಲವೇ ಈ ವಿಷಯದಲ್ಲಿ ವ್ಯವಹರಿಸುತ್ತದೆ ಎಂದು ತಿಮಾನಿಸುವುದರಲ್ಲಿ ಯಾವುದೇ ಅಸಹಜತೆಯೂ ಇರುವುದಿಲ್ಲ.

ಮಧ್ಯಂತರ ಸರ್ಕಾರದಲ್ಲಿನ ತಮ್ಮ ಪ್ರಾತಿನಿಧ್ಯ, ಮುಸ್ಲಿಮರಿಗೆ ಮಂಜೂರಾಗಿರುವ ಪ್ರಾತಿನಿಧ್ಯದಲ್ಲಿ ಶೇಕಡ ೫೦ರಷ್ಟು ಇರಬೇಕು ಎಂಬ ಪರಿಶಿಷ್ಟ ಜಾತಿಗಳ ಎರಡನೇ ಹಕ್ಕೊತ್ತಾಯಕ್ಕೆ ಕೂಡ, ಈ ರಿಯಾಯಿತಿ ದೊರೆಯುವ ಮೊದಲು, ಹಿಂದೂಗಳ ಒಪ್ಪಿಗೆಯ ಅಗತ್ಯವಿಲ್ಲ. ಪರಿಶಿಷ್ಟ ಜಾತಿಗಳ ಸಂಖ್ಯೆಗೆ ಮಾನ್ಯತೆ ನೀಡಿ, ಅವರನ್ನು ಸಂಕಷ್ಟಕ್ಕೀಡುಮಾಡುವ ನ್ಯೂನತೆಗಳ ಭಾರವನ್ನು ಕಂಡು, ತಾವು ಹಿಂದೆ ಬಿದ್ದಿರುವುದನ್ನು ಸರಿಪಡಿಸಿಕೊಂಡು ಇತರ ಮುಂದುವರೆದ ಕೋಮಿನವರೊಡನೆ ದಾರಿಗೆ ಬಂದು ಸೇರಲು ಪರಿಶಿಷ್ಟ ಜಾತಿಗಳೂ ಪಡಬೇಕಾದ ಶ್ರಮವನ್ನು ಪರಿಗಣಿಸಿ, ಕೇಂದ್ರ ಕಾರ್ಯಾಂಗದಲ್ಲಿ ಅವರಿಗೆ ಇರಬೇಕಾದ ಪ್ರಾತಿನಿಧ್ಯ ಎಷ್ಟು ಎಂಬುದನ್ನು ತೀರ್ಮಾನಿಸಬೇಕಾದ್ದು ನಿಯೋಗ. ಕಳೆದ ಸಿಮ್ಲಾ ಸಮ್ಮೇಳನದ ಹೊತ್ತಿನಲ್ಲಿ ಈ ಪ್ರಶ್ನೆಯನ್ನು ನಾನು ಎತ್ತಿದ್ದು ನಿಮಗೆ ನೆನಪಿರುತ್ತದೆ ಮತ್ತು ಮುಸ್ಲಿಮರಿಗೆ ಕೊಟ್ಟ ಪ್ರಾತಿನಿಧ್ಯದಲ್ಲಿ ಶೇಕಡ ೫೦ಕ್ಕಿಂತ ಸ್ವಲ್ಪ ಮಾತ್ರ ಕಡಿಮೆಯಾಗಿ ಎರಡು ಸ್ಥಾನಗಳನ್ನು ಪರಿಶಿಷ್ಟ ಜಾತಿಗಳಿಗೆ ಕೊಡಲು ನೀವು ಸಿದ್ಧವಾಗಿದ್ದೀರಿ.

ಮೂರನೆಯ ಹಕ್ಕೊತ್ತಾಯದಲ್ಲಿ ಹೊಸದೇನೂ ಇಲ್ಲ. ಶ್ರೀ ಗಾಂಧಿಯವರಿಗೆ ಬರೆದ ೧೯೪೪ರ ಆಗಸ್ಟ್ ೧೫ರ ನಿಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದ ನಿಮ್ಮದೇ ದೃಷ್ಟಿಯ ಕೇವಲ ಪುನರುಚ್ಚಾರ ಅದು. ಆ ಪತ್ರದ ಐದನೇ ಪ್ಯಾರಾದಲ್ಲಿ ನೀವು ಹೀಗೆ ಹೇಳಿದ್ದೀರಿ.

"ಈ ಸನ್ನಿವೇಶದಲ್ಲಿ ನೀವು ಸೂಚಿಸುವ ಆಧಾರದ ಮೇಲೆ ನಡೆಯುವ ಚರ್ಚೆಗಳಿಂದ ಯಾವ ಉದ್ದೇಶವೂ ಈಡೇರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಏನೇ ಆಗಲಿ, ಈಗಿನ ಸಂವಿಧಾನದ ರೀತ್ಯಾ ಸ್ಥಾಪನೆಯಾಗಿ ಮತ್ತು ಕಾರ್ಯೋನ್ಮುಖವಾಗುವ ತಾತ್ಪೂರ್ತಿಕ ಸರ್ಕಾರದಲ್ಲಿ, ಹಿಂದೂಗಳ, ಮುಸ್ಲಿಮರ ಮತ್ತು ಮುಖ್ಯ ಅಲ್ಪಸಂಖ್ಯಾತರ ಮುಖಂಡರು ಸಹಕರಿಸಲು ಇಚ್ಛಿಸಿದಲ್ಲಿ, ಒಳ್ಳೆಯ ಪ್ರಗತಿಯನ್ನು ಸಾಧಿಸಬಹುದು ಎಂದು ನನಗೆ ನಂಬಿಕೆಯಿದೆ. ಏಕೆಂದರೆ, ಇಂಥ ಮಧ್ಯಕಾಲದ ಸರ್ಕಾರವು ಸಫಲವಾಗಬೇಕಾದರೆ, ಅದು ರೂಪುಗೊಳ್ಳುವ ಮೊದಲು, ಹಿಂದೂಗಳ, ಮುಸ್ಲಿಮರ ಮತ್ತು ಎಲ್ಲ ಮುಖ್ಯ ವ್ಯಕ್ತಿಗಳ ನಡುವೆ ಹೊಸ ಸಂವಿಧಾನವು ರೂಪುಗೊಳ್ಳಬೇಕಾದ ಕ್ರಮದ ಬಗ್ಗೆ ತಾತ್ತ್ವಿಕವಾದ ಒಪ್ಪಂದವಾಗಬೇಕು."

ನೀವು ಸ್ಪಷ್ಟವಾಗಿ ನಿರೂಪಿಸಿರುವ ಈ ನಿಯಮವು ಘನತೆವೆತ್ತ ಮಹಾಪ್ರಭುಗಳ ಸರ್ಕಾರದ ಪರವಾಗಿ ಆದದ್ದೆಂದು ಅಂಗೀಕೃತವಾಗಬೇಕು ಮತ್ತು ಹಾಗೆಯೇ ಮಂತ್ರಿಮಂಡಲದ ನಿಯೋಗವು ಅದಕ್ಕೆ ಬದ್ಧವಾಗಿರಬೇಕು. ಪರಿಶಿಷ್ಟ ಜಾತಿಗಳು ಕೋರಿರುವುದೆಲ್ಲ ನಿಯೋಗವು ಈ ನಿಯಮವನ್ನು ಜಾರಿಗೆ ತರಲು ಯಾವ ಪಕ್ಷಗಳ ಒಪ್ಪಿಗೆಯೇನೂ ಅಗತ್ಯವಿಲ್ಲ ಎಂದು ಮಾತ್ರ.

ನಾನು ಹೇಳಬಹುದಾದಲ್ಲಿ, ಈ ವಾದಗಳಲ್ಲಿ, ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯಗಳನ್ನು ಕುರಿತು ನಿಯೋಗವು ವಿಧ್ಯುಕ್ತವಾಗಿ ಅಭಿಪ್ರಾಯ ನೀಡುವ ಮೊದಲು ಹಿಂದೂಗಳ ಒಪ್ಪಿಗೆ ಪಡೆಯುವುದು ಅಗತ್ಯ ಎಂದು ಅದು ಯೋಚಿಸುವುದಿಲ್ಲ ಎಂಬ ನಿರ್ಣಯಕ್ಕೆ ಕೊಂಡೊಯ್ಯಲು ಬೇಕಾದ ಒತ್ತಡವಿದೆ ಮತ್ತು

ಅದಕ್ಕಾಗಿಯೇ, ತಮ್ಮ ಪ್ರತಿನಿಧಿಗಳನ್ನು ಸಿಮ್ಲಾ ಸಮ್ಮೇಳನಕ್ಕೆ ಕಳಿಸಲು ಪರಿಶಿಷ್ಟ ಜಾತಿಗಳಿಗೆ ಆಹ್ವಾನ ಬರಲಿಲ್ಲ.

ಆದರೆ ದುರದೃಷ್ಟವಶಾತ್, ಯಾರಿಗೇ ಆಗಲಿ ಹೊಳೆಯುವ ವಿವರಣೆ ಇದೊಂದೇ ಅಲ್ಲ, ಬೇರೆ ಇನ್ನೊಂದು ವಿವರಣೆಯ ಸಾಧ್ಯತೆಯೂ ಇದೆ. ಅದೆಂದರೆ, ಮಂತ್ರಿಮಂಡಲದ ನಿಯೋಗವು, ಮಧ್ಯಂತರ ಸಂವಿಧಾನವನ್ನು ರಚಿಸುವಾಗ ಹಾಗೂ ಭಾರತದ ಭವಿಷ್ಯದ ಸಂವಿಧಾನವನ್ನು ರೂಪಿಸಲು ಬೇಕಾದ ಸಾಧನ ಕೌಶಲದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಪರಿಶಿಷ್ಟ ಜಾತಿಗಳ ವಿಷಯವನ್ನು ಪರಿಗಣಿಸಲು ಕಾಯಬೇಕಾದ ಅಗತ್ಯವಿಲ್ಲದೆ, ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳ ನಡುವಿನ ಒಪ್ಪಂದವನ್ನು ತಮ್ಮ ಹಾದಿಯನ್ನು ಸುಗಮ ಮಾಡಿಕೊಂಡು ಮುಂದೆ ಹೋಗಲು ಸಾಕು ಎಂದು ಪರಿಗಣಿಸುತ್ತದೆ.

ಮಂಡಲಿಯ ಯೋಜನೆ ಏನು ಎಂಬುದು ನಿಶ್ಚಯವಾಗಿ ತಿಳಿಯದಿರುವುದರಿಂದ ಪರಿಶಿಷ್ಟ ಜಾತಿಗಳು ಆತಂಕಗೊಂಡಿವೆ. ನಿಯೋಗವು ಎರಡನೆಯ ಯೋಜನೆಯನ್ನು ಸ್ವೀಕರಿಸಿದ್ದರೆ – ವಾಸ್ತವಾಂಶ ಅದೇ ಇರಬಹುದು. ಆಗ ಪರಿಶಿಷ್ಟ ಜಾತಿಗಳಿಗೆ ಮಾಡಿದ ವಿಶ್ವಾಸದ್ರೋಹದ ವಿರುದ್ಧ ನಾನು ಪ್ರತಿಭಟಿಸದಿದ್ದರೆ ಮತ್ತು ಸಂಭವಿಸಬಹುದಾದ ಪರಿಣಾಮಗಳಿಗೆ ಅವರು ಪೂರ್ಣವಾಗಿ ಹೊಣೆಯಾಗುತ್ತಾರೆ ಎಂದು ನಿಯೋಗಕ್ಕೆ ತಿಳಿಸದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ವಿಫಲನಾದಂತೆ ಭಾವಿಸುತ್ತೇನೆ.

ನಾನು ಈ ಪತ್ರವನ್ನು ಪರಿಶಿಷ್ಟ ಜಾತಿಗಳ ಪ್ರತಿನಿಧಿಯಾಗಿ ಬರೆಯುತ್ತಿದ್ದೇನೆ. ಮಂತ್ರಿಮಂಡಲದ ನಿಯೋಗದ ಸದಸ್ಯರಾದ ನಿಮ್ಮನ್ನು ಅದು ಉದ್ದೇಶಿಸಿದೆ. ಈ ಪತ್ರವನ್ನು ನಿಮ್ಮ ಸಹೋದ್ಯೋಗಿಗಳಲ್ಲಿ ಪ್ರಚಾರ ಮಾಡುವಷ್ಟು ಕರುಣೆಯನ್ನು ನೀವು ತೋರುವಿರಾದರೆ ನಾನು ಕೃತಜ್ಞನಾಗಿರುತ್ತೇನೆ.

ಘನತೆವೆತ್ತ ಫೀಲ್ಡ್ ಮಾರ್ಷಲ್,
ಸೈರೆನಾಯಿಕಾ ಮತ್ತು ವಿಂಚೆಸ್ಟರ್‌ಗಳ
ರೈಟ್ ಆನರಬಲ್ ವೈಕೌಂಟ್ ವೇವೆಲ್ ಅವರಿಗೆ, ಸಿಮ್ಲಾ,
ಜಿ.ಸಿ.ಬಿ., ಜಿ.ಎಂ.ಎಸ್.ಐ., ಜಿ.ಎಂ.ಐ.ಇ., ಸಿ.ಎಂ.ಜಿ., ಎಂ.ಸಿ.,
ಭಾರತದ ವೈಸ್‌ರಾಯ್
ಮತ್ತು ಗವರ್ನರ್ ಜನರಲ್

ಇಂತು,
ನಿಮ್ಮ ನಂಬುಗೆಯ
ಬಿ.ಆರ್. ಅಂಬೇಡ್ಕರ್

# ೧೭
# ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ ಅವರಿಗೆ ಕಾರ್ಯಾಂಗ ಮಂಡಲಿಯ ಸದಸ್ಯರುಗಳು ಬರೆದದ್ದು*

(ಎಲ್/ಪಿ ಮತ್ತು ಜೆ/೫/೩೩೭ : ಪಿ. ೨೪೮)

ಅತಿಗೌಪ್ಯ

ನವದೆಹಲಿ

೮ ಮೇ, ೧೯೪೬

ಪ್ರೀತಿಯ ಲಾರ್ಡ್ ವೇವೆಲ್,

ಕೆಳಗೆ ಸಹಿ ಮಾಡಿರುವ, ಭಾರತದ ಗವರ್ನರ್ ಜನರಲ್ಲರ ಕಾರ್ಯಾಂಗ ಮಂಡಲಿಯ ಸದಸ್ಯರಾದ ನಾವು, ಇಂದು ನವದೆಹಲಿಯಲ್ಲಿ ಹಾಜರಿದ್ದು, ಘನತೆವೆತ್ತವರಾದ ನೀವು ಮತ್ತು ಮಂತ್ರಿಮಂಡಲ ನಿಯೋಗವು ದೃಷ್ಟಿಯಲ್ಲಿ ಇಟ್ಟುಕೊಂಡಿರುವ ಏರ್ಪಾಡುಗಳಿಗೆ ಸಹಾಯವಾಗುತ್ತದೆ ಎಂದು ನಂಬಿರುವುದರಿಂದ ನಮ್ಮ ಖಾತೆಗಳನ್ನು ಘನತೆವೆತ್ತ ಮಹಾಪ್ರಭುಗಳ ಮತ್ತು ಘನತೆವೆತ್ತ ನಿಮ್ಮ ನಿರ್ವಹಣೆಗೆಂದು ಒಪ್ಪಿಸುತ್ತಿದ್ದೇವೆ.

ನಿಮ್ಮ ನಂಬುಗೆಯ,

ಎ. ರಾಮಸ್ವಾಮಿ ಮುದಲಿಯಾರ್, ಇ.ಸಿ. ಬೆಂಥಾಲ್,

ಮೊಹಮ್ಮದ್ ಉಸ್ಮಾನ್, ಬಿ.ಆರ್. ಅಂಬೇಡ್ಕರ್

ಜೆ.ಪಿ. ಶ್ರೀವಾಸ್ತವ, ಎಂ. ಅಜೀಜುಲ್ ಹಕ್

ಎನ್.ಬಿ.ಖರೆ, ಅಶೋಕ ಕೆ. ರಾಯ್

ಎ. ರೋಲ್ಯಾಂಡ್ಸ್, ಜೆ.ಎ. ಥೋರ್ನ್

ಎ. ಹೈದರಿ

[ಅನುಬಂಧ ಮೂಲದಲ್ಲಿರುವಂತೆ :] (ಗೈರು ಹಾಜರಾಗಿದ್ದ ಸದಸ್ಯರು – ಫೀಲ್ಡ್ ಮಾರ್ಷಲ್ ಸರ್ ಕ್ಲಾತ್ ಆಚಿನ್‌ಲೆಕ್, ಸರ್ ಆರ್ಥರ್ ವಾಘ್ ಮತ್ತು ಸರ್ ಜೋಗೇಂದ್ರ ಸಿಂಗ್ ಅವರುಗಳು ತಮ್ಮ ರಾಜೀನಾಮೆಗಳನ್ನು ಬೇರೆಯಾಗಿ ಸಲ್ಲಿಸಿದರು. ಯುದ್ಧ ನಿರ್ವಹಣೆಯ ಸದಸ್ಯರು ಬ್ರಿಟನ್ನಿನಲ್ಲಿದ್ದರು, ಉದ್ಯಮ ಮತ್ತು ಸರಬರಾಜು ನಿರ್ವಹಣೆಯ ಸದಸ್ಯರು ಉತ್ತರ ಅಮೆರಿಕಾಗೆ ಪ್ರತಿನಿಧಿಯಾಗಿ ಹೋಗಿದ್ದರು ಮತ್ತು ಶಿಕ್ಷಣ, ಆರೋಗ್ಯ ಮತ್ತು ಕೃಷಿ ನಿರ್ವಹಣೆಯ ಸದಸ್ಯರು ಪ್ರವಾಸದಲ್ಲಿದ್ದರು.)

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೭, ಸಂಚಿಕೆ ೨೧೮, ಪು. ೪೬೦–೪೬೧.

# ೧೮
# ಡಾ॥ ಅಂಬೇಡ್ಕರರು ಮಂತ್ರಿಮಂಡಲ ನಿಯೋಗದ ಸದಸ್ಯರಾದ ರೈಟ್ ಆನರಬಲ್ ಶ್ರೀ ಎ.ವಿ. ಅಲೆಕ್ಸಾಂಡರ್ ಅವರಿಗೆ ಬರೆದದ್ದು *

ಭೀಮರಾವ್ ಆರ್. ಅಂಬೇಡ್ಕರ್
ಎಂ.ಎ. ಪಿ.ಎಚ್.ಡಿ., ಡಿ.ಎಸ್‌ಸಿ.,
ಬ್ಯಾರಿಸ್ಟರ್ – ಅಟ್ – ಲಾ
ಗವರ್ನರ್ ಜನರಲ್ಲರ ಕಾರ್ಯಕಾರಿ
ಮಂಡಲಿಯ ಸದಸ್ಯರು.

೨೨, ಪೃಥ್ವೀರಾಜ ರಸ್ತೆ,
ನವದೆಹಲಿ
೧೪ ಮೇ, ೧೯೪೬

ಪ್ರಿಯ ಶ್ರೀ ಅಲೆಕ್ಸಾಂಡರ್,

ಕಾಂಗ್ರೆಸ್ ಮತ್ತು ಲೀಗ್‌ಗಳ ನಡುವೆ ಇತ್ಯರ್ಥ ಮಾಡುವ ನಿಮ್ಮ ಪ್ರಯತ್ನಗಳು ವಿಫಲವಾದದ್ದು ಶೋಚನೀಯ. ಎಲ್ಲ ರೀತಿಯ ಸಹಾನುಭೂತಿ ಮತ್ತು ಕೃತಜ್ಞತೆಗಳಿಗೆ ನೀವು ಅರ್ಹರು ಎಂದು ನಾನು ಬಲ್ಲೆ. ಇದೇ ಸಮಯದಲ್ಲಿ, ಇತ್ಯರ್ಥ ಮಾಡುವ ನಿಯೋಗದ ಪ್ರಯತ್ನವು ನನ್ನ ನೆನಪಿಗೆ ತರುತ್ತಿರುವ ಕಥೆಯೊಂದನ್ನು ಹೇಳದೇ ಇರಲಾರೆ. ತನ್ನ ಸಂಪತ್ತಿಗೆ ಉತ್ತರಾಧಿಕಾರಿಯಾಗುವ ಪುತ್ರನಿಲ್ಲದ ಮುದಿ ವ್ಯಾಪಾರಿಯೊಬ್ಬ ವಾರಸುದಾರನನ್ನು ಪಡೆಯುವ ಆಸೆಯಿಂದ ಎಳೆಯ ಹುಡುಗಿಯೊಬ್ಬಳನ್ನು ಮದುವೆಯಾದ, ಪತ್ನಿ ಗರ್ಭಿಣಿಯಾದಳು. ಆದರೆ ಪತಿಗೆ ಭಯಂಕರ ರೋಗ ತಗುಲಿತು. ಏನೇ ಆದರೂ, ಆತ ಮಗುವನ್ನು ಒಮ್ಮೆ ನೋಡದೆ ಸಾಯಲು ನಿರಾಕರಿಸಿದ. ಇನ್ನೂ ದೂರವಿದ್ದ ಹೆರಿಗೆಗೆ ಕಾಯಲಿಲ್ಲ. ಆತ ಬಹಳ ಆತುರಗಾರ. ವೈದ್ಯನನ್ನು ಕರೆದು ತನ್ನ ಪತ್ನಿಯ ಹೊಟ್ಟೆಯನ್ನು ಕೊಯ್ಯಲು ಹೇಳಿ, ಮಗು ಗಂಡೋ ಹೆಣ್ಣೋ ತಾನು ನೋಡಬೇಕೆಂದ. ಶಸ್ತ್ರ ಚಿಕಿತ್ಸೆಯ ಪರಿಣಾಮವಾಗಿ ತಾಯಿ, ಮಗು ಇಬ್ಬರೂ ಸತ್ತರು. ನಾನು ಹೇಳಬಹುದಾದರೆ, ಈ ವ್ಯಾಪಾರಿ ಮಾಡಿದ್ದನ್ನೇ ಬಹುಮಟ್ಟಿಗೆ ನಿಯೋಗವೂ ಮಾಡಬಯಸಿತು. ಆದರೆ ಗರ್ಭಧಾರಣೆಯ ಸಹಜ ಅವಧಿ ಮುಗಿಯುವ ಮೊದಲು ಒತ್ತಾಯದ ಹೆರಿಗೆಯನ್ನು ಮಾಡಿಸುವುದರಲ್ಲಿ ನಿಯೋಗವು ತೊಡಗಿತ್ತು ಎಂದು ನನ್ನಂತೆ ಅನೇಕರು ಭಾವಿಸುತ್ತಾರೆ ಎಂಬುದು ನಿಮಗೆ ಗೊತ್ತಿರಲಾರದು.

೨. ಇಂದು, ಈ ದೇಶದ ಹಣೆಯ ಬರಹವನ್ನು ನಿರ್ಣಯಿಸಲು ಹಿಂದೂಗಳು ಮುಸ್ಲಿಮರೂ ಮಾನಸಿಕವಾಗಿ ಅಸಮರ್ಥರಾಗಿದ್ದಾರೆ ಎಂದು ಹೇಳುವುದು ಪೂರ್ಣ ನಿಜ ಎಂದೇ ನನ್ನ ಭಾವನೆ. ಹಿಂದೂಗಳು ಮತ್ತು ಮುಸ್ಲಿಮರು ಬರಿಯ ಜನರ ಗುಂಪು ಮಾತ್ರ. ಸಾಮೂಹಿಕವಾಗಿ ಹಂಚಿಕೊಂಡ ಭಾವೋದ್ರೇಕಕ್ಕಿಂತಲೂ ಪ್ರಾಪಂಚಿಕ ಲಾಭದಿಂದ ಗುಂಪಿನ ಮನಸ್ಸು ಕರಗುವುದು ಕಡಿಮೆ ಎಂಬುದು ನಿಮ್ಮ ಅನುಭವಕ್ಕೆ ಬಂದಿರಬೇಕು. ಸಾಮೂಹಿಕವಾಗಿ ತಮ್ಮನ್ನೇ ಆಹುತಿ ಕೊಟ್ಟುಕೊಳ್ಳಲು ಜನರ ಗುಂಪನ್ನು ಪ್ರೇರಿಸುವುದು ಸುಲಭ. ಆದರೆ ಸಮಯ, ಅವಕಾಶಗಳನ್ನು ಶಾಂತಚಿತ್ತದಿಂದ ಬೆಲೆಕಟ್ಟಿ ಅರಿತು ಕಾರ್ಯಪ್ರವೃತ್ತರಾಗುವುದು ಕಷ್ಟ. ಲಾಭ, ನಷ್ಟಗಳ ಎಲ್ಲ ವಿವೇಕವನ್ನೂ ಗುಂಪು ಸುಲಭವಾಗಿ ಕಳೆದುಕೊಳ್ಳುತ್ತದೆ. ಉಚ್ಚ ಅಥವಾ ನೀಚ, ಸೃಜನಶೀಲ ಅಥವಾ ಒರಟಾದ, ಕರುಣೆ ತೋರುವ ಅಥವಾ ಕ್ರೂರವಾದ

* ಆಕರ : ಡಾ॥ ಅಂಬೇಡ್ಕರ್ ಅವರಿಂದ ಖಾಸಗಿಯಾಗಿ ಮುದ್ರಣಗೊಂಡ ಹಸ್ತಪತ್ರಿಕೆ – ಸಂ.

ಪ್ರೇರಣೆಗಳಿಂದ ಗುಂಪಿನ ಮನಕರಗುತ್ತದೆ. ಆದರೆ ಅದು ಯಾವಾಗಲೂ ತರ್ಕಾತೀತವಾಗಿ ಅಥವಾ ತರ್ಕರಹಿತವಾಗಿ ಇರುತ್ತದೆ. ಪ್ರತಿಯೊಬ್ಬರ ಸಾಮಾನ್ಯ ಪರಿಜ್ಞಾನ ಎಲ್ಲರ ಉದ್ರೇಕದಲ್ಲಿ ಕಳೆದುಹೋಗುತ್ತದೆ. ಪೂರ್ವಾರ್ಜಿತ ಆಸ್ತಿಯನ್ನು ಸ್ವೀಕರಿಸುವಂತೆ ಮಾಡುವುದಕ್ಕಿಂತಲೂ ಆತ್ಮಹತ್ಯೆ ಮಾಡಿಕೊಳ್ಳಲು ಗುಂಪನ್ನು ಪ್ರೇರೇಪಿಸುವುದು ಸುಲಭ. ನೀವು ಹೇಗೆ ನಡೆದುಕೊಳ್ಳಬೇಕೆಂದು ಮಾರ್ಗದರ್ಶನ ಮಾಡುವುದು ನನ್ನ ಕೆಲಸವಲ್ಲ. ಭಂಗಿ ಬಸ್ತಿಯಲ್ಲಿ ಮತ್ತು ೧೦, ಔರಂಗಜೇಬ್ ರಸ್ತೆಯಲ್ಲಿ ಹೆಚ್ಚಿನ ವಿವೇಕ ಮತ್ತು ಬಹಳವಾದ ಸ್ಫೂರ್ತಿಗಳು ನಿಯೋಗಕ್ಕೆ ದೊರಕಿವೆ. ಅಂಥ ವಿವೇಕ ಮತ್ತು ಸ್ಫೂರ್ತಿಗಳನ್ನು ನಿಕೃಷ್ಟವಾಗಿ ಎಣಿಸಿ ಏನನ್ನಾದರೂ ಹೇಳಬಹುದಾದ ಕಟ್ಟ ಕಡೆಯ ವ್ಯಕ್ತಿ ನಾನು. ಐರ್ಲೆಂಡಿನ ಸ್ವರಾಜ್ಯಕ್ಕೋಸ್ಕರ ತಮ್ಮ ಚಳುವಳಿಯಲ್ಲಿ ತೊಡಗಿದ್ದ ಗ್ಲ್ಯಾಡ್‌ಸ್ಟೋನರನ್ನು ವರ್ಣಿಸಲು ಚೇಂಬರ್‌ಲೇನರು ಬಳಸಿದ ನುಡಿಕಟ್ಟನ್ನು ಬಳಸುವುದಾದರೆ, ಸಾಯುತ್ತಿರುವ ಮುದುಕನೊಬ್ಬನ ಚಿಂತಾಜನಕ ದೃಶ್ಯವನ್ನು ನಿಯೋಗವು ಪ್ರದರ್ಶಿಸಬೇಕಿಲ್ಲದಿದ್ದರೆ, ನಿರ್ವಹಣ ಕೌಶಲ್ಯದಲ್ಲಿ ಅದಕ್ಕೆ ಅವಕಾಶ ನೀಡಿ ಅದನ್ನು 'ಶಾಂತವಾಗುತ್ತಿರುವ ಅವಧಿ' ಎಂದು ಕರೆಯಲಾಗುತ್ತದೆ. ಅಲ್ಲದೆ ನಿಭಾಯಿಸಲು ಇನ್ನೂ ಸುಲಭವಾದ ಸನ್ನಿವೇಶ ಇದೆಯೆಂದು ಅವರು ಕಂಡುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

೩. ಬಹುಸಂಖ್ಯಾತ ಪಕ್ಷಗಳಿಗಾಗಿ ಬಹುಸಂಖ್ಯಾತ ಪಕ್ಷಗಳಲ್ಲಿ ತಮ್ಮ ವಿಶ್ವಾಸವನ್ನು ಇಟ್ಟವರಿಗಾಗಿ ಇದು ನಿಯೋಗದ ವಿಚಾರ. ಅಸ್ಪೃಶ್ಯರ ಸಮಸ್ಯೆಯಲ್ಲಿ ತೊಡಗಲು ಮತ್ತು ಸಾಂವಿಧಾನಿಕ ರಕ್ಷಣೋಪಾಯಗಳಿಗಾಗಿ ಅವರ ಹಕ್ಕೊತ್ತಾಯದ ವಿಷಯವಾಗಿ ನೀವು ಹೇಗೆ ಪ್ರಸ್ತಾಪಿಸುತ್ತೀರಿ ಎಂದು ತಿಳಿಯಲು ನಾನು ಉತ್ಸುಕನಾಗಿದ್ದೇನೆ. ಸಿಮ್ಲಾ ಮಾತುಕತೆಗಳ ಕಡೆಯ ದಿನ ಆಯೋಗ ನೀಡಿರುವ ಅಧಿಕೃತ ಹೇಳಿಕೆಯಲ್ಲಿ ತಾನು ಇಡಲಿರುವ ಮುಂದಿನ ಹೆಜ್ಜೆಯನ್ನು ದೆಹಲಿಗೆ ಹಿಂದಿರುಗಿದ ಮೇಲೆ ಕೆಲವೇ ದಿನಗಳಲ್ಲಿ ಪ್ರಕಟಿಸಲಾಗುತ್ತದೆ ಎಂದು ಹೇಳಿದೆ. ಪರಿಶಿಷ್ಟ ಜಾತಿಗಳಿಗೆ ಸೇರಿದ ಎಲ್ಲರ ಕಣ್ಣುಗಳು ಈ ಪ್ರಕಟಣೆಯ ಕಡೆಗೆ ಹೊರಳಿವೆ ಎಂಬುದು ಸ್ಪಷ್ಟವಾಗಿದೆ. ನಿಯೋಗ ಮಾಡುವಂಥದು ಅಂತಿಮವಾಗಿ ಅವರುಗಳ ಅದೃಷ್ಟವನ್ನು ನಿರ್ಧರಿಸುತ್ತದೆ. ನಿಯೋಗದ ತೀರ್ಮಾನ ಪರಿಶಿಷ್ಟ ಜಾತಿಗಳಿಗೆ ಜೀವ, ಸ್ವಾತಂತ್ರ್ಯ ಮತ್ತು ಸುಖದ ದಾರಿಯನ್ನು ತೆರೆಯುತ್ತದೆ ಅಥವಾ ಅವರ ಶವಪೆಟ್ಟಿಗೆಗೆ ಇನ್ನೊಂದು ಮೊಳೆಯನ್ನು ಹೊಡೆಯುತ್ತದೆ. ಇದು ಜೀವನ್ಮರಣಗಳ ಪ್ರಶ್ನೆಯಾದ್ದರಿಂದ ಪರಿಶಿಷ್ಟ ಜಾತಿಗಳ ಸಮಸ್ಯೆಯತ್ತ ಕೆಲವು ನಿಮಿಷಗಳ ಕಾಲ ನಿಮ್ಮ ಗಮನವನ್ನು ಸೆಳೆದರೆ ತಪ್ಪಾಗುವುದಿಲ್ಲ.

೪. ಪರಿಶಿಷ್ಟ ಜಾತಿಗಳು ಎದುರಿಸಬೇಕಾದ ಸಮಸ್ಯೆ ಭೀಕರವಾದದ್ದು. ಆದರೆ ಅದೃಷ್ಟವಶಾತ್ ಈ ಮುಂದಿನ ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡಲ್ಲಿ ಅದನ್ನು ಅರ್ಥಮಾಡಿಕೊಳ್ಳುವುದು ಸುಲಭ. ಪರಿಶಿಷ್ಟ ಜಾತಿಗಳಿಗೆ ಪ್ರತಿಕೂಲವಾಗಿರುವ ಮತ್ತು ಅವರಿಗೆ ಯಾವುದೇ ಪಕ್ಷಪಾತ ತೋರುವಲ್ಲಿ ಅಥವಾ ಹೇಯಕೃತ್ಯವನ್ನು ಎಸಗುವಲ್ಲಿ ನಾಚಿಕೆಯಿಲ್ಲದ ಹಿಂದೂ ಜನಸಾಗರದಿಂದ ಅವರುಗಳು ಸುತ್ತುವರೆಯಲ್ಪಟ್ಟಿದ್ದಾರೆ. ಪ್ರತಿದಿನ ನಡೆಯುವ ಈ ತಪ್ಪುಗಳನ್ನು ಸರಿಪಡಿಸಲು ಪರಿಶಿಷ್ಟ ಜಾತಿಗಳು ಆಡಳಿತದ ಸಹಾಯಕ್ಕಾಗಿ ಕರೆ ನೀಡಬೇಕಾಗಿದೆ. ಈ ಆಡಳಿತದ ರಚನೆ ಮತ್ತು ಸ್ವರೂಪ ಎಂಥದು? ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಭಾರತದ ಆಡಳಿತ ಸಂಪೂರ್ಣವಾಗಿ ಹಿಂದೂಗಳ ಕೈಯಲ್ಲಿದೆ. ಅದು ಅವರ ಏಕಸ್ವಾಮ್ಯದ್ದು. ಮೇಲಿನಿಂದ ಕೆಳಗಿನವರೆಗೆ ಅವರದೇ ಹತೋಟಿಯಲ್ಲಿದೆ. ಅವರುಗಳ ಪ್ರಾಬಲ್ಯವಿಲ್ಲದ ಯಾವ ಇಲಾಖೆಯೂ ಇಲ್ಲ. ಪೋಲೀಸ್ ಇಲಾಖೆಯಲ್ಲಿ, ನ್ಯಾಯಾಂಗ ಇಲಾಖೆಯಲ್ಲಿ, ಕಂದಾಯ ಇಲಾಖೆಯಲ್ಲಿ, ನಿಜದಲ್ಲಿ ಯಾವುದೇ ಮತ್ತು ಎಲ್ಲ ಆಡಳಿತ ಶಾಖೆಗಳಲ್ಲೂ ಅವರ ಪ್ರಭಾವ ಇದೆ. ನೆನಪಿನಲ್ಲಿಡಬೇಕಾದ ಇನ್ನೊಂದು ಅಂಶ

ಎಂದರೆ ಆಡಳಿತ ಮಾಡುತ್ತಿರುವ ಹಿಂದೂಗಳು ಕೇವಲ ಸಮಾಜಪರ ಮಾತ್ರವಲ್ಲ, ಅವರುಗಳು ಖಂಡಿತವಾಗಿಯೂ ಪರಿಶಿಷ್ಟ ಜಾತಿಗಳಿಗೆ ಸಮಾನಘಾತುಕ ಮತ್ತು ಹಾನಿಕಾರಕರಾಗಿದ್ದಾರೆ. ಅವರ ಗುರಿ ಪರಿಶಿಷ್ಟ ಜಾತಿಗಳಿಗೆ ಪಕ್ಷಪಾತ ಮಾಡುವುದು ಮತ್ತು ಅವರಿಗೆ ಕಾನೂನಿನ ಸೌಲಭ್ಯಗಳನ್ನು ನಿರಾಕರಿಸುವುದು ಮಾತ್ರವೇ ಅಲ್ಲ, ದಬ್ಬಾಳಿಕೆ ಮತ್ತು ಕ್ರೌರ್ಯಗಳಿಗೆ ವಿರುದ್ಧವಾಗಿ ಕಾನೂನಿನ ರಕ್ಷಣೆ ದೊರೆಯದಂತೆ ಮಾಡುವುದು ಸಹ ಆಗಿದೆ. ಫಲಿತಾಂಶವೆಂದರೆ, ಪರಿಶಿಷ್ಟ ಜಾತಿಗಳಿಗೆ ವಿರುದ್ಧವಾಗಿ ಪಾತಕಗಳನ್ನು ಮಾಡುವ ಹಿಂದೂ ಸಮೂಹ ಮತ್ತು ಬಲಿಪಶುಗಳಿಗೆ ರಕ್ಷಣೆ ಕೊಡದೆ ಅಪರಾಧಿಗಳನ್ನು ಕಾಪಾಡುವ ಹಿಂದೂಗಳಿಂದ ಕಿಕ್ಕಿರಿದ ಆಡಳಿತಗಳ ನಡುವೆ ಪರಿಶಿಷ್ಟ ಜಾತಿಗಳು ಇರಬೇಕಾಗಿದೆ.

೫. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮಾದರಿಯ ಸ್ವರಾಜ್ಯದಿಂದ ಪರಿಶಿಷ್ಟ ಜಾತಿಗಳಿಗೆ ಏನಾಗಬೇಕಿದೆ? ಇದರ ಅರ್ಥ ಇಷ್ಟೇ. ಈ ದಿನಗಳಲ್ಲಿ ಹಿಂದೂಗಳ ಕೈಯಲ್ಲಿ ಆಡಳಿತ ಮಾತ್ರ ಇದೆ. ಸ್ವರಾಜ್ಯದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳು ಕೂಡ ಹಿಂದೂಗಳಿಂದ ತುಂಬಿಹೋಗುತ್ತವೆ. ಸ್ವರಾಜ್ಯವು ಪರಿಶಿಷ್ಟ ಜಾತಿಗಳ ದುಃಖವನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬುದನ್ನೇನೂ ಬೇರೆ ಹೇಳಬೇಕಿಲ್ಲ. ಏಕೆಂದರೆ, ಪ್ರತಿಪಕ್ಷವಾಗಿರುವ ಆಡಳಿತವನ್ನು ಎದುರಿಸಬೇಕಾಗಿರುವುದರ ಜೊತೆಗೆ ಪರಿಶಿಷ್ಟ ಜಾತಿಗಳು, ಹಗೆತನ ತುಂಬಿದ ಮತ್ತು ಔದಾಸೀನ್ಯದ ಶಾಸಕಾಂಗವನ್ನೂ, ಕಲ್ಲೆದೆಯ ಕಾರ್ಯಾಂಗವನ್ನೂ ಮತ್ತು ಪರಿಶಿಷ್ಟ ಜಾತಿಗಳನ್ನು ಕುರಿತು ಪಕ್ಷಪಾತದ ಧೋರಣೆ ಇರುವ, ನಂಜು ಹೊಂದಿರುವುದರಲ್ಲಿ ಹತೋಟಿಯಿಲ್ಲದ, ಕಾಠಿಣ್ಯ ತೋರುವುದರಲ್ಲಿ ಲಗಾಮಿಲ್ಲದ ಆಡಳಿತವನ್ನೂ ಎದುರಿಸಬೇಕಾಗುತ್ತದೆ. ಬೇರೆ ರೀತಿ ಹೇಳಬೇಕೆಂದರೆ, ಕಾಂಗ್ರೆಸ್ ಮಾದರಿಯ ಸ್ವರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗಾಗಿ ಹಿಂದೂಗಳೂ, ಹಿಂದೂಮತವೂ ನಿರ್ಧರಿಸಿರುವ ಪದಚ್ಯುತಿಯ ವಿಧಿಯಿಂದ ತಪ್ಪಿಸಿಕೊಳ್ಳಲು ಯಾವ ಹಾದಿಯೂ ಇಲ್ಲ.

೬. ಸ್ವರಾಜ್ಯವು ತಮಗೆ ಅನರ್ಥಕಾರಿಯಾಗದಂತೆ ಪರಿಶಿಷ್ಟ ಜಾತಿಗಳು ತಡೆಯುವ ಏಕೈಕ ಉಪಾಯ ಎಂದರೆ, ತಮ್ಮ ಪ್ರತಿನಿಧಿಗಳನ್ನು ಶಾಸಕಾಂಗದಲ್ಲಿ ಹೊಂದಿರುವ ಮೂಲಕ. ಹಿಂದೂಗಳು ತಮಗೆ ಮಾಡುವ ಅಕ್ರಮ ಮತ್ತು ಅನ್ಯಾಯಗಳ ವಿರುದ್ಧ ಪ್ರತಿಭಟಿಸಬಹುದು ಎಂದೂ, ತಮ್ಮ ಪ್ರತಿನಿಧಿಗಳನ್ನು ಕಾರ್ಯಾಂಗದಲ್ಲಿ ಹೊಂದಿರುವ ಮೂಲಕ ತಮ್ಮ ಅಭ್ಯುದಯಕ್ಕಾಗಿ ಯೋಜನೆಗಳನ್ನು ಕೈಗೊಳ್ಳಬಹುದು ಎಂದೂ ಮತ್ತು ತಮ್ಮ ಪ್ರತಿನಿಧಿಗಳನ್ನು ಸರ್ಕಾರಿ ಇಲಾಖೆಗಳಲ್ಲಿ ಹೊಂದಿರುವ ಮೂಲಕ ಆಡಳಿತವು ಅವರಿಗೆ ಪೂರಾ ವಿರುದ್ಧವಾಗದಂತೆ ನೋಡಿಕೊಳ್ಳಬಹುದು ಎಂದೂ ಪರಿಶಿಷ್ಟ ಜಾತಿಗಳೂ ಏಕೆ ಒತ್ತಾಯ ಮಾಡುತ್ತಿದ್ದಾರೆ ಎಂಬುದು ನಿಮಗೆ ಅರ್ಥವಾಗುತ್ತದೆ ಎಂದು ಆಶಿಸುತ್ತೇನೆ. ಸಂವಿಧಾನದ ರಕ್ಷಣೋಪಾಯಗಳಿಗಾಗಿ ಪರಿಶಿಷ್ಟ ಜಾತಿಗಳ ಹಕ್ಕೊತ್ತಾಯದ ನ್ಯಾಯವನ್ನು ನೀವು ಒಪ್ಪಿಕೊಂಡಲ್ಲಿ, ಪ್ರತ್ಯೇಕ ಮತದಾರ ಸಮುದಾಯವನ್ನು ಪರಿಶಿಷ್ಟ ಜಾತಿಗಳು ಏಕೆ ಬಯಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಿಮಗೆ ಕಷ್ಟವಾಗುವುದಿಲ್ಲ. ಪರಿಶಿಷ್ಟ ಜಾತಿಗಳೂ ಶಾಸಕಾಂಗದಲ್ಲಿ ಅಲ್ಪಸಂಖ್ಯಾತರಾಗುತ್ತಾರೆ. ಅವರು ಅಲ್ಪಸಂಖ್ಯಾತರಾಗಿಯೇ ಉಳಿಯುವುದು ಅವರ ಹಣೆಬರಹವಾಗಿದೆ. ಕೋಮುವಾರು ರೀತಿ ಇರುವುದರಿಂದ ಅವರು ಬಹುಸಂಖ್ಯಾತರೊಡನೆ ಕೆಲಸ ಮಾಡಲು ಸಾಧ್ಯವಾಗುವಂತೆ ಷರತ್ತುಗಳನ್ನು ನಿರ್ಧರಿಸಲು ಶಕ್ತರಾಗಿರುವ ಪರಿಸ್ಥಿತಿಯಲ್ಲಿ ತಮ್ಮನ್ನು ಇರಿಸಿಕೊಳ್ಳುವುದೇ ಹೊರತು, ಬಹುಸಂಖ್ಯಾತರ ಷರತ್ತುಗಳನ್ನು ಒಪ್ಪಿಕೊಳ್ಳುವ ಒತ್ತಾಯಕ್ಕೆ ಒಳಗಾಗುವುದಲ್ಲ. ಎರಡನೆಯದಾಗಿ, ಬಹುಸಂಖ್ಯಾತರು ಅವರೊಡನೆ ಕೆಲಸ ಮಾಡಲು ನಿರಾಕರಿಸಿದರೆ ಮತ್ತು ತಮ್ಮ ತಪ್ಪು ತಿದ್ದಿಕೊಳ್ಳಲು ಒಪ್ಪದಿದ್ದರೆ, ಕಡೆಯ ಪಕ್ಷ ಶಾಸಕಾಂಗದ ಸಭಾಂಗಣದಲ್ಲಿ ಬಹುಸಂಖ್ಯಾತರ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲಾದರೂ ಅವರು ಸ್ವತಂತ್ರರಾಗಿರುತ್ತಾರೆ.

ಅಸ್ಪೃಶ್ಯರು ಪ್ರತಿಭಟಿಸುವ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಹೇಗೆ? ಶಾಸಕಾಂಗದಲ್ಲಿನ ಅವರ ಪ್ರತಿನಿಧಿಗಳು ಚುನಾವಣೆಗಳಲ್ಲಿ ಬಹುಸಂಖ್ಯಾತರ ಮತಗಳ ಹಂಗಿಗೆ ಒಳಗಾಗದಿದ್ದರೆ ಮಾತ್ರ. ಪ್ರತ್ಯೇಕ ಮತದಾರ ಸಮುದಾಯದ  ಅವರ ಹಕ್ಕೊತ್ತಾಯಕ್ಕೆ ಇದೇ ಕಾರಣ.

೭. ಪರಿಶಿಷ್ಟ ಜಾತಿಗಳು ಪ್ರತ್ಯೇಕ ಮತದಾರ ಸಮುದಾಯವನ್ನು ಪಡೆಯದಿದ್ದಲ್ಲಿ ಅವರ ಯಾವ ರಕ್ಷಣೋಪಾಯಗಳಿಗೂ ಬೆಲೆ ಇರುವುದಿಲ್ಲ. ಪ್ರತ್ಯೇಕ ಮತದಾರ ಸಮುದಾಯ ಎಂಬ ವಿಷಯದಲ್ಲಿ ಕಗ್ಗಂಟಾಗಿದೆ. ೧೯೪೬ರ ಏಪ್ರಿಲ್ ೯ರಂದು ಮಂತ್ರಿಮಂಡಲ ನಿಯೋಗವು ಸಂದರ್ಶಿಸಿದ ಮೂವರು ಕಾಂಗ್ರೆಸ್ಸಿನ ಹರಿಜನರು ನಿಯೋಗಕ್ಕೆ ಸಲ್ಲಿಸಿದ ಮನವಿಯ ಪತ್ರ ನನ್ನ ಎದುರಿಗೆ ಇದೆ. ಸಂಸತ್ತಿನಲ್ಲಿ 'ನಾವು ಇಂಗ್ಲೆಂಡಿನ ಜನತೆ' ಎಂದು ಹೇಳುವ ಮನವಿಯನ್ನು ಸಲ್ಲಿಸಿದ ಟೂಲಿ ರಸ್ತೆಯ ಕೆಚ್ಚೆದೆಯ ಮೂವರು ದರ್ಜಿಗಳಿಗಿಂತ ಇವರು ಶ್ರೇಷ್ಠರಲ್ಲ. ಇದಲ್ಲದೆ, ಪರಿಶಿಷ್ಟ ಜಾತಿಗಳ ಒಕ್ಕೂಟದ ಪರವಾಗಿ, ನಾನು ಮಂಡಿಸಿರುವ ಹಕ್ಕೊತ್ತಾಯಗಳಿಗೂ ಮತ್ತು ಈ ಕಾಂಗ್ರೆಸ್ಸಿನ ಹರಿಜನರು ಮಂಡಿಸಿರುವ ಹಕ್ಕೊತ್ತಾಯಗಳಿಗೂ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಗಮನಿಸಿದಲ್ಲಿ ಅದು ಮಾಹಿತಿ ನೀಡುವಂಥದ್ದು. ಇರುವ ಒಂದೇ ವ್ಯತ್ಯಾಸ ಮತದಾರರ ಸಮುದಾಯದ ಪ್ರಶ್ನೆಗೆ ಸಂಬಂಧಿಸಿದೆ. ಈ ಕಾಂಗ್ರೆಸ್ ಹರಿಜನರ ಹಕ್ಕೊತ್ತಾಯಗಳನ್ನು ನೀವು ಹೇಗೆ ಅರ್ಥೈಸುತ್ತೀರಿ ಎಂದು ನನಗೆ ತಿಳಿಯದು. ಅವು ನಿಜದಲ್ಲಿ ಹಕ್ಕೊತ್ತಾಯಗಳಲ್ಲ. ರಾಜಕೀಯ ರಕ್ಷಣೋಪಾಯಗಳ ಮೂಲಕ ಅಸ್ಪೃಶ್ಯರಿಗೆ ಕಾಂಗ್ರೆಸ್ ನೀಡಲು ಸಿದ್ಧವಾಗಿರುವುದನ್ನು ಅವುಗಳು ಪ್ರತಿನಿಧಿಸುತ್ತವೆ. ಇದು ಕೇವಲ ನಾನು ಅರ್ಥೈಸಿಕೊಂಡಿರುವುದಲ್ಲ, ಇದು ನನ್ನ ತಿಳಿವಳಿಕೆ. ಏಕೆಂದರೆ ಸಂಯುಕ್ತ ಮತದಾರ ಸಮುದಾಯವನ್ನು ಒಪ್ಪಲು ನಾನು ಸಿದ್ಧನಾಗಿದ್ದಲ್ಲಿ, ಕಾಂಗ್ರೆಸ್ ತನ್ನ ಮಟ್ಟಿಗೆ ನನ್ನ ಇತರ ಎಲ್ಲ ಹಕ್ಕೊತ್ತಾಯಗಳನ್ನು ಒಪ್ಪಿಕೊಳ್ಳಲು ನಿಜಕ್ಕೂ ಸಿದ್ಧ ಎಂದು ಕಾಂಗ್ರೆಸ್ಸಿನ ವಿಚಾರವನ್ನು ಬಲ್ಲ ವ್ಯಕ್ತಿಗಳಿಂದ ನನಗೆ ತಿಳಿದು ಬಂದಿದೆ. ಪರಿಶಿಷ್ಟ ಜಾತಿಗಳ ಎಲ್ಲ ಹಕ್ಕೊತ್ತಾಯಗಳನ್ನೂ ಒಪ್ಪಿಕೊಳ್ಳಲು ಕಾಂಗ್ರೆಸ್ ಏಕೆ ಸಿದ್ಧವಾಗಿರಬೇಕು ಮತ್ತು ಪ್ರತ್ಯೇಕ ಮತದಾರ ಸಮುದಾಯದ ಒಂದೇ ಒಂದು ಹಕ್ಕೊತ್ತಾಯವನ್ನು ಮಾತ್ರ ಏಕೆ ಆಕ್ಷೇಪಿಸುತ್ತದೆ ಎಂದು ನಿಮಗೆ ಅಚ್ಚರಿಯೆನಿಸಿರಬೇಕು. ಕಾಂಗ್ರೆಸ್ ಆಡುತ್ತಿರುವ ಆಟವನ್ನು ನೀವು ತಿಳಿದಲ್ಲಿ ಆಶ್ಚರ್ಯವೇನೂ ಇರುವುದಿಲ್ಲ. ಅದು ಬಹಳ ಅಭೇದ್ಯವಾದ ಆಟ. ಪರಿಶಿಷ್ಟ ಜಾತಿಗಳಿಗೆ ಕೆಲವು ರಕ್ಷಣೋಪಾಯಗಳನ್ನು ನೀಡದೆ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂದು ಅರಿತುಕೊಂಡು ಆ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗದಂತೆ ಮಾಡಬಲ್ಲ ಯಾವುದಾದರೂ ದಾರಿಯನ್ನು ಕಾಂಗ್ರೆಸ್ ಹುಡುಕಲು ಬಯಸುತ್ತದೆ. ಸಂಯುಕ್ತ ಮತದಾರ ಸಮುದಾಯದ ವ್ಯವಸ್ಥೆಯಲ್ಲಿ ಈ ರಕ್ಷಣೋಪಾಯಗಳನ್ನು ಪರಿಣಾಮವಿಲ್ಲದಂತೆ ಮಾಡುವ ಒಂದು ಸಾಧನ ಕಾಂಗ್ರೆಸ್ ಸಂಯುಕ್ತ ಮತದಾರ ಸಮುದಾಯಕ್ಕಾಗಿ ಒತ್ತಾಯಿಸುತ್ತಿದೆ. ಏಕೆಂದರೆ ಸಂಯುಕ್ತ ಮತದಾರ ಸಮುದಾಯ ಎಂದರೆ ಪರಿಶಿಷ್ಟ ಜಾತಿಗಳಿಗೆ ಅಧಿಕಾರವಿಲ್ಲದ ಹುದ್ದೆ ನೀಡಿದಂತೆ, ಪರಿಶಿಷ್ಟ ಜಾತಿಗಳಿಗೆ ಬೇಕಿರುವುದು ಅಧಿಕಾರವಿರುವ ಹುದ್ದೆ. ಇದನ್ನು ಪ್ರತ್ಯೇಕ ಮತದಾರರ ಸಮುದಾಯದ ಮೂಲಕ ಮಾತ್ರ ಅವರು ಪಡೆಯಬಲ್ಲರು ಮತ್ತು ಅದಕ್ಕಾಗಿಯೇ ಅವರು ಪ್ರತ್ಯೇಕ ಮತದಾರರ ಸಮುದಾಯಕ್ಕಾಗಿ ಒತ್ತಾಯಿಸುತ್ತಿದ್ದಾರೆ.

೮. ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಮತದಾರ ಸಮುದಾಯದ ಬಗೆಗೆ ಒಲವಿರುವ ವಿಷಯ ಗಡುಸಾದ ವಿಷಯ ಎಂದು ನನ್ನ ನಂಬಿಕೆ. ಬೇರೆ ಎಲ್ಲ ಪಕ್ಷಗಳೂ – ಕಾಂಗ್ರೆಸ್ ಹೊರತಾಗಿ – ಅದನ್ನು ಒಪ್ಪಿಕೊಳ್ಳುತ್ತವೆ. ಲಾರ್ಡ್ ವೇವೆಲ್ಲರಿಗೆ ಬರೆದ ೧೯೪೬ ಮೇ ೩೧, ನನ್ನ ಪತ್ರದಲ್ಲಿ ಪ್ರತ್ಯೇಕ ಮತದಾರರ ಸಮುದಾಯಕ್ಕೋಸ್ಕರವಾಗಿ ಇರುವ ನನ್ನ ವಾದವನ್ನು ಮಂಡಿಸಿದ್ದೇನೆ. ನಿಮಗೆ ಅವರು ಆ ಪತ್ರವನ್ನು

ತೋರಿಸಿರಬೇಕು. ಆದ್ದರಿಂದ ಪತ್ರವನ್ನು ಇಲ್ಲಿ ಪುನರುಚ್ಚರಿಸುವುದು ಅನಗತ್ಯ. ಪ್ರಶ್ನೆಯೇನೆಂದರೆ ಪರಿಶಿಷ್ಟಜಾತಿಗಳ ಈ ಹಕ್ಕೊತ್ತಾಯವನ್ನು ಕುರಿತು ನಿಯೋಗ ಏನು ಮಾಡುತ್ತದೆ ಎಂಬುದು. ಅವರು, ಹಿಂದೂಗಳ ರಾಜಕೀಯ ನೊಗದಿಂದ ಪರಿಶಿಷ್ಟ ಜಾತಿಗಳನ್ನು ಬಿಡುಗಡೆ ಮಾಡುತ್ತಾರೆಯೇ? ಅಥವಾ, ತಾನು ಪ್ರತಿನಿಧಿಸುವ ಕಾಂಗ್ರೆಸ್ ಮತ್ತು ಹಿಂದೂ ಬಹುಮತಗಳ ಮೈತ್ರಿಗಾಗಿ ಸಂಯುಕ್ತ ಮತದಾರರ ಸಮುದಾಯಕ್ಕೆ ಒಲವು ತೋರಿಸಿ ಪರಿಶಿಷ್ಟ ಜಾತಿಗಳನ್ನು ತೋಳಗಳಿಗೆ ಎಸೆಯುತ್ತಾರೆಯೆ? ಬ್ರಿಟಿಷರು ಅಧಿಕಾರವನ್ನು ಬಿಟ್ಟುಕೊಡುವ ಮೊದಲು, ಸ್ವರಾಜ್ಯವು ಪರಿಶಿಷ್ಟ ಜಾತಿಗಳಿಗೆ ಯಮ ಹಿಡಿತ ಆಗುವುದಿಲ್ಲ ಎಂಬ ವಿಷಯವನ್ನು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂದು ಘನತೆವೆತ್ತ ಮಹಾಪ್ರಭುಗಳ ಸರ್ಕಾರವನ್ನು ಕೇಳಲು ಪರಿಶಿಷ್ಟ ಜಾತಿಗಳಿಗೆ ಹಕ್ಕಿದೆ.

೯. ಬ್ರಿಟಿಷರಿಗೆ ಪರಿಶಿಷ್ಟ ಜಾತಿಗಳ ವಿಷಯವಾಗಿ ನೈತಿಕ ಹೊಣೆ ಇದೆ ಎಂದು ಹೇಳಲು ನನಗೆ ಅವಕಾಶ ನೀಡಿ. ಅವರಿಗೆ ಎಲ್ಲಾ ಅಲ್ಪಸಂಖ್ಯಾತರ ಬಗ್ಗೆಯೂ ನೈತಿಕ ಹೊಣೆ ಇರಬಹುದು. ಆದರೆ, ಅದು ಪರಿಶಿಷ್ಟ ಜಾತಿಗಳ ಬಗ್ಗೆ ಅವರಿಗಿರುವ ನೈತಿಕ ಹೊಣೆಗಿಂತ ಎಂದಿಗೂ ಹೆಚ್ಚಾಗಿರಲು ಸಾಧ್ಯವಿಲ್ಲ. ಕೆಲವೇ ಬ್ರಿಟಿಷರಿಗೆ ಅದರ ಬಗ್ಗೆ ಅರಿವಿದೆ ಎಂಬುದೂ, ಆ ಹೊಣೆಯನ್ನು ನಿರ್ವಹಿಸಲು ಸಿದ್ಧರಾಗಿರುವ ಬ್ರಿಟಿಷರು ಇನ್ನೂ ಕಡಿಮೆ ಎಂಬುದು ಶೋಚನೀಯ ಸಂಗತಿಗಳು. ಭಾರತದಲ್ಲಿನ ಬ್ರಿಟಿಷರ ಆಳ್ವಿಕೆಯ ಇಡೀ ಅಸ್ತಿತ್ವ ಪರಿಶಿಷ್ಟ ಜಾತಿಗಳು ಒದಗಿಸಿದ ಸಹಾಯಕ್ಕೆ ಋಣಿಯಾಗಿದೆ. ಭಾರತವನ್ನು ಗೆದ್ದಿದ್ದು ಕ್ಲೈವರು, ಹೇಸ್ಟಿಂಗ್ಸರು, ಕೂಟ್ಸ್ ಮುಂತಾದವರಿಂದ ಎಂದು ಅನೇಕ ಬ್ರಿಟಿಷರು ಆಲೋಚಿಸುತ್ತಾರೆ. ಇದಕ್ಕಿಂತ ಮಹತ್ತರವಾದ ತಪ್ಪು ಭಾವನೆ ಇರಲಾರದು. ಭಾರತವನ್ನು ಗೆದ್ದಿದ್ದು ಭಾರತೀಯ ಸೈನ್ಯದಿಂದ ಮತ್ತು ಸೈನ್ಯದಲ್ಲಿದ್ದ ಭಾರತೀಯರೆಲ್ಲಾ ಅಸ್ಪೃಶ್ಯರು. ಬ್ರಿಟಿಷರು ಭಾರತವನ್ನು ಗೆಲ್ಲಲು ಪರಿಶಿಷ್ಟ ಜಾತಿಗಳು ಸಹಾಯಮಾಡದೇ ಇದ್ದಿದ್ದರೆ ಬ್ರಿಟಿಷರು ಭಾರತವನ್ನು ಆಳುವುದೇ ಅಸಾಧ್ಯವಾಗುತ್ತಿತ್ತು. ಬ್ರಿಟಿಷ್ ಆಳ್ವಿಕೆಗೆ ಅಸ್ತಿಭಾರ ಹಾಕಿದ ಪ್ಲಾಸಿ ಕದನವನ್ನು ಅಥವಾ ವಿಜಯವನ್ನು ಪೂರ್ಣಗೊಳಿಸಿದ ಕಿರ್ಕಿ ಕದನವನ್ನು ತೆಗೆದುಕೊಳ್ಳಿ. ಈ ಎರಡೂ ನಿರ್ಧಾರಕ ಕದನಗಳಲ್ಲಿ ಬ್ರಿಟಿಷರಿಗಾಗಿ ಹೋರಾಡಿದ ಎಲ್ಲಾ ಸೈನಿಕರು ಅಸ್ಪೃಶ್ಯರೇ.

೧೦. ತಮಗಾಗಿ ಹೋರಾಡಿದ ಈ ಅಸ್ಪೃಶ್ಯರಿಗೋಸ್ಕರ ಬ್ರಿಟಿಷರು ಏನು ಮಾಡಿದ್ದಾರೆ? ಅದೊಂದು ಅವಮಾನಕರ ಕತೆ. ಅವರು ಮಾಡಿದ ಮೊದಲ ಕೆಲಸ ಎಂದರೆ ಸೈನ್ಯದಲ್ಲಿ ಅಸ್ಪೃಶ್ಯರ ಉದ್ಯೋಗವಕಾಶಗಳನ್ನು ನಿಲ್ಲಿಸಿದ್ದು. ಇದಕ್ಕಿಂತ ಹೆಚ್ಚಿನ ನಿಷ್ಕರುಣ, ಕೃತಘ್ನ ಮತ್ತು ಕ್ರೌರ್ಯದ ಕೃತ್ಯ ಚರಿತ್ರೆಯಲ್ಲಿ ದೊರೆಯಲಾರದು. ಅಸ್ಪೃಶ್ಯರು ತಮ್ಮ ಆಳ್ವಿಕೆಯನ್ನು ಸ್ಥಾಪಿಸಲು ಸಹಾಯ ಮಾಡಿದ್ದರು ಎನ್ನುವುದನ್ನು ಮತ್ತು ೧೮೫೭ರ ದಂಗೆಯಲ್ಲಿ ದೇಶೀ ಸೈನ್ಯಗಳೆಲ್ಲ ಒಟ್ಟಾಗಿ ಬಲಕೂಡಿಸಿಕೊಂಡು ತಮಗೆ ಆಪತ್ತು ಒದಗಿದಾಗ ತಮ್ಮನ್ನು ಕಾಪಾಡಿದ್ದರು ಎಂಬುದನ್ನು ಸೈನ್ಯದಿಂದ ಅಸ್ಪೃಶ್ಯರನ್ನು ಬಹಿಷ್ಕರಿಸಿದಾಗ ಬ್ರಿಟಿಷರು ಗಮನಿಸಲಿಲ್ಲ. ಅಸ್ಪೃಶ್ಯರಿಗೆ ಇದರಿಂದಾಗುವ ಪರಿಣಾಮದ ಬಗ್ಗೆ ಯಾವ ಪರಿಗಣನೆಯೂ ಇಲ್ಲದೆ ಬ್ರಿಟಿಷರು ಲೇಖನಿಯಿಂದ ಒಂದು ಗೆರೆ ಎಳೆದು ಅಸ್ಪೃಶ್ಯರನ್ನು ತಮ್ಮ ಜೀವನದ ಮೂಲಾಧಾರವನ್ನೇ ಕಳೆದುಕೊಳ್ಳುವಂತೆ ಮಾಡಿದರು ಮತ್ತು ಅವರನ್ನು ಮೊದಲಿನಷ್ಟೇ ಆಳದ ಪದಚ್ಯುತಿಗೆ ಪಕ್ಕಾಗಿಸಿದರು. ಅಸ್ಪೃಶ್ಯರು ತಮ್ಮ ಸಾಮಾಜಿಕ ದೌರ್ಬಲ್ಯಗಳನ್ನು ಗೆಲ್ಲಲಾಗುವಂತೆ ಅವರಿಗೆ ಬ್ರಿಟಿಷರು ಯಾವುದೇ ರೀತಿಯಲ್ಲಿ ಸಹಾಯ ಮಾಡಿದರೇನು? ಉತ್ತರ ಮತ್ತೆಯೂ ನಿಷೇಧಾತ್ಮಕವೇ. ಶಾಲೆಗಳು, ಬಾವಿಗಳು ಮತ್ತು ಸಾರ್ವಜನಿಕ ಸ್ಥಳಗಳು ಅಸ್ಪೃಶ್ಯರ ಪಾಲಿಗೆ ಮುಚ್ಚಿಹೋಗಿವೆ. ಸಾರ್ವಜನಿಕ ನಿಧಿಯಿಂದ ನಡೆದುಕೊಂಡು ಬರುತ್ತಿರುವ ಎಲ್ಲ ಸಂಸ್ಥೆಗಳಿಗೂ ಅಸ್ಪೃಶ್ಯರಿಗೆ ನಾಗರಿಕರಾಗಿ ಪ್ರವೇಶ ದೊರಕುವಂತೆ ಮಾಡುವುದು ಬ್ರಿಟಿಷರ ಕರ್ತವ್ಯವಾಗಿತ್ತು. ಆದರೆ ಅಂಥದ್ದೇನನ್ನೂ ಬ್ರಿಟಿಷರು

ಮಾಡಲಿಲ್ಲ. ಅಷ್ಟೇ ಅಲ್ಲ, ಅಸ್ಪೃಶ್ಯತೆಯನ್ನು ತಾವು ಉಂಟುಮಾಡಿದ್ದಲ್ಲ ಎಂದು ಹೇಳುವುದರ ಮೂಲಕ ತಮ್ಮ ಜಡತೆಯನ್ನು ಸಮರ್ಥಿಸಿಕೊಂಡಿದ್ದಂತೂ ಅತ್ಯಂತ ಹೀನ ಕೃತ್ಯ. ಅಸ್ಪೃಶ್ಯತೆಯನ್ನು ಬ್ರಿಟಿಷರು ಉಂಟುಮಾಡದೇ ಇರಬಹುದು. ಆದರೆ ಈಗಿನ ಸರ್ಕಾರ ಬ್ರಿಟಿಷರದು. ಆದ್ದರಿಂದ ಅಸ್ಪೃಶ್ಯತೆಯ ನಿವಾರಣೆ ನಿಶ್ಚಯವಾಗಿ ಅವರ ಹೊಣೆಯಾಗಿತ್ತು. ಸರ್ಕಾರವೊಂದರ ಕಾರ್ಯ ಮತ್ತು ಕರ್ತವ್ಯಗಳ ಅರಿವಿರುವ ಯಾವುದೇ ಸರ್ಕಾರ, ಈ ಕರ್ತವ್ಯದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಬ್ರಿಟಿಷ್ ಸರ್ಕಾರ ಮಾಡಿದ್ದೇನು? ಹಿಂದೂ ಸಮಾಜದ ಯಾವುದೇ ಸುಧಾರಣೆಯನ್ನು ಒಳಗೊಳ್ಳುವ ಯಾವುದೇ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಲು ಅವರು ನಿರಾಕರಿಸಿದರು. ತಮ್ಮ ಇಡೀ ಬೇಸರ ತುಂಬಿದ ಹಾಗೂ ಮರೆತುಹೋಗಿರುವ ಚರಿತ್ರೆಯಲ್ಲಿ ತಮ್ಮ ಶ್ರಮ, ನೋವುಗಳನ್ನು ಕಂಡ, ತಮ್ಮ ಬಾಳು ಸಾವುಗಳನ್ನು ಕಂಡ ದೇಶೀ ಸರ್ಕಾರಗಳಿಗಿಂತ, ಅಸ್ಪೃಶ್ಯರ ಪಾಲಿಗೆ, ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದಂತೆ ಈ ಸರ್ಕಾರ ಯಾವ ಮುಖ್ಯ ವಿಷಯದಲ್ಲೂ ಭಿನ್ನವಲ್ಲ. ರಾಜಕೀಯ ನಿಲವಿನಿಂದ ಬದಲಾವಣೆ ಎಂಬುದು ಹೆಸರಿಗೆ ಮಾತ್ರ. ಹಿಂದೂಗಳ ನಿರಂಕುಶ ಪ್ರಭುತ್ವ ಮೊದಲಿನಂತೆಯೇ ಮುಂದುವರಿಯಿತು. ಬ್ರಿಟಿಷ್ ಹೈಕಮಾಂಡ್ ಹಿಂದೂಗಳನ್ನು ತಡೆಯುವುದು ಇರಲಿ, ಅದು ಹಿಂದೂಗಳನ್ನು ಅತಿಯಾಗಿ ಲಾಲಿಸಿತು. ಸಾಮಾಜಿಕ ದೃಷ್ಟಿಕೋನದಿಂದ ಬ್ರಿಟಿಷರು, ಇಲ್ಲಿನ ಏರ್ಪಾಡುಗಳನ್ನು ಅವು ಇದ್ದಂತೆಯೇ ಒಪ್ಪಿಕೊಂಡರು ಮತ್ತು ಮಾದರಿಗಾಗಿ ಹಳೆಯ ಕೋಟನ್ನು ಪಡೆದು ಅದೇ ರೀತಿಯ ಹರಕು, ತೇಪೆಗಳನ್ನು ಒಳಗೊಂಡ ಕೋಟನ್ನು ಜಂಭದಿಂದ ಸಿದ್ಧಪಡಿಸಿದ ಚೀನೀ ದರ್ಜಿಯಂತೆ ವಿಶ್ವಾಸಪೂರ್ವಕವಾಗಿ ಉಳಿಸಿಕೊಂಡರು. ಫಲಿತಾಂಶ ಏನೆಂದರೆ, ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಸ್ಥಾಪನೆಯಾಗಿ ಇನ್ನೂರು ವರ್ಷಗಳಾಗಿ ಹೋಗಿದ್ದರೂ ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಇದ್ದಾರೆ. ಅವರಿಗೆ ಆದ ಅನ್ಯಾಯಗಳನ್ನು ಸರಿಪಡಿಸಿಲ್ಲ. ಅಲ್ಲದೆ ಅವರ ಪ್ರಗತಿ ಪ್ರತಿ ಘಟ್ಟದಲ್ಲಿಯೂ ನಿರ್ಬಂಧಿಸಲ್ಪಟ್ಟಿದೆ. ನಿಜದಲ್ಲಿ, ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಏನಾದರೂ ಸಾಧನೆ ಮಾಡಿದ್ದಲ್ಲಿ, ಅದು ಅಸ್ಪೃಶ್ಯರ ರೂಢಮೂಲ ಶತ್ರುವಾದ ಮತ್ತು ಪುರಾತನ ಕಾಲದಿಂದಲೂ ಅಸ್ಪೃಶ್ಯರ ನೋವಿಗೆ ಕಾರಣವಾದ, ಎಲ್ಲ ಅನಿಷ್ಟಗಳಿಗೆ ಮೂಲವಾದ ಬ್ರಾಹ್ಮಣಿಕೆಗೆ ಶಕ್ತಿ ಕೂಡಿಸಿದ್ದು ಮತ್ತು ಅದನ್ನು ಪುನಶ್ಚೇತನಗೊಳಿಸಿದ್ದು.

೧೧. ಬ್ರಿಟಿಷರು ಅಧಿಕಾರತ್ಯಾಗ ಮಾಡುತ್ತಿದ್ದಾರೆಂದು ಪ್ರಕಟಿಸಲು ನೀವು ಇಲ್ಲಿಗೆ ಬಂದಿದ್ದೀರಿ. ಪ್ರಭುತ್ವ ಮತ್ತು ಅಧಿಕಾರಗಳ ಈ ಪರಂಪರೆಯನ್ನು ನೀವು ಯಾರ ವಶಕ್ಕೆ ಒಪ್ಪಿಸುತ್ತಿದ್ದೀರಿ ಎಂದು ಅಸ್ಪೃಶ್ಯನೊಬ್ಬ ಕೇಳಿದರೆ ತಪ್ಪಾಗುವುದಿಲ್ಲ. ಬ್ರಾಹ್ಮಣಿಕೆಯ ಅಗ್ರೇಸರರಿಗೆ ಅಂದರೆ ಅಸ್ಪೃಶ್ಯರ ಪಾಲಿಗೆ ಪೀಡಕರೂ ದಮನಕಾರರೂ ಆಗಿರುವವರಿಗೆ, ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಮುಕ್ತಾಯ ಮಾಡುವ ಇಂಥ ಕ್ರಮ ಇತರ ಪಕ್ಷಗಳ ಸದಸ್ಯರ ಅಂತಃಸಾಕ್ಷಿಯಲ್ಲಿ ಯಾವುದೇ ಶಂಕೆಯನ್ನೂ ಎತ್ತಬೇಕಿಲ್ಲ. ಆದರೆ ಬ್ರಿಟಿಷ್ ಲೇಬರ್ ಪಕ್ಷದ ವಿಚಾರವೇನು? ಸವಲತ್ತುಗಳಿಲ್ಲದ ಮತ್ತು ತುಳಿತಕ್ಕೊಳಗಾದವರನ್ನು ತಾನು ಬೆಂಬಲಿಸುವುದಾಗಿ ಲೇಬರ್ ಪಕ್ಷವು ಹೇಳಿಕೊಳ್ಳುತ್ತದೆ. ತನ್ನ ಮಾತಿಗೆ ಅದು ಬದ್ಧವಾಗಿದ್ದರೆ, ಭಾರತದ ಆರು ಕೋಟಿ ಅಸ್ಪೃಶ್ಯರನ್ನು ಅದು ಬೆಂಬಲಿಸುತ್ತದೆ ಮತ್ತು ಅವರ ಪರಿಸ್ಥಿತಿಯನ್ನು ರಕ್ಷಿಸಲು ಅಗತ್ಯವಾಗಿರುವ ಎಲ್ಲವನ್ನೂ ಅದು ಮಾಡುತ್ತದೆ ಹಾಗೂ ತಮ್ಮ ಮತ ಮತ್ತು ಜೀವನ ಧರ್ಮಗಳ ಪ್ರಕಾರ ಆಳ್ವಿಕೆ ನಡೆಸಲು ಅನರ್ಹರಾಗಿರುವವರ, ವಾಸ್ತವದಲ್ಲಿ ಅಸ್ಪೃಶ್ಯರ ಶತ್ರುಗಳಾಗಿರುವವರ ಕೈಗಳಿಗೆ ಅಧಿಕಾರ ಸಿಗಲು ಬಿಡುವುದಿಲ್ಲ ಎಂಬ ನಂಬಿಕೆ ನನಗಿದೆ. ತಾವು ಯಾವಾಗಲೂ ಅಸ್ಪೃಶ್ಯರ ಧರ್ಮದರ್ಶಿಗಳೆಂದು ಹೇಳಿಕೊಳ್ಳುತ್ತಿದ್ದ ಬ್ರಿಟಿಷರ ಪಾಲಿಗೆ, ಅಸ್ಪೃಶ್ಯರನ್ನು ಕಡೆಗಣಿಸಿದ್ದಕ್ಕಾಗಿ ಇದೊಂದು ಅಲ್ಪ ಪ್ರಾಯಶ್ಚಿತ ಕ್ರಿಯೆ ಅಲ್ಲದೆ ಹೆಚ್ಚಿನದೇನೂ ಅಲ್ಲ.

೧೨. ಇಷ್ಟು ದೀರ್ಘವಾಗಿ ನಾನು ನಿವೇಸಿದಿಸಿಕೊಳ್ಳಲು ಪ್ರೇರೇಪಿಸಿದ್ದು ಎಂದರೆ ಅಸ್ಪೃಶ್ಯರು ಎತ್ತಿದ್ದ ಸಾಂವಿಧಾನಿಕ ರಕ್ಷಣೋಪಾಯಗಳನ್ನು ಕುರಿತ ಪ್ರಶ್ನೆಗೆ ನಿಯೋಗದ ಸ್ಪಷ್ಟ ಮೌನದಿಂದ ಉಂಟಾಗಿದ್ದ ಆತಂಕ. ಅಸ್ಪೃಶ್ಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ನೀಡಿದ್ದ ವಾಗ್ದಾನಗಳನ್ನು ಕುರಿತ ನಿಯೋಗದ ಧೋರಣೆಯಿಂದ ಈ ಆತಂಕ ಇನ್ನೂ ಹೆಚ್ಚಾಗಿದೆ. ಈ ವಾಗ್ದಾನಗಳನ್ನು ಕುರಿತ ನಿಯೋಗದ ಧೋರಣೆ "ನಮಗೆ ಶಾಶ್ವತ ಶತ್ರುಗಳಿಲ್ಲ, ಶಾಶ್ವತ ಸ್ನೇಹಿತರಿಲ್ಲ, ನಮಗೆ ಶಾಶ್ವತವಾದದ್ದು ಎಂದರೆ ಪ್ರಯೋಜನ ಮಾತ್ರ" ಎಂದ ಲಾರ್ಡ್ ಪಾಮರ್‌ಸ್ಟನ್ ಅವರ ಮಾತು ನನ್ನ ನೆನಪಿಗೆ ಬರುತ್ತಿದೆ. ನಿಯೋಗವು ಪಾಮರ್‌ಸ್ಟನ್ ಅವರ ಸೂತ್ರವನ್ನು ತನ್ನ ಮಾರ್ಗದರ್ಶಿಯಾಗಿ ಅಳವಡಿಸಿಕೊಳ್ಳುತ್ತದೆ ಎಂಬ ಭಾವನೆ ಉಂಟಾದಲ್ಲಿ ಅಸ್ಪೃಶ್ಯರಿಗೆ ಅದು ನೀಡಬಹುದಾದ ಭಯಂಕರ ದರ್ಶನ ಎಂಥದ್ದು ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು. ನೀವು ಗ್ರೇಟ್ ಬ್ರಿಟನ್ನಿನ ಅರಕ್ಷಿತ ವರ್ಗಗಳಿಂದ ಬಂದವರು ಮತ್ತು ಭಾರತದ ಆರು ಕೋಟಿ ಅರಕ್ಷಿತ ಜನಗಳಿಗೆ ನಡೆಯಬಹುದಾದ ವಿಶ್ವಾಸದ್ರೋಹವನ್ನು ತಡೆಯಲು ನೀವು ನಿಮ್ಮ ಕೈಲಾದ್ದನ್ನೆಲ್ಲ ಮಾಡುವಿರಿ ಎಂಬುದರಲ್ಲಿ ನನಗೆ ಪೂರ್ಣ ನಂಬಿಕೆಯಿದೆ. ನಾನು ಹೇಳಲು ನೀವು ಒಪ್ಪಿಗೆ ನೀಡಿದಲ್ಲಿ ಅಸ್ಪೃಶ್ಯರಿಗೆ ನಿಯೋಗದಲ್ಲಿ ನಿಮಗಿಂತಲೂ ಹೆಚ್ಚಿನ ಸ್ನೇಹಿತರು ಬೇರೆ ಯಾರೂ ಇಲ್ಲ ಎಂಬ ಭಾವನೆ ಇದೆ.

ದಿ ರೈಟ್ ಆನರಬಲ್ ಶ್ರೀ ಎ.ವಿ. ಅಲೆಕ್ಸಾಂಡರ್,
ಸಿ.ಎಚ್.ಎಂ.ಪಿ.,
ಮಂತ್ರಿಮಂಡಲ ನಿಯೋಗದ ಸದಸ್ಯರು
ವೈಸ್‌ರಾಯ್‌ರ ಭವನ, ನವದೆಹಲಿ.

ಇಂತು
ನಿಮ್ಮ ನಂಬುಗೆಯ
ಬಿ.ಆರ್. ಅಂಬೇಡ್ಕರ್

## ೧೯
## ಡಾ॥ ಅಂಬೇಡ್ಕರರಿಂದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ*

(ಎಲ್/ಪಿ ಮತ್ತು ಜೆ/೧೦/೪೩ : ಎಫ್/೯೬ – ೮)

೨೨, ಪೃಥ್ವೀರಾಜ ರಸ್ತೆ,
ನವದೆಹಲಿ
೨೨ ಮೇ, ೧೯೪೬.

ಪ್ರಿಯ ಲಾರ್ಡ್ ಪೆಥಿಕ್ ಲಾರೆನ್ಸ್,

ಮಂತ್ರಿಮಂಡಲ ನಿಯೋಗವು ನೀಡಿರುವ ಹೇಳಿಕೆಯನ್ನು ಓದುವಾಗ ಕೆಲವು ನಿರ್ದಿಷ್ಟ ಅಂಶಗಳಲ್ಲಿ ಸಾಕಷ್ಟು ಸಂದಿಗ್ಧತೆಯಿದೆ ಎಂದು ನಾನು ಕಂಡುಕೊಂಡಿದ್ದೇನೆ. ಅವು ಈ ಕೆಳಗಿನಂತಿವೆ.:

(೧) ಹೇಳಿಕೆಯ ೨೦ನೇ ಪ್ಯಾರಾದಲ್ಲಿರುವ 'ಅಲ್ಪಸಂಖ್ಯಾತರು' ಎಂಬ ಪದದಲ್ಲಿ ಪರಿಶಿಷ್ಟ ಜಾತಿಗಳವರು ಸೇರುತ್ತಾರೆಯೇ?

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೭, ಸಂಚಿಕೆ ೩೫೯, ಪು. ೬೬೧ – ೬೬೨.

(೨) ನಾಗರಿಕರ, ಅಲ್ಪಸಂಖ್ಯಾತರ, ಗುಡ್ಡಗಾಡಿನ ಮತ್ತು ಸೇರ್ಪಡೆಯಾಗದ ಪ್ರದೇಶಗಳಲ್ಲಿನ ಜನರ ಹಕ್ಕುಗಳ ಬಗೆಗಿನ ಸಲಹಾ ಸಮಿತಿಯಲ್ಲಿ ಹಿತಾಸಕ್ತಿಗಳನ್ನು ಕಡೆಗಣಿಸಲ್ಪಟ್ಟವರ ಪೂರ್ಣ ಪ್ರಾತಿನಿಧ್ಯ ಇರಬೇಕು ಎಂದು ೨೦ನೆಯ ಪ್ಯಾರಾ ನಿರ್ಣಯಿಸಿ ಹೇಳುತ್ತದೆ. ವಾಸ್ತವವಾಗಿ ಸಲಹಾ ಸಮಿತಿಯಲ್ಲಿ ಹಿತಾಸಕ್ತಿಗಳನ್ನು ಕಡೆಗಣಿಸಲ್ಪಟ್ಟವರ ಪೂರ್ಣ ಪ್ರಾತಿನಿಧ್ಯ ಇರುತ್ತದೆಯೇ ಎಂಬುದನ್ನು ಯಾರು ಗಮನಿಸಬೇಕು?

(೩) ಹಿತಾಸಕ್ತಿಗಳನ್ನು ಕಡೆಗಣಿಸಲ್ಪಟ್ಟವರ ಪೂರ್ಣ ಪ್ರಾತಿನಿಧ್ಯ ಇರುವುದನ್ನು ಖಚಿತಪಡಿಸಿಕೊಳ್ಳಲು, ಸಂವಿಧಾನ ಸಭೆಯ ಸದಸ್ಯರಾಗಿಲ್ಲದ ಹಾಗೂ ಅಂತಹ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ವ್ಯಕ್ತಿಗಳನ್ನು ನಾಮಕರಣದ ಮೂಲಕ ಸಮಿತಿಗೆ ಸೇರ್ಪಡೆ ಮಾಡುವ ಹಕ್ಕನ್ನು ತಾವೇ ಕಾದಿರಿಸಿಕೊಂಡಿರುವುದಾಗಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಸಲಹೆ ನೀಡಿದೆಯೇ? ಹೊರಗಿನ ವ್ಯಕ್ತಿಗಳ ನಾಮಕರಣದ ಅಗತ್ಯ ಆವಶ್ಯಕ ಎಂದು ತೋರುತ್ತದೆ. ಇಲ್ಲವಾದಲ್ಲಿ ಸಂವಿಧಾನ ಸಭೆಯೊಳಗಿನಿಂದಲೇ ಗುಡ್ಡಗಾಡಿನ ಮತ್ತು ಸೇರ್ಪಡೆಯಾಗದ ಪ್ರದೇಶಗಳ ಜನರಿಗೆ ಪ್ರಾತಿನಿಧ್ಯವನ್ನು ನೀಡಲು ಬೇರೆ ಯಾವ ಕ್ರಮವೂ ಇಲ್ಲ. ನಾಮಕರಣದ ಅಗತ್ಯಕ್ಕೆ ಸಮ್ಮತಿ ದೊರೆತರೆ, ಸಂವಿಧಾನ ಸಭೆಯ ಹೊರಗಿನ ಪರಿಶಿಷ್ಟ ಜಾತಿಗಳ ಸದಸ್ಯರ ನಾಮಕರಣದ ತತ್ತ್ವವನ್ನು ಸಲಹಾ ಸಮಿತಿಯಲ್ಲಿನ ಪರಿಶಿಷ್ಟ ಜಾತಿಗಳಿಗೆ ಪೂರ್ಣ ಪ್ರಾತಿನಿಧ್ಯವನ್ನು ಗಳಿಸಿಕೊಡಲು ವಿಸ್ತರಿಸಲಾಗುತ್ತದೆಯೇ?

(೪) ಅಧಿಕಾರದ ಹಸ್ತಾಂತರದಿಂದ ಉದ್ಭವಿಸುವ ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರದ ಸಂವಿಧಾನ ಸಭೆ ಮತ್ತು ಬ್ರಿಟನ್‌ಗಳ ನಡುವಿನ ಒಪ್ಪಂದಕ್ಕೆ ಹೇಳಿಕೆಯ ೨೨ನೇ ಪ್ಯಾರಾದಲ್ಲಿ ಅವಕಾಶವಿದೆ. ಈ ಸೂಚಿತ ಒಪ್ಪಂದದಲ್ಲಿ ಕ್ರಿಪ್ಸ್ ಅವರ ಸಲಹೆಗಳಲ್ಲಿ ಅಗತ್ಯವೆಂದು ನಮೂದಿಸಿರುವಂತೆ ಅಲ್ಪಸಂಖ್ಯಾತರ ರಕ್ಷಣೆಗೆ ಅವಕಾಶವಿದೆಯೇ? ಒಪ್ಪಂದದಲ್ಲಿ ಅಂಥ ಅವಕಾಶವಿಲ್ಲದಿದ್ದರೆ, ಸಂವಿಧಾನ ಸಭೆಗೆ ಬದ್ಧವಾಗಿರುವಂತೆ ಸಲಹಾ ಸಮಿತಿಯವರು ನಿರ್ಣಯಗಳನ್ನು ಮಾಡಲು ಘನತೆವೆತ್ತ ಮಹಾಪ್ರಭುಗಳ ಸರ್ಕಾರವು ಹೇಗೆ ಸೂಚಿಸುತ್ತದೆ?

(೫) ಹೇಳಿಕೆಯಲ್ಲಿ ಯುರೋಪಿಯನ್ನರನ್ನು 'ಸಾಮಾನ್ಯ' ಎಂಬ ವರ್ಗೀಕರಣದಲ್ಲಿ ಸೇರಿಸಲಾಗಿದೆ. ಇದರಿಂದ ಸಂವಿಧಾನ ಸಭೆಯ ಪ್ರತಿನಿಧಿಗಳ ಚುನಾವಣೆಗೆ ಮತ ನೀಡಲು ಯುರೋಪಿಯನ್ನರನ್ನು ಅಭ್ಯರ್ಥಿಗಳನ್ನಾಗಿಸಲು ಯುರೋಪಿಯನ್ನರಿಗೆ ಹಕ್ಕಿದೆಯೇ? ಹೇಳಿಕೆಯಲ್ಲಿ ಇದು ಸ್ಪಷ್ಟವಾಗಿಲ್ಲ.

ಈ ಪ್ರಶ್ನೆಗಳಿಗೆ ವಿವರಣೆ ಬೇಕಿದೆ. ನಿಮ್ಮ ಉತ್ತರಗಳಿಂದ ನನಗೆ ಉಪಕಾರ ಮಾಡುವ ಒಳ್ಳೆಯತನ ತೋರಿದಲ್ಲಿ ನಾನು ನಿಮಗೆ ಕೃತಜ್ಞನಾಗಿರುತ್ತೇನೆ. ಈ ರಾತ್ರಿ ನಾನು ದೆಹಲಿಯಿಂದ ಬೊಂಬಾಯಿಗೆ ಹೋಗಲಿದ್ದೇನೆ. ಮೇಲಿನ ಪ್ರಶ್ನೆಗಳಿಗೆ ನೀವು ನೀಡಲಿಚ್ಛಿಸುವ ಯಾವುದೇ ಉತ್ತರವನ್ನು ಕೆಳಗೆ ನೀಡಿರುವ ನನ್ನ ಬೊಂಬಾಯಿ ವಿಳಾಸಕ್ಕೆ ಕಳಿಸಬೇಕೆಂದು ಕೋರುತ್ತೇನೆ.

ವಿಳಾಸ : ಸಲೂನ್ ನಂ. ೨೭ ನಿಮ್ಮ ನಂಬುಗೆಯ
ಸೆಂಟ್ರಲ್ ಸ್ಟೇಶನ್ ಡಾ॥ ಬಿ.ಆರ್. ಅಂಬೇಡ್ಕರ್
ಬಿಬಿ ಮತ್ತು ಸಿಐ ರೈಲ್ವೆ
ಮುಂಬೈ

# ೨೦

# ಲಾರ್ಡ್ ಪೆಥಿಕ್ ಲಾರೆನ್ಸ್‌ರವರಿಂದ ಡಾ॥ ಅಂಬೇಡ್ಕರ್‌ರವರಿಗೆ*

(ಎಲ್/ಪಿ ಮತ್ತು ಜೆ/೫/೩೩೭ : ಪು. ३೭೧–೨)

ಮೇ ೨೮, ೧೯೪೬

ನಮ್ಮ ಇತ್ತೀಚಿನ ಹೇಳಿಕೆ ಕುರಿತು ತಾವು ಕೆಲವು ವಿಷಯಗಳ ಬಗ್ಗೆ ಕೆಲವು ಸ್ಪಷ್ಟೀಕರಣ ಕೇಳಿ ಬರೆದಿರುವ ತಮ್ಮ ಮೇ ೨೨ರ ಪತ್ರಕ್ಕಾಗಿ ಧನ್ಯವಾದಗಳು.

ಭಾರತೀಯರು ಸ್ವತಂತ್ರ ಭಾರತಕ್ಕೆ ತಮ್ಮಿಂದಲೇ ರಚಿತವಾದ ಸಂವಿಧಾನವನ್ನು ರಚಿಸಿಕೊಳ್ಳಲು ಅನುವು ಮಾಡಿಕೊಡುವುದೇ ನಮ್ಮ ನಿಯೋಗದ ಉದ್ದೇಶ್ಯವಾಗಿತ್ತೆಂಬುದನ್ನು ನೀವು ಗ್ರಹಿಸುವಿರೆಂದು ನಂಬಿದ್ದೇನೆ. ಸಂಬಂಧಪಟ್ಟ ಎಲ್ಲಾ ಪಕ್ಷಗಳು ಒಗ್ಗೂಡಲು ಸಹಾಯಕವಾಗಬಹುದಾದಂತಹ ಒಂದು ಆಧಾರ ಸೂತ್ರವನ್ನು ಒದಗಿಸುವುದೇ ಈ ಹೇಳಿಕೆಯ ಉದ್ದೇಶ್ಯವಾಗಿತ್ತು ಮತ್ತು ಅದನ್ನು ಸಂಬಂಧಪಟ್ಟ ಎಲ್ಲರೂ ಒಪ್ಪಿಕೊಂಡು ಅದನ್ನು ಕಾರ್ಯಗತಗೊಳಿಸಲಾಗುವುದೆಂದು ನಾವು ಆಶಿಸಿದ್ದೇವೆ. ಈ ಉದ್ದೇಶಕ್ಕೆ ಆವಶ್ಯಕವಾದ ವಿಷಯಕ್ಕೆ ಮಾತ್ರ ಈ ಹೇಳಿಕೆಯನ್ನು ಸೀಮಿತಗೊಳಿಸಿದ್ದೇವೆ. ಇದರಿಂದ ಉದ್ಭವಿಸಬಹುದಾದ ಇತರ ವಿಷಯಗಳನ್ನು ಸಂವಿಧಾನ ರಚನಾ ಸಭೆ ಪರಿಶೀಲಿಸುವುದು.

ಈ ಹೇಳಿಕೆಯ ೨೦ ನೆಯ ಪ್ಯಾರಾದಲ್ಲಿರುವ 'ಅಲ್ಪಸಂಖ್ಯಾತರು' ಎಂಬ ಪದದಲ್ಲಿ ಪರಿಶಿಷ್ಟ ಜಾತಿಗಳೂ ಸೇರಬೇಕೆಂಬುದೇ ನಮ್ಮ ಇಂಗಿತವಾಗಿದೆ.

ಇದಲ್ಲದೆ, ಸಂಪೂರ್ಣ ಪ್ರಾತಿನಿಧಿಕ ಸ್ವರೂಪದ ಒಂದು ಸಲಹಾ ಸಮಿತಿಯನ್ನು ರಚಿಸುವುದು ಸಂವಿಧಾನ ರಚನಾ ಸಭೆಯ ಜವಾಬ್ದಾರಿಯಾಗಿದೆ.

ಸಂವಿಧಾನ ರಚನಾ ಸಭೆಯ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ್ಯ ನಮಗಿಲ್ಲ. ಅದು ರಚಿಸಬಹುದಾದ ಸಲಹಾ ಸಮಿತಿಯ ಸದಸ್ಯರ ಬಗ್ಗೆ ನಮ್ಮ ಹೇಳಿಕೆಯಿಂದ ಯಾವುದೇ ಪರಿಣಾಮ ಉಂಟಾಗಲಾರದು.

ನೀವು ಎತ್ತಿರುವ ಇತರ ಪ್ರಶ್ನೆಗಳಿಗೆ ನಮ್ಮ ಮುಂದುವರಿದ ಹೇಳಿಕೆಯಲ್ಲಿ ಬಹುತೇಕ ಉತ್ತರ ದೊರೆಯುತ್ತದೆ.** ಈ ಹೇಳಿಕೆಯನ್ನು ನಮ್ಮ ನಿಯೋಗವು ಶನಿವಾರ ಸಂಜೆ ನೀಡಿದ್ದು ಅದರ ಪ್ರತಿಯೊಂದನ್ನು ಇದರೊಂದಿಗೆ ಕಳುಹಿಸಿರುವೆ.

ಶ್ರೀಯುತ ಅಲೆಗ್ಸಾಡರ್‌ರವರಿಗೆ ತಾವು ಇತ್ತೀಚೆಗೆ ಬರೆದ ಪತ್ರ*** ತಲಪಿರುವುದಾಗಿ ಧನ್ಯವಾದಗಳೊಂದಿಗೆ ತಿಳಿಸಲು ನನಗೆ ಹೇಳಿರುತ್ತಾರೆ. ಅವರು ತಮ್ಮ ಕೆಲ ದಿನಗಳ ಸಿಲೋನ್ ಭೇಟಿಯ ಸಂಬಂಧವಾಗಿ ಸದ್ಯ ದೆಹಲಿಯಲ್ಲಿದ್ದಾರೆ. ಅವರು ಹಿಂದಿರುಗಿದ ನಂತರ ತಮ್ಮ ಪತ್ರಕ್ಕೆ ಉತ್ತರ ಬರೆಯಲಿದ್ದಾರೆ.

---

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೭, ಸಂಖ್ಯೆ ೪೯, ಪು. ೭೨೩.

** ಸಂಖ್ಯೆ ३೫೬

*** ಇದು ಇಂಡಿಯಾ ಆಫೀಸ್ ದಾಖಲೆಗಳಲ್ಲಿ ದೊರೆತಿಲ್ಲ.

# ೨೧
# ರಾವ್ ಬಹದ್ದೂರ್ ಶಿವರಾಜರಿಂದ ಫೀಲ್ಡ್ ಮಾರ್ಷಲ್ ವೈಕೌಂಟ್ ವೇವೆಲ್ಲರಿಗೆ*

ಎಲ್/ಪಿ ಮತ್ತು ಜೆ/೫/೩೩೭ : ಪು. ೪೧೦–೧೩

ನಂ. ೫೯೨/೭೩/೪೩ ಜೂನ್ ೫, ೧೯೪೬

ಅಖಿಲ ಭಾರತ ಪರಿಶಿಷ್ಟ ಜಾತಿ ಸಂಸ್ಥೆಯ, ಕಾರ್ಯಕಾರಿ ಸಭೆಯು ನನ್ನ ಅಧ್ಯಕ್ಷತೆಯಲ್ಲಿ ದಿನಾಂಕ ೪ ಜೂನ್ ೧೯೪೬ರಂದು ಸಂಪುಟ ನಿಯೋಗವು ಭಾರತ ಸಂವಿಧಾನದ ಬಗೆಗೆ ಸೂಚಿಸಲಾದ ಸಲಹೆಗಳನ್ನು ಪರಿಶೀಲಿಸಲು ಸೇರಿತ್ತು. ಈ ಬಗೆಗೆ ಕಾರ್ಯಕಾರಿ ಸಮಿತಿಯವರು ಒಂದು ನಿರ್ಣಯದ ಮೂಲಕ ಅವರು ಅನುಮೋದಿಸಿದ ಗೊತ್ತುವಳಿಯನ್ನು ಸಂಪುಟ ನಿಯೋಗದ ಸದಸ್ಯರ ಗಮನಕ್ಕೆ ತರಬೇಕೆಂದೂ ಕೇಳಿಕೊಂಡಿದೆ. ಆದುದರಿಂದ ಅವರ ನಿರ್ಣಯದಂತೆ ನಾನು ಸಭೆಯ ಗೊತ್ತುವಳಿಯ ಪ್ರತಿಯನ್ನು ತಮ್ಮ ಅವಗಾಹನೆಗೆ ತರಬಯಸುವೆ. ಮುಂದುವರಿದು ಗೊತ್ತುವಳಿಯ ಪ್ಯಾರಾ ೬ರಲ್ಲಿ ಹೇಳಲಾದ ನಿರ್ಣಯದ ಬಗೆಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದಲ್ಲಿ ನಾನು ಋಣಿಯಾಗಿರುವೆ.

ಲಗತ್ತಿಸಲಾದ ನಂ. ೪೫೪ ಅಖಿಲ ಭಾರತ ಪರಿಶಿಷ್ಟ ಜಾತಿ ಒಕ್ಕೂಟ
ದಿನಾಂಕ ೪ ಜೂನ್ ೧೯೪೬ರಂದು ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ
ತೆಗೆದುಕೊಂಡ ನಿರ್ಣಯ :

ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟದ ಕಾರ್ಯಕಾರಿ ಸಮಿತಿ ಈ ಕೆಳಕಂಡ ವಿಷಯಗಳನ್ನು ಪರಿಶೀಲಿಸಿತು.

೧. ಭಾರತ ಸಂವಿಧಾನದ ಬಗೆಗೆ, ಸಂಪುಟ ನಿಯೋಗವು ಮೊದಲ ಬಾರಿ ನೀಡಿದ ಹೇಳಿಕೆ
೨. ಹೇಳಿಕೆಯನ್ನು ವಿಶದೀಕರಿಸುವಲ್ಲಿ ನೀಡಲಾದ ಪತ್ರಿಕಾ ಸಂದರ್ಶನ
೩. ಎರಡನೇ ಬಾರಿ ನೀಡಿದ ಹೇಳಿಕೆ
೪. ಸಂಪುಟ ಸದಸ್ಯರು ಹಾಗೂ ಡಾ॥ ಬಿ.ಆರ್. ಅಂಬೇಡ್ಕರರ ನಡುವೆ ನಡೆದ ಪತ್ರ ವ್ಯವಹಾರ, ಸಂಪುಟ ಸಮಿತಿಯ ಸದಸ್ಯರು ನೀಡಿದ ಹೇಳಿಕೆಗಳನ್ನು ಕುರಿತಂತೆ ಕಾರ್ಯಕಾರಿ ಸಮಿತಿಯವರು ತಮ್ಮ ಅಭಿಪ್ರಾಯಗಳನ್ನು ತಿಳಿಸಬಯಸುತ್ತಾರೆ. ಸದ್ಯದಲ್ಲಿ ಕಾರ್ಯಸಮಿತಿಯು, ಸಂಪುಟ ಸದಸ್ಯರು ಭಾರತದ ಭವಿಷ್ಯತ್ ಸಂವಿಧಾನದ ರಚನೆಯ ಬಗೆಗೆ ನೀಡಲಾದ ಸಲಹೆಗಳನ್ನು ಯಾವ ವಿಧವಾಗಿ ಪರಿಶಿಷ್ಟ ಜಾತಿಯವರಿಗೆ ಅನ್ವಯಿಸಲಾಗುವುದು ಎಂಬುದನ್ನು ಪರಿಶೀಲಿಸುತ್ತದೆ.

೨. ಸಂಪುಟ ನಿಯೋಗವು ನೀಡಿದ ೫೦೦೦ ಪದಗಳ ಹೇಳಿಕೆಯಲ್ಲಿ ಪರಿಶಿಷ್ಟ ಜಾತಿಯ ಜನಾಂಗದವರ ಬಗೆಗೆ ಒಂದು ಬಾರಿಯಾದರೂ ಹೇಳದೇ ಹೋದುದನ್ನು ಕಾರ್ಯಕಾರಿ ಸಮಿತಿಯು ಅಗೌರವವೆಂದೇ

* ದಿ ಟ್ರಾನ್ಸ್‌ಫರ್ ಆಫ್ ಪವರ್, ಸಂಪುಟ ೭; ಸಂ. ೪೫೪, ಪು. ೮೦೮–೧೨.

ಭಾವಿಸಿದೆ. ಈ ವಿಷಯದಲ್ಲಿ ಸಂಪುಟ ನಿಯೋಗದ ಸದಸ್ಯರ ಮನೋಭಾವನೆಯನ್ನು ಅರಿಯುವುದೇ ಕಷ್ಟಸಾಧ್ಯ ಎಂದು ಭಾವಿಸಲಾಗಿದೆ. ಸಂಪುಟ ನಿಯೋಗವು ಈ ದೇಶದಲ್ಲಿ ಅಸ್ಪೃಶ್ಯ ಜನಾಂಗ ಒಂದಿದೆ ಎಂಬುದನ್ನೇ ಮರೆತಂತಿದೆ. ಉನ್ನತ ಹಿಂದೂ ವರ್ಗದವರಿಂದ ಅವರಿಗೆ ನೀಡಲಾಗುತ್ತಿರುವ ಹಿಂಸೆ, ಹಾಗೂ ದಬ್ಬಾಳಿಕೆಯ ಕಲ್ಪನೆ ಕೂಡಾ ಅವರಿಗಿದ್ದಂತಿಲ್ಲ.

ಮಹಾಪ್ರಭುಗಳ ಸರಕಾರದ ಹೇಳಿಕೆಯಂತೆ, ಪರಿಶಿಷ್ಟ ಜಾತಿಯ ಜನಾಂಗವು ಹಿಂದೂ ಜಾತಿಗಿಂತ ಭಿನ್ನವಾದುದು ಎಂಬ ಅಂಶವನ್ನು, ಸಂಪುಟ ಸಮಿತಿ ನಿಯೋಗವು ಮನಗಂಡಂತಿಲ್ಲ. ಅಲ್ಲದೆ ಪರಿಶಿಷ್ಟ ಜಾತಿಯ ಜನಾಂಗವು ರಾಷ್ಟ್ರೀಯ ಜೀವನದಲ್ಲಿ ತನ್ನದೇ ಆದ ವಿಶಿಷ್ಟ ಅಸ್ತಿತ್ವವನ್ನೂ ಹೊಂದಿದೆ ಎಂಬ ವಿಷಯವೂ ಅವರಿಗೆ ಮನವರಿಕೆಯಾದಂತಿಲ್ಲ. ಘನ ಸರಕಾರವು ನೀಡಿದ ಭರವಸೆಯಂತೆ, ಪರಿಶಿಷ್ಟ ಜಾತಿಯವರಿಗೆ ಒಪ್ಪಿಗೆಯಾಗದ ಸಂವಿಧಾನವನ್ನು ಅವರ ಮೇಲೆ ಹೇರಲಾಗದು ಎಂಬ ಸಂಗತಿಯೂ ಸಂಪುಟ ಮಂಡಳಿಯ ಸದಸ್ಯರಿಗೆ ತಿಳಿದಂತಿಲ್ಲ. ಒಂದು ವರ್ಷದ ಹಿಂದೆ ಲಾರ್ಡ್ ವೇವಲ್ಲರು ಕರೆದಿದ್ದ ಸಿಮ್ಲಾ ಸಭೆಯಲ್ಲಿ ಪರಿಶಿಷ್ಟ ಜಾತಿಯವರಿಗೆಂದೇ ಸ್ಥಾನವನ್ನು ನೀಡದ ಸಂಗತಿಯ ಅರಿವು ಸಂಪುಟ ಮಂಡಳಿಗೆ ಇಲ್ಲವೆಂದೇ ತೋರುತ್ತದೆ. ಈ ಎಲ್ಲಾ ವಿಷಯಗಳ ಹಿನ್ನೆಲೆಯಲ್ಲಿ ವಿಷಯವನ್ನು ಪರಿಶೀಲಿಸಿದಾಗ ಕಾರ್ಯಕಾರಿ ಸಮಿತಿಯ ನಿರ್ಭೀತ ನಿರ್ಣಯವೇನೆಂದರೆ ಸಮಿತಿಯು ಪರಿಶಿಷ್ಟ ಜಾತಿಯ ಜನಾಂಗವನ್ನು ನಿರ್ಲಕ್ಷಿಸಿದೆ. ಈ ಒಂದು ಕಾರ್ಯವು ಬ್ರಿಟಿಷ್ ರಾಷ್ಟ್ರಕ್ಕೆ ಕಳಂಕ ತರುವ ಕಾರ್ಯವಾಗಿದೆ ಹಾಗೂ ಅಗೌರವ ಮತ್ತು ಅವಮಾನ ತರುವಂತಹ ಖಂಡನೀಯ ಕೃತ್ಯವಾಗಿದೆ.

೩. ಸಂವಿಧಾನ ಸಮಿತಿ ಹಾಗೂ ಸಲಹಾ ಸಮಿತಿ ಈ ಎರಡರಲ್ಲೂ ಪರಿಶಿಷ್ಟ ಜಾತಿಯವರಿಗೆ ನೀಡಿದ ಪ್ರಾತಿನಿಧ್ಯವನ್ನು ಕುರಿತು ಸಂಪುಟ ಮಂಡಳಿಯ ಸದಸ್ಯರು ನೀಡಿದ ಪತ್ರಿಕಾ ಹೇಳಿಕೆಯನ್ನು ಕಾರ್ಯಕಾರಿ ಸಮಿತಿಯು ಗಮನಿಸಿದೆ. ಆದರೆ ಕಾರ್ಯಕಾರಿ ಸಮಿತಿಯ ದೃಷ್ಟಿಯಲ್ಲಿ ಈ ವಿಧವಾದ ಪ್ರಾತಿನಿಧ್ಯವು ಖಂಡಿತವಾಗಿ ಕಾಲ್ಪನಿಕ ಹಾಗೂ ಅದಕ್ಕೆ ಯಾವ ಬೆಲೆ ಇಲ್ಲದ್ದಾಗಿದ್ದು, ಇದು ತುಂಬಾ ಗಂಭೀರವಾಗಿ ಯೋಚನೆಮಾಡಬೇಕಾದ ವಿಷಯವಾಗಿದೆ. ಏಕೆಂದರೆ, ಸಂಪುಟ ಮಂಡಳಿಯ ಯೋಚನೆಯಂತೆ, ಸಿಖ್ ಹಾಗೂ ಮುಸ್ಲಿಂ ಜನಾಂಗದವರಿಗೆ ಪ್ರಾಂತೀಯ ಶಾಸನ ಸಭೆಗಳಲ್ಲಿ ಸ್ಥಾನಗಳನ್ನು ಕಾದಿರಿಸಿದೆ. ಆದರೆ ಆ ವಿಧವಾದ ವ್ಯವಸ್ಥೆಯನ್ನು ಪರಿಶಿಷ್ಟ ಜಾತಿಯವರಿಗೆ ಮಾಡಲಾಗಿಲ್ಲ. ಹೀಗಾಗಿ ಪರಿಶಿಷ್ಟ ಜಾತಿಯವರನ್ನು ಚುನಾಯಿಸಬೇಕೆಂಬ ನಿರ್ಬಂಧವೇ ಪ್ರಾಂತೀಯ ಶಾಸನ ಸಭೆಗಳಿಗೆ ಇಲ್ಲ. ಹೀಗಾಗಿ ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಯ ಜನಾಂಗದ ಪ್ರತಿನಿಧಿ ಇಲ್ಲದೇ ಹೋಗುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಒಂದು ವೇಳೆ ಹಲವು ಪ್ರತಿನಿಧಿಗಳೇನಾದರೂ ಚುನಾಯಿತರಾದರೆ, ಅವರು ಕೇವಲ ಹಿಂದೂ ಮತಗಳಿಂದ ಚುನಾಯಿತರಾಗಿರುವುದರಿಂದ, ಪರಿಶಿಷ್ಟ ಜಾತಿಯ ಜನಾಂಗದ ಆಶೋತ್ತರಗಳನ್ನು ಸಮರ್ಪಕವಾಗಿ ಪ್ರತಿನಿಧಿಸಲಾರದೇ ಹೋಗಬಹುದು. ಸಲಹಾ ಸಮಿತಿಯ ಸದಸ್ಯರ ಬಗೆಗೆ ಹೇಳಬಹುದಾದರೆ ಅವರು ಸಂವಿಧಾನ ಸಮಿತಿಯ ಸದಸ್ಯರಿಗಿಂತ ಭಿನ್ನವಾಗಿರದೇ ಅವರು ಈ ಸದಸ್ಯರಂತೆಯೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಸಮರ್ಥರಾಗಿಯೇ ಇರಬಹುದು.

೪. ಸಂವಿಧಾನ ಸಮಿತಿ ಹಾಗೂ ಸಲಹಾ ಸಮಿತಿಗೆ ಚುನಾಯಿತಗೊಳ್ಳುವ ಮೂಲಕ ಪರಿಶಿಷ್ಟ ಜಾತಿ ಜನಾಂಗದ ಆಶೋತ್ತರಗಳನ್ನು ಸಮರ್ಥನೀಯವಾಗಿ ಪ್ರತಿನಿಧಿಸಲಾಗುವುದೆಂಬ ಭಾವನೆ ಸಂಪುಟ ಮಂಡಳಿಗೆ ಬಂದಿರುವುದು ಊಹೆಗೆ ನಿಲುಕಲಾರದ ಸಂಗತಿಯಾಗಿದೆ. ವಿಪುಲ ಹಾಗೂ ನಿರ್ವಿವಾದ ಸಾಕ್ಷಿಗಳ ಆಧಾರದೊಂದಿಗೆ, ಸಂಪುಟ ಸಮಿತಿಗೆ ನಿಜವಾಗಿ ಪರಿಶಿಷ್ಟ ಜಾತಿಯ ಪ್ರತಿನಿಧಿಗಳೆಂದರೆ ಪ್ರಥಮ

ಹಂತದ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗೆಂದೇ ಮೀಸಲಾತಿ ಹೊಂದಿದ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರು ಮಾತ್ರ ಎಂದು ಹೇಳಬಹುದು. ಅವರು ಮಾತ್ರ ಪರಿಶಿಷ್ಟ ಜನಾಂಗವನ್ನು ಪ್ರತಿನಿಧಿಸುಬಲ್ಲರೇ ಹೊರತು ಬೇರೆಯವರಲ್ಲ. ಆದುದರಿಂದ, ಪ್ರಥಮ ಹಂತದ ಚುನಾವಣೆಗಳಲ್ಲಿ ಅತಿಕೆಳಗಿನ ಮಟ್ಟದಲ್ಲಿದ್ದ ಪರಿಶಿಷ್ಟ ಜಾತಿಯ ಪ್ರತಿನಿಧಿಗಳು ಪ್ರಾಂತೀಯ ಶಾಸನ ಸಭೆಯ ಜಂಟಿ ಮತದಾರ ಅನಿಷ್ಟ ವ್ಯವಸ್ಥೆಯಿಂದ, ಉನ್ನತ ಹಂತಕ್ಕೆ ಬಂದಿದ್ದಾರೆ ಎಂದರೆ ಅದು ಕೇವಲ ಉಚ್ಚವರ್ಣದ ಹಿಂದೂಗಳ ಮತದ ಬಲದಿಂದಲೇ ಎಂಬುದು ನಿರ್ವಿವಾದವಾದ ಸಂಗತಿ; ಹೀಗಾಗಿ ಅವರು ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸಲು ಅರ್ಹತೆಯಿಲ್ಲದವರಾಗಿರುತ್ತಾರೆ. ಆದುದರಿಂದ ಸಂಪುಟ ಮಂಡಳಿಯು ಪರಿಶಿಷ್ಟ ಜಾತಿ ಜನಾಂಗಕ್ಕೆ ಸಂವಿಧಾನ ಹಾಗೂ ಸಲಹಾ ಸಮಿತಿಯಲ್ಲಿ ದ್ವಿಗುಣ ಸ್ಥಾನಗಳನ್ನು ನೀಡುವುದು ದೂರದ ಮಾತಾಗಿದ್ದು, ವಸ್ತುಸ್ಥಿತಿಯಲ್ಲಿ ಅದು ಪರಿಶಿಷ್ಟ ಜಾತಿ ಜನಾಂಗದವರಿಗೆ ದ್ರೋಹ ಬಗೆದು, ಪರಿಶಿಷ್ಟ ಜಾತಿಯವರನ್ನು ಹಿಂದೂಗಳ ಮತದ ಮುಲಾಜಿಗೆ ಗುರಿ ಮಾಡಿರುವುದು ಒಂದು ಪ್ರಬಲ ಹಾಗೂ ಕಳಂಕಿತ ಕೃತ್ಯ ಆಗಿದೆ ಎಂಬುದನ್ನು ಅಲ್ಲಗಳೆಯಲಾಗದು. ಆದುದರಿಂದ ಕಾರ್ಯಕಾರಿ ಸಮಿತಿಯು ಅವರ ತರ್ಕ ಹಾಗೂ ನೈತಿಕ ನಿಲುವಿನ ಬಗೆಗೆ ತನ್ನ ಅಸಮಾಧಾನವನ್ನು ಮನವರಿಕೆ ಮಾಡಬಯಸುತ್ತದೆ. ಮುಂದುವರಿದು ಈ ವಿಧವಾದ ಕಾರ್ಯವು ಸಂಪುಟ ಮಂಡಳಿಯ ಬೇಜವಾಬ್ದಾರಿಯನ್ನೇ ಎತ್ತಿತೋರಿಸುತ್ತದೆ ಎಂಬ ಸಂಗತಿಯನ್ನು ಮನಗಾಣಬೇಕೆಂದೂ ಸೂಚಿಸುತ್ತದೆ.

೫. ಈ ದಿಶೆಯಲ್ಲಿ ಸಂಪುಟ ಮಂಡಳಿಯ ಯೋಜನೆಯು ದೋಷಪೂರಿತವಾಗಿದ್ದು, ಅಲ್ಪಸಂಖ್ಯಾತರ ಸಮಸ್ಯೆಗೆ ಸಂಬಂಧಿಸಿದಂತೆ ಅದು ಮುಸ್ಲಿಮ್ ಜನಾಂಗಕ್ಕೆ ಮುಸ್ಲಿಮ್ ವಲಯದಲ್ಲಿ ಅಧಿಕಪ್ರಮಾಣದ ಸ್ವಾತಂತ್ರ್ಯ ನೀಡಿ ಮುಸ್ಲಿಮೇತರರನ್ನು ಹೊರಹಾಕುವಂತೆ ಆಸ್ಪದ ನೀಡಿದೆ; ಅದರಂತೆಯೇ ಅಧಿಕ ಹಿಂದೂ ಬಹುಮತ ಹೊಂದಿರುವ ವಲಯಗಳಲ್ಲಿ, ಹಿಂದೂಗಳಲ್ಲದೇ ಇರುವ ಪರಿಶಿಷ್ಟ ಜಾತಿಯವರನ್ನು ಒಳಗೊಂಡಂತೆ, ಅಲ್ಪಸಂಖ್ಯಾತರನ್ನು ಹೊರಹಾಕುವ ವ್ಯವಸ್ಥೆಗೆ ಆಸ್ಪದ ನೀಡುವ ಮೂಲಕ ಸಂಪುಟ ಮಂಡಳಿಯು ರಚಿಸಿರುವ ತನ್ನ ಯೋಜನೆಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಜನಾಂಗದ ಹಿತಾಸಕ್ತಿಯನ್ನು ಕಾಪಾಡಿದೆಯೇ ಹೊರತು ಪರಿಶಿಷ್ಟ ಜಾತಿ ಜನಾಂಗದವರನ್ನು ಎಂಬುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಏಕೆಂದರೆ ಅವರ ಯೋಜನೆಯ ೧೫ನೆಯ ಪ್ಯಾರಾದಲ್ಲಿ ಸಂವಿಧಾನ ಸಮಿತಿಯ ಕಾರ್ಯಕ್ಷೇತ್ರದ ವ್ಯಾಪ್ತಿಯಿಂದ ಹೊರಗಿರುವ ಸಂಗತಿಗಳನ್ನು ಪ್ರಸ್ತಾಪಿಸಿರುವುದನ್ನು ನಾವು ಸ್ಮರಿಸಬಹುದಾಗಿದೆ. ಈ ಪ್ಯಾರಾದ ಹಿಂದೆ ಇರುವ ಉದ್ದೇಶವೆಂದರೆ ಮುಸ್ಲಿಮ್ ಜನಾಂಗವು ಅಧಿಕ ಹಿಂದೂ ಜನಾಂಗದ ಮೇಲೆ ಅಧಿಕಾರ ಚಲಾಯಿಸಲು ಬಾರದೇ ಇರಬೇಕೆಂಬುದೇ ಅವರ ಉದ್ದೇಶವಾಗಿದೆ. ಆದರೆ ಸೋಜಿಗದ ಸಂಗತಿ ಎಂದರೆ, ಪರಿಶಿಷ್ಟ ಜಾತಿ ಜನಾಂಗದವರ ಮೇಲೆ ಹಿಂದೂಗಳಿಂದ ಆಗಬಹುದಾದ ದಬ್ಬಾಳಿಕೆಯನ್ನು ಸಂಪುಟ ಮಂಡಳಿಯು ಗಣನೆಗೆ ತೆಗೆದುಕೊಂಡಿಲ್ಲ. ಹಿಂದೂ ಬಹುಸಂಖ್ಯಾತರಿಂದ ಆಗಬಹುದಾದ ಹಾನಿಯ ಬಗೆಗೆ ಇರುವ ಪರಿಶಿಷ್ಟ ಜಾತಿಯವರ ಹೆದರಿಕೆ, ಮುಸ್ಲಿಂ ಅಲ್ಪಸಂಖ್ಯಾತರ ಹೆದರಿಕೆಗಿಂತ ಅಧಿಕವಾಗಿದೆ ಎಂದು ಹೇಳಲೇಬೇಕಾಗಿದೆ. ಆದುದರಿಂದ ಪರಿಶಿಷ್ಟ ಜಾತಿಯ ಜನಾಂಗವು ತಮ್ಮ ರಕ್ಷಣೆಯ ಸಮರ್ಥನೆಗಾಗಿ ಪ್ರತ್ಯೇಕ ಮತದಾನ ಕ್ಷೇತ್ರ ಅಥವಾ ತಮ್ಮದೇ ಆದ ಪ್ರತ್ಯೇಕ ವಾಸಸ್ಥಾನಕ್ಕಾಗಿ ಆಗ್ರಹಿಸುತ್ತಾ ಬಂದಿದೆ. ಸಂಪುಟ ಮಂಡಳಿಗೆ ಈ ಬೇಡಿಕೆಗಳು ಸಾಕ್ಷಿಸಹಿತ ತಿಳಿದಿದೆ. ಆದರೂ ಸಂಪುಟ ಮಂಡಳಿಯು ತನ್ನ ಯೋಜನೆಯಲ್ಲಿ ಮುಸ್ಲಿಮ್ ಜನಾಂಗಕ್ಕೆ ರಕ್ಷಣೆ ನೀಡುವಲ್ಲಿ ಅನುಸರಿಸಿದ ಸೂತ್ರವನ್ನು ಹಿಂದುಳಿದ ಜನಾಂಗಕ್ಕೆ ಅನ್ವಯಿಸದೆ ತಮ್ಮ ಯೋಜನೆಯ ೧೫ನೆಯ ಪ್ಯಾರಾದಲ್ಲಿ ಸಂವಿಧಾನ ಸಭೆಯ ಅಧಿಕಾರವನ್ನು

ಸೀಮಿತಗೊಳಿಸಿ ಪರಿಶಿಷ್ಟ ಜಾತಿಯವರು ಶಾಸನ ಸಭೆಗಳಿಗೆ ತಮಗೇ ಮೀಸಲಾದ ಮತದಾನ ಕ್ಷೇತ್ರಗಳಿಂದ ಚುನಾವಣೆ ಹೊಂದುವಂತೆ ಅವಕಾಶ ಕಲ್ಪಿಸದೇ ಅವರನ್ನು ಹಿಂದೂ ದಬ್ಬಾಳಿಕೆಗೆ ಗುರಿ ಮಾಡಿರುವುದು ಶೋಚನೀಯ.

೬. ಕಾರ್ಯಕಾರಿ ಸಮಿತಿಯು, ಸಂಪುಟ ಮಂಡಲಿಯ ಎರಡನೆಯ* ಹೇಳಿಕೆಯನ್ನೂ ಗಮನಿಸಿದ್ದು, ಅದರಲ್ಲಿ ಹೇಳಲಾದ, ಬ್ರಿಟನ್ ಹಾಗೂ ಭಾರತ ಸಂವಿಧಾನ ಸಭೆಯ ಮಧ್ಯೆ ಆಗಬಹುದಾದ ಒಪ್ಪಂದದಂತೆ, ಪರಿಶಿಷ್ಟ ಜಾತಿಯವರ ಹಿತಾಸಕ್ತಿಯನ್ನು ಕಾಪಾಡುವ ಹಲವು ನಿಯಮಾವಳಿಗಳನ್ನು ರಚಿಸಲಾಗುವುದೆಂದೂ ಹೇಳಲಾಗಿದೆ. ಸಂಪುಟ ಮಂಡಳಿಯು ಕಾಂಗ್ರೆಸ್ ಪಕ್ಷವನ್ನು ತೃಪ್ತಿಪಡಿಸುವ ಆತುರದಲ್ಲಿ ೧೯೪೨ರಲ್ಲಿ ಕ್ರಿಪ್ಸ್‌ರ ಸಲಹೆಗಳಲ್ಲಿ ಹೇಳಲಾದ ೨೨ನೇ ವಿಧಿಯನ್ನೇ ತಮ್ಮ ಮೊದಲನೆಯ ಹೇಳಿಕೆಯಲ್ಲಿಯೇ ಕೈಬಿಟ್ಟಿರುವುದು ವಿಷಾದನೀಯ. ಆದರೆ ತಮ್ಮ ಎರಡನೆಯ ಹೇಳಿಕೆಯಲ್ಲಾದರೂ ಸಂಪುಟ ಮಂಡಳಿಯು ತನ್ನ ತಪ್ಪನ್ನು ತಿದ್ದಿಕೊಂಡಿರುವುದನ್ನು ಕಂಡು ಕಾರ್ಯಸಮಿತಿಯು ಹರ್ಷವನ್ನು ವ್ಯಕ್ತಪಡಿಸುತ್ತದೆ. ಮುಂದುವರಿದು ಬ್ರಿಟಿಷ್ ಜನಾಂಗವು ನೀಡಿದ ವಚನವನ್ನು ಪಾಲಿಸಿ ಆ ಜನಾಂಗಕ್ಕೆ ಗೌರವ ಮತ್ತು ಅವರ ಬೇಡಿಕೆಗಳನ್ನು ಈಡೇರಿಸುವಂತೆ, ತಮ್ಮ ವರದಿಯನ್ನು ತಿದ್ದುಪಡಿ ಮಾಡಿಕೊಳ್ಳಬೇಕೆಂದು ಕಾರ್ಯಕಾರಿ ಸಮಿತಿಯು ಈ ಕೆಳಕಂಡ ರೀತಿಯಲ್ಲಿ ಸೂಚಿಸುತ್ತದೆ.

೧. ಈ ಕೆಳಕಾಣಿಸಿದ ವಿಧಿಗಳನ್ನು ವಿಧಿ (೭) ಹಾಗೂ (೮) ಎಂದು ಸೇರಿಸಬೇಕು. ಇದನ್ನು ೧೫ನೇ ಪ್ಯಾರಾದಲ್ಲಿ ಅಳವಡಿಸಬೇಕು. (೭) ಪರಿಶಿಷ್ಟ ಜಾತಿಯವರು ತಮ್ಮದೇ ಆದ ಪ್ರತ್ಯೇಕ ಮತದಾರ ಕ್ಷೇತ್ರಗಳಿಂದ, ಪ್ರಾಂತೀಯ ಶಾಸನ ಸಭೆಗೆ ಚುನಾವಣೆ ಹೊಂದುವ ಹಕ್ಕನ್ನು ಹೊಂದಿರಬೇಕು. (೮) ಸಂವಿಧಾನದಲ್ಲಿ, ಪರಿಶಿಷ್ಟ ಜಾತಿಗಳ ಪ್ರತ್ಯೇಕ ವಾಸಸ್ಥಳಕ್ಕೆ ಅವಕಾಶ ನೀಡುವ ವಿಧಿಯೊಂದು ಇರಲೇಬೇಕು.

೨. ಮೊದಲನೇ ಹೇಳಿಕೆಯ ೨೦ನೇ ಪ್ಯಾರಾವನ್ನು ತಿದ್ದುಪಡಿಗೆ ಒಳಪಡಿಸಿ ಕಳೆದ ಪ್ರಾಥಮಿಕ ಚುನಾವಣೆಗಳಲ್ಲಿ ಆಯ್ಕೆಹೊಂದಿದ ಸಲಹಾ ಸಮಿತಿಯ ಸದಸ್ಯರ ಬದಲು ಬೇರೆ ೫ ಜನ ಪರಿಶಿಷ್ಟ ಜಾತಿಯವರನ್ನು ಚುನಾಯಿಸಲು ಸಲಹಾ ಸಮಿತಿಗೆ ಕಳಿಸಿಕೊಡಬೇಕು.

೭. ಕಾರ್ಯಕಾರಿ ಸಮಿತಿಯ, ಮಹಾಪ್ರಭುಗಳ ಸರಕಾರ ಹಾಗೂ ಕಾರ್ಮಿಕ ಪಕ್ಷದ ಮುಖಂಡರಿಗೆ ಈ ಮೂಲಕ ತಿಳಿಸುವುದೇನೆಂದರೆ ಘನ ಸರಕಾರ ಹಾಗೂ ಅದರ ನಾಯಕರು ಪರಿಶಿಷ್ಟ ಜಾತಿಯವರಿಗೆ ನೀಡಿದ್ದ ಭರವಸೆಗಳಲ್ಲಿ ಆದ ತಪ್ಪನ್ನು, ತಿದ್ದುಪಡಿಯ ಮೂಲಕ ಸರಿಪಡಿಸಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಸಂಪುಟ ಮಂಡಳಿಯಿಂದಾದ ತಪ್ಪುಗಳನ್ನು ಸರಿಪಡಿಸದೇ ಹೋದಲ್ಲಿ ಕಾರ್ಯಕಾರಿ ಸಮಿತಿಗೆ ನೇರ ಹೋರಾಟದ ಹೊರತು ಬೇರೆ ಮಾರ್ಗವೇ ಇಲ್ಲವೆಂದು ಹೇಳಬಯಸುತ್ತೇವೆ. ಪರಿಸ್ಥಿತಿ ಬಂದಲ್ಲಿ ಕಾರ್ಯಸಮಿತಿಯು ಒದಗಿ ಬರಬಹುದಾದ ವಿಪತ್ತನ್ನು ಎದುರಿಸಲು ತನ್ನ ಜನಾಂಗಕ್ಕೆ ನೇರಹೋರಾಟಕ್ಕೆ ಕರೆ ನೀಡುವಲ್ಲಿ ಹಿಂಜರಿಯಲಾರದು.

೮. ಸಂಪುಟ ಸಮಿತಿಯ ವರದಿಯಿಂದ ಪರಿಶಿಷ್ಟ ಜಾತಿಯವರಿಗೆ ಉಂಟಾದ ಕ್ಷೋಭೆಯ ಅರಿವು ಕಾರ್ಯಕಾರಿ ಸಮಿತಿಗೆ ಇದೆ. ಆದುದರಿಂದ ಪರಿಶಿಷ್ಟ ಜಾತಿಯವರಲ್ಲಿ ಕಾರ್ಯಕಾರಿ ಸಮಿತಿಯ ಬಯಕೆ ಏನೆಂದರೆ, ಪರಿಶಿಷ್ಟ ಜನಾಂಗವು ಧೈರ್ಯಗುಂದದೆ ಕಳೆದ ಚುನಾವಣೆಗಳಲ್ಲಿ,

* ನಂ. ೩೭೬

ಕಾಂಗ್ರೆಸ್ ಪಕ್ಷದಿಂದ ಉಂಟಾದ ಹಿಂಸೆ, ಅತ್ಯಾಚಾರಗಳನ್ನು ಏಕಪಕ್ಷೀಯವಾಗಿ ಧೈರ್ಯದಿಂದ ಎದುರಿಸಿದಂತೆ ಈ ವಿಷಮ ಪರಿಸ್ಥಿತಿಯಲ್ಲಿ ಐಕಮತ್ಯದಿಂದ ಹೋರಾಡಿದಲ್ಲಿ ನಮ್ಮ ಮಾನವೀಯ ಹಾಗೂ ನ್ಯಾಯಸಮ್ಮತ ಬೇಡಿಕೆಗಳಿಗೆ ಖಂಡಿತವಾಗಿ ಯಶಸ್ಸು ದೊರೆಯಬಲ್ಲದು. ವಿರೋಧಿಗಳು ಏನೇ ಕುತಂತ್ರ ಮಾಡಿದರೂ, ನಾವು ಜಯಭೇರಿ ಹೊಡೆಯುತ್ತೇವೆ ಎಂಬುದನ್ನು ಮರೆಯದೆ ಧೈರ್ಯ, ಸಾಹಸದಿಂದ ಹೋರಾಡಬೇಕು.

೯. ಈ ನಿರ್ಣಯದ ಮೂಲಕ ಕಾರ್ಯಕಾರಿ ಸಮಿತಿಯು ಅಧ್ಯಕ್ಷರಿಗೆ ಸಬಲ ಹಾಗೂ ಸಮರ್ಥ ಹೋರಾಟ ಸಮಿತಿಯನ್ನು ರಚಿಸುವ ಅಧಿಕಾರ ನೀಡಿದೆ. ನೇರ ಹೋರಾಟಕ್ಕೆ ನಿಗದಿ ಪಡಿಸುವ ವೇಳೆ ಹಾಗೂ ಕಾರ್ಯತಂತ್ರವನ್ನು ಸಮರ್ಥನೀಯವಾಗಿ ನಿರೂಪಿಸುವಂತೆ ವಿನಂತಿಸಿದೆ.

೧೦. ಕಾರ್ಯಕಾರಿ ಸಮಿತಿ ಈ ಕೆಳಕಂಡ ಸಮಸ್ಯೆಗಳನ್ನು ತೀವ್ರವಾಗಿ ಗಮನಿಸಿದೆ.

(೧) ಕಾಂಗ್ರೆಸ್ ಪಕ್ಷದ ವಿರೋಧವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಕ್ಕೆ ಹಿಂದೂ ಜಾತಿವಾದಿಗಳು, ರಾಷ್ಟ್ರಾದ್ಯಂತ, ಹಳ್ಳಿ ಹಾಗೂ ನಗರಗಳಲ್ಲಿ ಪರಿಶಿಷ್ಟ ಜಾತಿ ಜನಾಂಗದವರ ಮೇಲೆ ಒತ್ತಾಯ ಹಾಗೂ ದಬ್ಬಾಳಿಕೆ ಮಾಡಿದ್ದು ಅನೇಕರ ಸಾವು–ನೋವಿಗೆ ಕಾರಣವಾಗಿದೆ.

(೨) ಪರಿಶಿಷ್ಟ ಜಾತಿಯ ಅಮಾಯಕ, ಸ್ತ್ರೀ ಹಾಗೂ ಪುರುಷರನ್ನು ಹಿಂದೂ ಪೊಲೀಸರು, ಹಿಂದೂ ಜಾತಿವಾದಿಗಳ ಪರವಾಗಿ, ಚಿತ್ರಹಿಂಸೆಗೆ ಗುರಿಮಾಡಿರುವುದು ಅಪಮಾನದ ಸಂಗತಿ.

(೩) ಕಾಂಗ್ರೆಸ್ ಪರ ಇರುವ ಅಧಿಕಾರಿಗಳು, ಪರಿಶಿಷ್ಟ ಜಾತಿಯವರಿಗೆ ಪಡಿತರ ನೀಡುವಲ್ಲಿ ಕಿರುಕುಳ ನೀಡುತ್ತಿದ್ದಾರೆ.

(೪) ಈ ಎಲ್ಲಾ ಹಿಂಸಾಚಾರಗಳನ್ನೂ ದಿನಪತ್ರಿಕೆಗಳು ಪ್ರಕಟಿಸದೆ ಪರಿಶಿಷ್ಟ ಜಾತಿಯವರಿಗೆ ದ್ರೋಹ ಬಗೆಯುತ್ತಿವೆ.

(೫) ಪರಿಶಿಷ್ಟ ಜಾತಿಗಳವರ ರಕ್ಷಣೆಯನ್ನು ಕುರಿತಂತೆ ಪ್ರಾಂತೀಯ ಸರಕಾರಗಳು ಉದಾಸೀನ ಮನೋಭಾವನೆಯನ್ನು ತಳೆದಿವೆ.

(೬) ಈ ಎಲ್ಲಾ ಅಂಶಗಳಿಂದ, ಬಹುಸಂಖ್ಯಾತರಾದ ಹಿಂದೂಗಳ ಕೈಗೆ ಅಧಿಕಾರ ನೀಡಿದರೆ, ಪರಿಶಿಷ್ಟ ಜಾತಿಯವರ ಹಿತಾಸಕ್ತಿಗೆ ಅಪಾಯ ತಪ್ಪಿದ್ದಲ್ಲ. ಆದುದರಿಂದ ಪರಿಶಿಷ್ಟ ಜಾತಿಯವರು ಇದನ್ನು ಪ್ರತಿಭಟಿಸದೇ ಬೇರೆ ಮಾರ್ಗವೇ ಇಲ್ಲ.*

---

* ಎಲ್/ವಿ/ಜೆ/೧೦/೫೦: ಪುಟ,೮೧–೩ ಹಾಗೂ ಆಟ್ಲೆ ಅವರ ಕಡತಗಳು, ಆಕ್ಸ್‌ಫರ್ಡ್ ಕಾಲೇಜ್, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ.

# ೨೨
# ಶ್ರೀ ಆಟ್ಲೆಯವರಿಂದ ಡಾ॥ ಅಂಬೇಡ್ಕರರಿಗೆ*

ಪ್ಯಾರಿಸ್, ಆಗಸ್ಟ್ ೧, ೧೯೪೬.

ನನ್ನ ಪ್ರೀತಿಯ ಅಂಬೇಡ್ಕರ್,

ದಿನಾಂಕ ಜುಲೈ ೧ರ ಪತ್ರವನ್ನು ಹಾಗೂ ಅದಕ್ಕೆ ಲಗತ್ತಿಸಿದ ಇತರ ಕಡತಗಳನ್ನು ನಾನು ಜಾಗರೂಕತೆಯಿಂದ ಗಮನಿಸಿದ್ದೇನೆ.**

ಸಂಪುಟ ಮಂಡಲಿಯವರು ಹಾಗೂ ವೈಸ್‌ರಾಯ್ ಅವರು ಪರಿಶಿಷ್ಟ ಜಾತಿಯವರ ಬಗೆಗೆ ತಾವು ತಿಳಿಸಿದಂತಹ ಧೋರಣೆ ಹೊಂದಿದ್ದಾರೆ ಎಂಬ ಭಾವನೆಯನ್ನು ಅನುಮೋದಿಸಲಾರೆ. ೧೯೪೫ರ ಸಿಮ್ಲಾ ಸಮ್ಮೇಳನದ ನಂತರ ನೀವು ಹೇಳಿದಂತೆ ಅವರ ಬದಲಾಯಿಸಿದ ಧೋರಣೆಗೆ ಬಲವಾದ ಕಾರಣಗಳು ಕಳೆದ ವಸಂತದಲ್ಲಿ ಜರುಗಿದ ಪ್ರಾಂತೀಯ ಚುನಾವಣೆಗಳ ಫಲಿತಾಂಶದ ಫಲವಾಗಿದೆ. ಸಂಪುಟ ಮಂಡಲಿಯು ಈ ಚುನಾವಣೆಯ ಫಲಿತಾಂಶಗಳನ್ನು ತುಂಬಾ ಜಾಗರೂಕತೆಯಿಂದ ಗಮನಿಸಿದೆ. ಚುನಾವಣೆಯ ಅಂಕಿ ಸಂಖ್ಯೆಗಳನ್ನು ನಾನೂ ಪರಿಶೀಲಿಸಿದ್ದೇನೆ. ಕಾಂಗ್ರೆಸ್ಸನ್ನು ವಿರೋಧಿಸಿದ ಪರಿಶಿಷ್ಟ ಜಾತಿಯರಿಗೆ ಈ ವಿಧವಾದ ಚುನಾವಣೆಯ ವ್ಯವಸ್ಥೆಯಿಂದ ಯಾವ ವಿಧವಾದ ನ್ಯಾಯ ದೊರಕಲಾರದು ಎಂಬ ಸಂಗತಿಯೂ ಮನವರಿಕೆಯಾಗಿದೆ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸಿದವರ ಬಗೆಗೆ ತಾವು ಹೇಳಿದಂತಹ

---

* ಟ್ರಾನ್ಸ್‌ಫರ್ಸ್ ಆಫ್ ಪವರ್, ಸಂ. ೮, ನಂ. ೧೦೫, ಪು. ೧೭೦–೭೨

** ದಿನಾಂಕ ಜುಲೈ ೧ರಂದು ಡಾ॥ ಅಂಬೇಡ್ಕರರು ಮಾನ್ಯ ಆಟ್ಲೆಯವರಿಗೆ ಒಂದು ದೀರ್ಘ ಪತ್ರ ಬರೆದಿದ್ದು ಅವರೊಂದಿಗೆ ತಮ್ಮ ಈಚಿನ ಪತ್ರ ವ್ಯವಹಾರದ ಪ್ರತಿಗಳನ್ನು ಹಾಗೂ ಅಹವಾಲನ್ನೂ ಮತ್ತು ಹಲವಾರು ಭಾಷಣದ ಹಾಗೂ ಇತರ ಕಡತಗಳನ್ನೂ ಲಗತ್ತಿಸಿದ್ದರು. ಡಾ॥ ಅಂಬೇಡ್ಕರರ ಈ ಪತ್ರ ವ್ಯವಹಾರವು ಅವರು ಈ ಮೊದಲೇ ಆಟ್ಲೆಯವರಿಗೆ ಕಳಿಸಿದ್ದ ತಂತಿ ಸಂದೇಶವನ್ನು ಎತ್ತಿತ್ತೋರಿಸುತ್ತದೆ. ತಂತಿ ಸಂದೇಶ ಹೀಗಿದೆ : ಕಳೆದ ವರ್ಷದ ಸಿಮ್ಲಾ ಸಮ್ಮೇಳನದಲ್ಲಿ ನನ್ನ ಪ್ರತಿಭಟನೆ ಹಾಗೂ ಸ್ಥಾನಿಕ ಸರಕಾರದ ಒಪ್ಪಿಗೆಯ ಮೇಲೆ, ಮಧ್ಯಕಾಲೀನ ಸರಕಾರದಲ್ಲಿ ಪರಿಶಿಷ್ಟ ಜಾತಿಯವರ ಪ್ರಾತಿನಿಧ್ಯವನ್ನು ೨ಕ್ಕೆ ಹಾಗೂ ವಿಧಾನ ಪರಿಷತ್ತಿನಲ್ಲಿ ೧೪ ಸ್ಥಾನಗಳನ್ನು ನೀಡುವ ಭರವಸೆ ನೀಡಿದರು. ನಾನು ಮಧ್ಯಕಾಲೀನ ಸರ್ಕಾರದಲ್ಲಿ ೩ ಸ್ಥಾನಗಳನ್ನು ಕೇಳಿದ್ದೆ. ಆದರೆ ಸಹಕರಿಸುವ ಮನೋಭಾವನೆಯಿಂದ ನಾನು ಎರಡು ಸ್ಥಾನಗಳಿಗೆ ಒಪ್ಪಿದೆ. ನಿನ್ನೆ ಪ್ರಕಟಿಸಲಾದ ನೂತನ ಸಲಹೆಯಲ್ಲಿ. ಮಧ್ಯಕಾಲೀನ ಸರಕಾರದಲ್ಲಿ ಪರಿಶಿಷ್ಟ ಜಾತಿಯವರಿಗೆ ಕೇವಲ ಒಂದೇ ಸ್ಥಾನವನ್ನು ನೀಡಿದ್ದು ಅದು ವಾಗ್ದಾನದ ಉಲ್ಲಂಘನೆಯಾಗಿದೆ. ೬೦ ದಶಲಕ್ಷ ಅಸ್ಪೃಶ್ಯರನ್ನು, ೪ ದಶಲಕ್ಷ ಸಿಖ್ಖರು, ೩ ದಶಲಕ್ಷ ಕ್ರಿಶ್ಚಿಯನ್ನರಿಗಿಂತ, ಕೀಳಾಗಿ ಕಾಣಲಾಗಿದೆ. ಮುಂದುವರಿದು. ಈ ಒಬ್ಬ ಪ್ರತಿನಿಧಿ ಸಮಗ್ರವಾಗಿ ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸಲಾರ, ಏಕೆಂದರೆ ಅವನು ಬಹುಸಂಖ್ಯಾತ ಹಿಂದೂ ಮತಗಳ ಬಲದಿಂದ ಬಂದವನಾಗಿರುತ್ತಾನೆ. ಹೀಗಾಗಿ ಅವನು ಕಾಂಗ್ರೆಸ್ಸಿನ ಕೈಕೂಸಾಗಿರಬೇಕಾಗುತ್ತದೆ. ಆದುದರಿಂದ ಆತನು ಕಾಂಗ್ರೆಸ್ಸಿನ ಪ್ರತಿನಿಧಿಯೆ ಹೊರತು ಪರಿಶಿಷ್ಟ ಜಾತಿಯದಲ್ಲ. ಹೀಗಾಗಿ ಸಂಪುಟ ಮಂಡಲಿಯು ಕಾಂಗ್ರೆಸ್ಸಿಗೆ ಅನುಕಂಪ ತೋರುವ ಮೂಲಕ ಈ ದೇಶದಲ್ಲಿಯ ಪರಿಶಿಷ್ಟ ಜಾತಿಯ ಸ್ವಾತಂತ್ರ್ಯಕ್ಕೆ ಕೊಡಲಿ ಏಟನ್ನು ನೀಡಿದೆ. ಆದುದರಿಂದ ದಯಮಾಡಿ ಮಧ್ಯಪ್ರವೇಶ ಮಾಡಿ ಕನಿಷ್ಠ ೨ ಸ್ಥಾನಗಳನ್ನಾದರೂ ನೀಡುವಂತೆ ಅವರಿಗೆ ಮನವರಿಕೆಮಾಡಿರಿ. ನನ್ನ ಬಗೆಗೆ ತಪ್ಪು ತಿಳಿವಳಿಕೆಯಾಗಬಾರದೆಂಬ ಆಶಯದಿಂದ ನಾನು ಮಧ್ಯಕಾಲೀನ ಸರಕಾರದಲ್ಲಿ ಸೇರಬಯಸುವುದಿಲ್ಲ. ಬ್ರಿಟಿಷ್ ಸರಕಾರದಲ್ಲಿ ನ್ಯಾಯಕ್ಕೆ ಸ್ಥಾನವಿದೆ ಎಂದು ಭಾವಿಸಿ ನಾನು ನನ್ನ ಹೋರಾಟವನ್ನು ಪರಿಶಿಷ್ಟ ಜಾತಿಯವರ ಏಳಿಗೆಗಾಗಿ ಮುಂದುವರಿಸುತ್ತೇನೆ.

ಗಮನಾರ್ಹ ಸಾಧನೆ ಅಂಕಿಸಂಖ್ಯೆಗಳಿಂದ ಕಂಡುಬರುವುದಿಲ್ಲ. ಮುಂದುವರಿದು ಈಗಾಗಲೇ ಜರುಗಿರುವ ಪ್ರಾಥಮಿಕ ಚುನಾವಣೆಗಳ ಬಗೆಗೆ ವಿವರವಾಗಿ ಗಮನಿಸದೇ ಹೋದರೂ, ಪ್ರಾಥಮಿಕ ಚುನಾವಣೆಗಳು ೧೫೧ ಸ್ಥಾನಗಳಲ್ಲಿ ಕೇವಲ ೪೩ ಸ್ಥಾನಗಳಿಗೆ ಜರುಗಿದ್ದು ಈ ೪೩ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಯ ಮಹಾಸಭೆಯ ಉಮೇದುವಾರರು ೨೨ ಸ್ಥಾನಗಳಿಗೆ ಸ್ಪರ್ಧಿಸಿದ್ದು, ಅದರಲ್ಲಿ ಕೇವಲ ೧೩ ಸ್ಥಾನಗಳಲ್ಲಿ ಉನ್ನತ ಸ್ಥಾನಗಳನ್ನು ಪಡೆದಿರುವುದು ಸತ್ಯದ ಸಂಗತಿಯಾಗಿದೆ.

ಡಾ॥ ಅಂಬೇಡ್ಕರ್, ತಾವು ತಮ್ಮ ಪತ್ರದಲ್ಲಿ ಮೂರು ನಿರ್ದಿಷ್ಟ ಕೋರಿಕೆಗಳನ್ನು* ನನ್ನ ಮುಂದೆ ಇರಿಸಿದ್ದೀರಿ. ಮೊದಲನೆಯದರ ಬಗೆಗೆ ಹೇಳಬಹುದಾದರೆ ಮಹಾಪ್ರಭುಗಳ ಸರಕಾರವು ಸಂಪುಟ ಮಂಡಲಿಯವರು ದಿನಾಂಕ ೧೬ ಹಾಗೂ ೨೫ ಮೇ ತಾರೀಖುಗಳಂದು ನೀಡಿದ ಹೇಳಿಕೆಗಳಿಗೆ ಅನುಗುಣವಾಗಿ, ಭಾರತದ ಸಂವಿಧಾನ ಸಭೆಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕೆಂಬುದೇ ಅವರ ಉದ್ದೇಶವಾಗಿದೆ. ನಮ್ಮ ದೃಷ್ಟಿಯಲ್ಲಿ ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತರಲ್ಲಿ ಅತಿ ಪ್ರಮುಖರಾದವರು, ಆದುದರಿಂದ ಅವರು ಅಲ್ಪಸಂಖ್ಯಾತರ ಸಲಹಾ ಸಮಿತಿಯಲ್ಲಿ ಪ್ರಾತಿನಿಧ್ಯ ಹೊಂದಿರಲೇಬೇಕೆಂದಿದೆ. ಆದರೆ ನೀವು ಬಹಿರಂಗವಾಗಿ ಸಾರಿದಂತೆ ಸಲಹಾ ಸಮಿತಿಯಲ್ಲಿ ಪ್ರತಿನಿಧಿಸಬಹುದಾದ ಪ್ರತಿನಿಧಿಗಳನ್ನು ಕೇವಲ ಪರಿಶಿಷ್ಟ ಜನಾಂಗಕ್ಕೆ ಮಾತ್ರ ಸೀಮಿತವಾಗಿಸದೆ, ಯಾರು ಆ ಸಮಿತಿಯಲ್ಲಿರಬೇಕೆಂಬ ಬಗೆಗೆ ಹಲವಾರು ಅಂಶಗಳನ್ನು ಗಣನೆಗೆ ತೆಗೆದುಕೊಂಡ ನಂತರವೇ ನಿರ್ಧರಿಸಲಾಗುವುದು. ಈ ದಿಶೆಯಲ್ಲಿ ಮಹಾಪ್ರಭುಗಳ ಸರ್ಕಾರವು ಏನೇ ಅಭಿಪ್ರಾಯವನ್ನು ಸೂಚಿಸಿದರೂ, ಅದು ಸಂವಿಧಾನ ಸಮಿತಿಯ ಕಾರ್ಯ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡಲಾಗಿದೆ ಎಂದೇ ಟೀಕೆ ಮಾಡಲಾಗುವುದರಿಂದ ಗಂಭೀರ ಪರಿಣಾಮಕ್ಕೆ ಆಸ್ಪದ ನೀಡಿದಂತಾಗುತ್ತದೆ; ಹಾಗೂ ವಿರೋಧಕ್ಕೆ ಎಡೆಯಿತ್ತಂತಾಗುತ್ತದೆ. ಈ ಒಂದು ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾವು ಏನೇ ಘೋಷಿಸಿದರೂ ಅದು ಪರಿಶಿಷ್ಟ ಜನಾಂಗಕ್ಕೆ ಸಹಕಾರಿಯಾಗಲಾರದು.

ತಮ್ಮ ಎರಡನೆಯ ಕೋರಿಕೆಯ ಬಗೆಗೆ ಹೇಳಬಹುದಾದರೆ, ಮೇ ೧೫ನೇ ತಾರೀಕಿನಂದು ಕಾಮನ್ಸ್ ಸಭೆಯಲ್ಲಿ ನೀಡಿದ ಹೇಳಿಕೆಯಲ್ಲಿ ತಾವು ಆರೋಪಿಸಿದಂತೆ ನಾನು ಯಾವ ಪದಗಳನ್ನೂ ಉಪಯೋಗಿಸಿಲ್ಲವೆಂದೇ ಹೇಳಬಯಸುವೆ.** ನಾನು ಆ ಸಭೆಯಲ್ಲಿ ಹೇಳಿದ್ದೇನೆಂದರೆ : "ಅಲ್ಪಸಂಖ್ಯಾತರು ಸ್ವತಂತ್ರ ಹಾಗೂ ನಿರ್ಭೀತ ವಾತಾವರಣದಲ್ಲಿ ಬಾಳುವಂತಿರಬೇಕು".

---

* ಕೋರಿಕೆಗಳು:

ಅ. ಸಂಪುಟ ಸಮಿತಿಯ ಹೇಳಿಕೆಯ ೨೦ನೆಯ ಪ್ಯಾರಾದಂತೆ ಮಹಾಪ್ರಭುಗಳ ಘನ ಸರಕಾರದ ಅಭಿಪ್ರಾಯದಲ್ಲಿ ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು.

ಆ. ಸ್ವಾತಂತ್ರ್ಯ ನೀಡುವ ಮೊದಲೇ ಮಹಾಪ್ರಭುಗಳ ಘನ ಸರಕಾರವು ಪರಿಶಿಷ್ಟ ಜಾತಿಯವರು ಸ್ವತಂತ್ರ ಹಾಗೂ ಮುಕ್ತ ಹಾಗೂ ನಿರ್ಭೀತ ವಾತಾವರಣದಲ್ಲಿ ನೆಲಸುವ ರಕ್ಷಾಕ್ರಮಗಳಿಗೆ ಏರ್ಪಾಡು ಮಾಡಬೇಕು.

ಇ. ಮಧ್ಯಕಾಲೀನ ಸರಕಾರದಲ್ಲಿ ಕನಿಷ್ಠ ಎರಡು ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ನೀಡಬೇಕು(ಅದೇ ಪುಟ ೮೨).

** ಸಂಪುಟ ಸಮಿತಿಯು ಪರಿಶಿಷ್ಟ ಜಾತಿಯವರ ರಕ್ಷಣೆಗೆ ಕ್ರಮ ಕೈಗೆತ್ತಿಕೊಂಡಿರುವುದನ್ನು ಡಾ॥ ಅಂಬೇಡ್ಕರರು ಗಮನಿಸಿದ್ದಾರೆ. ಪರಿಶಿಷ್ಟ ಜಾತಿಯವರು ಸ್ವತಂತ್ರ ಹಾಗೂ ನಿರ್ಭೀತ ವಾತಾವರಣದಲ್ಲಿರುವಂತೆ ಎಂಬ ಪದಗಳನ್ನು ಬಳಸಿದರೆ ಅವರ ಎರಡನೇ ಕೋರಿಕೆ ಅನುಮೋದಿಸಿದಂತೆ.

ಈ ವಿಷಯದಲ್ಲಿ ಮಹಾಪ್ರಭುಗಳ ಘನ ಸರಕಾರದ ಅಭಿಪ್ರಾಯವನ್ನು ಸಂಪುಟ ಮಂಡಲಿಯ ದಿನಾಂಕ ಮೇ ೨೫ರ ಹೇಳಿಕೆಯ ೪ನೇ ಪ್ಯಾರಾದಲ್ಲಿ ಸೂಚಿಸಲಾಗಿದೆ. ಈ ಪ್ಯಾರಾದಲ್ಲಿ ಹೇಳಲಾದ ಹೇಳಿಕೆಗಿಂತ ಬೇರೆ ಏನನ್ನೂ ಮಹಾಪ್ರಭುಗಳ ಘನ ಸರಕಾರವು ಸದ್ಯದಲ್ಲಿ ವಿವರಿಸಲಾರದು. ಅಲ್ಲದೆ ಈ ಪರಿಸ್ಥಿತಿಯಲ್ಲಿ ಹೆಚ್ಚು ಹೇಳಿಕೆ ನೀಡುವುದು ಸಮಂಜಸವಲ್ಲವೆಂದೇ ಘನ ಸರಕಾರದ ಅಭಿಪ್ರಾಯವಾಗಿದೆ.

ತಮ್ಮ ಮೂರನೆಯ ಕೋರಿಕೆಯಂತೆ, ಮಧ್ಯಕಾಲೀನ ಸರಕಾರದಲ್ಲಿ ಇಬ್ಬರು ಪರಿಶಿಷ್ಟ ಜಾತಿಯ ಪ್ರತಿನಿಧಿಗಳಿರಬೇಕೆಂಬುದರ ಬಗೆಗೆ ನನ್ನ ಒಪ್ಪಿಗೆಯನ್ನು ನೀಡಲಾರೆ ಹಾಗೂ ಈ ಬಗೆಗೆ ತಮ್ಮ ಆಶೋತ್ತರಗಳನ್ನು ನೆರವೇರಿಸಲಾರೆ ಎಂದು ತಿಳಿಸಲು ಖೇದವಾಗುತ್ತದೆ.

ತಾವು ಸಂವಿಧಾನ ಸಭೆಗೆ ಚುನಾಯಿತರಾಗಿರುವುದು ನನಗೆ ಸಂತೋಷವಾಗಿದೆ.

ಸಿ.ಆರ್. ಆಟ್ಲೆ

# ೨೩
# ಡಾ॥ ಅಂಬೇಡ್ಕರರು – ಶ್ರೀ ಆಟ್ಲೆ ಅವರಿಗೆ*

(ಎಲ್/ಪಿ ಮತ್ತು ಜೆ/೧೦/೫೦ : /೫೫)

ರಾಜಗೃಹ,
ದಾದರ, ಬೊಂಬಾಯಿ ೧೪
ಆಗಸ್ಟ್ ೧೨, ೧೯೪೬

ನನ್ನ ಪ್ರೀತಿಯ ಆಟ್ಲೆ,

ದಿನಾಂಕ ಆಗಸ್ಟ್ ೧, ೧೯೪೬ರ ತಮ್ಮ ಪತ್ರಕ್ಕೆ ವಂದನೆಗಳು. ನಾನು ಜುಲೈ ೧, ೧೯೪೬ರಂದು ಬರೆದ ಪತ್ರಕ್ಕೆ ಮರು ಉತ್ತರ ಬರೆಯಲು ತಮಗೆ ಅವಕಾಶವಿರಲಾರದೆಂದು ನನ್ನ ಭಾವನೆಯಾಗಿತ್ತು. ಆದರೆ ತಾವು ಬಿಡುವು ಮಾಡಿಕೊಂಡು, ನಾನು ನನ್ನ ಪತ್ರದಲ್ಲಿ ಬರೆದಿದ್ದ ವಿಷಯಗಳಿಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಕ್ಕೆ ಋಣಿಯಾಗಿದ್ದೇನೆ.

೨. ಸಂಪುಟ ಮಂಡಲಿಯ ೧೯೪೫ರ ಸಿಮ್ಲಾ ಸಮ್ಮೇಳನದ ಹೇಳಿಕೆಯ ಬಗೆಗೆ ತಮ್ಮ ಪರಿಷ್ಕೃತ ನಿಲವು ಹಾಗೂ ಘನ ಸರಕಾರದ ಅಭಿಪ್ರಾಯವನ್ನು ಕುರಿತು ತಾವು ಪರಿಶಿಷ್ಟ ಜಾತಿಯವರ ಬಗೆಗೆ ಹೇಳಿದ ಅಭಿಪ್ರಾಯವು ಸಮರ್ಥನೀಯವಲ್ಲವೆಂದೇ ನನ್ನ ಅಭಿಪ್ರಾಯ. ಮುಂದುವರಿದು, ಕಾಮನ್ಸ್ ಸಭೆಯಲ್ಲಿ ಸನ್ಮಾನ್ಯ ಅಲೆಕ್ಸಾಂಡರ್‌ರವರು ಅಲ್ಪಸಂಖ್ಯಾತರು ಕಾಂಗ್ರೆಸಿನೊಂದಿಗೆ ಇದ್ದಾರೆ ಎಂದ ಹೇಳಿಕೆಯು ಸತ್ಯಕ್ಕೆ ದೂರವಾದ ಹಾಗೂ ಆಧಾರ ರಹಿತ, ಮತ್ತು ಘೋರ ಹೇಳಿಕೆಯಾಗಿದೆ ಎಂದು ಹೇಳದೆ ಇರಲಾರೆ. ಇದು ಕೇವಲ ನನ್ನ ಹೇಳಿಕೆಯಾಗಿರದೆ, ಭಾರತದಲ್ಲಿರುವ ಪ್ರತಿಯೋರ್ವ ಆಂಗ್ಲರ ಹೇಳಿಕೆಯಾಗಿದೆ. ಈ ದಿಶೆಯಲ್ಲಿ ಈಗ ಇಂಗ್ಲೆಂಡಿನಲ್ಲಿರುವ ಸರ್ ಎಡ್‌ವರ್ಡ್ ಬೆನ್‌ಥಾಲ್ ಅವರನ್ನು ವಿಚಾರಿಸಿದರೆ, ಅವರು ನನ್ನ ಅಭಿಪ್ರಾಯವನ್ನೇ ಸಮರ್ಥಿಸುವರು.

೩. ಪರಿಶಿಷ್ಟ ಜಾತಿ ಮಹಾಸಭೆಯ ಪ್ರಾಥಮಿಕ ಚುನಾವಣೆಗಳ ಬಗೆಗೆ ತಮ್ಮ ವಿಶ್ಲೇಷಣೆಯ ಬಗೆಗೆ ಹೇಳಬೇಕಾದರೆ, ತಮಗೆ ಇಲ್ಲಿಯ ಪರಿಸ್ಥಿತಿಯ ಬಗ್ಗೆ ತಪ್ಪು ಕಲ್ಪನೆಯಾಗಿದೆ. ಹೀಗಾಗಿ ಹೊರಗಿನವರಿಗೆ ಈ ಚುನಾವಣೆಯ ಫಲಿತಾಂಶ ಹಾಗೂ ವಿಧಾನಗಳ ಮತ್ತು ಪರಿಣಾಮ ಪ್ರಭಾವದ ಕಲ್ಪನೆಯಾಗಲಾರದೆಂದೇ ಹೇಳಬಯಸುವೆ. ಸಂಪುಟ ನಿಯೋಗದ ವಿರುದ್ಧ ನನ್ನ ಪ್ರಮುಖ ಆರೋಪವೆಂದರೆ, ನಾವು ಕಾಂಗ್ರೆಸ್ ವಿರುದ್ಧ ಅಭಿಪ್ರಾಯವನ್ನು ಬಹಿರಂಗಪಡಿಸಿದಾಗ ಅವರು ನನ್ನನ್ನು ಕರೆಕಳಿಸಿ ಅಭಿಪ್ರಾಯವನ್ನು ವಿವರಿಸಲು ಕೇಳಬಹುದಾಗಿತ್ತು. ಇದನ್ನು ಸಂಪುಟ ನಿಯೋಗವು ನ್ಯಾಯಯುತವಾಗಿ ಮಾಡಬೇಕಾಗಿತ್ತು, ಆದರೆ ಅವರು ಆ ರೀತಿ ಮಾಡಲಿಲ್ಲ. ಅವರು ನನ್ನ ಅಭಿಪ್ರಾಯದ ವಿವರಣೆಗೆ ಒಪ್ಪದೇ ಹೋದ ಸಮಯದಲ್ಲಿ ತಾವು ತಮ್ಮದೇ ಆದ ಅಭಿಪ್ರಾಯಕ್ಕೆ ಬರಬಹುದಾಗಿತ್ತು. ಹೀಗಾಗಿ ಸಂಪುಟ ನಿಯೋಗ ಅಲ್ಲಸಲ್ಲದ ಹೇಳಿಕೆಗೆ ಕಿವಿಕೊಟ್ಟಿದೆ ಎಂಬ ಸಂಗತಿ ಚುನಾವಣೆಗಳ ಫಲಿತಾಂಶದಿಂದ ಅಂದರೆ ಪಶ್ಚಿಮ ಬಂಗಾಲ ಕ್ಷೇತ್ರದಿಂದ ನಾನು ಚುನಾವಣೆ ಹೊಂದಿರುವುದೇ ಸಾಕ್ಷಿಯಾಗಿದೆ. ಸೋಜಿಗದ ಸಂಗತಿ ಎಂದರೆ ಸಂಪುಟ

* ದಿ ಟ್ರಾನ್ಸಫರ್ ಆಫ್ ಪವರ್, ಸಂ. ೮, ನಂ. ೧೪೨, ಪು. ೨೨೧–೨೩.

ನಿಯೋಗವು ಕಾಮನ್ಸ್ ಸಭೆಯಲ್ಲಿ, ನನ್ನ ಪ್ರಭಾವ ಕೇವಲ ಬೊಂಬಾಯಿ ಹಾಗೂ ಮಧ್ಯಪ್ರಾಂತಕ್ಕೆ ಸೀಮಿತವಾಗಿದೆ ಎಂಬ ಹೇಳಿಕೆ ನೀಡಿದ್ದರು. ಆದರೆ ನಾನು ಪಶ್ಚಿಮ ಬಂಗಾಲದ ಕ್ಷೇತ್ರದಿಂದ ಹೇಗೆ ಆಯ್ಕೆ ಹೊಂದಿದೆ? ನನ್ನ ಈ ಚುನಾವಣೆಗೆ ಸಂಬಂಧಿಸಿದಂತೆ ತಮಗೆ ಮನವರಿಕೆಯಾಗಲು ಈ ಮೂರು ಸಂಗತಿಗಳನ್ನು ತಮ್ಮ ಅವಗಾಹನೆಗೆ ತರಬಯಸುವೆ.

ಮೊದಲನೆಯದಾಗಿ, ನಾನು ಚುನಾವಣೆಯಲ್ಲಿ ಮಾಮೂಲಾಗಿ ತೂರಿ ಮೇಲೆ ಬಂದಿರದೆ, ಬಂಗಾಲದ ಕಾಂಗ್ರೆಸ್ ಮಹಾನಾಯಕರಾದ ಶ್ರೀ ಶರತ್‌ಚಂದ್ರ ಬೋಸ್ ಅವರನ್ನು ಪರಾಭವಗೊಳಿಸಿ ಅಧಿಕ ಮತಗಳನ್ನು ಗಳಿಸಿರುವೆ.

ಎರಡನೆಯದಾಗಿ, ಬಂಗಾಲದ ಪರಿಶಿಷ್ಟ ಜಾತಿಯವರೊಂದಿಗೆ ನನ್ನ ಯಾವ ಜಾತೀಯ ಸಂಬಂಧವೇ ಇಲ್ಲವೆಂದು ತಿಳಿಸಬಯಸುವೆ; ಏಕೆಂದರೆ ಅವರ ಜಾತಿಯು ನನ್ನ ಜಾತಿಗಿಂತ ಭಿನ್ನವಾಗಿದೆ. ನನ್ನ ಜಾತಿಯು ಬಂಗಾಲದಲ್ಲಿರದೇ ಹೋದರೂ, ಬಂಗಾಲದ ಪರಿಶಿಷ್ಟ ಜಾತಿಯವರು ನನ್ನನ್ನು ಬೆಂಬಲಿಸಿದ್ದರಿಂದ ನಾನು ಚುನಾವಣೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆ.

ಮೂರನೆಯದಾಗಿ, ಬಂಗಾಲದಲ್ಲಿಯ ಪರಿಶಿಷ್ಟ ಜಾತಿಗೆ ಕಾಂಗ್ರೆಸ್ಸಿನ ಟಿಕೆಟ್ ನೀಡಿದ್ದರೂ ಹಾಗೂ ಕಾಂಗ್ರೆಸ್ಸಿಗೇ ಮತದಾನ ಮಾಡಬೇಕೆಂಬ ಆದೇಶವಿದ್ದರೂ, ಪರಿಶಿಷ್ಟ ವರ್ಗದವರು ಅದನ್ನೂ ಉಲ್ಲಂಘಿಸಿ ನನಗೆ ಮತ ನೀಡಿದರು, ನನಗೆ ಬಂಗಾಲದಲ್ಲಿ ಅನುಯಾಯಿಗಳಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈ ಎಲ್ಲಾ ಕಾರಣಗಳಿಂದ ಸಂಪುಟ ನಿಯೋಗವು ಸಂಸತ್ತಿನ ಕಾಮನ್ಸ್ ಸಭೆಯಲ್ಲಿ ಹೇಳಿದ ತಮ್ಮ ಅಭಿಪ್ರಾಯವನ್ನು ಬದಲಿಸಿ ಪರಿಶಿಷ್ಟ ಮಹಾ ಮಂಡಳಕ್ಕೆ ಸೂಕ್ತವಾದ ಮನ್ನಣೆ ನೀಡಬೇಕು.

೪. ಅಲ್ಪಸಂಖ್ಯಾತ ಸಲಹಾ ಸಮಿತಿಯನ್ನು ಕುರಿತಂತೆ, ಬ್ರಿಟಿಷ್ ಸಂಪುಟವು ಪರಿಶಿಷ್ಟ ಜಾತಿಯನ್ನು ಪ್ರಮುಖ ಅಲ್ಪಸಂಖ್ಯಾತರೆಂದು, ಪರಿಗಣಿಸುವ ಭರವಸೆಯು ತುಂಬಾ ಸಂತಸದ ವಿಷಯವಾಗಿದೆ. ಆದರೆ ಸಂಪುಟ ಸಮಿತಿಯು ಈ ಅಭಿಪ್ರಾಯವನ್ನು ಬಹಿರಂಗವಾಗಿ ಘೋಷಿಸದೇ ಹೋದರೆ, ಈ ಅಭಿಪ್ರಾಯ ಪರಿಶಿಷ್ಟ ಜಾತಿಯವರಿಗೆ ಯಾವ ಸಹಾಯಕ್ಕೂ ಬಾರದೆಂದೇ ನನ್ನ ಅನಿಸಿಕೆಯಾಗಿದೆ. ಈ ಒಂದು ವಿಷಯವನ್ನು ನಾನು ಏಕೆ ಹೇಳುತ್ತಿರುವೆ ಎಂದರೆ, ವೈಸ್‌ರಾಯ್‌ರೊಡನೆ ಸಂಧಾನದ ಮಾತುಕತೆ ಮುರಿದುಬಿದ್ದಾಗ ಕಾಂಗ್ರೆಸ್ಸಿನ ಪರವಾಗಿ, ಶ್ರೀ ಮೌಲಾನ ಅಬ್ದುಲ್ ಕಲಂ ಆಜಾದರು ಬರೆದಿರುವ ಪತ್ರದಲ್ಲಿ ಬಹಿರಂಗವಾಗಿ ಅವರು ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತರಲ್ಲವೆಂದೇ ಸಾರಿದ್ದಾರೆ. ಈ ಒಂದು ಅಭಿಪ್ರಾಯ ಪರಿಶಿಷ್ಟ ಜನಾಂಗದಲ್ಲಿ ಭಯವನ್ನುಂಟುಮಾಡಿದೆ. ಏಕೆಂದರೆ ಅಲ್ಪಸಂಖ್ಯಾತ ಸಲಹಾ ಸಮಿತಿಯು ಕಾಂಗ್ರೆಸ್ಸಿನ ಅಧಿಕ ಬೆಂಬಲಿಗರಿಂದಲೇ ತುಂಬಿದೆ. ಈ ಒಂದು ಅಭಿಪ್ರಾಯವನ್ನು ಬ್ರಿಟಿಷ್ ಸಂಪುಟವು ಸಮಯ ಮೀರುವ ಮುಂಚೆಯೇ ತಿದ್ದದೇ ಹೋದರೆ ಪರಿಶಿಷ್ಟ ಜಾತಿಯವರ ಪರಿಸ್ಥಿತಿಯನ್ನು ಸಮಿತಿಯು ಪರಿಶೀಲಿಸದೇ ಹೋಗಲೂಬಹುದು. ಇಂದಿನ ಪರಿಸ್ಥಿತಿಯಲ್ಲಿ ಶ್ರೀ ಗಾಂಧೀಯವರು ಪರಿಶಿಷ್ಟ ಜಾತಿಯವರ ಬಗೆಗೆ ತಾವು ಹೇಳಿದ ಹೇಳಿಕೆಗಳೇ ನಿಜ ಎಂಬ ಮನೋಭಾವನೆ ಹೊಂದಿದ್ದಾರೆ. ಈ ಒಂದು ಭಯ ನಮ್ಮನ್ನು ಸದಾ ಕಾಡುತ್ತಲೇ ಇದೆ.

೫. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯವರು ಪ್ರಮುಖ ಅಲ್ಪಸಂಖ್ಯಾತರು ಎಂದು ಪರಿಗಣಿಸಬೇಕೆಂದು ಆಗ್ರಹಿಸುತ್ತೇನೆ. ಇಲ್ಲದೇ ಹೋದಲ್ಲಿ ಮುಂದೆ ಅನಾಹುತವಾಗಬಲ್ಲದು ಎಂದೂ ತಿಳಿಸಬಯಸುವೆ.

೬. ಮಧ್ಯಕಾಲೀನ ಸರಕಾರದಲ್ಲಿ ಪರಿಶಿಷ್ಟ ಜಾತಿಯವರಿಗೆ, ಎರಡು ಸ್ಥಾನಗಳನ್ನು ದೊರಕಿಸಿಕೊಡುವಲ್ಲಿ ತಾವು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಕ್ಕೆ ನನಗೆ ತುಂಬಾ ದುಃಖವಾಗಿದೆ. ಈ ತಮ್ಮ ನಿರಾಕರಣೆ ನ್ಯಾಯಸಮ್ಮತವಾಗಿಲ್ಲ. ೧೯೪೫ರ ಸಿಮ್ಲಾ ಸಮ್ಮೇಳನದ ಹೇಳಿಕೆಯ ಪರಿಶಿಷ್ಟ ಜಾತಿಯವರಿಗಿಂತ ಕಡಿಮೆ ಸಂಖ್ಯೆಯಲ್ಲಿರುವ ಸಿಖ್ ಹಾಗೂ ಇತರ ಅಲ್ಪಸಂಖ್ಯಾತ ಜನಾಂಗಗಳಿಗೆ ನೀಡಿರುವ ಅವಕಾಶಗಳ ಮುಂದೆ ನಾನು ಕೇಳುತ್ತಿರುವುದು ಅನ್ಯಾಯವೇನೂ ಅಲ್ಲವೆಂದೇ ನನ್ನ ಅಭಿಪ್ರಾಯ.

ಗೌರವ ವಂದನೆಗಳು.

ತಮ್ಮ ನಂಬಿಕೆಯ

ಬಿ.ಆರ್. ಅಂಬೇಡ್ಕರ್

## ೨೪

## ಲಾರ್ಡ್ ಪೆಥಿಕ್ ಲಾರೆನ್ಸ್ – ಶ್ರೀ ಆಟ್ಲೆ ಅವರಿಗೆ*

ಎಲ್/ಪಿ ಮತ್ತು ಜೆ/೧೦/೫೦ ॥ ೩೮–೪೦

ರಾಜ್ಯ ಕಾರ್ಯದರ್ಶಿ ಅವರ ನಡೆವಳಿಕೆ

ಕ್ರ. ಸಂ. ೪೮/೪೬

ಪ್ರಧಾನಿಗಳೇ

ತಮಗೆ ಅಂಬೇಡ್ಕರರು ದಿನಾಂಕ ೧೨ ಆಗಸ್ಟ್‌ರಂದು ಬರೆದ ಪತ್ರದ ಬಗೆಗೆ ನನ್ನ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿದ್ದೀರಿ.**

೨. ಅವರ ಎರಡನೆಯ ಪ್ಯಾರಾಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯ ಚುನಾವಣೆ ವಿಶ್ಲೇಷಣೆಯ ವಿವರಗಳನ್ನು ನನ್ನ ಆಪ್ತ ಕಾರ್ಯದರ್ಶಿಯವರು ತಮ್ಮ ಜುಲೈ ೨೬ರ*** ಪತ್ರಕ್ಕೆ ಉತ್ತರ ನೀಡಿದಾಗ ಅಂಬೇಡ್ಕರರ ಹಿಂದಿನ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದಾರೆ. ಸಂಕ್ಷಿಪ್ತವಾಗಿ ಹೇಳಬಹುದಾದರೆ, ಸತ್ಯ ಸಂಗತಿ ಎಂದರೆ, ಕಾಂಗ್ರೆಸ್ ಪಕ್ಷವು ಅಂಬೇಡ್ಕರರ ಸಂಸ್ಥೆಗಳಿಗಿಂತ ಹೆಚ್ಚು ಮತಗಳನ್ನು ಸಂಪಾದಿಸಿದೆ. ಮುಂದುವರಿದು ಪಕ್ಷೇತರರು ಅಂದರೆ ಸ್ವತಂತ್ರ ಉಮೇದುವಾರರು  ಅಧಿಕಮತಗಳನ್ನು ಪಡೆದಿದ್ದು, ಅವರು ಅಂಬೇಡ್ಕರರಿಗೆ ಬೆಂಬಲ ನೀಡುತ್ತಾರೆಯೋ ಇಲ್ಲವೋ ತಿಳಿಯದು. ಈ ಎಲ್ಲಾ ಅಂಶಗಳಲ್ಲದೆ, ೧/೩ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿದೆ, ಅದೂ ಅವಿರೋಧವಾಗಿ. ಅಂಕಿ ಸಂಖ್ಯೆಗಳು ಅಂತಿಮವಾಗಿಲ್ಲ. ಆದುದರಿಂದ ಮೊದಲನೆಯ ಲಾರ್ಡ್ ಅವರು ಸಂಸತ್ತಿನ ಸಾಮಾನ್ಯ ಸಭೆಯಲ್ಲಿ ನೀಡಿದ ಹೇಳಿಕೆಯನ್ನು "ಸತ್ಯಕ್ಕೆ ದೂರವಾದುದು" ಎಂದು ಹೇಳುವುದು ಅತಿರೇಕವಾದದ್ದು ಎಂದೇ ನನ್ನ ಅಭಿಪ್ರಾಯ.

೩. ಅಂಬೇಡ್ಕರರ ಪತ್ರದ ಮೂರನೇ ಪ್ಯಾರಾದಲ್ಲಿ ಹೇಳಿದಂತೆ ಸಂಸತ್ತಿನ ಕಾಮನ್ಸ್ ಸಭೆಯಲ್ಲಿ ಅಂಬೇಡ್ಕರರ ಪ್ರಭಾವ ಕೇವಲ ಬೊಂಬಾಯಿ ಹಾಗೂ ಮಧ್ಯಪ್ರಾಂತಕ್ಕೆ ಮಾತ್ರ ಸೀಮಿತವಾಗಿದೆ ಎಂದು

---

* ಟ್ರಾನ್ಸ್‌ಫರ್ ಆಫ್ ಪವರ್, ಸಂ. ೮, ನಂ. ೨೫೦, ಪು. ೪೧೧–೧೨.

** ಸಂಖ್ಯೆ–೧೪೨

*** ಎಲ್/ಪಿ.ಜೆ./೧೦/೫೦.೬೩–೯

ಹೇಳಲಾಗಿಲ್ಲ. ಅವರು ವಾಣಿಜ್ಯ ಸಂಸ್ಥೆಯ ಅಧ್ಯಕ್ಷರ ಭಾಷಣದ ಬಗೆಗೆ ಉದಾಹರಿಸಿದ್ದು ವಾಣಿಜ್ಯ ಬೋರ್ಡಿನ ಅಧ್ಯಕ್ಷರು ಡಾ॥ ಅಂಬೇಡ್ಕರರ ಸಂಸ್ಥೆಯ ಪ್ರಾಬಲ್ಯವು ಸ್ಥಳೀಯ ಸ್ವರೂಪದ್ದಾಗಿ (ಕಾಂಗ್ರೆಸ್ ಸಂಸ್ಥೆಯೊಡನೆ ಹೋಲಿಸಿ) ಪ್ರಮುಖವಾಗಿ ಬೊಂಬಾಯಿ ಮತ್ತು ಮಧ್ಯಪ್ರಾಂತಗಳಲ್ಲಿ ಕೇಂದ್ರೀಕೃತವಾಗಿದೆ ಎಂದಿದ್ದಾರೆ. ನಾನು, ಬಂಗಾಲದ ಅನುಪಾತ ಪದ್ಧತಿಯ ಚುನಾವಣೆಗಳ ಬಗೆಗೆ ವಿಚಾರಿಸಲಾಗಿ ಅಂಬೇಡ್ಕರರು ೫ ಪ್ರಥಮ ಆಯ್ಕೆ ಮತಗಳನ್ನು ಗಳಿಸಿದ್ದಾರೆ. ಅದರಂತೆಯೇ ಶರತ್‌ಚಂದ್ರ ಬೋಸ್‌ರು ೫ ಪ್ರಥಮ ಆಯ್ಕೆ ಮತಗಳನ್ನು ಗಳಿಸಿದ್ದಾರೆ. ಆದರೆ ಬಂಗಾಲದ ಚುನಾವಣೆಗೆ ಕೇವಲ ನಾಲ್ಕು(ಕೋಟಾ) ಮತಗಳನ್ನು ಕೋಟಾ ಎಂದು ನಿರ್ಣಯಿಸಲಾಗಿದೆ. ಆದುದರಿಂದ ಸಹಜವಾಗಿ ಕಾಂಗ್ರೆಸ್ ತನ್ನ ಪ್ರತಿಯೋರ್ವ ಉಮೇದುವಾರನೂ ೪ ಮತಗಳನ್ನು ಪಡೆಯುವಂತೆ ತನ್ನ ಕಾರ್ಯತಂತ್ರವನ್ನು ರಚಿಸಿಕೊಂಡಿದೆ. ಅಂಬೇಡ್ಕರರು ಉಪಯೋಗಿಸಿದ "ಚುನಾವಣೆ ಮೇಲ್ಮಟ್ಟ" "Top of the poll" ಎಂಬ ಪದಕ್ಕೆ ಅನುಪಾತ ಆಯ್ಕೆ ಚುನಾವಣೆಯಲ್ಲಿ ಯಾವ ಅರ್ಥವೂ ಇರದೇ ಅದು ಅರ್ಥಹೀನ ಪದವಾಗಿದೆ. ಆದರೆ ಬಂಗಾಲದ ಪರಿಶಿಷ್ಟ ಜಾತಿಯವರ ಮೇಲೆ ಅಂಬೇಡ್ಕರರು ಹೊಂದಿರುವ ಪ್ರಭಾವವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಬಂಗಾಲದ ಶಾಸನ ಸಭೆಯಲ್ಲಿ ೨೫ ಜನ ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿದ್ದಾರೆ. ಅದರಲ್ಲಿ ೪ ಸದಸ್ಯರು ಸ್ವತಂತ್ರರಾಗಿ ಚುನಾವಣೆ ಹೊಂದಿದ್ದಾರೆ. ಕೇವಲ ಒಬ್ಬ ಸದಸ್ಯನು ಅಂಬೇಡ್ಕರರ ಅಭ್ಯರ್ಥಿಯಾಗಿ ಚುನಾವಣೆ ಹೊಂದಿದ್ದಾನೆ. ಹೀಗಾಗಿ ಎಲ್ಲಾ ಸ್ವತಂತ್ರ ಸದಸ್ಯರು ಅಂಬೇಡ್ಕರರಿಗೆ ಬೆಂಬಲ ನೀಡಿರಲೂಬಹುದು ಹಾಗೂ ಕೆಲವು ಆಂಗ್ಲೋ ಇಂಡಿಯನ್ ಮತಗಳೂ ಅಂಬೇಡ್ಕರರಿಗೆ ದೊರೆತಿರಲೂಬಹುದು ಎಂದೇ ಹೇಳಬಹುದಾಗಿದೆ.

೪. ಅಂಬೇಡ್ಕರರ ಪತ್ರದ ೪ನೇ ಪ್ಯಾರಾದ ವಿಷಯದಲ್ಲಿ ಸದ್ಯ ನಾವು ಪರಿಶಿಷ್ಟ ಜಾತಿಯವರನ್ನು ಹಿಂದುಳಿದ ಅಲ್ಪಸಂಖ್ಯಾತ ವರ್ಗದವರೆಂದು ಘೋಷಿಸಲಾಗದು, ಅದರಂತೆಯೇ ಅಲ್ಪಸಂಖ್ಯಾತರ ಸಲಹಾ ಸಮಿತಿಯಲ್ಲಿ ಯಾರು ಇರಬೇಕೆಂಬುದನ್ನು ಈ ಪರಿಸ್ಥಿತಿಯಲ್ಲಿ ಹೇಳಲಾಗದು. ಆದುದರಿಂದ ಅವರ ಸಂಸ್ಥೆಗೆ ಸ್ಥಾನ ನೀಡುವ ಭರವಸೆ ನೀಡಲಾಗದು.

೫. ನನಗೆ ತಿಳಿದಂತೆ ತಾವು ಅಂಬೇಡ್ಕರರಿಗೆ ಉತ್ತರ ಕಳಿಸಬೇಕಾದ ಆವಶ್ಯಕತೆಯೇ ಇಲ್ಲ. ಆದರೆ ತಾವು ಸೌಜನ್ಯಕ್ಕೆ ಕಳಿಸಬೇಕೆಂದರೆ ಒಂದು ಚಿಕ್ಕ ಕರಡನ್ನು* ತಯಾರಿಸಿ ಕಳಿಸಿರುವೆ. ಅದರೊಂದಿಗೆ ತಮ್ಮ ಮಾಹಿತಿಗೆಂದು ಮೊದಲನೆಯ ಲಾರ್ಡ್ ಹಾಗೂ ವಾಣಿಜ್ಯ ಬೋರ್ಡಿನ ಅಧ್ಯಕ್ಷರ ಭಾಷಣಗಳ ಪ್ರತಿಯನ್ನೂ** ಲಗತ್ತಿಸಿರುವೆ. ನನ್ನ ಭಾಷಣದ ಒಂದು ಚಿಕ್ಕ ಪ್ಯಾರದಲ್ಲಿನ ಇದೇ ಅಭಿಪ್ರಾಯದ ಪ್ರತಿಯನ್ನೂ ಕಳಿಸಿರುವೆ.

ಪೆಥಿಕ್ ಲಾರೆನ್ಸ್

---

* ಶ್ರೀ ಆಟ್ಲೆಯವರು ಅಂಬೇಡ್ಕರರಿಗೆ ಉತ್ತರಕಳಿಸಿದಂತೆ ತೋರದು

** ಮುದ್ರಿಸಲಾಗಿಲ್ಲ.

# ೨೫
# ಲಾರ್ಡ್ ಫೆಥಿಕ್ ಲಾರೆನ್ಸ್ ಅವರು ಶ್ರೀ ಆಟ್ಲೆಯವರಿಗೆ*

ಎಲ್/ಪಿ ಮತ್ತು ಜೆ/೧೦/೫೦ ॥ ೨೮–೩೨
ಇಂಡಿಯಾ ಆಫೀಸ್, ೯ ಸೆಪ್ಟಂಬರ್

ಸೆಕ್ರಟರಿ ಆಫ್ ಸ್ಟೇಟ್‌ರವರ ನಡೆವಳಿಕೆಗಳು
ಕ್ರ.ಸಂ.೫೧/೪೬

ಪ್ರಧಾನಿಗಳೇ,

ತಮ್ಮ ಖಾಸಗೀ ಕಾರ್ಯಾಲಯದ ನಡೆವಳಿಕೆ ಸಂಖ್ಯೆ. ಎಂ. ೨೯೬/೪೬, ೪, ಸೆಪ್ಟೆಂಬರ್ ಪರಿಶಿಷ್ಟ ಜಾತಿ ಸಲಹಾ ಸಮಿತಿ ಸಂವಿಧಾನ ಸಭೆಯ ಪ್ರತಿನಿಧಿತ್ವ ಬಗೆಗೆ.

೨. ಸಲಹಾ ಸಮಿತಿಯಲ್ಲಿ ಖಚಿತವಾಗಿಯೂ ಪರಿಶಿಷ್ಟ ಜಾತಿಯವರ ಪ್ರಾತಿನಿಧ್ಯವು ಇರಲೇಬೇಕೆಂಬ ಅಭಿಪ್ರಾಯವು ಸಂಪುಟ ಸಮಿತಿಯ ನಿಲವಾಗಿದೆ. ಇದನ್ನೇ ನಾನು ಭಾರತದಲ್ಲಿ ಅಂಬೇಡ್ಕರರಿಗೆ ಪತ್ರದ ಮೂಲಕ ತಿಳಿಸಿರುವೆ.** ತಮ್ಮ ಆಗಸ್ಟ್ ದಿನಾಂಕ ೧ರ ಪತ್ರದ ಮೂರನೆ ಪ್ಯಾರಾದಲ್ಲಿ ತಾವೇ ಅಂಬೇಡ್ಕರರಿಗೆ, ಮಹಾಪ್ರಭುಗಳ ಘನ ಸರಕಾರವು ಪರಿಶಿಷ್ಟ ಜಾತಿಯು ಒಂದು ಪ್ರಮುಖ ಅಲ್ಪಸಂಖ್ಯಾತ ವರ್ಗವಾಗಿದೆ ಎಂದು ಭಾವಿಸಿದ್ದರೂ, ಈ ಪರಿಸ್ಥಿತಿಯಲ್ಲಿ ನಿಲವನ್ನು ಬಹಿರಂಗವಾಗಿ ಸಾರಲಾಗದು ಎಂದು ತಿಳಿಸಿದ್ದೀರಿ:

ಅ. ಮಹಾಪ್ರಭುಗಳ ಸರಕಾರವು ಖಚಿತವಾಗಿ ಬೇರೆ ಹಲವಾರು ಅಂಶಗಳನ್ನು ಗಮನಿಸಿ ಯಾರನ್ನು ಅಲ್ಪಸಂಖ್ಯಾತರ ಸಲಹಾ ಸಮಿತಿಯಲ್ಲಿ ಸೇರಿಸಬೇಕೆಂಬ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಆ. ಈ ಪರಿಸ್ಥಿತಿಯಲ್ಲಿ ಸರಕಾರದವರು ಏನೇ ಘೋಷಣೆ ಮಾಡಿದರೂ ಅದು ಸಂವಿಧಾನ ಸಭೆಯ ಕಾರ್ಯಕಲಾಪದಲ್ಲಿ ಹಸ್ತಕ್ಷೇಪ ಹಾಗೂ ಸಭೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡಿದಂತಾಗುತ್ತದೆ.

೩. ಇಂದಿನ ಪರಿಸ್ಥಿತಿ ಎಂದರೆ, ಸಲಹಾ ಸಮಿತಿಯ ರಚನೆಯ ಕಾರ್ಯವನ್ನು, ಸಂವಿಧಾನ ಸಭೆಗೇ ವಹಿಸಿರುವುದರಿಂದ ನಾವು ಏನೂ ಮಾಡುವಂತಿಲ್ಲ. ನಾವು ನಮ್ಮ ನಿಲವನ್ನು ವಾಣಿಜ್ಯ ಮಂಡಳಿಯ ಅಧ್ಯಕ್ಷರ ದಿನಾಂಕ ೧೮ ಜುಲೈ ಭಾಷಣದಲ್ಲಿ ವ್ಯಕ್ತಪಡಿಸಿರುವುದರಿಂದ, ಸಂಸತ್ತಿನ ಕಾಮನ್ಸ್ ಸಭೆಯನ್ನು ಅಡ್ಡದಾರಿಗೆ ಎಳೆಯುವ ಅಥವಾ ತಪ್ಪು ಮಾಹಿತಿ ನೀಡಿದ ಪ್ರಶ್ನೆಯೇ ಇಲ್ಲ. ಮುಂದುವರಿದು ತಮಗೆ ಕಳಿಸಲಾದ ೩ ಸೆಪ್ಟೆಂಬರ್ ದಿನಾಂಕದ ಪತ್ರದ ಪ್ರತಿಯೊಂದನ್ನು ನಾನು ತಮಗೆ ಕಳಿಸಿರುವೆ.

---

* ಟ್ರಾನ್ಸ್‌ಫರ್ ಆಫ್ ಪವರ್, ಸಂ. ೮, ಸಂಖ್ಯೆ. ೨೮೮, ಪು. ೪೬೬–೬೮.
** ನಂ. ೨೫೩ ರೆಫರ್ ಎಸ್. ನಂ. ಟ್ರಾನ್ಸ್‌ಫರ್ ಆಫ್ ಪವರ್, (ಸಂ)
*** ನಂ. ೩೯ ಸಂ. ೭, ಪು.೫೦೨(ಇಡಿ)

೪. ಪರಿಶಿಷ್ಟ ಜಾತಿಯವರನ್ನು ರಾಜಕೀಯ ಪ್ರತಿನಿಧಿತ್ವ ದೃಷ್ಟಿಯಿಂದ ಅಲ್ಪಸಂಖ್ಯಾತರೆಂದು ಪರಿಗಣಿಸಬಹುದೇ ಅಥವಾ ಅವರು ಹಿಂದೂ ಜನಾಂಗದ ಅಂಗವೇ ಎಂಬುದರ ಬಗೆಗೆ ಇತಿಹಾಸವೇ ಇದೆ. ಗಾಂಧಿಯವರು ತಮ್ಮ ಜೀವನದ ಬಹುಪಾಲನ್ನು ಎರಡನೆಯ ದೃಷ್ಟಿಕೋನದ ಅಭಿಪ್ರಾಯಕ್ಕೆಂದೇ ಸವೆಸಿದ್ದಾರೆ. ಆದರೆ ನಾನು ದಿನಾಂಕ ೩ ಸೆಪ್ಟೆಂಬರ್‌ನ ನನ್ನ ನಡೆವಳಿಯ ಪ್ಯಾರಾ ೪ರಲ್ಲಿ ಕಾಂಗ್ರೆಸ್ ಕೇವಲ ರಾಜಕೀಯ ಪ್ರತಿನಿಧಿತ್ವಕ್ಕಾಗಿ ಪರಿಶಿಷ್ಟ ಜಾತಿಯವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿಲ್ಲ. ಈ ವಿಷಯವನ್ನು ಹೇಳುವಾಗ ನನ್ನ ಮನಸ್ಸಿನಲ್ಲಿದ್ದ ಜೂನ್ ೨೫ರಂದು* ವೈಸ್‌ರಾಯ್‌ರಿಗೆ ಅಬ್ದುಲ್ ಕಲಂ ಆಜಾದ್ ಅವರ ಪತ್ರ (ಅಂದರೆ ನಮ್ಮ ಮೇ ೧೬ರ ಹೇಳಿಕೆ ನಂತರ)ವನ್ನೇ ಡಾ॥ ಅಂಬೇಡ್ಕರರು ತಮ್ಮ ಎರಡೂ ಪತ್ರಗಳಲ್ಲಿ ತಮಗೆ ಉಲ್ಲೇಖಿಸಿದ್ದಾರೆ. ಆಜಾದ್ ಅವರು ತಮ್ಮ ಪತ್ರದಲ್ಲಿ ಹೀಗೆ ಹೇಳಿದ್ದಾರೆ. "ಕಾಂಗ್ರೆಸ್ ಪರಿಶಿಷ್ಟ ಜಾತಿಯವರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸದೇ ಅವರು ಹಿಂದೂ ಸಮಾಜದ ಅವಿಭಾಜ್ಯ ಅಂಗವೆಂದೇ ಪರಿಗಣಿಸುತ್ತದೆ." (ಸಿ.ಎಮ್.ಡಿ.೬೮೬೧ ಪುಟ ೨೩, ೨ನೇ ಪ್ಯಾರಾ). ಈ ಹೇಳಿಕೆಯು ವೈಸ್‌ರಾಯ್ ಅವರು ಜಿನ್ನಾರಿಗೆ ನೀಡಿದ ಭರವಸೆಯ ಹಿನ್ನೆಲೆ ಹೊಂದಿದ್ದು ವೈಸ್‌ರಾಯ್ ಅವರು ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ಮಾತಾನಾಡಿ ಮಧ್ಯಕಾಲೀನ ಸರಕಾರದಲ್ಲಿ ಅಲ್ಪಸಂಖ್ಯಾತರ ಸ್ಥಾನಗಳನ್ನು ನಿರ್ಣಯಿಸುವುದಾಗಿ ಹೇಳಿದ್ದರು. ಹೀಗಾಗಿ ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಯವರ ಬಗೆಗೆ ತಾವೇ ಜವಾಬ್ದಾರಿ ವಹಿಸಿದ್ದು ಸೂಕ್ತ. ಏಕೆಂದರೆ ಮುಸ್ಲಿಮ್ ಲೀಗಿನ ಹಸ್ತಕ್ಷೇಪ ತಪ್ಪಿಸಲು ಈ ಕ್ರಮವೊಂದೇ ಸೂಕ್ತವಾದದ್ದು.

೫. ಪರಿಶಿಷ್ಟ ವರ್ಗದವರನ್ನು ಸಾಕಷ್ಟು ಸಂಖ್ಯೆಯಲ್ಲಿ, ಸಲಹಾ ಸಮಿತಿಯಲ್ಲಿ, ಕಾಂಗ್ರೆಸ್ ನೇಮಕ ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ; ಏಕೆಂದರೆ ಈ ವಿಷಯದಲ್ಲಿ ಭಾರತ ಹಾಗೂ ವಿದೇಶಗಳಿಂದ ಬರಬಹುದಾದ ಟೀಕೆಗಳ ಬಗೆಗೆ ಅವರಿಗೆ ಅರಿವಿದೆ. ಹೀಗಾಗಿ ಅವರು ಜಾಗರೂಕತೆಯಿಂದಲೇ, ಈ ಜನಾಂಗದ ಮನಸ್ಸನ್ನು ಗೆಲ್ಲಲು ಹಾಗೂ ಪರಿಶಿಷ್ಟ ಜಾತಿಯವರು, ಮುಸ್ಲಿಮ್ ಲೀಗಿನೊಂದಿಗೆ ಮೈತ್ರಿಕೂಟ ರಚಿಸಿಕೊಳ್ಳದಂತೆ ನೋಡಿಕೊಳ್ಳುತ್ತಾರೆ. ಮುಂದುವರಿದು ಈ ಸಮಿತಿಯು ನಾಗರಿಕ ಹಕ್ಕುಗಳ ಬಗೆಗೆ ವ್ಯವಹರಿಸಬೇಕಾದುದರಿಂದ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಬಗೆಗೂ ಸಂಬಂಧಿಸಿರುವುದರಿಂದ, ಪರಿಶಿಷ್ಟ ಜಾತಿಯವರು ಈ ಸ್ಥಿತಿಯಲ್ಲಿರುವ ದಿಶೆಯಲ್ಲಿ ಅವರು ಅಲ್ಪಸಂಖ್ಯಾತರೋ ಅಲ್ಲವೋ ಎಂಬ ಪ್ರಶ್ನೆಯೇ ತನ್ನ ಮಹತ್ವವನ್ನು ಕಳೆದುಕೊಂಡಿದೆ, ಆದರೆ ಅಂಬೇಡ್ಕರರೇ ಆಗಲೀ ಅಥವಾ ಬೇರೆ ಯಾರೇ ಆಗಲೀ ಕಾಂಗ್ರೆಸ್ಸನ್ನು ವಿರೋಧಿಸುವುದರಿಂದ ಈ ಸಮಿತಿಯಲ್ಲಿ ಸದಸ್ಯತ್ವವನ್ನು ಪಡೆಯದೇ ಹೋಗಲೂಬಹುದು.

೬. ಈ ದಿಶೆಯಲ್ಲಿ ನನ್ನ ಅಭಿಪ್ರಾಯದಂತೆ ನಾವು ಡಾ॥ ಅಂಬೇಡ್ಕರರು ಸಂಪುಟ ಸಮಿತಿಗೆ ೧೬ ಮೇ ಬರೆದ ಪತ್ರದ ೨೦ನೇ ಪ್ಯಾರಾದಲ್ಲಿ ಕೋರಿದಂತೆ ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತರೆಂಬುದರ ಬಗೆಗೆ ಬಹಿರಂಗ ಘೋಷಣೆ ಮಾಡದೇ ಇರುವುದೇ ಸೂಕ್ತ. ಒಂದು ವೇಳೆ ಹಾಗೇನಾದರೂ ಮಾಡಿದಲ್ಲಿ, ಗಾಂಧಿಯವರ ವಿರೋಧ ಕಟ್ಟಿಕೊಂಡು ಕಾಂಗ್ರೆಸ್ಸನ್ನು ಎದುರು ಹಾಕಿಕೊಂಡು ಪ್ರತಿಭಟನೆಗೆ ಅವಕಾಶ ನೀಡಿದಂತಾಗುತ್ತದೆ. ಒಂದು ವೇಳೆ ಪರಿಶಿಷ್ಟ ಜಾತಿಯವರನ್ನು ಅಲ್ಪಸಂಖ್ಯಾತರೆಂದು ಹೇಳದೇ ಅವರನ್ನು ಸಲಹಾ ಸಮಿತಿಯಲ್ಲಿ ಸೇರಿಸಿಕೊಳ್ಳುವುದೆಂದೇ ಹೇಳಿದರೆ, ಬೇರೆ ವರ್ಗಗಳಾದ ಆಂಗ್ಲೋ–ಇಂಡಿಯನ್ ಮುಂತಾದವರಿಂದ ತಮ್ಮನ್ನು ಸೇರ್ಪಡಿಸಿಕೊಳ್ಳಬೇಕೆಂಬ ಬೇಡಿಕೆಗೆ ಅವಕಾಶ ನೀಡಿದಂತಾಗುತ್ತದೆ. ಈ

---

* ನಂ. ೩೯, ಸಂ. ೮, ನೋ. ಪು.೫೨೯(ಇಡಿ)

ಒಂದು ಕಾರ್ಯದಿಂದ ಸಂವಿಧಾನ ಸಭೆಯ ಸ್ವತಂತ್ರ ಕಾರ್ಯಕ್ಷೇತ್ರದಲ್ಲಿ ಕೈಹಾಕಿದ ಅಪಾಯಕ್ಕೆ ನಾವು ಗುರಿಯಾಗುತ್ತೇವೆ. ಆದಷ್ಟು ಅದನ್ನು ಮಾಡಬಾರದೆಂಬುದೇ ನಮ್ಮ ಉದ್ದೇಶ. ನಾವು ಪರಿಶಿಷ್ಟ ಜಾತಿಯವರನ್ನು ಅಲ್ಪಸಂಖ್ಯಾತರೆಂದು ಸಾರಿದರೂ ಅದು ಕಾಂಗ್ರೆಸ್ ಪಕ್ಷದ ಮೇಲೆ ಯಾವ ವಿಧವಾದ ಗಂಭೀರ ಪರಿಣಾಮವನ್ನೂ ಉಂಟುಮಾಡುವುದಿಲ್ಲ ಹಾಗೂ ಅವರ ಧೋರಣೆಯಲ್ಲಿ ಯಾವ ವ್ಯತ್ಯಾಸವೂ ಆಗಲಾರದು. ಅದು ಡಾ॥ ಅಂಬೇಡ್ಕರರಿಗೂ ಹೆಚ್ಚು ಸಹಕಾರಿಯಾಗಲಾರದು.*

**ಪೆಥಿಕ್ ಲಾರೆನ್ಸ್**

◆

---

* ಆಟ್ಲೆಯವರು ಈ ನಡೆವಳಿಯ ಮೇಲೆ 'ಇನ್ನಾವುದೇ ಕ್ರಮಬೇಡ' ಎಂದು ನಮೂದಿಸಿದ್ದಾರೆ – ಆಟ್ಲೆ ಕಾಗದ ಪತ್ರಗಳು, ವಿಶ್ವವಿದ್ಯಾಲಯ ಕಾಲೇಜು, ಆಕ್ಸ್‌ಫರ್ಡ್.

ವಿಭಾಗ – ೩
ಹೇಳಿಕೆಗಳು

# ೧

# ಪರಿಶಿಷ್ಟ ಜಾತಿಗೆ (ಅಸ್ಪೃಶ್ಯರಿಗೆ) ಸಂಬಂಧಿಸಿದಂತೆ ಸಂಪುಟ ನಿಯೋಗವು ಸೂಚಿಸಿದ ಭಾರತ ಸಂವಿಧಾನದಲ್ಲಿನ ಶಿಫಾರಸುಗಳ ಬಗೆಗೆ ಟೀಕೆಗಳು

ಡಾ॥ ಅಂಬೇಡ್ಕರ್

# ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾರತದ ಪರಿಶಿಷ್ಟ ಜಾತಿಯವರನ್ನು (ಅಸ್ಪೃಶ್ಯರನ್ನು) ಪ್ರತಿನಿಧಿಸುತ್ತಿದೆಯೇ?*

೧. ಈ ವರ್ಷದ ಆರಂಭದಲ್ಲಿ ಲೇಬರ್ ಸರ್ಕಾರವು ಭಾರತದಲ್ಲಿ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲೆಂದೇ, ಸಂಪುಟ ನಿಯೋಗವನ್ನು ಸಂವಿಧಾನ ಸಭೆ ರಚಿಸುವ ಒಂದು ಯೋಜನೆಯನ್ನು ಸಿದ್ಧಪಡಿಸಲೆಂದೇ, ಕಳಿಸಿಕೊಟ್ಟಿತು. ಈ ಸಂವಿಧಾನ ಸಭೆಯ ಸದಸ್ಯರನ್ನು ಪ್ರಾಂತೀಯ ಶಾಸನ ಸಭೆಗಳು, ವರ್ಗಾಯಿಸಬಲ್ಲ ಏಕ ಮತದಾನ ಪದ್ಧತಿಯಿಂದ ಚುನಾಯಿಸುತ್ತವೆ. ಸಂವಿಧಾನ ಸಭೆಯ ರಚನೆಗೆ ಸಂಬಂಧಿಸಿದ ಯೋಜನೆಯನ್ನು ಸಂಪುಟ ಸಮಿತಿಯು ಮೂರು ವಿಧವಾಗಿ ವಿಂಗಡಿಸಿದೆ. ೧. ಮುಸಲ್ಮಾನರು, ೨. ಸಿಖ್ಖರು, ಮತ್ತು ೩. ಸಾಮಾನ್ಯ. ಪ್ರತಿವರ್ಗಕ್ಕೂ (ನಿಗದಿತ) ಸ್ಥಾನಗಳನ್ನು ನಿರ್ಧರಿಸಲಾಗುವುದು. ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಮತದಾರರ ಕ್ಷೇತ್ರವಿದ್ದು ಮುಸ್ಲಿಮ್ ಪ್ರತಿನಿಧಿಗಳನ್ನು, ಪ್ರಾಂತೀಯ ಮುಸ್ಲಿಮ್ ಪ್ರತಿನಿಧಿಗಳೇ ಚುನಾಯಿಸುತ್ತಾರೆ. ಅದರಂತೆಯೆ ಸಿಖ್ಖರನ್ನು ಸಿಖ್ ಪ್ರತಿನಿಧಿಗಳೇ ಚುನಾಯಿಸುತ್ತಾರೆ. ಸಾಮಾನ್ಯ ಸದಸ್ಯರನ್ನು ಮಿಕ್ಕವರು ಚುನಾಯಿಸುತ್ತಾರೆ. ಸಾಮಾನ್ಯ ಸದಸ್ಯರು ೧. ಹಿಂದೂಗಳು, ೨. ಪರಿಶಿಷ್ಟ ಜಾತಿಯವರು ೩. ಭಾರತೀಯ ಕ್ರಿಶ್ಚಿಯನ್ನರು ೪. ಆಂಗ್ಲೋ–ಇಂಡಿಯನ್ನರನ್ನು ಒಳಗೊಳ್ಳುತ್ತಾರೆ.

೨. ಪರಿಶಿಷ್ಟ ಜಾತಿಯವರನ್ನು ಹಿಂದೂಗಳೊಂದಿಗೆ ಒಗ್ಗೂಡಿಸಿರುವ ಕ್ರಮ, ಪರಿಶಿಷ್ಟ ಜಾತಿಯವರಿಗೆ ದಿಗ್ಭ್ರಮೆ ಉಂಟುಮಾಡಿದೆ. ಕಾಲಕಾಲಕ್ಕೆ ಮಹಾಪ್ರಭುಗಳ ಸರ್ಕಾರವು ಪರಿಶಿಷ್ಟ ಜಾತಿಯ ಜನಾಂಗವನ್ನು ಭಾರತೀಯ ರಾಷ್ಟ್ರೀಯ ಜೀವನದ ಪ್ರತ್ಯೇಕ ಅಂಶವೆಂದೇ ಹೇಳುತ್ತಾ ಬಂದಿದೆ. ಅಲ್ಲದೆ ಮಹಾಪ್ರಭುಗಳ ಘನ ಸರ್ಕಾರವು ಯಾವುದೇ ವಿಧವಾದ ಸಂವಿಧಾನವನ್ನು ಪರಿಶಿಷ್ಟ ವರ್ಗದ ಸಮ್ಮತಿ ಇಲ್ಲದೇ ಅವರ ಮೇಲೆ ಹೇರುವುದಿಲ್ಲವೆಂದೂ ಹೇಳಿದೆ. ಆದರೆ ಈ ಸಂಪುಟ ನಿಯೋಗವು ಮುಸ್ಲಿಮ್ ಹಾಗೂ ಸಿಖ್ ಜನಾಂಗವನ್ನು ಬೇರೆ ಅಂಶವೆಂದು ಪರಿಗಣಿಸಿ, ಪರಿಶಿಷ್ಟ ಜಾತಿಯವರಿಗೆ ಆ ಸ್ಥಾನಮಾನವನ್ನು ನಿರಾಕರಿಸಿರುವುದೇಕೆ?

ದಿನಾಂಕ ೧೮ ಜುಲೈರಂದು ನಡೆದ ಪಾರ್ಲಿಮೆಂಟಿನ ಸಭೆಯಲ್ಲಿ ಸಂಪುಟ ನಿಯೋಗದ ಸಲಹೆಗಳನ್ನು ಸರ್ ಸ್ಟಾಫರ್ಡ್ ಕ್ರಿಪ್ಸ್, ಶ್ರೀ ಅಲೆಕ್ಸಾಂಡರ್ ಹಾಗೂ ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಸಮರ್ಥಿಸಿಕೊಂಡರು; ಅವರ ಈ ವಾದವು ಎರಡು ಹಂತಗಳಿಂದ ಕೂಡಿದೆ.

(೧) ಕಳೆದ ಫೆಬ್ರವರಿಯಲ್ಲಿ ನಡೆದ ಪ್ರಾಂತೀಯ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆಂದೇ ಮೀಸಲಾಗಿಟ್ಟ ಸ್ಥಾನಗಳನ್ನು ಕಾಂಗ್ರೆಸ್ ಜಯಿಸಿರುವುದರಿಂದ, ಪರಿಶಿಷ್ಟ ಜಾತಿಯವರು ಕಾಂಗ್ರೆಸ್ಸಿನೊಂದಿಗೆ ತಮ್ಮ ಭವಿಷ್ಯವನ್ನು ಸೇರಿಸಿಕೊಂಡಿರುವುದರಿಂದ ಅವರನ್ನು ಹಿಂದೂಗಳಿಂದ ಬೇರ್ಪಡಿಸಲಾಗದು.

(೨) ಸಲಹಾ ಸಮಿತಿಯೊಂದನ್ನು ರಚಿಸಲಿದ್ದು ಅದು ಅಲ್ಪಸಂಖ್ಯಾತರ ಹಿತಾಸಕ್ತಿ ಹಾಗೂ ಅವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವಲ್ಲಿ ಸಾಕಷ್ಟು ಅವಕಾಶವನ್ನು ಹೊಂದಿರಲೇಬೇಕು.

ಅವರು ಸಮರ್ಥಿಸಿಕೊಂಡ ಎರಡನೆಯ ಹಂತವು ಕೆಲಸಕ್ಕೆ ಬಾರದ ವಿಷಯವೆಂದೇ ಹೇಳಬಹುದಾಗಿದೆ. ಅದರ ಕಾರಣಗಳು ಎಲ್ಲರಿಗೂ ತಿಳಿಯುವಂತೆ ಇವೆ. ಏಕೆಂದರೆ ಸಲಹಾ ಸಮಿತಿಯ ಸ್ಥಾನಮಾನಗಳೇನು

---

* ಮುದ್ರಿತ ಕಿರು ಹೊತ್ತಿಗೆ (ಸಂ.)

ಎಂದು ಎಲ್ಲಿಯೂ ಹೇಳಲಾಗಿಲ್ಲ. ಮುಂದುವರಿದು ಪರಿಶಿಷ್ಟ ಜಾತಿಯವರಿಗೆ ಎಷ್ಟು ಸ್ಥಾನಗಳನ್ನು ನೀಡಲಾಗುವುದು ಎಂಬುದನ್ನು ಎಲ್ಲಿಯೂ ಹೇಳಿಲ್ಲ. ಅಲ್ಲದೆ ಸಲಹಾ ಸಮಿತಿಯ ನಿರ್ಣಯಗಳನ್ನು ಸಾಮಾನ್ಯ ಬಹುಮತದಿಂದಲೇ ನಿರ್ಧರಿಸಲಾಗುವುದು. ಕೊನೆಯದಾಗಿ, ಸಲಹಾ ಸಮಿತಿಯು ಸಂವಿಧಾನ ಸಮಿತಿಯ ಪ್ರತಿರೂಪವಾಗಿದೆ. ಏಕೆಂದರೆ ಸಂವಿಧಾನ ಸಭೆಯಲ್ಲಿಯ ಪರಿಶಿಷ್ಟ ಜಾತಿಯ ಪ್ರತಿನಿಧಿಗಳು ಕಾಂಗ್ರೆಸ್ ಬೆಂಬಲದಿಂದ ಚುನಾಯಿತಗೊಂಡಿದ್ದು ಅವರು ಪರಿಶಿಷ್ಟ ಜಾತಿಯವರನ್ನು ಬೆಂಬಲಿಸಲಾರರು. ಹೀಗಾಗಿ ಅವರು ಕಾಂಗ್ರೆಸ್ಸಿನ ಘೋಷಣಾ ಪತ್ರದಂತೆ ನಡೆದುಕೊಳ್ಳುತ್ತಾರೆ. ಆದುದರಿಂದ ಸಲಹಾ ಸಮಿತಿಗೆ ಸದಸ್ಯರಾಗಿರುವವರೂ ಅದೇ ಘೋಷಣಾ ಪತ್ರವನ್ನೇ ಅನುಸರಿಸುವುದರಲ್ಲಿ ಸಂದೇಹವೇ ಇರಲಾರದು. ಹೀಗಾಗಿಯೇ ಅವರು ಪರಿಶಿಷ್ಟ ಜಾತಿಯವರ ಹಿತಾಸಕ್ತಿಗಳನ್ನು ಸಂವಿಧಾನ ಸಭೆಯಲ್ಲಾಗಲೀ ಅಥವಾ ಸಲಹಾ ಸಮಿತಿಯಲ್ಲಿ ಆಗಲೀ ರಕ್ಷಿಸಲಾರರು.

ಪರಿಶಿಷ್ಟ ಜಾತಿಯವರಿಗೆ ಸ್ವತಂತ್ರ ಹಾಗೂ ಪ್ರತ್ಯೇಕ ಸ್ಥಾನವನ್ನು ನೀಡದೇ ಹೋದುದಕ್ಕೆ ಸಂಪುಟ ಸಮಿತಿಯ ಸಮರ್ಥನೀಯವಾದ ಹೇಳಿಕೆ ಎಂದರೆ, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಯ ಸ್ಥಾನಗಳನ್ನೆಲ್ಲಾ ಕಳೆದ ಪ್ರಾಥಮಿಕ ಚುನಾವಣೆಯಲ್ಲಿ ಗಳಿಸಿದೆ. ಹೀಗಾಗಿ ಅವರು ಬೇರೆ ಅಲ್ಲ. ಈ ಒಂದು ನಿಲವು ಸಮರ್ಥನೀಯವಾದುದಲ್ಲ. ಚುನಾವಣೆಗಳಲ್ಲಿ ಕಾಂಗ್ರೆಸ್ ಪರಿಶಿಷ್ಟ ಜಾತಿಯವರ ಸ್ಥಾನಗಳನ್ನು ಜಯಿಸಿಕೊಂಡಿರುವುದು ನಿಜ. ಆದರೆ ಚುನಾವಣೆಯ ಪರಿಣಾಮವನ್ನೇ ಮಾನದಂಡವಾಗಿ ಪರಿಗಣಿಸುವುದು ಅನೇಕ ದೃಷ್ಟಿಯಿಂದ ಸಮಂಜಸವಲ್ಲ.

ಮೊದಲನೆಯದಾಗಿ, ಪರಿಶಿಷ್ಟ ಜಾತಿಯ ಪಕ್ಷಗಳು ಆಳರಸರಾದ ಬ್ರಿಟಿಷರನ್ನು ಬೆಂಬಲಿಸಿದ ಕಾರಣಕ್ಕೆ ಜನ ಅವರೊಡನೆ ಸಹಕರಿಸಲಿಲ್ಲ. ಎರಡನೆಯದಾಗಿ, ಭಾರತದ ರಾಷ್ಟ್ರೀಯ ಸೇನಾ ಸದಸ್ಯರನ್ನು ಈ ಚುನಾವಣೆಯ ಸಮಯದಲ್ಲಿಯೇ ವಿಚಾರಣೆಗೆ ಗುರಿಮಾಡಿದ್ದರ ಲಾಭ ಕಾಂಗ್ರೆಸ್ ಪಕ್ಷಕ್ಕೆ ದೊರೆಯಿತು. ಹೀಗಾಗಿ ಬೇರೆ ರಾಜಕೀಯ ಪಕ್ಷಗಳ ಪ್ರಭಾವ ಫಲಿಸದೇ ಹೋಯಿತು. ಒಂದು ವೇಳೆ ಭಾರತ ರಾಷ್ಟ್ರೀಯ ಸೈನ್ಯ(ಅಜಾದ್ ಹಿಂದ್ ಸೇನಾ)ದ ವಿಚಾರಣೆಯು ನಡೆಯದೇ ಇದ್ದಲ್ಲಿ ಖಂಡಿತವಾಗಿ ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಪರಾಭವ ಹೊಂದುತ್ತಿತ್ತು. ಏಕೆಂದರೆ ಆಗ್ಗೆ ಕಾಂಗ್ರೆಸ್‌ನ ಪ್ರಭಾವವೇ ಕಳೆಗುಂದಿತ್ತು.

ಈ ಮೇಲೆ ಹೇಳಲಾದ ಎರಡು ಕಾರಣಗಳಲ್ಲದೆ ಬೇರೆ ಬಲವಾದ ಕಾರಣಗಳಿಂದಲೂ ಚುನಾವಣೆಯ ಪರಿಣಾಮಗಳನ್ನೇ ಮಾನದಂಡವಾಗಿ ತೆಗೆದುಕೊಳ್ಳಬಾರದು ಎಂಬುದನ್ನು ದೃಢಪಡಿಸುತ್ತವೆ. ಮುಂದುವರಿದು ಅಂತಿಮವಾಗಿ ಜಂಟಿ ಮತದಾರ ಕ್ಷೇತ್ರದ ವ್ಯವಸ್ಥೆಯಲ್ಲಿ ಹಿಂದೂಗಳೂ ಮತ ಚಲಾಯಿಸುವುದರಿಂದ ಹಾಗೂ ಅವರೇ ಅಧಿಕ ಸಂಖ್ಯೆಯಲ್ಲಿರುವುದರಿಂದ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿ ಕಾಂಗ್ರೆಸ್ ಪರವಾಗಿ ಸುಲಭವಾಗಿ ಜಯಗಳಿಸುತ್ತಾನೆ. ಹೀಗಾಗಿ ಪ್ರಾಂತೀಯ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಯವರು ಹಿಂದೂಗಳ ಬಹುಮತದಿಂದಲೇ ಚುನಾವಣೆ ಹೊಂದುವಂತಾಯಿತೇ ಹೊರತು ಪರಿಶಿಷ್ಟ ಜಾತಿಯವರ ಮತಗಳಿಂದಲ್ಲ. ಈ ಒಂದು ಸತ್ಯ ಸಂಗತಿಯನ್ನು ಸಂಪುಟ ನಿಯೋಗ ಅಲ್ಲಗಳೆಯುವಂತಿಲ್ಲ.

ನಿಜವಾಗಿ ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸಿದೆಯೇ ಎಂಬುದನ್ನು ಅರಿಯಬೇಕಾದಲ್ಲಿ ಅಂತಿಮ ಚುನಾವಣೆಗಳ ಮುನ್ನ ನಡೆದಿದ್ದ ಪ್ರಥಮ ಚುನಾವಣೆಗಳ ಫಲಿತಾಂಶಗಳನ್ನು ಪರಿಶೀಲಿಸಬೇಕು. ಏಕೆಂದರೆ ಪ್ರಥಮ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆಂದು ಬೇರೆ ಮತಕ್ಷೇತ್ರಗಳೇ ಇದ್ದವು. ಈ ವ್ಯವಸ್ಥೆಯಲ್ಲಿ ಹಿಂದೂಗಳಿಗೆ ಮತ ಚಲಾಯಿಸುವ ಅಧಿಕಾರವಿರಲಿಲ್ಲ. ಹೀಗಾಗಿ ಪ್ರಾಥಮಿಕ ಚುನಾವಣೆಗಳು ಪರಿಶಿಷ್ಟ ಜಾತಿಯವರ ಅನಿಸಿಕೆಗಳನ್ನು ನಿಜವಾಗಿ ಪ್ರತಿಬಿಂಬಿಸುತ್ತವೆ. ಈ ಚುನಾವಣೆಯ

ಫಲಿತಾಂಶಗಳು ಪರಿಶಿಷ್ಟ ಜಾತಿಯವರು ಕಾಂಗ್ರೆಸ್ಸಿನೊಂದಿಗೆ ಇದ್ದಾರೆಯೇ ಹೇಗೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆಯೇ?

ಪ್ರಾಂತೀಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಯವರಿಗೆಂದೇ ೧೫೧ ಸ್ಥಾನಗಳನ್ನು ನೀಡಲಾಗಿತ್ತು. ಆದರೆ ಅವು ವಿವಿಧ ಪ್ರಾಂತಗಳಲ್ಲಿ ಹಂಚಿಹೋಗಿದ್ದವು (ಸಿಂಧ್ ಹಾಗೂ ವಾಯುವ್ಯ ಸರಹದ್ದಿನ ಪ್ರಾಂತಗಳನ್ನು ಹೊರತುಪಡಿಸಿ). ಪ್ರಾಥಮಿಕ ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ ೪ ಅಭ್ಯರ್ಥಿಗಳಿಗಿಂತ ಹೆಚ್ಚಿನ ಉಮೇದುವಾರರಿದ್ದಾಗ ಮಾತ್ರ ಚುನಾವಣೆಯನ್ನು ನಡೆಸಬಹುದಾಗಿತ್ತು. ಇಲ್ಲದೇ ಹೋದಲ್ಲಿ ಅದು ಅನಾವಶ್ಯಕವಾಗಿತ್ತು.

ಕಳೆದ ಪ್ರಾಥಮಿಕ ಚುನಾವಣೆಗಳು, ಅಂತಿಮ ಚುನಾವಣೆಗಳಿಗಿಂತ ಮುಂಚೆ ನಡೆದ ಸಮಯದಲ್ಲಿ ೧೫೧ ಒಟ್ಟು ಸ್ಥಾನಗಳಲ್ಲಿ ಕೇವಲ ೪೦ ಸ್ಥಾನಗಳಲ್ಲಿ ಮಾತ್ರ ಚುನಾವಣೆ ಅನಿವಾರ್ಯವಾಗಿದ್ದು ಅವು ವಿವಿಧ ಪ್ರಾಂತಗಳಲ್ಲಿ ಈ ವಿಧವಾಗಿ ಹಂಚಿಹೋಗಿದ್ದವು. ಮದ್ರಾಸ್ ೧೦, ಬೊಂಬಾಯಿ ೩, ಬಂಗಾಳ ೧೨, ಒಕ್ಕೂಟ ಪ್ರಾಂತಗಳು ೩, ಮಧ್ಯಪ್ರಾಂತಗಳು ೫, ಪಂಜಾಬ್ ೭, ಬಿಹಾರ ಮತ್ತು ಒರಿಸ್ಸಾ ಪ್ರಾಂತಗಳಲ್ಲಿ ಪ್ರಾಥಮಿಕ ಚುನಾವಣೆಗಳೇ ಜರುಗಲಿಲ್ಲ.

೪೦ ಸ್ಥಾನಗಳಿಗೆ ನಡೆದ ಪ್ರಾಥಮಿಕ ಚುನಾವಣೆಗಳ ವಿಶ್ಲೇಷಣೆಯನ್ನು ಈ ಕರಡಿನೊಂದಿಗೆ ಲಗತ್ತಿಸಲಾಗಿದೆ. ಪರಿಣಾಮಗಳು ಈ ಅಂಶಗಳನ್ನು ಸಾಬೀತುಪಡಿಸುತ್ತವೆ:

(i) ೧ನೆಯ ಪಟ್ಟಿಯಲ್ಲಿ ಹೇಳಿದಂತೆ ಒಟ್ಟು ೨೮೩ ಅಭ್ಯರ್ಥಿಗಳಲ್ಲಿ ಕಾಂಗ್ರೆಸ್ ಪಕ್ಷವು ೪೬ ಅಭ್ಯರ್ಥಿಗಳಿಗೆ ತನ್ನ ಟಿಕೆಟನ್ನು ನೀಡಿತ್ತು. ವಿಜಯ ಹೊಂದಿದ ೧೬೮ ಉಮೇದುವಾರರಲ್ಲಿ ಕೇವಲ ೩೮ ಸ್ಪರ್ಧಿಗಳು ಕಾಂಗ್ರೆಸಿಗೆ ಸೇರಿದವರಾಗಿದ್ದರು (ಪಟ್ಟಿ ೫ ನೋಡಿ)

(ii) ಪ್ರಥಮ ಚುನಾವಣೆಯಲ್ಲಿ ಪ್ರವೇಶಿಸುವ ಪ್ರತಿಯೊಂದು ರಾಜಕೀಯ ಪಕ್ಷದ ಮೂಲ ಉದ್ದೇಶವೆಂದರೆ, ಕನಿಷ್ಠ ನಾಲ್ಕು ಉಮೇದುವಾರರನ್ನು ಸ್ಪರ್ಧಿಸುವಂತೆ ಮಾಡಿ, ಕೊನೆಯ ಹಂತದ ಚುನಾವಣೆಯಲ್ಲಿ ಯಾವ ವಿರೋಧ ಪಕ್ಷಗಳಿಗೂ ಅವಕಾಶ ನೀಡದೆ ಇರುವುದು. ಆದರೆ ಯಾವುದೇ ರಾಜಕೀಯ ಪಕ್ಷವು ನಾಲ್ಕು ಉಮೇದುವಾರರನ್ನು ಚುನಾವಣೆಗೆ ನಿಲ್ಲಿಸಲು, ಅದು ಸಾಕಷ್ಟು ಮತದಾರರ ಭರವಸೆಯನ್ನು ಹೊಂದಿರಬೇಕು. ಆದರೆ ಕಾಂಗ್ರೆಸ್ ಪಕ್ಷವು ಯಾವುದೇ ಮತದಾರ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚಿನ ಉಮೇದುವಾರರನ್ನು ಸ್ಪರ್ಧೆಯ ಕಣದಲ್ಲಿ ಇಳಿಸಿಲ್ಲ. ಈ ಒಂದು ಕ್ರಮ ಕಾಂಗ್ರೆಸ್ ಪರಿಶಿಷ್ಟ ಜಾತಿಯ ಮತದಾರರ ಬೆಂಬಲವನ್ನು ಹೊಂದಿಲ್ಲ ಎಂಬುದನ್ನು ಎತ್ತಿತೋರಿಸುತ್ತದೆ. ಆದರೆ ಪರಿಶಿಷ್ಟ ಜಾತಿಗಳ ಒಕ್ಕೂಟವು ಪ್ರತಿಯೊಂದು ಮತದಾರರ ಕ್ಷೇತ್ರದಲ್ಲಿಯು ೪ ಮಂದಿ ಉಮೇದುವಾರರನ್ನು ಚುನಾವಣೆಗೆ ನಿಲ್ಲಿಸಿ ತಾನು ಹೊಂದಿರಬಹುದಾದ ಮತದಾರರ ಬೆಂಬಲವನ್ನು ದೃಢಪಡಿಸಿದೆ(ಪಟ್ಟಿ – ೨ ಭಾಗ ೧, ೫, ಕಾಲಂ ೩ ಮತ್ತು ೪ ಅನ್ನು ನೋಡಿ).

(iii) ಚುನಾವಣೆಯಲ್ಲಿ ಬಿದ್ದಿರುವ ಮತಗಳನ್ನೇ ಪರಿಶೀಲಿಸಿದಾಗ ಕಾಂಗ್ರೆಸ್ ಕೇವಲ ೨೮% ಮತಗಳನ್ನು ಮಾತ್ರ ಗಳಿಸಿದೆ. ಈ ಒಂದು ಸಂಗತಿ ಕಾಂಗ್ರೆಸ್ ಯಾವ ಬೆಂಬಲ ಹೊಂದಿದೆ ಎಂಬುದನ್ನು ತೋರಿಸುತ್ತದೆ (೪ನೆಯ ಪಟ್ಟಿ ನೋಡಿ).

(iv) ಕೊನೆಯ ಹಂತದ ಚುನಾವಣೆಗಳಲ್ಲಿ ಹಿಂದೂ ಮತಗಳ ಸಹಕಾರದಿಂದ ಜಯಗಳಿಸುವ ಆಶೆಯನ್ನು ಹೊಂದಿದ್ದರೆ, ಎಲ್ಲಾ ಸ್ವತಂತ್ರ ಅಭ್ಯರ್ಥಿಗಳೂ ಪರಿಶಿಷ್ಟ ಜಾತಿಯ ಒಕ್ಕೂಟದ

ಸದಸ್ಯರಾಗುತ್ತಿದ್ದರು. ಈ ಒಂದು ಕಲ್ಪನೆಯ ಆಧಾರದ ಮೇಲೆ ತಿಳಿದು ಬರುವ ಸಂಗತಿ ಎಂದರೆ ಪರಿಶಿಷ್ಟ ಜಾತಿಯ ಒಕ್ಕೂಟವೊಂದೇ ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸಬಲ್ಲ ಸಂಸ್ಥೆಯಾಗಿದೆ; ಏಕೆಂದರೆ ಒಟ್ಟು ಮತದಾನದಲ್ಲಿ ಶೇಕಡಾ ೭೨ ಮತಗಳು ಕಾಂಗ್ರೆಸ್ಸೇತರ ಪಕ್ಷಗಳಿಗೆ ದೊರಕಿವೆ. ಇದು ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ(ಪಟ್ಟಿ ೪ ನೋಡಿ).

ಸಂಪುಟ ಸಮಿತಿಯವರ ವಾದದಂತೆ ಡಾ॥ ಅಂಬೇಡ್ಕರರ ಪ್ರಭಾವವು ಕೇವಲ ಬೊಂಬಾಯಿ ಹಾಗೂ ಮಧ್ಯಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದರಲ್ಲಿ ಹುರುಳೇ ಇಲ್ಲ. ಏಕೆಂದರೆ ಪರಿಶಿಷ್ಟ ಜಾತಿಯ ಒಕ್ಕೂಟವು ಬೇರೆ ಪ್ರಾಂತಗಳಲ್ಲಿಯೂ ಜಯಗಳಿಸಿ ಬೊಂಬಾಯಿ ಹಾಗೂ ಮಧ್ಯಪ್ರಾಂತಗಳಲ್ಲಷ್ಟೇ ಪ್ರಭಾವ ಹೊಂದಿದೆ ಎಂಬ ಅಂಶವನ್ನು ನಿರಾಕರಿಸುತ್ತದೆ. ಸಂಪುಟ ನಿಯೋಗದವರ ಒಂದು ಹೇಳಿಕೆಯು ಡಾ॥ ಅಂಬೇಡ್ಕರರು ಸಂವಿಧಾನ ಸಮಿತಿಗೆ ಚುನಾವಣೆ ಹೊಂದಿರುವ ಅಂಶವನ್ನೇ ಮರೆತಿರುವಂತೆ ತೋರುತ್ತದೆ. ಮುಂದುವರಿದು ಅವರು ಬಂಗಾಳ ಪ್ರಾಂತದ ಶಾಸನ ಸಭೆಯಿಂದ ೭ ಮೊದಲ ಆದ್ಯತೆಯ ಮತಗಳನ್ನು ಗಳಿಸಿ ಚುನಾವಣೆಯಲ್ಲಿ ಮೊದಲಿಗರಾಗಿ ಆಯ್ಕೆ ಹೊಂದಿದ್ದಾರೆ. ಸಾಮಾನ್ಯ ಸ್ಥಾನಕ್ಕೆ ಸೇರಿದಂತೆ ಅವರು ಕಾಂಗ್ರೆಸ್ ನಾಯಕರಾದ ಶರತ್‌ಚಂದ್ರ ಬೋಸ್‌ರನ್ನೂ ಹಿಮ್ಮೆಟ್ಟಿಸಿದ್ದಾರೆ. ಒಂದು ವೇಳೆ ಡಾ॥ ಅಂಬೇಡ್ಕರರಿಗೆ ಬೊಂಬಾಯಿ ಹಾಗೂ ಮಧ್ಯಪ್ರಾಂತಗಳಲ್ಲಿ ಮಾತ್ರ ಬೆಂಬಲವಿದ್ದಿದ್ದರೆ ಅವರು ಬಂಗಾಲದಲ್ಲಿ ವಿಜಯಗಳಿಸಲು ಸಾಧ್ಯವೆ? ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ, ಬಂಗಾಲದ ಪ್ರಾಂತೀಯ ಶಾಸನ ಸಭೆಯ ಒಟ್ಟು ೩೦ ಸ್ಥಾನಗಳಲ್ಲಿ ೨೮ ಸದಸ್ಯರು ಕಾಂಗ್ರೆಸ್ ಬೆಂಬಲದಿಂದ ಜಯಗಳಿಸಿದ್ದಾರೆ. ಮಿಕ್ಕ ಇಬ್ಬರು ಅಭ್ಯರ್ಥಿಗಳು ತನ್ನ ಪಕ್ಷಕ್ಕೆ ಸೇರಿದ್ದು ಅವರಲ್ಲಿ ಒಬ್ಬರು ಚುನಾವಣೆಯ ದಿನದಂದು ಅಸ್ವಸ್ಥರಾಗಿದ್ದರು ಎಂದು ಕಾಂಗ್ರೆಸ್ ಹೇಳಿದೆ. ಹೀಗೆಂದಾಗ ೬ ಪರಿಶಿಷ್ಟ ವರ್ಗದ ಕಾಂಗ್ರೆಸ್ಸನ್ನು ಬೆಂಬಲದಿಂದ ಚುನಾಯಿತಗೊಂಡ ಸದಸ್ಯರು, ಕಾಂಗ್ರೆಸ್‌ನ್ನು ಲೆಕ್ಕಿಸದೇ ಡಾ॥ ಅಂಬೇಡ್ಕರರಿಗೆ ಮತ ನೀಡಿದ್ದಾರೆ. ಈ ಒಂದು ಕ್ರಮವು ಕಾಂಗ್ರೆಸ್ಸಿನ ಬೆಂಬಲ ಪಡೆದ ಪರಿಶಿಷ್ಟ ಜಾತಿಯ ಸದಸ್ಯರೂ ಡಾ॥ ಅಂಬೇಡ್ಕರರನ್ನೇ ತಮ್ಮ ನಾಯಕನೆಂದು ಪರಿಗಣಿಸಿದಂತಾಯಿತು. ಸಂಪುಟ ನಿಯೋಗದವರ ಹೇಳಿಕೆಯನ್ನು ಅಲ್ಲಗಳೆಯಲು ಇದು ಸಾಕ್ಷಿಯಾಗಲಾರದೇ?

ಸಂಪುಟ ಸಮಿತಿಯು, ಕಾಂಗ್ರೆಸ್‌ನಿಂದ ಪರಿಶಿಷ್ಟ ಜಾತಿಯವರು ಅಲ್ಪಸಂಖ್ಯಾತರಾಗಿರದೇ ಹಿಂದೂ ಜನಾಂಗದವರೇ ಎಂದು ಹೇಳಲಾದ ಪತ್ರದಿಂದ ತುಂಬಾ ಪ್ರೋತ್ಸಾಹ ಹೊಂದಿದ್ದಾರೆ. ಇದು ಕಾಂಗ್ರೆಸ್ ಮಿಕ್ಕ ಅಲ್ಪಸಂಖ್ಯಾತ ವರ್ಗದವರಿಗೆ ನೀಡುವ ಸಂರಕ್ಷಣೆಯನ್ನು ನೀಡಲಾರದು ಎಂಬ ಅಂಶವನ್ನೇ ಎತ್ತಿ ತೋರಿಸುತ್ತದೆ. ಸೋಜಿಗದ ಸಂಗತಿ ಎಂದರೆ ಸಂಪುಟ ಸಮಿತಿಯು ಕಾಂಗ್ರೆಸ್ ಪಕ್ಷದ ಹೇಳಿಕೆಯನ್ನು ಅಲ್ಲಗಳೆದಿಲ್ಲ. ಈ ಒಂದು ಹಿನ್ನೆಲೆಯ ಭಯದಲ್ಲಿ ಸಂಪುಟ ನಿಯೋಗದ ಹೇಳಿಕೆಯನ್ನು ಖಂಡಿಸಿ ಅವರು ಪರಿಶಿಷ್ಟ ಜಾತಿಯ ಜನಾಂಗವನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುವರೋ ಇಲ್ಲವೋ ಎಂಬುದನ್ನು ಖಚಿತಗೊಳಿಸುವುದು ಅನಿವಾರ್ಯ.

ಅಧಿಕಾರ ಹಸ್ತಾಂತರಕ್ಕೆ ಮುನ್ನ ಸಂಸತ್ತು ಅಲ್ಪಸಂಖ್ಯಾತರ ಸಂರಕ್ಷಣೆಯ ಬಗೆಗೆ ಮನವರಿಕೆ ಮಾಡಬೇಕೆಂದು, ಸಂಪುಟ ನಿಯೋಗವು ತನ್ನ ಸೂಚನೆಗಳಲ್ಲಿ ಹೇಳಿರುವುದನ್ನು ಸ್ಮರಿಸಬಹುದಾಗಿದೆ. ಆದರೆ ಈ ವಿಧವಾದ ಸಂರಕ್ಷಣೆಯನ್ನು ಸಂಸತ್ತು ಒದಗಿಸಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷೆಗೆ ಗುರಿಮಾಡುವ ವಿಧಾನವನ್ನು ಸಂಪುಟ ನಿಯೋಗವು ಎಲ್ಲಿಯೂ ಹೇಳಿಲ್ಲ. ಈ ದಿಶೆಯಲ್ಲಿ ಎರಡೂ ಸದನಗಳ ಜಂಟಿ ಸಮಿತಿಯೊಂದು ಅಸ್ತಿತ್ವದಲ್ಲಿರುವುದೇ ಎಂಬುದರ ಬಗೆಗೆ ಸರಿಯಾದ

ತಿಳಿವಳಿಕೆಯೇ ಇಲ್ಲ. ಮುಂದುವರಿದು ಮಹಾಪ್ರಭುಗಳ ಘನ ಸರ್ಕಾರವು ಈ ಒಂದು ವಿಚಾರದಲ್ಲಿ ತನ್ನದೇ ಆದ ಒಂದು ಸ್ವತಂತ್ರ ತೀರ್ಮಾನಕ್ಕೆ ಬರಬಲ್ಲ ಭರವಸೆಯನ್ನು ನೀಡಿಲ್ಲ. ಈ ಎಲ್ಲಾ ವಿಷಯಗಳನ್ನು ಖಚಿತಪಡಿಸುವುದು ಅನಿವಾರ್ಯ. ಏಕೆಂದರೆ ಸಂಪುಟ ನಿಯೋಗದ ಮೊದಲನೆಯ ಸೂಚನೆಗಳಲ್ಲಿ ಈ ಬಗ್ಗೆ ಪ್ರಸ್ತಾಪವಿರದೇ, ಕೇವಲ, ಪರಿಶಿಷ್ಟ ಜಾತಿಯವರನ್ನು ಸಂತೈಸಲೆಂದೇ ಎರಡನೆಯ ಹೇಳಿಕೆಯಲ್ಲಿ ಸೇರಿಸಲಾಗಿದೆ.

♦

**ಡಿಸೆಂಬರ್ ೧೯೪೫ರಲ್ಲಿ ಜರುಗಿದ**
**ಪ್ರಾಥಮಿಕ ಚುನಾವಣೆಗಳ ವಿಶ್ಲೇಷಣೆ.**

**೧೯೪೬, ಫೆಬ್ರವರಿ ತಿಂಗಳಲ್ಲಿ ಭಾರತದಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಗಳ ಪೂರ್ವಭಾವಿಯಾಗಿ ಪ್ರಾಂತೀಯ ಶಾಸಕಾಂಗಗಳಲ್ಲಿ ಪರಿಶಿಷ್ಟ ಜಾತಿಯವರಿಗಾಗಿ (ಅಸ್ಪೃಶ್ಯರು) ಮೀಸಲಾಗಿರಿಸಿದ್ದ ಸ್ಥಾನಗಳಿಗೆ ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಜರುಗಿದ ಚುನಾವಣೆ**

ಸೂಚನೆ : ಈ ವಿಶ್ಲೇಷಣೆಗಾಗಿ ತಯಾರಿಸಲಾಗಿರುವ ಪಟ್ಟಿಗಳನ್ನು ಅಧಿಕೃತ ಅಂಕಿಸಂಖ್ಯೆಗಳ ಆಧಾರದ ಮೇಲೆ ಸಿದ್ಧಗೊಳಿಸಲಾಗಿದೆ.

## ಪಟ್ಟಿ - ೧

### ಪ್ರಾಂತೀಯ ಪ್ರಥಮ ಚುನಾವಣೆಗಳಲ್ಲಿ ಭಾಗವಹಿಸಿದ ರಾಜಕೀಯ ಪಕ್ಷಗಳು ಪರಿಶಿಷ್ಟ ಜಾತಿಯವರಿಗೆ ಕಾದಿರಿಸಿದ ಸ್ಥಳ ಕುರಿತಂತೆ

| ರಾಜಕೀಯ ಪಕ್ಷಗಳ ಹೆಸರು | ಪಕ್ಷಗಳಿಂದ ನಿಲ್ಲಿಸಲಾದ ಉಮೇದುವಾರರ ಸಂಖ್ಯೆ | | | | | | ಉಮೇದುವಾರರ ಒಟ್ಟು ಸಂಖ್ಯೆ |
|---|---|---|---|---|---|---|---|
| | ಮದ್ರಾಸ್ | ಬೊಂಬಾಯಿ | ಬಂಗಾಳ | ಸಂಯುಕ್ತಪ್ರಾಂತ | ಮಧ್ಯಪ್ರಾಂತ | ಪಂಜಾಬ್ | |
| ೧. ಕಾಂಗ್ರೆಸ್ | ೧೦ | ೩ | ೧೩ | ೧೧ | ೫ | ೪ | ೪೬ |
| ೨. ಪರಿಶಿಷ್ಟ ಜಾತಿಗಳ ಒಕ್ಕೂಟ | ೩೫ | ೬ | ೮ | ೯ | ೧೨ | ಯಾರೂ ಇಲ್ಲ | ೭೦ |
| ೩. ಹರಿಜನ್ ಲೀಗ್ | ಯಾರೂ ಇಲ್ಲ | ಯಾರೂ ಇಲ್ಲ | ಯಾರೂ ಇಲ್ಲ | ೧ | ೩ | ಯಾರೂ ಇಲ್ಲ | ೪ |
| ೪. ಪಕ್ಷೇತರರು (ಸ್ವತಂತ್ರರು) | ೫ | ೯ | ೭೬ | ೩ | ೮ | ೫೨ | ೧೫೩ |
| ೫. ಹಿಂದೂ ಮಹಾಸಭಾ | ಯಾರೂ ಇಲ್ಲ | ಯಾರೂ ಇಲ್ಲ | ೧ | ೧ | ಯಾರೂ ಇಲ್ಲ | ಯಾರೂ ಇಲ್ಲ | ೨ |
| ೬. ಕಮ್ಯೂನಿಸ್ಟರು | ೬ | ಯಾರೂ ಇಲ್ಲ | ೧ | ಯಾರೂ ಇಲ್ಲ | ಯಾರೂ ಇಲ್ಲ | ಯಾರೂ ಇಲ್ಲ | ೭ |
| ೭. ಕ್ರಾಂತಿಕಾರಿ ಪ್ರಜಾಪ್ರಭುತ್ವ ಪಕ್ಷ | ಯಾರೂ ಇಲ್ಲ | ಯಾರೂ ಇಲ್ಲ | ೧ | ಯಾರೂ ಇಲ್ಲ | ಯಾರೂ ಇಲ್ಲ | ಯಾರೂ ಇಲ್ಲ | ೧ |
| ಮೊತ್ತ | ೫೬ | ೧೮ | ೧೦೦ | ೨೫ | ೨೮ | ೫೬ | ೨೮೩ |

## ಪಟ್ಟಿ - ೨
### ಮತದಾರ ಕ್ಷೇತ್ರದನ್ವಯ ಪರಿಶಿಷ್ಟ ಜಾತಿಗೆ ಕಾದಿರಿಸಿದ ಸ್ಥಾನಗಳಿಗೆ ಪ್ರಾಥಮಿಕ ಚುನಾವಣೆಗಳಲ್ಲಿ ಸ್ಪರ್ಧಿಸಿದ ರಾಜಕೀಯ ಪಕ್ಷಗಳು
### ಭಾಗ - ೧ ಮದರಾಸ್

| ಪ್ರಾಥಮಿಕ ಚುನಾವಣೆ ಜರುಗಿದ ಮತಕ್ಷೇತ್ರ | ಸ್ಪರ್ಧೆಯಲ್ಲಿ ಭಾಗ ವಹಿಸಿದ್ದವರ ಒಟ್ಟು ಸಂಖ್ಯೆ | ಚುನಾವಣೆಗೆ ಸ್ಪರ್ಧಿಸಿದ ಪಕ್ಷಗಳು ಹಾಗೂ ಅವುಗಳ ಅಭ್ಯರ್ಥಿಗಳು | | | |
|---|---|---|---|---|---|
| | | ಕಾಂಗ್ರೆಸ್ | ಪರಿಶಿಷ್ಟ ಜಾತಿ ಮಹಾಸಭೆ | ಕಮ್ಯುನಿಸ್ಟರು | ಪಕ್ಷೇತರರು (ಸ್ವತಂತ್ರರು) |
| ೧. ಅಮ್ಲಾಪುರಂ | ೭ | ೧ | ೪ | ೨ | ಯಾರೂ ಇಲ್ಲ |
| ೨. ಕೊಕೊಂಡ | ೫ | ೧ | ೪ | ಇಲ್ಲ | ಇಲ್ಲ |
| ೩. ಬಂದರ್ | ೫ | ೧ | ೧ | ೩ | ಇಲ್ಲ |
| ೪. ಕಡಪಾ | ೫ | ೧ | ೪ | ಇಲ್ಲ | ಇಲ್ಲ |
| ೫. ಪೆನಕೊಂಡಾ | ೫ | ೧ | ೪ | ಇಲ್ಲ | ಇಲ್ಲ |
| ೬. ತಿರುವಣ್ಣಾಮಲೈ | ೬ | ೧ | ೫ | ಇಲ್ಲ | ಇಲ್ಲ |
| ೭. ದಿಂಡಿವನಮ್ | ೬ | ೧ | ೫ | ಇಲ್ಲ | ಇಲ್ಲ |
| ೮. ಮನ್ನಾರ ಗುಡಿ | ೫ | ೧ | ಇಲ್ಲ | ೧ | ೩ |
| ೯. ಪೊಲ್ಲಾಚಿ | ೭ | ೧ | ೪ | ಇಲ್ಲ | ೨ |
| ೧೦. ನಮ್ಮಕಲ್ | ೫ | ೧ | ೪ | ಇಲ್ಲ | ಇಲ್ಲ |
| ಮೊತ್ತ | ೫೬ | ೧೦ | ೩೫ | ೬ | ೫ |

## ಪಟ್ಟಿ - ೨
## ಭಾಗ - ೨ ಬೊಂಬಾಯಿ

| ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧೆ ಜರುಗಿದ ಮತಕ್ಷೇತ್ರ | ಚುನಾವಣೆಯಲ್ಲಿ ಭಾಗವಹಿಸಿದವರ ಒಟ್ಟು ಸಂಖ್ಯೆ | ಸ್ಪರ್ಧಿಸಿದ ಪಕ್ಷಗಳು ಮತ್ತು ಅವರಿಂದ ನಿಲ್ಲಿಸಲಾದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|
| | | ಕ್ಾಂಗ್ರೆಸ್ | ಪರಿಶಿಷ್ಟ ಜಾತಿ ಒಕ್ಕೂಟ | ಸ್ವತಂತ್ರರು |
| ೧. ಬೊಂಬಾಯಿ ನಗರ (ಉತ್ತರ) | ೭ | ೧ | ೧ | ೫ |
| ೨. ಬೊಂಬಾಯಿ ನಗರ (ಬೈಕುಲ್ಲಾ–ಪರೇಲ್) | ೬ | ೧ | ೧ | ೪ |
| ೩. ಪೂರ್ವಖಾಂದೇಶ (ಪೂರ್ವ) | ೫ | ೧ | ೪ | ಯಾರೂ ಇಲ್ಲ |
| **ಮೊತ್ತ** | ೧೮ | ೩ | ೬ | ೯ |

## ಪಟ್ಟಿ - ೨

### ಭಾಗ - ೩ ಬಂಗಾಳ

| ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧೆ ಜರುಗಿದ ಮತಕ್ಷೇತ್ರ | ಒಟ್ಟು ಸ್ಪರ್ಧಾಳುಗಳ ಸಂಖ್ಯೆ | ಸ್ಪರ್ಧಿಸಿದ ಪಕ್ಷಗಳು, ಅವುಗಳ ಸ್ಪರ್ಧಾಳುಗಳ ಸಂಖ್ಯೆ | | | | | |
|---|---|---|---|---|---|---|---|
| | | ಕಾಂಗ್ರೆಸ್ | ಪರಿಶಿಷ್ಟಜಾತಿ ಒಕ್ಕೂಟ | ಹಿಂದೂ ಮಹಾಸಭಾ | ಸ್ವತಂತ್ರರು | ಕಮ್ಯುನಿಸ್ಟರು | ರ್‍ಯಾಡಿಕಲ್ ಡೆಮಾಕ್ರಾಟ್ಸ್ |
| ೧. ಹುಗ್ಲಿ | ೫ | ೧ | ಇಲ್ಲ | ಇಲ್ಲ | ೩ | ಇಲ್ಲ | ೧ |
| ೨. ಹೌರಾ | ೭ | ೩ | - | - | ೪ | - | - |
| ೩. ನಾಡಿಯಾ | ೧೨ | ೧ | - | - | ೧೧ | - | - |
| ೪. ಜೆಸ್ಸೂರು | ೭ | ೧ | ೨ | - | ೪ | - | - |
| ೫. ಖುಲ್ನಾ | ೧೧ | - | - | - | ೧೧ | - | - |
| ೬. ದಿನಾಜಪುರ | ೧೬ | ೨ | - | - | ೧೩ | ೧ | - |
| ೭. ಬೋಗ್ರಾ | ೬ | ೧ | - | - | ೫ | - | - |
| ೮. ಮೈಮಾನ್‌ಸಿಂಗ್ | ೭ | ೧ | - | - | ೬ | - | - |
| ೯. ಫರೀದ್‌ಪುರ | ೧೮ | ೨ | ೩ | - | ೧೩ | - | - |
| ೧೦. ಬಕೀರ್‌ಗಂಜ್ | ೬ | - | ೩ | ೧ | ೨ | - | - |
| ೧೧. ತಿಪ್ಪೇರಾ | ೫ | ೧ | - | - | ೪ | - | - |
| **ಮೊತ್ತ** | ೧೦೦ | ೧೩ | ೮ | ೧ | ೭೬ | ೧ | ೧ |

**ಪಟ್ಟಿ - ೨**

**ಭಾಗ- ೪ ಸಂಯುಕ್ತ ಪ್ರಾಂತಗಳು**

| ಪ್ರಾಥಮಿಕ ಚುನಾವಣೆ ಜರುಗಿದ ಮತಕ್ಷೇತ್ರಗಳು | ಸ್ಪರ್ಧೆಯಲ್ಲಿ ಭಾಗವಹಿಸಿದವರ ಸಂಖ್ಯೆ | ಚುನಾವಣೆಗೆ ಸ್ಪರ್ಧಿಸಿದ ಪಕ್ಷಗಳು-ಉಮೇದುವಾರರ ಸಂಖ್ಯೆ | | | | |
|---|---|---|---|---|---|---|
| | | ಕಾಂಗ್ರೆಸ್ | ಪರಿಶಿಷ್ಟಜಾತಿ ಸಂಘ | ಹರಿಜನಲೀಗ್ | ಹಿಂದೂ ಮಹಾಸಭೆ | ಸ್ವತಂತ್ರರು |
| ೧. ಆಗ್ರಾನಗರ | ೧೧ | ೧ | ೫ | ೧ | ೧ | ೩ |
| ೨. ಅಲಹಾಬಾದ್ ನಗರ | ೮ | ೧ | ೪ | - | - | ೩ |
| ೩. ಆಲ್ಮೋರ | ೬ | ೩ | - | - | - | ೩ |
| **ಮೊತ್ತ** | ೨೫ | ೫ | ೯ | ೧ | ೧ | ೯ |

## ಪಟ್ಟಿ - ೨
### ಭಾಗ – ೫ ಮಧ್ಯ ಪ್ರಾಂತಗಳು

| ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಿದ ಮತ ಕ್ಷೇತ್ರಗಳು | ಸ್ಪರ್ಧೆಯಲ್ಲಿದ್ದವರ ಸಂಖ್ಯೆ | ಚುನಾವಣೆಗೆ ಸ್ಪರ್ಧಿಸಿದ ಪಕ್ಷಗಳು ಹಾಗೂ ಅವುಗಳ ಉಮೇದು ವಾರರ ಸಂಖ್ಯೆ | | | |
|---|---|---|---|---|---|
| | | ಕಾಂಗ್ರೆಸ್ | ಪರಿಶಿಷ್ಟ ಜಾತಿ ಸಂಘ | ಹರಿಜನ ಲೀಗ್ | ಪಕ್ಷೇತರರು ಸ್ವತಂತ್ರರು |
| ೧. ನಾಗಪುರ ಮತ್ತು ಸಾಕೋಲಿ | ೫ | ೧ | ೨ | ೧ | ೧ |
| ೨. ಹಿಂಗನ ಘಾಟ್ | ೬ | ೧ | ೨ | ೧ | ೨ |
| ೩. ಭಾಂಡಾರ | ೫ | ೧ | ೩ | ೧ | - |
| ೪. ಯೋಟಮಲ್ | ೬ | ೧ | ೨ | - | ೩ |
| ೫. ಚಿಕ್ಕಾಲಿ | ೬ | ೧ | ೩ | - | ೨ |
| **ಮೊತ್ತ** | ೨೮ | ೫ | ೧೨ | ೩ | ೮ |

## ಪಟ್ಟಿ - ೨
### ಭಾಗ - ೬ ಪಂಜಾಬ್

| ಚುನಾವಣೆ ನಡೆದ ಮತ ಕ್ಷೇತ್ರಗಳು | ಸ್ಪರ್ಧೆಯಲ್ಲಿದ್ದವರ ಸಂಖ್ಯೆ | ಚುನಾವಣೆಗೆ ಸ್ಪರ್ಧಿಸಿದ ಪಕ್ಷಗಳು ಹಾಗೂ ಅವುಗಳ ಉಮೇದುವಾರರ ಸಂಖ್ಯೆ | | |
|---|---|---|---|---|
| | | ಕಾಂಗ್ರೆಸ್ | ಒಕ್ಕೂಟವಾದಿ | ಸ್ವತಂತ್ರರು |
| ೧. ಗುರ್‌ಗಾಂವ್ | ೧೦ | - | ೧ | ೯ |
| ೨. ಕುರ್‌ನಾಲ್ | ೧೦ | ೧ | - | ೯ |
| ೩. ಅಂಬಾಲ | ೮ | - | - | ೮ |
| ೪. ಹೋಷಿಯಾರ್‌ಪುರ್ | ೯ | ೧ | ೧ | ೭ |
| ೫. ಜಲಂಧರ್ | ೬ | ೧ | ೧ | ೪ |
| ೬. ಲೂಧಿಯಾನ | ೧೦ | ೧ | - | ೯ |
| ೭. ಲಯಲಾಪುರ್ | ೬ | - | - | ೬ |
| ಮೊತ್ತ | ೫೯ | ೪ | ೩ | ೫೨ |

## ಪಟ್ಟಿ - ೩

### ಪ್ರಾಥಮಿಕ ಚುನಾವಣೆಯಲ್ಲಿ ವಿವಿಧ ಪಕ್ಷಗಳಿಗೆ ವಿವಿಧ ಪ್ರಾಂತಗಳಲ್ಲಿ ದೊರೆತ ಮತಗಳ ವಿವರ

| | ಪಕ್ಷಗಳಿಗೆ ದೊರೆತ ಮತಗಳು | | | | | |
|---|---|---|---|---|---|---|
| ಪಕ್ಷದ ಹೆಸರು | ಮದರಾಸ್ ಶೇಕಡ | ಬೊಂಬಾಯಿ ಶೇಕಡ | ಬಂಗಾಳ ಶೇಕಡ | ಒಕ್ಕೂಟ ಪ್ರಾಂತ್ಯ ಶೇಕಡ | ಮ. ಪ್ರಾಂತ್ಯಗಳು ಶೇಕಡಾ | ಪಂಜಾಬ್ ಶೇಕಡ |
| ೧. ಕಾಂಗ್ರೆಸ್ | ೨೭,೮೩೮ - ೩೩% | ೫೩೩೩ - ೧೪% | ೫೬,೮೪೮ - ೩೨.೭% | ೪೧೦೧,೪೧.೮೧% | ೧೩೧,೧೦.೧೭% | ೮೨೯೮ - ೧೭.೬% |
| ೨. ಪರಿಶಿಷ್ಟಜಾತಿ ಮಹಾಸಂಸ್ಥೆ | ೩೦,೧೯೯ - ೩೬% | ೨೮,೪೮೯ - ೭೪% | ೨೧,೧೨೯ - ೧೨,೨% | ೩೦೯೩ - ೩೦.೫% | ೮೬೮೫ - ೮೨.೮% | nil .೫೩% |
| ೩. ಸ್ವತಂತ್ರರು | ೪೬೪೮ - ೪.೫% | ೩೮೧೪ - ೧೦% | ೮೩೮೬೯ - ೪೭% | ೧೭೭೩ - ೧೮.೮% | ೫೫೧ | ೨೪,೬೧೮ |
| ೪. ಹರಿಜನ ಲೀಗ್ | - | - | - | ೩೭೦ | ೧೧೩ | - |
| ೫. ಹಿಂದೂ ಮಹಾಸಭಾ | - | - | ೭೬೦ | ೪೫೨ | - | - |
| ೬. ಒಕ್ಕೂಟವಾದಿ | - | - | - | - | - | ೧೩.೫೨೧ |
| ೭. ಕಮ್ಯುನಿಸ್ಟ್ | ೨೦,೮೧೪ - ೨೫% | - | ೧೦೦೪೯ - ೫.೮% | - | - | - |
| ಮೊತ್ತ | ೮೩.೪೦೯ | ೩೭,೫೮೬ | ೧,೭೨,೭೯೧ | ೯,೭೮೯ | ೧೦,೪೮೦ | ೪೬,೩೩೭ |

## ಪಟ್ಟಿ - ೪

### ಪ್ರಾಥಮಿಕ ಚುನಾವಣೆಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಹಾಗೂ ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಹಂಚಿದ ಮತಗಳ ಸಂಖ್ಯೆ

| ಪ್ರಾಥಮಿಕ ಚುನಾವಣೆಗಳಲ್ಲಿ ಗಳಿಸಿದ ಒಟ್ಟು ಮತಗಳು (ಭಾರತದಾದ್ಯಂತ) | ಕಾಂಗ್ರೆಸ್ ಪರ ಪಕ್ಷಗಳು | | | | ಕಾಂಗ್ರೆಸ್ಸೇತರ ಪಕ್ಷಗಳ ಪರ | | | | | | | |
|---|---|---|---|---|---|---|---|---|---|---|---|---|
| | ಕಾಂಗ್ರೆಸ್ | ಹರಿಜನ ಲೀಗ್ | ಮೊತ್ತ | ಶೇಕಡ | ಪ.ಜಾತಿ ಒಕ್ಕೂಟ | ಸ್ವತಂತ್ರರು | ಹಿಂದೂ ಮಹಾ ಸಭಾ | ಕಮ್ಯುನಿಸ್ಟರು | ಒಕ್ಕೂಟ | ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಪಕ್ಷ | ಒಟ್ಟು | ಶೇಕಡ |
| ೩,೫೯,೫೩೨ | ೧,೦೩,೪೪೯ | ೪೮೩ | ೧,೦೩,೯೩೨ | ೨೮ | ೯೧,೫೯೫ | ೧,೧೯,೨೭೩ | ೧,೨೧೨ | ೩೦,೮೬೩ | ೧೩,೫೨೧ | ೧೩೬ | ೨೫೫೬೦೦ | ೭೨ |

**ಪಟ್ಟಿ - ೫**

**ವಿವಿಧ ಪ್ರಾಂತಗಳ ಪ್ರಾಥಮಿಕ ಚುನಾವಣೆಯಲ್ಲಿ ಜಯಗಳಿಸಿದ ಅಭ್ಯರ್ಥಿಗಳು ಪಕ್ಷವಾರು**

| ಪಕ್ಷ | ಮದ್ರಾಸ್ | ಬೊಂಬಾಯಿ | ಬಂಗಾಳ | ಯು.ಪಿ. | ಸಿ.ಪಿ. | ಪಂಜಾಬ್ | ಮೊತ್ತ |
|---|---|---|---|---|---|---|---|
| ೧. ಕಾಂಗ್ರೆಸ್ | ೧೦ | ೩ | ೧೨ | ೪ | ೫ | ೪ | ೩೮ |
| ೨. ಪರಿಶಿಷ್ಟ ಜಾತಿ ಒಕ್ಕೂಟ | ೨೪ | ೫ | ೬ | ೫ | ೧೧ | - | ೫೧ |
| ೩. ಸ್ವತಂತ್ರರು | ೩ | ೪ | ೩೬ | ೨ | ೩ | ೨೧ | ೬೯ |
| ೪. ಹಿಂದೂ ಮಹಾಸಭಾ | - | - | ೧ | ೧ | ೧ | - | ೩ |
| ೫. ಹರಿಜನ ಲೀಗ್ | - | - | - | - | - | - | - |
| ೬. ಕಮ್ಯುನಿಸ್ಟರು | ೩ | - | ೧ | - | - | - | ೪ |
| ೭. ರ್‍ಯಾಡಿಕಲ್ ಡೆಮೊಕ್ರಾಟಿಕ್ | - | - | - | - | - | - | - |
| ೮. ಒಕ್ಕೂಟ ವಾದಿ | - | - | - | - | - | ೩ | ೩ |
| **ಮೊತ್ತ** | **೪೦** | **೧೨** | **೫೬** | **೧೨** | **೨೦** | **೨೮** | **೧೬೮** |

# ೨
# ಸಂಪುಟ ನಿಯೋಗ ಮತ್ತು ಅಸ್ಪೃಶ್ಯರು *

**ಸಂಪುಟ ನಿಯೋಗ ಅಸ್ಪೃಶ್ಯರನ್ನು ಹೇಗೆ ಕಡೆಗಣಿಸಿದೆ?**

ದಿನಾಂಕ ಮೇ ೧೦ ರಂದು ಭಾರತದ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕೆ ಸಂಪುಟ ನಿಯೋಗವು ತನ್ನ ಮಧ್ಯಕಾಲದ ಹಾಗೂ ದೀರ್ಘಕಾಲದ ಸೂಚನೆಗಳ ಬಗೆಗೆ ಹೇಳಿಕೆ ನೀಡಿದೆ. ಅಸ್ಪೃಶ್ಯರನ್ನು ಅವರು ಭಾರತದ ರಾಷ್ಟ್ರೀಯ ಜೀವನದ ಪ್ರತ್ಯೇಕ ಅಂಗವೆಂದು ಪರಿಗಣಿಸದೇ ಇರುವುದು ಅತಿ ಕಹಿ ಹಾಗೂ ಆಶ್ಚರ್ಯದ ಸಂಗತಿಯಾಗಿದೆ. ಸಂಪುಟ ನಿಯೋಗವು ತನ್ನ ದೀರ್ಘಕಾಲೀನ ವರದಿಯಲ್ಲಿ ಒಂದು ಬಾರಿಯಾದರೂ ಅಸ್ಪೃಶ್ಯರ ಬಗೆಗೆ ಸೊಲ್ಲೆತ್ತದೆ ಇರುವುದು ಖೇದನೀಯ. ಈ ಕೆಳಗೆ ನೀಡಲಾದ ವಿವರಗಳಿಂದ ಸಂಪುಟ ನಿಯೋಗವು ಅಸ್ಪೃಶ್ಯರನ್ನು ಹೇಗೆ ಕಡೆಗಣಿಸಿದ್ದಾರೆ ಎಂಬುದು ಮನವರಿಕೆಯಾಗುತ್ತದೆ.

i) ಮುಸಲ್ಮಾನ ಹಾಗೂ ಸಿಖ್ ಜನಾಂಗದವರಿಗೆ ಕೇಂದ್ರ ಆಡಳಿತ ಮಂಡಲಿಯಲ್ಲಿ ತಮ್ಮ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರ ನೀಡಿದ್ದು ಅದನ್ನೇ ಪರಿಶಿಷ್ಟ ಜಾತಿಗಳವರಿಗೆ ನಿರಾಕರಿಸಿದ್ದಾರೆ. ನಡುಗಾಲ ಸರಕಾರದಲ್ಲಿ ಪರಿಶಿಷ್ಟ ಜಾತಿಗಳ ಈರ್ವರು ಪ್ರತಿನಿಧಿಗಳಿದ್ದರೂ ಅವರು ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸುವುದಿಲ್ಲ; ಏಕೆಂದರೆ ಒಬ್ಬರು ಕಾಂಗ್ರೆಸ್ಸಿನಿಂದ ನಾಮಕರಣ ಹೊಂದಿದ್ದರೆ ಮತ್ತೊಬ್ಬರು ಮುಸ್ಲಿಮ್ ಲೀಗಿನಿಂದ ನಾಮಕರಣಗೊಂಡಿದ್ದಾರೆ.

ii) ನಡುಗಾಲದ ಸರಕಾರದಲ್ಲಿ ಅಸ್ಪೃಶ್ಯರಿಗೆ ಯಾವ ವಿಧವಾದ ಕೋಟಾವನ್ನು ನೀಡಿಲ್ಲ. ಆದರೆ ಈ ಸೌಲಭ್ಯವನ್ನು ಮುಸ್ಲಿಮ್ ಜನಾಂಗಕ್ಕೆ ನೀಡಲಾಗಿದೆ. ಆದರೆ ೧೯೪೫ರ ಸಿಮ್ಲಾ ಸಮ್ಮೇಳನದಂತೆ ೧೪ ಮಂದಿ ಸದಸ್ಯರ ಸಂಪುಟದಲ್ಲಿ ಎರಡು ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ನೀಡಬೇಕೆಂದಿತ್ತು. ೧೯೪೫ರಿಂದ ೧೯೪೬ರ ವರೆಗಿನ ಅವಧಿಯಲ್ಲಿ ಇದರಲ್ಲಿ ಬದಲಾವಣೆಯಾಗಿದ್ದು ಇದರ ಕಾರಣವೇನು ಎಂಬುದು ತಿಳಿಯುತ್ತಿಲ್ಲ.

iii) ಸಂವಿಧಾನ ಸಭೆಯಲ್ಲಿಯೂ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿಲ್ಲ

## II

**ಮಹಾಪ್ರಭುಗಳ ಘನ ಸರ್ಕಾರದ ನಿಲುವಿನಿಂದ ಸಂಪುಟ ನಿಯೋಗದ ನಿಲುವು ಹೇಗೆ ಬದಲಾಗಿದೆ?**

೨. ಸಂಪುಟ ನಿಯೋಗವು ಅಸ್ಪೃಶ್ಯರಿಗೆ ಅನ್ಯಾಯ ಎಸಗಿರುವುದಲ್ಲದೆ ಅದು ಮಹಾಪ್ರಭುಗಳ ಘನ ಸರ್ಕಾರದ ನಿಲವನ್ನು ಬದಲಿಸಿ ಅಪರಾಧವೆಸಗಿದೆ. ಅದು ಭಾರತದ ಅಸ್ಪೃಶ್ಯರ ಬಗೆಗೆ ಸರ್ಕಾರ ವಿರೋಧದ ನಿಲವನ್ನೇ ತಳೆದಿದೆ ಎಂದೇ ಹೇಳಬಹುದಾಗಿದೆ.

i) ೧೯೨೦ರ ಮುಂಚೆ ಸಂವಿಧಾನದಲ್ಲಿಯ ಬದಲಾವಣೆಗಳು ಸರ್ಕಾರದ ಅಧಿಕಾರ ಹಾಗೂ ಅವರ ಮನಸ್ಸಿಗೆ ಬಂದಂತೆ ಜರುಗುತ್ತಿದ್ದವೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆದರೆ ಮೊದಲ ಬಾರಿಗೆ ೧೯೨೦ರಲ್ಲಿ ಭಾರತದ ಆಶೋತ್ತರಗಳನ್ನು ಕುರಿತು ಭಾರತೀಯರೊಡನೆ ಚರ್ಚಿಸಿ ಭಾರತದ ಸಂವಿಧಾನವನ್ನು ರಚಿಸಲು ನಿರ್ಧರಿಸಿತು. ಅದರಂತೆ ದುಂಡುಮೇಜಿನ

---

* ಮುದ್ರಿತ ಪ್ರಕಟನೆ : ಸಂಪಾದಕ

ಪರಿಷತ್ತನ್ನು ಕರೆಯಲಾಯಿತು. ಇದಕ್ಕೆ ಭಾರತೀಯರನ್ನೂ ಆಹ್ವಾನಿಸಲಾಯಿತು.
ಈ ವಿಧವಾದ ಭಾರತೀಯ ತಂಡದಲ್ಲಿ ಅಸ್ಪೃಶ್ಯರನ್ನು ಬೇರೆಯಾಗಿಯೇ ಆಹ್ವಾನಿಸಿದ್ದು ಅವರು ಇತರ ಯಾವ ಪಕ್ಷಕ್ಕೂ ಸೇರಿದವರಾಗಿರಲಿಲ್ಲ.

ii) ದುಂಡುಮೇಜಿನ ಪರಿಷತ್‌ನಲ್ಲಿ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸಿದ ಶ್ರೀಯುತ ಗಾಂಧಿಯವರು ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿದ್ದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾ ಅಸ್ಪೃಶ್ಯರು ಭಾರತೀಯ ಜನಾಂಗದ ಅಂಗವಾಗಿದ್ದಾರೆ ಎಂದೇ ಪ್ರತಿಪಾದಿಸಿದರು. ಆದರೆ ಶ್ರೀಯುತ ಗಾಂಧಿಯವರ ಹೇಳಿಕೆಯನ್ನು ಬ್ರಿಟಿಷ್ ಸರ್ಕಾರವು ತಳ್ಳಿಹಾಕಿದ್ದು, ಅಸ್ಪೃಶ್ಯರು ಭಾರತೀಯ ರಾಷ್ಟ್ರೀಯ ಜೀವನದ ಬೇರೆ ಅಂಗವಾಗಿದ್ದು, ಮುಸ್ಲಿಮ್ ಹಾಗೂ ಕ್ರಿಶ್ಚಿಯನ್ ಜನಾಂಗದಂತೆ ಬೇರೆ ಪ್ರಾತಿನಿಧ್ಯವನ್ನು ಹಾಗೂ ಸಂರಕ್ಷಣೆ ಪಡೆಯಲು ಅರ್ಹರಾಗಿದ್ದಾರೆ.

iii) ಈ ಒಂದು ಧೋರಣೆಗೆ, ೧೯೪೫ರ ಜೂನ್‌ನಲ್ಲಿ ಜರುಗಿದ ಸಿಮ್ಲಾ ಸಮ್ಮೇಳನದಲ್ಲಿಯೂ ಅಂಟಿಕೊಂಡಿದ್ದು, ಭಾರತದ ಪ್ರತಿನಿಧಿಗಳನ್ನು ಆಮಂತ್ರಿಸಿದ್ದಾಗ ಅಸ್ಪೃಶ್ಯರನ್ನು ಬೇರೆ ಪಂಗಡವೆಂದೇ ಭಾವಿಸಿ ಅವರ ಪ್ರತಿನಿಧಿಯನ್ನು ಆಹ್ವಾನಿಸಲಾಗಿತ್ತು. ಈ ಸಮ್ಮೇಳನದಲ್ಲಿ ಅದು ಕಾಂಗ್ರೆಸ್ ಅಥವಾ ಬೇರೆ ಯಾವ ರಾಜಕೀಯ ಪಕ್ಷವನ್ನು ಪ್ರತಿನಿಧಿಸಿರಲಿಲ್ಲ.

iv) ೧೯೪೨ರಲ್ಲಿಯ ಕ್ರಿಪ್ಸ್ ಸೂಚನೆಯಂತೆ ಸಂವಿಧಾನದ ಸಭೆಯಲ್ಲಿ ಅಸ್ಪೃಶ್ಯರಿಗೆ ಬೇರೆಯಾಗಿ ಪ್ರಾತಿನಿಧ್ಯವನ್ನು ನೀಡದೇ ಇರುವುದನ್ನು ಸ್ಮರಿಸಬಹುದಾದರೂ, ಇಂದಿನ ಸಂಪುಟ ನಿಯೋಗದ ಸದ್ಯದ ಸೂಚನೆಗಳನ್ನು ನಿಲವಿನಲ್ಲಿ ಆದ ಬದಲಾವಣೆ ಎಂದು ಕರೆಯಲಾಗದು. ಆದರೆ ವಸ್ತುಸ್ಥಿತಿಯಲ್ಲಿ ಬದಲಾಗಿರುವುದೇ ನಿಜ. ೧೯೪೨ರಲ್ಲಿ ಕ್ರಿಪ್ಸ್ ಅವರ ಸೂಚನೆಗಳಲ್ಲಿ ಅಸ್ಪೃಶ್ಯರಲ್ಲದೇ ಬೇರೆ ಅಲ್ಪಸಂಖ್ಯಾತರನ್ನೂ ಕೈಬಿಡಲಾಗಿತ್ತು. ಹೀಗಾಗಿ ಯಾವ ಅಲ್ಪಸಂಖ್ಯಾತರಿಗೂ ಸಂವಿಧಾನ ಸಭೆಯಲ್ಲಿ ಪ್ರಾತಿನಿಧ್ಯವನ್ನು ನೀಡಿರಲಿಲ್ಲ. ಆದರೆ ಸಂಪುಟ ನಿಯೋಗವು ಸೂಚಿಸಿದ ಸಂವಿಧಾನ ಸಭೆಯಲ್ಲಿ ಮುಸ್ಲಿಮ್ ಹಾಗೂ ಸಿಖ್ ಜನಾಂಗದವರಿಗೆ ಪ್ರತ್ಯೇಕ ಮನ್ನಣೆ ಮತ್ತು ಪ್ರಾತಿನಿಧ್ಯವನ್ನು ನೀಡಲಾಗಿದ್ದು ಅಸ್ಪೃಶ್ಯರಿಗೆ ಅದನ್ನು ನಿರಾಕರಿಸಲಾಗಿದೆ. ಈ ಒಂದು ಭೇದಭಾವನೆಯ ತಪ್ಪನ್ನೇ ಅಸ್ಪೃಶ್ಯರು ದೂರುತ್ತಿರುವುದು.

೩. ಸಂಪುಟ ನಿಯೋಗದ ಈ ತಾರತಮ್ಯ ಭಾವನೆಯು, ಅಸ್ಪೃಶ್ಯರನ್ನು ಭಾರತ ರಾಷ್ಟ್ರೀಯ ಜೀವನದಿಂದ ಬೇರೆ ಎಂದು ಪರಿಗಣಿಸದೆ, ಈ ಧೋರಣೆಯಿಂದ ದೂರ ಸರಿದು, ಮುಸ್ಲಿಮ್ ಹಾಗೂ ಸಿಖ್ಖರನ್ನು ಬೇರೆ ಎಂದು ಪರಿಗಣಿಸಿ ಪರಿಶಿಷ್ಟರಿಗೆ ದ್ರೋಹ ಬಗೆದಿದೆ.

ಸಂಪುಟ ನಿಯೋಗದ ಈ ನಿರ್ಣಯದಿಂದ, ಅಸ್ಪೃಶ್ಯರಿಗೆ ಮಹಾಪ್ರಭುಗಳ ಘನ ಸರ್ಕಾರದಿಂದ ನೀಡಿದ ಭರವಸೆಯ ಉಲ್ಲಂಘನೆಯಾಗಿಲ್ಲವೇ?

೪. ಅಸ್ಪೃಶ್ಯರನ್ನು ಬೇರೆ ಅಂಗವೆಂದು ಪರಿಗಣಿಸದೇ ಹೋದುದು ಮಹಾಪ್ರಭುಗಳ ಘನ ಸರ್ಕಾರದ ಭರವಸೆಯ ಉಲ್ಲಂಘನೆಯಾಗಿದೆ ಎಂಬುದಕ್ಕೆ ಕೆಳಗಿನ ಹಲವಾರು ವಾಗ್ದಾನಗಳೇ ಸಾಕ್ಷಿಯಾಗಿವೆ.

(i)

ಭಾರತದ ಏಕತೆಗಾಗಿ ರಚಿಸುವ ಸಂವಿಧಾನ ಯೋಜನೆಗಳಲ್ಲಿ ಭಾರತದ ವಿವಿಧ ಅರಸರಡಿಯಲ್ಲಿರುವ ರಾಜ್ಯಗಳನ್ನು ವಿಲೀನಗೊಳಿಸುವುದು ಅನಿವಾರ್ಯ. ಈ ದಿಶೆಯಲ್ಲಿ ನಾನು ಉದಾಹರಿಸಬಹುದಾದ ಎರಡೇ ಎರಡು ಉದಾಹರಣೆಗಳೆಂದರೆ ಪ್ರಮುಖ ಮುಸ್ಲಿಮ್ ಅಲ್ಪಸಂಖ್ಯಾತರು ಹಾಗೂ ಪರಿಶಿಷ್ಟ

ಜಾತಿಯವರು. ಹಿಂದಿನಿಂದಲೂ ಈ ಎರಡೂ ವರ್ಗದವರಿಗೂ ಸಂರಕ್ಷಣೆಯನ್ನು ನೀಡಲಾಗಿದ್ದು ಅದನ್ನು ನಾವು ಮಾನ್ಯ ಮಾಡಲೇಬೇಕು ಎಂದು ಲಾರ್ಡ್ ಲಿನ್‌ಲಿತ್‌ಗೋ ಅವರು ಜನವರಿ ೧೦, ೧೯೪೦ರಂದು ಬೊಂಬಾಯಿ ಓರಿಯಂಟಲ್ ಕ್ಲಬ್‌ನ ತಮ್ಮ ಭಾಷಣದಲ್ಲಿ ಸಾರಿದ್ದಾರೆ.

(ii)

ಈ ಎರಡು ಪ್ರಮುಖ ಅಂಶಗಳು ಹೊರಹೊಮ್ಮಿವೆ. ಈ ಎರಡು ಅಂಶಗಳ ಬಗೆಗೆ ಮಹಾಪ್ರಭುಗಳ ಸರ್ಕಾರದ ನಿಲವು ಏನೆಂದು ಸ್ಪಷ್ಟಪಡಿಸಲು ಕೇಳಿದೆ. ಮೊದಲನೆಯದಾಗಿ ಮಹಾಪ್ರಭುಗಳ ಸರ್ಕಾರವು ಪರಿಶಿಷ್ಟ ಜಾತಿಯವರಿಗೆ ಸೂಕ್ತ ರಕ್ಷಣೆ ನೀಡದೇ ಅಧಿಕಾರ ಹಸ್ತಾಂತರ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗೇನಾದರೂ ಜರುಗಿದಲ್ಲಿ ಭಾರತದ ಶಾಂತಿ ಹಾಗೂ ಭದ್ರತೆಯನ್ನು ಕದಡಿದ ಹೊಣೆಗಾರಿಕೆಯನ್ನು ಭಾರತ ರಾಷ್ಟ್ರದ ಪ್ರಬಲ ಅಂಗಗಳೂ ಹೊರಬೇಕಾಗುತ್ತದೆ. ಸರ್ಕಾರದ ಈ ಒಂದು ಬಲಾತ್ಕಾರಕ್ಕೆ ಮಣಿದಲ್ಲಿ ನಾವು ಭಾಗಿಗಳಲ್ಲ.

೮ ಆಗಸ್ಟ್ ೧೯೪೦, ಲಾರ್ಡ್ ಲಿನ್ ಲಿತ್‌ಗೋ ಅವರ ಭಾಷಣದಿಂದ.

(iii)

ಕಾಂಗ್ರೆಸ್ ಧುರೀಣರು..... ಅಗಾಧವಾದ ಸಂಘಟನೆಯನ್ನು ಹೊಂದಿದ್ದಾರೆ. ಅದು ದಕ್ಷ ರಾಜಕೀಯ ತಂತ್ರವನ್ನೂ ಭಾರತದಲ್ಲಿ ನಿರ್ಮಿಸಿದೆ. ......ಆದರೆ ಯಶಸ್ಸನ್ನು ಪಡೆಯದೇ ಹೋಗಿದೆ. ಕಾಂಗ್ರೆಸ್ ತಾನು ಹೇಳಿಕೊಂಡಂತೆ ಭಾರತದ ಪ್ರಬಲ ಅಂಶಗಳನ್ನು ರಾಷ್ಟ್ರೀಯ ಜೀವನದಲ್ಲಿ ಅಳವಡಿಸದೇ ಕೇವಲ ಬೇಡಿಕೆಗಳನ್ನು ಮಾತ್ರ ಮುಂದುವರಿಸದೇ ಇದ್ದರೆ, ನಮ್ಮ ಇಂದಿನ ಅನೇಕ ಸಮಸ್ಯೆಗಳು ಸುಲಭವಾಗಿ ಬಗೆಹರಿಯಬಹುದಾಗಿತ್ತು. ಅದು ಭಾರತದಲ್ಲಿ ಅತಿ ಹೆಚ್ಚಿನ ಸಂಖ್ಯಾಬಲ ಹೊಂದಿದ ರಾಜಕೀಯ ಪಕ್ಷವಾಗಿರುವುದು ಸತ್ಯ. ಆದರೆ ಅದು ಹೇಳಿಕೊಳ್ಳುವಂತೆ ಭಾರತದ ರಾಷ್ಟ್ರೀಯ ಜೀವನದ ಪ್ರಧಾನ ಅಂಶವನ್ನು ಪ್ರತಿನಿಧಿಸುತ್ತದೆ ಎಂಬುದು ಮಾತ್ರ ಸತ್ಯಕ್ಕೆ ದೂರವಾಗಿದೆ. ಭಾರತದ ಧೋರಣೆಯನ್ನು ಕುರಿತಂತೆ ಬೇರೆಯವರು ಕೇವಲ ಸಂಖ್ಯಾಬಲದಿಂದ ಅಲ್ಪಸಂಖ್ಯಾತರಾಗಿರದೇ ತಾವು ರಾಷ್ಟ್ರೀಯ ಜೀವನದ ಪ್ರತ್ಯೇಕ ಅಂಗವಾಗಿದ್ದೇವೆಂದು ಪ್ರತಿಪಾದಿಸುತ್ತಾರೆ. ಈ ಅಂಗಗಳಲ್ಲಿ ಪ್ರಮುಖವಾಗಿ ಮುಂಚೂಣಿಯಲ್ಲಿರುವುದೆಂದರೆ ಪ್ರಬಲ ಅಲ್ಪಸಂಖ್ಯಾತರಾದ ಮುಸ್ಲಿಮರು. ಕೇವಲ ಭೌಗೋಲಿಕ ಮತದಾರರ ಅಧಿಕ ಬೆಂಬಲದಿಂದ ರಚನೆ ಹೊಂದಿದ ಯಾವ ವಿಧವಾದ ಸಂವಿಧಾನ ಸಭೆಯನ್ನೂ ಅವರು ಒಪ್ಪಲಾರರು. ಕೇವಲ ಸಂಖ್ಯಾಬಲದಿಂದ ಅಂಗೀಕರಿಸುವ ಸಂವಿಧಾನ ಚರ್ಚೆಗಳನ್ನು ಅವರು ಪರಿಗಣಿಸದೇ ಹೋಗಲೂಬಹುದು. ಈ ಒಂದು ಧೋರಣೆಯೇ ಪರಿಶಿಷ್ಟ ಜಾತಿಯ ಮಹಾಸಭೆಯವರಿಗೂ ಅನ್ವಯಿಸುತ್ತದೆ. ಶ್ರೀಯುತ ಗಾಂಧಿಯವರ ಕಳಕಳಿಯ ಹೇಳಿಕೆಯ ನಂತರವೂ ಪರಿಶಿಷ್ಟ ಜಾತಿ ಮಹಾಸಂಸ್ಥೆಯು ಹಿಂದೂ ಸಮಾಜದಿಂದ ಹೊರಗಿರುವ ವರ್ಗವಾಗಿಯೇ ಮುಂದುವರಿಯುತ್ತದೆ.

ಆಗಸ್ಟ್ ೧೪, ೧೯೪೦, ರೈ.ಆ.ಎಲ್.ಎಸ್. ಅಮೆರಿ
ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಅವರು
ಇಂಗ್ಲೆಂಡಿನ ಕಾಮನ್ಸ್ ಸಭೆಯಲ್ಲಿ ಹೇಳಿದ ಹೇಳಿಕೆ

(iv)

ಹೆಚ್ಚಿನ ಕಾರಣಗಳನ್ನು ವಿವರವಾಗಿ ಹೇಳದೇ ನಾನು ಮಹಾಪ್ರಭುಗಳ ಸರ್ಕಾರಕ್ಕೆ ಸ್ಪಷ್ಟವಾಗಿ ಜ್ಞಾಪಿಸುವುದೇನೆಂದರೆ :

ಅ) ಭಾರತದ ರಾಷ್ಟ್ರೀಯ ಜೀವನದ ವಿವಿಧ ಪ್ರಬಲ ಅಂಗಗಳೊಂದಿಗೆ ಇರಬಹುದಾದ ದ್ವೇಷ ಅಸೂಯೆಗಳನ್ನು ಬಗೆಹರಿಸುವ ಒಪ್ಪಂದವಿಲ್ಲದೇ ಏಕಪಕ್ಷೀಯವಾದ ಅನಿರ್ಬಂಧಿತ ವಿಧಾನವನ್ನೇನಾದರೂ ಮಹಾಪ್ರಭುಗಳ ಸರ್ಕಾರ ನೀಡಿದಲ್ಲಿ :

ಆ) ಈ ಒಂದು ಅಸಾಧ್ಯ ದ್ವೇಷಮಯ ವಾತಾವರಣದಲ್ಲಿ ಯಾವುದೇ ಬದಲಾವಣೆಗಳನ್ನು ಸಂವಿಧಾನದಲ್ಲಿ ತಾವು ಹೇಳಿದ 'ರಾಷ್ಟ್ರೀಯ ಸರ್ಕಾರ'ವು ಕೇಂದ್ರ ವಿಧಾನ ಸಭೆಗೆ ಹೊಣೆಗಾರವಾಗಿರಬೇಕು.

ಈ ಒಂದು ಹೇಳಿಕೆಯ ಉದ್ದೇಶವೆಂದರೆ ಸುರಕ್ಷತೆ ಹಾಗೂ ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ನಿಮ್ನ ವರ್ಗದವರು ಭಾರತೀಯ ರಾಜ್ಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಅನಿವಾರ್ಯ.

೧೯೪೪, ೧೫ ಆಗಸ್ಟ್ ಲಾರ್ಡ್ ವೇವೆಲ್ಲರು,
ಶ್ರೀ ಗಾಂಧಿಯವರಿಗೆ ಬರೆದ ಪತ್ರದಿಂದ

೫. ಸಂಪುಟ ನಿಯೋಗದ, ಅಸ್ಪೃಶ್ಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಬಾರದು ಎಂಬ ಸಲಹೆಯು ಯಾವುದೇ ದಾಖಲೆಗಳ ಆಧಾರದಮೇಲೆ ನಿಂತಿಲ್ಲ ಹಾಗೂ ಅದು ನ್ಯಾಯ ಸಮ್ಮತವಾಗಿಲ್ಲ. ಆದರೆ ಅದಕ್ಕೆ ವಿರುದ್ಧವಾಗಿ ಕೇವಲ ಶ್ರೀ ಗಾಂಧಿ ಅವರನ್ನು ಸಂತುಷ್ಟಿಗೊಳಿಸಲೆಂದೇ ಈ ನಿರ್ಧಾರಕ್ಕೆ ಬಂದಿದ್ದಾರೆ. ಏಕೆಂದರೆ, ಅಸ್ಪೃಶ್ಯರನ್ನು ಭಾರತದ ರಾಷ್ಟ್ರೀಯ ಜೀವನದಿಂದ ಬೇರ್ಪಡಿಸುವ ಯಾವುದೇ ಸೂಚನೆಯನ್ನು ಶ್ರೀ ಗಾಂಧಿ ಅವರು ವಿರೋಧಿಸುತ್ತಾರೆ. ಅವರು ದುಂಡುಮೇಜಿನ ಪರಿಷತ್ತಿನಲ್ಲಿಯೂ ಈ ಪ್ರಸ್ತಾವನೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರು. ಆದರೆ ತಮ್ಮ ವಿರೋಧವನ್ನು ಪರಿಗಣಿಸದೇ ರ್‍ಯಾಮ್‌ಸೇ ಮೆಕ್ಡೋನಾಲ್ಡ ಅವರು ಜಾತೀಯ ತೀರ್ಪನ್ನು ಸಾರಿದಾಗ ಅದನ್ನು ಹಿಂತೆಗೆದುಕೊಳ್ಳದೇ ಹೋದಲ್ಲಿ ತಾವು ಆಮರಣ ಉಪವಾಸವನ್ನು ಮಾಡುವುದಾಗಿ ಹೇಳಿದರು. ನಂತರ ೧೯೪೫ರ ಸಿಮ್ಲಾ ಸಮ್ಮೇಳನದಲ್ಲಿ ಮಹಾಪ್ರಭುಗಳ ಸರ್ಕಾರವು ಪರಿಶಿಷ್ಟರನ್ನು ಪ್ರತ್ಯೇಕ ವರ್ಗದವರೆಂದು ಪರಿಗಣಿಸಿದ ಧೋರಣೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಸಂಪುಟ ನಿಯೋಗವು ತಮ್ಮ ಸೂಚನೆಗಳನ್ನು ಜಾರಿಗೊಳಿಸುವ ಆತುರದಲ್ಲಿ ಶ್ರೀ ಗಾಂಧಿಯವರ ಒಪ್ಪಿಗೆ ಪಡೆಯಲೆಂದೇ ತಮ್ಮ ನಿಲುವನ್ನು ಬದಲಾಯಿಸಿದರು. ಗಾಂಧಿಯವರು ತಮ್ಮ ಬೇಡಿಕೆಯ ಬೆಲೆ ಬೇಡಿದ್ದು ಅದಕ್ಕೆ ಸಂಪುಟ ಆಯೋಗವು ಬೆಲೆ ತೆತ್ತಂತಾಯಿತು. ಹೀಗೆ ತೆತ್ತ ಬೆಲೆಯು ರಾಜಕೀಯ ಕ್ಷೇತ್ರದಲ್ಲಿ ಪರಿಶಿಷ್ಟರ ಹಿತಾಸಕ್ತಿಯನ್ನು ಬಲಿತೆಗೆದುಕೊಂಡಿತು; ಅಲ್ಲದೇ ಪ್ರತ್ಯೇಕ ಜಾತಿಯವರಿಗೆಂದೇ ಮೀಸಲಾದ ಮತಕ್ಷೇತ್ರಗಳ ವ್ಯವಸ್ಥೆಯನ್ನು ತ್ಯಾಗಮಾಡಲಾಯಿತು. ಮುಂದುವರಿದು ಹೇಳಬೇಕೆಂದರೆ, ಸಂಪುಟ ನಿಯೋಗದ ಸೂಚನೆಗಳು ಶ್ರೀ ಗಾಂಧಿ ಅವರು ದುಂಡುಮೇಜಿನ ಪರಿಷತ್ತಿನಲ್ಲಿ ಪ್ರತಿಪಾದಿಸಿದ ನಿಲುವನ್ನು ಎತ್ತಿಹಿಡಿಯುವ ಕಾರ್ಯವಾಗಿದೆ. ರಾಜಕೀಯ ಉದ್ದೇಶಕ್ಕೆಂದೇ ಶ್ರೀ ಗಾಂಧಿ ಅವರು ಈ ಕೆಳಕಂಡ ಮೂರು ವರ್ಗಗಳನ್ನು ಮಾತ್ರ ಅಂಗೀಕರಿಸುವುದಾಗಿ ಹೇಳಿದ್ದರು. ೧) ಹಿಂದೂಗಳು, ೨) ಮುಸ್ಲಿಮರು ಮತ್ತು ೩) ಸಿಖ್ ಜನಾಂಗ. ಹೀಗಾಗಿ ಸಂಪುಟ ಆಯೋಗದವರು ಸಲ್ಲಿಸಿದ ಸೂಚನೆಗಳು, ಶ್ರೀ ಗಾಂಧಿಯವರು ಮಂಡಿಸಿದ ಸೂಚನೆಗಳ ನಕಲೇ ಆಗಿವೆ. ಇದಕ್ಕೆ ಬೇರೆ ವಿವರಣೆಯೇ ಇಲ್ಲ.

## III
## ಸಂಪುಟ ನಿಯೋಗವು ತಮ್ಮ ನಿಲವನ್ನು ಸಮರ್ಥಿಸಲು ನೀಡಿದ ಕಾರಣಗಳು

೬. ಅಸ್ಪೃಶ್ಯರನ್ನು ಪ್ರತ್ಯೇಕ ಅಂಗವೆಂದು ಪರಿಗಣಿಸದೇ ಇರುವುದಕ್ಕೆ ಸಂಪುಟ ನಿಯೋಗವು ಫೆಬ್ರವರಿ ೧೯೪೪ರಲ್ಲಿ ಜರುಗಿದ ಪ್ರಾಥಮಿಕ ಚುನಾವಣೆಗಳ ಫಲಿತಾಂಶವನ್ನು ಆಧಾರವಾಗಿರಿಸಿಕೊಂಡಿದೆ. ೧೮ ಜುಲೈ ೧೯೪೬ರಂದು ಜರುಗಿದ ಸಂಸತ್ತಿನ ಅಧಿವೇಶನದಲ್ಲಿ ಸಂಪುಟ ನಿಯೋಗದವರು ಈ ಕೆಳಕಂಡ ಅಂಶಗಳನ್ನು ಮನವರಿಕೆ ಮಾಡಿಕೊಡಲು ಯತ್ನಿಸಿದರು:

(i) ಅಸ್ಪೃಶ್ಯರಿಗೆಂದೇ ಮೀಸಲಾದ ಎಲ್ಲಾ ಸ್ಥಾನಗಳನ್ನು ಕಾಂಗ್ರೆಸ್ಸೇ ಗೆದ್ದುಕೊಂಡಿದೆ. ಆದುದರಿಂದ ಕಾಂಗ್ರೆಸ್ ಮಾತ್ರ ಅಸ್ಪೃಶ್ಯರನ್ನು ಪ್ರತಿನಿಧಿಸಬಲ್ಲ ಪಕ್ಷವಾಗಿದೆ. ಪರಿಸ್ಥಿತಿಯು ಹೀಗಿರುವಾಗ ಅಸ್ಪೃಶ್ಯರಿಗೆ ಬೇರೆ ಮತಕ್ಷೇತ್ರ ನಿರ್ಮಿಸುವುದು ಸೂಕ್ತವಲ್ಲ.

(ii) ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ ಮತ್ತು ನನ್ನ ಪ್ರಭಾವವು ಕೇವಲ ಬಾಂಬೆ ಹಾಗೂ ಮಧ್ಯಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆ.

### ಹುರುಳಿಲ್ಲದ ಆಧಾರಗಳು

೭. ಈ ವಿಧವಾದ ಮಾರಕ ಹೇಳಿಕೆಗಳನ್ನು ಪರಿಶೀಲಿಸಿದರೆ ಅವು ವಾಸ್ತವವಾಗಿ ಅಸಂಬದ್ಧವಾಗಿವೆ ಎಂದು ಸಾಬೀತಾಗುತ್ತವೆ. ಸಂಪುಟ ನಿಯೋಗದ ಮೊದಲನೆಯ ಮಹಾ ಅಪರಾಧವೆಂದರೆ, ಚುನಾವಣೆಗಳ ಪರಿಣಾಮವನ್ನೇ ಆಧಾರವಾಗಿ ಇರಿಸಿಕೊಂಡು, ಕಾಂಗ್ರೆಸ್ ಪಕ್ಷವೇ ಪರಿಶಿಷ್ಟ ಜನಾಂಗವನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ ಎಂದು ಭಾವಿಸಿದೆ. ಈ ಒಂದು ನಿರ್ಣಯಕ್ಕೆ ಬರುವಲ್ಲಿ ಅದು ಕೆಳಕಂಡ ಸಂಗತಿಗಳನ್ನು ಅರಿಯದೇ ಹೋದುದು ಅಪರಾಧವಾಗಿದೆ:

i) ಯುದ್ಧದ ಸಮಯದಲ್ಲಿ ಹಿಂದೂ ಮತದಾರಕ್ಷೇತ್ರವು ಯುದ್ಧಕ್ಕೆ ಯಾವ ವಿಧವಾದ ಸಹಕಾರವನ್ನು ಸಲ್ಲಿಸದೇ ಅದನ್ನು ಅವರು ಪ್ರಮುಖವಾಗಿ ವಿರೋಧಿಸಿದರು. ಒಲ್ಲದ ಮನಸ್ಸಿನಿಂದ ಹಲವರು ಸಹಕರಿಸಿರಲೂಬಹುದು. ಒಟ್ಟಾರೆ ಅವರು ಬ್ರಿಟಿಷ್ ವಿರೋಧ ಧೋರಣೆಯನ್ನೇ ಹೊಂದಿದ್ದರು. ಹಿಂದೂ ಮತದಾರರ ಮುಖವಾಣಿಯಾದ ಕಾಂಗ್ರೆಸ್ ಪಕ್ಷವು ಯುದ್ಧವಿರೋಧ ನೀತಿಯನ್ನೇ ಅನುಸರಿಸಿತು. ಬ್ರಿಟಿಷರ ಪರ ಧೋರಣೆಯನ್ನು ಅನುಸರಿಸಿದ ಪರಿಶಿಷ್ಟ ಜಾತಿಯ ಒಕ್ಕೂಟವು ಚುನಾವಣೆಯಲ್ಲಿ ಸೋಲನ್ನು ಅನುಭವಿಸಬೇಕಾಯಿತು.

ii) ಚುನಾವಣೆಗಳ ದಿನಾಂಕವನ್ನು ನಿರ್ಣಯಿಸುವ ಮುನ್ನ ಮಹಾದಂಡನಾಯಕರು ಹಾಗೂ ವೈಸ್‌ರಾಯ್‌ರು ಭಾರತ ರಾಷ್ಟ್ರೀಯ ಸೇನೆ (ಐ.ಎನ್.ಎ)ಯಲ್ಲಿ ಸೇವೆ ಸಲ್ಲಿಸಿದವರ ವಿಚಾರಣೆಯನ್ನು ಕೈಗೆತ್ತಿಕೊಂಡರು. ಕಾಂಗ್ರೆಸ್ ಪಕ್ಷವು ಇದನ್ನೇ ಚುನಾವಣೆಯ ಪ್ರಚಾರಕ್ಕೆ ಬಳಸಿಕೊಂಡಿತು. ಈ ಕೈದಿಗಳ ವಿಚಾರಣೆಯೇ ಕಾಂಗ್ರೆಸ್ಸಿಗೆ ಹೆಚ್ಚು ಫಲಕಾರಿಯಾಗಿ ಕಾಂಗ್ರೆಸ್ಸಿನ ವರ್ಚಸ್ಸನ್ನು ಅಧಿಕಗೊಳಿಸಿತು.

iii) ಚುನಾವಣೆಯ ಪ್ರಚಾರದಲ್ಲಿ 'ಭಾರತ ಬಿಟ್ಟು ತೊಲಗಿ' ಮತ್ತು ಭಾರತದ ಸ್ವಾತಂತ್ರ್ಯ ಎರಡನ್ನೇ ಪ್ರಮುಖ ಧೋರಣೆಗಳನ್ನಾಗಿಸಿಕೊಂಡು ಕಾಂಗ್ರೆಸ್ ತನ್ನ ಪ್ರಚಾರ ಕಾರ್ಯ ನಡೆಸಿತು. ಭವಿಷ್ಯ ಸಂವಿಧಾನದ ರೂಪರೇಷೆಗಳನ್ನು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಉಪಯೋಗಿಸಿದ್ದರೆ

ಅದು ಖಂಡಿತವಾಗಿ ಚುನಾವಣೆಯಲ್ಲಿ ಬಹುಮತವನ್ನು ಪಡೆಯುತ್ತಿರಲಿಲ್ಲ.

iv) ಸಂಪುಟ ನಿಯೋಗವು, ಕಾಂಗ್ರೆಸ್ ವಿರುದ್ಧ ಪರಿಶಿಷ್ಟ ಜಾತಿಯವರ ಚುನಾವಣೆ ಬಗೆಗೆ ದೂರನ್ನೇ ಗಮನಿಸಲಿಲ್ಲ. ಹಿಂದೂ ಜಾತಿಯ ಚುನಾವಣಾಧಿಕಾರಿಗಳು ನಾಮಪತ್ರಗಳನ್ನು ತಿರಸ್ಕರಿಸುವ ಮಟ್ಟಕ್ಕೆ ಹಾಗೂ ಮತದಾನ ಪತ್ರಗಳನ್ನು ನೀಡದೆ ಹೋದ ಬಗೆಗೆ ನೀಡಲಾದ ದೂರುಗಳನ್ನು ಗಮನಿಸಲಿಲ್ಲ. ಮುಂದುವರಿದು, ಸಂಪುಟ ನಿಯೋಗದವರು, ಹಿಂದೂಗಳು ಪರಿಶಿಷ್ಟ ವರ್ಗದವರಿಗೆ ನೀಡಿದ ಹಿಂಸೆ, ಹಾಗೂ ಉಗ್ರ ಬೆದರಿಕೆಯನ್ನು ಪರಿಗಣಿಸದೇ ಹೋಗಿದೆ. ಕಾಂಗ್ರೆಸ್ ವಿರುದ್ಧ ಮತದಾನ ಮಾಡುವರು ಎಂಬ ಒಂದೇ ಒಂದು ಉದ್ದೇಶದಿಂದ ಪರಿಶಿಷ್ಟ ವರ್ಗದವರಿಗೆ ನಾನಾ ವಿಧವಾದ ಹಿಂಸೆಯನ್ನು ನೀಡಲಾಯಿತು. ಆಗ್ರಾ ನಗರದಲ್ಲಿ ಅಸ್ಪೃಶ್ಯರ ೪೦ ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಬೊಂಬಾಯಿ ನಗರದಲ್ಲಿ ಒಬ್ಬ ಅಸ್ಪೃಶ್ಯರನ್ನು ಮತಗಟ್ಟೆಗೆ ಹೋಗದಂತೆ ನಿರ್ಬಂಧಿಸಲಾಯಿತು. ನಾಗಪುರದಲ್ಲಿ ಪೊಲೀಸರು ಅಸ್ಪೃಶ್ಯರ ಗುಂಪಿನ ಮೇಲೆ ಪರವಾನಗಿ ಇಲ್ಲದೆ ಗುಂಡಿನ ಮಳೆ ಕರೆದರು. ಇದು ಕೇವಲ ಅಸ್ಪೃಶ್ಯರನ್ನು ಬೆದರಿಸುವ ಏಕಮಾತ್ರ ಗುರಿಯನ್ನು ಹೊಂದಿತ್ತು. ಈ ವಿಧವಾದ ಹಿಂಸಾಚಾರವನ್ನು ಭಾರತದ ಉದ್ದಗಲಕ್ಕೂ ನಾವು ನೋಡಬಹುದಾಗಿದೆ.

೮. ಸಂಪುಟ ನಿಯೋಗವು ಈ ಎಲ್ಲಾ ಬಿಟ್ಟು, ಕೇವಲ ಕಾಂಗ್ರೆಸ್ಸಿಗೆ ಅನುಕೂಲವಾದ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಈ ಒಂದು ಹಿನ್ನೆಲೆಯಲ್ಲಿ ಜರುಗಿದ ಚುನಾವಣೆಗಳ ಫಲಿತಾಂಶವನ್ನು ಮಾನದಂಡವಾಗಿ ಪರಿಗಣಿಸಬಾರದು. ಸಂವಿಧಾನ ಸಭೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡದೇ ಹೋದ ಕಾರ್ಯ ನ್ಯಾಯಸಮ್ಮತವಲ್ಲ.

**ಸಂಪುಟ ನಿಯೋಗವು ಹುಸಿ ಅಥವಾ ದೋಷಪೂರಿತ ಕಾರಣಗಳ ಆಧಾರಗಳ ಮೇಲೆ ಹೇಗೆ ನಿರ್ಣಯ ತೆಗೆದುಕೊಂಡಿದೆ?**

೯. ಪರಿಶಿಷ್ಟರಿಗೆಂದೇ ಕಾದಿರಿಸಿದ ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದಿರಬಹುದಾದ ಸ್ಥಾನಗಳನ್ನೇ ಪರಿಶಿಷ್ಟ ಜಾತಿಯವರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಮಾನದಂಡವಾಗಿ ಪರಿಗಣಿಸಿದ್ದಾರೆ. ಈ ಮಾನದಂಡವು ಸೂಕ್ತವಾದುದಲ್ಲ. ಏಕೆಂದರೆ ಕೊನೆಯ ಹಂತದ ಚುನಾವಣೆಯ ಫಲಿತಾಂಶಗಳು ಪರಿಶಿಷ್ಟ ಜಾತಿಯವರ ಕೈಗೆ ಎಟುಕದ ಸಂಗತಿಯಾಗಿತ್ತು. ಪೂನಾ ಒಪ್ಪಂದದಂತೆ ಕೊನೆಯ ಹಂತದ ಚುನಾವಣೆಗಳು ಕೇವಲ ಹಿಂದೂ ಬಹುಮತದ ಆಧಾರವನ್ನೇ ಅವಲಂಬಿಸಿವೆ. ಸಂಪುಟ ನಿಯೋಗವು ಅನುಸರಿಸಬೇಕಾದ ನಿಜವಾದ ನೆಲೆಗಟ್ಟು ಎಂದರೆ, ಅಸ್ಪೃಶ್ಯರು ಹೇಗೆ ಮತ ಚಲಾಯಿಸಿದ್ದಾರೆ? ಹಾಗೂ ಕಾಂಗ್ರೆಸ್ ಪರ ಹಾಗೂ ಕಾಂಗ್ರೆಸ್ ವಿರೋಧ ಎಷ್ಟು ಮತಗಳು ಚಲಾವಣೆಯಾಗಿವೆ ಎಂಬ ಸಂಗತಿಯುನ್ನು ಆಧಾರವಾಗಿಟ್ಟುಕೊಳ್ಳಬೇಕಾಗಿತ್ತು. ಈ ಒಂದು ಅಂಶವನ್ನು ಕೇವಲ ಪ್ರಾಥಮಿಕ ಚುನಾವಣೆಗಳ ಮೂಲಕ ಅರಿಯಬಹುದೇ ಹೊರತು ಅಂತಿಮ ಚುನಾವಣೆಗಳ ಫಲಿತಾಂಶದಿಂದಲ್ಲ. ಏಕೆಂದರೆ ಪ್ರಾಥಮಿಕ ಚುನಾವಣೆಗಳಲ್ಲಿ ಮಾತ್ರ ಅಸ್ಪೃಶ್ಯರು ಮತ ಚಲಾಯಿಸುತ್ತಾರೆ. ಹೀಗಾಗಿ ಸಂಪುಟ ನಿಯೋಗವು ಗಣನೆಗೆ ತೆಗೆದುಕೊಂಡಿರುವ ಮಾನದಂಡವು ಸೂಕ್ತವಾದುದಲ್ಲ ಮತ್ತು ಸತ್ಯಾಂಶಗಳಿಂದ ಕೂಡಿಯೂ ಇಲ್ಲ. ಏಕೆಂದರೆ ಪ್ರಾಥಮಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಪರವಾಗಿ ಕೇವಲ ೨೮% ಮತಗಳು ದೊರಕಿದ್ದರೆ, ಅದಕ್ಕೆ ವಿರೋಧವಾಗಿ ೭೨% ಮತಗಳು ಬಿದ್ದಿರುವುದನ್ನು ನಾವು ಗಮನಿಸಬೇಕು.

೧೦. ಅಸ್ಪೃಶ್ಯರು ಕಾಂಗ್ರೆಸ್ಸಿನಿಂದ ಬೇರೆ ಎಂದು ಭಾವಿಸಿದ್ದರೆ, ಪ್ರಾಥಮಿಕ ಚುನಾವಣೆಯ ಸಮಯದಲ್ಲಿ ೧೫೧ ಸ್ಥಾನಗಳಿಗೆ ಸ್ಪರ್ಧಿಸದೇ ಕೇವಲ ೪೩ ಸ್ಥಾನಗಳಿಗೆ (ಅದೂ ಭಾರತಾದ್ಯಂತ) ಮಾತ್ರ ಸ್ಪರ್ಧಿಸಿದ್ದೇಕೆ? ಮಿಕ್ಕ ೧೦೮ ಸ್ಥಾನಗಳಿಗೇಕೆ ಸ್ಪರ್ಧಿಸದೇ ಹೋದರು? ಈ ಒಂದು ವಾದವು ಅಸಂಬದ್ಧ ಎಂದು ಕೆಳಗಿನ ವಿವರಗಳಿಂದ ತಿಳಿಯಬಹುದು:

i) ಪ್ರಾಥಮಿಕ ಚುನಾವಣೆಗಳು ಕಡ್ಡಾಯವಾಗಿರಲಿಲ್ಲ. ಅದು ಒಂದು ಸ್ಥಾನಕ್ಕೆ ೪ ಉಮೇದುವಾರರಿಗಿಂತ ಹೆಚ್ಚು ಸ್ಪರ್ಧಾಳುಗಳಿದ್ದಾಗ ಮಾತ್ರ ಕಡ್ಡಾಯವಾಗುತ್ತದೆ. ಮುಂದುವರಿದು ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಿದವರು ಮತ್ತೊಮ್ಮೆ ಕೊನೆಯ ಹಂತದ ಚುನಾವಣೆಗಳಲ್ಲಿಯೂ ಸ್ಪರ್ಧಿಸಬೇಕಾಗುತ್ತದೆ ಎಂಬ ಅಂಶದ ಬಗೆಗೆ ತಿಳಿವಳಿಕೆ ಇರಲಿಲ್ಲ. ಅಲ್ಲದೆ ಅಸ್ಪೃಶ್ಯರು ಎರಡು ಚುನಾವಣೆಗಳ ವೆಚ್ಚವನ್ನು ಭರಿಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ. ಆದುದರಿಂದ ಅವರು ನಿರುತ್ಸಾಹಗೊಂಡರು. ಕೇವಲ ೪೩ ಸ್ಥಾನಗಳಿಗೆ ಸ್ಪರ್ಧಿಸಿದ್ದನ್ನೇ ಆಧಾರವಾಗಿರಿಸಿಕೊಂಡಿರುವುದು ಸಮಂಜಸವಲ್ಲ. ಇದನ್ನೇ ಮುಂದೆ ಮಾಡಿ, ಪರಿಶಿಷ್ಟ ವರ್ಗದವರು ಕಾಂಗ್ರೆಸ್ಸಿನಿಂದ ಬೇರೆ ಅಲ್ಲ ಎಂಬ ವಾದದಲ್ಲಿ ಹುರುಳಿಲ್ಲ.

ii) ಪ್ರಾಥಮಿಕ ಚುನಾವಣೆಯಲ್ಲಿ ಕಾಂಗ್ರೆಸ್ ಏಕೆ ನಾಲ್ಕು ಮಂದಿ ಉಮೇದುವಾರರನ್ನು ಸ್ಪರ್ಧೆಗೆ ನಿಲ್ಲಿಸಲಿಲ್ಲ ಎಂದು ಕೇಳಬಹುದಲ್ಲವೇ? ಕಾಂಗ್ರೆಸ್ ಅಸ್ಪೃಶ್ಯರನ್ನೇ ಪ್ರತಿನಿಧಿಸಿದ್ದಲ್ಲಿ ಅದು ತನ್ನ ಪಕ್ಷದ ಟಿಕೆಟಿನ ಆಧಾರದ ಮೇಲೆ ಪ್ರತಿಯೊಂದು ಸ್ಥಾನಕ್ಕೂ ೪ಕ್ಕಿಂತ ಹೆಚ್ಚು ಉಮೇದುವಾರರನ್ನು ೧೫೧ ಮತದಾರರ ಕ್ಷೇತ್ರದಲ್ಲಿ ಸ್ಪರ್ಧಿಸಿ ಬೇರೆ ಎಲ್ಲಾ ಪಕ್ಷಗಳನ್ನು ಪರಾಭವಗೊಳಿಸಬಹುದಾಗಿತ್ತು. ಆದರೆ ಕಾಂಗ್ರೆಸ್ ಈ ಕಾರ್ಯವನ್ನು ಮಾಡಲಿಲ್ಲ. ಆದರೆ ೪೩ ಸ್ಥಾನಗಳಲ್ಲಿ ಮಾತ್ರ ಕಾಂಗ್ರೆಸ್ ೪ ಉಮೇದುವಾರರಲ್ಲಿ ಕೇವಲ ಒಬ್ಬ ಉಮೇದುವಾರ, ಅದೂ ಕೊನೆಯ ಹಂತದಲ್ಲಿ ಹಿಂದೂಮತಗಳ ಬಲದಿಂದ ಜಯಗಳಿಸುವ ಉದ್ದೇಶದಿಂದ ಸ್ಪರ್ಧಿಸಿತು. ಈ ಒಂದು ಕ್ರಮದಿಂದ ಕಾಂಗ್ರೆಸ್ಸಿಗೆ ಅಸ್ಪೃಶ್ಯರ ಬೆಂಬಲವಿರಲಿಲ್ಲ ಎಂಬ ಸಂಗತಿ ತಿಳಿದುಬರುತ್ತದೆ.

iii) ೧೯೩೭ರಲ್ಲಿ ಮೊದಲ ಬಾರಿ ಅಸ್ಪೃಶ್ಯರಿಗೆ ಮತದಾನದ ಹಕ್ಕು ದೊರೆಯಿತು. ೧೯೩೭ರ ನಂತರವೇ ಅಸ್ಪೃಶ್ಯರು ಚುನಾವಣೆಯನ್ನು ಸಂಘಟಿಸಲು ಆರಂಭಿಸಿದರು. ಕೇವಲ ಚುನಾವಣೆಗಳಲ್ಲಿ ಮಾತ್ರ ಪರಿಶಿಷ್ಟ ವರ್ಗದ ಒಕ್ಕೂಟದವರಿಗಿಂತ ಅಧಿಕ ಸ್ಥಾನಗಳನ್ನು ಗಳಿಸಿದ ಮಾತ್ರಕ್ಕೆ ಕಾಂಗ್ರೆಸ್, ಪರಿಶಿಷ್ಟ ವರ್ಗವನ್ನು ಪ್ರತಿನಿಧಿಸುತ್ತದೆ ಎಂದು ಹೇಳುವುದು ಅಪರಾಧವಾದೀತು. ಹೀಗಾಗಿ ಸಂಪುಟ ನಿಯೋಗವು ಕಾಂಗ್ರೆಸ್ ಹಾಗೂ ಪರಿಶಿಷ್ಟ ಜನಾಂಗ ಒಕ್ಕೂಟದ ಬಲಾಬಲಗಳನ್ನು ನಿರ್ಣಯಿಸುವಾಗ ಪರಿಶಿಷ್ಟ ವರ್ಗದವರ ಬಗೆಗೆ ಉದಾರ ಧೋರಣೆಯನ್ನು ಅವಲಂಬಿಸಬೇಕಾಗಿತ್ತು. ಅದರ ಬದಲು ಕೇವಲ ಚುನಾವಣೆಗಳ ಫಲಿತಾಂಶವನ್ನೇ ಆಧಾರವಾಗಿರಿಸಿಕೊಂಡಿದ್ದು ಸಾಧುವಲ್ಲ.

ನಿಯೋಗವು ತಮ್ಮ ನಿರ್ಣಯ ನ್ಯಾಯಸಮ್ಮತವೆಂದು ಹೇಳಿ ನೀಡಿದ ಕಾರಣಗಳು ನಿರರ್ಥಕವಾಗಿವೆ.

೧೧. ನಿಯೋಗದ ಸದಸ್ಯರ ಹೇಳಿಕೆಯಂತೆ ಡಾ॥ ಅಂಬೇಡ್ಕರರ ಪ್ರಭಾವವು ಕೇವಲ ಬೊಂಬಾಯಿ ಹಾಗೂ ಮಧ್ಯಪ್ರಾಂತಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದು ನಿರಾಧಾರವಾಗಿದೆ. ಪರಿಶಿಷ್ಟ ಜಾತಿ ಒಕ್ಕೂಟವು ಬೇರೆ ಪ್ರಾಂತಗಳಲ್ಲಿಯೂ ಕಾರ್ಯನಿರತವಾಗಿದ್ದು, ಜಯಗಳಿಸಿದೆ. ಆದರೆ ಬೊಂಬಾಯಿ

ಹಾಗೂ ಮಧ್ಯಪ್ರಾಂತಗಳಿಗೆ ಹೋಲಿಸಿದಲ್ಲಿ ಅದು ಅಲ್ಪ ಪ್ರಮಾಣವಾದದ್ದಾಗಿರಬಹುದು. ಮುಂದುವರಿದು ಆಯೋಗವು, ಡಾ॥ ಅಂಬೇಡ್ಕರರು ಸಂವಿಧಾನ ಸಭೆಗೆ ಚುನಾವಣೆ ಹೊಂದಿದ ಅಂಶವನ್ನೇ ಮರೆತಂತೆ ತೋರುತ್ತದೆ. ಅವರು ಬಂಗಾಲ ಪ್ರಾಂತದಿಂದ ಚುನಾವಣೆಗೊಂಡು, ಕಾಂಗ್ರೆಸ್ ನಾಯಕ ಶರತ್‌ಚಂದ್ರ ಬೋಸರಿಗಿಂತ ಅಧಿಕ ಮತಗಳಿಸಿದ್ದಾರೆ. ಡಾ॥ ಅಂಬೇಡ್ಕರರ ಪ್ರಭಾವವು ಕೇವಲ ಬೊಂಬಾಯಿ ಹಾಗೂ ಮಧ್ಯಪ್ರಾಂತಗಳಿಗೆ ಮಾತ್ರವೇ ಸೀಮಿತವಾಗಿದ್ದಲ್ಲಿ ಬಂಗಾಳದ ಮತಕ್ಷೇತ್ರದಿಂದ ಆಯ್ಕೆ ಹೊಂದಲು ಸಾಧ್ಯವೇ? ಅಲ್ಲದೆ, ಗಮನಿಸಬೇಕಾದ ಸಂಗತಿ ಎಂದರೆ, ಬಂಗಾಳ ಪ್ರಾಂತೀಯ ಶಾಸನಸಭೆಯಲ್ಲಿ ೩೦ ಸ್ಥಾನಗಳನ್ನು ಪರಿಶಿಷ್ಟ ಜಾತಿಯರಿಗೆಂದೇ ಕಾದಿರಿಸಲಾಗಿತ್ತು. ೮೦ ಸ್ಥಾನಗಳಲ್ಲಿ ೨೮ ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದವರೇ ಸ್ಪರ್ಧಿಸಿದ್ದರು ಹಾಗೂ ಜಯಗಳಿಸಿದರು. ತಮ್ಮ ಪಕ್ಷಕ್ಕೆ ಸೇರಿದ ಈರ್ವರಲ್ಲಿ ಒಬ್ಬರು ಅಸ್ವಸ್ಥರಾಗಿದ್ದು ಆ ದಿನ ಚುನಾವಣೆಯಲ್ಲಿ ಭಾಗವಹಿಸದೇ ಹೋದರೂ ಅಂಬೇಡ್ಕರರು ಚುನಾವಣೆಯಲ್ಲಿ ಹೆಚ್ಚಿನ ಮತಗಳಿಸಿ ಮೊದಲಿಗರಾಗಿ ಜಯಗಳಿಸಿದ್ದಾರೆ. ಬಹುಶಃ ಬಂಗಾಳ ಕಾಂಗ್ರೆಸ್ಸಿನ ಬೆಂಬಲ ಹೊಂದಿದ ಪರಿಶಿಷ್ಟ ಜಾತಿಯವರ ಬೆಂಬಲವಿಲ್ಲದೇ ಜಯಗಳಿಸಲು ಸಾಧ್ಯವಿಲ್ಲ ಎಂದಂತಾಯ್ತು. ಮುಂದುವರಿದು ಬಂಗಾಳದ ಪರಿಶಿಷ್ಟ ಜಾತಿಯವರು, ಅಂಬೇಡ್ಕರರ ಜಾತಿಗೆ ಸೇರಿದವರಲ್ಲ ಎಂಬುದನ್ನು ಗಮನಿಸಬೇಕು. ಆದರೆ ಅವರು ಅಂಬೇಡ್ಕರರನ್ನು ತಮ್ಮ ನಾಯಕನೆಂದು ಪರಿಗಣಿಸಿರುವುದು ಗಮನಾರ್ಹ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಲ್ಲಿ ನಿಯೋಗದ ಹೇಳಿಕೆ ಸಮಂಜಸವಲ್ಲವೆಂಬುದು ಸಾಬೀತಾಗುತ್ತದೆ.

೧೨. ಸಂವಿಧಾನ ಸಭೆಯಲ್ಲಿ ಸಮಾನತೆಯನ್ನು ಎತ್ತಿಹಿಡಿಯುವ ಒಂದೇ ಒಂದು ಉದ್ದೇಶದಿಂದ ಅಸ್ಪೃಶ್ಯರ, ಪ್ರಾತಿನಿಧ್ಯವನ್ನು ಚುನಾವಣೆಯ ಅಂತಿಮ ಸಮಯದಲ್ಲಿ ಬೇರೆ ಜನಾಂಗದವರಂತೆ ಅವರಿಗೂ ಅವಕಾಶ ನೀಡಲಾಗಿದೆ ಎಂದೇ ಸಂಪುಟ ನಿಯೋಗದ ಹೇಳಿಕೆ. ಈ ಒಂದು ವಿಶೇಷ ಹೇಳಿಕೆಯ ಹಿಂದೆ ಹುರುಳಿಲ್ಲ. ಮುಸ್ಲಿಮ್, ಭಾರತೀಯ ಕ್ರಿಶ್ಚಿಯನ್ನರು ಹಾಗೂ ಸಿಖ್ ಪಂಥದವರು ಬೇರೆ ಮತದಾನ ಕ್ಷೇತ್ರಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ಸಂಗತಿ ನಿಯೋಗಕ್ಕೆ ತಿಳಿದ ವಿಷಯವೇ ಆಗಿದ್ದರೂ ಪರಿಶಿಷ್ಟ ವರ್ಗದವರಿಗೆ ಬೇರೆ ಮತದಾರ ಕ್ಷೇತ್ರಗಳಿರಲಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಆಯೋಗದವರು ಅಂತಿಮ ಚುನಾವಣೆಗಳ ಫಲಿತಾಂಶವನ್ನು, ಸಮಾನತೆಯ ನೆಪದಲ್ಲಿ ಕೈಗೆತ್ತಿಕೊಂಡು ಸಂವಿಧಾನ ಸಭೆಯಲ್ಲಿ ಅಸ್ಪೃಶ್ಯರಿಗೆ ಅವಕಾಶ ನೀಡಿದ್ದಾರೆ. ಈ ಕ್ರಮವು ಅನಿವಾರ್ಯವಾಗಿತ್ತು. ಏಕೆಂದರೆ ಸಂಸತ್ತಿನ ಚರ್ಚೆಗಳಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರ ಹೇಳಿಕೆಯಂತೆ, ಪೂನಾ ಒಪ್ಪಂದದಂತೆ ಅಸ್ಪೃಶ್ಯರಿಗೆ ನೀಡಿದ ಸ್ಥಾನ ಅಸಮಾನತೆಯಿಂದ ಕೂಡಿತ್ತು. ಆದರೆ ಇದನ್ನೇ ಮಾನದಂಡವನ್ನಾಗಿ ನಿಯೋಗವು ಏಕೆ ಸ್ವೀಕರಿಸಲಿಲ್ಲ?

## IV

### ಕಾದಿರುವ ಅನಾಹುತದಿಂದ ಅಸ್ಪೃಶ್ಯರನ್ನು ಹೇಗೆ ಸಂರಕ್ಷಿಸಬೇಕು?

೧೩. ಸಂಪುಟ ನಿಯೋಗವು ಸಂವಿಧಾನ ಸಭೆಯನ್ನು ರಚಿಸುವ ಮೂಲಕ ಅಸ್ಪೃಶ್ಯರನ್ನು ಹಿಂದೂ ಜಾತಿಗಳ ಅಧಿಕ ಸಂಖ್ಯಾತರಿಂದ ಕೂಡಿದ ಸಭೆಯ ಕಪಿಮುಷ್ಟಿಯಲ್ಲಿ ಸಿಲುಕಿಸಿದೆ. ಆದರೆ ಮಹಾಪ್ರಭುಗಳ ಘನ ಸರ್ಕಾರವು ಪೂನಾ ಒಪ್ಪಂದಲ್ಲಿ ತಿಳಿಸಿದಂತೆ ಜಾತೀಯ ಅಥವಾ ಮತೀಯ ಮತದಾರ ಕ್ಷೇತ್ರದ ಕ್ರಮವನ್ನು ಶ್ರೀ ಗಾಂಧಿ ಅವರ ಆಮರಣ ಉಪವಾಸದ ಬೆದರಿಕೆಯಿಂದ ಕೈಬಿಟ್ಟಿರುವುದು ಶೋಚನೀಯ. ಇದರಿಂದಾಗಿ ಹಿಂದೂಗಳು ಯಾವುದೇ ವಿಧವಾದ ಸೂತ್ರವನ್ನು ವಿರೋಧಿಸುವಲ್ಲಿ ಸಂದೇಹವೇ ಇಲ್ಲ. ಸಂಪುಟ ನಿಯೋಗದ ಬದಲಾದ ನಿಲವನ್ನು ವಿರೋಧಿಸಿದಾಗ ಅವರು ಹೇಳುವುದೇನೆಂದರೆ, ಅಲ್ಪಸಂಖ್ಯಾತರ

ರಕ್ಷಣೆಗೆಂದೇ ಅಲ್ಪಸಂಖ್ಯಾತರ ಸಲಹಾ ಸಮಿತಿಯನ್ನು ರಚಿಸಲಾಗಿದ್ದು ಅದು ಅವರ ಹಿತಾಸಕ್ತಿಯನ್ನು ರಕ್ಷಿಸುತ್ತದೆ. ಆದರೆ ಸಲಹಾ ಸಮಿತಿಗೆ ಸಂವಿಧಾನ ರಚನೆ ಹಾಗೂ ಅದಕ್ಕೆ ನೀಡಿರಬಹುದಾದ ಅಧಿಕಾರವನ್ನು ನೋಡಿದರೆ ಅದು ಯಾವ ಕೆಲಸಕ್ಕೂ ಬಾರದಷ್ಟು ಹೀನಾಯ ಮಟ್ಟದಲ್ಲಿದೆ ಎಂಬುದು ಮನವರಿಕೆಯಾಗುತ್ತದೆ.

i) ಅದು ತನ್ನ ರಚನೆಯಲ್ಲಿ ಸಂವಿಧಾನ ಸಭೆಯ ಸವಕಲು ಪ್ರತಿಬಿಂಬವಾಗಿದೆ. ಏಕೆಂದರೆ ಸಂವಿಧಾನ ಸಭೆಯಂತೆ ಇಲ್ಲಿಯೂ ಹಿಂದೂಗಳೇ ಬಹುಮತ ಹೊಂದಿದ್ದಾರೆ.

ii) ವಾಸ್ತವಿಕವಾಗಿ ಸಂವಿಧಾನ ಸಭೆ ಮತ್ತು ಸಲಹಾ ಸಮಿತಿಯಲ್ಲಿ ಹಲವು ಅಸ್ಪೃಶ್ಯರು ಇರಲೂಬಹುದು. ಆದರೆ ಅವರೆಲ್ಲರೂ ಹಿಂದೂ ಬಹುಮತಗಳಿಂದ ಚುನಾಯಿತರಾದುದರಿಂದ ಅಸ್ಪೃಶ್ಯರ ಹಿತಾಸಕ್ತಿಯನ್ನು ರಕ್ಷಿಸಲು ಅಸಹಾಯರಾಗಿದ್ದಾರೆ ಎಂದೇ ಹೇಳಬಹುದು. ಏಕೆಂದರೆ ಅವರು ಹಿಂದೂ ಬಹುಮತದ ಕೀಟಗಳಾಗಿದ್ದಾರೆ.

iii) ಅಲ್ಪಸಂಖ್ಯಾತರ ರಕ್ಷಣೆಯ ಬಗೆಗೆ ಸಲಹಾ ಸಮಿತಿಯ ನಿರ್ಣಯವನ್ನು ಸಾಮಾನ್ಯ ಬಹುಮತದಿಂದ ತೀರ್ಮಾನಿಸಿದಾಗ ಅದು ಕೇವಲ ಹಿಂದೂ ಮತಗಳ ಬಹುಮತವನ್ನೇ ಅಸ್ಪೃಶ್ಯರ ಮೇಲೆ ಹೇರಿದಂತಾಗುತ್ತದೆ.

iv) ಸಲಹಾ ಸಮಿತಿಯ ನಿರ್ಣಯಗಳು ಕೇವಲ ಸಲಹಾ ರೂಪದ್ದಾಗಿದ್ದು ಆ ನಿರ್ಣಯಗಳು ಸಂವಿಧಾನ ಸಭೆಯ ಬದ್ಧವಾಗಿರಬೇಕಿಲ್ಲ.

೧೪. ಸಲಹಾ ಸಮಿತಿಯ ರಚನೆ ಒಂದು ಕಪಟ ನಾಟಕವಾಗಿದೆ. ಅದು ಹಿಂದೂ ಬಹುಮತದ ಕುತಂತ್ರವಾಗಿದ್ದು, ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಕಾಪಾಡಲಾರದು. ಹಿಂದೂ ಬಹುಸಂಖ್ಯಾತರು ಅಸ್ಪೃಶ್ಯ ಅಲ್ಪಸಂಖ್ಯಾತರನ್ನು ಬಹಿಷ್ಕರಿಸಿದ್ದು, ತಮ್ಮ ಕುತಂತ್ರವನ್ನು ಸಾಧಿಸಿಕೊಳ್ಳಲು, ಅಲ್ಪಸಂಖ್ಯಾತರಿಗೆ ದೊರೆಯಬಹುದಾದ ರಾಜಕೀಯ ರಕ್ಷಣೆಯನ್ನು ನಿರಾಕರಿಸಬಹುದು. ಈ ಒಂದು ಧೋರಣೆಯ ಸೂಚನೆ ದಿನಾಂಕ ೨೫ ಜೂನ್ ೧೯೪೬ ರಂದು ಕಾಂಗ್ರೆಸ್ ಬರೆದಿರುವ ಪತ್ರದಿಂದ ವ್ಯಕ್ತವಾಗುತ್ತದೆ(ಸಂ. ೨೧ ಕ ೬೮೬೧). ಈ ಪತ್ರದಲ್ಲಿಯ ಹೇಳಿಕೆಯಂತೆ ಅಸ್ಪೃಶ್ಯರು ಅಲ್ಪಸಂಖ್ಯಾತರಲ್ಲವೆಂದೇ ಕಾಂಗ್ರೆಸ್ಸಿನ ವಾದವಾಗಿದೆ. ಈ ನಿಲುವು ತುಂಬಾ ಆಶ್ಚರ್ಯವಾಗಿದೆ. ಕಾರಣ, ಶ್ರೀ ಗಾಂಧಿಯವರೇ ತಮ್ಮ ೨೧ ಅಕ್ಟೋಬರ್ ೧೯೩೯ರ ಹರಿಜನ ಪತ್ರಿಕೆಯಲ್ಲಿ ಹೇಳಿದಂತೆ ಭಾರತದಲ್ಲಿಯೇ ನಿಜವಾದ ಅಲ್ಪಸಂಖ್ಯಾತರೆಂದರೆ ಅಸ್ಪೃಶ್ಯರು. ಹೀಗಾಗಿ ಕಾಂಗ್ರೆಸ್ಸಿನ ಹೇಳಿಕೆಯೇ ತಿರುಗುಮುರುಗಾಗಿದೆ. ಏಕೆಂದರೆ ಅದು ಅವರನ್ನು ಅಲ್ಪಸಂಖ್ಯಾತರೆಂದೇ ಪರಿಗಣಿಸಿದೆ. ಈ ವಿಧವಾದ ಕುತಂತ್ರದ ಹಿಂದೆ ಅಡಗಿರಬಹುದಾದ ಮರ್ಮವನ್ನು ಅರಿಯುವುದು ಕಷ್ಟ. ಕಾಂಗ್ರೆಸ್ ಪರಿಶಿಷ್ಟ ವರ್ಗದವರನ್ನು ಅಲ್ಪಸಂಖ್ಯಾತರಲ್ಲವೆಂದು ನಿರ್ಣಯಿಸಿದಾಗ ಸಂವಿಧಾನ ಸಭೆಯಲ್ಲಿ ಅಸ್ಪೃಶ್ಯರಿಗೆ ರಕ್ಷಣೆ ನೀಡದೇ ಹೋಗಲೂಬಹುದು. ಹೀಗಾಗಿ ಸಲಹಾ ಸಮಿತಿಯೂ ಕೂಡಾ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವಲ್ಲಿ ವಿಫಲವಾಗಬಹುದು.

೧೫. ಅಸ್ಪೃಶ್ಯರ ಸ್ಥಾನವು ಕುಂಠಿತಗೊಳ್ಳದಂತೆ ಸಂಸತ್ತು ವಿಶೇಷ ಆಸಕ್ತಿ ವಹಿಸಬೇಕು ಈ ಸಂಸತ್ತು ಕೇವಲ ವಾಗ್ದಾನದ ದೃಷ್ಟಿಯಿಂದ ಮಾತ್ರವಲ್ಲದೇ ಸಂವಿಧಾನ ಸಭೆಯ ಕರಡಿಗೆ ತನ್ನ ಅಂಗೀಕಾರ ನೀಡುವ ದೃಷ್ಟಿಯಿಂದ ಕಾಳಜಿ ವಹಿಸಬೇಕಾಗಿದೆ.

೧೬. ಸಂಸತ್ತು ಏನು ಮಾಡಬಹುದು? ಅಸ್ಪೃಶ್ಯರು ನಡುಗಾಲದ ಸರ್ಕಾರದ ರಚನೆಯಲ್ಲಿ ತಮಗಾದ ಅನ್ಯಾಯವನ್ನು ಪರಿಹರಿಸಿದರೆ ಉತ್ತಮ ಎಂದು ಬಯಸುತ್ತಾರೆ. ಅಲ್ಲದೆ ತಮಗೆ ನಿಗದಿತ ಕೋಟಾವನ್ನು

ಭರ್ತಿ ಮಾಡುವ ಅವಕಾಶವನ್ನು ನೀಡಬೇಕು. ಮುಂದುವರಿದು ಆಡಳಿತ ಮಂಡಳಿ (Executive Council)ಯಲ್ಲಿ ನಾಮಕರಣಹೊಂದುವ ಅಧಿಕಾರವನ್ನೂ ನೀಡಬೇಕು. ಈ ಎಲ್ಲಾ ಕೋರಿಕೆಗಳು ೧೯೩೫ರ ಸಿಮ್ಲಾ ಸಮ್ಮೇಳನದಂತೆ ಅಸ್ಪೃಶ್ಯರು ಹೊಂದಿರುವ ಹಕ್ಕುಗಳಾಗಿವೆ. ಆದರೆ ಈ ದಿಶೆಯಲ್ಲಿ ಆಗಿರುವ ತಪ್ಪನ್ನು ಈಗ ತಿದ್ದಲು ಆಗದೇ ಹೋಗಬಹುದು. ಆದರೆ ಪರಿಸ್ಥಿತಿ ಬದಲಾಗಿ ಸರ್ಕಾರದಲ್ಲಿ ಬದಲಾವಣೆಗಳೇನಾದರೂ ಆದಲ್ಲಿ ಸಂಸತ್ತು ಈಗ ಆಗಿರುವ ತಪ್ಪನ್ನು ತಿದ್ದಿಕೊಳ್ಳುವಂತೆ ಮಹಾಪ್ರಭುಗಳ ಸರಕಾರವನ್ನು ಒತ್ತಾಯಿಸಬಹುದು.

೧೭. ಹಿಂದೂ ಜಾತಿವಾದಿಗಳ ಅಧಿಕ ಬಹುಮತ ಹೊಂದಿದ ಸಂವಿಧಾನ ಸಭೆಗೆ ಅಸ್ಪೃಶ್ಯರಿಗೆ ಆಗಿರುವ ಅನ್ಯಾಯವನ್ನು ತಿದ್ದಿಕೊಳ್ಳಲು ಈಗಲೂ ಅವಕಾಶವಿದೆ.

i) ಮಹಾಪ್ರಭುಗಳ ಘನ ಸರ್ಕಾರವು ಪರಿಶಿಷ್ಟ ಜನಾಂಗದವರು ಅಲ್ಪಸಂಖ್ಯಾತರೆಂದು ಸಾರುವಂತೆ ಒತ್ತಾಯಿಸುವುದು. ಈ ಒಂದು ಕ್ರಮ ಅನಿವಾರ್ಯ. ಏಕೆಂದರೆ ಜೂನ್ ೨೫, ೧೯೪೬ರ ಪತ್ರದಲ್ಲಿ ಪರಿಶಿಷ್ಟರು ಅಲ್ಪಸಂಖ್ಯಾತರಲ್ಲವೆಂದೇ ಪರಿಗಣಿಸಿದೆ(ಐಟಮ್ ೨೧–ಸಿಎಮ್‌ಡಿ ೬೮೬೧). ಮುಂದುವರಿದು ವೈಸ್‌ರಾಯ್‌ರವರು ೧೯೪೬ರ ಜೂನ್ ೨೭ರಂದು ಕಾಂಗ್ರೆಸ್ ಪಕ್ಷಕ್ಕೆ ನೀಡಿದ ಉತ್ತರದಲ್ಲಿ ಕಾಂಗ್ರೆಸ್ಸಿನ ನಿಲುವನ್ನು ಖಂಡಿಸದೇ ಹೋಗಿದ್ದಾರೆ. ಹೀಗಾಗಿ ಸರ್ಕಾರವು ಈ ಸಂಗತಿಯ ಬಗೆಗೆ ಒತ್ತಾಯ ಹೇರದೇ ಹೋದಲ್ಲಿ ಅಸ್ಪೃಶ್ಯರು ಎರಡು ವಿಧವಾಗಿ ಹಾನಿಗೊಳಗಾಗುತ್ತಾರೆ:

ಅ) ಹಿಂದೂಗಳ ಬಹುಮತ ಹೊಂದಿದ ಸಂವಿಧಾನ ಸಭೆಯು ಅಲ್ಪಸಂಖ್ಯಾತರ ಹಕ್ಕುಗಳನ್ನು ಮನ್ನಿಸದೇ ಹೋಗಬಹುದು.

ಆ) ಅಸ್ಪೃಶ್ಯರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುವುದರಲ್ಲಿ ತಮ್ಮ ಜವಾಬ್ದಾರಿಯೇನೂ ಇಲ್ಲವೆಂದು ಮಹಾಪ್ರಭುಗಳ ಘನ ಸರ್ಕಾರವು ಹೇಳಬಹುದು.

ii) ಸಂವಿಧಾನ ಸಭೆಯಿಂದ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವಲ್ಲಿ ರಚನೆ ಮಾಡಿರಬಹುದಾದ ವಿಧೇಯಕಗಳು ಸೂಕ್ತ ಹಾಗೂ ಸಮಂಜಸವೇ ಎಂಬುದನ್ನು ಪರಿಶೀಲಿಸಲು ಒಂದು ಆಯೋಗವನ್ನೇ ನೇಮಿಸುವಂತೆ ಮಹಾಪ್ರಭುಗಳ ಘನ ಸರ್ಕಾರವನ್ನು ಒತ್ತಾಯಿಸಬೇಕು.

ಅ) "ಸಂವಿಧಾನ ಸಭೆಯು ತನ್ನ ಕಾರ್ಯಕಲಾಪಗಳನ್ನು ಕೊನೆಗೊಳಿಸಿದ ನಂತರ ಮಹಾಪ್ರಭುಗಳ ಘನ ಸರ್ಕಾರವು ಭಾರತಕ್ಕೆ ಸಾರ್ವಭೌಮ ಅಧಿಕಾರವನ್ನು ಹಸ್ತಾಂತರಿಸುವಲ್ಲಿ ಆವಶ್ಯಕವೆನಿಸಿದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಂತೆ ಸಲಹೆ ಮಾಡುವುದು. ಈ ದಿಶೆಯಲ್ಲಿ ಎರಡು ಪ್ರಮುಖ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಅವು ಏನೆಂದರೆ, ಅಲ್ಪಸಂಖ್ಯಾತರಿಗೆ ರಕ್ಷಣೆ ಮತ್ತು ಮಹಾಪ್ರಭುಗಳ ಸರ್ಕಾರದೊಂದಿಗೆ ಈ ಬಗೆಗೆ ಅಧಿಕಾರ ಹಸ್ತಾಂತರಕ್ಕೆ ಮುನ್ನ ಒಪ್ಪಂದಮಾಡಿಕೊಳ್ಳುವುದು." (ಪ್ಯಾರಾ ೨೨ರ ಹೇಳಿಕೆ)
ಈ ಹೇಳಿಕೆಯ ಹಿಂದೆ ಇರಬಹುದಾದ ಉದ್ದೇಶ ಸ್ಪಷ್ಟವಾಗದಿರುವುದುದರಿಂದ ಸರ್ಕಾರವು ಅದನ್ನು ವಿವರಿಸುವಂತೆ ಒತ್ತಾಯಿಸಬೇಕು.

ಆ) ಮಹಾಪ್ರಭುಗಳ ಸರ್ಕಾರವು ಎರಡು ಅಂಶಗಳನ್ನು ಗಮನಿಸಿದ ನಂತರ ಅಲ್ಪಸಂಖ್ಯಾತರ ರಕ್ಷಣೆಗೆ ಸೇರಿದ ವಿಧೇಯಕಗಳನ್ನು ತಾನೇ ಪರಾಂಬರಿಸಿ ಅದರ ಬಗೆಗೆ ತಾವೇ ನಿರ್ಣಯವನ್ನು ಕೈಗೊಳ್ಳುವುದೇ ಅಥವಾ ಅದರ ಸಮಂಜಸತೆಯನ್ನು ಪರಿಶೀಲಿಸಲು ಯಾವುದಾದರೊಂದು ವಿಚಾರಣಾ ಸಂಸ್ಥೆಗೆ ಸೂಚಿಸುವುದೇ ಈ ಎಲ್ಲ ವಿವರಣೆಗಳನ್ನು ನೀಡುವಂತೆ ಒತ್ತಾಯಿಸಬೇಕು.

ಈ ದಿಶೆಯಲ್ಲಿ ಜಂಟಿ ಪಾರ್ಲಿಮೆಂಟರಿ ಸಮಿತಿಯೊಂದನ್ನು ನೇಮಿಸಿ, ಪರಿಶಿಷ್ಟ ವರ್ಗದ ಸಾಕ್ಷಿಗಳ ಹೇಳಿಕೆಯನ್ನು ಪರಿಶೀಲಿಸಿ ಅಧಿಕಾರವನ್ನು ನೀಡುವುದು ಸಮಂಜಸ. ಅಲ್ಲದೆ ಅದಕ್ಕೆ ಸೂಕ್ತ ನಿಯಮಗಳಿವೆ. ಏಕೆಂದರೆ ೧೯೩೫ನೇ ಕಾಯ್ದೆಯನ್ನು ಪರಿಶೀಲಿಸಲೆಂದೇ ಒಂದು ಜಂಟಿ ಪಾರ್ಲಿಮೆಂಟರಿ ಸಮಿತಿಯನ್ನು ನೇಮಿಸಲಾಗಿದ್ದುದನ್ನು ಸ್ಮರಿಸಬಹುದಾಗಿದೆ. ಆ ಒಂದು ಪರಂಪರೆಯನ್ನು ಅನುಸರಿಸಿದರೆ ತಪ್ಪಾಗಲಾರದು.

iii) ಸರ್ಕಾರವನ್ನು, ಸಂವಿಧಾನ ಸಭೆಯು ರಚಿಸಿದ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ರಕ್ಷಣೆಯ ವಿಧೇಯಕವನ್ನೇ ಕೇವಲ ಅಧಿಕ ಮತದಿಂದ ಕೈಬಿಡುವ ಸಂದರ್ಭದಲ್ಲಿ ಅವರನ್ನು ಒತ್ತಾಯಿಸಲಾಗುವದೇ ಎಂಬುದನ್ನು ವಿವರಿಸುವಂತೆ ಒತ್ತಾಯಿಸಬೇಕು.

ಅ) ಮುಂದೆ ಜಾರಿಯಲ್ಲಿ ಬರಬಹುದಾದ ಸಂವಿಧಾನದಲ್ಲಿ ಪರಿಶಿಷ್ಟರ ರಕ್ಷಣೆಯ ವಿಧಿಗಳನ್ನು ಕೈಬಿಟ್ಟಾಗ ಏನು ಮಾಡಬೇಕು ಎಂಬುದನ್ನು ೧೯೪೬ ಮೇ ೧೬ರಂದು ನಿಯೋಗವು ನೀಡಿರಬಹುದಾದ ಹೇಳಿಕೆ ಅಥವಾ ಮೇ ೨೫ರಂದು ನೀಡಿದ ನಂತರದ ಹೇಳಿಕೆಯಲ್ಲಾಗಲೀ ಪ್ರಸ್ತಾಪಿಸಿಯೇ ಇಲ್ಲ. ಹೀಗಾಗಿ ಪಾರ್ಲಿಮೆಂಟಿನಲ್ಲಿ ಈ ರಕ್ಷಣೆಯನ್ನು ಕುರಿತಂತೆ ಏನಾದರೂ ವಿಧೇಯಕಗಳನ್ನು ಮಾಡಿ ಮುಂದೆ ಪಾರ್ಲಿಮೆಂಟ್ ಅದನ್ನು ಕೈಬಿಟ್ಟರೆ ಈ ಕಾರ್ಯವು ನಿಷ್ಪ್ರಯೋಜಕವಲ್ಲವೇ? ಆದುದರಿಂದ ಸಂವಿಧಾನ ಸಭೆಯು ರಚಿಸುವ ಸಂವಿಧಾನದಲ್ಲಿಯೇ ಅಲ್ಪಸಂಖ್ಯಾತರ ಸಂರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ವಿಧಿಗಳನ್ನು ಅಳವಡಿಸುವುದು ಉತ್ತಮ. ಅಮೆರಿಕ ಹಾಗೂ ಆಸ್ಟ್ರೇಲಿಯಾ ಸಂವಿಧಾನದಲ್ಲಿರುವಂತೆ ಸಂರಕ್ಷಣೆ ಕುರಿತಂತೆ ವಿಧಿಗಳನ್ನು ಜಾರಿಗೊಳಿಸಬಹುದು.

ಆ) ಅಲ್ಪಸಂಖ್ಯಾತರಿಗೆ ಇದು ಅತಿ ಪ್ರಮುಖ ಸಮಸ್ಯೆಯಲ್ಲಿನ ಜೀವಾಳವಾಗಿರುವುದರಿಂದ ಹಾಗೂ ಈ ದಿಶೆಯಲ್ಲಿ ಸಂಪುಟ ನಿಯೋಗವು ಯಾವ ನಿಲವನ್ನೂ ಹೊಂದದೇ ಇರುವುದರಿಂದ ಈ ದಿಶೆಯಲ್ಲಿ ಘನ ಸರ್ಕಾರದ ನಿಲುವು ಏನೆಂಬುದನ್ನು ಒತ್ತಾಯಿಸದೇ ಇರಲಾಗದು.

ಡಾ॥ ಬಿ.ಆರ್. ಅಂಬೇಡ್ಕರ್

## ವಿಷಯಸೂಚಿ


ಅಕ್ಬರ್ ೩೯೫
ಅಕ್ಬರ್ ಹೈದರಿ ೩೯೫, ೪೧೮
ಅಖಿಲ ಚಂದ್ರದತ್ತ ೧೭೪, ೧೮೦, ೧೮೨, ೧೯೬, ೨೦೦, ೨೦೧, ೨೦೪, ೨೦೫, ೨೦೬, ೨೦೭, ೨೦೮, ೨೧೯, ೨೨೧
ಅಜಾದ್ ಹಿಂದ್ ಸೇನಾ ೪೪೪
ಅಜೀಜ್ ಅಹಮದ್ ೨೩೭
ಅಜೀಜುಲ್ ಹಕ್ ಎಂ. ೪೧೮
ಅಜ್ಮೇರ್ ೧೪೫, ೩೧೯
ಅಡರ್‌ಕರ್ ೧೨೬
ಅನಂತಶಯನ ಅಯ್ಯಂಗಾರ್ ಎಂ. ೨೧೮, ೨೧೯, ೨೭೨, ೨೮೯, ೨೯೦, ೨೯೧, ೨೯೩, ೨೯೫
ಅಫ್ತಾಬ್ ಆಲಿ ೧೩೦, ೧೬೩
ಅಬುಟಾಲಿಬ್ ೨೩೧
ಅಬ್ದುರ್ ರಶೀದ್ ಚೌಧುರಿ ೭೬,
ಅಬ್ದುರ್ ರಹೀಮ್ ೧೭, ೧೮, ೨೩, ೨೪, ೨೫, ೩೮, ೪೧, ೪೯, ೫೧, ೫೫, ೫೬, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೮, ೭೯, ೯೪, ೯೭, ೧೧೮, ೧೧೯, ೧೩೧, ೧೩೨, ೧೩೭, ೧೩೮, ೨೦೯, ೨೧೩, ೨೧೪, ೨೨೩, ೨೨೪, ೨೨೫
ಅಬ್ದುಲ್ ಕಲಂ ಆಜಾದ್ ೪೩೭, ೪೪೧
ಅಬ್ದುಲ್ ಖಯೂಮ್ ೨೧೭,
ಅಬ್ದುಲ್ಲಾ ಹರೂನ್ ೬೩
ಅಮರೇಂದ್ರನಾಥ ಚಟ್ಟೋಪಾಧ್ಯಾಯ ೫೬, ೬೩, ೧೩೦, ೨೧೮, ೨೨೦
ಅಮಲಾಪುರಂ ೨೯೪
ಅಮೆರಿ ಎಲ್.ಎಸ್. ೯, ೩೮೭, ೩೮೮, ೩೯೫, ೩೯೭, ೩೯೮, ೪೦೩, ೪೬೨
ಅಲಹಾಬಾದ್ ೨೯೦
ಅಲಿಫರ್ ೨೮೨
ಅಲೆಕ್ಸಾಂಡರ್ ೪೧೮, ೪೨೫, ೪೨೭, ೪೩೬, ೪೪೩
ಅವಿನಾಶಿಲಿಂಗಂ ಚೆಟ್ಟಿಯಾರ್ ೧೩೧, ೧೩೨, ೧೪೯, ೧೭೪, ೨೧೮,
ಅಶೀಕ ರಾಯ್ ೩೦೯
ಅಶೋಕ್ ರಾಯ್ ೨೭೧, ೩೧೪
ಅಶೋಕ ಕೆ. ರಾಯ್ ೪೧೮
ಅಸನ್ಸೋಲ್ ೧೪೧
ಅಸ್ಸಾಂ ೩೯, ೫೨, ೫೩, ೫೪, ೫೫, ೬೧, ೬೪, ೯೪, ೧೩೨, ೧೪೦, ೧೪೮, ೧೪೯, ೩೯೫
ಅಹಮದ್ ಇ.ಎಚ್. ಜಾಫರ್ ೨೮೧, ೨೮೨, ೨೮೪, ೨೮೭, ೩೦೮,
ಅಹಮದಾಬಾದ್ ೬೪, ೨೦೩
ಅಹ್ಮದ್ ಮುಕ್ತಾರ್ ೩೨೩
ಅಹ್ರಾವರ್ಡಿ ೨೭೧
ಅಳ್ಸಾರ್ ೩೨೧
ಆಂಗ್ಲೋಇಂಡಿಯನ್ ೩೭೭, ೪೪೩
ಆಂಡ್ರ್ಯೂ ಕ್ಲೌ ೩೯೫
ಆಗ್ರಾ ೨೯೨
ಆಚಿನ್‌ಲೆಕ್ ೪೧೮
ಆಜ್ಮೇರ ೧೪೬
ಆಟ್ಲೆ ೪೩೪, ೪೩೫, ೪೩೮, ೪೩೯
ಆಡಂ ವಿಲಿಯಮ್ಸ್ ೨೪೮
ಆಣೆ ಸರ್ಕಾರ್ ೩೯
ಆಧಾರ್‌ಕರ್ ೧೭೩, ೨೨೭, ೨೭೮, ೩೦೪, ೩೧೦, ೩೧೨, ೩೨೩
ಆನ್‌ಸೋರ್ಗ್ ಇ.ಸಿ. ೧೪೧
ಆಫ್ರಿಕಾ ೨೧೨
ಆರೋಗ್ಯವಿಮೆ ೧೭೩, ೨೨೭, ೩೧೬
ಆರ್ಕಾಟ್ ೨೧೮
ಆರ್ದೇಷೇರ್ ವಲಾಲ ೧೯೬
ಆರ್ಥರ್ ೪೧೮

ಆಲಿಖಾನ್ ೫೩, ೨೧೮
ಆಲಿಫರ್ ೩೬೧
ಆಸ್ಕ್ವಿತ್ ೪೧೦
ಆಸ್ಟ್ರೇಲಿಯಾ ೨೮೫
ಇಂಗ್ಲಿಷ್ ೫೭, ೧೦೯, ೨೦೪, ೩೯೧
ಇಂಗ್ಲೆಂಡ್ ೪, ೨೭, ೪೭, ೪೮, ೫೭, ೭೭, ೮೮, ೧೯೬, ೨೦೪, ೨೧೧, ೨೧೨, ೨೨೮, ೨೨೯, ೨೬೨, ೨೭೪, ೩೬೦, ೩೮೬, ೪೨೧, ೪೩೬, ೪೬೨
ಇಂಡಿಯಾ ೧, ೩, ೧೭, ೨೧, ೨೬, ೨೭, ೩೦, ೪೫, ೪೬, ೬೪, ೬೫, ೮೨, ೮೫, ೧೧೩, ೧೩೧, ೨೪೯, ೩೬೧, ೩೭೩, ೪೧೨, ೪೩೯
ಇಕ್ರಾಮುಲ್ಲಾ ಎಂ. ೨೩೭
ಇಟಲಿ ೮೬, ೮೭
ಇನ್ಸ್‌ಕಿಫ್ ೨೭೧, ೩೧೭
ಇಬ್ಕೊಮಾ ೨೫೧
ಇಷಾಕ್ ಹೆಚ್.ಎಮ್. ೧೮೬
ಇಷಾರ್ ಸಿಂಗ್ ೧೩೯, ೧೪೮
ಇಸಾಕ್ ಸೇಟ್ ಹೆಚ್. ೨೦೦, ೨೦೧
ಈಜಿಪ್ಟ್ ೨೫೪
ಈಡನ್ ೨೫೪
ಉದಯಪುರ ೨೬
ಉದ್ದೀನ್ ಅಹಮದ್ ೧೭೧,
ಉಲ್‌ಸ್ಟರ್ ೪೧೦
ಎಂ. ಜಡ್ ಖಾನ್ ೧೪೧,
ಎಐಸಿಸಿ ೨೦
ಎಡ್‌ವರ್ಡ್ ಬೆನ್‌ಥಾಲ್ ೪೩೬
ಎಲ್‌ಫಿನ್‌ಸ್ಟನ್ ಕಾಲೇಜು ೨
ಎಸ್ಸಿ ೩೨೧
ಏಷಿಯಾ ೨೪೩
ಏಷ್ಯನ್ ೯೯
ಏಷ್ಯಾಟಿಕ್ ೩೬೧
ಐರ್ಲೆಂಡ್ ೯, ೪೧೦, ೪೧೯
ಒರಿಸ್ಸಾ ೩೯, ೬೪, ೧೧೮, ೧೩೭, ೧೪೯, ೨೪೬, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೮೫, ೩೩೩, ೪೪೫
ಒಲಿಂಪಿಕ್ ೩೬೧
ಔಂದ್ ೨೭೩
ಔರಂಗಜೇಬ್ ೪೧೯
ಕಟಕ್ ೨೪೬, ೨೫೦
ಕತ್ವ್ಯ ೩೯೮
ಕರಣಿಕ್ ೧೦೭, ೧೪೯
ಕರಾವಳಿ ೨೦೦
ಕರೀಮ್ ಎ. ೧೮೬
ಕರುಣಾಕರ ಮೆನನ್ ಎ. ೩೦೯, ೩೧೪
ಕರ್ಣಿಕ್ ೩೨೨
ಕಲ್ಕತ್ತ ೧೧, ೧೯, ೪೩, ೪೪, ೪೫, ೬೫, ೧೪೯, ೧೫೦, ೧೫೪, ೨೨೯, ೨೩೨, ೨೯೬, ೨೯೭, ೨೯೮, ೨೯೯, ೩೧೧, ೩೬೦, ೩೬೧
ಕವಾಸ್ಜಿ ಜಹಾಂಗೀರ್ ೬೮, ೧೭೩, ೨೦೪, ೨೦೫
ಕಸ್ತೂರಭಾಯಿ ೬೪, ೧೪೯
ಕಸ್ತೂರಭಾಯಿ ಲಾಲ್ ಭಾಯ್ ೧೪೯
ಕಾಂಗ್ರೆಸ್ ೧೬, ೧೮, ೧೯, ೨೦, ೨೧, ೪೮, ೫೩, ೬೫, ೯೦, ೯೧, ೧೦೭, ೧೨೯, ೧೩೯, ೧೮೭, ೧೯೬, ೨೩೮, ೨೯೧, ೨೯೨, ೨೯೩, ೨೯೪, ೩೬೬, ೩೭೯, ೩೮೨, ೩೮೭, ೩೮೮, ೩೮೯, ೩೯೧, ೩೯೨, ೩೯೬, ೩೯೮, ೩೯೯, ೪೦೩, ೪೦೬, ೪೧೨, ೪೧೭, ೪೧೮, ೪೨೦, ೪೨೧, ೪೨೨, ೪೩೧, ೪೩೩, ೪೩೪, ೪೩೬, ೪೩೭, ೪೩೮, ೪೩೯, ೪೪೧, ೪೪೨, ೪೪೩, ೪೪೪, ೪೫೮, ೪೫೯, ೪೬೦, ೪೬೧, ೪೬೨, ೪೬೫, ೪೬೬, ೪೬೭, ೪೬೮, ೪೭೪
ಕಾನ್ಪುರ ೬೫, ೨೯೨
ಕಾನ್‌ಸ್ಟಂಟೈನ್ ೬೪
ಕಾರ್ಲೈಲ್ ೮೫, ೮೯
ಕಾಲಾರಾಮ್ ೫

ಕಿರ್ಕಿ ೪೨೨
ಕಿರ್ಬಿ ೧೦೭, ೧೩೯
ಕುಮಾಂವ್ ೨೧೮
ಕುರ್ಸಾಂಗ್ ೩೬೬
ಕೂಟ್ಸ್ ೪೨೨
ಕೆನಡಾ ೧೯೬
ಕೇನ್ ಡಬ್ಲ್ಯೂ.ಜೆ. ೨೩೭
ಕೊಡರ್ಮ ೩೩೩
ಕೊಲಂಬಿಯ ೩
ಕೊಲಾಬಾ ೫
ಕೊಲಿನ್ಸ್ ೧೮೯
ಕೋದರ್ಮ ೧೪೫
ಕೋಸಲಾ ೨೩೩
ಕೌಲ್ ಪಿ.ಕೆ. ೧೪೮
ಕ್ರಾಸ್‌ಫೀಲ್ಡ್ ಜಿ.ಟಿ.ಕೆ. ೧೪೨, ೧೪೫
ಕ್ರಿಪ್ಸ್ ೩೪೩, ೩೭೯, ೩೮೦, ೩೮೧, ೩೮೪, ೩೮೬, ೩೯೧, ೩೯೩, ೩೯೮, ೪೦೩, ೪೨೬, ೪೩೧, ೪೪೩, ೪೬೧, ೪೬೭
ಕ್ರಿಶ್ಚಿಯನ್ ೩, ೭, ೨೯೦, ೩೦೬, ೩೧೧, ೩೪೩, ೩೪೬, ೩೫೩, ೪೦೩, ೪೦೬, ೪೧೫, ೪೪೩, ೪೬೧, ೪೬೭
ಕ್ರೈಸ್ತಧರ್ಮ ೮
ಕ್ರೋಮಿಯಂ ೨೪೭
ಕ್ಲೆಗ್ ಇ.ಎಲ್.ಜಿ. ಡಾ॥ ೧೪೧, ೧೪೫
ಕ್ಲೈವ್ ೪೨೨
ಕ್ವೆಟ್ಟಾ ೩೨೩
ಖಾಜಿ ಮುಜ್ತಬಾ ೧೪೯
ಖಾನ್ ಅಬ್ದುಲ್ ಘನೀಖಾನ್ ೨೮೬
ಖಾನ್ ಎಂ.ಎ. ೬೫,
ಖಾನ್ ಬಹದ್ದೂರ್ ಷೇಕ್ ಫಜಲ್ ಎ ಹಕ್ ಪಿರಾಚಾ ೧೬೭, ೧೭೪
ಖಾನ್ ಬಹದ್ದೂರ್ ಹಾಫಿಕ್ಸ್ ೩೭೯
ಖಾನ್ ಬಹದ್ದೂರ್ ಹಾಫಿಜ ೩೧೪
ಖಾನ್ ಬಹಾದ್ದೂರ್ ಮಿಯಾ ೫೬
ಗವರ್ನರ್ ೪೧೪
ಗಾಂಧೀ ೫, ೬, ೧೯, ೨೦, ೨೧, ೩೫೪, ೩೮೭, ೩೮೯, ೪೧೨, ೪೧೬, ೪೩೭, ೪೪೧, ೪೪೨, ೪೬೦, ೪೬೨, ೪೬೮, ೪೭೩
ಗಾಡ್ಗೀಳ್ ಎನ್.ವಿ. ೨೬೬, ೨೭೧, ೨೯೦
ಗಾಯಕವಾಡ ೩
ಗಿರಿ ವಿ.ವಿ. ೧೬, ೨೫೮
ಗಿಲ್ಬ್ ಇಎಲ್‌ಸಿ ೫೬, ೫೯, ೬೨
ಗುಂಟೂರ್ ೨೭೦, ೨೯೮, ೩೨೦
ಗುಪ್ತಾ ಎಸ್.ಕೆ. ರಾಯ್‌ಬಹದ್ದೂರ್ ೨೩೭
ಗುಪ್ತಾ ಆರ್.ಆರ್. ೬೩, ೧೬೭, ೧೭೪
ಗುಪ್ತಾ ಎನ್.ಡಿ. ೧೪೯
ಗುಪ್ತಾ ಎಸ್.ಕೆ. ೨೩೭
ಗುರುಸ್ವಾಮಿ ಎಸ್. ೬೫, ೨೫೬, ೨೭೧
ಗೆಜೆಟ್ ೪೫, ೪೬, ೨೮೩, ೩೧೭
ಗೈಡ್ಸ್ ೩೬೧
ಗೋಕುಲ ದಾಸ ೧೯೬
ಗೋಖಲೆ ಬಿ.ಕೆ. ೩೩೩
ಗೋದಣಿಗೆ ೧೩೪
ಗೋದಾವರಿ ೫
ಗೋರಖ್‌ಪುರ ೧೩೨, ೨೦೬, ೨೧೪, ೨೬೭, ೨೮೪
ಗೋವಿಂದ್ ಮಾಳವೀಯ ೨೬೪, ೨೮೮, ೨೯೦, ೨೯೧, ೨೯೨, ೨೯೩, ೨೯೪
ಗೋವಿಂದ್‌ದಾಸ್ ೨೯೯
ಗೋಸಾಲ್ ಎಚ್. ೧೩೯
ಗೌರಿಶಂಕರ್ ಕರಣ್‌ಸಿಂಗ್ ೩೭೯, ೩೧೪
ಗ್ರಿಫೀತ್ಸ್ ಪಿ.ಜೆ. ೫೩, ೯೪, ೯೫, ೯೬, ೯೭, ೨೭೪
ಗ್ಲ್ಯಾಡ್‌ಸ್ಟೋನ್ ೪೧೯
ಗ್ವಾಲಿಯರ್ ೧೬, ೬೪, ೧೪೯
ಗ್ವಿಲ್ಟ್, ಲೆಸ್ಲಿ ೩೧೭, ೩೧೮
ಘುಲಾಂ ಕಾದಿರ್ ಮಹಮ್ಮದ್ ಶಭಾನ್ ೫೬,೬೨

ಚಪಾಲ್ ಭಟ್ಟಾಚಾರ್ಯ ೧೩೯
ಚಮನ್ ಲಾಲ್ ೨೫೬, ೨೭೧, ೨೯೨, ೨೯೩, ೨೯೪, ೨೯೯, ೩೦೩, ೩೦೯, ೩೧೦, ೩೧೧, ೩೧೨, ೩೧೮
ಚಾಂದೋರ್ಕರ್ ಎನ್.ಆರ್. ೬೪
ಚಾಂದ್‌ಬಾಲಿ ೨೪೯
ಚಾಕೊ ಇ.ಐ. ೧೪೯
ಚಾಪ್‌ಮನ್–ಮಾರ್ಟಿಮರ್ ೭೮
ಚಾಲೀಸ್‌ಗಾಂವ್ ೬
ಚಿತ್ತಗಾಂಗ್ ೨೯೭
ಚಿತ್ತೂರು ೨೮೯
ಚೀನೀ ೪೨೩
ಚೆಮ್ಸ್‌ಫೋರ್ಡ್ ೩೪೦
ಚೇಂಬರ್‌ಲೇನ್ ೪೧೯
ಚೌಧುರಿ ಶ್ರೀಚಂದ್ ೨೭೧
ಜಮ್ನಾದಾಸ್ ಎಂ. ಮೆಹ್ತಾ ೨೪, ೪೧, ೪೨, ೪೩, ೪೮, ೫೬, ೬೨, ೧೨೪, ೧೨೭, ೧೩೦, ೧೪೯, ೧೬೩, ೩೨೨
ಜಮ್ನಾದಾಸ್ ಮೆಹತಾ ೧೬, ೨೨, ೨೪, ೪೨, ೪೩, ೪೭, ೪೮, ೫೬, ೬೨, ೧೨೪, ೧೩೦, ೧೪೯, ೧೬೩
ಜಮ್ನಾಲಾಲ್ ಮೆಹ್ತಾ ೧೨೭
ಜಯಪ್ರಕಾಶ್ ನಾರಾಯಣ್ ೨೦, ೨೧,
ಜರ್ಮನ್ ೪, ೩೧, ೩೨, ೧೦೪
ಜರ್ಮನಿ ೨೩, ೮೬, ೮೭, ೨೪೯
ಜವರ್ ೨೬
ಜಾಕ್ ಡಿ.ಟಿ. ಡಾ. ೬೪
ಜಾತ್‌ಪಾತ್ ತೋಡಕ್ ಮಂಡಲ್ ೭
ಜಾಧವ ಡಿ.ಜಿ. ೨೩೧
ಜಾನ್ ಸ್ಟೂವರ್ಟ್ ಮಿಲ್ ೮೯
ಜಾಫರ್ ಎಮ್ ೨೩೭, ೨೭೯
ಜಾಫ್ರಿ ಡಬ್ಲ್ಯೂ. ೩೦೯, ೩೧೦, ೩೧೪
ಜಾರ್ಜ್ ಆರ್.ಐ ೯
ಜಾಲಹಳ್ಳಿ ೨೭೩
ಜಿನರಾಜ ಹೆಗಡೆ ೨೧೮, ೨೧೯
ಜಿನಾಯ್ ಎಂ. ೬೪
ಜಿನೀವಾ ೧೧೭, ೧೬೮
ಜಿನ್ನಾ ೪೪೧
ಜಿಯಾ ಉದ್ದೀನ್ ಅಹಮದ ಡಾ॥ ಸರ್ ೫೫, ೧೨೨, ೧೭೦, ೨೮೧, ೨೮೨, ೨೮೪, ೩೦೯, ೩೧೪, ೩೧೬
ಜೆನಿಸಿಸ್ ೨೫೪
ಜೆರೆಮಿ ರೇಸ್‌ಮನ್ ೧೦೬, ೨೧೫
ಜೆವಾನ್ಸ್ ೧೯೨, ೧೯೩
ಜೊಂಕ್ ೨೫೧
ಜೋಕೋ ಇ.ಐ. ೬೪
ಜೋಗೇಂದ್ರಸಿಂಗ್ ೩೯೫, ೩೯೬, ೩೯೯, ೪೧೮
ಜೋನ್ಸ್ ೨೭೪
ಜೋಷಿ ಎಸ್.ಎಂ. ೬೫,
ಜೋಷಿ ಎಂ.ಎನ್. ೧೭೫
ಜೋಷಿ ಎಂ.ಎಸ್. ೧೩೦
ಜೋಷಿ ಎನ್.ಆರ್. ೬೨,
ಜೋಷಿ ಎನ್.ಎಂ. ೫೨, ೫೩, ೫೪, ೫೫, ೬೦, ೬೧, ೭೨, ೭೩, ೯೨, ೯೬, ೧೧೭, ೧೨೨, ೧೨೩, ೧೨೪, ೧೨೫, ೧೨೭, ೧೨೯, ೧೩೨, ೧೬೭, ೧೭೧, ೧೭೨, ೧೭೪, ೧೮೧, ೧೮೨, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೧೧, ೨೧೭, ೨೧೮, ೨೨೦, ೨೨೧, ೩೨೨
ಜೋಷಿ ಎಸ್.ಸಿ. ೧೪೯, ೨೧೮, ೨೨೦, ೨೩೧, ೨೭೧, ೩೦೯,
ಜೋಷಿ ಎಸ್.ವಿ. ೧೪೮
ಜೋಷಿ ಡಿ.ಎಸ್. ೫೬, ೬೪, ೧೬೭, ೧೭೪, ೧೭೫, ೧೮೦
ಝುರಿಯಾ ೧೦೬, ೧೪೧
ಝೂನ್ಸಿ ೨೯೦

ಟಾಟಾ ೨೬೪
ಟಾನೆಂಡ್ ೩೨೨
ಟಾರ್ಲೆಟನ್ ೧೩೯
ಟಿಕ್ಕರ್‌ಪಾರ್ ೨೪೯
ಟೂಲಿ ೪೨೧
ಟೆನ್ನಿಸ್ಸೀ ೧೮೪, ೧೮೫, ೧೮೯, ೧೯೬, ೨೪೮, ೩೨೧, ೩೨೫
ಟೆಲ್ಕೋಮಾ ೨೫೧
ಟೈಸನ್ ೩೦೯, ೩೧೦
ಟೋಂಕ್ ೧೪೫
ಟೋರಿ ೩೬
ಟ್ರ್ಯಾಮ್ ೩೨೩
ಡಗ್ಲಾಸ್ ೧೩೯
ಡಾಂಗೆ ೧೨೯
ಡೈಸನ್ ೩೧೪
ಡೊಮಿನಿಯನ್ ೯
ತಾರಾಪದ್ ೪೩
ತಿರುಚನಾಪಳ್ಳಿ ೩೨೩
ತಿರುವಾಂಕೂರು ೬೪, ೧೪೯
ತಿರ್ಹತ್ ೫೧
ತಿಲಾಯಿ ೩೨೫, ೩೩೩
ಥಿಯೊಡೋರ್ ಗ್ರೆಗರಿ ೬೪, ೧೧೨
ದಲಾಲ್ ೧೬
ದಾಮೋದರ್ ಯೋಜನೆ ೧೮೬, ೨೫೯
ದಿಗ್‌ವಾಡಿ ೧೦೮
ದೆಹಲಿ ೧೦, ೫೦, ೬೪, ೮೦, ೮೫, ೧೦೬, ೧೦೭, ೧೩೨, ೧೩೩, ೧೩೪, ೧೪೭, ೧೪೮, ೧೫೫, ೧೮೭, ೨೨೭, ೨೩೧, ೨೩೭, ೨೩೮, ೨೫೩, ೨೭೪, ೨೯೮, ೩೨೫, ೩೯೭, ೩೯೮, ೩೯೯, ೪೦೩, ೪೦೪, ೪೦೮, ೪೧೩, ೪೧೭, ೪೧೮, ೪೧೯, ೪೨೫, ೪೨೬, ೪೨೭
ದೇವಾರ್ ೧೪೯
ದೇವೊಲಿ ೨೦
ದೇಶಪಾಂಡೆ ಎಸ್. ಆರ್. ೩೨೩
ದೌಲತಾಬಾದ್ ೬
ಧನಬಾದ್ ೧೦೬, ೧೦೬, ೧೦೭, ೧೦೯, ೧೧೦, ೧೩೯, ೧೪೦, ೨೬೨, ೩೧೧
ಧಾರವಾಡ ೩೭೨, ೩೭೩
ಧೋವಡಾ ೧೦೯
ನರಸಿಂಹಯ್ಯ ಎಂ. ೩೩೩
ನವಾನ್‌ಜಾದಾ ಲಿಯಾಕತ್ ಆಲಿ ಖಾನ್ ೨೮೩
ನವಾಬ್ ಸಿದ್ದಿಕ್ಕಿ ಆಲೀ ಖಾನ್ ೧೬೭, ೧೭೪,
ನವಾಬ್‌ಜಾದಾ ಮೊಹಮ್ಮದ್ ಲಿಯಾಖತ್ ಆಲಿ ಖಾನ್ ೧೨೩, ೨೭೯, ೨೮೩
ನವಾಬ್‌ಜಾದಾ ಲಿಯಾಕತ್ ಅಲಿಖಾನ್ ೨೭೯
ನಾಗಪುರ ೪, ೧೩೭, ೧೪೮, ೨೫೮, ೨೮೫, ೨೯೩, ೪೬೫
ನಾಝೀ ೨೯, ೩೧, ೩೨, ೩೩, ೩೫
ನಾಯರ್ ೩೪೫
ನಿಂಬ್ಕರ್ ಆರ್.ಎಸ್. ೧೦೬, ೧೦೭, ೧೦೮, ೧೨೬, ೧೩೯
ನಿಂಬ್ಕರ್ ಆರ್ ಎಸ್. ೬೪
ನೀರೋ ೧೦೦
ನೀಲಗಿರಿಸ್ ೨೦೧
ನೆಲ್ಲೂರು ೧೪೫, ೧೪೬, ೨೨೩, ೨೭೦, ೨೯೮, ೩೨೦
ನೈಜಾಂ ೬
ನೈರಾಂಗ್ ೬೨
ನೌಮಾನ್ ೧೩೭, ೨೭೧, ೨೮೫, ೩೦೯, ೩೧೪
ಪಂಜಾಬ್ ೪೮, ೬೪, ೧೪೮, ೨೫೬, ೨೯೨, ೨೯೩, ೨೯೪, ೨೯೯, ೪೧೪, ೪೪೫
ಪದ್ಕೆ ಎನ್.ವಿ ೩೨೨
ಪಾಕಿಸ್ತಾನ ೩೮೮, ೩೮೯, ೩೯೧, ೩೯೨, ೪೧೦
ಪಾಮರ್‌ಸ್ಟನ್ ೪೨೪
ಪಾರ್ಸಿ ೩, ೩೩೯
ಪುಣೆ ೭, ೬೫, ೨೭೩, ೩೫೪, ೪೬೫, ೪೬೭

ಪೃಥ್ವೀರಾಜ್ ೪೧೩, ೪೧೮, ೪೨೫
ಪೆಡ್ಲೇ ಜೆ.ಇ. ೬೪, ೧೪೮
ಪೆಥಿಕ್ ೪೦೮, ೪೧೩, ೪೨೫, ೪೨೬, ೪೩೮, ೪೩೯, ೪೪೨, ೪೪೩
ಪೆಥಿಕ್ ಲಾರೆನ್ಸ್ ೪೦೮, ೪೨೬
ಪೆಸಿಫಿಕ್ ೮೪
ಪೋಪ್ ೮೯
ಪ್ಯಾಂಚೆಟ್ ೩೨೧
ಪ್ಯಾರಿಸ್ ೨೪೪, ೪೩೪
ಪ್ರಕಾಶ್ ೨೮೪
ಪ್ರಯರ್ ೨೫೪
ಪ್ರೀವಿ ೩೯೬
ಪ್ರೈಯರ್ ೬೪
ಫಜಲ್ ೬೫, ೧೬೭, ೧೭೪
ಫಜಲ್ ಎಲಾಹಿ ಕುರ್ಬಾನ್ ೬೫
ಫನೀಖಾನ್ ೨೮೬
ಫಿರೋಜ್ ಖಾನ್ ನವಾಬ್ ೧೧, ೧೬೭
ಫಿರೋಜ್ ಖಾನ್ ನೂನ್ ೩೯೬
ಫಿರೋಜ್‌ಪುರ ೨೯೩
ಫಿಲಡೆಲ್ಫಿಯಾ ೧೩೦, ೧೬೩
ಫ್ರಾಂಕ್ ನೊಯಸಿ ೧೭೧
ಫ್ರೆಂಚ್ ೩೩
ಫ್ರೆಡ್ ಸಿ. ಶ್ಲೆಮ್ಮರ್ ೩೨೧, ೩೨೨, ೩೩೩
ಫ್ರೆಡರಿಕ್ ಜೇಮ್ಸ್ ೪೪, ೪೫, ೪೬, ೪೭, ೪೮, ೫೩, ೫೫, ೫೯, ೧೦೫
ಬಂಗಾಳ ೨೧, ೨೬, ೩೯, ೫೫, ೬೪, ೬೬, ೧೦೪, ೧೦೭, ೧೧೦, ೧೧೮, ೧೩೨, ೧೩೭, ೧೩೯, ೧೪೦, ೧೪೧, ೧೪೬, ೧೪೮, ೧೫೦, ೧೫೪, ೧೫೫, ೧೬೬, ೧೮೩, ೧೮೫, ೧೮೬, ೧೯೬, ೨೧೫, ೨೩೨, ೨೩೩, ೨೩೪, ೨೩೫, ೨೩೬, ೨೩೭, ೨೫೯, ೨೬೪, ೨೯೮, ೩೨೫, ೩೩೩, ೩೭೧, ೪೧೪, ೪೩೬, ೪೩೭, ೪೩೮, ೪೩೯, ೪೪೫, ೪೫೮, ೪೫೯, ೪೬೬, ೪೬೭
ಬನಾರಸ್ ೨೬೭, ೨೮೪, ೨೮೯
ಬರೋಡಾ ೨, ೩, ೧೬, ೬೪, ೧೪೯
ಬರ್ಮಾ ೨೭, ೨೮
ಬಲೂಚಿಸ್ತಾನ ೨೬
ಬಾಂಬೇ ೯೩, ೪೭೪
ಬಾನ್ ೪
ಬಾಪುರ್ ಬೈಜನಾಥ್ ಬಜೋರಿಯಾ ೩೭, ೩೮
ಬಾಬು ರಾಮ್ ನಾರಾಯಣ್ ಸಿಂಗ್ ೨೭೨, ೩೦೯, ೩೨೨
ಬಾರ್ದೋಲಿ ೧೯, ೨೦
ಬಾರ್ಲೊ ಜೆ.ಟಿ. ೧೦೧
ಬಾಲಕೃಷ್ಣಶರ್ಮ, ಪಂಡಿತ ೨೭೧
ಬಾಲಸೂರಿ ೨೪೭
ಬಾಲ್ಕನ್ ೩೮೯
ಬಿರ್ಕನ್‌ಹೆಡ್ ೨೯೬
ಬಿಹಾರ ೧, ೨೬, ೬೪, ೧೦೭, ೧೧೦, ೧೧೮, ೧೩೯, ೧೪೦, ೧೪೧, ೧೪೨, ೧೪೫, ೧೪೬, ೧೬೬, ೧೮೩, ೧೮೫, ೧೮೬, ೨೧೫, ೨೩೨, ೨೩೩, ೨೩೪, ೨೩೬, ೨೩೭, ೨೪೭, ೨೫೮, ೨೫೯, ೨೬೪, ೩೦೫, ೩೦೭, ೩೦೮, ೩೦೯, ೩೧೩, ೩೨೫, ೩೩೩, ೪೪೫
ಬೀರಾರ್ ೬೪
ಬುರ್ಚ್ ೧೩೯
ಬೆಂಗಳೂರು ೨೭೩, ೩೬೧
ಬೆಂಥಾಲ್ ಇ.ಸಿ. ೩೯೫, ೪೧೮
ಬೆನೆಟ್ ೧೫೪
ಬೆಲ್ಜಿಯಂ ೨೧೨
ಬೆವರಿಡ್ಜ್ ಯೋಜನೆ ೮೩, ೨೧೬, ೨೭೯
ಬೇಗುನಿಯಾ ೧೦೯
ಬೇರಾರ್ ೧೩೯, ೧೪೦, ೧೪೧, ೧೪೮
ಬೈಕುಲಾ ೨೯೩
ಬೈಬಲ್ ೨೫೪
ಬೋಲೆ ಆರ್.ಆರ್. ೩೨೨

ಬೋಸ್ ಎನ್.ಕೆ. ೧೮೬,
ಬೋಸ್ ರಿಸರ್ಚ್ ಇನ್ಸ್ಟಿಟ್ಯೂಟ್ ೩೬೧
ಬೌದ್ಧಧರ್ಮ ೮
ಬ್ಯಾನರ್ಜಿ ಪಿ.ಎನ್. ಡಾ॥ ೧೯, ೨೯, ೩೮, ೪೬, ೪೭, ೪೯, ೫೦, ೬೧, ೧೯೭, ೨೦೫,
ಬ್ಯಾನರ್ಜಿ ಬಿ.ಎಸ್. ಪ್ರೊ. ೧೪೯
ಬ್ರಿಟನ್ ೯, ೨೩, ೪೪, ೧೪೬, ೧೭೩, ೧೮೯, ೧೯೦, ೨೦೪, ೨೪೦, ೨೪೧, ೨೬೧, ೪೧೧, ೪೧೮, ೪೨೪, ೪೨೬, ೪೩೧
ಬ್ರಿಸ್ಟೋ ಸಿ.ಎಚ್. ೬೪
ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ೩೬೧
ಭಗವಾನ್‌ದಾಸ್ ೩೨೨
ಭಟ್ಟಸಾಲಿ ಪಿ. ೧೩೯
ಭಾಂದ್ರಾ ೨೯೩
ಭೀಮ್‌ರಾವ್ ರಾಮ್‌ಜಿ ಅಂಬೇಡ್ಕರ್ ಡಾ॥ ೧, ೯, ೪೧೩, ೪೧೮
ಭುಲನ್ ಬರಾರಿ ೧೦೭, ೧೦೮
ಭೋಲಿ ಆರ್. ಆರ್. ೧೬೩
ಭೋಲೆ ಆರ್. ಆರ್. ೬೫, ೧೩೦, ೧೩೧
ಮಂಗಳಸಿಂಗ್ ೨೫೫
ಮಕ್ಬೂಲ್ ಮಹಮೂದ್ ೬೪, ೧೪೯
ಮಜುಮ್‌ದಾರ್ ಎಸ್.ಎನ್. ೬೪, ೧೦೭,
ಮಜುಮ್‌ದಾರ್ ಡಿ.ಎಲ್. ೧೮೭
ಮಜುಮ್‌ದಾರ ಎ.ಇ.ಎಲ್. ೧೪೧, ೧೪೫
ಮದನ್‌ಧಾರಿಸಿಂಗ್ ೩೦೯, ೩೧೪
ಮದ್ರಾಸ್ ೧, ೫೫, ೬೪, ೬೫, ೯೩, ೧೪೨, ೧೪೫, ೧೪೮, ೨೦೭, ೨೫೦, ೨೮೯, ೨೯೨, ೨೯೪, ೩೦೭, ೩೦೮, ೩೦೯, ೩೧೧, ೩೧೩, ೩೭೯, ೪೪೫
ಮಧುರಾ ೨೧೭
ಮನೇಕ್‌ಜಿ ದಾದಾಭಾಯ್ ೨೯೬
ಮಲ್ಲಿಕ್ ಎಸ್.ಎನ್. ೧೩೯
ಮಹದೀ ಅಲಿ ಮಿರ್ಜಾ ೬೪, ೧೯೬
ಮಹಮದ್ ಹುಸೇನ್ ಚೌಧರಿ ೧೭೫, ೧೮೦,
ಮಹಮೂದ್ ಎಂ. ಎಚ್. ೧೪೮
ಮಹಮ್ಮದ್ ಅಬ್ದುಲ್ ಘನಿ ೫೧, ೧೩೦, ೧೩೭, ೧೭೫
ಮಹಮ್ಮದ್ ಉಸ್ಮಾನ್ ೩೯೫
ಮಹಮ್ಮದ್ ಎಂ. ಕಿಲ್ಲೇದಾರ್ ೨೭೧
ಮಹಮ್ಮದ್ ನೌಮಾನ್ ೨೭೧, ೨೮೫
ಮಹರ್ ೧, ೨, ೩, ೬
ಮಹರ್‌ವಾಡಾ ೬
ಮಹಾಡ್ ೫
ಮಹಾರ ೩೭೨, ೩೮೩
ಮಹೀಂದ್ರ ಜೆ.ಸಿ. ೧೩೦
ಮಹ್ಮದ್ ಜಾಫರ್ ಇ.ಎಚ್. ೨೮೧, ೨೮೨, ೨೮೭, ೩೦೮
ಮಾಂಟೆಗ್ಯು ೩೪೦
ಮಾನ್‌ಸಿಂಗ್ ೧೮೬, ೨೩೭
ಮಾರ್ಕ್ಸ್ ೪೯
ಮಾರ್ಟಿನ್ ಒ.ಎಮ್. ೨೩೭
ಮಾರ್ಟಿಮರ್ ೭೮
ಮಿಯಾಮಿ ೨೪೮
ಮಿರಜ್‌ಕರ್ ಎನ್.ಎಸ್. ೧೪೯
ಮಿರ್ಜಾ ಇಸ್ಮಾಯಿಲ್ ೧೯೬
ಮಿಲ್ಲರ್ ಸಿ.ಸಿ. ೫೬, ೬೦, ೬೧, ೬೨, ೬೬, ೧೨೧, ೧೩೭, ೧೪೯
ಮಿಶ್ರಾ ಎಸ್.ಸಿ. ೬೫
ಮಿಸ್ಸೂರಿ ೨೪೮
ಮೀರ್ ಮಕ್ಬೂಲ್ ಮಹಮೂದ್ ೧೪೯
ಮೀರತ್ ೨೭೯
ಮೀಲಿಂಗ್ ಕೆ. ಡಬ್ಲ್ಯೂ ೬೫
ಮುಂಬೈ ೨, ೪, ೫, ೬, ೧೯, ೬೩, ೬೫, ೯೩, ೧೭೫, ೧೮೯, ೩೭೧, ೩೭೨, ೪೧೨, ೪೨೬
ಮುಕುಟ್ ಬಿಹಾರಿ ಲಾಲ್ ಭಾರ್ಗವ ೩೦೯, ೩೨೦

ಮುಖರ್ಜಿ ಎ.ಕೆ. ೩೨೨
ಮುಖರ್ಜಿ ಎಂ.ಎನ್. ೧೩೯
ಮುಖರ್ಜಿ ಬಿ.ಕೆ. ೬೫,
ಮುಜುಮದಾರ್ ಡಿ.ಎಲ್. ೨೩೭
ಮುದಲಿಯಾರ್ ಬಿ.ಜಿ.ಎ. ೬೪,
ಮುಸ್ಲಿಂಲೀಗ್ ೨೮೧
ಮುಹಮ್ಮದ್ ಯಾಮೀನ್ ಖಾನ್ ೧೩೪,
ಮುಳ್ವೇರ್‌ಕರ್ ಡಿ.ಜಿ. ೬೪, ೧೩೦, ೧೪೯, ೧೬೩
ಮೆಟ್ಟೂರು ೨೫೦
ಮೆಲ್‌ಬರ್ನ್ ೨೮೫
ಮೆಸೊಪೊಟೇಮಿಯಾ ೨೫೪
ಮೆಹ್ತಾ ಸಿ. ೩೨೨
ಮೇಯರ್ಸ್ ಜೆ.ಎಂ. ೧೦೧
ಮೇವಾರ ೨೬, ೧೪೫
ಮೊಹಮ್ಮದ್ ಉಸ್ಮಾನ್ ೩೯೫, ೪೧೮
ಮೋದಿ ೩೯
ಮೋಸೆಸ್ ೨೫೪
ಮೋಹನ್‌ಲಾಲ್ ಸಕ್ಸೇನಾ ೨೬೦, ೨೯೨
ಮೌಂಟ್ ಸ್ಟುವರ್ಟ್ ಎಲ್ಫಿನ್ ಸ್ಟೋನ್ ೩೭೨
ಮೌಲಾನ ಅಬ್ದುಲ್ ಕಲಂ ಆಜಾದ್ ೪೩೭, ೪೪೧
ಮೌಲಾನಾ ಜಫರ್ ಅಲಿ ಖಾನ್ ೪೮, ೫೩, ೫೫, ೬೨, ೨೧೮, ೨೧೯,
ಮ್ಯಾಥ್ಯೂಸ್ ಹೆಚ್.ಎಮ್. ೧೮೬, ೧೮೭, ೧೮೯, ೨೩೩, ೨೩೭
ಮ್ಯಾನಿಫೆಸ್ಟೋ ೮೯
ಮ್ಯೂನಿಚ್ ೩೮೬, ೩೯೪
ಯಾಮೀನ್ ಖಾನ್ ಮೊಹಮ್ಮದ್ ೧೩೩, ೧೩೪, ೨೬೨, ೨೮೫
ಯುರೋಪು ೭, ೨೭೧, ೩೬೦
ಯೂಸೂಫ್ ೫೬, ೬೨, ೧೨೯, ೧೭೫, ೧೮೦
ರಂಗ ಅಯ್ಯರ್ ೨೯೫
ರಂಗನಾಥನ್ ೧೩೦, ೧೬೩
ರಂಗಾ ೧೭೨, ೧೭೪, ೨೦೧, ೨೧೫, ೨೧೭, ೨೧೮, ೨೧೯, ೨೨೧, ೨೨೨, ೨೨೩, ೨೬೫, ೨೭೦, ೨೭೧, ೨೭೪, ೨೯೧, ೨೯೮, ೩೦೯, ೩೧೪, ೩೧೭, ೩೨೦
ರಜಪುಟಾಣ ೨೬, ೧೪೨, ೧೪೫, ೩೦೭, ೩೦೮, ೩೦೯
ರತನ್‌ಜೀ ದಿನ್‌ಷಾ ದಲಾಲ ಡಾ॥ ಸರ್. ೧೭೫,೧೮೦
ರತ್ನಗಿರಿ ೨, ೬
ರತ್ನಸಭಾಪತಿ ಮುದಲಿಯಾರ್ ಸಿ.ಎಸ್. ೬೫,
ರಶೀದ್ ೭೬
ರಷ್ಯಾ ೮೬, ೮೭, ೧೯೪, ೨೪೦, ೨೪೧, ೨೪೯
ರಸೆಲ್ ೧೮೬
ರಹೀಮ್ ೧೭, ೧೮, ೨೩, ೨೪, ೨೫, ೩೮, ೪೧, ೪೯, ೫೧, ೫೫, ೫೬, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೮, ೭೯, ೯೪, ೯೭, ೧೧೮, ೧೧೯, ೧೩೧, ೧೩೨, ೧೩೭, ೧೩೮, ೨೦೯, ೨೧೩, ೨೧೪, ೨೨೩, ೨೨೪, ೨೨೫
ರಹೀಮತುಲ್ಲಾ ೬೪
ರಾಘವೇಂದ್ರರಾವ್ ೩೯೫
ರಾಜಾ ೩೭೯, ೩೮೦, ೩೯೬, ೩೯೭
ರಾಜಾ ಧರ್ಮ ಕರ್ಮ ಬಹದ್ದೂರ್ ೧೯೬,
ರಾಣಿಗಂಜ್ ೧೦೯
ರಾಥೋಡ್ ಆರ್.ಡಿ. ೧೩೯
ರಾಧಾಬಾಯಿ ಸುಬ್ಬರಾಯನ್ ಕೆ. ೧೨೮, ೧೨೯, ೨೧೭
ರಾಮಗರ್ ೧೯
ರಾಮಚಂದ್ರ ಪಿಳ್ಳೈ ಎ.ಎಸ್. ೬೪
ರಾಮಚಂದ್ರನ್ ಪಿಳ್ಳೈ ಎಂ.ಎಸ್. ೧೪೮
ರಾಮನಾಡ್ ೨೧೭
ರಾಮಲಿಂಗಮ್ ಚ್ವೆಟ್ಟಿಯಾರ್ ಟಿ.ಎ. ೨೭೧, ೩೦೧, ೩೦೨
ರಾಮಸ್ವಾಮಿ ೧೧, ೩೯೬,
ರಾಮಸ್ವಾಮಿ ಅಯ್ಯರ್ ಸಿ.ಪಿ. ೨೮೯, ೩೯೫

ರಾಮಸ್ವಾಮಿ ಮುದಲಿಯಾರ್ ಎ. ೪೧೮
ರಾಮ್‌ಜಿ ೨, ೯
ರಾಮ್‌ನಾರಾಯಣ್‌ಸಿಂಗ್ ೨೫೮, ೨೫೯, ೩೧೨, ೩೧೪
ರಾಯಲ್ ಕಮಿಷನ್ ೫೨, ೫೨, ೫೩, ೫೪, ೯೨, ೯೩, ೨೩೯, ೨೪೦, ೨೬೬, ೨೭೦, ೩೬೧
ರಾಯ್‌ಬಹದ್ದೂರ್ ಖೋಸ್ಲಾ ಎ.ಎನ್.೨೫೧, ೩೩೩
ರಾಯ್‌ಬಹಾದೂರ ಭಟ್ಟಾಚಾರ್ಯ ೨೭೧
ರಾಸ್ ಎಂ. ರೀಗೆಲ್ ೩೨೧, ೩೨೨, ೩೨೫
ರಿಚರ್ಡ್‌ಸನ್ ೫೯
ರೂಬೆನ್ ೩೦೯, ೩೧೦
ರೆಹನಾನಂದ ೨೪೭
ರೇಣುಕಾ ರೇ ೨೦೬, ೨೦೯, ೨೧೨, ೨೧೩
ರೋಲ್ಯಾಂಡ್ಸ್ ಎ. ೪೧೮
ರ್‍ಯಾಮ್‌ಸೇ ಮೆಕ್ಡೋನಾಲ್ಡ ೪೭೩
ಲಂಡನ್ ೩, ೪, ೫, ೧೫೪, ೧೬೩, ೧೯೧, ೨೮೭
ಲಕ್ನೊ ೨೬೦
ಲಕ್ಷ್ಮೀಕಾಂತ ಮೈತ್ರ ೨೩, ೨೪, ೨೫, ೩೮, ೪೨, ೨೧೫
ಲಖನೌ ೬೫, ೧೧೧
ಲಾಲಚಂದರ್ ನವಲಾರಿ ೧೭೫
ಲಾಲ್‌ಚಂದ್ ನವಲ್ ೧೮೦, ೧೮೨
ಲಾಹೋರ್ ೬೫, ೨೩೧
ಲಿನ್‌ಲಿಥ್‌ಗೋ ೯೮, ೩೮೧, ೩೯೫, ೩೯೭, ೩೯೮, ೩೯೯, ೪೬೧, ೪೬೨
ಲಿಯೋ ೮೯
ಲೂಧಿಯಾನ ೨೯೩
ಲೂಮ್ಲೀ ಆರ್. ೩೮೧,
ಲೂಮ್ಲೀ ಎಸ್. ೩೯೮
ಲೆಮೆಸೂರಿಯರ್ ಎ.ಪಿ. ೬೪
ಲೆಸ್ಲಿ ಗ್ವಿಲ್ಟ್ ೩೧೮
ಲ್ಯಾಟಿಮರ್ ಜೆ. ೧೩೯, ೧೪೯
ವಾಡಿಲಾಲ್ ಲಲ್ಲುಭಾಯ್ ೨೭೧, ೨೯೯, ೩೦೧
ವಾರಣಾಸಿ ೩೬೧
ವಾರ್ಧಾ ೨೦, ೩೯೨
ವಾಷಿಂಗ್‌ಟನ್ ೨೬೫, ೨೬೬, ೩೨೧
ವಿಂಚೆಸ್ಟರ್ ೪೧೭
ವಿಜಯರಾಘವನ್ ೧೪೮
ವಿಟ್ಲೇ ಆಯೋಗ ೧೧
ವಿತಲ್ ಎನ್. ಚಂದಾವರ್‌ಕರ್ ೫೬, ೬೨, ೧೭೪, ೧೭೫
ವಿಲಿಯಂ ಜೇಮ್ಸ್ ೧೦೫
ವಿಲ್ಕಾಕ್ ಜೆ.ಎಸ್. ೧೪೧
ವಿಶ್ವಭಾರತಿ ೩೬೦
ವಿಶ್ವೇಶ್ವರಯ್ಯ ೨೪೮
ವಿಶ್ವೇಶ್ವರಾನಂದ್ ೩೬೧
ವೀಟೋ ೨೨, ೨೩, ೨೪, ೨೫
ವೂರಡಿನ್ ೧೮೯, ೨೩೩, ೨೩೭
ವೂರ್‌ಡುಯಿನ್ ೧೮೭
ವೂಲ್‌ಫ್ರಾಮ್ ೨೬
ವೆಂಕಟಸುಬ್ಬ ರೆಡ್ಡಿಯಾರ್ ಆರ್. ೨೭೧, ೩೦೯,೩೧೪
ವೇವೆಲ್ ೪೦೩, ೪೦೪, ೪೦೮, ೪೦೯, ೪೧೩, ೪೧೪, ೪೧೭, ೪೨೨, ೪೨೭, ೪೨೮, ೪೭೩
ವೈಟ್‌ಹಾಲ್ ೨೨
ವೈತರಣೀ ೨೪೭
ಶರತ್ ಚಂದ್ರ ಬೋಸ್ ೪೩೬, ೪೩೮, ೪೫೯,
ಶಾಂತಾ ಭಲ್ಲ್‌ರಾವ್ ೧೦೭
ಶಾಂತಿನಿಕೇತನ ೩೬೦
ಶಾಂತಿಲಾಲ್ ಮಂಗಳ್ ದಾಸ್ ೩೨೨
ಶಿಲ್ಲಾಂಗ್ ೩೨೩
ಶಿವಪುರ ೧೦೯
ಶಿವರಾಜ್ ೧೬೭, ೧೭೪, ೨೧೮, ೨೨೦, ೩೪೧, ೩೫೪, ೪೦೫, ೪೨೭
ಶ್ಯಾಮ್ ನಂದನ್ ಸಹಾಯ ೧೪೯, ೧೮೨, ೩೨೨, ೩೩೩, ೪೧೮

ಶ್ರೀಕಾಂತನ್ ೧೪೯
ಶ್ರೀಚಂದ್ ೨೭೧
ಶ್ರೀನಗರ ೩೨೩
ಶ್ರೀಪ್ರಕಾಶ ೨೬೭
ಶ್ರೀರಂಗ ೨೯೫
ಶ್ರೀರಾಮ್ ೧೬, ೧೪೭, ೧೪೮, ೧೪೯
ಶ್ರೀವಾಸ್ತವ ೯೮, ೩೯೫, ೩೯೯, ೪೧೮
ಷಾಬುದ್ದೀನ್ ಕೆ. ೧೯೬
ಷೇಕ್ಸ್‌ಪಿಯರ್ ೨೪೪
ಸಂಬಾಳ್‌ಪುರ ೨೪೯, ೨೫೦
ಸತಾರಾ ೨
ಸತಾರೆ ೨
ಸತ್ತಾರ್ ಎಚ್.ಎ. ೨೫, ೫೧, ೫೬, ೬೩,
ಸತ್ಯಪ್ರಿಯ ಬ್ಯಾನರ್ಜಿ ಪ್ರೊ. ೨೯೬, ೨೯೭, ೨೯೮
ಸಭರ್‌ವಾಲ್ ೧೮೬
ಸಯ್ಯದ್ ಗುಲಾಮ್ ಭಿಕ್ ನಾಯರಂಗ್ ೨೧೫, ೨೧೭, ೨೮೨
ಸಯ್ಯದ್ ರಜಾ ಅಲಿ ೨೩, ೨೮,
ಸರಕಾರ್ ಬಿ.ಬಿ. ೨೩೭
ಸರ್ಕಾರ್ ಎನ್.ಆರ್. ೩೯೬,
ಸಾಲೋಮನ್ ಎಸ್. ೬೪
ಸಿಂಧ್ ೬೪, ೧೪೮, ೧೭೮, ೧೯೬, ೪೧೪, ೪೪೪
ಸಿಡೆನ್‌ಹ್ಯಾಮ್ ೪
ಸಿಮ್ಲಾ ೪೭, ೫೦, ೫೬, ೬೩, ೨೨೮, ೩೬೧, ೪೧೪, ೪೧೬, ೪೧೭, ೪೧೯, ೪೨೮, ೪೩೪, ೪೩೬, ೪೩೭, ೪೬೦, ೪೬೧, ೪೬೮, ೪೭೩
ಸಿಲೋನ್ ೫೪, ೪೨೭
ಸೀತಾಪುರ ೧೦೯
ಸುಬೇದಾರ್ ರಾಮ್‌ಜಿ ಮಾಲೋಜಿ ಅಂಬೇಡ್ಕರ್ ೨
ಸುಲ್ತಾನ್ ಅಹಮ್ಮದ್ ೨೦೫, ೩೯೯
ಸೇಲಮ್ ೨೧೮, ೨೮೯
ಸೈಯದ್ ಗುಲಾಮ್ ಬಿಕ್ ನಾಯ್‌ರಂಗ್ ೨೮೨
ಸೈಯದ್ ಘುಲಾಂ ಬಿಕ್ ನೈರಾಂಗ್ ೬೨, ೨೮೨
ಸೈಯದ್ ರಜಾ ಆಲೀ, ೨೧೮, ೨೨೦
ಸೈರೆನಾಯಿಕಾ ೪೧೭
ಸೋಂಥಾಲ್ ಪರ್ಗಣ ೨೫೮, ೨೬೦
ಸೋಧ್‌ಪುರ್ ೧೦೯
ಸೋನಲಾಪುರ ೨೩೬
ಸೌತ್‌ಬರೋ ೩೪೦
ಸ್ಟಾಫರ್ಡ್ ೩೮೧, ೩೮೪, ೩೮೬, ೩೯೧, ೩೯೩, ೪೪೩, ೪೬೭
ಸ್ಟೆವರ್ಟ್ ೩೭೮
ಸ್ಟೋಕ್ಸ್ ಹೆಚ್.ಜಿ. ೨೧೮, ೨೨೦
ಸ್ಟ್ಯಾಫರ್ಡ್ ಕ್ರಿಪ್ಸ್ ೩೪೩
ಸ್ಪೆಯಿನ್ ೮೬
ಸ್ಯಾಮ್ಯುಯೆಲ್ ರಂಗನಾಥನ್ ೧೩೦, ೧೬೩
ಸ್ವಾಮಿ ವೆಂಕಟಾಚಲಂ ಸೆಟ್ಟಿ ೨೦೭, ೨೧೩
ಸ್ವಾಮಿನಾಥನ್ ಟಿ.ಎಸ್. ೧೪೯
ಸ್ವೀಡನ್ ೯೪
ಹಂಟರ್ ೩೭೩
ಹಜಾರಿಬಾಗ್ ೧೪೧, ೧೪೫, ೨೫೮, ೨೫೯, ೨೬೦
ಹಸನ್ ಅಹ್ರಾವರ್ಡಿ ೨೭೧
ಹಾಜೀ ಚೌಧುರಿ ಮಹಮ್ಮದ್ ಇಸ್ಮಾಯಿಲ್ ಖಾನ್ ೫೬, ೬೩,
ಹಿಂದೂಸ್ಥಾನ ೨೧, ೪೧೦
ಹಿಟ್ಲರ್ ೩೨
ಹುಸೇನ್ ಭಾಯ್ ಎಂ. ೫೬, ೧೪೯
ಹುಸೇನ್ ಭಾಯ್ ಲಾಲ್‌ಜೀ ೫೬, ೫೯, ೭೬, ೧೨೨, ೧೨೯
ಹೆನ್ರಿ ೫೯
ಹೈದರಾಬಾದ್ ೧೬, ೬೪, ೧೪೯, ೨೫೦, ೨೮೬
ಹೋಳ್ಕರ್ ೬೪
ಹ್ಯಾಡ್ಡೋ ೫೯
ಹ್ಯಾರಿಸನ್ ಜೆ.ಆರ್. ೨೩೭
ಹ್ಯೂಸ್ ಎ. ೬೪, ೧೩೯, ೧೪೮, ೧೫೪